॥ श्रीः ॥

ಶ್ರೀ ವಾಸಿಷ್ಠರಾಮಾಯಣಂ

ಉತ್ಪತ್ತಿಪ್ರಕರಣಂ

(ಪ್ರಥಮಸಂಪುಟಂ)

ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ್

ಬಹದ್ದೂರ್ ಜಿ.ಸಿ.ಎಸ್.ಐ.

ಯವರ ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ

ಗುಂಡಶಾಸ್ತ್ರಿಕೃತ

ಶ್ರೀಕೃಷ್ಣರಾಜವಿಜ್ಞಾನವೈಭವ

ನಾಮಕಟೀಕಾಸಹಿತಂ.

ಸಾಧಾರಣ ಸಂ॥ ಆಶ್ವಯುಜ ಶು॥ ಚತುರ್ಥಿ

ಮೈಸೂರು:

ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್ ಪ್ರೆಸ್,

೧೯೧೧

ಕ್ರಯ ರೂ. 3—8—0

॥ श्रीः ॥

ಶ್ರೀ ವಾಸಿಷ್ಠರಾಮಾಯಣಂ

ಉತ್ಪತ್ತಿಪ್ರಕರಣಂ

(ಪ್ರಥಮಸಂಪುಟಂ)

ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರ್
ಬಹದ್ದೂರ್ ಜಿ. ಸಿ. ಎಸ್. ಐ.
ಯವರ ಆಸ್ಥಾನಪಂಡಿತ ಸದ್ವಿದ್ಯಾಶಾಲಾಧ್ಯಕ್ಷ
ಗುಂಡಶಾಸ್ತ್ರಿಕೃತ

ಶ್ರೀಕೃಷ್ಣರಾಜವಿಜ್ಞಾನವೈಭವ

ನಾಮಕಟೀಕಾಸಹಿತಂ.

ಸಾಧಾರಣ ಸಂ ॥ ಆಶ್ವಯುಜ ಶು ॥ ಚತುರ್ಥಿ

ಮೈಸೂರು:
ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷ‌ನ್ ಪ್ರೆಸ್
೧೯೧೦

ಶ್ರೀ ವಾಸಿಷ್ಠರಾಮಾಯಣಂ.

ಉತ್ಪತ್ತಿಪ್ರಕರಣ (ಪ್ರಥಮಸಂಪುಟ) ದ ವಿಷಯಸೂಚಿಕೆ.

ಶ್ರೀ ವಾಸಿಷ್ಠರಾಮಾಯಣಂ.

ಉತ್ಪತ್ತಿ ಪ್ರಕರಣ (ಪ್ರಥಮಸಂಪುಟ) ಶುದ್ಧಾಶುದ್ಧ ಪತ್ರಿಕೆ.

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
೪	೯	ಸಙ್ಕಕಲ್ಪ	ಸಙ್ಕಲ್ಪ
೫	೨೦	ವಿದ್ಯೆಗ್ನೆ	ವಿದ್ಯೆಗೆ
೧೦	೯	ಸಿತಿ	ಸ್ಥಿತಿ
೨೦	೧೩	ಸುನೋ	ಮನೋ
೨೩	೫	ಮುಮುಕ್ಷು	ಉತ್ಪತ್ತಿ
,,	೧೫	,,	,,
೨೮	೧	,,	,,
,,	೧೧	,,	,,
೩೧	೫	ದರಿಣೀ	ವರ್ಷಿಣೀ
೫೫	೨೯	ಇದು	ಇದ
೫೩	೧೨	ಭಾವಾ	ಭಾವ
೩೮	೨	ಶ್ರೀರಾಮ	ಶ್ರೀವಸಿಷ್ಠ
೧೨೪	೩೩	ಕ್ರವ	ಕ್ರಮ
೧೪೦	೨೯	ವರೋ	ವರೆಗೂ
೧೪೮	೨೨	ಕೋಲ	ಕೋಲಾ
,,	೨೬	ಮರಿ	ಪರಿ
೧೬೨	೧೫	ರಾಜರ್ಶ	ರಾಜದರ್ಶ
೧೩೩	೨೩	ನಾನಾನಾ	ನಾನಾ
೧೮೩	೨೩	ನ್ಯಾವೆಂದು	ನ್ಯಾಯವೆಂದು
೧೯೪	೩	ಶದ್ಧ	ಶುದ್ಧ
೧೯೫	೧೨	ಸಂಸಾರರ	ಸಂಸಾರ
೨೦೩	೯	ಮ್ಯನ್ತೌ	ಮ್ಯನ್ತ್ಯೌ
೨೦೬	೩೨	ಶುಕ	ಶುಕ್ಲ

ಪುಟ.	ಪಂಕ್ತಿ.	ಅಶುದ್ಧ.	ಶುದ್ಧ.
೨೨೭	೨೯	ಪೃಥವ್ಯಾ	ಪೃಥಿವ್ಯಾ
೨೭೧	೨೧	ಸರ್ಗ	ಸ್ವರ್ಗ
೨೯೫	೧	ಮೃಳಾಣಾ	ಮೃಣಾಳಾ
೨೯೮	೨೭	ಳಾಗಿ	ಗಳಾಗಿ
೩೧೧	೩೩	ಕೆಲಾಸ	ಕೈಲಾಸ
೩೧೬	೨೯	ನೆಗಗಳ	ನೆಗಳ
೩೨೦	೧೪	ಡುದಂತೆ	ಡುವಂತೆ
೩೨೮	೬	ದನ್ನೂ	ದನ್ನು
೩೬೩	೨೩	ನಾವಿಧ	ನಾನಾವಿಧ
೩೬೭	೧೬	ಸದ್ಭಾ	ಸದ್ಭಾವ
೩೮೨	೨೨	ಕೇಲವ	ಕೇವಲ
೩೮೮	೧೮	ಮತ್ತಗ	ಮತ್ತ
೪೧೫	೨೯	ಮೇಘೋ	ಮೇಘು
೪೩೧	೧೩	ಸಮಿಾಸಿ	ಸಮಿಾಪಿಸಿ
೪೬೦	೨	ಸಂವಿದಾ	ಸಂವಿದಿ
೫೦೭	೧೪	ನಿನುಪಾ	ನಿರುಪಾ
೫೨೬	೧೨	ನಾಸ್ತ್ಯಶ	ನಾಸ್ತ್ಯತ್ರ
೫೩೫	೨೩	ಳವನ್ನು	ಳನ್ನು

ಓಮ್

ಶ್ರೀ ರಾಮಚಂದ್ರಾಯ ಪರಬ್ರಹ್ಮಣೇ
ನಮೋನಮಃ.

ಶ್ರೀ ವಾಸಿಷ್ಠರಾಮಾಯಣೇ

ಉತ್ಪತ್ತಿಪ್ರಕರಣಂ.

ಶ್ರೀ ವಸಿಷ್ಠ ಉವಾಚ.

ವಾಗ್ಭಾಭಿರ್ಬ್ರಹ್ಮವಿದ್ಬ್ರಹ್ಮ ಭಾತಿ ಸ್ವಪ್ನ ಇವಾತ್ಮನಿ ।
ಯದಿದಂ ತತ್ ಸ್ವಶಬ್ದೋತ್ಥೈಃ ಯೋ ಯದ್ವೇತ್ತಿ ಸ ವೇತ್ತಿ ತತ್ ॥೧॥

ಶ್ರೀವಾಸಿಷ್ಠರಾಮಾಯಣದಲ್ಲಿ ಉತ್ಪತ್ತಿಪ್ರಕರಣವು.

ಜ್ಞಾನಾದೇವಾತ್ಮನೋ ಮೋಕ್ಷೋ ನ ತು ಕರ್ಮಸಮಾಧಿಭಿಃ ।
ಅಜ್ಞಾತೋಽಸೌ ತ್ವಸದ್ದೃಶ್ಯಂ ಸೃಜತ್ಯೇವೇತಿ ಕೀರ್ತ್ಯತೇ ॥

ಆತ್ಮನಿಗೆ ಜ್ಞಾನದಿಂದಲೇ ಮೋಕ್ಷವು; ಕರ್ಮಯೋಗಾದಿಗಳಿಂದಿಲ್ಲ; ಇವನು ಅಜ್ಞಾನದಿಂದಲೇ ಮಿಥ್ಯಾರೂಪವಾದ ಈ ದೃಶ್ಯಜಾತವನ್ನು ಸೃಷ್ಟಿಮಾಡುವನು.--ಎಂಬ ವಿಷಯವು ಈ ಸರ್ಗದಲ್ಲಿ ಹೇಳಲ್ಪಡುತ್ತದೆ.

ಹಿಂದಿನ ಎರಡು ಪ್ರಕರಣಗಳಲ್ಲಿ ವೇದಾಂತವಿಚಾರಕ್ಕಧಿಕಾರಿಯಾಗುವುದಕ್ಕಿರಬೇಕಾದ ಸಾಧನಸಂಪತ್ತಿಯನ್ನೆಲ್ಲ ವರ್ಣಿಸಿ, ವೇದಾಂತವಿಚಾರಸ್ವರೂಪವನ್ನು ವಿಸ್ತರಿಸಿ ಹೇಳಲುದ್ದೇಶಿಸಿರುವ ಶ್ರೀ ವಸಿಷ್ಠಮಹರ್ಷಿಗಳು, ಪ್ರಥಮದಲ್ಲಿ ಸ್ವಲ್ಪ ಸಂಕ್ಷೇಪವಾಗಿ ತಿಳಿಸಲು ಪಕ್ರಮಿಸಿ, ಶ್ರೀ ರಾಮಚಂದ್ರನನ್ನು ಕುರಿತು ಹೇಳಿದರು.

ಅಯ್ಯಾ ! ರಾಮ ! ನಿನಗೆ ಈಗ ಈ ಜಗತ್ತೆಂಬ ಪದಾರ್ಥವುತ್ಪತ್ತಿಯಾಗುವ ಬಗೆಯನ್ನು ಹೇಳಲುಪಕ್ರಮಿಸುವೆನು. ಪುರುಷನು ಸ್ವಪ್ನದಲ್ಲಿ ಯಾವುದಾದರೊಂದುವಿಧವಾದ ಬಂಧವನ್ನನುಭವಿಸುವನಲ್ಲವೆ! ಬಳಿಕ, ಅದು ಸ್ವಪ್ನವೆಂದು ತಿಳಿದಮೇಲೆ ಅದರ ತೊಂದರೆಯೂ ಇರುವುದಿಲ್ಲವಲ್ಲವೆ ! ಅಂತು ಆ ಬಂಧನಿವೃತ್ತಿಗೆ ತಿಳಿವಳಿಕೆಯೇ ಕಾರಣವಾಗುವುದಷ್ಟೆ ! ಹೀಗೆಯೇ ನಿತ್ಯಮುಕ್ತನಾಗಿರುವ ಪರಬ್ರಹ್ಮನೂ ಕೂಡ, ಅಜ್ಞಾನಾವರಣದಿಂದ ತಾನು ಸಂಸಾರಿಯೆಂದು ತಿಳಿದುಕೊಂಡಿರುವನು; ವೇದಾಂತವಾಕ್ಯಶ್ರವಣದಿಂದ ಅಖಂಡಾಕಾರವೃತ್ತಿಯುಂಟಾಗಿ ಅದರಿಂದ ಆತ್ಮಪ್ರಕಾಶವಾಗಲು, ಆಗ ಈ ಬ್ರಹ್ಮನೇ ಬ್ರಹ್ಮಜ್ಞಾನಿಯೆಂದೂ ಪ್ರಕಾಶಹೊಂದುವನು. ಹೀಗೆ ವಾಕ್ಯಜ್ಞಾನದಿಂದ ಸರ್ವವೂ ಬ್ರಹ್ಮವೇ ಆಗುವ

ನ್ಯಾಯೇನಾನೇನ ಲೋಕೇಸ್ಮಿನ್ ಸರ್ಗೇ ಬ್ರಹ್ಮಾಮ್ಬರೇ ಸತಿ ।
ಕಿಮಿದಂ ಕಸ್ಯ ಕುತ್ರೇತಿ ಚೋದ್ಯಮೂಢೇ ನಿರಾಕೃತಮ್ ॥೨॥
ಅಹಂ ತಾವದ್ಯಥಾಜ್ಞಾನಂ ಯಥಾವಸ್ತು ಯಥಾಕ್ರಮಮ್ ।
ಯಥಾಸ್ವಭಾವಂ ತತ್ ಸರ್ವಂ ವಕ್ಷ್ಯೇದಂ ಶ್ರೂಯತಾಂ ಬುಧ ॥೩॥
ಸ್ವಪ್ನವತ್ ಪಶ್ಯತಿ ಜಗತ್ ಚಿನ್ನಭೋದೇಹವಿತ್ ಸ್ವಯಮ್ ।
ಸ್ವಪ್ನಸಂಸಾರದೃಷ್ಟಾನ್ತವಿವಾಹಂತ್ವಂಸಮನ್ವಿತಮ್ ॥೪॥
ಮುಮುಕ್ಷುವ್ಯವಹಾರೋಕ್ತಿಂ ಅಸ್ಮಾತ್ ಪ್ರಕರಣಾತ್ ಪರಮ್ ।
ಅಥೋತ್ಪತ್ತಿಪ್ರಕರಣಂ ಮಯೇದಂ ಪರಿಕಥ್ಯತೇ ॥೫॥

ಕಾರಣ, ಯಾವನು ತನ್ನನ್ನು ಯಾವುದನ್ನಾಗಿ ತಿಳಿದುಕೊಳ್ಳುವನೋ, ಅವನು ಆ ವಿಧವಾದ ತಿಳಿವಳಿಕೆಯುಳ್ಳವನಾಗುವನು (೧) ॥೧॥

ಈ ನ್ಯಾಯದಿಂದ ಲೋಕದಲ್ಲಿ ಸೃಷ್ಟಿಯೆಲ್ಲವೂ ಬ್ರಹ್ಮಾಕಾಶಮಯವಾಗಿರುವಾಗ,— ಈ ಪ್ರಪಂಚವು ಯಾವುದು ? ಇದು ಯಾರದು ? ಇದು ಎಲ್ಲಿರುವುದು ? ಇದು ಹುಟ್ಟುವುದೆಂದರೇನು ? ಇದು ನಷ್ಟವಾಗುವುದೆಂದರೇನು ?—ಇತ್ಯಾದಿರೀತಿಯಾಗಿ ನೀನು ಮೊದಲು ಮಾಡಿದ ಪ್ರಶ್ನೆಯು ಕೇವಲ ವಿಚಿತ್ರವಾಗಿರುವುದು; ಈಗ ಈರೀತಿಯಾಗಿ ಇದು ನಿರಾಕರಿಸಲ್ಪಟ್ಟುದೂ ಆಯ್ತು ॥೨॥

ಪ್ರಾಜ್ಞನಾದ ರಾಮನೆ! ಆದರೂ ನಾನು, ಪ್ರಮಾಣಗಳಿಂದಲೂ ಅನುಭವದಿಂದಲೂ ತಿಳಿದಿರುವಂತೆಯೂ, ಚೆನ್ನಾಗಿ ಪರೀಕ್ಷಿಸೋಣದರಿಂದ ವಾಸ್ತವ್ಯವಾಗಿರುವಂತೆಯೂ, ಸಾಧನೋಪಪತ್ತಿಗಳನ್ನು ನಿರೂಪಿಸೋಣದರಿಂದ ಕ್ರಮಾನುಸಾರವಾಗಿರುವಂತೆಯೂ, ಶ್ರೋತೃಗಳ ಸ್ವಭಾವವನ್ನನುಸರಿಸುವಂತೆಯೂ ಈಗ ನಿನಗೆ ವಿಸ್ತಾರವಾಗಿ ಅದೆಲ್ಲವನ್ನೂ ಹೇಳುವೆನು; ನೀನು ಕೇಳುವವನಾಗು ॥೩॥

ಜ್ಞಾನಾಕಾಶವನ್ನು ದೇಹವೆಂದು ತಿಳಿದಿರುವ ಜೀವದಶೆಯನ್ನು ಹೊಂದಿ—ಈಪ್ರಪಂಚವನ್ನೆಲ್ಲ ನೋಡುವುದಾವುದುಂಟೋ, ಅದು ಸ್ವಪ್ನದಲ್ಲಿ ನೋಡುವಂತೆಯೇ ಇರತಕ್ಕುದು. ಸ್ವಪ್ನಸಂಸಾರದೃಷ್ಟಾಂತದಲ್ಲಿ—ನಾನು ನೀನು (ಆತ್ಮಜೀವರು) ಎಂಬವ್ಯವಹಾರಯುಕ್ತವಾಗಿಯೇ ಇರುವಂತೆ ಈ ದರ್ಶನವುಂಟಾಗುವುದು (೨) ॥೪॥

ರಾಮ ! ನಿನಗೆ ಹಿಂದೆ ಮುಮುಕ್ಷುವ್ಯವಹಾರವನ್ನು ತಿಳಿಸುವ ಪ್ರಕರಣವನ್ನು ಹೇಳಿರುವೆನಷ್ಟೆ! ಈಗ ಆ ಪ್ರಕರಣದ ಮುಂದಣದಾದ ಈ ಉತ್ಪತ್ತಿಪ್ರಕರಣವನ್ನು ಹೇಳುವೆನು ॥

---

(೧) ಸರ್ವವೂ ಜ್ಞಾನಾಧೀನವಾದಕಾರಣ, ಅವರವರು ತಿಳಿದುಕೊಂಡಂತೆ —ಸುಖಿಯೆಂದೂ ದುಃಖಿಯೆಂದೂ ಬದ್ಧನೆಂದೂ ಮುಕ್ತನೆಂದೂ ಜೀವನೆಂದೂ ಪರಮಾತ್ಮನೆಂದೂ ನಾನಾವಿಧವಾದ ಅನುಭವವುಂಟಾಗುವುದಲ್ಲದೆ, ಇದೊಂದೂ ಪರಮಾರ್ಥವಲ್ಲವೆಂದು ಭಾವವು.

(೨) ಜೀವನೆಂದೂ ಈಶ್ವರನೆಂದೂ ಭೇದವ್ಯವಹಾರವಿಟ್ಟುಕೊಂಡು ಪ್ರಪಂಚವನ್ನು ನೊಡುತ್ತಿರುವುದೆಲ್ಲವೂ, ಸ್ವಪ್ನದಲ್ಲಿ ನಾನಾವಿಧವಾದ ವ್ಯವಹಾರಗಳನ್ನು ನಡೆಯಿಸುವಂತೆಯೇ ಇರುವುದೆಂದು ಭಾವವು.

ಬನ್ಧೋಽಯಂ ದೃಶ್ಯಸದ್ಭಾವಾತ್ ದೃಶ್ಯಾಭಾವೇ ನ ಬನ್ಧನಮ್ ।
ನ ಸಮ್ಭವತಿ ದೃಶ್ಯಂ ತು ಯಥೇದಂ ತಚ್ಛೃಣು ಕ್ರಮಾತ್ ॥೬॥
ಉತ್ಪದ್ಯತೇ ಯೋ ಜಗತಿ ಸಏವ ಕಿಲ ವರ್ಧತೇ ।
ಸಏವ ಮೋಕ್ಷಮಾಪ್ನೋತಿ ಸ್ವರ್ಗಂ ವಾ ನರಕಂ ಚ ವಾ ॥೭॥
ಅತಸ್ತೇ ಸ್ವಾವಬೋಧಾರ್ಥಂ ತತ್ ತಾವತ್ ಕಥಯಾಮ್ಯಹಮ್ ।
ಉತ್ಪತ್ತಿಃ ಸಂಸೃತಾವೇತಿ ಪೂರ್ವಮೇವ ಹಿ ಯೋ ಯಥಾ ॥೮॥
ಇದಮ್ಪ್ರಕರಣಾರ್ಥಂ ತ್ವಂ ಸಂಕ್ಷೇಪಾಚ್ಛೃಣು ರಾಘವ ।
ತತಃ ಸಂಕಥಯಿಷ್ಯಾಮಿ ವಿಸ್ತರಂ ತೇ ಯಥೇಪ್ಸಿತಮ್ ॥೯॥
ಯದಿದಂ ದೃಶ್ಯತೇ ಸರ್ವಂ ಜಗತ್ ಸ್ಥಾವರಜಙ್ಗಮಮ್ ।
ತತ್ ಸುಷುಪ್ತಾವಿವ ಸ್ವಪ್ನಃ ಕಲ್ಪಾನ್ತೇ ಪ್ರವಿನಶ್ಯತಿ ॥೧೦॥
ತತಃ ಸ್ತಿಮಿತಗಮ್ಭೀರಂ ನತೇಜೋ ನತಮಸ್ತತಮ್ ।
ಅನಾಖ್ಯಮನಭಿವ್ಯಕ್ತಂ ಸತ್ ಕಿಂಚಿದವಶಿಷ್ಯತೇ ॥೧೧॥

ಉತ್ಪತ್ತಿಪ್ರಕರಣವನ್ನೇ ಏತಕ್ಕೆ ಮೊದಲು ಹೇಳಬೇಕೆಂದರೆ,—ಈಗ ನೀನು ಬಂಧ ಕ್ಕೊಳಗಾಗಿ ಅದನ್ನು ಬಿಡಿಸಿಕೊಳ್ಳುವುದಕ್ಕೆ ಅಪೇಕ್ಷಿಸುವೆಯಲ್ಲವೆ ! ಈ ಬಂಧವು ದೃಶ್ಯವಿ ರುವುದರಿಂದ ಉಂಟಾಗಿರುವುದು; ದೃಶ್ಯವಿಲ್ಲದಿದ್ದರೆ ಬಂಧವೇ ಇಲ್ಲ. ಅದುಕಾರಣ, ಈ ದೃಶ್ಯವೇ ಅಸಂಭವವೆಂಬ ಬಗೆಯನ್ನು ಕ್ರಮವಾಗಿ ಕೇಳುವವನಾಗು ॥೬॥

ಪ್ರಪಂಚದಲ್ಲಿ ಯಾವನು ಹುಟ್ಟುವನೋ—ಅವನೇ ಬೆಳೆಯುವನು; ಅವನೇ ಮೋಕ್ಷ ವನ್ನಾಗಲಿ ಸ್ವರ್ಗವನ್ನಾಗಲಿ ಅಥವಾ ನರಕವನ್ನಾಗಲಿ ಹೊಂದುವನು. ಇದು ಅನುಭ ವಸಿದ್ಧವಲ್ಲವೆ! ॥೭॥

ಅದುಕಾರಣ, ನಿನಗೆ ತತ್ವಜ್ಞಾನವುಂಟಾಗುವುದಕ್ಕಾಗಿ ನಾನು ಆ ಉತ್ಪತ್ತಿಪ್ರಕರಣ ವನ್ನು ಹೇಳುವೆನು. ಈ ಉತ್ಪತ್ತಿಯೆಂಬುದು ಸಂಸಾರದಲ್ಲಿ ಸೇರಿರುವುದಲ್ಲದೆ, ಆತ್ಮನಲ್ಲಿಲ್ಲ; ಆತ್ಮನಾದರೆ, ಜಗದುತ್ಪತ್ತಿಗೆ ಪೂರ್ವದಲ್ಲಿ ಯಾವರೀತಿಯಾಗಿದ್ದನೋ—ಈಗಲೂ ಹಾಗೆಯೇ ಇರುವನಲ್ಲದೆ, ಅವನಿಗೆ ಸ್ವಲ್ಪವೂ ವಿಕಾರವಿಲ್ಲ ॥೮॥

ಅಯ್ಯಾ! ರಾಘವ! ಈ ಉತ್ಪತ್ತಿಪ್ರಕರಣದ ಅರ್ಥವನ್ನು ಸಂಕ್ಷೇಪವಾಗಿ ಮೊದಲು ಕೇಳುವವನಾಗು; ಬಳಿಕ ನಿನಗೆ ಇಚ್ಛಾನುಸಾರವಾಗಿ ವಿಸ್ತರಿಸಿ ಹೇಳುವೆನು ॥೯॥

ಈ ಸ್ಥಾವರ ಜಂಗಮಾತ್ಮಕವಾದ ಯಾವ ಸಮಸ್ತ ಜಗತ್ತೂ ಕಾಣಿಸುವುದೋ, ಅದು— ಸುಷುಪ್ತಿಕಾಲದಲ್ಲಿ ಸ್ವಪ್ನವಡಗುವಂತೆ—ಪ್ರಳಯಕಾಲದಲ್ಲಿ ನಾಶಹೊಂದುವುದು ॥೧೦॥

ಬಳಿಕ, ಕಾಲತ್ರಯದಲ್ಲಿಯೂ ನಾಶರಹಿತವಾದ ಯಾವುದೋ ಒಂದು ಪದಾರ್ಥವು ಳಿದಿರುವುದು; ಇದು, ಶರೀರರಹಿತವಾದುದರಿಂದ ನಿಷ್ಕ್ರಿಯವಾಗಿಯೂ, ಪರಿಚ್ಛೇದಶೂನ್ಯ ವಾದುದರಿಂದ ತೇಜಸ್ಸಲ್ಲವಾದುದಾಗಿಯೂ, ಪ್ರಕಾಶರೂಪವಾಗಿ ತೋರುವುದರಿಂದ ತಮ ಸ್ಸಲ್ಲವಾದುದಾಗಿಯೂ, ಯಾವಧರ್ಮವೂ ಇಲ್ಲದಕಾರಣ ನಾಮಶೂನ್ಯವಾಗಿಯೂ, ಪ್ರಪಂ ಚವಾಸನೆಗಾಧಾರವಾಗಿ—ಅನಭಿವ್ಯಕ್ತವಾಗಿಯೂ ಇರುವುದು ॥೧೧॥

ಋತಮಾತ್ಮಾ ಪರಂ ಬ್ರಹ್ಮ ಸತ್ಯಮಿತ್ಯಾದಿಕಾಬುಧೈಃ |
ಕಲ್ಪಿತಾವ್ಯವಹಾರಾರ್ಥಂ ತಸ್ಯ ಸಂಜ್ಞಾ ಮಹಾತ್ಮನಃ ||೧೨||
ಸ ತಥಾಭೂತಏವಾತ್ಮಾ ಸ್ವಯಮನ್ಯಇವೋಲ್ಲಸನ್ |
ಜೀವತಾಮುಪಯಾತೀವ ಭಾವಿನಾಮ್ನಾ ಕದರ್ಥಿತಾಮ್ ||೧೩||
ತತಃ ಸ ಜೀವಶಬ್ದಾರ್ಥಕಲನಾಕುಲತಾಂ ಗತಃ |
ಮನೋ ಭವತಿ ಭೂತಾತ್ಮಾ ಮನನಾನ್ಮನ್ಥರೀಭವನ್ ||೧೪||
ಮನಃ ಸಮ್ಪದ್ಯತೇ ತೇನ ಮಹತಃ ಪರಮಾತ್ಮನಃ |
ಸುಸ್ಥಿರಾದಸ್ಥಿರಾಕಾರಃ ತರಙ್ಗ ಇವ ವಾರಿಧೇಃ ||೧೫||
ತತ್ ಸ್ವಯಂ ಸ್ವೈರಮೇವಾಶು ಸಙ್ಕಲ್ಪಯತಿ ನಿತ್ಯಶಃ |
ತೇನೇತ್ಥಮಿನ್ದ್ರಜಾಲಶ್ರೀಃ ವಿತತೇಯಂ ವಿತನ್ಯತೇ ||೧೬||
ಯಥಾ ಕಟಕಶಬ್ದಾರ್ಥಃ ಪೃಥಕ್ತ್ವಾರ್ಹೋ ನ ಕಾಞ್ಚನಾತ್ |

ಆ ಮಹಾತ್ಮನಿಗೇ, ವಿದ್ವಾಂಸರು ವ್ಯವಹಾರಸಿದ್ಧ್ಯರ್ಥವಾಗಿ—ನಾನಾವಿಧವಾದ ಸಂಜ್ಞೆಗಳನ್ನು ಕಲ್ಪಿಸಿಕೊಂಡಿರುವರು. ಹೇಗೆಂದರೆ,—ಮುಖ್ಯಪ್ರಮಾಣಭೂತವಾದ ಶ್ರುತಿಯಿಂದ ಗಮ್ಯನಾಗಿರುವಕಾರಣ ಋತವೆಂದೂ, ಸಮಸ್ತವನ್ನೂ ಹೊಂದತಕ್ಕವನಾದ ಕಾರಣ ಆತ್ಮನೆಂದೂ, ಉತ್ಕರ್ಷಕ್ಕೆ ಪರಮಾವಧಿಭೂತನಾದುದರಿಂದ ಪರನೆಂದೂ, ಜಗದಾಕಾರವನ್ನು ವ್ಯಾಪಿಸತಕ್ಕವನಾದುದರಿಂದ ಬ್ರಹ್ಮನೆಂದೂ, ಇನ್ನೂ ಹೀಗೆಯೇ ನಾನಾವಿಧವಾಗಿಯೂ ಸಂಜ್ಞೆಗಳನ್ನು ವ್ಯವಹಾರಾರ್ಥವಾಗಿ ಕಲ್ಪಿಸಿಕೊಂಡಿರುವರು ||೧೨||

ಆ ಆತ್ಮನು ಆರೀತಿಯಾಗಿ ಚೈತನ್ಯಸ್ವಭಾವನಾಗಿಯೇ ಇದ್ದುಗೊಂಡು, ಮೋಹದಿಂದ ಬೇರೆವಿಧವಾಗಿರುವಂತೆ ತೋರುತ, ಮುಂದೆ ಉಂಟಾಗುವ ಹೆಸರಿನಿಂದ ಅತಿತುಚ್ಛವಾದ ಜೀವನೆಂಬ ಸ್ಥಿತಿಯನ್ನು ಹೊಂದುವಂತೆ ತೋರುವುದು. (ಮುಂದೆ ಇವನಿಗೆ ಜೀವನೆಂಬ ವ್ಯವಹಾರವುಂಟಾಗುವುದೆಂದು ಭಾವವು.) ವಾಸ್ತವ್ಯವಾಗಿಯಾದರೋ—ಇವನು ಯಾವ ಭೇದವನ್ನೂ ಹೊಂದುವುದಿಲ್ಲ ||೧೩||

ಬಳಿಕ ಅವನು ಜೀವನೆಂಬ ಶಬ್ದಕ್ಕೆ ವಿಷಯನಾದವನಾಗಿ, ಪಾಂಚಭೌತಿಕಲಿಂಗದೇಹಸ್ವರೂಪನಾಗಿ, ಸಂಕಲ್ಪವಿಕಲ್ಪಗಳನ್ನು ಮನನಮಾಡುವುದರಿಂದ ಮಂದೀಭೂತನಾದವನಾಗಿ, ಮನಸ್ಸಾಗುವನು ||೧೪||

ಹೀಗಾಗುವುದರಿಂದ, ಲೋಕೋತ್ತರವಾದ ಪರಮಾತ್ಮಭಾವವನ್ನು ಮರೆತುಬಿಡುವ ಕಾರಣ, ಸ್ಥಿರತರವಾದ ಸಮುದ್ರದಿಂದ ಅಸ್ಥಿರವಾದ ತರಂಗ ಹುಟ್ಟುವಂತೆ, ಚಂಚಲವಾದ ಮನಸ್ಸುಂಟಾಗುವುದು ||೧೫||

ಆ ಮನಸ್ಸು ಸ್ವೇಚ್ಛೆಯಾಗಿ ಪ್ರತಿದಿನವೂ ಸಂಕಲ್ಪಮಾಡುತಿರುವುದು. ಅದರಿಂದ ಈ ವಿಸ್ತಾರವಾದ ಪ್ರಪಂಚವೆಂಬ ಇಂದ್ರಜಾಲಸಂಪತ್ತು ಉಂಟುಮಾಡಲ್ಪಡುವುದು ||

ಪ್ರಪಂಚದಲ್ಲಿ ಚಿನ್ನದಿಂದ ಕಡಗವನ್ನು ಮಾಡಿದ್ದರೆ—ಆ ಚಿನ್ನವು ಆ ಕಟಕರೂಪವಾಗಿಯಲ್ಲವೆ ಇರುತ್ತದೆ! ಅಂತಹ ಕಟಕವೆಂಬ ಶಬ್ದದ ಅರ್ಥವು (ಕಡಗವು) ಸುವರ್ಣ

ಬ್ರಹ್ಮಣ್ಯೇವಾಸ್ತ್ಯನನ್ಯಾತ್ಮ ಯಥಾಸ್ಥಿತಮಿದಂ ಜಗತ್ ।
ನ ಜಗಚ್ಚಬ್ದಕಾರ್ಥೋಽಸ್ತಿ ಹೇಮ್ನೀವ ಕಟಕಾತ್ಮತಾ ॥೧೮॥
ಸತೀವಾಪ್ಯಸತೀ ತಾಪನದ್ಯೇವ ಲಹರೀ ಚಲಾ ।
ಮನಸೇಹೇನ್ದ್ರಜಾಲಶ್ರೀಃ ಜಾಗತೀ ಪ್ರವಿತನ್ಯತೇ ॥೧೯॥
ಅವಿದ್ಯಾ ಸಂಸೃತಿರ್ಬನ್ಧೋ ಮಾಯಾ ಮೋಹೋ ಮಹತ್ ತಮಃ ।
ಕಲ್ಪಿತಾನೀತಿ ನಾಮಾನಿ ಯಸ್ಯಾಃ ಸಕಲವೇದಿಭಿಃ ॥೨೦॥
ಬನ್ಧಸ್ಯ ತಾವದ್ರೂಪಂ ತ್ವಂ ಕಥ್ಯಮಾನಮಿದಂ ಶೃಣು ।
ತತಃ ಸ್ವರೂಪಂ ಮೋಕ್ಷಸ್ಯ ಜ್ಞಾಸ್ಯಸೀನ್ದುನಿಭಾನನ ॥೨೧॥
ದ್ರಷ್ಟುರ್ದೃಶ್ಯಸ್ಯ ಸತ್ತಾಙ್ಗ ಬನ್ಧ ಇತ್ಯಭಿಧೀಯತೇ।
ದ್ರಷ್ಟಾ ದೃಶ್ಯಬಲಾದ್ಬದ್ಧೋ ದೃಶ್ಯಾಭಾವೇ ವಿಮುಚ್ಯತೇ ॥೨೨॥
[1]ಜಗತ್ ತ್ವಮಹಮಿತ್ಯಾದಿಃ ಮಿಥ್ಯಾತ್ಮಾ ದೃಶ್ಯಮುಚ್ಯತೇ।
ಯಾವದೇತತ್ ಸಮ್ಭವತಿ ತಾವನ್ಮೋಕ್ಷೋ ನ ವಿದ್ಯತೇ॥೨೩॥

ಕಟಕತ್ವವು ಸುವರ್ಣದಲ್ಲಿರುವುದಲ್ಲದೆ ಅದೇ ಬೇರೆಯಾದ ಪದಾರ್ಥವಾಗಿರುವುದಿಲ್ಲ ವಲ್ಲವೆ! ಹಾಗೆಯೇ ಯಥಾವಸ್ಥಿತವಾದ ಈ ಅನಂತವಾದ ಸಮಸ್ತ ಜಗತ್ತೂ ಬ್ರಹ್ಮನಲ್ಲಿಯೇ ಇರುವುದಲ್ಲದೆ, ಜಗತ್ತೆಂಬ ಪ್ರತ್ಯೇಕಪದಾರ್ಥವಾಗಿಲ್ಲ ॥೧೮॥

ಮರುಮರೀಚಿಕೆಯು ನದೀರೂಪವಾಗಿ ಚಂಚಲವಾದ ಪ್ರವಾಹವಿದೆಯೆಂಬ ಭ್ರಾಂತಿಯನ್ನು ಹುಟ್ಟಿಸುವಂತೆ, ಅಸತ್ಯವಾಗಿದ್ದರೂ ಸತ್ಯದಂತೆ ಕಾಣುತಿರುವ ಪ್ರಪಂಚವೆಂಬ ಇಂದ್ರಜಾಲವಮಹಿಮೆಯನ್ನು ಮನಸ್ಸು ಹರಡುತಿರುವುದು ॥೧೯॥

ಈ ಪ್ರಪಂಚರೂಪವಾದ ಇಂದ್ರಜಾಲಸಂಪತ್ತಿಗೆ ಅವಿದ್ಯಾ ಮುಂತಾದ ನಾನಾವಿಧವಾದ ಹೆಸರುಗಳನ್ನು ಸರ್ವಜ್ಞರಾದ ಪ್ರಾಚೀನರು ಕಲ್ಪಿಸಿರುವರು. ಇದು—ವಿದ್ಯೆಗೆ (ಜ್ಞಾನಕ್ಕೆ) ವಿರೋಧಿಯಾಗಿ ಅದರಿಂದ ನಾಶಹೊಂದತಕ್ಕುದಾಗಿರುವುದರಿಂದ ಅವಿದ್ಯೆಯೆಂದೂ, ಊರ್ಧ್ವಲೋಕ ಅಧೋಲೋಕಗಳಲ್ಲಿ ಸಂಚಾರಕ್ಕೆ ಹೇತುವಾದುದರಿಂದ ಸಂಸೃತಿಯೆಂದೂ, ಸ್ವಾತಂತ್ರ್ಯವನ್ನು ತಪ್ಪಿಸುವುದರಿಂದ ಬಂಧವೆಂದೂ, ಅಸತ್ಯವಾದುದರಿಂದ ಮಾಯೆಯೆಂದೂ, ಭ್ರಾಂತಿಹೇತುವಾದಕಾರಣ ಮೋಹವೆಂದೂ, ದಾಟಲಸಾಧ್ಯವಾದಕಾರಣ ಮಹತ್ತೆಂದೂ, ಕತ್ತಲೆಯು ಪದಾರ್ಥವನ್ನು ಮರೆಮಾಡುವಂತೆ ಸ್ವಸ್ವರೂಪವನು ಮರೆಮಾಡುವುದರಿಂದ ತಮಸ್ಸೆಂದೂ ನಾನಾವಿಧವಾಗಿ ನಾಮಗಳನ್ನು ಕಲ್ಪಿಸಿರುವರು॥೨೦॥

ಚಂದ್ರನಿಗೆ ಸಮನಾದ ಮುಖವುಳ್ಳ ರಾಮನೆ! ನೀನು ಮೊದಲು ನನ್ನಿಂದ ಹೇಳಲ್ಪಡುವ ಬಂಧದ ಸ್ವರೂಪವನ್ನು ಕೇಳುವವನಾಗು; ಬಳಿಕ ಮೋಕ್ಷದ ಸ್ವರೂಪವನ್ನು ನೀನೇ ತಿಳಿಯುವೆ ॥೨೧॥

ವತ್ಸ! ದೃಶ್ಯಸದ್ಭಾವವೇ ದ್ರಷ್ಟೃವಿಗೆ ಬಂಧವೆಂದು ಹೇಳಲ್ಪಡುವುದು; ಹೀಗೆ ದೃಶ್ಯಬಲದಿಂದ ದ್ರಷ್ಟೃವು ಬಂಧಕ್ಕೊಳಗಾಗಿರುವನು; ದೃಶ್ಯವಿಲ್ಲದಿದ್ದರೆ ಅವನು ಮುಕ್ತನಾಗುವನು ॥೨೨॥

ನಾನು ನೀನು-ಇತ್ಯಾದಿರೂಪವಾದ ಮಿಥ್ಯಾರೂಪವಾದ ಜಗತ್ತೇ ದೃಶ್ಯವೆನ್ನಿಸಿಕೊಳ್ಳುವುದು, ಇದು ಎಲ್ಲಿಯವರೆಗೆ ಇರುವುದೋ, ಅಲ್ಲಿಯವರೆಗೆ ಮೋಕ್ಷವುಂಟಾಗುವುದಿಲ್ಲ ॥೨೩॥

---

1. ಲಿಂಗವ್ಯತ್ಯಯಆರ್ಷಃ.

ನೇದಂನೇದಮಿತಿ ವ್ಯರ್ಥಪ್ರಲಾಪೈರ್ನೋಪಶಾಮ್ಯತಿ ।
ಸಙ್ಕಲ್ಪಜನಕೈರ್ದೃಶ್ಯವ್ಯಾಧಿಃ ಪ್ರತ್ಯುತ ವರ್ಧತೇ ॥೧೪॥
ನ ಚ ತರ್ಕಭರಕ್ಷೋದೈಃ ನ ತೀರ್ಥನಿಯಮಾದಿಭಿಃ ।
ಸತೋ ದೃಶ್ಯಸ್ಯ ಜಗತೋ ಯಸ್ಮಾದೇತಿ ವಿಚಾರಕಾಃ ॥೧೫॥
ಜಗದ್ದೃಶ್ಯಂ ತು ಯದ್ಯಸ್ತಿ ನ ಶಾಮ್ಯತ್ಯೇವ ಕಸ್ಯ ಚಿತ್ ।
ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ॥೧೬॥
ಅಚೇತ್ಯಚಿತ್ಸ್ವರೂಪಾತ್ಮಾ ಯತ್ರಯತ್ರೈವ ತಿಷ್ಠತಿ ।
ದ್ರಷ್ಟಾ ತತ್ರಾಸ್ಯ ದೃಶ್ಯಶ್ರೀಃ ಸಮುದೇತ್ಯಪ್ಯಣೂದರೇ ॥೧೭॥
ತಸ್ಮಾದಸ್ತಿ ಜಗದ್ದೃಶ್ಯಂ ತತ್ ಪ್ರಮೃಷ್ಟಮಿದಂ ಮಯಾ ।
ತ್ಯಕ್ತಂ ತಪೋಧ್ಯಾನಜಪೈಃ ಇತಿ ಕಾಞ್ಜಿಕತೃಪ್ತಿವತ್ ॥೧೮॥

ಹಾಗಾದಮೇಲೆ ಕಣ್ಣಿಗೆ ಕಂಡುದದನ್ನೆಲ್ಲ ಇದಲ್ಲ ಇದಲ್ಲ ಎಂದು ಹೇಳುತಬಂದರೇ ಸಾಕಾಗಿರುವಾಗ, ತತ್ವಜ್ಞಾನಾರ್ಥವಾಗಿ ಇಷ್ಟು ಹೆಚ್ಚು ಶ್ರಮವೇತಕ್ಕೆಂದು ಭ್ರಮಿಸಕೂಡದು. ಈ ವಿಧವಾದ ವ್ಯರ್ಥಪ್ರಲಾಪಗಳಿಂದ ಸಂಕಲ್ಪವಿನ್ನೂ ಹೆಚ್ಚಾಗುವಕಾರಣ, ಇವುಗಳಿಂದ ಈ ದೃಶ್ಯರೂಪವಾದ ವ್ಯಾಧಿಯು ಅಡಗುವುದಿಲ್ಲ; ಅಡಗುವುದಕ್ಕೆ ಬದುಲಾಗಿ ವೃದ್ಧಿ ಹೊಂದುವುದು. ಅಯ್ಯಾ ! ವಿಚಾರಶೀಲರಾದ ಜನಗಳಿರಾ! ಈ ದೃಶ್ಯವಾದ ಜಗತ್ತಿರುವಾಗ, ಅತ್ಯಧಿಕವಾದ ತರ್ಕಗಳಿಂದ ಮತ್ತೆಮತ್ತೆ ಚರ್ಚಿಸೋಣದರಿಂದಲೂ—ತೀರ್ಥನಿಯಮ ಮುಂತಾದುವುಗಳಿಂದಲೂ—ಈ ದೃಶ್ಯವ್ಯಾಧಿಯಡಗುವುದಿಲ್ಲ; ಅದರ ಜೊತೆಗೆ ಮತ್ತೊಂದು ಅಪೂರ್ವಪದಾರ್ಥವೂ ಉಂಟಾಗುವಕಾರಣ, ದೃಶ್ಯದಲ್ಲಿ ಉಪೇಕ್ಷೆಮಾಡಿದ ಮಾತ್ರದಿಂದಲೇ ತೃಪ್ತರಾಗಕೂಡದು; ಮತ್ತೆಮತ್ತೆ ವಿಚಾರಮಾಡುತ, ದೃಶ್ಯವಾತ್ಯಂತಿಕ ನಾಶಹೊಂದುವಂತೆ ಮಾಡಬೇಕು ॥೧೪—೧೫॥

ದೃಶ್ಯವಾದ ಈ ಜಗತ್ತು ಕಲ್ಪಿತವಲ್ಲದೆ ವಾಸ್ತವ್ಯವಾಗಿದ್ದಪಕ್ಷದಲ್ಲಿ, ಇದು ಯಾರಿಗೂ ಎಂದಿಗೂ ಶಾಂತವಾಗದಿರಬೇಕು. ಅಸತ್ಯವಾದುದಕ್ಕೆ ಶಾಶ್ವತಸ್ಥಿತಿಯೂ ಇಲ್ಲ; ಸತ್ಯವಾದುದಕ್ಕೆ ನಾಶವೂ ಇಲ್ಲ. ಇದು ಸರ್ವರೂ ಒಪ್ಪತಕ್ಕುದಷ್ಟೆ ! ಹೀಗಾದ ಮೇಲೆ ಜಗತ್ತು ಸತ್ಯವಾಗಿದ್ದಪಕ್ಷದಲ್ಲಿ ಅದೆಂದಿಗೂ ನಾಶವಿಷಯವಾಗಬಾರದಲ್ಲವೆ! ॥೧೬॥

ಹೀಗೆ ಜಪತಪಃಪ್ರಭೃತಿಗಳಿಂದ ತಿಳಿಯಲಸಾಧ್ಯನಾದ ಜ್ಞಾನಸ್ವರೂಪಾತ್ಮನಾದ ದ್ರಷ್ಟ್ರುವು,—ಕೊನೆಗೊಂದು ಪರಮಾಣುವಿನೊಳಗಾದರೂ—ಎಲ್ಲೆಲ್ಲಿರುವನೋ, ಅಲ್ಲಲ್ಲಿ ಈ ದೃಶ್ಯಸಂಪತ್ತುಂಟಾಗುವುದು ॥೧೭॥

ಆದಕಾರಣ, ದೃಶ್ಯವಾದ ಈ ಜಗತ್ತಿದೆಯೆಂಬುದೂ— ಅದು ನನ್ನಿಂದ ಶಾಂತಿಗೊಳಿಸಲ್ಪಟ್ಟಿತೆಂಬುದೂ—ತಪಸ್ಸು ಧ್ಯಾನ ಜಪ ಇತ್ಯಾದಿಗಳ ಬಲದಿಂದ ಅದು ಬಿಡಲ್ಪಟ್ಟಿತೆಂಬುದೂ ಕೂಡ, ತಂಗುಳನ್ನದ ನೀರನ್ನು ಕುಡಿದು ತೃಪ್ತಿಪಡುವಂತೆಯೇ ಅಲ್ಲದೆ ಪರಮಾರ್ಥವಲ್ಲ ॥೧೮॥

ಯದಿ ರಾಮ ಜಗದ್ದೃಶ್ಯಂ ಅಸ್ತಿ ತತ್ ಪ್ರತಿಬಿಮ್ಬತಿ ।
ಪರಮಾಣೂದರೇಪ್ಯಸ್ಮಿನ್ ಚಿದಾದರ್ಶೇ ತಥೈವ ಹಿ ॥೧೯॥
ಯತ್ರತತ್ರ ಸ್ಥಿತೇ ಯದ್ವತ್ ದರ್ಪಣೇ ಪ್ರತಿಬಿಮ್ಬತಿ ।
ಅದ್ರ್ಯಬ್ಧ್ಯುರ್ವೀನದೀವಾರಿ ಚಿದಾದರ್ಶೇ ತಥೈವ ಹಿ ॥೨೦॥
ತತಸ್ತತ್ರ ಪುನರ್ದುಃಖಂ ಜರಾ ಮರಣಜನ್ಮನೀ ।
ಭಾವಾಭಾವಗ್ರಹೋತ್ಸರ್ಗಃ ಸ್ಥೂಲಸೂಕ್ಷ್ಮಚಲಾಚಲಃ ॥೨೧॥
ಇದಂ ಪ್ರಮಾರ್ಜಿತಂ ದೃಶ್ಯಂ ಮಯಾ ಚಾತ್ರಾಹಮಾಸ್ಥಿತಃ ।
ಏತದೇವಾಕ್ಷಯಂ ಬೀಜಂ ಸಮಾಧೌ ಸಂಸೃತಿಸ್ಮೃತೇಃ ॥೨೨॥
ಸತಿ ತ್ವಸ್ಮಿನ್ ಕುತೋ ದೃಶ್ಯೇ ನಿರ್ವಿಕಲ್ಪಸಮಾಧಿತಾ ।
ಸಮಾಧೌ ಚೇತನತ್ವಂ ತು ತುರ್ಯಂ ಚಾಪ್ಯುಪಪದ್ಯತೇ ॥೨೩॥
ವ್ಯುತ್ಥಾನೇ ಹಿ ಸಮಾಧಾನಾತ್ ಸುಷುಪ್ತಾನ್ತ ಇವಾಖಿಲಮ್ ।
ಜಗದ್ದುಃಖಮಿದಂ ಭಾತಿ ಯಥಾಸ್ಥಿತಮಖಣ್ಡಿತಮ್ ॥೨೪॥

ಅಯ್ಯಾ! ರಾಮ! ಈ ದೃಶ್ಯವಾದ ಜಗತ್ತು ಇದ್ದಪಕ್ಷದಲ್ಲಿ, ಅದು ಈ ಪರಮಾಣುವಿನಲ್ಲಿಯೂ ಜ್ಞಾನದರ್ಪಣದಲ್ಲಿಯೂ ಪ್ರತಿಫಲಿಸುವುದು ॥೧೯॥

ಕನ್ನಡಿಯು ಎಲ್ಲಿದ್ದರೂ—ಅದರಲ್ಲಿ ಸಮಸ್ತವೂ ಪ್ರತಿಫಲಿಸುವಂತೆ, ಗಿರಿ ಸಮುದ್ರ ಭೂಮಿ ನದಿ ಜಲ ಮುಂತಾದುವೆಲ್ಲವೂ ಜ್ಞಾನವೆಂಬ ದರ್ಪಣದಲ್ಲಿ ಪ್ರತಿಫಲಿಸುವುವು ॥೨೦॥

ಹೀಗೆ ಜ್ಞಾನದಲ್ಲಿ ದೃಶ್ಯವು ಪ್ರತಿಫಲಿಸಲಾಗಿ, ಅಲ್ಲಿ—ಮತ್ತೆ ದುಃಖವೂ, ಜರಾಮರಣಜನ್ಮಗಳೂ, ಮತ್ತು ಜಾಗರಾವಸ್ಥೆಯಲ್ಲಿ ಸ್ಥೂಲವಾಗಿಯೂ ಸ್ವಪ್ನದಲ್ಲಿ ಸೂಕ್ಷ್ಮವಾಗಿಯೂ ಇರುವ ಸತ್ಯಾಸತ್ಯ ಪದಾರ್ಥಗಳ ಜ್ಞಾನವೂ, ಸುಷುಪ್ತಿಯಲ್ಲಿ ಇವುಗಳ ಪರಿತ್ಯಾಗವೂ—ಇತ್ಯಾದಿಗಳೆಲ್ಲವೂ ಕೇವಲ ಚಂಚಲವಾಗಿ ಉದಯಿಸುವುವು ॥೨೧॥

ತತ್ವಜ್ಞಾನವನ್ನಪೇಕ್ಷಿಸದೆಯೇ ಉಂಟಾಗುವ ಸವಿಕಲ್ಪಕ ಸಮಾಧಿಯಲ್ಲಿ ದೃಶ್ಯಸಮ್ಮಾರ್ಜನೆಯಾಗುವುದಿಲ್ಲವೋ?—ಎಂದರೆ, ಆಗಬಹುದು; ಆದರೆ, ಆ ಸವಿಕಲ್ಪಸಮಾಧಿಯಲ್ಲಿ --ಈ ದೃಶ್ಯವು ನನ್ನಿಂದ ಪರಿಮಾರ್ಜಿಸಲ್ಪಟ್ಟಿತೆಂದೂ ನಾನು ಈ ಸ್ಥಿತಿಯಲ್ಲಿ ಸ್ಥಿರನಾಗಿರುವೆನೆಂದೂ—ಜ್ಞಾನವಿರುವುದರಿಂದ, ಈ ಜ್ಞಾನವೇ ಮತ್ತೆ ಸಂಸಾರಸ್ಮರಣಕ್ಕೆ ಅಕ್ಷಯವಾದ ಬೀಜವಾಗುವುದು ॥೨೨॥

ಈ ದೃಶ್ಯವಿರುವಾಗ ನಿರ್ವಿಕಲ್ಪ ಸಮಾಧಿಯೆಲ್ಲಿ ಸಂಭವಿಸೀತು? ನಿರ್ವಿಕಲ್ಪ ಸಮಾಧಿಯಿದ್ದರೆ, ಚಿತ್ತವಿರುವಾಗ ಚೇತನತ್ವವೂ—ಚಿತ್ತನಾಶವಾದಾಗ ತುರ್ಯಾವಸ್ಥೆಯೂ ಸಂಭವಿಸುವುವು ॥೨೩॥

ಹೀಗೆ ಈ ದೃಶ್ಯವಿರುವಾಗ ಸಮಾಧಿಯೇ ಸಂಭವಿಸುವುದಿಲ್ಲ. ಒಂದುವೇಳೆ ಸಮಾಧಿಯುಂಟಾದರೂ, ಸಮಾಧಿಯಿಂದ ಬಹಿರ್ಮುಖನಾದಾಗ ಸುಷುಪ್ತಿಯ ಕೊನೆಯಲ್ಲಾಗುವಂತೆ—ಈ ಸಮಸ್ತವಾದ ಪ್ರಪಂಚದುಃಖವೂ ಯಥಾವಸ್ಥಿತವಾಗಿ ಸ್ವಲ್ಪವೂ ನ್ಯೂನತೆಯಿಲ್ಲದೆ ಸ್ಫುರಿಸುತ್ತಿರುವುದು ॥೨೪॥

ಪ್ರಾಪ್ತಂ ಭವತಿ ಹೇರಾಮ ತತ್ ಕಿಂ ನಾಮ ಸಮಾಧಿಭಿಃ |
ಭೂಯೋಽನರ್ಥನಿಪಾತೇ ಹಿ ಕ್ಷಣಸಾಮ್ಯೇ ಹಿ ಕಿಂ ಸುಖಮ್ ||೩೫||
ಯದಿ ವಾಪಿ ಸಮಾಧಾನೇ ನಿರ್ವಿಕಲ್ಪೇ ಸ್ಥಿತಿಂ ವ್ರಜೇತ್ |
ತದಕ್ಷಯಸುಷುಪ್ತಾಭಂ ತನ್ಮನ್ಯೇತಾಮಲಂ ಪದಮ್ ||೩೬||
ಪ್ರಾಪ್ಯತೇ ಸತಿ ದೃಶ್ಯೇಽಸ್ಮಿನ್ ನ ಚ ಕಿಂ ನಾಮ ಕೇನಚಿತ್ |
ಯತ್ರಯತ್ರ ಕಿಲಾಯಾತಿ ಚಿತ್ತತಾಸ್ಯ ಜಗದ್ಭ್ರಮಃ ||೩೭||
ದ್ರಷ್ಟಾಥ ಯದಿ ಪಾಷಾಣರೂಪತಾಂ ಭಾವಯೇದ್ ಬಲಾತ್ |
ಶಿಲಾಸ್ತೇ ತತ್ ತದನ್ತೇಽಪಿ ಭೂಯೋಽಸ್ಯೋದೇತಿ ದೃಶ್ಯತಾ ||೩೮||
ನ ಚ ಪಾಷಾಣತಾತುಲ್ಯಾಃ ನಿರ್ವಿಕಲ್ಪಸಮಾಧಯಃ |
ಕೇಷಾಂಚಿತ್ ಸ್ಥಿತಿಮಾಯಾನ್ತಿ ಸರ್ವೈರಿತ್ಯನುಭೂಯತೇ ||೩೯||
ನ ಚ ಪಾಷಾಣತಾತುಲ್ಯಾಃ ರೂಢಿಂ ಯಾತಾಃ ಸಮಾಧಯಃ |
ಭವನ್ತ್ಯಗ್ರ್ಯಪದಂ ಶಾನ್ತಂ ಚಿದ್ರೂಪಮಜಮಕ್ಷಯಮ್ ||೪೦||
ತಸ್ಮಾದ್ಯದೀದಂ ಸದ್ದೃಶ್ಯಂ ತನ್ನ ಶಾಮ್ಯೇತ್ ಕದಾಚನ |

ಅಯ್ಯಾ! ರಾಮ! ಹೀಗಿರುವಾಗ ಸಮಾಧಿಯಿಂದ ಏನುತಾನೆ ಸಿಕ್ಕುವುದು? ಪುನಃ ಅನರ್ಥದೊಳಗೆ ಬೀಳುವ ಪಕ್ಷದಲ್ಲಿ, ಒಂದು ಕ್ಷಣಕಾಲ ಸಮಾಧಾನದಿಂದುಂಟಾಗುವ ಸುಖವಾವುದು ||೩೫||

ಹಾಗಲ್ಲದೆ ನಿರ್ವಿಕಲ್ಪವಾದ ಸಮಾಧಿಯಲ್ಲಿಯೇ ನಿಶ್ಚಲವಾದ ಸ್ಥಿತಿಯನ್ನು ಪಡೆಯುವ ಪಕ್ಷದಲ್ಲಿ, ಆಗ ಅಕ್ಷಯವಾದ ಸುಷುಪ್ತಿಗೆ ಸಮಾನವಾದ ಆ ಅವಸ್ಥೆಯನ್ನು ಪರಮಪದವನ್ನಾಗಿ ತಿಳಿಯಬಹುದು ||೩೬||

ಆದರೆ ಈ ಮನೋರೂಪವಾದ ದೃಶ್ಯವಿರುವಾಗ, ಯಾವನುತಾನೆ ಈ ದೃಶ್ಯಪ್ರಪಂಚದಲ್ಲಿ ಯಾವುದನ್ನಾದರೂ ಅನುಭವಿಸದಿರುವನು? ಏತಕ್ಕೆಂದರೆ:— ಈ ಮನಸ್ಸು ಯಾವಯಾವ ವಿಷಯದಲ್ಲಿ ಚೇತನವಿಶಿಷ್ಟವಾಗುವುದೋ, ಅಲ್ಲಲ್ಲಿ ಜಗದ್ಭ್ರಮೆಯುಂಟಾಗುತಲೇ ಇರುವುದು ||೩೭||

ಅಥವಾ ದ್ರಷ್ಟೃವಾದವನು ಸಮಾಧಿಕಾಲದಲ್ಲಿ ಶಿಲಾದಿರೂಪಗಳನ್ನು ಬಲಾತ್ಕಾರದಿಂದ ಧ್ಯಾನಿಸುತಿರುವನಾದರೆ, ಆ ಸಮಾಧಿಯು ಕೊನೆಯಲ್ಲಿಯೂ ಪುನಃ ಅವನಿಗೆ ಈ ದೃಶ್ಯಸಂಭವವಿದ್ದೇಯಿರುವುದು ||೩೮||

ಒಂದುವೇಳೆ ಶಿಲಾವಸ್ಥೆಗೆ ಸಮಾನವಾಗಿ (ನಿಶ್ಚಲವಾಗಿ) ನಿರ್ದುಃಖವಾದ ನಿರ್ವಿಕಲ್ಪಸಮಾಧಿಯುಂಟಾಗಿದ್ದರೂ, ಅದು ಯಾರಿಗೂ ಸ್ಥಿರವಾಗಿರುವುದಿಲ್ಲವೆಂಬ ಈ ವಿಷಯವು ಸರ್ವರಿಗೂ ಅನುಭವಗೋಚರವಾಗಿಯೇ ಇರುವುದು ||೩೯||

ಮತ್ತು ಚಿರತರಾಭ್ಯಾಸದಿಂದ ಸ್ಥಿರವಾಗಿ ಶಿಲಾವಸ್ಥೆಗೆ ಸಮಾನವಾಗಿರುವ (ಜ್ಞಾನರಹಿತವಾಗಿರುವ) ಸಮಾಧಿಯೂ ಕೂಡ, ಸರ್ವಸಂಸಾರ ಶಾಂತಿರೂಪವಾದ ಜ್ಞಾನಾಕಾರವಾದ ಅನಾದಿಯಾದ ನಾಶರಹಿತವಾದ ಪರಮಪದವಾಗಿ ಆಗುವುದೇ ಇಲ್ಲ ||೪೦||

ಅದುಕಾರಣ, ಈ ದೃಶ್ಯವು ಸತ್ಯವಾಗಿದ್ದ ಪಕ್ಷದಲ್ಲಿ ಆಗ ಇದೆಂದಿಗೂ ಶಾಂತಿಹೊಂದ

ಶಾಮ್ಯೇತ್ ತಪೋಜಪಧ್ಯಾನೈಃ ದೃಶ್ಯಮಿತ್ಯಜ್ಞಕಲ್ಪನಾ ||೪೧||
ಅಲೀನವಲ್ಲರೀರೂಪಂ ಯಥಾ ಪದ್ಮಾಕ್ಷಕೋಟರೇ |
ಆಸ್ತೇ ಕಮಲಿನೀಬೀಜಂ ತಥಾ ದ್ರಷ್ಟರಿ ದೃಶ್ಯಧೀಃ ||೪೨||
ಯಥಾ ರಸಃ ಪದಾರ್ಥೇಷು ಯಥಾ ತೈಲಂ ತಿಲಾದಿಷು |
ಕುಸುಮೇಷು ಯಥಾಮೋದಃ ತಥಾ ದ್ರಷ್ಟರಿ ದೃಶ್ಯಧೀಃ ||೪೩||
ಯತ್ರತತ್ರ ಸ್ಥಿತಸ್ಯಾಪಿ ಕರ್ಪೂರಾದೇಃ ಸುಗನ್ಧಿತಾ |
ಯಥೋದೇತಿ ತಥಾ ದೃಶ್ಯಂ ಚಿದ್ಧಾತೋರುದರೇ ಜಗತ್ ||೪೪||
ಯಥಾ ಚಾತ್ರ ತವ ಸ್ವಪ್ನಃ ಸಙ್ಕಲ್ಪಶ್ಚಿತ್ತರಾಜ್ಯಧೀಃ |
ಸ್ವಾನುಭೂತ್ಯೈವ ದೃಷ್ಟಾನ್ತಃ ತಥಾ ಹೃದ್ಯಸ್ತಿ ದೃಶ್ಯಭೂಃ ||೪೫||
ತಸ್ಮಾಚ್ಚಿತ್ತವಿಕಲ್ಪಸ್ಥಪಿಶಾಚೋ ಬಾಲಕಂ ಯಥಾ |
ವಿನಿಹನ್ತ್ಯೇವಮೇಷೈತಂ ದ್ರಷ್ಟಾರಂ ದೃಶ್ಯರೂಪಿಕಾ ||೪೬||
ಯಥಾಙ್ಕುರೋನ್ತರ್ಬೀಜಸ್ಯ ಸಂಸ್ಥಿತೋ ದೇಶಕಾಲತಃ |
ಕರೋತಿ ಭಾಸುರಂ ದೇಹಂ ತನೋತ್ಯೇವಂ ಹಿ ದೃಶ್ಯಧೀಃ ||೪೭||

ದಿರಬೇಕಾಗುವುದು. ತಪಸ್ಸು ಜಪ ಧ್ಯಾನ ಇತ್ಯಾದಿಗಳಿಂದ ದೃಶ್ಯವು ಶಾಂತಿಹೊಂದುತದೆಂಬುದು, ಅಜ್ಞರು ಮಾಡಿಕೊಂಡಿರುವ ಕಲ್ಪನೆಯುಲ್ಲದೆ ವಾಸ್ತವ್ಯವಲ್ಲ ||೪೧||

ಒಂದು ಕಮಲದ ಬೀಜದೊಳಗೆ, ಮುಂದೆ ದೊಡ್ಡ ಲತೆಯಾಗುವ ರೂಪವೆಲ್ಲವೂ ಹೇಗೆ ಅಡಗಿಕೊಂಡಿರುವುದೋ, ಹಾಗೆ ಅವಿದ್ಯಾಸಹಿತನಾದ ದ್ರಷ್ಟೃವಿನಲ್ಲಿ ದೃಶ್ಯಜ್ಞಾನವೂ ಇರುವುದು ||೪೨||

ಪದಾರ್ಥಗಳಲ್ಲಿ ರಸವು ಹೇಗಿರುವುದೋ, ಎಳ್ಳು ಮೊದಲಾದುವುಗಳಲ್ಲಿ ಎಣ್ಣೆ ಹೇಗಿರುವುದೋ, ಪುಷ್ಪಗಳಲ್ಲಿ ಪರಿಮಳವು ಹೇಗಿರುವುದೋ, ದ್ರಷ್ಟೃವಿನಲ್ಲಿ ದೃಶ್ಯಜ್ಞಾನವೂ ಹಾಗೆ ಅಡಗಿಕೊಂಡಿರುವುದು ||೪೩||

ಪಚ್ಚಕರ್ಪೂರ ಮೊದಲಾದ ಪರಿಮಳದ್ರವ್ಯಗಳು ಎಲ್ಲಿದ್ದಾಗ್ಯೂ ಅವುಗಳ ಸುಗಂಧವು ಉದಯಿಸುವಂತೆ, ಜ್ಞಾನರೂಪನಾದ ದ್ರಷ್ಟೃವಿನೊಳಗಿರುವ ಈ ದೃಶ್ಯವಾದ ಜಗತ್ತೂಕೂಡ ಉದಯಹೊಂದಿಯೇ ಹೊಂದುವುದು ||೪೪||

ಅಯ್ಯಾ! ರಾಮ! ನೀನು ನಿನ್ನ ಮನಸ್ಸಿನೊಳಗೆ ಸ್ವಪ್ನವನ್ನೂ ಸಂಕಲ್ಪವನ್ನೂ ಮನೋರಾಜ್ಯವನ್ನೂ ಕೇವಲ ಸ್ವಾನುಭವದಿಂದಲೇ ನೋಡುವೆಯಲ್ಲವೆ! ಹಾಗೆಯೇ ಈ ದೃಶ್ಯವಿಷಯವೂ ಕೂಡ ಹೃದಯದಲ್ಲಿ ಅನುಭವಗೋಚರವಾಗಿರುವುದು ||೪೫||

ಆದಕಾರಣ, ಮನೋಭ್ರಾಂತಿಯಿಂದುಂಟಾಗುವ ಪಿಶಾಚವು ಬಾಲಕನನ್ನು ಕೊಲ್ಲುವಂತೆ, ಈ ದೃಶ್ಯವೆಂಬ ಸ್ತ್ರೀಪಿಶಾಚಿಯು ಈ ದ್ರಷ್ಟೃವನ್ನೂ ಇಲ್ಲದಂತೆ ಮಾಡಿಬಿಡುವುದು||

ಬೀಜದೊಳಗೆ ಅಡಗಿಕೊಂಡಿರುವ ಮೊಳಕೆಯು, ಸರಿಯಾದ ದೇಶಕಾಲ ಸಮಾವೇಶವೊದಗಿದಾಗ ತನ್ನ ಆಕಾರವನ್ನು ಪ್ರಕಾಶಪಡಿಸುವಂತೆ, ದೃಶ್ಯವೂ ಕೂಡ ದ್ರಷ್ಟೃವಿನಲ್ಲಿದ್ದುಗೊಂಡು ಆಯಾಕಾಲಾನುಗುಣವಾಗಿ ಪ್ರಕಾಶಹೊಂದುವುದು ||೪೭||

ದ್ರವ್ಯಸ್ಯ ಹೃದ್ಯೇವ ಚಮತ್ಕೃತಿರ್ಯಥಾ ಸದೋದಿತಾಸ್ತ್ಯಸ್ತಮಿತೋಜ್ಝಿತೋದರೇ।
ದ್ರವ್ಯಸ್ಯ ಚಿನ್ಮಾತ್ರಶರೀರಿಣಸ್ತಥಾ ಸ್ವಭಾವಭೂತಾಸ್ತ್ಯುದರೇ ಜಗತ್ಸ್ಥಿತಿಃ ॥೪೮॥

ಇತ್ಯಾರ್ಷೇ ಶ್ರೀವಾಸಿಷ್ಠಮಹಾರಾಮಾಯಣೇ
ವಾಲ್ಮೀಕೀಯೇ ದೇವದೂತೋಕ್ತೇ ಮೋಕ್ಷೋಪಾಯೇ
ಉತ್ಪತ್ತಿಪ್ರಕರಣೇ ಬನ್ಧಹೇತುವರ್ಣನಂ ನಾಮ ಪ್ರಥಮಃ ಸರ್ಗಃ.

ಹೀಗೆ ಬೀಜಾದಿರೂಪವಾದ ದ್ರವ್ಯದೊಳಗೆಯೇ ಅಪೂರ್ವಕಾರ್ಯವೈಚಿತ್ರ್ಯಶಕ್ತಿಯಿದ್ದುಗೊಂಡು ಉತ್ಪತ್ತಿ ಹೊಂದುತ ಪುನಃ ನಾಶಹೊಂದುತ ಇರುವಂತೆಯೇ, ಕೇವಲ ಜ್ಞಾನಮಾತ್ರ ಶರೀರನಾದ ಆ ಪರಮಾತ್ಮನೊಳಗೆ, ಆವನ ಸ್ವಭಾವಭೂತವಾದ ಈ ಪ್ರಪಂಚಸಿತಿಯೂ ಅಡಗಿಕೊಂಡಿದ್ದು ಹುಟ್ಟುತಲೂ ಲಯಿಸುತಲೂ ಇರುವುದು ॥೪೮॥

ಇದು ಆರ್ಷವಾದ ಶ್ರೀ ವಾಸಿಷ್ಠ ರಾಮಾಯಣದ ಉತ್ಪತ್ತಿ ಪ್ರಕರಣದಲ್ಲಿ
ಬಂಧಹೇತುನಿರೂಪಣವೆಂಬ ಮೊದಲನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವಿತೀಯಃ ಸರ್ಗಃ.

ಶ್ರೀ ವಸಿಷ್ಠಉವಾಚ.

ಇದನಾಕಾಶಜಾಖ್ಯಾನಂ ಶೃಣು ಶ್ರವಣಭೂಷಣಮ್ ।
ಉತ್ಪತ್ತ್ಯಾಖ್ಯಂ ಪ್ರಕರಣಂ ಯೇನ ರಾಘವ ಬುಧ್ಯತೇ ॥೧॥
ಅಸ್ತಿ ಹ್ಯಾಕಾಶಜೋ ನಾಮ ದ್ವಿಜಃ ಪರಮಧಾರ್ಮಿಕಃ ।
ಧ್ಯಾನೈಕನಿಷ್ಠಃ ಸತತಂ ಪ್ರಜಾನಾಂ ಚ ಹಿತೇ ರತಃ ॥೨॥
ಸ ಚಿರಂ ಜೀವತಿ ಯದಾ ತದಾ ಮೃತ್ಯುರಚಿನ್ತಯತ್ ।
ಸರ್ವಾಣ್ಯೇವ ಕ್ರಮೇಣಾಹಂ ಭೂತಾನ್ಯದ್ಮಿ ಕಿಲಾಕ್ಷಯಃ ॥೩॥
ಏನಮಾಕಾಶಜಂ ವಿಪ್ರಂ ನ ಕಸ್ಮಾದ್ಭಕ್ಷಯಾಮ್ಯಹಮ್ ।
ಅತ್ರ ಮೇ ಕುಣ್ಠಿತಾ ಶಕ್ತಿಃ ಖಡ್ಗಧಾರಾಇವೋಪಲೇ ॥೪॥
ಇತಿ ಸಞ್ಚಿನ್ತ್ಯ ತಂ ಹನ್ತುಂ ಅಗಚ್ಛತ್ ತತ್ಪುರಂ ತದಾ ।
ತ್ಯಜನ್ತ್ಯುದ್ಯಮಮುದ್ಯುಕ್ತಾಃ ನ ಸ್ವಕರ್ಮಣಿ ಕೇಚನ ॥೫॥

ಉತ್ಪತ್ತಿಪ್ರಕರಣದಲ್ಲಿ ಎರಡನೆಯ ಸರ್ಗವು.

ಅಜ್ಞೋ ಭೌತಿಕದೇಹಾತ್ಮಾ ಮೃತ್ಯುಭಕ್ಷ್ಯೋ ನ ತತ್ತ್ವವಿತ್ ।
ಆಕಾಶಜೋ ದ್ವಿಜಇವ ಚಿನ್ಮಾತ್ರಾತ್ಮೇತಿ ಕೀರ್ತ್ಯತೇ ॥

ಅಜ್ಞನಾಗಿ ಪಾಂಚಭೌತಿಕದೇಹದಲ್ಲಿ ಆತ್ಮಜ್ಞಾನವುಳ್ಳವನು ಮೃತ್ಯುವಿಗಾಹಾರವಾಗುವನಲ್ಲದೆ, ಆಕಾಶಜನೆಂಬ ಬ್ರಾಹ್ಮಣನಂತೆ ತತ್ವಜ್ಞನಾಗಿ ಜ್ಞಾನಾತ್ಮಭಾವನೆಯುಳ್ಳವನು ಮೃತ್ಯುವಿಗಾಹಾರವಾಗುವುದಿಲ್ಲವೆಂದು ಈ ಸರ್ಗದಲ್ಲಿ ಹೇಳಲ್ಪಡುವುದು.

ವಸಿಷ್ಠಮಹರ್ಷಿಗಳು ಶ್ರೀರಾಮಚಂದ್ರನನ್ನು ಕುರಿತು ಮತ್ತೆ ಹೇಳಿದರು.

ಅಯ್ಯಾ! ರಾಮ! ಪೂರ್ವೋಕ್ತವಾದ ವಿಷಯವು ದೃಢಪಡುವುದಕ್ಕೋಸ್ಕರ, ಈಗ ನಿನಗೊಂದು ಉಪಾಖ್ಯಾನವನ್ನು ಹೇಳುವೆನು. ಶ್ರವಣಾಲಂಕಾರವಾದ ಈ ಆಕಾಶಜೋಪಾಖ್ಯಾನವನ್ನು ಕೇಳುವವನಾಗು. ಇದರಿಂದ ಈ ಉತ್ಪತ್ತಿ ಪ್ರಕರಣವು ಸುಖವಾಗಿ ತಿಳಿಯುವುದು ॥೧॥

ಪರಮಧಾರ್ಮಿಕನಾಗಿಯೂ ಸರ್ವದಾ ಕೇವಲ ಧ್ಯಾನಾಸಕ್ತನಾಗಿಯೂ ಪ್ರಜೆಗಳಿಗೆ ಹಿತಮಾಡುವುದರಲ್ಲಿಯೇ ತತ್ಪರನಾಗಿಯೂ ಇರುವ ಆಕಾಶಜನೆಂಬ ಬ್ರಾಹ್ಮಣನಿರುವನು॥

ಅವನು ಚಿರಂಜೀವಿಯಾಗಿರುವುದನ್ನು ನೋಡಿ, ಮೃತ್ಯುವು ಯೋಚಿಸಿದನು.— ನಾನು ನಾಶರಹಿತನಾಗಿ ಸಮಸ್ತ ಭೂತಗಳನ್ನೂ ಕ್ರಮವಾಗಿ ಭಕ್ಷಿಸುವೆನು; ಈ ಆಕಾಶಜನೆಂಬ ಬ್ರಾಹ್ಮಣನನ್ನು ನಾನೇಕೆ ತಿನ್ನಲಾರೆನು? ಬಂಡೆಯಮೇಲೆ ಕತ್ತಿಯಲಗು ಕುಂಠಿತವಾಗುವಂತೆ, ಇವನ ವಿಷಯದಲ್ಲಿ ನನ್ನ ಶಕ್ತಿಯು ಕುಂಠಿತವಾಗಿರುವುದಲ್ಲ!—ಎಂದು ಯೋಚಿಸಿ, ಆಗ ಮೃತ್ಯುವು ಅವನನ್ನು ಕೊಲ್ಲುವುದಕ್ಕೋಸ್ಕರ, ಅವನ ಪಟ್ಟಣಕ್ಕೆ ಹೋದನು. ಉದ್ಯೋಗಶೀಲರಾದವರಾರೂ ಕೂಡ ತಮ್ಮ ಕರ್ತವ್ಯದಲ್ಲಿ ಪ್ರಯತ್ನವನ್ನು ಬಿಡುವುದಿಲ್ಲವಷ್ಟೆ! ॥೩—೫॥

ತತಸ್ತತ್ಸದನಂ ಯಾವತ್ ಮೃತ್ಯುಃ ಪ್ರವಿಶತಿ ಸ್ವಯಮ್ ।
ತಾವದೇನಂ ದಹತ್ಯಗ್ನಿಃ ಕಲ್ಪಾನ್ತಜ್ವಲನೋಪಮಃ ॥೬॥
ಅಗ್ನಿಜ್ವಾಲಾಮಹಾಮಾಲಾಂ ವಿದಾರ್ಯಾನ್ತರ್ಗತೋ ಹ್ಯಸೌ ।
ದ್ವಿಜಂ ದೃಷ್ಟ್ವೈವ ಸಮಾದಾತುಂ ಹಸ್ತೇನೈಚ್ಛತ್ ಪ್ರಯತ್ನತಃ ॥೭॥
ನ ಚಾಶಕತ್ ಪುರೋ ದೃಷ್ಟಂ ಅಪಿ ಹಸ್ತಶತೈರ್ದ್ವಿಜಮ್ ।
ಬಲವಾನಪ್ಯವಷ್ಟಬ್ಧುಂ ಸಙ್ಕಲ್ಪಪುರುಷಂ ಯಥಾ ॥೮॥
ಅಥಾಗತ್ಯ ಯಮಂ ಮೃತ್ಯುಃ ಅಪೃಚ್ಛತ್ ಸಂಶಯಚ್ಛಿದಮ್ ।
ಕಿಮಿತ್ಯಹಂ ನ ಶಕ್ನೋಮಿ ಭೋಕ್ತುಮಾಕಾಶಜಂ ವಿಭೋ ॥೯॥

ಯಮ ಉವಾಚ.

ಮೃತ್ಯೋ ನ ಕಿಂಚಿಚ್ಛಕ್ತಸ್ತ್ವಂ ಏಕೋ ಮಾರಯಿತುಂ ಬಲಾತ್ ।
ಮಾರಣೀಯಸ್ಯ ಕರ್ಮಾಣಿ ತತ್ಕರ್ತೄಣೀತಿ ನೇತರತ್ ॥೧೦॥
ತಸ್ಮಾದೇತಸ್ಯ ವಿಪ್ರಸ್ಯ ಮಾರಣೀಯಸ್ಯ ಯತ್ನತಃ ।
ಕರ್ಮಾಣ್ಯನ್ವಿಷ್ಯ ತೇಷಾಂ ತ್ವಂ ಸಾಹಾಯ್ಯೇನೈನಮತ್ಸ್ಯಸಿ ॥೧೧॥

ಬಳಿಕ ಆ ಮೃತ್ಯುವು ಆ ಬ್ರಾಹ್ಮಣನ ಮನೆಯನ್ನು ಯಾವಾಗ ಪ್ರವೇಶಿಸಲುಪಕ್ರಮಿಸಿದನೋ, ಅಷ್ಟರೊಳಗೆ ಪ್ರಳಯಾಗ್ನಿಸದೃಶವಾದ ಬೆಂಕಿಯು ಆ ಮೃತ್ಯುವನ್ನು ಸುಡಲಾರಂಭಿಸಿತು ॥೬॥

ಆಗ ಈ ಮೃತ್ಯುವು, ಅತಿಪ್ರಯಾಸದಿಂದ ಆ ಅಗ್ನಿಜ್ವಾಲೆಗಳ ದೊಡ್ಡ ಮಂಡಲವನ್ನು ಭೇದಿಸಿಕೊಂಡು, ಒಳಗೆ ಪ್ರವೇಶಿಸಿ, ಆ ಬ್ರಾಹ್ಮಣನನ್ನು ಕಂಡು, ಪ್ರಯತ್ನಪೂರ್ವಕವಾಗಿ ಅವನನ್ನು ಕೈಯಿಂದ ಹಿಡಿದುಕೊಳ್ಳಲಿಚ್ಛಿಸಿದನು ॥೭॥

ಮನಸ್ಸಂಕಲ್ಪದಲ್ಲಿ ಒಬ್ಬ ಮನುಷ್ಯನನ್ನು ಮಾಡಿಕೊಂಡರೆ—ಅವನನ್ನು ಹಿಡಿಯಲು ಎಷ್ಟು ಬಲಿಷ್ಠನಾದರೂ ಅಶಕ್ತನಾಗುವಂತೆ, ಆ ಬ್ರಾಹ್ಮಣನು ಮುಂದುಗಡೆಯೇ ಇದ್ದರೂ—ಅವನನ್ನು ಮೃತ್ಯುವು ನೂರಾರು ಕೈಗಳಿಂದಲೂ ಹಿಡಿದು ನಿಲ್ಲಿಸಲು ಸಮರ್ಥನಾಗಲಿಲ್ಲ ॥೮॥

ಅನಂತರ ಆ ಮೃತ್ಯುವು, ತನ್ನ ಸಂಶಯನಿವಾರಣೆಮಾಡತಕ್ಕ ಯಮನ ಹತ್ತಿರಕ್ಕೆ ಹೋಗಿ,—ಸ್ವಾಮಿ! ಆಕಾಶಜನನ್ನು ತಿನ್ನಲು ಏನುಕಾರಣ ನಾನು ಶಕ್ತನಾಗುವುದಿಲ್ಲ? ಎಂದು ಕೇಳಿದನು ॥೯॥

ಯಮನು ಮೃತ್ಯುವನ್ನು ಕುರಿತು ಹೇಳಿದುದೇನೆಂದರೆ:—

ಎಲೈ ಮೃತ್ಯುವೇ! ನೀನು ಒಬ್ಬೊಂಟಿಗನಾಗಿ ನಿನ್ನ ಬಲದಿಂದ ಯಾವುದೊಂದನ್ನೂ ಸಾಯಿಸಲು ಶಕ್ತನಲ್ಲ. ಯಾವುದು ಕೊಲ್ಲಲ್ಪಡಬೇಕಾದುದೋ, ಅದರ ಕರ್ಮವೇ ಅದನ್ನು ಕೊಲ್ಲುವುದಲ್ಲದೆ ಮತ್ತೊಂದಲ್ಲ ॥೧೦॥

ಅದುಕಾರಣ, ಕೊಲ್ಲಲ್ಪಡತಕ್ಕವನಾಗಿರುವ ಈ ಬ್ರಾಹ್ಮಣನ ಕರ್ಮಗಳನ್ನು ಪ್ರಯತ್ನಪೂರ್ವಕವಾಗಿ ಹುಡುಕಿದರೆ, ಅವುಗಳ ಸಾಹಾಯ್ಯದಿಂದ ನೀನು ಇವನನ್ನು ತಿನ್ನುವೆ॥

ತತಃ ಸ ಮೃತ್ಯುರ್ಬಭ್ರಾಮ ತತ್ಕರ್ಮಾನ್ವೇಷಣಾದೃತಃ ।
ಮಣ್ಡಲಾನಿ ದಿಗನ್ತಾಂಶ್ಚ ಸರಾಂಸಿ ಸರಿತೋ ದಿಶಃ ॥೧೨॥
ವನಜಙ್ಗಲಜಾಲಾನಿ ಶೈಲಾನಬ್ಧಿತಟಾನಿ ಚ ।
ದ್ವೀಪಾನ್ತರಾಣ್ಯರಣ್ಯಾನಿ ನಗರಾಣಿ ಪುರಾಣಿ ಚ ॥೧೩॥
ಗ್ರಾಮಾಣ್ಯಖಿಲರಾಷ್ಟ್ರಾಣಿ ದೇಶಾನ್ತರ್ಗಹನಾನಿ ಚ ।
ಏವಂ ಭೂಮಣ್ಡಲಂ ಭ್ರಾನ್ತ್ವಾ ನ ಕುತಶ್ಚಿತ್ ಸ ಕಾನಿಚಿತ್ ॥೧೪॥
ತಾನ್ಯಾಕಾಶಜಕರ್ಮಾಣಿ ಲಬ್ಧವಾನ್ ಮೃತ್ಯುರುದ್ಯತಃ ।
ವನ್ಧ್ಯಾಪುತ್ರಮಿವ ಪ್ರಾಜ್ಞಃ ಸಙ್ಕಲ್ಪಾದ್ರಿಮಿವಾಪರಃ ॥೧೫॥
ಸಮಪೃಚ್ಛದಥಾಗತ್ಯ ಯಮಂ ಸರ್ವಾರ್ಥಕೋವಿದಮ್ ।
ಪರಾಯಣಂ ಹಿ ಪ್ರಭವಃ ಸನ್ದೇಹೇಷ್ವನುಜೀವಿನಾಮ್ ॥೧೬॥
ಆಕಾಶಜಸ್ಯ ಕರ್ಮಾಣಿ ಕ್ವ ಸ್ಥಿತಾನಿ ವದ ಪ್ರಭೋ ।
ಧರ್ಮರಾಜೋಽಥ ಸಞ್ಚಿನ್ತ್ಯ ಸುಚಿರಂ ಪ್ರೋಕ್ತವಾನಿದಮ್ ॥೧೭॥
ಆಕಾಶಜಸ್ಯ ಕರ್ಮಾಣಿ ಮೃತ್ಯೋ ಸನ್ತಿ ನ ಕಾನಿಚಿತ್ ।
ಏಷ ಆಕಾಶಜೋ ವಿಪ್ರೋ ಜಾತಃ ಖಾದೇವ ಕೇವಲಾತ್ ॥೧೮॥
ಆಕಾಶದೇವ ಯೋ ಜಾತಃ ಸ ವ್ಯೋಮೈವಾಮಲಂ ಭವೇತ್ ।
ಸಹಕಾರೀಣಿ ನೋ ಸನ್ತಿ ಕರ್ಮಾಣ್ಯಸ್ಯ ನ ಕಾನಿಚಿತ್ ॥೧೯॥

ಹೀಗೆ ಯಮನು ಹೇಳಿದ ಬಳಿಕ, ಆ ಮೃತ್ಯುವು—ಆ ಆಕಾಶಜನ ಕರ್ಮಗಳನ್ನು ಹುಡುಕುವುದರಲ್ಲಾಸಕ್ತನಾಗಿ, ಆಯಾ ದೇಶಗಳನ್ನೂ—ದಿಕ್ಕುಗಳ ಕೊನೆಗಳನ್ನೂ—ಸರಸ್ಸುಗಳನ್ನೂ—ನದಿಗಳನ್ನೂ—ದಿಕ್ಕುಗಳನ್ನೂ—ಅರಣ್ಯಗಳೇನು ದೊಡ್ಡ ಕಾಡುಗಳೇನು ಇವುಗಳ ಸಮೂಹಗಳನ್ನೂ—ಪರ್ವತಗಳನ್ನೂ — ಸಮುದ್ರತೀರಗಳನ್ನೂ—ದ್ವೀಪಾಂತರಗಳನ್ನೂ—ಅಲ್ಲಿನ ಅರಣ್ಯಗಳನ್ನೂ—ಪಟ್ಟಣಗಳನ್ನೂ ಅವುಗಳ ಸಮೀಪದಲ್ಲಿರುವ ಉಪನಗರಗಳನ್ನೂ—ಗ್ರಾಮಗಳನ್ನೂ—ಸಮಸ್ತ ರಾಷ್ಟ್ರಗಳನ್ನೂ—ಆಯಾದೇಶಗಳಲ್ಲಿರುವ ದುಷ್ಪ್ರವೇಶವಾದ ಪ್ರದೇಶಗಳನ್ನೂ ಸುತ್ತಿದನು. ಹೀಗೆ ಆ ಮೃತ್ಯುವು ಭೂಮಂಡಲವನ್ನೆಲ್ಲ ಸುತ್ತಿ, ಮಹಾಪ್ರಯತ್ನವುಳ್ಳವನಾಗಿದ್ದರೂ— ಪ್ರಾಜ್ಞನಾದವನು ಬಂಜೆಯ ಮಗನನ್ನು ಕಾಣದಂತೆಯೂ—ಒಬ್ಬನು ತನ್ನ ಮನಸ್ಸಿನಲ್ಲಿ ಕಲ್ಪಿಸಿಕೊಂಡಿದ್ದ ಬೆಟ್ಟವನ್ನು ಮತ್ತೊಬ್ಬನು ಕಾಣದಂತೆಯೂ-ಆ ಆಕಾಶಜನ ಕರ್ಮಗಳನ್ನು ಎಲ್ಲಿಯೂ ಸ್ವಲ್ಪವೂ ಕಾಣಲಿಲ್ಲ॥

ಅನಂತರ ಆ ಮೃತ್ಯುವು ಬಂದು ಸಕಲ ವಿಷಯದಲ್ಲಿಯೂ ಪ್ರಾಜ್ಞನಾದ ಯಮನನ್ನು ಪ್ರಶ್ನೆಮಾಡಿದನು. ಅನುಜೀವಿಗಳಿಗೆ ಸಂದೇಹವುಂಟಾದಾಗ ಪ್ರಭುಗಳೇ ಮುಖ್ಯ ಗತಿಯಲ್ಲವೆ! ॥೧೬॥

‘ ಸ್ವಾಮಿ! ಆಕಾಶಜನ ಕರ್ಮಗಳು ಎಲ್ಲಿವೆ? ಅಪ್ಪಣೆಕೊಡು’ ಎಂದು ಮೃತ್ಯುವು ಕೇಳಿದಬಳಿಕ, ಯಮಧರ್ಮರಾಯನು ಬಹುಕಾಲ ಪರ್ಯಾಲೋಚಿಸಿ, ಈರೀತಿಯಾಗಿ ಹೇಳಿದನು॥

ಎಲೈ ಮೃತ್ಯುವೆ ! ಆಕಾಶಜನಿಗೆ ಯಾವ ಸ್ವಲ್ಪ ಕರ್ಮವೂ ಇಲ್ಲ; ಈ ಆಕಾಶಜನೆಂಬ ಬ್ರಾಹ್ಮಣನು, ಕೇವಲವಾದ ಆಕಾಶದಿಂದಲೇ ಹುಟ್ಟಿರುವನು ॥೧೮॥

ಯಾವ ಈ ಬ್ರಾಹ್ಮಣನು ಆಕಾಶದಿಂದಲೇ ಹುಟ್ಟಿರುವನೋ, ಅವನು ನಿರ್ಮಲವಾದ ಆಕಾಶವೇ ಆಗಿರುವನು. ಇವನಿಗೆ ಜನ್ಮಸಹಕಾರಿಗಳಾದ ಯಾವಕರ್ಮಗಳೂ ಇರುವುದಿಲ್ಲ॥

ಸಮ್ಬನ್ಧಃ ಪ್ರಾಕ್ತನೇನಾಸ್ಯ ನ ಮನಾಗಪಿ ಕರ್ಮಣಾ ।
ಅಸ್ತಿ ವನ್ಧ್ಯಾಸುತಸ್ಯೇವ ತಥಾಜಾತಾಕೃತೇರಿವ ॥೨೦॥
ಕಾರಣಾನಾಮಭಾವೇನ ತಸ್ಮಾದಾಕಾಶಮೇವ ಸಃ ।
ನೈತಸ್ಯ ಪೂರ್ವಕರ್ಮಾಸ್ತಿ ನಭಸೀವ ಮಹಾದ್ರುಮಃ ॥೨೧॥
ನೈತದಸ್ಯಾವಶಂ ಚಿತ್ತಂ ಅಭಾವಾತ್ ಪೂರ್ವಕರ್ಮಣಾಮ್ ।
ಅದ್ಯ ತಾವದನೇನಾದ್ಯಂ ನ ಕಿಂಚಿತ್ ಕರ್ಮ ಸಞ್ಚಿತಮ್ ॥೨೨॥
ಏವಮಾಕಾಶಕೋಶಾತ್ಮಾ ವಿಶದಾಕಾಶರೂಪಿಣಿ ।
ಸ್ವಕಾರಣೇ ಸ್ಥಿತೋ ನಿತ್ಯಃ ಕಾರಣಾನಿ ನ ಕಾನಿಚಿತ್ ॥೨೩॥
ಪ್ರಾಕ್ತನಾನಿ ನ ಸನ್ತ್ಯಸ್ಯ ಕರ್ಮಾಣ್ಯದ್ಯ ಕರೋತಿ ನೋ ।
ಕಿಂಚಿದಪ್ಯೇವಮೇಷೋತ್ರ ವಿಜ್ಞಾನಾಕಾಶಮಾತ್ರಕಃ ॥೨೪॥
ಪ್ರಾಣಸ್ಪನ್ದೋಸ್ಯ ಯತ್ ಕರ್ಮ ಲಕ್ಷ್ಯತೇ ಚಾಸ್ಮದಾದಿಭಿಃ ।
ದೃಶ್ಯತೇಸ್ಮಾಭಿರೇವಂ ತತ್ ನತ್ವಸ್ಯಾಸ್ತ್ಯತ್ರ ಕರ್ಮಧೀಃ ॥೨೫॥
ಸಂಸ್ಥಿತಾ ಭಾವಯನ್ತೀವ ಚಿದ್ರೂಪೈವ ಪರಾತ್ ಪದಾತ್ ।
ಭಿನ್ನಮಾಕಾರಮಾತ್ಮೀಯಂ ಚಿತ್ಸ್ತಮ್ಭೇ ಸಾಲಭಞ್ಜಿಕಾ ॥೨೬॥

ಬಂಜೆಯ ಮಗನಿಗೂ-ಆಕಾರವೇ ಇಲ್ಲದವನಿಗೂ-ಹೇಗೆ ಯಾವ ಕರ್ಮಸಂಬಂಧವೂ ಇಲ್ಲವೋ, ಹಾಗೆಯೇ ಈ ಆಕಾಶಜನಿಗೂ ಸ್ವಲ್ಪವೂ ಪೂರ್ವಜನ್ಮಕರ್ಮಸಂಬಂಧವಿರುವುದಿಲ್ಲ॥

ಆದುದರಿಂದ, ಜನ್ಮಹೇತುವಾದ ಕರ್ಮಗಳಿಲ್ಲದಕಾರಣ, ಇವನು ಆಕಾಶವೇ ಆಗಿರುವನು. ಆಕಾಶದಲ್ಲಿ ದೊಡ್ಡಮರವಿಲ್ಲದಂತೆ—ಇವನಿಗೆ ಪ್ರಾಚೀನಕರ್ಮವಿಲ್ಲ ॥೨೧॥

ಇವನಿಗೆ ಪೂರ್ವಕರ್ಮಗಳಿಲ್ಲದಕಾರಣ, ಇವನ ಮನಸ್ಸು ಪರಾಧೀನವಾಗಿಲ್ಲ. ಈ ಜನ್ಮದಲ್ಲಿರುವ ಇವನು, ಪೂರ್ವಜನ್ಮದಲ್ಲಿ ಸ್ವಲ್ಪಕರ್ಮವನ್ನೂ ಗಳಿಸಿಟ್ಟಿಲ್ಲ ॥೨೨॥

ಹೀಗೆ ಇವನು, ನಿರ್ಮಲಾಕಾಶರೂಪನಾದ ಸ್ವಜನ್ಮಹೇತುವಾದ ಪರಬ್ರಹ್ಮನೊಳಗೆ, ಆಕಾಶಕೋಶರೂಪನಾಗಿ ಶಾಶ್ವತವಾಗಿರುವನು. ಇವನಿಗೆ ಜನ್ಮಹೇತುಗಳಾದ ಕರ್ಮಗಳೊಂದೂ ಇಲ್ಲ ॥೨೩॥

ಇವನಿಗೆ ಪ್ರಾಕ್ತನಕರ್ಮಗಳೂ ಇಲ್ಲ; ಈ ಜನ್ಮದಲ್ಲಿಯೂ ಇವನು ಸ್ವಲ್ಪವೂ ಕರ್ಮ ಮಾಡುವುದಿಲ್ಲ. ಈ ರೀತಿಯಾಗಿ ಇವನು ಕೇವಲ ಜ್ಞಾನಾಕಾಶಮಾತ್ರನಾಗಿರುವನು॥೨೪॥

ಆದರೆ, ಇವನಿಗೆ ಪ್ರಾಣವಾಯು ಚಲನೆಯಾಗುವುದನ್ನು ನೋಡಿ, ನಮ್ಮಂಥವರು ಇವನಲ್ಲಿ ಕರ್ಮವುಂಟೆಂದು ತಿಳಿಯುವೆವಲ್ಲವೆ! ಇದು ನಮ್ಮಗಳಿಂದ ಕರ್ಮವೆಂದು ತಿಳಿಯಲ್ಪಡುತ್ತದೆಯಲ್ಲದೆ, ಇವನಿಗೆ ಇದರಲ್ಲಿ ಕರ್ಮಬುದ್ಧಿಯಿಲ್ಲ॥೨೫॥

ಹಾಗಾದಮೇಲೆ ಇವನಿಗೆ ದೇಹಾದಿಜ್ಞಾನ ಹೇಗೆಂದರೆ:—ಜ್ಞಾನರೂಪವಾದ ಬೊಂಬೆಯು, ಜ್ಞಾನರೂಪವಾದ ಸ್ತಂಭದಲ್ಲಿ, ಆ ಪರಮಪದಕ್ಕಿಂತಲೂ ತನ್ನ ಆಕಾರವು ಬೇರೆಯಾಗಿದೆಯೆಂದು ಭಾವಿಸುವಂತೆ ಇರುತ್ತದೆ. ಹೀಗೆ ಭಾವನಾಮಾತ್ರದಿಂದ ದೇಹಾದಿಜ್ಞಾನವುಂಟಾಗುತ್ತದೆಯಲ್ಲದೆ, ವಾಸ್ತವ್ಯವಲ್ಲ ॥೨೬॥

ಅನುತ್ಕೀರ್ಣಾ ಯಥಾ ಸ್ತಮ್ಭೇ ಸಂಸ್ಥಿತಾ ಸಾಲಭಞ್ಜಿಕಾ |
ತಥೈವ ಪರಮಾರ್ಥಾತ್ ಸಃ ಖಾತ್ಮಭೂತಃ ಸ್ಥಿತೋ ದ್ವಿಜಃ ||೨೭||
ಯಥಾ ದ್ರವತ್ವಂ ಪಯಸಿ ಶೂನ್ಯತ್ವಂ ಚ ಯಥಾಮ್ಬರೇ |
ಸ್ಪನ್ದತ್ವಂ ಚ ಯಥಾ ವಾಯೋಃ ತಥೈಷ ಪರಮೇ ಪದೇ ||೨೮||
ಕರ್ಮಾಣ್ಯದ್ಯತನಾನ್ಯಸ್ಯ ಸಞ್ಚಿತಾನಿ ನ ಸನ್ತಿ ಹಿ |
ನ ಪೂರ್ವಾಣ್ಯೇಷ ತೇನೇಹ ನ ಸಂಸಾರವಶಂ ಗತಃ ||೨೯||
ಸಹಕಾರಿಕಾರಣಾನಾಂ ಅಭಾವೇ ಯಃ ಪ್ರಜಾಯತೇ |
ನಾಸೌ ಸ್ವಕಾರಣಾದ್ಭಿನ್ನೋ ಭವತೀತ್ಯನುಭೂಯತೇ ||೩೦||
ಕಾರಣಾನಾಮಭಾವೇನ ತಸ್ಮಾದೇಷ ಸ್ವಯಂಭವಃ |
ಕರ್ತಾ ನ ಪೂರ್ವಂ ನಾಪ್ಯದ್ಯ ಕಥಮಾಕ್ರಮ್ಯತೇ ವದ ||೩೧||
ಯದೈಷ ಕಲ್ಪನಾಂ ಬುದ್ಧ್ಯಾ ಮೃತಿನಾಮ್ನೀಂ ಕರಿಷ್ಯತಿ |
ಪೃಥ್ವ್ಯಾದಿಮಾನಯಮಹಂ ಇತಿ ಯಸ್ಯ ಚ ನಿಶ್ಚಯಃ |
ಸ ಪಾರ್ಥಿವೋ ಭವತ್ಯಾಶು ಗ್ರಹೀತುಂ ಸ ಚ ಶಕ್ಯತೇ ||೩೨||
ಪೃಥ್ವ್ಯಾದಿಕಲನಾಭಾವಾತ್ ಏಷ ವಿಪ್ರೋ ನ ರೂಪವಾನ್ |

ಕಂಭದಲ್ಲಿ ಕೊರೆಯದಿದ್ದರೂ ಬೊಂಬೆಯು ಹೇಗಿರುವುದೋ, ಹಾಗೆಯೇ ಆ ಬ್ರಾಹ್ಮಣನು ಪರಮಾರ್ಥವಾಗಿ ಆಕಾಶಸ್ವರೂಪನಾಗಿರುವನು ||೨೭||

ಜಲದಲ್ಲಿ ದ್ರವಸ್ವರೂಪವು ಹೇಗಿರುವುದೋ, ಆಕಾಶದಲ್ಲಿ ಶೂನ್ಯತ್ವವು ಹೇಗಿರುವುದೋ, ವಾಯುವಿನಲ್ಲಿ ಚಲನಸ್ವಭಾವವು ಹೇಗಿರುವುದೋ,—ಹಾಗೆ ಇವನು ಆ ಪರಮಪದದಲ್ಲಿ ಅಭಿನ್ನವಾಗಿರುವನು ||೨೮||

ಇವನಿಗೆ ಈಜನ್ಮದ ಕರ್ಮಗಳೂ ಇಲ್ಲ; ಜನ್ಮಾಂತರೀಯ ಸಂಚಿತಕರ್ಮಗಳೂ ಇಲ್ಲ. ಅದುಕಾರಣ, ಈಗ ಇವನು ಸಂಸಾರವಶನಾಗಿಲ್ಲ ||೨೯||

ಸಹಕಾರಿಕಾರಣಗಳೊಂದೂ ಇಲ್ಲದೆಯೆ ಯಾವ ಪದಾರ್ಥವುದ್ಭವಿಸುವುದೋ, ಅದು ತನ್ನ ಮೂಲಕಾರಣಕ್ಕಿಂತ ಪೃಥಕ್ಕಾಗುವುದಿಲ್ಲವೆಂಬುದು ಸರ್ವರಿಗೂ ಅನುಭವಸಿದ್ಧವಾಗಿರುವುದು ||೩೦||

ಆದುದರಿಂದ, ಸಹಕಾರಿಕಾರಣಗಳಾದ ಕರ್ಮಗಳಿಲ್ಲದಕಾರಣ, ಇವನು ಸ್ವಯಂಜಾತನಾಗಿರುವನು; ಇವನು ಹಿಂದೆಯೂ ಕರ್ಮಮಾಡಿದವನಲ್ಲ; ಈಗಲೂ ಮಾಡತಕ್ಕವನಾಗಿಲ್ಲ. ಹೀಗಿರುವಾಗ, ಇವನು ಹೇಗೆ ನಿನ್ನಿಂದ ಆಕ್ರಮಿಸಲ್ಪಡುವನು ? ನೀನೇ ಹೇಳುವವನಾಗು ||೩೧||

ಆದರೆ, ಇವನು ಯಾವಾಗ ತನ್ನ ಬುದ್ಧಿಯಿಂದ ಮರಣನಾಮಕವಾದ ಕಲ್ಪನೆಯನ್ನು ಮಾಡಿಕೊಳ್ಳುವನೋ, ಯಾವಾಗ ಇವನಿಗೆ—ನಾನು ಪೃಥಿವ್ಯಾದಿಭೂತಯುಕ್ತನಾಗಿರುವೆನೆಂಬ ನಿಶ್ಚಯವುಂಟಾಗುವುದೋ, ಆಗ ಇವನು ಪಾರ್ಥಿವರೂಪನಾಗುವನು; ಆಗ ಹಿಡಿದುಕೊಳ್ಳುವುದಕ್ಕೂ ಶಕ್ಯನಾಗುವನು ||೩೨||

ಪೃಥಿವ್ಯಾದಿಗಳ ಪರ್ಯಾಲೋಚನೆಯಿಲ್ಲದಕಾರಣ, ಈಗ ಈ ಬ್ರಾಹ್ಮಣನು ಅಂತಹ

ದೃಢರಜ್ಜ್ವೇವ ಗಗನಂ ಗ್ರಹೀತುಂ ನೈವ ಯುಜ್ಯತೇ ‖೩೩‖

ಮೃತ್ಯುರುವಾಚ.

ಭಗವನ್ ಜಾಯತೇ ಶೂನ್ಯಾತ್ ಕಥಂ ನಾಮ ವದೇತಿ ಮೇ ।
ಪೃಥ್ವ್ಯಾದಯಃ ಕಥಂ ಸನ್ತಿ ನ ಸನ್ತಿ ವದ ವಾ ಕಥಮ್ ‖೩೪‖

ಯಮಉವಾಚ.

ನ ಕದಾಚನ ಜಾತೋಽಸೌ ನ ಚ ನಾಸ್ತಿ ಕದಾಚನ ।
ದ್ವಿಜಃ ಕೇವಲವಿಜ್ಞಾನಭಾವಮಾತ್ರಂ ತತ್ ತಥಾ ಸ್ಥಿತಃ ‖೩೫‖
ಮಹಾಪ್ರಳಯಸಮ್ಪತ್ತೌ ನ ಕಿಂಚಿದವಶಿಷ್ಯತೇ ।
ಬ್ರಹ್ಮಾಸ್ತೇ ಶಾನ್ತಮಜರಂ ಅನನ್ತಾತ್ಮೈವ ಕೇವಲಮ್ ‖೩೬‖
ಶೂನ್ಯಂ ನಿತ್ಯೋದಿತಂ ಸೂಕ್ಷ್ಮಂ ನಿರುಪಾಧಿ ಪರಂ ಸ್ಥಿತಮ್ ।
ತದಾ ತದನು ಯೇನಾಸ್ಯ ನಿಕಟೇದ್ರಿನಿಭಂ ಮಹಃ ‖೩೭‖

ಆಕಾರವಿಲ್ಲದಿರುವವನಾಗಿರುವನು. ಅದುಕಾರಣ, ಎಷ್ಟು ಗಟ್ಟಿಯಾದ ಹಗ್ಗದಿಂದಲಾದರೂ ಆಕಾಶವನ್ನು ಕಟ್ಟುವುದಕ್ಕಾಗಲಾರದಂತೆ—ಇವನನ್ನೂ ಹಿಡಿಯುವುದಕ್ಕಾಗಲಾರದು‖೩೩

ಹೀಗೆ ಯಮನು ಹೇಳಿದುದನ್ನು ಕೇಳಿ, ಮೃತ್ಯುವು—ಸ್ವಲ್ಪ ಸಂಶಯಪಟ್ಟು ಮತ್ತೆ ಕೇಳಿದನು.

ಸ್ವಾಮಿ! ತಾವು ಹೇಳಿದುದರಲ್ಲಿ ಸ್ವಲ್ಪ ಶಂಕೆಯುಂಟಾಗಿರುವುದು.—ಆ ಬ್ರಾಹ್ಮಣನು ಆಕಾಶದಿಂದ ಹುಟ್ಟಿದನೆಂದು ತಾವು ಹೇಳಿದಿರಿ. ಶೂನ್ಯವಾದ ಪದಾರ್ಥದಿಂದ ಹುಟ್ಟುವ ಬಗೆ ಹೇಗೆ? ಮತ್ತು ಪೃಥವಿಮುಂತಾದ ಭೂತಗಳು ಇರುವ ಬಗೆ ಹೇಗೆ? ಅಥವಾ ಇಲ್ಲದಿರುವ ಬಗೆ ಹೇಗೆ? ಇದನ್ನು ನನಗೆ ಅಪ್ಪಣೆಕೊಡಬೇಕು ‖೩೪‖

ಹೀಗೆ ಪ್ರಶ್ನೆಮಾಡಿದ ಮೃತ್ಯುವಿಗೆ ಯಮನು ಉತ್ತರಕೊಡುವನು.

ಅಯ್ಯಾ! ಮೃತ್ಯು! ಈ ಬ್ರಾಹ್ಮಣನು ಯಾವಾಗಲೂ ಹುಟ್ಟಲೂ ಇಲ್ಲ; ಇವನು ಯಾವಾಗಲೂ ಇಲ್ಲದೆಯೂ ಇಲ್ಲ; ಇವನು ಕೇವಲ ಜ್ಞಾನಪ್ರಕಾಶಮಾತ್ರನಾಗಿರುವುದರಿಂದ, ಆರೀತಿಯಾಗಿಯೇ ಸರ್ವದಾ ಇರುವನಲ್ಲದೆ ಯಾವ ವಿಕಾರವನ್ನೂ ಹೊಂದುವುದಿಲ್ಲ. ಆದರೆ, ಹಿಂದೆ ಪರಬ್ರಹ್ಮನನ್ನು ಆಕಾಶರೂಪವಾಗಿ ಹೇಳುವುದಕ್ಕೆ ಕಾರಣವೇನೆಂದರೆ,—ಕಾರ್ಯವು ಕಾರಣದಿಂದ ಪ್ರತ್ಯೇಕವಾಗಿರುವುದಿಲ್ಲವೆಂಬ ಅಭಿಪ್ರಾಯವನ್ನು ತಿಳಿಯಪಡಿಸುವುದಕ್ಕೇ ಹೊರತು, ಪರಬ್ರಹ್ಮನು ಶೂನ್ಯನೆಂದು ಹೇಳುವುದಕ್ಕಲ್ಲ, ಹೀಗೆಯೇ ಅಜನು ಜನಿಸಿದನೆಂದು ಹೇಳಿದುದೂ ಕೂಡ, ಅವನೇ ರೂಪಾಂತರಹೊಂದಿದನೆಂಬ ಅಭಿಪ್ರಾಯದಿಂದಲ್ಲದೆ, ಪರಿಣಾಮಹೊಂದಿ ಪೃಥಕ್ಪದಾರ್ಥವಾದನೆಂಬ ಅಭಿಪ್ರಾಯದಿಂದಲ್ಲ ‖೩೫‖

ಮಹಾಪ್ರಳಯವಾದಾಗ ಯಾವುದೂ ಅವಶೇಷವಾಗಿರುವುದಿಲ್ಲ; ಆದರೆ ಆಗ ಬ್ರಹ್ಮವೊಂದುಮಾತ್ರವಿರುವುದು; ಅದು ಶಾಂತವಾಗಿಯೂ ಜರಾವರ್ಜಿತವಾಗಿಯೂ ಅನಂತಸ್ವರೂಪವಾಗಿಯೂ ದುಃಖಾದಿಶೂನ್ಯವಾಗಿಯೂ ನಿತ್ಯೋತ್ಪನ್ನವಾಗಿಯೂ ಸೂಕ್ಷ್ಮವಾಗಿಯೂ ಉಪಾಧಿರಹಿತವಾಗಿಯೂ ಪರಾತ್ಪರತರವಾಗಿಯೂ ಇರುವುದು. ಬಳಿಕ, ಇದರ ಸಮೀಪದಲ್ಲಿ ಪರ್ವತಾಕಾರವಾದ ತೇಜಸ್ಸು, ಕೇವಲ ಜ್ಞಾನಮಾತ್ರ ಸ್ವಭಾವವಾಗಿರುವ

ಸಂವಿನ್ಮಾತ್ರಸ್ವಭಾವತ್ವಾತ್ ದೇಹೋಽಹಮಿತಿ ಚೇತತಿ ।
ಕಾಕತಾಳೀಯವದ್ಭ್ರಾನ್ತಂ ಆಕಾರಂ ತೇನ ಪಶ್ಯತಿ ॥೩೮॥
ಸಏಷ ಬ್ರಾಹ್ಮಣಸ್ತಸ್ಮಿನ್ ಸರ್ಗಾದಾವಮ್ಬರೋದರೇ ।
ನಿರ್ವಿಕಲ್ಪಶ್ಚಿದಾಕಾಶರೂಪಮಾಸ್ಥಾಯ ಸಂಸ್ಥಿತಃ ॥೩೯॥
ನಾಸ್ಯ ದೇಹೋ ನ ಕರ್ಮಾಣಿ ನ ಕರ್ತೃತ್ವಂ ನ ವಾಸನಾ ।
ಏಷ ಶುದ್ಧಚಿದಾಕಾಶೋ ವಿಜ್ಞಾನಘನಆತತಃ ॥೪೦॥
ಪ್ರಾಕ್ತನಂ ವಾಸನಾಜಾಲಂ ಕಿಂಚಿದಸ್ಯ ನ ವಿದ್ಯತೇ ।
ಕೇವಲಂ ವ್ಯೋಮರೂಪಸ್ಯ ಭಾರೂಪಸ್ಯೇವ ತೇಜಸಃ ॥೪೧॥
ವೇದನಾಮಾತ್ರಸಂಶಾನ್ತೌ ಈದೃಶೋಽಪಿ ನ ದೃಶ್ಯತೇ।
ತಸ್ಮಾದ್ಯಥಾ ಚಿದಾಕಾಶಃ ತಥಾ ತತ್ಪ್ರತಿಪತ್ತಯಃ ॥೪೨॥
ಕುತಃ ಕಿಲಾತ್ರ ಪೃಥ್ವ್ಯಾದೇಃ ಕೀದೃಶಃ ಸಮ್ಭವಃ ಕಥಮ್ ।
ಏತದಾಕ್ರಮಣೇ ಮೃತ್ಯೋ ತಸ್ಮಾನ್ಮಾ ಯತ್ನವಾನ್ ಭವ ॥೪೩॥
ಗ್ರಹೀತುಂ ಯುಜ್ಯತೇ ವ್ಯೋಮ ನ ಕದಾಚನ ಕೇನಚಿತ್ ।
ಶ್ರುತ್ವೈತದ್ವಿಸ್ಮಿತೋ ಮೃತ್ಯುಃ ಜಗಾಮ ನಿಜಮನ್ದಿರಮ್ ॥೪೪॥

ಕಾರಣ,—ನಾನು ದೇಹವೆಂದು ಸ್ವಲ್ಪ ಸ್ಫುರಿಸುತ್ತದೆ. ಆಗಲೇ ಕಾಕತಾಳೀಯನ್ಯಾಯಯದಿಂದ ಆಕಸ್ಮಿಕವಾಗಿ ಭ್ರಾಂತಿಜನ್ಯವಾದ ಆಕಾರವನ್ನು ಜನರು ನೋಡುವರು ॥೩೬—೩೮॥

ಹಾಗೆಯೇ ಈ ಬ್ರಾಹ್ಮಣನೂ, ಸೃಷ್ಟ್ಯಾದಿಯಲ್ಲಿ ಜ್ಞಾನಾಕಾಶದೊಳಗೆ ನಿರ್ವಿಕಲ್ಪನಾಗಿ ಜ್ಞಾನಾಕಾಶರೂಪವನ್ನಾಶ್ರಯಿಸಿರುವನು. ಹೀಗೆ ಇವನು ಇತರರಿಗೆ ಜನ್ಮಹೊಂದಿದಂತೆ ಕಾಣುವನಲ್ಲದೆ, ಇದು ಪರಮಾರ್ಥವಲ್ಲ ॥೩೯॥

ಇವನಿಗೆ ದೇಹವೂ ಇಲ್ಲ; ಕರ್ಮಗಳೂ ಇಲ್ಲ; ಕರ್ಮಕರ್ತೃತ್ವವೂ ಇಲ್ಲ; ಕರ್ಮವಾಸನೆಯೂ ಇಲ್ಲ; ಇವನು ಶುದ್ಧಜ್ಞಾನಾಕಾಶನಾಗಿ ಜ್ಞಾನಪರಿಪೂರ್ಣನಾಗಿ ಸರ್ವತ್ರ ವ್ಯಾಪಿಸಿಕೊಂಡಿರುವನು ॥ ೪೦॥

ತೇಜಸ್ಸು ಕೇವಲ ಕಾಂತಿರೂಪವಾಗಿರುವಂತೆ ಕೇವಲ ಆಕಾಶರೂಪವಾಗಿರುವ ಇವನಿಗೆ, ಜನ್ಮಾಂತರ ಕರ್ಮವಾಸನಾಬಂಧವು ಸ್ವಲ್ಪವೂ ಇರುವುದಿಲ್ಲ ॥೪೧॥

ಬಹಿರ್ಮುಖವಾದ ಜ್ಞಾನವೃತ್ತಿಯು ಶಾಂತವಾದರೆ, ಈ ವಿಧವಾದ ಪ್ರಾತಿಭಾಸಿಕರೂಪವೂ ಕಾಣಿಸುವುದಿಲ್ಲ. ಆದುದರಿಂದ, ಜ್ಞಾನಾಕಾಶವು ಯಾವವಿಧವಾದ ವೃತ್ತಿಯುಳ್ಳದಾಗುವುದೋ, ಅದರಿಂದುಂಟಾಗುವ ಪದಾರ್ಥಜ್ಞಾನವೂ ಕೂಡ ಆಯಾ ವಿಧವಾಗಿ ಕಾಣಿಸುವುದು ॥೪೨॥

ಹೀಗಿರುವಾಗ, ಈ ಬ್ರಾಹ್ಮಣನಲ್ಲಿ ಪೃಥಿವಿ ಮೊದಲಾದುವುಗಳ ಉತ್ಪತ್ತಿಯೆಲ್ಲಿಯದು? ಅದೆಂತಹುದು ? ಅದು ಹೇಗೆತಾನೆ ಆಗುವುದು?—ಆದುದರಿಂದ, ಎಲೈ ಮೃತ್ಯುವೆ ! ಇವನನ್ನು ಆಕ್ರಮಿಸುವ ವಿಷಯದಲ್ಲಿ ನೀನು ಪ್ರಯತ್ನಪಡಬೇಡ; ಆಕಾಶವನ್ನು ಯಾವನೂ ಎಂದಿಗೂ ಹಿಡಿಯಲಾರನಲ್ಲವೆ ! ಎಂದು ಯಮಧರ್ಮರಾಯನು ಹೇಳಿದ ಮಾತನ್ನು ಕೇಳಿ, ಆ ಮೃತ್ಯುವು ಆಶ್ಚರ್ಯಯುಕ್ತನಾಗಿ ತನ್ನ ಮನೆಗೆ ಹೊರಟುಹೋದನು ॥೪೩—೪೪॥

ಶ್ರೀರಾಮ ಉವಾಚ.

ಬ್ರಹ್ಮೈಷ ಕಥಿತೋ ದೇವಃ ತ್ವಯಾ ಮೇ ಪ್ರಪಿತಾಮಹಃ ।
ಸ್ವಯಮ್ಭೂರಜಪಿಕಾತ್ಮಾ ವಿಜ್ಞಾನಾತ್ಮೇತಿ ಮೇ ಮತಿಃ ॥೪೫॥

ಶ್ರೀ ವಸಿಷ್ಠ ಉವಾಚ.

ಏವಮೇತನ್ಮಯಾ ರಾಮ ಬ್ರಹ್ಮೈಷ ಕಥಿತಸ್ತವ ।
ವಿವಾದಮಕರೋನ್ಮೃತ್ಯುಃ ಯಮೇನೈತತ್ಕೃತೇ ಪುರಾ ॥೪೬॥
ಮನ್ವನ್ತರೇ ಸರ್ವಭಕ್ಷೋ ಯದಾ ಮೃತ್ಯುರ್ಹರನ್ ಪ್ರಜಾಃ ।
ಬಲಮೇತ್ಯಬ್ಜಜಾಕ್ರಾನ್ತೌ ಆರಮ್ಭಮಕರೋತ್ ಸ್ವಯಮ್ ॥೪೭॥
ತದೈವ ಧರ್ಮರಾಜೇನ ಯಮೇನಾಶ್ವನುಶಾಸಿತಃ ।
ಯದೇವ ಕ್ರಿಯತೇ ನಿತ್ಯಂ ರತಿಸ್ತತ್ರೈವ ಜಾಯತೇ ॥೪೮॥
ಬ್ರಹ್ಮಾ ಕಿಲ ಪರಾಕಾಶವಪುರಾಕ್ರಮ್ಯತೇ ಕಥಮ್ ।
ಮನೋಮಾತ್ರಂ ಚ ಸಙ್ಕಲ್ಪಃ ಪೃಥ್ವ್ಯಾದಿರಹಿತಾಕೃತಿಃ ॥೪೯॥
ಯಶ್ಚಿದ್ವ್ಯೋಮಚಮತ್ಕಾರಃ ಕಿಲಾಕಾರಾನುಭೂತಿಮಾನ್ ।
ಸ ಚಿದ್ವ್ಯೋಮೈವ ನೋ ತಸ್ಯ ಕಾರಣತ್ವಂ ನ ಕಾರ್ಯತಾ ॥೫೦॥
ಆಕಾಶಸ್ಫುರದಾಕಾರಃ ಸಙ್ಕಲ್ಪಪುರುಷೋ ಯಥಾ ।

ಹೀಗೆ ಆಕಾಶಜನ ಉಪಾಖ್ಯಾನವನ್ನು ಕೇಳಿದ ಶ್ರೀರಾಮನು ವಸಿಷ್ಠರನ್ನು ಕುರಿತು ಹೇಳಿದನು.

ಸ್ವಾಮಿ ! ತಾವು ಹೇಳಿದ ಈ ಬ್ರಾಹ್ಮಣನು, ನಮ್ಮ ಪೂರ್ವಜನಾದ ಸ್ವಯಂಭುವಾದ ಜನ್ಮರಹಿತನಾದ ವಿಜ್ಞಾನಾತ್ಮನಾದ ಬ್ರಹ್ಮನೆಂದು ನನಗೆ ತೋರುತ್ತದೆ ॥೪೫॥

ವಸಿಷ್ಠರು ಉತ್ತರಹೇಳುವರು.

ಅಯ್ಯಾ ! ರಾಮ ! ಇದು ಹೀಗೆಯೇ ಸರಿ! ನಾನು ನಿನಗೆ ಹೇಳಿದವನು ಬ್ರಹ್ಮನೇ ಅಹುದು! ಇವನಿಗೋಸ್ಕರವೇ ಪೂರ್ವದಲ್ಲಿ ಮೃತ್ಯುವು ಯಮನೊಡನೆ ಚರ್ಚೆಮಾಡಿದನು॥

ಹಿಂದೆ ಸೃಷ್ಟ್ಯಾದಿಯಲ್ಲಿ ಮೃತ್ಯುವು, ಸರ್ವರನ್ನೂ ಭಕ್ಷಿಸುತ ಪ್ರಜೆಗಳನ್ನೆಲ್ಲ ಅಪಹರಿಸುತ ಬಲಿಷ್ಠನಾಗಿದ್ದು, ಬ್ರಹ್ಮನನ್ನು ಆಕ್ರಮಿಸುವುದರಲ್ಲಿ ಯಾವಾಗ ಪ್ರಾರಂಭಮಾಡಿದನೋ, ಆಗಲೇ ಧರ್ಮಕ್ಕೆಲ್ಲ ರಾಜನಾದ ಯಮನು ಅವನನ್ನು ಬೇಗನೆ ಶಿಕ್ಷಿಸಿದನು. ಸಾಮಾನ್ಯವಾಗಿ ಪ್ರಪಂಚದಲ್ಲಿ, ಸರ್ವದಾ ಯಾವ ಕೆಲಸವು ಮಾಡಲ್ಪಡುತ್ತಿರುವುದೋ, ಅದರಲ್ಲಿಯೇ ಆಸಕ್ತಿಹುಟ್ಟುವುದು ಸ್ವಾಭಾವಿಕವು ॥೪೭—೪೮॥

ಕೇವಲ ಪರಾಕಾಶದೇಹನಾಗಿಯೂ ಮನೋಮಾತ್ರನಾಗಿಯೂ ಸಂಕಲ್ಪಸ್ವರೂಪನಾಗಿಯೂ ಪೃಥಿವಿ ಮುಂತಾದುವುಗಳಿಲ್ಲದ ಆಕಾರವುಳ್ಳವನಾಗಿಯೂ ಇರುವ ಬ್ರಹ್ಮನು ಆಕ್ರಮಿಸಲ್ಪಡುವ ಬಗೆ ಹೇಗೆ? ॥೪೯॥

ಜ್ಞಾನಾಕಾಶ ಚಮತ್ಕಾರರೂಪನಾದ ಯಾವನು, ನಮ್ಮ ಜ್ಞಾನದಲ್ಲಿ ಮಾತ್ರ ಆಕಾರಾನುಭವವುಳ್ಳನಾಗಿರುವನೋ, ಅವನು ಎಂದಿಗೂ ಜ್ಞಾನಾಕಾಶಸ್ವರೂಪನೇ ಆಗಿರುವನು; ಅವನು ಯಾವುದಕ್ಕೂ ಕಾರಣನೂ ಅಲ್ಲ; ಕಾರ್ಯವೂ ಅಲ್ಲ ॥೫೦॥

ಪೃಥಿವ್ಯಾದಿಗಳಿಲ್ಲದಮೇಲೆ ಆಕಾರಸಹಿತನಾಗಿ ಕಾಣುವ ಬಗೆ ಹೇಗೆಂದರೆ:—ನಮ್ಮ ಮನಸ್ಸಿನಲ್ಲಿ ಒಬ್ಬ ಪುರುಷನನ್ನು ಸಂಕಲ್ಪಿಸಿಕೊಂಡರೆ, ಅವನು ಆಹೃದಯಾಕಾಶದಲ್ಲಿ ಪೃಥಿ

ಪೃಥ್ವ್ಯಾದಿರಹಿತೋ ಭಾತಿ ಸ್ವಯಮ್ಭೂರ್ಭಾಸತೇ ತಥಾ ॥೫೧॥
ನಿರ್ಮಲೇ ವ್ಯೋಮ್ನಿ ಮುಕ್ತಾಳೀ ಸಙ್ಕಲ್ಪಸ್ವಪ್ನಯೋಃ ಪರಮ್ ।
ಅಪೃಥ್ವ್ಯಾದಿ ಯಥಾ ಭಾತಿ ಸ್ವಯಮ್ಭೂರ್ಭಾಸತೇ ತಥಾ ॥೫೨॥
ನ ದೃಶ್ಯಮಸ್ತಿ ನ ದ್ರಷ್ಟಾ ಪರಮಾತ್ಮನಿ ಕೇವಲೇ ।
ಸ್ವಯಂ ಚಿತ್ತ್ವಾ ತಥಾಪ್ಯೇಷಃ ಸ್ವಯಮ್ಭೂರಿತಿ ಭಾಸತೇ ॥೫೩॥
ಸಙ್ಕಲ್ಪಮಾತ್ರಮೇವೈತತ್ ಮನೋ ಬ್ರಹ್ಮೇತಿ ಕಥ್ಯತೇ ।
ಸಙ್ಕಲ್ಪಾಕಾಶಪುರುಷೋ ನಾಸ್ಯ ಪೃಥ್ವ್ಯಾದಿ ವಿದ್ಯತೇ ॥೫೪॥
ಯಥಾ ಚಿತ್ರಕೃದನ್ತಸ್ಸ್ಥಾ ನಿರ್ದೇಹಾ ಭಾತಿ ಪುತ್ರಿಕಾ ।
ತಥೈವ ಭಾಸತೇ ಬ್ರಹ್ಮಾ ಚಿದಾಕಾಶಾಚ್ಛರಞ್ಜನಮ್ ॥೫೫॥

ಚಿದ್ವ್ಯೋಮ ಕೇವಲಮನನ್ತಮನಾದಿಮಧ್ಯಂ
ಬ್ರಹ್ಮೇತಿ ಭಾತಿ ನಿಜಚಿತ್ತವಶಾತ್ ಸ್ವಯಮ್ಭೂಃ ।
ಆಕಾರವಾನಿವ ಪುಮಾನಿವ ವಸ್ತುತಸ್ತು
ವನ್ಧ್ಯಾತನೂಜಇವ ತಸ್ಯ ತು ನಾಸ್ತಿ ದೇಹಃ ॥೫೬॥

ಇತಿ ಉತ್ಪತ್ತಿಪ್ರಕರಣೇ ಆದ್ಯಸೃಷ್ಟಿಕರ್ತೃವರ್ಣನಂ
ನಾಮ ದ್ವಿತೀಯಃ ಸರ್ಗಃ.

ವ್ಯಾದಿಗಳಲ್ಲದೆಯೇ ಹೇಗೆ ಕಾಣಿಸುವನೋ, ಈ ಸ್ವಯಂಭುವೂ ಹಾಗೆಯೇ ಪೃಥಿವ್ಯಾದಿ ರಹಿತನಾಗಿದ್ದರೂ ಕಾಣಿಸಿಕೊಳ್ಳುವನು ॥೫೧॥

ನಿರ್ಮಲವಾದ ಆಕಾಶದಲ್ಲಿ ಮುಕ್ತಾಸರವೂ—ಸ್ವಪ್ನಸಂಕಲ್ಪಗಳಲ್ಲಿ ಪಟ್ಟಣವೂ- ಹೇಗೆ ಪೃಥಿವಿ ಮುಂತಾದುವಿಲ್ಲದೆಯೇ ಕಾಣುವುವೋ, ಸ್ವಯಂಭುವೂ ಹಾಗೆಯೇ ಕಾಣಿಸುವನು ॥

ಕೇವಲನಾಗಿರುವ ಪರಮಾತ್ಮನಲ್ಲಿ ದೃಶ್ಯವೂ ಇಲ್ಲ; ದ್ರಷ್ಟೃವೂ ಇಲ್ಲ; ಜ್ಞಾನಮಾತ್ರ ಸ್ವಭಾವವೊಂದೇ ಇರುವುದು. ಆದರೂ ಈ ಸ್ವಯಂಭುವು ನಮ್ಮಗಳ ಜ್ಞಾನಾನುಗುಣವಾಗಿ ಹೀಗೆಲ್ಲ ಕಾಣುವನು ॥೫೩॥

ಸಂಕಲ್ಪಮಾತ್ರವಾದ ಈ ಮನಸ್ಸೇ ಬ್ರಹ್ಮನೆಂದು ಹೇಳಲ್ಪಡುವುದು. ಹೀಗೆ ಇವನು ಸಂಕಲ್ಪರೂಪವಾದ ಆಕಾಶದಲ್ಲಿ ತೋರುವ ಪುರುಷನಾದಕಾರಣ, ಇವನಿಗೆ ಪೃಥಿವಿಮೊದಲಾದ ಪಂಚಮಹಾಭೂತಗಳ ಸಂಬಂಧವೇ ಇಲ್ಲ ॥೫೪॥

ಒಬ್ಬ ಚಿತ್ರಗಾರನು ಚಿತ್ರಬರೆಯುವುದಕ್ಕೆ ಮೊದಲು ಆ ಚಿತ್ರವನ್ನೆಲ್ಲ ಮನಸ್ಸಿನಲ್ಲಿ ಯೋಚಿಸಿಕೊಂಡಿರುವಾಗ, ಆ ಚಿತ್ರದ ಬೊಂಬೆಯು ದೇಹವಿಲ್ಲದಿದ್ದರೂ ಹೇಗೆ ಪ್ರಕಾಶ ಹೊಂದುವುದೋ, ಹಾಗೆಯೇ ನಿರ್ಮಲವಾದ ಜ್ಞಾನಾಕಾಶದ ಪ್ರಕಾಶವು ಚತುರ್ಮುಖಬ್ರಹ್ಮ ರೂಪವಾಗಿ ಕಾಣಿಸುವುದು ॥೫೫॥

ಆದಿಮಧ್ಯಾಂತರಹಿತವಾಗಿರುವ ಆ ಕೇವಲಜ್ಞಾನಾಕಾಶವೇ, ನಮ್ಮ ಚಿತ್ತಾನುಗುಣವಾಗಿ ಸ್ವಯಂಭುವಾದ ಬ್ರಹ್ಮನಾಗಿ, ಆಕಾರವುಳ್ಳಂತೆಯೂ ಪುರುಷನಂತೆಯೂ ಕಾಣಿಸಿಕೊಳ್ಳುವುದು; ವಾಸ್ತವ್ಯವಾಗಿಯಾದರೋ,-ಬಂಜೆಗೆ ಮಗನಿಲ್ಲದಂತೆಆವನಿಗೆ ದೇಹವೇಇಲ್ಲ॥

ಇದು ಉತ್ಪತ್ತಿಪ್ರಕರಣದಲ್ಲಿ ಪ್ರಥಮಸೃಷ್ಟಿಕರ್ತೃ ವರ್ಣನೆಯೆಂಬ
ಎರಡನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ತೃತೀಯಃ ಸರ್ಗಃ.

ಶ್ರೀ ರಾಮಉವಾಚ.

ಏವಮೇವ ಮನಃ ಶುದ್ಧಂ ಪೃಥ್ವ್ಯಾದಿರಹಿತಂ ತ್ವಯಾ |
ಮನೋ ಬ್ರಹ್ಮೇತಿ ಕಥಿತಂ ಸತ್ಯಂ ಪೃಥ್ವ್ಯಾದಿವರ್ಜಿತಮ್ ||೧||
ತದತ್ರ ಪ್ರಾಕ್ತನೀ ಬ್ರಹ್ಮ ಸ್ಮೃತಿಃ ಕಸ್ಮಾನ್ನ ಕಾರಣಮ್ |
ಯಥಾ ಮಮ ತವಾನ್ಯಸ್ಯ ಭೂತಾನಾಂ ಚೇತಿ ಮೇ ವದ ||೨||

ಶ್ರೀ ವಸಿಷ್ಠ ಉವಾಚ.

ಪೂರ್ವದೇಹೋಽಸ್ತಿ ಯಸ್ಯಾದ್ಯ ಪೂರ್ವಕರ್ಮಸಮನ್ವಿತಃ |
ತಸ್ಯ ಸ್ಮೃತಿಃ ಸಮ್ಭವತಿ ಕಾರಣಂ ಸಂಸೃತಿಸ್ಥಿತೇಃ ||೩||

ಉತ್ಪತ್ತಿಪ್ರಕರಣದಲ್ಲಿ ಮೂರನೆಯ ಸರ್ಗವು.

ಮನೋರೂಪೋ ಯತೋ ಬ್ರಹ್ಮಾ ತತ್ಸಙ್ಕಲ್ಪಮಯಂ ಜಗತ್ |
ಮನೋರಾಜ್ಯವದೇವೇದಂ ಅಸದಿತ್ಯತ್ರ ಕೀರ್ತ್ಯತೇ ||

ಬ್ರಹ್ಮನು ಮನೋರೂಪನಾಗಿರುವುದರಿಂದ, ಅವನ ಸಂಕಲ್ಪರೂಪವಾದ ಈ ಜಗತ್ತೂ ಮನೋರಾಜ್ಯದಂತೆ ಅಸತ್ಯವೇ ಆದುದೆಂಬ ವಿಷಯವು, ಈ ಸರ್ಗದಲ್ಲಿ ಹೇಳಲ್ಪಡುತ್ತದೆ.

ಪೂರ್ವೋಕ್ತರೀತಿಯಾಗಿ ಬ್ರಹ್ಮನು ಮನೋರೂಪನೆಂದೊಪ್ಪಿಕೊಂಡರೆ, ಮನಸ್ಸು ವಾಸನಾರೂಪವಾಗಿರುವುದರಿಂದ—ಇವನಿಗೆ ಪ್ರಾಕ್ತನ ವಾಸನಾಸಂಬಂಧವು ಸ್ವಲ್ಪವೂ ಇರುವುದಿಲ್ಲವೆಂದು ಹೇಳಿದ ಮಾತು ಅಸಂಗತವಾಗಬಹುದು. ಇದನ್ನೆಲ್ಲ ಶ್ರೀ ರಾಮಚಂದ್ರನು ಚೆನ್ನಾಗಿ ಯೋಚಿಸಿ, ವಸಿಷ್ಠಮುನಿಯನ್ನು ಕುರಿತು ಪ್ರಶ್ನೆಮಾಡಿದನು.

ಪೂಜ್ಯರೆ! ಮನಸ್ಸು ಶುದ್ಧವೆಂದೂ ಪೃಥಿವ್ಯಾದಿ ಸಂಪರ್ಕರಹಿತವೆಂದೂ, ಹೀಗೆ ಪೃಥಿವ್ಯಾದಿ ರಹಿತವಾದ ಮನಸ್ಸೇ ಚತುರ್ಮುಖಬ್ರಹ್ಮನೆಂದೂ, ತಾವು ಅಪ್ಪಣೆಕೊಟ್ಟಿರಿ. ಇದು ಹೀಗೆಯೇಸರಿ. ಆದರೆ, ಇದು ನಿಜವಾಗಿದ್ದಪಕ್ಷದಲ್ಲಿ, ಬ್ರಹ್ಮನು ಮನೋಮಯನಾಗಿರುವುದರಿಂದಲೂ ಮನಸ್ಸು ವಾಸನಾಮಯವಾಗಿರುವುದರಿಂದಲೂ, ನನಗೂ ತಮಗೂ ಮತ್ತೊಬ್ಬನಿಗೂ ಇತರ ಪ್ರಾಣಿಗಳಿಗೂ ಆಗುವಂತೆಯೇ— ಅವನಿಗೂ ಪ್ರಾಕ್ತನ ವಾಸನೆಯೇ ಏತಕ್ಕೆ ಉತ್ಪತ್ತಿಹೇತುವಾಗಕೂಡದು? ಈ ವಿಷಯವನ್ನು ನನಗೆ ಅಪ್ಪಣೆಯಾಗಬೇಕು ||೧—೨||

ಇದಕ್ಕೆ ಶ್ರೀ ವಸಿಷ್ಠರು ಉತ್ತರ ಹೇಳಿದರು.

ಅಯ್ಯಾ! ರಾಮ! ಯಾವನಿಗೆ ಪೂರ್ವಜನ್ಮದಲ್ಲಿ ಕರ್ಮಯುಕ್ತವಾದ ದೇಹವಿರುವುದೋ, ಅವನಿಗೆ ಸಂಸಾರಸ್ಥಿತಿಹೇತುವಾದ ವಾಸನೆಯು ಸಂಭವಿಸುವುದು ||೩||

ಬ್ರಹ್ಮಣಃ ಪ್ರಾಕ್ತನಂ ಕರ್ಮ ಯದಾ ಕಿಂಚಿನ್ನ ವಿದ್ಯತೇ ।
ಪ್ರಾಕ್ತನೀ ಸಂಸ್ಮೃತಿಸ್ತಸ್ಯ ತದೋದೇತಿ ಕುತಃ ಕಥಮ್ ॥೪॥
ತಸ್ಮಾದಕಾರಣಂ ಭಾತಿ ವಾ ಸ್ವಚಿತ್ತೈಕಕಾರಣಮ್ ।
ಸ್ವಕಾರಣಾದನನ್ಯಾತ್ಮಾ ಸ್ವಯಂಭೂಃ ಸ್ವಯಮಾತ್ಮವಾನ್ ॥೫॥
ಆತಿವಾಹಿಕಏವಾಸೌ ದೇಹೋಽಸ್ತ್ಯಸ್ಯ ಸ್ವಯಂಭುವಃ ।
ನ ತ್ವಾಧಿಭೌತಿಕೋ ರಾಮ ದೇಹೋಽಜಸ್ಯೋಪಪದ್ಯತೇ ॥೬॥

ಶ್ರೀರಾಮಉವಾಚ.—

ಆತಿವಾಹಿಕಏಕೋಽಸ್ತಿ ದೇಹೋಽನ್ಯಸ್ತ್ವಾಧಿಭೌತಿಕಃ ।
ಸರ್ವಾಸಾಂ ಭೂತಜಾತೀನಾಂ ಬ್ರಹ್ಮಣೋಸ್ತ್ಯೇಕಏವ ಕಿಮ್ ॥೭॥

ಶ್ರೀ ವಸಿಷ್ಠಉವಾಚ.—

ಸರ್ವೇಷಾಮೇವ ದೇಹೌ ದ್ವೌ ಭೂತಾನಾಂ ಕಾರಣಾತ್ಮನಾಮ್ ।
ಅಜಸ್ಯ ಕಾರಣಾಭಾವಾತ್ ಏಕಏವಾತಿವಾಹಿಕಃ ॥೮॥

ಈ ಬ್ರಹ್ಮನಿಗಾದರೆ, ಪೂರ್ವಜನ್ಮವೇ ಇಲ್ಲದಕಾರಣ ಜನ್ಮಾಂತರಕರ್ಮವು ಸ್ವಲ್ಪವೂ ಯಾವಾಗ ಇಲ್ಲವಾಯ್ತೋ, ಆಗ ಅವನಿಗೆ ಪ್ರಾಕ್ತನವಾಸನೆಯು ಎಲ್ಲಿಂದ ಹೇಗೆ ಹುಟ್ಟುವುದು? ॥೪॥

ಅದುಕಾರಣ, ಈ ಬ್ರಹ್ಮನು ಕಾರಣವಿಲ್ಲದೆಯೇ ಪ್ರಕಾಶಹೊಂದುವನು; ಅಥವಾ ತಿಳಿಯತಕ್ಕವನು ತನ್ನ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳುವುದರಿಂದ ಅವನ ಮನಸ್ಸೇ ಮುಖ್ಯಕಾರಣವಾಗಿಯಾದರೂ ಪ್ರಕಾಶಹೊಂದುವನು. ಹೀಗೆ ಇವನು ತನಗೆ ಕಾರಣಭೂತವಾದ ಪರಬ್ರಹ್ಮಕ್ಕಿಂತ ಬೇರೆಯಲ್ಲದ ಸ್ವರೂಪವುಳ್ಳವನಾಗಿಯೂ, ಸ್ವಯಂ ಹುಟ್ಟಿದವನಾಗಿಯೂ, ಸ್ವಯಂ ಆತ್ಮವುಳ್ಳವನಾಗಿಯೂ ಇರುವನು ॥೫॥

ಅಯ್ಯಾ! ರಾಮ! ಸ್ವಯಂಭುವಾಗಿಯೂ ಅಜ (ಹುಟ್ಟದಿರುವನು) ನಾಗಿಯೂ ಇರುವ ಇವನಿಗೆ, ಆತಿವಾಹಿಕ (ಸೂಕ್ಷ್ಮ) ದೇಹವೊಂದೇ ಇರುವುದು. ಆಧಿಭೌತಿಕ (ಸ್ಥೂಲಶರೀರ) ವಾದರೋ-ಇವನಿಗೆಂದೂ ಸಂಭವಿಸುವುದಿಲ್ಲ ॥೬॥

ಶ್ರೀರಾಮನು ಹೇಳುವನು.

ಸ್ವಾಮಿ! ಸಮಸ್ತಭೂತಸಮುದಾಯಗಳಿಗೂ—ಆತಿವಾಹಿಕವೊಂದು ಆಧಿಭೌತಿಕವೊಂದು—ಹೀಗೆ ಎರಡುದೇಹಗಳುಂಟಾಗಿರುವಾಗ, ಬ್ರಹ್ಮನಿಗೆಮಾತ್ರ ಒಂದೇದೇಹವಿರುವುದಕ್ಕೆ ಕಾರಣವೇನು? ॥೭॥

ವಸಿಷ್ಠರು ಉತ್ತರಹೇಳುವರು.

ಅಯ್ಯಾ! ರಾಮ! ನೀನು ಮಾಡಿದ ಪ್ರಶ್ನೆಯು ನ್ಯಾಯ್ಯವೇ ಸರಿ! ಆದರೆ, ಕಾರಣವಿದ್ದು ಹುಟ್ಟುವ ಇತರ ಸಮಸ್ತ ಭೂತಗಳಿಗೂ ಆಯೆರಡುದೇಹಗಳೂ ಉಂಟು; ಅಜನಾದ ಬ್ರಹ್ಮನಿಗಾದರೋ, ಕಾರಣವೇ ಇಲ್ಲದುದರಿಂದ—ಆತಿವಾಹಿಕವೆಂಬ ದೇಹವೊಂದೇ ಇರುವುದು ॥೮॥

ಸರ್ವಾಸಾಂ ಭೂತಜಾತೀನಾಂ ಏಕೋಽಜಃ ಕಾರಣಂ ಪರಮ್ ।
ಅಜಸ್ಯ ಕಾರಣಂ ನಾಸ್ತಿ ತೇನಾಸಾವೇಕದೇಹವಾನ್ ॥೯॥
ನಾಸ್ತ್ಯೇವ ಭೌತಿಕೋ ದೇಹಃ ಪ್ರಥಮಸ್ಯ ಪ್ರಜಾಪತೇಃ ।
ಆಕಾಶಾತ್ಮಾ ಚ ಭಾತ್ಯೇಷಃ ಆತಿವಾಹಿಕದೇಹವಾನ್ ॥೧೦॥
ಚಿತ್ತಮಾತ್ರಶರೀರೋಽಸೌ ನ ಪೃಥ್ವ್ಯಾದಿಕಮಾತ್ಮಕಃ ।
ಆದ್ಯಃ ಪ್ರಜಾಪತಿರ್ವ್ಯೋಮತನುಃ ಪ್ರತನುತೇ ಪ್ರಜಾಃ ॥೧೧॥
ತಾಶ್ಚ ಚಿದ್ವ್ಯೋಮರೂಪಿಣ್ಯೋ ವಿನಾನ್ಯೈಃ ಕಾರಣಾನ್ತರೈಃ ।
ಯದ್ಯತಸ್ತತ್ ತದೇವೇತಿ ಸರ್ವೈರೇವಾನುಭೂಯತೇ ॥೧೨॥
ನಿರ್ವಾಣಮಾತ್ರಂ ಪುರುಷಃ ಪರೋ ಬೋಧಃ ಸಏವ ಚ ।
ಚಿತ್ತಮಾತ್ರಂ ತದೇವಾಸ್ತೇ ನಾಯಾತಿ ವಸುಧಾದಿತಾಮ್ ॥೧೩॥
ಸರ್ವೇಷಾಂ ಭೂತಜಾತಾನಾಂ ಸಂಸಾರವ್ಯವಹಾರಿಣಾಮ್ ।
ಪ್ರಥಮೋಽಸೌ ಪ್ರತಿಸ್ಪನ್ದಃ ಚಿತ್ತದೇಹಃ ಸ್ವತೋದಯಃ ॥೧೪॥

ಸಕಲವಿಧಪ್ರಾಣಿಸಮುದಾಯಗಳಿಗೂ ಆ ಅಜನೊಬ್ಬನೇ ಮುಖ್ಯಕಾರಣವಾಗಿರುವನು; ಅಜನಿಗೆ ಮಾತ್ರ ಯಾವ ಕಾರಣವೂ ಇಲ್ಲ; ಆದುದರಿಂದ ಇವನಿಗೆ ಒಂದೇ ದೇಹವಿರುವುದು ॥೯॥

ಆದ್ಯಸೃಷ್ಟಿಕರ್ತನಾದ ಈ ಬ್ರಹ್ಮನಿಗೆ ಪಂಚಭೂತವಿಕಾರವಾದ ದೇಹವಿಲ್ಲವೇಇಲ್ಲ. ಕೇವಲ ಜ್ಞಾನಾಕಾಶರೂಪನಾಗಿರುವ ಇವನು, ಆತಿವಾಹಿಕದೇಹವೊಂದುಮಾತ್ರವುಳ್ಳವನಾಗಿ ಪ್ರಕಾಶಹೊಂದುವನು ॥೧೦॥

ಹೀಗೆ ಈ ಆದ್ಯಬ್ರಹ್ಮನು, ಕೇವಲ ಮನೋಮಯಶರೀರಮಾತ್ರವೇ ಉಳ್ಳವನಲ್ಲದೆ, ಪೃಥಿವಿ ಮುಂತಾದ ಪಂಚಭೂತಾತ್ಮಕನಾಗಿಲ್ಲ. ಹೀಗೆ ಚಿದಾಕಾಶದೇಹನಾಗಿರುವ ಇವನು, ಪ್ರಜಾಸೃಷ್ಟಿಮಾಡುವನು ॥೧೧॥

ಇವನಿಂದ ಉತ್ಪನ್ನವಾಗುವ ಆ ಪ್ರಜೆಗಳೂ ಕೂಡ, ಆ ಬ್ರಹ್ಮನ ಸಂಕಲ್ಪ ಹೊರತು ಇತರವಾದ ಕಾರಣಭೇದಗಳಿಲ್ಲದಿರುವುದರಿಂದ, ಜ್ಞಾನಾಕಾಶರೂಪಗಳೇ ಆಗಿರುವುವು. ಪ್ರಪಂಚದಲ್ಲಿಯೂ ಯಾವ ಪದಾರ್ಥವು ಯಾವುದರಿಂದ ಹುಟ್ಟುವುದೋ, ಅದು ಆ ಪದಾರ್ಥವಾಗಿಯೇ ಇರುವುದೆಂಬ ವಿಷಯವು, ಸರ್ವರಿಗೂ ಅನುಭವಗೋಚರವಾಗಿದೆಯಲ್ಲವೆ! ಸುವರ್ಣದಿಂದ ಹುಟ್ಟಿದ ಕಟಕವು ಸುವರ್ಣವೇ ಆಗಿರುವಂತೆ, ಜ್ಞಾನಾಕಾಶದಿಂದ ಹುಟ್ಟಿದ ಪ್ರಜೆಗಳು ಜ್ಞಾನಾಕಾಶಗಳೇ ಆಗಿರುವುವು. ಹೀಗೆ ಈ ಜಗತ್ತು ಕೇವಲ ಬ್ರಹ್ಮಮಾತ್ರವೆಂದು ತಿಳಿಯಬೇಕು ॥೧೨॥

ಹೀಗೆ ಪುರುಷನೂ (ಜೀವ) ಕೇವಲವಾಗಿ ಆನಂದಮಾತ್ರನಾಗಿರುವನು; ಅವನು ಜ್ಞಾನರೂಪನಾಗಿಯೂ ಇರುವನು. ಅದುಕಾರಣ, ಚಿತ್ತಭ್ರಾಂತಿಯಿಂದ ಇವನು ಚಿತ್ತಮಾತ್ರನಾಗಿರುವನು. ಪೃಥಿವಿ ಮುಂತಾದ ಅವಸ್ಥೆಯನ್ನು ಇವನು ಹೊಂದುವುದೇ ಇಲ್ಲ ॥೧೩॥

ಈ ಸಂಸಾರಮಾರ್ಗದಲ್ಲಿ ವ್ಯವಹಾರವುಳ್ಳ ಸಮಸ್ತಪ್ರಾಣಿಸಮುದಾಯಗಳಿಗೂ, ಈ ಅಹಂಕಾರಪ್ರಾದುರ್ಭಾವರೂಪವಾದ ಚಿತ್ತದೇಹವೇ ಪ್ರಥಮಚಲನೆಯಾಗಿರುವುದು ॥೧೪॥

ಅಸ್ಮಾತ್ ಪೂರ್ವಾತ್ ಪ್ರತಿಸ್ಪನ್ದಾತ್ ಅನನ್ಯೈತತ್ಸ್ವರೂಪಿಣೀ ।
ಇಯಂ ಪ್ರವಿಸೃತಾ ಸೃಷ್ಟಿಃ ಸ್ಪನ್ದಸೃಷ್ಟಿರಿವಾನಿಲಾತ್ ॥೧೫॥
ಪ್ರತಿಭಾನಾಕೃತೇರಸ್ಮಾತ್ ಪ್ರತಿಭಾಮಾತ್ರರೂಪಧೃಕ್ ।
ವಿಭಾತ್ಯೇವಮಯಂ ಸರ್ಗಃ ಸತ್ಯಾನುಭವವರ್ತ್ಮಸ್ಥಿತಃ ॥೧೬॥
ದೃಷ್ಟಾನ್ತೋಽತ್ರ ಭವತ್ಸ್ವಪ್ನಃ ಸ್ವಪ್ನಸ್ತ್ರೀಸುರತಂ ಯಥಾ ।
ಅಸದಪ್ಯರ್ಥಸಮ್ಪತ್ತ್ಯಾ ಸತ್ಯಾನುಭವಭಾಸುರಮ್ ॥೧೭॥
ಅಪೃಥ್ವ್ಯಾದಿಮಯೋ ಭಾತಿ ವ್ಯೋಮಾಕೃತಿರದೇಹಕಃ ।
ಸದೇಹಇವ ಭೂತೇಶಃ ಸ್ವಾತ್ಮಭೂಃ ಪುರುಷಾಕೃತಿಃ ॥೧೮॥
ಸಂವಿತ್ಸಙ್ಕಲ್ಪರೂಪತ್ವಾತ್ ನೋದೇತಿ ಸಮುದೇತಿ ಚ ।
ಸ್ವಾಯತ್ತತ್ವಾತ್ ಸ್ವಭಾವಸ್ಯ ನೋದೇತಿ ನ ಚ ಶಾಮ್ಯತಿ ॥೧೯॥

ಈ ಪ್ರಥಮಚಲನೆಯಿಂದಲೇ ಈ ಸಮಸ್ತ ಪ್ರಪಂಚಸೃಷ್ಟಿಯೂ ಆಗಿರುವುದು. ವಾಯುವು ಚಲನರೂಪನಾಗಿಯೇ ಇದ್ದರೂ-ಅದು ನಮಗೆ ಗೊತ್ತಾಗದಿದ್ದು—ಕಾರಣವಶಾತ್ ಆದರಿಂದ ಸ್ಪಂದವು ಹುಟ್ಟಿದಂತೆ ಕಾಣುವಹಾಗೆ, ಈ ಚಿತ್ತದೇಹದಿಂದಲೇ ಸಮಸ್ತ ಸೃಷ್ಟಿಯೂ ಹುಟ್ಟಿದಂತೆ ಕಾಣುವುದು. ಇದು ಆದಕ್ಕಿಂತ ಬೇರೆಯಾದುದಲ್ಲ; ಆ ಚಿತ್ತದೇಹಸ್ವರೂಪವಾಗಿಯೇ ಇರುವುದು ॥೧೫॥

ಹೀಗೆ ಚಿತ್ತದಿಂದ ಉಂಟಾಗಿರುವ ಈ ಸೃಷ್ಟಿಯು, ಕೇವಲಪ್ರಾತಿಭಾಸಿಕವಾದ ಚಿತ್ತದಿಂದ ಕಲ್ಪಿತವಾಗಿರುವಕಾರಣ, ತಾನೂ ಪ್ರಾತಿಭಾಸಿಕಮಾತ್ರವಾದ ರೂಪವನ್ನು ಧರಿಸಿಕೊಂಡು, ಪ್ರಕಾಶಹೊಂದುವುದು. ಇದು ಸತ್ಯವೆಂಬ ಅನುಭವಕ್ಕೆ ಗೋಚರವಾಗಿರುವ ಬಗೆಯಿದು ॥೧೬॥

ಅಸತ್ಯವಾಗಿದ್ದರೂ ಸತ್ಯವೆಂಬ ಅನುಭವವುಂಟಾಗುವುದು ಹೇಗೆಂದರೆ:—ಈ ವಿಷಯದಲ್ಲಿ ನಿನ್ನ ಸ್ವಪ್ನವೇ ದೃಷ್ಟಾಂತವು. ಸಾಮಾನ್ಯವಾಗಿ ಮನುಷ್ಯರಿಗೆ ದೇಹಜನ್ಯವಿಕಾರದಿಂದ ಸ್ವಪ್ನದಲ್ಲಿ ಸ್ತ್ರೀಸಮಾಗಮವಾಗುವುದಲ್ಲವೆ! ಅದು ಅಸತ್ಯವಾಗಿದ್ದರೂ, ಆದರಿಂದ ಉಂಟಾಗಬೇಕಾದ ಕಾರ್ಯವು ನೆರವೇರಿಯೇ ಬಿಡುವುದಲ್ಲವೆ! ಹೀಗೆ ಇದು ಅಸತ್ಯವಾಗಿದ್ದರೂ ಸತ್ಯವೆಂದು ಅನುಭವಕ್ಕೆ ಬರುವಂತೆಯೇ, ಈಪ್ರಪಂಚವೂಕೂಡ ಅಸತ್ಯವಾಗಿದ್ದರೂ ಸತ್ಯದಂತೆ ಅನುಭವವುಂಟುಮಾಡಿ ಅರೀತಿಯಾಗಿಯೇ ಪ್ರಕಾಶಹೊಂದುವುದು ॥

ಹೀಗೆ ಸಮಸ್ತಭೂತಗಳಿಗೂ ಅಧಿಪತಿಯಾದ ಆ ಬ್ರಹ್ಮನು, ಪಂಚಭೂತಾತ್ಮಕನಲ್ಲದಿದ್ದರೂ ಆಕಾಶರೂಪನಾಗಿದ್ದರೂ ದೇಹರಹಿತನಾಗಿದ್ದರೂ—ದೇಹಯುಕ್ತನಂತೆ ಪುರುಷಾಕಾರವುಳ್ಳವನಾಗಿ ಕಾಣುವನು ॥೧೮॥

ಇವನು ಕೇವಲ ಜ್ಞಾನಸಂಕಲ್ಪರೂಪನಾಗಿರುವಕಾರಣ, ಪರಮಾರ್ಥವಾಗಿ ಹುಟ್ಟುವುದಿಲ್ಲ; ಆದರೆ ಭ್ರಾಂತಿಯಿಂದ ಉತ್ಪತ್ತಿಹೊಂದುವಂತೆ ಕಾಣುವನು. ಪ್ರಪಂಚಸ್ಥಿತಿಯು ಅವಿದ್ಯಾಧೀನವಾಗಿರುವುದರಿಂದ—ಅದಕ್ಕೆ ಉತ್ಪತ್ತಿಲಯಗಳು ಉಂಟಾಗುವಂತೆ ಇವನಿಗೆ ಆಗುವುದಿಲ್ಲ; ಇವನ ಸ್ವರೂಪಸ್ಥಿತಿಯು ಅವಿದ್ಯಾಧೀನವಲ್ಲದೆ ಸ್ವಾಧೀನವಾಗಿರುವುದರಿಂದ, ಇವನು ಉದಯಹೊಂದುವುದೂ ಇಲ್ಲ; ನಾಶಹೊಂದುವುದೂ ಇಲ್ಲ ॥೧೯॥

ಬ್ರಹ್ಮಾ ಸಙ್ಕಲ್ಪಪುರುಷಃ ಪೃಥ್ವ್ಯಾದಿರಹಿತಾಕೃತಿಃ ।
ಕೇವಲಂ ಚಿತ್ತಮಾತ್ರಾತ್ಮಾ ಕಾರಣಂ ತ್ರಿಜಗತ್ಸ್ಥಿತೇಃ ॥೨೦॥
ಸಙ್ಕಲ್ಪಏಷ ಕಚತಿ ಯಥಾ ನಾಮ ಸ್ವಯಮ್ಭುವಃ ।
ವ್ಯೋಮಾತ್ಮೈಷ ತಥಾ ಭಾತಿ ಭವತ್ಸಙ್ಕಲ್ಪಶೈಲವತ್ ॥೨೧॥
ಆತಿವಾಹಿಕಮೇವಾನ್ತಃ ವಿಸ್ಮೃತ್ಯಾ ದೃಢರೂಪಯಾ ।
ಆಧಿಭೌತಿಕಬೋಧೇನ ಮುಧಾ ಭಾತಿ ಪಿಶಾಚವತ್ ॥೨೨॥
ಇದಮ್ಪ್ರಥಮತೋದ್ಯೋಗಸಮ್ಪ್ರಬುದ್ಧಂ ಮಹಾಚಿತೇಃ ।
ನೋದೇತಿ ಶುದ್ಧಸಂವಿತ್ತ್ವಾತ್ ಆತಿವಾಹಿಕವಿಸ್ಮೃತಿಃ ॥೨೩॥
ಆಧಿಭೌತಿಕಜಾತೇನ ನಾಸ್ಯೋದೇತಿ ಪಿಶಾಚಿಕಾ ।
ಅಸತ್ಯಾ ಮೃಗತೃಷ್ಣೇವ ಮಿಥ್ಯಾಜಾಡ್ಯಭ್ರಮಪ್ರದಾ ॥೨೪॥

ಹೀಗೆ ಈ ಬ್ರಹ್ಮನು ಸಂಕಲ್ಪಮಾತ್ರರೂಪನಾದ ಪುರುಷನಾಗಿರುವನು; ಇವನು ಪೃಥಿವಿ ಮೊದಲಾದುವುಗಳಿಲ್ಲದ ಆಕಾರವುಳ್ಳವನು; ಕೇವಲ ಚಿತ್ತಮಾತ್ರಾತ್ಮಕನಾಗಿರುವ ಇವನು, ಈ ಮೂರು ಲೋಕಗಳ ಸ್ಥಿತಿಗೂ ಕಾರಣಭೂತನಾಗಿರುವನು ॥೨೦॥

ಈ ಬ್ರಹ್ಮಸಂಕಲ್ಪವು ಹೇಗೆಹೇಗೆ ವಿಕಾಸಹೊಂದುವುದೋ, ಆಯಾ ವಿಧವಾಗಿ ಆಕಾಶರೂಪವಾದ ಇದು ಕಾಣುವುದು; ಈಗ ನಿನ್ನ ಮನಸ್ಸಿನಲ್ಲಿ ಒಂದು ಪರ್ವತವನ್ನು ಕಲ್ಪಿಸಿಕೊಂಡರೆ, ಅದು ವಾಸ್ತವ್ಯವಾಗಿಲ್ಲದಿದ್ದರೂ ನೀನು ಹೇಗೆಹೇಗೆ ಕಲ್ಪಿಸಿಕೊಳ್ಳುವೆಯೋ ಹಾಗೆಹಾಗೆಲ್ಲ ಅದು ಕಾಣಬಹುದಲ್ಲವೆ! ಹೀಗೆಯೇ ಬ್ರಹ್ಮನ ಸಂಕಲ್ಪವೂ ಹೇಗೆ ಹೇಗೆ ಉಂಟಾಗುವುದೋ, ಈ ಪ್ರಪಂಚವೂ ಹಾಗೆಹಾಗೆ ಕಾಣಬರುವುದೆಂದು ತಿಳಿಯಬೇಕು ॥೨೧॥

ಆದರೆ ಈ ಪ್ರಪಂಚವು ಸರ್ವರಿಗೂ ಸತ್ಯವೆಂದು ತೋರುವ ಬಗೆಯಾವುದೆಂದರೆ:—ಲೋಕದಲ್ಲಿ ಪಿಶಾಚವೆಂಬುದು ಸುಳ್ಳಾಗಿದ್ದರೂ ನಮ್ಮ ಮನೋಭೀತಿಯೇ ಪಿಶಾಚವಾಗಿ ಕಾಣುವುದಿಲ್ಲವೆ! ಹೀಗೆ ಸ್ವರೂಪವನ್ನೂ ಆತಿವಾಹಿಕಭಾವವನ್ನೂ ಮರೆತು ಅದು (ವಿಸ್ಮೃತಿಯು) ದೃಢವಾಗಿ ಬಿಡುವುದರಿಂದ, ಆತಿವಾಹಿಕದೇಹವೇ ಆಧಿಭೌತಿಕವೆಂಬ ಜ್ಞಾನದಿಂದ ಸುಳ್ಳುಸುಳ್ಳಾಗಿಯೇ ಕಾಣಿಸಿಕೊಳ್ಳುವುದು ॥೨೨॥

ಹಾಗಾದರೆ ಆ ಚತುರ್ಮುಖನಿಗೂ ನಮ್ಮಗಳಂತೆ ಆತಿವಾಹಿಕದೇಹವಿಸ್ಮೃತಿಯುಂಟಾಗಬೇಡವೆ?—ಎಂದರೆ:—ಮಾಯಾಶಬಳನಾದ ಆ ಪರಬ್ರಹ್ಮನು ಸಮಸ್ತ ಸ್ಥೂಲಪ್ರಪಂಚಕ್ಕೂ ಕಾರಣಭೂತವಾದ ಸೂಕ್ಷ್ಮಭೂತಾವಸ್ಥೆಯಲ್ಲಿ ಸಂಕಲ್ಪವಿಶಿಷ್ಟನಾಗಿರುವುದರಿಂದ, ಈ ಚತುರ್ಮುಖನ ಶರೀರವು ಆವಿರ್ಭವಿಸುವುದು. ಹೀಗೆ ಇವನು ಶುದ್ಧಜ್ಞಾನರೂಪನಾಗಿರುವಕಾರಣ, ಇವನಿಗೆ ಆತಿವಾಹಿಕ ವಿಸ್ಮೃತಿಯುದಯಿಸುವುದಿಲ್ಲ ॥೨೩॥

ಇದರಿಂದಲೇ ಇವನಿಗೆ ಮೃಗತೃಷ್ಣಿಕೆಯಂತೆ ಅಸತ್ಯವಾಗಿ ಜಾಡ್ಯಭ್ರಮೆಯನ್ನುಂಟುಮಾಡುವ ಆಧಿಭೌತಿಕಜನ್ಯವಾದ ವಾಸನಾಪಿಶಾಚಿಯೂ ಉತ್ಪನ್ನವಾಗುವುದಿಲ್ಲ ॥೨೪॥

ಮನೋಮಾತ್ರಂ ಯದಾ ಬ್ರಹ್ಮಾ ನ ಪೃಥ್ವ್ಯಾದಿಮಯಾತ್ಮಕಃ ।
ಮನೋಮಾತ್ರಮತೋವಿಶ್ವಂ ಯದ್ಯಜ್ಜಾತಂ ತದೇವ ತತ್ ॥೧೫॥
ಅಜಸ್ಯ ಸಹಕಾರೀಣಿ ಕಾರಣಾನಿ ನ ಸನ್ತಿ ಯತ್ ।
ತಜ್ಜನ್ಯಾನಿ ನ ಸನ್ತ್ಯೇವ ತಾನಿ ತಸ್ಮಾತ್ ತು ಕಾನಿಚಿತ್ ॥೧೬॥
ಕಾರಣಾತ್ ಕಾರ್ಯವೈಚಿತ್ರ್ಯಂ ತೇನ ನಾತ್ರಾಸ್ತಿ ಕಿಂಚನ ।
ಯಾದೃಶಂ ಕಾರಣಂ ಶುದ್ಧಂ ಕಾರ್ಯಂ ತಾದೃಗಿತಿ ಸ್ಥಿತಮ್ ॥೧೭॥
ಕಾರ್ಯಕಾರಣತಾ ಹ್ಯತ್ರ ನ ಕಿಂಚಿದುಪಪದ್ಯತೇ ।
ಯಾದೃಗೇವ ಪರಂ ಬ್ರಹ್ಮ ತಾದೃಗೇವ ಜಗತ್ತ್ರಯಮ್ ॥೧೮॥
ಮನಸ್ತ್ವಮಿವ ಯಾತೇನ ಬ್ರಹ್ಮಣಾ ತನ್ಯತೇ ಜಗತ್ ।
ಅನನ್ಯದಾತ್ಮನಃ ಶುದ್ಧಾತ್ ದ್ರವತ್ವಮಿವ ವಾರಿಣಃ ॥೧೯॥
ಮನಸಾ ತನ್ಯತೇ ಸರ್ವಂ ಅಸದೇವೇದಮಾತತಮ್ ।
ಯಥಾ ಸಙ್ಕಲ್ಪನಗರಂ ಯಥಾ ಗನ್ಧರ್ವಪತ್ತನಮ್ ॥೨೦॥
ಆಧಿಭೌತಿಕತಾ ನಾಸ್ತಿ ರಜ್ಜ್ವಾಮಿವ ಭುಜಙ್ಗತಾ ।
ಬ್ರಹ್ಮಾದಯಃ ಪ್ರಬುದ್ಧಾಸ್ತು ಕಥಂ ತಿಷ್ಠನ್ತಿ ತತ್ರ ತೇ ॥೨೧॥
ಆತಿವಾಹಿಕಮೇವಾಸ್ತಿ ನ ಪ್ರಬುದ್ಧಮತೇಃ ಕಿಲ ।
ಆಧಿಭೌತಿಕದೇಹಸ್ಯ ವಾಚೋ ವಾತ್ರ ಕುತಃ ಕಥಮ್ ॥೨೨॥

ಹೀಗೆ ಈ ಬ್ರಹ್ಮನು ಯಾವಾಗ ಕೇವಲ ಮನೋರೂಪನಾದನೋ, ಆಮೇಲೆ (ಆಕಾರಣದಿಂದ) ಈ ವಿಶ್ವವೂ ಮನೋಮಾತ್ರವೇ ಆಯ್ತು. ಯಾವುದು ಯಾವುದರಿಂದ ಹುಟ್ಟುವುದೋ, ಅದು ಅದೇಅಲ್ಲವೆ! ॥೧೫॥

ಈ ಅಜನಿಗೆ (ಚತುರ್ಮುಖನಿಗೆ) ಸಹಕಾರಿಗಳಾದ ಕಾರಣಗಳು ಇಲ್ಲವೇಇಲ್ಲ. ಆದುದರಿಂದ, ಇವನಿಂದ ಹುಟ್ಟಿದ ಈ ಪ್ರಪಂಚಕ್ಕೂ ಯಾವ ಕಾರಣಗಳೂ ಇಲ್ಲ ॥೧೬॥

ಆದಕಾರಣ, ಈ ಸಂದರ್ಭದಲ್ಲಿ ಕಾರಣಕ್ಕಿಂತ ಕಾರ್ಯದಲ್ಲಿ ವ್ಯತ್ಯಾಸವೂ ಸ್ವಲ್ಪವೂ ಇಲ್ಲ. ಕಾರಣವು ಹೇಗೆ ಶುದ್ಧವಾಗಿರುವುದೋ, ಕಾರ್ಯವೂ ಅಂತಹುದೇ ॥೨೭॥

ಹೀಗೆ ಈ ವಿಷಯದಲ್ಲಿ ಕಾರ್ಯಕಾರಣಭಾವವು ಸ್ವಲ್ಪವೂ ಉಪಪನ್ನವಾಗಿಲ್ಲ. ಪರಬ್ರಹ್ಮವು ಎಂತಹುದೋ ಈ ಜಗತ್ತ್ರಯವೂ ಅಂತಹುದೇ ಆಗಿರುವುದು ॥೨೮॥

ಈ ಬ್ರಹ್ಮನು ಮನೋರೂಪವನ್ನು ಹೊಂದಿದಂತೆ ಕಾಣಿಸುತ, ಜಗತ್ತನ್ನು ಉಂಟುಮಾಡುವನು. ಈ ಜಗತ್ತು, ನೀರಿಗಿಂತ ಬೇರೆಯಾಗಿ ದ್ರವತ್ವವಿಲ್ಲದಿರುವಂತೆ, ಶುದ್ಧನಾದ ಆ ಬ್ರಹ್ಮನಿಗಿಂತ ಬೇರೆಯಾಗಿರತಕ್ಕುದಲ್ಲ ॥೧೯॥

ಪೂರ್ವೋಕ್ತರೀತಿಯಾದ ಸಂಕಲ್ಪನಗರದಂತೆಯೂ ಗಂಧರ್ವಪಟ್ಟಣದಂತೆಯೂ ಅಸತ್ಯವಾಗಿಯೇ ಹಬ್ಬಿಕೊಂಡಿರುವ ಈ ಸಮಸ್ತಜಗತ್ತೂ ಮನಸ್ಸಿನಿಂದ ಕಲ್ಪಿಸಲ್ಪಡುವುದು॥

ರಜ್ಜುವಿನಲ್ಲಿ ಸರ್ಪತ್ವವಿಲ್ಲದಿರುವಂತೆ, ಆಧಿಭೌತಿಕತ್ವವೆಂಬುದಿಲ್ಲವೇ ಇಲ್ಲ. ಹೀಗಿರುವಾಗ ಮಹಾಜ್ಞಾನಶಾಲಿಗಳಾದ ಆ ಬ್ರಹ್ಮಾದಿಗಳು ಅಲ್ಲಿರುವ ಬಗೆ ಹೇಗೆ ? ॥೨೧॥

ಪ್ರಬುದ್ಧಮತಿಯಾದವನಿಗೆ ಆತಿವಾಹಿಕದೇಹವೇ ಇಲ್ಲ. ಹೀಗಿರುವಾಗ ಆಧಿಭೌತಿಕದೇಹವಿರುವುದೆಂಬ ಮಾತೆಲ್ಲಿಯದು ?—ಅದು ಹೇಗುಂಟಾಗುವುದು ? ॥೨೨॥

ಮನೋನಾಮ್ನೋ ಮನುಷ್ಯಸ್ಯ ವಿರಿಞ್ಚ್ಯಾಕಾರಧಾರಿಣಃ ।
ಮನೋರಾಜ್ಯಂ ಜಗದಿತಿ ಸತ್ಯರೂಪಮಿವ ಸ್ಥಿತಮ್ ॥೩೩॥
ಮನಏವ ವಿರಿಞ್ಚಿತ್ವಂ ತದ್ಧಿ ಸಙ್ಕಲ್ಪನಾತ್ಮಕಮ್ ।
ಸ್ವವಪುಃ ಸ್ಫಾರತಾಂ ನೀತ್ವಾ ಮನಸೇದಂ ವಿತನ್ಯತೇ ॥೩೪॥
ವಿರಿಞ್ಚೋ ಮನಸೋ ರೂಪಂ ವಿರಿಞ್ಚಸ್ಯ ಮನೋ ವಪುಃ ।
ಪೃಥ್ವ್ಯಾದಿ ವಿದ್ಯತೇ ನಾತ್ರ ತೇನ ಪೃಥ್ವ್ಯಾದಿ ಕಲ್ಪಿತಮ್ ॥೩೫॥
ಪದ್ಮಾಕ್ಷೇ ಪದ್ಮಿನೀವಾನ್ತಃ ಮನೋಹೃದ್ಯಸ್ತಿ ದೃಶ್ಯತಾ ।
ಮನೋದೃಶ್ಯದೃಶೌ ಭಿನ್ನೇ ನ ಕದಾಚನ ಕೇನಚಿತ್ ॥೩೬॥
ಯಥಾ ಚಾತ್ರ ತವ ಸ್ವಪ್ನಃ ಸಙ್ಕಲ್ಪಶ್ಚಿತ್ತರಾಜ್ಯಧೀಃ ।
ಸ್ವಾನುಭೂತ್ಯೈವ ದೃಷ್ಟಾನ್ತಃ ತಸ್ಮಾದ್ಧೃದ್ಯಸ್ತಿ ದೃಶ್ಯಭೂಃ ॥೩೭॥
ತಸ್ಮಾಚ್ಚಿತ್ತವಿಕಲ್ಪಸ್ಥಪಿಶಾಚೋ ಬಾಲಕಂ ಯಥಾ ।
ವಿನಿಹನ್ತ್ಯೇವಮೇಷಾನ್ತಃ ದ್ರಷ್ಟಾರಂ ದೃಶ್ಯರೂಪಿಕಾ ॥೩೮॥
ಯಥಾಙ್ಕುರೋನ್ತರ್ಬೀಜಸ್ಯ ಸಂಸ್ಥಿತೋ ದೇಶಕಾಲತಃ ।
ಕರೋತಿ ಭಾಸುರಂ ದೇಹಂ ತನೋತ್ಯೇವಂ ಹಿ ದೃಶ್ಯಧೀಃ ॥೩೯॥

ಹೀಗೆ ವಿರಿಂಚಿಯೆಂಬ ಆಕಾರವನ್ನು ಧರಿಸಿರುವ ಮನೋನಾಮಕನಾದ ಪುರುಷನಿಗೆ, ಮನೋರಾಜ್ಯವಾದ ಜಗತ್ತು ಸತ್ಯವಾದ ಆಕಾರವುಳ್ಳದರಂತೆ ಇರುವುದು ॥೩೩॥

ಈರೀತಿಯಾಗಿ ಸರ್ವವನ್ನೂ ಸೃಷ್ಟಿಮಾಡತಕ್ಕ ಅವಸ್ಥೆಯೂ ಮನಸ್ಸೇ ಆಗಿರುವುದು. ಏತಕ್ಕೆಂದರೆ—ಅದು ಕೇವಲ ಸಂಕಲ್ಪರೂಪವಾಗಿರುವುದು. ಮನಸ್ಸು ತನ್ನ ಶರೀರವನ್ನು ವಿಸ್ತಾರಪಡಿಸಿಕೊಂಡು ಈ ಪ್ರಪಂಚವನ್ನೆಲ್ಲ ಮಾಡುವುದು ॥೩೪॥

ಅಂತು ಬ್ರಹ್ಮನು ಮನಸ್ಸಿನ ರೂಪವಾದನು, ಮನಸ್ಸು ಬ್ರಹ್ಮನ ದೇಹವಾಯ್ತು. ಪೃಥಿವಿ ಮುಂತಾದುದೊಂದೂ ಇಲ್ಲ. ಹೀಗಿರುವುದರಿಂದ ಪೃಥಿವಿಮುಂತಾದುದು ಕಲ್ಪಿತವಾದುದು ॥೩೫॥

ಕಮಲಬೀಜದೊಳಗೆ ಕಮಲಲತೆಯಿರುವಂತೆ ಮನಸ್ಸಿನೊಳಗೆ ಈ ದೃಶ್ಯವೆಲ್ಲವೂ ಅಡಗಿರುವುದು. ಮನಸ್ಸು ದೃಶ್ಯ-ಎಂಬ ಈ ಜ್ಞಾನಗಳು ಯಾವಾಗಲೂ ಯಾವನಿಂದಲೂ ಬೇರೆಬೇರೆಯಾಗಿ ವಿವೇಚನೆಮಾಡಲ್ಪಟ್ಟಿಲ್ಲ ॥೩೬॥

ಈ ವಿಷಯದಲ್ಲಿ ನಿನ್ನ ಸ್ವಪ್ನವೂ ಸಂಕಲ್ಪವೂ ಮನೋರಾಜ್ಯವೂ ಸ್ವಾನುಭವದಿಂದಲೇ ದೃಷ್ಟಾಂತವಾಗಿರುವುವಲ್ಲವೆ! ಆದಕಾರಣ ಹೃದಯದಲ್ಲಿ ದೃಶ್ಯವೆಲ್ಲವೂ ಇರುವುದು ॥೩೭॥

ಆದುದರಿಂದ, ಚಿತ್ತವಿಕಲ್ಪದಿಂದುಂಟಾದ ಪಿಶಾಚವು ಬಾಲಕನನ್ನು ಕೊಂದುಬಿಡುವಂತೆ, ಈ ದೃಶ್ಯವೆಂಬ ಪಿಶಾಚಿಯೂ ದ್ರಷ್ಟೃವನ್ನು ಕೊಂದುಬಿಡುವುದು ॥೩೮॥

ಅಂಕುರವು ಬೀಜದೊಳಗಿದ್ದುಗೊಂಡು ದೇಶಕಾಲಸಂಯೋಗವಿಶೇಷದಿಂದ ತನ್ನ ಆಕಾರವನ್ನು ದೊಡ್ಡದಾಗಿ ಪ್ರಕಾಶಪಡಿಸುವಂತೆ, ಈ ದೃಶ್ಯವೂಕೂಡ ದೇಶಕಾಲಾನುಗುಣವಾಗಿ ಪ್ರಕಾಶಪಡಿಸುವುದು ॥೩೯॥

ಸಚ್ಚೇನ್ನ ಶಾಮ್ಯತಿ ಕದಾಚನ ದೃಶ್ಯದುಃಖಂ
ದೃಶ್ಯೇ ತ್ವಶಾಮ್ಯತಿ ನ ಬೋದ್ಧರಿ ಕೇವಲತ್ವಮ್ ।
ದೃಶ್ಯೇ ತ್ವಸಮ್ಭವತಿ ಬೋದ್ಧರಿ ಬೋದ್ಧೃಭಾವಃ
ಶಾಮ್ಯೇತ್ ಸ್ಥಿತೋಽಪಿ ಹಿ ತದಸ್ಯ ವಿಮೋಕ್ಷಮಾಹುಃ ॥೪೦॥

ಇತಿ ಮುಮುಕ್ಷುವ್ಯವಹಾರಪ್ರಕರಣೇ ಬನ್ಧಹೇತುವರ್ಣನಂ ನಾಮ ತೃತೀಯಃ ಸರ್ಗಃ.

'ಹೀಗೆ ಇಷ್ಟು ಕಷ್ಟಪಟ್ಟು ಈ ದೃಶ್ಯವನ್ನು ಅಸತ್ಯವೆಂದು ಸಾಧಿಸಿದುದರಿಂದ ಪ್ರಯೋಜನವೇನು? ಇದು ಸತ್ಯವಾಗಿದ್ದ ಮಾತ್ರದಿಂದಲೇ ಬಾಧೆಯೇನು?'—ಎಂದು ಶಂಕಿಸಬಹುದಲ್ಲವೆ! ಹೀಗೆ ಶಂಕಿಸಬಾರದು. ಈ ದೃಶ್ಯದುಃಖವು ಸತ್ಯವಾಗಿದ್ದಪಕ್ಷದಲ್ಲಿ, ಸತ್ಯವಾದುದಕ್ಕೆಂದಿಗೂ ನಾಶವಿಲ್ಲದಕಾರಣ, ಇದೂ ನಾಶಹೊಂದದಿರಬೇಕಾಗುವುದು. ಈ ದೃಶ್ಯವು ಶಾಂತಿಹೊಂದದಿರುವಾಗ, ದ್ರಷ್ಟೃವು ಸುಖದುಃಖಾದಿ ಶೂನ್ಯನಾಗಿರುವ ಸ್ಥಿತಿಯುಂಟಾಗುವುದಿಲ್ಲ. ಈ ದೃಶ್ಯವು ಇಲ್ಲದಿದ್ದಾಗಲಾದರೋ—ಆ ದ್ರಷ್ಟೃವಿನಲ್ಲಿ ದ್ರಷ್ಟೃತ್ವವು ಇದ್ದರೂ ಶಾಂತಿಹೊಂದುವುದು. ಇದನ್ನೇ ಇವನಿಗೆ ಮೋಕ್ಷವೆಂದು ಜ್ಞಾನಿಗಳು ಹೇಳುವರು ॥೪೦॥

ಇದು ಮುಮುಕ್ಷುವ್ಯವಹಾರಪ್ರಕರಣದಲ್ಲಿ ಬಂಧಹೇತುವರ್ಣನೆಯೆಂಬ ಮೂರನೆಯ ಸರ್ಗವು.

ಅಥ ಮುಮುಕ್ಷುವ್ಯವಹಾರಪ್ರಕರಣೇ ಚತುರ್ಥಃ ಸರ್ಗಃ

ಶ್ರೀವಾಲ್ಮೀಕಿರುವಾಚ.

ಕಥಯತ್ಯೇವಮುದ್ದಾಮವಚನೇ ಮುನಿನಾಯಕೇ ।
ಶ್ರೋತುಮೇಕರಸೇ ಜಾತೇ ಜನೇ ಮೌನಮುಪಸ್ಥಿತೇ ॥೧॥
ಶಾನ್ತೇಷು ಕಿಙ್ಕಿಣೀಜಾಲರವೇಷು ಸ್ಪನ್ದನಂ ವಿನಾ ।
ಪಞ್ಜರಾನ್ತರಹಾರೀತಶುಕೇಷ್ವಪ್ಯಸ್ತಕೇಳಿಷು ॥೨॥
ಸುವಿಸ್ಮೃತವಿಲಾಸಾಸು ಸ್ಥಿತಾಸು ಲಲನಾಸ್ವಪಿ ।
ಚಿತ್ರಭಿತ್ತಾವಿವ ನ್ಯಸ್ತೇ ಸಮಸ್ತೇ ರಾಜಸದ್ಮನಿ ॥೩॥
ಮುಹೂರ್ತಶೇಷಮಭವತ್ ದಿವಸಂ ಮಧುರಾತಪಮ್ ।
ವ್ಯವಹಾರಾರವಿಕರ್ಯೈಃ ಸಹ ತಾನವಮಾಯಯುಃ ॥೪॥

ಮುಮುಕ್ಷುವ್ಯವಹಾರಪ್ರಕರಣದಲ್ಲಿ ನಾಲ್ಕನೆಯ ಸರ್ಗವು.

ಶ್ರುತ್ವೋಪದೇಶಂ ಪ್ರಥಮಂ ಉತ್ಥಾನಾದಿ ನಿಶಾಕ್ರಮಃ ।
ಪ್ರಾತರಾಗಮನಂ ಚಿತ್ತಸ್ವಭಾವಶ್ಚಾತ್ರ ವರ್ಣ್ಯತೇ ॥

ಪೂರ್ವೋಕ್ತವಾದ ಉಪದೇಶವನ್ನು ಕೇಳಿದ ಬಳಿಕ ಸಭಾಸದರೆಲ್ಲರೂ ಸ್ವಸ್ಥಾನಕ್ಕೆ ತೆರಳಿದರು,—ಇತ್ಯಾದಿಯಾದ ಆ ರಾತ್ರಿ ನಡೆದ ವ್ಯಾಪಾರವೂ, ಮತ್ತೆ ಬೆಳಗ್ಗೆ ಅವರೆಲ್ಲರೂ ಬರುವಿಕೆಯೂ, ಚಿತ್ತದ ಸ್ವಭಾವವೂ ಕೂಡ ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ವಾಲ್ಮೀಕಿಮುನಿಯು ಭರದ್ವಾಜನೆಂಬ ಶಿಷ್ಯನನ್ನು ಕುರಿತು ಯಥಾಪ್ರಕಾರವಾಗಿ ಹೇಳಿದನು.

ಅಯ್ಯಾ! ಭರದ್ವಾಜ! ಪ್ರೌಢವಾಕ್ಯನಾದ ವಸಿಷ್ಠಮಹರ್ಷಿಯು ಈರೀತಿಯಾಗಿ ಹೇಳುತಿರಲು, ಅಲ್ಲಿರುವ ಸಮಸ್ತ ಜನರೂ ಆ ಉಪದೇಶವನ್ನು ಕೇಳುವುದಕ್ಕೆ ಏಕಾಗ್ರವಾಗಿ ಮೌನವನ್ನಾಶ್ರಯಿಸಿರಲು, ಕಿರುಗೆಜ್ಜೆಗಳ ಧ್ವನಿಗಳೆಲ್ಲವೂ ಶಾಂತವಾಗಿರಲು, ಪಂಜರದೊಳಗಿರುವ ಹಾರೀತ ಶುಕ ಮುಂತಾದ ಪಕ್ಷಿಗಳೂ ಕೂಡ ಅಲುಗಾಡದೆ ಆಟವಾಡದಿರುತಿರಲು, ಸ್ತ್ರೀಯರೂ ಕೂಡ ತಮ್ಮ ವಿಲಾಸಗಳನ್ನು ಚೆನ್ನಾಗಿ ಮರೆತು ನಿಂತಿರಲು, ಆ ಸಮಸ್ತವಾದ ಅರಮನೆಯೂ ಚಿತ್ರದ ಗೋಡೆಯಲ್ಲಿ ಬರೆಯಲ್ಪಟ್ಟಂತಿರಲು, ಆ ಹಗಲು ಒಂದು ಮುಹೂರ್ತ ಮಾತ್ರಾವಶಿಷ್ಟವಾಗಿ ಬಿಸಿಲು ತಂಪಿದುದಾಯಿತು; ಜನರ ವ್ಯಾಪಾರಗಳೆಲ್ಲವೂ ಸೂರ್ಯಕಿರಣಗಳೊಡನೆ ಕೃಶತ್ವವನ್ನು ಹೊಂದಿದುವು(೧)॥೧-೪॥

(೧) ಸೂರ್ಯನ ಕಿರಣಗಳೂ ಜನರ ಕೆಲಸಗಳೂ ಕ್ರಮೇಣ ಕಡಮೆಯಾದುವೆಂದು ಭಾವವು.

ವವುರುತ್ಫುಲ್ಲಕಮಲಪ್ರಕರಾಮೋದಮಾಂಸಲಾಃ |
ವಾಯವೋ ಮಧುರಸ್ಪನ್ದಾಃ ಶ್ರವಣಾರ್ಥಮಿವಾಗತಾಃ ||೫||
ಶ್ರುತಂ ಚಿನ್ತಯಿತುಂ ಭಾನುಃ ಇವಾಹೋರಚನಾಭ್ರಮಮ್ |
ತತ್ಯಾಜೈಕಾನ್ತಮಗಮತ್ ಶೂನ್ಯಮಸ್ತಗಿರೇಸ್ತಟಮ್ ||೬||
ಉತ್ತಸ್ಥುರ್ಹಿಮಹಿಕಾರಮ್ಭಸಮತಾವನಭೂಮಿಷು |
ವಿಜ್ಞಾನಶ್ರವಣಾದನ್ತಶ್ಶೀತಲಾಃ ಶಾನ್ತತಾಇವ ||೭||
ಬಭೂವುರಲ್ಪಸಞ್ಚಾರಾಃ ಜನಾದಶಸು ದಿಕ್ಷ್ವಪಿ |
ಸಾವಧಾನತಯಾ ಶ್ರೋತುಂ ಇವ ಸನ್ತ್ಯಕ್ತಚೇಷ್ಟಿತಾಃ ||೮||
ಛಾಯಾದೀರ್ಘತ್ವಮಾಜಗ್ಮುಃ ವಾಸಿಷ್ಠಂ ವಚನಕ್ರಮಮ್ |
ಇವ ಶ್ರೋತುಮಶೇಷಾಣಾಂ ವಸ್ತೂನಾಂ ದೀರ್ಘಕನ್ಧರಾಃ ||೯||
ಪ್ರತೀಹಾರಃ ಪುರಃ ಪ್ರಹ್ವೋ ಭೂತ್ವಾಹ ವಸುಧಾಧಿಪಮ್ |
ದೇವ ಸ್ನಾನದ್ವಿಜಾರ್ಚಾಸು ಕಾಲೋ ವ್ಯತಿಗತೋ ಭೃಶಮ್ ||೧೦||
ತತೋ ವಸಿಷ್ಠೋ ಭಗವಾನ್ ಸಂಹೃತ್ಯ ಮಧುರಾಂ ಗಿರಮ್ |
ಅದ್ಯ ತಾವನ್ಮಹಾರಾಜ ಶ್ರುತಮೇತಾವದಸ್ತು ವಃ |

ಅರಳಿದ ಕಮಲಸಮೂಹಗಳ ಪರಿಮಳದಿಂದ ಭರಿತವಾಗಿರುವ ವಾಯುಗಳು, ಈ ವಸಿಷ್ಠರ ಉಪದೇಶವನ್ನು ಕೇಳುವುದಕ್ಕೆ ಬಂದಂತೆ, ಮೆತ್ತಗೆ ಬೀಸಿದುವು ||೫||

ಇದುವರೆಗೆ ಕೇಳಿದ ವಸಿಷ್ಠವಚನವನ್ನು ಚಿಂತನೆಮಾಡುವುದಕ್ಕೋ ಎಂಬಂತೆ, ಸೂರ್ಯನು ಆಹಸ್ಸಿನ ವ್ಯಾಪಾರಭ್ರಮಣವನ್ನು ಬಿಟ್ಟು, ರಹಸ್ಯವಾಗಿರುವ ಅಸ್ತಪರ್ವತದ ದಡಕ್ಕೆ ಹೊರಟುಹೋದನು ||೬||

ಜ್ಞಾನೋಪದೇಶಶ್ರವಣದಿಂದ ಉಂಟಾಗಿರುವ ಶಾಂತಿಗಳಂತೆ, ಒಳಗೆ ತಣ್ಣಗಿರುವ ಹಿಮಪ್ರಾದುರ್ಭಾವದ ವ್ಯಾಪನೆಗಳು ವನಭೂಮಿಗಳಲ್ಲಿ ಉತ್ಪನ್ನವಾದುವು ||೭||

ಈ ಜ್ಞಾನಮಾರ್ಗೋಪದೇಶವನ್ನು ಸಾವಧಾನವಾಗಿ ಕೇಳುವುದಕ್ಕೋ ಎಂಬಂತೆ, ಹತ್ತು ದಿಕ್ಕುಗಳಲ್ಲಿಯೂ ಜನರು ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು, ಸ್ವಲ್ಪವಾದ ಸಂಚಾರವುಳ್ಳವರಾದರು ||೮||

ಈ ವಸಿಷ್ಠರ ವಚನಪ್ರಕ್ರಮವನ್ನು ಕೇಳುವುದಕ್ಕೆ ಉದ್ದವಾಗಿ ನೀಡಿರುವ ಕುತ್ತಿಗೆಗಳೋ ಎಂಬಂತೆ, ಸಮಸ್ತವಸ್ತುಗಳ ನೆಳಲುಗಳೂ ದೀರ್ಘವಾಗಿ ಪ್ರಸರಿಸಿದುವು ||೯||

ಆಗ ದ್ವಾರಪಾಲಕನು ಮುಂದುಗಡೆ ನಮ್ರನಾಗಿ ನಿಂತು—'ಸ್ವಾಮಿ! ಸ್ನಾನ ಬ್ರಾಹ್ಮಣಪೂಜೆ ಇವುಗಳ ವಿಷಯದಲ್ಲಿ ಕಾಲವು ಬಹುವಾಗಿ ಅತಿಕ್ರಮಿಸಿತು'—ಎಂದು ದೊರೆಯನ್ನು ಕುರಿತು ಹೇಳಿದನು ||೧೦||

ಬಳಿಕ ಪೂಜ್ಯರಾದ ವಸಿಷ್ಠಮಹರ್ಷಿಗಳು, ತಮ್ಮ ಮಧುರವಾದ ಮಾತನ್ನು ನಿಲ್ಲಿಸಿ, ದೊರೆಯನ್ನು ಕುರಿತು 'ಅಯ್ಯಾ! ದಶರಥಮಹಾರಾಜ! ಈ ದಿವಸ ನಿಮಗೆ ಇಷ್ಟು ಕೇಳಿ

ಪ್ರಾತರನ್ಯದ್ವದಿಷ್ಯಾಮಿ ಇತ್ಯುಕ್ತ್ವಾ ಮೌನವಾನಭೂತ್ ॥೧೧॥
ಇತ್ಯಾಕರ್ಣ್ಯೈವಮಸ್ತೂಕ್ತ್ವಾ ಭೂಪತಿರ್ಭೂತಿವೃದ್ಧಯೇ ।
ಪುಷ್ಪಪಾದ್ಯಾರ್ಘ್ಯಸನ್ಮಾನದಕ್ಷಿಣಾದಾನಪೂಜಯಾ ।
ಸದೇವರ್ಷಿಮುನೀನ್ ವಿಪ್ರಾನ್ ಪೂಜಯಾಮಾಸ ಸಾದರಮ್ ॥೧೨॥
ಅಥೋತ್ತಸ್ಥೌ ಸಭಾ ಸರ್ವಾ ಸರಾಜಮುನಿಮಣ್ಡಲಾ ।
ಮಣ್ಡಲಾಕೀರ್ಣರತ್ನೌಘಪರಿವೇಷಾವೃತಾನನಾ ॥೧೩॥
ಪರಸ್ಪರಾಙ್ಗಸಙ್ಘಟ್ಟರಣತ್ಕೇಯೂರಕಙ್ಕಣಾ ।
ಹಾರಭಾರಾಹೃತಸ್ವರ್ಣಪಟ್ಟಾಭೋರುಸ್ತನಾನ್ತರಾ ॥೧೪॥
ಶೇಖರೋತ್ಸಙ್ಗವಿಶ್ರಾನ್ತಪ್ರಬುದ್ಧಮಧುಪಸ್ವನೈಃ ।
ಸಘುಙ್ಘುಮಶಿರೋಭಾರಾ ವದದ್ಭಿರಿವ ಮೂರ್ಧಜೈಃ ॥೧೫॥
ಕಾಞ್ಚನಾಭರಣೋದ್ದ್ಯೋತಕನಕೀಕೃತದಿಙ್ಮುಖಾಃ ।
ಬುದ್ಧಿಸ್ಥಮುನಿವಾಗರ್ಥಸಂಶಾನ್ತೇನ್ದ್ರಿಯವೃತ್ತಯಃ ॥೧೬॥
ಜಗ್ಮುರ್ನಭಶ್ಚರಾವ್ಯೋಮ ಭೂಚರಾಭೂಮಿಮಣ್ಡಲಮ್ ।
ಚಕ್ರುರ್ದಿನಸಮಾಚಾರಂ ಸರ್ವೇ ತೇ ಸ್ವೇಷು ವೇಶ್ಮಸು ॥೧೭॥

ದುದಿರಲಿ; ಬೆಳಗ್ಗೆ ಇತರ ವಿಷಯುವನ್ನು ಹೇಳುವೆನು' ಎಂದು ಹೇಳಿ ಸುಮ್ಮನಾದರು ॥೧೧॥

ಈರೀತಿಯಾದ ವಸಿಷ್ಠವಚನವನ್ನು ಕೇಳಿ ಆ ದಶರಥನು, ಹಾಗೆಯೇ ಆಗಲೆಂದು ಹೇಳಿ, ತನ್ನ ಶ್ರೇಯೋಭಿವೃದ್ಧಿಗೋಸ್ಕರವಾಗಿ, ಪುಷ್ಪ ಪಾದ್ಯ ಅರ್ಘ್ಯ ಬಹುಮಾನ ದಕ್ಷಿಣಾದಾನ—ಇವು ಮೊದಲಾದ ಸತ್ಕಾರದಿಂದ, ದೇವರ್ಷಿ ಬ್ರಹ್ಮರ್ಷಿಗಳೊಡಗೂಡಿದ ಆ ಬ್ರಾಹ್ಮಣರನ್ನೆಲ್ಲ ಆದರದೊಡನೆ ಪೂಜಿಸಿದನು ॥೧೨॥

ಬಳಿಕ, ರಾಜಸಮೂಹದಿಂದಲೂ ಮುನಿಸಮೂಹದಿಂದಲೂ ಕೂಡಿರುವ ಆ ಸಭೆಯೆಲ್ಲವೂ ಎದ್ದಿತು ; ಆಗ ರತ್ನಕಾಂತಿಗಳು ಗುಂಡಾಗಿ ಅವರುಗಳ ಮುಖದ ಸುತ್ತಲೂ ಆವರಿಸಿಕೊಂಡಿದ್ದುವು. ಆ ಸಭೆಯಲ್ಲಿ ಅನೇಕರಾಗಿ ಸ್ತ್ರೀಯರೂ ಪುರುಷರೂ ತುಂಬಿದ್ದಕಾರಣ, ಒಬ್ಬೊಬ್ಬರಿಗೆ ಮೈತಗಲುವುದರಿಂದ ಅಂಗದಗಳೂ ಕಂಕಣಗಳೂ ಧ್ವನಿಮಾಡುತಿದ್ದುವು ; ಸುವರ್ಣಖಚಿತವಾದ ಪಟ್ಟವಸ್ತ್ರದಂತಿರುವ ಸ್ತನಮಧ್ಯಗಳನ್ನೆಲ್ಲ ದೊಡ್ಡದೊಡ್ಡ ಮುಕ್ತಾಸರಗಳು ಮುಚ್ಚಿಕೊಂಡಿದ್ದುವು. ತಲೆಯಲ್ಲಿ ಮುಡಿದಿದ್ದ ಹೂವುಗಳೊಳಗೆ ಇದುವರೆಗೆ ವಿಶ್ರಮಿಸಿಕೊಂಡಿದ್ದ ದುಂಬಿಗಳು ಈಗ ಎಚ್ಚರಗೊಂಡು ಧ್ವನಿಮಾಡುತಿರುವುದರಿಂದ, ಅವರ ಕೂದಲೆಲ್ಲವೂ ಮಾತಾಡುವಂತೆ ಕಾಣುತ, ತಲೆಯೆಲ್ಲ ಘುಮುಘುಮುವಾಸನೆಯಾಗಿಬಿಟ್ಟಿತು॥

ಆಗ ತಮ್ಮ ಸುವರ್ಣಾಭರಣಕಾಂತಿಗಳಿಂದ ದಿಕ್ಕುಗಳನ್ನೆಲ್ಲ ಚಿನ್ನವಾಗಿ ಮಾಡುತ, ವಸಿಷ್ಠಮುನಿಯ ವಾಕ್ಯಾರ್ಥವೆಲ್ಲವೂ ಬುದ್ಧಿಸ್ಥವಾಗಿರುವುದರಿಂದ ಶಾಂತವಾದ ಇಂದ್ರಿಯ ವ್ಯಾಪಾರವುಳ್ಳವರಾಗಿ, ದೇವತೆಗಳು ಸ್ವರ್ಗಕ್ಕೂ ಮನುಷ್ಯರು ಭೂಮಿಗೂ (ತಮ್ಮ ಪ್ರದೇಶಕ್ಕೆ) ಹೊರಟುಹೋದರು. ಅಲ್ಲಿ ಅವರೆಲ್ಲರೂ ತಮ್ಮತಮ್ಮ ಮನೆಗಳಲ್ಲಿ ಆಹ್ನಿಕಗಳೆಲ್ಲವನ್ನೂ ಮಾಡಿದರು ॥೧೬-೧೭॥

ಏತಸ್ಮಿನ್ನನ್ತರೇ ಶ್ಯಾಮಾ ಯಾಮಿನೀ ಸಮದೃಶ್ಯತ ।
ಜನಸಙ್ಬಾಧವಿನಿರ್ಮುಕ್ತಾ ಗೃಹೇ ಬಾಲಾಙ್ಗನಾ ಯಥಾ ॥೧೯॥
ದೇಶಾನ್ತರಂ ಭಾಸಯಿತುಂ ಯಯೌ ದಿವಸನಾಯಕಃ ।
ಸರ್ವತ್ರಾಲೋಕಕರ್ತೃತ್ವಂ ಏವ ಸತ್ಪುರುಷವ್ರತಮ್ ॥೨೦॥
ಉದಭೂದಾಭಿತಃ ಸನ್ಧ್ಯಾ ತಾರಾನಿಕರದರಿಣೀ ।
ಉತ್ಫುಲ್ಲಕಿಂಶುಕವನಾ ವಸನ್ತಶ್ರೀರಿವೋದಿತಾ ॥೨೧॥
ಚೂತನೀಪಕದಮ್ಬಾಗ್ರ ಗ್ರಾಮಚೈತ್ಯಗೃಹೋದರೇ ।
ನಿಲಿಲ್ಯಿರೇ ಘನಾಶ್ಚಿತ್ತೇವದಾತಾವೃತ್ತಯೋ ಯಥಾ ॥೨೨॥
ಭಾನೋರ್ಭಾಸಾ ಭೂಷಿತೈರ್ಮೇಘಲೇಶೈಃ
ಕಿಂಚಿತ್ಕಿಂಚಿತ್ ಕುಙ್ಕುಮಚ್ಛಾ ಯಯೇವ ।
ಪಾಶ್ಚಾತ್ತ್ಯೋದ್ರಿಃ ಪೀತವಾಸಾಃ ಸ ಮೇಘೈಃ
ತಾರಾಹಾರಃ ಶ್ರೀಯುತಃ ಖಂ ಸಮೇತಃ ॥೨೩॥

ಇಷ್ಟರೊಳಗೇ, ಜನರ ಗುಂಪಿನಿಂದ ತಪ್ಪಿಸಿಕೊಂಡು ಮನೆಗೆ ಬಂದಿರುವ ಬಾಲಿಕೆಯಂತೆ, ಅಂಧಕಾರದಿಂದ ಕಪ್ಪಾಗಿ ರಾತ್ರಿಯು ಕಾಣಿಸಿತು ॥೧೯॥

ದೇಶಾಂತರವನ್ನು ಪ್ರಕಾಶಪಡಿಸುವುದಕ್ಕಾಗಿ ಸೂರ್ಯನು ಹೊರಟುಹೋದನು. ಸರ್ವಪ್ರದೇಶದಲ್ಲಿಯೂ ಬೆಳಕುಂಟುಮಾಡುವುದೇ ಸತ್ಪುರುಷರಿಗೆ ವ್ರತವಾಗಿರುವುದಲ್ಲವೆ! ॥೨೦॥

ಸುತ್ತಲೂ ನಕ್ಷತ್ರಪಙ್ಕ್ತಿಗಳನ್ನು ಧರಿಸಿರುವ ಸಂಧ್ಯಾಕಾಲವು, ಮುತ್ತುಗದ ತೋಪುಗಳೆಲ್ಲವೂ ಅರಳಿ ಉದಯಿಸುತಿರುವ ವಸಂತಲಕ್ಷ್ಮಿಯಂತೆ—ಉದಯಿಸಿತು ॥೨೧॥

ನಿದ್ರೆಯಿಂದ ವ್ಯಾಪ್ತವಾದ ಮನಸ್ಸಿನಲ್ಲಿ ನಿರ್ಮಲವಾದ ವ್ಯಾಪಾರಗಳೆಲ್ಲವೂ ಅಡಗಿರುವಂತೆ, ಪಕ್ಷಿಗಳೆಲ್ಲವೂ—ತಮಗೆ ಮನೆಗಳಾದ ಚೂತ ನೀಪ ಕದಂಬ ಮುಂತಾದ ವೃಕ್ಷಗಳ ತುದಿಯಲ್ಲಿರುವ ಗೂಡುಗಳಲ್ಲಿಯೂ ಊರುಬಾಗಿಲಿನ ಪೊಟ್ಟರೆಗಳೊಳಗೂ ಅಡಗಿದುವು ॥೨೨॥

ಆಗ ಕುಂಕುಮಕಾಂತಿಯಂತೆ ಸೂರ್ಯಕಿರಣದಿಂದ ಸ್ವಲ್ಪಸ್ವಲ್ಪವಾಗಿ ಅಲಂಕರಿಸಲ್ಪಟ್ಟಿರುವ ಮೇಘಗಳಿಂದ ಪೀತಾಂಬರವುಟ್ಟಂತೆ ಕಾಣುವ ಪಶ್ಚಿಮಪರ್ವತವು, ನಕ್ಷತ್ರಮಾಲಿಕೆಯುಳ್ಳುದಾಗಿ, ಲಕ್ಷ್ಮೀಯುಕ್ತವಾಗಿ, ಮೇಘಸಹಿತವಾಗಿರುವ ಆಕಾಶವನ್ನು ಸೇರಿತು (೧) ॥೨೩॥

---

(೧) ಪರ್ವತವು ಆಕಾಶವನ್ನು ಸೇರುವುದು ಅಸಂಭವವಾದಕಾರಣ, ಆ ಪರ್ವತದಲ್ಲಿದ್ದ ಆಕಾಶವು ಈರೀತಿಯಾಗಿತ್ತೆಂದೂ, ಅಂತಹ ಆಕಾಶವನ್ನು ಇದು ಹೊಂದಿತ್ತೆಂದೂ ಭಾವವು. ಇಲ್ಲಿ 'ಪೀತವಾಸಾಃ ಶ್ರೀಯುತಃ' ಇತ್ಯಾದಿ ಶಬ್ದಗಳ ಪ್ರಯೋಗವಿರುವುದರಿಂದ, ಪೀತಾಂಬರಧಾರಿಯಾದ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನು ಯೋಗಿಗಳ ಹೃದಯಾಕಾಶವನ್ನು ಹೊಂದಿದನೆಂಬುದೊಂದರ್ಥವೂ ತೋರುವುದು.

ಪೂಜಾಮಾದಾಯ ಸನ್ಧ್ಯಾಯಾಂ ಪ್ರಗತಾಯಾಂ ಯಥಾಗತಮ್ ।
ಅನ್ಧಕಾರಾಃ ಸಮುತ್ತಸ್ಥುಃ ವೇತಾಳಾವಪುಷಾ ಯಥಾ ॥೨೪॥
ಅವಶ್ಯಾಯಕಣಾಸ್ಪನ್ದೀ ಹೇಲಾಭಿಹತಪಲ್ಲವಃ ।
ಕೋಮಲಃ ಕುಮುದಾಶಂಸೀ ವವಾವಾಶೀತಲೋಽನಿಲಃ ॥೨೫॥
ಪರಮಾನ್ಧ್ಯಮುಪಾಜಗ್ಮುಃ ದಿಶೋಽವಿಸ್ಫುಟತಾರಕಾಃ ।
ಲಮ್ಬದೀರ್ಘತಮಃಕೇಶ್ಯೋ ವಿಧವಾಇವ ಯೋಷಿತಃ ॥೨೬॥
ಆಯಯೌ ಭುವನಂ ತೇಜಃಕ್ಷೀರಪೂರೇಣ ಪೂರಯನ್ ।
ರಸಾಯನಮಯಾಕಾರಃ ಶಶಿಕ್ಷೀರಾರ್ಣವೋ ನಭಃ ॥೨೭॥
ಜಗ್ಮುಸ್ತಿಮಿರಸಙ್ಘಾತಾಃ ಪಲಾಯ್ಯ ಕ್ವಾಪ್ಯದೃಶ್ಯತಾಮ್ ।
ಶ್ರುತಜ್ಞಾನಗಿರಶ್ಚಿತ್ತಾತ್ ಮಹೀಪಾನಾಮಿವಾಜ್ಞತಾಃ ॥೨೮॥
ಋಷಯೋ ಭೂಮಿಪಾಲಶ್ಚ ಮುನಯೋ ಬ್ರಾಹ್ಮಣಾಸ್ತಥಾ ।
ಚೇತಸೀವ ವಿಚಿತ್ರಾರ್ಥಾಃ ಸ್ವಾಸ್ಪದೇಷು ವಿಶಶ್ರಮುಃ ॥೨೯॥
ಯಮುನಾಕಾಯೋಪಮಾ ಶ್ಯಾಮಾ ಯಯೌ ತಿಮಿರಮಾಂಸಲಾ ।

ಆಗ ಸಂಧ್ಯಾದೇವಿಯು ಜನರು ಕೊಟ್ಟ ಅರ್ಘ್ಯಾದಿ ಪೂಜೆಯನ್ನು ಸ್ವೀಕರಿಸಿ—ಯಥಾಗತವಾಗಿ ಹೊರಟುಹೋಗಲು, ಶರೀರಯುಕ್ತಗಳಾಗಿರುವ ವೇತಾಳಗಳಂತೆ ಅಂಧಕಾರಗಳು ಉದ್ಭವಿಸಿದುವು ॥೨೪॥

ಮತ್ತು ಹಿಮಕಣಗಳನ್ನು ಸ್ವಲ್ಪ ಅಳ್ಳಾಡಿಸುತ—ವಿಲಾಸದಿಂದ ಚಿಗುರುಗಳನ್ನು ಹೊಡೆಯುತ—ಕುಮುದಪುಷ್ಪಗಳು ಅರಳಿರುವಿಕೆಯನ್ನು ಸೂಚಿಸುತಿರುವ ತಂಗಾಳಿಯು, ಮಂದವಾಗಿ ಬೀಸಿತು ॥೨೫॥

ಆಗತಾನೆ ವಿಧವೆಯರಾದ ಹೆಂಗಸರು ಜುಟ್ಟುಬಿಚ್ಚಿಕೊಂಡು ಕಣ್ಣುಗುಡೆ ಕಾಣದೆ ಕೃತ್ಯವಿವೇಕಶೂನ್ಯರಾಗಿರುವಂತೆ, ದಿಕ್ಕುಗಳು—ದೀರ್ಘವಾದ ಕತ್ತಲೆಯೆಂಬ ಕೇಶಪಾಶಗಳು ಜೋಲಾಡುತಿರುವುವುಗಳಾಗಿ—ಚೆನ್ನಾಗಿ ಕಾಣದ ನಕ್ಷತ್ರಗಳುಳ್ಳವುಗಳಾಗಿ—ಅಧಿಕವಾದ ಅಂಧ್ಯವನ್ನು (ಅಂಧಕಾರ) ಹೊಂದಿದುವು ॥೨೬॥

ಬಳಿಕ ಅಮೃತಮಯವಾದ ಶರೀರವುಳ್ಳ ಚಂದ್ರನೆಂಬ ಕ್ಷೀರಸಮುದ್ರವು, ತೇಜಸ್ಸೆಂಬ ಕ್ಷೀರಪ್ರವಾಹದಿಂದ ಪ್ರಪಂಚವನ್ನೆಲ್ಲ ತುಂಬುತ, ಅಂತರಿಕ್ಷವನ್ನು ಸೇರಿತು ॥೨೭॥

ಅನಂತರ, ಜ್ಞಾನೋಪದೇಶವಚನಗಳನ್ನು ಕೇಳಿದ ದೊರೆಗಳ ಚಿತ್ತದದೆಸೆಯಿಂದ ಅಜ್ಞಾನಗಳು ತೊಲಗಿಹೋದಂತೆ, ಅಂಧಕಾರಸಮೂಹಗಳು ಎಲ್ಲಿಯೋ ಓಡಿಹೋಗಿ ಅದೃಶ್ಯಗಳಾಗಿಬಿಟ್ಟುವು ॥೨೮॥

ಆಮೇಲೆ, ಮನಸ್ಸಿನಲ್ಲಿ ವಸಿಷ್ಠಪ್ರೋಕ್ತವಾದ ವಿಚಿತ್ರವಾದ ವಿಷಯಗಳು ವಿಶ್ರಾಂತಿಪಡೆಯುವಂತೆ, ಋಷಿಗಳೂ ದೊರೆಗಳೂ ಮುನಿಗಳೂ ಬ್ರಾಹ್ಮಣರೂ ಕೂಡ ತಮ್ಮತಮ್ಮ ಆವಾಸಸ್ಥಾನಗಳಲ್ಲಿ ವಿಶ್ರಾಂತಿಪಡೆದರು ॥೨೯॥

ಆಗ ಅವರಿಗೆ, ಅಂಧಕಾರವ್ಯಾಪ್ತವಾಗಿ ಯಮುನ ದೇಹದಂತಿರುವ ರಾತ್ರಿಯು

ಆಯಯೌ ಮಿಹಿಕಾಸ್ಫಾರಂ ತತ್ರ ತೇಷಾಮುಷಃ ಶನೈಃ ॥೩೦॥
ಅನ್ತರ್ಧಾನಮುಪಾಜಗ್ಮುಃ ತಾರಾನಭಸಿ ಭಾಸುರಾಃ ।
ಪ್ರಭಾತಪವನೇನೇವ ಹೃತಾಃ ಕುಸುಮವೃಷ್ಟಯಃ ॥೩೧॥
ದೃಶ್ಯತಾಮಾಜಗಾಮಾರ್ಕಃ ಪ್ರಭೋನ್ಮೀಲಿತಲೋಚನಃ ।
ವಿವೇಕವೃತ್ತಿರ್ಮಹತಾಂ ಮನಸೀವ ನವೋದಿತಾ ॥೩೨॥
ಭಾನೋರ್ಭಾಸಾ ಭೂಷಿತೈರ್ಮೇಘಲೇಶೈಃ
ಕಿಂಚಿತ್ಕಿಂಚಿತ್ ಕುಙ್ಕುಮಚ್ಛಾಯಯೇವ ।
ಪೂರ್ವಕ್ಷ್ಮಾಭೃತ್ ಪೀತವಾಸಾಃ ಸ ಮೇಘೈಃ
ತಾರಾಹಾರಃ ಶ್ರೀಯುತಃ ಖಂ ಸಮೇತಃ ॥೩೩॥
ಸಭಾಂ ಪುನರುಪಾಜಗ್ಮುಃ ನಭಶ್ಚರಮಹೀಚರಾಃ ।
ಹ್ಯಸ್ತನೇನ ಕ್ರಮೇಣೈವ ಕೃತಪ್ರಾತಸ್ತನಕ್ರಮಾಃ ॥೩೪॥
ಪೂರ್ವವತ್ ಸನ್ನಿವೇಶೇನ ವಿವೇಶ ಸಕಲಾ ಸಭಾ ।
ಬಭೂವಾಸ್ಪನ್ದಿತಾಕಾರಾ ವಾತಮುಕ್ತೇವ ಪದ್ಮಿನೀ ॥೩೫॥
ಅಥ ಪ್ರಸಙ್ಗಮಾಸಾದ್ಯ ರಾಮೋ ಮಧುರಯಾ ಗಿರಾ ।

ಕಳೆದುಹೋಯಿತು; ಹಿಮಕಣಗಳಿಂದ ವ್ಯಾಪ್ತವಾಗಿರುವ ಉಷಃಕಾಲವು ಮೆಲ್ಲಗೆ ಪ್ರಾಪ್ತವಾಯಿತು ॥೩೦॥

ಪ್ರಾತಃಕಾಲಿಕವಾದ ವಾಯುವಿನಿಂದ ಅಪಹರಿಸಲ್ಪಟ್ಟ ಪುಷ್ಪವೃಷ್ಟಿಗಳಂತೆ, ಅಂತರಿಕ್ಷದಲ್ಲಿ ಪ್ರಕಾಶಿಸುತಿದ್ದ ನಕ್ಷತ್ರಗಳು ಅಂತರ್ಧಾನಹೊಂದಿದುವು ॥೩೧॥

ಮಹಾತ್ಮರ ಮನಸ್ಸಿನಲ್ಲಿ ಹೊಸದಾಗಿ ಹುಟ್ಟಿದ ವಿವೇಕವೃತ್ತಿಯಂತೆ, ಸೂರ್ಯನು ತನ್ನ ಪ್ರಭೆಯಿಂದ ಜನರ ಕಣ್ಣುಗಳನ್ನು ಅರಳಿಸುತ ಕಾಣಿಸಿಕೊಂಡನು ॥೩೨॥

ಆಗ ಕುಂಕುಮಕಾಂತಿಯಂತೆ ಸೂರ್ಯಕಿರಣದಿಂದ ಸ್ವಲ್ಪಸ್ವಲ್ಪವಾಗಿ ಅಲಂಕರಿಸಲ್ಪಟ್ಟಿರುವ ಮೇಘಗಳಿಂದ—ಪೀತಾಂಬರವುಟ್ಟಂತೆ ಕಾಣುವ ಪೂರ್ವಪರ್ವತವು, ನಕ್ಷತ್ರಮಾಲಿಕೆಯುಳ್ಳದಾಗಿ, ಲಕ್ಷ್ಮೀಯುಕ್ತವಾಗಿ, ಮೇಘಸಹಿತವಾಗಿರುವ ಆಕಾಶವನ್ನು ಸೇರಿತು (೧) ॥೩೩॥

ಬಳಿಕ ಹಿಂದಣದಿನದ ಕ್ರಮದಂತೆಯೇ ಪ್ರಾತಃಕಾಲಿಕವಾದ ಕರ್ಮಗಳನ್ನೆಲ್ಲ ನೆರವೇರಿಸಿಕೊಂಡು ನಭಶ್ಚರ ಮಹೀಚರರು ಪುನಃ ಸಭೆಯನ್ನು ಸೇರಿದರು ॥೩೪॥

ಆ ಸಮಸ್ತ ಸಭೆಯೂ ಪೂರ್ವೋಕ್ತವಾದ ಸನ್ನಿವೇಶದಿಂದಲೇ ಕುಳಿತುಕೊಂಡಿತು; ಆಗ ಗಾಳಿಯಿಲ್ಲದ ಕಮಲಲತೆಯಂತೆ ಅಲುಗಾಡದೆ ಇದ್ದಿತು ॥೩೫॥

ಬಳಿಕ ಶ್ರೀರಾಮನು, ಸರಿಯಾದ ಅವಕಾಶವನ್ನು ಹೊಂದಿದವನಾಗಿ, ಮಾತನಾಡ

---

(೧) ಈ ಶ್ಲೋಕವು ಈ ಸರ್ಗದ ಇಪ್ಪತ್ತುಮೂರನೆಯ ಶ್ಲೋಕದಂತೆಯೇ ಇರುವುದು; ಆದರೆ ಅಲ್ಲಿ ಪಶ್ಚಿಮಪರ್ವತವೆಂದೂ ಇಲ್ಲಿ ಪೂರ್ವತನೆಂದೂ ಇಷ್ಟುಮಾತ್ರ ಭೇದವಿರುವುದು. ಇಲ್ಲಿ ತಿಳಿಯಬೇಕಾದ ವಿಶೇಷವು ಆ ಶ್ಲೋಕವಿವರಣೆಯಲ್ಲಿ ತಿಳಿಸಲ್ಪಟ್ಟಿರುವುದು.

ಉವಾಚ ಮುನಿಶಾರ್ದೂಲಂ ವಸಿಷ್ಠಂ ವದತಾಂ ವರಮ್ ॥೩೬॥

ಶ್ರೀರಾಮ ಉವಾಚ.

ಭಗವನ್ ಮನಸೋ ರೂಪಂ ಕೀದೃಶಂ ವದ ಮೇ ಸ್ಫುಟಮ್ ।
ಯಸ್ಮಾತ್ ತೇನೇಯಮಖಿಲಾ ತನ್ಯತೇ ಲೋಕಮಞ್ಜರೀ ॥೩೭॥

ಶ್ರೀ ವಸಿಷ್ಠ ಉವಾಚ.

ರಾಮಾಸ್ಯ ಮನಸೋ ರೂಪಂ ನ ಕಿಂಚಿದಪಿ ದೃಶ್ಯತೇ ।
ನಾಮಮಾತ್ರಾದೃತೇ ವ್ಯೋಮ್ನೋ ಯಥಾ ಶೂನ್ಯಜಡಾಕೃತೇಃ ॥೩೮॥
ನ ಬಾಹ್ಯೇ ನಾಪಿ ಹೃದಯೇ ಸದ್ರೂಪಂ ವಿದ್ಯತೇ ಮನಃ ।
ಸರ್ವತ್ರೈವ ಸ್ಥಿತಂ ಚೈತತ್ ವಿದ್ಧಿ ರಾಮ ಯಥಾ ನಭಃ ॥೩೯॥
ಇದಮಸ್ಮಾತ್ ಸಮುತ್ಪನ್ನಂ ಮೃಗತೃಷ್ಣಾಮ್ಬುಸನ್ನಿಭಮ್ ।
ರೂಪಂ ತು ಕ್ಷಣಸಙ್ಕಲ್ಪಾತ್ ದ್ವಿತೀಯೇನ್ದುಭ್ರಮೋಪಮಮ್ ॥೪೦॥
ಮಧ್ಯೇ ಯದೇತದರ್ಥಸ್ಯ ಪ್ರತಿಭಾನಂ ಪ್ರಥಾಂ ಗತಮ್ ।
ಸತೋ ವಾಪ್ಯಸತೋ ವಾಪಿ ತನ್ಮನೋ ವಿದ್ಧಿ ನೇತರತ್ ॥೪೧॥

ತಕ್ಕವರಲ್ಲಿ ಅಗ್ರಗಣ್ಯರಾದ ವಸಿಷ್ಠಮಹರ್ಷಿಗಳನ್ನು ಕುರಿತು, ಮಧುರವಾದ ಮಾತಿನಿಂದ ಈರೀತಿಯಾಗಿ ಹೇಳಿದನು ॥೩೬॥

ಶ್ರೀರಾಮನು ಹೇಳಿದುದೇನೆಂದರೆ :—

ಪೂಜ್ಯರೆ! ತಾವು ನಿನ್ನೆ ಅಪ್ಪಣೆಕೊಡಿಸಿದಂತೆ ಮನಸ್ಸೇ ಸಮಸ್ತವಾದ ಈ ಲೋಕಸಮೂಹಗಳನ್ನೆಲ್ಲ ಉಂಟುಮಾಡುತಿರುವುದರಿಂದ, ಆ ಮನಸ್ಸಿನ ಸ್ವರೂಪವೆಂತಹುದೆಂಬುದನ್ನು ನನಗೆ ಸ್ಪಷ್ಟವಾಗಿ ಅಪ್ಪಣೆ ಕೊಡಿಸಬೇಕು ॥೩೭॥

ಶ್ರೀ ವಸಿಷ್ಠಮುನಿಗಳು ಶ್ರೀರಾಮನನ್ನು ಕುರಿತು ಹೇಳಿದರು.

ಅಯ್ಯಾ! ರಾಮ! ಶೂನ್ಯವಾಗಿಯೂ ಜಡವಾಗಿಯೂ ಇರುವ ಆಕಾರವುಳ್ಳ ಆಕಾಶಕ್ಕೆ ನಾಮಮಾತ್ರ ಹೊರತು ಬೇರೆಯಾದ ರೂಪವಿಲ್ಲದಿರುವಂತೆ, ಮನಸ್ಸಿಗೂ ಬೇರೆಯಾದ ರೂಪವೊಂದೂ ಕಾಣಿಸುವುದಿಲ್ಲ॥

ರಾಮ! ಈ ಮನಸ್ಸು ಹೊರಗೂ ಒಳಗೂ ರೂಪವುಳ್ಳುದಾಗಿಲ್ಲ; ಆದರೆ ಇದು ಆಕಾಶದಂತೆ ಸರ್ವತ್ರ ಇರುವುದೆಂದು ತಿಳಿ ॥೩೯॥

ಮೃಗತೃಷ್ಣಾಜಲಸಮಾನವಾದ ಈ ಪ್ರಪಂಚವಾದರೋ, ಕ್ಷಣಕಾಲಸಂಕಲ್ಪದಿಂದ ಎರಡನೆಯ ಚಂದ್ರನಿರುವ ಭ್ರಾಂತಿಯುಂಟಾಗುವಂತೆ—ಈ ಮನಸ್ಸಿನಿಂದ ಉತ್ಪನ್ನವಾಗಿರುವುದು ॥೪೦॥

ಸತ್ಯವಾದುದಾದರೂ ಅಥವಾ ಅಸತ್ಯವಾದುದಾದರೂ ಈ ವಿಷಯ ಸಮೂಹದ ಮಧ್ಯದಲ್ಲಿ ಯಾವುದೊಂದು ಪ್ರತಿಭೆಯು (ತೋರುವಿಕೆ) ಪ್ರಸಿದ್ಧಿಪಡೆಯುವುದೋ, ಅದೇ ಮನಸ್ಸೆಂದು ತಿಳಿ; ಮತ್ತೊಂದಲ್ಲ ॥೪೧॥

ಯದರ್ಥಪ್ರತಿಭಾನಂ ತತ್ ಮನಇತ್ಯಭಿಧೀಯತೇ ।
ಅನ್ಯನ್ನ ಕಿಂಚಿದಪ್ಯಸ್ತಿ ಮನೋ ನಾಮ ಕದಾಚನ ॥೪೦॥
ಸಙ್ಕಲ್ಪನಂ ಮನೋ ವಿದ್ಧಿ ಸಙ್ಕಲ್ಪಾತ್ ತನ್ನ ಭಿದ್ಯತೇ ।
ಯಥಾ ದ್ರವತ್ವಾತ್ ಸಲಿಲಂ ತಥಾ ಸ್ಪನ್ದೋ ಯಥಾನಿಲಾತ್ ॥೪೩॥
ಯತ್ರ ಸಙ್ಕಲ್ಪನಂ ತತ್ರ ತನ್ಮನೋಙ್ಗ ತಥಾ ಸ್ಥಿತಮ್ ।
ಸಙ್ಕಲ್ಪಮನಸೀ ಭಿನ್ನೇ ನ ಕದಾಚನ ಕೇನಚಿತ್ ॥೪೪॥
ಸತ್ಯಮಸ್ತ್ವಥವಾಸತ್ಯಂ ಪದಾರ್ಥಪ್ರತಿಭಾಸನಮ್ ।
ತಾವನ್ಮಾತ್ರಂ ಮನೋ ವಿದ್ಧಿ ತದ್ಬ್ರಹ್ಮೈವ ಪಿತಾಮಹಃ ॥೪೫॥
ಆತಿವಾಹಿಕದೇಹಾತ್ಮಾ ಮನಇತ್ಯಭಿಧೀಯತೇ ।
ಆಧಿಭೌತಿಕಬುದ್ಧಿಂ ತು ಸಆಧತ್ತೇ ಚಿರಸ್ಥಿತೇಃ ॥೪೬॥
ಅವಿದ್ಯಾ ಸಂಸೃತಿಶ್ಚಿತ್ತಂ ಮನೋ ಬನ್ಧೋ ಮಲಸ್ತಮಃ ।
ಇತಿ ಪರ್ಯಾಯನಾಮಾನಿ ದೃಶ್ಯಸ್ಯ ವಿದುರುತ್ತಮಾಃ ॥೪೭॥

ಹೀಗೆ ವಿಷಯಸ್ಫುರಣೆ ಯಾವುದುಂಟೋ, ಅದೇ ಮನಸ್ಸೆಂದು ಹೇಳಲ್ಪಡುವುದು ; ಇದಕ್ಕಿಂತ ಬೇರೆಯಾಗಿ ಮನಸ್ಸೆಂಬ ಪದಾರ್ಥವಾವುದೂ ಎಂದಿಗೂ ಇರುವುದಿಲ್ಲ ॥೪೦॥

ಸಂಕಲ್ಪವನ್ನೇ ಮನಸ್ಸೆಂದು ತಿಳಿ ; ದ್ರವತ್ವಕ್ಕಿಂತ ಜಲವು ಭೇದಿಸದಿರುವಂತೆಯೂ, ಚಲನಕ್ಕಿಂತ ವಾಯುವು ಭೇದಿಸದಿರುವಂತೆಯೂ, ಆ ಮನಸ್ಸು ಸಂಕಲ್ಪಕ್ಕಿಂತ ಬೇರೆಯಾಗಿರುವುದಿಲ್ಲ ॥೪೩॥

ಅಯ್ಯಾ! ರಾಮ ! ಯಾವ ವಿಷಯದಲ್ಲಿ ಯಾವವಿಧವಾಗಿ ಸಂಕಲ್ಪವಾಗುವುದೋ ಆ ವಿಷಯದಲ್ಲಿ ಆ ವಿಧವಾಗಿ ಮನಸ್ಸಿರುವುದು. ಅದಕಾರಣ, ಸಂಕಲ್ಪ ಮನಸ್ಸುಗಳು ಎಂದಿಗೂ ಯಾವಕಾರಣದಿಂದಲೂ ಬೇರೆಬೇರೆಯಾಗುವುದಿಲ್ಲ ॥೪೪॥

ಈಗ ಮತ್ತೊಂದುವಿಧವಾದ ಶಂಕೆಯುಂಟಾಗಬಹುದು. ಚೈತನ್ಯಯುಕ್ತವಾದ ವೃತ್ತಿಯೇ ಪದಾರ್ಥಪ್ರತಿಭಾಸನವೆಂದು ಹೇಳಲ್ಪಡುವುದಲ್ಲದೆ, ಚೈತನ್ಯವಿಯುಕ್ತವಾದುದಲ್ಲ. ಹೀಗಿರುವಾಗ ಆ ಚೈತನ್ಯವು ಸತ್ಯವಾಗಿರಲು ತದ್ಯುಕ್ತವಾದ ಮನಸ್ಸು ಅಸತ್ಯವಾಗುವುದು ಹೇಗೆ?—ಎಂದು ಶಂಕೆಯುಂಟಾಗಬಹುದು. ಆದರೆ, ಈ ಪದಾರ್ಥಸ್ಫುರಣೆಯು — ಅಸತ್ಯವಿಷಯಾಕಾರವಾಗಿರುವುದರಿಂದ ಅಸತ್ಯವಾಗಿಯಾದರೂ—ಸತ್ಯವಾದ ಚೈತನ್ಯವಿಶಿಷ್ಟವಾಗಿರುವುದರಿಂದ ಸತ್ಯವಾಗಿಯಾದರೂ ಇರಲಿ ; ಆಪದಾರ್ಥಸ್ಫುರಣೆಯೆಂಬುದಾವುದುಂಟೋ, ತಾವನ್ಮಾತ್ರವನ್ನೇ ಮನಸ್ಸೆಂದು ತಿಳಿ ; ಅದೇ ಆ ಚತುರ್ಮುಖಬ್ರಹ್ಮನು॥೪೫॥

ಹೀಗೆ ಆ ಚತುರ್ಮುಖನಿಗೆ ಸರ್ವಸ್ವರೂಪವಾದ ಮನಸ್ಸೇ ದೇಹವಾಗಿರುವಪಕ್ಷದಲ್ಲಿ, ಅವನು ಇತರವಾದ ಪದಾರ್ಥಗಳನ್ನು ಸೃಷ್ಟಿಮಾಡುವುದು ಏನು?—ಎಂದು ಕೇಳಿದರೆ, ಅವನು ಆತಿವಾಹಿಕದೇಹಸ್ವರೂಪನಾಗಿರುವಾಗ ಮನಸ್ಸೆಂದು ಹೇಳಲ್ಪಡುವನು; ಅವನೇ ಚಿರಕಾಲ ವಾಸನೆಯುಂಟಾಗಿ ಬಿಟ್ಟಮೇಲೆ ಆಧಿಭೌತಿಕವೆಂಬ ಜ್ಞಾನವನ್ನು ಹೊಂದುತ್ತಾನೆ. ಈ ಜ್ಞಾನವೇ ಅವನು ಸೃಷ್ಟಿಮಾಡುವುದೆಂದು ತಿಳಿಯಬೇಕು ॥೪೬॥

ಅವಿದ್ಯಾ ಸಂಸೃತಿ ಚಿತ್ತ ಮನಸ್ಸು ಬಂಧ ಮಲ ತಮಸ್ಸು—ಇತ್ಯಾದಿಗಳೆಲ್ಲವೂ ಈ ದೃಶ್ಯಕ್ಕೆ ಪರ್ಯಾಯಪದಗಳೆಂದು ಪ್ರಾಜ್ಞರು ತಿಳಿದಿರುವರು ॥೪೭॥

ನ ಹಿ ದೃಶ್ಯಾದೃತೇ ಕಿಂಚಿತ್ ಮನಸೋ ರೂಪಮಸ್ತಿ ಹಿ ।
ದೃಶ್ಯಂ ಚೋತ್ಪನ್ನಮೇವೈತತ್ ನೇತಿ ವಕ್ಷ್ಯಾಮ್ಯಹಂ ಪುನಃ ॥೪೮॥
ಯಥಾ ಕಮಲಬೀಜಾನ್ತಃ ಸ್ಥಿತಾ ಕಮಲವಲ್ಲರೀ ।
ಮಹಾಚಿತ್ಪರಮಾಣ್ವನ್ತಃ ತಥಾ ದೃಶ್ಯಂ ಜಗತ್ ಸ್ಥಿತಮ್ ॥೪೯॥
ಪ್ರಕಾಶಸ್ಯ ಯಥಾಲೋಕೋ ಯಥಾ ವಾತಸ್ಯ ಚಾಪಲಮ್ ।
ಯಥಾ ದ್ರವತ್ವಂ ಪಯಸಿ ದೃಶ್ಯತ್ವಂ ದ್ರಷ್ಟರೀದೃಶಮ್ ॥೫೦॥
ಅಙ್ಗದತ್ವಂ ಯಥಾ ಹೇಮ್ನಿ ಮೃಗನದ್ಯಾಂ ಯಥಾ ಜಲಮ್ ।
ಭಿತ್ತಿರ್ಯಥಾ ಸ್ವಪ್ನಪುರೇ ತಥಾ ದ್ರಷ್ಟರಿ ದೃಶ್ಯಧೀಃ ॥೫೧॥
ಏವಂ ದ್ರಷ್ಟರಿ ದೃಶ್ಯತ್ವಂ ಅನನ್ಯದಿವ ಯತ್ ಸ್ಥಿತಮ್ ।
ತದಪ್ಯುನ್ಮಾರ್ಜಯಾಮ್ಯಾಶು ತ್ವಚ್ಚಿತ್ತಾದರ್ಶತೋ ಮಲಮ್ ॥೫೨॥
ಯದ್ದ್ರಷ್ಟುರಸ್ಯಾದ್ರಷ್ಟೃತ್ವಂ ದೃಶ್ಯಾಭಾವೇ ಭವೇದ್ಬಲಾತ್ ।
ತದ್ವಿದ್ಧಿ ಕೇವಲೀಭಾವಂ ತತ ಏವಾಸತಃ ಸತಃ ॥೫೩॥
ತತ್ತ್ವಮುಪಗತೇ ಭಾವೇ ರಾಗದ್ವೇಷಾದಿವಾಸನಾಃ ।

ಈ ದೃಶ್ಯಹೊರತು ಮನಸ್ಸಿಗೆ ಬೇರೆಯಾದ ಯಾವ ರೂಪವೂ ಇಲ್ಲ. ಆದರೆ, ಈ ದೃಶ್ಯವು ಉತ್ಪತ್ತಿಹೊಂದಿಯೇ ಇಲ್ಲವೆಂದು ನಾನು ಹೇಳುವೆನು ॥೪೮॥

ಕಮಲಬೀಜದೊಳಗೆ ಕಮಲಲತೆಯು ಹೇಗಿರುವುದೋ, ಹಾಗೆ ಅಖಂಡಚೈತನ್ಯವೆಂಬ ಪರಮಾಣುವಿನೊಳಗೆ ಈ ದೃಶ್ಯವಾದ ಜಗತ್ತಿರುವುದು ॥೪೯॥

ತೇಜಸ್ಸಿನಲ್ಲಿ ಬೆಳಕು ಹೇಗಿದೆಯೋ, ಗಾಳಿಯಲ್ಲಿ ಚಲನೆ ಹೇಗಿದೆಯೋ, ನೀರಿನಲ್ಲಿ ದ್ರವತ್ವವು ಹೇಗಿದೆಯೋ, ದ್ರಷ್ಟೃವಿನಲ್ಲಿ ದೃಶ್ಯತ್ವವೂ ಈ ರೀತಿಯಾಗಿರುವುದು ॥೫೦॥

ಚಿನ್ನದಲ್ಲಿ ಅಂಗದತ್ವವು ಹೇಗಿರುವುದೋ, ಮೃಗತೃಷ್ಣಿಕೆಯಲ್ಲಿ ಜಲವು ಹೇಗಿರುವುದೋ, ಸ್ವಪ್ನದಲ್ಲಿ ಕಂಡ ಪಟ್ಟಣದೊಳಗೆ ಗೋಡೆ ಹೇಗಿರುವುದೋ, ದ್ರಷ್ಟೃವಿನಲ್ಲಿ ದೃಶ್ಯಜ್ಞಾನವು ಹಾಗಿರುವುದು ॥೫೧॥

ಹೀಗೆ ದೃಷ್ಟೃವಿನಲ್ಲಿ ದೃಶ್ಯತ್ವವು ಬೇರೆಯಲ್ಲದಂತೆ ಯಾವುದಿರುವುದೋ, ಆ ಮಲವನ್ನೂ ಕೂಡ ನಿನ್ನ ಮನಸ್ಸೆಂಬ ಕನ್ನಡಿಯ ದೆಸೆಯಿಂದ ಬೇಗನೆ ತೊಡೆದುಬಿಡುವೆನು॥೫೨॥

ದೃಶ್ಯವೇ ಇಲ್ಲದಿದ್ದಮೇಲೆ ಬಲಾತ್ಕಾರಪೂರ್ವಕವಾಗಿ ಈ ದ್ರಷ್ಟೃವಿಗೆ ದ್ರಷ್ಟೃತ್ವವೇ ಇಲ್ಲದಂತಾಗುವುದಲ್ಲವೆ ! ಹೀಗೆ ಅಸತ್ಯವಾದ ದೃಶ್ಯದದೆಸೆಯಿಂದ ಈ ಸತ್ಪದಾರ್ಥವಾದ ಚೈತನ್ಯಕ್ಕೆ ಅದೇ ಕೇವಲತ್ವವೆಂದು ತಿಳಿ (೧) ॥೫೩॥

ಹೀಗೆ ಮನಸ್ಸು ಕೈವಲ್ಯಜ್ಞಾನದಿಂದ ಆ ಅವಸ್ಥೆಯನ್ನು ಹೊಂದಲಾಗಿ, ಸ್ತಬ್ಧವಾದ

---

(೧) ದೃಶ್ಯವೆಂದರೆ ನೋಡಲ್ಪಡತಕ್ಕಪದಾರ್ಥವು; ದ್ರಷ್ಟೃವೆಂದರೆ ನೋಡತಕ್ಕವನು. ನೋಡಲ್ಪಡಬೇಕಾದುದೇ ಇಲ್ಲದಿದ್ದರೆ, ನೋಡತಕ್ಕವನೆಂದು ಹೇಳುವುದು ಅಸಂಭವವಾಗುವುದಷ್ಟೆ! ಹೀಗೆ ಈದೃಶ್ಯವು ಅಸತ್ಯವಾಗಿಬಿಟ್ಟು ಚೈತನ್ಯದಲ್ಲಿ ದ್ರಷ್ಟೃತ್ವವೂ ಇಲ್ಲದಿರುವಿಕೆಯೇ (ಅಂದರೆ ಯಾವ ಗುಣಧರ್ಮಗಳೂ ಇಲ್ಲದಿರುವಿಕೆ)ಕೈವಲ್ಯವೆಂದು ಭಾವವು.

ಶಾಮ್ಯನ್ತ್ಯಸ್ಪನ್ದಿತೇ ವಾತೇ ಸ್ಪನ್ದನಕ್ಷುಬ್ಧತಾ ಯಥಾ ||೫೪||
ಅಸಮ್ಭವತಿ ಸರ್ವಸ್ಮಿನ್ ದಿಗ್ಭೂವ್ಯೋಮಾಕಾಶರೂಪಿಣಿ |
ಪ್ರಕಾಶ್ಯೇ ಯಾದೃಶಂ ರೂಪಂ ಪ್ರಕಾಶಸ್ಯಾಮಲಂ ಭವೇತ್ ||೫೫||
ತ್ರಿಜಗತ್ ತ್ವಮಹಂ ಚೇತಿ ದೃಶ್ಯೇಽಸತ್ತಾಮುಪಾಗತೇ |
ದ್ರಷ್ಟುಃ ಸ್ಯಾತ್ ಕೇವಲೀಭಾವಃ ತಾದೃಶೋ ವಿಮಲಾತ್ಮನಃ ||೫೬||
ಅನಾಪ್ತಾಖಿಲಶೈಲಾದಿಪ್ರತಿಬಿಮ್ಬೇ ಹಿ ಯಾದೃಶೀ |
ಸ್ಯಾದ್ದರ್ಪಣೇ ದರ್ಪಣತಾ ಕೇವಲಾತ್ಮಸ್ವರೂಪಿಣೀ ||೫೭||
ಅಹಂ ತ್ವಂ ಜಗದಿತ್ಯಾದೌ ಪ್ರಶಾನ್ತೇ ದೃಶ್ಯಸಮ್ಭ್ರಮೇ |
ಸ್ಯಾತ್ ತಾದೃಶೀ ಕೇವಲತಾ ಸ್ಥಿತೇ ದ್ರಷ್ಟರ್ಯವೀಕ್ಷಣೇ ||೫೮||

ಶ್ರೀರಾಮ ಉವಾಚ.

ಸಚ್ಚೇನ್ನ ಶಾಮ್ಯತ್ಯೇವೇದಂ ನಾಭಾವೋ ವಿದ್ಯತೇ ಸತಃ |
ಅಸತ್ತಾಂ ಚ ನ ವಿದ್ಮೋಽಸ್ಮಿನ್ ದೃಶ್ಯೇ ದೋಷಪ್ರದಾಯಿನಿ ||೫೯||

ವಾಯುವಿನಲ್ಲಿ ಸ್ಪಂದನ ಕ್ಷೋಭೆ ಮುಂತಾದುವುಗಳು ಅಡಗುವಂತೆ, ರಾಗದ್ವೇಷಾದಿ ವಾಸನೆಗಳು ಶಾಂತವಾಗಿಬಿಡುವುವು ||೫೪||

ಈಗ ಪ್ರಪಂಚದಲ್ಲಿ ದಿಕ್ಕು ಭೂಮಿ ಆಕಾಶ ಮುಂತಾದುವು ಪ್ರಕಾಶಿಸಲ್ಪಡತಕ್ಕುವಾಗಿರುವುವಲ್ಲವೆ! ಇವೆಲ್ಲವೂ ನಿಶ್ಶೇಷವಾಗಿ ಇಲ್ಲದಿದ್ದರೆ--ಪ್ರಕಾಶಕ್ಕೆ ನಿರ್ಮಲವಾದ ಯಾವರೂಪವಿರುತ್ತದೆಯೋ, ಲೋಕತ್ರಯ ನಾನು ನೀನು—ಎಂಬ ಈ ದೃಶ್ಯವು ಅಭಾವವನ್ನು ಹೊಂದಿರಲಾಗಿ—ನಿರ್ಮಲಾತ್ಮಕನಾದ ದ್ರಷ್ಟೃವಿಗೆ ಅಂತಹ ಕೇವಲತ್ವವಿರುವುದು ||೫೫—೫೬||

ಮತ್ತು ಪ್ರಪಂಚದಲ್ಲಿ ಕನ್ನಡಿಯಿರುವುದಲ್ಲವೆ! ಅದರಲ್ಲಿ ಪರ್ವತವೊದಲಾದ ಸಮಸ್ತಪದಾರ್ಥಗಳೂ ಪ್ರತಿಫಲಿಸದಿದ್ದರೂ,—ಅದಕ್ಕೆ ಕೇವಲಸ್ವಸ್ವರೂಪಾವಸ್ಥಾನದಿಂದಲೇ ದರ್ಪಣತ್ವವು ಹೇಗಿರುವುದೋ, ಹಾಗೆಯೇ ನಾನು ನೀನು ಜಗತ್ತು ಇತ್ಯಾದಿರೂಪವಾದ ದೃಶ್ಯಸಂಭ್ರಮವು ಶಾಂತವಾಗಲಾಗಿ, ದರ್ಶನವ್ಯಾಪಾರಶೂನ್ಯನಾದ ದ್ರಷ್ಟೃವಿನಲ್ಲಿ ಕೇವಲತ್ವವು ಇರುವುದು ||೫೭—೫೮||

ಬಳಿಕ ಶ್ರೀರಾಮನು ಹೇಳುವನು.

ಪೂಜ್ಯರೆ! ತಾವು ಅಪ್ಪಣೆಕೊಟ್ಟಮೇರೆಗೆ ಈ ದೃಶ್ಯವು ಅಸತ್ತಾಗಿದ್ದಪಕ್ಷದಲ್ಲಿ, ಕೈವಲ್ಯವು ಸಂಭವಿಸಬಹುದು; ಆದರೆ, ಈ ದೃಶ್ಯವು ಒಂದುವೇಳೆ ಸತ್ತಾಗಿಯೂ ಮತ್ತೊಂದುವೇಳೆ ಅಸತ್ತಾಗಿಯೂ ತೋರುತಿರುವುದು. ಪ್ರಪಂಚದಲ್ಲಿ ಸತ್ಯವಾದುದಕ್ಕೆಂದಿಗೂ ನಾಶವಿಲ್ಲದಕಾರಣ, ಇದುಸತ್ಯವಾಗಿದ್ದಪಕ್ಷದಲ್ಲಿ ಎಂದಿಗೂ ನಾಶಹೊಂದದೆಯೇ ಇರಬೇಕಾಗುವುದು. ಕೇವಲ ದೋಷಪ್ರದನಾದ ಇದು ಅತ್ಯಂತವಾಗಿ ಅಸತ್ತೆಂದೂ ನಮಗೆ ಅನುಭವವುಂಟಾಗುವುದಿಲ್ಲ ||೫೯||

ತಸ್ಮಾತ್ ಕಥಮಿಯಂ ಶಾಮ್ಯೇತ್ ಬ್ರಹ್ಮನ್ ದೃಶ್ಯವಿಷೂಚಿಕಾ |
ಮನೋಭವಭ್ರಮಕರೀ ದುಃಖಸನ್ತತಿದಾಯಿನೀ ||೬೦||

ಶ್ರೀವಸಿಷ್ಠ ಉವಾಚ.

ಅಸ್ಯ ದೃಶ್ಯಪಿಶಾಚಸ್ಯ ಶಾನ್ತ್ಯೈ ಮನ್ತ್ರಮಿಮಂ ಶೃಣು|
ರಾಮಾತ್ಯನ್ತಮಯಂ ಯೇನ ಮೃತಿಮೇಷ್ಯತಿ ಸಂಕ್ಷ್ಯತಿ ||೬೧||
ಯದಸ್ತಿ ತಸ್ಯ ನಾಶೋಽಸ್ತಿ ನ ಕದಾಚನ ರಾಘವ |
ತಸ್ಮಾತ್ ತನ್ನಷ್ಟಮಪ್ಯನ್ತಃ ಬೀಜಭೂತಂ ಭವೇದ್ಧೃದಿ ||೬೨||
ಸ್ಮೃತಿಬೀಜಾಚ್ಚಿದಾಕಾಶೇ ಪುನರುದ್ಭೂಯ ದೃಶ್ಯಧೀಃ |
ಲೋಕಶೈಲಾಮ್ಬರಾಕಾರಂ ದೋಷಂ ಪ್ರತನುತೇಽತನುಮ್ ||೬೩||
ಇತ್ಯನಿರ್ಮೋಕ್ಷದೋಷಃ ಸ್ಯಾತ್ ನ ಚ ತಸ್ಯೇಹ ಸಮ್ಭವಃ |
ಯಸ್ಮಾದ್ದೇವರ್ಷಿಮುನಯೋ ದೃಶ್ಯನ್ತೇ ಮುಕ್ತಿಭಾಜನಮ್ ||೬೪||
ಯದಿ ಸ್ಯಾಜ್ಜಗದಾದೀದಂ ತಸ್ಮಾನ್ಮೋಕ್ಷೋ ನ ಕಸ್ಯ ಚಿತ್ |
ಬಾಹ್ಯಸ್ಥಮಸ್ತು ಹೃತ್ಸ್ಥಂ ವಾ ದೃಶ್ಯಂ ನಾಶಾಯ ಕೇವಲಮ್ ||೬೫||

ಆದುದರಿಂದ, ಎಲೈ ಬ್ರಾಹ್ಮಣೋತ್ತಮರೆ! ಮನಸ್ಸಿಗೆ ಜನ್ಮಾದಿ ಭ್ರಾಂತಿಯುಂಟು ಮಾಡುತ ದುಃಖಸಮುದಾಯವನ್ನು ಕೊಡುವ ಈ ದೃಶ್ಯವೆಂಬ ವಿಷೂಚಿಕೆಯು ಹೇಗೆ ಶಾಂತಿಹೊಂದುವುದು?—ಅದನ್ನು ಅಪ್ಪಣೆಕೊಡಬೇಕು ||೬೦||

ಶ್ರೀವಸಿಷ್ಠರು ಉತ್ತರಹೇಳುವರು.

ಅಯ್ಯಾ! ರಾಮ! ಈ ದೃಶ್ಯವೆಂಬ ಪಿಶಾಚವು ಶಾಂತಿಹೊಂದುವುದಕ್ಕೆ ಈ ಮಂತ್ರವನ್ನು ಕೇಳುವವನಾಗು. ಇದರಿಂದ ಈ ಪಿಶಾಚವು ಅತ್ಯಂತಿಕವಾಗಿ ಲಯಹೊಂದಿ ಕಣ್ಣಿಗೆ ಕಾಣದಂತಾಗುವುದು ||೬೧||

ಅಯ್ಯಾ! ರಾಘವ! ಯಾವುದು ವಾಸ್ತವ್ಯವಾಗಿ ಸತ್ಯವಾದುದೋ, ಅದಕ್ಕೆಂದಿಗೂ ನಾಶವಿಲ್ಲ. ಆದಕಾರಣ, ಒಂದುವೇಳೆ ಅದು ನಮಗೆ ಈಗ ಕಣ್ಣಿಗೆ ಕಾಣದಿದ್ದರೂ ಹೃದಯದೊಳಗೆ ಬೀಜರೂಪವಾಗಿ ಇದ್ದೇ ಇರುವುದು ||೬೨||

ಹೀಗೆ ವಾಸನಾಬೀಜವಿರುವುದರಿಂದ, ಜ್ಞಾನಾಕಾಶದಲ್ಲಿ ಮತ್ತೆ ದೃಶ್ಯಬುದ್ಧಿಯುದಯಿಸಿ, ಲೋಕಶೈಲ ಆಕಾಶ ಇತ್ಯಾದ್ಯಾಕಾರವಾದ ಅಧಿಕವಾದದೋಷವನ್ನುಂಟುಮಾಡುವುದು||

ಹೀಗೆಯೇ ನಡೆಯುತಬಂದರೆ ಕೊನೆಗೆ ಮೋಕ್ಷವೇ ಇಲ್ಲವೆಂಬ ದೋಷವು ಸಂಭವಿಸುವುದು. ಆ ದೋಷಸಂಭವವೆಂದಿಗೂ ಯುಕ್ತವಲ್ಲ. ಏತಕ್ಕೆಂದರೆ—ದೇವತೆಗಳೂ ಋಷಿಗಳೂ ಮುನಿಗಳೂ ಅಸಂಖ್ಯಾಕರಾಗಿ ಮುಕ್ತಿಪಾತ್ರರಾಗಿರುವವರು ನಮ್ಮ ಅನುಭವಕ್ಕೆ ಬಂದಿರುವರಲ್ಲವೆ! ಆದುದರಿಂದ ಮೋಕ್ಷವೇ ಇಲ್ಲವೆಂಬ ಮಾತು ಎಂದಿಗೂ ಅಸಂಭವವೇ ಸರಿ ||೬೪||

ಹೀಗೆ ಈ ಜಗದಾದಿಪದಾರ್ಥವು ಸತ್ಯವಾಗಿದ್ದಪಕ್ಷದಲ್ಲಿ ಒಬ್ಬರಿಗೂ ಮೋಕ್ಷವೇ ಇಲ್ಲವಾಗುವುದು. ಆದಕಾರಣ, ಈ ದೃಶ್ಯವು ಬಹಿಃಸ್ಥಿತವಾಗಿದ್ದರೂ—ಅಥವಾ ಅಂತಃಸ್ಥಿತವಾಗಿದ್ದರೂ, ಇದು ಕೇವಲ ನಾಶಹೇತುವಾದುದೇ ಸರಿ ||೬೫||

ತಸ್ಮಾದಿಮಾಂ ಪ್ರತಿಜ್ಞಾಂ ತ್ವಂ ಶೃಣು ರಾಮಾತಿಭೀಷಣಾಮ್ |
ಯಾಮುತ್ತರೇಣ ಗ್ರನ್ಥೇನ ನೂನಂ ತ್ವಮವಬುಧ್ಯಸೇ ||೬೬||
ಅಯಮಾಕಾಶಭೂತಾದಿರೂಪೋಽಹಂ ಚೇತಿ ಲಕ್ಷಿತಃ |
ಜಗಚ್ಛಬ್ದಸ್ಯ ನಾಮಾರ್ಥೋ ನನು ನಾಸ್ತ್ಯೇವ ಕಶ್ಚನ ||೬೭||
ಯದಿದಂ ದೃಶ್ಯತೇ ಕಿಂಚಿತ್ ದೃಶ್ಯಜಾತಂ ಪುರೋಗತಮ್ |
ಪರಬ್ರಹ್ಮೈವ ತತ್ ಸರ್ವಂ ಅಜರಾಮರಮವ್ಯಯಮ್ ||೬೮||
ಪೂರ್ಣೇ ಪೂರ್ಣಂ ಪ್ರಸರತಿ ಶಾನ್ತೇ ಶಾನ್ತಂ ವ್ಯವಸ್ಥಿತಮ್ |
ವ್ಯೋಮನ್ಯೇವೋದಿತಂ ವ್ಯೋಮ ಬ್ರಹ್ಮಣಿ ಬ್ರಹ್ಮ ತಿಷ್ಠತಿ ||೬೯||
ನ ದೃಶ್ಯಮಸ್ತಿ ಸದ್ರೂಪಂ ನ ದ್ರಷ್ಟಾ ನ ಚ ದರ್ಶನಮ್ |
ನ ಶೂನ್ಯಂ ನ ಜಡಂ ನೋ ಚಿತ್ ಶಾನ್ತಮೇವೇದಮಾತತಮ್ ||೭೦||

ಶ್ರೀರಾಮ ಉವಾಚ.

ವನ್ಧ್ಯಾಪುತ್ರೇಣ ಪಿಷ್ಟೋದ್ರಿಃ ಶಶಶೃಙ್ಗಂ ಪ್ರಗಾಯತಿ |
ಪ್ರಸಾರ್ಯ ಭುಜಸಮ್ಘಾತಂ ಶಿಲಾ ನೃತ್ಯತಿ ತಾಣ್ಡವಮ್ ||೭೧||

ಆದುಕಾರಣ, ಅಯ್ಯಾ! ರಾಮ! ವಿಷಯಾಸಕ್ತರಿಗೆ ಅತಿ ಭಯಂಕರವಾದ ಈ ಪ್ರತಿಜ್ಞೆಯನ್ನು ನೀನು ಕೇಳುವವನಾಗು. ಮುಂದಣ ಗ್ರಂಥಸಮುದಾಯದಿಂದ ಇದನ್ನು ನೀನು ನಿಶ್ಚಯವಾಗಿ ತಿಳಿದುಕೊಳ್ಳುವೆ ||೬೬||

ಆಕಾಶಮುಂತಾದ ಪಂಚಭೂತಸ್ವರೂಪವಾದ ಲೋಕ—ನಾನು—ನೀನು—ಇತ್ಯಾದಿ ರೂಪವಾದ ಈ ಜಗಚ್ಛಬ್ದವಾಚ್ಯವಾದುದೊಂದೂ ಇಲ್ಲವೇ ಇಲ್ಲ ||೬೭||

ನಮ್ಮ ಕಣ್ಣೆದುರಿಗಿರುವ ಈ ಯಾವಯಾವ ದೃಶ್ಯಜಾತವು ಕಾಣಿಸುವುದೋ, ಅದೆಲ್ಲವೂ—ಜರಾಮರಣವರ್ಜಿತವಾದ ಶಾಶ್ವತವಾದ ಆ ಪರಬ್ರಹ್ಮವೇ ||೬೮||

ಯಾವನು ಪ್ರತ್ಯಗ್ದೃಷ್ಟಿಯಾಗಿರುವನೋ, ಅವನಲ್ಲಿ ಇದು ಪರಿಪೂರ್ಣವಾಗಿಯೇ ಪ್ರಸರಿಸುವುದು; ಯಾವನು ಇನ್ನೂ ಪರಿಪೂರ್ಣನಾಗದೆ ಕೇವಲಶಾಂತನಾಗಿರುವನೋ, ಅವನ ವಿಷಯದಲ್ಲಿ ಇದು ದ್ವೈತವಿಶಿಷ್ಟವಾಗಿ ಶಾಂತವಾಗಿರುವುದು. ಭೂಮಿಯಮೇಲೆ ಒಂದು ಗಡಿಗೆಯನ್ನಿಟ್ಟರೆ, ಅದರಲ್ಲಿ ಆಕಾಶವಿರುವುದಷ್ಟೆ! ಅದು ಸುತ್ತಲೂ ಇರುವ ಮಹಾಕಾಶದೊಳಗೆ ಸೇರಿದಂತೆಯೇ ಇರುವುದಲ್ಲವೆ! ಹೀಗೆ ಆಕಾಶದೊಳಗೇ ಆಕಾಶವಿರುವಂತೆ, ಬ್ರಹ್ಮನೊಳಗೇ ಬ್ರಹ್ಮನಿರುವನು ||೬೯||

ದೃಶ್ಯವು ಸದ್ರೂಪವಾಗಿಲ್ಲ; ಇದು ಶೂನ್ಯವೂ ಅಲ್ಲ; ಜಡವೂ ಅಲ್ಲ; ಬುದ್ಧಿಯಲ್ಲಿ ಪ್ರತಿಬಿಂಬಿಸಿರುವ ಚೈತನ್ಯವೂ ಅಲ್ಲ. ಸರ್ವಧರ್ಮಗಳಿಂದಲೂ ಸರ್ವಗುಣಗಳಿಂದಲೂ ಶೂನ್ಯವಾದ ಈ ಬ್ರಹ್ಮವೊಂದೇ ವ್ಯಾಪಿಸಿಕೊಂಡಿರುವುದು ||೭೦||

ಹೀಗೆ ವಸಿಷ್ಠರು ಹೇಳಿದ ಮಾತಿನಲ್ಲಿ ಪಾಮರರಿಗೆ ನಂಬುಗೆಯುಂಟಾಗಲಾರದೆಂದು ಯೋಚಿಸಿ, ಶ್ರೀರಾಮನು ಮತ್ತೆ ಹೇಳುವನು.

ಸರ್ವಜ್ಞರಾದ ಮುನೀಶ್ವರರೆ! ತಾವು ಅಪ್ಪಣೆಕೊಡಿಸಿರುವ ಈ ಮಾತು,ಬಂಜೆಯ ಮಗನು ಬೆಟ್ಟವನ್ನು ಪುಡಿಮಾಡಿದನೆಂಬಂತೆಯೂ, ಮೊಲದ ಕೊಂಬು ಹಾಡುವುದೆಂಬಂತೆ

ಸ್ರವನ್ತಿ ಸಿಕತಾಸ್ತೈಲಂ ಪಠನ್ತ್ಯುಪಲಪುತ್ರಿಕಾಃ |
ಗರ್ಜನ್ತಿ ಚಿತ್ರಜಲದಾಃ ಇತೀವೇದಂ ವಚಃ ಪ್ರಭೋ ||೩೦||
ಜರಾಮರಣದುಃಖಾದಿ ಶೈಲಾಕಾಶಮಯಂ ಜಗತ್ |
ನಾಸ್ತೀತಿ ಕಿಮಿದಂ ನಾಮ ಭವತಾಪಿ ಮನೋಚ್ಯತೇ ||೩೩||
ಯಥೇದಂ ನ ಸ್ಥಿತಂ ವಿಶ್ವಂ ನೋತ್ಪನ್ನಂ ನ ಚ ವಿದ್ಯತೇ |
ತಥಾ ಕಥಯ ಮೇ ಬ್ರಹ್ಮನ್ ಯೇನೈತನ್ನಿಶ್ಚಿತಂ ಭವೇತ್ ||೩೪||

ಶ್ರೀವಸಿಷ್ಠ ಉವಾಚ.

ನಾಸಮನ್ವಿತವಾಗಸ್ಮಿ ಶೃಣು ರಾಘವ ಕಥ್ಯತೇ |
ಯಥೇದಮಸದಾಭಾತಿ ವನ್ಧ್ಯಾಪುತ್ರಇವಾರವೀ ||೩೫||
ಇದಮಾದಾವನುತ್ಪನ್ನಂ ಸರ್ಗಾದೌ ತೇನ ನಾಸ್ತ್ಯಲಮ್ |
ಇದಂ ಹಿ ಮನಸೋ ಭಾತಿ ಸ್ವಪ್ನಾದೌ ಪತ್ತನಂ ಯಥಾ ||೩೬||
ಮನಏವ ಚ ಸರ್ಗಾದೌ ಅನುತ್ಪನ್ನಮಸದ್ವಪುಃ |
ತದೇತಚ್ಛೃಣು ವಕ್ಷ್ಯಾಮಿ ಯಥೈವಮನುಭೂಯತೇ ||೩೭||

ಯೂ, ದೊಡ್ಡ ಬಂಡೆಯು ಕೈಬೀಸಿಕೊಂಡು ನರ್ತನಮಾಡುವುದೆಂಬಂತೆಯೂ, ಮಳಲು ಎಣ್ಣೆಯನ್ನು ಪ್ರಸವಿಸುತ್ತದೆಂಬಂತೆಯೂ, ಕಲ್ಲುಬೊಂಬೆಗಳು ಓದುವುವೆಂಬಂತೆಯೂ, ಚಿತ್ರದಲ್ಲಿ ಬರೆದ ಮೇಘಗಳು ಗರ್ಜಿಸುವುವೆಂಬಂತೆಯೂ ಇರುವುದು ॥೨೧-೩೦॥

ಜರಾ ಮರಣ ದುಃಖ ಮುಂತಾದುವೂ ಶೈಲಾಕಾಶಾದಿಮಯವಾದ ಜಗತ್ತೂ ಇಲ್ಲವೆಂದು ತಾವೂ ಕೂಡ ನನಗೆ ಹೇಳುವಿರಲ್ಲ! ಇದೇನು?॥೩೩॥

ಆದುದರಿಂದ, ಎಲೈ ಬ್ರಾಹ್ಮಣವರ್ಯರೆ! ಈ ಪ್ರಪಂಚವು ಸತ್ಯವಲ್ಲದಿರುವುದೂ ಉತ್ಪನ್ನವಾಗದಿರುವುದೂ ಇದು ಇಲ್ಲದಿರುವುದೂ ಹೇಗೋ—ಆ ವಿಷಯವನ್ನು ನನಗೆ ಸರಿಯಾಗಿ ನಿಶ್ಚಯವಾಗುವಂತೆ ಅಪ್ಪಣೆಕೊಡಿಸಿರಿ ॥೩೪॥

ಇದಕ್ಕೆ ವಸಿಷ್ಠಮಹರ್ಷಿಗಳು ಉತ್ತರಕೊಡುವರು.

ಅಯ್ಯಾ! ರಾಮ! ನೀನು ಹೇಳಿದುದನ್ನು ನೋಡಿದರೆ, ನಾನು ಅಸಂಬದ್ಧವಾಗಿ ಮಾತನಾಡತಕ್ಕವನೆಂದು ನೀನು ತಿಳಿದಿರುವಹಾಗಿದೆ. ನಾನೆಂದಿಗೂ ಅಸಮಂಜಸವಾದ ಮಾತಾಡತಕ್ಕವನಲ್ಲ. ಈಗ ನಾನು ಹೇಳುವೆನು; ನೀನು ಕೇಳು. ಅಸತ್ಯವಾಗಿದ್ದರೂ ಈ ಪ್ರಪಂಚವು, ಬಂಜೆಯ ಮಗನು ಕೂಗಿದಂತೆ ಪ್ರಕಾಶಿಸುತ್ತಿರುವ ವಿಷಯವನ್ನು ತಿಳಿಯಪಡಿಸುವೆನು ॥೩೫॥

ಸೃಷ್ಟ್ಯಾದಿಯಲ್ಲಿ ಈ ಪ್ರಪಂಚವು ಹುಟ್ಟಿರಲಿಲ್ಲ; ಅದುಕಾರಣ, ಇದು ಆತ್ಯಂತಿಕವಾಗಿ ಇಲ್ಲವೇ ಇಲ್ಲ. ಆದರೆ, ಸ್ವಪ್ನ ಮುಂತಾದವುಗಳಲ್ಲಿ ಪಟ್ಟಣವು ಕಾಣುವಂತೆ—ಮನಸ್ಸಿಗೆ ಸ್ಫುರಿಸುತ್ತಿರುವುದು ॥೩೬॥

ಇವೆಲ್ಲಕ್ಕೂ ಮೂಲವಾದ ಮನಸ್ಸೇ ಸರ್ಗಾದಿಯಲ್ಲಿ ಉತ್ಪನ್ನವಾಗಿಲ್ಲ; ಇದಕ್ಕೆ ಯಾವ ಆಕಾರವೂ ಇಲ್ಲ. ಆದಕಾರಣ, ಇದು ಈರೀತಿಯಾಗಿ ಅನುಭವಗೋಚರವಾಗುವ ಮಾರ್ಗವನ್ನು ಹೇಳುವೆನು; ಕೇಳು ॥೩೭॥

ಮನೋ ದೃಶ್ಯಮಯಂ ದೋಷಂ ತನೋತೀಮಂ ಕ್ಷಯಾತ್ಮಕಮ್ ।
ಅಸದೇವಾಸದಾಕಾರಂ ಸ್ವಪ್ನಃ ಸ್ವಪ್ನಾನ್ತರಂ ಯಥಾ ॥೨೮॥
ತತ್ ಸ್ವಯಂ ಸ್ವೈರಮೇವಾಶು ಸಙ್ಕಲ್ಪಯತಿ ದೇಹಕಮ್ ।
ತೇನೇಯಮಿನ್ದ್ರಜಾಲಶ್ರೀಃ ವಿತತೇನ ವಿತನ್ಯತೇ ॥೨೯॥
ಸ್ಫುರತಿ ವಲ್ಗತಿ ಗಚ್ಛತಿ ಯಾಚತೇ ಭ್ರಮತಿ ಮಜ್ಜತಿ ಸಂಹರತಿ ಸ್ವಯಮ್ ।
ಅಪರತಾಮುಪಯಾತ್ಯಪಿ ಕೇವಲಂ ಚಲತಿ ಚಞ್ಚಲಶಕ್ತಿತಯಾ ಮನಃ ॥೩೦॥

ಇತಿ ಉತ್ಪತ್ತಿಪ್ರಕರಣೇ ಪ್ರಕರಣಾರ್ಥಕಲ್ಪನಂ ನಾಮ

ಚತುರ್ಥಃ ಸರ್ಗಃ.

ಈ ಮನಸ್ಸು ತಾನು ಅಸತ್ತಾಗಿಯೇ, ಅಸತ್ತಾಗಿರುವ ಕ್ಷಯಾತ್ಮಕವಾದ ಈ ದೃಶ್ಯವೆಂಬ ದೋಷವನ್ನುಂಟುಮಾಡುವುದು. ಒಂದು ಸ್ವಪ್ನವು ಮತ್ತೊಂದು ಸ್ವಪ್ನವನ್ನು ಹುಟ್ಟಿಸುವಂತೆ ಅಸತ್ತಾದ ಮನಸ್ಸು ಅಸತ್ತಾದ ಪದಾರ್ಥಾಂತರವನ್ನು ಉಂಟುಮಾಡುವುದು ಸಂಗತವಾದುದು ॥೨೮॥

ಅದು ತಾನು ಸ್ವೇಚ್ಛೆಯಾಗಿ ಈ ಹಾಳು ದೇಹವನ್ನು ಸಂಕಲ್ಪಿಸಿಕೊಳ್ಳುವುದು. ಅದು ಚಿರಕಾಲ ಭಾವನೆಯಿಂದ ವಿಸ್ತಾರಪಡೆದು ಈಯಿಂದ್ರಜಾಲಸಂಪತ್ತನ್ನು ಹರಡುವುದು ॥೨೯

ಮನಸ್ಸು, ಕೇವಲ ಚಂಚಲಶಕ್ತಿಯಾಗಿರುವುದರಿಂದ—ಸ್ಫುರಿಸುತಲೂ ಕುಣಿಯುತಲೂ ಸಂಚರಿಸುತಲೂ ಯಾಚಿಸುತಲೂ ಭ್ರಮಿಸುತಲೂ ಮುಳುಗುತಲೂ ತಾನೇ ಸಂಹರಿಸುತಲೂ ಇರುವುದು; ಕೊನೆಗೆ ಒಂದೊಂದು ಸಂದರ್ಭದಲ್ಲಿ ಅತ್ಯಂತವಾಗಿ ಬೇರೆಯಾದ ಪದಾರ್ಥದಂತೆಯೂ ಇದ್ದುಬಿಡುವುದು ॥೩೦॥

ಇದು ಉತ್ಪತ್ತಿಪ್ರಕರಣದಲ್ಲಿ ಪ್ರಕರಣಾರ್ಥನಿರೂಪಣವೆಂಬ ನಾಲ್ಕನೆಯಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚಮಃ ಸರ್ಗಃ.

ಶ್ರೀರಾಮಉವಾಚ.—

ಭಗವನ್ ಮುನಿಶಾರ್ದೂಲ ಕಿಮಿಮೇಹ ಮನೋಭ್ರಮೇ ।
ವಿದ್ಯತೇ ಕಥಮುತ್ಪನ್ನಂ ಮನೋ ಮಾಯಾಮಯಂ ಕುತಃ ॥೧॥
ಉತ್ಪತ್ತಿಮಾದಾವಿತಿ ಮೇ ಸಮಾಸೇನ ವದ ಪ್ರಭೋ ।
ಪ್ರವಕ್ಷ್ಯಸಿ ತತಃ ಶಿಷ್ಟಂ ವಕ್ತವ್ಯಂ ವದತಾಂ ವರ ॥೨॥

ಶ್ರೀವಸಿಷ್ಠಉವಾಚ.—

ಮಹಾಪ್ರಳಯಸಮ್ಪತ್ತೌ ಅಸತ್ತಾಂ ಸಮುಪಾಗತೇ ।
ಅಶೇಷದೃಶ್ಯಸರ್ಗಾದೌ ಶಾನ್ತಮೇವಾವಶಿಷ್ಯತೇ ॥೩॥

ಉತ್ಪತ್ತಿಪ್ರಕರಣದಲ್ಲಿ ಐದನೆಯ ಸರ್ಗವು.

ವಿಶ್ವಸ್ಯ ಮೂಲಂ ಹಿ ಮನಃ ತಸ್ಯ ಮೂಲಮಿಹೋಚ್ಯತೇ ।
ತದೇವ ಮನಸಸ್ತತ್ವಂ ವಿಶ್ವಸ್ಯೇತಿ ಚ ವರ್ಣ್ಯತೇ ॥

ಈ ಪ್ರಪಂಚಕ್ಕೆಲ್ಲ ಮನಸ್ಸು ಮೂಲವು; ಅದಕ್ಕೆ ಮೂಲವು ಈ ಸರ್ಗದಲ್ಲಿ ಹೇಳಲ್ಪಡುತ್ತದೆ; ಮತ್ತು, ಆಮನಸ್ತತ್ವವೇ ವಿಶ್ವಕಾರಣವೆಂದೂ ವರ್ಣಿಸಲ್ಪಡುತ್ತದೆ.

ಪೂರ್ವೋಕ್ತರೀತಿಯಾಗಿ ಮನಸ್ಸು ಮಿಥ್ಯಾಭೂತವೆಂದು ವರ್ಣಿಸಿರುವುದರಿಂದ ಪ್ರಕರಣಾರ್ಥವು ನಿಶ್ಚಿತವಾಗಲು, ಈ ಮನಸ್ಸಿಗೆ ಅಧಿಷ್ಠಾನವಾದ ತತ್ವವನ್ನೂ ಇದನ್ನು ಆರೋಪಿಸುವ ಪ್ರಕಾರವನ್ನೂ, ಇದು ಅಸತ್ಯವಾಗುವುದಕ್ಕೆ ಕಾರಣವನ್ನೂ ಕೂಡ ತಿಳಿಯಲಪೇಕ್ಷಿಸಿ, ಶ್ರೀರಾಮಚಂದ್ರನು ಪುನಃ ವಸಿಷ್ಠಮುನೀಶ್ವರರನ್ನು ಕುರಿತು ಪ್ರಶ್ನೆ ಮಾಡಿದನು.

ಪೂಜ್ಯರಾದ ಮುನಿವರ್ಯರೆ! ಈ ಮನೋಭ್ರಾಂತಿಯಲ್ಲಿ ಮುಖ್ಯವಾದ ಮೂಲ ಕಾರಣವು ಯಾವುದಿರುವುದು? ಇದು ಹೇಗೆ ಉತ್ಪನ್ನವಾಯಿತು? ಇದು ಯಾವುದರಿಂದ ಉತ್ಪನ್ನವಾಯಿತು? ॥೧॥

ಮಾತನಾಡತಕ್ಕವರಲ್ಲಿ ಅಗ್ರಗಣ್ಯರಾದ ಸರ್ವಜ್ಞರಾದ ಮುನೀಶ್ವರರೆ! ಮೊದಲೆ ನಾನು ಕೇಳಿದಂತೆ ಸಂಕ್ಷೇಪವಾದ ಇದರ ಉತ್ಪತ್ತಿಯನ್ನು ತಾವು ಮೊದಲು ನನಗೆ ಅಪ್ಪಣೆ ಕೊಡಿಸಿರಿ. ಆಮೇಲೆ ಅವಶಿಷ್ಟವಾದ ವಕ್ತವ್ಯಾಂಶವನ್ನು ಅಪ್ಪಣೆಕೊಡಿಸುವಿರಿ ॥೨॥

ಶ್ರೀವಸಿಷ್ಠಮುನಿಗಳು ಉತ್ತರಹೇಳಿದರು.

ಮಹಾಪ್ರಳಯವಾದಾಗ ಈ ಜಗತ್ತು ನಷ್ಟವಾಗಲಾಗಿ, ಸಮಸ್ತವಾದ ಈ ದೃಶ್ಯವೂ ಸೃಷ್ಟಿಯಾಗುವುದಕ್ಕೆ ಮೊದಲು, ವಿಕ್ಷೇಪರಹಿತವಾದ ಪರತತ್ವವೊಂದೇ ಅವಶಿಷ್ಟವಾಗಿರುವುದು ॥೩॥

ಅಸ್ತೀನಸ್ತಮಿತೋ ಭಾಸ್ವಾನ್ ಅಜೋ ದೇವೋ ನಿರಾಮಯಃ |
ಸರ್ವದಾ ಸರ್ವಕೃತ್ ಸರ್ವಃ ಪರಮಾತ್ಮಾ ಮಹೇಶ್ವರಃ ||೪||
ಯತೋ ವಾಚೋ ನಿವರ್ತನ್ತೇ ಯೋ ಮುಕ್ತೈರವಗಮ್ಯತೇ |
ಯಸ್ಯ ಚಾತ್ಮಾದಿಕಾಃ ಸಂಜ್ಞಾಃ ಕಲ್ಪಿತಾ ನ ಸ್ವಭಾವಜಾಃ ||೫||
ಯಃ ಪುಮಾನ್ ಸಾಙ್ಖ್ಯದೃಷ್ಟೀನಾಂ ಬ್ರಹ್ಮ ವೇದಾನ್ತವಾದಿನಾಮ್ |
ವಿಜ್ಞಾನಮಾತ್ರಂ ವಿಜ್ಞಾನವಿದಾಮೇಕಾನ್ತನಿರ್ಮಲಮ್||೬||
ಯಃ ಶೂನ್ಯವಾದಿನಾಂ ಶೂನ್ಯೋ ಭಾಸಕೋ ಯೋರ್ಕತೇಜಸಾಮ್ |
ವಕ್ತಾ ಮನ್ತಾ ಋತಂ ಭೋಕ್ತಾ ದ್ರಷ್ಟಾ ಕರ್ತಾ ಸದೈವ ಸಃ ||೭||
ಸನ್ನಪ್ಯಸದ್ಯೋ ಜಗತಿ ಯೋ ದೇಹಸ್ಥೋಽಪಿ ದೂರಗಃ |
ಚಿತ್ಪ್ರಕಾಶೋ ಹ್ಯಯಂ ಯಸ್ಮಾತ್ ಆಲೋಕಇವ ಭಾಸ್ವತಃ ||೮||
ಯಸ್ಮಾದ್ವಿಷ್ಣ್ವಾದಯೋ ದೇವಾಃ ಸೂರ್ಯಾದಿವ ಮರೀಚಯಃ |
ಯಸ್ಮಾಜ್ಜಗನ್ತ್ಯನನ್ತಾನಿ ಬುದ್ಬುದಾಜಲಧೇರಿವ ||೯||

ಉತ್ಪತ್ತಿರಹಿತನಾದ ಸರ್ವೇಶ್ವರನಾದ ಆ ಪರಮಾತ್ಮನು, ಎಂದಿಗೂ ನಾಶಹೊಂದದವನಾಗಿಯೂ ಮಹಾಪ್ರಕಾಶನಾಗಿಯೂ ಜರಾಮರಣಾದಿರೋಗ ರಹಿತನಾಗಿಯೂ ಸರ್ವಶಕ್ತನಾಗಿಯೂ ಸರ್ವಸ್ವರೂಪನಾಗಿಯೂ ಸರ್ವಕಾಲದಲ್ಲಿಯೂ ಇರುವನು ||೪||

ಇವನ ಸ್ವರೂಪವೆಂತಹುದೆಂದರೆ:—(೧) ಮನುಷ್ಯರ ಮಾತುಗಳು ಅವನನ್ನು ಹೊಂದಲಾರದೆ ಹಿಂದಿರುಗುವುವು (ಅವನ ಸ್ವರೂಪವನ್ನು ಹೇಳುವುದಸಾಧ್ಯವು); ಜೀವನ್ಮುಕ್ತರಾದವರು ಅವನ ಸಾಕ್ಷಾತ್ಕಾರಸುಖವನ್ನನುಭವಿಸುವರು; ಅವನಿಗೆ 'ಆತ್ಮ' ಮೊದಲಾದ ಸಂಜ್ಞೆಗಳು ಕಲ್ಪಿತಗಳಲ್ಲದೆ ಸ್ವಭಾವಸಿದ್ಧಗಳಲ್ಲ ||೫||

ಸಾಂಖ್ಯಮತಾನುಸಾರಿಗಳು ಅವನನ್ನು ಪುರುಷನೆಂದು ಕರೆಯುವರು; ವೇದಾಂತಿಗಳು ಬ್ರಹ್ಮನೆಂದು ಹೇಳುವರು; ಕ್ಷಣಿಕವಿಜ್ಞಾನವಾದಿಗಳು ಅವನನ್ನು ಅತಿನಿರ್ಮಲವಾದ ವಿಜ್ಞಾನವೆಂದು ತಿಳಿಯುವರು ||೬||

ಅವನು (೨) ಶೂನ್ಯವಾದಿಗಳಿಗೆ ಶೂನ್ಯನು; ಅವನು ಸೂರ್ಯನ ತೇಜಸ್ಸುಗಳಿಗೆ ಪ್ರಕಾಶವುಂಟುಮಾಡತಕ್ಕವನು; ಅವನೇ ಸರ್ವದಾ ಮಾತನಾಡತಕ್ಕವನೂ ಅನುಭವಮಾಡತಕ್ಕವನೂ ನೋಡತಕ್ಕವನೂ ಮಾಡತಕ್ಕವನೂ ಆಗಿರುವನು ||೭||

ಅವನು ಕಾಲತ್ರಯದಲ್ಲಿಯೂ ಇರತಕ್ಕವನಾಗಿದ್ದರೂ, ಪ್ರಪಂಚದಲ್ಲಿ ಅಜ್ಞಾನಾವೃತರಾದ ಪಾಮರರಿಗೆ ಅಸತ್ತಾಗಿ ಕಾಣುವನು; ಸೂರ್ಯನದೆಸೆಯಿಂದ ಪ್ರಕಾಶವು ಹೊರಡುವಂತೆ, ಅವನ ದೆಸೆಯಿಂದ ಜ್ಞಾನಪ್ರಕಾಶವು ಹೊರಡುವುದು ||೮||

ಸೂರ್ಯನದೆಸೆಯಿಂದ ಕಿರಣಗಳು ಹುಟ್ಟುವಂತೆ, ಅವನ ದೆಸೆಯಿಂದ ವಿಷ್ಣುಮುಂತಾದ ದೇವತೆಗಳು ಹುಟ್ಟುವರು; ಮತ್ತು, ಸಮುದ್ರದ ದೆಸೆಯಿಂದ ಅಲೆಗಳು ಹುಟ್ಟುವಂತೆ, ಅವನ ದೆಸೆಯಿಂದ ಅನಂತಗಳಾದ ಜಗತ್ತುಗಳು ಹುಟ್ಟುವುವು ||೯||

---

(೧) ಈ ಸರ್ಗದ ಕೊನೆಯುವರೆಗೂ ಯಚ್ಛಬ್ದವೇ ಇರುವುದರಿಂದ, ಅದರಂತೆಯೇ ಪರಿವರ್ತನೆಮಾಡಿದರೆ ಸರಸವಾಗಲಾರದೆಂದು ಯೋಚಿಸಿ, 'ಅವನು' ಎಂದು ಪರಿವರ್ತನೆ ಮಾಡಲ್ಪಟ್ಟಿದೆ.

(೨) ಶೂನ್ಯವಾದ, ಕ್ಷಣಿಕವಾದ, ಇವುಗಳೆಲ್ಲವೂ ಬೌದ್ಧಮತಭೇದಗಳು.

ಯಂ ಯಾನ್ತಿ ದೃಶ್ಯಬೃನ್ದಾನಿ ಪಯಾಂಸೀವ ಮಹಾರ್ಣವಮ್ ।
ಯ ಆತ್ಮಾನಂ ಪದಾರ್ಥಂ ಚ ಪ್ರಕಾಶಯತಿ ದೀಪವತ್ ॥೧೦॥
ಯ ಆಕಾಶೇ ಶರೀರೇ ಚ ದೃಷತ್ಸ್ವಪ್ಸು ಲತಾಸು ಚ ।
ಪಾಂಸುಷ್ವದ್ರಿಷು ವಾತೇಷು ಪಾತಾಳೇಷು ಚ ಸಂಸ್ಥಿತಃ ॥೧೧॥
ಯಃ ಪ್ಲಾವಯತಿ ಸಂರಬ್ಧಂ ಪುರ್ಯಷ್ಟಕಮಿತಸ್ತತಃ ।
ಯೇನ ಮೂಕೀಕೃತಾಮೂಢಾಃ ಶಿಲಾಧ್ಯಾನಮಿವಾಸ್ಥಿತಾಃ ॥೧೨॥
ವ್ಯೋಮ ಯೇನ ಕೃತಂ ಶೂನ್ಯಂ ಶೈಲಾಯೇನ ಘನೀಕೃತಾಃ ।
ಆಪೋ ದ್ರುತಾಃ ಕೃತಾಯೇನ ದೀಪೋ ಯಸ್ಯ ವಶೋ ರವಿಃ ॥೧೩॥
ಪ್ರಸರನ್ತಿ ಯತಶ್ಚಿತ್ರಾಃ ಸಂಸಾರಾಸಾರವೃಷ್ಟಯಃ ।
ಅಕ್ಷಯಾಮೃತಸಮ್ಪೂರ್ಣಾತ್ ಅಮ್ಭೋದಾದಿವ ವೃಷ್ಟಯಃ ॥೧೪॥
ಆವಿರ್ಭಾವತಿರೋಭಾವಮಯಾಸ್ತ್ರಿಭುವನೋರ್ಮಯಃ ।
ಸ್ಫುರನ್ತ್ಯತಿತತೇ ಯಸ್ಮಿನ್ ಮರಾವಿವ ಮರೀಚಯಃ ॥೧೫॥
ನಾಶರೂಪೋಽವಿನಾಶಾತ್ಮಾ ಯೋನ್ತಸ್ಸ್ಥಃ ಸರ್ವಜನ್ತುಷು ।

ನೀರೆಲ್ಲವೂ ಸಮುದ್ರವನ್ನು ಸೇರುವಂತೆ, ಈ ದೃಶ್ಯಜಾತಗಳೆಲ್ಲವೂ ಅವನನ್ನು ಸೇರುವುವು. ಅವನು ದೀಪದಂತೆ ತನ್ನನ್ನೂ ಇತರ ಪದಾರ್ಥವನ್ನೂ ಪ್ರಕಾಶಪಡಿಸುವನು ॥೧೦

ಅವನು ಆಕಾಶದಲ್ಲಿಯೂ ಮನುಷ್ಯಶರೀರದಲ್ಲಿಯೂ ಕಲ್ಲುಗಳಲ್ಲಿಯೂ ಜಲದಲ್ಲಿಯೂ ಲತೆಗಳಲ್ಲಿಯೂ ಧೂಳುಗಳಲ್ಲಿಯೂ ಪರ್ವತಗಳಲ್ಲಿಯೂ ವಾಯುಗಳಲ್ಲಿಯೂ ಪಾತಾಳಗಳಲ್ಲಿಯೂ ಕೂಡ ಇರುವನು ॥೧೧॥

ಅವನು, ತಮ್ಮತಮ್ಮ ಕರ್ಮಗಳಲ್ಲಿ ಆಸಕ್ತವಾಗಿರುವ (೧) ಪುರ್ಯಷ್ಟಕವನ್ನು ಸ್ವೇಚ್ಛೆಯಾಗಿ ತೇಲಿಸುವನು; ಅವನಿಂದ ಮೂಕರಾಗಿಮಾಡಲ್ಪಟ್ಟ ಮೂಢರು, ಕಲ್ಲುಗಳಂತೆಧ್ಯಾನ ಮಾಡುತ ಸ್ತಬ್ಧರಾಗಿಬಿಡುವರು ॥೧೨॥

ಅವನು ಆಕಾಶವನ್ನು ಶೂನ್ಯವಾಗಿ ಮಾಡಿರುವನು ; ಪರ್ವತಗಳನ್ನು ನಿಬಿಡಗಳನ್ನಾಗಿ ಮಾಡಿರುವನು; ಅವನು ಜಲವನ್ನು ದ್ರವರೂಪವನ್ನಾಗಿ ಮಾಡಿರುವನು. ಸೂರ್ಯನು ಅವನ ಅಧೀನನಾಗಿ ಪ್ರಕಾಶಕನಾಗಿರುವನು ॥೧೩॥

ಅಕ್ಷಯಜಲಪರಿಪೂರ್ಣವಾಗಿರುವ ಮೇಘದದೆಸೆಯಿಂದ ಜಲವೃಷ್ಟಿಗಳುದಯಿಸುವಂತೆ, ಅವನ ದೆಸೆಯಿಂದ ವಿಚಿತ್ರವಾದ ಸಂಸಾರಗಳೆಂಬ ಧಾರಾವೃಷ್ಟಿಗಳು ಪ್ರಸರಿಸುವುವು॥

ಮರುಭೂಮಿಯಲ್ಲಿ ಸೂರ್ಯಕಿರಣಗಳು ಸ್ಫುರಿಸುವಂತೆ, ಸರ್ವವ್ಯಾಪಿಯಾದ ಅವನಲ್ಲಿ ಉತ್ಪತ್ತಿಲಯಮಯಗಳಾದ ಲೋಕತ್ರಯಗಳೆಂಬ ಅಲೆಗಳು ಸ್ಫುರಿಸುತ್ತಿರುವುವು ॥೧೫॥

ಅವನು ಪ್ರಪಂಚಾತ್ಮಕನಾಗಿ ನಾಶರೂಪಕನಾಗಿಯೂ, ಸ್ವಭಾವತಃ ನಾಶರಹಿತನಾಗಿಯೂ, ಸರ್ವಪ್ರಾಣಿಗಳಲ್ಲಿಯೂ ಅಂತರ್ಗತನಾಗಿಯೂ, ಸೂಕ್ಷ್ಮತಮನಾದುದರಿಂದ

---

(೧) ಕರ್ಮೇಂದ್ರಿಯ,, ಜ್ಞಾನೇಂದ್ರಿಯ, ಸೂಕ್ಷ್ಮಭೂತ, ಪ್ರಾಣ, ಅವಿದ್ಯಾ, ಕಾಮ, ಕರ್ಮ, ಅಂತಃಕರಣ—ಇವೆಂಟಕ್ಕೂ ಪುರ್ಯಷ್ಟಕವೆಂದು ವ್ಯವಹಾರವು.

ಗುಪ್ತೋ ಯೋಽಪ್ಯತಿರಿಕ್ತೋಽಪಿ ಸರ್ವಭಾವೇಷು ಸಂಸ್ಥಿತಃ ||೧೬||
ಪ್ರಕೃತಿವ್ರತತಿರ್ಯಸ್ಮಿನ್ ಜಾತಾ ಬ್ರಹ್ಮಾಂಡಸತ್ಫಲಾ |
ಚಿತ್ತಮೂಲೇಂದ್ರಿಯದಳಾ ಯೇನ ನೃತ್ಯತಿ ವಾಯುನಾ ||೧೭||
ಯಸ್ಮಿನ್ಮಣಿಃ ಪ್ರಕಟತಿ ಪ್ರತಿದೇಹಸಮುದ್ಗಕೇ |
ಯಸ್ಮಿನ್ನಿಂದೌ ಸ್ಫುರನ್ತ್ಯೇತಾಃ ಜಗಜ್ಜಾಲಮರೀಚಯಃ ||೧೮||
ಪ್ರಶಾನ್ತೇ ಚಿದ್ಘನೇ ಯಸ್ಮಿನ್ ಸ್ಫುರನ್ತ್ಯಮೃತವರ್ಷಿಣಿ |
ಧಾರಾಜಲಾನಿ ಭೂತಾನಿ ಸೃಷ್ಟಯಸ್ತಟಿತಃ ಸ್ಫುಟಾಃ ||೧೯||
ಚಮತ್ಕುರ್ವನ್ತಿ ವಸ್ತೂನಿ ಯದಾಲೋಕತಯಾ ಮಿಥಃ |
ಅಸಜ್ಜಾತಮಸದ್ಯೇನ ಯೇನ ಸತ್ ಸತ್ತ್ವಮಾಗತಮ್ ||೨೦||
ಚಲತೀದಮನಿಚ್ಛಸ್ಯ ಕಾಯೋ ಯೋ ಯಸ್ಯ ಸನ್ನಿಧೌ |
ಜಡಂ ಪರಮರಕ್ತಸ್ಯ ಶಾನ್ತಮಾತ್ಮನಿ ತಿಷ್ಠತಃ ||೨೧||
ನಿಯತಿರ್ದೇಶಕಾಲೌ ಚ ಚಲನಂ ಸ್ಪನ್ದನಂ ಕ್ರಿಯಾ |

ಗುಪ್ತನಾಗಿಯೂ, ಮಹತ್ತಮನಾದುದರಿಂದ ಸರ್ವವನ್ನೂ ಅತಿಕ್ರಮಿಸಿರತಕ್ಕವನಾಗಿಯೂ, ಸಮಸ್ತ ಪದಾರ್ಥಸ್ಥಿತನಾಗಿಯೂ ಇರುವನು ||೧೬||

ಶುದ್ಧಚೈತನ್ಯರೂಪವಾದ ಆಕಾಶದಲ್ಲಿ ಹುಟ್ಟಿ—ಬ್ರಹ್ಮಾಂಡವೆಂಬ ದೊಡ್ಡ ಫಲವುಳ್ಳದಾಗಿ—ಚಿತ್ತವೇ ಮೂಲವಾಗಿಯೂ ಇಂದ್ರಿಯಗಳೇ ಎಲೆಗಳಾಗಿಯೂ ಇರುವ—ಪ್ರಕೃತಿಯೆಂಬ ಲತೆಯು, ವಾಯುರೂಪನಾದ ಅವನಿಂದ ನರ್ತನಮಾಡುವುದು ||೧೭||

ಪ್ರತಿಯೊಂದು ದೇಹವೆಂಬ ಭರಣಿಯಲ್ಲಿಯೂ ಜ್ಞಾನರತ್ನರೂಪನಾದ ಅವನು ತಳತಳಿಸುವನು; ಚಂದ್ರರೂಪನಾದ ಅವನಲ್ಲಿ, ಈ ಜಗತ್ಸಮೂಹಗಳೆಂಬ ಚಂದ್ರಿಕೆಗಳು ಹೊಳೆಯುತ್ತಿರುವುವು ||೧೮||

ಮೋಕ್ಷವೆಂಬ ಜಲವನ್ನು ವರ್ಷಿಸುವ—ಪ್ರಶಾಂತನಾದ ಜ್ಞಾನಮೇಘರೂಪನಾದ ಅವನಲ್ಲಿ, ಈ ಭೂತಗಳು ಧಾರಾರೂಪವಾಗಿ ಸುರಿಯುವ ಜಲಗಳಾಗಿಯೂ- ಪ್ರಪಂಚಸೃಷ್ಟಿಗಳು ಸ್ಪಷ್ಟವಾದ ಮಿಂಚುಗಳಾಗಿಯೂ ಇರುವುವು ||೧೯||

ಸಮಸ್ತವಸ್ತುಗಳೂ ಅವನ ತೇಜಃಪ್ರಸರಣದಿಂದಲೇ ಪರಸ್ಪರವಾಗಿ ನಾನಾವಿಧಕಾರ್ಯಗಳನ್ನು ಮಾಡುವುವು; ಅಸತ್ತಾದ ಪದಾರ್ಥವು ಅಸತ್ತಾದುದು ಅವನಿಂದ; ಸತ್ಪದಾರ್ಥವು ಸತ್ತಾದುದೂ ಅವನಿಂದಲೇ ||೨೦||

ದೇವತಿರ್ಯಙ್ಮನುಷ್ಯಾದಿರೂಪವಾದ ಈದೇಹವಾವುದುಂಟೋ, ಈ ದೃಶ್ಯಭೂತವಾದ ಪ್ರಪಂಚವು ಅತ್ಯಂತ ಜಡವಾದುದಾದರೂ, ಇಚ್ಛಾರಹಿತನಾಗಿ ವಿರಕ್ತನಾಗಿ ತನ್ನಲ್ಲಿ ತಾನು ಶಾಂತಸ್ವಭಾವದಿಂದಿರತಕ್ಕವನಾಗಿದ್ದರೂ ಅವನ ಸಾನ್ನಿಧ್ಯದಿಂದ ಚಲಿಸುವುದು ||೨೧||

(೧) ನಿಯತಿ ದೇಶ ಕಾಲ ಚಲನ ಸ್ಪಂದನ ಕರ್ಮ-- ಇತ್ಯಾದಿಗಳೆಲ್ಲವೂ, ಪ್ರಾಪಂಚಿ

---

(೧) ಸರ್ವಕಾಲದಲ್ಲಿಯೂ ಸೃಷ್ಟಿಲಯಗಳು ಆಗಿಯೇತೀರಬೇಕೆಂಬ ನಿಯಮಕ್ಕೆ ನಿಯತಿಯೆಂದೂ, ಈ ಸೃಷ್ಟಿಲಯಗಳು ಎಲ್ಲಿ ಆಗುವುವೋ ಅದಕ್ಕೆ ದೇಶವೆಂದೂ, ಯಾವಾಗ ಆಗುವುವೋ ಅದಕ್ಕೆ ಕಾಲವೆಂದೂ, ಈ ದೇಶಕಾಲಪ್ರಾಪ್ತಿಯಾದಾಗ ಬೀಜಾದಿಗಳು ಸ್ವಲ್ಪದಪ್ಪನಾಗುವುದಕ್ಕೆ ಚಲನವೆಂದೂ, ಅಂಕುರಾದಿರೂಪವಾಗುವುದಕ್ಕೆ ಸ್ಪಂದನವೆಂದೂ, ಎಲೆಮುಂತಾದುದು ಬೆಳೆಯುವುದಕ್ಕೆ ಕ್ರಿಯೆಯೆಂದೂ ವ್ಯವಹಾರವು.

ಇತಿ ಯೇನ ಗತಾಃ ಸತ್ತಾಂ ಸರ್ವಸತ್ತಾತಿಗಾಮಿನಾ ||೨೨||
ಶುದ್ಧಸಂವಿನ್ಮಯತ್ವಾದ್ಯಃ ಖಂ ಭವೇದ್ವ್ಯೋಮಚಿನ್ತಯಾ |
ಪದಾರ್ಥಚಿನ್ತಯಾರ್ಥತ್ವಂ ಇವ ತಿಷ್ಠತ್ಯಧಿಷ್ಠಿತಃ ||೨೩||

ಕುರ್ವನ್ನಪೀಹ ಜಗತಾಂ ಮಹತಾಮನನ್ತ
ಬೃನ್ದಂ ನ ಕಿಂಚನ ಕರೋತಿ ನ ಕಾಶ್ಚ ನಾಪಿ |
ಸ್ವಾತ್ಮನ್ಯನಸ್ತಮಯಸಂವಿದಿ ನಿರ್ವಿಕಾರೇ
ತ್ಯಕ್ತೋದಯಸ್ಥಿತಿಮತಿ ಸ್ಥಿತಮೇಕಮೇವ ||೨೪||

ಇತಿ ಉತ್ಪತ್ತಿಪ್ರಕರಣೇ ಮೂಲಕಾರಣದೇವಸ್ವರೂಪವರ್ಣನಂ ನಾಮ
ಪಞ್ಚಮಃ ಸರ್ಗಃ.

ಕವಾದ ಸರ್ವಸತ್ತೆಗಳನ್ನೂ ಅತಿಕ್ರಮಿಸಿದವನಾಗಿ ವಿಲಕ್ಷಣನಾಗಿರುವ ಅವನಿಂದಲೇ ಸ್ಥಿರತೆಯನ್ನು ಹೊಂದಿರುವುವು ||೨೨||

ಅವನು ಶುದ್ಧಜ್ಞಾನರೂಪನಾಗಿರುವುದರಿಂದ, ಆಕಾಶವೆಂದು ಭಾವಿಸಿದರೆ ಆಕಾಶವಾಗಿಯೂ—ದೃಶ್ಯಪದಾರ್ಥವೆಂದು ಭಾವಿಸಿದರೆ ಪದಾರ್ಥತ್ವವನ್ನು ಹೊಂದಿದವನಂತೆಯೂ ಆಗುವನು ||೨೩||

ಆ ದೇವನು ಈ ಮಹಾಜಗತ್ತುಗಳ ಅನಂತವಾದ ಸಮೂಹಗಳನ್ನು ಮಾಡತಕ್ಕವರಾಗಿದ್ದರೂ, ಯಾವ ವಸ್ತುವನ್ನೂ ಯಾವ ಕ್ರಿಯೆಗಳನ್ನೂ ಮಾಡುವುದಿಲ್ಲ; ನಿತ್ಯಜ್ಞಾನಪರಿಪೂರ್ಣವಾದ ನಿರ್ವಿಕಾರವಾದ ಉತ್ಪತ್ತಿ ಸ್ಥಿತಿ ಲಯಗಳನ್ನು ಪರಿತ್ಯಜಿಸಿರುವ ತನ್ನಲ್ಲಿ ತಾನೊಬ್ಬನೇ ಇರುವನು ||೨೪||

ಇದು ಉತ್ಪತ್ತಿಪ್ರಕರಣದಲ್ಲಿ ಮೂಲಕಾರಣದೇವಸ್ವರೂಪವರ್ಣನೆಯೆಂಬ
ಐದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಷಷ್ಠಃ ಸರ್ಗಃ.

ಶ್ರೀವಸಿಷ್ಠ ಉವಾಚ.—

ಅಸ್ಯ ದೇವಾಧಿದೇವಸ್ಯ ಪರಸ್ಯ ಪರಮಾತ್ಮನಃ ।
ಜ್ಞಾನಾದೇವ ಪರಾ ಸಿದ್ಧಿಃ ನತ್ವನುಷ್ಠಾನದುಃಖತಃ ॥೧॥
ಅತ್ರ ಜ್ಞಾನಮನುಷ್ಠಾನಂ ನ ತ್ವನ್ಯದುಪಯುಜ್ಯತೇ ।
ಮೃಗತೃಷ್ಣಾ ಜಲಭ್ರಾನ್ತಿಶಾನ್ತೌ ಚೇದಂ ನಿರೂಪಿತಮ್ ॥೨॥
ನ ಹ್ಯೇಷ ದೂರೇ ನಾಭ್ಯಾಶೇ ನಾಲಭ್ಯೋ ವಿಷಮೋ ನ ಚ ।
ಸ್ವಾನನ್ದಾಭಾಸರೂಪೋಽಸೌ ಸ್ವದೇಹಾದೇವ ಲಭ್ಯತೇ ॥೩॥
ಕಿಂಚಿನ್ನೋಪಕರೋತ್ಯತ್ರ ತಪೋದಾನವ್ರತಾದಿಕಮ್ ।
ಸ್ವಭಾವಮಾತ್ರೇ ವಿಶ್ರಾನ್ತಿಂ ಋತೇ ನಾತ್ರಾಸ್ತಿ ಸಾಧನಮ್ ॥೪॥

ಉತ್ಪತ್ತಿಪ್ರಕರಣದಲ್ಲಿ ಆರನೆಯ ಸರ್ಗವು.

ಜ್ಞಾನಾದೇವ ಭವೇತ್ ಪ್ರಾಪ್ತಿಃ ಆತ್ಮನೋ ನ ತು ಕರ್ಮಭಿಃ ।
ಜ್ಞಾನೋಪಾಯೇಷ್ವತೋ ಯತ್ನಃ ಕ್ರಮಶ್ಚಾತ್ರೋಪವರ್ಣ್ಯತೇ ॥

ಆತ್ಮಪ್ರಾಪ್ತಿಯು ಜ್ಞಾನದಿಂದಲೇ ಆಗುವುದು; ಕರ್ಮದಿಂದಾಗುವುದಿಲ್ಲ. ಅದುಕಾರಣ, ಜ್ಞಾನೋಪಾಯಗಳಲ್ಲಿ ಪ್ರಯತ್ನವೂ ಅದರ ರೀತಿಯೂ ಇಲ್ಲಿ ವರ್ಣಿಸಲ್ಪಡುವುವು.

ಪೂರ್ವೋಕ್ತರೀತಿಯಾಗಿ ಜಗನ್ಮೂಲಕಾರಣಸ್ವರೂಪವನ್ನು ವರ್ಣಿಸಿ—ತತ್ಪ್ರಾಪ್ತಿಗೆ ಉಪಾಯವನ್ನು ವರ್ಣಿಸಲಿಚ್ಛಿಸಿರುವ ವಸಿಷ್ಠಮುನಿಗಳು ಮತ್ತೆ ಹೇಳಿದರು.

ಅಯ್ಯಾ! ರಾಮ! ದೇವತೆಗಳಿಗೆಲ್ಲ ಅಧಿದೇವನಾಗಿ ಸರ್ವೋತ್ಕೃಷ್ಟನಾಗಿರುವ ಈ ಪರಮಾತ್ಮನ ಸಾಕ್ಷಾತ್ಕಾರವು, ಜಾನದಿಂದಲೇ ಆಗುವುದಲ್ಲದೆ, ಕರ್ಮಾಚರಣಪ್ರಯಾಸದಿಂದಾಗುವುದಿಲ್ಲ ॥೧॥

ಈ ಪರಮಾತ್ಮಸಾಕ್ಷಾತ್ಕಾರವಿಷಯದಲ್ಲಿ, ಜ್ಞಾನವೇ ಅನುಷ್ಠಾನವಲ್ಲದೆ—ಮತ್ತೊಂದೂ ಉಪಯೋಗಿಸುವುದಿಲ್ಲ. ಮೃಗತೃಷ್ಣೆಯಲ್ಲಿ ಜಲಭ್ರಾಂತಿಯುಂಟಾಗಿರುವಾಗ, ಅದು ಶಾಂತಿಹೊಂದಬೇಕಾದರೆ, ಅದು ಜಲವಲ್ಲವೆಂಬ ಜ್ಞಾನವೇ ಸಾಧನವಲ್ಲದೆ, ಮತ್ತಾವ ಕೆಲಸವೂ ಸಾಧನವಾಗುವುದಿಲ್ಲವಷ್ಟೆ! ಅಲ್ಲಿಯೂ ಇದರಂತೆಯೇ ಜ್ಞಾನವೇ ಸಾಧನವೆಂದು ಸ್ಪಷ್ಟವಾಗಿರುವುದು ॥೨॥

ಇವನು ಅತಿದೂರದಲ್ಲಿಯೂ ಇಲ್ಲ; ಸಮೀಪದಲ್ಲಿಯೂ ಇಲ್ಲ; ದುರ್ಲಭನಾಗಿಯೂ ಇಲ್ಲ; ಬಹುಕಷ್ಟಸಾಧ್ಯವಾದ ಸ್ಥಾನದಲ್ಲಿಯೂ ಇಲ್ಲ; ತನ್ನ ಆನಂದರೂಪನಾಗಿರುವ ಇವನು, ತನ್ನ ದೇಹದೊಳಗೇ ಸಿಕ್ಕುವನು ॥೩॥

ಇವನ ಸಾಕ್ಷಾತ್ಕಾರ ವಿಷಯದಲ್ಲಿ, ತಪಸ್ಸು ದಾನ ವ್ರತ ಮುಂತಾದುದೊಂದೂ ಸ್ವಲ್ಪವೂ ಉಪಕರಣವಾಗುವುದಿಲ್ಲ. ಈ ಪ್ರಪಂಚಸ್ವಭಾವಸಾಮಾನ್ಯದಲ್ಲಿಯೂ ವಿಶ್ರಾಂತಿ ಪಡೆಯುವುದು ಹೊರತು, ಈ ವಿಷಯದಲ್ಲಿ ಮತ್ತಾವ ಸಾಧನವೂ ಇಲ್ಲ ॥೪॥

ಸಾಧುಸಙ್ಗಮಸಚ್ಛಾಸ್ತ್ರಪರತೈವಾತ್ರ ಕಾರಣಮ್ ।
ಸಾಧನಂ ಬಾಧನಂ ಮೋಹಜಾಲಸ್ಯ ಯದಕೃತ್ರಿಮಮ್ ॥೫॥
ಅಯಂ ಸ ದೇವಇತ್ಯೇವ ಸಂಪರಿಜ್ಞಾನಮಾತ್ರತಃ ।
ಜನ್ತೋರ್ನ ಜಾಯತೇ ದುಃಖಂ ಜೀವನ್ಮುಕ್ತತ್ವಮೇತಿ ಚ ॥೬॥

ಶ್ರೀರಾಮ ಉವಾಚ.

ಸಂಪರಿಜ್ಞಾತಮಾತ್ರೇಣ ಕಿಲಾನೇನಾತ್ಮನಾತ್ಮನಾ ।
ಪುನರ್ದೋಷಾನ ಜಾಯನ್ತೇ ಮರಣಾದ್ಯಾಃ ಕದಾಚನ ॥೭॥
ದೇವದೇವೋ ಮಹಾನೇಷಃ ಕುತೋಽದೂರಾದವಾಪ್ಯತೇ ।
ತಪಸಾ ಕೇನ ತೀವ್ರೇಣ ಕ್ಲೇಶೇನ ಕಿಯತಾಥವಾ ॥೮॥

ಶ್ರೀವಸಿಷ್ಠ ಉವಾಚ.

ಸ್ವಪೌರುಷಪ್ರಯತ್ನೇನ ವಿವೇಕೇನ ವಿಕಾಸಿನಾ ।
ಸ ದೇವೋ ಜ್ಞಾಯತೇ ರಾಮ ನ ತಪಸ್ಸ್ನಾನಕರ್ಮಭಿಃ ॥೯॥

ಈ ಜ್ಞಾನಪ್ರಾಪ್ತಿಯ ವಿಷಯದಲ್ಲಿ, ಸತ್ಸಹವಾಸ ಸಚ್ಛಾಸ್ತ್ರಾಭ್ಯಾಸಗಳೇ ಕಾರಣಗಳು. ಏತಕ್ಕೆಂದರೆ,—ಆ ನಿತ್ಯಸಿದ್ಧವಾದ ಬ್ರಹ್ಮವೊಂದೇ ಈ ಮೋಹಜಾಲವನ್ನು ನಿವಾರಣೆಮಾಡತಕ್ಕುದಲ್ಲದೆ, ಮತ್ತೊಂದಲ್ಲ; ಆದುದರಿಂದ ಆ ಬ್ರಹ್ಮಜ್ಞಾನವೇ ಮುಖ್ಯಸಾಧನವು ॥೫॥

ಇವನೇ ಆದೇವನು-ಎಂಬ ಜ್ಞಾನಮಾತ್ರದಿಂದಲೇ, ಪ್ರಾಣಿಗೆ ದುಃಖೋದಯವೂ ತಪ್ಪುವುದು; ಜೀವನ್ಮುಕ್ತಿಯೂ ಉಂಟಾಗುವುದು ॥೬॥

ಹೀಗೆ ವಸಿಷ್ಠರು, ತಪಸ್ಸು ಮುಂತಾದುವು ಮೋಕ್ಷಸಾಧನಗಳಲ್ಲವೆಂದು ಹೇಳಲಾಗಿ 'ತಮೇತಂ ವೇದಾನುವಚನೇನ' ಇತ್ಯಾದಿ ಶ್ರುತಿಗಳಲ್ಲಿ ವೇದಾಧ್ಯಯನಾದಿಗಳು ಮುಕ್ತಿಹೇತುವೆಂದು ಹೇಳಿರುವುದನ್ನು ಸ್ಮರಿಸಿಕೊಂಡು ಶ್ರೀರಾಮನು, ಸಾಧಾರಣವಾದ ತಪಃ ಪ್ರಭೃತಿಗಳು ಮೋಕ್ಷಹೇತುವಲ್ಲವೆಂದೂ ತೀವ್ರವಾದುವುಗಳು ಮೋಕ್ಷಹೇತುವೆಂದೂ ತಿಳಿದವನಾಗಿ, ಮತ್ತೆ ವಸಿಷ್ಠರನ್ನು ಕುರಿತು ಪ್ರಶ್ನೆ ಮಾಡಿದನು.

ಪೂಜ್ಯನೆ! ಈ ಪರಮೇಶ್ವರನನ್ನು ನಾವು ನಮ್ಮ ಮನಸ್ಸಿನಿಂದ ಚೆನ್ನಾಗಿ ತಿಳಿದರೆ, ಮರಣಾದಿ ದೋಷಗಳು ಮತ್ತೆ ಎಂದಿಗೂ ಬಾಧಿಸುವುದಿಲ್ಲವಲ್ಲವೆ? ॥೭॥

ಈ ಮಹಾತ್ಮನಾದ ದೇವದೇವನು ಯಾವಕಾರಣದಿಂದ ಶೀಘ್ರವಾಗಿ ಹೊಂದಲ್ಪಡುವನು? ತೀವ್ರವಾದ ಯಾವ ತಪಸ್ಸಿನಿಂದ ಹೊಂದಲ್ಪಡುವನು? ಅಥವಾ ಎಷ್ಟು ಕ್ಲೇಶದಿಂದ ಹೊಂದಲ್ಪಡುವನು ॥೮॥

ಇದಕ್ಕುತ್ತರವಾಗಿ ಶ್ರೀ ವಸಿಷ್ಠಮುನಿಗಳು ಹೇಳುವರು.

ಅಯ್ಯಾ! ರಾಮ! ವೇದಾನುವಚನಾದಿಗಳು ಮೋಕ್ಷಕ್ಕೆ ಸಾಕ್ಷಾತ್ಕಾರಣವೆಂದು ಆ ಶ್ರುತಿಗೆ ಅರ್ಥವಲ್ಲ. ಜ್ಞಾನೇಚ್ಛೆಯಿಂದ ನಿಷ್ಕಾಮವಾಗಿ ಮಾಡಿದ ಕರ್ಮಗಳೆಲ್ಲವೂ, ವಿವಿದಿಷೆ (ತಿಳಿಯಬೇಕೆಂಬ ಇಚ್ಛೆ) ಯನ್ನು ಹುಟ್ಟಿಸಿಬಿಟ್ಟು, ತಾವನ್ಮಾತ್ರದಿಂದ ಕೃತಾರ್ಥಗಳಾಗಿಬಿಡುವುವು. ಆದುಕಾರಣ, ನಮ್ಮ ಪುರುಷಪ್ರಯತ್ನದಿಂದ ವಿಕಾಸಹೊಂದಿದ ವಿವೇಕದಿಂದ ಆದೇವನು ತಿಳಿಯಲ್ಪಡುವನಲ್ಲದೆ, ತಪಸ್ಸು ಸ್ನಾನ ಯಜ್ಞ ಮುಂತಾದ ಕರ್ಮಗಳಿಂದ ತಿಳಿಯಲ್ಪಡುವುದಿಲ್ಲ ॥೯॥

ರಾಗದ್ವೇಷತಮಃಕ್ರೋಧಮದಮಾತ್ಸರ್ಯವರ್ಜನಮ್ ।
ವಿನಾ ರಾಮ ತಪೋದಾನಂ ಕ್ಲೇಶಏವ ನ ವಾಸ್ತವಮ್ ॥೧೦॥
ರಾಗಾದ್ಯುಪಗತೇ ಚಿತ್ತೇ ವಞ್ಚಯಿತ್ವಾ ಪರಂ ಧನಮ್ ।
ಯದರ್ಜ್ಯತೇ ತಸ್ಯ ದಾನಾತ್ ಯಸ್ಯಾರ್ಥಾಸ್ತಸ್ಯ ತತ್ಫಲಮ್ ॥೧೧॥
ರಾಗಾದ್ಯುಪಹತೇ ಚಿತ್ತೇ ವ್ರತಾದಿ ಕ್ರಿಯತೇ ಚ ಯತ್ ।
ತದ್ದಮ್ಭಃ ಪ್ರೋಚ್ಯತೇ ತಸ್ಯ ಫಲಮಸ್ತಿ ಮನಾಙ್ನ ಚ ॥೧೨॥
ತಸ್ಮಾತ್ ಪುರುಷಯತ್ನೇನ ಮುಖ್ಯಮೌಷಧಮಾಹರೇತ್ ।
ಸಚ್ಛಾಸ್ತ್ರಸಜ್ಜನಾಸಙ್ಗೌ ಸಂಸೃತಿವ್ಯಾಧಿನಾಶಿನೌ ॥೧೩॥
ಅತ್ರೈಕಂ ಪೌರುಷಂ ಯತ್ನಂ ವರ್ಜಯಿತ್ವೇತರಾ ಗತಿಃ ।
ಸರ್ವದುಃಖಕ್ಷಯಪ್ರಾಪ್ತೌ ನ ಕಾಚಿದುಪಪದ್ಯತೇ ॥೧೪॥
ಶೃಣು ತತ್ ಪೌರುಷಂ ಕೀದೃಕ್ ಆತ್ಮಜ್ಞಾನಸ್ಯ ಲಬ್ಧಯೇ ।
ಯೇನ ಶಾಮ್ಯತ್ಯಶೇಷೇಣ ರಾಗದ್ವೇಷವಿಷೂಚಿಕಾ ॥೧೫॥
ಯಥಾಸಮ್ಭವಯಾ ವೃತ್ತ್ಯಾ ಲೋಕಶಾಸ್ತ್ರಾವಿರುದ್ಧಯಾ ।
ಸನ್ತೋಷಸನ್ತುಷ್ಟಮನಾಃ ಭೋಗಗನ್ಧಂ ಪರಿತ್ಯಜೇತ್ ॥೧೬॥

ಅಯ್ಯಾ! ರಾಮ! ರಾಗ ದ್ವೇಷ ಮೋಹ ಕೋಪ ಮದ ಮಾತ್ಸರ್ಯ—ಇವುಗಳನ್ನು ಬಿಡದೆ, ತಪಸ್ಸು ದಾನ ಮುಂತಾದುವುಗಳನ್ನು ಮಾಡುವಿಕೆಯು ಕ್ಲೇಶವೇಅಲ್ಲದೆ, ವಾಸ್ತವ್ಯವಾಗಿ ಮೋಕ್ಷಸಾಧನವಲ್ಲ ॥೧೦॥

ಮನಸ್ಸು ರಾಗದ್ವೇಷಾದಿಗಳನ್ನು ಹೊಂದಿರುವಾಗ, ಮತ್ತೊಬ್ಬನನ್ನು ವಂಚಿಸಿ ಯಾವ ಧನವು ಸಂಪಾದಿಸಲ್ಪಡುತ್ತದೆಯೋ, ಅದನ್ನು ದಾನಮಾಡಿದುದರಿಂದ ಅದರ ಫಲವು ಆ ಹಣದವನಿಗೆ ಸೇರುವುದಲ್ಲದೆ ದಾನಮಾಡಿದವನಿಗೆ ಸ್ವಲ್ಪವೂ ಬರುವುದಿಲ್ಲ ॥೧೧॥

ಮನಸ್ಸು ರಾಗದ್ವೇಷಾದಿಗಳಿಂದ ಕೆಟ್ಟಿರುವಾಗ, ವ್ರತ ಮುಂತಾದುದನ್ನು ಮಾಡುವುದೆಲ್ಲವೂ ದಂಭವೆಂದು ಹೇಳಲ್ಪಡುತ್ತದೆಯಲ್ಲದೆ ಅದಕ್ಕೆ ಸ್ವಲ್ಪವೂ ಫಲವಿಲ್ಲ ॥೧೨॥

ಆದುಕಾರಣ, ಪುರುಷಪ್ರಯತ್ನದಿಂದ ಮುಖ್ಯವಾದ ಔಷಧವನ್ನಾಶ್ರಯಿಸಬೇಕು. ಅದಾವುದೆಂದರೆ:—ಸಚ್ಛಾಸ್ತ್ರ ಸತ್ಸಹವಾಸಗಳೆರಡೂ ಸಂಸಾರವೆಂಬ ವ್ಯಾಧಿಯನ್ನು ನಾಶಪಡಿಸತಕ್ಕುವು ॥೧೩॥

ಹೀಗೆ ಸಮಸ್ತ ದುಃಖ ನಾಶವಾಗತಕ್ಕ ವಿಷಯದಲ್ಲಿ, ಪುರುಷಪ್ರಯತ್ನವೊಂದು ಹೊರತು ಇತರವಾದೊಂದುಪಾಯವೂ ಇಲ್ಲ ॥೧೪॥

ರಾಗದ್ವೇಷಗಳೆಂಬ ವಿಷೂಚಿಕೆಯು ನಿಶ್ಶೇಷವಾಗಿ ಯಾವುದರಿಂದ ಶಾಂತವಾಗುವುದೋ, ಅಂತಹ ಪೌರುಷವು—ಆತ್ಮಜ್ಞಾನಪ್ರಾಪ್ತಿಗೆ ಎಂತಹುದಾಗಬೇಕೆಂಬುದನ್ನು ನೀನು ಕೇಳುವವನಾಗು ॥೧೫॥

ಲೋಕಕ್ಕೂ ಶಾಸ್ತ್ರಕ್ಕೂ ವಿರೋಧವಿಲ್ಲದೆ ಯಥಾಸಂಭವವಾಗಿ ಪ್ರಾಪ್ತವಾದ ಜೀವನೋಪಾಯದಿಂದ ಸಂತುಷ್ಟಚಿತ್ತನಾಗಿ ಭೋಗಗಳಲ್ಲಿ ಅಭಿನಿವೇಶವನ್ನು ಬಿಟ್ಟುಬಿಡಬೇಕು ॥೧೬॥

ಯಥಾಸಮ್ಭವಮುದ್ಯೋಗಾತ್ ಅನುದ್ವಿಗ್ನತಯಾ ಸ್ವಯಮ್ ।
ಸಾಧುಸಙ್ಗಮಸಚ್ಛಾಸ್ತ್ರಪರತಾಂ ಪ್ರಥಮಂ ಶ್ರಯೇತ್ ॥೧೭॥
ಯಥಾಪ್ರಾಪ್ತಾರ್ಥಸನ್ತುಷ್ಟೋ ಯೋ ಗರ್ಹಿತಮುಪೇಕ್ಷತೇ ।
ಸಾಧುಸಙ್ಗಮಸಚ್ಛಾಸ್ತ್ರಪರಃ ಶೀಘ್ರಂ ಸ ಮುಚ್ಯತೇ ॥೧೮॥
ವಿಚಾರೇಣ ಪರಿಜ್ಞಾತಸ್ವಭಾವಸ್ಯ ಮಹಾಮತೇಃ ।
ಅನುಕಮ್ಪ್ಯಾಭವನ್ತ್ಯೇತೇ ಬ್ರಹ್ಮವಿಷ್ಣ್ವಿನ್ದ್ರಶಙ್ಕರಾಃ ॥೧೯॥
ದೇಶೇ ಯಂ ಸುಜನಪ್ರಾಯಾಃ ಲೋಕಾಃ ಸಾಧುಂ ಪ್ರಚಕ್ಷತೇ ।
ಸ ವಿಶಿಷ್ಟಃ ಸ ಸಾಧುಃ ಸ್ಯಾತ್ ತಂ ಪ್ರಯತ್ನೇನ ಸಂಶ್ರಯೇತ್ ॥೨೦॥
ಅಧ್ಯಾತ್ಮವಿದ್ಯಾ ವಿದ್ಯಾನಾಂ ಪ್ರಧಾನಂ ತತ್ಕಥಾಶ್ರಯಮ್ ।
ಶಾಸ್ತ್ರಂ ಸಚ್ಛಾಸ್ತ್ರಮಿತ್ಯಾಹುಃ ಮುಚ್ಯತೇ ತದ್ವಿಚಾರಣಾತ್ ॥೨೧॥
ಸಚ್ಛಾಸ್ತ್ರಸತ್ಸಙ್ಗಮಜೈರ್ವಿವೇಕೈಃ ತಥಾ ವಿನಶ್ಯನ್ತಿ ಬಲಾದವಿದ್ಯಾಃ ।
ಯಥಾ ಜಲಾನಾಂ ಕತಕಾನುಷಙ್ಗಾತ್ ಯಥಾಜನಾನಾಂ ಮತಯೋಽಪಿಯೋಗಾತ್॥

ಇತಿ ಉತ್ಪತ್ತಿಪ್ರಕರಣೇ ಪ್ರಯತ್ನೋಪದೇಶೋನಾಮ
ಷಷ್ಠಃ ಸರ್ಗಃ.

ಯಥಾಸಂಭವವಾಗಿ ಉದ್ಯೋಗವಮಾಡಿ, ಅದರಿಂದ ತನಗುಂಟಾಗುವ ಚಿತ್ತಸ್ಥೈರ್ಯದಿಂದ, ಮೊಟ್ಟಮೊದಲು ಸತ್ಸಹವಾಸ ಸಚ್ಛಾಸ್ತ್ರಗಳಲ್ಲಿ ಆಸಕ್ತಿಯನ್ನು ಪಡೆಯಬೇಕು ॥೧೭॥

ಯಾವನು ಸತ್ಸಹವಾಸ ಸಚ್ಛಾಸ್ತ್ರಗಳಲ್ಲಿ ತತ್ಪರನಾಗಿ—ಯಥಾಪ್ರಾಪ್ತವಾದ ಅರ್ಥದಿಂದಲೇ ಸಂತುಷ್ಟನಾಗಿ—ನಿಂದಿತವಾದುದಕ್ಕೆ ಅಪೇಕ್ಷಿಸದಿರುವನೋ, ಅವನು ಶೀಘ್ರವಾಗಿ ಮುಕ್ತನಾಗುವನು ॥೧೮॥

ವಿಚಾರದಿಂದ ಪ್ರಪಂಚಸ್ವಭಾವವನ್ನು ತಿಳಿದಿರುವ ಮಹಾಮತಿಯಾದವನು, ಬ್ರಹ್ಮ ವಿಷ್ಣು ಇಂದ್ರ ಶಂಕರ– ಇವರುಗಳನ್ನು ನೋಡಿ,—ಅಯ್ಯೋ! ಪಾಪ! ಇವರೆಲ್ಲರೂ ವೃಥಾಸಂಕಟಪಡುತಿರುವರಲ್ಲ!!—ಎಂದು ದಯೆಪಡುವನು ॥೧೯॥

ಆಯಾ ಪ್ರದೇಶದಲ್ಲಿ ಸಜ್ಜನಬಹುಳರಾದ ಜನರು ಯಾವನನ್ನು ಸಾಧುವನ್ನಾಗಿ ಹೇಳುವರೋ, ಅವನು ಮಹಾತ್ಮನು; ಅವನು ಸಾಧುವೆನ್ನಿಸುವನು. ಅವನನ್ನು ಪ್ರಯತ್ನಪೂರ್ವಕವಾಗಿ ಆಶ್ರಯಿಸಬೇಕು ॥೨೦॥

ವಿದ್ಯೆಗಳಲ್ಲೆಲ್ಲ ಅಧ್ಯಾತ್ಮವಿದ್ಯೆಯು ಪ್ರಧಾನವಾದುದು; ಅಂತಹ ಅಧ್ಯಾತ್ಮವಿದ್ಯೆಯ ಕಥೆಯನ್ನು ವಿಷಯಮಾಡಿಕೊಂಡಿರುವ ಶಾಸ್ತ್ರವನ್ನು ಸಚ್ಛಾಸ್ತ್ರವೆಂದು ಹೇಳುವರು. ಇಂತಹ ಸಚ್ಛಾಸ್ತ್ರವನ್ನು ವಿಚಾರಮಾಡುವುದರಿಂದ ಮುಕ್ತನಾಗುವನು ॥೨೧॥

ಚಿಲ್ಲದ ಬೀಜದ ಸಂಬಂಧದಿಂದ ನೀರಿನ ದೋಷಗಳು ಹೇಗೆ ಅಡಗುವುವೋ, ಯೋಗಾಭ್ಯಾಸದಿಂದ ಜನರ ಬಾಹ್ಯಮನೋವೃತ್ತಿಗಳು ಹೇಗೆ ನಾಶಹೊಂದುವುವೋ, ಹಾಗೆ ಸಚ್ಛಾಸ್ತ್ರ ಸತ್ಸಂಗ ಜನ್ಯಗಳಾದ ವಿವೇಕಗಳಿಂದ ಅಜ್ಞಾನಗಳು ಬಲಾತ್ಕಾರಪೂರ್ವಕವಾಗಿ ನಾಶಹೊಂದುವುವು ॥೨೨॥

ಇದು ಉತ್ಪತ್ತಿಪ್ರಕರಣದಲ್ಲಿ ಪ್ರಯತ್ನೋಪದೇಶವೆಂಬ
ಆರನೆಯ ಸರ್ಗವು.

ಕರ್ಮಗಳಿಂದ

ಅಥ ಉತ್ಪತ್ತಿಪ್ರಕರಣೇ ಸಪ್ತಮಃ ಸರ್ಗಃ.

ಶ್ರೀರಾಮ ಉವಾಚ.

ಯದೇಷ ದೇವಃ ಕಥಿತೋ ಯಸ್ಮಿನ್ ಜ್ಞಾತೇ ವಿಮುಚ್ಯತೇ |
ವದ ಕ್ವಾಸೌ ಸ್ಥಿತೋ ಬ್ರಹ್ಮನ್ ಕಥಮೇನಮಹಂ ಲಭೇ ||೧||

ಶ್ರೀವಸಿಷ್ಠ ಉವಾಚ.

ಯದೇಷ ದೇವಃ ಕಥಿತೋ ನೈಷ ದೂರೇವತಿಷ್ಠತೇ |
ಶರೀರೇ ಸಂಸ್ಥಿತೋ ನಿತ್ಯಂ ಚಿನ್ಮಾತ್ರಮಿತಿ ವಿಶ್ರುತಃ ||೨||
ಏಷಸರ್ವಮಿದಂ ವಿಶ್ವಂ ನ ವಿಶ್ವಂ ಚೈಷ ಸರ್ವಗಃ |
ವಿದ್ಯತೇ ಹ್ಯೇಷಏವೈಕೋ ನ ತು ವಿಶ್ವಾಭಿಧಾಸ್ತಿ ದೃಕ್ ||೩||

ಉತ್ಪತ್ತಿಪ್ರಕರಣದಲ್ಲಿ ಏಳನೆಯ ಸರ್ಗವು.

ವಿರಿಞ್ಚ್ಯಾದಿಜಗನ್ಮೂಲಂ ಯೋದೇವಃ ಪ್ರಾಙ್ನಿರೂಪಿತಃ |
ನಿರಸ್ತನಿಖಿಲೋಪಾಧೇಃ ತಸ್ಯ ತತ್ತ್ವಮಿಹೋಚ್ಯತೇ ||

ಚತುರ್ಮುಖ ಮೊದಲಾದ ಜಗತ್ತಿಗೆಲ್ಲ ಮೂಲಭೂತನಾದ ಯಾವ ದೇವನು ಹಿಂದೆ ನಿರೂಪಿಸಲ್ಪಟ್ಟನೋ, ಸಕಲೋಪಾಧಿವಿನಿರ್ಮುಕ್ತನಾದ ಅವನ ತತ್ವವು ಈ ಸರ್ಗದಲ್ಲಿ ಹೇಳಲ್ಪಡುವುದು.

ಅಂತರಾಳಿಕಪ್ರಸಕ್ತಿಯಿಂದ ತಿಳಿಯಬೇಕಾಗಿಬಂದ ಸಾಧನಸ್ವರೂಪವು ತಿಳಿಯಲಾಗಿ, ಪ್ರಕೃತವಾದ ತತ್ವಸ್ವರೂಪವನ್ನು ತಿಳಿಯಬೇಕೆಂದು ಮತ್ತೆ ಶ್ರೀರಾಮನು ವಸಿಷ್ಠಮುನಿಯನ್ನು ಕುರಿತು ಪ್ರಶ್ನೆ ಮಾಡಿದನು.

ಬ್ರಹ್ಮರ್ಷಿವರ್ಯರೆ ತಾವು ಯಾವ ದೇವನ ಸ್ವರೂಪವನ್ನು ತಿಳಿದರೆ ಮುಕ್ತಿಯಾಗುವುದೆಂದು ಅಪ್ಪಣೆಕೊಟ್ಟಿರೋ, ಅವನು ಎಲ್ಲಿರುವನು? ಅವನನ್ನು ನಾನು ಹೇಗೆ ಪಡೆದೇನು? – ಅಪ್ಪಣೆ ಕೊಡಿಸಬೇಕು ||೧||

ಈ ರಾಮನ ಪ್ರಶ್ನೆಗೆ ವಸಿಷ್ಠರು ಉತ್ತರ ಹೇಳುವರು.

ಅಯ್ಯಾ! ರಾಮ! ನಾನು ಹೇಳಿದ ಈ ದೇವನು ದೂರದಲ್ಲಿಲ್ಲ; ನಮ್ಮ ಶರೀರದಲ್ಲಿ ಕೇವಲ ಜ್ಞಾನಮಾತ್ರ ರೂಪನಾಗಿ ನಿತ್ಯವೂ ಇರುವನೆಂದು ಪ್ರಪಂಚದಲ್ಲೆಲ್ಲ ಪ್ರಸಿದ್ಧನಾಗಿರುವನು ||೨||

ಆದರೆ ಇವನು ದೇಹಪರಿಚ್ಛಿನ್ನನೆಂದು ತಿಳಿಯಬಾರದು; ಈ ಸಮಸ್ತ ಪ್ರಪಂಚವೂ ಇವನೇ. ಇದರಿಂದ ಇವನು ಈ ದೃಶ್ಯಪ್ರಪಂಚರೂಪನೆಂದೂ ತಿಳಿಯಬಾರದು; ಇವನು ಸರ್ವವ್ಯಾಪಿಯಾದವನು. ಮತ್ತು, ಇವನೊಬ್ಬನೇ ಇರತಕ್ಕವನು; ಈ ವಿಶ್ವವೆಂಬ ಜ್ಞಾನವೇ ಇಲ್ಲವೇ ಇಲ್ಲ ||೩||

ಚಿನ್ಮಾತ್ರಮೇಷ ಶಶಿಭೃತ್ ಚಿನ್ಮಾತ್ರಂ ಗರುಡೇಶ್ವರಃ |
ಚಿನ್ಮಾತ್ರಮೇವ ತಪನಃ ಚಿನ್ಮಾತ್ರಂ ಕಮಲೋದ್ಭವಃ ||೪||

ಶ್ರೀರಾಮ ಉವಾಚ.

ಬಾಲಾಅಪಿ ವದನ್ತ್ಯೇತತ್ ಯದಿ ಚೇತನಮಾತ್ರಕಮ್ |
ಜಗದಿತ್ಯೇವ ಕೈವಾತ್ರ ನಾಮ ಸ್ಯಾದುಪದೇಶತಾ ||೫||

ಶ್ರೀವಸಿಷ್ಠ ಉವಾಚ.

ಚಿನ್ಮಾತ್ರಂ ಚೇತನಂ ವಿಶ್ವಂ ಇತಿ ಯಜ್ಜ್ಞಾತವಾನಸಿ |
ನ ಕಿಂಚಿದೇವ ವಿಜ್ಞಾತಂ ಭವತಾ ಭವನಾಶನಮ್ ||೬||
ಚೇತನಂ ರಾಮ ಸಂಸಾರೋ ಜೀವಏಷ ಪಶುಃ ಸ್ಮೃತಃ |
ಏತಸ್ಮಾದೇವ ನಿರ್ಯಾನ್ತಿ ಜರಾಮರಣಭೀತಯಃ ||೭||

ಈ ಚಂದ್ರಮೌಳಿಯಾದ ಮಹೇಶ್ವರನೂ ಚೈತನ್ಯಮಾತ್ರ ಸ್ವರೂಪನಾದವನೇ; ಆ ಗರುಡವಾಹನನಾದ ವಿಷ್ಣುವೂ ಅವನೇ; ಮೂರ್ತಿತ್ರಯಾತ್ಮಕನೆಂದು ಹೇಳಲ್ಪಡುವ ಸೂರ್ಯನೂ ಅವನೇ; ಬ್ರಹ್ಮನೂ ಅವನೇ ||೪||

'ಚಿನ್ಮಾತ್ರಂ' ಎಂಬ ಶಬ್ದದಲ್ಲಿರುವ 'ಚಿತ್' ಎಂಬ ಶಬ್ದದಲ್ಲಿರುವ ಪ್ರತ್ಯಯವು ಕರ್ತ್ರರ್ಥದಲ್ಲಿ ಬಂದಿರುವುದೆಂದು ನಿಶ್ಚಯಮಾಡಿಕೊಂಡು, ಈ ವಿಧವಾದ ಚಿತ್ಪದಾರ್ಥವು ಪ್ರಪಂಚವೆಲ್ಲ ಆಗುವುದೆಂದು ಶಂಕಿಸುವವರ ಅಭಿಪ್ರಾಯವನ್ನು ಪ್ರಕಾಶಪಡಿಸುವುದಕ್ಕಾಗಿ ಶ್ರೀರಾಮನು ಪುನಃ ಹೇಳಿದನು.

ಸ್ವಾಮಿ! ಈ ಜಗತ್ತೆಲ್ಲವೂ ಚೇತನಮಾತ್ರವೆಂಬ ಮಾತನ್ನು ಅಜ್ಞರೂ ಕೂಡ ಹೇಳುವರು. ಇಂತಹ ವಚನವೆಲ್ಲವೂ ಉಪದೇಶವಾಕ್ಯವಾಗುವುದೇ? ||೫||

ಹೀಗೆ ಶಂಕಿಸುತ್ತಿರುವ ಶ್ರೀರಾಮಚಂದ್ರನನ್ನು ಕುರಿತು, ಶ್ರೀವಸಿಷ್ಠಮಹರ್ಷಿಗಳು 'ಚಿತ್' ಎಂಬ ಶಬ್ದದಲ್ಲಿರುವ ಪ್ರತ್ಯಯವು ಕರ್ತ್ರರ್ಥದಲ್ಲಿ ಬಂದಿಲ್ಲ; ಭಾವಾರ್ಥದಲ್ಲಿ ಬಂದಿದೆ— ಎಂಬ ವಿಷಯವನ್ನು ತಿಳಿಯಪಡಿಸುವುದಕ್ಕೋಸ್ಕರ, (೧) ಮತ್ತೆ ಹೇಳಿದರು.

ಅಯ್ಯಾ! ರಾಮ! ಚಿನ್ಮಾತ್ರವೆಂದರೆ ಚೇತನವಾದ ವಿಶ್ವವೆಂದು ನೀನು ತಿಳಿದಿರುವೆಯಲ್ಲವೆ! ಆದುಕಾರಣ, ನೀನು ಸಂಸಾರನಾಶಕವಾದುದನ್ನು ಸ್ವಲ್ಪವೂ ತಿಳಿದಂತೆಯೇ ಆಗಲಿಲ್ಲ ||೬||

ರಾಮ! ಚೇತನವೆಂದರೆ ಸಂಸಾರರೂಪನಾದ ಜೀವನಾಗುವನು; ಇವನು ಬಹಿರ್ಮುಖನಾಗಿ ವಿಷಯಗಳನ್ನೇ ಸಾರತಮಗಳೆಂದು ತಿಳಿಯುವ ಕಾರಣ, ಪಶುವೆನ್ನಲ್ಪಡುವನು. ಇವನಿಂದಲೇ ಜರಾಮರಣಾದಿ ಭೀತಿಗಳು ಆವಿರ್ಭವಿಸುವುವು ||೭||

---

(೧) ಕರ್ತ್ರರ್ಥದಲ್ಲಿ ಪ್ರತ್ಯಯ ಬಂದ ಪಕ್ಷದಲ್ಲಿ ತಿಳಿಯತಕ್ಕವನೆಂದು ಅರ್ಥವಾಗುವುದು; ಇದು ಪ್ರಕೃತ ವಿರೋಧಿಯಾಗುವುದು. ಭಾವಾರ್ಥದಲ್ಲಿ ಬಂದರೆ ಜ್ಞಾನಮಾತ್ರವೆಂದರ್ಥವಾಗುವುದು; ಈ ಜ್ಞಾನಮಾತ್ರವಾದುದು ಪ್ರಪಂಚವೆಂದಿಗೂ ಆಗುವುದಿಲ್ಲವಾದಕಾರಣ ಈ ಅರ್ಥದಲ್ಲಿ ವಿರೋಧವಿಲ್ಲವೆಂದು ಮುಖ್ಯ ತಾತ್ಪರ್ಯವು. ಇಲ್ಲಿ ಬಹು ವಿಸ್ತಾರವಾಗಿ ಶಾಸ್ತ್ರಾರ್ಥವಿಚಾರವಿರುವುದು; ಅದೆಲ್ಲವೂ ಶಾಸ್ತ್ರಪರಿಚಯವುಳ್ಳವರಿಗೆ ಗೊತ್ತೇ ಇರುವುದು.

ಪಶುರಜ್ಞೋ ಹ್ಯಮೂರ್ತೋಽಪಿ ದುಃಖಸ್ಯೈವೈಷ ಭಾಜನಮ್ ।
ಚೇತನತ್ವಾಚ್ಚೇತನೀಯಂ ಮನೋಽನರ್ಥಃ ಸ್ವಯಂ ಸ್ಥಿತಃ ॥೮॥
ಚೇತ್ಯನಿರ್ಮುಕ್ತತಾ ಯಾ ಸ್ಯಾತ್ ಅಚೇತ್ಯೋನ್ಮುಖತಾಥವಾ ।
ಅಸ್ಯ ಸಾ ಭರಿತಾವಸ್ಥಾ ತಾಂ ಜ್ಞಾತ್ವಾ ನಾನುಶೋಚತಿ ॥೯॥
ಭಿದ್ಯತೇ ಹೃದಯಗ್ರನ್ಥಿಃ ಛಿದ್ಯನ್ತೇ ಸರ್ವಸಂಶಯಾಃ ।
ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥೧೦॥
ತಸ್ಯ ಚೇತ್ಯೋನ್ಮುಖತ್ವಂ ತು ಚೇತ್ಯಾಸಮ್ಭವನಂ ವಿನಾ ।

'ಅಶರೀರಂ ನ ಪ್ರಿಯಾಪ್ರಿಯೇ ಸ್ಪೃಶತಃ' ಇತ್ಯಾದಿ ಶ್ರುತಿವಚನಗಳು, ಶರೀರವುಳ್ಳವನಿಗೇ ಸುಖದುಃಖಾದಿಸಂಬಂಧವಲ್ಲದೆ ಶರೀರವಿಲ್ಲದವನಿಗೆ ಆ ಸಂಪರ್ಕವಿಲ್ಲವೆಂದು ಹೇಳುವಕಾರಣ, ಸ್ಥೂಲದೇಹರಹಿತನಾದ ಜೀವನಿಗೆ ಜರಾಮರಣಾದಿ ಜ್ಞಾನವೇ ಸಂಭವಿಸುವುದಿಲ್ಲವೆಂದು ಶಂಕಿಸಬಹುದಲ್ಲವೆ! ಈ ಶಂಕೆಯೂ ಯುಕ್ತವಲ್ಲ. 'ಅಶರೀರಂ' ಎಂಬ ಕಡೆಯಲ್ಲಿ ಸ್ಥೂಲ ಸೂಕ್ಷ್ಮ ಕಾರಣಗಳೆಂಬ ಮೂರು ಶರೀರವೂ ಇಲ್ಲದವನೆಂದರ್ಥವು, ಅಜ್ಞನಾದ ಈ ಜೀವನು, ಸ್ಥೂಲದೇಹರಹಿತನಾಗಿದ್ದರೂ, ದುಃಖಭಾಜನನಾಗಿಯೇ ಆಗುವನು. ಏತಕ್ಕೆಂದರೆ, ಇವನು ಚೇತನವಾಗಿರುವುದರಿಂದ, ತಾನೇ ಚೇತನೀಯವಾದ ಮನಸ್ಸೆಂಬ ಅನರ್ಥವಾಗಿಯೂ ಇರುವನು. ಅದುಕಾರಣ, ಇವನಿಗೆ ಅಜ್ಞಾನವಿರುವವರೆಗೂ ಸುಖದುಃಖಾದಿ ಸಂಪರ್ಕವುಂಟೇ ಉಂಟು ॥೮॥

ಹಾಗಾದಮೇಲೆ ಈ ಜೀವನು ಹೇಗಿದ್ದರೆ ಜ್ಞಾನದಿಂದ ಕೃತಕೃತ್ಯನಾಗುವನೆಂದರೆ, (೧) ಈ ಚೇತನೀಯವಾದುದರಿಂದ ಬಿಟ್ಟಿರುವಿಕೆಯಾವುದುಂಟೋ, (೨) ಅಥವಾ ಚೇತನೀಯದಲ್ಲಿ ಅಭಿಮುಖನಾಗದಿರುವುದಾವುದುಂಟೋ, ಅದು ಇವನಿಗೆ ಪರಿಪೂರ್ಣವಾದ ಅವಸ್ಥೆಯೆನ್ನಿಸುವುದು; ಆ ಅವಸ್ಥೆಯನ್ನು ಹೊಂದಿದಾಗ, ಇವನು ದುಃಖಭಾಗಿಯಾಗುವುದಿಲ್ಲ॥೯

ಇದೇ ವಿಷಯವನ್ನು ಶ್ರುತಿಯೂ ಹೇಳುವುದು.—ಸಮಸ್ತಕಾರಣಗಳಿಗಿಂತ ಮೇಲಾಗಿರುವ ಆ ಪರಮಾತ್ಮನ ಸಾಕ್ಷಾತ್ಕಾರವಾಗಲಾಗಿ, ಈ ಜೀವನಿಗೆ—ಮೂಲಭೂತವಾದ ಅಜ್ಞಾನವು ನಾಶವಾಗಿ ಇದರಿಂದ ಉಂಟಾಗಿದ್ದ ಅಂತಃಕರಣ ಮೋಹವೂ ಭಿನ್ನವಾಗುವುದು; ಬಳಿಕ, ಇದರಿಂದ ಉಂಟಾಗಿದ್ದ ಸಮಸ್ತಸಂಶಯಗಳೂ ಛಿನ್ನವಾಗುವುವು; ಮತ್ತು ಸಕಲ ಕರ್ಮಗಳೂ ಕ್ಷೀಣವಾಗುವುವು ॥೧೦॥

'ಹೀಗಾದಮೇಲೆ ಚಿತ್ತನಿರೋಧ ರೂಪವಾದ ಯೋಗದಿಂದಲೇ, ಪೂರ್ವೋಕ್ತವಾದ ಚೇತನೀಯದಲ್ಲಿ ಅಭಿಮುಖ್ಯವು ತಪ್ಪಬಹುದಲ್ಲವೆ!'—ಎಂದು ಶಂಕೆಯುಂಟಾಗಬಹುದು; ಅದೂ ಯುಕ್ತವಲ್ಲ. ಈ ಜೀವನು ಚೇತನೀಯದಲ್ಲಿ ಅಭಿಮುಖನಾಗುವಿಕೆ

---

(೧) ಚೇತನವೆಂದರೆ ಜ್ಞಾನವುಂಟುಮಾಡತಕ್ಕದು, ಚೇತನೀಯವೆಂದರೆ ಮತ್ತೊಂದರಿಂದ ಜ್ಞಾನವುಂಟುಮಾಡಲ್ಪಡತಕ್ಕದು.

(೨) ಚೇತನೀಯವನ್ನು ಬಿಟ್ಟಿರುವ ಸ್ಥಿತಿಯು ಮುಕ್ತಿಯಲ್ಲಿಯೂ, ಅದರಲ್ಲಿ ಅಭಿಮುಖನಾಗದಿರುವ ಸ್ಥಿತಿಯು ಸಮಾಧಿಕಾಲದಲ್ಲಿಯೂ ಉಂಟಾಗುವುವು.

ರೋದ್ಧುಂ ನಶಕ್ಯತೇ ದೃಶ್ಯಂ ಚೇತ್ಯಂ ಶಾಮ್ಯತಿ ವೈ ಕಥಮ್ ॥೧೧॥
ಅಚೇತ್ಯಚಿತ್ಸ್ವರೂಪಂ ಯತ್ ತಚ್ಛಾ ಸಮ್ಭವನಂ ವಿನಾ ।
ಕ್ವ ಸ್ವರೂಪೋಽನ್ಮಷತ್ವಂ ಹಿ ಕೇವಲಂ ಚೇತ್ಯರೋಧತಃ ॥೧೨॥

ಶ್ರೀರಾಮ ಉವಾಚ.

ಯಸ್ಮಿನ್ ಜೀವೇ ಹಿ ವಿಜ್ಞಾತೇ ನ ವಿನಶ್ಯತಿ ಸಂಸೃತಿಃ ।
ವ್ಯೋಮರೂಪೀ ಪಶುಸ್ತ್ವಜ್ಞಃ ಸ ಬ್ರಹ್ಮನ್ ಕುತ್ರ ಕೀದೃಶಃ ॥೧೩॥
ಸಾಧುಸಙ್ಗಮಸಚ್ಛಾಸ್ತ್ರೈಃ ಸಂಸಾರಾರ್ಣವತಾರಕಃ ।
ದೃಶ್ಯತೇ ಪರಮಾತ್ಮಾ ಯಃ ಸ ಬ್ರಹ್ಮನ್ ವದ ಕೀದೃಶಃ ॥೧೪॥

ಯನ್ನು ತಡೆಯಬೇಕಾದರೆ, ಚೇತನೀಯವು ಅಸಂಭವವಾಗಿದ್ದರಾಗುವುದಲ್ಲದೆ, ಅನ್ಯಥಾ ಆಗುವುದಿಲ್ಲ. ಈ ಚೇತನೀಯವು ಶಾಂತಿಹೊಂದುವ ಬಗೆ ಹೇಗೆ? ॥೧೧॥

ಹೀಗೆ ಮೋಕ್ಷವೂ ಜ್ಞಾನವಿಲ್ಲದೆ ಲಭಿಸುವುದಿಲ್ಲ. ಏತಕ್ಕೆಂದರೆ.—ತಾನು ಚೇತನೀಯವಾಗದೆ ಸ್ವಯಂ ಚಿದ್ರೂಪವಾಗಿರುವ ಸ್ಥಿತಿಯೇ ಮೋಕ್ಷವೆನ್ನಿಸುವುದಲ್ಲವೆ! ಇಂತಹ ಸ್ಥಿತಿಯುಂಟಾಗಬೇಕಾದರೆ, ಚೇತನೀಯವಾದುದು ಸುತರಾಂ ಅಸಂಭವವಾದುದಲ್ಲದೆ ಎಲ್ಲಿ ಉಂಟಾಗುವುದು? ಸಮಾಧಿಯಲ್ಲಿಯೂ ಚೇತನೀಯವಾದ ಈ ದೃಶ್ಯವನ್ನು ಬಾಧೆಪಡಿಸಿಯೇ ಸ್ವರೂಪದಲ್ಲಿ ಆಭಿಮುಖ್ಯವುಂಟಾಗುವಾಗ, ಮೋಕ್ಷದಲ್ಲಿ ಹೇಳತಕ್ಕುದೇನು? ॥೧೨॥

ಪುನಃ ಶ್ರೀರಾಮನು ಪ್ರಶ್ನೆಮಾಡುವನು.—

ಬ್ರಾಹ್ಮಣೋತ್ತಮರೆ! ತಾವು ಅಪ್ಪಣೆಕೊಟ್ಟಮೇರೆಗೆ ಯಾವ ಜೀವನನ್ನು ತಿಳಿದರೆ ಈ ಸಂಸಾರವು ನಾಶವಾಗುವುದಿಲ್ಲವೋ, ಅಂತಹ ಆಕಾಶರೂಪನಾದ ಅಜ್ಞನಾದ ಪಶುಸಂಜ್ಞಕನಾದ ಜೀವನು, ಎಲ್ಲಿ—ಯಾವವಿಧವಾಗಿರುವನು? ॥೧೩॥

ಮತ್ತು ಸಂಸಾರಸಮುದ್ರವನ್ನು ದಾಟಿಸುವ ಯಾವ ಪರಮಾತ್ಮನು ಸತ್ಸಂಗ ಸಚ್ಛಾಸ್ತ್ರಗಳಿಂದ ಕಾಣಲ್ಪಡುವನೋ, ಅವನು ಹೇಗಿರುವನು? ಎಲೈ ಬ್ರಾಹ್ಮಣೋತ್ತಮರೆ! ಈ ವಿಷಯವನ್ನು ನನಗೆ ಅಪ್ಪಣೆಕೊಡಿಸಿರಿ (೧) ॥೧೪।

---

(೧) ಇಲ್ಲಿ ಸ್ವಲ್ಪ ವಿಚಾರವಿರುವುದು. ಶ್ರೀರಾಮಪ್ರಶ್ನರೂಪವಾಗಿರುವ (೧೩-೧೪)ನೆ ಈ ಎರಡು ಶ್ಲೋಕಗಳಲ್ಲಿ, ಮೊದಲನೆಯದರಲ್ಲಿ ಜೀವಸ್ವರೂಪವೆಂತಹುದೆಂದೂ—ಎರಡನೆಯದರಲ್ಲಿ ಬ್ರಹ್ಮಸ್ವರೂಪವೆಂತಹುದೆಂದೂ ಸಾಮಾನ್ಯವಾಗಿ ಅರ್ಥತೋರುವುದು. ಹೀಗರ್ಥವಾದರೆ, ಈ ರಾಮನ ಪ್ರಶ್ನೆಗಳೆರಡೂ ಅಸಂಗತವಾಗುವುವು. 'ಚೇತನಂ ರಾಮ ಸಂಸಾರಃ' ಇತ್ಯಾದಿ(೩ನೇ) ಶ್ಲೋಕದಲ್ಲಿ ಜೀವಸ್ವರೂಪವನ್ನು ಹೇಳಿರುವುದರಿಂದ, ಪುನಃ ಆ ವಿಷಯವನ್ನು ಕೇಳುವುದು ಅಸಂಗತವಾಯ್ತು. ಬ್ರಹ್ಮಸ್ವರೂಪವನ್ನು ಈ ಸರ್ಗದ ಪ್ರಥಮಶ್ಲೋಕದಲ್ಲಿಯೇ ಪ್ರಶ್ನೆಮಾಡಿರುವುದರಿಂದ ಪುನಃ ಪ್ರಶ್ನೆಮಾಡುವುದಸಂಗತವಾಗುವುದು. ಹೀಗೆ ತೋರಿದರೆ, ಈ ಎರಡು ಶ್ಲೋಕಕ್ಕೂ ಸ್ವಲ್ಪವಿಚಾರದಿಂದ ಅರ್ಥಕಲ್ಪನೆಮಾಡಬೇಕು. ವಸಿಷ್ಠರು ಹೇಳಿದಂತೆ ಜೀವನೇ ಸಂಸಾರವೆಂದಿಟ್ಟುಕೊಂಡರೆ, ಜೀವನಿಗೆ ಬ್ರಹ್ಮಪ್ರಾಪ್ತಿಯಾದಾಗ ಬ್ರಹ್ಮನಿಗೂ ಸಂಸಾರವುಂಟಾದಂತಾಯ್ತು. ಜೀವನಿಗೆ ಬ್ರಹ್ಮಪ್ರಾಪ್ತಿಯಿಲ್ಲವೆಂದರೆ, ಈ ಬ್ರಹ್ಮಪ್ರಾಪ್ತಿಗೋಸ್ಕರವಾಗಿ ಮಾಡಿರತಕ್ಕ ಜ್ಞಾನಶಾಸ್ತ್ರವೇ ವ್ಯರ್ಥವಾಗುವುದು. ಅದು ಕಾರಣ, ಜೀವನ ಸ್ವರೂಪವು ವಸಿಷ್ಠರಿಂದ

ಶ್ರೀ ವಸಿಷ್ಠ ಉವಾಚ.

ಯದೇತಚ್ಚೇತನಂ ಜೀವೋ ವಿಶೀರ್ಣೋ ಜನ್ಮಜಙ್ಗಲೇ ।
ಏತಮಾತ್ಮಾನಮಿಚ್ಛನ್ತಿ ಯೇ ತೇಽಜ್ಞಾಃ ಪಣ್ಡಿತಾಅಪಿ ॥೧೫॥
ಜೀವಏವ ಹಿ ಸಂಸಾರಃ ಚೇತನಾ ದುಃಖಸಂಸೃತಿಃ ।
ಅಸ್ಮಿನ್ ಜ್ಞಾತೇ ನ ವಿಜ್ಞಾತಂ ಕಿಂಚಿದ್ಭವತಿ ಕುತ್ರಚಿತ್ ॥೧೬॥
ಜ್ಞಾಯತೇ ಪರಮಾತ್ಮಾ ಚೇತ್ ರಾಮ ದುಃಖಸ್ಯ ಸನ್ತತಿಃ ।
ಕ್ಷಯಮೇತಿ ವಿಷಾವೇಶಶಾನ್ತಾವಿವ ವಿಷೂಚಿಕಾ ॥೧೭॥

ಹೀಗೆ ರಾಮನು ಪ್ರಶ್ನೆಮಾಡಿದ್ದಕ್ಕೆ ವಸಿಷ್ಠಮುನಿಗಳು ಉತ್ತರಹೇಳಿದರು.

ವತ್ಸ! ರಾಮ! ನಿನ್ನ ಮಾತಿನ ಅಭಿಪ್ರಾಯವೆಲ್ಲವೂ ತಿಳಿಯಿತು. (೧) ಈ ಶರೀರ ಸಮುದಾಯವೆಂಬ ದೊಡ್ಡ ಶೂನ್ಯಾಟವಿಯಲ್ಲಿ ಜೀರ್ಣವಾಗಿರುವ ಜೀವನೆಂಬ ಯಾವ ಚೇತನವುಂಟೋ, ಇದನ್ನು ಯಾರು ಆತ್ಮನೆಂದು ತಿಳಿಯುವರೋ, ಅವರು ಎಂತಹ ಪಂಡಿತರಾದರೂ ಅಜ್ಞರೆನಿಸುವರು ॥೧೫॥

ಈ ಜೀವನೇ ಸಂಸಾರವು; ಇವನೇ ಚೇತನವು; ಇವನೇ ದುಃಖಸಮುದಾಯವು. ಇವನನ್ನು ತಿಳಿದಮಾತ್ರದಿಂದಲೇ ಎಲ್ಲಿಯೂ ಯಾವುದೂ ತಿಳಿಯಲ್ಪಟ್ಟಂತೆ ಆಗುವುದಿಲ್ಲ ॥

ಹೇ ರಾಮ! ಆ ಪರಮಾತ್ಮನನ್ನು ತಿಳಿದಪಕ್ಷದಲ್ಲಿ, ವಿಷವೇಗವೆಲ್ಲವೂ ಶಾಂತಿಯಾದ ಮೇಲೆ ವಿಷೂಚಿಕಾರೋಗವು ಕ್ಷಯಹೊಂದುವಂತೆ, ದುಃಖಸಮುದಾಯವು ಕ್ಷಯಹೊಂದುವುದು ॥೧೭॥

ಹೇಳಲ್ಪಟ್ಟುದು ಸರಿಯಾಗಿರಲಾರದು, ಬೇರೆಯಾಗಿರಬೇಕೆಂದು ಯೋಚಿಸಿ ಶ್ರೀರಾಮನು ಪ್ರಥಮ ಶ್ಲೋಕವನ್ನು ಹೇಳಿದನು. ಆಮೇಲೆ ಈ ಜೀವನಿಗೆ ಆಧಾರವಾದುದು ಬ್ರಹ್ಮವೇಯೋ? ಅಥವಾ ಬೇರೆಯಾದ ಪದಾರ್ಥವೇ?—ಎಂದು ಪಕ್ಷದ್ವಯವಿಟ್ಟುಕೊಂಡರೆ, ಮೊದಲನೆಯ ಪಕ್ಷದಲ್ಲಿ,—ಬ್ರಹ್ಮನಲ್ಲಿ ಆರೋಪಿತವಾದಸಮಸ್ತವೂ ಜ್ಞಾನದಿಂದ ನಾಶವಾಗಬೇಕಾಗಿರುವಾಗ, ಇದಕ್ಕೂ ನಾಶಪ್ರಸಕ್ತಿಯಾದೀತು. ಅದುಬಿಟ್ಟು ಬ್ರಹ್ಮವಲ್ಲದೆ ಪದಾರ್ಥಾಂತರವೆಂದು ಹೇಳಿದರೆ, ಬ್ರಹ್ಮವು ಅದ್ವಿತೀಯವೆಂಬ ಮಾತು ಅಯುಕ್ತವಾಗುವುದು. ಅದುಕಾರಣ, ಬ್ರಹ್ಮನ ಸ್ವರೂಪವೂ ಬೇರೆಯಾಗಿರಬಹುದೆಂದು ಯೋಚಿಸಿ, ಶ್ರೀರಾಮನು ದ್ವಿತೀಯ ಶ್ಲೋಕವನ್ನು ಹೇಳಿದನು.

(೧) ಪೂರ್ವೋಕ್ತರೀತಿಯಾಗಿ ರಾಮನ ಪ್ರಶ್ನೆಯಾದಬಳಿಕ, ವಸಿಷ್ಠರ ಉತ್ತರದಲ್ಲಿಯೂ ಸ್ವಲ್ಪ ವಿಚಾರಮಾಡಬೇಕು. ರಾಮನು ಮಾಡಿದ ಆಕ್ಷೇಪಣೆಯು ಯುಕ್ತವಾಗಬೇಕಾಗಿದ್ದರೆ, ಜೀವನೇ ಸಂಸಾರಿಯಾಗಿಯೂ—ಅವನೇ ತನ್ನ ಜ್ಞಾನದಿಂದ ಮುಕ್ತಿಹೊಂದತಕ್ಕವನಾಗಿಯೂ ಅವನೇ ಪರಮಾರ್ಥವಾಗಿ ಆತ್ಮನಾಗಿಯೂ ಇರಬೇಕಾದೀತು. ಪ್ರಕೃತದಲ್ಲಿ ಹಾಗಿಲ್ಲ; 'ಬ್ರಹ್ಮ ವಾ ಇದಮಗ್ರ ಆಸೀತ್' ಇತ್ಯಾದಿ ಶ್ರುತಿಗಳು—ಬ್ರಹ್ಮನಿಗೇ ಅಜ್ಞಾನದಿಂದ ಸಂಸಾರವೆಂದೂ ಜ್ಞಾನದಿಂದ ಮುಕ್ತಿಯೆಂದೂ ಹೇಳುವುವು; ಇದಲ್ಲದೆ ಬ್ರಹ್ಮನೇ ಸರ್ವಚೇತನಕರ್ತನೆಂದೂ ಹೇಳುವುವು. ಯಾವಾಗ ಬ್ರಹ್ಮನೇ ಭ್ರಾಂತಿಯಿಂದ ಜೀವತ್ವವನ್ನು ಹೊಂದಿದನೋ, ಆಗ ಜೀವನೇ ಸಂಸಾರನೆಂಬ ಉಕ್ತಿಯು ಅವಿರುದ್ಧವಾಗುವುದೆಂದು ಭಾವವು.

ಶ್ರೀರಾಮಉವಾಚ.

ರೂಪಂ ಕಥಯ ಮೇ ಬ್ರಹ್ಮನ್ ಯಥಾವತ್ ಪರಮಾತ್ಮನಃ ।
ಯಸ್ಮಿನ್ ದೃಷ್ಟೇ ಮನೋ ಮೋಹಾನ್ ಸಮಗ್ರಾನ್ ಸಂತರಿಷ್ಯತಿ ॥೧೮॥

ಶ್ರೀ ವಸಿಷ್ಠಉವಾಚ.

ದೇಶಾದ್ದೇಶಾಂತರಂ ದೂರಂ ಪ್ರಾಪ್ತಾಯಾಃ ಸಂವಿದೋ ವಪುಃ ।
ನಿಮೇಷೇಣೈವ ಯನ್ಮಧ್ಯೇ ತದ್ರೂಪಂ ಪರಮಾತ್ಮನಃ ॥೧೯॥
ಅತ್ಯಂತಾಭಾವಏವಾಸ್ತಿ ಸಂಸಾರಸ್ಯ ಯಥಾಸ್ಥಿತೇಃ ।
ಯಸ್ಮಿನ್ ಬೋಧಮಹಾಮ್ಭೋಧೌ ತದ್ರೂಪಂ ಪರಮಾತ್ಮನಃ ॥೨೦॥
ದ್ರಷ್ಟೃದೃಶ್ಯಕ್ರಮೋ ಯತ್ರ ಸ್ಥಿತೋಽಪ್ಯಸ್ತಮಯಂ ಗತಃ ।
ಯದನಾಕಾಶಮಾಕಾಶಂ ತದ್ರೂಪಂ ಪರಮಾತ್ಮನಃ ॥೨೧॥
ಅಶೂನ್ಯಮಿವ ಯಚ್ಛೂನ್ಯಂ ಯಸ್ಮಿನ್ ಶೂನ್ಯಂ ಜಗತ್ ಸ್ಥಿತಮ್ ।
ಸರ್ಗೌಘೇ ಸತಿ ಯಚ್ಛೂನ್ಯಂ ತದ್ರೂಪಂ ಪರಮಾತ್ಮನಃ ॥೨೨॥

ಶ್ರೀರಾಮನು ತನ್ನ ಪ್ರಶ್ನೆಗೆ ಸಮಾಧಾನಬಂದುದನ್ನು ತಿಳಿದು ಮತ್ತೆ ಹೇಳಿದನು. ಬ್ರಾಹ್ಮಣಶ್ರೇಷ್ಠರೆ! ಆ ಪರಮಾತ್ಮನ ರೂಪವನ್ನು ಯಥಾವತ್ತಾಗಿ ತಾವು ನನಗೆ ಅಪ್ಪಣೆ ಕೊಡಿಸಿರಿ. ಏತಕ್ಕೆಂದರೆ :—ಅದನ್ನು ಕಂಡುಬಿಟ್ಟಮೇಲೆ, ಮನಸ್ಸು ಸಮಸ್ತವಾದ ಮೋಹವನ್ನೂ ದಾಟಿಬಿಡುವುದು ॥೧೮॥

ವಸಿಷ್ಠರು ಹೇಳಿದರು.

ಅಯ್ಯಾ! ರಾಮ! ಮನುಷ್ಯರಿಗೆ ಜ್ಞಾನವು ಒಂದು ವಿಷಯವನ್ನು ಆಶ್ರಯಿಸಿಕೊಂಡಿರುತ್ತದೆಯಲ್ಲವೆ! ಅದು ಆ ವಿಷಯವನ್ನು ಬಿಟ್ಟು, ಮತ್ತೊಂದು ವಿಷಯವನ್ನು ನಿಮಿಷದೊಳಗಾಗಿ ಹೊಂದುವುದಲ್ಲವೆ! ಹೀಗೆ ಜ್ಞಾನವು ಒಂದು ವಿಷಯವನ್ನು ಬಿಟ್ಟು ಮತ್ತೊಂದು ವಿಷಯವನ್ನು ಹೊಂದುವಾಗ, ಈಯೆರಡುವಿಷಯಗಳ ಮಧ್ಯದಲ್ಲಿ ಸ್ವಲ್ಪಕಾಲ ವಿಷಯಶೂನ್ಯವಾಗಿ ಅಜ್ಞಾನವಿರುವುದಲ್ಲವೆ! ಈ ನಿರ್ವಿಷಯಕಜ್ಞಾನವೇ ಪರಮಾತ್ಮನ ರೂಪವಾಗಿರುವುದು ॥೧೯॥

ಜ್ಞಾನಮಹೋದಧಿಯಾದ ಯಾವುದರಲ್ಲಿ, ಈ ಸಂಸಾರಕ್ಕೆ ನಾಶಾದಿವಿಕಾರಗಳಿಲ್ಲದೆ ಸ್ವಭಾವತಃ ಅತ್ಯಂತಾಭಾವವೇ ಇರುವುದೋ, ಅದು ಪರಮಾತ್ಮನ ರೂಪವು ॥೨೦॥

ಯಾವುದರಲ್ಲಿ ದೃಶ್ಯ ದ್ರಷ್ಟೃ ಎಂಬ ಇತ್ಯಾದಿ ಕ್ರಮವು ಇದ್ದರೂ ಅಸ್ತಹೊಂದಿರುವುದೋ, ಯಾವುದು ಆಕಾಶರಹಿತವಾದರೂ ವೈಪುಲ್ಯದಿಂದ ಆಕಾಶವಾಗಿರುವುದೋ, ಅದು ಪರಮಾತ್ಮನ ರೂಪವು ॥೨೧॥

ಯಾವುದು ಜಗತ್ಸ್ವಭಾವಶೂನ್ಯವಾಗಿದ್ದರೂ ಸರ್ವವಸ್ತು ಪರಿಪೂರ್ಣವಾದಂತಿರುವುದೋ, ಶೂನ್ಯವಾಗಿದ್ದರೂ ಈ ಜಗತ್ತು ಯಾವುದರಲ್ಲಿರುವುದೋ, ಸೃಷ್ಟಿಪ್ರವಾಹರೂಪವಾದ ಅಜ್ಞಾನವು ತುಂಬಿರುವಾಗ ಯಾವುದು ಇಲ್ಲದಂತೆಯೇ ತೋರುವುದೋ, ಅದು ಪರಮಾತ್ಮನ ರೂಪವು ॥೨೨॥

ಯನ್ಮಹಾಚಿನ್ಮಯಮಪಿ ಬೃಹತ್ಪಾಷಾಣವತ್ ಸ್ಥಿತಮ್ ।
ಜಡಂ ವಾಜಡಮೇವಾನ್ತಃ ತದ್ರೂಪಂ ಪರಮಾತ್ಮನಃ ॥೧೩॥
ಸಬಾಹ್ಯಾಭ್ಯನ್ತರಂ ಯೇನ ಸರ್ವಂ ಸಮ್ಪ್ರಾಪ್ಯ ಸಜ್ಜಗಮ್ ।
ಸ್ವರೂಪಸತ್ತಾಮಾಪ್ನೋತಿ ತದ್ರೂಪಂ ಪರಮಾತ್ಮನಃ ॥೧೪॥
ಪ್ರಕಾಶಸ್ಯ ಯಥಾಲೋಕಃ ಶೂನ್ಯತ್ವಂ ನಭಸೋ ಯಥಾ ।
ತಥೇದಂ ಸಂಸ್ಥಿತಂ ಯತ್ರ ತದ್ರೂಪಂ ಪರಮಾತ್ಮನಃ ॥೧೫॥

ಶ್ರೀರಾಮಉವಾಚ.

ಸದ್ರೂಪಂ ಪರಮಾತ್ಮೇತಿ ಕಥಂನಾಮ ಹಿ ಬುಧ್ಯತೇ ।
ಇಯತೋಸ್ಯ ಜಗನ್ನಾಮ್ನೋ ದೃಶ್ಯಸ್ಯಾಸಮ್ಭವಃ ಕಥಮ್ ॥೧೬॥

ಶ್ರೀವಸಿಷ್ಠಉವಾಚ.

ಭ್ರಮಸ್ಯ ಜಾಗತಸ್ಯಾಸ್ಯ ಜಾತಸ್ಯಾಕಾಶವರ್ಣವತ್ ।
ಅತ್ಯನ್ತಾಭಾವಾಸಮ್ಬೋಧೇ ಯದಿ ರೂಢಿರಲಂ ಭವೇತ್ ॥೧೭॥
ತಜ್ಜ್ಞಾತಂ ಬ್ರಹ್ಮಣೋ ರೂಪಂ ಭವೇನ್ನಾನ್ಯೇನ ಕರ್ಮಣಾ ।

ಯಾವುದು ಮಹಾಚಿನ್ಮಯವಾಗಿದ್ದರೂ—ಅಜ್ಞರಿಗೆ ದೊಡ್ಡ ಬಂಡೆಯಂತಿರುವುದೋ, ಮತ್ತು ಒಳಗೆ ಜಡವಲ್ಲದೆಯೇ ಇದ್ದರೂ—ಅಜ್ಞದೃಷ್ಟಿಗೆ ಜಡದಂತಿರುವುದೋ, ಅದು ಪರಮಾತ್ಮನ ರೂಪವು ॥೧೩॥

ಆಧಿಭೌತಿಕ ಆಧಿದೈವಿಕವೆಂಬ ಬಹಿಸ್ಸ್ಥಿತವಾದ ರೂಪದೊಡನೆಯೂ ಆಧ್ಯಾತ್ಮಿಕವೆಂಬ ಅಂತಸ್ಸ್ಥಿತವಾದ ರೂಪದೊಡನೆಯೂ ಕೂಡಿರುವ ಈ ಸಮಸ್ತ ಜಗತ್ತೂ, ಯಾವುದರೊಡನೆ ಅಭ್ಯಾಸರೂಪವಾದ ಸಮಾಗಮವನ್ನು ಹೊಂದಿ—ಇದು ಇದು—ಎಂಬುದಾಗಿ ಸ್ವರೂಪಸ್ಥಿತಿಯನ್ನು ಪಡೆಯುವುದೋ, ಅದು ಪರಮಾತ್ಮನ ರೂಪವು ॥೧೪॥

ತೇಜಸ್ಸಿಗೆ ಪ್ರಭೆಯಂತೆಯೂ ಆಕಾಶಕ್ಕೆ ಶೂನ್ಯತ್ವದಂತೆಯೂ ಇದು ಯಾವುದರಲ್ಲಿರುವುದೋ, ಅದು ಪರಮಾತ್ಮನ ರೂಪವು ॥೧೫॥

ಹೀಗೆ ವಸಿಷ್ಠರು ಹೇಳಲು, ಪುನಃ ಶ್ರೀರಾಮನು ಕೇಳಿದನು.—

ಗುರುಗಳೆ! ತಾವು ಅಪ್ಪಣೆಕೊಡಿಸಿದಂತೆ ಆ ಪರಮಾತ್ಮನು ಈ ರೀತಿಯಾದ ರೂಪವುಳ್ಳವನೆಂದು ಕೇವಲ ಪ್ರಮಾಣ ವಚನಗಳಿಂದ ತಿಳಿಯಬೇಕಾಗಿದೆಯಲ್ಲದೆ, ನಮಗೆ ಅನುಭವವುಂಟಾಗುವಬಗೆ ಯಾವುದು? ಮತ್ತು ಈ ರೀತಿಯಾಗಿ ಇಷ್ಟು ದೊಡ್ಡದಾಗಿರುವ ಈ ಜಗತ್ತೆಂಬ ದೃಶ್ಯವು ಅಸಂಭವವೆಂದು ಅನುಭವವುಂಟಾಗುವುದೂ ಹೇಗೆ? ॥೧೬॥

ಶ್ರೀವಸಿಷ್ಠರು ಉತ್ತರಕೊಡುವರು.—

ವತ್ಸ! ಆಕಾಶದಲ್ಲಿ ಬಣ್ಣವೇ ಇಲ್ಲದಿದ್ದರೂ ಕಪ್ಪುಬಣ್ಣವಿರುವಂತೆ ನಮಗೆ ತೋರುವಹಾಗೆ, ಈ ಜಗತ್ತಿದೆಯೆಂಬ ಭ್ರಮೆಯೂ ಉಂಟಾಗುವುದು. ಈ ಭ್ರಮೆಯು ಅತ್ಯಂತಾಭಾವಯುಕ್ತವೆಂಬ ಜ್ಞಾನದಲ್ಲಿ ಅತ್ಯಂತವಾಗಿ ಅಭ್ಯಾಸವಾಗಿಬಿಟ್ಟರೆ, ಆಗ ಬ್ರಹ್ಮನರೂಪವು

ದೃಶ್ಯಾತ್ಯನ್ತಾಭಾವತಸ್ತು ಋತೇ ನಾನ್ಯಾ ಶುಭಾ ಗತಿಃ ||೧೮||
ಅತ್ಯನ್ತಾಭಾವಸಮ್ಪತ್ತೌ ದೃಶ್ಯಸ್ಯಾಸ್ಯ ಯಥಾಸ್ಥಿತೇಃ |
ಶಿಷ್ಯತೇ ಪರಮಾರ್ಥೋಽಸೌ ಬುಧ್ಯತೇ ಜಾಯತೇ ತತಃ ||೧೯||
ನ ವಿದಃ ಪ್ರತಿಬಿಮ್ಬೋಽಸ್ತಿ ದೃಶ್ಯಾಭಾವಾದೃತೇ ಕ್ವಚಿತ್ |
ಕ್ವಚಿನ್ನಾಪ್ರತಿಬಿಮ್ಬೋ ನ ಕಿಲಾದರ್ಶೋಽವತಿಷ್ಠತೇ ||೨೦||
ಜಗನ್ನಾಮ್ನೋಽಸ್ಯ ದೃಶ್ಯಸ್ಯ ಸ್ವಸತ್ತಾಸಮ್ಭವಂ ವಿನಾ |
ಬುಧ್ಯತೇ ಪರಮಂ ತತ್ತ್ವಂ ನ ಕದಾಚನ ಕೇನಚಿತ್ ||೨೧||

ಶ್ರೀರಾಮಉವಾಚ.

ಇಯತೋ ದೃಶ್ಯಜಾತಸ್ಯ ಬ್ರಹ್ಮಾಣ್ಡಸ್ಯ ಜಗತ್ಸ್ಥಿತೇಃ |
ಮುನೇ ಕಥಮಸತ್ತಾಸ್ತಿ ಕ್ವ ಮೇರುಃ ಸರ್ಷಪೋದರೇ ||೨೨||

ಶ್ರೀವಸಿಷ್ಠಉವಾಚ.

ದಿನಾನಿ ಕತಿಚಿದ್ರಾಮ ಯದಿ ತಿಷ್ಠಸ್ಯಖಿನ್ನಧೀಃ |
ಸಾಧುಸಙ್ಗಮಸಚ್ಛಾಸ್ತ್ರಪರಮಸ್ತದಹಂ ಕ್ಷಣಾತ್ ||೨೩||
ಪ್ರಮಾರ್ಜಯಾಮಿ ತೇ ದೃಶ್ಯಂ ಬೋಧೇ ಮೃಗಜಲಂ ಯಥಾ |

ತಿಳಿಯಲ್ಪಟ್ಟಂತಾಗುವುದಲ್ಲದೆ, ಮತ್ತಾವ ಕರ್ಮದಿಂದಲೂ ಆಗುವುದಿಲ್ಲ. ಈ ದೃಶ್ಯವು ಅತ್ಯಂತವಾಗಿ ಅಭಾವಹೊಂದಿದಹೊರತು, ಬೇರೆಯಾದ ಸದ್ಗತಿಯಿಲ್ಲ ||೧೭—೧೮||

ಯಥಾಸ್ಥಿತವಾಗಿರುವ ಈ ದೃಶ್ಯವು ಅತ್ಯಂತವಾಗಿ ಅಭಾವಹೊಂದುವ ಸ್ಥಿತಿಯುಂಟಾಗುವ ವಿಷಯದಲ್ಲಿ, ನಾನು ನಿನಗೆ ಈ ಪರಮಾರ್ಥವನ್ನುಪದೇಶಿಸುವೆನು; ಬಳಿಕ ನಿನಗೇ ಗೊತ್ತಾಗುವುದು; ಮತ್ತು ಆ ಸ್ಥಿತಿಯೂ ಉಂಟಾಗುವುದು ||೧೯||

ಈ ದೃಶ್ಯಾಭಾವವನ್ನು ಬಿಟ್ಟರೆ, ಬ್ರಹ್ಮನಿಗೆ ಎಲ್ಲಿಯೂ ಪ್ರತಿಬಿಂಬವಿಲ್ಲ; ಪ್ರಪಂಚದಲ್ಲಿ ಕನ್ನಡಿಯು ಪ್ರತಿಬಿಂಬವಿಲ್ಲದೆ ಎಲ್ಲಿಯೂ ಇರುವುದಿಲ್ಲವಲ್ಲವೆ! ||೨೦||

ಜಗತ್ತೆಂಬ ಈ ದೃಶ್ಯವು ಸ್ವಸ್ವರೂಪದಿಂದ ವಾಸ್ತವ್ಯವಾಗಿ ಇಲ್ಲವೆಂಬ ಜ್ಞಾನ ಹುಟ್ಟಿದಹೊರತು, ಯಾರಿಂದಲೂ ಎಂದಿಗೂ ಆ ಪರತತ್ವವು ತಿಳಿಯಲ್ಪಡುವುದಿಲ್ಲ ||೨೧||

ಶ್ರೀರಾಮನು ಹೇಳಿದನು.—

ಪೂಜ್ಯರೆ! ಈ ದೃಶ್ಯವು ಬ್ರಹ್ಮನಲ್ಲಿ ಆರೋಪಿತವಾಗಿರುವುದು ನಿಸ್ಸಂಶಯವಾಗಿದ್ದ ಪಕ್ಷದಲ್ಲಿ, ತಾವು ಅಪ್ಪಣೆಕೊಟ್ಟುದೆಲ್ಲವೂ ಯುಕ್ತವಾಗಬಹುದು; ಆದರಲ್ಲಿಯೇ ಸಂಶಯವಿರುವುದು. ಇಷ್ಟು ದೊಡ್ಡ ಬ್ರಹ್ಮಾಂಡರೂಪವಾದ ಜಗತ್ಸ್ಥಿತಿಯೆಂಬ ದೃಶ್ಯಜಾತವು ಸೂಕ್ಷ್ಮತಮವಾದ ಬ್ರಹ್ಮನಲ್ಲಿ ಅಧ್ಯಾರೋಪಿತವೆಂಬುದೂ, ಇದು ವಾಸ್ತವ್ಯವಾಗಿಇಲ್ಲವೆಂಬುದೂ ಹೇಗೆ? ಒಂದು ಸಾಸುವೆಯ ಹೊಟ್ಟೆಯೊಳಗೆ ಮೇರುಪರ್ವತವೆಲ್ಲಿರುವುದು? ||೨೨||

ವಸಿಷ್ಠರು ಉತ್ತರಹೇಳಿದರು.—

ಅಯ್ಯಾ! ರಾಮ! ನೀನು ಕೆಲವುದಿವಸಗಳು ಮನಸ್ಸಿನ ಖೇದವನ್ನೆಲ್ಲ ಬಿಟ್ಟುಬಿಟ್ಟು ಸತ್ಸಂಗ ಸಚ್ಛಾಸ್ತ್ರತತ್ಪರನಾಗಿದ್ದಪಕ್ಷದಲ್ಲಿ, ಆಗ ನಾನು ಒಂದು ಕ್ಷಣದೊಳಗಾಗಿ—ತಿಳಿವಳಿಕೆಯುಂಟಾದಮೇಲೆ ಮೃಗತೃಷ್ಣಿಕಾಜಲವಡಗುವಂತೆ—ನಿನಗೆ ಈ ದೃಶ್ಯವನ್ನು ತೊಡೆದು

ದೃಶ್ಯಾಭಾವೇ ದ್ರಷ್ಟೃತಾ ಚ ಶಾಮ್ಯೇದ್ಬೋಧೋಽವಶಿಷ್ಯತೇ ॥೩೪॥
ದ್ರಷ್ಟೃತ್ವಂ ಸತಿ ದೃಶ್ಯೇಽಸ್ಮಿನ್ ದೃಶ್ಯತ್ವಂ ಸತ್ಯಥೇಕ್ಷಕೇ ।
ಏಕತ್ವಂ ಸತಿ ಹಿ ದ್ವಿತ್ವೇ ದ್ವಿತ್ವಂ ಚೈಕತ್ವಯೋಜನೇ ॥೩೫॥
ಏಕಾಭಾವೇ ದ್ವಯೋರೇವ ಸಿದ್ಧಿರ್ಭವತಿ ನಾತ್ರ ಹಿ ।
ದ್ವಿತ್ವೈಕ್ಯದ್ರಷ್ಟೃದೃಶ್ಯತ್ವಕ್ಷಯೇ ಸದವಶಿಷ್ಯತೇ ॥೩೬॥
ಅಹನ್ತಾದಿ ಜಗದ್ದೃಶ್ಯಂ ಸರ್ವಂ ತೇ ಮಾರ್ಜಯಾಮ್ಯಹಮ್ ।
ಅತ್ಯನ್ತಾಭಾವಸಂವಿತ್ತ್ಯಾ ಮನೋಮುಕುರತೋ ಮಲಮ್ ॥೩೭॥
ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ ।
ಯತ್ ತು ನಾಸ್ತಿ ಸ್ವಭಾವೇನ ಕಃ ಕ್ಲೇಶಸ್ತಸ್ಯ ಮಾರ್ಜನೇ ॥೩೮॥
ಜಗದಾದಾವನುತ್ಪನ್ನಂ ಯಚ್ಚೇದಂ ದೃಶ್ಯತೇ ತತಮ್ ।
ತತ್ ಸ್ವಾತ್ಮನ್ಯೇವ ವಿಮಲೇ ಬ್ರಹ್ಮ ಚಿತ್ತ್ವಾತ್ ಸ್ವಬೃಂಹಿತಮ್ ॥೩೯॥
ಜಗನ್ನಾಮ್ನಾ ನ ಚೋತ್ಪನ್ನಂ ನ ಚಾಸ್ತಿ ನ ಚ ದೃಶ್ಯತೇ ।
ಹೇಮ್ನೀವ ಕಟಕಾದಿತ್ವಂ ಕಿಮೇತನ್ಮಾರ್ಜನೇ ಶ್ರಮಃ ॥೪೦॥

ಬಿಡುವೆನು. ಈ ದೃಶ್ಯವು ಅಭಾವಹೊಂದಲಾಗಿ, ದೃಷ್ಟೃತ್ವವೂ ಶಾಂತವಾಗಿಬಿಡುವುದು ; ಬಳಿಕ ಕೇವಲ ಜ್ಞಾನಮಾತ್ರವೇ ಅವಶಿಷ್ಟವಾಗುವುದು ॥ ೩೩—೩೪॥

ಈ ದೃಶ್ಯವೆಂಬುದಿದ್ದರೇ ದೃಷ್ಟತ್ವವು ಇರುವುದು ; ಹಾಗೆಯೇ ನೋಡತಕ್ಕವನಿದ್ದರೇ ದೃಶ್ಯತ್ವವೂ ಇರುವುದು ; ಮತ್ತು ಎರಡನೆಯದಿದ್ದರೇ ಅದನ್ನು ವ್ಯಾವರ್ತಿಮಾಡುವುದಕ್ಕಾಗಿ ಏಕತ್ವವನ್ನು ಹೇಳಬೇಕಾಗುವುದು; ಏಕತ್ವವಿದ್ದರೇ ದ್ವಿತ್ವವೂ ಉಂಟಾಗುವುದು ॥

ಈ ಲೋಕದಲ್ಲಿ ಒಂದೇ ಇಲ್ಲದಿದ್ದರೆ, ಎರಡರ ಸಿದ್ಧಿಯೇ ಆಗುವುದಿಲ್ಲವಲ್ಲವೆ! ಪ್ರಕೃತದಲ್ಲಿ ಎರಡನೆಯದಿಲ್ಲದಿರುವುದರಿಂದ ಏಕತ್ವವೂ—ದೃಶ್ಯವಿಲ್ಲದಿರುವುದರಿಂದ ದೃಷ್ಟೃತ್ವವೂ ಕ್ಷಯಹೊಂದಲಾಗಿ, ಕೊನೆಗೆ ದ್ವಿತ್ವ ಏಕತ್ವ ದ್ರಷ್ಟೃತ್ವ ದೃಶ್ಯತ್ವ—ಇವುಗಳಿಗೆಲ್ಲ ಕ್ಷಯುವಾಗಲು, ಸತ್ಪದಾರ್ಥವೊಂದೇ ಅವಶಿಷ್ಟವಾಗುವುದು ॥ ೩೬॥

ಅಹಂಕಾರಮೊದಲಾದ ಈ ದೃಶ್ಯವಾದ ಜಗತ್ತೆಂಬ ಮಲವನ್ನೆಲ್ಲ, ಅತ್ಯಂತಾಭಾವ ಜ್ಞಾನವುಂಟುಮಾಡಿ, ನಾನು ನಿನ್ನ ಮನಸ್ಸೆಂಬ ದರ್ಪಣದ ದೆಸೆಯಿಂದ ಅಳಿಸಿಬಿಡುವೆನು ॥

ಅಸತ್ಯವಾದುದಕ್ಕೆ ಸದ್ಭಾವವೆಂದಿಗೂ ಇಲ್ಲ; ಸತ್ಯವಾದುದಕ್ಕೆ ಅಭಾವವೂ ಇಲ್ಲ. ಹೀಗಿರುವುದರಿಂದ, ಯಾವುದು ಸ್ವಭಾವವಾಗಿ ಇಲ್ಲವೇ ಇಲ್ಲವೋ, ಅದನ್ನು ತೊಡೆಯುವುದರಲ್ಲಿ ಯಾವ ಕ್ಲೇಶವು? ॥ ೩೮॥

ಈ ವಿಸ್ತಾರವಾದ ಯಾವ ಜಗತ್ತು ಕಾಣಿಸುವುದೋ, ಇದು ಮೊದಲು ಹುಟ್ಟಿರಲಿಲ್ಲ; ಆ ಬ್ರಹ್ಮವು ಜ್ಞಾನರೂಪವಾದುದರಿಂದ ನಿರ್ಮಲವಾದ ತನ್ನಲ್ಲಿ ತಾನೇ ತನ್ನಿಂದಲೇ ವ್ಯಾಪಿಸಿಕೊಂಡಿರುವುದು ॥೩೯॥

ಜಗತ್ತೆಂಬ ನಾಮಧೇಯದಿಂದ ಇದು ಹುಟ್ಟಿಯೂ ಇಲ್ಲ; ಇಲ್ಲವೂ ಇಲ್ಲ; ಪರಮಾರ್ಥವಾಗಿ ಕಾಣುವುದೂ ಇಲ್ಲ. ಪ್ರಪಂಚದಲ್ಲಿ ಚಿನ್ನವಿರುವುದೇ ಹೊರತು, ಕಟಕಾದಿಗಳು ಹುಟ್ಟುವಾಗಲೇ ಇರುತ್ತವೆಯೆ? ಕಟಕಾದಿನಾಮುಗಳು ಕಲ್ಪಿತವಾಗಿರುವಂತೆ ದೃಶ್ಯನಾಮವೂ ಕಲ್ಪಿತವಾಗಿರುವಕಾರಣ, ಇದನ್ನು ತೊಡೆಯುವುದರಲ್ಲಿಯೂ ಶ್ರಮವೆ? ॥೪೦॥

ತಥೈತದ್ವಿಸ್ತರೇಣಾಹಂ ವಕ್ಷ್ಯಾಮಿ ಬಹುಯುಕ್ತಿಭಿಃ ।
ಅಬಾಧಿತಂ ಯಥಾ ತತ್ತ್ವಂ ಸ್ವಯಮೇವಾನುಭೂಯತೇ ॥೪೧॥
ಆದಾವೇವ ಹಿ ನೋತ್ಪನ್ನಂ ಯತ್ ತಸ್ಯೇಹಾಸ್ತಿತಾ ಕುತಃ ।
ಕುತೋ ಮರೌ ಜಲಸರಿತ್ ದ್ವಿತೀಯೇನ್ದೌ ಕುತೋ ಗ್ರಹಃ ॥೪೨॥
ಯಥಾ ವನ್ಧ್ಯಾಸುತೋ ನಾಸ್ತಿ ಯಥಾ ನಾಸ್ತಿ ಮರೌ ಜಲಮ್ ।
ಯಥಾ ನಾಸ್ತಿ ನಭೋವೃಕ್ಷಃ ತಥಾ ನಾಸ್ತಿ ಜಗದ್ಭ್ರಮಃ ॥೪೩॥
ಯದಿದಂ ದೃಶ್ಯತೇ ರಾಮ ತದ್ಬ್ರಹ್ಮೈವ ನಿರಾಮಯಮ್ ।
ಏತತ್ ಪುರಸ್ತಾದ್ವಕ್ಷ್ಯಾಮಿ ಯುಕ್ತಿತೋ ನ ಗಿರೈವ ಚ ॥೪೪॥

ಯನ್ನಾಮ ಯುಕ್ತಿಭಿರಿಹ ಪ್ರವದನ್ತಿ ತಜ್ಜ್ಞಾಃ
ತತ್ರಾವಹೇಳನಮಯುಕ್ತಮುದಾರಬುದ್ಧೇ ।
ಯೋ ಯುಕ್ತಿಯುಕ್ತಮವಮತ್ಯ ವಿಮೂಢಬುದ್ಧಿಃ
ಕಷ್ಟಾಗ್ರಹೋ ಭವತಿ ತಂ ವಿದುರಜ್ಞಮೇವ ॥೪೫॥

ಇತಿ ಉತ್ಪತ್ತಿಪ್ರಕರಣೇ ದೃಶ್ಯಾಸತ್ತಾಪ್ರತಿಜ್ಞಾನಾಮ
ಸಪ್ತಮಃ ಸರ್ಗಃ.

ನಿರಾಬಾಧವಾಗಿ ನೀನೇ ತತ್ವಾನುಭವಮಾಡುವಹಾಗಾಗುವಂತೆ, ನಾನು ವಿಸ್ತರವಾಗಿ ಅನೇಕ ಯುಕ್ತಿಗಳಿಂದ ಈ ವಿಷಯವನ್ನು ಹೇಳುವೆನು ॥೪೧॥

ಯಾವುದು ಮೊದಲೇ ಹುಟ್ಟಿಲ್ಲವೋ, ಅದರಲ್ಲಿ ಅಸ್ತಿತ್ವ (ಇರುವಿಕೆ) ವೆಲ್ಲಿಯದು? ಮರುಭೂಮಿಯಲ್ಲಿ ಜಲಪ್ರವಾಹವೆಲ್ಲಿರುವುದು? ನೇತ್ರದೋಷದಿಂದ ಕಾಣಿಸುವ ದ್ವಿತೀಯ ಚಂದ್ರನಲ್ಲಿ ಗ್ರಹಣವೆಲ್ಲಿ ಬರುವುದು? ॥೪೨॥

ಬಂಜೆಯ ಮಗನು ಹೇಗಿಲ್ಲವೋ, ಮರುಭೂಮಿಯಲ್ಲಿ ಜಲವು ಹೇಗಿಲ್ಲವೋ, ಆಕಾಶದಲ್ಲಿ ಮರವು ಹೇಗಿಲ್ಲವೋ, ಹಾಗೆ ಈ ಜಗತ್ತೆಂಬ ಭ್ರಮೆಯೂ ವಾಸ್ತವ್ಯವಾಗಿಲ್ಲ ॥

ಅಯ್ಯಾ! ರಾಮ! ಈ ದೃಶ್ಯವಾದ ಪ್ರಪಂಚವಾವುದುಂಟೋ, ಅದು ನಿರಾಬಾಧವಾದ ಪರಬ್ರಹ್ಮವೇಯೇ. ಇದನ್ನು ಮುಂದೆ ಯುಕ್ತಿಮೂಲಕವಾಗಿ ಹೇಳುವೆನು. ಕೇವಲ ವಚನಮಾತ್ರದಿಂದಲೆಂದು ತಿಳಿಯಬೇಡ ॥೪೪॥

ಉದಾರಮತಿಯಾದ ರಾಮನೆ! ಈ ಲೋಕದಲ್ಲಿ ಪ್ರಾಜ್ಞರಾದವರು ಯಾವುದನ್ನು ಯುಕ್ತಿಪುರಸ್ಸರವಾಗಿ ಹೇಳುವರೋ, ಅದರಲ್ಲಿ ತಿರಸ್ಕಾರವಯುಕ್ತವು. ಮೂಢಮತಿಯಾದ ಯಾವನು, ಯುಕ್ತಿಯುಕ್ತವಾದುದನ್ನು ತಿರಸ್ಕರಿಸಿ ಯುಕ್ತಿರಹಿತವಾದುದರಲ್ಲಿ ಅಭಿನಿವೇಶವುಳ್ಳವನಾಗುವನೋ, ಅವನನ್ನು ಅಜ್ಞನನ್ನಾಗಿಯೇ ಮಹಾತ್ಮರು ತಿಳಿಯುವರು ॥

ಇದು ಉತ್ಪತ್ತಿಪ್ರಕರಣದಲ್ಲಿ ದೃಶ್ಯಾಸತ್ತಾಪ್ರತಿಜ್ಞೆಯೆಂಬ
ಏಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟಮಃ ಸರ್ಗಃ.

ಶ್ರೀರಾಮಉವಾಚ.

ಕಯೈತಜ್ಜ್ಞಾಯತೇ ಯುಕ್ತ್ಯಾ ಕಥಮೇತತ್ ಪ್ರಸಿಧ್ಯತಿ ।
ನ್ಯಾಯೇನಾನುಭೂತಏತಸ್ಮಿನ್ ನ ಜ್ಞೇಯಮವಶಿಷ್ಯತೇ ॥೧॥

ಶ್ರೀವಸಿಷ್ಠಉವಾಚ.

ಬಹುಕಾಲಮಿಯಂ ರೂಢಾ ಮಿಥ್ಯಾಜ್ಞಾನವಿಷೂಚಿಕಾ ।
ಜಗನ್ನಾಮ್ನ್ಯವಿಚಾರಾಖ್ಯಾ ವಿನಾ ಜ್ಞಾನಂ ನ ಶಾಮ್ಯತಿ ॥೨॥
ವದಾಮ್ಯಾಖ್ಯಾಯಿಕಾರಾಮ ಯಾಇಮಾಬೋಧಸಿದ್ಧಯೇ ।
ತಾಶ್ಚೇಚ್ಛೃಣೋಷಿ ತತ್ ಸಾಧೋ ಮುಕ್ತಏವಾಸಿ ಬುದ್ಧಿಮಾನ್ ॥೩॥
ನೋಚೇದುದ್ವೇಗಶೀಲತ್ವಾತ್ ಅರ್ಧಾದುತ್ಥಾಯ ಗಚ್ಛಸಿ ।
ತತ್ ತಿರ್ಯಗ್ಧರ್ಮಿಣಸ್ತೇದ್ಯ ನ ಕಿಂಚಿದಪಿ ಸೇತ್ಸ್ಯತಿ ॥೪॥

ಉತ್ಪತ್ತಿಪ್ರಕರಣದಲ್ಲಿ ಎಂಟನೆಯ ಸರ್ಗವು.

ಪ್ರಾಗುಕ್ತತತ್ತ್ವವಿಜ್ಞಾನಂ ಸಚ್ಛಾಸ್ತ್ರೇಭ್ಯೋ ನ ಚಾನ್ಯತಃ ।
ಸಚ್ಛಾಸ್ತ್ರೇಷ್ವಪ್ಯಯಂ ಗ್ರನ್ಥಃ ಸದ್ಯಃಫಲಇತೀರ್ಯತೇ ॥

ಪೂರ್ವೋಕ್ತವಾದ ತತ್ವಜ್ಞಾನವು ಸಚ್ಛಾಸ್ತ್ರಗಳಿಂದಲೇ ಆಗಬೇಕಲ್ಲದೆ ಮತ್ತೊಂದರಿಂದಾಗುವುದಿಲ್ಲವೆಂದೂ, ಸಚ್ಛಾಸ್ತ್ರಗಳಲ್ಲಿಯೂ ಈ ಗ್ರಂಥವು ಸದ್ಯಃಫಲಕೊಡತಕ್ಕುದೆಂದೂ, ಈ ಸರ್ಗದಲ್ಲಿ ಹೇಳಲ್ಪಡುವುದು.

ಹಿಂದೆ ಯುಕ್ತಿಪೂರ್ವಕವಾಗಿ ಹೇಳುತ್ತೇನೆಂದು ವಸಿಷ್ಠಮುನಿಗಳು ಪ್ರತಿಜ್ಞಿಮಾಡಿದ್ದುದನ್ನು ಈಗ ಶ್ರೀರಾಮನು ಪ್ರಶ್ನೆಮಾಡಿದನು.

ಗುರುಗಳೆ! ಈ ದೃಶ್ಯವೆಲ್ಲವೂ ಬ್ರಹ್ಮ ಎಂಬ ವಿಷಯವು ಯಾವ ಯುಕ್ತಿಯಿಂದ ತಿಳಿಯಲ್ಪಡುವುದು? ಇದು ಸಿದ್ಧಿಸುವ ಬಗೆ ಹೇಗೆ? ಈ ವಿಷಯವನ್ನು ಯುಕ್ತಿಯಿಂದ ತಿಳಿದುಕೊಂಡುಬಿಟ್ಟರೆ, ಬಳಿಕ ತಿಳಿಯಬೇಕಾದುದೊಂದೂ ಅವಶಿಷ್ಟವಾಗುವುದಿಲ್ಲ ॥೧॥

ವಸಿಷ್ಠರು ಉತ್ತರಹೇಳುವರು.

ರಾಮ! ಜಗತ್ತೆಂಬುದಾಗಿಯೂ ಅವಿಚಾರವೆಂಬುದಾಗಿಯೂ ಹೆಸರುಳ್ಳ ಈ ಮಿಥ್ಯಾಜ್ಞಾನವೆಂಬ ವಿಷೂಚಿಕಾರೋಗವು ಬಹುಕಾಲದಿಂದ ರೂಢಮೂಲವಾಗಿರುವುದು. ಇದು ಜ್ಞಾನ ಹೊರತು ಶಾಂತವಾಗುವುದಿಲ್ಲ ॥೨॥

ರಾಮ! ಜ್ಞಾನಸಿದ್ಧಿಗೋಸ್ಕರವಾಗಿ ನಿನಗೆ ಯಾವ ಈ ಉಪಾಖ್ಯಾನಗಳನ್ನು ಹೇಳುವೆನೋ, ಅವುಗಳನ್ನು ನೀನು ಕೇಳಿದಪಕ್ಷದಲ್ಲಿ, ಅಯ್ಯಾ! ಸಾಧುವೆ! ಆಗ ನೀನು ಜ್ಞಾನಿಯಾಗಿ ಮುಕ್ತನಾದವನೇ ಆಗುವೆ ॥೩॥

ಹಾಗೆ ನೀನು ಕೇಳದೆ—ಕಳವಳಪಡುತ—ಅರ್ಧದಲ್ಲಿಯೇ ಎದ್ದು ಹೊರಟುಹೋಗುವೆನಾದರೆ, ಆಗ ಪಶುಸಮಾನನಾದ ನಿನಗೆ ಯಾವುದೊಂದೂ ಸಿದ್ಧಿಸುವುದಿಲ್ಲ ॥೪॥

ಯೋ ಯಮರ್ಥಂ ಪ್ರಾರ್ಥಯತೇ ತದರ್ಥಂ ಯತತೇ ತಥಾ ।
ಸೋಽವಶ್ಯಂ ತದವಾಪ್ನೋತಿ ನ ಚೇಚ್ಛ್ರಾನ್ತೋ ನಿವರ್ತತೇ ॥೫॥
ಸಾಧುಸಙ್ಗಮಸಚ್ಛಾಸ್ತ್ರಪರೋ ಭವಸಿ ರಾಮ ಚೇತ್ ।
ತದ್ದಿನೈರೇವ ನೋ ಮಾಸೈಃ ಪ್ರಾಪ್ನೋಷಿ ಪರಮಂ ಪದಮ್ ॥೬॥

ಶ್ರೀರಾಮಉವಾಚ.

ಆತ್ಮಜ್ಞಾನಪ್ರಬೋಧಾಯ ಶಾಸ್ತ್ರಂ ಶಾಸ್ತ್ರವಿದಾಂ ವರ ।
ಕಿಂ ನಾಮ ತತ್ ಪ್ರಧಾನಂ ಸ್ಯಾತ್ ಯಸ್ಮಿನ್ ಜ್ಞಾತೇ ನ ಶೋಚ್ಯತೇ॥೭

ಶ್ರೀ ವಸಿಷ್ಠಉವಾಚ.

ಆತ್ಮಜ್ಞಾನಪ್ರಧಾನಾನಾಂ ಇದಮೇವ ಮಹಾಮತೇ ।
ಶಾಸ್ತ್ರಾಣಾಂ ಪರಮಂ ಶಾಸ್ತ್ರಂ ಮಹಾರಾಮಾಯಣಂ ಶುಭಮ್ ॥೮॥
ಇತಿಹಾಸೋತ್ತಮಾದಸ್ಮಾತ್ ಶ್ರುತಾದ್ಬೋಧಃ ಪ್ರವರ್ತತೇ ।
ಸರ್ವೇಷಾಮಿತಿಹಾಸಾನಾಂ ಅಯಂ ಸಾರಉದಾಹೃತಃ ॥೯॥
ಶ್ರುತೇಽಸ್ಮಿನ್ ವಾಙ್ಮಯೇ ಯಸ್ಮಾತ್ ಜೀವನ್ಮುಕ್ತತ್ವಮಕ್ಷಯಮ್ ।
ಉದೇತಿ ಸ್ವಯಮೇವಾತಃ ಇದಮೇವಾತಿಪಾವನಮ್ ॥೧೦॥
ಸ್ಥಿತಮೇವಾಸ್ತಮಾಯಾತಿ ಜಗದ್ದೃಶ್ಯಂ ವಿಚಾರಣಾತ್ ।
ಯಥಾ ಸ್ವಪ್ನೇ ಪರಿಜ್ಞಾತೇ ಸ್ವಪ್ನಾದಾವೇವ ಭಾವನಾ ॥೧೧॥

ಯಾವನು ಯಾವವಿಷಯವನ್ನು ಪ್ರಾರ್ಥಿಸುವನೋ, ಅವನು ಅದಕ್ಕೋಸ್ಕರವಾಗಿ ಅದಕ್ಕೆ ತಕ್ಕಂತೆ ಪ್ರಯತ್ನಪಡುತ್ತಾನೆಯಾದರೆ, ಅವನು ಅವಶ್ಯವಾಗಿ ಅದನ್ನು ಹೊಂದುವನು; ಅದಿಲ್ಲದಿದ್ದರೆ, ಅರ್ಧದಲ್ಲಿಯೇ ಹಿಂದಿರುಗುವನು ॥೫॥

ಅಯ್ಯಾ ! ರಾಮ! ನೀನು ಸತ್ಸಂಗಸಚ್ಛಾಸ್ತ್ರಗಳಲ್ಲಿ ಆಸಕ್ತನಾಗಿರುವೆಯಾದರೆ, ತಿಂಗಳು ಗಟ್ಟಲೆಯ ಅಪೇಕ್ಷೆಯೇ ಇಲ್ಲದೆ ಕೆಲವು ದಿವಸಗಳಲ್ಲಿಯೇ ಆ ಪರಮಪದವನ್ನು ಹೊಂದುವೆ॥

ಶ್ರೀರಾಮನು ಹೇಳಿದನು.—

ಶಾಸ್ತ್ರಜ್ಞರೊಳಗೆ ಉತ್ತಮರಾದ ವಸಿಷ್ಠಮುನಿಗಳೆ! ಯಾವುದನ್ನು ತಿಳಿದರೆ ಪುನಃ ಶೋಕವುಂಟಾಗುವುದಿಲ್ಲವೋ, ಅಂತಹ ಮುಖ್ಯವಾದ ಆತ್ಮಜ್ಞಾನಾರ್ಥವಾದ ಶಾಸ್ತ್ರವಾವುದು? ॥

ಶ್ರೀ ವಸಿಷ್ಠರು ಉತ್ತರ ಹೇಳುವರು.—

ಮಹಾಬುದ್ಧಿಯಾದ ರಾಮನೆ ! ಆತ್ಮಜ್ಞಾನಾರ್ಥವಾದ ಶಾಸ್ತ್ರಗಳಲ್ಲೆಲ್ಲ, ಈ ಮಂಗಳಕರವಾದ ಮಹಾರಾಮಾಯಣವೇ ಸರ್ವೋತ್ಕೃಷ್ಟವಾದುದು ॥೮॥

ಈ ಉತ್ತಮವಾದ ಇತಿಹಾಸವನ್ನು ಕೇಳಿದಮಾತ್ರದಿಂದಲೇ ಜ್ಞಾನವುದ್ಭವಿಸುವುದು. ಸಮಸ್ತವಾದ ಇತಿಹಾಸಗಳಿಗೂ ಇದು ಸಾರಭೂತವಾದುದೆಂದು ಪ್ರಾಜ್ಞರು ಹೇಳುವರು॥

ಈ ಗ್ರಂಥವಾಕ್ಯಸಮೂಹವನ್ನು ಕೇಳಿದರೇ, ಇತರ ಪ್ರಯತ್ನವೊಂದೂ ಇಲ್ಲದೆಯೇ ಅಕ್ಷಯವಾದ ಜೀವನ್ಮುಕ್ತಿಯುದ್ಭವಿಸುವುದು; ಅದುಕಾರಣ, ಇದೇ ಅತಿಪವಿತ್ರವಾದುದು॥

ಸ್ವಪ್ನ ಮುಂತಾದ ಕಾಲದಲ್ಲಿ, ಇದು ಸ್ವಪ್ನವೆಂದು ತಿಳಿದಮೇಲೆ ಆ ಭಾವನೆಯಿದ್ದರೂ ಅದು ಸುಳ್ಳೆಂದು ನಂಬುಗೆಯುಂಟಾಗುವಂತೆ, ಈ ಜಗತ್ತು ದೃಶ್ಯವಾಗಿ ಇದ್ದೇ ಇದ್ದರೂ ಈ ಗ್ರಂಥವಿಚಾರದಿಂದ ಅಸ್ತಹೊಂದುವುದು ॥೧೧॥

ಯದಿಹಾಸ್ತಿ ತದನ್ಯತ್ರ ಯನ್ನೇಹಾಸ್ತಿ ನ ತತ್ ಕ್ವಚಿತ್ ।
ಇಮಂ ಸಮಸ್ತವಿಜ್ಞಾನಶಾಸ್ತ್ರಕೋಶಂ ವಿದುರ್ಬುಧಾಃ ॥೧೨॥
ಯಇದಂ ಶೃಣುಯಾನ್ನಿತ್ಯಂ ತಸ್ಯೋದಾರಚಮತ್ಕೃತೇಃ ।
ಬೋಧಸ್ಯಾಪಿ ಪರಂ ಬೋಧಂ ಬುದ್ಧಿರೇತಿ ನ ಸಂಶಯಃ ॥೧೩॥
ಯಸ್ಮೈ ನೇದಂ ತ್ವರುಚಯೇ ರೋಚತೇ ದುಷ್ಕೃತೋದಯಾತ್ ।
ವಿಚಾರಯತು ಯತ್ಕಿಂಚಿತ್ ಸಚ್ಛಾಸ್ತ್ರಂ ಜ್ಞಾನವಾಙ್ಮಯಮ್ ॥೧೪॥
ಜೀವನ್ಮುಕ್ತತ್ವಮಸ್ಮಿಂಸ್ತು ಶ್ರುತೇ ಸಮನುಭೂಯತೇ ।
ಸ್ವಯಮೇವ ಯಥಾ ಪೀತೇ ನೀರೋಗತ್ವಂ ವರೌಷಧೇ ॥೧೫॥
ಶ್ರೂಯಮಾಣೇ ಹಿ ಶಾಸ್ತ್ರೇಽಸ್ಮಿನ್ ಶ್ರೋತಾ ವೇತ್ತ್ಯೇತದಾತ್ಮನಾ ।
ಯಥಾವದಿದಮಸ್ಮಾಭಿಃ ನನೂಕ್ತಂ ವರಶಾಪವತ್ ॥೧೬॥
ನಶ್ಯತಿ ಸಂಸೃತಿದುಃಖಮಿದಂ ತೇ ಸ್ವಾತ್ಮವಿಚಾರಣಯಾ ಕಥಯೈವ ।
ನೋ ಧನದಾನತಪಶ್ಶ್ರುತವೇದೈಃ ತತ್ಕಥನೋದಿತಯತ್ನಶತೇನ ॥೧೭॥

ಇತಿ ಉತ್ಪತ್ತಿಪ್ರಕರಣೇ ಸಚ್ಛಾಸ್ತ್ರನಿರೂಪಣಂ ನಾಮ
ಅಷ್ಟಮಃ ಸರ್ಗಃ.

ಇದರಲ್ಲಿ ಯಾವ ವಿಷಯವಿರುವುದೋ, ಅದೇ ಇತರ ಸ್ಥಳದಲ್ಲಿರುವುದು; ಇಲ್ಲಿ ಯಾವುದಿಲ್ಲವೋ, ಅದು ಮತ್ತೆಲ್ಲಿಯೂ ಇಲ್ಲವೇ ಇಲ್ಲ. ಇದನ್ನು ಸಮಸ್ತವಾದ ಜ್ಞಾನ ಶಾಸ್ತ್ರಕ್ಕೂ ಕೋಶವೆಂದು ವಿದ್ವಾಂಸರು ತಿಳಿದಿರುವರು ॥೧೨॥

ಯಾವನು ಈ ಗ್ರಂಥವನ್ನು ನಿತ್ಯವೂ ಕೇಳುವನೋ, ಪ್ರಶಸ್ತವಾದ ಕೌಶಲ್ಯವುಳ್ಳ ಅವನ ಬುದ್ಧಿಯು, ಇತರ ಗ್ರಂಥಸಹಸ್ರಪರಿಚಯದಿಂದುಂಟಾಗುವ ಜ್ಞಾನಕ್ಕಿಂತಲೂ ಉತ್ತಮವಾದ ಜ್ಞಾನವನ್ನು ಪಡೆಯುವುದು; ಇದರಲ್ಲಿ ಸಂಶಯವಿಲ್ಲ ॥೧೩॥

ಪಾಪವಿಶೇಷದಿಂದ ಅಭಿರುಚಿಯಿಲ್ಲದ ಯಾವ ಮನುಷ್ಯನಿಗೆ ಈ ಗ್ರಂಥವು ರುಚಿಸು ಸುವುದಿಲ್ಲವೋ, ಅವನು ಜ್ಞಾನವಚನಪರಿಪೂರ್ಣವಾದ ಇತರವಾದ ಯಾವುದಾದರೊಂದು ಸಚ್ಛಾಸ್ತ್ರವನ್ನು ವಿಚಾರಮಾಡಲಿ ॥೧೪॥

ದಿವ್ಯೌಷಧವನ್ನು ಪಾನಮಾಡಿದರೆ ತನಗೆತಾನೇ ಆರೋಗ್ಯವುಂಟಾಗುವಂತೆ, ಈಗ್ರಂಥವನ್ನು ಕೇಳಿದಮಾತ್ರದಿಂದಲೇ ಜೀವನ್ಮುಕ್ತಿಯು ತಾನೇ ಅನುಭವಗೋಚರವಾಗುವುದು॥

ಈ ಗ್ರಂಥವನ್ನು ಕೇಳಿದಮಾತ್ರದಲ್ಲಿಯೇ ಶ್ರೋತೃವಾದವನು ತಾನೇ ಇದನ್ನು ತಿಳಿದುಕೊಳ್ಳುವನು. ನಾವು ಯಥಾವತ್ತಾಗಿ ಹೇಳಿರುವ ಈ ವಿಷಯವು, ದೊಡ್ಡವರು ಕೊಟ್ಟ ವರದಂತೆಯೂ ಶಾಪದಂತೆಯೂ ತಪ್ಪದೆ ನಡೆಯತಕ್ಕುದಾಗಿರುವುದು ॥೧೬॥

ವತ್ಸ ! ರಾಮ ! ನಿನಗೆ ಈ ಸಂಸಾರದುಃಖವು, ಸ್ವಾತ್ಮವಿಚಾರರೂಪವಾದ ಈ ಇತಿಹಾಸದಿಂದಲೇ ನಾಶವಾಗುವುದು; ಧನ ದಾನ ತಪಸ್ಸು ಶಾಸ್ತ್ರ ವೇದ ಇವುಗಳಿಂದಲೂ, ಆ ಶಾಸ್ತ್ರವಚನಗಳಲ್ಲಿ ಉಕ್ತವಾಗಿರುವ ನೂರಾರು ಕರ್ಮಗಳಿಂದಲೂ ಈ ಸಂಸಾರದುಃಖವು ನಾಶಹೊಂದುವುದಿಲ್ಲ ॥೧೭॥

ಇದು ಉತ್ಪತ್ತಿಪ್ರಕರಣದಲ್ಲಿ ಸಚ್ಛಾಸ್ತ್ರನಿರೂಪಣವೆಂಬ ಎಂಟನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ನವಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ತಚ್ಚಿತ್ತಾಸ್ತದ್ಗತಪ್ರಾಣಾಃ ಬೋಧಯನ್ತಃ ಪರಸ್ಪರಮ್ ।
ಕಥಯನ್ತಶ್ಚ ತನ್ನಿತ್ಯಂ ತುಷ್ಯನ್ತಿ ಚ ರಮನ್ತಿ ಚ ॥೧॥
ತೇಷಾಂ ಜ್ಞಾನೈಕನಿಷ್ಠಾನಾಂ ಆತ್ಮಜ್ಞಾನವಿಚಾರಿಣಾಮ್ ।
ಸಾ ಜೀವನ್ಮುಕ್ತತೋದೇತಿ ವಿದೇಹೋನ್ಮುಕ್ತತೈವ ಯಾ ॥೨॥

ಶ್ರೀರಾಮಉವಾಚ.

ಬ್ರಹ್ಮನ್ ವಿದೇಹಮುಕ್ತಸ್ಯ ಜೀವನ್ಮುಕ್ತಸ್ಯ ಲಕ್ಷಣಮ್ ।
ಬ್ರೂಹಿ ಯೇನ ತಥೈವಾಹಂ ಯತೇ ಶಾಸ್ತ್ರದೃಶಾ ಧಿಯಾ ॥೩॥

ಉತ್ಪತ್ತಿಪ್ರಕರಣದಲ್ಲಿ ಒಂಭತ್ತನೆಯ ಸರ್ಗವು.

ಜೀವನ್ಮುಕ್ತಸ್ಯ ಲಕ್ಷ್ಮಾಣಿ ತಸ್ಯ ಸರ್ವಾತ್ಮತಾ ತಥಾ ।
ಜಗತ್ಪ್ರಳಯಶಿಷ್ಟಾತ್ಮಸ್ವರೂಪಂ ಚೇಹ ಕೀರ್ತ್ಯತೇ ॥

ಜೀವನ್ಮುಕ್ತನ ಲಕ್ಷಣಗಳೂ, ಅವನು ಸರ್ವಸ್ವರೂಪನಾಗಿರುವಿಕೆಯೂ, ಮತ್ತು ಬ್ರಹ್ಮಾಂಡಪ್ರಳಯಕಾಲದಲ್ಲಿ ಅವಶಿಷ್ಟನಾದ ಆತ್ಮನ ಸ್ವರೂಪವೂ ಕೂಡ, ಈ ಸರ್ಗದಲ್ಲಿ ಹೇಳಲ್ಪಡುವುವು.

ಪೂರ್ವೋಕ್ತವಾದ ಆತ್ಮವಿಚಾರವನ್ನು ಜ್ಞಾನೋದಯವಾಗುವವರೆಗೂ ಅವಿಚ್ಛಿನ್ನವಾಗಿ ಮಾಡಬೇಕೆಂದೂ ಮಧ್ಯಮಧ್ಯದಲ್ಲಿ ಇತರ ವ್ಯಾಪಾರಕ್ಕೆ ಮನಸ್ಸುಕೊಡಬಾರದೆಂದೂ ಹೇಳಲುಪಕ್ರಮಿಸಿ ಶ್ರೀ ವಸಿಷ್ಠಮಹರ್ಷಿಗಳು ಮತ್ತೆಹೇಳುವರು.—

ಅಯ್ಯಾ! ರಾಮ! ಯಾವ ಪುರುಷರು, ಸರ್ವದಾ ಆ ಪರಮಾತ್ಮನಲ್ಲಿಯೇ ಮನಸ್ಸುಳ್ಳವರಾಗಿ ಆವನ ಸಾಕ್ಷಾತ್ಕಾರಕ್ಕಾಗಿಯೇ ತಮ್ಮ ಜೀವನವ್ಯಾಪಾರವನ್ನೆಲ್ಲ ಉಪಯೋಗಿಸುತ-ಪರಸ್ಪರವಾಗಿ ಬೋಧನೆಮಾಡುತ-ಸರ್ವದಾ ಆ ಪರಬ್ರಹ್ಮವನ್ನೇ ಹೇಳುತ—ಸಂತೋಷಪಡುತಲೂ ಕ್ರೀಡಿಸುತ್ತಲೂ ಇರುವರೋ, ಜ್ಞಾನೈಕನಿಷ್ಠರಾಗಿ ಆತ್ಮಜ್ಞಾನವಿಚಾರಶೀಲರಾದ ಅಂಥವರಿಗೆ, ಆ ಜೀವನ್ಮುಕ್ತಿಯುದ್ಭವಿಸುವುದು; ಅದೇ ವಿದೇಹಮುಕ್ತಿಯೆಂದೂ ಹೇಳಲ್ಪಡುವುದು ॥೧—೨॥

ಶ್ರೀರಾಮನು ಹೇಳುವನು.—

ಬ್ರಾಹ್ಮಣೋತ್ತಮರೆ! ವಿದೇಹಮುಕ್ತನಿಗೂ ಜೀವನ್ಮುಕ್ತನಿಗೂ ಇರುವ ಲಕ್ಷಣವನ್ನು ಅಪ್ಪಣೆಕೊಡಿಸಿರಿ. ಅದನ್ನು ತಿಳಿದು ನಾನೂ ಅದೇರೀತಿಯಾಗಿ ಶಾಸ್ತ್ರಜ್ಞಾನಜನ್ಯವಾದ ಬುದ್ಧಿಯಿಂದ ಪ್ರಯತ್ನಪಡುವೆನು ॥೩॥

ಶ್ರೀವಸಿಷ್ಠ ಉವಾಚ.

ಯಥಾಸ್ಥಿತಮಿದಂ ಯಸ್ಯ ವ್ಯವಹಾರವತೋಽಪಿ ಚ ।
ಅಸ್ತಂ ಗತಂ ಸ್ಥಿತಂ ವ್ಯೋಮ ಜೀವನ್ಮುಕ್ತಃ ಸ ಉಚ್ಯತೇ ॥೪॥
ಬೋಧೈಕನಿಷ್ಠತಾಂ ಯಾತೋ ಜಾಗ್ರತ್ಯೇವ ಸುಷುಪ್ತವತ್ ।
ಯ ಆಸ್ತೇ ವ್ಯವಹರ್ತೈವ ಜೀವನ್ಮುಕ್ತಃ ಸ ಉಚ್ಯತೇ ॥೫॥
ನೋದೇತಿ ನಾಸ್ತಮಾಯಾತಿ ಸುಖೇ ದುಃಖೇ ಮುಖಪ್ರಭಾ ।
ಯಥಾಪ್ರಾಪ್ತಸ್ಥಿತೇರ್ಯಸ್ಯ ಜೀವನ್ಮುಕ್ತಃ ಸ ಉಚ್ಯತೇ ॥೬॥
ಯೋ ಜಾಗರ್ತಿ ಸುಷುಪ್ತಸ್ಥೋ ಯಸ್ಯ ಜಾಗ್ರನ್ನ ವಿದ್ಯತೇ ।
ಯಸ್ಯ ನಿರ್ವಾಸನೋ ಬೋಧಃ ಸ ಜೀವನ್ಮುಕ್ತ ಉಚ್ಯತೇ ॥೭॥
ರಾಗದ್ವೇಷಭಯಾದೀನಾಂ ಅನುರೂಪಂ ಚರನ್ನಪಿ ।
ಯೋಽನ್ತರ್ವ್ಯೋಮವದಚ್ಛಸ್ಥಃ ಸ ಜೀವನ್ಮುಕ್ತ ಉಚ್ಯತೇ ॥೮॥
ಯಸ್ಯ ನಾಹಙ್ಕೃತೋ ಭಾವೋ ಯಸ್ಯ ಬುದ್ಧಿರ್ನ ಲಿಪ್ಯತೇ ।
ಕುರ್ವತೋಽಕುರ್ವತೋ ವಾಪಿ ಸ ಜೀವನ್ಮುಕ್ತ ಉಚ್ಯತೇ ॥೯॥

ಈ ಮಾತನ್ನು ಕೇಳಿ ಶ್ರೀ ವಸಿಷ್ಠರು, ವಿದೇಹಮುಕ್ತಿಯು ಜೀವನ್ಮುಕ್ತಿಪೂರ್ವಕವಾಗಿರುವುದರಿಂದ, ಮೊದಲು ಜೀವನ್ಮುಕ್ತನ ಲಕ್ಷಣವನ್ನು ಹೇಳಲುಪಕ್ರಮಿಸುವರು.—

ಅಯ್ಯಾ ! ರಾಮ! ಪ್ರಪಂಚವ್ಯವಹಾರವನ್ನೆಲ್ಲ ನಡೆಸುತ್ತಿದ್ದವನಾದರೂ ಯಾವನಿಗೆ ಈ ದೃಶ್ಯವೆಲ್ಲವೂ ಅಸ್ತಗತವಾಗಿ ಆಕಾಶದಂತೆ ಶೂನ್ಯವಾಗಿರುವುದೋ, ಅವನು ಜೀವನ್ಮುಕ್ತನೆಂದು ಹೇಳಲ್ಪಡುವನು ॥೪॥

ಯಾವನು, ಜ್ಞಾನೈಕನಿಷ್ಠೆಯನ್ನು ಪಡೆದವನಾಗಿ, ಪ್ರಪಂಚವ್ಯವಹಾರನಡೆಯಿಸುತಲೇ ಇರುವವನಾಗಿ, ಜಾಗ್ರದವಸ್ಥೆಯಲ್ಲಿಯೇ ಇದ್ದರೂ ಸುಷುಪ್ತಾವಸ್ಥೆಯಲ್ಲಿದ್ದಂತೆ-ಯಾವ ಕರ್ಮಸಂಬಂಧವೂ ಇಲ್ಲದಿರುವನೋ, ಅವನು ಜೀವನ್ಮುಕ್ತನೆನ್ನಲ್ಪಡುವನು ॥೫॥

ಯಥಾಪ್ರಾಪ್ತವಾದ ಜೀವನದಿಂದ ಸಂತುಷ್ಟನಾಗಿರುವ ಯಾವನ ಮುಖಪ್ರಭೆಯು, ಸುಖದಲ್ಲಿ ಹೆಚ್ಚದೆಯೂ ದುಃಖದಲ್ಲಿ ತಗ್ಗದೆಯೂ ಇರುವುದೋ, ಅವನು ಜೀವನ್ಮುಕ್ತನೆನ್ನಲ್ಪಡುವನು ॥೬॥

ಯಾವನು, ನಿರ್ವಿಕಾರನಾದ ಆತ್ಮನಲ್ಲಿ ಸುಷುಪ್ತಾವಸ್ಥೆಯಲ್ಲಿದ್ದಂತಿರುತಿದ್ದರೂ ಅವಿದ್ಯೆಯೆಂಬ ನಿದ್ರೆಯು ಕ್ಷಯಿಸಿಹೋಗಿರುವುದರಿಂದ ಜಾಗ್ರದವಸ್ಥೆಯಲ್ಲಿದ್ದಂತಿರುವನೋ, ಯಾವನಿಗೆ ದೇಹೇಂದ್ರಿಯಾದಿಜ್ಞಾನವಿಲ್ಲದಿರುವುದರಿಂದ—ಇಂದ್ರಿಯದ್ವಾರಾ ವಿಷಯಜ್ಞಾನವೆಂಬ ಜಾಗ್ರದವಸ್ಥೆಯಿಲ್ಲವೋ, ಯಾವನಿಗೆ ವಾಸನಾಶೂನ್ಯವಾದ ಜ್ಞಾನವುಂಟಾಗಿರುವುದೋ, ಅವನು ಜೀವನ್ಮುಕ್ತನೆನ್ನಲ್ಪಡುವನು ॥೭॥

ಯಾವನು, ಹೊರಗೆ ರಾಗ ದ್ವೇಷ ಭಯ ಇತ್ಯಾದಿ ವಿಕಾರಗಳಿಗನುರೂಪವಾಗಿ ನಡೆಯುತ್ತಿದ್ದರೂ, ಒಳಗೆ ಆಕಾಶದಂತೆ ನಿರ್ಮಲನಾದ ಆತ್ಮನಲ್ಲಿ ಸ್ಥಿತಿಯುಳ್ಳವನಾಗಿರುವನೋ, ಅವನು ಜೀನನ್ಮುಕ್ತನೆನ್ನಲ್ಪಡುವನು ॥೮॥

ಯಾವನಿಗೆ, ಕರ್ಮಮಾಡುತಿದ್ದರೂ ಅಥವಾ ಮಾಡದಿದ್ದರೂ ಅಹಂಕಾರವಿಶಿಷ್ಟವಾದ ಅಭಿಪ್ರಾಯವಿರುವುದಿಲ್ಲವೋ, ಮತ್ತು ಬುದ್ಧಿಯು ಕರ್ಮಲೇಪಶೂನ್ಯವಾಗಿಯೇ ಇರುವುದೋ, ಅವನು ಜೀವನ್ಮುಕ್ತನೆನ್ನಲ್ಪಡುವನು ॥೯॥

ಯಸ್ಯೋನ್ಮೇಷನಿಮೇಷಾರ್ಥಾತ್ ವಿದಃ ಪ್ರಳಯಸಮ್ಭವೌ ।
ಪಶ್ಯೇತ್ ತ್ರಿಲೋಕ್ಯಾಃ ಸ್ವಸಮಃ ಸ ಜೀವನ್ಮುಕ್ತ ಉಚ್ಯತೇ ॥೧೦॥
ಯಸ್ಮಾನ್ನೋದ್ವಿಜತೇ ಲೋಕೋ ಲೋಕಾನ್ನೋದ್ವಿಜತೇ ಚ ಯಃ ।
ಹರ್ಷಾಮರ್ಷಭಯೋನ್ಮುಕ್ತಃ ಸ ಜೀವನ್ಮುಕ್ತ ಉಚ್ಯತೇ ॥೧೧॥
ಶಾನ್ತಸಂಸಾರಕಲನಃ ಕಲಾವಾನಪಿ ನಿಷ್ಕಲಃ ।
ಯಃ ಸಚಿತ್ತೋಽಪಿ ನಿಶ್ಚಿತ್ತಃ ಸ ಜೀವನ್ಮುಕ್ತ ಉಚ್ಯತೇ ॥೧೨॥
ಯಃ ಸಮಸ್ತಾರ್ಥಜಾತೇಷು ವ್ಯವಹಾರ್ಯಪಿ ಶೀತಲಃ ।
ಪದಾರ್ಥೇಷ್ವಪಿ ಪೂರ್ಣಾತ್ಮಾ ಸ ಜೀವನ್ಮುಕ್ತ ಉಚ್ಯತೇ ॥೧೩॥
ಜೀವನ್ಮುಕ್ತಪದಂ ತ್ಯಕ್ತ್ವಾ ದೇಹೇ ಕಾಲವಶೀಕೃತೇ ।
ವಿಶತ್ಯದೇಹಮುಕ್ತತ್ವಂ ಪವನೋಽಸ್ಪನ್ದತಾಮಿವ ॥೧೪॥
ವಿದೇಹಮುಕ್ತೋ ನೋದೇತಿ ನಾಸ್ತಮೇತಿ ನ ಶಾಮ್ಯತಿ ।
ನ ಸನ್ನಾಸನ್ನ ದೂರಸ್ಥೋ ನ ಚಾಹಂ ನ ಚ ನೇತರಃ ॥೧೫॥

ಯಾವನು, ಆ ಪರಮಾತ್ಮನಿಗೆ ಸ್ವಲ್ಪ ಅಜ್ಞಾನಾವರಣವಿಘಟನೆಯಾದಾಗ ಈ ಲೋಕತ್ರಯದ ಪ್ರಳಯವನ್ನೂ—ಆವರಣವಾದಾಗ ಉತ್ಪತ್ತಿಯನ್ನೂ ನೋಡುವನೋ, (೧) ಸರ್ವರೂ ತನಗೆ ಸಮನಾಗಿರುವ ಆವನು ಜೀವನ್ಮುಕ್ತನೆನ್ನಲ್ಪಡುವನು ॥೧೦॥

ಯಾವನ ದೆಸೆಯಿಂದ ಜನರು ಭಯಪಡುವುದಿಲ್ಲವೋ, ಮತ್ತು ಜನರ ದೆಸೆಯಿಂದಲೂ ಯಾವನಿಗೆ ಭಯವಿಲ್ಲವೋ, ಹರ್ಷ ಕೋಪ ಭಯ—ಇವುಗಳಿಲ್ಲದ ಆ ಮನುಷ್ಯನು ಜೀವನ್ಮುಕ್ತನೆನ್ನಲ್ಪಡುವನು ॥೧೧॥

ಯಾವನು, ಸಂಸಾರದಲ್ಲಿ ಸತ್ಯವೆಂಬ ಜ್ಞಾನವಡಗಿದವನಾಗಿಯೂ, ಇತರರಿಗೆ ದೇಹಾವಯವವುಳ್ಳವನೆಂದು ತೋರುತ್ತಿದ್ದರೂ ತಾತ್ವಿಕವಾಗಿ ಅವಯವಶೂನ್ಯನಾಗಿಯೂ, ಸಚೇತನನಾಗಿದ್ದರೂ ನಿರ್ಮನಸ್ಕನಾಗಿಯೂ ಇರುವನೋ, ಅವನು ಜೀವನ್ಮುಕ್ತನೆನ್ನಲ್ಪಡುವನು ॥೧೨॥

ಯಾವನು, ಸಮಸ್ತವಾದ ವಿಷಯಸಮೂಹದಲ್ಲಿಯೂ ವ್ಯವಹಾರವುಳ್ಳವನಾಗಿದ್ದರೂ ರಾಗದ್ವೇಷಾದಿ ಸಂತಾಪರಹಿತನಾಗಿರುವನೋ, ಮತ್ತು ಸಮಸ್ತ ಪದಾರ್ಥಗಳಲ್ಲಿ ಪರಿಪೂರ್ಣಾತ್ಮನಾಗಿರುವನೋ, ಅವನು ಜೀವನ್ಮುಕ್ತನೆನ್ನಲ್ಪಡುವನು ॥೧೩॥

ಹೀಗೆ ಜೀವನ್ಮುಕ್ತಸ್ಥಿತಿಯಲ್ಲಿರತಕ್ಕವನು, ದೇಹವು ಕಾಲಾಧೀನವಾಗಲಾಗಿ, ವಾಯುವು ಸ್ತಬ್ಧತೆಯನ್ನು ಹೊಂದುವಂತೆ, ವಿದೇಹಮುಕ್ತಿಯನ್ನು ಹೊಂದುವನು ॥

ವಿದೇಹಮುಕ್ತಿಪಡೆದವನು—ಉದಯಿಸುವುದೂ ಇಲ್ಲ; ಅಸ್ತಹೊಂದುವುದೂ ಇಲ್ಲ; ಶಾಂತನಾಗುವುದೂ ಇಲ್ಲ; ವ್ಯಕ್ತನೂ ಅಲ್ಲ; ಅವ್ಯಕ್ತನೂ ಅಲ್ಲ; ನಾನೆಂಬುದೂ ಅಲ್ಲ; ನಾನಲ್ಲವೆಂಬುದೂ ಅಲ್ಲ; ಅಥವಾ ಇತರನೆಂಬುದೂ ಅಲ್ಲ ॥೧೫॥

---

(೧) ಬ್ರಹ್ಮನಿಗೆ ಮಾಯಾವರಣವುಂಟಾದರೆ ಪ್ರಪಂಚವಿರುವಂತೆ ಕಾಣುವುದೆಂದೂ, ಮಾಯಾವರಣ ಹೋದಾಗ ಪ್ರಪಂಚಲಯವಾದಂತೆ ಕಾಣುವುದೆಂದೂ ಭಾವವು.

ಸೂರ್ಯೋ ಭೂತ್ವಾ ಪ್ರತಪತಿ ವಿಷ್ಣುಃ ಪಾತಿ ಜಗತ್ತ್ರಯಮ್ |
ರುದ್ರಃ ಸರ್ವಾನ್ ಸಂಹರತಿ ಸರ್ಗಾನ್ ಸೃಜತಿ ಪದ್ಮಜಃ ||೧೬||
ಖಂ ಭೂತ್ವಾ ಪವನಸ್ಕನ್ಧಂ ಧತ್ತೇ ಸರ್ಷಿಸುರಾಸುರಮ್ |
ಕುಲಾಚಲಗತೋ ಭೂತ್ವಾ ಲೋಕಪಾಲಸುರಾಸ್ಪದಃ ||೧೭||
ಭೂಮಿರ್ಭೂತ್ವಾ ಬಿಭರ್ತೀಮಾಂ ಲೋಕಸ್ಥಿತಿಮಖಣ್ಡಿತಾಮ್ |
ತೃಣಗುಲ್ಮಲತಾಭೂತ್ವಾ ದದಾತಿ ಫಲಸನ್ತತಿಮ್ ||೧೮||
ಬಿಭ್ರಜ್ಜಲಾನಲಾಕಾರಂ ಜ್ವಲತಿ ದ್ರವತಿ ದ್ರುತಮ್ |
ಚನ್ದ್ರೋಮೃತಂ ಪ್ರಸವತಿ ಮೃತಂ ಹಾಲಾಹಲಂ ವಿಷಮ್ ||೧೯||
ತೇಜಃ ಪ್ರಕಟಯತ್ಯಾಶಾಃ ತನೋತ್ಯಾನ್ಧ್ಯಂ ತಮೋ ಭವತ್ |
ಶೂನ್ಯಂ ಸದ್ವ್ಯೋಮತಾಮೇತಿ ಗಿರಿಃ ಸನ್ ರೋಧಯತ್ಯಲಮ್ ||೨೦||
ಕರೋತಿ ಜಙ್ಗಮಂ ಚಿತ್ತಃ ಸ್ಥಾವರಂ ಸ್ಥಾವರಾಕೃತಿಃ |
ಭೂತ್ವಾರ್ಣವೋ ವಲಯತಿ ಭೂಸ್ತ್ರಿಯಂ ವಲಯೋ ಯಥಾ ||೨೧||
ಪರಮಾರ್ಕವಪುರ್ಭೂತ್ವಾ ಪ್ರಕಾಶಾನ್ತಂ ವಿಸಾರಯನ್ |
ತ್ರಿಜಗತ್ತ್ರಸರೇಣ್ವೋಘಂ ಶಾನ್ತಮೇವಾವತಿಷ್ಠತೇ ||೨೨||

ಆವನು—ಸೂರ್ಯರೂಪನಾಗಿ ತಪಿಸುವನು; ವಿಷ್ಣುವಾಗಿ ಮೂರುಲೋಕವನ್ನೂ ಕಾಪಾಡುವನು; ರುದ್ರನಾಗಿ ಸಮಸ್ತವನ್ನೂ ಸಂಹರಿಸುವನು; ಬ್ರಹ್ಮನಾಗಿ ಲೋಕಗಳನ್ನು ಸೃಷ್ಟಿಮಾಡುವನು ||೧೬||

ಆವನು—ಆಕಾಶವಾಗಿ ಋಷಿಗಳು ದೇವತೆಗಳು ರಾಕ್ಷಸರು ಇವರೊಡಗೂಡಿದ ವಾಯುಮಂಡಲವನ್ನು ಧರಿಸುವನು; ಸಪ್ತಕುಲಪರ್ವತಗಳಲ್ಲಿ ಸೇರಿದವನಾಗಿ ದಿಕ್ಪಾಲಕರಿಗೂ ದೇವತೆಗಳಿಗೂ ಆಶ್ರಯನಾಗುವನು ||೧೭||

ಆವನು—ಭೂಮಿಯಾಗಿ ಈ ಲೋಕಸ್ಥಿತಿಯನ್ನೆಲ್ಲ ಕೆಡದಂತೆ ಧರಿಸುವನು; ತೃಣಗುಲ್ಮ ಲತೆ ಇವುಗಳಾಗಿ ಫಲಸಮೂಹವನ್ನು ಕೊಡುವನು ||೧೮||

ಆವನು—ಜಲರೂಪವನ್ನು ಧರಿಸಿ ವೇಗವಾಗಿ ಹರಿಯುವನು; ಅಗ್ನಿರೂಪವನ್ನು ಧರಿಸಿ ಜ್ವಲಿಸುವನು; ಚಂದ್ರರೂಪನಾಗಿ ಅಮೃತವನ್ನೂ ಹಾಲಾಹಲವಿಷರೂಪನಾಗಿ ಮರಣವನ್ನೂ ಉಂಟುಮಾಡುವನು ||೧೯||

ಆವನು—ತೇಜೋರೂಪನಾಗಿ ದಿಕ್ಕುಗಳನ್ನು ಪ್ರಕಟಪಡಿಸುವನು; ತಮೋರೂಪನಾಗಿ ಅಂಧತೆಯನ್ನುಂಟುಮಾಡುವನು; ಶೂನ್ಯನಾದವನಾಗಿ ಆಕಾಶಭಾವವನ್ನು ಹೊಂದುವನು; ಪರ್ವತರೂಪನಾಗಿ ಅಧಿಕವಾಗಿ ನಿರೋಧಮಾಡುವನು ||೨೦||

ಆವನು—ಚಿತ್ತರೂಪನಾಗಿ ಚರವನ್ನೂ, ಸ್ಥಾವರರೂಪನಾಗಿ ಅಚರವನ್ನೂ ಉಂಟುಮಾಡುವನು; ಸಮುದ್ರರೂಪನಾಗಿ ಭೂಮಿಯೆಂಬ ಸ್ತ್ರೀಯನ್ನು ಬಳೆಯಂತೆ ಬಳಸಿಕೊಂಡಿರುವನು ||೨೧||

ಆವನು—ಆವರಣರಹಿತವಾದ ಚಿದ್ರೂಪನಾಗಿ, ಪ್ರಕಾಶಪರಿಪೂರ್ಣವಾದ ಲೋಕತ್ರಯ ಮೊದಲು ಪರಮಾಣು ಕೊನೆಯಾದ ಸಮಸ್ತಪದಾರ್ಥ ಸಮೂಹವನ್ನೂ ವಿಸ್ತಾರಪಡಿಸುತ, ತಾನು ನಿರ್ವಿಕಾರನಾಗಿಯೇ ಇರುವನು ||೨೨||

ಯತ್ ಕಿಂಚಿದಿದಮಾಭಾತಿ ಭಾತಂ ಭಾನಮುಪೈಷ್ಯತಿ ।
ಕಾಲತ್ರಯಗತಂ ದೃಶ್ಯಂ ತದಸೌ ಸರ್ವಮೇವ ಚ ॥೨೩॥

ಶ್ರೀರಾಮಉವಾಚ.—

ಕಥಮೇವಂ ವದ ಬ್ರಹ್ಮನ್ ಭೂಯತೇ ವಿಷಮಾ ಹಿ ಮೇ ।
ದೃಷ್ಟಿರೇಷಾಥ ದುಷ್ಪ್ರಾಪ್ಯಾ ದುರಾಕ್ರಮ್ಯೇತಿ ನಿಶ್ಚಯಃ ॥೨೪॥

ಶ್ರೀವಸಿಷ್ಠ ಉವಾಚ.

ಮುಕ್ತಿರೇಷೋಚ್ಯತೇ ರಾಮ ಬ್ರಹ್ಮೈತತ್ ಸಮುದಾಹೃತಮ್ ।
ನಿರ್ವಾಣಮೇತತ್ ಕಥಿತಂ ಶೃಣು ತತ್ ಪ್ರಾಪ್ಯತೇ ಕಥಮ್ ॥೨೫॥
ಯದಿದಂ ದೃಶ್ಯತೇ ದೃಶ್ಯಂ ಅಹಂತ್ವಂತಾದಿಸಂಯುತಮ್ ।
ಸತೋಪ್ಯಸ್ಯಾತ್ಯನುತ್ಪತ್ತ್ಯಾ ಬುದ್ಧ್ಯೈತದವಾಪ್ಯತೇ ॥೨೬॥

ಶ್ರೀರಾಮ ಉವಾಚ.

ವಿದೇಹಮುಕ್ತಾಸ್ತ್ರೈಲೋಕ್ಯಂ ಸಮ್ಪದ್ಯನ್ತೇ ಯದಾ ತದಾ ।
ಮನ್ಯೇ ತೇ ಸರ್ಗತಾಮೇವ ಗತಾವೇದ್ಯವಿದಾಂ ವರ ॥೨೭॥

ಅಯ್ಯಾ! ರಾಮ! ಹೆಚ್ಚುಮಾತೇಕೆ? ಭೂತಭವಿಷ್ಯದ್ವರ್ತಮಾನರೂಪವಾದ ಕಾಲತ್ರಯಗತವಾದುದಾಗಿ ಯಾವ ಈ ದೃಶ್ಯವು—ಈಗ ಪ್ರಕಾಶಿಸುತದೆಯೋ, ಹಿಂದೆ ಪ್ರಕಾಶಿಸಿತೋ, ಮುಂದೆ ಪ್ರಕಾಶಹೊಂದುವುದೋ—ಅದೆಲ್ಲವೂ ಇವನೆಯೇ ॥೨೩॥

ಮತ್ತೆ ಶ್ರೀರಾಮನು ಕೇಳುವನು.—

ಬ್ರಾಹ್ಮಣೋತ್ತಮರೆ! ತಾವು ಅಪ್ಪಣೆಕೊಟ್ಟಮೇರೆಗೆ ಆಗುವುದು ಹೇಗೆ! ಏತಕ್ಕೆಂದರೆ:—ತಾವು ಅಪ್ಪಣೆ ಕೊಟ್ಟಿರುವ ಜ್ಞಾನವು ಬಹುಕಷ್ಟಸಾಧ್ಯವು; ಅದುಕಾರಣ, ಅದು ದುರ್ಲಭವಾದುದು; ಒಂದುವೇಳೆ ಕಥಂಚಿತ್ ಸಿಕ್ಕಿದರೂ, ಅದನ್ನು ವಶಪಡಿಸಿಕೊಳ್ಳುವುದ ಸಾಧ್ಯವು. ಹೀಗೆಂದು ನಾನು ನಿಶ್ಚಯಿಸಿರುವೆನು ॥೨೪॥

ವಸಿಷ್ಠರು ಉತ್ತರಹೇಳುವರು.—

ಅಯ್ಯಾ! ರಾಮ! ನಾನು ಹೇಳಿದುದೇನೆಂದು ಗೊತ್ತಾಯ್ತೆ? ಇದು ಮುಕ್ತಿಯೆಂದು ಹೇಳಲ್ಪಡುವುದು; ಇದು ಬ್ರಹ್ಮವೆಂದು ಹೇಳಲ್ಪಟ್ಟಿರುವುದು; ಇದೇ ನಿರ್ವಾಣವೆಂದು ಉಕ್ತವಾದುದು. ಇದು ಹೊಂದಲ್ಪಡುವುದು ಹೇಗೆಂಬುದನ್ನು ಕೇಳುವವನಾಗು॥

ನಾನು ನೀನು—ಇತ್ಯಾದಿ ಜ್ಞಾನವಿಶಿಷ್ಟವಾದ ಈ ಯಾವ ಜಗತ್ತು ಕಾಣಿಸುವುದೋ, ಇದು ಇರುವುದೆಂದು ತೋರುತಿದ್ದರೂ ಅತ್ಯಂತವಾಗಿ ಅನುತ್ಪನ್ನವೆಂದು ಜ್ಞಾನವುಂಟಾಗಿಬಿಟ್ಟರೆ, ಈ ಮೋಕ್ಷವು ಹೊಂದಲ್ಪಡುವುದು ॥೨೬॥

ಮತ್ತೆರಾಮನು ಹೇಳುವನು.—

ತತ್ವಜ್ಞರಲ್ಲಿ ಶ್ರೇಷ್ಠರಾದ ವಸಿಷ್ಠಮಹರ್ಷಿಗಳೆ! ತಾವು ಅಪ್ಪಣೆಕೊಟ್ಟಂತೆ ವಿದೇಹಮುಕ್ತರಾದವರು ಯಾವಾಗ ಈ ಲೋಕತ್ರಯರೂಪರಾಗಿ ಆಗುವರೋ, ಆಗ ಅವರು ಸಂಸಾರಭಾವವನ್ನೇ ಹೊಂದಿದವರಾದರೆಂದು ನಾನು ತಿಳಿಯುವೆನು ॥೨೭॥

ಶ್ರೀವಸಿಷ್ಠ ಉವಾಚ.—

ವಿದ್ಯತೇ ಚೇತ್ ತ್ರಿಭುವನಂ ತತ್ ತತ್ತ್ವಂ ಸಮ್ಪ್ರಯಾನ್ತು ತೇ ।
ಯತ್ರ ತ್ರೈಲೋಕ್ಯಶಬ್ದಾರ್ಥೋ ನ ಸಮ್ಭವತಿ ಕಶ್ಚನ ॥೧೮॥
ಏತತ್ ತ್ರಿಲೋಕತಾಂ ಯಾತಂ ಬ್ರಹ್ಮೇತ್ಯಕ್ತಾರ್ಥಧೀಃ ಕುತಃ ।
ತಸ್ಮಾನ್ನೋ ಸಮ್ಭವತ್ಯೇಷಾ ಜಗಚ್ಛಬ್ದಾರ್ಥಕಲ್ಪನಾ ॥೧೯॥
ಅನನ್ಯಚ್ಛಾನ್ತಮಾಭಾಸಮಾತ್ರಮಾಕಾಶನಿರ್ಮಲಮ್ ।
ಬ್ರಹ್ಮೈವ ಜಗದಿತ್ಯೇತತ್ ಸರ್ವಂ ಸತ್ಯಾವಬೋಧತಃ ॥೨೦॥
ಅಹಂ ಹಿ ಹೇಮಕಟಕೇ ವಿಚಾರ್ಯಾಪಿ ನ ದೃಷ್ಟವಾನ್ ।
ಕಟಕತ್ವಂ ಕ್ವಚಿನ್ನಾಮ ಋತೇ ನಿರ್ಮಲಹಾಟಕಾತ್ ॥೨೧॥
ಜಲಾದೃತೇ ಪಯೋವೀಚೌ ನಾಹಂ ಪಶ್ಯಾಮಿ ಕಿಂಚನ ।
ವೀಚಿತ್ವಂ ತಾದೃಶಂ ದೃಷ್ಟಂ ಯತ್ರ ನಾಸ್ತ್ಯೇವ ತತ್ರ ಹಿ ॥೨೨॥
ಸ್ಪನ್ದತ್ವಂ ಪವನಾದನ್ಯತ್ ನ ಕದಾಚನ ಕುತ್ರಚಿತ್ ।
ಸ್ಪನ್ದ ಏವ ಸದಾ ವಾಯುಃ ಜಗತ್ ತಸ್ಮಾನ್ನ ಭಿದ್ಯತೇ ॥೨೩॥
ಯಥಾ ಶೂನ್ಯತ್ವಮಾಕಾಶೇ ತಾಪ ಏವ ಮರೌ ಜಲಮ್ ।
ತೇಜ ಏವ ಸದಾಲೋಕೇ ಬ್ರಹ್ಮೈವ ತ್ರಿಜಗತ್ ತಥಾ ॥೨೪॥

ಶ್ರೀವಸಿಷ್ಠರು ಈ ರಾಮನ ಶಂಕೆಯನ್ನು ಪರಿಹರಿಸುವರು.—

ವತ್ಸ! ನೀನುಹೇಳುವಂತೆ ಈ ಭುವನತ್ರಯುವಿರುವುದಾದರೆ, ಆಗ ಆ ಮುಕ್ತರು ಆ ತ್ರಿಭುವನತ್ವವನ್ನು ಹೊಂದಲಿ; ಆದರೆ,ಎಲ್ಲಿ ತ್ರೈಲೋಕ್ಯವೆಂಬ ಶಬ್ದದ ಅರ್ಥವೊಂದೂಸುತರಾಂ ಇಲ್ಲವೋ, ಅಲ್ಲಿ ಈ ಬ್ರಹ್ಮವು ಲೋಕತ್ರಯತ್ವವನ್ನು ಹೊಂದಿತೆಂದು ನೀನುಹೇಳುವ ಬುದ್ಧಿಯೆಲ್ಲಿಯದು? ಆದಕಾರಣ,ಈ ಜಗತ್ತೆಂಬ ಶಬ್ದಕ್ಕೆ ವಿಷಯುವನ್ನು ಕಲ್ಪಿಸುವಿಕೆಯು ಸಂಭವಿಸುವುದಿಲ್ಲ॥

ಆ ಪರಬ್ರಹ್ಮನ ಸತ್ತಾಮಾತ್ರವನ್ನು ತಿಳಿದರೆ, ಆಗ-ಈ ಸಮಸ್ತ ಜಗತ್ತು-ಅದ್ವಿತೀಯುವಾದ ಶಾಂತವಾದ ಚಿನ್ಮಾತ್ರರೂಪವಾದ ಆಕಾಶದಂತೆ ನಿರ್ಮಲವಾದ ಬ್ರಹ್ಮವೇಯೆಂಬ ಅನುಭವವುಂಟಾಗುವುದು ॥೨೦॥

ನಾನಾದರೋ, ಚಿನ್ನವನ್ನೂ ಕಡಗವನ್ನೂ ಚೆನ್ನಾಗಿ ಪರ್ಯಾಲೋಚಿಸಿದರೂ, ನಿರ್ಮಲವಾದ ಚಿನ್ನಹೊರತು ಕಡಗವೆಂಬುದನ್ನು ಎಲ್ಲಿಯೂ ನೋಡಲಿಲ್ಲ ॥೨೧॥

ಹಾಗೆಯೇ, ನೀರಿನಲೆಯಲ್ಲಿ ನೀರುಹೊರತು ಮತ್ತಾವುದನ್ನೂ ನಾನು ನೋಡುವುದಿಲ್ಲ. ಆದರೆ, ಎಲ್ಲಿ (ಮರುಭೂಮಿಯಲ್ಲಿ) ನೀರಿಲ್ಲದೆಯೇ ಅಲೆಯು ಕಾಣುವುದೋ, ಅಲ್ಲಿ ಸುತರಾಂ ಇಲ್ಲವೇ ಇಲ್ಲ ॥೨೨॥

ವಾಯುವಿಗಿಂತ ಭಿನ್ನವಾಗಿ ಚಲನೆಯು ಎಂದಿಗೂ ಎಲ್ಲಿಯೂ ಇರುವುದಿಲ್ಲ; ಸರ್ವದಾ ವಾಯುವು ಚಲನರೂಪವಾಗಿಯೇ ಇರುವುದು. ಹೀಗಿರುವುದರಿಂದ, ಜಗತ್ತು ಆ ಪರಮಾತ್ಮನಿಗಿಂತ ಪ್ರತ್ಯೇಕವಾಗಿಲ್ಲ ॥೨೩॥

ಆಕಾಶದಲ್ಲಿ ಶೂನ್ಯತ್ವವು ಹೇಗಿರುವುದೋ, ಮರುಭೂಮಿಯಲ್ಲಿ ಬಿಸಿಲು ಜಳವೇ ಹೇಗೆ ಜಲವಾಗಿರುವುದೋ, ಪ್ರಭೆಯಲ್ಲಿ ಸರ್ವದಾ ತೇಜಸ್ಸೇ ಹೇಗಿರುವುದೋ, ಹಾಗೆ ಮೂರುಲೋಕವೂ ಬ್ರಹ್ಮವೇ ಆಗಿರುವುದು ॥೨೪॥

ಶ್ರೀರಾಮಉವಾಚ.—

ಅತ್ಯನ್ತಾಭಾವಸಮ್ಪತ್ತ್ಯಾ ಜಗದ್ದೃಶ್ಯಸ್ಯ ಮುಕ್ತತಾ ।
ಯಥೋದೇತಿ ಮುನೇ ಯುಕ್ತ್ಯಾ ತಾಂ ಮಮೋಪದಿಶೋತ್ತಮಾಮ್ ॥
ಮಿಥಃ ಸಮ್ಪನ್ನಯೋರ್ದ್ರಷ್ಟೃದೃಶ್ಯಯೋರೇಕಸಙ್ಖ್ಯಯೋಃ ।
ದ್ವಯಾಭಾವೇ ಸ್ಥಿತಿಂ ಯಾತೇ ನಿರ್ವಾಣಮವಶಿಷ್ಯತೇ ॥೩೬॥
ದೃಶ್ಯಸ್ಯ ಜಗತಸ್ತಸ್ಮಾತ್ ಅತ್ಯನ್ತಾಸಮ್ಭವೋ ಯಥಾ ।
ಬ್ರಹ್ಮೈವೇತ್ಥಂಸ್ವಭಾವಸ್ಥಂ ಬುಧ್ಯತೇ ವದ ಮೇ ತಥಾ ॥೩೭॥
ಕಯೈತಜ್ಜ್ಞಾಯತೇ ಯುಕ್ತ್ಯಾ ಕಥಮೇತತ್ ಪ್ರಸಿಧ್ಯತಿ ।
ಏತಸ್ಮಿಂಸ್ತು ಮುನೇ ಸಿದ್ಧೇ ನ ಸಾಧ್ಯಮವಶಿಷ್ಯತೇ ॥೩೮॥

ಶ್ರೀವಸಿಷ್ಠಉವಾಚ.

ಬಹುಕಾಲಮಿಯಂ ರೂಢಾ ಮಿಥ್ಯಾಜ್ಞಾನವಿಷೂಚಿಕಾ ।
ನೂನಂ ವಿಚಾರಮನ್ತ್ರೇಣ ನಿರ್ಮೂಲಮುಪಶಾಮ್ಯತಿ ॥೩೯॥
ನ ಶಕ್ಯತೇ ಝಡಿತ್ಯೇಷಾ ಸಮುತ್ಪಾದಯಿತುಂ ಕ್ಷಣಾತ್ ।

ಶ್ರೀರಾಮನು ಹೇಳುವನು.—

ಮಹಾಮುನಿಗಳೆ! ಜಗತ್ತೆಂಬ ದೃಶ್ಯಕ್ಕೆ ಅತ್ಯಂತಾಭಾವಜ್ಞಾನವುಂಟಾದರೆ ಮೋಕ್ಷವುಂಟಾಗುವುದೆಂದು ತಾವು ಅಪ್ಪಣೆಕೊಟ್ಟಿರಲ್ಲವೆ! ಯಾವ ಉಪಾಯದಿಂದ ಈ ಜ್ಞಾನವುಂಟಾಗವುದೋ, ಅಂತಹ ಉತ್ತಮವಾದುಪಾಯವನ್ನು ತಾವು ನನಗುಪದೇಶಿಸಬೇಕು ॥೩೫॥

ದ್ರಷ್ಟೃದೃಶ್ಯಗಳೆರಡೂ ಪರಸ್ಪರ ಏಕರೂಪವಾಗಲಾಗಿ, ಇವೆರಡಕ್ಕೂ ಅಭೇದವು ಸ್ಥಿರವಾಗಲು, ಕೊನೆಗೆ ಮೋಕ್ಷವೆಂಬುದೊಂದೇ ಉಳಿಯುವುದು ॥೩೬॥

ಅದುಕಾರಣ, ಈ ದೃಶ್ಯವಾದ ಜಗತ್ತಿಗೆ ಅತ್ಯಂತಿಕವಾಗಿ ಅಸಂಭವಜ್ಞಾನವೂ ಬ್ರಹ್ಮವೇ ಈ ಸ್ವಭಾವಯುಕ್ತವಾದುದೆಂಬ ಜ್ಞಾನವೂ ಉಂಟಾಗುವಂತೆ, ತಾವು ನನಗೆ ಉಪದೇಶಿಸಬೇಕು ॥೩೭॥

ಮುನಿವರ್ಯರೆ! ಯಾವ ಉಪಾಯದಿಂದ ಇದು ತಿಳಿಯಲ್ಪಡುವುದು? ಇದು ಸಿದ್ಧಿಸುವಬಗೆ ಯಾವುದು ? ಇದನ್ನು ತಿಳಿದುಕೊಂಡರೆ, ಬಳಿಕ ಸಾಧ್ಯವಾದುದೊಂದೂ ಅವಶಿಷ್ಟವಾಗುವುದಿಲ್ಲ ॥೩೮॥

ಶ್ರೀ ವಸಿಷ್ಠರು ಹೇಳುವರು.—

ವತ್ಸ ! ಈ ಭ್ರಾಂತಿಯೆಂಬ ವಿಷೂಚಿಕೆಯು ಬಹುಕಾಲದಿಂದ ಬೇರುಬಿಟ್ಟುಕೊಂಡಿರುವುದು ; ಇದು ವಿಚಾರವೆಂಬ ಮಂತ್ರದಿಂದ, ಬೇರಿಲ್ಲದಂತೆ ಶಾಂತವಾಗುವುದು; ಇದು ನಿಶ್ಚಯವು ॥೩೯॥

ಒಂದು ಪರ್ವತದ ಎತ್ತರಮುಂತಾದುದು ಒಂದೇ ಸಮವಾಗಿರುವಾಗ, ಅದನ್ನು ಹತ್ತಬೇಕಾದರೆ ಎಷ್ಟು ಕಾಲಬೇಕೋ-ಇಳಿಯುವುದಕ್ಕೂ ಅಷ್ಟೇಕಾಲವೇ ಬೇಕಾಗಿರುವಂತೆ, ಬಹುಕಾಲದಿಂದ ಬೇರುಬಿಟ್ಟುಕೊಂಡಿರುವ ಈ ಮೋಹವನ್ನು ನಿರ್ಮೂಲಮಾಡಬೇಕಾದರೆ,

ಸಮುಪ್ರಪತನೇ ಹ್ಯದ್ರೌ ಸಮರೋಹಾವರೋಹಣೇ ||೪೦||
ತಸ್ಮಾದಭ್ಯಾಸಯೋಗೇನ ಯುಕ್ತ್ಯಾ ನ್ಯಾಯೋಪಪತ್ತಿಭಿಃ |
ಜಗದ್ಭ್ರಾನ್ತಿರ್ಯಥಾ ಶಾಮ್ಯೇತ್ ತವೇದಂ ಕಥ್ಯತೇ ಶೃಣು ||೪೧||
ವಕ್ಷ್ಯಾಮ್ಯಾಖ್ಯಾಯಿಕಾಂ ರಾಮ ಯಾಮಿಮಾಂ ಬೋಧಸಿದ್ಧಯೇ |
ತಾಂ ಚೇಚ್ಛೃಣೋಷಿ ತತ್ ಸಾಧೋ ಮುಕ್ತ ಏವಾಸಿ ಬೋಧವಾನ್ ||೪೨||
ಅಥೋತ್ಪತ್ತಿಪ್ರಕರಣಂ ಮಯೇದಂ ತವ ಕಥ್ಯತೇ |
ಯತ್ ಕಿಲೋತ್ಪದ್ಯತೇ ರಾಮ ತೇನ ಮುಕ್ತೇನ ಭೂಯತೇ ||೪೩||
ಇಯಮಿತ್ಥಂ ಜಗದ್ಭ್ರಾನ್ತಿಃ ಭಾತ್ಯಜಾತೈವ ಖಾತ್ಮಿಕಾ |
ಇತ್ಯುತ್ಪತ್ತಿಪ್ರಕರಣೇ ಕಥ್ಯತೇಽಸ್ಮಿನ್ ಮಯಾಧುನಾ ||೪೪||
ಯದಿದಂ ದೃಶ್ಯತೇ ಕಿಂಚಿತ್ ಜಗತ್ ಸ್ಥಾವರಜಙ್ಗಮಮ್ |
ಸರ್ವಂ ಸರ್ವಪ್ರಕಾರಾಢ್ಯಂ ಸಸುರಾಸುರಕಿನ್ನರಮ್ ||೪೫||
ತನ್ಮಹಾಪ್ರಳಯೇ ಪ್ರಾಪ್ತೇ ರುದ್ರಾದಿಪರಿಣಾಮಿನಿ |
ಭವತ್ಯಸದದೃಶ್ಯಾತ್ಮ ಕ್ವಾಪಿ ಯಾತಿ ವಿನಶ್ಯತಿ ||೪೬||
ತತಃ ಸ್ತಿಮಿತಗಮ್ಭೀರಂ ನ ತೇಜೋ ನ ತಮಸ್ತತಮ್ |
ಅನಾಖ್ಯಮನಭಿವ್ಯಕ್ತಂ ಸತ್ ಕಿಂಚಿದವಶಿಷ್ಯತೇ ||೪೭||

ಅದಕ್ಕೂ ಹೆಚ್ಚಾದ ಕಾಲವೇ ಆಗಬೇಕಲ್ಲದೆ, ತಟ್ಟನೆ ಒಂದು ಕ್ಷಣದಲ್ಲಿ ಇದನ್ನು ನಾಶಪಡಿಸುವುದು ಅಸಾಧ್ಯವು ||೪೦||

ಆದಕಾರಣ, ಅಭ್ಯಾಸಾತಿಶಯದಿಂದಲೂ ಯುಕ್ತಿಯಿಂದಲೂ ಲೌಕಿಕನ್ಯಾಯವಿಚಾರಗಳಿಂದಲೂ ಜಗದ್ಭ್ರಾಂತಿಯು ಶಾಂತವಾಗುವಂತೆ ನಾನು ನಿನಗೆ ಹೇಳುವೆನು, ಕೇಳುವವನಾಗು||

ಅಯ್ಯಾ! ಸಾಧುವಾದ ರಾಮನೆ! ನಿನಗೆಜ್ಞಾನಸಿದ್ಧಿಯಾಗುವುದಕ್ಕೋಸ್ಕರ, ನಾನು ಪ್ರಳಯಾಖ್ಯಾನರೂಪವಾದ ಯಾವ ಈ ಕಥೆಯನ್ನು ಹೇಳುವೆನೋ, ಅದನ್ನು ನೀನು ಕೇಳುವೆಯಾದರೆ, ಆಗ ಜ್ಞಾನಿಯಾಗಿ ಮುಕ್ತನೇ ಆಗುವೆ ||೪೨||

ಆ ಪ್ರಳಯಾಖ್ಯಾನವಾದಮೇಲೆ ನಾನು ನಿನಗೆ ಈ ಉತ್ಪತ್ತಿಕ್ರಮವನ್ನು ಹೇಳುವೆನು. ಅಯ್ಯಾ! ರಾಮ! ಯಾವುದು ಉತ್ಪತ್ತಿಹೊಂದಿತೆಂದು ಹೇಳಲ್ಪಡುವುದೋ, ಅದು ಮುಕ್ತಿಹೊಂದತಕ್ಕುದಾಗುವುದು.—ಎಂಬ ಈ ವಿಧವಾದ ಈ ಜಗದ್ಭ್ರಾಂತಿಯು ಆಕಾಶರೂಪವಾಗಿ ಹುಟ್ಟದೆಯೇ ಕಾಣಿಸಿಕೊಳ್ಳುತಿರುವುದು. ಈ ವಿಷಯವು, ನನ್ನಿಂದ ಈಗ ಈ ಉತ್ಪತ್ತಿಪ್ರಕರಣದಲ್ಲಿ ಹೇಳಲ್ಪಡುವುದು ||೪೩—೪೪||

ದೇವಾಸುರಕಿನ್ನರ ಯುಕ್ತವಾಗಿ ಸರ್ವವಿಧವಾಗಿರುವ ಈ ಸ್ಥಾವರಜಂಗಮಾತ್ಮಕವಾದ ಯಾವ ಜಗತ್ತು ಕಾಣಿಸುವುದೋ, ಇದು—ರುದ್ರಾದಿಗಳಿಗೂ ಪರಿಣಾಮವುಂಟುಮಾಡತಕ್ಕ ಆ ಮಹಾಪ್ರಳವು ಬಂದಾಗ—ಅಸತ್ತಾಗುವುದು ; ಕಣ್ಣಿಗೆ ಕಾಣದೆ ಎಲ್ಲಿಯೋ ಹೋಗಿಬಿಡುವುದು ; ಲಯಹೊಂದುವುದು ||೪೫—೪೬||

ಬಳಿಕ, ನಿಶ್ಚಲವಾಗಿಯೂ ಗಂಭೀರವಾಗಿಯೂ ತೇಜೋರೂಪವಲ್ಲದೆಯೂ ತಮೋರೂಪವಲ್ಲದೆಯೂ ಯಾವವಿಧವಾದ ಹೆಸರೂ ಇಲ್ಲದೆಯೂ ಯಾವ ರೂಪವೂ ಇಲ್ಲದೆಯೂ ಇರುವ—ಯಾವುದೋ ಒಂದು ಸತ್ಪದಾರ್ಥವು ಅವಶಿಷ್ಟವಾಗುವುದು ||೪೭||

ನ ಶೂನ್ಯಂ ನಾಪಿಚಾಕಾರಂ ನ ದೃಶ್ಯಂ ನ ಚ ದರ್ಶನಮ್ ।
ನ ಚ ಭೂತಪದಾರ್ಥೌಘೋ ಯದನನ್ತತಯಾ ಸ್ಥಿತಮ್ ॥೪೮॥
ಕಿಮಪ್ಯವ್ಯಪದೇಶಾತ್ಮ ಪೂರ್ಣಾತ್ ಪೂರ್ಣತರಾಕೃತಿ ।
ನ ಸನ್ನಾಸನ್ನ ಸದಸತ್ ನ ಭಾವೋ ಭವನಂ ನ ಚ ॥೪೯॥
ಚಿನ್ಮಾತ್ರಂ ಚೇತ್ಯರಹಿತಂ ಅನನ್ತಮಜರಂ ಶಿವಮ್ ।
ಅನಾದಿಮಧ್ಯಪರ್ಯನ್ತಂ ಯದನಾದಿ ನಿರಾಮಯಮ್ ॥೫೦॥
ಯಸ್ಮಿನ್ ಜಗತ್ ಪ್ರಸ್ಫುರತಿ ದೃಷ್ಟಮೌಕ್ತಿಕಹಂಸವತ್ ।
ಯಶ್ಚೇದಂ ಯಶ್ಚ ನೈವೇದಂ ದೇವಃ ಸದಸದಾತ್ಮಕಃ ॥೫೧॥
ಅಕರ್ಣಜಿಹ್ವಾನಾಸಾತ್ವಙ್ನೇತ್ರಃ ಸರ್ವತ್ರ ಸರ್ವದಾ ।
ಶೃಣೋತ್ಯಾಸ್ವಾದಯತಿ ಯೋ ಜಿಘ್ರತ್ ಸ್ಪೃಶತಿ ಪಶ್ಯತಿ ॥೫೨॥
ಸಏವ ಸದಸದ್ರೂಪಂ ಯೇನಾಲೋಕೇನ ಲಕ್ಷ್ಯತೇ ।
ಸರ್ಗಚಿತ್ರಮನಾದ್ಯನ್ತಂ ಸ್ವರೂಪಂ ಚಾಪ್ಯರಞ್ಜನಮ್ ॥೫೩॥
ಅರ್ಧೋನ್ಮೀಲಿತದೃಶ್ಯ ಭ್ರೂಮಧ್ಯೇ ತಾರಕವಜ್ಜಗತ್ ।

ನಾಮರೂಪಗಳಿಲ್ಲದಮಾತ್ರದಿಂದಲೇ ಆದನ್ನು ಶೂನ್ಯವೆಂದು ತಿಳಿಯಬಾರದು; ಆದು ಶೂನ್ಯವೂ ಅಲ್ಲ; ಆಕಾರಯುಕ್ತವೂ ಅಲ್ಲ; ದೃಶ್ಯವೂ ಅಲ್ಲ; ದರ್ಶನವೂ ಅಲ್ಲ; ಪಂಚಭೂತಪದಾರ್ಥಸಮೂಹವೂ ಅಲ್ಲ; ಅದು ಅನಂತ (ಕೊನೆಯಿಲ್ಲದೆ) ವಾಗಿರುವುದು॥

ಆದು—ಹೀಗಿದೆಯೆಂದು ನಿರ್ದೇಶಿಸುವುದಕ್ಕೇ ಆಗುವುದಿಲ್ಲ; ಪೂರ್ಣವಾದುದೆಲ್ಲಕ್ಕಿಂತಲೂ ಪೂರ್ಣತರವಾಗಿರುವುದು. ಸತ್ತೂ ಅಲ್ಲ; ಅಸತ್ತೂ ಅಲ್ಲ; ಸದಸತ್ತೂ ಅಲ್ಲ; ಉತ್ಪತ್ತಿಯುಳ್ಳದೂ ಅಲ್ಲ; ಉತ್ಪತ್ತಿಯೂ ಅಲ್ಲ ॥೪೯॥

ಆದು—ಕೇವಲ ಚಿನ್ಮಾತ್ರವಾದುದು; ಚೇತನೀಯವಾದುದೊಂದೂ ಅದಕ್ಕಿಲ್ಲ; ಮರಣರಹಿತವಾದುದು; ಜರಾರಹಿತವಾದುದು; ದುಃಖಶೂನ್ಯವಾದುದು; ಆದಿಮಧ್ಯಾಂತರಹಿತವಾದುದು; ಕಾರಣಶೂನ್ಯವಾದುದು; ಸಂಸಾರರೋಗ ವಿಮುಕ್ತವಾದುದು ॥೫೦॥

ಸ್ವಪ್ನದಲ್ಲಿ ಕಂಡ ಮುತ್ತಿನ ಹಂಸಪಕ್ಷಿಯಂತೆ, ಆ ದೇವನಲ್ಲಿ ಜಗತ್ತು ಸ್ಫುರಿಸುತ್ತಿರುವುದು; ಅವನು ಈ ಪ್ರಪಂಚವಾಗಿಯೂ ಇರುವನು; ಇದಲ್ಲದೆಯೂ ಇರುವನು; ಇಂತಹ ಆ ದೇವನು ಸದಸದ್ರೂಪನಾಗಿರುವನು ॥೫೧॥

ಮತ್ತು ಆ ದೇವನು—ಕಿವಿಯಿಲ್ಲದಿದ್ದರೂ ಸರ್ವ ದೇಶದಲ್ಲಿಯೂ ಸರ್ವಕಾಲದಲ್ಲಿಯೂ ಕೇಳುವನು; ನಾಲಿಗೆಯಿಲ್ಲದಿದ್ದರೂ ರುಚಿನೋಡುವನು; ಮೂಗಿಲ್ಲದಿದ್ದರೂ ಆಘ್ರಾಣಿಸುವನು; ತ್ವಗಿಂದ್ರಿಯವಿಲ್ಲದಿದ್ದರೂ ಸ್ಪರ್ಶಮಾಡುವನು; ಕಣ್ಣಿಲ್ಲದಿದ್ದರೂ ನೋಡುವನು॥

ಪೂರ್ವೋಕ್ತವಾದಸದಸದ್ರೂಪವು ಯಾವಪ್ರಕಾಶದಿಂದ ನೋಡಲ್ಪಡುವುದೋ, ಅಂತಹ ಪ್ರಕಾಶವೂ ಅವನೇ; ಅಜ್ಞಾನದಶೆಯಲ್ಲಿರುವ ಸೃಷ್ಟಿವೈಚಿತ್ರ್ಯವೂ ಅವನೇ; ಅಜ್ಞಾನನಿವೃತ್ತಿಕಾಲದಲ್ಲಿ ಪದಾರ್ಥಾಂತರಸಂಬಂಧವಿಲ್ಲದ ಆದ್ಯಂತರಹಿತವಾದ ಸ್ವರೂಪವೂ ಅವನೇ॥೫೩

ಮತ್ತು, ಯೋಗಿಯಾದವನು ಖೇಚರಮುದ್ರೆಯಲ್ಲಿ ಹುಬ್ಬುಗಳ ಮಧ್ಯದಲ್ಲಿ ಅರ್ಧ ತೆರೆದು ದೃಷ್ಟಿಯಿಟ್ಟು ನೋಡುವಾಗ, ಕಣ್ಣಿನ ಕರಿಗುಡ್ಡೆಯು ಅಸ್ಫುಟವಾಗಿ ಕಾಣುವುದ

ವ್ಯೋಮಾತ್ಮೈವ ಸದಾಭಾಸಂ ಸ್ವರೂಪಂ ಯೋಽಭಿಪಶ್ಯತಿ ‖೫೩‖
ಯಸ್ಯಾನ್ಯದಸ್ತಿ ನ ವಿಭೋಃ ಕಾರಣಂ ಶಶಶೃಙ್ಗವತ್ |
ಯಸ್ಯೇದಂ ಚ ಜಗತ್ ಕಾರ್ಯಂ ತರಙ್ಗೌಘಇವಾಮ್ಭಸಃ ‖೫೫‖
ಜ್ವಲತಃ ಸರ್ವತೋಽಜಸ್ರಂ ಚಿತ್ತಸ್ಥಾನೇಷು ತಿಷ್ಠತಃ |
ಯಸ್ಯ ಚಿನ್ಮಾತ್ರದೀಪಸ್ಯ ಭಾಸಾ ಭಾತಿ ಜಗತ್ತ್ರಯಮ್ ‖೫೬‖
ಯಂ ವಿನಾರ್ಕಾದಯೋಽಪ್ಯೇತೇ ಪ್ರಕಾಶಾಸ್ತಿಮಿರೋಪಮಾಃ |
ಸತಿ ಯಸ್ಮಿನ್ ಪ್ರವರ್ತನ್ತೇ ತ್ರಿಜಗನ್ಮೃಗತೃಷ್ಣಿಕಾಃ ‖೫೭‖
ಸಸ್ಪನ್ದೇ ಸಮುದೇತೀವ ನಿಸ್ಸ್ಪನ್ದೇಽನ್ತರ್ಗತೇ ನ ಚ |
ಇಯಂ ಯಸ್ಮಿನ್ ಜಗಲ್ಲಕ್ಷ್ಮೀಃ ಅಲಾತಇವ ಚಕ್ರತಾ ‖೫೮‖
ಜಗನ್ನಿರ್ಮಾಣವಿಲಯವಿಲಾಸೋ ವ್ಯಾಪಕೋ ಮಹಾನ್ |
ಸ್ಪನ್ದಾಸ್ಪನ್ದಾತ್ಮಕೋ ಯಸ್ಯ ಸ್ವಭಾವೋ ನಿರ್ಮಲೋಽಕ್ಷಯಃ ‖೫೯‖
ಸ್ಪನ್ದಾಸ್ಪನ್ದಮಯೀ ಯಸ್ಯ ಪವನಸ್ಯೇವ ಸರ್ವಗಾ |
ಸತ್ತಾ ನಾಮ್ನೈವ ಭಿನ್ನೇವ ವ್ಯವಹಾರಾನ್ನ ವಸ್ತುತಃ ‖೬೦‖

ಲ್ಲವೆ! ಹೀಗೆ ಆಕಾಶರೂಪವಾಗಿದ್ದರೂ ಸತ್ಪದಾರ್ಥದಂತೆ ಅಸ್ಫುಟವಾಗಿ ಜಗತ್ತೆಂಬ ಸ್ವರೂಪವನ್ನು ನೋಡತಕ್ಕವನೂ ಅವನೇ ॥೫೩॥

ಸರ್ವವ್ಯಾಪಿಯಾದ ಅವನಿಗೆ ಮೊಲದ ಕೊಂಬಿನಂತೆ ಕಾರಣಾಂತರವೊಂದೂ ಇಲ್ಲ; ನೀರಿಗೆ ತರಂಗ ಸಮೂಹವು ಕಾರ್ಯ (ಆದರಿಂದ ಉತ್ಪನ್ನವಾದುದು) ವಾಗುವಂತೆ, ಈ ಜಗತ್ತೆಲ್ಲವೂ ಅವನಿಗೆ ಕಾರ್ಯವಾಗಿರುವುದು ॥೫೫॥

ಸರ್ವದಿಕ್ಕಿನಲ್ಲಿಯೂ ಪ್ರಕಾಶಿಸುತ ಚಿತ್ತಸ್ಥಾನದಲ್ಲಿ ನಿರಂತರವಾಗಿ ವಾಸಮಾಡುವ ಚಿನ್ಮಾತ್ರದೀಪವಾಗಿರುವ ಅವನ ತೇಜಸ್ಸಿನಿಂದಲೇ, ಈ ಜಗತ್ತ್ರಯವೂ ಪ್ರಕಾಶಿಸುವುದು॥

ಅವನಿಲ್ಲದಿದ್ದರೆ, ಸೂರ್ಯಮೊದಲಾದ ಈತೇಜಸ್ಸುಗಳೆಲ್ಲವೂ ಕತ್ತಲೆಯಂತೆಯೇ ಇರುವುವು; ಅವನಿರುವುದರಿಂದಲೇ, ಈ ಲೋಕತ್ರಯವೆಂಬ ಮೃಗತೃಷ್ಣಿಕೆಗಳು ಉಂಟಾಗುವುವು॥೫೭॥

ಉರಿಯುವ ಕೊಳ್ಳಿಯನ್ನು ತಿರುಗಿಸುವಾಗ ಚಕ್ರಾಕಾರವಾಗಿ ಕಾಣುತಲೂ ತಿರುಗಿಸುವುದನ್ನು ಬಿಟ್ಟಾಗ ಚಕ್ರಾಕಾರವಿಲ್ಲದೆಯೂ ಇರುವಂತೆ, ಅವನು ಚಲನವಿಶಿಷ್ಟನಾದಾಗ ಈ ಪ್ರಪಂಚಸಂಪತ್ತು ಹುಟ್ಟಿದಂತೆಯೂ—ಅವನು ಅಂತರ್ಮುಖನಾಗಿ ನಿಶ್ಚಲನಾದಾಗ ಇದು ಕಾಣದೆಯೂ ಇರುವುದು ॥೫೮॥

ದೊಡ್ಡದಾಗಿ ಸರ್ವತ್ರ ವ್ಯಾಪಿಸಿಕೊಂಡಿರುವ ಈಜಗತ್ತಿನ ನಿರ್ಮಾಣವೆಂಬ ವಿಲಾಸವು ಅವನ ಚಲನರೂಪವಾಗಿಯೂ, ಪ್ರಳಯವೆಂಬ ವಿಲಾಸವು ಅವನ ನೈಶ್ಚಲ್ಯರೂಪವಾಗಿಯೂ ಇರುವುದು; ಅವನ ಸ್ವಭಾವವಾದರೋ, ನಿರ್ಮಲವಾಗಿಯೂ ಅಕ್ಷಯವಾಗಿಯೂ ಇರುವುದು ॥

ಪ್ರಪಂಚದಲ್ಲಿ ಗಾಳಿ ಬೀಸಿತೆಂದೂ ಗಾಳಿ ನಿಂತಿತೆಂದೂ ವ್ಯವಹಾರವಿರುವುದಲ್ಲವೆ! ಈ ವಿಧವಾದ ಸ್ಥಿತಿಯು ವ್ಯವಹಾರದಿಂದುಂಟಾಗಿರುವುದಲ್ಲದೆ, ವಾಸ್ತವ್ಯವಲ್ಲ; ಗಾಳಿಯೇನೋ ಸರ್ವದಾ ಏಕರೂಪವಾಗಿಯೇ ಇರುವುದು. ಹೀಗೆಯೇ ಅವನ ಸತ್ತೆ (ಸ್ಥಿತಿ) ಯೂ ಸರ್ವತ್ರ ವ್ಯಾಪ್ತವಾಗಿ ವ್ಯವಹಾರದಿಂದ ಚಲನವೆಂದೂ ಚಲನಾಭಾವವೆಂದೂ ಬೇರೆಬೇರೆಯಾಗಿರುವುದಲ್ಲದೆ, ವಸ್ತುಸ್ಥಿತಿಯುಲ್ಲ ॥೬೦॥

ಸರ್ವದೈವ ಪ್ರಬುದ್ಧೋ ಯಃ ಸುಪ್ತೋ ಯಃ ಸರ್ವದೈವ ಚ |
ನ ಸುಪ್ತೋ ನ ಪ್ರಬುದ್ಧಶ್ಚ ಯಃ ಸರ್ವತ್ರೈವ ಸರ್ವದಾ ||೬೧||
ಯದಸ್ಪನ್ದಂ ಶಿವಂ ಶಾನ್ತಂ ಯತ್ ಸ್ಪನ್ದಂ ತ್ರಿಜಗತ್ಸ್ಥಿತಿಃ |
ಸ್ಪನ್ದಾಸ್ಪನ್ದವಿಲಾಸಾತ್ಮಾ ಯ ಏಕೋ ಭರಿತಾಕೃತಿಃ ||೬೨||
ಆಮೋದಇವ ಪುಷ್ಪೇಷು ನ ನಶ್ಯತಿ ವಿನಾಶಿಷು |
ಪ್ರತ್ಯಕ್ಷಸ್ಥೋಽಪ್ಯಥಾಗ್ರಾಹ್ಯಃ ಶೌಕ್ಲ್ಯಂ ಶುಕ್ಲಪಟೇ ಯಥಾ ||೬೩||
ಮೂಕೋಪಮೋಽಪಿ ಯೋಽಮೂಕೋ ಮನ್ತಾ ಯೋಽಪ್ಯುಪಲೋಪಮಃ |
ಯೋ ಭೋಕ್ತಾ ನಿತ್ಯತೃಪ್ತೋಽಪಿ ಕರ್ತಾ ಯಶ್ಚಾಪ್ಯಕಿಞ್ಚನಃ ||೬೪||
ಯೋಽನಙ್ಗೋಽಪಿ ಸಮಸ್ತಾಙ್ಗಃ ಸಹಸ್ರಕರಲೋಚನಃ |
ನಕಿಂಚಿತ್ಸಂಸ್ಥಿತೇನಾಪಿ ಯೇನ ವ್ಯಾಪ್ತಮಿದಂ ಜಗತ್ ||೬೫||
ನಿರಿನ್ದ್ರಿಯಬಲಸ್ಯಾಪಿ ಯಸ್ಯಾಶೇಷೇನ್ದ್ರಿಯಕ್ರಿಯಾಃ |
ಯಸ್ಯ ನಿರ್ಮನನಸ್ಯೈತಾಃ ಮನೋನಿರ್ಮಾಣರೀತಯಃ ||೬೬||

ಅವನು—ಸರ್ವದಾ ಪ್ರಬುದ್ಧನಾಗಿಯೂ ಸರ್ವದಾ ಸುಪ್ತನಾಗಿಯೂ, ಮತ್ತು ಸರ್ವತ್ರ ಸರ್ವದಾ ಸುಪ್ತನಲ್ಲದೆಯೂ ಪ್ರಬುದ್ಧನೂ ಅಲ್ಲದೆಯೂ ಇರುವನು ||೬೧||

ಯಾವುದು ಚಲನವಿಲ್ಲದಾಗ ಶಾಂತವಾಗಿ ಶಿವಸ್ವರೂಪವಾಗಿರುವುದೋ, ಯಾವುದು ಚಲಿಸಿದಾಗ ಲೋಕತ್ರಯಸ್ಥಿತಿರೂಪವಾಗುವುದೋ, ಇಂತಹ ಚಲನಾಚಲನವಿಲಾಸರೂಪನಾಗಿರುವ ಅವನು—ಸರ್ವತ್ರ ಅಖಂಡಸ್ವರೂಪನಾಗಿರುವನು ||೬೨||

ಒಂದು ಪದಾರ್ಥದೊಡನೆ ಪುಷ್ಪವನ್ನಿಟ್ಟಿದ್ದು ಕೆಲವುಕಾಲದಮೇಲೆ ಆ ಪುಷ್ಪವನ್ನು ತೆಗೆದುಬಿಟ್ಟರೂ ಅದರ ವಾಸನೆಯು ಹೋಗದಿರುವಂತೆ, ಪ್ರಪಂಚಕ್ಕೆಲ್ಲ ಸಾರಭೂತನಾದ ಅವನು—ಪ್ರಪಂಚವೆಲ್ಲ ನಾಶಹೊಂದಿದರೂ ನಾಶವಿಲ್ಲದಿರುವನು; ಮತ್ತು, ಒಂದು ಬಿಳಿಯ ಬಟ್ಟೆಯಲ್ಲಿರುವ ಬಿಳುಪು ನಮ್ಮ ಕಣ್ಣಿಗೆ ಕಾಣುತಿದ್ದರೂ ಅದನ್ನು ಹಿಡಿದುಕೊಳ್ಳುವುದಕ್ಕಾಗದಿರುವಂತೆ, ಅವನು ಪ್ರತ್ಯಕ್ಷಸ್ಥಿತನಾದರೂ ಸರ್ವರಿಗೂ ಸಿಕ್ಕತಕ್ಕವನಾಗಿಲ್ಲ ||

ನಿರಾಕಾರನಾದ ಅವನು—ವಾಗಿಂದ್ರಿಯವಿಲ್ಲದವನಾಗಿ ಮೂಗನಾಗಿದ್ದರೂ ಸಮಸ್ತವಾದ ವಾಕ್ಪ್ರವೃತ್ತಿಗೂ ಮುಖ್ಯಕಾರಣನಾದುದರಿಂದ ಮೂಗನಲ್ಲದವನಾಗಿರುವನು; ಹೀಗೆಯೇ ಕಲ್ಲಿನಂತೆ ಚಲನರಹಿತರಾಗಿದ್ದರೂ ಸರ್ವಜ್ಞಾನಹೇತುವಾಗಿರುವನು; ಮತ್ತು ಅವನು ನಿತ್ಯತೃಪ್ತನಾಗಿದ್ದರೂ ವಿಷಯಭೋಗಮಾಡತಕ್ಕವನಾಗಿರುವನು; ಅವನು ಯಾವುದೊಂದು ಸ್ವಲ್ಪವಸ್ತುವೂ ಇಲ್ಲದವನಾಗಿದ್ದರೂ, ಸರ್ವಕರ್ತೃವಾಗಿರುವನು ||೬೪||

ಅವನು-ಅವಯವರಹಿತನಾಗಿದ್ದರೂ ಸಕಲಾವಯವ ಸಂಪೂರ್ಣನಾಗಿಯೂ, ಸಾವಿರಗಟ್ಟಲೆ ಕೈಯಿಕಣ್ಣುಗಳುಳ್ಳವನಾಗಿಯೂ ಇರುವನು;ಅವನು ಯಾವುದೊಂದು ಪದಾರ್ಥದ ಆಧಾರದಮೇಲೂ ಇಲ್ಲದವನಾದರೂ ಈ ಪ್ರಪಂಚವನ್ನೆಲ್ಲ ವ್ಯಾಪಿಸಿಕೊಂಡಿರುವನು||

ಇಂದ್ರಿಯಶಕ್ತಿಶೂನ್ಯನಾಗಿದ್ದರೂ ಅವನಿಗೆ ಸಮಸ್ತವಾದ ಇಂದ್ರಿಯವ್ಯಾಪಾರಗಳೂ ಇರುವುವು; ಮತ್ತು, ಮನನರಹಿತನಾಗಿದ್ದರೂ ಅವನ ಈ ಸಮಸ್ತವಾದ ಜಗತ್ತೆಂಬ ಮಾನಸಸೃಷ್ಟಿಕ್ರಮಗಳೂ ಕಾಣಿಸುವುವು ||೬೬||

ಯದನಾಲೋಕನಾದ್ಭ್ರಾನ್ತಿ ಸಂಸಾರೋರಗಭೀತಯಃ |
ಯಸ್ಮಿನ್ ದೃಷ್ಟೇ ಪಲಾಯನ್ತೇ ಸರ್ವಾಶಾಃ ಸರ್ವಭೀತಯಃ ||೬೭||
ಸಾಕ್ಷಿಣಿ ಸ್ಫುರದಾಭಾಸೇ ಧ್ರುವೇ ದೀಪ ಇವ ಕ್ರಿಯಾಃ |
ಸತಿ ಯಸ್ಮಿನ್ ಪ್ರವರ್ತನ್ತೇ ಚಿತ್ತೇಹಾಃ ಸ್ಪನ್ದಪೂರ್ವಿಕಾಃ ||೬೮||
ಯಸ್ಮಾದ್ಘಟಪಟಾಕಾರಪದಾರ್ಥಶತಪಙ್ಕ್ತಯಃ |
ತರಙ್ಗಗಣಕಲ್ಲೋಲವೀಚಯೋ ವಾರಿಧೇರಿವ ||೬೯||
ಸ ಏವಾನ್ಯತಯೋದೇತಿ ಯತ್ಪದಾರ್ಥಶತಭ್ರಾನ್ತ್ಯಃ |
ಕಟಕಾಙ್ಗದಕೇಯೂರನೂಪುರೈರಿವ ಕಾಞ್ಚನಮ್ ||೭೦||
ಯಸ್ತ್ವಮೇಕೋವಭಾಸಾತ್ಮಾ ಯೋಹಮೇತೇ ಜನಾಶ್ಚ ಯೇ |
ಯಶ್ಚ ನತ್ವಮಬುದ್ಧಾತ್ಮಾ ನಾಹಂ ನೈತೇ ಜನಾಶ್ಚ ಯಃ ||೭೧||
ಅನ್ಯೇವಾಪ್ಯತಿರಿಕ್ತೇವ ಸೈವಾಸೇವ ಚ ಭಙ್ಗುರಾ |
ಪಯಸೀವ ತರಙ್ಗಾಳೀ ಯಸ್ಮಾತ್ ಸ್ಫುರತಿ ದೃಶ್ಯಭೂಃ ||೭೨||
ಯತಃ ಕಾಲಸ್ಯ ಕಲನಾಃ ಯತೋ ದೃಶ್ಯಸ್ಯ ದೃಶ್ಯತಾ |
ಮಾನಸೀ ಕಲನಾ ಯೇನ ಯಸ್ಯ ಭಾಸಾ ವಿಭಾಸನಮ್ ||೭೩||

ಅವನನ್ನು ಕಾಣದಿರುವುದರಿಂದ ಸಂಸಾರವೆಂಬ ಸರ್ಪದ ಭಯವು ಕಾಣಿಸಿಕೊಳ್ಳುವುದು; ಅವನನ್ನು ಕಂಡುಬಿಟ್ಟಮೇಲೆ ಸಮಸ್ತ ಭಯವೂ ದಿಕ್ಕುಪಾಲಾಗಿ ಓಡುವುವು॥

ದೀಪವಿರಲಾಗಿಯೇ ನಾಟ್ಯಾದಿಕ್ರಿಯೆಗಳು ಪ್ರವರ್ತಿಸುವಂತೆ, ಅಪರಿಚ್ಛಿನ್ನನಾಗಿ ಪ್ರಕಾಶರೂಪನಾಗಿ ಸರ್ವಸಾಕ್ಷಿಯಾಗಿರುವ ಅವನು ಸ್ಥಿರನಾಗಿರುವಾಗಲೇ ಚಲನಪೂರಕವಾದ ಮನೋವ್ಯಾಪಾರಗಳೆಲ್ಲವೂ ಪ್ರವರ್ತಿಸುವುವು ॥೬೮॥

ಸಮುದ್ರದದೆಶೆಯಿಂದ-ದೊಡ್ಡ-ಸಣ್ಣ-ಪುಟ್ಟಅಲೆಗಳು ಗುಂಪುಗುಂಪಾಗಿ ಹುಟ್ಟುವಂತೆ, ಅವನದೆಶೆಯಿಂದ-ಘಟ-ಪಟ-ಇತ್ಯಾದಿರೂಪವಾದ ನೂರಾರು ಪದಾರ್ಥಸಮೂಹಗಳು ಹುಟ್ಟುವುವು ॥೬೯॥

ಚಿನ್ನವು-ಕಟಕ ಅಂಗದ ಕೇಯೂರ ನೂಪುರ ಇತ್ಯಾದಿ ರೂಪಗಳಿಂದುದಯಿಸುವಂತೆ, ಅವನೇ-ಅನೇಕ ಪದಾರ್ಥರೂಪವಾದ ಭ್ರಾಂತಿಯಿಂದ ರೂಪಾಂತರದಿಂದುದಯಿಸುವನು॥

ನೀನೂ ನಾನೂ ಈ ಜನಗಳೂಕೂಡ, ಪ್ರಕಾಶರೂಪನಾಗಿರತಕ್ಕ ಆ ದೇವನೇ ಆಗಿರುವೆವು; ಆತ್ಮಜ್ಞಾನವಿಲ್ಲದಿರುವಾಗ ಅವನು-ನೀನೂ ಅಲ್ಲ; ನಾನೂಅಲ್ಲ; ಈ ಜನಗಳೂಅಲ್ಲ॥

ನೀರಿನಲ್ಲಿ ತರಂಗಪರಂಪರೆ ಹುಟ್ಟುವಂತೆ, ನಶ್ವರವಾದ ಈ ದೃಶ್ಯಜಾತವು ಅವನಿಗಿಂತ ಬೇರೆಯಾಗಿರುವಂತೆಯೂ ಅವನನ್ನು ಮೀರಿರುವಂತೆಯೂ ಅವನೇ ಆಗಿರುವಂತೆಯೂ ಅವನಲ್ಲದಿರುವಂತೆಯೂ ಕಾಣಿಸುತ, ಅವನದೆಸೆಯಿಂದಲೇ ಸ್ಫುರಣೆಹೊಂದುವುದು ॥೭೨॥

ಕಾಲದಿಂದುಂಟಾಗುವ ಷಡ್ಭಾವವಿಕಾರಗಳೂ ಅವನಿಂದ ಆಗುವುವು; ಈ ದೃಶ್ಯವು ದರ್ಶನಗೋಚರವಾಗುವುದೂ ಅವನಿಂದಲೇ; ಇಷ್ಟಾನಿಷ್ಟಫಲಪ್ರಾಪ್ತಿಪರಿಹಾರವಿಷಯಕಗಳಾದ ಮನೋವ್ಯಾಪಾರಗಳೂ ಅವನಿಂದಲೇ; ಕೊನೆಗೆ ಸಚ್ಚಿದಾನಂದರೂಪಪ್ರಕಾಶವುಂಟಾಗುವುದೂ ಅವನ ತೇಜಸ್ಸಿನಿಂದಲೇ ॥೭೩॥

ಕ್ರಿಯಾಂ ರೂಪಂ ರಸಂ ಗನ್ಧಂ ಶಬ್ದಂ ಸ್ಪರ್ಶಂ ಚ ಚೇತನಮ್ ।
ಯದ್ವೇತ್ಸಿ ತದಸೌ ದೇವೋ ಯೇನ ವೇತ್ಸಿ ತದಪ್ಯಸೌ॥೭೪॥
ದ್ರಷ್ಟೃದರ್ಶನದೃಶ್ಯಾನಾಂ ಮಧ್ಯೇ ಯದ್ದರ್ಶನಂ ಸ್ಥಿತಮ್ ।
ಸಾಧೋ ತದವಧಾನೇನ ಸ್ವಾತ್ಮಾನಮವಬುಧ್ಯಸೇ ॥೭೫॥
ಅಜಮಜರಮನಾದ್ಯಂ ಶಾಶ್ವತಂ ಬ್ರಹ್ಮ ನಿತ್ಯಂ
ಶಿವಮಮಲಮಮೋಘಂ ವನ್ದ್ಯಮುಚ್ಚೈರನಿನ್ದ್ಯಮ್ ।
ಸಕಲಕಲನಶೂನ್ಯಂ ಕಾರಣಂ ಕಾರಣಾನಾಂ
ಅನುಭವನಮವೇದ್ಯಂ ವೇದನಂ ವಿಶ್ವಮನ್ತಃ ॥೭೬॥

ಇತಿ ಉತ್ಪತ್ತಿಪ್ರಕರಣೇ ಪರಮಕಾರಣವರ್ಣನಂ ನಾಮ
ನವಮಃ ಸರ್ಗಃ.

ಅಯ್ಯಾ! ರಾಮ! ಕರ್ಮ ರೂಪ ರಸ ಗಂಧ ಸ್ಪರ್ಶ ಚೇತನ-ಇತ್ಯಾದಿಯಾಗಿ ನೀನು ಯಾವುದನ್ನು ತಿಳಿಯುವೆಯೋ, ಅದೆಲ್ಲವೂ ಆ ದೇವನೇ; ಮತ್ತು, ನೀನು ಯಾವ ಉಪ ಕರಣದಿಂದ ತಿಳಿಯುವೆಯೋ, ಅದೂ ಅವನೇ ॥೭೪॥

ಅಯ್ಯಾ! ಸಾಧುವೆ! ದ್ರಷ್ಟೃ ದರ್ಶನ ದೃಶ್ಯ-ಇವುಗಳ ಮಧ್ಯದಲ್ಲಿ, ದರ್ಶನ ವೆಂಬುದನ್ನು ಉಪಾಧಿರಹಿತವಾಗಿ ನಿಷ್ಕರ್ಷಿಸಿ ತಿಳಿಯುವುದರಿಂದ, ನೀನು ಆತ್ಮಜ್ಞಾನವು ಳ್ಳವನಾಗುವೆ ॥೭೫॥

ರಾಮ! ಈ ಪರಬ್ರಹ್ಮವು-ಉತ್ಪತ್ತಿಶೂನ್ಯವಾದುದು ; ಜರಾರಹಿತವಾದುದು ; ಅನಾದಿಯಾದುದು; ಶಾಶ್ವತವಾದುದು ; ನಿತ್ಯವಾದದು ; ಶುದ್ಧಸತ್ವಮಯವಾದುದು ; ರಜಸ್ತಮೋರಹಿತವಾದುದು ; ಅಮೋಘ (ನಿಷ್ಫಲವಲ್ಲದ್ದು) ವಾದುದು ; ವಿಶೇಷವಾಗಿ ಸ್ತುತಿಯೋಗ್ಯವಾದುದು ; ನಿಂದೆಗನರ್ಹವಾದುದು ; ಸಕಲವಿಧವಾದ ಸಂಸಾರಸಂಬಂ ಧಶೂನ್ಯವಾದುದು ; ಸಮಸ್ತಕಾರಣಗಳಿಗೂ ಮೂಲಕಾರಣವಾದುದು ; ಅನುಭವ ವೇದ್ಯವಾದುದು ; ಇತರಮಾರ್ಗಗಳಿಂದ ತಿಳಿಯಲಸಾಧ್ಯವಾದುದು ; ಕೇವಲ ಜ್ಞಾನಸ್ವ ರೂಪವಾದುದು ; ಸರ್ವರೂಪವಾದುದು ; ಇದು ಸರ್ವಾಂತರ್ಗತವಾದುದು ॥೭೬॥

ಇದು ಉತ್ಪತ್ತಿಪ್ರಕರಣದಲ್ಲಿ ಪರಮಕಾರಣವರ್ಣನವೆಂಬ
ಒಂಭತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದಶಮಃ ಸರ್ಗಃ.

ಶ್ರೀರಾಮ ಉವಾಚ.—

ಮಹಾಪ್ರಳಯಸಮ್ಪತ್ತೌ ಯದೇತದವಶಿಷ್ಯತೇ ।
ಭವತ್ಯೇತದನಾಕಾರಂ ನಾಮ ನಾಸ್ತ್ಯತ್ರ ಸಂಶಯಃ ॥೧॥
ನ ಶೂನ್ಯಂ ಕಥಮೇತತ್ ಸ್ಯಾತ್ ನ ಪ್ರಕಾಶಃ ಕಥಂ ಭವೇತ್ ।
ಕಥಂ ವಾ ನ ತಮೋರೂಪಂ ಕಥಂ ವಾ ನೈವ ಭಾಸ್ವರಮ್ ॥೨॥
ಕಥಂ ವಾ ನೈವ ಚಿದ್ರೂಪಂ ಜೀವೋ ವಾ ನ ಕಥಂ ಭವೇತ್ ।
ಕಥಂ ನ ಬುದ್ಧಿತತ್ತ್ವಂ ಸ್ಯಾತ್ ಕಥಂ ವಾ ನ ಮನೋ ಭವೇತ್ ॥೩॥
ಕಥಂ ವಾ ನೈವ ಕಿಂಚಿತ್ ಸ್ಯಾತ್ ಕಥಂ ವಾ ಸರ್ವಮಿತ್ಯಪಿ ।

ಉತ್ಪತ್ತಿಪ್ರಕರಣದಲ್ಲಿ ಹತ್ತನೆಯ ಸರ್ಗವು.

ವಿರೋಧಮಿವ ಸಮ್ಭಾವ್ಯ ಪ್ರಾಗುಕ್ತೇ ಬ್ರಹ್ಮಲಕ್ಷಣೇ ।
ಕ್ರಮಾತ್ ತತ್ಪರಿಹಾರೇಣ ತಾತ್ಪರ್ಯಮಿಹ ವರ್ಣ್ಯತೇ ॥

ಹಿಂದೆ ಹೇಳಲ್ಪಟ್ಟ ಬ್ರಹ್ಮಲಕ್ಷಣದಲ್ಲಿ ವಿರೋಧವಿರುವಂತೆ ಸಂಭಾವನೆಮಾಡಿ—ಬಳಿಕ ಕ್ರಮವಾಗಿ ಅದನ್ನು ಪರಿಹರಿಸುವುದರಿಂದ, ಮುಖ್ಯತಾತ್ಪರ್ಯವು ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

'ಮಹಾಪ್ರಳಯಸಮ್ಪತ್ತೌ ಸತ್ ಕಿಂಚಿದವಶಿಷ್ಯತೇ' ಎಂದು ಹಿಂದಣ ಸರ್ಗದೊಳಗೆ ಶ್ರೀ ವಸಿಷ್ಠರು ಹೇಳಿರುವ ಮಾತಿನಲ್ಲಿ, 'ನ ತೇಜೋ ನ ತಮಸ್ತತಮ್' (ಆ ಪರಬ್ರಹ್ಮನು ತೇಜಸ್ಸೂ ಅಲ್ಲ ತಮಸ್ಸೂ ಅಲ್ಲ.) ಇತ್ಯಾದಿರೀತಿಯಾಗಿ ಹೇಳಿರುವುದರಿಂದ, ಆ ವಿಷಯದಲ್ಲಿ ಸ್ವಲ್ಪ ವಿರೋಧತೋರಿದವನಾಗಿ ಶ್ರೀರಾಮನು ಪ್ರಶ್ನೆಮಾಡಿದನು:—

ಗುರುವರ್ಯರೆ! ತಾವು ಅಪ್ಪಣೆಕೊಟ್ಟಂತೆ, ಮಹಾಪ್ರಳಯವುಂಟಾದಾಗ ಯಾವುದೊಂದು ಉಳಿಯುವುದೋ, ಅದು—ಆಗ ಸಮಸ್ತ ವಿಧವಾದ ಆಕಾರವೂ ಲಯವಾಗಿರುವುದರಿಂದ—ನಿರಾಕಾರವಾಗಿಯೇ ಆಗುವುದು; ಈ ವಿಷಯದಲ್ಲಿ ಸಂಶಯವಿಲ್ಲ ॥೧॥

ಆದರೆ, ಇದು— ಶೂನ್ಯವಲ್ಲದಿರುವುದು ಹೇಗೆ? ಪ್ರಕಾಶವಲ್ಲದುದು ಹೇಗೆ? ಪ್ರಕಾಶವಲ್ಲದಮೇಲೆ ತಮೋರೂಪವಾಗದಿರುವುದು ಹೇಗೆ? ತಮಸ್ಸಲ್ಲವೆಂದರೆ ಇದು ಮತ್ತೊಂದನ್ನು ಪ್ರಕಾಶಪಡಿಸದಿರುವುದುತಾನೆ ಹೇಗೆ? ॥೨॥

ಮತ್ತು, ಇದು—ಚಿದ್ರೂಪವಲ್ಲದಿರುವುದು ಹೇಗೆ? ಜೀವನಲ್ಲದಿರುವುದು ಹೇಗೆ? ಇದೊಂದೂ ಅಲ್ಲವೆಂದರೆ, ಆಗ ಬುದ್ಧಿತತ್ವವಲ್ಲದಿರುವುದು ಹೇಗೆ? ಮನಸ್ಸಲ್ಲದಿರುವುದು ತಾನೆ ಹೇಗೆ? ॥೩॥

ಇದೂ ಅಲ್ಲದೆ, ನೀನು ನಾನು—ಇತ್ಯಾದಿ ಪದಾರ್ಥವೊಂದೂ ಅದಲ್ಲವೆಂದು ಹೇಳುವುದು ಹೇಗೆ? ಅದೊಂದೂ ಅಲ್ಲದಿದ್ದಮೇಲೆ, ಸರ್ವವೂ ಅದೇ—ಎಂದು ಹೇಳುವುದು

ಅನಯೈವ ವಚೋಭಙ್ಗ್ಯಾ ಮಮ ಮೋಹಇವೋದಿತಃ ||೪||

ಶ್ರೀರಾಮ ಉವಾಚ.—

ವಿಷಮೋಯಮತಿಪ್ರಶ್ನೋ ಭವತಾ ಸಮುದಾಹೃತಃ |
ಭೇತ್ತಾಸ್ಮ್ಯಹಂ ತ್ವಯತ್ನೇನ ನೈಶಂ ತಮಇವಾಂಶುಮಾನ್ ||೫||
ಮಹಾಕಲ್ಪಾನ್ತಸಮ್ಪತ್ತೌ ಯತ್ ತತ್ ಸದವಶಿಷ್ಯತೇ |
ತದ್ರಾಮ ನ ಯಥಾ ಶೂನ್ಯಂ ತದಿದಂ ಶೃಣು ಕಥ್ಯತೇ ||೬||
ಅನುತ್ಕೀರ್ಣಾ ಯಥಾ ಸ್ತಮ್ಭೇ ಸಂಸ್ಥಿತಾ ಸಾಲಭಞ್ಜಿಕಾ |
ತಥಾ ವಿಶ್ವಂ ಸ್ಥಿತಂ ತತ್ರ ತೇನ ಶೂನ್ಯಂ ನ ತತ್ ಪದಮ್ ||೭||
ಅಯಮಿತ್ಥಂ ಮಹಾಭೋಗೋ ಜಗದಾಖ್ಯೋವಭಾಸತೇ |
ಸತ್ಯೋ ಭವತ್ವಸತ್ಯೋ ವಾ ಯತ್ರ ತತ್ರ ತ್ವಶೂನ್ಯತಾ ||೮||
ಯಥಾ ನ ಪುತ್ರಿಕಾಶೂನ್ಯಃ ಸ್ತಮ್ಭೋನುತ್ಕೀರ್ಣಪುತ್ರಿಕಃ |

ಹೇಗೆ? ಈ ತಮ್ಮ ವಚನಪ್ರಕ್ರಮದಿಂದಲೇ ನನಗೆ ಹೆಚ್ಚಾದ ಅಜ್ಞಾನವುದಯಿಸಿದಂತಿರುವುದು ॥೪॥

ಶ್ರೀ ವಸಿಷ್ಠರು ಉತ್ತರಹೇಳಿದರು.—

ಅಯ್ಯಾ! ರಾಮ! ನೀನು ಹೇಳಿರುವ ಈ ಪ್ರಶ್ನೆಯು, ಬಹು ಕಠಿನವಾದುದು; ಮತ್ತು, ನನ್ನ ಅಭಿಪ್ರಾಯವನ್ನು ಮೀರಿರತಕ್ಕುದು. ಆದರೆ, ಸೂರ್ಯನು ರಾತ್ರಿಯ ಕತ್ತಲೆಯನ್ನು ಹೋಗಲಾಡಿಸುವಂತೆ, ನಾನು ನಿನ್ನ ಸಂಶಯವನ್ನು ಹೋಗಲಾಡಿಸುವೆನು ॥೫॥

ಅಯ್ಯಾ! ರಾಮ! ಮಹಾಪ್ರಳಯವಾದಾಗ ಯಾವುದೊಂದು ಸತ್ಪದಾರ್ಥವುಳಿದಿರುವುದೋ, ಅದು ಶೂನ್ಯವಲ್ಲದಿರುವ ಬಗೆಯನ್ನು ಹೇಳುವೆನು; ಕೇಳುವವನಾಗು ॥೬॥

ಒಂದು ಕಂಭದಲ್ಲಿ ಒಂದು ಬೊಂಬೆಯನ್ನು ಕೆತ್ತುವರಷ್ಟೆ! ಅದು ಕೆತ್ತುವುದಕೆಕ ಮೊದಲು ಆ ಸ್ತಂಭ ಹೊರತು ಮತ್ತೆಲ್ಲಿಯಾದರೂ ಇರುವುದೆ? ಹೀಗೆ ಆ ಬೊಂಬೆಯು ಕೊರೆಯುವುದಕ್ಕೆ ಮೊದಲು ಸ್ತಂಭದಲ್ಲಿ ನಮ್ಮ ಅನುಭವಕ್ಕೆ ಗೋಚರವಾಗದಂತೆ ಹೇಗಿರುವುದೋ, ಈ ಪ್ರಪಂಚವು ಆ ಬ್ರಹ್ಮನಲ್ಲಿ ಆರೀತಿಯಾಗಿರುವುದು; ಹೀಗೆ ಅದರಲ್ಲಿ ಈ ವಿಶ್ವವಿರುವಕಾರಣ, ಅದು ಶೂನ್ಯವಲ್ಲ ॥೭॥

ಹೀಗೆ ಈ ಜಗತ್ತೆಂಬ ದೊಡ್ಡ ವಿಸ್ತಾರವು ಅದರಲ್ಲಿರುವುದು; ಆದರೆ ಇದು ಅಸತ್ಯವಾಗಿರುವಾಗ ಇರುವುದೆಂದು ಹೇಳುವುದು ಹೇಗೆಂಬದಾಗಿ ಆಕ್ಷೇಪಿಸಬಾರದು; ಇದು ಸತ್ಯವಾಗಿಯಾದರೂ ಇರಲಿ, ಅಥವಾ ಅಸತ್ಯವಾಗಿಯಾದರೂ ಇರಲಿ, ಆ ವಿಚಾರವೀಗ ಪ್ರಕೃತವಲ್ಲ. ಇದು ಯಾವುದನ್ನಾಶ್ರಯಿಸಿಕೊಂಡು ತೋರುತ್ತಿರುವುದೋ, ಅದು ಶೂನ್ಯವಲ್ಲವಾಯ್ತು ॥೮॥

ಒಂದು ಕಂಭದಲ್ಲಿ ಬೊಂಬೆಯನ್ನು ಕೆತ್ತದಿರುವಾಗಲೂ ಆ ಕಂಭದಲ್ಲಿ ಆ ಬೊಂಬೆಯಿದ್ದಂತೆಯೇ ಭಾವನೆಯೇ ಅಲ್ಲದೆ, ಅದು ಬೊಂಬೆಯಿಲ್ಲದುದೆಂದು ಹೇಳಲಾಗುವುದಿಲ್ಲವಷ್ಟೆ! ಪ್ರಕೃತವಿಷಯದಲ್ಲಿ ಬ್ರಹ್ಮವೇ ಜಗತ್ತೆಂದು ಪೂರ್ವದಲ್ಲಿ ಭಾಸಮಾನವಾಗಿದ್ದು,

ತಥಾ ಭೂತಂ ಜಗದ್ಬ್ರಹ್ಮ ತೇನ ಶೂನ್ಯಂ ನ ತತ್ ಪದಮ್ ||೯||
ಸೌಮ್ಯಾಮ್ಭಸಿ ಯಥಾ ವೀಚಿಃ ನ ಚಾಸ್ತಿ ನ ಚ ನಾಸ್ತಿ ಚ |
ತಥಾ ಜಗದ್ಬ್ರಹ್ಮಣೀದಂ ಶೂನ್ಯಾಶೂನ್ಯಪದಂ ಗತಮ್ ||೧೦||
ದೇಶಕಾಲಾದಿಶಾನ್ತತ್ವಾತ್ ಪುತ್ರಿಕಾರಚನಂ ದ್ರುಮೇ |
ಸಮ್ಭವತ್ಯಯಥಾತೋ ವೈ ತೇನಾನನ್ತೇ ವಿಮುಹ್ಯತೇ ||೧೧||
ತತ್ ಸ್ತಮ್ಭಪುತ್ರಿಕಾದ್ಯೇತತ್ ಪರಮಾರ್ಥೇ ಜಗತ್ಸ್ಥಿತೇಃ |
ಏಕದೇಶೇನ ಸದೃಶಂ ಉಪಮಾನಂ ನ ಸರ್ವಥಾ ||೧೨||
ನ ಕದಾಚಿದುದೇತೀದಂ ಪರಸ್ಮಾನ್ನ ಚ ಶಾಮ್ಯತಿ |
ಇತ್ಥಂಸ್ಥಿತಂ ಕೇವಲಂ ಸತ್ ಬ್ರಹ್ಮ ಸ್ವಾತ್ಮನಿ ಸಂಸ್ಥಿತಮ್ ||೧೩||

ಈಗಲೂ ಆ ಜಗತ್ತು ಆ ಬ್ರಹ್ಮನಲ್ಲಿ—ಕಂಭದಲ್ಲಿ ಬೊಂಬೆಯಿರುವಂತೆ ಇದ್ದೇ ಇರುವುದು; ಅದುಕಾರಣ, ಆ ಪರಬ್ರಹ್ಮವು ಶೂನ್ಯವಾದುದಲ್ಲ ||೯||

ಅಲೆಯಿಲ್ಲದೆ ನಿಂತ ನೀರಿನಲ್ಲಿ ತೆರೆಯು ಇದೆಯೆಂಬುದೂ ಇಲ್ಲ; ಇಲ್ಲವೆಂಬುದೂ ಇಲ್ಲ. ಇದು ಹೇಗೋ, ಹಾಗೆಯೇ ಪರಬ್ರಹ್ಮನಲ್ಲಿ ಈ ಜಗತ್ತು ಶೂನ್ಯವಾಗಿಯೂ, ಅಶೂನ್ಯವಾಗಿಯೂ ಇರುವುದು ||೧೦||

ಸ್ತಂಭದಲ್ಲಿ ಬೊಂಬೆಯಿದ್ದಂತೆ ಬ್ರಹ್ಮನಲ್ಲಿ ಜಗತ್ತೂ ಇರುವುದೆಂದು ಹೇಳಿದ ಮೇಲೆ, ಸ್ತಂಭದಲ್ಲಿ ಬೊಂಬೆಯಿರುವುದೆಂದು ಸರ್ವರೂ ನಂಬುವಂತೆ ಇಲ್ಲಿಯೂ ಏತಕ್ಕೆ ನಂಬಬಾರದೆಂದು ಶಂಕೆಯುಟಾಗಬಹುದಲ್ಲವೆ! ಆದರೆ ಕಂಭದಲ್ಲಿರುವ ಬೊಂಬೆಯನ್ನು ನೋಡಬೇಕಾದರೂ ಅದಕ್ಕೆ ತಕ್ಕ ದೇಶ ಕಾಲ ಮುಂತಾದ ಉಪಕರಣಗಳೆಲ್ಲವೂ ಸಮಗ್ರವಾಗಿದ್ದರೇ ಆಗುವುದಲ್ಲದೆ ಅನ್ಯಥಾ ಆಗಲಾರದು. ಅದು ಸಾಧ್ಯವಾದುದರಿಂದ, ಸಾಮಗ್ರಿಯೆಲ್ಲವೂ ಸೇರಿದಾಗ ಆ ವಿಷಯವು ಅನುಭವಗೋಚರವಾಗುವ ಸಂಭವವಿರುವುದು; ಬ್ರಹ್ಮನಲ್ಲಿಯಾದರೋ, ಅಪರಿಚ್ಛಿನ್ನನಾಗಿರುವುದರಿಂದ ಅಂತಹ ಸಾಮಗ್ರಿಯು ಸುಲಭವಲ್ಲ; ಅದುಕಾರಣ, ಇವನಲ್ಲಿ ಜಗತ್ತಿರುವುದೆಂಬ ವಿಷಯದಲ್ಲಿ ವಾದಿಗಳು ಭ್ರಮಿಸುವರು||೧೧||

ಮೇಲೆ ಹೇಳಿದ ದೃಷ್ಟಾಂತದಲ್ಲಿ ಪರಸ್ಪರ ವ್ಯತ್ಯಾಸಕಂಡುಬರುವುದರಿಂದ, ಈ ಉಪಮಾನವೇ ಅಸಂಗತವಾಗುವುದೆಂದರೆ,—ಹಾಗೆ ತಿಳಿಯಬಾರದು. ಈ ಮೇಲೆಹೇಳಿದ ಆ ಸ್ತಂಭಪುತ್ರಿಕಾದಿವಿಷಯವು, ಪರಬ್ರಹ್ಮನಲ್ಲಿ ಜಗತ್ತಿದೆಯೆಂಬುದನ್ನು ತೋರಿಸುವುದಕ್ಕಾಗಿ ಏಕದೇಶದಲ್ಲಿ ಸದೃಶವೆಂದು ಹೇಳಬೇಕೇಹೊರತು, ಸರ್ವಾಂಶದಲ್ಲಿಯೂ ಉಪಮಾನವೆಂದು ಹೇಳಲಾಗದು ||೧೨||

ಈ ವಿಷಯವಿರಲಿ; ಜಗತ್ತು ಉದಯಿಸುವುದೂ ಅದು ಲಯಹೊಂದುವುದೂ ಪರಸ್ಪರ ವಿರುದ್ಧವಾಗಿರುವುದರಿಂದ, ಅವೆರಡೂ ಆ ಬ್ರಹ್ಮನಲ್ಲಿ ಒಟ್ಟಿಗೆ ಹೇಗೆ ಸಂಭವಿಸುವುವು?—ಎಂದು ಕೇಳದರೆ.—ಈಜಗತ್ತು ಆ ಪರಬ್ರಹ್ಮನ ದೆಸೆಯಿಂದ ಎಂದಿಗೂ ಉದಯಿಸುವುದೂಇಲ್ಲ; ಲಯಹೊಂದುವುದೂ ಇಲ್ಲ. ಕೇವಲವಾಗಿ ಈ ರೀತಿಯಲ್ಲಿರುವ ಬ್ರಹ್ಮವೇ ತನ್ನಲ್ಲಿ ತಾನಿರುವುದು ||೧೩||

ಅಶೂನ್ಯಾಪೇಕ್ಷಯಾ ಶೂನ್ಯಶಬ್ದಾರ್ಥಪರಿಕಲ್ಪನಾ ।
ಅಶೂನ್ಯತ್ವಾತ್ ಸಮ್ಭವತಃ ಶೂನ್ಯತಾಶೂನ್ಯತೇ ಕುತಃ ॥೧೪॥
ಬ್ರಹ್ಮಣ್ಯಯಂ ಪ್ರಕಾಶೋ ಹಿ ನ ಸಮ್ಭವತಿ ಭೂತಜಃ ।
ಸೂರ್ಯಾನಲೇನ್ದುತಾರಾದಿಃ ಕುತಸ್ತತ್ರ ಕಿಲಾವ್ಯಯೇ ॥೧೫॥
ಮಹಾಭೂತಪ್ರಕಾಶಾನಾಂ ಅಭಾವಸ್ತಮಉಚ್ಯತೇ ।
ಮಹಾಭೂತಾಭಾವಜಂ ತು ತೇನಾತ್ರ ನ ತಮಃ ಕ್ವಚಿತ್ ॥೧೬॥
ಸ್ವಾನುಭೂತಿಃ ಪ್ರಕಾಶೋಽಸ್ಯ ಕೇವಲಂ ವ್ಯೋಮರೂಪಿಣಃ ।
ಯೋಽನ್ತರಸ್ತಿ ಸ ತೇನೈವ ನ ತ್ವನ್ಯೇನಾನುಭೂಯತೇ ॥೧೭॥
ಮುಕ್ತಂ ತಮಃಪ್ರಕಾಶಾಭ್ಯಾಂ ಇತ್ಯೇತದಜರಂ ಪದಮ್ ।

ಇದುವರೆಗೆ ಹೇಳಿದಂತೆ ಬ್ರಹ್ಮವು ಶೂನ್ಯವಲ್ಲವೆಂದಿಟ್ಟುಕೊಂಡರೆ,—'ನೋದೇತಿ ನ ಶಾಮ್ಯತಿ' ಇತ್ಯಾದಿರೀತಿಯಾಗಿ ಶೂನ್ಯಾರ್ಥಕವಾದ 'ನ' ಎಂಬ ಶಬ್ದದಿಂದ ವ್ಯವಹಾರವಯುಕ್ತವಾಗುವುದೆಂದರೆ,— ಹಾಗಲ್ಲ.—ಈ ಶೂನ್ಯಶಬ್ದದ ಅರ್ಥವನ್ನು ಕಲ್ಪಿಸುವಾಗ, ಅಶೂನ್ಯವಾದ ಮತ್ತೊಂದು ಪದಾರ್ಥವನ್ನಿಟ್ಟುಕೊಂಡು ತದಪೇಕ್ಷಯಾ ಇದು ಶೂನ್ಯವೆಂದು ಅರ್ಥಕಲ್ಪನೆಮಾಡಬೇಕು. ಹೀಗೆಯೇ, ಅಶೂನ್ಯಶಬ್ದಕ್ಕೆ ಅರ್ಥಕಲ್ಪನೆ ಮಾಡುವಾಗಲೂ, ಶೂನ್ಯವಾದುದೊಂದನ್ನಿಟ್ಟುಕೊಂಡು ತದಪೇಕ್ಷಯಾ ಇದು ಅಶೂನ್ಯವೆಂದು ಹೇಳಬೇಕು. ಹೀಗಿರುವಾಗ, ಶೂನ್ಯತ್ವಾಶೂನ್ಯತ್ವಗಳು ಹೇಗೆ ಸರ್ವದಾ ಸಂಭವಿಸುವುವು? ॥೧೪॥

ಅಯ್ಯಾ! ರಾಮ! ನಿನ್ನ ಪ್ರಶ್ನೆಗಳಲ್ಲಿ ಮೊದಲನೆಯದಾದ 'ನ ಶೂನ್ಯಂ ಕಥಮೇತತ್ ಸ್ಯಾತ್' ಎಂಬುದಕ್ಕೆ ಉತ್ತರವಾಯ್ತಷ್ಟೆ! ಈಗ 'ನ ಪ್ರಕಾಶಃ ಕಥಂ ಭವೇತ್' ಎಂಬ ದ್ವಿತೀಯಪ್ರಶ್ನೆಗುತ್ತರಹೇಳುವೆನು. ಸೂರ್ಯ ಚಂದ್ರ ಅಗ್ನಿ ನಕ್ಷತ್ರ—ಇತ್ಯಾದಿ ಪ್ರಕಾಶವು ನಶ್ವರವಾದುದರಿಂದ, ಅವ್ಯಯನಾದ ಆ ಪರಬ್ರಹ್ಮನಲ್ಲಿ ಎಲ್ಲಿ ಸಂಭವಿಸುವುದು? ಅದುಕಾರಣ, ಈ ಭೌತಿಕವಾದ ಪ್ರಕಾಶವು ಅದರಲ್ಲಿ ಸಂಭವಿಸುವುದಿಲ್ಲ. ಆದುದರಿಂದ ಆ ಪರಬ್ರಹ್ಮವು ಪ್ರಕಾಶವಲ್ಲವೆಂದು ತಿಳಿಯಬೇಕು. ಇದರಿಂದಲೇ 'ಕಥಂವಾನೈವ ಭಾಸ್ವರಃ' ಎಂಬ ಪ್ರಶ್ನೆಗೂ ಉತ್ತರವಿತ್ತಂತಾಯ್ತು ॥೧೫॥

ಈಗ ಮೂರನೆಯದಾದ 'ಕಥಂ ವಾ ನ ತಮೋರೂಪಂ' ಎಂಬ ಪ್ರಶ್ನೆಗೆ ಸಮಾಧಾನಹೇಳುವೆನು.—ಸೂರ್ಯಾದಿ ಮಹಾಭೂತಗಳ ಪ್ರಕಾಶವಿಲ್ಲದಿರುವಿಕೆಯೇ ಪೃಥಿವ್ಯಾದಿತಾದುವುಗಳಲ್ಲಿ ತಮಸ್ಸೆಂದು ಹೇಳಲ್ಪಡುವುದು. ಅದುಕಾರಣ, ಸ್ವಯಂಪ್ರಕಾಶನಾದ ಆ ಪರಬ್ರಹ್ಮನಲ್ಲಿ ಈ ಮಹಾಭೂತಾಭಾವದಿಂದುಂಟಾದ ತಮಸ್ಸು ಎಂದಿಗೂ ಸಂಭವಿಸುವುದಿಲ್ಲ ॥೧೬॥

ಕೇವಲಾಕಾಶರೂಪನಾಗಿರುವ ಇವನಿಗೆ ಸ್ವಾನುಭವವೇ ಪ್ರಕಾಶವೆನ್ನಿಸುವುದು. ಹೀಗೆ ಹೇಳಲು ಕಾರಣವೇನೆಂದರೆ:— ಒಂದು ಪದಾರ್ಥದೊಳಗೆ ಅಂತರ್ಗತವಾಗಿ ಯಾವುದಿರುವುದೋ, ಅದು ಅದಕ್ಕೇ ಅನುಭವಗೋಚರವಾಗುವುದಲ್ಲದೆ—ಮತ್ತೊಂದಕ್ಕಾಗುವುದಿಲ್ಲವಲ್ಲವೆ! ॥೧೭॥

ಹೀಗೆ ಅವ್ಯಯವಾದ ಆ ಪರಬ್ರಹ್ಮವು ತಮಸ್ಸಿನಿಂದಲೂ ಪ್ರಕಾಶದಿಂದಲೂ ಶೂನ್ಯ

ಆಕಾಶಕೋಶಮೇವೇದಂ ವಿದ್ಧಿ ಕೋಶಂ ಜಗತ್ಸ್ಥಿತೇಃ ॥೧೮॥
ಬಿಲ್ವಸ್ಯ ಬಿಲ್ವಮಧ್ಯಸ್ಯ ಯಥಾ ಭೇದೋ ನ ಕಶ್ಚನ ।
ತಥಾಸ್ತಿ ಬ್ರಹ್ಮಜಗತೋಃ ನ ಮನಾಗಪಿ ಭಿನ್ನತಾ ॥೧೯॥
ಸಲಿಲಾನ್ತರ್ಯಥಾ ವೀಚಿಃ ಮೃದೋನ್ತರ್ಘಟಕೋ ಯಥಾ ।
ತಥಾ ಯತ್ರ ಜಗತ್ಸತ್ತಾ ತತ್ ಕಥಂ ಖಾತ್ಮಕಂ ಭವೇತ್ ॥೨೦॥
ಭೂಜಲಾದ್ಯುಪಮಾನಶ್ರೀಃ ಸಾಕಾರಾನ್ತಾ ಸಮಾ ನ ಸಾ ।
ಬ್ರಹ್ಮ ತ್ವಾಕಾಶವಿಶದಂ ತಸ್ಯಾನ್ತಸ್ಸ್ಥಂ ತಥೈವ ತತ್ ॥೨೧॥
ತಸ್ಮಾದ್ಯಾದೃಕ್ ಚಿದಾಕಾಶಂ ಆಕಾಶಾದಪಿ ನಿರ್ಮಲಮ್ ।
ತದನ್ತಸ್ಸ್ಥಂ ತಾದೃಗೇವ ಜಗಚ್ಚಬ್ದಾರ್ಥಭಾಗಪಿ ॥೨೨॥
ಮರೀಚೇನ್ತರ್ಯಥಾ ತೈಕ್ಷ್ಣ್ಯಂ ಋತೇ ಭೋಕ್ತುರ್ನಲಕ್ಷ್ಯತೇ ।
ಚಿನ್ಮಾತ್ರತ್ವಂ ಚಿದಾಕಾಶೇ ತಥಾ ಚೇತ್ಯಕಲಾಂ ವಿನಾ ॥೨೩॥
ತಸ್ಮಾಚ್ಚಿದಪ್ಯಚಿದ್ರೂಪಂ ಚೇತ್ಯರಿಕ್ತಂ ತದಾತ್ಮನಿ ।
ಜಗತ್ತಾ ತಾದೃಗೇವೇಯಂ ತಾವನ್ಮಾತ್ರಾತ್ಮತಾವಶಾತ್ ॥೨೪॥

ವಾಗಿರುವುದು; ಈ ಆಕಾಶರೂಪನಾಗಿರುವ ಬ್ರಹ್ಮನನ್ನೇ ಲೋಕಸ್ಥಿತಿಗೆ ಬಂಡಾರವೆಂದು ತಿಳಿಯಬೇಕು ॥೧೮॥

ಪ್ರಪಂಚದಲ್ಲಿ ಬಿಲ್ವಫಲವೆಂದರೂ ಅದರ ಹೊಟ್ಟೆಯೆಂದರೂ ಬೇರೆಬೇರೆ ಪದಾರ್ಥವಾಗಿರದೆ ಒಂದೇ ಆಗಿರುವುದಲ್ಲವೆ! ಇವೆರಡಕ್ಕೂ ಹೇಗೆ ಭೇದವೊಂದೂ ಇಲ್ಲವೋ, ಹಾಗೆಯೇ ಬ್ರಹ್ಮನಿಗೂ ಜಗತ್ತಿಗೂ ಸ್ವಲ್ಪವೂ ಭೇದವಿಲ್ಲ ॥೧೯॥

ನೀರಿನೊಳಗೆ ಅಲೆಯು ಹೇಗಿದೆಯೋ, ಮಣ್ಣಿನೊಳಗೆ ಮಡಕೆ ಹೇಗಿದೆಯೋ, ಹಾಗೆ ಆ ಪರಬ್ರಹ್ಮನಲ್ಲಿ ಈ ಜಗತ್ಸ್ಥಿತಿಯಿರುವುದು; ಹೀಗಿರುವಾಗ ಅದು ಹೇಗೆ ಆಕಾಶರೂಪವಾಗುವುದು? ॥೨೦॥

ಆದರೆ, ಇಲ್ಲಿ ಸ್ವಲ್ಪ ವಿಶೇಷವುಂಟು, ಮೇಲೆ ಹೇಳಿದ ಮೃತ್ತು, ಜಲ ಇತ್ಯಾದ್ಯುಪಮಾನವು ಆಕಾರಯುಕ್ತವಾಗಿಯೂ ಅವಧಿಯುಕ್ತವಾಗಿಯೂ ಇರುವಕಾರಣ, ಅದು ಸರ್ವಾಂಶದಲ್ಲಿಯೂ ಉಪಮಾನವಾಗಲಾರದು. ಬ್ರಹ್ಮವಾದರೆ, ಆಕಾಶದಂತೆ ನಿರ್ಮಲವಾದುದು; ಅದರ ಅಂತರ್ಗತವಾದ ಆ ಜಗತ್ತೂ ಅರೀತಿಯಾಗಿಯೇ ಇರುವುದು ॥೨೧॥

ಆದಕಾರಣ ಈ ಜ್ಞಾನಾಕಾಶವು ಯಾವವಿಧವಾಗಿ ಆಕಾಶಕ್ಕಿಂತ ನಿರ್ಮಲವಾಗಿರುವುದೋ, ಅದರೊಳಗಿರುವ ಈ ಜಗತ್ತೆಂಬುದೂಕೂಡ ಅಂತಹುದಾಗಿಯೇ ಇರುವುದು ॥

ಮೆಣಸಿನಕಾಯಿನೊಳಗೆ ಕಾರವನ್ನು ಬಿಟ್ಟು ಬೇರೆಯಾಗಿ ಅದರ ರುಚಿಯು ಹೇಗೆ ತಿನ್ನತಕ್ಕವನಿಗೆ ಗೊತ್ತಾಗುವುದಿಲ್ಲವೋ, ಹಾಗೆ ಜ್ಞಾನಾಕಾಶದಲ್ಲಿ ಚೇತನೀಯಶಕ್ತಿಯನ್ನು ಬಿಟ್ಟು ಬೇರೆಯಾಗಿ ಚಿನ್ಮಾತ್ರಸ್ವರೂಪವು ಕಾಣುವುದಿಲ್ಲ ॥೨೩॥

ಆದಕಾರಣ, ಜಗತ್ತು ಲಯವಾಗಿ ಚೇತನೀಯಶೂನ್ಯವಾಗಿರುವಾಗ ಆ ಆತ್ಮನಲ್ಲಿ ಚಿದಂಶವೂ ಕೂಡ ಅಚಿದ್ರೂಪವಾಗಿರುವುದು; ಈ ಜಗತ್ಸತ್ತೆಯೂ ಬಳಿಕ ಹಾಗೆಯೇ ಇರುವುದು. ಇದು ಹೀಗೆ ತಾವನ್ಮಾತ್ರಸ್ವರೂಪವಾಗಿರುವುದರಿಂದ, ಬಾಹ್ಯವಾದ ಪದಾ

ರೂಪಾಲೋಕಮನಸ್ಕಾರಾಃ ತನ್ಮಯಾಏವ ನೇತರತ್ |
ಯಥಾ ಸ್ಥಿತಮತೋ ವಿಶ್ವಂ ಸುಷುಪ್ತಂ ತುರ್ಯಮೇವ ವಾ ||೨೫||
ತೇನ ಯೋಗೀ ಸುಷುಪ್ತಾಪ್ತಾ ವ್ಯವಹಾರ್ಯಪಿ ಶಾನ್ತಧೀಃ |
ಆಸ್ತೇ ಬ್ರಹ್ಮ ನಿರಾಭಾಸಂ ಸರ್ವಾಭಾಸಸಮುದ್ಗಕಃ ||೨೬||
ಅಕಾರಿಣಿ ಯಥಾ ಸೌಮ್ಯೇ ಸ್ಥಿತಾಸ್ತೋಯೇ ಮಹೋರ್ಮಯಃ |
ಅನಾಕೃತೌ ತಥಾ ವಿಶ್ವಂ ಸ್ಥಿತಂ ತತ್ಸದೃಶೇ ಪರೇ ||೨೭||
ಪೂರ್ಣಾತ್ ಪೂರ್ಣಂ ಪ್ರಸರತಿ ಯತ್ ತತ್ ಪೂರ್ಣಂ ನಿರಾಕೃತಿ |
ಬ್ರಹ್ಮಣೋ ವಿಶ್ವಮಾಭಾತಂ ತದ್ಧಿ ಸ್ವಾರ್ಥಂ ವಿಚಕ್ಷಿತಮ್ ||೨೮||
ಪೂರ್ಣಾತ್ ಪೂರ್ಣಂ ಪ್ರಸರತಿ ಸಂಸ್ಥಿತಂ ಪೂರ್ಣಮೇವ ತತ್ |
ಅತೋ ವಿಶ್ವಮನುತ್ಪನ್ನಂ ಯಚ್ಚೋತ್ಪನ್ನಂ ತದೇವ ತತ್ ||೨೯||
ಚೇತ್ಯಾಸಮ್ಭವತಸ್ತಸ್ಮಿನ್ ಪದೇ ಕಾ ಜಗದರ್ಥತಾ |
ಆಸ್ವಾದಕಾಸಮ್ಭವತೋ ಮರೀಚೇ ಕ್ವೈವ ತೀಕ್ಷ್ಣತಾ ||೩೦||

ರ್ಥದರ್ಶನಗಳೂ ಆಂತರವಾದ ಮನೋವ್ಯಾಪಾರಗಳೂ ತನ್ಮಯಗಳೇ ಹೊರತು ಬೇರೆಯಲ್ಲ; ಆದುಕಾರಣ, ಯಥಾವಸ್ಥಿತವಾದ ಈ ವಿಶ್ವವು ಸುಷುಪ್ತಾವಸ್ಥಾಪನ್ನವಾದುದೆಂದಾಗಲಿ—ಅಥವಾ ತುರ್ಯಾವಸ್ಥಾಪನ್ನವಾದುದೆಂದಾಗಲಿ —ತಿಳಿಯಬೇಕು ||೨೪-೨೫||

ಆದುದರಿಂದ, ಸುಷುಪ್ತಾವಸ್ಥಾಪನ್ನನಾಗಿರುವ ಯೋಗಿಯು, ಪ್ರಪಂಚವ್ಯವಹಾರಯುಕ್ತನಾಗಿಯೇ ಇದ್ದರೂ ಶಾಂತಮನಸ್ಕನಾಗಿರುವನು. ಹೀಗೆ ಈ ಬ್ರಹ್ಮವು ಕ್ರಿಯಾಶೂನ್ಯವಾಗಿದ್ದರೂ ಸಕಲ ಕ್ರಿಯೆಗಳಿಗೂ ಪೆಟ್ಟಿಗೆಯಾಗಿರುವುದು ||೨೬||

ನಿಶ್ಚಲವಾಗಿ ನಿರ್ಮಲವಾಗಿರುವ ಆಕಾರಯುಕ್ತವಾದ ನೀರಿನಲ್ಲಿ ನಾನಾವಿಧವಾದ ದೊಡ್ಡ ಅಲೆಗಳು ಹೇಗಿರುವುವೋ, ಹಾಗೆ ನಿರಾಕಾರನಾದ ಪರಬ್ರಹ್ಮನಲ್ಲಿ ತತ್ಸಮಾನವಾದ ನಾನಾವಿಧ ಪ್ರಪಂಚವಿರುವುದು ||೨೭||

ಪೂರ್ಣ (ಅಖಂಡ) ನಾಗಿರುವ ಬ್ರಹ್ಮನದೆಸೆಯಿಂದ ಜೀವನೆಂಬ ಉಪಾಧಿಯಿಂದ ಯಾವುದು ವ್ಯಕ್ತವಾಗುವುದೋ, ಅದು ಪೂರ್ಣವಾದುದೇಯೆ. ಆಕಾರಯುಕ್ತವಾದುದು ಎಂದಿಗೂ ಪೂರ್ಣವಾಗಲಾರದದಕಾರಣ, ಯಾವುದು ಪೂರ್ಣವೋ,- ಅದು ನಿರಾಕಾರವಾದುದು. ಹೀಗೆ ಪೂರ್ಣವಾದಮೇಲೆ ಅದು ವ್ಯಕ್ತವಾಗಲು ಕಾರಣವೇನೆಂದರೆ,—ಕ್ರಮವಾಗಿ ಅಧಿಕಾರಚತುಷ್ಟಯಸಂಪನ್ನಶರೀರವನ್ನು ಹೊಂದಿ ಆತ್ಮಲಾಭಾರ್ಥವಾಗಿಯೆಂದು ತಿಳಿಯಬೇಕು ||೨೮||

ಪೂರ್ಣವಾಗಿರುವುದರ ದೆಸೆಯಿಂದ ಪೂರ್ಣವಾದುದೇ ವ್ಯಕ್ತವಾಗುವುದು; ಅದು ಲಯಹೊಂದಿದರೂ ಪೂರ್ಣವೇಯೆ. ಹೀಗಿರುವುದರಿಂದ ಪೂರ್ಣವಲ್ಲದ ಈ ವಿಶ್ವವು ಉತ್ಪನ್ನವಾಯಿತೆಂಬುದೇ ಇಲ್ಲ; ಯಾವುದು ಉತ್ಪನ್ನವಾಯ್ತೆಂದು ವ್ಯವಹಾರವುಳ್ಳುದಾಗಿರುವುದೋ, ಅದು ಆ ಪೂರ್ಣವಾದ ಬ್ರಹ್ಮನೇಯೆ ||೨೯||

ಚೇತನೀಯವಾದ ವಸ್ತುವೊಂದೂ ಇಲ್ಲವಾದುದರಿಂದ, ಆ ಬ್ರಹ್ಮನಲ್ಲಿ ಈ ಜಗಚ್ಛಬ್ದಾರ್ಥವು ಎಲ್ಲಿಂದ ಬಂದೀತು? ರುಚಿನೋಡತಕ್ಕವನೇ ಇಲ್ಲದಿದ್ದರೆ, ಮೆಣಸಿನಕಾಯಿನಲ್ಲಿ ಕಾರವಾವುದು? ||೩೦||

ಸತ್ಯೇವೇಯಮಸತ್ಯೈವ ಚಿತ್ತಚೇತ್ಯಾದಿತಾ ಪರೇ |
ತದ್ಭಾವಾತ್ ಪ್ರತಿಬಿಮ್ಬಸ್ಯ ಪ್ರತಿಬಿಮ್ಬಾರ್ಹತಾ ಕುತಃ ||೨೧||
ಪರಮಾಣೋರಪಿ ಪರಂ ತದಣೀಯೋ ಹ್ಯಣೀಯಸಃ |
ಶುದ್ಧಂ ಸೂಕ್ಷ್ಮಂ ಪರಂ ಶಾನ್ತಂ ತದಾಕಾಶೋದರಾದಪಿ ||೨೨||
ದಿಕ್ಕಾಲಾದ್ಯನವಚ್ಛಿನ್ನರೂಪತ್ವಾದತಿವಿಸ್ತೃತಮ್ |
ತದನಾದ್ಯನ್ತಮಾಭಾಸಂ ಭಾಸನೀಯವಿವರ್ಜಿತಮ್ ||೨೩||
ಚಿದ್ರೂಪಮೇವ ನೋ ಯತ್ರ ಲಭ್ಯತೇ ತತ್ರ ಜೀವತಾ |
ಕಥಂ ಸ್ಯಾಚ್ಚಿತ್ತತಾಕಾರವಾಸನಾ ನಿತ್ಯರೂಪಿಣೀ ||೨೪||
ಚಿದ್ರೂಪಾನುದಯಾದೇವ ತತ್ರ ನಾಸ್ತ್ಯೇವ ಜೀವತಾ |
ನ ಬುದ್ಧಿತಾ ಚಿತ್ತತಾ ವಾ ನೇನ್ದ್ರಿಯತ್ವಂ ನ ವಾಸನಾ ||೨೫||
ಏವಮಿತ್ಥಂಮಹಾರಮ್ಭಪೂರ್ಣಮಪ್ಯಜರಂ ಪದಮ್ |

ಆ ಪರಬ್ರಹ್ಮನಲ್ಲಿ, ಈ ಚಿತ್ತ ಚೇತನೀಯ—ಇತ್ಯಾದಿ ಸ್ವಭಾವವೆಲ್ಲವೂ ಸತ್ಯದಂತೆ ಕಾಣುವುದಲ್ಲದೆ, ವಾಸ್ತವ್ಯವಾಗಿ ಅಸತ್ಯವೇ ಆದುದು; ಹೀಗೆ, ಯಾವುದನ್ನು ಪ್ರತಿಬಿಂಬವೆಂದು ಹೇಳುವೆವೋ, ಅದು ಬಿಂಬವೇ ಆಗಿರುವಾಗ ಅದಕ್ಕೆ ಪ್ರತಿಬಿಂಬಾವಸ್ಥೆಯೆಲ್ಲಿ ಬರುವುದು? ಅದುಕಾರಣ,—'ಜೀವೋ ವಾ ಸ ಕಥಂ ಭವೇತ್' ಎಂದು ನೀನು ಕೇಳಿದ ಪ್ರಶ್ನೆಗೆ ಉತ್ತರವಿತ್ತಂತಾಯ್ತು ॥೨೧॥

ಜೀವನೇತಕ್ಕಾಗಬಾರದೆಂದರೆ.—ಜೀವನು ಅಣುರೂಪನಾಗಿಯೂ ಪುಣ್ಯಪಾಪಾದಿಸಂಬಂಧವುಳ್ಳವನಾಗಿಯೂ ಇರುವನೆಂದು ವ್ಯವಹಾರವಿರುವುದಲ್ಲವೆ! ಆ ಪರಬ್ರಹ್ಮ ವಸ್ತುವಾದರೋ, ಪರಮಾಣುವಿಗಿಂತಲೂ ಸೂಕ್ಷ್ಮವಾಗಿರುವುದು; ಅತ್ಯಂತ ಸೂಕ್ಷ್ಮವೆಂದು ಯಾವುದನ್ನು ಹೇಳಬಹುದೋ, ಅದಕ್ಕಿಂತಲೂ ಆ ವಸ್ತುವು ಅತ್ಯಂತ ಸೂಕ್ಷ್ಮವಾಗಿರುವುದು; ಮತ್ತು ಅದು ಆಕಾಶಮಧ್ಯಕ್ಕಿಂತಲೂ ಹೆಚ್ಚಾಗಿ ಲೇಪಶೂನ್ಯವಾಗಿಯೂ ಸೂಕ್ಷ್ಮವಾಗಿಯೂ ಸರ್ವೋತ್ಕೃಷ್ಟವಾಗಿಯೂ ಶಾಂತವಾಗಿಯೂ ಇರುವುದು ॥೨೨॥

ಮತ್ತು, ಅದು ದಿಕ್ಕು ಕಾಲ ಇತ್ಯಾದಿಗಳಿಂದ ಪರಿಚ್ಛಿನ್ನವಾಗದ ರೂಪವುಳ್ಳದಾಗಿರುವಕಾರಣ, ಅತಿ ವಿಸ್ತೃತವಾಗಿರುವುದು; ಆದ್ಯಂತರಹಿತವಾಗಿಯೂ ಸರ್ವತಃ ಸ್ವಯಂಪ್ರಕಾಶಮಾನವಾಗಿಯೂ ತನ್ನಿಂದ ಪ್ರಕಾಶಿಸಲ್ಪಡುವ ಪದಾರ್ಥಾಂತರವಿಲ್ಲದುದಾಗಿಯೂ ಇರುವುದು ॥೨೩॥

ಹೀಗಿರುವುದರಿಂದ, ನಿರಾಕಾರನಾಗಿ ನಿರ್ಗುಣನಾಗಿರುವ ಯಾವ ಪರಬ್ರಹ್ಮನಲ್ಲಿ ಚಿದ್ರೂಪವೇ ಅಸಂಭವವೆಂದು ಹೇಳಬೇಕಾಗಿರುವುದೋ, ಅಂತಹ ಬ್ರಹ್ಮನಲ್ಲಿ—ಚಿತ್ತರೂಪವಾದ ವಾಸನೆಗಳೆಂಬ ಆಕಾರವಿಶಿಷ್ಟವಾದ ಜೀವತ್ವವೆಲ್ಲಿ ಬಂದೀತು? ॥೨೪॥

ಹೀಗೆ ಆ ಪರಬ್ರಹ್ಮನಲ್ಲಿ ಚಿದ್ರೂಪತ್ವವೇ ಇಲ್ಲದಿರುವುದರಿಂದ, ಜೀವತ್ವವೆಂಬುದಿಲ್ಲವೇಇಲ್ಲ; ಬುದ್ಧಿತ್ವವೂ ಚಿತ್ತತ್ವವೂ ಇಂದ್ರಿಯತ್ವವೂ ವಾಸನಾತ್ವವೂ ಒಂದೂ ಇಲ್ಲ॥

ಹೀಗೆ ನಿತ್ಯವಾದ ಆ ಪರಬ್ರಹ್ಮ ವಸ್ತುವು ಈ ರೀತಿಯಾದ ನಾನಾವಿಧ ಮಹಾಕಾರ್ಯಪ್ರವೃತ್ತಿಯುಕ್ತವಾಗಿದ್ದರೂ, ನಮ್ಮಂಥವರಿಗೆ ಆಕಾಶಕ್ಕಿಂತ ಹೆಚ್ಚಾಗಿ ಶಾಂತವಾಗಿ

ಅಸ್ಮದ್ದೃಷ್ಟ್ಯಾ ಸ್ಥಿತಂ ಶಾನ್ತಂ ಶೂನ್ಯಮಾಕಾಶತೋಽಧಿಕಮ್ ‖೩೬‖

ಶ್ರೀ ರಾಮಉವಾಚ.

ಪರಮಾರ್ಥಸ್ಯ ಕಿಂ ರೂಪಂ ತಸ್ಯಾನನ್ತಚಿದಾಕೃತೇಃ ।
ಪುನರೇತನ್ಮಮಾಚಕ್ಷ್ವ ನಿಪುಣಂ ಬೋಧಸಿದ್ಧಯೇ ‖೩೭‖

ಶ್ರೀ ವಸಿಷ್ಠಉವಾಚ.

ಮಹಾಪ್ರಳಯಸಮ್ಪ್ರಾಪ್ತೌ ಸರ್ವಕಾರಣಕಾರಣಮ್ ।
ಶಿಷ್ಯತೇ ಪರಮಂ ಬ್ರಹ್ಮ ತದಿದಂ ವರ್ಣ್ಯತೇ ಶೃಣು ‖೩೮‖
ನಾಶಯಿತ್ವಾ ಸ್ವಮಾತ್ಮಾನಂ ಮನಸೋ ವೃತ್ತಿಸಂಕ್ಷಯೇ ।
ಸದ್ರೂಪಂ ಯದನಾಖ್ಯೇಯಂ ತದ್ರೂಪಂ ತಸ್ಯ ವಸ್ತುನಃ ‖೩೯‖
ನಾಸ್ತಿ ದೃಶ್ಯಂ ಜಗದ್ದ್ರಷ್ಟಾ ದೃಶ್ಯಾಭಾವಾದ್ವಿಲೀನವತ್ ।
ಭಾತೀತಿ ಭಾಸನಂ ಯತ್ ಸ್ಯಾತ್ ತದ್ರೂಪಂ ತಸ್ಯ ವಸ್ತುನಃ ‖೪೦‖
ಚಿತೇರ್ಜೀವಸ್ವಭಾವಾಯಾಃ ಯದಚೇತ್ಯೋನ್ಮುಖಂ ವಪುಃ ।
ಚಿನ್ಮಾತ್ರಂ ವಿಮಲಂ ಶಾನ್ತಂ ತದ್ರೂಪಂ ಪರಮಾತ್ಮನಃ ‖೪೧‖

ಯೂ ಕ್ರಿಯಾಶೂನ್ಯವಾಗಿಯೂ ಗೋಚರವಾಗುತಿರುವುದು. ಅಯ್ಯಾ! ರಾಮ! ಹೀಗೆ ನಿನ್ನ ಪ್ರಶ್ನೆಗಳಿಗೆಲ್ಲ ಸಮಾಧಾನವಿತ್ತಿರುವೆನು ॥೩೬॥

ಹೀಗೆ ತನ್ನ ಪ್ರಶ್ನೆಗೆ ಸಮಾಧಾನಬರಲಾಗಿ, ಚೆನ್ನಾಗಿ ತಿಳಿಯುವುದಕ್ಕೆ ಮತ್ತೆ ರಾಮನು ಹೇಳುವನು:—

ಗುರುಗಳೆ! ತಾವು ಅಪ್ಪಣೆಕೊಟ್ಟುದುದೆಲ್ಲವೂ ತಿಳಿಯಿತು; ಆದರೂ ನನಗೆ ಚೆನ್ನಾಗಿ ಜ್ಞಾನವೃದ್ಧಿಯಾಗುವುದಕ್ಕೋಸ್ಕರ,—ಅನಂತ ಚಿದ್ರೂಪವಾಗಿರುವ ಆ ಪರತತ್ವದ ರೂಪ ವೆಂತಹುದೆಂಬುದನ್ನು—ಮತ್ತೆ ನನಗೆ ತಾವು ಉಪದೇಶಿಸಬೇಕು ॥೩೭॥

ಇದಕ್ಕೆ ವಸಿಷ್ಠರು ಉತ್ತರಹೇಳಿದರು.—

ಅಯ್ಯಾ! ರಾಮ! ಮಹಾಪ್ರಳಯವಾದಾಗ ಸಮಸ್ತಕಾರಣಕ್ಕೂ ಮುಖ್ಯ ಕಾರಣಭೂತವಾದ ಯಾವ ಪರಬ್ರಹ್ಮವು ಅವಶಿಷ್ಟವಾಗಿರುವುದೋ, ಅದನ್ನು ಹೇಳು ವೆನು ಕೇಳು ॥೩೮॥

ಸಮಾಧಿಕಾಲದಲ್ಲಿ ಮನಸ್ಸು ತನ್ನ ವೃತ್ತಿಗಳೆಲ್ಲವನ್ನೂ ಬಿಟ್ಟುಬಿಟ್ಟು ತಾನೂ ನಷ್ಟ ವಾಗಿರುವಾಗ—ಇದು ಹೀಗಿದೆಯೆಂದು ನಿರ್ದೇಶಿಸುವುದಕ್ಕಸಾಧ್ಯವಾದ—ಯಾವ ರೂಪ ವಿರುವುದೋ, ಅದು ಪರಮಾತ್ಮನ ರೂಪವು ॥೩೯॥

ಮತ್ತು ನಿರ್ವಿಕಲ್ಪಸಮಾಧಿಪ್ರಾರಂಭಕಾಲದಲ್ಲಿ—ಈ ದೃಶ್ಯವಾದ ಜಗತ್ತೂ ಇಲ್ಲ; ದೃಶ್ಯವಿಲ್ಲದುದರಿಂದ ದ್ರಷ್ಟೃವೂ ಇಲ್ಲ; ಇದೆಲ್ಲವೂ ಅಡಗಿರುವಂತೆ ಕಾಣುತ್ತದೆ—ಎಂಬರೀತಿಯಾಗಿ ತೋರುವುದಾವುದುಂಟೋ, ಅದು ಆ ಪರಬ್ರಹ್ಮನ ರೂಪವು ॥೪೦॥

ಹಾಗೆಯೇ ಆ ಸಮಾಧಿಯು ಉಪರಮಕ್ಕೆ ಸ್ವಲ್ಪಹಿಂದೆ, ಜೀವಾವಸ್ಥೆಯನ್ನು ಮುಂದೆ ಹೊಂದತಕ್ಕುದಾಗಿರುವ ಜ್ಞಾನಕ್ಕೆ, ಚೇತ್ಯೋನ್ಮುಖವಲ್ಲದೆ ಕೇವಲ ಚಿನ್ಮಾತ್ರವಾಗಿಯೂ ನಿರ್ಮಲವಾಗಿಯೂ ಶಾಂತವಾಗಿಯೂ ಇರುವ ಯಾವ ಶರೀರವಿರುವುದೋ, ಅದು ಆ ಪರ ಮಾತ್ಮನ ರೂಪವು ॥೪೧॥

ಅಜ್ಗಲಗ್ನೇಪಿ ವಾತಾದೌ ಸ್ಪರ್ಶಾದ್ಯನುಭವಂ ವಿನಾ |
ಜೀವತಶ್ಚೇತಸೋ ರೂಪಂ ಯತ್ ತದ್ವೈ ಪರಮಾತ್ಮನಃ ||೪೨||
ಅಸ್ವಪ್ನಾಯಾಅನನ್ತಾಯಾಃ ಅಜಡಾಯಾಮನಸ್ಥಿತೇಃ |
ಯದ್ರೂಪಂ ಚಿರನಿದ್ರಾಯಾಃ ತತ್ ತದಾನಘ ಶಿಷ್ಯತೇ ||೪೩||
ಯದ್ವ್ಯೋಮ್ನೋ ಹೃದಯಂ ಯದ್ವಾ ಶಿಲಾಯಾಃ ಪವನಸ್ಯ ಚ|
ತಸ್ಯಾಚೇತ್ಯಸ್ಯ ಚಿದ್ವ್ಯೋಮ್ನಃ ತದ್ರೂಪಂ ಪರಮಾತ್ಮನಃ ||೪೪||
ಅಚೇತ್ಯಸ್ಯಾಮನಸ್ಕಸ್ಯ ಜೀವತೋ ಯಾ ಸ್ವಭಾವತಃ |
ಸ್ಥಿತಿಃ ಸ್ಯಾತ್ ಸಾ ಪರಾ ಶಾನ್ತಾ ಸತ್ತಾ ತಸ್ಯಾದ್ಯವಸ್ತುನಃ ||೪೫||
ಚಿತ್ಪ್ರಕಾಶಸ್ಯ ಯನ್ಮಧ್ಯಂ ಪ್ರಕಾಶಸ್ಯಾಪಿ ಖಸ್ಯ ವಾ |

ಮತ್ತು, ಸಮಾಧಿಲೀನನಾಗಿರುವಾಗ ಗಾಳಿ ಮುಂತಾದುದು ಮೈಗೆ ಸೋಕಿದರೂ ಸರ್ವವೂ ಬ್ರಹ್ಮಾಕಾರವಾಗಿ ತೋರುತಿರುವುದರಿಂದ ಮನಸ್ಸು ನಷ್ಟವಾಗದೆ ಇದ್ದರೂ ಸ್ಪರ್ಶ ಮುಂತಾದ ಅನುಭವವೇ ಉಂಟಾಗದಿರುವುದಾವುದುಂಟೋ, ಅದು ಆ ಪರಮಾತ್ಮನ ರೂಪವು ||೪೨||

ಮೇಲೆ ಹೇಳಿದುದೆಲ್ಲವೂ ಯೋಗಾಭ್ಯಾಸಬಲ್ಲವರಿಗೆ ವೇದ್ಯವಲ್ಲದೆ-ಅದಿಲ್ಲದವರಿಗೆ ತಿಳಿಯಲಾರದಾದಕಾರಣ, ಈಗ ಸಾಮಾನ್ಯರಿಗೂ ಗೊತ್ತಾಗುವಂತೆ ಹೇಳುವೆನು.- ಅಯ್ಯಾ! ನಿರ್ದೋಷನಾದ ರಾಮನೆ! ಮಧ್ಯಮಧ್ಯದಲ್ಲಿ ಸ್ವಪ್ನವಿಲ್ಲದೆ—ತಿಗುಣೆಮುಂತಾದುವುಗಳ ಬಾಧೆಯಿಂದ ವಿಚ್ಛಿತ್ತಿಯಿಲ್ಲದೆ-ಜಾಡ್ಯರಹಿತವಾಗಿದ್ದು ಮನಸ್ಸು ನಿಶ್ಚಲವಾಗಿರುವ ನಿದ್ರೆಯು ಬಹುಕಾಲವಿದ್ದರೆ ಅದರ ರೂಪವೆಂತಹುದಾಗಿರುವುದೋ, ಅಂತಹ ರೂಪವು ಪ್ರಳಯಕಾಲದಲ್ಲಿ ಅವಶಿಷ್ಟವಾಗಿರುವುದು ||೪೩||

ಆಕಾಶಕ್ಕೆ ರಹಸ್ಯಭೂತವಾದ ಶೂನ್ಯತ್ವವಾವುದುಂಟೋ, ಶಿಲೆಗೆ ರಹಸ್ಯಭೂತವಾದ ಘನತ್ವವಾವುದುಂಟೋ, ವಾಯುವಿಗೆ ರಹಸ್ಯಭೂತವಾದ ಪೂರ್ಣತ್ವವಾವುದುಂಟೋ, ಅದು-ಚೇತ್ಯರಹಿತನಾಗಿ ಜ್ಞಾನಾಕಾಶನಾಗಿರುವ ಆ ಪರಮಾತ್ಮನ ರೂಪವು ||೪೪||

ಚೇತನೀಯನಲ್ಲದೆಯೂ ನಿರ್ಮನಸ್ಕನಾಗಿಯೂ ಇರುವ ಪ್ರಾಣಿಗೆ ಸ್ವಭಾವತಃ ಯಾವ ಸ್ಥಿತಿಯಿರುತ್ತದೆಯೋ, ಅಂತಹ ಸರ್ವೋತ್ಕೃಷವಾದ ಶಾಂತಸ್ಥಿತಿಯು—ಆ ಜಗದಾದಿಭೂತನಾದ ಪರಮಾತ್ಮನಿಗಿರುವುದು ||೪೫||

ಮತ್ತು, ಅನ್ನಮಯ-ಪ್ರಾಣಮಯ-ಮನೋಮಯ-ವಿಜ್ಞಾನಮಯ-ಆನಂದಮಯ ಎಂಬುದಾಗಿ ಪಂಚಕೋಶಗಳಿರುವುವಷ್ಟೆ! ದ್ರಷ್ಟೃವಾದವನು ಆ ಪಂಚಕೋಶಗಳಲ್ಲಿಯೂ ಕ್ರಮವಾಗಿ ಆತ್ಮಬುದ್ಧಿಯನ್ನಿಡುತ ವಿಚಾರಮಾಡುವನು; ಕ್ರಮವಾಗಿ ವಿಚಾರಮಾಡುತ ಹೋದರೆ, ಮೊದಲು ಅನ್ನಮಯಕೋಶವನ್ನು ಆತ್ಮನೆಂದು ತಿಳಿಯುವನು; ಬಳಿಕ ಅದಲ್ಲವೆಂದು ಪ್ರಾಣಮಯವನ್ನೂ ಆಮೇಲೆ ಮನೋಮಯವನ್ನೂ ಅನಂತರ ವಿಜ್ಞಾನಮಯವನ್ನೂ ಒಂದಾಗುತಲೊಂದನ್ನು ಆತ್ಮವೆಂದು ತಿಳಿಯುತ, ಕೊನೆಗೆ ಆನಂದಮಯಕೋಶವನ್ನು ಆತ್ಮನೆಂದು ತಿಳಿಯುವನು; ಹೀಗೆ ಇವನ ಜ್ಞಾನಪ್ರಕಾಶವು ಆನಂದಮಯಕೋಶವನ್ನು ಮುಟ್ಟಿ ಅದರಲ್ಲಿಯೂ ಅಂತರವಾದ ಭಾಗವನ್ನು ಆತ್ಮವೆಂದು ತಿಳಿಯುವುದರಿಂದ, ಈ ಆನಂದಮಯಕೋಶದ ಅಂತರವಾವುದುಂಟೋ—ಅದು ಬ್ರಹ್ಮನ ರೂಪವು.

ದರ್ಶಸ್ಯ ಚ ಯನ್ಮಧ್ಯಂ ತದ್ರೂಪಂ ಬ್ರಹ್ಮಣೋ ವಿದುಃ ॥೪೬॥
ವೇದನಸ್ಯ ಪ್ರಕಾಶಸ್ಯ ದೃಶ್ಯಸ್ಯ ತಮಸಸ್ತಥಾ ।
ವೇದನಂ ಯದನಾದ್ಯನ್ತಂ ತದ್ರೂಪಂ ಪರಮಾತ್ಮನಃ ॥೪೭॥
ಯತೋ ಜಗದುದೇತೀವ ನಿತ್ಯಾನುದಿತರೂಪ್ಯಪಿ ।
ವಿಭಿನ್ನವದಿವಾಭಿನ್ನಂ ತದ್ರೂಪಂ ಪರಮಾರ್ಥಕಮ್ ॥೪೮॥
ವ್ಯವಹಾರಪರಸ್ಯಾಪಿ ಯತ್ ಪಾಷಾಣವದಾಸನಮ್ ।
ಅವ್ಯೋಮ್ನ ಏವ ವ್ಯೋಮತ್ವಂ ತದ್ರೂಪಂ ಪರಮಾತ್ಮನಃ ॥೪೯॥
ವೇದ್ಯವೇದನವೇತ್ತೃತ್ವರೂಪತ್ರಯಮಿದಂ ಪುರಃ ।
ಯತೋದೇತ್ಯಸ್ತಮಾಯಾತಿ ತತ್ ತತ್ ಪರಮದುರ್ಲಭಮ್ ॥೫೦॥
ವೇದ್ಯವೇದನವೇತ್ತೃತ್ವಂ ಯತ್ರೇದಂ ಪ್ರತಿಬಿಮ್ಬತಿ ।
ಅಬುದ್ಧ್ಯಾದೌ ಮಹಾದರ್ಶೇ ತದ್ರೂಪಂ ಪರಮಂ ಸ್ಮೃತಮ್ ॥೫೧॥

ಮತ್ತು, ದೃಶ್ಯವಾದುದರಲ್ಲಿ ಮೂರ್ತವೆಂದೂ ಅಮೂರ್ತವೆಂದೂ ಎರಡು ಭೇದವುಂಟಷ್ಟೆ! ಅದರಲ್ಲಿ ಮೂರ್ತವಾದುದರೊಳಗೆಲ್ಲ ಸೂರ್ಯರೂಪವಾದ ತೇಜಸ್ಸು ಸಾರಭೂತವಾದುದು; ಅಮೂರ್ತಗಳೊಳಗೆ ಆಕಾಶವು ಸಾರವಾದುದು. ಈ ಸೂರ್ಯನಿಗೆ ಅಂತರವಾದುದು ಯಾವುದುಂಟೋ, ಅದು ಆ ಬ್ರಹ್ಮನ ರೂಪವು. ಮತ್ತು ಆಕಾಶಕ್ಕೆ ಅಂತರವಾದುದು ಯಾವುದುಂಟೋ, ಅದು ಆ ಬ್ರಹ್ಮನರೂಪವು. ಹಾಗೆಯೇ ಚಾಕ್ಷುಷ (ನೇತ್ರಜನ್ಯ) ಮುಂತಾದ ಜ್ಞಾನಕ್ಕೆಲ್ಲ ಅಂತರವಾದುದು ಯಾವುದೋ, ಅದು ಆ ಪರಮಾತ್ಮನ ರೂಪವು.

ಹಾಗೆಯೇ, ಬುದ್ಧಿವೃತ್ತಿ—ಅರ್ಥಸ್ಫುರಣ—ವಿಷಯ-ಅಜ್ಞಾನ—ಇವುಗಳಿಗೆ ಸಾಕ್ಷಿಭೂತವಾದ ಯಾವ ಜ್ಞಾನವುಂಟೋ, ಅದು ಆ ಬ್ರಹ್ಮನ ರೂಪವು. ಆದರೆ, ಇವುಗಳೆಲ್ಲವೂ ಆದ್ಯಂತವಿಶಿಷ್ಟವಾಗಿರುವುವು. ಬ್ರಹ್ಮನ ರೂಪಮಾತ್ರ ಆದ್ಯಂತರಹಿತವೆಂದು ತಿಳಿಯಬೇಕು ॥೪೭॥

ವಸ್ತುತಃ ಉತ್ಪತ್ತಿಯಿಲ್ಲದುದಾಗಿದ್ದರೂ ಈ ಜಗತ್ತು ಯಾವುದರ ದೆಸೆಯಿಂದ ಹುಟ್ಟುವಂತೆ ಕಾಣುವುದೋ, ಮತ್ತು ಈ ಜಗತ್ತು ಪೃಥಕ್ಕಾಗಿಲ್ಲದಿದ್ದರೂ ಯಾವುದಕ್ಕಿಂತ ಪೃಥಕ್ಕಾಗಿರುವಂತೆ ಕಾಣುವುದೋ, ಅದು ಪರಮಾರ್ಥವಾದ ರೂಪವು ॥೪೮॥

ಮಾಯಿಕವಾದ ವ್ಯವಹಾರಗಳನ್ನೆಲ್ಲ ನಡೆಯಿಸುತ್ತಲೇ ಇದ್ದವನಾದರೂ-ಕಲ್ಲಿನಂತೆ ನಿಶ್ಚಲನಾಗಿರುವಿಕೆಯಾವುದುಂಟೋ, ಮತ್ತು ಅಖಂಡನಾಗಿದ್ದರೂ ಸರ್ವಜಗತ್ತಿಗೂ ಅವಕಾಶಕೊಡುವುದರಿಂದ ಆಕಾಶಸಾದೃಶ್ಯವಾವುದುಂಟೋ, ಅದು ಪರಮಾತ್ಮನ ರೂಪವು॥೪೯॥

ಜ್ಞೇಯ ಜ್ಞಾನ ಜ್ಞಾತೃ ಎಂಬ ಯಾವ ತ್ರಿಪುಟೀರೂಪವುಂಟೋ, ಇದು ಎಲ್ಲಿ ಹುಟ್ಟುತಲೂ ಅಸ್ತಹೊಂದುತಲೂ ಇರುವುದೋ, ಅದು ಆ ಪರಮದುರ್ಲಭವಾದ ಪರಬ್ರಹ್ಮವಸ್ತುವು ॥೫೦॥

ಪೂರ್ವೋಕ್ತವಾದ ವೇದ್ಯಾದಿತ್ರಿಪುಟೀರೂಪವು, ಬುದ್ಧಿಮೊದಲಾದುವುಗಳಿಲ್ಲದ ಮಹಾದರ್ಪಣಸ್ಥಾನೀಯವಾದ ಯಾವುದರಲ್ಲಿ ಪ್ರತಿಬಿಂಬಿಸುವುದೋ, ಅದು ಪರಮಾರ್ಥರೂಪವೆನ್ನಲ್ಪಡುವುದು ॥೫೧॥

ಮನಃ ಸ್ವಪ್ನೇನ್ದ್ರಿಯೈರ್ಮುಕ್ತಂ ಯದ್ರೂಪಂ ಸ್ಯಾನ್ಮಹಾಚಿತೇಃ ।
ಜಙ್ಗಮೇ ಸ್ಥಾವರೇ ವಾಪಿ ತತ್ ಸರ್ವಾನ್ತೇಽವಶಿಷ್ಯತೇ ॥೫೧॥

ಸ್ಥಾವರಾಣಾಂ ಹಿ ಯದ್ರೂಪಂ ತಚ್ಚೇದ್ಬೋಧಮಯಂ ಭವೇತ್ ।
ಮನೋಬುದ್ಧ್ಯಾದಿನಿರ್ಮುಕ್ತಂ ತತ್ ಪರೇಣೋಪಮೀಯತೇ ॥೫೨॥

ಬ್ರಹ್ಮಾರ್ಕವಿಷ್ಣುಹರಶಕ್ರಸದಾಶಿವಾದಿ—
ಶಾನ್ತೌ ಶಿವಂ ಪರಮಮೇತದಿಹೈಕಮಾಸ್ತೇ ।
ಸರ್ವೋಪಧಿವ್ಯಯವಶಾದವಿಕಲ್ಪರೂಪಂ
ಚೈತನ್ಯಮಾತ್ರಮಯಮುಜ್ಝಿತವಿಶ್ವಸಙ್ಗಮ್ ॥೫೩॥

ಇತಿ ಉತ್ಪತ್ತಿಪ್ರಕರಣೇ ಮಹಾಕಲ್ಪಾನ್ತಾವಶಿಷ್ಟಪರಮಭಾವವರ್ಣನಂ
ನಾಮ ದಶಮಃ ಸರ್ಗಃ.

ಮನಸ್ಸು ಸ್ವಪ್ನದಿಂದಲೂ ಜಾಗರದಿಂದಲೂ ಬಿಡಲ್ಪಟ್ಟಿರುವುದಾದರೆ, ಆಗ ಸ್ಥಾವರದಲ್ಲಾಗಲಿ ಜಂಗಮದಲ್ಲಾಗಲಿ ಉಂಟಾಗುವ ಜ್ಞಾನಕ್ಕೆ ಸುಷುಪ್ತ್ಯಾವಸ್ಥೆಯಾವುದುಂಟೋ, ಅದು ಈ ಸಮಸ್ತವೂ ಲಯವಾದಾಗ ಉಳಿದಿರುವುದು ॥೫೧॥

ಸ್ಥಾವರವಾದ ಪರ್ವತಾದಿಗಳಿಗೆ ಮನೋಬುದ್ಧ್ಯಾದಿರಹಿತವಾದ ರೂಪವಾವುದಿರುವುದೋ, ಅದು ಕೇವಲ ಜ್ಞಾನಮಯವಾದ ಪಕ್ಷದಲ್ಲಿ, ಆಗ ಅದನ್ನು ಆ ಪರಮಾತ್ಮನೊಡನೆ ಹೋಲಿಸಬಹುದು ॥೫೨॥

ಅಯ್ಯಾ ! ರಾಮ ! ಈಗ ಮುಖ್ಯವಾದ ವಿಷಯವನ್ನು ಹೇಳುವೆನು; ಕೇಳು:— ಈ ಪ್ರಪಂಚದಲ್ಲಿ ಬ್ರಹ್ಮ ಸೂರ್ಯ ವಿಷ್ಣು ಈಶ್ವರ ಇಂದ್ರ ಸದಾಶಿವ—ಇತ್ಯಾದಿಗಳೆಲ್ಲರೂ ಲಯಹೊಂದಿರುವಾಗ, ಸಮಸ್ತವಾದ ಉಪಾಧಿಯೂ ಲಯಹೊಂದಿರುವುದರಿಂದ ನಿರ್ವಿಕಲ್ಪವಾಗಿ-ಕೇವಲ ಚೈತನ್ಯಮಾತ್ರಸ್ವರೂಪವಾಗಿ-ಪ್ರಪಂಚಸಂಗಶೂನ್ಯವಾಗಿ-ಕೇವಲಾನಂದಾಕಾರವಾಗಿ-ಸರ್ವೋತ್ಕೃಷ್ಟವಾಗಿರುವ ಈ ವಸ್ತುವೊಂದೇ ಇರುವುದು ॥೫೩॥

ಇದು ಉತ್ಪತ್ತಿಪ್ರಕರಣದಲ್ಲಿ ಮಹಾಕಲ್ಪಾನ್ತಾವಶಿಷ್ಟವಾದ ಪರಮಪದಾರ್ಥದ
ವರ್ಣನೆಯೆಂಬ ಹತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕಾದಶಃ ಸರ್ಗಃ.

ಶ್ರೀರಾಮಉವಾಚ.

ಇದಂರೂಪಮಿದಂ ದೃಶ್ಯಂ ಜಗನ್ನಾಸ್ತೀತಿ ಭಾಸುರಮ್ ।
ಮಹಾಪ್ರಳಯಸಮ್ಪ್ರಾಪ್ತೌ ಭೋಬ್ರಹ್ಮನ್ ಕ್ವೇವ ತಿಷ್ಠತಿ ॥೧॥

ಉತ್ಪತ್ತಿಪ್ರಕರಣದಲ್ಲಿ ಹನ್ನೊಂದನೆಯ ಸರ್ಗವು.

ಸದಧಿಷ್ಠಾನತಃ ಸತ್ತಾ ಪ್ರಳಯೇಪಿ ನ ವಾರ್ಯತೇ ।
ಸ್ವತಸ್ತು ಸತ್ತಾ ಜಗತಃ ಸರ್ಗೇಪ್ಯತ್ರ ನಿವಾರ್ಯತೇ ॥

ಪರಮಾತ್ಮನ ಆಶ್ರಯದಿಂದ ಈ ಜಗತ್ತು ಇರುತ್ತದೆಂಬುದು ಪ್ರಳಯದಲ್ಲಿಯೂ ನಿವಾರಿಸಲ್ಪಡುವುದಿಲ್ಲವೆಂದೂ, ಈ ಜಗತ್ತಿಗೆ ಸ್ವತಃ ಸದ್ಭಾವಮಾತ್ರ ಸರ್ವಥಾ ನಿಷೇಧಿಸಲ್ಪಡುವುದೆಂದೂ ಈ ಸರ್ಗದಲ್ಲಿ ಹೇಳಲ್ಪಡುವುದು.

ಪೂರ್ವೋಕ್ತರೀತಿಯಾಗಿ ಪ್ರಳಯಕಾಲದಲ್ಲಿ ಈ ಜಗತ್ತು ಬ್ರಹ್ಮನಲ್ಲಿ ಐಕ್ಯಹೊಂದಿ ಬ್ರಹ್ಮವೊಂದು ಮಾತ್ರವೇ ಅವಶಿಷ್ಟವಾಗಿರುವುದೆಂದು ಹೇಳಿದರೂ, ಸೃಷ್ಟಿಕಾಲದಲ್ಲಿ ಪ್ರಳಯಕಾಲಕ್ಕಿಂತ ವಿಲಕ್ಷಣವಾಗಿ ಸೃಷ್ಟಿಯಾಗುವುದು ಸರ್ವಾನುಭವಗೋಚರವಾಗಿರುವುದರಿಂದ, ಈ ಜಗತ್ತಿಗೆ ಆಗ ಸ್ವತಂತ್ರವಾಗಿ ಸದ್ಭಾವವೊಂದಿರುವುದೆಂದು ಹೇಳಬೇಕಾಗುವುದು. ಹೀಗಾದಮೇಲೆ ಈ ವಿಧವಾದ ಸದ್ಭಾವದಿಂದ ಯುಕ್ತವಾಗಿರುವ ಜಗತ್ತು ಬ್ರಹ್ಮನಲ್ಲಿ ಇಲ್ಲದಿದ್ದರೂ ಮತ್ತೆಲ್ಲಿಯಾದರೂ ಇದ್ದೇತೀರಬೇಕಾಗುವುದು. ಏತಕ್ಕೆಂದರೆ:—'ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ' ಎಂದು ಮೊದಲು ವಸಿಷ್ಠರೇ ಅಪ್ಪಣೆಕೊಟ್ಟಿರುವರು. ಹೀಗಾದಮೇಲೆ ಈ ಜಗತ್ತು ಎಲ್ಲಿರುವುದೋ, ಅದೇ ಜಗತ್ತಿಗೆ ಮುಖ್ಯಾಧಾರವೆಂದು ವಸಿಷ್ಠರು ಉಪದೇಶಿಸಬೇಕಾಗಿತ್ತು. ಈವಿಧವಾದ ಶಂಕೆಗಳನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಶ್ರೀ ರಾಮನು ಪ್ರಶ್ನೆಮಾಡಿದನು:—

ಬ್ರಾಹ್ಮಣಶ್ರೇಷ್ಠರಾದ ಗುರುವರ್ಯರೆ! ತಾವು ಅಪ್ಪಣೆಕೊಟ್ಟುದುದೆಲ್ಲವೂ ಸರಿಯೇ! ಆದರೆ ನನ್ನ ಮನಸ್ಸಿಗೆ ಈಗ ಮತ್ತೊಂದು ಸಂಶಯವುಂಟಾಗುವುದು. ಅದನ್ನು ಪರಿಹರಿಸಬೇಕು. ಈ ವಿಧವಾಗಿ ಚತುರ್ದಶಲೋಕಯುಕ್ತವಾಗಿ ಸ್ಫುಟವಾಗಿ ಕಾಣುತಿರುವ ಈ ಜಗತ್ತು, ಮಹಾಪ್ರಳಯವುಂಟಾದಾಗ ಬ್ರಹ್ಮನಲ್ಲಿರುವುದಿಲ್ಲವೆಂದು ಹೇಳಿದಮೇಲೆ, ಅದು ಮತ್ತೆಲ್ಲಿಯಾದರೂ ಇದ್ದೇ ತೀರಬೇಕಲ್ಲವೆ! ಅದು ಎಲ್ಲಿರುತ್ತದೆ? ಅಪ್ಪಣೆಯಾಗಬೇಕು ॥೧॥

ಶ್ರೀವಸಿಷ್ಠಉವಾಚ.

ಕುತಆಯಾತಿ ಕೀದೃಗ್ವಾ ವನ್ಧ್ಯಾಪುತ್ರಃ ಕ್ವ ಗಚ್ಛತಿ ।
ಕ್ವ ಯಾತಿ ಕುತಆಯಾತಿ ವದ ವಾ ವ್ಯೋಮಕಾನನಮ್ ॥೧॥

ಶ್ರೀರಾಮಉವಾಚ.

ವನ್ಧ್ಯಾಪುತ್ರೋ ವ್ಯೋಮವನಂ ನೈವಾಸ್ತಿ ನ ಭವಿಷ್ಯತಿ ।
ಕೀದೃಶೀ ದೃಶ್ಯತಾ ತಸ್ಯ ಕೀದೃಶೀ ತಸ್ಯ ನಾಸ್ತಿತಾ ॥೨॥

ಶ್ರೀವಸಿಷ್ಠಉವಾಚ.

ವನ್ಧ್ಯಾಪುತ್ರವ್ಯೋಮವನೇ ಯಥಾ ನ ಸ್ತಃ ಕದಾಚನ ।
ಜಗದಾದ್ಯಖಿಲಂ ದೃಶ್ಯಂ ತಥಾ ನಾಸ್ತಿ ಕದಾಚನ ॥೪॥
ನ ಚೋತ್ಪನ್ನಂ ನ ಚ ಧ್ವಂಸಿ ಯತ್ ಕಿಲಾದೌ ನ ವಿದ್ಯತೇ ।
ಉತ್ಪತ್ತಿಃ ಕೀದೃಶೀ ತಸ್ಯ ನಾಶಶಬ್ದಸ್ಯ ಕಾ ಕಥಾ ॥೫॥

ಹೀಗೆ ಶ್ರೀ ರಾಮನು ಹೇಳಿದ ಮಾತನ್ನು ಕೇಳಿ, ಶ್ರೀ ವಸಿಷ್ಠಮುನಿಗಳು ಅವನ ಆಶಯವನ್ನು ತಿಳಿದವರಾಗಿ,—ಸೃಷ್ಟಿಕಾಲದಲ್ಲಿ ಸಕಲ ಪದಾರ್ಥಗಳೂ ಬೇರೆಯಾಗಿದ್ದು ಎಲ್ಲಿಂದಲಾದರೂ ಬಂದಿದ್ದರಲ್ಲವೆ ಅವು ಪ್ರಳಯಕಾಲದಲ್ಲಿಯೂ ಮತ್ತೊಂದು ಕಡೆಯಿರಬೇಕಾಗಿದ್ದೀತು! ಅದೇ ಅಸಂಭವವೆಂದು ರಾಮನಿಗೆ ದೃಷ್ಟಾಂತಮೂಲಕವಾಗಿ ತಿಳಿಯಪಡಿಸುವುದಕ್ಕೋಸ್ಕರ ಉತ್ತರಹೇಳುವರು:—

ಅಯ್ಯಾ! ರಾಮ! ಪ್ರಪಂಚದಲ್ಲಿ ಬಂಜೆಯಮಗನು ಎಲ್ಲಿಂದ ಬರುವನು? ಅವನು ಹೇಗಿರುವನು? ಎಲ್ಲಿಗೆ ಹೋಗುವನು? ಮತ್ತು, ಅಂತರಿಕ್ಷದಲ್ಲಿ ಹುಟ್ಟುವ ವನವು ಎಲ್ಲಿ ಹೋಗುವುದು? ಎಲ್ಲಿಂದ ಬರುವುದು? ಈ ವಿಷಯವನ್ನು ನೀನು ಮೊದಲು ಹೇಳು. ಬಳಿಕ ನಾನು ನಿನಗೆ ಉತ್ತರಹೇಳುವೆನು ॥೧॥

ವಸಿಷ್ಠರು ದೃಷ್ಟಾಂತಮೂಲಕ ತನ್ನ ಪ್ರಶ್ನೆಗೆ ಸಮಾಧಾನಹೇಳಲುದ್ಯುಕ್ತರಾದುದನ್ನು ಕಂಡು, ಶ್ರೀರಾಮನು ದೃಷ್ಟಾಂತದಾರ್ಷ್ಟಾಂತಿಕಗಳಿಗೇ ಪರಸ್ಪರವ್ಯತ್ಯಾಸವಿರುವುದೆಂದು ತೋರಿಸಲು ಈರೀತಿಯಾಗಿ ಹೇಳುವನು:—

ಪೂಜ್ಯರೆ! ತಾವು ಅಪ್ಪಣೆಕೊಟ್ಟ ಬಂಜೆಯಮಗನೂ ಆಕಾಶವನವೂ ಕೂಡ, ಈಗಲೂ ಇಲ್ಲ; ಮುಂದೆಯೂ ಹುಟ್ಟುವುದಿಲ್ಲ. ಅದುಕಾರಣ, ಅವು ಕಣ್ಣಿಗೆ ಕಾಣುವುದೆಂದರೇನು? ಅವು ಹೋಗುವುದೆಂದರೇನು? ಆದರೆ, ಈ ದೃಷ್ಟಾಂತದಲ್ಲಿರುವಂತೆ ಜಗತ್ತಿನಲ್ಲಿ ಇಲ್ಲವೆಂಬ ನಿಶ್ಚಯವಿಲ್ಲವಾದಕಾರಣ, ಇದರಿಂದ ಯಾವ ನಿರ್ಣಯವೂ ಉಂಟಾಗಲಾರದು ॥೨॥

ಇದನ್ನು ಕೇಳಿ ಶ್ರೀವಸಿಷ್ಠರು,—ಹಾಗಾದಮೇಲೆ ಇದರಂತೆಯೇ ಜಗತ್ತು ಸ್ವಭಾವತಃ ಇಲ್ಲವೆಂದು ತಿಳಿಯಪಡಿಸಲು ಉತ್ತರಹೇಳುವರು:-—

ಅಯ್ಯಾ! ರಾಮ! ವಂಧ್ಯಾಪುತ್ರನೂ ಆಕಾಶವನವೂ ಹೇಗೆ ಎಂದಿಗೂ ಇಲ್ಲವೇ ಇಲ್ಲವೋ, ಹಾಗೆಜಗತ್ತು ಮೊದಲಾದ ಸಮಸ್ತ ದೃಶ್ಯವೂ ಎಂದಿಗೂ ಇಲ್ಲವೇ ಇಲ್ಲ ॥೪॥

ಇದು ಹುಟ್ಟಿಯೂ ಇಲ್ಲ; ಲಯಹೊಂದುವುದೂ ಇಲ್ಲ. ಯಾವುದು ಮೊದಲು ಇಲ್ಲವೇ ಇಲ್ಲವೋ, ಅದಕ್ಕೆ ಉತ್ಪತ್ತಿಯೆಂತಹುದು? ನಾಶವೆಂಬ ಶಬ್ದದ ವ್ಯವಹಾರವೆಲ್ಲಿಯದು? ॥೫॥

ಶ್ರೀರಾಮಉವಾಚ.

ವನ್ಧ್ಯಾಪುತ್ರನಭೋವೃಕ್ಷಕಲ್ಪನಾ ತಾವದಸ್ತಿ ಹಿ |
ಸಾ ಯಥಾ ನಾಶಜನ್ಮಾಢ್ಯಾ ತಥೈವೇದಂ ನ ಕಿಂ ಭವೇತ್ ‖೬‖

ಶ್ರೀವಸಿಷ್ಠಉವಾಚ.

ತುಲ್ಯಸ್ಯಾತುಲದುಸ್ಸ್ಥಸ್ಯ ಭಾವಕ್ಯೈಃ ಕಿಲ ತೋಲನಮ್ |
ನಿರನ್ವಯಾ ಯಥೈವೋಕ್ತಿಃ ಜಗತ್ಸತ್ತಾ ತಥೈವ ಹಿ ‖೭‖
ಯಥಾ ಸೌವರ್ಣಕಟಕೇ ದೃಶ್ಯಮಾನಮಿದಂ ಸ್ಫುಟಮ್ |

ಪುನಃ ಶ್ರೀ ರಾಮನು ಪ್ರಶ್ನೆಮಾಡುವನು:—

ಸ್ವಾಮಿ ! ನಾನು ಹೇಳಿದುದು ಹಾಗಲ್ಲ; ಜಗತ್ತು ಪ್ರತ್ಯಕ್ಷವಾಗಿ ಉತ್ಪತ್ತಿಲಯಗಳನ್ನು ಹೊಂದತಕ್ಕುದಾಗಿಯೂ, ವಂಧ್ಯಾಪುತ್ರಾದಿಗಳು ಅತ್ಯಂತ ಅಸಂಭವವಾಗಿಯೂ ಇರುವುದುದರಿಂದ, ಅವೆರಡಕ್ಕೂ ಸಾದೃಶ್ಯಹೇಳುವುದೇ ಯುಕ್ತವಾಗಿಲ್ಲ; ಅತ್ಯಂತಿಕವಾಗಿ ಇಲ್ಲದ ಪದಾರ್ಥವನ್ನು ಉಪಮಾನವಾಗಿ ಹೇಳುವುದು ಹೇಗೆ? ಅದುಕಾರಣ, ವಂಧ್ಯಾಪುತ್ರಾದಿಗಳು ಸಾಕ್ಷಾತ್ತಾಗಿ ಉಪಮಾನವಾಗಲಾರವು. ಆದರೆ ವಂಧ್ಯಾಪುತ್ರಾದಿಗಳನ್ನು ಕಲ್ಪಿಸಿಕೊಂಡು ವ್ಯವಹರಿಸುವೆವಷ್ಟೆ? ಆ ಕಲ್ಪನೆಯೇ ಉಪಮಾನವೆಂದು ಹೇಳಬೇಕಾಗುವುದಲ್ಲವೆ ! ಈ ಕಲ್ಪನೆಯು ಹೇಗೆ ಉತ್ಪತ್ತಿಲಯಗಳೊಡನೆ ಕೂಡಿಕೊಂಡಿರುವುದೋ, ಈ ಜಗತ್ತೂ ಹಾಗೆಯೇ ಉತ್ಪತ್ತಿಲಯವಿಶಿಷ್ಟವಾಗಿ ಏಕೆ ಆಗಬಾರದು ? ‖೬‖

ವಸಿಷ್ಠರು ಸಮಾಧಾನಹೇಳುವರು:—

ವತ್ಸ ! ನೀನು ಹೇಳಿದುದು ಸಂಗತವಾಗುವುದಿಲ್ಲ. ನೀನು ಹೇಳುವುದೂ ಕೂಡ ಈ ಪ್ರಪಂಚದೊಳಗೇ ಸೇರಿರತಕ್ಕುದಾಯ್ತೇ ಹೊರತು ಬೇರೆಯಾಗಲಿಲ್ಲ. ಈಗ ಪ್ರಪಂಚದಲ್ಲಿ ಒಂದಕ್ಕೆ ಉಪಮಾನವನ್ನು ಹೇಳಬೇಕಾದರೆ, ಅದಕ್ಕಿಂತ ಗುಣಾಧಿಕವಾದುದನ್ನು ಹೇಳಬೇಕಲ್ಲವೆ? ಕೆಲವು ಸಂದರ್ಭಗಳಲ್ಲಿ ಅಧಿಕಗುಣವಾದುದು ಸಿಕ್ಕುವುದಿಲ್ಲವೆಂದು ತೋರಿಸುವುದಕ್ಕಾಗಿ ಒಂದೇ ವಸ್ತುವನ್ನೇ ಉಪಮಾನವನ್ನಾಗಿಯೂ ಉಪಮೇಯವನ್ನಾಗಿಯೂ ಹೇಳುವುದುಂಟಷ್ಟೆ ! ಸಮುದ್ರಕ್ಕೆ ಒಂದುಪಮಾನವನ್ನು ಹೇಳಬೇಕಾದರೆ ಮತ್ತೊಂದೂ ಸಿಕ್ಕುವುದಿಲ್ಲವೆಂದು ಸಮುದ್ರವು ಸಮುದ್ರದಂತೆಯೇ ಇರುವುದೆಂಬುದಾಗಿ ಹೇಳುವರಲ್ಲವೆ! ಆಗ ಯಾವುದಕ್ಕೆ ಉಪಮಾನಕೊಡಬೇಕಾಗಿದೆಯೋ, ಅದಕ್ಕೆ ಸರಿಯಾದ ಉಪಮಾನ ಸಿಕ್ಕದಿರುವುದರಿಂದ ಹೋಲಿಸುವುದಕ್ಕೆ ಅಸಾಧ್ಯವಾಗಿಬಿಟ್ಟು, ಕೊನೆಗೆ ಶ್ರೇಷ್ಠವಾದ ಪದಾರ್ಥಗಳೊಡನೆ ಹೋಲಿಸುವುದೇ ಹೇಗೆ ಸಂಭವಿಸುವುದಿಲ್ಲವೋ, ನೀನು ಹೇಳಿದುದೂ ಹಾಗಾಗುವುದು. ಅದುಕಾರಣ, ನಾನು ಹೇಳಿದಂತೆಯೇ ಒಪ್ಪಬೇಕಾಗುವುದು, ಅತ್ಯಂತಾಸಂಭವಾದುದನ್ನು ಉಪಮಾನವನ್ನಾಗಿ ಕಲ್ಪಿಸಕೂಡದೆಂದು ನೀನು ಹೇಳಿದುದೂ ಯುಕ್ತವಲ್ಲ. ಮೊಲದ ಕೊಂಬಿನಂತೆ ಬಂಜೆಯುಮಗನೂ ಅತ್ಯಂತಾಸಂಭವಿಯೆಂದು ಹೇಳುವುದಿಲ್ಲವೆ! ಆಗ ಅತ್ಯಂತಾಸಂಭವವಾದುದನ್ನು ತಿಳಿಯಪಡಿಸುವುದಕ್ಕೆ ಅಂತಹ ಮತ್ತೊಂದನ್ನು ದೃಷ್ಟಾಂತವಾಗಿ ಹೇಳುವಂತೆ, ಅತ್ಯಂತಾಸಂಭವವಾದ ಪ್ರಪಂಚಕ್ಕೆ ಅತ್ಯಂತಾಸಂಭವವಾದ ವಂಧ್ಯಾಪುತ್ರಾದಿಗಳನ್ನು ದೃಷ್ಟಾಂತವಾಗಿ ಹೇಳುವುದೂ ಉಪಪನ್ನವೆಂದು ತಿಳಿಯಬೇಕು‖

ಇಷ್ಟಾದರೂ ಪ್ರತ್ಯಕ್ಷವಾಗಿ ಕಾಣುತಿರುವುದನ್ನು ಅತ್ಯಂತಾಭಾವವೆಂದು ಹೇಳುವುದು ಹೇಗೆಂದರೆ:—ಇದಕ್ಕೆ ಅನೇಕ ದೃಷ್ಟಾಂತಗಳುಂಟು. ಹೇಗೆಂದರೆ.— ಚಿನ್ನದ ಕಡಗ

ಕಟಕತ್ವಂತು ನೈವಾಸ್ತಿ ಜಗತ್ತ್ವಂ ನ ತಥಾ ಪರೇ ||೮||
ಆಕಾಶೇ ಚ ಯಥಾ ನಾಸ್ತಿ ಶೂನ್ಯತ್ವಂ ವ್ಯತಿರೇಕವತ್ |
ಜಗತ್ತ್ವಂ ಬ್ರಹ್ಮಣಿ ತಥಾ ನಾಸ್ತ್ಯೇವಾಪ್ಯುಪಲಬ್ಧಿಮತ್ ||೯||
ಕಜ್ಜಲಾನ್ನ ಯಥಾ ಕಾರ್ಷ್ಣ್ಯಂ ಶೈತ್ಯಂ ಚ ನ ಯಥಾ ಹಿಮಾತ್ |
ಪೃಥಗೇವಂ ಭವೇದ್ಬುದ್ಧಂ ಜಗನ್ನಾಸ್ತಿ ಪರೇ ಪದೇ ||೧೦||
ಯಥಾ ಶೈತ್ಯಂ ಚ ಶಶಿನೋ ನ ಹಿಮಾದ್ವ್ಯತಿರಿಚ್ಯತೇ |
ಬ್ರಹ್ಮಣೋ ನ ತಥಾ ಸರ್ಗೋ ವಿದ್ಯತೇ ವ್ಯತಿರೇಕವಾನ್ ||೧೧||
ಮರುನದ್ಯಾಂ ಯಥಾ ತೋಯಂ ದ್ವಿತೀಯೇಂದೌ ಯಥೇಂದುತಾ |
ನಾಸ್ತ್ಯೇವೇಹ ಜಗನ್ನಾಮ ದೃಷ್ಟಮಪ್ಯಮಲಾತ್ಮನಿ ||೧೨||
ಆದಾವೇವ ಹಿ ಯನ್ನಾಸ್ತಿ ಕಾರಣಾಸಂಭವಾತ್ ಸ್ವಯಮ್ |
ವರ್ತಮಾನೇಪಿ ತನ್ನಾಸ್ತಿ ನಾಶಃ ಸ್ಯಾತ್ ತತ್ರ ಕೀದೃಶಃ ||೧೩||
ಕ್ವಾಸಂಭವದಭೂತಜಾಡ್ಯಂ ಪೃಥ್ವ್ಯಾದೇರ್ಜಡವಸ್ತುನಃ |
ಕಾರಣಂ ಭವಿತುಂ ಶಕ್ತಂ ಛಾಯಾಯಾಶ್ಚಾತಪೋ ಯಥಾ ||೧೪||

ವನ್ನು ನೋಡಿದಾಗ ಅದರಲ್ಲಿ ಕಟಕತ್ವವು ನಮಗೆ ಪ್ರತ್ಯಕ್ಷವಾಗಿ ಕಾಣುತಿದ್ದರೂ ಅದು ಹೇಗೆ ವಾಸ್ತವ್ಯವಾಗಿ ಇಲ್ಲವೇಇಲ್ಲವೋ, ಹಾಗೆ ಪರಬ್ರಹ್ಮನಲ್ಲಿ ಜಗಚ್ಛಬ್ದಾರ್ಥವಿಲ್ಲ ||೮||

ಮತ್ತು, ಆಕಾಶದಲ್ಲಿ ಪ್ರತ್ಯೇಕವಾದ ಶೂನ್ಯತ್ವವು ಹೇಗಿಲ್ಲವೋ, ಹಾಗೆ ನಮಗೆ ಕಾಣುತ್ತಿದ್ದರೂ ಬ್ರಹ್ಮನಲ್ಲಿ ಜಗತ್ತ್ವವಿಲ್ಲ ||೯||

ಕಾಡಿಗೆಗಿಂತ ಬೇರೆಯಾಗಿ ಕೃಷ್ಣತ್ವವು ಹೇಗಿರುವುದಿಲ್ಲವೋ, ಹಿಮಕ್ಕಿಂತ ಬೇರೆಯಾಗಿ ಶೈತ್ಯವು ಹೇಗಿರುವುದಿಲ್ಲವೋ, ಹಾಗೆ ಪರಮಾತ್ಮನಿಗಿಂತ ಬೇರೆಯಾಗಿದೆಯೆಂದು ನಾವು ತಿಳಿದರೂ ವಸ್ತುತಃ ಈ ಜಗತ್ತು ಬೇರೆಯಾಗಿಲ್ಲ ||೧೦||

ಚಂದ್ರನಲ್ಲಿರುವ ಶೈತ್ಯವು ಹಿಮಕ್ಕಿಂತ ಪೃಥಕ್ಕಾಗಿ ಹೇಗಿಲ್ಲವೋ, ಹಾಗೆ ಬ್ರಹ್ಮನಿಗಿಂತ ಪೃಥಕ್ಕಾಗಿರುವ ಜಗತ್ತಿಲ್ಲ ||೧೧||

ಮರುಭೂಮಿಯೊಳಗೆ ಕಾಣುವ ನದಿಯಲ್ಲಿ ನೀರು ಹೇಗಿಲ್ಲವೋ, ನಮ್ಮ ನೇತ್ರದೋಷದಿಂದ ಕಾಣುವ ಎರಡನೆಯ ಚಂದ್ರನಲ್ಲಿ ಚಂದ್ರತ್ವವು ಹೇಗಿಲ್ಲವೋ, ಹಾಗೆ ನಿರ್ಮಲಸ್ವರೂಪನಾಗಿರುವ ಆ ಪರಮಾತ್ಮನಲ್ಲಿ ನಮ್ಮ ಅನುಭವಕ್ಕೆ ಬರುತಿದ್ದರೂ ಜಗತ್ತೆಂಬುದಿಲ್ಲವೇ ಇಲ್ಲ ||೧೨||

ಯಾವುದು ಇದೆಯೆಂದು ನಿಶ್ಚಯಿಸುವುದಕ್ಕೆ ಕಾರಣವಿಲ್ಲದುದರಿಂದ ಮೊದಲೇ ಇಲ್ಲವಾಗಿರುವುದೋ, ಅದು ಈಗ ವರ್ತಮಾನದಶೆಯಲ್ಲಿಯೂ ಇಲ್ಲ; ಇಂತಹುದಕ್ಕೆ ನಾಶವುಂಟಾಗುವುದೆಂತಹುದು? ||೧೩||

ಕಾರಣವೇತಕ್ಕೆ ಇಲ್ಲವೆಂದರೆ:—ಆ ಪರಮಾತ್ಮಪದಾರ್ಥವು ಪಾಂಚಭೌತಿಕವಾದ ಜಾಡ್ಯವು ಸ್ವಲ್ಪವೂ ಇಲ್ಲದುದಾಗಿದೆ; ಪೃಥಿವಿ ಮೊದಲಾದುದು ಕೇವಲ ಜಡಪದಾರ್ಥವಾಗಿರುವುದು. ಹೀಗಿರುವಾಗ—ಬಿಸಿಲು ನೆಳಲಿಗೆ ಉತ್ಪತ್ತಿಕಾರಣವಾಗುವಂತೆ— ಈ ಜಡವಸ್ತುವಿಗೆ ಆ ಬ್ರಹ್ಮನು ಕಾರಣವಾಗುವುದು ಎಲ್ಲಿ ಬಂದೀತು? ||೧೪||

ಕಾರಣಾಭಾವತಃ ಕಾರ್ಯಂ ನೇದಂ ತತ್ ಕಿಂಚನೋದಿತಮ್ |
ಯತ್ ತತ್ ಕಾರಣಮೇವಾಸ್ತಿ ತದೇವೇತ್ಥಮವಸ್ಥಿತಮ್ ||೧೫||
ಅಜ್ಞಾನಮೇವ ಯದ್ಭಾತಿ ಸಂವಿದಾಭಾಸಮೇವ ತತ್ |
ಯಜ್ಜಗದ್ದೃಶ್ಯತೇ ಸ್ವಪ್ನೇ ಸಂವಿತ್ಕಚನಮೇವ ತತ್ ||೧೬||
ಸಂವಿತ್ಕಚನಮೇವಾನ್ತಃ ಯಥಾ ಸ್ವಪ್ನೇ ಜಗದ್ಭ್ರಮಃ |
ಸರ್ಗಾದೌ ಬ್ರಹ್ಮಣಿ ತಥಾ ಜಗತ್ಕಚನಮಾತತಮ್ ||೧೭||
ಯದಿದಂ ದೃಶ್ಯತೇ ಕಿಂಚಿತ್ ಸದೈವಾತ್ಮನಿ ಸಂಸ್ಥಿತಮ್ |
ನಾಸ್ತಮೇತಿ ನ ಚೋದೇತಿ ಜಗತ್ ಕಿಂಚಿತ್ ಕದಾಚನ ||೧೮||
ಯಥಾ ದ್ರವತ್ವಂ ಸಲಿಲಂ ಸ್ಪನ್ದನಂ ಪವನೋ ಯಥಾ |
ಯಥಾ ಪ್ರಕಾಶಆಭಾಸೋ ಬ್ರಹ್ಮೈವ ತ್ರಿಜಗತ್ ತಥಾ ||೧೯||
ಯಥಾ ಪುರಮಿನಾಸ್ತೇನ್ತಃ ವಿದೇವ ಸ್ವಪ್ನಸಂವಿದಃ |
ತಥಾ ಜಗದಿವಾಭಾತಿ ಸ್ವಾತ್ಮೈವ ಪರಮಾತ್ಮನಿ ||೨೦||

ಹೀಗೆ ಕಾರಣವೇ ಇಲ್ಲದುದರಿಂದ ಇದೊಂದೂ ಉತ್ಪನ್ನವಾದುದಲ್ಲ; ಅದುದರಿಂದ ಕಾರಣವೊಂದೇ ಇರುವುದು; ಅದೇ ಈ ರೀತಿಯಾಗಿ ಜಗತ್ತೆಂದು ಕಾಣುತಿರುವುದು ||೧೫||

ಹಾಗಾದರೆ ಅಜ್ಞಾನವೇ ಈ ಜಗತ್ತಿಗೆ ಕಾರಣವೆಂದು ಹೇಳುತ್ತೇವೆಯೆಂದರೆ, ಅದೂ ಯುಕ್ತವಲ್ಲ. ಅಜ್ಞಾನವಾಗಿ ಯಾವುದು ಭಾಸಮಾನವಾಗುವುದೋ, ಅದೂ ಜ್ಞಾನದ ವಿಕಾಸಭೇದವೇಹೊರತು ಬೇರೆಯಲ್ಲ. ಸ್ವಪ್ನದಲ್ಲಿ ನಾವು ನಾನಾವಿಧ ಪ್ರಪಂಚವನ್ನು ನೋಡುವುದಾವುದುಂಟೋ, ಅದು ಜ್ಞಾನದ ವಿಕಾಸಭೇದವೇ ಹೊರತು ಅದೇ ಬೇರೆಯಾದ ಒಂದು ಪದಾರ್ಥವಲ್ಲ ||೧೬||

ಸ್ವಪ್ನಕಾಲದಲ್ಲಿ ಮನಸ್ಸಿನೊಳಗೆ ಆಗುವ ಜ್ಞಾನದ ವಿಕಾಸವೇ ಜಗತ್ತೆಂಬ ಭ್ರಾಂತಿಯಾಗಿರುವಂತೆ, ಸೃಷ್ಟ್ಯಾದಿಕಾಲದಲ್ಲಿ ಬ್ರಹ್ಮನೊಳಗಿನ ಜ್ಞಾನವಿಕಾಸವೇ ಜಗತ್ತೆಂಬುದಾಗಿ ಹರಡಿಕೊಂಡಿರುವುದು ||೧೭||

ಈ ದೃಶ್ಯವಾದ ಯಾವುದೊಂದು ಪದಾರ್ಥವುಂಟೋ, ಅದು ಸರ್ವದಾ ಆತ್ಮನಲ್ಲಿಯೇ ಇರುವುದು. ಅಷ್ಟಲ್ಲದೆ ಜಗತ್ತೆಂದು ಬೇರೆಯಾದ ಪದಾರ್ಥವು ಯಾವುದೂ ಯಾವಾಗಲೂ ಹುಟ್ಟುವುದೂ ಇಲ್ಲ; ಲಯಹೊಂದುವುದೂ ಇಲ್ಲ ||೧೮||

ದ್ರವತ್ವವೇ ನೀರಾಗಿರುವುದು ಹೇಗೋ, ಚಲನವೇ ವಾಯುವಾಗಿರುವುದು ಹೇಗೋ, ಪ್ರಕಾಶವೇ ತೇಜಸ್ಸಾಗಿರುವುದು ಹೇಗೋ, ಹಾಗೆ ಬ್ರಹ್ಮವೇ ಲೋಕತ್ರಯವಾಗಿರುವುದು ||೧೯||

ಸ್ವಪ್ನಜ್ಞಾನದಲ್ಲಿ ನಮ್ಮ ಜ್ಞಾನವಿಕಾಸವೇ ಪಟ್ಟಣದಂತೆ ಹೇಗಿರುವುದೋ, ಹಾಗೆ. ಪರಮಾತ್ಮನಲ್ಲಿ ಆವನ ಆತ್ಮವೇ ಜಗತ್ತೆಂಬಂತೆ ಕಾಣುವುದು ||೨೦||

ಶ್ರೀರಾಮಉವಾಚ.

ಏವಂ ಚೇತ್ ತತ್ ಕಥಂ ಬ್ರಹ್ಮನ್ ಸುಘನಪ್ರತ್ಯಯಂ ವದ |
ಇದಂ ದೃಶ್ಯವಿಷಂ ಜಾತಂ ಅಸತ್ಸ್ವಪ್ನಾನುಭೂತಿವತ್ ||೨೧||
ಸತಿ ದೃಶ್ಯೇ ಕಿಲ ದ್ರಷ್ಟಾ ಸತಿ ದ್ರಷ್ಟರಿ ದೃಶ್ಯತಾ |
ಏಕಸತ್ತ್ವೇ ದ್ವಯೋರ್ಬನ್ಧೋ ಮುಕ್ತಿರೇಕಕ್ಷಯೇ ದ್ವಯೋಃ ||೨೨||
ಅತ್ಯನ್ತಾಸಮ್ಭವೋ ಯಾವತ್ ಬುದ್ಧೋ ದೃಶ್ಯಸ್ಯ ನ ಕ್ಷಯಃ |
ತಾವದ್ದ್ರಷ್ಟರಿ ದೃಶ್ಯತ್ವಂ ನ ಸಮ್ಭವತಿ ಮೋಕ್ಷಧೀಃ ||೨೩||
ದೃಶ್ಯಂ ಚೇತ್ ಸಮ್ಭವತ್ಯಾದೌ ಪಶ್ಚಾತ್ ಕ್ಷಯಮುಪಾಲಭೇತ್ |

ಇದುವರೆಗೂ ವಸಿಷ್ಠರು ಉಪದೇಶಿಸಿದರೂ, ಶ್ರೀರಾಮನಿಗೆ ಮತ್ತೆರಡುವಿಧವಾಗಿ ಸಂಶಯಹುಟ್ಟಿತು. ಹೇಗೆಂದರೆ:—ವಸಿಷ್ಠರು ಸ್ವಪ್ನಕ್ಕೂ ಜಗತ್ತಿಗೂ ಉಪಮಾನೋಪಮೇಯಭಾವವನ್ನು ಹೇಳಿದರಲ್ಲವೆ! ಸ್ವಪ್ನವು ಅಸತ್ಯವೆಂದು ಸರ್ವರಿಗೂ ಅನುಭವವಿದೆ; ಜಗತ್ತಾದರೋ-ಸ್ಥಿರತರವೆಂದು ಎಲ್ಲರ ಅನುಭವಕ್ಕೂ ಬಂದಿದೆ. ಹೀಗಿರುವಾಗ ಇವೆರಡಕ್ಕೂ ಉಪಮಾನೋಪಮೇಯಭಾವವನ್ನು ಹೇಳಿ ಸ್ವಪ್ನದೃಷ್ಟಾಂತದಿಂದ ಜಗತ್ತು ಅಸತ್ಯವೆಂದು ಸಾಧಿಸುವುದು ಅನುಪಪನ್ನವೆಂದು ಒಂದು ಸಂಶಯವು. ಆ ಮೇಲೆ, ದ್ರಷ್ಟೃ ದೃಶ್ಯ—ಇವೆರಡಕ್ಕೂ ಇರುವ ಸಂಬಂಧವು ಸ್ವಭಾವಸಿದ್ಧವಾಗಿರುವುದರಿಂದ ಇದನ್ನು ತಪ್ಪಿಸುವುದಸಾಧ್ಯವಾಗಿರುವಕಾರಣ, ಇದು ತಪ್ಪದಿದ್ದಮೇಲೆ ಮೋಕ್ಷವೇ ಸಂಭವಿಸುವುದಿಲ್ಲವೆಂಬ ಸಂಶಯವೊಂದು. ಹೀಗೆ ಇವೆರಡು ಸಂಶಯಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ಶ್ರೀರಾಮನು ವಸಿಷ್ಠಮಹರ್ಷಿಯನ್ನು ಕುರಿತು ಪ್ರಶ್ನೆಮಾಡಿದನು:—

ಎಲೈ ಬ್ರಹ್ಮರ್ಷಿವರ್ಯರೆ! ಈ ದೃಶ್ಯರೂಪವಾದ ವಿಷವು ತಾವು ಅಪ್ಪಣೆಕೊಟ್ಟಮೇರೆಗೆ ಸ್ವಪ್ನಾನುಭವದಂತೆ ಅಸತ್ಯವಾಗಿದ್ದಪಕ್ಷದಲ್ಲಿ, ಇದು ಸ್ಥಿರತರವೆಂದು ನಂಬುಗೆಗೆ ವಿಷಯವಾಗಿ ಆದುದು ಹೇಗೆ? ಅಪ್ಪಣೆಯಾಗಬೇಕು ||೨೧||

ದೃಶ್ಯವೆಂಬುದು ಇರುವ ಪಕ್ಷದಲ್ಲಿ ದ್ರಷ್ಟೃವೂ ಇದ್ದೇ ತೀರಬೇಕಾಗುವುದು; ಇಲ್ಲದಿದ್ದರೆ ದೃಶ್ಯವೆಂಬ ವ್ಯವಹಾರವೇ ಅಯುಕ್ತವಾಗುವುದು. ಹೀಗೆಯೇ ದ್ರಷ್ಟೃವೆಂಬುವನು ಇದ್ದಮೇಲೆ ದೃಶ್ಯವೂ ಇದ್ದೇ ತೀರಬೇಕಾಗುವುದು; ಇಲ್ಲದಿದ್ದರೆ ದ್ರಷ್ಟೃವೆಂಬ ವ್ಯವಹಾರವೇ ಅಸಂಗತವಾಗುವುದು. ಹೀಗಿರುವುದರಿಂದ, ಇವೆರಡರಲ್ಲಿ ಯಾವುದೊಂದಿದ್ದರೂ ಬಂಧವಾಗುವುದು; ಯಾವುದಾದರೊಂದು ಕ್ಷಯಹೊಂದಿದರಲ್ಲವೆ ಮುಕ್ತಿಯಾಗಬೇಕು! ದೃಶ್ಯವಿಲ್ಲದೆ ದ್ರಷ್ಟೃವೂ ದ್ರಷ್ಟೃವಿಲ್ಲದೆ ದೃಶ್ಯವೂ ಅಸಂಭವವಾದುದರಿಂದ ಮುಕ್ತಿಯೆಂಬುದು ಆಗುವ ಬಗೆಯಾವುದು? ||೨೨||

ಏತಕ್ಕೆಂದರೆ:—ಈ ದೃಶ್ಯಕ್ಕೆ ಕ್ಷಯವು ಆತ್ಯಂತಿಕವಾಗಿ ಅಸಂಭವವೆಂದು ಎಲ್ಲಿಯವರೆಗೆ ತಿಳಿಯಲ್ಪಟ್ಟಿರುವುದೋ, ಅಲ್ಲಿಯವರೆಗೆ ದ್ರಷ್ಟೃವಿನಲ್ಲಿ ದೃಶ್ಯತ್ವವು ಅಪರಿಹಾರ್ಯವಾಗಿ ಇದ್ದೇ ಇರುವುದು. ಅದುಕಾರಣ, ಮೋಕ್ಷಜ್ಞಾನವೇ ಅಸಂಭವವಾಗುವುದು ||೨೩||

ಆದರೆ—'ಈ ದೃಶ್ಯವು ಅತ್ಯಂತಾಸಂಭವವೆಂಬ ಜ್ಞಾನವಿಲ್ಲದಿದ್ದರೆ ಬಾಧಕವಿಲ್ಲ; ಸಂಭವವಾಗಿದ್ದರೂ ಜ್ಞಾನದಿಂದ ಅದಕ್ಕೆ ಕ್ಷಯವೇತಕ್ಕಾಗಬಾರದು?'—ಎಂದರೆ, ಈ ದೃಶ್ಯವು

ತದ್ದೃಶ್ಯಸ್ಮರಣಾನರ್ಥರೂಪೋ ಬನ್ಧೋ ನ ಶಾಮ್ಯತಿ ॥೨೪॥
ಯತ್ರಾಕ್ಷ್ವಜನಸಂಸ್ಥಸ್ಯ ಸ್ವಾದರ್ಶಸ್ಯೇವ ಚಿದ್ಗತೇಃ ।
ಪ್ರತಿಬಿಮ್ಬೋ ಜಗತ್ಯೇವ ಸರ್ವಸ್ಮೃತಿಮಯೋ ಹ್ಯಲಮ್ ॥೨೫॥
ಆದಾವೇವ ಹಿ ನೋತ್ಪನ್ನಂ ದೃಶ್ಯಂ ನಾಸ್ತ್ಯೇವ ಚೇತ್ ಸ್ವಯಮ್ ।
ದ್ರಷ್ಟೃದೃಶ್ಯಸ್ವಭಾವತ್ವಾತ್ ತತ್ ಸಮ್ಭವತಿ ಮುಕ್ತತಾ ॥೨೬॥
ತಸ್ಮಾದಸಮ್ಭವನ್ಮುಕ್ತೇಃ ಮಮ ಪ್ರೋತ್ಸಾರ್ಯ ಯುಕ್ತಿಭಿಃ ।
ಅತ್ಯನ್ತಾಸಮ್ಭವೋ ಯಾವತ್ ಕಥಯಾತ್ಮವಿದಾಂ ವರ ॥೨೭॥

ಶ್ರೀವಸಿಷ್ಠ ಉವಾಚ.

ಅಸದೇವ ಸಧಾಭಾತಿ ಜಗತ್ ಸರ್ವಾತ್ಮಕಂ ಯಥಾ ।
ಶೃಣ್ವಹಂ ಕಥಯಾ ರಾಮ ದೀರ್ಘಯಾ ಕಥಯಾಮಿ ತೇ ॥೨೮॥

ಮೊದಲು ಸಂಭವಿಸಿ ಬಳಿಕ ಜ್ಞಾನದಿಂದ ಕ್ಷಯಹೊಂದುವ ಪಕ್ಷದಲ್ಲಿ, ಈದೃಶ್ಯವನ್ನು ಪದೇ ಪದೇ ಸ್ಮರಿಸೋಣವೆಂಬ ಯಾವ ಅನರ್ಥವುಂಟೋ—ಇದೇ ಬಂಧವಾಗುವುದು; ಇದು ನಾಶಹೊಂದದಿರುವುದು. ಹೀಗೂ ಮುಕ್ತಿಜ್ಞಾನವಸಂಭವವಾಗುವುದು ॥೨೪॥

'ದೃಶ್ಯಪ್ರದೇಶವನ್ನು ಬಿಟ್ಟುಬಿಟ್ಟು ದೂರವಾಗಿದ್ದರೆ ದೃಶ್ಯಾನುಭವವಾಗುವುದಿಲ್ಲವಲ್ಲವೆ!' ಎಂದರೆ, ಕನ್ನಡಿಯು ಎಷ್ಟುದೂರದಲ್ಲಿದ್ದರೂ ಅದರಲ್ಲಿ ಪ್ರತಿಬಿಂಬವು ಬಿದ್ದೇಬೀಳುವಂತೆ, ಜ್ಞಾನವಿಲಾಸವು ಎಷ್ಟುದೂರದಲ್ಲಿದ್ದರೂ ಸಕಲಪದಾರ್ಥಸ್ಮರಣರೂಪವಾದ ಪ್ರತಿಬಿಂಬವು ಅತ್ಯಂತವಾಗಿ ಸೇರಿಯೇಬಿಡುವುದು ॥೨೫॥

ಆದರೆ ಈ ದೃಶ್ಯವು ಮೊದಲೇ ಉತ್ಪನ್ನವಾಗದಿದ್ದು ಸ್ವಯಂ ಇಲ್ಲವಾಗಿಯೇ ಇದ್ದರೆ, ಆಗ ದ್ರಷ್ಟೃವಾದ ಚೈತನ್ಯವು ಈ ದೃಶ್ಯಸ್ವಭಾವದಿಂದ ನಿರ್ಮುಕ್ತವೆಂದು ಹೇಳಬಹುದು. ಪ್ರಕೃತದಲ್ಲಿ ದೃಶ್ಯವು ಉತ್ಪನ್ನವಾಗಿರುವುದರಿಂದ ಈ ಮುಕ್ತಿಯು ಸಂಭವಿಸಲಾರದೆಂದು ತೋರುತ್ತದೆ ॥೨೬॥

ಆದುಕಾರಣ, ಆತ್ಮಜ್ಞಾನಿಗಳಲ್ಲಿ ಶ್ರೇಷ್ಠವಾದ ವಸಿಷ್ಠರೆ! ಈ ಮುಕ್ತಿಯೇ ಸಂಭವಿಸುವುದಿಲ್ಲವೆಂದು ನನಗುಂಟಾಗಿರುವ ಶಂಕೆಯನ್ನು ತಾವು ಸರಿಯಾದ ಯುಕ್ತಿಗಳಿಂದ ಪರಿಹರಿಸಿ, ಈ ದೃಶ್ಯವತ್ಯಂತಾಸಂಭವವೆಂದು ನನಗೆ ದೃಢಜ್ಞಾನವುಂಟಾಗುವವರೆಗೂ ಉಪದೇಶಿಸಬೇಕು ॥೨೭॥

ವಸಿಷ್ಠರು ಸಮಾಧಾನಹೇಳುವರು:—

ಅಯ್ಯಾ! ರಾಮ! ನಾನು ಈ ಜಗತ್ತಿಗೆ ಸ್ವಪ್ನಸಾದೃಶ್ಯವನ್ನು ಹೇಳಿದ ವಿಷಯದಲ್ಲಿ ನೀನು ಶಂಕೆಪಟ್ಟೆಯಲ್ಲವೆ! ಅದು ಯುಕ್ತವಲ್ಲ; ಸ್ವಪ್ನಸಾದೃಶ್ಯವೆಂದಿಗೂ ಅನುಪಪನ್ನವಲ್ಲ; ಈ ಸಮಸ್ತವಾದ ಜಗತ್ತೂ ಅಸತ್ಯವೇ ಆಗಿದ್ದರೂ ಚಿರಕಾಲಾನುವರ್ತನದಿಂದ ಸತ್ಯವೆಂದು ಜ್ಞಾನವುಂಟಾಗುತ್ತದೆ. ಈ ವಿಷಯವನ್ನು ನಾನು ನಿನಗೆ ದೀರ್ಘವಾದ ಉಪನ್ಯಾಸದಿಂದ ಉಪದೇಶಿಸುವೆನು; ಕೇಳುವವನಾಗು ॥೨೮॥

ವ್ಯವಸಾಯಕಥಾವಾಕ್ಯೈಃ ಯಾವತ್ ತತ್ರಾನುವರ್ಣಿತಮ್ |
ನ ವಿಶ್ರಾನ್ಯತಿ ತೇ ತಾವತ್ ಹೃದಿ ಪಾಂಸುರ್ಯಥಾ ಹ್ರದೇ ||೯||
ಅತ್ಯನ್ತಾಭಾವಮಸ್ಯಾಸ್ತ್ವಂ ಜಗತ್ಸರ್ಗಭ್ರಮಸ್ಥಿತೇಃ |
ಬುದ್ಧ್ವೈಕಧ್ಯಾನನಿಷ್ಠಾತ್ಮಾ ವ್ಯವಹಾರಂ ಕರಿಷ್ಯಸಿ ||೨೦||
ಭಾವಾಭಾವಗ್ರಹೋತ್ಸರ್ಗಸ್ಥೂಲಸೂಕ್ಷ್ಮಚಲಾಚಲಾಃ |
ದೃಶಸ್ತ್ವಂ ವೇಧಯಿಷ್ಯನ್ತಿ ನ ಮಹಾದ್ರಿಮಿವೇಷವಃ ||೨೧||
ಸಪಿಷೋಽಸ್ತ್ಯೇಕಏವಾತ್ಮಾ ನ ದ್ವಿತೀಯಾಸ್ತಿ ಕಲ್ಪನಾ |
ಜಗದತ್ರ ಯಥೋತ್ಪನ್ನಂ ತತ್ ತೇ ವಕ್ಷ್ಯಾಮಿ ರಾಘವ ||೨೨||

ತಸ್ಮಾದಿಮಾನಿ ಸಕಲಾನಿ ವಿಜೃಮ್ಭಿತಾನಿ
ಸೋಽಪೀದಮಙ್ಗ ಸಕಲಾಸಕಲಂ ಮಹಾತ್ಮಾ |
ರೂಪಾವಲೋಕನಮನೋಮನನಪ್ರಕಾರಾ-
ಕಾರಾಸ್ಪದಂ ಸ್ವಯಮುದೇತಿ ವಿಲೀಯತೇ ಚ ||೨೩||

ಇತಿ ಉತ್ಪತ್ತಿಪ್ರಕರಣೇ ಪರಮಾರ್ಥವರ್ಣನಂ ನಾಮ
ಏಕಾದಶಃ ಸರ್ಗಃ.

ಈ ವಿಷಯದಲ್ಲಿ ಪ್ರಾಚೀನರು ಮಾಡಿರುವ ವ್ಯವಹಾರಕಥಾವಚನದಿಂದ ನಿನಗೆ ಹೇಳುವವರೆಗೂ, ಮಡುವಿನಲ್ಲಿ ಧೂಳಿಯಡಗುವಂತೆ ನಿನ್ನ ಸಂಶಯವಡಗುವುದಿಲ್ಲ ||೧೯||

ನೀನು ಈ ಜಗತ್ಸೃಷ್ಟಿಯೆಂಬ ಭ್ರಾಂತಿಯನ್ನು ಅತ್ಯಂತಾಸಂಭವವೆಂದು ತಿಳಿದು ಕೊಂಡು ಏಕಧ್ಯಾನಾಸಕ್ತನಾಗಿ ವ್ಯವಹರಿಸಿಕೊಂಡಿರುವೆಯಾದರೆ, ಆಗ-ಇದು ಭಾವವೆಂದೂ ಇದು ಅಭಾವವೆಂದೂ—ಇದು ಗ್ರಾಹ್ಯವೆಂದೂ ಇದು ತ್ಯಾಜ್ಯವೆಂದೂ—ಇದು ಸ್ಥೂಲ ವೆಂದೂ ಇದು ಸೂಕ್ಷ್ಮವೆಂದೂ—ಇದು ಚಲವೆಂದೂ ಇದು ಅಚಲವೆಂದೂ—ಇರುವ ಜ್ಞಾನಗಳೊಂದೂ, ದೊಡ್ಡಬೆಟ್ಟವನ್ನು ಬಾಣಗಳು ಹೊಡೆಯಲಾರದಂತೆ, ನಿನ್ನನ್ನು ಹೊಡೆ ಯಲಾರವು(ತೊಂದರೆಪಡಿಸಲಾರವು) ||೨೦–೨೧||

ಅಯ್ಯಾ! ರಾಘವ! ಈ ಮುಖ್ಯವಾದ ವಿಷಯವನ್ನು ತಿಳಿಯುವವನಾಗು; ಆ ಪರ ಮಾತ್ಮನೊಬ್ಬನೇ ಇರುವವನು; ಎರಡನೆಯ ಕಲ್ಪನೆಯಾವುದೂ ಇಲ್ಲ. ಇಂತಹ ನಿರ್ವಿಕ ಲ್ಪನಾದ ಆತ್ಮನಲ್ಲಿ ಈ ಜಗತ್ತು ಹೇಗೆ ಹುಟ್ಟಿರುವುದೋ, ಅದನ್ನು ನಿನಗೆ ಹೇಳುವೆನು||೨೨||

ಅಯ್ಯಾ! ರಾಮ! ಆ ಆತ್ಮನ ದೆಸೆಯಿಂದಲೇ ಈ ಸಮಸ್ತವೂ ಆವಿರ್ಭವಿಸಿರುವುವು; ಆ ಮಹಾತ್ಮನೇ ಈ ಸಮಷ್ಟಿವ್ಯಷ್ಟಿಸೃಷ್ಟಿರೂಪನಾದವನು; ಅವನೇ ಹೊರಗೆ ಇಂದ್ರಿಯ ಪ್ರತ್ಯಕ್ಷವಿಷಯನಾಗಿಯೂ ಅಂತರವಾಗಿ ಮಾನಸಪ್ರತ್ಯಕ್ಷವಿಷಯನಾಗಿಯೂ ಉದ ಯಿಸತಕ್ಕವನಾಗಿಯೂ ಲಯಹೊಂದತಕ್ಕವನಾಗಿಯೂ ಇರುವನು ||೨೩||

ಇದು ಉತ್ಪತ್ತಿಪ್ರಕರಣದಲ್ಲಿ ಪರಮಾರ್ಥವರ್ಣನವೆಂಬ ಹನ್ನೊಂದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವಾದಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಏತಸ್ಮಾತ್ ಪರಮಾಕಾಶಾತ್ ಪದಾತ್ ಪರಮಪಾವನಾತ್ |
ಯಥೇದಮುತ್ಥಿತಂ ವಿಶ್ವಂ ತಚ್ಛೃಣೂತ್ತಮಯಾ ಧಿಯಾ ||೧||
ಸುಷುಪ್ತಂ ಸ್ವಪ್ನವದ್ಭಾತಿ ಭಾತಿ ಬ್ರಹ್ಮೈವ ಸರ್ಗವತ್ |
ಸರ್ವಾತ್ಮಕಂಚ ತತ್ ಸ್ಥಾನಂ ತತ್ರ ತಾವತ್ ಕ್ರಮಂ ಶೃಣು ||೨||

ಉತ್ಪತ್ತಿಪ್ರಕರಣದಲ್ಲಿ ಹನ್ನೆರಡನೆಯ ಸರ್ಗವು.

ಅತ್ಯನ್ತಾಸಮ್ಭವಂ ವಕ್ತುಂ ಅಪವಾದೇನ ಕೃತ್ಸ್ನಶಃ |
ಸರ್ಗಸ್ತದನುರೂಪೋಽಸ್ಮಿನ್ ಅಧ್ಯಾರೋಪಃ ಪ್ರಪಞ್ಚ್ಯತೇ ||

ಅಪವಾದದಿಂದ ಈ ಜಗತ್ತಿಗೆಲ್ಲ ಅತ್ಯಂತಾಸಂಭವವನ್ನು ಹೇಳುವುದಕ್ಕೋಸ್ಕರ, ಈ ಸರ್ಗದಲ್ಲಿ ತದನುಗುಣವಾದ ಅಧ್ಯಾರೋಪಸ್ವರೂಪವು ವಿಸ್ತರಿಸಲ್ಪಡುವುದು. (೧)

ಪೂರ್ವ ಸರ್ಗದಲ್ಲಿ ಈ ಜಗತ್ತಿನ ಸೃಷ್ಟಿಯನ್ನು ಹೇಳುವೆನೆಂದು ಪ್ರತಿಜ್ಞೆಮಾಡಿದ್ದ ಮೇರೆಗೆ, ಶ್ರೀ ವಸಿಷ್ಠಮುನಿಗಳು ಆ ವಿಷಯವನ್ನು ಹೇಳಲುಪಕ್ರಮಿಸುವರು:—

ಅಯ್ಯಾ! ರಾಮ! ಪರಮೋತ್ಕೃಷ್ಟವಾಗಿ ಪರಮಪಾವನವಾಗಿ ಶಾಂತವಾಗಿರುವ ಈ ಬ್ರಹ್ಮನಪದವಿಯಿಂದ, ಈ ಸಮಸ್ತ ಪ್ರಪಂಚವೂ ಹೇಗೆ ಉತ್ಪನ್ನವಾಯ್ತೋ, ಅದನ್ನು ಸಾವಧಾನಚಿತ್ತದಿಂದ ಕೇಳುವವನಾಗು ॥೧॥

ಪ್ರತಿಪುರುಷನಿಗೂ ಸಾಮಾನ್ಯವಾಗಿ ಅವನವನ ಸುಷುಪ್ತಾವಸ್ಥೆಯೇ ಸ್ವಪ್ನವೆಂದು ಕಾಣುವಹಾಗೆ, ಬ್ರಹ್ಮವೇ ಜಗತ್ತೆಂದು ಕಾಣುವುದು. ಆದರೆ ಈ ಸುಷುಪ್ತ್ಯವಸ್ಥೆಯು ಆಯಾ ಮನುಷ್ಯನಿಗೆ ಮಾತ್ರವೇ ಇರುವುದರಿಂದ, ಅದು ಅಷ್ಟು ಚೆನ್ನಾಗಿ ದೃಢಪ್ರತ್ಯಯವಾಗುವುದಕ್ಕವಕಾಶವಿಲ್ಲ; ಈ ಬ್ರಹ್ಮವಾದರೋ, ಸರ್ವಾತ್ಮಕವಾಗಿರುವುದರಿಂದ ಸರ್ವರಿಗೂ ಈ ವಿಧವಾದ ಜ್ಞಾನವುಂಟಾಗುವಕಾರಣ, ದೃಢನಿಶ್ಚಯವಾಗಿಬಿಟ್ಟಿರುವುದು. ಈ ವಿಷಯದಲ್ಲಿ ತಕ್ಕ ಯುಕ್ತಿಯನ್ನು ಕೇಳುವವನಾಗು ॥೨॥

---

(೧) ಇಲ್ಲಿ ತಿಳಿಯಬೇಕಾದ ಶಾಸ್ತ್ರೀಯವಿಷಯವೇನೆಂದರೆ:—ಒಂದು ಪದಾರ್ಥವನ್ನು ನೋಡಿ—ಭ್ರಮೆಯಿಂದ ಅದನ್ನು ಮತ್ತೊಂದು ಪದಾರ್ಥವೆಂದು ನಂಬುವಿಕೆಗೆ ಅಧ್ಯಾರೋಪವೆಂದೂ, ಈ ವಿಧವಾದ ತಪ್ಪು ತಿಳಿವಳಿಕೆಯನ್ನು ಹೋಗಲಾಡಿಸುವಿಕೆಗೆ ಅಪವಾದವೆಂದೂ ಹೆಸರು. ದೂರದಲ್ಲಿ ಹಗ್ಗವನ್ನು ನೋಡಿ ಸರ್ಪವೆಂದೂ, ಮುತ್ತಿನ ಚಿಪ್ಪನ್ನು ನೋಡಿ ಬೆಳ್ಳಿಯೆಂದೂ, ಕತ್ತಲೆಯಲ್ಲಿ ಮೋಟುಮರವನ್ನು ಕಂಡು ಕಳ್ಳನೆಂದೂ, ಇತ್ಯಾದಿರೀತಿಯಾಗಿ ಇನ್ನೂ ಅನೇಕವಿಧವಾದ ಜ್ಞಾನಗಳುಂಟಾಗುವುವಲ್ಲವೆ! ಹಗ್ಗ ಮುಂತಾದುವುಗಳಲ್ಲಿ ಸರ್ಪಮುಂತಾದುವುಗಳೆಂದುಂಟಾಗುವ ಭ್ರಮೆಯೇ ಅಧ್ಯಾರೋಪವೆನ್ನಿಸುವುದು ಹೀಗೆಯೇ ಪರಬ್ರಹ್ಮನನ್ನು ನೋಡಿ ಅಜ್ಞಾನದಿಂದ ಅವನನ್ನು ಜಗತ್ತೆಂದು ತಿಳಿದುಕೊಳ್ಳುವಿಕೆಯೇ ಅಧ್ಯಾರೋಪವು ಬಳಿಕ ವಿಚಾರದಿಂದ, ಇದು ಸರ್ಪವಲ್ಲ-ಹಗ್ಗವೆಂದೂ, ಶುಕ್ತಿಯಲ್ಲ-ರಜತವೆಂದೂ, ಚೋರನಲ್ಲ—ಸ್ಥಾಣುವೆಂದೂ ಸತ್ಯಜ್ಞಾನವುಂಟಾಗುವಂತೆ, ಇಲ್ಲಿಯೂ ವಿಚಾರದಿಂದ—ಇದುಜಗತ್ತಲ್ಲ ಬ್ರಹ್ಮವೇ ಎಂಬುದಾಗಿ ಸತ್ಯಜ್ಞಾನವುಂಟಾಗುವುದು ಹೀಗೆ ಭ್ರಾಂತಿಜ್ಞಾನನಿವಾರಣೆಯಾಗುವುದೇ ಅಪವಾದವು.

ತಸ್ಯಾನನ್ತಪ್ರಕಾಶಸ್ಯ ರೂಪಸ್ಯಾನನ್ತಚಿನ್ಮಣೇಃ |
ಸತ್ತಾಮಾತ್ರಾತ್ಮಕಂ ವಿಶ್ವಂ ಯದಜಸ್ರಂ ಸ್ವಭಾವತಃ ||೩||
ತದಾತ್ಮನಿ ಸ್ವಯಂ ಕಿಂಚಿತ್ ಚೇತ್ಯತಾಮಿವ ಗಚ್ಛತಿ |
ಅಗೃಹೀತಾತ್ಮಕಂ ಸಂವಿದಹಂಮರ್ಶನಪೂರ್ವಕಮ್ ||೪||
ಭಾವಿನಾಮಾರ್ಥಕಲನೈಃ ಕಿಂಚಿದೂಹಿತರೂಪಕಮ್ |
ಆಕಾಶಾದಣು ಶುದ್ಧಂ ಚ ಸರ್ವಸ್ಮಿನ್ ಭಾತಿ ಬೋಧನಮ್ ||೫||
ತತಃ ಸಾ ಪರಮಾ ಸತ್ತಾ ಸಚೇತಶ್ಚೇತನೋನ್ಮುಖೀ |
ಚಿನ್ನಾಮಯೋಗ್ಯಾ ಭವತಿ ಕಿಂಚಿಲ್ಲಭ್ಯತಯಾ ತಥಾ ||೬||
ಘನಸಂವೇದನಾ ಪಶ್ಚಾತ್ ಭಾವಿಜೀವಾದಿನಾಮಿಕಾ |
ಸಮ್ಭವತ್ಯಾತ್ತಕಲನಾ ಯದೋಜ್ಝತಿ ಪರಂ ಪದಮ್ ||೭||
ಸತ್ತೈವ ಭಾವನಾಮಾತ್ರಸಾರಾ ಸಂಸರಣೋನ್ಮುಖೀ |

ಅನಂತಪ್ರಕಾಶಸ್ವರೂಪವಾಗಿಯೂ ಅಖಂಡಜ್ಞಾನರತ್ನರೂಪನಾಗಿಯೂ ಇರುವ ಆ ಪರಮಾತ್ಮನ ಸತ್ತೆ (ಸ್ಥಿತಿ) ಯೆಂಬುದಾವುದುಂಟೋ, ವಿಶ್ವವು ಸರ್ವದಾ ಸ್ವಾಭಾವಿಕವಾಗಿ ಆ ಸತ್ತಾಮಾತ್ರರೂಪವಾಗಿರುವುದರಿಂದ, ಆತ್ಮನಲ್ಲಿ ತಾನು ಸ್ವಲ್ಪ ಚೇತನೀಯಸ್ಥಿತಿಯನ್ನು ಹೊಂದುವಂತೆ ತೋರುವುದು ; ಆದರೆ, ಅದು ಜ್ಞಾನದಿಂದ ಅಹಂಕಾರಪೂರ್ವಕವಾಗಿ ಆತ್ಮಗ್ರಹಣಮಾಡಿರುವುದಿಲ್ಲ (೧); ಆದರೂ, ಆಕಾಶಕ್ಕಿಂತ ಸೂಕ್ಷ್ಮವಾಗಿಯೂ ನಿರ್ಮಲವಾಗಿಯೂ ಇರುವ ಆ ಜ್ಞಾನವೇ, ಸಮಸ್ತವಾದ ಸೃಷ್ಟಿಯಾಗುವ ಪದಾರ್ಥದಲ್ಲಿಯೂ, ಮುಂದೆ ಉಂಟಾಗಬಹುದಾದ ನಾಮರೂಪಗಳ ಪರ್ಯಾಲೋಚನೆಯಿಂದ ಸ್ವಲ್ಪರೂಪವನ್ನು ಹೊಂದುವುದೆಂದು ಊಹಿಸಬಹುದಾಗಿರುವುದು. ಹೀಗೆ ಈ ವಿಶ್ವವು ಸ್ವಲ್ಪ ಚೇತನೀಯತ್ವವನ್ನು ಹೊಂದುವುದು ||೩—೫||

'ಸ ಈಕ್ಷತ ಲೋಕಾನುಸೃಜಾ ಇತಿ' ಎಂಬುದಾಗಿ ಶ್ರುತಿಯು ಬ್ರಹ್ಮನಿಗೆ ಈಕ್ಷಣರೂಪವಾದ ವೃತ್ತಿಯನ್ನು ಹೇಳುವುದಷ್ಟೆ ! ಮೇಲಣಶ್ಲೋಕಗಳಿಂದ ಅದನ್ನು ತೋರ್ಪಡಿಸಿದಹಾಗಾಯ್ತು. ಬಳಿಕ, ಈಕ್ಷಣ(ಅಪೇಕ್ಷೆ)ರೂಪವಾದ ವೃತ್ತಿಯೊಡನೆ ಕೂಡಿಕೊಂಡಿರುವ ಆ ಪರಬ್ರಹ್ಮಸತ್ತೆಯು, ಚೈತನ್ಯದಲ್ಲಿ ಅಭಿಮುಖವಾಗಿ ಅವಿಧವಾದ ವ್ಯವಹಾರಕ್ಕೆ ಸ್ವಲ್ಪ ವಿಷಯವಾಗುವ ಸಂಭವವುಂಟಾದಕಾರಣ, ಚಿತ್ (ಸರ್ವಜ್ಞೇಶ್ವರ—ಹಿರಣ್ಯಗರ್ಭ) ಎಂಬ ವ್ಯವಹಾರಕ್ಕೆ ವಿಷಯವಾಗುವುದು ||೬||

ಬಳಿಕ ಆ ಈಕ್ಷಣವೃತ್ತಿಯು ಚಿರಕಾಲಾನುವರ್ತನದಿಂದ ದೃಢವಾಗುವುದು ; ಇದರಿಂದ ಸೂಕ್ಷ್ಮಭೂತಾದಿರೂಪವಾದ ಪರಿಚ್ಛೇದವನ್ನು ಸ್ವೀಕರಿಸಿದಂತಾಗುವುದು ; ಅಮೇಲೆ, ಅಪರಿಚ್ಛಿನ್ನವಾದ ತನ್ನ ಭೂಮಾತ್ಮಭಾವವನ್ನು ಯಾವಾಗ ಮರೆತುಬಿಡುವುದೋ, ಆಗ ಮುಂದೆ ಜೀವಮುಂತಾದ ನಾಮಗಳುಳ್ಳದಾಗುವುದು ||೭||

ಹೀಗಾದರೂಕೂಡ, ಬ್ರಹ್ಮಭಾವಕ್ಕೆ ಸ್ವರೂಪತಃ ಹಾನಿಯುಂಟಾಯ್ತೆಂದು ತಿಳಿಯಬಾರದು ; ಆಗ ಆ ಬ್ರಹ್ಮಸತ್ತೆಯೇ ಕೇವಲ ಭಾವನಾಮಾತ್ರಸಾರವಾಗಿ ಜೀವಾದಿನಾಮಗಳಿಂದ ಸಂಸಾರೋನ್ಮುಖವಾಗುವುದು ; ಇಷ್ಟೇ ಹೊರತು ಆ ವಿಧವಾದ ಕ್ರಿಯಾದಿಗ

---

(೧) ಆಗ ಇನ್ನೂ ಅಹಂಕಾರಾಧ್ಯಾರೋಪವಾಗಿರುವುದಿಲ್ಲವೆಂದು ಭಾವವು.

ತದಾ ವಸ್ತುಸ್ವಭಾವೇನ ತ್ವನುತ್ತಿಷ್ಠತಿ ತಾಮಿಮಾಮ್ ||೮||
ಸಮನನ್ತರಮೇವಾಸ್ಯಾಃ ಖಸತ್ತೋದೇತಿ ಶೂನ್ಯತಾ |
ಶಬ್ದಾದಿಗುಣಬೀಜಂ ಸಾ ಭವಿಷ್ಯದಭಿಧಾರ್ಥದಾ ||೯||
ಅಹನ್ತೋದೇತಿ ತದನು ಸಹ ವೈ ಕಾಲಸತ್ತಯಾ |
ಭವಿಷ್ಯದಭಿಧಾರ್ಥೇನ ಬೀಜಂ ಮುಖ್ಯಂ ಜಗತ್ಸ್ಥಿತೇಃ ||೧೦||
ತಸ್ಯಾಃ ಶಕ್ತೇಃ ಪರಾಯಾಸ್ತು ಸ್ವಸಂವೇದನಮಾತ್ರಕಮ್ |
ಏತಜ್ಜಾಲಮಸದ್ರೂಪಂ ಸದಿವೋದೇತಿ ವಿಸ್ಫುರತ್ ||೧೧||
ಏವಂಪ್ರಾಯಾತ್ಮಿಕಾ ಸಂವಿತ್ ಬೀಜಂ ಸಙ್ಕಲ್ಪಶಾಖಿನಃ |
ಭವತ್ಯಹಙ್ಕಾರಕಣಃ ತತಃ ಸ್ಪನ್ದತಯಾ ಮರುತ್ ||೧೨||

ಳಿಲ್ಲ. ಅದಕ್ಕೆ ಕಾರಣವೇನೆಂದರೆ:—ಆ ವಸ್ತುವಿನ ಸ್ವಭಾವವೇ ಅಂತಹುದು. ಹಾಗಾದರೆ ಜೀವಭಾವವುಂಟಾಗುವುದು ಹೇಗೆಂದರೆ:—ರಜ್ಜುವಿನಲ್ಲಿ ಸರ್ಪತ್ವವುದಯಿಸುವಂತೆ, ಆ ಬ್ರಹ್ಮಸತ್ತೆಯನ್ನೇ ಅನುಸರಿಸಿ ಜೀವಭಾವವುಂಟಾಗುವುದು ||೮||

ಹೀಗೆ ಜೀವಸೃಷ್ಟಿಯಾದಬಳಿಕವೇ, ಆಕಾಶಸತ್ತೆಯುದ್ಭವಿಸುವುದು; ಇದು ಇತರ ಭೂತಗಳಿಗೆಲ್ಲ ಅವಕಾಶಕೊಡತಕ್ಕುದಾಗಿರುವುದರಿಂದ ಶೂನ್ಯರೂಪವಾಗಿರುವುದು; ಇದು ಶಬ್ದಮುಂತಾದ ಗುಣಗಳಿಗೆ ಬೀಜಭೂತವಾಗಿರುವುದು; ಸೂರ್ಯಾದಿಸೃಷ್ಟಿಯಾದ ಮೇಲೆ ಉಂಟಾಗುವ (೧) 'ಆಕಾಶ' ಮುಂತಾದ ನಾಮಧೇಯಗಳಿಗೆಲ್ಲ ಅರ್ಥವನ್ನು ಕೊಡತಕ್ಕುದಾಗುವುದು ||೯||

ಬಳಿಕ, ಪೂರ್ವೋಕ್ತನಾದ ಜೀವನಿಗೆ ಪರಾರ್ಧದ್ವಯರೂಪವಾದ ಕಾಲಸತ್ತೆಯೊಡನೆ ಅಹಂಕಾರವುದಯಿಸುವುದು; ಇದೂ ಪೂರ್ವೋಕ್ತರೀತಿಯಾಗಿ ಮುಂದಾಗುವ ನಾಮಧೇಯಗಳಿಗೆ ವಿಷಯವಾದುದಾಗಿ ಜಗತ್ಸ್ಥಿತಿಗೆ ಮುಖ್ಯಬೀಜವೆನ್ನಿಸುವುದು ||೧೦||

ಪೂರ್ವೋಕ್ತವಾದ ಆಕಾಶ ಅಹಂಕಾರ ಕಾಲ ಇವುಗಳ ಸೃಷ್ಟಿಯು ಹಿರಣ್ಯಗರ್ಭನಿಂದ ಆಗುವುದೆಂದು ತಿಳಿಯಬಾರದು; ಈ ಹಿರಣ್ಯಗರ್ಭರೂಪವಾದ ಉಪಾಧಿಯುಳ್ಳ ಆ ಪರಬ್ರಹ್ಮಸತ್ತೆಯಿಂದಲೇ ಆಗುವುದು. ಆ ಸತ್ತೆಯೂಕೂಡ ಯಾವವಿಧವಾದ ವಿಕಾರವನ್ನೂ ಹೊಂದದೆಯೇ ಕೇವಲ ಸ್ವಾತ್ಮಜ್ಞಾನಮಾತ್ರವಾಗಿಯೇ ಈ ವಿಧವಾಗುವುದು. ಈ ಅಹಂಕಾರಾದಿ ಸಮುದಾಯವು, ಅಸತ್ತಾಗಿದ್ದರೂ ಸತ್ಪದಾರ್ಥದಂತೆ ಉದಯಿಸುವುದು||೧೧

ಹೀಗೆ ಆಕಾಶತ್ವಾಭಿಮಾನದಿಂದ ತದಾತ್ಮಕವಾದ ಈ ಆಕಾಶವು, ಸಂಕಲ್ಪವೆಂಬ ವೃಕ್ಷಕ್ಕೆ ಬೀಜವಾಗುವುದು; ಬಳಿಕ, ಆ ಅಹಂಕಾರದ ಒಂದಂಶವೇ ಚಲನೆಯುಂಟಾಗಿ ವಾಯುವಾಗುವುದು ||೧೨||

---

(೧) 'ಆ—ಸಮನ್ತಾತ್, ಕಾಶತೇ' ಎಂಬ ವ್ಯುತ್ಪತ್ತಿಯಿಂದ ಸೂರ್ಯನ ಸುತ್ತಲೂ ಇದು ಇರುವಕಾರಣ, ಆಕಾಶವೆಂಬ ಹೆಸರುಂಟಾಗಿರುವುದು. ಈ ಹೆಸರು ಸೂರ್ಯಸೃಷ್ಟಿಯಾದ ಮೇಲೆ ಬರಬೇಕಾಗಿದ್ದರೂ ಭವಿಷ್ಯದರ್ಥಭಾವನೆಯಿಂದ ಮೊದಲೇ ಬರುತ್ತದೆಯೆಂದು ಭಾವವು.

ಚಿದಹನ್ತಾವತೀ ವ್ಯೋಮಶಬ್ದತನ್ಮಾತ್ರಭಾವನಾತ್ |
ಖತೋ ಘನೀಭೂಯ ಶನೈಃ ಖತನ್ಮಾತ್ರಂ ಭವತ್ಯಲಮ್ ||೧೩||
ಭಾವಿನಾಮಾರ್ಥರೂಪಂ ತತ್ ಬೀಜಂ ಶಬ್ದೌಘಶಾಖಿನಃ |
ಪದವಾಕ್ಯಪ್ರಮಾಣಾಖ್ಯಂ ವೇದಬೃನ್ದಂ ವಿಕಾಸಿತಮ್ ||೧೪||
ತಸ್ಮಾದುದೇಷ್ಯತ್ಯಖಿಲಾ ಜಗಚ್ಛ್ರೀಃ ಪರಮಾತ್ಮನಃ |
ಶಬ್ದೌಘನಿರ್ಮಿತಾರ್ಥೌಘಪರಿಣಾಮವಿಸಾರಿಣೀಃ ||೧೫||
ಚಿದೇವಂಪರಿವಾರಾ ಸಾ ಜೀವಶಬ್ದೇನಕಥ್ಯತೇ |
ಭಾವಿಶಬ್ದಾರ್ಥಜಾಲೇನ ಬೀಜಂ ರೂಪೌಘಶಾಖಿನಃ ||೧೬||
ಚತುರ್ದಶವಿಧಂ ಭೂತಜಾಲಮಾವಲಿತಾನ್ತರಮ್ |
ಜಗಜ್ಜಠರಗರ್ತೌಘಂ ಪ್ರಸರಿಷ್ಯತಿ ವೈ ತತಃ ||೧೭||

ಹೀಗೆ ಆಕಾಶಾಭಿಮಾನಯುಕ್ತವಾದ ಬ್ರಹ್ಮಸತ್ತೆಯೇ, ಆಕಾಶವೆಂಬುದಾಗಿಯೂ ಶಬ್ದತನ್ಮಾತ್ರವೆಂಬುದಾಗಿಯೂ ಭಾವನೆಯುಂಟಾಗಿ ಘನವಾದ ಆ ಭಾವನಾಬಲದಿಂದ ಮೆಲ್ಲಗೆ ಆಕಾಶತನ್ಮಾತ್ರವಾಗುವುದು (೧) ||೧೩||

ಈ ಶಬ್ದತನ್ಮಾತ್ರವೇ, ಮುಂದೆ ಉಂಟಾಗುವ ನಾಮಗಳಿಗೆ ವಿಷಯಭೂತವಾದುದಾಗಿ, ಶಬ್ದಸಮುದಾಯವೆಂಬ ವೃಕ್ಷಕ್ಕೆ ಬೀಜವಾದುದಾಗಿ, ಪದ ವಾಕ್ಯ ಪ್ರಮಾಣ ಇತ್ಯಾದಿ ನಾಮಧೇಯವುಳ್ಳ ವೇದಶಾಸ್ತ್ರಸಮುದಾಯರೂಪವಾಗಿ ವಿಕಾಸಹೊಂದುವುದು||

ಆ ವೇದಗಳಲ್ಲಿರುವ ಶಬ್ದಸಮುದಾಯಗಳಿಗೆಲ್ಲ ಅರ್ಥವನ್ನು ನಿರ್ಮಿಸಿ ತದನುಸಾರವಾಗಿ ಅಯಾ ವಿಧವಾದ ಆಕಾರದಿಂದ ಆ ಆತ್ಮನೇ ಪ್ರಸರಿಸುವನು; ಹೀಗೆ ವೇದಭಾವವನ್ನು ಹೊಂದಿರತಕ್ಕ ಆ ಪರಮಾತ್ಮನದೆಸೆಯಿಂದ, ಈ ಸಮಸ್ತವಾದ ಪ್ರಪಂಚಸಮುದಾಯವೂ ಆವಿರ್ಭವಿಸುವುದು ||೧೫||

ಈ ಪೂರ್ವೋಕ್ತವಾದ ಪ್ರಾಣವಾಯು ಮೊದಲಾದುದೇ ಪರಿವಾರವಾಗುಳ್ಳ ಆ ಚಿತ್ತು, ಜೀವನೆಂಬ ಶಬ್ದದಿಂದ ಹೇಳಲ್ಪಡುವುದು; ಇದು ಯಥಾಪ್ರಕಾರವಾಗಿ ಮುಂದಾಗುವ ನಾಮಧೇಯಗಳಿಗೆ ಅರ್ಥಭೂತವಾದುದಾಗಿ, ರೂಪಸಮುದಾಯವೆಂಬ ವೃಕ್ಷಕ್ಕೆ ಬೀಜವಾಗುವುದು ||೧೬||

ಬಳಿಕ, ಚತುರ್ದಶಭುವನಗಳಲ್ಲಿಯೂ ಚತುರ್ದಶವಿಧವಾಗಿರುವ ಪ್ರಾಣಿಸಮುದಾಯವು, ಪೂರ್ವೋಕ್ತವಾದ ಪ್ರಾಣವಾಯುನಿಮಿತ್ತದಿಂದ ತಾನು ಸಮಸ್ತವಾದ ಜಗದಂತರಾಳವನ್ನೂ ಸುತ್ತಿಕೊಂಡು, ಬ್ರಹ್ಮಾಂಡಮಧ್ಯವೆಂಬ ಗುಂಡಿಗಳಲ್ಲಿ ಸಂಚರಿಸುವುದು||

---

(೧) ಸಾಂಖ್ಯಶಾಸ್ತ್ರಕಾರರೂ ಪುರಾಣಗಳೂ ಈ ಸೃಷ್ಟಿಕ್ರಮವನ್ನು ಹೇಳುವಾಗ, ತನ್ಮಾತ್ರಗಳಿಂದ ಪಂಚಭೂತೋತ್ಪತ್ತಿಯಾಗುವುದೆಂದು ಹೇಳುವರು. ಇಲ್ಲಿ ಆಕಾಶದಿಂದ ತನ್ಮಾತ್ರೋತ್ಪತ್ತಿಯಾಯಿತೆಂದು ಹೇಳಿರುವುದರಿಂದ ವಿರೋಧವಿರುವಂತೆ ಕಾಣಬರುವುದು. ಆದರೂ,—'ಆತ್ಮನ ಆಕಾಶಃ ಸಮ್ಭೂತಃ' ಇತ್ಯಾದಿ ಶ್ರುತಿಗಳು ಬ್ರಹ್ಮನಿಂದಲೇ ಭೂತೋತ್ಪತ್ತಿಯನ್ನು ಹೇಳಿರುವುದರಿಂದ ಆಕಾಶದಿಂದ ತನ್ಮಾತ್ರೋತ್ಪತ್ತಿಯಾಗುವುದೆಂಬುದು ಉಪಪನ್ನವಾಗುವುದು.

ಅಸಮ್ಪ್ರಾಪ್ತಾಭಿಧಾಕಾರಾ ಜೆಜ್ಜವಾತ್ ಪ್ರಸ್ಫುರದ್ವಪುಃ ।
ಸಾ ಚೈವ ಸ್ಪರ್ಶತನ್ಮಾತ್ರಂ ಭಾವನಾದ್ಭವತಿ ಕ್ಷಣಾತ್ ॥೧೮॥
ಪವನಸ್ಕನ್ಧವಿಸ್ತಾರಂ ಬೀಜಂ ಸ್ಪರ್ಶೌಘಶಾಖಿನಃ ।
ಸರ್ವಭೂತಕ್ರಿಯಾಸ್ಪನ್ದಃ ತಸ್ಮಾತ್ ಸಮ್ಪ್ರಸರಿಷ್ಯತಿ ॥೧೯॥
ತತ್ರೈವ ಚಿದ್ವಿಲಾಸೇನ ಪ್ರಕಾಶೋಽನುಭವಾದ್ಭವೇತ್ ।
ತೇಜಸ್ತನ್ಮಾತ್ರಕಂ ತತ್ ತು ಭವಿಷ್ಯದಭಿಧಾರ್ಥಕಮ್ ॥೨೦॥
ತತ್ ಸೂರ್ಯಾಗ್ನಿವಿದ್ಯುದ್ಭಾದಿಬೀಜಮಾಲೋಕಶಾಖಿನಃ ।
ತಸ್ಮಾದ್ರೂಪವಿಭೇದೇನ ಸಂಸಾರಃ ಪ್ರಸರಿಷ್ಯತಿ ॥೨೧॥
ಭಾವಯಂಸ್ತನುತಾಮೇವ ರಸಸ್ಕನ್ಧ ಇವಾಮ್ಭಸಃ ।
ಸ್ವದನಂ ತಸ್ಯ ಸಙ್ಘಸ್ಯ ರಸತನ್ಮಾತ್ರಮುಚ್ಯತೇ ॥೨೨॥
ಭಾವಿವಾರಿವಿಲಾಸಾತ್ಮಾ ತದ್ಬೀಜಂ ರಸಶಾಖಿನಃ ।
ಅನ್ಯೋನ್ಯಸ್ವದನೇ ತಸ್ಮಾತ್ ಸಂಸಾರಃ ಪ್ರಸರಿಷ್ಯತಿ ॥೨೩॥

ಹೀಗೆ ಆ ಚಿತ್ತು, ಮೊದಲು ನಾಮಕ್ರಿಯೆಗಳನ್ನು ಹೊಂದದಿದ್ದರೂ, ವಾಯುಭಾವಾದ್ಯಭಿಮಾನದ ವೇಗದಿಂದ ಆ ವಿಧವಾದ ಶರೀರವುಳ್ಳದಾಗಿ, ಭಾವನಾಬಲದಿಂದ ಕ್ಷಣದೊಳಗಾಗಿ ಸ್ಪರ್ಶತನ್ಮಾತ್ರವಾಗುವುದು ॥೧೮॥

ಇದರಿಂದ, (೧) ಆವಹ ಪ್ರವಹ ಮುಂತಾದ ವಾಯುಮಂಡಲ ವಿಸ್ತಾರವುಂಟಾಗುವುದು ; ಇದು ಸ್ಪರ್ಶಸಮುದಾಯವೆಂಬ ವೃಕ್ಷಕ್ಕೆ ಬೀಜವಾಗುವುದು; ಇದರಿಂದ ಸಮಸ್ತಭೂತಗಳಿಗೂ ಕ್ರಿಯಾರೂಪವಾದ ಚಲನೆಯುದಯಿಸುವುದು ॥೧೯॥

ಅಲ್ಲಿಯೇ ಆ ಚಿತ್ತು ಪ್ರಕಾಶಾತ್ಮತ್ವಭಾವನೆಯುಳ್ಳದಾಗುವುದರಿಂದ, ಆ ಅನುಭವಾನುಗುಣವಾಗಿ ಪ್ರಕಾಶವುಂಟಾಗುವುದು ; ಆ ತೇಜಸ್ತನ್ಮಾತ್ರವು ಪೂರ್ವೋಕ್ತರೀತಿಯಾಗಿ ಮುಂದಾಗುವ ನಾಮಕ್ಕೆ ವಿಷಯಭೂತವಾಗುವುದು ॥೨೦॥

ಆ ತೇಜಸ್ಸು, ಸೂರ್ಯ ಚಂದ್ರ ವಿದ್ಯುತ್ ನಕ್ಷತ್ರ ಮೊದಲಾದ ಪ್ರಕಾಶವೆಂಬ ವೃಕ್ಷಕ್ಕೆ ಬೀಜಭೂತವಾಗುವುದು. ಅದರದೆಸೆಯಿಂದ ನಾನಾವಿಧರೂಪವಿಭಾಗವುಳ್ಳದಾಗಿ ಸಂಸಾರವು ಪ್ರಸರಿಸುವುದು ॥೨೧॥

ಹೀಗೆ ತೇಜೋಭೂತನಾದ ಆತ್ಮನು, ಜಲದ ರಸಸಮುದಾಯರೂಪನಾಗಿರುವಂತೆ ಆ ಆಕಾರವನ್ನೇ ಭಾವನೆಮಾಡುತ, ಆ ರೂಪವನ್ನು ಹೊಂದುವನು. ಆ ಜಲಸಮುದಾಯದ ಆಸ್ವಾದನಜನ್ಯವಾದ ಮಾಧುರ್ಯಾದ್ಯನುಭವವೇ ರಸತನ್ಮಾತ್ರವೆನ್ನಲ್ಪಡುವುದು ॥೨೨॥

ಅದು ಮುಂದೆ ಜಲರೂಪವಾಗುತಕ್ಕುದಾಗಿ ರಸವೆಂಬ ವೃಕ್ಷಕ್ಕೆ ಬೀಜಭೂತವಾಗುವುದು. ಹೀಗೆ ಪರಸ್ಪರವಾಗಿ ರಸಾದ್ಯನುಭವವುಂಟಾಗಲಾಗಿ, ಅದರಿಂದ ಮತ್ತೆಮತ್ತೆ ವಿಷಯಾರ್ಜನದಲ್ಲಿ ಪ್ರವೃತ್ತಿಯುಂಟಾಗಿ ಸಂಸಾರವು ಪ್ರಸರಿಸುವುದು ॥೨೩॥

---

(೧) ಆವಹ ಪ್ರವಹ ನಿವಹ ಅನುವಹ ಉದ್ವಹ ಸಂವಹ ಪರಿವಹ ಎಂದು ಸಪ್ತವಾಯುಗಳು. ಇವುಗಳ ಪರಸ್ಪರ ಸಂಬಂಧದಿಂದ ನಲವತ್ತೊಂಭತ್ತು ಪ್ರಭೇದಗಳು ಹುಟ್ಟುವುವೆಂದು ಕೆಲವರಭಿಪ್ರಾಯವುಂಟು.

ಭವಿಷ್ಯದ್ರೂಪಸಙ್ಕಲ್ಪನಾಮಾಸೌ ಕಲ್ಪನಾತ್ಮಕಃ ।
ಸಙ್ಕಲ್ಪಾತ್ಮಾ ಗುಣೈರ್ಗನ್ಧತನ್ಮಾತ್ರತ್ವಂ ಪ್ರಪಶ್ಯತಿ ॥೨೪॥
ಭಾವಿಭೂಗೋಳಕತ್ವೇನ ಬೀಜಮಾಕೃತಿಶಾಖಿನಃ ।
ಸರ್ವಾಧಾರಾತ್ಮನಸ್ತಸ್ಮಾತ್ ಸಂಸಾರಃ ಪ್ರಸರಿಷ್ಯತಿ ॥೨೫॥
ಚಿತಾ ವಿಭಾವ್ಯಮಾನಾನಿ ತನ್ಮಾತ್ರಾಣಿ ಪರಸ್ಪರಮ್ ।
ಸ್ವಯಂ ಪರಿಣತಾನ್ಯನ್ತಃ ಅಮ್ಬುನೀವ ನಿರನ್ತರಮ್ ॥೨೬॥
ತಥೈತಾನಿ ವಿಮಿಶ್ರಾಣಿ ವಿವಿಕ್ತಾನಿ ಪುನರ್ಯಥಾ ।
ನ ಶುದ್ಧಾನ್ಯುಪಲಭ್ಯನ್ತೇ ಸರ್ವನಾಶಾನ್ತಮೇವ ಹಿ ॥೨೭॥
ಸಂವಿತ್ತಿಮಾತ್ರರೂಪಾಣಿ ಸ್ಥಿತಾನಿ ಗಗನೋದರೇ ।
ಭವನ್ತಿ ವಟಜಾಲಾನಿ ಯಥಾ ಬೀಜಕಣಾನ್ತರೇ ॥೨೮॥
ಪ್ರಸವಂ ಪರಿಪಶ್ಯನ್ತಿ ಶತಶಾಖಂ ಸ್ಫುರನ್ತಿ ಚ ।

ಹೀಗೆ ಜಲಭಾವವನ್ನು ಹೊಂದಿರುವ ಈ ಆತ್ಮನು,–ನಾನು ಪೃಥಿವಿಯೆಂದು ಚಿರಕಾಲ ಭಾವನೆಯುಳ್ಳವನಾಗಿ, ಮುಂದೆ ರೂಪಸಂಕಲ್ಪನಾಮಧೇಯಗಳುಳ್ಳವನಾಗಿ, ಆ ಸಂಕಲ್ಪ ಗುಣಗಳಿಂದ ತನ್ನಲ್ಲಿ ಗಂಧತನ್ಮಾತ್ರತ್ವವನ್ನು ಕಾಣುವನು ॥೨೪॥

ಹೀಗೆ ಈ ಪೃಥಿವೀಭೂತನಾದ ಆತ್ಮನು, ಮುಂದೆ ಆಗುವ ಭೂಗೋಳರೂಪನಾಗಿ ಆಕಾರವೆಂಬ ವೃಕ್ಷಕ್ಕೆ ಬೀಜವಾಗುವನು. ಸಮಸ್ತಕ್ಕೂ ಆಧಾರಭೂತವಾದ ಆದರಿಂದ ಸಂಸಾರವು ಪ್ರಸರಿಸುವುದು ॥೨೫॥

ಈರೀತಿಯಾಗಿ ಬೇರೆಬೇರೆಯಾಗಿ ಹುಟ್ಟದ ಪಂಚತನ್ಮಾತ್ರಗಳು, ಪೂರ್ವೋಕ್ತರೀತಿಯಾಗಿ ತತ್ತದಭಿಮಾನವಿಶಿಷ್ಟವಾದ ಚಿತ್ತಿನಿಂದ ಪರಸ್ಪರವಾಗಿ ಭಾವನೆಮಾಡಲ್ಪಟ್ಟುವುಗಳಾಗಿ, ನೀರಿನಲ್ಲಿ ಗುಳ್ಳೆಗಳು ಹುಟ್ಟುವಂತೆ, ಬ್ರಹ್ಮಾಂಡರೂಪವಾಗಿ ಪರಿಣಮಿಸುವುವು ॥

ಈ ಪಂಚಭೂತಗಳು ಎಲ್ಲಿಯವರೆಗೆ ಈರೀತಿಯಾಗಿ ಮಿಶ್ರವಾಗಿರಬೇಕೆಂದರೆ:—ಇವುಗಳು, ಸರ್ವಪ್ರಳಯವಾಗುವವರೆಗೂ ಮತ್ತೆ ಬೇರೆಬೇರೆಯಾಗಿ ಪರಿಶುದ್ಧವಾಗಿ ಸಿಕ್ಕದೆಯೇ ಇರುವಂತೆ ಸೇರಿಕೊಂಡುಬಿಡುವುವು ॥೨೭॥

ಆದರೆ ಇವುಗಳೆಲ್ಲವೂ ಹೊಸದಾಗಿ ಹುಟ್ಟಿದುವೆಂದು ತಿಳಿಯಬಾರದು. ಸಣ್ಣದೊಂದು ಆಲದಬೀಜದ ಚೂರಿನೊಳಗೆ ಅನೇಕ ವಟವೃಕ್ಷಸಮೂಹಗಳು ಅಡಗಿರುವಂತೆ ಕೇವಲ ಸೂಕ್ಷ್ಮರೂಪಗಳಾಗಿ ಆ ಪರಬ್ರಹ್ಮನೊಳಗೆ ಇದ್ದೇ ಇರುವುವು; ಅವೇ ಈಗ ಸ್ಥೂಲರೂಪವಾಗಿ ಹೊರಬೀಳುವುವು ॥೨೮॥

'ಈ ತನ್ಮಾತ್ರಗಳು ಕೇವಲ ಸೂಕ್ಷ್ಮವಾಗಿರುವುದರಿಂದ ಇವುಗಳಲ್ಲಿ ಈ ಸ್ಥೂಲಪ್ರಪಂಚವಿರುವುದೆಂಬುದು ಅನುಪಪನ್ನವಾಗುವುದು'—ಎಂದರೆ, ಈ ಸ್ಥೂಲಪ್ರಪಂಚವಿರುವಿಕೆಯೆಂಬುದೇ ಅಸತ್ಯವು. ಸ್ವಪ್ನದಲ್ಲಿ ಕೆಲವು ವೃಕ್ಷಗಳನ್ನು ಕಂಡರೆ, ಅವು ಒಂದು ಕ್ಷಣದೊಳಗಾಗಿ ಹೂವುತೋರುವುವು; ನೂರಾರುಕೊಂಬೆಯಾಗಿ ಪ್ರಕಾಶಿಸುವುವು. ಇವಿಷ್ಟೂ ಕೂಡ ಪರಮಾಣುವಿನಂತಿರುವ ಸೂಕ್ಷ್ಮನಾಡಿಯಲ್ಲಿ ಕಾಣುವುವು. ಒಂದು ಕ್ಷಣದೊಳ

ಪರಮಾಣ್ವನ್ತರೇ ಭಾನ್ತಿ ಕ್ಷಣಾತ್ ಕಲ್ಪೀಭವನ್ತಿ ಚ ‖೨೯‖
ವಿವರ್ತ್ತಮೇವ ಧಾವನ್ತಿ ನಿರ್ವಿವರ್ತ್ತಾನಿ ಸನ್ತಿ ಚ ।
ಚಿದ್ವೇಧಿತಾನಿ ಸರ್ವಾಣಿ ಕ್ಷಣಾತ್ ಪಿಣ್ಡೀಭವನ್ತಿ ಚ ‖೩೦‖
ತನ್ಮಾತ್ರಗಣಮೇತತ್ ಸ್ಯಾತ್ ಸಾ ಸಙ್ಕಲ್ಪಾತ್ಮಿಕಾ ಚಿತಿಃ ।
ವೇದನಾತ್ ತ್ರಸರೇಣ್ವಾಭಂ ಅನಾಕಾರೈವ ಪಶ್ಯತಿ ‖೩೧‖

ಬೀಜಂ ಜಗತ್ಸು ನನು ಪಞ್ಚಕಮಾತ್ರಮೇವ
ಬೀಜಂ ಪರಾವ್ಯವಹಿತಸ್ಥಿತಿಶಕ್ತಿರಾದ್ಯಾ ।
ಬೀಜಂ ತದೇವ ಭವತೀತಿ ಸದಾನುಭೂತಂ
ಚಿನ್ಮಾತ್ರಮೇವಮಜಮಾದ್ಯಮತೋ ಜಗಚ್ಛ್ರೀಃ ‖೩೨‖

ಇತಿ ಉತ್ಪತ್ತಿಪ್ರಕರಣೇ ಉತ್ಪತ್ತಿವರ್ಣನಂ ನಾಮ
ದ್ವಾದಶಃ ಸರ್ಗಃ.

ಗಾಗಿ ಲಯವಿಶಿಷ್ಟವೂ ಆಗಿಬಿಡುವುವು. ಇದು ಹೇಗೆ ಅತಿ ಸೂಕ್ಷ್ಮವಾದುದರಲ್ಲಿ ಸಂಭವಿಸುವುದೋ, ಹಾಗೆಯೇ ಸೂಕ್ಷ್ಮವಾದ ತನ್ಮಾತ್ರಗಳಲ್ಲಿ ಪ್ರಪಂಚಸ್ಥಿತಿಯೂ ಉಪಪನ್ನವೆಂದು ತಿಳಿಯಬೇಕು ‖೨೯‖

ಹೀಗೆ ಈ ಪಂಚಭೂತಗಳು ಸ್ಥೂಲರೂಪಗಳಾಗಿ ವಿವರ್ತ್ತ (ರೂಪಾಂತ)ಹೊಂದಿದರೂ ವಿವರ್ತ್ತರಹಿತಗಳಾಗಿಯೇ ಇರುವುವು. ಏಕೆಂದರೆ:—ಇವು ವಿಕಾರರಹಿತವಾದ ಆ ಚಿತ್ತಿನಿಂದ ಅನುವಿದ್ಧಗಳಾಗಿರುವಕಾರಣ, ವಿಕಾರಶೂನ್ಯವಾಗಿಯೇ ಇರಬೇಕಾಗುವುವು. ಅದು ಕಾರಣವೇ ಒಂದು ಕ್ಷಣದೊಳಗಾಗಿ ಒಟ್ಟುಕೂಡುವುವು ‖೩೦‖

ಅಯ್ಯಾ ! ರಾಮ ! ಈರೀತಿಯಾಗಿ ಈ ತನ್ಮಾತ್ರಸಮುದಾಯವನ್ನು ಹೇಳಿರುವೆನು. ಆ ಚಿತ್ತು ಆಕಾರಶೂನ್ಯವೇ ಆಗಿದ್ದರೂ ಸಂಕಲ್ಪಾತ್ಮಕವಾಗಿ, ಜ್ಞಾನದಿಂದ ತ್ರಸರೇಣುಸದೃಶವಾದುದನ್ನು ಈರೀತಿಯಾಗಿ ನೋಡುತಿರುವುದು ‖೩೧‖

ಹೀಗೆ ಈ ಜಗತ್ತಿಗೆ ತನ್ಮಾತ್ರಪಂಚಕವೇ ಬೀಜವಲ್ಲವೆ ! ಈ ತನ್ಮಾತ್ರಗಳಿಗೆ ಪರಮಾತ್ಮನ ಸನ್ನಿಹಿತವಾದ ಆದಿಮಾಯಾಶಕ್ತಿಯೇ ಬೀಜವು. ಅಂತು ಚಿನ್ಮಾತ್ರರೂಪವಾಗಿ ಅಜವಾಗಿ ಆದ್ಯವಾಗಿರುವ ಆ ಪರಮಾತ್ಮತತ್ವವೇ ಈ ಜಗತ್ತಿಗೆ ಮುಖ್ಯಬೀಜವಾಗುವುದೆಂದು ಸರ್ವದಾ ಅನುಭವಸಿದ್ಧವಾಗಿರುವುದು. ಇದರದೆಸೆಯಿಂದಲೇ ಈ ಪ್ರಪಂಚಸಂಪತ್ತುಂಟಾಗಿರುವುದು ‖೩೨‖

ಇದು ಉತ್ಪತ್ತಿಪ್ರಕರಣದಲ್ಲಿ ಉತ್ಪತ್ತಿವರ್ಣನೆಯೆಂಬ
ಹನ್ನೆರಡನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ತ್ರಯೋದಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಪರಮೇ ಬ್ರಹ್ಮಣಿ ಸ್ಫಾರೇ ಸಮೇ ರಾಮ ಸಮಸ್ಥಿತೇ ।
ಅನುತ್ಪನ್ನನಭಸ್ತೇಜಸ್ತಮಸ್ಸತ್ತಾ ಚಿದಾತ್ಮನಿ ॥೧॥
ಪೂರ್ವಂ ಚೇತ್ಯತ್ವಕಲನಂ ಸತಶ್ಚೇತ್ಯಾಂಶಚೇತನಾತ್ ।
ಉದೇತಿ ಚಿತ್ತಕಲನಂ ಚಿತಿ ಶಕ್ತಿತ್ವಚೇತನಾತ್ ॥೨॥
ತತೋ ಜೀವತ್ವಕಲನಂ ಚೇತ್ಯಸಂಯೋಗಚೇತನಾತ್ ।
ತತೋಽಸ್ಯ ಮಾಯಾಕಲನಂ ಚೇತ್ಯೈಕಪರತಾವಶಾತ್ ॥೩॥
ತತೋ ಬುದ್ಧಿತ್ವಕಲನಂ ಅಹನ್ತಾಪರಿಣಾಮತಃ ।
ಏತದೇವ ಮನಸ್ತಾದಿಶಬ್ದತನ್ಮಾತ್ರಕಾದಿಮತ್ ॥೪॥

ಉತ್ಪತ್ತಿಪ್ರಕರಣದಲ್ಲಿ ಹದಿಮೂರನೆಯ ಸರ್ಗವು.

ಸರ್ಗೋಕ್ತ್ಯಾ ಪ್ರಾಗ್ಜಗದ್ಭಾವೋ ವರ್ಣಿತೋ ಬ್ರಹ್ಮಣೋಽನೃತಃ ।
ಜೀವಭಾವೋಽಧುನಾ ತಸ್ಯ ದೇಹಾದ್ಯಾಪ್ತಿಶ್ಚ ವರ್ಣ್ಯತೇ ॥

ಹಿಂದಣ ಸರ್ಗದಲ್ಲಿ ಪರಬ್ರಹ್ಮನಿಗೆ ಸೃಷ್ಟಿಯನ್ನು ಹೇಳಿ ಅನೃತವಾದ ಜಗದ್ಭಾವವು ವರ್ಣಿಸಲ್ಪಟ್ಟಿತು. ಈಗ ಅವನಿಗೆ ಜೀವಭಾವವೂ ದೇಹಾದಿಪ್ರಾಪ್ತಿಯೂ ವರ್ಣಿಸಲ್ಪಡುತ್ತದೆ.

ಪುನಃ ಜೀವಸೃಷ್ಟಿಯನ್ನು ತಿಳಿಸಲುಪಕ್ರಮಿಸಿ ಶ್ರೀವಸಿಷ್ಠಮುನಿಗಳು ಹೇಳಿದರು:-

ಅಯ್ಯಾ! ರಾಮ! ಸ್ವಯಂ ಸಮವಾಗಿಯೂ, ಸಮವಾದ ಆಶ್ರಯದಲ್ಲಿರುವುದಾಗಿಯೂ, ಸರ್ವತ್ರ ವ್ಯಾಪಿಸಿಕೊಂಡಿರತಕ್ಕುದಾಗಿಯೂ, ಆಕಾಶ ತಮಸ್ಸು ತೇಜಸ್ಸು ಇವುಗಳ ಉತ್ಪತ್ತಿಗಿಂತ ಮೊದಲು ಅವುಗಳ ಉತ್ಪತ್ತಿಗೆ ಕಾರಣಭೂತವಾಗಿ ಚಿದ್ರೂಪವಾಗಿಯೂ ಇರುವ ಆ ಪರಬ್ರಹ್ಮನಲ್ಲಿ, ಮೊಟ್ಟಮೊದಲು ಚೇತನೀಯತ್ವಕಲ್ಪನೆಯುಂಟಾಗುವುದು. ಇದಕ್ಕೆ ಕಾರಣವೇನೆಂದರೆ:—ಆ ಸತ್ಪದಾರ್ಥದಲ್ಲಿ ಚೇತನೀಯಾಂಶವಭಿವ್ಯಕ್ತವಾಗುವುದೇ ಕಾರಣವು. ಹೀಗೆಯೇ ಆ ಚಿತ್ತಿನಲ್ಲಿ ಶಕ್ತಿತ್ವಜ್ಞಾನವಾಗುವುದರಿಂದ ಚಿತ್ತಕಲ್ಪನೆಯುದಯಿಸುವುದು; ಬಳಿಕ, ಚೇತನೀಯದೊಡನೆ ಸಂಯೋಗವುಂಟಾಯ್ತೆಂದು ಜ್ಞಾನವಾಗುವುದರಿಂದ ಜೀವಕಲ್ಪನೆಯುಂಟಾಗುವುದು; ಬಳಿಕ ಇದು ಕೇವಲ ಚೇತನೀಯಪರವಶವಾಗುವುದರಿಂದ ಮಾಯಾಕಲ್ಪನೆಯಾಗುವುದು; ಬಳಿಕ ಅಹಂಕಾರವೃದ್ಧಿಯಿಂದ ಬುದ್ಧಿತ್ವಕಲ್ಪನೆಯಾಗುವುದು. ಅನಂತರ ಶಬ್ದತನ್ಮಾತ್ರಾದಿಯುಕ್ತವಾಗುವುದರಿಂದ, ಇದೇ-ಮನಸ್ಸು ಮುಂತಾದ ವ್ಯವಹಾರವನ್ನು ಪಡೆಯುವುದು ॥೧—೪॥

ಉಚ್ಛೂನಾದಸ್ಯತನ್ಮಾತ್ರಭಾವನಾದ್ಭುತರೂಪಿಣಃ ।
ಅಯಮಿತ್ಥಂ ಮಹಾಗುಲ್ಮೋ ಜಗದಾದಿರ್ವಿಲೋಕ್ಯತೇ ॥೫॥
ಝಟಿತ್ಯೇವಂ ಕ್ರಮೇಣೇತಿ ಸ್ವಪ್ನೇ ಪುರಮಿವಾಕೃತಮ್ ।
ಮಹಾಕಾಶಮಹಾಟವ್ಯಾಂ ಉದ್ಭೂಯೋದ್ಭೂಯ ನಶ್ಯತಿ ॥೬॥
ಜಗತ್ಕರಞ್ಜಕುಞ್ಜಾನಾಂ ಬೀಜಮೇತದವಾಪಜಮ್ ।
ನಾಪೇಕ್ಷತೇ ಕಿಂಚಿದಪಿ ಕ್ಷಿತಿವಾರ್ಯನಲಾದಿಕಮ್ ॥೭॥
ಏತಚ್ಚಿದಾತ್ಮಕಂ ಪಶ್ಚಾತ್ ಕಿಲೋರ್ವ್ಯಾದಿ ಕರಿಷ್ಯತಿ ।
ಸ್ವಂ ಸ್ವಪ್ನವಿತ್ ಪುರಮಿವ ಚಿನ್ಮಾತ್ರಾತ್ಮಕಮೇವ ಯತ್ ॥
ಜಗದಾದ್ಯಙ್ಕುರಂ ಯತ್ರತತ್ರಸ್ಥಮಪಿ ಮುಞ್ಚತಿ ॥೮॥
ಜಗತಃ ಪಞ್ಚಕಂ ಬೀಜಂ ಪಞ್ಚಕಸ್ಯ ಚಿದವ್ಯಯಾ ।
ಯದ್ಬೀಜಂ ತತ್ಫಲಂ ವಿದ್ಧಿ ತಸ್ಮಾದ್ಬ್ರಹ್ಮಮಯಂ ಜಗತ್ ॥೯॥
ಏವಮೇಷ ಮಹಾಕಾಶೇ ಸರ್ಗಾದೌ ಪಞ್ಚಕೋ ಗಣಃ ।
ಚಿಚ್ಛಕ್ತ್ಯಾ ಸ್ವಾಙ್ಗಭೂತಾತ್ಮಾ ಕಲ್ಪಿತೋಽಸ್ತಿ ನ ವಾಸ್ತವಃ ॥೧೦॥

ಆ ಶಬ್ದತನ್ಮಾತ್ರಕ್ಕೆ ಇತರವಾದ ಸ್ಪರ್ಶಾದಿತನ್ಮಾತ್ರಗಳ ಸಂಯೋಗದಿಂದ ಬಲು ದೊಡ್ಡ ರೂಪವುಳ್ಳದಾಗಿ ಸ್ಥೂಲದೇಹಾಪನ್ನವಾದ ಮನಸ್ಸಿನದೆಸೆಯಿಂದ, ಈ ರೀತಿಯಾಗಿ ವಿಸ್ತಾರವಾಗಿರುವ ಜಗತ್ತುಮೊದಲಾದ ಈದೊಡ್ಡ ಗಹನಪ್ರದೇಶವು ತೋರುತ್ತಿರುವುದು॥

ಹೀಗೆ ಈರೀತಿಯಾಗಿ ಸ್ವಪ್ನದಲ್ಲಿ ಕಾಣುವ ಪಟ್ಟಣದಂತೆ ಇಚ್ಛೆಯಿಲ್ಲದೆಯೇ ಉಂಟಾಗಿರುವ ಈ ಜಗತ್ತು, ಕ್ಷಣದೊಳಗಾಗಿ ಹುಟ್ಟಿಹುಟ್ಟಿ ನಾಶಹೊಂದುವುದು ॥೬॥

ಜಗತ್ತೆಂಬ ಕಂಟಕವೃಕ್ಷಗಳಿಗೆ ಇದು ಬೀಜವು; ಇದು ಬಿತ್ತನೆಯಿಲ್ಲದೆಯೇ ಹುಟ್ಟುವುದು; ಇದು—ಭೂಮಿ ನೀರು ಗಾಳಿ ಮುಂತಾದುದೊಂದನ್ನೂ ಸ್ವಲ್ಪವೂ ಅಪೇಕ್ಷಿಸುವುದಿಲ್ಲ ॥೭॥

ಆಮೇಲೆ ಸ್ವಪ್ನವನ್ನು ನೋಡುವವನು, ತನ್ನಿಂದ ಅನುಭವಿಸಲ್ಪಡುವುದನ್ನೇ ಪಟ್ಟಣವನ್ನಾಗಿ ಕಲ್ಪಿಸಿಕೊಳ್ಳುವಂತೆ, ಈ ಚಿನ್ಮಾತ್ರಾತ್ಮಕವಾದ ವಸ್ತುವು, ಭೂಮಿಮುಂತಾದುದನ್ನು ಕಲ್ಪಿಸುವುದು. ಆದರೆ, ಈ ವಸ್ತುವು ಅಸಂಗವಾಗಿಯೇ ಇರುವುದು. ಕೇವಲ ಚಿನ್ಮಾತ್ರರೂಪವಾದ ಆ ವಸ್ತುವು, ಯಾವುದೊಂದು ಸ್ಥಳದಲ್ಲಿದ್ದರೂ-ಜಗತ್ತು ಮುಂತಾದ ಅಂಕುರವನ್ನು ಬಿಡುತಲೇ ಇರುವುದು ॥೮॥

ಹೀಗೆ ಜಗತ್ತಿಗೆ ತನ್ಮಾತ್ರಪಂಚಕವು ಬೀಜವಾಯ್ತು; ಈ ತನ್ಮಾತ್ರಪಂಚಕಕ್ಕೆ ಅವ್ಯಯವಾದ ಚಿತ್ತು ಬೀಜವಾಯ್ತು. ಬೀಜವೆಂತಹುದೋ, ಫಲವೂ ಅಂತಹುದೇ ಅಲ್ಲವೆ! ಆದುಕಾರಣ, ಎಲೈ! ರಾಮನೆ! ಜಗತ್ತೆಲ್ಲ ಬ್ರಹ್ಮಮಯವಾದುದೆಂದು ತಿಳಿ ॥

ಹೀಗೆ ಸೃಷ್ಟ್ಯಾದಿಯಲ್ಲಿ ಈ ಪಂಚತನ್ಮಾತ್ರಸಮುದಾಯುವು, ಆ ಬ್ರಹ್ಮಾಕಾಶದಲ್ಲಿ ಚೇತನೀಯಪ್ರಕಾಶನರೂಪವಾದ ಶಕ್ತಿಯಿಂದ ತನ್ನ ಶರೀರದಂತೆ ಕಲ್ಪಿತವಾಗಿರುವುದಲ್ಲದೆ, ವಾಸ್ತವ್ಯವಲ್ಲ ॥೧೦॥

ಅನೇನೋಚ್ಛೂನತಾಮೇತ್ಯ ಯದಪೀದಂ ವಿತನ್ಯತೇ ।
ತದಪ್ಯಾಕಾಶರೂಪಾತ್ಮ ಕಲ್ಪನಾತ್ಮನಿ ಸನ್ಮಯಮ್ ॥೧೧॥
ಕ್ವಚಿನ್ನ ನಾಮ ತತ್ ಸಿದ್ಧಂ ಯದಸಿದ್ಧೇನ ಸಾಧ್ಯತೇ ।
ಸ್ವರೂಪಂ ಯದ್ವಿಕಲ್ಪಾತ್ಮ ಕಥಂ ತತ್ ಸತ್ಯತಾಮಿಯಾತ್ ॥೧೨॥
ಅಥ ಚೇತ್ ಪಞ್ಚಕಂ ಬ್ರಹ್ಮ ಬ್ರಹ್ಮಾತ್ಮಕತಯಾ ಧಿಯಾ ।
ತತ್ ಪಞ್ಚಕಂ ವಿದ್ಧಿ[1] ಪ್ರೌಢೋ ಬ್ರಹ್ಮೈವ ತ್ರಿಜಗತ್ಕ್ರಮಃ ॥೧೩॥
ಯಥಾ ಸ್ಫುರತಿ ಸರ್ಗಾದೌ ಏಷ ಪಞ್ಚಕಸಮ್ಭವಃ ।
ತಥೈವಾದ್ಯೇ ಹ ಭೂತತ್ವೇ ಯಾತಿ ಕಾರಣತಾಂ ಸ್ವಯಮ್ ॥೧೪॥
ಏವಂ ನ ಜಾಯತೇ ಕಿಂಚಿತ್ ಜಗಜ್ಜಾತಂ ನ ಲಕ್ಷ್ಯತೇ ।
ಸ್ವಪ್ನಸಙ್ಕಲ್ಪಪುರವತ್ ಅಸತ್ ಸದನುಭೂಯತೇ ॥೧೫॥

ಈ ಪಂಚಕಸಮುದಾಯವು ಸ್ಥೂಲರೂಪವನ್ನು ಹೊಂದಿ ಯಾವ ಈ ಜಗತ್ತನ್ನು ಮಾಡುವುದೋ, ಅದೂ ಕೂಡ—ಆಕಾಶರೂಪಸ್ವಭಾವವಾಗಿ ಕಲ್ಪಿತರೂಪದಲ್ಲಿ ಸತ್ತಾಗಿ ಕಾಣುವುದಲ್ಲದೆ—ವಾಸ್ತವ್ಯವಲ್ಲ ॥೧೧॥

ಪ್ರಪಂಚದಲ್ಲಿ ಒಂದುಪದಾರ್ಥವು ಸ್ವಯಂ ಅಸಿದ್ಧವಾಗಿರುವಾಗ, ಅದರಿಂದ ಸಾಧಿಸಲ್ಪಡುವ ಮತ್ತೊಂದು ಪದಾರ್ಥವು ಎಂದಿಗೂ ಸಿದ್ಧವಾಗುವುದಿಲ್ಲವಲ್ಲವೆ! ಅದುಕಾರಣ ಯಾವ ಸ್ವರೂಪವು ಕೇವಲ ಕಲ್ಪನಾಮಾತ್ರವಾಗಿರುವುದೋ, ಅದು ಹೇಗೆತಾನೆ ಸತ್ಯವಾದೀತು? ಪಂಚತನ್ಮಾತ್ರಗಳು ಸತ್ಯವೆಂದು ಸಿದ್ಧವಾಗಿದ್ದರಲ್ಲವೆ ಅವುಗಳಿಂದ ಹುಟ್ಟಿದ ಜಗತ್ತೂ ಸತ್ಯವಾಗಬಹುದು! ಅವೇ ಅಸತ್ಯವಾಗಿರುವಾಗ ಅವುಗಳಿಂದ ಕಲ್ಪಿತವಾದ ಜಗತ್ತು ಸತ್ಯವಾಗುವುದೆಲ್ಲಿ? ॥೧೨॥

ಹಾಗಲ್ಲದೆ ‘ಈ ಪಂಚತನ್ಮಾತ್ರಗಳು ಬ್ರಹ್ಮನಲ್ಲಿ ಅಧ್ಯಸ್ತಗಳಾಗಿರುವುದರಿಂದ, ಇವು ಬ್ರಹ್ಮನೇಆಗಲಿ; ಆದರೆ, ಈ ಪಂಚಕದಿಂದ ಹುಟ್ಟಿದ ಪ್ರಪಂಚವು ಅರೀತಿಯಾಗುವುದು ಹೇಗೆ?’ ಎಂದು ಕೇಳಿದರೆ,—ಅದು ಚೆನ್ನಾಗಿಲ್ಲ; ಕಾರಣವಾದ ಸೂಕ್ಷ್ಮಭೂತಪಂಚಕವು ಬ್ರಹ್ಮವಾಗಿರುವಂತೆಯೇ ತತ್ಕಾರ್ಯವಾದ ಸ್ಥೂಲಭೂತಪಂಚಕವೂ ಬ್ರಹ್ಮವೇ ಆಗಿರುವುದಲ್ಲವೆ! ಈ ರೀತಿಯಾಗಿ ರೂಢವಾಗಿರುವ ಈ ಲೋಕತ್ರಯ ಪ್ರಕ್ರಮವೂ ಬ್ರಹ್ಮವೇ ಆಗಿರುವುದು ॥೧೩॥

ಹೀಗೆ ಪರಸ್ಪರ ಭೇದವಿಲ್ಲದಮೇಲೆ ಒಂದು ಕಾರ್ಯವೆಂದೂ ಮತ್ತೊಂದು ಕಾರಣವೆಂದೂ ವ್ಯವಹಾರವುಂಟಾಗಲು ಕಾರಣವೇನೆಂದರೆ:—ಸೃಷ್ಟ್ಯಾದಿಯಲ್ಲಿ ಈ ಪಂಚತನ್ಮಾತ್ರೋತ್ಪತ್ತಿಯು ಹೇಗೆ ಸ್ಫುರಿಸುತ್ತದೆಯೋ, ಹಾಗೆಯೇ ಉತ್ತರಕಾಲಿಕವಾದ ತನ್ನನ್ನು ಕುರಿತು ಪೂರ್ವಕಾಲಿಕವಾದ ತಾನೇ ಕಾರಣವಾಗುವುದು (ಒಂದೇ ಪದಾರ್ಥವು ಮೊದಲು ಕಾರಣವೆನ್ನಿಸಿದ್ದು ಆಮೇಲೆ ಕಾರ್ಯವೆನ್ನಿಸುವುದೆಂದು ಭಾವವು) ॥೧೪॥

ಹೀಗೆ ಈ ಜಗತ್ಸಮೂಹವೊಂದೂ ಹುಟ್ಟುವುದಿಲ್ಲ; ಕಣ್ಣಿಗೆ ಕಾಣುವುದೂ ಇಲ್ಲ. ಸ್ವಪ್ನದಲ್ಲಿಯೂ ಸಂಕಲ್ಪದಲ್ಲಿಯೂ ಕಂಡ ಪಟ್ಟಣಗಳಂತೆ, ಪರಮಪ್ರಕಾಶವಾದ ಬ್ರಹ್ಮಾ

1. ವಿತ್‌+ಹಿ=ಇತಿ ಪದದ್ವಯಂ.

ಬ್ರಹ್ಮಾಕಾಶಪರಾಕಾಶೇ ಜೀವಾಕಾಶತ್ವಮಾತ್ಮನಿ ||೧೬||
ಇತಿ ಚಿತ್ತ್ವವದಾತಾತ್ಮಾ ಪೃಥ್ವ್ಯಾದೀನಾಮಸಮ್ಭವಾತ್ |
ಇತ್ಯೇಷ ಜೀವಃ ಕಥಿತೋ ವ್ಯೋಮ್ನಿ ಖಾತ್ಮಾ ಇವೋದಿತಃ ||೧೭||
ಜೀವಾಕಾಶಸ್ತ್ವಮುಂ ದೇಹಂ ಯಥಾ ವಿನ್ದತಿ ತಚ್ಛೃಣು |
ಜೀವಾಕಾಶಃ ಸ್ವಮೇವಾಸೌ ತಸ್ಮಿಂಸ್ತು ಪರಮೇಶ್ವರೇ |
ಅಣುತೇಜಃಕಣೋಽಸ್ಮೀತಿ ಸ್ವಯಂ ಚೇತತಿ ಚಿನ್ತಯಾ ||೧೮||
ಯತ್ ತದೇವೋಚ್ಛೂನಮಿವ ಭಾವಯತ್ಯಾತ್ಮನಾಮ್ಬರೇ |
ಅಸದೇವ ಸದಾಕಾರಂ ಸಙ್ಕಲ್ಪೇನ್ದುರ್ಯಥಾ ನ ಸತ್ ||೧೯||
ತಮೇವ ಭಾವಯನ್ ದ್ರಷ್ಟೃದೃಶ್ಯರೂಪತಯಾ ಸ್ಥಿತಃ |
ಏಕಏವ ದ್ವಿತಾಮೇತಿ ಸ್ವಪ್ನೇ ಸ್ವಮೃತಿಬೋಧವತ್ ||೨೦||
ಕಿಂಚಿತ್ ಸ್ಥೌಲ್ಯಮಿವಾದತ್ತೇ ತತಸ್ತಾರಕತಾಂ ವಿದನ್ |
ಯಥಾಭಾವಿತಮಾತ್ರಾರ್ಥಭಾವಿತಾದ್ವಿಶ್ವರೂಪತಃ ||೨೧||

ಕಾಶದಲ್ಲಿ ಅಸತ್ಯವಾಗಿದ್ದರೂ ಸತ್ಯವಾಗಿರುವಹಾಗೆ ಈ ಜೀವತ್ವವು ಅನುಭವವಿಷಯುವಾಗಿರುವುದು ||೧೫—೧೬||

ಹೀಗೆ ನಿರ್ಮಲಾತ್ಮನಾಗಿರುವವನು ಸರ್ವವನ್ನೂ ಚಿತ್ತಿನಲ್ಲಿಯೇ ನೋಡುವನು. ವಸ್ತುತಃ ಪೃಥವಿಮೊದಲಾದ ಉಪಾಧಿಗಳು ಅಸಂಭವವವಾಗಿರುವಕಾರಣ, ಅಂತರಿಕ್ಷದಲ್ಲಿ ಗಂಧರ್ವನಗರಾದಿಗಳು ಉದಯಿಸುವಂತೆ, ಈ ಜೀವನು ಉದಯಿಸುವನು. ಹೀಗೆ ಈ ಜೀವನ ಉತ್ಪತ್ತಿಪ್ರಕಾರವು ಹೇಳಲ್ಪಟ್ಟಿರುವುದು ||೧೭||

ಅಯ್ಯಾ! ರಾಮ! ಈಗ ಜೀವಾಕಾಶವು ಈ ದೇಹವನ್ನು ಹೇಗೆ ಹೊಂದುವುದೋ, ಅದನ್ನು ಕೇಳುವವನಾಗು. ಈ ಜೀವಾಕಾಶವಾದರೆ,—ಆ ಪರಬ್ರಹ್ಮನಲ್ಲಿ ನಾನು ಅಣುವಾದ ತೇಜಃಕಣವಾಗಿರುವೆನು—ಎಂಬ ಭಾವನೆಯಿಂದ ಆ ವಿಧವಾಗಿಯೇ ಅನುಭವಿಸುವುದು ||೧೮||

ಈ ವಿಧವಾದ ಭಾವನೆಯಾವುದುಂಟೋ, ಅದೇ ಸ್ಥೂಲವಾದುದಾಗಿ—ಅಸತ್ಯವಾಗಿರುವ ಸಂಕಲ್ಪಚಂದ್ರನಂತೆ—ಅಸತ್ಯವೇ ಆಗಿದ್ದರೂ ಸತ್ಯದಂತೆ ಕಾಣುವುದು ||೧೯||

ಬಳಿಕ ಅದನ್ನೇ ಭಾವಿಸುತ ಆ ಭಾವನಾಬಲದಿಂದ—ಸ್ವಪ್ನದಲ್ಲಿ ತನ್ನ ಮರಣವನ್ನು ತಾನೇ ನೋಡುವಂತೆ—ದ್ರಷ್ಟೃವಾಗಿಯೂ ದೃಶ್ಯವಾಗಿಯೂ ಒಬ್ಬನೇ ರೂಪದ್ವಯುವನ್ನು ಹೊಂದುವನು ||೨೦||

ಬಳಿಕ, ವಿಶ್ವರೂಪನಾಗಿದ್ದರೂ ಎಷ್ಟುಮಟ್ಟಿಗೆ ಭಾವನೆಮಾಡಿಕೊಳ್ಳುವನೋ ಅಷ್ಟುಪದಾರ್ಥಮಾತ್ರವಾಗಿ ಭಾವನೆಹೊಂದುತ, ಮೊದಲು ಅಣುತೇಜಃಕಣರೂಪನೆಂದು ತಿಳಿದುಕೊಂಡಿದ್ದವನು ಆಮೇಲೆ ನಕ್ಷತ್ರರೂಪನೆಂದು ತಿಳಿದುಕೊಳ್ಳುವುದರಿಂದ ಸ್ವಲ್ಪ ಸ್ಥೌಲ್ಯವನ್ನು ಹೊಂದುವನು ||೨೧||

ಸಏವ ಸ್ವಾತ್ಮಾ ಸತತೋಽಪ್ಯಯಂ ಸೋಽಹಮಿತಿ ಸ್ವಯಮ್ ।
ಚಿತ್ತಾತ್ ಪ್ರತ್ಯಯಮಾಧತ್ತೇ ಸ್ವಪ್ನೇ ಸ್ವಾಮಿವ ಪಾನ್ಥತಾಮ್ ॥೨೨॥
ತಾರಕಾಕಾರಮಾಕಾರಂ ಭಾವಿದೇಹಾಭಿಧಂ ತಥಾ ।
ಭಾವಯತ್ಯೇತಿ ತದ್ಭಾವಂ ಚಿತ್ತಂ ಚೇತ್ಯಾರ್ಥತಾಮಿವ ॥೨೩॥
ಪರಿತ್ಯಜ್ಯೈವ ತದ್ಬಾಹ್ಯಂ ತತಸ್ತಾರಕಕೋಟರೇ ।
ಅನ್ತರ್ಭಾತಿ ಬಹಿಸ್ಸ್ಥೋಽಪಿ ಪರ್ವತೋ ಮುಕುರೇ ಯಥಾ ॥೨೪॥
ಕೂಪಸಂಸ್ಥೋ ಯಥಾ ದೇಹಃ ಸಮುದ್ಗಕಗತಂ ವಚಃ ।
ಸ್ವಪ್ನಸಙ್ಕಲ್ಪಯೋಃ ಸಂವಿತ್ ವೇತ್ತ್ಯೇತಜ್ಜೀವಕೋಽಣುಕೇ ॥೨೫॥
ಸ್ವರೂಪತಾರಕಾನ್ತಸ್ಥೋ ಜೀವೋಽಯಂ ಚೇತತಿ ಸ್ವಯಮ್ ।
ತದೇತದ್ಬುದ್ಧಿಚಿತ್ತಾದಿಜ್ಞಾನಸತ್ತಾದಿರೂಪಕಮ್ ॥೨೬॥

ಅಪರಿಚ್ಛಿನ್ನನಾಗಿದ್ದರೂ ಆ ಆತ್ಮನೇ—ಮನೆಯೊಳಗೆ ನಿದ್ರೆಮಾಡುತಿರುವ ತನ್ನನ್ನು ಸ್ವಪ್ನದಲ್ಲಿ ಮಾರ್ಗಸ್ಥನಾಗಿರುವಹಾಗೆ ಕಾಣುವಂತೆ—ನಾನು ಇಂಥವನಾಗಿದ್ದೇನೆ—ಎಂಬುದಾಗಿ, ತನ್ನ ಚಿತ್ತದಲ್ಲಿ ತಾನೇ ಜ್ಞಾನವನ್ನುಂಟುಮಾಡಿಕೊಳ್ಳುವನು ॥೨೨॥

ಪೂರ್ವೋಕ್ತವಾದ ತಾರಕಾಕಾರವಾದ ಲಿಂಗದೇಹವು, ಮುಂದೆ ಸ್ಥೂಲದೇಹ ಸಂಜ್ಞೆಯನ್ನು ಹೊಂದತಕ್ಕುದಾಗಿರುವ ಆಕಾರವನ್ನು ಭಾವನೆಮಾಡುತ್ತದೆ; ಬಳಿಕ, ಚಿತ್ತವು ಭಾವನಾಬಲದಿಂದ ಚೇತನೀಯಪದಾರ್ಥರೂಪವನ್ನು ಹೊಂದುವಂತೆ—ಆ ಸ್ಥೂಲದೇಹಭಾವನಾಬಲದಿಂದ ಸ್ಥೂಲದೇಹತ್ವವನ್ನು ಹೊಂದುವುದು ॥೨೩॥

ಬಳಿಕ, ಒಂದು ಪರ್ವತವು ಕನ್ನಡಿಯ ಹೊರಗಿರುವುದಾದರೂ ಅದರಲ್ಲಿ ಪ್ರತಿಫಲಿಸಿರುವಕಾರಣ ಅದರೊಳಗಿರುವಂತೆ ಕಾಣುವರೀತಿಯಲ್ಲಿ, ಆ ಬಾಹ್ಯರೂಪವನ್ನು ಬಿಟ್ಟುಬಿಟ್ಟು ಆ ಲಿಂಗದೇಹದೊಳಗೆ ಅಂತರ್ಗತನಾಗಿರುವಂತೆ ಕಾಣುವನು ॥೨೪॥

ಮತ್ತು, ನಮ್ಮ ದೇಹವು ಸರ್ವತ್ರಸಂಚರಿಸತಕ್ಕ ಶಕ್ತಿಯುಳ್ಳದಾಗಿದ್ದರೂ ಬಾವಿಯೊಳಗೆ ಇರುವಾಗ ನಿರ್ಬಂಧದಿಂದ ಅಷ್ಟುಮಾತ್ರದಲ್ಲಿರುವಂತೆಯೂ, ನಮ್ಮಬಾಯಿಂದ ಹೊರಡುವ ಮಾತು ಸರ್ವತ್ರ ಪ್ರಸರಿಸತಕ್ಕ ಶಕ್ತಿಯುಳ್ಳುದಾದರೂ ಹುಡುಗರು ಆಟಕ್ಕಾಗಿ ಮಾಡಿಕೊಂಡಿರುವ ಕಾಗದದಕೊಳವಿಯೊಳಗೆ ಉಚ್ಚರಿಸಿದಾಗ ಅದರೊಳಗೆ ಮಾತ್ರವೇ ಇರುವಂತೆಯೂ, ನಮ್ಮ ಜ್ಞಾನವು ಸರ್ವತ್ರ ಪ್ರಸರಿಸತಕ್ಕುದಾಗಿದ್ದರೂ ಸ್ವಪ್ನಸಂಕಲ್ಪಕಾಲಗಳಲ್ಲಿ ಆಯಾ ವಿಷಯಗಳಲ್ಲಿಮಾತ್ರವೇ ಇರುವಂತೆಯೂ, ಜೀವನು ಸರ್ವತ್ರ ವ್ಯಾಪಿಸತಕ್ಕವನಾದರೂ ಅಣುವಾಗಿರುವ ಆ ತೇಜಃಕಣರೂಪದಲ್ಲಿರುವಂತೆ ತಿಳಿಯುವನು ॥೨೫॥

ಈ ಜೀವನು, ಸ್ವಸ್ವರೂಪವಾದ ತಾರಕಾಕಾರದೊಳಗಿದ್ದುಗೊಂಡು ತಾನು ಆಯಾ ರೀತಿಯಾಗಿ ತಿಳಿದುಕೊಳ್ಳುತ್ತಾನೆಯಾದರೆ, ಅದು ಅವನ ವಾಸನಾನುಗುಣವಾಗಿ ಬುದ್ಧಿ ಚಿತ್ತ ಇತ್ಯಾದಿ ಜ್ಞಾನಸತ್ತಾರೂಪವಾಗಿ ಕಾಣುವುದು. ವಾಸ್ತವ್ಯವಾಗಿಯಾದರೋ ಜ್ಞಾನಸತ್ತಾರೂಪವಾಗಿಯೇ ಇರುವುದು ॥೨೬॥

ಜೀವಾಕಾಶಃ ಸ್ವತಸ್ತತ್ರ ತಾರಾಕಾಶಕೋಶಗಮ್ ।
ಪ್ರೇಕ್ಷೇಹಮಿತಿ ಭಾವೇನ ದ್ರಷ್ಟುಂ ಪ್ರಸರತೀವ ಖೇ ॥೨೭॥
ತತೋ ರನ್ಧ್ರದ್ವಯೇನೈವ ಭಾವಿಬಾಹ್ಯಾಭಿಧಂ ಪುನಃ ।
ಯೇನ ಪಶ್ಯತಿ ತನ್ನೇತ್ರಯುಗಂ ನಾಮ್ನಾ ಭವಿಷ್ಯತಿ ॥೨೮॥
ಯೇನ ಸ್ಪೃಶತಿ ಸಾ ಸೈವ ತ್ವಕ್ ಯಚ್ಛೃಣೋತಿ ಶ್ರುತಿಸ್ತು ಸಾ ।
ಯೇನ ಜಿಘ್ರತಿ ತದ್ಘ್ರಾಣಂ ಸ ಸ್ವಮಾತ್ಮನಿ ಪಶ್ಯತಿ ॥೨೯॥
ತತ್ ತಸ್ಯ ಸ್ವದನಂ ಪಶ್ಚಾತ್ ರಸನಾ ಚೋಲ್ಲಸಿಷ್ಯತಿ ।
ಸ್ಪನ್ದತೇ ಯತ್ ಸ ತದ್ವಾಯುಃ ಚೇಷ್ಟಾ ಕರ್ಮೇನ್ದ್ರಿಯವ್ರಜಮ್ ॥೩೦॥
ರೂಪಾಲೋಕಮನಸ್ಕಾರಜಾತಮಿತ್ಯಪಿ ಭಾವಯನ್ ।
ಆತಿವಾಹಿಕದೇಹಾತ್ಮಾ ತಿಷ್ಠತ್ಯಮ್ಬರಮಮ್ಬರೇ ॥೩೧॥
ಏವಮುಚ್ಛೂನತಾಂ ತಸ್ಮಿನ್ ಭಾವಯತ್ ತೇಜಸಃ ಕಣೇ ।
ಅಸತ್ಯಾಂ ಸತ್ಯಸಙ್ಕಾಶಾಂ ಬ್ರಹ್ಮಾಸ್ತೇ ಜೀವಶಬ್ದವತ್ ॥೩೨॥

ಹೀಗೆ ಜೀವಾಕಾಶವು ಪೂರ್ವೋಕ್ತತಾರಕಾಕಾಶದೊಳಗಿರುವುದನ್ನು ತಾನು (ಜೀವಾಕಾಶವು) ನೋಡಬೇಕೆಂದು ಅಭಿಪ್ರಾಯಪಡುವುದರಿಂದ, ಆ ಆಕಾಶದಲ್ಲಿ ಪ್ರಸರಣೆ ಹೊಂದುವಂತಾಗುವುದು ॥೨೭॥

ಬಳಿಕ, ಬಾಹ್ಯವಾದ ನಾಮಧೇಯವನ್ನು ಮುಂದೆ ಹೊಂದಲು ಸಿದ್ಧವಾಗಿರುವ ಪದಾರ್ಥವನ್ನು ಯಾವ ರಂಧ್ರಯುಗ್ಮದಿಂದ ನೋಡುವನೋ, ಅದು ನೇತ್ರಯುಗ್ಮವೆಂಬ ಹೆಸರನ್ನು ಪಡೆಯುವುದು ॥೨೮॥

ಯಾವುದರಿಂದ ಸ್ಪರ್ಶನಮಾಡುವನೋ, ಅದು ತ್ವಗಿಂದ್ರಿಯವೆನ್ನಿಸುವುದು; ಯಾವುದು ಕೇಳುವುದೋ, ಅದು ಶ್ರೋತ್ರೇಂದ್ರಿಯವೆನ್ನಿಸುವುದು; ಯಾವುದರಿಂದ ಆಘ್ರಾಣಿಸುವನೋ, ಅದು ಘ್ರಾಣೇಂದ್ರಿಯವು; ಅವನು ತನ್ನನ್ನು ತನ್ನೊಳಗೆ ತಾನೇ ನೋಡಿಕೊಳ್ಳುವುದಾವುದುಂಟೋ, ಅದು ಅವನ ರಸನೇಂದ್ರಿಯವು; ಅನಂತರ ನಾಲಿಗೆಯು ಉಲ್ಲಾಸಪಡುವುದು; ಅವನು ಸ್ವಲ್ಪ ಚಲಿಸುವುದಾವುದುಂಟೋ, ಅದು ವಾಯುವು; ಅವನ ವ್ಯಾಪಾರವೇ ಕರ್ಮೇಂದ್ರಿಯಸಮುದಾಯವು ॥೨೯-೩೦॥

ಈ ರೀತಿಯಾಗಿ ಅವನು ಬಾಹ್ಯಪದಾರ್ಥದರ್ಶನವನ್ನೂ ಆಂತರಜ್ಞಾನವನ್ನೂ ಭಾವನೆಮಾಡುತ, ಸೂಕ್ಷ್ಮದೇಹರೂಪನಾಗಿ, ಸ್ವಯಂ ಆಕಾಶರೂಪನಾಗಿ ಆಕಾಶದಲ್ಲಿಯೇ ಇರುವನೆಂದು ತಿಳಿಯಬೇಕು ॥೩೧॥

ಹೀಗೆ ಆ ಪರಬ್ರಹ್ಮವು, ಪೂರ್ವೋಕ್ತವಾದ ತೇಜಃಕಣದಲ್ಲಿ, ಅಸತ್ಯವಾಗಿದ್ದರೂ ಸತ್ಯದಂತಿರುವ ಸ್ಥೂಲಭಾವಪ್ರಾಪ್ತಿಯನ್ನು ಭಾವನೆಮಾಡುತ, ಜೀವನೆಂಬಶಬ್ದಕ್ಕೆ ವಿಷಯವಾಗಿ ಇರುವುದು ॥೩೨॥

ಇತ್ಥಂ ಸ ಜೀವಶಬ್ದಾರ್ಥಃ ಕಲನಾಕುಲತಾಂ ಗತಃ ।
ಆತಿವಾಹಿಕದೇಹಾತ್ಮಾ ಚಿತ್ತದೇಹಾಮ್ಬರಾಕೃತಿಃ ॥೩೩॥
ಸ್ವಕಲ್ಪನಾನ್ತ ಆಕಾರಂ ಅಣ್ಡಂ ಸಂಸ್ಥಂ ಪ್ರಪಶ್ಯತಿ ।
ಕಶ್ಚಿಜ್ಜಲಗತಂ ವೇತ್ತಿ ಕಶ್ಚಿತ್ ಸರ್ವಾತ್ಮಸ್ವರೂಪಿಣಮ್ ॥೩೪॥
ಭಾವಿಬ್ರಹ್ಮಾಣ್ಡಕಲನಾಂ ಪಶ್ಯತ್ಯನುಭವತ್ಯಪಿ ।
ಆತ್ಮಗರ್ಭಗೃಹಂ ಚಿತ್ತಾತ್ ಯಥಾಸಙ್ಕಲ್ಪಮಾತ್ಮನಃ ॥೩೫॥
ದೇಶಕಾಲಕ್ರಿಯಾದ್ರವ್ಯಕಲ್ಪನಾವೇದನಂ ಸ ತತ್ ।
ಭಾವಯಞ್ಛಬ್ದನಿರ್ಮಾತಾ ಶಬ್ದೈರ್ಬಧ್ನಾತಿ ಕಲ್ಪಿತೈಃ ॥೩೬॥
ಆತಿವಾಹಿಕದೇಹೋಽಸೌ ಇತ್ಯಸತ್ಯಜಗದ್ಭ್ರಮೇ ।
ಅಸತ್ಯಏವ ಕಚತಿ ಸ್ವಪ್ನೇ ಖೇಽಡ್ಡಯನಂ ಯಥಾ ॥೩೭॥
ಇತ್ಯನುತ್ಪನ್ನಏವಾಸೌ ಸ್ವಯಮ್ಭೂಃ ಸ್ವಯಮುತ್ಥಿತಃ ।
ಆತಿವಾಹಿಕದೇಹಾತ್ಮಾ ಪ್ರಭುರಾದ್ಯಃ ಪ್ರಜಾಪತಿಃ ॥೩೮॥
ಏತಸ್ಮಿನ್ನಪಿ ಸಮ್ಪನ್ನೇ ಬ್ರಹ್ಮಾಣ್ಡಾಕಾರಿಣಿ ಭ್ರಮೇ ।
ನ ಕಿಂಚಿದಪಿ ಸಮ್ಪನ್ನಂ ನ ಚ ಜಾತಂ ನ ದೃಶ್ಯತೇ ॥೩೯॥

ಹೀಗೆ ಆ ಜೀವನೆಂಬ ಶಬ್ದಕ್ಕೆ ಅರ್ಥಭೂತನಾದ ಆ ಬ್ರಹ್ಮನು, ಸೂಕ್ಷ್ಮದೇಹರೂಪನಾಗಿ, ಚಿತ್ತದೇಹಾಕಾಶವೇ ಭಾವನೆಯಿಂದ ಸ್ಥೂಲದೇಹವಾಗತಕ್ಕವನಾಗಿ, ಕಲ್ಪನಾ ವಿಷಯನಾಗುವನು ॥೩೩॥

ಬಳಿಕ, ಪೂರ್ವೋಕ್ತವಾದ ತೇಜಃಕಣವೊದಲು ಬಾಹ್ಯವಿಷಯಾಂತವಾದ ಕಲ್ಪನೆಯ ಕೊನೆಯಲ್ಲಿ ಈ ಬ್ರಹಾಂಡವಿರುವುದನ್ನು ನೋಡುವನು. ಇದು ಜಲಾವರಣಾಂತರ್ಗತವಾದುದೆಂದೂ, ಚತುರ್ಮುಖಬ್ರಹ್ಮರೂಪವಾದುದೆಂದೂ ಎರಡುಪಕ್ಷಗಳುಂಟು ॥೩೪॥

ಅವನು, ಮುಂದೆ ಸಂಭವಿಸುವ ಬ್ರಹ್ಮಾಂಡಕಲ್ಪನೆಯನ್ನು ನೋಡುತಲೂ ಅನುಭವಿಸುತಲೂ ಇರುವನು. ತನ್ನ ಆತ್ಮನೆಂದು ತಿಳಿಯಲ್ಪಟ್ಟಿರುವ ಚಿತ್ತದದೆಸೆಯಿಂದ, ಆಯಾಸಂಕಲ್ಪಾನುಗುಣವಾಗಿ, ತನ್ನ ಅಂತರ್ಗತವಾಗಿರುವಂತೆ, ದೇಶ ಕಾಲ ಕ್ರಿಯಾ ದ್ರವ್ಯ ಇವುಗಳ ಕಲ್ಪನಜ್ಞಾನವನ್ನು ಭಾವನೆಮಾಡುತ, ಅವವಕ್ಕೆ ತಕ್ಕ ಶಬ್ದಗಳನ್ನು ನಿರ್ಮಾಣ ಮಾಡುತ, ಸ್ವಕಲ್ಪಿತವಾದ ಶಬ್ದಗಳಿಂದ ಅವುಗಳನ್ನು ನಿಯಮಿಸುವನು ॥೩೫—೩೬॥

ಸ್ವಪ್ನದಲ್ಲಿ ಆಕಾಶದೊಳಗೆ ಹಾರುವುದನ್ನು ನೋಡುವೆವಲ್ಲವೆ! ಈರೀತಿಯಾಗಿ ಅಸತ್ಯವಾದ ಈ ಸೂಕ್ಷ್ಮದೇಹವು ಅಸತ್ಯವಾದ ಜಗದ್ಭ್ರಾಂತಿಯಲ್ಲಿ ಕಾಣುತಿರುವುದು ॥೩೭॥

ಹೀಗೆ ಸೂಕ್ಷ್ಮದೇಹಸ್ವರೂಪನಾಗಿ ಸರ್ವಕರ್ತೃವಾದ ಸ್ವಯಂಭುವಾದ ಆದ್ಯಬ್ರಹ್ಮನು, ಪರಮಾರ್ಥದಶೆಯಲ್ಲಿಉತ್ಪತ್ತಿಯಿಲ್ಲದವನಾಗಿಯೇ, ತಾನುಉದ್ಭವಿಸಿರುವನು॥೩೮॥

ಈ ರೀತಿಯಾಗಿ ಈ ಬ್ರಹ್ಮಾಂಡವೆಂಬ ಭ್ರಮೆಯು ಸಂಭವಿಸಿದ್ದರೂ, ಯಾವುದೂಸಂಭವಿಸಿದಂತೆಯೇ ಇಲ್ಲ; ಯಾವುದೂ ಹುಟ್ಟಿಯೂ ಇಲ್ಲ; ಯಾವುದೂಕಾಣಿಸುವುದೂಇಲ್ಲ॥೩೯॥

ತದ್ಬ್ರಹ್ಮಾಕಾಶಮಾಕಾಶಂ ಏವ ಸ್ಥಿತಮನಸ್ತಕಮ್ |
ಸಙ್ಕಲ್ಪನಗರಾಕಾರಂ ಏತತ್ ಸಪದಿ ನೈವ ಸತ್ ||೪೦||
ಅನಿರ್ಮಿತಮರಾಗಂ ಚ ಏತದ್ವೈ ಚಿತ್ತಮುತ್ಥಿತಮ್ |
ಅಕೃತಂ ಚಾನುಭೂತಂ ಚ ನಸತ್ಯಂ ಸತ್ಯವತ್ ಸ್ಥಿತಮ್ ||೪೧||
ಮಹಾಕಲ್ಪೇ ವಿಮುಕ್ತತ್ವಾತ್ ಬ್ರಹ್ಮಾದೀನಾಮಸಂಶಯಮ್ |
ಸ್ಮೃತಿರ್ನ ಪ್ರಾಕ್ತನೀ ಕಾಚಿತ್ ಕಾರಣಂ ವಾ ಸ್ವಯಮ್ಭುವಃ |೪೨|
ತೇನ ಯಾದೃಕ್ ಸ್ವಯಮ್ಭೂಃ ಸ್ಯಾತ್ ತಾದೃಕ್ ತಜ್ಜಮಿದಂ ಸ್ಮೃತಮ್|
ಅನಾದ್ಯನುಭವಸ್ತ್ವಿತ್ಥಂ ಯೋತ್ರಾಸ್ತ್ಯವನಿಕಾದಿಕೇ ||೪೩||
ಸ್ವಪ್ನಾನುಭೂತಂ ಪೃಥ್ವ್ಯಾದಿ ಪ್ರಬೋಧೇ ಯಾದೃಶಂ ಭವೇತ್ |
ಸ್ಮೃತಃ ಸ ವ್ಯೋಮಮಾತ್ರಾತ್ಮಾ ಸರ್ವದೈವ ಸ್ಮೃತಂ ಜಗತ್ ||೪೪||
ಯತ್ರಯತ್ರ ಯಥಾ ತೋಯೇ ದ್ರವತ್ವಂ ನಾಮ ಭಿದ್ಯತೇ |
ತತ್ರತತ್ರ ತಥಾ ನಾನ್ಯಃ ಸರ್ಗೋಽಸ್ತಿ ಪರಮಾತ್ಮನಿ ||೪೫||

ಆಕಾಶದಂತೆ ಸರ್ವವ್ಯಾಪಿಯಾಗಿ ಸರ್ವಶೂನ್ಯವಾಗಿ ಅನಂತವಾಗಿರುವ ಆ ಬ್ರಹ್ಮಾಕಾಶವೊಂದೇ ಇರುವುದು. ಈ ದೃಶ್ಯವು ಸಂಕಲ್ಪನಗರದಂತೆ ಕಂಡಕ್ಷಣವೇ ಅಸತ್ತಾಗಿಬಿಡುವುದು ||೪೦||

ಬ್ರಹ್ಮಾಂಡವೆಂಬ ಈ ಚಿತ್ರವು, ಒಬ್ಬರಿಂದ ಬರೆಯಲ್ಪಡದೆಯೂ ಬಣ್ಣವಿಲ್ಲದೆಯೂ ಉತ್ಪನ್ನವಾಗಿರುವುದು ; ಇದು ನಿರ್ಮಿತವಲ್ಲದಿದ್ದರೂ ಅನುಭವಗೋಚರವಾಗಿರುವುದು ; ಸತ್ಯವಲ್ಲದಿದ್ದರೂ ಸತ್ಯದಂತಿರುವುದು ||೪೧||

ಹೀಗೆ ಈ ಜಗತ್ತಿಗೆ ಪ್ರತ್ಯಕ್ಷವಾದ ಉತ್ಪತ್ತಿಸಾಮಗ್ರಿಯೊಂದೂ ಇಲ್ಲವೆಂದು ಸ್ಪಷ್ಟವಾಯ್ತಷ್ಟೆ! ಪ್ರತ್ಯಕ್ಷವಲ್ಲದ ಸಾಮಗ್ರಿಯನ್ನು ಕಲ್ಪಿಸೋಣವೆಂದರೆ, ಅದೂ ಸಾಧ್ಯವಲ್ಲ; ಮಹಾಪ್ರಳಯದಲ್ಲಿ ಬ್ರಹ್ಮಾದಿಗಳೂ ಮುಕ್ತರಾಗಿಬಿಡುವುದರಿಂದ, ಆದ್ಯಬ್ರಹ್ಮನಿಗೆ ಪ್ರಾಕ್ತನಸ್ಮೃತಿಯೂ ಕಾರಣವಾಗುವುದಿಲ್ಲ ||೪೨||

ಅದುಕಾರಣ, ಸ್ವಯಂಭುವು ಎಂಥವನಾಗುವನೋ, ಅವನಿಂದ ಹುಟ್ಟಿದ ಈ ಜಗತ್ತೂ ಅಂತಹುದೇ ಎಂದು ದೊಡ್ಡವರೆಲ್ಲರೂ ಹೇಳುವರು. ಆದರೆ, ಈ ಭೂಮಿಮುಂತಾದುದರಲ್ಲಿ ಅನಾದಿಯಾದ ಅನುಭವವಿರುವುದು ಹೇಗೆಂದರೆ:—ಈಪೃಥಿವ್ಯಾದಿಗಳು ಸ್ವಪ್ನಕಾಲದಲ್ಲಿ ಅನುಭವವಿಷಯವಾಗಿದ್ದು ಪ್ರಬುದ್ಧವಸ್ಥೆಯಲ್ಲಿ ಹೇಗೆ ಅಸತ್ಯವಾಗುವುವೋ, ಹಾಗೆ ಈ ಪ್ರಬುದ್ಧಾವಸ್ಥೆಯಲ್ಲಿ ಸತ್ಯವೆಂದು ಅನುಭವವಿಷಯವಾದರೂ, ಪರಮಾರ್ಥದೃಷ್ಟಿಯಲ್ಲಿ ಅಸತ್ಯವೆಂದೇ ನಿಶ್ಚಯವುಂಟಾಗುವುದು. ಒಂದು ಪದಾರ್ಥವನ್ನು ಹಿಂದೆ ಯಾವಾಗಲೋ ಒಂದುವೇಳೆ ಸ್ಮರಿಸಿಕೊಂಡಿದ್ದರೆ, ಅದು ಈಗ ಕೇವಲ ಆಕಾಶಮಾತ್ರರೂಪವಾಗಿರುವುದಲ್ಲವೆ! ಹೀಗೆ ಆ ಸ್ವಯಮ್ಭುವು ಆಕಾಶಮಾತ್ರರೂಪನಾಗಿರುವನು; ಈ ಜಗತ್ತೂ ಹಾಗೆಯೇ ಆಕಾಶಮಾತ್ರರೂಪವಾಗಿರುವುದು ||೪೩—೪೪||

ಯಾವಯಾವಕಡೆ ಹೋದರೂ ನೀರಿನಲ್ಲಿ ದ್ರವತ್ವವು ಹೇಗೆ ಭೇದಿಸುವುದಿಲ್ಲವೋ, ಹಾಗೆಯೇ ಪರಮಾತ್ಮನಲ್ಲಿ ಬೇರೆಯಾದ ಸೃಷ್ಟಿಯಿಲ್ಲ ||೪೫||

ಸೃಷ್ಟಿರೇವಮಿಯಂ ಪ್ರೌಢಾ ಸಮುಪೈವ ತ್ವಯಂ ಸ್ಥಿತಃ ।
ಭಾತ್ಯೇವಂ ನಾಮ ಬ್ರಹ್ಮಾಣ್ಡಂ ವ್ಯೋಮಾತ್ಮೈವಾತಿನಿರ್ಮಲಮ್ ॥೪೬॥
ದೃಶ್ಯಮೇವಮಿದಂ ಶಾನ್ತಂ ಸ್ವಾತ್ಮನಿರ್ಮಿತವಿಭ್ರಮಮ್ ।
ನಿರಾಧಾರಂ ನಿರಾಧೇಯಂ ಅದ್ವೈತಂ ಚೈಕ್ಯವರ್ಜಿತಮ್ ॥೪೭॥
ಜಗತ್ಸಂವಿದಿ ಜಾತಾಯಾಂ ಅಪಿ ಜಾತಂ ನ ಕಿಂಚನ ।
ಪರಮಾಕಾಶಮಾಶೂನ್ಯಂ ಅಚ್ಛಮೇವ ವ್ಯವಸ್ಥಿತಮ್ ॥೪೮॥
ಸರ್ವಸಂಸಾರತಾ ನಾಸ್ತಿ ಯದೇವ ತದವಸ್ಥಿತಮ್ ।
ನಾಧೇಯಂ ತತ್ರ ನಾಧಾರೋ ನ ದೃಶ್ಯಂ ನ ಚ ದ್ರಷ್ಟೃತಾ ॥೪೯॥
ಬ್ರಹ್ಮಾಣ್ಡಂ ನಾಸ್ತಿ ನ ಬ್ರಹ್ಮಾ ನ ಚ ವೈತಣ್ಡಿಕಾ ಕ್ವಚಿತ್ ।
ನ ಜಗನ್ನಾಪಿ ಜಗತೀ ಶಾನ್ತಮೇವಾಖಿಲಂ ಸ್ಥಿತಮ್ ॥೫೦॥
ಬ್ರಹ್ಮೈವ ಕಚತಿ ಸ್ವಚ್ಛಂ ಇತ್ಥಮಾತ್ಮಾನಮಾತ್ಮನಿ ।
ಚಿತ್ತ್ವಾದ್ದ್ರವತ್ವಾತ್ ಸಲಿಲಂ ಇವಾವರ್ತಮಯಾತ್ಮನಿ ॥೫೧॥
ಅಸದೇವೇದಮಾಭಾತಿ ಸದಿವೇಹಾನುಭೂಯತೇ ।

ಈ ರೀತಿಯಾಗಿ ಈ ಸೃಷ್ಟಿಯು ರೂಢಮೂಲವಾಗಿರುವುದು. ಆ ಬ್ರಹ್ಮನಾದರೋ ಈ ಸೃಷ್ಟಿಜನ್ಯವಾದ ವೈಷಮ್ಯವಿಲ್ಲದೆಯೇ ಇರುವನು. ಹೀಗೆಯೇ ಈ ಬ್ರಹ್ಮಾಂಡವೂ ಕೂಡ ಅತಿನಿರ್ಮಲವಾಗಿ ಆಕಾಶರೂಪವಾಗಿಯೇ ಪ್ರಕಾಶಹೊಂದುವುದು ॥೪೬॥

ಹೀಗೆ ಈ ದೃಶ್ಯವು ಶಾಂತವಾಗಿಯೂ, ತನ್ನಲ್ಲಿಯೇ ಭ್ರಮೆಯನ್ನು ಕಲ್ಪಿಸಿಕೊಂಡಿರತಕ್ಕದಾಗಿಯೂ, ಆಧಾರಾಧೇಯಗಳೊಂದೂ ಇಲ್ಲದುದಾಗಿಯೂ, ಪದಾರ್ಥಾಂತರರಹಿತವಾಗಿಯೂ, ಕೊನೆಗೆ ಏಕತ್ವರೂಪಸಂಖ್ಯೆಯಿಂದಲೂ ವರ್ಜಿತವಾಗಿಯೂ ಇರುವುದು॥೪೭॥

ಜಗತ್ತೆಂಬ ಭ್ರಾಂತಿಯುಂಟಾದರೂ ಯಾವುದೊಂದೂ ಹುಟ್ಟಿದಂತಾಗಲಿಲ್ಲ. ಆ ಪರಮಾಕಾಶವು ಸರ್ವಶೂನ್ಯವಾಗಿ ನಿರ್ಮಲವಾಗಿಯೇ ಇರುವುದು ॥೪೮॥

ಹೀಗೆ ಸರ್ವಸಂಸಾರಸ್ಥಿತಿಯೂ ಇಲ್ಲದಿರುವಕಾರಣ, ಅದರಲ್ಲಿ ಆಧೇಯವೂ ಇಲ್ಲ; ಆಧಾರವೂ ಇಲ್ಲ; ದೃಶ್ಯವೂ ಇಲ್ಲ; ದ್ರಷ್ಟೃತ್ವವೂ ಇಲ್ಲ; ಬಹ್ಮಾಂಡವೂ ಇಲ್ಲ; ಚತುರ್ಮುಖಬ್ರಹ್ಮನೂ ಇಲ್ಲ; ನಾನಾವಿಧವಾದ ವಿಕಲ್ಪವಾದಗಳೂ ಇಲ್ಲ; ಜಗತ್ತೂ ಇಲ್ಲ; ಭೂಮಿಯೂ ಇಲ್ಲ. ಸಮಸ್ತವೂ ಶಾಂತವಾದುದಾಗಿಯೇ ಇರುವುದು ॥೪೯–೫೦॥

ಜಲವು ತನ್ನಲ್ಲಿ ದ್ರುವತ್ವವಿರುವುದರಿಂದ ಆವರ್ತ (ಸುಳಿ) ರೂಪವಾಗಿ ತೋರುವಂತೆ, ನಿರ್ಮಲವಾದ ಪರಬ್ರಹ್ಮವು ಜ್ಞಾನರೂಪವಾಗಿರುವುದರಿಂದ ತನ್ನಲ್ಲಿ ತನ್ನಸ್ಸೇ ಈ ಜಗತ್ತೆಂದು ತಿಳಿಯುವುದು ॥೫೧॥

ಸ್ವಪ್ನದಲ್ಲಿ ತನ್ನ ಮರಣವನ್ನು ತಾನು ನೋಡುವುದಿಲ್ಲವೆ! ಆ ಸ್ವಪ್ನವು ಮೊದಲು ಇರುವುದಿಲ್ಲ; ಮಧ್ಯದಲ್ಲಿ ಸ್ವಲ್ಪ ಹೊತ್ತು ಇರುವಂತೆ ಅನುಭವಕ್ಕೆ ಬರುತ್ತದೆ; ಕೊನೆಯಲ್ಲಿ ಅದು ನಾಶಹೊಂದುವಾಗಲೂ ಅಸತ್ಯವಾಗಿಯೇ ಇರುತ್ತದೆ. ಹೀಗೆ ಈ ಜಗತ್ತು ಕೂಡ ಆದಿಯಲ್ಲಿ ಅಸತ್ಯವಾಗಿಯೇ ಪ್ರಕಾಶಹೊಂದುವುದು; ಅನುಭವಕಾಲದಲ್ಲಿ

ವಿನಶ್ಯತ್ಯಸದೇವಾನ್ತೇ ಸ್ವಪ್ನೇ ಸ್ವಮರಣಂ ಯಥಾ ||೫೦||
ಅಥವಾ ಸ್ವಸ್ವರೂಪತ್ವಾತ್ ಸದೇವೇದಮನಾಮಯಮ್ |
ಅಖಣ್ಡಿತಮನಾದ್ಯನ್ತಂ ಜ್ಞಾನಮಾತ್ರಾಮ್ಬರೋದರಮ್ ||೫೨||
ಆಕಾಶಏವ ಪರಮೇ ಪ್ರಥಮಃ ಪ್ರಜೇಶೋ
ನಿತ್ಯಂ ಸ್ವಯಂ ಕಚತಿ ಶೂನ್ಯತಯಾ ಸಮೋ ಯಃ |
ಸ ಹ್ಯಾತಿವಾಹಿಕವಪುರ್ನ ತು ಭೂತರೂಪೀ
ಪೃಥ್ವ್ಯಾದಿ ತೇನ ನ ಸದಸ್ತಿ ಯಥಾ ನ ಜಾತಮ್ ||೫೪||

ಇತಿ ಉತ್ಪತ್ತಿಪ್ರಕರಣೇ ಸ್ವಯಮ್ಭೂತ್ಪತ್ತಿವರ್ಣನಂ ನಾಮ
ತ್ರಯೋದಶಃ ಸರ್ಗಃ.

ಮಾತ್ರ ಸತ್ಯದಂತೆ ತೋರುತ್ತಿರುವುದು; ಇದು ನಾಶಕಾಲದಲ್ಲಿಯೂ ಅಸತ್ಯವೆಂಬುದಾಗಿಯೇ ನಿಶ್ಚಯವಾಗುವುದು ||೫೦||

ಅಥವಾ ಈ ಪ್ರಪಂಚವು ಪರಮಾತ್ಮರೂಪವಾಗಿರುವುದರಿಂದ, ನಿರುಪಾಧಿಕವಾಗಿ ಸತ್ಯವಾದುದಾಗಿಯೂ — ಅಪರಿಚ್ಛಿನ್ನವಾಗಿಯೂ ಅನಾದ್ಯಂತವಾಗಿಯೂ—ಕೇವಲ ಜ್ಞಾನಾಕಾಶಮಾತ್ರವಾಗಿಯೂ ಇರುವುದು ||೫೨||

ಈರೀತಿಯಾಗಿ ಶೂನ್ಯಸಮನಾಗಿರುವ ಯಾವ ಆದ್ಯಪ್ರಜಾಪತಿಯು ನಿತ್ಯವೂ ತಾನು ಆ ಪರಮಾಕಾಶದಲ್ಲಿ ಪ್ರಕಾಶಿಸುತ್ತಿರುವನೋ, ಅವನು ಸೂಕ್ಷ್ಮಶರೀರರೂಪನಲ್ಲದೆ, ಸ್ಥೂಲರೂಪನಲ್ಲ. ಅದುಕಾರಣ, ಎಂದಿಗೂ ಹುಟ್ಟದಿರುವ ಶಶಶೃಂಗಾದಿಗಳಂತೆ--ಪೃಥಿವಿಮುಂತಾದುದೊಂದೂ ಸದ್ರೂಪವಲ್ಲ ||೫೪||

ಇದು ಉತ್ಪತ್ತಿಪ್ರಕರಣದಲ್ಲಿ ಸ್ವಯಂಭೂತ್ಪತ್ತಿವರ್ಣನವೆಂಬ
ಹದಿಮೂರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಚತುರ್ದಶಃ ಸರ್ಗಃ.

ಶ್ರೀ ವಸಿಷ್ಠಉವಾಚ.—

ಇತ್ಥಂ ಜಗದಹನ್ತಾದಿ ದೃಶ್ಯಜಾತಂ ನ ಕಿಂಚನ ।
ಅಜಾತತ್ವಾಚ್ಚ ನಾಸ್ತ್ಯೇವ ಯಚ್ಚಾಸ್ತಿ ಪರಮೇವ ತತ್ ॥೧॥
ಪರಮಾಕಾಶಮೇವಾದೌ ಜೀವತಾಂ ಚೇತತಿ ಸ್ವಯಮ್ ।
ನಿಸ್ಸ್ಪನ್ದಾಮ್ಭೋಧಿಕುಹರೇ ಸಲಿಲಂ ಸ್ಪನ್ದತಾಮಿವ ॥೨॥
ಆಕಾಶರೂಪಮುಜಹತ್ ಏವಂ ವೇತ್ತೀವ ಹೃದ್ಯತಾಮ್ ।
ಸ್ವಪ್ನಸಙ್ಕಲ್ಪಶೈಲಾದೌ ಇವ ಚಿದ್ವೃತ್ತಿರಾನ್ತರೀ ॥೩॥
ಪೃಥ್ವ್ಯಾದಿರಹಿತೋ ದೇಹೋ ಯೋ ವಿರಾಡಾತ್ಮಕೋ ಮಹಾನ್ ।
ಆತಿವಾಹಿಕಏವಾಸೌ ಚಿನ್ಮಾತ್ರಶ್ಚ ನಭೋಮಯಃ ॥೪॥

ಉತ್ಪತ್ತಿಪ್ರಕರಣದಲ್ಲಿ ಹದಿಮೂರನೆಯ ಸರ್ಗವು.

ಪ್ರಾಗ್ವರ್ಣಿತೇ ಜೀವಭಾವೇ ಪರಿಚ್ಛೇದಾದಿಸಂಶಯಾನ್ ।
ಯುಕ್ತ್ಯಾ ನಿರಸ್ಯ ಬ್ರಹ್ಮೈಕ್ಯಂ ಶಿಷ್ಟಮತ್ರಾನುವರ್ಣ್ಯತೇ ॥

ಹಿಂದೆ ವರ್ಣಿಸಲ್ಪಟ್ಟಿರುವ ಜೀವಭಾವದಲ್ಲಿ ಪರಿಚ್ಛೇದ ಮೊದಲಾದ ಸಂಶಯಗಳನ್ನು ಯುಕ್ತಿಯಿಂದ ಪರಿಹರಿಸಿ ಅವಶಿಷ್ಟವಾದ ಪರಬ್ರಹ್ಮೈಕತ್ವವು ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಮತ್ತೆ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ ! ರಾಮ ! ಪೂರ್ವೋಕ್ತರೀತಿಯಾಗಿ ಈ ಜಗತ್ತು ಅಹಂಕಾರ ಇತ್ಯಾದಿಯೊಂದೂ ಇಲ್ಲ; ಇದು ಉತ್ಪತ್ತಿಯೇ ಇಲ್ಲವಾದುದರಿಂದ ನಿಶ್ಚಯವಾಗಿಯೂ ಇಲ್ಲವೇ ಇಲ್ಲ. ಯಾವುದು ಸತ್ಯವಾಗಿ ಇರುವುದೋ, ಅದು ಆ ಪರಬ್ರಹ್ಮವೇ ॥೧॥

ನಿಶ್ಚಲವಾದ ಸಮುದ್ರಮಧ್ಯದಲ್ಲಿರುವ ನೀರು ಸ್ವಲ್ಪ ಚಲನೆಹೊಂದುವಂತೆ, ಆ ಪರಬ್ರಹ್ಮಾಕಾಶವು ತನ್ನ ಆಕಾಶರೂಪವನ್ನು ಬಿಡದೆಯೇ, ತಾನು ಜೀವನಾಗಿದೇನೆಂಬ ಭಾವನೆಯುಳ್ಳದಾಗುವುದು. ಆಗ ಸಂಕಲ್ಪಾತ್ಮಕವಾದ ಚಿದ್ವೃತ್ತಿಯು, ಸ್ವಪ್ನ ಸಂಕಲ್ಪಶೈಲ ಮುಂತಾದುವುಗಳಲ್ಲಿಯೋಪಾದಿಯಲ್ಲಿ, ಮುಂಪೆ ಹೇಳುವರೀತಿಯಾಗಿ ಪ್ರೇಮಾಸ್ಪದತ್ವವನ್ನು ಹೊಂದುವಂತಿರುವುದು ॥೨—೩॥

ಪೃಥಿವಿ ಮುಂತಾದುವುಗಳಿಂದ ರಹಿತವಾದ ಮಹತ್ತಾದ ಯಾವ ವಿರಾಡ್ರೂಪಶರೀರವುಂಟೋ, ಇದು—ಚಿನ್ಮಾತ್ರವಾಗಿ ನಿರ್ಮಲಾಕಾಶರೂಪವಾಗಿರುವ ಸೂಕ್ಷ್ಮಶರೀರವೇಯೇ ॥೪॥

ಅಕ್ಷಯಃ ಸ್ವಪ್ನಶೈಲಾಭಃ ಸ್ಥಿರಸ್ವಪ್ನಪುರೋಪಮಃ ।
ಚಿತ್ತಕೃತ್ಸ್ಥಿರಚಿತ್ತಸ್ಥಚಿತ್ರಸೈನ್ಯಸಮಾಕೃತಿಃ ॥೫॥
ಅನಿಖಾತಮಹಾಸ್ತಮ್ಭಪುತ್ರಿಕೌಘಸಮೋಪಮಃ ।
ಬ್ರಹ್ಮಾಕಾಶೇಽನಿಖಾತಾತ್ಮಾ ಸುಸ್ತಮ್ಭೇ ಸಾಲಭಞ್ಜಿಕಾ ॥೬॥
ಆದ್ಯಃ ಪ್ರಜಾಪತಿಃ ಪೂರ್ವಂ ಸ್ವಯಮ್ಭೂರಿತಿ ವಿಶ್ರುತಃ ।
ಪ್ರಾಕ್ತನಾನಾಂ ಸ್ವಕಾರ್ಯಾಣಾಂ ಅಭಾವಾದಪ್ಯಕಾರಣಃ ॥೭॥
ಮಹಾಪ್ರಳಯಪರ್ಯನ್ತೇಷ್ವಾದ್ಯಕಾಲಪಿತಾಮಹಾಃ ।
ಮುಚ್ಯನ್ತೇ ಸರ್ವಏವಾತಃ ಪ್ರಾಕ್ತನಂ ಕರ್ಮ ತೇಷು ಕಿಮ್ ॥೮॥
ಸೋಽಕುಡ್ಯಏವ ಕುಡ್ಯಾತ್ಮಾ ದೃಶ್ಯಾದೃಶ್ಯಃ ಸ್ವಯಂ ಸ್ಥಿತಃ ।
ನ ಚ ದೃಶ್ಯಂ ನ ಚ ದ್ರಷ್ಟಾ ನ ಸ್ರಷ್ಟಾ ಸರ್ವಮೇವ ಚ ॥೯॥
ಪ್ರತಿಶಬ್ದಪದಾರ್ಥಾನಾಂ ಸರ್ವೇಷಾಮೇಷಏವ ಸಃ ।
ತಸ್ಮಾದುದೇತಿ ಜೀವಾಳೀ ದೀಪಾಳೀ ದೀಪಕಾದಿವ ॥೧೦॥
ಸಙ್ಕಲ್ಪಏವ ಸಙ್ಕಲ್ಪಾತ್ ಕಿಲೈತಿ ಕ್ಷ್ಮಾದಿವಾರ್ಜಿತಃ ।

ಮತ್ತು ಈ ಶರೀರವು—ಆಶ್ರಯರಹಿತವಾಗಿ ಸ್ವಪ್ನದಲ್ಲಿ ಕಂಡ ಪರ್ವತದಂತಿರುವುದು; ಸ್ವಪ್ನದಲ್ಲಿ ಕಂಡ ಪಟ್ಟಣವು ಸ್ಥಿರವಾಗಿರುವ ಪಕ್ಷದಲ್ಲಿ ಆಗ ಅದಕ್ಕೆ ಸಮಾನವಾಗುವುದು; ಚಿತ್ರಗಾರನ ಮನಸ್ಸು ಸ್ಥಿರವಾಗಿದ್ದರೆ ಆದರಲ್ಲಿರುವ ಚಿತ್ರ ಸೈನ್ಯಗಳಿಗೆ ಸಮಾನವಾಗಿರುವುದು; ದೊಡ್ಡ ಕಂಭದಲ್ಲಿ ಇನ್ನೂ ಕೊರೆಯದಿರುವ ಪುತ್ತಳಿಗಳಿಗೂ ಅದರಂತಿರುವ ಇತರ ವಸ್ತುಗಳಿಗೂ ಸಮಾನವಾಗಿರುವುದು; ಬ್ರಹ್ಮಾಕಾಶವೆಂಬ ಸೊಗಸಾದ ಕಂಭದಲ್ಲಿ ಇನ್ನೂ ಕೊರೆಯಲ್ಪಡದಿರುವ ಪುತ್ತಳಿಯಾಗಿರುವುದು, ಹೀಗೆ ಈ ಆದ್ಯಬ್ರಹ್ಮನ ಆಧಿಭೌತಿಕ ದೇಹವು ಮಿಥ್ಯಾಭೂತವೆಂದು ತಿಳಿಯಬೇಕು ॥೫—೬॥

ಮತ್ತು, ಈ ಆದ್ಯಬ್ರಹ್ಮನು ಪೂರ್ವದಲ್ಲಿ ಸ್ವಯಂಭುವೆಂದು ಸರ್ವತ್ರ ಪ್ರಸಿದ್ಧನಾಗಿರುವನು; ಪುರಾತನವಾದ ತನ್ನ ಕರ್ಮವೊಂದೂ ಇಲ್ಲದುದರಿಂದ, ಇವನು ಕಾರಣರಹಿತನೂ ಆಗಿರುವನು ॥೭॥

ಮಹಾಪ್ರಳಯಕಾಲಾಂತಗಳಲ್ಲಿ ಸಮಸ್ತರಾದ ಆದ್ಯಬ್ರಹ್ಮರುಗಳೂ ಮುಕ್ತರಾಗಿಬಿಡುವರು; ಆದುಕಾರಣ, ಅವರಲ್ಲಿ ಪುರಾತನಕರ್ಮವಾವುದು? ॥೮॥

ಹೀಗೆ ಈ ಸ್ವಯಂಭುವು, ಗೋಡೆಯಿಲ್ಲದಿರುವ ಕನ್ನಡಿಯಲ್ಲಿ ಪ್ರತಿಫಲಿಸಿರುವ ಗೋಡೆಯಂತೆ ದೃಶ್ಯಾದೃಶ್ಯನಾಗಿರುವನು; ಇವನು—ದೃಶ್ಯವೂ ಅಲ್ಲದೆಯೂ, ದ್ರಷ್ಟೃವೂ ಅಲ್ಲದೆಯೂ ಸೃಷ್ಟಿಕರ್ತನೂ ಅಲ್ಲದೆಯೂ ಇರುವನು; ಆದರೆ ಇವನು ಸರ್ವಾತ್ಮಕನಾಗಿಯೂ ಇರುವನು ॥೯॥

ಇವನೇ ಪ್ರತಿಪದಾರ್ಥಗಳಿಗೂ ಆತ್ಮನಾಗಿರುವನು; ಸಣ್ಣ ದೀಪದದೆಸೆಯಿಂದ ದೀಪ ಸಮೂಹವುದಯಿಸುವಂತೆ, ಅವನ ದೆಸೆಯಿಂದ ಸಮಸ್ತ ಭೂತಸಮೂಹವೂ ಉದಯಿಸುವುದು ॥೧೦॥

ಕೇವಲ ಸಂಕಲ್ಪಮಾತ್ರರೂಪನಾಗಿರುವ ವಿರಾಟ್ಪುರುಷನಿಂದ ಹುಟ್ಟಿದ ಪ್ರಾಣಿಸಮುದಾಯವೂ ಸಂಕಲ್ಪರೂಪವೇ ಆಗಿ ಪೃಥಿವ್ಯಾದಿರಹಿತವಾಗಿರುವುದು; ಆದ್ಯನಾದ ಹಿರಣ್ಯ

ಆದಿಮಾದಿವ ನಿಶ್ಶೂನ್ಯಃ ಸ್ವಪ್ನಾತ್ ಸ್ವಪ್ನಾನ್ತರಂ ಯಥಾ ‖೧೧‖
ಅಸ್ಮಾದೇಕಪ್ರತಿಸ್ಪನ್ದಾತ್ ಜೀವಾಃ ಸಮ್ಪ್ರಸರನ್ತಿ ಯೇ ।
ಸಹಕಾರಿಕಾರಣಾನಾಂ ಅಭಾವಾಚ್ಚ ಸಏವ ತೇ ‖೧೨‖
ಸಹಕಾರಿಕಾರಣಾನಾಂ ಅಭಾವೇ ಕಾರ್ಯಕಾರಣಮ್ ।
ಏಕಮೇತದತೋ ನಾನ್ಯಃ ಪರಸ್ಮಾತ್ ಸರ್ಗವಿಭ್ರಮಃ ‖೧೩‖
ಬ್ರಹ್ಮೈವಾದ್ಯೋ ವಿರಾಡಾತ್ಮಾ ವಿರಾಡಾತ್ಮೈವ ಸರ್ಗತಾ ।
ಜೀವಾಕಾಶಃ ಸಏವೇತ್ಥಂ ಸ್ಥಿತಃ ಪೃಥ್ವ್ಯಾದ್ಯಸದ್ಯತಃ ‖೧೪‖

ಶ್ರೀರಾಮಉವಾಚ.—

ಕಿಂ ಸ್ಯಾತ್ ಪರಿಮಿತೋ ಜೀವೋ ರಾಶಿರಾಹೋ ಅನನ್ತಕಃ ।
ಆಹೋಸ್ವಿದಸ್ತ್ಯನನ್ತಾತ್ಮಾ ಜೀವಪಿಣ್ಡೋಽಚಲೋಪಮಃ ‖೧೫‖

ಗರ್ಭಸದೆಸೆಯಿಂದ ಅತ್ಯಂತ ಶೂನ್ಯನಾಗಿರುವ ವಿರಾಟ್ಪುರುಷನು ಹುಟ್ಟಿದಂತೆಯೂ, ಒಂದು ಸ್ವಪ್ನದದೆಸೆಯಿಂದ ಮತ್ತೊಂದು ಸ್ವಪ್ನವು ಹುಟ್ಟುವಂತೆಯೂ, ಸಂಕಲ್ಪಮಾತ್ರವಾದ ಪ್ರಾಣಿಜಾತವುದಯಿಸುವುದು ‖೧೧‖

ಚಲನೆಯುಂಟಾಗುವುದಕ್ಕೆ ಅನುಕೂಲವಾದ ಕಾರಣಸಾಮಗ್ರಿಗಳಿಲ್ಲದಿರುವುದರಿಂದ, ಒಬ್ಬನೇ ಅಸಾಹಯನಾಗಿ ಚಲಿಸತಕ್ಕವನಾಗಿರುವ ಈ ವಿರಾಟ್ಪುರುಷನದೆಸೆಯಿಂದ ಯಾವ ಜೀವಗಳು ಪ್ರಸರಿಸುತ್ತವೆಯೋ, ಅವುಗಳೆಲ್ಲವೂ ಆವನೇ ಅಲ್ಲದೆ ಪದಾರ್ಥಾಂತರವಲ್ಲವೆಂದು ತಿಳಿಯಬೇಕು ‖೧೨‖

ಸಹಕಾರಿಯಾದ ಕಾರಣಸಾಮಗ್ರಿಯಿಲ್ಲದುದರಿಂದ, ಒಂದೇ ಪದಾರ್ಥವು ಕಾರ್ಯವಾಗಿಯೂ ಕಾರಣವಾಗಿಯೂ ಇರುವುದು ; ಆದುಕಾರಣ, ಪರಮಪುರುಷನಿಗಿಂತ ಬೇರೆಯಾದ ಸೃಷ್ಟಿಯೆಂಬ ಭ್ರಾಂತಿಯಿಲ್ಲ ‖೧೩‖

ಅಯ್ಯಾ! ರಾಮ! ಹೀಗೆ ಪರಬ್ರಹ್ಮವೇ ವಿರಾಡ್ರೂಪವಾಗಿರುವುದು; ವಿರಾಡ್ರೂಪವೇ ಸೃಷ್ಟಿಯಾಗಿರುವುದು ; ಈ ರೀತಿಯಾಗಿ ಪೃಥಿವ್ಯಾದಿಗಳು ಅಸತ್ಯವಾಗಿರುವುದರಿಂದ, ಆ ಬ್ರಹ್ಮನೇ ಜೀವಾಕಾಶರೂಪನಾಗಿರುವನು ‖೧೪‖

ಇದುವರೆಗೆ—(೧) ವ್ಯಷ್ಟಿ ಸಮಷ್ಟಿ ಇವುಗಳ ಮೂಲ—ಇವುಗಳೆಲ್ಲವೂ ಒಂದೇಯೆಂದೂ, ಇವುಗಳಲ್ಲಿ ವ್ಯಷ್ಟಿ ಸಮಷ್ಟಿಗಳು ಅವಾಸ್ತವಗಳೆಂದೂ, ತನ್ಮೂಲ ಪದಾರ್ಥಮಾತ್ರ ವಾಸ್ತವವೆಂದೂ ಹೇಳಿದ ಮುಖ್ಯ ತಾತ್ಪರ್ಯವನ್ನು ಗ್ರಹಿಸಿದ ಶ್ರೀರಾಮನು, (೨) ಪುನಃ ಶಂಕೆಹುಟ್ಟಿದವನಾಗಿ ಪ್ರಶ್ನೆಮಾಡುವನು:—

ಪೂಜ್ಯರೆ! ಜೀವವು—ಇಷ್ಟೆಂದು ಪರಿಮಿತಿಯುಳ್ಳದಾಗಿರುವುದೆ? ಅಥವಾ ಅಪರಿಮಿತವಾದ ರಾಶಿರೂಪವಾಗಿರುವುದೆ? ಅಥವಾ ಪರ್ವತದಂತೆ ದೊಡ್ಡ ಉಂಡೆಯಾಗಿರುವುದೆ? ‖

---

(೧) 'ವ್ಯಷ್ಟಿ' ಯೆಂದರೆ ಬೇರೆಬೇರೆಯಾಗಿರುವುದು ; ಬ್ರಹ್ಮಾಂಡವೆಂದರ್ಥವು. 'ಸಮಷ್ಟಿ' ಯೆಂದರೆ ಒಟ್ಟಾಗಿರುವುದು ; ಚತುರ್ಮುಖ ಬ್ರಹ್ಮನೆಂದರ್ಥವು. ಇವೆರಡಕ್ಕೂ ಮೂಲವೆಂದರೆ ಪರಬ್ರಹ್ಮವೆಂದರ್ಥವು.

(೨) ಶ್ರೀರಾಮನ ಶಂಕಾಪ್ರಕಾರವೇನೆಂದರೆ:—ವ್ಯಷ್ಟಿ ಸಮಷ್ಟಿ ತನ್ಮೂಲಗಳ ಮಧ್ಯ

ಧಾರಾಃ ಪಯೋಮುಚಇವ ಶೀಕರಾಇವ ವಾರಿಧೇಃ |
ಕಣಾಸ್ತಪ್ತಾಯಸಇವ ಕಸ್ಮಾನ್ನಿರ್ಯಾನ್ತಿ ಜೀವಕಾಃ ||೧೬||
ಇತಿ ಮೇ ಭಗವನ್ ಬ್ರೂಹಿ ಜೀವಜಾಲವಿನಿರ್ಣಯಮ್ |
ಜ್ಞಾತಮೇತನ್ಮಯಾ ಪ್ರಾಯಃ ತದೇವ ಪ್ರಕಟೀಕುರು ||೧೭||

ಶ್ರೀ ವಸಿಷ್ಠ ಉವಾಚ.—

ಏಕಏವ ನ ಜೀವೋಽಸ್ತಿ ರಾಶೀನಾಂ ಸಮ್ಭವಃ ಕುತಃ |
ಶಶಶೃಙ್ಗಂ ಸಮುಡ್ಡೀಯ ಪ್ರಯಾತೀವ ಹಿ ತೇ ವಚಃ ||೧೮||
ನ ಜೀವೋಽಸ್ತಿ ನ ಜೀವಾನಾಂ ರಾಶಯಃ ಸನ್ತಿ ರಾಘವ |
ನ ಚೈಕಃ ಪರ್ವತಪ್ರಖ್ಯೋ ಜೀವಪಿಣ್ಡೋಽಸ್ತಿ ಕಶ್ಚನ ||೧೯||

ಮೇಘದದೆಸೆಯಿಂದ ಜಲಧಾರೆಗಳಂತೆಯೂ, ಸಮುದ್ರದದೆಸೆಯಿಂದ ತುಂತುರುಗಳಂತೆಯೂ, ಕಾಯ್ದ ಕಬ್ಬಿಣದದೆಸೆಯಿಂದ ಕಿಡಿಗಳಂತೆಯೂ,ಯಾವುದರದೆಸೆಯಿಂದ ಈ ಜೀವಗಳು ಹೊರಡುವುವು?—ಅದನ್ನು ಊಹಿಸುವುದಕ್ಕೇ ಅಸಾಧ್ಯವಾಗಿರುವುದು (೧) ||೧೬||

ಪೂಜ್ಯರೆ! ಈರೀತಿಯಾಗಿ ಜೀವಸಮೂಹನಿರ್ಣಯವನ್ನು ತಾವು ನನಗೆ ಅಪ್ಪಣೆ ಕೊಡಿಸಬೇಕು. ತಾವು ಇದುವರೆಗೆ ಹೇಳಿದುದನ್ನೆಲ್ಲ ತಿಳಿದುಕೊಳ್ಳದೆ ನಾನು ಪುನಃ ಪ್ರಶ್ನೆಮಾಡುತ್ತೇನೆಂದು ಭಾವಿಸಲಾಗದು ; ಇದನ್ನು ನಾನು ಪ್ರಾಯಶಃ ತಿಳಿದುಕೊಂಡೇ ಇರುವೆನು ; ಅದನ್ನೇ ತಾವು ಪುನಃ ಸ್ಪಷ್ಟಪಡಿಸಬೇಕು ||೧೭||

ಶ್ರೀವಸಿಷ್ಠರು ಉತ್ತರಹೇಳುವರು:—

ಅಯ್ಯಾ! ರಾಮ! ಬ್ರಹ್ಮಾತ್ಮೈಕ್ಯಜ್ಞಾನಸಿದ್ಧಿಯಾಗುವುದಕ್ಕಾಗಿ ನಾನು ಸಮಷ್ಟಿಜೀವನನ್ನು ಕಲ್ಪಿಸಿಕೊಂಡು ನಿನಗೆ ಹೇಳಿದೆನಲ್ಲದೆ, ವ್ಯಷ್ಟಿ ಸಮಷ್ಟಿಗಳಲ್ಲಿ ಯಾವುದಾದರೊಂದು ಸತ್ಯವೆಂದು ತಿಳಿಸುವುದಕ್ಕೋಸ್ಕರ ಹೇಳಿದವನಲ್ಲ. ಅದುಕಾರಣ, ಒಬ್ಬ ಜೀವನೇ ಇಲ್ಲದಿರುವಾಗ, ರಾಶಿಗಳು ಸಂಭವಿಸುವುದೆಲ್ಲಿ? ನೀನು ಹೇಳಿದ ಈ ಮಾತು, ಮೊಲದ ಕೊಂಬು ಹಾರಿಹೋಗಿ ಓಡಾಡುತ್ತದೆಂಬಂತಿರುವುದು ||೧೮||

ಅಯ್ಯಾ! ರಾಘವ! ನೀನು ಕೇಳಿದಂತೆ—ಒಬ್ಬನಾದ ಜೀವನೂ ಇಲ್ಲ; ಜೀವರಾಶಿಗಳೂ ಇಲ್ಲ; ಪರ್ವತ ಸದೃಶವಾದ ಒಂದು ಜೀವಪಿಂಡವೂ ಇಲ್ಲ ||೧೯||

ದಲ್ಲಿ ವ್ಯಷ್ಟಿಸಮಷ್ಟಿಗಳು ಅವಾಸ್ತವವೆಂದು ಏಕೆ ಹೇಳಬೇಕು ? ಇದಕ್ಕಿಂತಲೂ ಪ್ರತ್ಯಕ್ಷವಾಗಿರುವ ವ್ಯಷ್ಟಿವಿಭಾಗವೇ ವಾಸ್ತವ್ಯವೆಂದೂ ಸಮಷ್ಟಿತನ್ಮೂಲಗಳು ಅವಾಸ್ತವ್ಯಗಳೆಂದೂ ಏತಕ್ಕಿಟ್ಟುಕೊಳ್ಳಬಾರದು ? ಸಾಮಾನ್ಯವಾಗಿ ಸೇನೆಗಳಲ್ಲೂ ಸಮಾಜಗಳಲ್ಲೂ ಗುಂಪು ಚದುರಿಹೋಗಿಬಿಟ್ಟರೂ, ಅಲ್ಲಲ್ಲಿ ಬೇರೆಬೇರೆಯಾಗಿ ಕೆಲವು ಮಂದಿ ಇರುವಂತೆ ಇಲ್ಲಿಯೂ ಸಮಷ್ಟಿಯಿಲ್ಲದಿದ್ದರೂ ವ್ಯಷ್ಟಿಯಿರುವುದೆಂದು ಏತಕ್ಕೆ ನಂಬಬಾರದು ?—ಇತ್ಯಾದಿ ರೀತಿಯಾಗಿ ರಾಮನಿಗೆ ಶಂಕೆಯುಂಟಾಯಿತು.

(೧) ಹೀಗೆ ಜೀವನಿಸ್ಸರಣಕ್ಕೆ ಹೇತುವಾದ ಪದಾರ್ಥವನ್ನು ನಿಶ್ಚಯಿಸಲಾಗದಿರುವುದರಿಂದ ವ್ಯಷ್ಟಿಯೇ ಸತ್ಯವೆಂದು ಹೇಳುವುದೇ ಯುಕ್ತವೆಂಬುದಾಗಿ ಭಾವವು.

ಜೀವಶಬ್ದಾರ್ಥಕಲನಾಃ ಸಮಸ್ತಕಲನಾನ್ವಿತಾಃ ।
ನೇಹ ಕಾಶ್ಚನ ಸನ್ತೀತಿ ನಿಶ್ಚಯೋಽಸ್ತು ತವಾಚಲಃ ॥೨೦॥
ಶುದ್ಧಚಿನ್ಮಾತ್ರಮಮಲಂ ಬ್ರಹ್ಮಾಸ್ತೀಹ ಹಿ ಸರ್ವಗಮ್ ।
ತದ್ಯಥಾ ಸರ್ವಶಕ್ತಿತ್ವಾತ್ ವಿನ್ದತೇ ಯಾಂ ಸ್ವಯಂ ಕಲಾಮ್ ॥೨೧॥
ಚಿನ್ಮಾತ್ರಾನುಕ್ರಮೇಣೈವ ಸಮ್ಪ್ರಫುಲ್ಲಲತಾಮಿವ ।
ನನು ಮೂರ್ತಾಮಮೂರ್ತಾಂ ವಾ ತಾಮೇವಾಶು ಪ್ರಪಶ್ಯತಿ ॥೨೨॥
ಜೀವೋ ಬುದ್ಧಿಃ ಕ್ರಿಯಾ ಸ್ಪನ್ದೋ ಮನೋ ದ್ವಿತ್ವೈಕ್ಯಮಿತ್ಯಪಿ।
ಸ್ವಸತ್ತಾಂ ಪ್ರಕಟನ್ತೀಂ ತಾಂ ನಿಯೋಜಯತಿ ವೇದನೇ ॥೨೩॥
ಸಾಽಬುದ್ಧ್ಯೈವ ಭವತ್ಯೇವಂ ಭವೇದ್ಬ್ರಹ್ಮೈವ ಬೋಧತಃ ।
ಅಬೋಧಃ ಪ್ರೇಕ್ಷಯಾ ಯಾತಿ ನಾಶಂ ನ ತು ಪ್ರಬುಧ್ಯತೇ ॥೨೪॥
ಯಥಾನ್ಧಕಾರೋ ದೀಪೇನ ಪ್ರೇಕ್ಷ್ಯಮಾಣಃ ಪ್ರಣಶ್ಯತಿ ।
ನ ಚಾಸ್ಯ ಜ್ಞಾಯತೇ ತತ್ತ್ವಂ ಅಬೋಧಸ್ಯೈವಮೇವ ಹಿ ॥೨೫॥

ಇಲ್ಲಿ ಸಮಸ್ತ ಪ್ರಾತಿಭಾಸಿಕಯುಕ್ತವಾದ ಜೀವಶಬ್ದಾರ್ಥಕಲ್ಪನೆಗಳೊಂದೂ ಇಲ್ಲವೆಂದು ನಿನಗೆ ದೃಢವಾದ ನಿಶ್ಚಯವುಂಟಾಗಲಿ ॥೨೦॥

ಶುದ್ಧ ಚಿನ್ಮಾತ್ರರೂಪವಾಗಿಯೂ ನಿರ್ಮಲವಾಗಿಯೂ ಸರ್ವವ್ಯಾಪಿಯೂ ಇರುವ ಬ್ರಹ್ಮವೊಂದೇ ಇರುವುದು ; ಅದು—ಸರ್ವಶಕ್ತವಾಗಿರುವುದರಿಂದ, ಯಾವವಿಧವಾದ ಕಲ್ಪನಾಕೌಶಲವನ್ನು ಯಾವರೀತಿಯಾಗಿ ಅನುಸಂಧಾನಮಾಡುತ್ತದೆಯೋ, ಆ ಚಿನ್ಮಾತ್ರಾನುಸಾರವಾಗಿಯೇ- ಒಂದಾವರ್ತಿ ಹೂವುಬಿಟ್ಟಿರುವದಾಗಿಯೂ ಮತ್ತೊಂದಾವರ್ತಿ ಚಿಗುರಿರುವುದಾಗಿಯೂ ಕಾಣುವ ಲತೆಯನ್ನು ನೋಡುವಂತೆ, ಆಕಾರಯುಕ್ತವಾಗಿಯೂ ಆಕಾರರಹಿತವಾಗಿಯೂ ಇರುವ ಆ ವಿಧವಾದ ಕಲ್ಪನೆಯನ್ನೇ ಸಾಕ್ಷಾತ್ತಾಗಿ ನೋಡುವುದು. (ಅನುಭವಿಸುವಂತಿರುವುದು) ॥೨೧-೨೨॥

ಅದು ನೋಡುವುದು ಹೇಗೆಂದರೆ:—ಜೀವ ಬುದ್ಧಿ ಕ್ರಿಯಾ ಸ್ಪಂದ ಮನಸ್ಸು ದ್ವಿತ್ವ ಏಕತ್ವ ಈ ರೀತಿಯಾಗಿ ವಿಕಾಸಹೊಂದುತಿರುವ ತನ್ನ ಸತ್ತೆಯನ್ನೇ ಆಯಾವಿಷಯ ಜ್ಞಾನದಲ್ಲಿ ನಿಯೋಗಿಸುವುದು ॥೨೩॥

ಈರೀತಿಯಾಗಿ ಆತ್ಮಸತ್ತೆಯು ವಿಕಾಸಹೊಂದುವುದೂಕೂಡ,ಅಜ್ಞಾನದಿಂದಲೇಯೇ; ಜ್ಞಾನೋದಯವಾದ ಕೂಡಲೆ ಸರ್ವವೂ ಬ್ರಹ್ಮವೇ ಆಗುವುದು ; ಅಜ್ಞಾನವು ಜ್ಞಾನದಿಂದ ನಾಶಹೊಂದುವುದು; ಆದರೆ ಆ ಜ್ಞಾನವಮಾತ್ರ ದುರ್ಲಭವಾಗಿರುವುದು ॥೨೪॥

ದೀಪದಿಂದ ನೋಡಲ್ಪಟ್ಟಮಾತ್ರದಲ್ಲಿಯೇ ಅಂಧಕಾರವು ಹೇಗೆ ನಿಶ್ಶೇಷವಾಗಿ ನಾಶಹೊಂದುತ್ತದೆಯೋ, ಮತ್ತು ಆಗ ಅಂಧಕಾರವು ಎಲ್ಲಿ ಹೋಗುತ್ತದೆಂಬ ವಿಷಯವು ಹೇಗೆ ಗೊತ್ತೇ ಆಗುವುದಿಲ್ಲವೋ, ಹಾಗೆ-ಜ್ಞಾನೋದಯವಾದಾಗ ಅಜ್ಞಾನವೂ ನಿಶ್ಶೇಷವಾಗುವುದು ; ಮತ್ತು ಈ ಅಜ್ಞಾನವು ಎಲ್ಲಿ ಹೋಗುತ್ತದೆಂಬುದೂ ಗೊತ್ತಾಗುವುದಿಲ್ಲ ॥೨೫॥

ಏವಂ ಬ್ರಹ್ಮೈವ ಜೀವಾತ್ಮಾ ನಿರ್ವಿಭಾಗೋ ನಿರನ್ತರಃ |
ಸರ್ವಶಕ್ತಿರನಾದ್ಯನ್ತೋ ಮಹಾಚಿತ್ಸಾರರೂಪವಾನ್ ||೨೬||
ಸರ್ವಾನಣುತಯಾ ತ್ವಸ್ಯ ನ ಕ್ವಚಿದ್ಭೇದಕಲ್ಪನಾ |
ವಿದ್ಯತೇ ಯಾ ಹಿ ಕಲನಾ ಸಾ ತದೇವಾನುಭೂತಿತಃ ||೨೭||

ಶ್ರೀರಾಮಉವಾಚ.

ಏವಮೇತತ್ ಕಥಂ ಬ್ರಹ್ಮ ಏಕಜೀವೇಚ್ಛಯಾಖಿಲಾಃ |
ಜಗಜ್ಜೀವಾನ ಯುಜ್ಯನ್ತೇ ಮಹಾಜೀವೈಕತಾವಶಾತ್ ||೨೮||

ಶ್ರೀವಸಿಷ್ಠಉವಾಚ.

ಮಹಾಜೀವಾತ್ಮ ತದ್ಬ್ರಹ್ಮ ಸರ್ವಶಕ್ತಿಮಯಾತ್ಮಕಮ್ |
ಸ್ಥಿತಂ ತಥೇಚ್ಛಮೇವೇಹ ನಿರ್ವಿಭಾಗಂ ನಿರನ್ತರಮ್ ||೨೯||
ಯದೇವೇಚ್ಛತಿ ತತ್ ತಸ್ಯ ಭವತ್ಯಾಶು ಮಹಾತ್ಮನಃ |
ಪೂರ್ವಂ ತೇನೇಷ್ಟಮಿಚ್ಛಾದಿ ತತೋ ದ್ವಿತ್ವಮುದೇತಿ ಯತ್ ||೩೦||

ಅಯ್ಯಾ! ರಾಮ! ಈರೀತಿಯಾಗಿ ಪರಬ್ರಹ್ಮನೇ ಜೀವಾತ್ಮನಾಗಿರುವನು; ಇವನಲ್ಲಿ ಯಾವ ವಿಭಾಗವೂ ಯಾವ ಭೇದವೂ ಇಲ್ಲ; ಇವನು ಸರ್ವಶಕ್ತನಾಗಿಯೂ ಆದ್ಯಂತರಹಿತನಾಗಿಯೂ ಇರುವನು; ಚಿತ್ತೆಂಬ ಸಾರವೇ ಇವನ ರೂಪವಾಗಿರುವುದು ॥ ೨೬ ॥

ಯಾವ ಪದಾರ್ಥಗಳು ಅಣುವಾಗಿರುವುವೋ, ಅವುಗಳಿಗೆ ಪರಸ್ಪರ ಭೇದವುಂಟಾಗಬಹುದು. ಈ ಬ್ರಹ್ಮವಾದರೋ, ಎಲ್ಲಕ್ಕಿಂತಲೂ ಮಹತ್ತಾಗಿ ಅಪರಿಚ್ಛಿನ್ನವಾಗಿರುವುದರಿಂದ, ಇದಕ್ಕೆ ಎಲ್ಲಿಯೂ ಭೇದಕಲ್ಪನೆಯೇ ಇಲ್ಲ; ಈಗ ಯಾವ ಭೇದಕಲ್ಪನೆಯಿರುವುದೋ, ಅದು ಆ ಬ್ರಹ್ಮವಸ್ತುವೇಯೆಂದು ಅನುಭವದಿಂದ ಸಿದ್ಧವಾಗುವುದು ॥ ೨೭ ॥

ಮತ್ತೆ ಶ್ರೀರಾಮನು ಪ್ರಶ್ನೆಮಾಡುವನು :—

ಬ್ರಾಹ್ಮಣಶ್ರೇಷ್ಠರೆ! ತಾವು ಅಪ್ಪಣೆಕೊಟ್ಟುದುದೆಲ್ಲವೂ ಸರಿಯೆ! ಆದರೆ, ನನಗೊಂದು ಶಂಕೆಯುಂಟಾಗಿರುವುದು. ತಾವು ಅಪ್ಪಣೆಕೊಟ್ಟಂತೆ ಜಗತ್ತಿನ ಜೀವಗಳಿಗೆ ವ್ಯಷ್ಟಿಯೆಂದೂ ಮಹಾಜೀವರೂಪನಾದ ಚತುರ್ಮುಖಬ್ರಹ್ಮನಿಗೆ ಸಮಷ್ಟಿಯೆಂದೂ ವ್ಯವಹಾರವಿರುವುದಷ್ಟೆ! ಈ ವ್ಯಷ್ಟಿಸಮಷ್ಟಿಗಳೆರಡಕ್ಕೂ ಭೇದವಿಲ್ಲವೆಂದೂ ತಾವು ಅಪ್ಪಣೆಕೊಟ್ಟಿರುವಿರಷ್ಟೆ! ಹೀಗೆ ಇವೆರಡಕ್ಕೂ ಭೇದವಿಲ್ಲದೆ ಜಗಜ್ಜೀವಗಳೆಲ್ಲವೂ ಮಹಾಜೀವನಿಗಧೀನವಾಗಿದ್ದಪಕ್ಷದಲ್ಲಿ, ಒಬ್ಬ ಜೀವನಿಗೆ ಒಂದುವಿಧವಾದ ಇಚ್ಛೆಯುಂಟಾದರೆ-ಆ ಇಚ್ಛೆಯು ಇತರವಾದ ಜಗಜ್ಜೀವಗಳಿಗೆಲ್ಲ ಉಂಟಾಗಬೇಕಾಗುವುದಲ್ಲವೆ! ಈಗ ಆರೀತಿಯಾಗಿ ಆಗದಿರುವುದಕ್ಕೆ ಕಾರಣವೇನು? ॥ ೨೮ ॥

ಇದಕ್ಕೆ ವಸಿಷ್ಠರು ಉತ್ತರಹೇಳುವರು :—

ಅಯ್ಯಾ! ರಾಮ! ಆ ಪರಬ್ರಹ್ಮವು, ಪೂರ್ವೋಕ್ತರೀತಿಯಾಗಿ ಮಹಾಜೀವಸ್ವರೂಪವಾಗಿದ್ದುಗೊಂಡು ವ್ಯಷ್ಟಿವಿಭಾಗವಿಲ್ಲದಿರುವಾಗ ಸಕಲಶಕ್ತಿಮಯವಾಗಿ–ನಾನೇ ಸರ್ವದಾ ಸರ್ವತ್ರ ಸತ್ಯಸಂಕಲ್ಪನಾಗಿರಬೇಕು—ಎಂದು ಇಚ್ಛೆಯುಳ್ಳದಾಗುವುದು. ಆಗ ಅದು ಭೇದಶೂನ್ಯವಾಗಿ ಯಾವುದನ್ನಪೇಕ್ಷಿಸುವುದೋ, ಅದೆಲ್ಲವೂ ಆ ಪರಬ್ರಹ್ಮವಸ್ತುವಿಗಾಗುವುದು; ಬಳಿಕ ವ್ಯಷ್ಟಿವಿಭಾಗವುಂಟಾಗುವುದಾವುದುಂಟೋ, ಅದೂ ಕೂಡ ಮೊದಲು ಅದರಿಂದ ಅಪೇಕ್ಷಿಸಲ್ಪಟ್ಟುದಾಗಿಯೇ ಇರುವುದು ॥ ೨೯-೩೦ ॥

ಪಶ್ಚಾದ್ವಿತ್ವವಿಭಕ್ತಾನಾಂ ಸ್ವಶಕ್ತೀನಾಂ ಪ್ರಕಲ್ಪಿತಃ|
ಅನೋನ್ಯಂ ಹಿ ಭವತೀತ್ಯೇವಂ ತೇನ ಕ್ರಿಯಾಕ್ರಮಃ ||೨೦||
ತಂ ವಿನಾನುದಯೇ ತ್ವಾಸಾಂ ಪ್ರಧಾನೇಚ್ಛೈವ ರೋಹತಿ |
ಶಕ್ತ್ಯ ಹ್ಯಜಾತಯಾ ಬ್ರಾಹ್ಮ್ಯ ನಿಯಮೋಽಯಂ ಪ್ರಕಲ್ಪಿತಃ ||೨೧||
ಯಸ್ಯಾಜೀವಾಭಿಧಾನಾಯಾಃ ಶಕ್ತ್ಯಪೇಕ್ಷಾ ಫಲತ್ಯಸೌ |
ಪ್ರಧಾನಶಕ್ತಿನಿಯಮಾನುಷ್ಠಾನೇನ ವಿನಾ ನ ತು ||೨೨||
ಪ್ರಧಾನಶಕ್ತಿನಿಯಮಃ ಸುಪ್ರತಿಷ್ಠೋ ಭವೇದ್ಭವೇತ್ |
ತತ್ಫಲಂ ಶಕ್ತ್ಯಧೀನತ್ವಾತ್ ನೇಹಿತಾನಾಂ ಕ್ವಚಿದ್ಭವೇತ್ ||೨೪||
ಏವಂ ಬ್ರಹ್ಮಮಹಾಜೀವೋ ವಿದ್ಯತೇನ್ತಾದಿವರ್ಜಿತಃ |
ಜೀವಕೋಟಿಮಹಾಕೋಟೀ ಭವತ್ಯಥ ನ ಕಿಂಚನ ||೨೫||
ಚೇತ್ಯಸಂವೇದನಾಜ್ಜೀವೋ ಭವತ್ಯಾಯಾತಿ ಸಂಸೃತಿಮ್ |
ತದಸಂವೇದನಾದ್ರೂಪಂ ಸಮಾಯಾತಿ ಸಮಂ ಪುನಃ ||೨೬||

ಹೀಗೆ ತನ್ನಿಚ್ಛಾನುಸಾರವಾಗಿ ವ್ಯಷ್ಟಿವಿಭಾಗವಾದಮೇಲೆ, ಆ ಬ್ರಹ್ಮವೇ—ಈ ಹೇತುವಿನಿಂದ ಈಕೆಲಸವು ಈರೀತಿಯಾಗಿ ನಡೆಯುವುದು—ಎಂಬರೀತಿಯಾಗಿ ತನ್ನ ಶಕ್ತಿಗಳಿಗೆ ಕ್ರಿಯಾಕ್ರಮವನ್ನೂ ಕಲ್ಪಿಸುವುದು. ಹೀಗೆ ಆ ಪ್ರಧಾನವಸ್ತುವೇ ತನ್ನ ಶಕ್ತಿವಿಭಾಗವಾದ ಸಮಸ್ತ ವ್ಯಷ್ಟಿಪದಾರ್ಥಗಳಿಗೂ ಬೇರೆಬೇರೆಯಾದ ಇಚ್ಛೆಯುಂಟಾಗಲೆಂದು ಸಂಕಲ್ಪವುಳ್ಳದಾಗುವಕಾರಣ, ಅವುಗಳಿಗೆ ನಾನಾವಿಧ ಇಚ್ಛಾಭೇದವುಂಟಾಗುವುದು ॥

ಕೆಲವು ಸಂದರ್ಭಗಳಲ್ಲಿ ಮಹಾತ್ಮರಾದವರು ಕ್ರಿಯಾಕ್ರಮಗಳೊಂದೂ ಇಲ್ಲದೆ ತಮ್ಮ ಸಂಕಲ್ಪದಂತೆಯೇ ಕಾರ್ಯವನ್ನು ನೆರವೇರಿಸುವರಲ್ಲವೆ! ಅಲ್ಲಿಯಾದರೋ—ಈವ್ಯಷ್ಟಿಶಕ್ತಿಗಳಿಗೆ ಆ ಪ್ರಧಾನಶಕ್ತಿಯ ಇಚ್ಛೆಯೇ ಆರೂಢವಾಗುವುದು. ಆಗ ಆ ಬ್ರಹ್ಮನ ಶಕ್ತಿಯು, ಉತ್ಪನ್ನವಾಗದೆಯೇ ಈವಿಧವಾದ ನಿಯಮವನ್ನು ಕಲ್ಪಿಸುವುದು. ಅದು ತಾನು ಕಾಣಿಸಿಕೊಳ್ಳದೆಯೇ—ಈಕೆಲಸವೀರೀತಿಯಾಗಿ ನಡೆಯಲೆಂದು ಸಂಕಲ್ಪಿಸುವುದರಿಂದ ಕ್ರಿಯಾಕ್ರಮಗಳು ವ್ಯತ್ಯಾಸಹೊಂದುವುವದಲ್ಲದೆ, ಸ್ವೇಚ್ಛೆಯಿಂದಲ್ಲವೆಂದು ತಿಳಿಯಬೇಕು॥

ಜೀವನಾಮಕವಾದ ಯಾವ ಶಕ್ತಿಯ ಇಚ್ಛೆಯು ಫಲಿಸಿದರೂ, ಅದು ಪ್ರಧಾನ ಶಕ್ತಿಯ ಸಂಕಲ್ಪವಿಲ್ಲದೆ ಫಲಿಸುವುದಿಲ್ಲ ॥ ೨೨ ॥

ಈಪ್ರಧಾನಶಕ್ತಿಯ ಸಂಕಲ್ಪನಿಯಮವು ದೃಢವಾಗಿದ್ದಪಕ್ಷದಲ್ಲಿ, ಆಶಕ್ತಿಗಧೀನವಾಗಿರುವುದರಿಂದ ಇತರಶಕ್ತಿಗಳ ಇಚ್ಛಾಫಲವೂ ಸಿದ್ಧಿಸುವುದು; ಅದಿಲ್ಲದಿದ್ದರೆ, ಸಾಮಾನ್ಯವಾದ ಇಚ್ಛಾವ್ಯಾಪಾರಗಳಿಗೆಲ್ಲ ಫಲವು ಸಿದ್ಧಿಸುವುದಿಲ್ಲ ॥ ೨೪ ॥

ಅಂತು, ಈರೀತಿಯಾಗಿ ಪರಬ್ರಹ್ಮನೆಂಬ ಮಹಾಜೀವನು ಆದ್ಯಂತರಹಿತನಾಗಿರುವನು; ಅವನೇ ಜೀವಕೋಟಿರೂಪನಾಗಿಯೂ ಸಮಷ್ಟಿಕೋಟಿರೂಪನಾಗಿಯೂ ಇರುವನು. ಅವನಲ್ಲದೆ ಮತ್ತಾವುದೂ ಇಲ್ಲವೇ ಇಲ್ಲ ॥ ೨೫ ॥

ಫಲಿತಾಂಶವೇನೆಂದರೆ:—ಅಪರಬ್ರಹ್ಮನಿಗೆ ಯಾವಾಗ ಚೇತನೀಯಜ್ಞಾನವುಂಟಾಗುವುದೋ, ಆಗ ಅವನು ಜೀವನಾಗುವನು; ಬಳಿಕ ಸಂಸಾರವನ್ನೂ ಹೊಂದುವನು. ಆ ಚೇತನೀಯಜ್ಞಾನವಿಲ್ಲದಿದ್ದರೋ, ನಿರ್ವಿಕಾರವಾದ ಸ್ವರೂಪವನ್ನು ಹೊಂದಿರುವನು ॥

ಏವಂ ಕನಿಷ್ಠಜೀವಾನಾಂ ಜ್ಯೇಷ್ಠಜೀವಕ್ರಮಾಕ್ರಮೈಃ ।
ಸಮುದೇತ್ಯಾತ್ಮಜೀವತ್ವಂ ತಾಮ್ರಾಣಾಮಿವ ಹೇಮತಾ ॥೩೭॥
ಅತ್ರಾನ್ತರೇ ಮಹಾಕಾಶೇ ಇತ್ಥಮೇಷ ಗಣೋಽಪ್ಯಸನ್ ।
ಸ್ವಾತ್ಮೈವ ಸದಿವೋದೇತಿ ಚಿಚ್ಚಮತ್ಕರಣಾತ್ಮಕಃ ॥೩೮॥
ಸ್ವಯಮೇವ ಚಮತ್ಕಾರೋ ಯಃ ಸಮಾಪದ್ಯತೇ ಚಿತಃ ।
ಭವಿಷ್ಯನ್ನಾಮದೇಹಾದಿ ತದಹಮ್ಭಾವನಂ ವಿದುಃ ॥೩೯॥
ಚಿತೋ ಯಸ್ಮಾಚ್ಚಿದಾಲೇಹಃ ತನ್ಮಯತ್ವಾದನನ್ತಕಃ ।
ಸವಿಷ ಭುವನಾಭೋಗಃ ಇತಿ ತಸ್ಯಾಂ ಪ್ರಬಿಮ್ಬತಿ ॥೪೦॥
ಪರಿಣಾಮವಿಕಾರಾದಿಶಬ್ದೈಃ ಸೈವ ಚಿದವ್ಯಯಾ ।
ತಾದೃಗ್ರೂಪಾದಭೇದ್ಯಾಪಿ ಸ್ವಶಕ್ತ್ಯೈವ ವಿಬುಧ್ಯತೇ ॥೪೧॥

ಹೀಗೆ ಈ ಜಗಜ್ಜೀವಗಳು ಕನಿಷ್ಠಜೀವಗಳೆಂದೂ, ಸಮಷ್ಟಿರೂಪನಾದ ಬ್ರಹ್ಮನು ಜ್ಯೇಷ್ಠಜೀವನೆಂದೂ, ಪರಮಾತ್ಮನು ಮಹಾಜೀವನೆಂದೂ ವ್ಯವಹಾರವಿಟ್ಟುಕೊಂಡಿರುವರು. ಇದರಲ್ಲಿ ಕನಿಷ್ಠಜೀವಗಳು ಮಹಾಜೀವತ್ವವನ್ನು ಪಡೆಯಬೇಕಾದರೆ,—ಉಪಾಸನೆಯಿಂದ ಜ್ಯೇಷ್ಠಜೀವತ್ವವನ್ನು ಹೊಂದಿ, ಆಮೇಲೆ ಆ ಮಹಾಜೀವತ್ವವನ್ನು ಹೊಂದುವುದೂ ಉಂಟು; ಅಥವಾ ಈಸ್ಥಿತಿಯಲ್ಲಿಯೇ ಜ್ಞಾನಾಧಿಕ್ಯವುಂಟಾಗಿ ಜ್ಯೇಷ್ಠಜೀವತ್ವವನ್ನು ಹೊಂದದೆಯೇ ಮಹಾಜೀವತ್ವವನ್ನು ಪಡೆಯುವುದೂ ಉಂಟು. ಇದಕ್ಕೊಂದುದಾಹರಣೆಯನ್ನು ಹೇಳುವೆನು:—ತಾಮ್ರವು ಚಿನ್ನವಾಗಬೇಕಾದರೆ ಕೆಲವು ರಸಗಳ ಸಮ್ಮೇಳನದಿಂದ ಕುದಿಸಿ ನೀರುಮಾಡಿದಮೇಲೆ ಚಿನ್ನವಾಗುವುದೂ ಉಂಟು; ಅಥವಾ ಮತ್ತೆ ಕೆಲವು ಮೂಲಿಕೆಗಳ ಸ್ಪರ್ಶಮಾತ್ರದಲ್ಲಿಯೇ ಚಿನ್ನವಾಗುವುದೂ ಉಂಟು. ಇದು ಅನುಭವಸಿದ್ಧವಲ್ಲವೆ! ಹೀಗೆಯೇ ಜೀವಗಳಿಗೂ ಜ್ಯೇಷ್ಠಜೀವತ್ವವನ್ನು ಹೊಂದಿ ಆಮೇಲೆ ಮುಕ್ತಿಯಾಗುವುದೂ, ಅದಿಲ್ಲದೆಯೇ ಮುಕ್ತಿಯಾಗುವುದೂ ಉಂಟೆಂದು ತಿಳಿಯಬೇಕು ॥ ೩೭ ॥

ವಿಚಾರಮಾಡಿದರೋ, ಪ್ರತ್ಯಗ್ರೂಪವಾದ ಈಪರಬ್ರಹ್ಮಾಕಾಶದಲ್ಲಿ—ಈ ಜೀವನೂ ಜಗತ್ತೂ ಎಲ್ಲವೂ ಇಲ್ಲವೆಂದೇ ಗೊತ್ತಾಗುವುದು; ಆ ಆತ್ಮವೇ ಕೇವಲ ಚಿದ್ವಿಲಾಸರೂಪವಾಗಿ ಪದಾರ್ಥಾಂತರವಿರುವಂತೆ ಕಾಣಿಸುವುದು ॥ ೩೮ ॥

ಆ ಚಿತ್ತಿಗೆ ಯಾವ ಕಾರಣವೂ ಇಲ್ಲದೆಯೇ ತನಗೆ ತಾನೇ ಯಾವವಿಧವಾಗಿ ವಿಕಾಸವುಂಟಾಗುವುದೋ, ಅದು ಆರೀತಿಯಾಗಿ ತಾನಿರುವೆನೆಂದು ತಿಳಿದುಕೊಳ್ಳುವುದು. ಈ ಅಹಂಭಾವವೇ ಮುಂದೆ ಆರೀತಿಯಾದ ನಾಮರೂಪಾದಿಗಳಾಗುವುದು ॥ ೩೯ ॥

ಆ ಚಿಚ್ಚಮತ್ಕಾರವೆಂಬುದಾವುದೆಂದರೆ:—ಈ ಜಗತ್ತೆಂಬುದನ್ನು ಸರ್ವದಾ ಭಾವಿಸುತ್ತಿದ್ದರೆ, ಆ ಸಂಸ್ಕಾರವು ಮಾಯೆಯಲ್ಲಿ ದೃಢವಾಗಿ, ತನ್ಮಯವಾಗಿ, ಅನಂತವಾಗಿಬಿಡುವುದು; ಇದು ಆ ಚಿತ್ತಿನಲ್ಲಿ ಸ್ಫುರಿಸುವುದು ॥ ೪೦ ॥

ಹೀಗೆ ಸಂಸ್ಕಾರವಿಶಿಷ್ಟವಾದ ಅವ್ಯಯವಾದ ಆ ಚಿತ್ತೇ, ವಾಸ್ತವ್ಯವಾಗಿ ಚಿದ್ರೂಪವಾಗಿರುವುದರಿಂದ ಭೇದವ್ಯವಹಾರಕ್ಕೆ ಅಶಕ್ಯವಾಗಿದ್ದರೂ, ತನ್ನ ಶಕ್ತಿಯಿಂದಲೇ—ಪರಿಣಾಮ ವಿಕಾರ—ಇತ್ಯಾದಿ ಶಬ್ದಗಳಿಂದ ಭೇದಕ್ಕೊಳಪಟ್ಟಿರುವಂತೆ ತಿಳಿಯಲ್ಪಡುವುದು ॥

ಅವಿಚ್ಛಿನ್ನವಿಲಾಸಾತ್ಮ ಸ್ವತೋ ಯತ್ ಸ್ವದನಂ ಚಿತಃ ।
ಚೇತ್ಯಸ್ಯ ಚ ಪ್ರಕಾಶಸ್ಯ ಜಗದಿತ್ಯೇವ ತತ್ ಸ್ಥಿತಮ್ ॥೪೨॥
ಆಕಾಶಾದಪಿ ಸೂಕ್ಷ್ಮೈಷಾ ಯಾ ಶಕ್ತಿರ್ವಿತತಾ ಚಿತಃ ।
ಸಾ ಸ್ವಭಾವತಏವೈತಾಂ ಅಹನ್ತಾಂ ಪರಿಪಶ್ಯತಿ ॥೪೩॥
ಆತ್ಮನ್ಯಾತ್ಮಾತ್ಮನೈವಾಸ್ಯಾಃ ಯತ್ ಪ್ರಸ್ಫುರತಿ ವಾರಿವತ್ ।
ಜಗದನ್ತಮಹನ್ತಾಣುಂ ತದೈಷಾ ಸಮ್ಪ್ರಪಶ್ಯತಿ ॥೪೪॥
ಚಮತ್ಕಾರಕರೀ ಚಾರು ಯಚ್ಚಮತ್ಕುರುತೇ ಚಿತಿಃ ।
ಸ್ವಯಂ ಸ್ವಾತ್ಮನಿ ತಸ್ಯೈವ ಜಗನ್ನಾಮ ಕೃತಂ ತತಃ ॥೪೫॥
ಚಿತಶ್ಚೇತ್ಯಮಹಙ್ಕಾರಃ ಸೈವ ರಾಘವ ಕಲ್ಪನಾ ।
ತನ್ಮಾತ್ರಾದಿ ಚಿದೇವಾತೋ ದ್ವಿತ್ವೈಕತ್ವೇ ಕ್ವ ಸಂಸ್ಥಿತೇ ॥೪೬॥
ಜೀವಹೇತ್ವಾದಿಸನ್ತ್ಯಾಗೇ ತ್ವಂ ಚಾಹಂ ಚೇತಿ ಸನ್ತ್ಯಜ ।
ಶೇಷಃ ಸದಸತೋರ್ಮಧ್ಯೇ ಭವತ್ಯರ್ಥಾತ್ಮಕೋ ಭವೇತ್ ॥೪೭॥

ಆ ಚಿತ್ತು, ಪೂರ್ವೋಕ್ತರೀತಿಯಾಗಿ ಚೇತನೀಯವಾದುದನ್ನೂ ಆತ್ಮಪ್ರಕಾಶವನ್ನೂ ಅವಿಚ್ಛಿನ್ನ ವಿಲಾಸಸ್ವರೂಪವಾಗಿ ತಾನು ಅನುಭವಿಸುವುದಾವುದುಂಟೋ, ಅದೇ ಜಗತ್ತೆಂಬುದಾಗಿ ಏರ್ಪಟ್ಟಿರುವುದು ॥ ೪೨ ॥

ಆಕಾಶಕ್ಕಿಂತ ಸೂಕ್ಷ್ಮವಾಗಿರುವ ಯಾವ ಈ ಚಿಚ್ಛಕ್ತಿಯಿರುವುದೋ, ಅದು—ಸ್ವಭಾವದಿಂದಲೇ ಈ ಅಹಂಭಾವವನ್ನು (ನಾನು ಈ ಜಗತ್ತಾಗಿದೇನೆ—ಇತ್ಯಾದಿಜ್ಞಾನ) ಅನುಭವಿಸುವುದಲ್ಲದೆ, ಮತ್ತಾವಕಾರಣವೂ ಇಲ್ಲ ॥ ೪೩ ॥

ಈ ಚಿತ್ತು, ತನ್ನಲ್ಲಿ ತಾನೇ ತನ್ನಿಂದಲೇ ನೀರಿನಂತೆ ಯಾವಾಗ ಸ್ಫುರಣೆಹೊಂದುವುದೋ, ಆಗ ಅಹಂಕಾರಪರಮಾಣುವನ್ನು ಕಾಣುವುದು. ಈ ಪರಮಾಣುವಿಗೆ ಕ್ರಮೇಣ ರೂಪಾಂತರಗಳುಂಟಾಗುತ ಕೊನೆಗೆ ಬ್ರಹ್ಮಾಂಡರೂಪವೇ ಪರ್ಯವಸನ್ನವಾಗುವುದು ॥೪೪॥

ಇದರಿಂದ ಫಲಿತವಾದುದೇನೆಂದರೆ:—ಚಮತ್ಕಾರಕರವಾದ ಈ ಚಿತ್ತು, ತನ್ನಲ್ಲಿ ತಾನೇ ಯಾವುದೊಂದು ವಿಧವಾಗಿ ವಿಕಾಸಹೊಂದುವುದೋ, ಅದಕ್ಕೇ ಜಗತ್ತೆಂದು ಹೆಸರಿಡಲ್ಪಟ್ಟಿರುವುದಲ್ಲದೆ, ಜಗತ್ತೆಂದು ಪ್ರತ್ಯೇಕವಾದ ಒಂದು ಪದಾರ್ಥವಲ್ಲ ॥ ೪೫ ॥

ಅಯ್ಯಾ! ರಾಘವ! ಈರೀತಿಯಾಗಿ ಚಿತ್ತಿಗೆ ಅಹಂಕಾರವು ಚೇತನೀಯವೆನ್ನಿಸುವುದು. ಅದುಕಾರಣ, ಈ ಅಹಂಕಾರಕಲ್ಪನೆಯು ಚಿತ್ತಿಗಧೀನವಾದಂತಾಯ್ತು. ಹೀಗಾದಮೇಲೆ ಈ ಅಹಂಕಾರಕ್ಕಧೀನವಾದ ಪಂಚತನ್ಮಾತ್ರಾದಿಗಳೂ ಚಿತ್ತೇಯೆಂದು ಗೊತ್ತೇಯಿದೆ! ಹೀಗಿರುವಾಗ—ಎರಡು ಒಂದು—ಇತ್ಯಾದಿ ಭೇದಕಲ್ಪನೆಯೆಲ್ಲಿರುವುದು? ॥೪೬॥

ಹೀಗೆ ಈ ಜೀವನಿಗೆ ಹೇತುವಾದ ಕರ್ಮವಾಸನಾದಿಕಲ್ಪನೆಗಳನ್ನು ಬಿಟ್ಟಮೇಲೆ—ನೀನು ನಾನು—ಇತ್ಯಾದಿ ಭೇದಕಲ್ಪನೆಯನ್ನೂ ಬಿಟ್ಟುಬಿಡಬೇಕು. ಹೀಗೆ ಸತ್ತಾಗಿಯೂ ಅಸತ್ತಾಗಿಯೂ ಇರುವ ಕಲ್ಪನೆಗಳ ಮಧ್ಯದಲ್ಲಿ, ಈ ಚೇತನಕಲ್ಪನೆಯನ್ನು ಬಿಡುವುದೇ ಕಷ್ಟವಾಗಿರುವುದರಿಂದ, ಅದನ್ನು ಬಿಟ್ಟಮೇಲೆ, ಕೇವಲ ಸದ್ಭಾವವೇ (ಇದೆಯೆಂಬುದೊಂದೇ) ಅವಶಿಷ್ಟವಾಗುವುದು ॥ ೪೭ ॥

ಚಿತಾ ಯಥಾದೌ ಕಲಿತಾ ಸ್ವಸತ್ತಾ ಸಾ ತಥೋದಿತಾ ।
ಅಭಿನ್ನಾ ದೃಶ್ಯತೇ ವ್ಯೋಮ್ನಃ ಸತ್ತಾ ಸತ್ತೇ ನ ವಿದ್ಮಹೇ॥೪೮॥
ವಿಶ್ವಂ ಖಂ ಜಗದೀಹಾಖ್ಯಂ ಖಮಸ್ತಿ ವಿಬುಧಾಲಯಃ ।
ಸಾಕಾರಶ್ಚಿಚ್ಚಮತ್ಕಾರರೂಪತ್ವಾನ್ನಾನ್ಯದಸ್ತಿ ಹಿ ॥೪೯॥
ಯೋ ಯದ್ವಿಲಾಸಸ್ತಸ್ಮಾತ್ ಸಃ ನ ಕದಾಚನ ಭಿದ್ಯತೇ ।
ಅಪಿ ಸಾವಯವಂ ತಸ್ಮಾತ್ ಕೈವಾನವಯವೇ ಕಥಾ ॥೫೦॥
ಚಿತೇರ್ನಿತ್ಯಮಚೇತ್ಯಾಯಾಃ ನಿರ್ನಾಮ್ನ್ಯಾವಿತತಾಕೃತೇಃ ।
ಯದ್ರೂಪಂ ಜಗತೋ ರೂಪಂ ತತ್ ತತ್ಸ್ಫುರಣರೂಪಿಣಃ ॥೫೧॥
ಮನೋ ಬುದ್ಧಿರಹಙ್ಕಾರೋ ಭೂತಾನಿ ಗಿರಯೋ ದಿಶಃ ।
ಇತಿ ಯಾಯಾಸ್ತು ರಚನಾಃ ಚಿತಸ್ತತ್ತ್ವಜ್ಜಗತ್ಸ್ಥಿತೇಃ ॥೫೨॥
ಚಿತೇಶ್ಚಿತ್ತ್ವಂ ಜಗದ್ವಿದ್ಧಿ ನಾಜಗಚ್ಚಿತ್ತ್ವಮಸ್ತಿ ಹಿ ।
ಅಜಗತ್ತ್ವದಚಿಚ್ಚಿತ್ ಸ್ಯಾತ್ ಭಾನಾದ್ಭೇದೋ ಜಗತ್ ಕುತಃ ॥೫೩॥

ಚಿತ್ತು, ಮೊದಲು ತನ್ನ ಸದ್ಭಾವವನ್ನೇ ಯಾವವಿಧವಾಗಿ ಕಲ್ಪಿಸಿಕೊಳ್ಳುವುದೋ, ಅದು ಅರೀತಿಯಾಗಿ ಉದಯಿಸಿ, ಅದರಂತೆಯೇ ಕಾಣಿಸಿಕೊಳ್ಳುತ್ತಿರುವುದು. ಈಗ ಆಕಾಶದಲ್ಲಿ ಮೇಘೋದಯವಾದರೆ, ಅದನ್ನು ನೋಡಿ ಆಕಾಶ ಕಪ್ಪಾಗಿದೆಯೆನ್ನುವರು; ಮೇಘಹೊರಟು ಹೋದಾಗ, ಆಕಾಶ ಬೆಳ್ಳಗಾಯ್ತೆನ್ನುವರು. ವಾಸ್ತವ್ಯವಾಗಿ ನೋಡಿದರೋ, ಆಕಾಶ ದಲ್ಲಿ ಕಪ್ಪುಬಣ್ಣವಿರುವುದನ್ನೂ ನಾವು ಕಾಣೆವು ; ಅದು ಹೋದುದನ್ನೂ ನಾವು ಕಾಣೆವು. ಹೀಗೆಯೇ ಚಿತ್ತಿನ ಕಲ್ಪನೆಯೇ ಆಯಾರೀತಿಯಾಗಿ ಕಾಣಿಸುವುದಲ್ಲದೆ ಬೇರೆಯಲ್ಲ ॥೪೮॥

ಅದುಕಾರಣ, ಈ ಭೂಮಿಯ ವ್ಯಾಪಾರವೆಂಬುದೂ ಆಕಾಶರೂಪ (ಶೂನ್ಯ) ವಾದುದು ; ಸ್ವರ್ಗವೆಂಬುದೂ ಆಕಾಶರೂಪವಾದುದು; ಇದು ಚಿಚ್ಚಮತ್ಕಾರರೂಪವಾದುದರಿಂದ ಆಕಾರಯುಕ್ತವಾಗಿರುವುದಲ್ಲದೆ ಬೇರೆಯಲ್ಲ ॥ ೪೯ ॥

ಪ್ರಪಂಚದಲ್ಲಿ ಯಾವುದು ಯಾವುದರ ವಿಲಾಸರೂಪವಾದುದೋ, ಅದು ಅದಕ್ಕಿಂತ ಬೇರೆಯಾಗಿರುವುದಿಲ್ಲ. ಜಲತರಂಗಾದಿಗಳಿರುವುವಲ್ಲವೆ! ಅವು ಅವಯವ (ಅಂಶ) ಯುಕ್ತ ವಾಗಿರುವುವು. ಹೀಗಿದ್ದರೂ ಜಲವಿಲಾಸರೂಪವಾದ ತರಂಗವು ಜಲಕ್ಕಿಂತ ಪೃಥಕ್ಕಾಗಿರು ವುದಿಲ್ಲ; ಹೀಗಿರುವಾಗ ಅವಯವರಹಿತವಾದ ಪರಮಾತ್ಮನ ವಿಷಯದಲ್ಲಿ ಹೇಳುವುದೇನು?॥

ಅಂತು, ಎಂದಿಗೂ ಚೇತನೀಯವಲ್ಲದೆಯೂ ನಾಮಶೂನ್ಯವಾಗಿಯೂ ಇದ್ದುಗೊಂಡು ಆಕಾರವನ್ನು ವಿಸ್ತಾರಪಡಿಸಿಕೊಂಡಿರುವ ಚಿತ್ತಿಗೆ ಯಾವ ರೂಪವುಂಟೋ, ಆ ಚಿತ್ತಿನ ಸ್ಫುರಣರೂಪವಾಗಿರುವ ಜಗತ್ತಿನ ರೂಪವೂ ಅಂತಹುದೇ ಆಗಿರುವುದು ॥೫೧॥

ಮನಸ್ಸು ಬುದ್ಧಿ ಅಹಂಕಾರ ಪಂಚಭೂತ ಪರ್ವತ ದಿಕ್ಕು—ಇತ್ಯಾದಿರೂಪವಾಗಿ ಜಗ ತ್ತಿನ ಯಾವಯಾವ ರಚನೆಗಳಿರುವುವೋ, ಅವೆಲ್ಲವೂ ವಾಸ್ತವಿಕವಾಗಿ ಆ ಚಿತ್ತಿನ ರಚನೆ ಗಳಲ್ಲದೆ ಬೇರೆಯಲ್ಲವೆಂದು ತಿಳಿಯಬೇಕು ॥ ೫೨ ॥

ಅಯ್ಯಾ ! ರಾಮ ! ಹೀಗೆ ಜಗತ್ತು ಚಿನ್ಮಯವಾಗಿರುವುದರಿಂದ, ಆ ಚಿತ್ತು ಚಿತ್ತಾ ಗುವಿಕೆಯು ಈ ಜಗತ್ತೇಯೆಂದು ನೀನು ತಿಳಿಯಬೇಕು; ಜಗತ್ತಿಲ್ಲದಾಗ ಅಚಿತ್ತಾಗುವುದು.

ಚಿತೇರ್ಮರೀಚಿಬೀಜಸ್ಯ ನಿಜಾ ಯಾಸ್ತಿ ಶ್ಛಮುತ್ಕೃತಿಃ ।
ಸಾ ಚೈಷಾ ಜೀವತನ್ಮಾತ್ರಮಾತ್ರಂ ಜಗದಿತಿ ಸ್ಥಿತಾ ॥೫೪॥
ಚಿತ್ತಾತ್ ಸ್ವಶಕ್ತಿಕಚನಂ ಯದಹಮ್ಭಾವನಂ ಚಿತಃ ।
ಜೀವಃ ಸ್ಪನ್ದನಕರ್ಮಾತ್ಮಾ ಭವಿಷ್ಯದಭಿಧೋ ಹ್ಯಸೌ ॥೫೫॥
ಯಚ್ಚಿ ಚ್ಚಿತ್ತ್ವೇನ ಕಚನಂ ಸ್ವಸಮ್ಪಾದ್ಯಾಭಿಧಾತ್ಮಕಮ್ ।
ಸ್ವವಿಕಾರೈರ್ವ್ಯವಚ್ಛೇದ್ಯಂ ಭಿದ್ಯತೇ ನೋ ನ ವಿದ್ಯತೇ॥೫೬॥
ಚಿತ್ಸ್ಪನ್ದರೂಪಿಣೋರಸ್ತಿ ನ ಭೇದಃ ಕರ್ತೃಕರ್ಮಣೋಃ ।
ಸ್ಪನ್ದಮಾತ್ರಂ ಭವೇತ್ ಕರ್ಮ ಸಏವ ಪುರುಷಃ ಸ್ಮೃತಃ ॥೫೭॥
ಜೀವಶ್ಚಿತ್ತಪರಿಸ್ಪನ್ದಃ ಪುಂಸಾಂ ಚಿತ್ತಂ ಸಏವ ಚ ।
ಮನಸ್ತ್ವಿನ್ದ್ರಿಯರೂಪಂ ಸತ್ ಸತ್ತಾಂ ನಾನೇವ ಗಚ್ಛತಿ ॥೫೮॥

(ಜಗತ್ತೆಂಬುದು ಯಾವಾಗ ಕಾಣುವುದೋ, ಆಗ ಚಿತ್ತಿನಲ್ಲಿ ಆ ಧರ್ಮವು ಇರುವುದೆಂದೂ, ಅದಿಲ್ಲದಾಗ ಆ ಚಿತ್ತು ನಿರ್ಗುಣವಾಗಿರುದೆಂದೂ ಭಾವವು) ಹೀಗೆ ತೋರುತಿರುವುದರಿಂದ ಭೇದವಲ್ಲದೆ, ಜಗತ್ತೆಂಬುದು ವಾಸ್ತವ್ಯವಾಗಿ ಎಲ್ಲಿರುವುದು? ॥ ೫೩ ॥

ಸಮಸ್ತವಿಧವಾದ ತೇಜಸ್ಸಿಗೂ ಬೀಜರೂಪವಾಗಿರುವ ಈ ಚಿತ್ತಿನೊಳಗೆ ಸ್ವಕೀಯವಾದ ಯಾವ ವಿಕಾಸವಿರುವುದೋ, ಅದೇ ಜೀವರೂಪವಾಗಿಯೂ ಪಂಚತನ್ಮಾತ್ರರೂಪವಾಗಿಯೂ ಕಾಣಿಸಿಕೊಂಡು, ಜಗತ್ತೆಂಬ ವ್ಯವಹಾರಕ್ಕೆ ವಿಷಯವಾಗಿರುವುದು ॥೫೪॥

ಬಳಿಕ, ಈ ಚಿತ್ತಿಗೆ ಚಿತ್ತದದೆಸೆಯಿಂದ ಅಹಂಕಾರಸ್ಫುರಣರೂಪವಾದ ಶಕ್ತಿವಿಕಾಸವಾಗುವುದು; ಇದೇ ಚಲನರೂಪವಾದುದಾಗಿ ಮುಂದೆ ಜೀವನೆಂಬ ಅಭಿಧಾನವುಳ್ಳದಾಗುವುದು ॥೫೫॥

ಆದರೆ, ಈ ಚಿತ್ತು ತನ್ನ ಚಿತ್ಸ್ವಭಾವದಿಂದ ವಿಕಾಸಹೊಂದಿ ತನ್ನ ವಿಕಾರಗಳಾಗಿರುವ ಜೀವಾದಿರೂಪಗಳಿಂದ ಮುಂದೆ ನಾನಾವಿಧವಾದ ನಾಮಧೇಯಗಳಿಗೆ ವಿಷಯವಾಗುವಕಾರಣ, ಯದ್ಯಪಿ ಭೇದವಿರುವಂತೆ ತೋರುವುದು; ಆದರೂ, ಈ ಭೇದವು ಒಂದು ಉಪಾಧಿಯಿಂದ ಉಂಟಾಗಿರುವುದರಿಂದಲೂ ಉಪಾಧಿಯು ಮಿಥ್ಯಾಭೂತವಾಗಿರುವುದರಿಂದಲೂ-ಈ ಉಪಾಧಿಯಿಂದುಂಟಾದ ಭೇದವೂ ಸಂಭವಿಸುವುದಿಲ್ಲವೆಂದೂ ಅದು ಖಂಡಿತವಾಗಿ ಇಲ್ಲವೆಂದೂ ತಿಳಿಯಬೇಕು ॥೫೬॥

ಪ್ರಪಂಚದಲ್ಲಿ ಕರ್ತೃವೆಂದೂ ಕರ್ಮವೆಂದೂ ಭೇದವ್ಯವಹಾರವುಂಟಷ್ಟೆ! ಕೇವಲ ಚಲನಮಾತ್ರವೇ ಕರ್ಮವೆನ್ನಿಸುವುದು; ಇದೇ ಜೀವನೆಂದೂ ಹೇಳಲ್ಪಟ್ಟಿರುವುದು. ಅದು ಕಾರಣ, ಹೀಗೆ ಚಿತ್ಸ್ಪಂದರೂಪಗಳಾಗಿರುವ ಕರ್ತೃಕರ್ಮಗಳಿಗೆ ಭೇದವೆಂದಿಗೂ ಇಲ್ಲ ॥೫೭॥

ಹೀಗೆ ಚಿತ್ತಚಲನೆಯೇ ಜೀವವೆನ್ನಿಸುವುದು; ಮತ್ತು ಚಿತ್ತವೆಂಬುದೂ ಕೂಡ ಆ ಚಲನೆಯೇ ಆಗಿರುವುದು. ಮನಸ್ಸೆಂಬುದಾದರೋ, ಇಂದ್ರಿಯರೂಪವಾದುದಾಗಿ ನಾನಾವಿಧವಾದ ಸತ್ತೆಯನ್ನು ಹೊಂದುವಂತೆ ಕಾಣುವುದು. ಹೀಗೆ ಜೀವನಿಗೆ ಉಪಾಧಿಭೂತವಾದ ಮನಸ್ಸೇ ಆಕಾರಭೇದದಿಂದ ಇಂದ್ರಿಯಾದಿರೂಪವಾಗಿರುವಕಾರಣ, ಚಿತ್ತ ಮನಸ್ಸು ಇಂದ್ರಿಯ ಇತ್ಯಾದಿ ರೂಪಹೊಂದಿದಾಗಲೂ ಜೀವಭೇದವುಂಟಾಗುವುದಿಲ್ಲವೆಂದು ತಿಳಿಯಬೇಕು॥೫೮॥

ಶಾನ್ತಾಶೇಷವಿಶೇಷಂ ಹಿ ಚಿತ್ಪ್ರಕಾಶಚ್ಛಟಾ ಜಗತ್ |
ಕಾರ್ಯಕಾರಣಕಾದಿತ್ವಂ ತಸ್ಮಾದನ್ಯನ್ನ ವಿದ್ಯತೇ ||೫೯||
ಅಚ್ಛೇದ್ಯೋಽಹಮದಾಹ್ಯೋಽಹಂ ಅಕ್ಲೇದ್ಯೋಽಶೋಷ್ಯ ಏವ ಚ |
ನಿತ್ಯಃ ಸರ್ವಗತಃ ಸ್ಥಾಣುಃ ಅಚಲೋಽಹಮಿತಿ ಸ್ಥಿತಮ್ ||೬೦||
ವಿವದನ್ತೇ ತಥಾ ಹ್ಯತ್ರ ವಿವದನ್ತೇ ಯಥಾ ಭ್ರಮೈಃ |
ಭ್ರಮಯನ್ತೋ ವಯಂ ತ್ವೇತೇ ಜಾತಾವಿಗತವಿಭ್ರಮಾಃ ||೬೧||
ದೃಶ್ಯೇ ಮೂರ್ತೇಽಜ್ಞಸಂರೂಢೇ ವಿಕಾರಾದಿ ಪೃಥಗ್ಭವೇತ್ |
ನಾಮೂರ್ತೇ ತಜ್ಜ್ಞಕಚಿತೇ ಚಿತ್ಖೇ ಸದಸದಾತ್ಮನಿ ||೬೨||
ಚಿತ್ತರೌ ಚೇತ್ಯರಸತಃ ಶಕ್ತಿಃ ಕಾಲಾದಿನಾಮಿಕಾಮ್ |
ತನೋತ್ಯಾಕಾಶವಿಶದಾಂ ಚಿನ್ಮಧುಶ್ರೀಃ ಸ್ವಮಞ್ಜರೀಮ್ ||೬೩||
ಸ್ವಯಂ ವಿಚಿತ್ರಂ ಸ್ಫುರತಿ ಚಿದಣ್ಡಕಮನಾಹತಮ್ |
ಸ್ವಯಂ ವಿಲಕ್ಷಣಸ್ಪನ್ದಂ ಚಿದ್ವಾಯುರಣ್ಡಜಾತ್ಮಕಃ ||೬೪||

ಹೀಗೆ ಬಲ್ಬಜವಾದ ಕಾರ್ಯಕಾರಣ ಸ್ವಭಾವರೂಪವಾದ ಜಗತ್ತು, ಆ ಚಿತ್ತಿನ ಪ್ರಕಾಶದ ಒಂದು ಭಾಗವಾಗಿರುವುದಲ್ಲದೆ ಬೇರೆಯಲ್ಲ; ಅದುಕಾರಣ, ಮತ್ತೊಂದು ಪದಾರ್ಥವಾವುದೂ ಇಲ್ಲ. ಅಂತು ಸಮಸ್ತವಿಕಾರಶೂನ್ಯವಾಗಿ ನಿರುಪಪ್ಲವವಾಗಿರುವ ಆ ಪ್ರತ್ಯಗಾತ್ಮವೊಂದೇ ಇರುವುದೆಂದು ಸಿದ್ಧವಾಯಿತು ॥೫೯॥

ಇಂತಹ ಪರಬ್ರಹ್ಮವು—ನಾನು ಭೇದಿಸುವುದಕ್ಕೆ ಅಸಾಧ್ಯನೆಂದೂ, ಸುಡುವುದಕ್ಕೆ ಅಸಾಧ್ಯನೆಂದೂ, ನೆನೆಯಿಸುವುದಕ್ಕೂ ಒಣಗಿಸುವುದಕ್ಕೂ ಅಸಾಧ್ಯನೆಂದೂ, ಮತ್ತು ನಾನು ನಿತ್ಯನಾಗಿ ಸರ್ವಗತನಾಗಿ ಸ್ಥಿರತರನಾಗಿ ಅಚಂಚಲನಾಗಿರುವೆನೆಂದೂ—ಭಾವಿಸುತಿರುವುದು ॥೬೦॥

ಆದರೆ ಈ ತತ್ವವನ್ನು ತಿಳಿಯದವರು, ತಮ್ಮ ಭ್ರಾಂತಿಯಿಂದ ಇತರರನ್ನೂ ಭ್ರಮೆಗೊಳಿಸುವ ವಿವಾದಮಾಡತಕ್ಕವರಂತೆ, ನಾನಾವಿಧವಾಗಿ ವಿವಾದಮಾಡುವರು. ನಾವಾದರೋ, ಈ ವಿಧವಾದ ಭ್ರಮೆಯೆಲ್ಲವನ್ನೂ ಕಳೆದುಕೊಂಡಿರುವೆವು ॥೬೧॥

ಈ ಚಿದಾಕಾಶವು ಸದಸತ್ಸ್ವರೂಪವಾಗಿರುವುದು ; ಇದನ್ನು ಅಜ್ಞನಾದವನು ಆಕಾರವತ್ತಾದ ದೃಶ್ಯವೆಂದು ಕಲ್ಪಿಸಿಕೊಂಡು, ಅದರಲ್ಲಿ ಬೇರೆಬೇರೆಯಾಗಿ ವಿಕಾರವುಂತಾದುವುಗಳನ್ನು ಎಣಿಸುವನು; ಪ್ರಾಜ್ಞನಾದವನಿಗೆ ಈ ಆಕಾರವುಂತಾದ ಕಲ್ಪನೆಯೊಂದೂ ಉಂಟಾಗುವುದಿಲ್ಲ ॥೬೨॥

ಚಿತ್ತೆಂಬುದೇ ಒಂದು ವೃಕ್ಷವೆಂದು ಭಾವಿಸಿದರೆ, ಅದಕ್ಕೆ ಚೇತನೀಯದಲ್ಲಿ ಆಸಕ್ತಿಯೆಂಬುದೇ ಜಲಸೇಚನೆಯಾಗುವುದು; ಮತ್ತು, ಆ ಚಿತ್ತೇ ಒಂದು ವಸಂತಲಕ್ಷ್ಮಿಯಾಗಿ, ಆ ಶಕ್ತಿಯು ಈ ವೃಕ್ಷದಲ್ಲಿ ಆಕಾಶದಂತೆ ನಿರ್ಮಲವಾದ ಕಾಲವುಂತಾದ ಪುಷ್ಪಮಂಜರಿಯನ್ನು ಯಥೇಚ ವಾಗಿ ಉಂಟುಮಾಡುವುದು ॥೬೩॥

ಅಯ್ಯಾ! ರಾಮ! ಆ ಪರಬ್ರಹ್ಮವು ಸ್ವಾಧೀನವಾದ ಕಲ್ಪನಾವಿಶೇಷದಿಂದ ಜಗದ್ಭಾವವನ್ನೂ ಜೀವಭಾವವನ್ನೂ ಹೊಂದಿರುವಂತೆಯೋ, ಸ್ವಾಧೀನವಾದ ಬೋಧಕ್ರಮ

ಸ್ವಯಂ ವಿಚಿತ್ರಂ ಕಚನಂ ಚಿದ್ವಾರಿ ನ ನಿಖಾತಗಮ್ |
ಸ್ವಯಂ ವಿಚಿತ್ರಧಾತುತ್ವಂ ಶ್ರೇಷ್ಠಾಂಗಮಪಿ ನಿರ್ಮಿತಮ್ ||೬೫||
ಸ್ವವಿಚಿತ್ರರಸೋಲ್ಲಾಸಾ ಚಿಜ್ಜ್ಯೋತ್ಸ್ನಾ ಸತತೋದಿತಾ |
ಸ್ವಯಂ ಚಿದೇವ ಪ್ರಕಟಃ ಚಿದಾಲೋಕೋ ಮಹಾತ್ಮಕಃ ||೬೬||
ಸ್ವಯಮಸ್ತಂ ಗತೇ ಬಾಹ್ಯೇ ಸ್ವಜ್ಞಾನಾದುದಿತಾ ಚಿತಿಃ |
ಸ್ವಯಂ ಜಡೇಷು ಜಾಡ್ಯೇಷು ಪದಂ ಸೌಷುಪ್ತಮಾಗತಾ |
ಸ್ವಯಂ ಸ್ಪನ್ದಿತಯಾ ಸ್ಪನ್ದಿ ಚಿತ್ತ್ವಮೃಚ್ಛತಿ ಮಹಾನಭಃ ||೬೭||
ಚಿತ್ಪ್ರಕಾಶಪ್ರಕಾಶೋ ಹಿ ಜಗದಸ್ತಿ ಚ ನಾಸ್ತಿ ಚ |
ಚಿದಾಕಾಶೈಕಶೂನ್ಯತ್ವಂ ಜಗದಸ್ತಿ ಚ ನಾಸ್ತಿ ಚ ||೬೮||

ದಿಂದ ಸ್ವಸ್ವರೂಪಾವಸ್ಥಾನಹೊಂದುವುದೆಂಬ ವಿಷಯವನ್ನೂ ನೀನು ತಿಳಿಯಬೇಕು. ಹೇಗೆಂದರೆ:—ಈ ಚಿತ್ತು ಅಖಂಡಾಕಾರವಾಗಿ ತಾನು ವಿಚಿತ್ರವಾದ ಬ್ರಹ್ಮಾಂಡರೂಪವಾಗಿ ಸ್ಫುರಿಸುವುದು; ಆ ಚಿತ್ತೇ ವಿಲಕ್ಷಣವಾದ ಚಲನೆಯನ್ನು ಹೊಂದಿ, ಬ್ರಹ್ಮಾಂಡದಲ್ಲಿ ಹುಟ್ಟಿರುವ ವಾಯು ರೂಪವಾಗಿಯೂ ಸ್ಫುರಿಸುವುದು ||೬೪||

ಜಲವೆಂಬುದೂ ಕೂಡ ಆ ಚಿತ್ತಿನ ವಿಚಿತ್ರವಾದ ವಿಕಾಸವೇ ಆಗಿರುವುದು. ಅಷ್ಟೇ ಹೊರತು, ಭೂಮಿಯನ್ನು ಅಗೆದು ಅಲ್ಲಿ ನೀರುಂಟಾಯಿತೆಂದು ತಿಳಿಯಬಾರದು ; ಜಲಸೃಷ್ಟಿಯಾದಮೇಲೆ ಪೃಥಿವೀಸೃಷ್ಟಿಯಾಗುವುದರಿಂದ, ಭೂಮಿಯನ್ನು ಅಗೆದಮೇಲೆ ಜಲಬರುತ್ತದೆಂಬುದೆಲ್ಲಿರುವುದು? ಮತ್ತು, ಆ ಚಿತ್ತೇ ನಾನಾವಿಧ ಧಾತುಮಯವಾದ ಪೃಥಿವೀರೂಪವಾಗಿಯೂ, ದೇವಾಸುರಮನುಷ್ಯಾದಿರೂಪವಾದ ಶ್ರೇಷ್ಠಶರೀರರೂಪವಾಗಿಯೂ ನಿರ್ಮಿತವಾಗಿರುವುದು ||೬೫||

ಮತ್ತು ಆ ಚಿತ್ತೇ ತನ್ನ ವಿಚಿತ್ರವಾದ ರಸದಿಂದ ವಿಕಾಸಹೊಂದುವ ಚಂದ್ರಿಕಾರೂಪವಾಗಿ ಸರ್ವದಾ ಉದಯಿಸಿರುವುದು; ಆ ಚಿತ್ಪ್ರಕಾಶವೇ ತೇಜೋರೂಪವಾಗಿಯೂ ಪ್ರಕಾಶಹೊಂದಿರುವುದು ||೬೬||

ಈ ವಿಧವಾಗಿರುವ ಆ ಚಿತ್ತು, ಬಾಹ್ಯವಾದ ದೃಶ್ಯವೆಲ್ಲವೂ ತನ್ನ ಜ್ಞಾನದಿಂದಲೇ ಅಸ್ತಹೊಂದಲಾಗಿ, ತಾನು ಪರಿಪೂರ್ಣಭಾವವುಳ್ಳದಾಗಿರುವುದು. ಸ್ಥಾವರಾದಿಜಡಪದಾರ್ಥಗಳಲ್ಲಿ ಜಡತ್ವವುಂಟಾದಾಗಲೂ, ಅದೇ ಚಿತ್ತು ಸುಷುಪ್ತಾವಸ್ಥೆಯನ್ನು ಹೊಂದಿರುವುದು. ಮುಖ್ಯವೇನೆಂದರೆ:—ಆ ಮಹಾಕಾಶವು ವಿಚಾರವಿಲ್ಲದೆ ಚಲನಾತ್ಮಕತ್ವವನ್ನು ಕಲ್ಪಿಸಿಕೊಂಡಾಗ ಚಲನೆಯುಳ್ಳದಾಗುವುದು; ಆತ್ಮವಿಚಾರದಿಂದ ಚಿದ್ಭಾವಜ್ಞಾನವುಂಟಾದಾಗಲಾದರೋ, ಚಿದ್ರೂಪವಾದ ಸ್ವಸ್ವಭಾವದಲ್ಲಿಯೇ ಅವಸ್ಥಿತವಾಗಿರುವುದು ||೬೭||

ಅಯ್ಯಾ! ರಾಮ! ಮತ್ತೊಂದುವಿಧವಾಗಿ ವಿಚಾರಮಾಡಬೇಕಾಗಿರುವುದು:— ಹೀಗೆ ಪೂರ್ವೋಕ್ತಸ್ಥಿತಿಯಲ್ಲಿರುವವನಿಗೆ ಜಗತ್ತೆಂಬುದು ಇರುವುದೆ?-ಅಥವಾ ಇಲ್ಲವೆ? ಇರುವುದೆಂದು ಹೇಳಿದರೆ, ಸಂಸಾರಸಂಬಂಧವುಂಟಾಗುವುದೆನ್ನಬೇಕಾಗುವುದು ; ಇಲ್ಲವೆಂದರೋ, ಆಗ ಅಸತ್ತಾದುದನ್ನು ಕುರಿತು ಅನಾವಶ್ಯಕ ವಿಚಾರಮಾಡಿದಂತಾಗುವುದು. ಹೀಗಿರುವುದರಿಂದ ಜಗತ್ತು ಇರುವುದೆಂದು ಹೇಳಬೇಕೆ?– ಅಥವಾ ಇಲ್ಲವೆಂದು ಹೇಳಬೇಕೆ?—ಎಂದರೆ, ಬ್ರಹ್ಮವೇ ಜಗತ್ತಾಗಿರುವುದರಿಂದ ಅಂತಹ ಬ್ರಹ್ಮರೂಪವಾದ ಜಗ

ಚಿದಾಲೋಕಮಹಾರೂಪಂ ಜಗದಸ್ತಿ ಚ ನಾಸ್ತಿ ಚ ।
ಚಿನ್ಮಾರುತಪರಿಸ್ಪನ್ದೋ ಜಗದಸ್ತಿ ಚ ನಾಸ್ತಿ ಚ ॥೧೯॥
ಚಿದ್ಘನಧ್ವಾನ್ತಕೃಷ್ಣತ್ವಂ ಜಗದಸ್ತಿ ಚ ನಾಸ್ತಿ ಚ ।
ಚಿದರ್ಕಾಲೋಕದಿವಸೋ ಜಗದಸ್ತಿ ಚ ನಾಸ್ತಿ ಚ ॥೨೦॥
ಚಿತ್ಕಜ್ಜಲರಜಸ್ತೈಲಪರಮಾಣುರ್ಜಗತ್ಕ್ರಮಃ ।
ಚಿದಗ್ನ್ಯೌಷ್ಣ್ಯಂ ಜಗಲ್ಲೇಖಾ ಜಗಚ್ಚಿಚ್ಛಙ್ಖಶುಕ್ಲತಾ ॥೨೧॥
ಜಗಚ್ಚಿಚ್ಛೈಲಜಠರಂ ಚಿಜ್ಜಲದ್ರವತಾ ಜಗತ್ ।
ಜಗಚ್ಚಿದಿಕ್ಷುಮಾಧುರ್ಯಂ ಚಿತ್ಕ್ಷೀರಸ್ನಿಗ್ಧತಾ ಜಗತ್ ॥೨೨॥
ಜಗಚ್ಚಿದ್ಧಿಮಶೀತತ್ವಂ ಚಿಜ್ಜ್ವಾಲಾಜ್ವಲನಂ ಜಗತ್ ।
ಜಗಚ್ಚಿತ್ಸರ್ಷಪಸ್ನೇಹೋ ವೀಚಿಶ್ಚಿತ್ಸರಿತೋ ಜಗತ್ ॥೨೩॥
ಜಗಚ್ಚಿತ್ಕ್ಷೌದ್ರಮಾಧುರ್ಯಂ ಜಗಚ್ಚಿತ್ಕನಕಾಙ್ಗದಮ್ ।
ಜಗಚ್ಚಿತ್ಪುಷ್ಪಸೌಗನ್ಧ್ಯಂ ಚಿಲ್ಲತಾಗ್ರಫಲಂ ಜಗತ್ ॥೨೪॥
ಚಿತ್ಸತ್ತೈವ ಜಗತ್ಸತ್ತಾ ಜಗತ್ಸತ್ತೈವ ಚಿದ್ವಪುಃ ।
ಅತ್ರ ಭೇದವಿಕಾರಾದಿ ನ ಖೇ ಮಲಮಿವ ಸ್ಥಿತಮ್ ॥೨೫॥

ತ್ತಿರುವುದೆಂದೇ ಹೇಳಬೇಕು. ಅದು ಸ್ವಯಂಜಗದ್ರೂಪವಾಗಿ ಇರುವುದೆಂಬ ಪಕ್ಷವನ್ನುಮಾತ್ರ ಒಪ್ಪುವುದಸಾಧ್ಯವು. ಆದುಕಾರಣ, ಚಿತ್ಪ್ರಕಾಶದ ಪ್ರಕಾಶರೂಪವಾದ ಜಗತ್ತು ಬ್ರಹ್ಮಸತ್ತೆಯಿಂದಿರುವುದೆಂದೂ ಸ್ವಸತ್ತೆಯಿಂದಿಲ್ಲವೆಂದೂ ತಿಳಿಯಬೇಕು. ಹೀಗೆಯೇ, ಚಿದಾಕಾಶದ ಮುಖ್ಯಶೂನ್ಯತ್ವರೂಪವಾಗಿಯೂ, ಚಿದಾಲೋಕದ ಮಹಾರೂಪವಾಗಿಯೂ, ಚಿತ್ತೆಂಬ ಮಾರುತನ ಚಲನರೂಪವಾಗಿಯೂ, ಚಿತ್ತೆಂಬ ಮೇಘಾಂಧಕಾರದ ಕೃಷ್ಣತ್ವವಾಗಿಯೂ, ಚಿತ್ತೆಂಬ ಸೂರ್ಯಪ್ರಕಾಶದಿವಸವಾಗಿಯೂ ಇರುವ ಜಗತ್ತು, ಬ್ರಹ್ಮಸತ್ತೆಯಿಂದ ಇರುವುದೆಂದೂ ಆತ್ಮಸತ್ತೆಯಿಂದ ಇಲ್ಲವೆಂದೂ ತಿಳಿಯಬೇಕು ॥ ೧೯-೨೦॥

ಇನ್ನೂ ಈ ಜಗತ್ಸ್ವರೂಪವು ಹೇಗಿರುವುದೆಂದರೆ:—ಚಿತ್ತೆಂಬ ಕಾಡಿಗೆಯೊಳಗೆ ಪರಮಾಣುರೂಪವಾಗಿರುವ ತೈಲವಾಗಿಯೂ, ಚಿತ್ತೆಂಬ ಅಗ್ನಿಯ ಉಷ್ಣತ್ವವಾಗಿಯೂ, ಚಿತ್ತೆಂಬ ಶಂಖದ ಶುಕ್ಲತ್ವವಾಗಿಯೂ, ಚಿತ್ತೆಂಬ ಪರ್ವತದ ಗುಹೆಯಾಗಿಯೂ, ಚಿತ್ತೆಂಬ ಜಲದ ದ್ರವತ್ವವಾಗಿಯೂ, ಚಿತ್ತೆಂಬ ಕಬ್ಬಿನ ಮಾಧುರ್ಯವಾಗಿಯೂ, ಚಿತ್ತೆಂಬ ಹಾಲಿನ ಜಿಡ್ಡಾಗಿಯೂ, ಚಿತ್ತೆಂಬ ಹಿಮದ ಶೈತ್ಯವಾಗಿಯೂ, ಚಿತ್ತೆಂಬ ಜ್ವಾಲೆಯ ಉರಿಯೋಣವಾಗಿಯೂ, ಚಿತ್ತೆಂಬ ಸಾಸುವೆಯ ಎಣ್ಣೆಯಾಗಿಯೂ, ಚಿತ್ತೆಂಬ ನದಿಯ ಅಲೆಯಾಗಿಯೂ, ಚಿತ್ತೆಂಬ ಜೇನುತುಪ್ಪದ ಮಾಧುರ್ಯವಾಗಿಯೂ, ಚಿತ್ತೆಂಬ ಚಿನ್ನದ ಅಂಗದವಾಗಿಯೂ, ಚಿತ್ತೆಂಬ ಪುಷ್ಪದ ಸುವಾಸನೆಯಾಗಿಯೂ, ಚಿತ್ತೆಂಬ ಲತೆಯ ತುದಿಯಲ್ಲಿರುವ ಫಲವಾಗಿಯೂ ಇರುವುದು ॥ ೨೧—೨೪॥

ಅಂತು, ಚಿತ್ತಿನ ಸತ್ತೆಯೇ ಜಗತ್ತಿನ ಸತ್ತೆಯು; ಜಗತ್ತಿನ ಸತ್ತೆಯೇ ಚಿತ್ತಿನ ದೇಹವು. ಈಯೆರಡಕ್ಕೂ ಭೇದ ವಿಕಾರ ಮುಂತಾದುದು, ಆಕಾಶದಲ್ಲಿ ಮಲದಂತೆ, ಸುತರಾಂ ಇಲ್ಲವೆಂದು ತಿಳಿಯಬೇಕು ॥ ೨೫ ॥

ಇತೀದಂ ಸನ್ಮಯತ್ವೇನ ಸದಸದ್ಭುವನತ್ರಯಮ್ ।
ಅವಿಕಲ್ಪತದಾತ್ಮತ್ವಾತ್ ಸತ್ತಾಸತ್ತೈಕತೈವ ಚ ॥೭೬॥
ಅವಯವಾವಯವಿತಾಶಬ್ದಾರ್ಥೌ ಶಶಶೃಙ್ಗವತ್ ।
ಅನುಭೂತ್ಯಪಲಾಪಾಯ ಕಲ್ಪಿತೌ ಯೈರ್ಧಿಗಸ್ತು ತಾನ್ ॥೭೭॥
ನ ವಿದ್ಯತೇ ಜಗದ್ಯತ್ರ ಸಾದ್ರ್ಯಬ್ಧ್ಯುರ್ವೀನದೀಶ್ವರಮ್ ।
ಚಿದೇಕತ್ವಾತ್ ಪ್ರಸಙ್ಗಃ ಸ್ಯಾತ್ ಕಸ್ತತ್ರೇತರವಿಭ್ರಮಃ ॥೭೮॥
ಶಿಲಾಹೃದಯಪೀನಾಪಿ ಸ್ವಾಕಾಶೇ ವಿಶದೈವ ಚಿತ್ ।
ಧತ್ತೇಽನ್ತರಖಿಲಂ ಶಾನ್ತಂ ಸನ್ನಿವೇಶಂ ಯಥಾ ಶಿಲಾ ॥೭೯॥
ಪದಾರ್ಥನಿಕರಾಕಾಶೇ ತ್ವಯಮಾಕಾಶಜೋ ಮಲಃ ।
ಸತ್ತಾಸತ್ತಾತ್ಮತಾತ್ವತ್ತಾಮತ್ತಾಶ್ಲೇಷಾನ ಸನ್ತಿ ತೇ ॥೮೦॥

ಈ ರೀತಿಯಾಗಿ ಈ ಪ್ರಪಂಚವು ಸ್ವತಃ ಅಸತ್ತಾಗಿದ್ದರೂ ಸತ್ತಾದ ಆ ಪರಬ್ರಹ್ಮಮಯವಾಗಿರುವುದರಿಂದ ಸತ್ತೆಂದು ತಿಳಿಯಬೇಕು. ಹಾಗಾದರೆ ಈ ಜಗತ್ತಿನ ಅಸದ್ಭಾವವೆಂಬುದೇ ಒಂದು ಪದಾರ್ಥವಾಗಬಹುದಲ್ಲವೆ !—ಎಂದರೆ, ಈ ಜಗತ್ಸದ್ಭಾವವೂ ಅಸದ್ಭಾವವೂ ಇವೆರಡೂ ಕಲ್ಪಿತಗಳಾಗಿರುವುದರಿಂದ, ಇವೆರಡೂ ಬೇರೆಬೇರೆಯಾದ ಆಶ್ರಯದಲ್ಲಿರುವುದೇ ಕಾಣುವುದಿಲ್ಲವಾದಕಾರಣ, ಈ ಸದ್ಭಾವಾಸದ್ಭಾವಗಳೆರಡೂ ಒಂದೇಯೆಂದು ತಿಳಿಯಬೇಕು ॥೭೬॥

ಈಗ ಮತ್ತೊಂದು ವಿಧವಾಗಿ ಶಂಕಿಸಬಹುದು:—ಜಗತ್ತು ಸಾವಯವವೆಂದೂ ಬ್ರಹ್ಮನು ನಿರವಯವನೆಂದೂ ಪ್ರತ್ಯಕ್ಷವಾಗಿರುವುದರಿಂದ, ಇವೆರಡಕ್ಕೂ ಅಭೇದವನ್ನು ಹೇಳುವುದು ಯುಕ್ತಿಯುಕ್ತವಲ್ಲವೆಂದು ತಾರ್ಕಿಕಾದಿಗಳು ವಾದಿಸುವರಲ್ಲವೆ! ಇದು ಯುಕ್ತವಲ್ಲ. ಅವಯವ ಅವಯವಿ ಇತ್ಯಾದಿ ಪದಾರ್ಥಗಳು ಶಶಶೃಂಗದಂತೆ ಅತ್ಯಂತಾಸಂಭವಗಳೆಂದು ಜ್ಞಾನಿಗಳ ಅನುಭವವಿರುವುದು. ಇಂತಹ ಅನುಭವವನ್ನು ಅಪಲಪಿಸುವುದಕ್ಕೋಸ್ಕರ, ಯಾರು ಈ ಅವಯವಾದಿ ಪದಾರ್ಥಗಳನ್ನು ಕಲ್ಪಿಸಿಕೊಂಡಿರುವರೋ, ಅವರು ನಿಂದನೀಯರೆಂದು ತಿಳಿಯಬೇಕು ॥೭೭॥

ಕಾರಣವೇನೆಂದರೆ:—ಪರ್ವತ ಸಮುದ್ರ ಭೂಮಿ ನದಿ ತತ್ತದಧಿಪತಿಗಳು—ಇವೆಲ್ಲರೊಡನೆ ಯುಕ್ತವಾದ ಜಗತ್ತೇ ಯಾವಾಗ ಇಲ್ಲವಾಯ್ತೋ, ಆಗ ಇತರವಾದ ಅವಯವಾದಿಗಳ ಭ್ರಾಂತಿಪ್ರಸಕ್ತಿಯೆಲ್ಲಿರುವುದು ? ॥೭೮॥

ಮತ್ತು ಆ ಚಿತ್ತು, ಸ್ಫಟಿಕಶಿಲೆಯ ಒಳಭಾಗದಂತೆ ನಿಬಿಡವಾಗಿರುವುದಾದರೂ, ನಿರ್ಮಲವಾಗಿರುವ ಕಾರಣ, ಮಿಥ್ಯಾಭೂತವಾಗಿ ಅಸತ್ತೇ ಆಗಿರುವ ಈ ಸಮಸ್ತವನ್ನೂ—ಸ್ಫಟಿಕಶಿಲೆಯು ಪ್ರತಿಬಿಂಬವಾದ ನಗರಾದಿಸನ್ನಿವೇಶವನ್ನೆಲ್ಲ ಧರಿಸುವಂತೆ—ಧರಿಸುವುದು ॥೭೯॥

ಹಾಗಾದಮೇಲೆ ಇದರ ಲೇಪವಿಲ್ಲವೋ—ಎಂದರೆ, ಅದು ಸುತರಾಂ ಇಲ್ಲ. ಸಕಲ ಪದಾರ್ಥಕ್ಕೂ ಅಧಿಷ್ಠಾನಭೂತವಾದ ಆ ಚಿದಾಕಾಶದಲ್ಲಿ, ಈ ವಾಯು ಮುಂತಾದ ಮಲಸಂಬಂಧವೇ ಇಲ್ಲ ; ಹೀಗಿರುವಾಗ, ಸತ್ತೆನ್ನುವುದೂ ಅಸತ್ತೆನ್ನುವುದೂ ನೀನೆನ್ನುವುದೂ

ಪಲ್ಲವಾನ್ತರಲೇಖೌಘಸನ್ನಿವೇಶವದಾತತಮ್ ।
ಅನ್ಯಾನನ್ಯಾತ್ಮಕಮಿದಂ ಧತ್ತೇಽನ್ತಶ್ಚಿತ್ ಸ್ವಭಾವತಃ ॥೮೧॥
ಸಮಸ್ತಕಾರಣೌಘಾನಾಂ ಕಾರಣಾದಿ ಪಿತಾಮಹಃ ।
ಸ್ವಭಾವತೋಽಕಾರಣಾತ್ಮ ಚಿತ್ತಂ ಚಿದ್ವ್ಯನುಭೂತಿತಃ ॥೮೨॥
ನ ಚಾಸತ್ತ್ವಮಚೇತ್ಯಾಯಾಃ ಚಿತೋ ವಾಚಾಪಿ ಸಿಧ್ಯತಿ ।
ಯದಸ್ತಿ ತದುದೇತೀತಿ ದೃಷ್ಟಂ ಬೀಜಾದಿವಾಙ್ಕುರಃ ॥೮೩॥

ನಾನೆನ್ನುವುದೂ ಇತ್ಯಾದಿ ಧರ್ಮಗಳ ಸಂಬಂಧವೊಂದೂ ಸುತರಾಂ ಸಂಭವಿಸುವುದಿಲ್ಲವೆಂದು ತಿಳಿಯಬೇಕು ॥೮೦॥

ಹಾಗೆ ಜಗತ್ಸನ್ನಿವೇಶವು ಅಸತ್ತಾಗಿದ್ದಪಕ್ಷದಲ್ಲಿ, ಅದು ಚಿತ್ತಿನಲ್ಲಿ ಕಾಣುವ ಬಗೆ ಹೇಗೆಂದರೆ:—ಯಾವುದಾದರೊಂದು ಎಲೆಯನ್ನು ತೆಗೆದುಕೊಂಡು ನೋಡಿದರೆ, ಅದರಲ್ಲಿ ಸಣ್ಣಸಣ್ಣ ನಾರುಗಳು ಅಸಂಖ್ಯಾಕವಾಗಿ ಅಂಟಿಕೊಂಡಿರುತ್ತವೆಯಲ್ಲವೆ! ಆ ನಾರುಗಳು ಆಯೆಲೆಗಿಂತ ಬೇರೆಯೆಂದು ವ್ಯವಹಾರವಿರುವುದೆ? ಅಥವಾ ಆಯೆಲೆಯನ್ನೇ ನಾರೆಂದು ವ್ಯವಹರಿಸುವರೆ? ಒಂದು ವಿಧವಾಗಿ ನೋಡಿದರೆ, ಎಲೆಯಲ್ಲಿ ನಾರಿದೆಯೆಂದು ವ್ಯವಹರಿಸುವುದರಿಂದ ಎಲೆಗೂ ನಾರಿಗೂ ಭೇದವಿದೆಯೆಂದು ಹೇಳಬೇಕಾಗುವುದು; ಮತ್ತೊಂದು ವಿಧವಾಗಿ ನೋಡಿದರೆ ಆಯೆಲೆಯೆಂಬುದೇ ನಾರಾಗಿರುವುದರಿಂದ ಅವೆರಡಕ್ಕೂ ಭೇದ ಹೇಳುವುದಯುಕ್ತವಾಗಿ ಕಾಣುವುದು. ಹೀಗೆಯೇ ಆ ಚಿತ್ತೂ ಕೂಡ ಈ ಪ್ರಪಂಚವನ್ನು ತನಗಿಂತ ಬೇರೆಯಾಗಿ ಕಾಣಿಸುವಂತೆಯೂ ಭೇದತೋರದಂತೆಯೂ ತನ್ನೊಳಗೆ ಧರಿಸಿಕೊಂಡಿರುವುದು ॥೮೧॥

ಹೀಗೆ ಈ ಜಗತ್ತು ನಿರ್ವಿಕಾರವಾದ ಆ ಚಿದಾಕಾಶದಿಂದ ಹುಟ್ಟಿತೆಂಬುದು ಅಸತ್ಯವೆಂದು ತಿಳಿದಮೇಲೆ, ಈಗ ಮಿಥ್ಯಾವಿಕಲ್ಪಸಹಪ್ರಮುಖನಾದ ಹಿರಣ್ಯಗರ್ಭನಿಂದ (ಸಮಷ್ಟಿಸೃಷ್ಟಿರೂಪ) ಈ ಜಗತ್ತು ಹುಟ್ಟಿದೆಯೆಂಬುದೂ ಅನೃತವೆಂಬುದನ್ನು ತೋರ್ಪಡಿಸುವೆನು. ಸಮಸ್ತಕಾರಣಸಮೂಹಗಳಿಗೂ ಆದಿಕಾರಣಭೂತನೆಂದು ತಿಳಿಯಲ್ಪಟ್ಟಿರುವ ಪಿತಾಮಹನು (ಬ್ರಹ್ಮ) ಯಾರು? ಈ ಚಿತ್ತವೇ ಅಲ್ಲವೆ! ಸ್ವಭಾವತಃ ನೋಡಿದರೆ, ಚಿತ್ತಕ್ಕೆ ಕಾರ್ಯಭೂತವಾದ ಮನೋರಥವಿಕಲ್ಪಾದಿಗಳೆಲ್ಲವೂ ಅಸತ್ಯವಾಗಿರುವುದರಿಂದ, ಚಿತ್ತವೇ ಅಸತ್ಯವಾಯ್ತು. ಹಾಗಾದಮೇಲೆ ಈ ಚಿತ್ತರೂಪರಾದ ಹಿರಣ್ಯಗರ್ಭನೂ ಅಸತ್ಪದಾರ್ಥವಾದನು. ಇಂಥವನಿಂದ ಈ ಜಗತ್ತು ಹುಟ್ಟಿತೆನ್ನುವುದು ಹೇಗೆ? ಈಚಿತ್ತವಿಕಲ್ಪಾದಿಗಳು ಅಸತ್ಯವೆಂದಂತೆಯೇ ಚಿತ್ತನ್ನೇ ಅಸತ್ತೆಂದು ಏಕೆ ಹೇಳಬಾರದೆಂದರೆ :— ಆ ಚಿತ್ತು ಸತ್ಯವಾದ ಪದಾರ್ಥವೆಂದು ಜ್ಞಾನಿಗಳ ಅನುಭವವಿರುವುದು ॥೮೨॥

ಹೀಗೆ ಚೇತನೀಯವಿಲ್ಲದಮೇಲೆ ಚಿತ್ತೇ ಇಲ್ಲದಂತಾಗುವುದಲ್ಲವೆ!-ಎಂದರೆ, ಹಾಗೆ ಹೇಳಕೂಡದು; ಇದು ಜ್ಞಾನಿಗಳ ಅನುಭವಕ್ಕೆ ವಿರುದ್ಧವಾಗಿರುವುದರಿಂದ, ಕೇವಲ ವಾಙ್ಮಾತ್ರದಿಂದ ಸಾಧಿಸುವುದಕ್ಕಾಗಲಾರದು. ಬೀಜದೊಳಗೆ ಮೊಳಕೆಯಿರುವುದೆಂದು ಸ್ಪಷ್ಟವಷ್ಟೆ! ಅದು ಹುಟ್ಟುವುದು ನಮ್ಮ ಅನುಭವಕ್ಕೆ ಬರುವಂತೆ, ಈ ಜಗತ್ತೂ ಸತ್ಯವಾಗಿದ್ದ ಪಕ್ಷದಲ್ಲಿ ಇದರ ಉತ್ಪತ್ತಿಯೂ ಅನುಭವವಿಷಯವಾಗಬೇಕಾಗಿತ್ತು. ಆದರೆ, ಇದು ಅಸತ್ಯವೆಂದೇ ಜ್ಞಾನಿಗಳ ಅನುಭವವಿರುವುದು ॥೮೩॥

ಗಗನಇವ ಸುಶೂನ್ಯಭೇದಮಸ್ತಿ ತ್ರಿಭುವನಮಜ್ಞ ಮಹಾಚಿತೋಽನ್ತರಸ್ಯಾಃ |
ಪರಮಪದಮಯಂ ಸಮಸ್ತದೃಶ್ಯಂ ತ್ವಿದಮಿತಿ ನಿಶ್ಚಯವಾನ್ ಭವಾನುಭೂತೇಃ ||

ಇತ್ಯುಕ್ತವತ್ಯಥ ಮುನೌ ದಿವಸೋ ಜಗಾಮ.
ಸಾಯನ್ತನಾಯ ವಿಧಯೇಽಸ್ತಮಿನೋ ಜಗಾಮ |
ಸ್ನಾತುಂ ಸಭಾ ಕೃತನಮಸ್ಕರಣಾ ಜಗಾಮ
ಶ್ಯಾಮಾಕ್ಷಯೇ ರವಿಕರೈಶ್ಚ ಸಹಾಜಗಾಮ ||೮೫||

ಇತಿ ಉತ್ಪತ್ತಿಪ್ರಕರಣೇ ಬ್ರಹ್ಮಪ್ರತಿಪಾದನಂ ನಾಮಚತುರ್ದಶಃ ಸರ್ಗಃ.

ತೃತೀಯೋ ದಿವಸಃ.

ಅಯ್ಯಾ ! ರಾಮ ! ಮತ್ತು, ಈ ದೃಶ್ಯವಿರುವುದೆಂದು ಹೆಚ್ಚಾಗಿ ಅಭಿನಿವೇಶವಿರುವಪಕ್ಷದಲ್ಲಿ, ಈರೀತಿಯಾಗಿ ನಿಷ್ಕರ್ಷೆಮಾಡಿಕೊಳ್ಳಬೇಕು:– ಆಕಾಶದಲ್ಲಿಯೋಪಾದಿಯಲ್ಲಿ– ಈ ಮಹಾಚಿತ್ತಿನೊಳಗೆ, ಈ ಭುವನತ್ರಯವೂ ಭೇದಶೂನ್ಯವಾಗಿ ಲೀನವಾಗಿರುವುದು; ಈ ಸಮಸ್ತವಾದ ದೃಶ್ಯವೂ ಆ ಪರಮಾತ್ಮ ಮಯವಾದುದಲ್ಲದೆ, ಸ್ವತಃ ಇರತಕ್ಕುದಲ್ಲ. ಈ ವಿಧವಾಗಿ ಅನುಭವದಿಂದ ನಿಶ್ಚಯವುಳ್ಳವನಾಗಿರು. ಎಂದು ಶ್ರೀವಸಿಷ್ಠಮುನಿಗಳು ಶ್ರೀರಾಮನನ್ನು ಕುರಿತು ಹೇಳಿದರು ||೮೪||

ಬಳಿಕ, ಈ ರೀತಿಯಾಗಿ ವಸಿಷ್ಠಮುನಿಗಳು ಹೇಳಲು, ಆ ಹಗಲು ಕಳೆಯಿತು; ಸೂರ್ಯನು ಸಾಯಂಕಾಲಿಕವಾದ ಕರ್ಮಕ್ಕೋಸ್ಕರ ಅಸ್ತಹೊಂದಿದನು ; ಆ ಸಭೆಯೆಲ್ಲವೂ ಸ್ನಾನಾದಿಕರ್ಮನಿರ್ವರ್ತನೆಗೋಸ್ಕರ ನಮಸ್ಕಾರಮಾಡಿ ಹೊರಟು ಹೋಯಿತು. ರಾತ್ರಿಕಳೆಯಲು, ಪುನಃ ಸೂರ್ಯಕಿರಣಗಳೊಡನೆ ಬಂದು ಸೇರಿತು.

ಇದು ಉತ್ಪತ್ತಿಪ್ರಕರಣದಲ್ಲಿ ಬ್ರಹ್ಮಪ್ರತಿಪಾದನವೆಂಬ ಹದಿನಾಲ್ಕನೆಯ ಸರ್ಗವು.

ಇಲ್ಲಿಗೆ ಮೂರನೆಯ ದಿವಸವಾಯಿತು.

ಅಥ ಉತ್ಪತ್ತಿಪ್ರಕರಣೇ ಪಞ್ಚದಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಜಗದಾಕಾಶಮೇವೇದಂ ಯಥಾ ಹಿ ವ್ಯೋಮ್ನಿ ಮೌಕ್ತಿಕಮ್ ।
ವಿಮಲೇ ಭಾತಿ ಸ್ವಾತ್ಮೈವ ಜಗಚ್ಚಿದ್ಗಗನಂ ಯಥಾ ॥೧॥
ಅನುತ್ಕೀರ್ಣೈವ ಭಾತೀವ ತ್ರಿಜಗತ್ಸಾಲಭಞ್ಜಿಕಾ ।
ಚಿತ್ಸ್ತಮ್ಭೇ ನೈವ ಸೋತ್ಕೀರ್ಣಾ ನ ಚೋತ್ಕರ್ತಾತ್ರ ವಿದ್ಯತೇ ॥೨॥
ಸಮುದ್ರೇನ್ತರ್ಜಲಸ್ಪನ್ದಾಃ ಸ್ವಭಾವಾದಚ್ಯುತಾಅಪಿ ।
ವೀಚಿವೇಗಾಭವನ್ತೀವ ಪರೇ ದೃಶ್ಯವಿದಸ್ತಥಾ ॥೩॥
ಜಾಲಾನ್ತರ್ಗತಸೂರ್ಯಾಭಾ ಜಾಲಾಕಾರರಜಾಂಸ್ಯಪಿ ।
ಜಗದ್ಭಾನಂ ಪ್ರತಿ ಸ್ಥೂಲಾನ್ಯಣುಂ ಪ್ರತಿ ಯಥಾಽಚಲಾಃ ॥೪॥

ಉತ್ಪತ್ತಿಪ್ರಕರಣದಲ್ಲಿ ಹದಿನಯ್ದನೆಯ ಸರ್ಗವು.

ಶಶ್ವದ್ದೃಷ್ಟಾನ್ತಯುಕ್ತ್ಯೋಘೈಃ ಉಕ್ತಾರ್ಥಮನುಭಾವಯನ್ ।
ವಿಸ್ತೃತಂ ಮಣ್ಡಪಾಖ್ಯಾನಂ ಅತ್ರೋಪಕ್ರಮತೇ ಮುನಿಃ ॥

ಇದುವರೆಗೆ ಹೇಳಿದ ವಿಷಯವನ್ನು ದೃಷ್ಟಾನ್ತಯುಕ್ತಿಸಮುದಾಯಗಳಿಂದ ಅನುಭವಕ್ಕೆ ತರುತ್ತ, ಶ್ರೀ ವಸಿಷ್ಠಮುನಿಗಳು ಈ ಸರ್ಗದಲ್ಲಿ ವಿಸ್ತಾರವಾದ ಮಂಡಪೋಪಾಖ್ಯಾನವನ್ನು ಪಕ್ರಮಿಸುವರು.

ಪುನಃ ಶ್ರೀ ರಾಮನನ್ನು ಕುರಿತು ವಸಿಷ್ಠಮುನಿಗಳು ಹೇಳಲುಪಕ್ರಮಿಸಿದರು:—

ಅಯ್ಯಾ ! ರಾಮ ! ಪೂರ್ವೋಕ್ತವಿಷಯವನ್ನೇ ಮತ್ತೆ ನಿನಗೆ ಹೇಳುವೆನು. ಈ ಜಗತ್ತೆಂಬುದು ಆ ಚಿದಾಕಾಶವೇಯೆ. ಇದು ಬೇರೆಯಾಗಿ ಕಾಣುವುದು ಹೇಗೆನ್ನುವೆಯೋ?–ನಿರ್ಮಲವಾದ ಆಕಾಶದಲ್ಲಿ ಮುತ್ತಿನಹಾರವಿರುವುದೆಂಬುದಾಗಿ ಕಾಣುವುದಿಲ್ಲವೆ ! ಹಾಗೆಯೇ ಈ ಚಿದಾಕಾಶವು ತಾನೇ ಜಗದ್ರೂಪವಾಗಿ ಕಾಣುವುದು. ಇದು ಹೇಗೆಂಬುದಕ್ಕೆ ಇನೂ ಉದಾಹರಣೆಯನ್ನು ಕೊಡುವೆನು ॥೧॥

ಈ ಲೋಕತ್ರಯವೆಂಬ ಸಾಲಭಂಜಿಕೆಯು ಕೆತ್ತಲ್ಪಡದೆಯೇ ಕಣ್ಣಿಗೆ ಕಾಣಿಸುವಂತಿದೆ. ಚಿತ್ತೆಂಬ ಕಂಭದಲ್ಲಿ ಅದನ್ನು ಕೊರದೇಯಿಲ್ಲ. ಅಲ್ಲಿ ಕೊರೆಯುವವರೂ ಯಾರೂ ಇಲ್ಲ॥೨॥

ಸಮುದ್ರದೊಳಗೆ ಆಗುವ ಜಲಚಲನೆಗಳು ತಮ್ಮ ಸ್ವಭಾವವನ್ನು ಬಿಡದೆಯೇ ಇದ್ದರೂ ತರಂಗವೇಗಗಳೆಂದು ಹೆಸರು ಪಡೆಯುವಂತೆ, ಪರಮಾತ್ಮನಲ್ಲಿ ಈ ದೃಶ್ಯಜ್ಞಾನಗಳೂ—ಇಲ್ಲದಿದ್ದರೂ–ಹೆಸರುಪಡೆಯುವುವು ॥೩॥

ಆದರೆ ಅಜ್ಞರಾದವರು ಈ ಜಗತ್ತು ಬಹು ದೊಡ್ಡದಾಗಿರುವುದೆಂದು ಭ್ರಮಿಸುವರು. ಜ್ಞಾನಿಗಳು ಅದನ್ನು ಅತಿಸೂಕ್ಷ್ಮವೆಂದು ನಿರ್ಣಯಿಸಿಕೊಂಡಿರುವರು. ಒಂದು ಪರಮಾಣು

ಜಗದ್ಭಾನಂ ನ ಭಾತೀದಂ ಬ್ರಹ್ಮಣೋ ವ್ಯತಿರೇಕತಃ ।
ಜಾಲಸೂರ್ಯಾಂಶುಜಾಲಂ ತು ವ್ಯತಿರೇಕಾನುಭೂತಿದಮ್ ॥೫॥
ಅನುಭೂತಾನ್ಯಪೀಮಾನಿ ಜಗನ್ತಿ ವ್ಯೋಮರೂಪಿಣಿ ।
ಪೃಥ್ವ್ಯಾದೀನಿ ನ ಸನ್ತ್ಯೇವ ಸ್ವಪ್ನಸಙ್ಕಲ್ಪಯೋರಿವ ॥೬॥
ಪಿಣ್ಡಗ್ರಹೋ ಜಗತ್ಯಸ್ಮಿನ್ ವಿಜ್ಞಾನಾಕಾಶರೂಪಿಣಿ ।
ಮರುನದ್ಯಾಂ ಜಲಮಿವ ನ ಸಮ್ಭವತಿ ಕುತ್ರಚಿತ್ ॥೭॥
ಜಗತ್ಯಪಿಣ್ಡಗ್ರಾಹೇಽಸ್ಮಿನ್ ಸಙ್ಕಲ್ಪನಗರೋಪಮೇ ।
ಮರೌ ಸರಿದಿವಾಭಾತಿ ದೃಶ್ಯತಾ ಭ್ರಾನ್ತಿರೂಪಿಣೀ ॥೮॥
ಸ್ವಪ್ನಾದ್ದೃಶ್ಯೇವ ಜಗತಾ ತುಲಾದೇಶೇನ ಕೇನ ಚ ।
ತುಲಿತಾ ಕಲನೋನ್ಮುಕ್ತಾ ದೃಶ್ಯಶ್ರೀರ್ವ್ಯೋಮ ಜೃಮ್ಭತೇ ॥೯॥
ವರ್ಜಯಿತ್ವಾಜ್ಞವಿಜ್ಞಾನಂ ಜಗಚ್ಛಬ್ದಾರ್ಥಭಾಜನಮ್ ।
ಜಗದ್ಬ್ರಹ್ಮಸ್ವಶಬ್ದಾನಾಂ ಅರ್ಥೇ ನಾಸ್ತ್ಯೇವ ಭಿನ್ನತಾ ॥೧೦॥

ವಿಗಿಂತ ಪರ್ವತಗಳು ಸ್ಥೂಲಗಳಾಗಿರುವಂತೆ, ಕಿಟಕಿಯ ಜಾಲರಿಯೊಳಗೆ ಬಿದ್ದಿರುವ ಬಿಸಲು ಕೋಲೂ—ಅದರಲ್ಲಿ ಕಾಣುವ ಧೂಳಿಗಳೂ ಕೂಡ ಈ ಜಗತ್ತಿಗಿಂತ ಅತಿಸ್ಥೂಲಗಳಾಗಿ ಕಾಣುವುವು ॥೪॥

ಇಲ್ಲಿ ಸ್ವಲ್ಪ ವಿಶೇಷವುಂಟು. ಈ ಜಗತ್ಪ್ರಕಾಶವು ಬ್ರಹ್ಮನನ್ನು ಬಿಟ್ಟು ಬೇರೆಯಾಗಿ ಕಾಣುವುದಿಲ್ಲ; ಕಿಟಕಿಯೊಳಗೆ ಜಾಲರಿಯಲ್ಲಿ ಬೀಳುವ ಸೂರ್ಯಕಿರಣಸಮೂಹವಾದರೋ, ಬೇರೆಯಾಗಿರುವುದೆಂಬ ಅನುಭವಕೊಡತಕ್ಕುದಾಗಿರುವುದು ॥೫॥

ಜಗತ್ತು ಬ್ರಹ್ಮನಿಗಿಂತ ಬೇರೆಯಾಗಿ ಕಾಣುವುದಿಲ್ಲವೆಂಬ ವಿಷಯದಲ್ಲಿ ಅನುಭವವಿರೋಧವುಂಟೆಂದು ಶಂಕಿಸಬಾರದು. ಆಕಾಶರೂಪನಾದ ಆ ಪರಬ್ರಹ್ಮನಲ್ಲಿ ಈ ಪೃಥಿವಿ ಮೊದಲಾದ ಜಗತ್ತುಗಳು ಇರುವಂತೆ ಅನುಭವಗೋಚರವಾಗುತಿದ್ದರೂ, ಸ್ವಪ್ನಸಂಕಲ್ಪಗಳಲ್ಲಿ ಉಂಟಾದ ಅನುಭವವು ಅನೃತವಾಗುವಂತೆ, ಇವೂ ಖಂಡಿತವಾಗಿ ಇಲ್ಲವೇಇಲ್ಲ॥೬॥

ಮರುಭೂಮಿಯಲ್ಲಿ ಕಂಡ ನದಿಯೊಳಗೆ ನೀರಿಲ್ಲದಿರುವಂತೆ, ಕೇವಲ ಜ್ಞಾನಸ್ವರೂಪವಾದ ಈ ಜಗತ್ತಿನಲ್ಲಿ ಶರೀರಗ್ರಹಣವೆಂಬುದು ಎಂದಿಗೂ ಸಂಭವಿಸುವುದಿಲ್ಲ ॥೭॥

ಸಂಕಲ್ಪನಗರಸದೃಶವಾಗಿ ಶರೀರಗ್ರಹಣವಿಲ್ಲದ ಈ ಜಗತ್ತಿನಲ್ಲಿ, ಕೇವಲ ಭ್ರಾಂತಿರೂಪವಾದ ದೃಶ್ಯತ್ವವು (ಕಣ್ಣಿಗೆ ಕಾಣಿಸುತ್ತದೆಂಬುದು) ಮರುಭೂಮಿಯಲ್ಲಿ ನದಿಯಂತೆ ಆಪಾತತ: ತೋರುತಿರುವುದು ॥೮॥

ಯಾವನಾದರೊಬ್ಬ ವಿವೇಚಕಬುದ್ಧಿಯುಕ್ತನು ಈ ಜಗತ್ತಿನ ದೃಶ್ಯತ್ವವೆಂಬುದನ್ನು ತಕ್ಕಡಿಯೊಳಗೆ ತೂಗಿದ ಪಕ್ಷದಲ್ಲಿ, ಆಗ ಇದು ಅದಕ್ಕೆ ಸರಿಯಾಗಿ, ಕಲ್ಪನಾರಹಿತವಾಗಿ, ಕೇವಲಾಕಾಶರೂಪವಾಗಿ ಪ್ರಕಾಶಿಸುವುದು ॥೯॥

ಈರೀತಿಯಾಗಿ ಜಗತ್ತೆಂಬ ಶಬ್ದದ ಅರ್ಥವನ್ನುವಿಷಯಮಾಡಿಕೊಂಡಿರುವ ಅಜ್ಞರ ಭ್ರಮೆಯನ್ನು ಬಿಟ್ಟರೆ, ಜಗತ್ತೆಂಬ ಪದಾರ್ಥಕ್ಕೂ ಬ್ರಹ್ಮವೆಂಬ ಪದಾರ್ಥಕ್ಕೂ ಭೇದವಿಲ್ಲವೇಯಿಲ್ಲ ॥೧೦॥

ಇದಂ ತ್ವಚೇತ್ಯಚಿನ್ಮಾತ್ರಂ ಭಾನೋರ್ಭಾತಂ ನಭಃ ಪ್ರತಿ ।
ತಥಾ ಸೂಕ್ಷ್ಮಂ ಯಥಾ ಮೇಘಂ ಪ್ರತಿ ಸಙ್ಕಲ್ಪವಾರಿದಃ ॥೧೧॥
ಯಥಾ ಸ್ವಪ್ನಪುರಂ ಸ್ವಚ್ಛಂ ಜಾಗ್ರತ್ಪುರವರಂ ಪ್ರತಿ ।
ತಥಾ ಜಗದಿದಂ ಸ್ವಚ್ಛಂ ಸಾಙ್ಕಲ್ಪಿಕಜಗತ್ ಪ್ರತಿ ॥೧೨॥
ತಸ್ಮಾದಚೇತ್ಯಚಿದ್ರೂಪಂ ಜಗದ್ವ್ಯೋಮೈವ ಕೇವಲಮ್ ।
ಶೂನ್ಯೌ ವ್ಯೋಮಜಗಚ್ಛಬ್ದೌ ಪರ್ಯಾಯೌ ವಿದ್ಧಿ ಚಿನ್ಮಯೌ ॥೧೩॥
ತಸ್ಮಾನ್ನ ಕಿಂ ಚಿದುತ್ಪನ್ನಂ ಜಗದಾದೀಹ ದೃಶ್ಯಕಮ್ ।
ಅನಾಖ್ಯಮನಭಿವ್ಯಕ್ತಂ ಯಥಾಸ್ಥಿತಮವಸ್ಥಿತಮ್ ॥೧೪॥
ಜಗದೇವಂ ಮಹಾಕಾಶೇ ಚಿದಾಕಾಶಮಭಿತ್ತಿಮತ್ ।
ತದ್ದೇಶಸ್ಯಾಣುಮಾತ್ರಸ್ಯ ತುಲಾಯಾಶ್ಚಾಪ್ರಪೂರಕಮ್ ॥೧೫॥

ಹಾಗಾದರೆ ತತ್ವಜ್ಞರು ಜಗತ್ತನ್ನು ಕುರಿತು ತತ್ಸಾಕ್ಷಿಯಾದ ಚೈತನ್ಯವೆಂದು ತಿಳಿಯು ವಬಗೆ ಹೇಗೆಂದರೆ:—ಈ ಚಿತ್ತು ವಸ್ತುತಃ ಚೇತನೀಯರಹಿತವಾಗಿಯೇ ಇರುವುದು. ಆದರೆ, ಶೂನ್ಯವಾಗಿರುವ ಆಕಾಶದಲ್ಲಿ ಸೂರ್ಯಕಿರಣವು ವ್ಯಾಪಿಸಿರುವುದನ್ನು ನೋಡಿ ಆಕಾಶವು ಪ್ರಕಾಶವುಳ್ಳದಾಗಿದೆಯೆಂದು ತಿಳಿಯುವಂತೆ ಜಗತ್ತನ್ನು ನೋಡಿ ತತ್ಸಾಕ್ಷಿಚೈತನ್ಯವೆಂಬ ಜ್ಞಾನವುಂಟಾಗಿದೆಯೆಂದೂ, ಮತ್ತು ಸೂಕ್ಷ್ಮವಾಗಿರುವ ಮೇಘವನ್ನು ನೋಡಿ ಅದರಂತೆ ಮನಸ್ಸಿನಲ್ಲಿ ಸಂಕಲ್ಪಿಸಲ್ಪಟ್ಟ ಮೋಡವು ತೋರುವಂತೆ ಸಾಕ್ಷಿಚೈತನ್ಯವನ್ನು ನೋಡಿ ಜಗತ್ತೆಂಬ ಜ್ಞಾನವುಂಟಾಗುವುದೆಂದೂ ತತ್ವಜ್ಞರು ತಿಳಿಯುವರು ॥೧೧॥

ಆದರೆ, ಈ ದೃಶ್ಯವು ಅತ್ಯಂತ ಮಲಿನವಾಗಿರುವುದರಿಂದ, ಇದು ಅತಿ ನಿರ್ಮಲವಾಗಿ ರುವಚಿತ್ತಾಗುವ ಬಗೆ ಹೇಗೆಂದರೆ:—ನಾವು ಸ್ವಪ್ನದಲ್ಲಿ ಬಂದು ಪಟ್ಟಣವನ್ನು ನೋಡುವೆವಲ್ಲವೆ ! ಅದು ಅತ್ಯಂತ ಮಲಿನಜ್ಞಾನಕಲುಷಿತವಾಗಿದ್ದರೂ ಜಾಗ್ರತ್ಕಾಲಿಕವಾದ ಪಟ್ಟಣದಂತೆ ನಿರ್ಮಲವಾಗಿರುವಂತೆಯೇ ಕಾಣುವುದಲ್ಲವೆ ! ಮತ್ತು ನಮ್ಮ ಮನಸ್ಸಿನಲ್ಲಿ ಒಂದು ಜಗತ್ತನ್ನು ಸಂಕಲ್ಪಿಸಿಕೊಂಡರೆ, ಅದು ಅತಿ ಮಲಿನಜ್ಞಾನಕಲುಷವಾಗಿದ್ದರೂ ಪ್ರತ್ಯಕ್ಷವಾದ ಜಗತ್ತಿನಂತೆ ಅತಿ ನಿರ್ಮಲವಾಗಿರುವಂತೆ ಕಾಣುವುದಲ್ಲವೆ! ಹೀಗೆಯೇ ಈ ಪ್ರಪಂಚವತಿಮಲಿನವಾಗಿದ್ದರೂ ನಿರ್ಮಲವಾದ ಚಿತ್ತಾಗಿ ಕಾಣುವುದು. ಈವಿಧವಾದ ನೈರ್ಮಲ್ಯಬೋಧವು ಆ ಕಾಲದಲ್ಲಿ ಮಾತ್ರವಿರುವುದೆಂದು ತಿಳಿಯಬೇಕು ॥೧೨॥

ಆದುಕಾರಣ, ಅಯ್ಯಾ! ರಾಮ! ಈ ಜಗತ್ತೆಂಬುದು ಚೇತನೀಯರಹಿತವಾದ ಚಿದ್ರೂಪವಾಗಿರುವುದು; ಇದು ಕೇವಲಾಕಾಶರೂಪವಾದುದು. ಜಗತ್ತು ಆಕಾಶ—ಎಂಬ ಈ ಯೆರಡು ಶಬ್ದಗಳೂ ಶೂನ್ಯಾರ್ಥಕಗಳೆಂದೂ ಪರ್ಯಾಯಶಬ್ದಗಳೆಂದೂ ಕೇವಲ ಚಿನ್ಮಯಗಳೆಂದೂ ತಿಳಿಯುವವನಾಗು ॥೧೩॥

ಆದುಕಾರಣ, ಈ ಜಗತ್ತು ಮೊದಲಾದ ದೃಶ್ಯವೊಂದೂ ಉತ್ಪನ್ನವಾಗಿಲ್ಲ. ಇದು ನಾಮರೂಪಶೂನ್ಯವಾದ ಕೇವಲ ಚಿತ್ತೇ ಈ ರೂಪವಾಗಿ ಇರುವುದು ॥೧೪॥

ಈರೀತಿಯಾಗಿ ಮಾಯಾಕಾಶದಲ್ಲಿರುವ ಈಜಗತ್ತು, ಆವರಣಶೂನ್ಯವಾದ ಆ ಜ್ಞಾನಾಕಾಶವೇ ಆಗಿರುವುದು. ಆದರೆ ಕೇವಲ ಪರಿಚ್ಛಿನ್ನವಾದ ಜಗತ್ತಿಗೂ ಚಿತ್ತಿಗೂ ಭೇದವಿಲ್ಲವೆಂದು ಹೇಳಿದ ಮಾತ್ರದಿಂದಲೇ, ಚಿತ್ತೂ ಜಗತ್ತಿನಷ್ಟೇ ಅಲ್ಪವಾಗಿರುವುದೆಂದು ತಿಳಿಯು

ಆಕಾಶರೂಪಮೇವಾಚ್ಛಂ ಪಿಣ್ಡಗ್ರಹವಿವರ್ಜಿತಮ್ ।
ವ್ಯೋಮ್ನಿ ವ್ಯೋಮಮಯಂ ಚಿತ್ರಂ ಸಙ್ಕಲ್ಪಪುರವತ್ ಸ್ಥಿತಮ್ ॥೧೬॥
ಅತ್ರೇದಂ ಮಣ್ಡಪಾಖ್ಯಾನಂ ಶೃಣು ಶ್ರವಣಭೂಷಣಮ್ ।
ನಿಸ್ಸನ್ದೇಹೋ ಯಥೈಷೋರ್ಥಃ ಚಿತ್ತೇ ವಿಶ್ರಾನ್ತಿಮೇಷ್ಯತಿ ॥೧೭॥

ಶ್ರೀರಾಮ ಉವಾಚ.

ಸದ್ಬೋಧವೃದ್ಧಯೇ ಬ್ರಹ್ಮನ್ ಸಮಾಸೇನ ವದಾಶು ಮೇ ।
ಮಣ್ಡಪಾಖ್ಯಾನಮಖಿಲಂ ಯೇನ ಬೋಧೋ ವಿವರ್ಧತೇ ॥೧೮॥

ಶ್ರೀ ವಸಿಷ್ಠ ಉವಾಚ.

ಅಭೂದಸ್ಮಿನ್ ಮಹೀಪೀಠೇ ಕುಲಪದ್ಮೋ ವಿಕಾಸವಾನ್ ।
ಪದ್ಮೋ ನಾಮ ನೃಪಃ ಶ್ರೀಮಾನ್ ಬಹುಪುತ್ರೋ ವಿವೇಕವಾನ್ ॥೧೯॥
ಮರ್ಯಾದಾಪಾಲನಾಮ್ಭೋಧಿಃ ದ್ವಿಷತ್ತಿಮಿರಭಾಸ್ಕರಃ ।
ಕಾನ್ತಾಕುಮುದಿನೀಚನ್ದ್ರೋ ದೋಷತೃಣಹುತಾಶನಃ ॥೨೦॥

ಬಾರದು. ಆ ಚಿತ್ತಿನ ಏಕದೇಶದಲ್ಲಿ ಜಗತ್ತೆಲ್ಲ ತೋರುತಿದ್ದರೂ ಆ ಅಲ್ಪಭಾಗವನ್ನೂ ಪೂರ್ತಿ ಮಾಡದಿರುವ ಈ ಜಗತ್ತು, ಸಾಮ್ಯಹೇಳಿದಮಾತ್ರದಿಂದಲೇ ಆ ಚಿತ್ತಿನಂತೆ ಅಖಂಡವಾಗುವುದೆಲ್ಲಿ ಬರುವುದು? ॥೧೫॥

ಮುಖ್ಯವೇನೆಂದರೆ:—ಈ ಜಗತ್ತೆಂಬುದು ನಿರ್ಮಲವಾದ ಆಕಾಶರೂಪವಾದುದೇಯೇ; ಇದು ಶರೀರಗ್ರಹಣರಹಿತವಾದುದು. ಕೇವಲಾಕಾಶರೂಪವಾದ ಮನಸ್ಸಂಕಲ್ಪದಲ್ಲಿ ಮತ್ತೊಂದು ಆಕಾಶರೂಪವಾದ ಪಟ್ಟಣವು ತೋರುವಂತೆ, ಆಕಾಶರೂಪವಾದ ಚಿತ್ತಿನಲ್ಲಿ ಆಕಾಶರೂಪವಾದ ಜಗತ್ತೆಂಬ ಚಿತ್ರವು ಕಾಣಿಸುವುದೆಂದು ತಿಳಿಯಬೇಕು ॥

ಈ ವಿಷಯದಲ್ಲಿ ಮಂಡಪಾಖ್ಯಾನವೆಂಬ ಒಂದು ಕಥೆಯನ್ನು ಹೇಳುವೆನು; ಕೇಳು. ಇದು ಶ್ರೋತ್ರಕ್ಕೆ ಅಲಂಕಾರಪ್ರಾಯವಾದುದು; ಇದನ್ನು ಕೇಳಿದರೆ, ಇದುವರೆಗೆ ನಾನು ಹೇಳಿರುವ ವಿಷಯವು ಮನಸ್ಸಿನಲ್ಲಿ ನಿಸ್ಸಂದೇಹವಾಗಿ ಸ್ಥಿರವಾಗುವುದು ॥೧೭॥

ಶ್ರೀ ರಾಮನು ಹೇಳುವನು:—

ಬ್ರಾಹ್ಮಣೋತ್ತಮರೆ! ನನಗೆ ಉತ್ತಮವಾದ ಜ್ಞಾನವು ವೃದ್ಧಿಹೊಂದುವುದಕ್ಕೋಸ್ಕರ, ಆ ಸಮಸ್ತವಾದ ಮಂಡಪಾಖ್ಯಾನವನ್ನು ಅನುಪಯುಕ್ತವಾದ ವಿಷಯವನ್ನು ಸಂಕ್ಷೇಪಿಸಿ ಶೀಘ್ರವಾಗಿ ಅಪ್ಪಣೆಕೊಡಿಸಿರಿ. ಇದರಿಂದ ನನಗೆ ಜ್ಞಾನವೃದ್ಧಿಯಾಗುವುದೆಂದು ನಂಬಿರುವೆನು ॥೧೮॥

ಶ್ರೀ ವಸಿಷ್ಠರು ಹೇಳುವರು:—

ಈ ಭೂತಲದಲ್ಲಿ ಪದ್ಮನೆಂಬ ಒಬ್ಬ ದೊರೆಯಿದ್ದನು. ಅವನು ತನ್ನ ವಂಶಕ್ಕೆ ಅರಳಿದ ಕಮಲದಂತೆ ಯಶಸ್ಸೆಂಬ ಸುವಾಸನೆಯುಂಟುಮಾಡತಕ್ಕವನಾಗಿಯೂ, ಜ್ಞಾನೈಶ್ವರ್ಯಸಂಪನ್ನನಾಗಿಯೂ ಅನೇಕ ಪುತ್ರಯುಕ್ತನಾಗಿಯೂ ಕೇವಲ ವಿವೇಕಶಾಲಿಯಾಗಿಯೂ ಇದ್ದನು ॥೧೯॥

ಮತ್ತು, ಇವನು—ಮರ್ಯಾದಾಪಾಲನೆ ಮಾಡುವುದರಲ್ಲಿ ಸಮುದ್ರನಾಗಿಯೂ, ಶತ್ರುಗಳೆಂಬ ಕತ್ತಲೆಗೆ ಸೂರ್ಯನಾಗಿಯೂ, ತನ್ನ ಧರ್ಮಕಾಂತೆಯರೆಂಬ ಕುಮುದ

ಮೇರುರ್ವಿಬುಧಬೃನ್ದಾನಾಂ ಯಶಶ್ಚನ್ದ್ರೋ ಭವಾರ್ಣವೇ ।
ಸರಃ ಸದ್ಗುಣಹಂಸಾನಾಂ ಕಮಲಾಮಲಭಾಸ್ಕರಃ ॥೨೧॥
ಸಙ್ಗ್ರಾಮವೀರುತ್ಪವನೋ ಮನೋ ಮಾತಙ್ಗಕೇಸರೀ ।
ಸಮಸ್ತವಿದ್ಯಾದಯಿತಃ ಸರ್ವಾಶ್ಚರ್ಯಗುಣಾಕರಃ ॥೨೨॥
ಸುರಾರಿಸಾಗರಕ್ಷೋಭವಿಲಸನ್ಮನ್ದರಾಚಲಃ ।
ವಿಲಾಸಪುಷ್ಪೌಘಮಧುಃ ಸೌಭಾಗ್ಯಕುಸುಮಾಯುಧಃ ॥೨೩॥
ಲೀಲಾಲತಾಲಾಸ್ಯಮರುತ್ ಸಾಹಸೋತ್ಸಾಹಕೇಶವಃ ।
ಸೌಜನ್ಯಕೈರವಶಶೀ ದುರ್ಲೀಲಾವಲ್ಲಿಕಾನಲಃ ॥೨೪॥
ತಸ್ಯಾಸ್ತಿ ಸುಭಗಾ ಭಾರ್ಯಾ ಲೀಲಾನಾಮ ವಿಲಾಸಿನೀ ।
ಸರ್ವಸೌಭಾಗ್ಯವಲಿತಾ ಕಮಲೇವೋದಿತಾವನೌ ॥೨೫॥
ಸರ್ವಾನುವೃತ್ತಿಲಲಿತಾ ಲೀಲಾಮಧುರಭಾಷಿಣೀ ।
ಸಾನನ್ದಮನ್ದಚಲಿತಾ ದ್ವಿತೀಯೇನ್ದೂದಯಸ್ಮಿತಾ ॥೨೬॥
ಅಲಕಾಳಿಮನೋಹಾರಿವದನಾಮ್ಭೋಜಶಾಲಿನೀ ।
ಸಿತಾಙ್ಗೀ ಕರ್ಣಿಕಾಗೌರೀ ಜಙ್ಗಮೇವ ಸರೋಜಿನೀ ॥೨೭॥

ಲತೆಗಳಿಗೆ ಚಂದ್ರನಾಗಿಯೂ, ದೋಷಗಳೆಂಬ ಹುಲ್ಲುಗಳಿಗೆ ಅಗ್ನಿಯಾಗಿಯೂ, ವಿದ್ವಾಂಸರೆಂಬ ದೇವತೆಗಳ ಸಮೂಹಕ್ಕೆ ಅಗ್ನಿಯಾಗಿಯೂ, ಸಂಸಾರವೆಂಬ ಸಮುದ್ರದಲ್ಲಿ ಹುಟ್ಟಿದ ಯಶಸ್ಸೆಂಬ ಚಂದ್ರನಾಗಿಯೂ, ಸದ್ಗುಣಗಳೆಂಬ ಹಂಸಗಳಿಗೆ ಸರೋವರವಾಗಿಯೂ ಸಂಪತ್ತೆಂಬ ಕಮಲಗಳಿಗೆ ನಿರ್ಮಲನಾದ ಸೂರ್ಯನಾಗಿಯೂ, ಯುದ್ಧಾಂಕಣದಲ್ಲಿ ಶತ್ರುಗಳೆಂಬ ಲತೆಗಳಿಗೆ ಪ್ರಬಲವಾಯುವಾಗಿಯೂ, ಮನಸ್ಸೆಂಬ ಮದ್ದಾನೆಗೆ ಸಿಂಹನಾಗಿಯೂ, ಸಮಸ್ತ ವಿದ್ಯೆಗಳೆಂಬ ಸ್ತ್ರೀಯರಿಗೆ ಪ್ರಿಯನಾಗಿಯೂ, ಸಕಲವಾದ ಲೋಕೋತ್ತರಗುಣಗಳಿಗೆ ನಿಧಿಯಾಗಿಯೂ, ರಾಕ್ಷಸರೆಂಬ ಸಮುದ್ರವನ್ನು ಕಲಕುವುದಕ್ಕೆ ಸೊಗಸಾದ ಮಂದರ ಪರ್ವತವಾಗಿಯೂ, ವಿಲಾಸಗಳೆಂಬ ಪುಷ್ಪಸಮೂಹಕ್ಕೆ ವಸಂತರ್ತುವಾಗಿಯೂ, ಸೊಬಗಿನ ವಿಷಯದಲ್ಲಿ ಮನ್ಮಥನಾಗಿಯೂ, ಲೀಲೆಯೆಂಬ ಲತೆಯು ನರ್ತನಮಾಡುವುದಕ್ಕೆ ಮಂದ ಮಾರುತವಾಗಿಯೂ, ಸಾಹಸದಲ್ಲಿಯೂ ಉತ್ಸಾಹದಲ್ಲಿಯೂ ಆ ಸಾಕ್ಷಾದ್ವಿಷ್ಣುವಾಗಿಯೂ, ಸೌಜನ್ಯವೆಂಬ ನೈದಿಲೆಗೆ ಚಂದ್ರನಾಗಿಯೂ, ದುಶ್ಚೇಷ್ಟೆಯೆಂಬ ವಿಷಲತೆಗಳಿಗೆ ಬೆಂಕಿಯಾಗಿಯೂ ಇದ್ದನು ॥೨೦—೨೪॥

ಅವನಿಗೆ ಲೀಲೆಯೆಂಬ ಪತ್ನಿಯಿದ್ದಳು. ಅವಳು—ಮನೋಹರಳಾಗಿಯೂ, ಬಹು ವಿಲಾಸಶಾಲಿನಿಯಾಗಿಯೂ, ಸರ್ವಸೌಭಾಗ್ಯಯುಕ್ತಳಾಗಿಯೂ, ಭೂಮಿಯಲ್ಲಿ ಉತ್ಪನ್ನಳಾಗಿರುವ ಸಾಕ್ಷಾಲ್ಲಕ್ಷ್ಮಿಯಂತೆಯೂ ಇದ್ದಳು ॥೨೫॥

ಆ ಲೀಲೆಯು—ತಾನು ರಾಜಮಹಿಷಿಯಾಗಿದ್ದರೂ ಸರ್ವರನ್ನೂ ಅನುವರ್ತಿಸುತ ಮೃದು ಹೃದಯಳಾಗಿಯೂ ಮಧುರವಾಗಿ ಮಾತನಾಡತಕ್ಕವಳಾಗಿಯೂ ಇದ್ದಳು ; ಸಂತೋಷದಿಂದ ಮೆತ್ತಗೆ ನಡೆಯತಕ್ಕವಳಾಗಿದ್ದಳು; ಅವಳು ಮಂದಹಾಸಮಾಡಿದರೆ, ಎರಡನೆಯ ಚಂದ್ರನುದಯಿಸಿದಂತಿರುತಿತ್ತು ॥೨೬॥

ಅವಳ ಮುಖಕಮಲವು ಮುಂಗುರುಳುಗಳೆಂಬ ಭ್ರಮರಗಳಿಂದ ವಿಶೇಷ ಮನೋಹರ

ಲತಾವಿಲಾಸಕುನ್ದೌಘಭಾಸಿನೀ ರಸಶಾಲಿನೀ ।
ಪ್ರವಾಳಹಸ್ತಾ ಪುಷ್ಪಾಭಾ ಮಧುಶ್ರೀರಿವ ದೇಹಿನೀ ॥೨೮॥
ಅವದಾತತನುಃ ಪುಣ್ಯಾ ಸ್ಪರ್ಶನಾಹ್ಲಾದಕಾರಿಣೀ ।
ಗಙ್ಗೇವ ಗಾಂ ಗತಾ ದೇಹವತೀ ಹಂಸವಿಲಾಸಿನೀ ॥೨೯॥
ತಸ್ಯ ಭೂತಲಪುಷ್ಪೇಷೋಃ ಸಕಲಾಹ್ಲಾದದಾಯಿನಃ ।
ಪರಿಚರ್ಯಾಂ ಚಿರಂ ಕರ್ತುಂ ಅನ್ಯಾ ರತಿರಿವೋದಿತಾ ॥೩೦॥
ಉದ್ವಿಗ್ನೇ ಪ್ರೋದ್ವಿಗ್ನಾ ಮುದಿತೇ ಮುದಿತಾ ಸಮಾಕುಲಾಕುಲಿತೇ ।
ಪ್ರತಿಬಿಮ್ಬಸಮಾ ಕಾನ್ತಾ ಸಂಕ್ರುದ್ಧೇ ಕೇವಲಂ ಭೀತಾ ॥೩೧॥

ಇತಿ ಉತ್ಪತ್ತಿಪ್ರಕರಣೇ ಮಣ್ಡಪೋಪಾಖ್ಯಾನೇ ರಾಜವರ್ಣನಂ
ನಾಮ ಪಞ್ಚದಶಃ ಸರ್ಗಃ.

ವಾಗಿದ್ದಿತು. ಇಂತಹ ಮುಖದಿಂದ ಪ್ರಕಾಶಮಾನಳಾದ ಆ ಲೀಲೆಯು, ಕಮಲಕರ್ಣಿಕೆಯಲ್ಲಿ ಹೊಂಬಣ್ಣವಾಗಿಯೂ ಇತರಭಾಗದಲ್ಲಿ ಶುಭ್ರವಾಗಿಯೂ ಇರುವ ಕಮಲಲತೆಯು ಸಂಚರಿಸುತ್ತಿದ್ದರೆ ಹೇಗಿರುವುದೋ - ಹಾಗಿದ್ದಳು ॥೨೭॥

ಮತ್ತು, ಆಲೀಲೆಯು ವಸಂತಲಕ್ಷ್ಮಿಯಂತೆ—(೧) ಲತಾವಿಲಾಸಯುಕ್ತಳಾಗಿಯೂ, ಕುಂದಪುಷ್ಪಸಮುದಾಯಭಾಸಮಾನಳಾಗಿಯೂ, ರಸಯುಕ್ತಳಾಗಿಯೂ, ಪ್ರವಾಳಹಸ್ತಳಾಗಿಯೂ, ಪುಷ್ಪಾಭಳಾಗಿಯೂ ಇದ್ದಳು ॥೨೮॥

ಮತ್ತು, ಆ ಲೀಲೆಯು—ಶರೀರಗ್ರಹಣಮಾಡಿ ಭೂಮಿಯನ್ನು ಹೊಂದಿರುವ ದೇವಗಂಗೆಯಂತೆ, ಶುಭ್ರಳಾಗಿಯೂ, ಪವಿತ್ರಳಾಗಿಯೂ—ಸ್ಪರ್ಶಮಾತ್ರದಿಂದ ಆಹ್ಲಾದವುಂಟುಮಾಡತಕ್ಕವಳಾಗಿಯೂ (೨) ಹಂಸವಿಲಾಸಿನಿಯಾಗಿಯೂ ಇದ್ದಳು ॥೨೯॥

ಆ ಲೀಲೆಯು, ಸಕಲರಿಗೂ ಆಹ್ಲಾದವುಂಟುಮಾಡತಕ್ಕವನಾಗಿರುವ ಭೂಮಿಗೆ ಮನ್ಮಥನಾಗಿರುವ ಆಪದ್ಮರಾಜನಿಗೆ, ಬಹುಕಾಲ ಸೇವೆಮಾಡುವುದಕ್ಕೋಸ್ಕರ ಉದಯಿಸಿದ ಅಪರರತಿದೇವಿಯಂತಿದ್ದಳು ॥೩೦॥

ಆ ಲೀಲಾದೇವಿಯು, ತನ್ನ ಪತಿಯು ಭಯಪಟ್ಟರೆ ತಾನೂ ಭಯಪಡುತಲೂ, ಅವನು ಸಂತೋಷದಿಂದಿದ್ದರೆ ತಾನೂ ಸಂತೋಷಪಡುತಲೂ, ಅವನು ಕಳವಳಪಟ್ಟರೆ ತಾನೂ ಕಳವಳಪಡುತಲೂ, ಸರ್ವವಿಧವಾಗಿಯೂ ತನ್ನ ಪತಿಗೆ ಪ್ರತಿಬಿಂಬದಂತಿದ್ದಳು. ಆದರೆ, ಅವನು ಕೋಪಿಸಿಕೊಂಡಾಗಲೋ—ಅತಿಯಾಗಿ ಭಯಪಡುತಿದ್ದಳು ॥೩೧॥

ಇದು ಉತ್ಪತ್ತಿಪ್ರಕರಣದಲ್ಲಿ ಮಂಡಪೋಪಾಖ್ಯಾನದಲ್ಲಿ ರಾಜವರ್ಣನೆಯೆಂಬ
ಹದಿನೈದನೆಯ ಸರ್ಗವು.

---

(೧) ಇಲ್ಲಿ ಲೀಲಾಪರವಾಗಿಯೂ ವಸಂತಲಕ್ಷ್ಮೀಪರವಾಗಿಯೂ ಎರಡರ್ಥಗಳಿರುವುವು:—ವಸಂತಲಕ್ಷ್ಮಿಯು ಲತೆಗಳಿಂದ ವಿಲಾಸವುಳ್ಳುದಾಗಿಯೂ, ಕುಂದಪುಷ್ಪಗಳಿಂದ ಪ್ರಕಾಶಮಾನವಾಗಿಯೂ, ಮಕರಂದರಸಯುಕ್ತವಾಗಿಯೂ, ಚಿಗುರೆಂಬ ಹಸ್ತವುಳ್ಳುದಾಗಿಯೂ, ಹೂವುಗಳಿಂದ ಪ್ರಕಾಶಿಸತಕ್ಕುದಾಗಿಯೂ ಇರುವುದು. ಲೀಲೆಯು — ಲತೆಯಂತೆ ವಿಲಾಸಯುಕ್ತಳಾಗಿಯೂ, ಕುಂದಪುಷ್ಪದಂತಿರುವ ದಂತಗಳಿಂದ ಪ್ರಕಾಶಮಾನಳಾಗಿಯೂ, ಪ್ರೀತಿರಸವಿಶಿಷ್ಟಳಾಗಿಯೂ, ಚಿಗುರಿನಂತಿರುವ ಕೈಯುಳ್ಳವಳಾಗಿಯೂ, ಹೂವುಮುಡಿದು ಪ್ರಕಾಶಿಸತಕ್ಕವಳಾಗಿಯೂ ಇದ್ದಳು.

(೨) ಗಂಗೆಯು ಹಂಸಪಕ್ಷಿಗಳಿಂದ ವ್ಯಾಪ್ತವಾಗಿ ವಿಲಾಸವುಳ್ಳುದು; ಲೀಲೆಯು ಹಂಸಗಳಂತೆ ವಿಲಾಸವುಳ್ಳವಳು.

ಅಥ ಉತ್ಪತ್ತಿಪ್ರಕರಣೇ ಷೋಡಶಃ ಸರ್ಗಃ.

ಶ್ರೀ ವಸಿಷ್ಠಉವಾಚ.

ಭೂತಲಾಪ್ಸರಸಾ ಸಾರ್ಧಂ ಅನನ್ಯದಯಿತಾ ಪತಿಃ |
ಅಕೃತ್ರಿಮಪ್ರೇಮರಸಂ ಸ ರೇಮೇ ಕಾನ್ತಯಾ ತಯಾ ||೧||
ಉದ್ಯಾನವನಗುಲ್ಮೇಷು ತಮಾಲಗಹನೇಷು ಚ |
ಪುಷ್ಪಮಣ್ಡಪರಮ್ಯೇಷು ಲತಾವಲಯಸದ್ಮಸು ||೨||
ಪುಷ್ಪಾನ್ತಃಪುರಶಯ್ಯಾಸು ಪುಷ್ಪಸಮ್ಭಾರವೀಥಿಷು |
ವಸನ್ತೋದ್ಯಾನದೋಲಾಸು ಕ್ರೀಡಾಪುಷ್ಕರಿಣೀಷು ಚ ||೩||
ಚನ್ದನದ್ರುಮಶೈಲೇಷು ಸನ್ತಾನಕತಲೇಷು ಚ |
ಕದಮ್ಬನೀಪಗೇಹೇಷು ಪಾರಿಭದ್ರೋದರೇಷು ಚ ||೪||
ವಿಕಸತ್ಕುನ್ದಮನ್ದಾರಮಕರನ್ದಸುಗನ್ಧಿಷು |
ವಸನ್ತವನಜಾಲೇಷು ಕೂಜತ್ಕೋಕಿಲಪಕ್ಷಿಷು ||೫||
ನಾನಾರಣ್ಯತೃಣಾನಾಂ ಚ ಸ್ಥಲೇಷು ಮೃದುದೀಪ್ತಿಷು |
ನಿರ್ಝರೇಷು ತರತ್ತಾರಶೀಕರಾಸಾರವರ್ಷಿಷು ||೬||

ಉತ್ಪತ್ತಿಪ್ರಕರಣದಲ್ಲಿ ಹದಿನಾರನೆಯ ಸರ್ಗವು.

ಅತೃಪ್ತಿಃ ಕಾಮಭೋಗೇಭ್ಯೋ ಭೂಯೋದುಃಖಾವಸಾನತಾ |
ದೇವೈರಪ್ಯನ್ಯಥಾಕರ್ತುಂ ಅಶಕ್ಯೇತ್ಯತ್ರ ಕೀರ್ತ್ಯತೇ ||

ಕಾಮೋಪಭೋಗಗಳಿಂದ ಎಂದಿಗೂ ತೃಪ್ತಿಯುಂಟಾಗುವುದಿಲ್ಲವೆಂಬ ವಿಷಯವೂ, ಇವುಗಳಿಂದ ಎಂದಿಗೂ ಕೊನೆಗೆ ದುಃಖವೇ ಉಂಟಾಗುವುದೆಂಬ ವಿಷಯವೂ, ಇದನ್ನು ದೇವತೆಗಳೂ ಬದಲುಮಾಡುವುದಕ್ಕೆ ಅಶಕ್ತರೆಂಬ ವಿಷಯವೂ ಕೂಡ ಈ ಸರ್ಗದಲ್ಲಿ ಹೇಳಲ್ಪಡುವುವು.

ಪುನಃ ಶ್ರೀರಾಮನನ್ನು ಕುರಿತು ವಸಿಷ್ಠಮಹರ್ಷಿಗಳು ಹೇಳಲುಪಕ್ರಮಿಸಿದರು:-

ಅಯ್ಯಾ ! ರಾಮ ! ಪೂರ್ವೋಕ್ತರೀತಿಯಾಗಿ ಭೂಲೋಕಕ್ಕೆ ಅಪ್ಸರಸ್ತ್ರೀಯಾದ ಆ ಕಾಂತೆಯೊಡನೆ, ಆ ಪದ್ಮರಾಜನು ಮತ್ತೊಬ್ಬ ಕಾಂತೆಯಲ್ಲನುರಾಗವಿಲ್ಲದವನಾಗಿ, ಅಕೃತ್ರಿಮವಾದ ಪ್ರೀತಿರಸವುಳ್ಳಂತೆ, ಕೆಲವುವೇಳೆ ಹೊಂಗೆಯಮರಗಳಿಂದ ನಿಬಿಡವಾದ ಉದ್ಯಾನತರುಗುಲ್ಮಗಳಲ್ಲಿಯೂ ಕೆಲವುವೇಳೆ ಪುಷ್ಪಮಂಡಪಗಳಿಂದ ಮನೋಹರವಾದ ಲತಾಗೃಹಗಳಲ್ಲಿಯೂ, ಕೆಲವುವೇಳೆ ಅಂತಃಪುರದಲ್ಲಿ ರಚಿಸಿರುವ ಪುಷ್ಪಶಯ್ಯೆಗಳಲ್ಲಿಯೂ, ಕೆಲವುವೇಳೆ ಸಾಲುಸಾಲಾಗಿರುವ ಪುಷ್ಪಲತಾಪಂಕ್ತಿಗಳಲ್ಲಿಯೂ, ಕೆಲವುವೇಳೆ ವಸಂತಕಾಲಿಕವಾದ ಉದ್ಯಾನದಲ್ಲಿರುವ ಡೋಲೆಗಳಲ್ಲಿಯೂ, ಕೆಲವುವೇಳೆ ಕ್ರೀಡಾಸರಸ್ಸುಗಳಲ್ಲಿಯೂ,

ಶೈಲಾನಾಂ ಮಣಿಮಾಣಿಕ್ಯಶಿಲಾನಾಂ ಫಲಕೇಷು ಚ |
ದೇವರ್ಷಿಮುನಿಗೇಹೇಷು ದೂರಪುಣ್ಯಾಶ್ರಮೇಷು ಚ ||೭||
ಕುಮುದ್ವತೀಷು ಫುಲ್ಲಾಸು ಸ್ಮೇರಾಸು ನಳಿನೀಷು ಚ |
ವನಸ್ಥಲೀಷು ಕೃಷ್ಣಾಸು ಫುಲ್ಲಾಸು ಫಲಿನೀಷು ಚ ||೮||
ಸುರತೈಃ ಸುರತಾರುಣ್ಯೈಃ ಸುನ್ದರಃ ಸುನ್ದರೀಹಿತೈಃ |
ಈಹಿತೈಃ ಪೇಶಲಾನ್ಯೋನ್ಯಘನಪ್ರೇಮರಸಾಧಿಕೈಃ ||೯||
ಪ್ರಹೇಳಿಕಾಭಿರಾಖ್ಯಾನೈಃ ತಥಾಚಾಕ್ಷರಮುಷ್ಟಿಭಿಃ |
ಅಷ್ಟಾಪದೈರ್ಬಹುದ್ಯೂತೈಃ ತಥಾ ಗೂಢಚತುರ್ಥಕೈಃ ||೧೦||
ನಾಟಕಾಖ್ಯಾಯಿಕಾಭಿಶ್ಚ ಶ್ಲೋಕೈರ್ಬಿನ್ದುಮತೀಕ್ರಮೈಃ |
ದೇಶಕಾಲವಿಭಾಗೈಶ್ಚ ನಗರಗ್ರಾಮಚೇಷ್ಟಿತೈಃ ||೧೧||
ಸ್ರಗ್ದಾಮಮಾಲಾವಲಿತೈಃ ನಾನಾಭರಣಯೋಜನೈಃ |
ಲೀಲಾವಿಲೋಲಚಲನೈಃ ವಿಚಿತ್ರರಸಭೋಜನೈಃ ||೧೨||

ಕೆಲವುವೇಳೆ ಗಂಧದಮರದಿಂದ ಮಾಡಿರುವ ಕ್ರೀಡಾಪರ್ವತಗಳಲ್ಲಿಯೂ, ಕೆಲವುವೇಳೆ ಇಂದ್ರಲೋಕದಿಂದ ತರಲ್ಪಟ್ಟ ಕಲ್ಪವೃಕ್ಷಗಳ ತಳಗಳಲ್ಲಿಯೂ, ಕೆಲವುವೇಳೆ ಕದಂಬ ನೀಪ ಪಾರಿಭದ್ರ (ಬೇವು) ಇವುಗಳ ಪೊದರುಗಳಲ್ಲಿಯೂ, ಕೆಲವುವೇಳೆ ಅರಳಿದ ಕುಂದಮಂದಾರ ಪುಷ್ಪಗಳ ಮಕರಂದದಿಂದ ಪರಿಮಳವಿಶಿಷ್ಟವಾಗಿ ಕೋಗಿಲೆ ಮುಂತಾದ ಪಕ್ಷಿಗಳು ಧ್ವನಿಮಾಡುತ್ತಿರುವ ವಸಂತವನಸಮೂಗಳಲ್ಲಿಯೂ, ಕೆಲವುವೇಳೆ ಮೃದುವಾಗಿಯೂ ಪ್ರಕಾಶವಾಗಿಯೂ ಇರುವ ನಾನಾವಿಧವಾದ ಅರಣ್ಯಕತೃಣಪ್ರದೇಶಗಳಲ್ಲಿಯೂ, ಕೆಲವುವೇಳೆ ತುಂತುರ ಹಾರುತ್ತಿರುವ ಗಿರಿನದೀಪ್ರವಾಹಗಳಲ್ಲಿಯೂ, ಕೆಲವುವೇಳೆ ಪರ್ವತಗಳಮೇಲಿರುವ ಮಾಣಿಕ್ಯಾದಿರತ್ನಫಲಕಗಳಲ್ಲಿಯೂ, ಕೆಲವುವೇಳೆ ಯಾತ್ರಾರ್ಥವಾಗಿ ಹೊಂದಲ್ಪಟ್ಟ ದೇವರ್ಷಿಬ್ರಹ್ಮರ್ಷಿಗಳ ಆವಾಸವಾದ ಪುಣ್ಯಾಶ್ರಮಗಳಲ್ಲಿಯೂ, ರಾತ್ರಿಯವೇಳೆ ಅರಳಿರುವ ಕುಮುದಲತಾಸಮೂಹಗಳಲ್ಲಯೂ, ಹಗಲುವೇಳೆ ವಿಕಸಿತ ಕಮಲಲತಾಸಮುದಾಯಗಳಲ್ಲಿಯೂ, ಕೆಲವುವೇಳೆ ಚಿಗತು ಕಪ್ಪಾಗಿ ಹಣ್ಣುಬಿಟ್ಟಿರುವ ವನಸ್ಥಲಗಳಲ್ಲಿಯೂ, ದೇವತೆಗಳಿಗೆ ಹೋಲುತಿರುವ ತಾರುಣ್ಯದಿಂದಲೂ ಸುಂದರವಾದ ವ್ಯಾಪಾರಗಳಿಂದಲೂ ಮನೋಹರನಾಗಿ, ಕೆಲವುವೇಳೆ ಕಾಮವಿಲಾಸಾನುಭವಮಾಡುತಲೂ, ಕೆಲವುವೇಳೆ ಮೃದುಮಧುರವಾದ ಪರಸ್ಪರ ಪ್ರೇಮರಸದಿಂದ ನಿಬಿಡವಾದ ವಿಲಾಸಗಳಿಂದಲೂ, ಕೆಲವುವೇಳೆ ಗೂಢೋತ್ತರವಾದ ಪ್ರಶ್ನೆಗಳನ್ನು (ಒಗಟೆ)ಹೇಳುತ್ತಲೂ, ಕೆಲವುವೇಳೆ ಪುರಾಣಕಥೆಹೇಳುತ್ತಲೂ, ಕೆಲವುವೇಳೆ ಅಕ್ಷರಮುಷ್ಟಿ (ದ್ಯೂತವಿಶೇಷ ಲಕ್ಕಾಮುಟ್ಟೆ ಇರಬಹುದು) ಗಳಿಂದಲೂ, ಕೆಲವುವೇಳೆ ಪಗಡೆಯಾಟಗಳಿಂದಲೂ, ಕೆಲವುವೇಳೆ ಬಹುದ್ಯೂತಗಳಿಂದಲೂ, ಕೆಲವುವೇಳೆ ಒಂದು ಶ್ಲೋಕದಲ್ಲಿ ಅತಿಗೂಢಾರ್ಥವಾದ ನಾಲ್ಕನೆಯ ಪಾದವನ್ನು ಹೇಳಿ ಅದಕ್ಕೆ ಅನುಗುಣವಾದ ಮಿಕ್ಕ ಮೂರುಪಾದಗಳನ್ನು ಪ್ರಶ್ನೆಮಾಡುತಲೂ—ಅಥವಾ ಮೊದಲನೆಯ ಮೂರುಪಾದಗಳನ್ನು ಹೇಳಿ ಅವಕ್ಕೆ ತಕ್ಕಂತೆ ನಾಲ್ಕನೆಯ ಪಾದವನ್ನು ಪ್ರಶ್ನೆಮಾಡುತಲೂ, ಕೆಲವುವೇಳೆ ನಾಟಕಕಥಾಕಥನಗಳಿಂದಲೂ, ಕೆಲವುವೇಳೆ ಪದ್ಯರಚನೆಗಳಿಂದಲೂ, ಕೆಲ

ಆರ್ದ್ರಕುಙ್ಕುಮಕರ್ಪೂರತಾಮ್ಬೂಲದಳಚರ್ವಣೈಃ ।
ಪುಷ್ಪಪಲ್ಲವತಾಗುಞ್ಜಾ ದೇಹಗೋಪನಕವ್ರಣೈಃ ॥೧೩॥
ಸಮಾಲಮ್ಭಸಲೀಲಾಭಿಃ ಮಾಲಾಪ್ರಹರಣಕ್ರಮೈಃ ।
ಗೃಹೇ ಕುಸುಮಡೋಲಾಭಿಃ ಅನ್ಯೋನ್ಯಂ ದೋಳನಕ್ರಮೈಃ ॥೧೪॥
ನೌಯಾನಯುಗ್ಮಹಸ್ತ್ಯಶ್ವದಾನ್ತೋಷ್ಟ್ರಾದಿಗಮಾಗಮೈಃ ।
ಜಲಕೇಳಿವಿಲಾಸೇನ ಪರಸ್ಪರಸಮುಕ್ಷಣೈಃ ॥೧೫॥
ನೃತ್ಯಗೀತಕಲಾಲಾಸ್ಯತಾಳತಾಣ್ಡವವರ್ಣನೈಃ ।
ಸಙ್ಗೀತಕೈಃ ಸಙ್ಕಥನೈಃ ವೀಣಾಮುರಜವಾದನೈಃ ॥೧೬॥

ವುವೇಳೆ ಬಿಂದುಚ್ಯುತಕ (೧) ಮುಂತಾದ ರೀತಿಗಳಿಂದಲೂ, ಕೆಲವುವೇಳೆ ದೇಶಕಾಲವಿಭಾಗಗಳಿಂದಲೂ, ಕೆಲವುವೇಳೆ ನಗರಗ್ರಾಮಗಳ ನಡತೆಯನ್ನು ಅನುಕರಣಮಾಡುತಲೂ, ಕೆಲವುವೇಳೆ ಪುಷ್ಪಮಾಲಿಕೆಗಳನ್ನು ಕಟ್ಟುತಲೂ, ಕೆಲವುವೇಳೆ ಅನೇಕವಿಧವಾದ ಆಭರಣಗಳನ್ನು ಕ್ರಮಪಡಿಸುತ್ತಲೂ, ಕೆಲವುವೇಳೆ ವಿಲಾಸದಿಂದ ಮಂದಮಂದವಾಗಿ ಸಂಚರಿಸುತ್ತಲೂ, ಕೆಲವುವೇಳೆ ವಿಚಿತ್ರವಾದ ಷಡ್ರಸಭೋಜನಗಳಿಂದಲೂ, ಕೆಲವುವೇಳೆ ಸರಸವಾದ ಕೇಸರ ಕರ್ಪೂರಯುಕ್ತವಾದ ತಾಂಬೂಲವನ್ನು ಚರ್ವಿಸುತಲೂ, ಕೆಲವುವೇಳೆ ಶರೀರದಮೇಲೆ ಉಂಟಾಗಿರುವ ನಖಕ್ಷತಗಳನ್ನು—ಅರಳಿದಹೂವು ಲತೆಗಳಚಿಗುರು ಗುಲಗಂಜಿ—ಇವುಗಳಿಂದ ಮರೆಮಾಡಿಕೊಳ್ಳುತ್ತಲೂ ಕೆಲವುವೇಳೆ ಓಡಿಹೋಗಿ ಹಿಡಿಯುವ ಆಟಗಳಿಂದಲೂ, ಕೆಲವುವೇಳೆ ಹೂವಿನ ಚಂಡುಗಳನ್ನು ಎಸೆದಾಡುತ್ತಲೂ, ಕೆಲವುವೇಳೆ ಮನೆಯಲ್ಲಿ ಹೂವಿನ ಡೋಲೆಯಲ್ಲಿ ಕುಳಿತು ತೂಗಿಕೊಳ್ಳುತ್ತಲೂ, ಕೆಲವುವೇಳೆ ದಂಪತಿಗಳು ಪರಸ್ಪರವಾಗಿ ತೂಗುತ್ತಲೂ, ಕೆಲವುವೇಳೆ ನೀರಿನಮೇಲೆ ತೆಪ್ಪಗಳಲ್ಲಿ ಸಂಚರಿಸುತಲೂ, ಕೆಲವುವೇಳೆ ಶಿಕ್ಷಿತಗಳಾಗಿ ಜೊತೆಗೊಳಿಸಲ್ಪಟ್ಟಿರುವ ಆನೆ ಕುದುರೆ ಒಂಟೆ ಮುಂತಾದುವುಗಳ ಮೇಲೆ ಹೋಗಿಬರುತಲೂ, ಕೆಲವುವೇಳೆ ಒಬ್ಬರಮೇಲೊಬ್ಬರು ನೀರೆರಚುತ ಜಲಕ್ರೀಡೆಮಾಡುತಲೂ, ಕೆಲವುವೇಳೆ ನೃತ್ಯ ಗೀತ ತಾಳ ಮುಂತಾದುವುಗಳಿಂದಲಂಕೃತವಾಗಿ ವೀಣಾ ವೇಣು ಮೃದಂಗಾದಿ ವಾದ್ಯಗಳಿಂದ ಮನೋಹರವಾಗಿರುವ ಸಂಗೀತವನ್ನು—ಕೇಳುತಲೂ—ತಾವೂ ಹಾಡುತಲೂ, ಕೆಲವುವೇಳೆ ಉದ್ಯಾನ ನದೀತೀರವೃಕ್ಷತಲ ವೃಕ್ಷವಾಟಿಕೆ ಅಂತಃಪುರ ಉಪ್ಪರಿಗೆ ಇತ್ಯಾದಿ ಸ್ಥಳಗಳಲ್ಲಿ ದಿವ್ಯವಾದ ವಿಕಸಿತಕುಸುಮ ಸಮು

---

(೧) ಬಿಂದುಚ್ಯುತಕವೆಂದರೆ:— ಒಂದು ಶ್ಲೋಕದಲ್ಲಿ ಒಂದು ಬಿಂದುವನ್ನು ಕಡಮೆ ಮಾಡಿ ಹೇಳುವುದು. ಇದರಿಂದ ಅರ್ಥಾಂತರವಾಗಬಹುದು. ಬಿಂದುವನ್ನು ಸೇರಿಸಿದರೆ ಮತ್ತೊಂದರ್ಥವಾಗಬಹುದು. ಕೆಲವು ಸಂದರ್ಭಗಳಲ್ಲಿ ಒಂದು ಬಿಂದುವಿಲ್ಲದ್ದರಿಂದ ಅರ್ಥವೇ ಆಗದೆ ತೊಂದರೆಯಾಗಿ, ಆ ಬಿಂದುವನ್ನು ಸೇರಿಸತಕ್ಕ ಸ್ಥಳವು ಇತರರಿಗೆ ಗೊತ್ತಾಗುವುದು ಕಷ್ಟವಾಗಿ, ಆ ಶ್ಲೋಕರಚನೆಮಾಡಿದವನೇ ಅದನ್ನು ಕ್ರಮಪಡಿಸಿ ಹೇಳಬೇಕಾಗುವುದು. ಮತ್ತೆ ಕೆಲವು ಸಂದರ್ಭಗಳಲ್ಲಿ ಒಂದು ಬಿಂದುವಧಿಕವಾಗಿದ್ದು, ಅದನ್ನು ತೆಗೆದರೆ ಬೇರೆಯಾದರ್ಥವಾಗುವುದು. ಇತ್ಯಾದಿ ರೀತಿಯಾಗಿ ಸಂಸ್ಕೃತ ಚಿತ್ರಕಾವ್ಯಗಳಲ್ಲಿ ಅನೇಕವಿಧವಾದ ಪ್ರಕ್ರಮಗಳುಂಟು.

ಉದ್ಯಾನೇಷು ಸರಿತ್ತೀರವೃಕ್ಷೇಷು ವರವೀಥಿಷು ।
ಅನ್ತಃಪುರೇಷು ಹರ್ಮ್ಯೇಷು ಫುಲ್ಲಡೋಲಾವಡೋಲನೈಃ ॥೧೩॥
ಸಾ ತಥಾ ಸುಖಸಂವೃದ್ಧಾ ತಸ್ಯ ಪ್ರಣಯಿನೀ ಪ್ರಿಯಾ ।
ಏಕದಾ ಚಿನ್ತಯಾಮಾಸ ಸುಭ್ರೂಃ ಸಙ್ಕಲ್ಪಶಾಲಿನೀ ॥೧೮॥
ಪ್ರಾಣೇಭ್ಯೋಽಪಿ ಪ್ರಿಯೋ ಭರ್ತಾ ಮಮೈಷ ಜಗತೀಪತಿಃ ।
ಯೌವನೋಲ್ಲಾಸವಾನ್ ಶ್ರೀಮಾನ್ ಕಥಂ ಸ್ಯಾದಜರಾಮರಃ ॥೧೯॥
ಭರ್ತ್ರಾನೇನ ಸಹೋತ್ತುಙ್ಗಸ್ತನೀ ಕುಸುಮಸದ್ಮಸು ।
ಕಥಂ ಸ್ವೈರಂ ಚಿರಂ ಕಾನ್ತಾ ರಮೇ ಯುಗಶತಾನ್ಯಹಮ್ ॥೨೦॥
ತಥಾ ಯತೇ ಯತ್ನವತಃ ತಪೋಜಪಯಮೇಹಿತೈಃ ।
ರಜನೀಶಮುಖೋ ಭರ್ತಾ ಯಥಾ ಸ್ಯಾದಜರಾಮರಃ ॥೨೧॥
ಜ್ಞಾನವೃದ್ಧಾಂಸ್ತಪೋವೃದ್ಧಾನ್ ವಿದ್ಯಾವೃದ್ಧಾನಹಂ ದ್ವಿಜಾನ್ ।
ಪೃಚ್ಛಾಮಿ ತಾವನ್ಮರಣಂ ಕಥಂ ನ ಸ್ಯಾನ್ನೃಣಾಮಿತಿ ॥೨೨॥
ಇತ್ಯಾನೀಯಾಥ ಸಮ್ಪೂಜ್ಯ ದ್ವಿಜಾನ್ ಪಪ್ರಚ್ಛ ಸಾ ನತಾ ।
ಅಮರತ್ವಂ ಕಥಂ ವಿಪ್ರಾಃ ಭವೇದಿತಿ ಪುನಃಪುನಃ ॥೨೩॥

ದಾಯುರಚಿತವಾದ ಡೋಲೆಗಳಲ್ಲಿ ಕುಳಿತು ಸಂತೋಷಪಡುತ್ತಲೂ, ಇನ್ನೂ ಈರೀತಿಯಾದ ನಾನಾವಿಧ ವಿಲಾಸಗಳಿಂದ ವಿಹರಿಸಿಕೊಂಡಿದ್ದನು ॥೧--೧೩॥

ಹೀಗೆ ತನ್ನ ಪತಿಯೊಡನೆ ಸುಖವಾಗಿ ಬೆಳೆದು—ತನ್ನ ಪತಿಯಲ್ಲಿ ಕೇವಲ ಪ್ರೀತಿಶಾಲಿನಿಯಾಗಿ ತಾನೂ ಅವನ ಪ್ರೀತಿಗೆ ಪಾತ್ರಳಾಗಿರುವ–ಸುಂದರಿಯಾದ ಆ ಲೀಲೆಯು, ಒಂದುವೇಳೆ ಮನಸ್ಸಿನಲ್ಲಿ ದೃಢನಿಶ್ಚಯಮಾಡಿಕೊಂಡು ಈರೀತಿಯಾಗಿ ಯೋಚಿಸಿದಳು:—"ನನ್ನ ಪ್ರಾಣಕ್ಕಿಂತ ಪ್ರಿಯನಾಗಿಯೂ ಯೌವನಶಾಲಿಯಾಗಿಯೂ ದಿವ್ಯಸಂಪದ್ಯುಕ್ತನಾಗಿಯೂ ಇರುವ ನನ್ನ ಪತಿಯು, ಎಂದಿಗೂ ಮುಪ್ಪು ಬರದೆ ಮರಣಹೊಂದದೆ ಇರುವ ಬಗೆ ಹೇಗೆ? ಈಕಾಂತನೊಡನೆ ನಾನು ಅನೇಕಯುಗಸಹಸ್ರಕಾಲ ಸ್ವೇಚ್ಛೆಯಾಗಿ ಪುಷ್ಪಮಂಟಪಗಳಲ್ಲಿ ವಿಹರಿಸಿಕೊಂಡಿರಬೇಕಾದರೆ ಏನುಮಾಡಬೇಕು? ಅದುಕಾರಣ, ಚಂದ್ರಮುಖನಾದ ನನ್ನ ಪತಿಯು ಅಜರಾಮರನಾಗಿರುವಂತೆ, ನಾನು ತಪ ಜಪ ನಿಯಮ ಮುಂತಾದ ವ್ಯಾಪಾರಗಳಿಂದ ಪ್ರಯತ್ನಪಡುವೆನು. ಇದಕ್ಕಾಗಿ, ಜ್ಞಾನವೃದ್ಧರಾಗಿಯೂ ತಪೋವೃದ್ಧರಾಗಿಯೂ ವಿದ್ಯಾವೃದ್ಧರಾಗಿಯೂ ಇರುವ ಬ್ರಾಹ್ಮಣರನ್ನು—ಮನುಷ್ಯರಿಗೆ ಮರಣವುಂಟಾಗದಿರುವುದು ಹೇಗೆಂದು ಕೇಳುವೆನು" ಎಂದು ಯೋಚಿಸಿಕೊಂಡು, ಬಳಿಕ ಆ ಲೀಲೆಯು ಬ್ರಾಹ್ಮಣರನ್ನು ಕರೆಯಿಸಿ, ಅವರನ್ನು ಪೂಜಿಸಿ ನಮಸ್ಕರಿಸಿ, "ಬ್ರಾಹ್ಮಣೋತ್ತಮರೆ! ಮರಣವುಂಟಾಗದಿರುವುದು ಹೇಗೆ?"— ಎಂದು ಮತ್ತೆ ಮತ್ತೆ ಕೇಳಿದಳು ॥೧೮—೨೩॥

ವಿಪ್ರಾ ಊಚುಃ.

ತಪೋಜಪಯಮೈರ್ದೇವಿ ಸಮಸ್ತಾಃ ಸಿದ್ಧಸಿದ್ಧಯಃ |
ಸಮ್ಪ್ರಾಪ್ಯನ್ತೇಮರತ್ವಂ ತು ನ ಕದಾಚನ ಲಭ್ಯತೇ ||೧೪||
ಇತ್ಯಾಕರ್ಣ್ಯ ದ್ವಿಜಮುಖಾತ್ ಚಿನ್ತಯಾಮಾಸ ಸಾ ಪುನಃ |
ಇದಂ ಸ್ವಪ್ರಜ್ಞಯೈವಾಶು ಭೀತಾ ಪ್ರಿಯವಿಯೋಗತಃ ||೧೫||
ಮರಣಂ ಭರ್ತುರಗ್ರೇ ಮೇ ಯದಿ ದೈವಾದ್ಭವಿಷ್ಯತಿ |
ತತ್ ಸರ್ವದುಃಖನಿರ್ಮುಕ್ತಾ ಸಂಸ್ಥಾಸ್ಯೇ ಸುಖಮಾತ್ಮನಿ ||೧೬||
ಅಥ ವರ್ಷಸಹಸ್ರೇಣ ಭರ್ತಾದೌ ಚೇನ್ಮರಿಷ್ಯತಿ |
ತತ್ ಕರಿಷ್ಯೇ ತಥಾ ಯೇನ ಜೀವೋ ಗೇಹಾನ್ನ ಯಾಸ್ಯತಿ ||೧೭||
ತದ್ಭ್ರಮದ್ಭರ್ತೃಜೀವೇಸ್ಮಿನ್ ನಿಜೇ ಶುದ್ಧಾನ್ತಮಣ್ಡಪೇ |
ಭರ್ತ್ರಾ ವಿಲೋಕಿತಾ ನಿತ್ಯಂ ನಿವತ್ಸ್ಯಾಮಿ ಯಥಾಸುಖಮ್ ||೧೮||
ಅದ್ಯೈವಾರಭ್ಯೈತದರ್ಥಂ ದೇವೀಂ ಜ್ಞಪ್ತಿಂ ಸರಸ್ವತೀಮ್ |
ಜಪೋಪವಾಸನಿಯಮೈಃ ಆತೋಷಂ ಪೂಜಯಾಮ್ಯಹಮ್ ||೧೯||
ಇತಿ ನಿಶ್ಚಿತ್ಯ ಸಾ ನಾಥಂ ಅನುಕ್ತ್ವೈವ ವರಾಙ್ಗನಾ |
ಯಥಾಶಾಸ್ತ್ರಂ ಚಚಾರೋಗ್ರಂ ತಥಾ ನಿಯಮಮಾಸ್ಥಿತಾ ||೨೦||

ಬ್ರಾಹ್ಮಣರು ಹೇಳಿದರು:—

ದೇವಿ ! ತಪ ಜಪ ನಿಯಮ ಮುಂತಾದುವುಗಳಿಂದ ಸಮಸ್ತವಾದ ಸಿದ್ಧರಿಗುಂಟಾಗಿರುವ ಸಿದ್ಧಿಗಳು ಹೊಂದಲ್ಪಡುತ್ತವೆ. ಆದರೆ ಸಾಯದಿರುವುದು ಎಂದಿಗೂ ಲಭ್ಯವಲ್ಲ||೧೪||

ಈರೀತಿಯಾಗಿ ಬ್ರಾಹ್ಮಣಮುಖದಿಂದ ಕೇಳಿ, ಆ ಲೀಲೆಯು ತನ್ನ ಪ್ರಿಯನ ವಿಯೋಗವನ್ನು ಸಹಿಸಲಾರದವಳಾಗಿ, ಬೇಗನೆ ತನ್ನ ಮನಸ್ಸಿನಲ್ಲಿಯೇ ಹೀಗೆ ಯೋಚಿಸಿದಳು :— ದೈವಯೋಗದಿಂದ ಪತಿಯ ಕಣ್ಣೆದುರಿಗೆ ನನಗೆ ಮರಣವುಂಟಾದಪಕ್ಷದಲ್ಲಿ ಆಗ ಈ ಲೋಕದಲ್ಲಿ ಸರ್ವದುಃಖಗಳನ್ನೂ ಬಿಟ್ಟುಬಿಟ್ಟು-ಪರಲೋಕದಲ್ಲಿ ಈ ಭರ್ತ್ರಾದಿಸ್ಮೃತಿಯಿಲ್ಲದುದರಿಂದ ನಾನು ಸುಖವಾಗಿರುವೆನು. ಅದಲ್ಲದೆ, ಸಾವಿರಾರುವರ್ಷ ಬದುಕಿದಮೇಲೂ ನನ್ನ ಪತಿಯೇ ಮೊದಲು ಮರಣಹೊಂದುವುದಾದರೆ, ಆಗ ಅವನ ಜೀವವು ನನ್ನ ಮನೆಯಿಂದ ಹೊರಗೆ ಹೋಗದಂತೆ ಮಾಡುವೆನು. ಹಾಗೆ ಮಾಡಿಬಿಟ್ಟಪಕ್ಷದಲ್ಲಿ, ನನ್ನ ಪತಿಯ ಜೀವವು ಈ ಅಂತಃಪುರದಲ್ಲಿಯೇ ಸಂಚರಿಸುತ್ತಿರುವುದರಿಂದ ಇಲ್ಲಿ ಸರ್ವದಾ ಪತಿಯ ಕಣ್ಣೆದುರಿಗಿದ್ದುಗೊಂಡು ಸುಖವಾಗಿ ವಾಸಮಾಡುವೆನು. ಇದಕ್ಕೋಸ್ಕರ ಈದಿವಸವೇ ಪ್ರಾರಂಭಿಸಿ, ಜ್ಞಾನರೂಪಳಾದ ಆ ಸರಸ್ವತಿಯನ್ನು-ಜಪೋಪವಾಸನಿಯಮಗಳಿಂದ ಅವಳಿಗೆ ಸಂತೋಷವಾಗುವವರೆಗೂ ನಾನು ಪೂಜಿಸುವೆನು ||೧೫—೧೯||

ಈರೀತಿಯಾಗಿ ನಿಶ್ಚಯಿಸಿ, ಉತ್ತಮಸ್ತ್ರೀಯಾದ ಆ ಲೀಲೆಯು, ತನ್ನ ಪತಿಗೆ ಈ ವಿಷಯವನ್ನು ತಿಳುಹಿಸದೆಯೇ, ಅಷ್ಟು ಹೆಚ್ಚಾಗಿ ಕಠಿಣವಾದ ನಿಯಮವನ್ನು ಕೈಗೊಂಡು, ಶಾಸ್ತ್ರಾನುಸಾರವಾಗಿ ಆಚರಣೆಮಾಡಿಕೊಂಡಿದ್ದಳು ||೨೦||

ತ್ರಿರಾತ್ರಸ್ಯ ತ್ರಿರಾತ್ರಸ್ಯ ಪರ್ಯನ್ತೇ ಕೃತಪಾರಣಾ |
ದೇವದ್ವಿಜಗುರುಪ್ರಾಜ್ಞವಿದ್ವತ್ಪೂಜಾಪರಾಯಣಾ ||೨೧||
ಸ್ನಾನದಾನತಪೋಧ್ಯಾನನಿತ್ಯೋದ್ಯುಕ್ತಶರೀರಕಾ |
ಸರ್ವಾಸ್ತಿಕ್ಯಸದಾಚಾರಕಾರಿಣೀ ಕ್ಲೇಶಹಾರಿಣೀ ||೨೨||
ಯಥಾಕಾಲಂ ಯಥೋದ್ಯೋಗಂ ಯಥಾಶಾಸ್ತ್ರಂ ಯಥಾಕ್ರಮಮ್ |
ತೋಷಯಾಮಾಸ ಭರ್ತಾರಂ ಅಪರಿಜ್ಞಾತಸಂಸ್ಥಿತಿಃ ||೨೩||
ತ್ರಿರಾತ್ರಶತಮೇವಂ ಸಾ ಬಾಲಾ ನಿಯಮಶಾಲಿನೀ |
ಅನಾರತಂ ತಪೋನಿಷ್ಠಾಂ ಆತಿಷ್ಠತ್ ಕಷ್ಟಚೇಷ್ಟಯಾ ||೨೪||
ತ್ರಿರಾತ್ರಾಣಾಂ ಶತೇ ಚಾಥ ಪೂಜಿತಾ ಪ್ರತಿಮಾನಿತಾ |
ತುಷ್ಟಾ ಭಗವತೀ ಗೌರೀ ವಾಗೀಶಾ ಸಮುವಾಚ ತಾಮ್ ||೨೫||

ಸರಸ್ವತ್ಯುವಾಚ.

ನಿರನ್ತರೇಣ ತಪಸಾ ಭರ್ತೃಭಕ್ತ್ಯತಿಶಾಲಿನಾ |
ಪರಿತುಷ್ಟಾಸ್ಮಿ ತೇ ವತ್ಸೇ ಗೃಹಾಣ ವರಮೀಪ್ಸಿತಮ್ ||೨೬||

ರಾಜ್ಞ್ಯುವಾಚ.

ಜಯ ಜನ್ಮಜರಾಜ್ವಾಲಾದಾಹದೋಷಶಶಿಪ್ರಭೇ |
ಜಯ ಹಾರ್ದಾನ್ಧಕಾರೌಘನಿವಾರಣರವಿಪ್ರಭೇ ||೨೭||

ಹೀಗೆ ನಿಯಮಯುಕ್ತಳಾದ ಆ ಲೀಲೆಯು, ಮೂರುಮೂರು ದಿವಸ ಕಳೆದಮೇಲೆ ಒಂದಾವರ್ತಿ ಪಾರಣೆಮಾಡುತ, ದೇವ ಬ್ರಾಹ್ಮಣ ಗುರು ಜ್ಞಾನಿ ವಿದ್ವಾಂಸ ಇವರುಗಳ ಪೂಜೆಯಲ್ಲಿ ಆಸಕ್ತಳಾಗಿ, ಸ್ನಾನ ದಾನ ತಪಸ್ಸು ಧ್ಯಾನ ಇವುಗಳಲ್ಲಿ ನಿತ್ಯವೂ ಉದ್ಯುಕ್ತವಾದ ಶರೀರವುಳ್ಳವಳಾಗಿ, ಆಸ್ತಿಕ್ಯಬುದ್ಧಿಯಿಂದ ಮಾಡುವ ಸಮಸ್ತಸದಾಚಾರಗಳನ್ನೂ ನಡೆಯಿಸುತ, ಇಷ್ಟಾದರೂ ಸ್ವಲ್ಪವೂ ಕ್ಲೇಶತಿಳಿಯದವಳಾಗಿ ಇರುತಿದ್ದಳು||೨೧—೨೨||

ಆದರೂ ತನ್ನ ವಿಷಯವೊಂದೂ ಪತಿಗೆ ತಿಳಿಯದಂತೆ, ಆಯಾಕಾಲಕ್ಕೆ ಸರಿಯಾಗಿ ತನ್ನ ಪ್ರಯತ್ನಕ್ಕೆ ಅನುಗುಣವಾಗಿ ಶಾಸ್ತ್ರವನ್ನು ಮೀರದೆ ಯಥಾಕ್ರಮವಾಗಿ ತನ್ನ ಪತಿಗೆ ಶುಶ್ರೂಷೆಮಾಡುತ, ಅವನನ್ನು ಸಂತೋಷಪಡಿಸುತಿದ್ದಳು ||೨೩||

ಈರೀತಿಯಾಗಿ ಆ ಯುವತಿಯಾದ ಲೀಲೆಯು, ಬಹುಕಷ್ಟವಾದ ವ್ಯಾಪಾರದಿಂದ ನಿಯಮವುಳ್ಳವಳಾಗಿ, ಪೂರ್ವೋಕ್ತರೀತಿಯಾದ ಮೂರುಮೂರು ದಿವಸಗಳು ನೂರಾವರ್ತಿಯಾಗುವವರೆಗೂ ತಪಸ್ಸಿನಲ್ಲಿ ವ್ಯಾಪೃತಳಾಗಿದ್ದಳು ||೨೪||

ಬಳಿಕ ಮೂರುದಿವಸಗಳು ನೂರಾವರ್ತಿ ಮುಗಿದಮೇಲೆ, ಈ ಲೀಲೆಯಿಂದ ಪೂಜಿಸಲ್ಪಟ್ಟು ಸನ್ಮಾನಿತಳಾದ ಆ ಭಗವತಿಯಾದ ಸರಸ್ವತೀದೇವಿಯು, ಇವಳ ವಿಷಯದಲ್ಲಿ ಸಂತೋಷಯುಕ್ತಳಾಗಿ, ಪ್ರತ್ಯಕ್ಷವಾಗಿ ಇವಳನ್ನು ಕುರಿತು ಹೇಳಿದಳು ||೨೫||

ಆ ಸರಸ್ವತಿ ಹೇಳಿದುದೇನೆಂದರೆ:—

ಹೇ ! ವತ್ಸೆ ! ಪತಿಭಕ್ತಿಯಿಂದ ವಿಶೇಷವಾಗಿ ಶೋಭಿಸುವ ಅವಿಚ್ಛಿನ್ನವಾದ ನಿನ್ನ ತಪಸ್ಸಿನಿಂದ ನಾನು ಸಂತುಷ್ಟಳಾದೆನು; ಬೇಕಾದ ವರವನ್ನು ಸ್ವೀಕರಿಸು ||೨೬||

ಆ ಲೀಲೆಯು ಸರಸ್ವತಿಯನ್ನು ಕುರಿತು ಹೇಳಿದುದೇನೆಂದರೆ:—

ಜನ್ಮಜರೆಗಳೆಂಬ ಜ್ವಾಲೆಯ ದಾಹಕ್ಕೆ ಚಂದ್ರಿಕೆಯಾದವಳೆ! ನಿನಗೆ ಜಯವಾಗಲಿ;

ಅಮ್ಬ ಮಾತರ್ಜಗನ್ಮಾತಸ್ತ್ರಾಯಸ್ವ ಕೃಪಣಾಮಿಮಾಮ್ |
ಇದಂ ವರದ್ವಯಂ ದೇಹಿ ಯದಹಂ ಪ್ರಾರ್ಥಯೇ ಶುಭೇ ||೩೮||
ಏಕಂ ತಾವದ್ವಿದೇಹಸ್ಯ ಭರ್ತುರ್ಜೀವೋ ಮಮಾಮ್ಬಿಕೇ |
ಅಸ್ಮಾದೇವ ಹಿ ಮಾಯಾಸೀತ್ ನಿಜಾನ್ತಃಪುರಮಣ್ಡಪಾತ್ ||೩೯||
ದ್ವಿತೀಯಂ ತ್ವಾಂ ಮಹಾದೇವಿ ಪ್ರಾರ್ಥಯೇಹಂ ಯದಾಯದಾ |
ದರ್ಶನಾಯ ವರಾರ್ಥಾಯ ತದಾ ಮೇ ದೇಹಿ ದರ್ಶನಮ್ ||೪೦||
ಇತ್ಯಾಕರ್ಣ್ಯ ಜಗನ್ಮಾತಾ ತಥಾಸ್ತ್ವೇವಮಿತಿ ಸ್ವಯಮ್ |
ಉಕ್ತ್ವಾನ್ತರ್ಧಾನಮಗಮತ್ ಪ್ರೋತ್ಥಾ ಯೋರ್ಮಿರಿವಾರ್ಣವೇ ||೪೧||
ಅಥ ಸಾ ರಾಜಮಹಿಷೀ ಪರಿತುಷ್ಟೇಷ್ಟದೇವತಾ |
ಶ್ರುತಗೀತೇವ ಹರಿಣೀ ಬಭೂವಾನನ್ದಧಾರಿಣೀ ||೪೨||
ಪಕ್ಷಮಾಸರ್ತುಕಟಕೇ ದಿನಾರೇ ವರ್ಷದಣ್ಡಕೇ |
ಕ್ಷಣನಾಭೌ ಸ್ಪನ್ದಮಯೇ ಕಾಲಚಕ್ರೇ ವಹತ್ಯಥ ||೪೩||
ಅನ್ತರ್ಧಿಮಾಜಗಾಮಾಸ್ಯಾಃ ಪತ್ಯುಸ್ತಚ್ಛೇತನಂ ತನೌ |
ಸನ್ದೃಶ್ಯಮಾನಮೇವಾಶು ಶುಷ್ಕಪತ್ರರಸೋ ಯಥಾ ||೪೪||

ಮನಸ್ಸಿನ ಅಜ್ಞಾನವೆಂಬ ತಮಸ್ಸಮೂಹವನ್ನು ಹೋಗಲಾಡಿಸುವುದರಲ್ಲಿ ಸೂರ್ಯಕಿರಣರೂಪಳಾದವಳೆ! ನಿನಗೆ ಜಯವಾಗಲಿ ||೩೭||

ಅಂಬ! ಮಾತೆ! ಜಗನ್ಮಾತೆ! ದೀನಳಾಗಿರುವ ಈ ನನ್ನನ್ನು ಕಾಪಾಡು. ಸರ್ವಮಂಗಳೆ! ನಾನು ಪ್ರಾರ್ಥಿಸುವ ಈ ಯೆರಡು ವರಗಳನ್ನು ಕೊಡು ||೩೮||

ತಾಯೆ! ಅವುಗಳಲ್ಲಿ ಒಂದಾವುದೆಂದರೋ—ನನ್ನ ಪತಿಯು ಮರಣಹೊಂದಿದ ಬಳಿಕ, ಅವನ ಜೀವವು ಈ ನನ್ನ ಅಂತಃಪುರದಿಂದ ಹೊರಕ್ಕೆ ಹೋಗಲೇಬಾರದು ||೩೯||

ಎರಡನೆಯ ವರವು ಯಾವುದೆಂದರೆ:—ಮಹಾದೇವಿ! ನಾನು ಯಾವಯಾವಾಗ ವರಪಡೆಯುವುದಕ್ಕೋಸ್ಕರ ನಿನ್ನ ದರ್ಶನವಾಗಬೇಕೆಂದು ಪ್ರಾರ್ಥಿಸುವೆನೋ, ಆಗೆಲ್ಲ ನೀನು ನನಗೆ ದರ್ಶನಕೊಡಬೇಕು ||೪೦||

ಹೀಗೆ ಆ ಲೀಲೆಯು ಹೇಳಿದ ಮಾತನ್ನು ಕೇಳಿ, ಜಗನ್ಮಾತೆಯಾದ ಆ ಸರಸ್ವತಿಯು ಹಾಗೆಯೇ ಆಗಲೆಂದು ಹೇಳಿ, ಸಮುದ್ರದಲ್ಲಿ ಅಲೆಯು ಎದ್ದು ಆಕ್ಷಣವೇ ಅದೃಶ್ಯವಾಗುವಂತೆ, ತಾನು ಅಂತರ್ಧಾನಹೊಂದಿದಳು ||೪೧||

ಬಳಿಕ ಆ ರಾಜಮಹಿಷಿಯು, ತನ್ನ ಇಷ್ಟದೇವತೆಯು ಸಂತೋಷಪಟ್ಟಿರುವಕಾರಣ ಸಂಗೀತವನ್ನು ಕೇಳಿದ ಹೆಣ್ಣುಜಿಂಕೆಯಂತೆ ಆನಂದಪರವಶಳಾಗಿದ್ದಳು ||೪೨||

ಬಳಿಕ, ಪಕ್ಷ ಮಾಸ ಋತುಗಳೆಂಬ ಮೂರು ಕಟ್ಟುಗಳುಳ್ಳುದಾಗಿಯೂ ದಿನಗಳೆಂಬ ಅರೆಕಾಲುಗಳುಳ್ಳುದಾಗಿಯೂ ವರ್ಷವೆಂಬ ದೂರಿಯುಳ್ಳುದಾಗಿಯೂ ಕ್ಷಣವೆಂಬ ಗುಂಬವುಳ್ಳುದಾಗಿಯೂ ಇರುವ ಚಲನಾತ್ಮಕವಾದ ಕಾಲವೆಂಬ ಚಕ್ರವು ನಡೆಯುತಿರಲಾಗಿ, ಇವಳ ಪತಿಯಾದ ಆ ಪದ್ಮರಾಜನ ಚೇತನವು, ಒಣಗಿದೆಲೆಯ ರಸದಂತೆ, ನೋಡುತಿದ್ದ ಹಾಗೆಯೇ ಅವನ ದೇಹದಲ್ಲಿ ಮರೆಯಾಗಿಬಿಟ್ಟಿತು ||೪೩—೪೪||

ರಣಖಣ್ಡಿತದೇಹೇಸ್ಮಿನ್ ಮೃತೇನ್ತಃಪುರಮಣ್ಡಪೇ ।
ನಿರ್ಜಲಾ ನಳಿನೀವಾಸೌ ಪರಾಂ ಮ್ಲಾನಿಮುಪಾಯಯೌ ॥೪೫॥
ವಿಷೋಷ್ಣಶ್ವಸನಧ್ವಸ್ತಸಕಲಾಧರಪಲ್ಲವಾ ।
ಪ್ರಾಪ ಸಾ ಮರಣಾವಸ್ಥಾಂ ಸಶಲ್ಯೇವ ಮೃಗೀ ಯಥಾ ॥೪೬॥
ಪ್ರಾಪ ಸಾ ತಮಸಾನ್ಧತ್ವಂ ತಸ್ಮಿನ್ ಮರಣಮಾಗತೇ ।
ದೀಪಜ್ವಾಲಾಲವೇ ಕ್ಷೀಣೇ ಸದ್ಮಶ್ರೀರಿವ ಭೂಷಿತಾ ॥೪೭॥
ಕಾರ್ಶ್ಯಮಾಪ ಕ್ಷಣೇನಾಸೌ ಬಾಲಾ ವಿರಸತಾಂ ಗತಾ ।
ಯಥಾ ಸ್ರೋತಸ್ವಿನೀ ಸ್ರೋತಃಕ್ಷಯೇ ಕ್ಷಾರವಿಧೂಸರಾ ॥೪೮॥
ಕ್ಷಿಪ್ರಮಾಕ್ರನ್ದಿನೀ ಕ್ಷಿಪ್ರಂ ಮೌನಮೂಕಾ ವಿಯೋಗಿನೀ ।
ಬಭೂವ ಚಕ್ರವಾಕೀವ ಮಾನಿನೀ ಮರಣೋನ್ಮುಖೀ ॥೪೯॥
ಅಥ ತಾಮತಿಮಾತ್ರವಿಹ್ವಲಾಂ ಸಕೃಪಾಕಾಶಭವಾ ಸರಸ್ವತೀ ।
ಶಫರೀಂ ಹ್ರದಶೋಷವಿಹ್ವಲಾಂ ಪ್ರಥಮಾ ವೃಷ್ಟಿರಿವಾನ್ವಕಮ್ಪತ ॥೫೦॥

ಇತಿ ಉತ್ಪತ್ತಿಪ್ರಕರಣೇ ಮಣ್ಡಪೋಪಾಖ್ಯಾನೇ ರಾಜ್ಞೀಪರಿದೇವನಂ ನಾಮ ಷೋಡಶಃ ಸರ್ಗಃ.

ಯುದ್ಧದಲ್ಲಿ ಖಂಡಿತವಾದ ದೇಹವುಳ್ಳವನಾಗಿ ಆ ಪದ್ಮರಾಜನು ಅಂತಃಪುರಮಂಟಪದೊಳಗೆ ಮೃತನಾಗಲು, ನೀರಿಲ್ಲದ ಕಮಲಲತೆಯಂತೆ, ಈ ಲೀಲೆಯು ಅತ್ಯಧಿಕವಾದ ಮ್ಲಾನಿಯನ್ನು ಹೊಂದಿದಳು ॥೪೫॥

ವಿಷದಂತೆ ಉಷ್ಣವಾದ ನಿಶ್ವಾಸಮಾರುತದಿಂದ ವಿವರ್ಣವಾದ ಅಧರವುಳ್ಳವಳಾಗಿ, ಆ ಲೀಲೆಯು—ಬಾಣನೆಟ್ಟಿರುವ ಹೆಣ್ಣುಜಿಂಕೆಯಂತೆ—ಮರಣಾವಸ್ಥೆಹೊಂದಿದವಳಂತಾದಳು॥

ಮೊದಲು ದೀಪದಿಂದ ಭೂಷಿತವಾಗಿದ್ದು—ಬಳಿಕ ಸಣ್ಣ ದೀಪಜ್ವಾಲೆಯೂ ಆರಿಹೋದಮೇಲೆ ಗೃಹಕಾಂತಿಯೆಲ್ಲವೂ ಕತ್ತಲೆಗವಿಯುವಂತೆ, ಆ ಪದ್ಮರಾಜನು ಮರಣಹೊಂದಿದಮೇಲೆ ಆ ಲೀಲೆಯು ದುಃಖದಿಂದ ಮೂರ್ಛಿತಳಾಗಿಬಿಟ್ಟಳು ॥೪೭॥

ಪ್ರವಾಹವೆಲ್ಲ ನಿಶ್ಶೇಷವಾಗಿಳಿದುಹೋದಮೇಲೆ ನದಿಯು ಚವುಳುತುಂಬಿಕೊಂಡು ಕೃಶವಾಗಿ ವಿರಸವಾಗುವಂತೆ, ಇವಳು ಕ್ಷಣದೊಳಗಾಗಿ ವಿರಸಳಾಗಿ ಕೃಶಳಾಗಿಬಿಟ್ಟಳು ॥

ಮತ್ತು ಆ ಲೀಲೆಯು, ಪತಿವಿಯುಕ್ತವಾದ ಚಕ್ರವಾಕಿಯಂತೆ, ತಟ್ಟನೆ ಅಳುತಲೂ—ತಟ್ಟನೆ ಮೌನತಾಳುತಲೂ ಮರಣೋನ್ಮುಖಿಯಾಗಿಬಿಟ್ಟಳು ॥೪೯॥

ಬಳಿಕ, ಮಡುವೆಲ್ಲ ಒಣಗಿಹೋಗಿ ಕಳವಳಪಡುತಿರುವ ಹೆಣ್ಣುಮೀನನ್ನು ಮೊಟ್ಟಮೊದಲು ಬಿದ್ದ ಮಳೆಯನುಗ್ರಹಿಸುವಂತೆ, ಪತಿಮರಣದಿಂದ ಬಲು ಕಳವಳವಾಗಿರುವ ಆ ಲೀಲೆಯನ್ನು, ಕೃಪಾಯುಕ್ತಳಾದ ಆ ಆಕಾಶವಾಣಿಯು ಅನುಗ್ರಹಿಸಿದಳು ॥೫೦॥

ಇದು ಉತ್ಪತ್ತಿಪ್ರಕರಣದಲ್ಲಿ ಮಂಡಪೋಪಾಖ್ಯಾನದೊಳಗೆ ರಾಜ್ಞೀಪರಿದೇವನವೆಂಬ ಹದಿನಾರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಸಪ್ತದಶಃ ಸರ್ಗಃ.

ಶ್ರೀಸರಸ್ವತ್ಯುವಾಚ.

ಶವೀಭೂತಮಿಮಂ ವತ್ಸೇ ಭರ್ತಾರಂ ಪುಷ್ಪಪುಞ್ಜಕೇ ।
ಆಚ್ಛಾದ್ಯ ಸ್ಥಾಪಯೈನಂ ತ್ವಂ ಪುನರ್ಭರ್ತಾರಮೇಷ್ಯಸಿ ॥೧॥
ಪುಷ್ಪಾಣಿ ಮ್ಲಾನಿಮೇಷ್ಯನ್ತಿ ನೋ ನಚೈಷ ವಿನಙ್ಕ್ಷ್ಯತಿ ।
ಭೂಯಶ್ಚ ತವ ಭರ್ತೃತ್ವಂ ಅಚಿರೇಣ ಕರಿಷ್ಯತಿ ॥೨॥
ಏತದೀಯಶ್ಚ ಜೀವೋಽಸೌ ಆಕಾಶವಿಶದಸ್ತವ ।
ನ ನಿರ್ಗಮಿಷ್ಯತಿ ಕ್ಷಿಪ್ರಂ ಇತೋಽನ್ತಃಪುರಮಣ್ಡಪಾತ್ ॥೩॥
ಷಟ್ಪದಶ್ರೇಣಿನಯನಾ ಸಮಾಕರ್ಣ್ಯೇತಿ ಬನ್ಧುಭಿಃ ।
ಸಾ ಸಮಾಶ್ವಾಸಿತಾಗತ್ಯ ಪಯೋಭಿರಿವ ಪದ್ಮಿನೀ ॥೪॥
ಪತಿಂ ಸಂಸ್ಥಾಪ್ಯ ತತ್ರೈವ ಪುಷ್ಪಪೂರಪ್ರಗೋಪಿತಮ್ ।
ಕಿಂಚಿದಾಶ್ವಾಸಿತಾತಿಷ್ಠತ್ ದರಿದ್ರೇವ ನಿಧಾನಿನೀ ॥೫॥

ಉತ್ಪತ್ತಿಪ್ರಕರಣದಲ್ಲಿ ಹದಿನೇಳನೆಯ ಸರ್ಗವು.

ಅನ್ವಯವ್ಯತಿರೇಕಾಭ್ಯಾಂ ನವ್ಯಪ್ರಾಕ್ತನಸರ್ಗಯೋಃ ।
ಮನೋಮಾತ್ರವಿಲಾಸತ್ವಾತ್ ತುಲ್ಯತ್ವಮಿಹ ಬೋಧ್ಯತೇ ॥

ಅನ್ವಯವ್ಯತಿರೇಕವ್ಯಾಪ್ತಿಗಳಿಂದ ನೂತನ ಪುರಾತನ ಸೃಷ್ಟಿಗರಳೆಡೂ ಮನೋವಿಲಾಸಮಾತ್ರವಾಗಿರುವಕಾರಣ, ಸಮಾನಗಳೆಂಬ ವಿಷಯವು ಈ ಸರ್ಗದಲ್ಲಿ ಹೇಳಲ್ಪಡುವುದು.

ಪೂರ್ವೋಕ್ತರೀತಿಯಾಗಿ ಆ ಆಕಾಶದಲ್ಲಿರುವ ಸರಸ್ವತಿಯು ಲೀಲೆಯನ್ನು ಕುರಿತು ಹೇಳಿದುದೇನೆಂದರೆ: —

ವತ್ಸೆ ! ಶವವಾಗಿ ಬಿದ್ದಿರುವ ಈ ನಿನ್ನ ಪತಿಯನ್ನು, ಪುಷ್ಪಸಮೂಹದಲ್ಲಿ ಮುಚ್ಚಿರಿಸು; ಪುನಃ ನೀನು ನಿನ್ನ ಪತಿಯನ್ನು ಹೊಂದುವೆ ॥೧॥

ಆ ಪುಷ್ಪಗಳೂ ಬಾಡುವುದಿಲ್ಲ; ಈ ನಿನ್ನ ಪತಿಯೂ ನಾಶಹೊಂದುವುದಿಲ್ಲ. ಇವನು ಬೇಗನೆ ಪುನಃ ನಿನ್ನ ಪೋಷಣಾದಿಗಳನ್ನು ಮಾಡುವನು ॥೨॥

ಆಕಾಶದಂತೆ ನಿರ್ಮಲವಾಗಿರುವ ಇವನ ಈ ಜೀವವೂ ಕೂಡ, ನಿನ್ನ ಈ ಅಂತಃಪುರದ ದೆಸೆಯಿಂದ ಬೇಗನೆ ಹೊರಟುಹೋಗದಿರುವುದು ॥೩॥

ಹೀಗೆ ಅಶರೀರವಾಕ್ಕಾದ ಬಳಿಕ, ಭ್ರಮರಪಂಕ್ತಿಯಂತಿರುವ ನೇತ್ರವಿಲಾಸವುಳ್ಳ ಆ ಲೀಲೆಯನ್ನು, ಈ ವೃತ್ತಾಂತಕೇಳಿದ ಬಂಧುಜನರು ಬಂದು, ಒಣಗುತ್ತಿರುವ ಕಮಲಲತೆಯನ್ನು ನೀರು ಆಶ್ವಾಸನಮಾಡುವಂತೆ — ಸಮಾಧಾನಪಡಿಸಿದರು ॥೪॥

ಆಗ ಆ ಲೀಲೆಯು, ಅಲ್ಲಿಯೇ ಪುಷ್ಪಸಮೂಹದಿಂದ ಮುಚ್ಚಲ್ಪಟ್ಟ ಆ ಪತಿದೇಹವನ್ನು ಇಟ್ಟುಕೊಂಡು, ನಿಧಿಸಿಕ್ಕಿದ ದರಿದ್ರಸ್ತ್ರೀಯಂತೆ ಸ್ವಲ್ಪ ಸಮಾಧಾನಯುಕ್ತಳಾಗಿದ್ದಳು॥

ತಸ್ಮಿನ್ನೇವ ದಿನೇ ಸೈಷಾ ತಸ್ಮಿಞ್ಛುದ್ಧಾನ್ತಮಣ್ಡಪೇ ।
ಅರ್ಧರಾತ್ರೇ ಪರಿಜನೇ ಸರ್ವಸ್ಮಿನ್ ನಿದ್ರಯಾ ಹೃತೇ ॥೬॥
ಜ್ಞಪ್ತಿಂ ಭಗವತೀಂ ದೇವೀಂ ಶುದ್ಧಧ್ಯಾನಮಹಾಧಿಯಾ ।
ದುಃಖಾದಾಹ್ವಾಯಯಾಮಾಸ ಸೋವಾಚ ಸಮುಪೇತ್ಯ ತಾಮ್ ॥೭॥
ಕಿಂ ಸ್ಮೃತಾಸ್ಮಿ ತ್ವಯಾ ವತ್ಸೇ ವತ್ಸೇ ಕಿಮಿತಿ ಶೋಕಿತಾಮ್ ।
ಸಂಸಾರಭ್ರಾನ್ತಯೋ ಭಾನ್ತಿ ಮೃಗತೃಷ್ಣಾಮ್ಬುವನ್ಮೃಧಾ ॥೮॥

ಲೀಲೋವಾಚ.

ಕ್ವ ಮಮಾವಸ್ಥಿತೋ ಭರ್ತಾ ಕಿಂ ಕರೋತ್ಯಥ ಕೀದೃಶಃ ।
ಸಮೀಪಂ ನಯ ಮಾಂ ತಸ್ಯ ನೈಕಾ ಶಕ್ನೋಮಿ ಜೀವಿತುಮ್ ॥೯॥

ಶ್ರೀ ದೇವ್ಯುವಾಚ.

ಚಿತ್ತಾಕಾಶಂ ಚಿದಾಕಾಶಂ ಆಕಾಶಂ ಚ ತೃತೀಯಕಮ್ ।
ದ್ವಾಭ್ಯಾಂ ಶೂನ್ಯತರಂ ವಿದ್ಧಿ ಚಿದಾಕಾಶಂ ವರಾನನೇ ॥೧೦॥
ತಚ್ಚಿದಾಕಾಶಕೋಶಾತ್ಮ ಚಿದಾಕಾಶೈಕಭಾವನಾತ್ ।
ಅವಿದ್ಯಮಾನಮಪ್ಯಾಶು ದೃಶ್ಯತೇಥಾನುಭೂಯತೇ ॥೧೧॥

ಹೀಗಿರಲು, ಆ ದಿವಸವೇ ಅರ್ಧರಾತ್ರಿಸಮಯದಲ್ಲಿ ಸಮಸ್ತಪರಿಜನರೂ ನಿದ್ರಾಕ್ರಾಂತರಾಗಿರಲು, ಆ ಲೀಲೆಯು, ಆ ಅಂತಃಪುರಮಂಟಪದೊಳಗೆ, ಶುದ್ಧಧ್ಯಾನಯುಕ್ತವಾದ ಮನಸ್ಸಿನಿಂದ, ಪೂರ್ವೋಕ್ತಳಾದ ಪೂಜ್ಯಳಾದ ಜ್ಞಪ್ತಿದೇವಿಯನ್ನು ದುಃಖದಿಂದ ಕರೆದಳು; ಆಗ ಆ ದೇವಿಯು ಬಂದು ಅವಳನ್ನು ಕುರಿತು ಹೀಗೆ ಹೇಳಿದಳು ॥೬—೭॥

ವತ್ಸೆ ! ನೀನು ಏತಕ್ಕೆ ನನ್ನನ್ನು ಸ್ಮರಿಸಿದೆ? ಏತಕ್ಕಾಗಿ ಹೀಗೆ ಶೋಕಾಕ್ರಾಂತಳಾಗಿರುವೆ? ಈ ಸಂಸಾರಭ್ರಮೆಗಳು ಮೃಗತೃಷ್ಣಿಕೆಗಳಂತೆ ಅಸತ್ಯಗಳಾಗಿದ್ದರೂ ಕಾಣುತಿರುವುವು ॥

ಇದಕ್ಕೆ ಲೀಲೆಯು ಉತ್ತರಹೇಳಿದಳು:—

ಅಂಬ ! ನನ್ನ ಪತಿಯು ಎಲ್ಲಿರುವನು ? ಅವನು ಈಗ ಏನುಮಾಡುತ್ತಿರುವನು? ನನ್ನನ್ನು ಅವನ ಹತ್ತಿರಕ್ಕೆ ಕರೆದುಕೊಂಡುಹೋಗು. ನಾನು ಒಬ್ಬಳೇ ಬದುಕಿರಲಾರೆನು॥

ಆ ದೇವಿಯು ಉತ್ತರಹೇಳಿದಳು:—

ಎಲೌ ! ಶುಭಾನನೆ ! ಚಿತ್ತಾಕಾಶವೆಂದೂ ಚಿದಾಕಾಶವೆಂದೂ ಮೂರನೆಯದಾಗಿ ನಾವು ನೋಡುತಿರುವ ಆಕಾಶವೆಂದೂ ಮೂರುಂಟಷ್ಟೆ ! ಅವುಗಳಲ್ಲಿ ಚಿದಾಕಾಶವೆಂಬುದು ಮಿಕ್ಕೆರಡು ಆಕಾಶಗಳಿಂದಲೂ ಸಂಪೂರ್ಣವಾಗಿ ಶೂನ್ಯವೆಂದು ತಿಳಿ ॥೧೦॥

ಅದುಕಾರಣ, ಆ ನಿನ್ನ ಪತಿದೇಹ ಮುಂತಾದುದೂ ಚಿದಾಕಾಶಕೋಶರೂಪವು; ಇದು ವಸ್ತುತಃ ಇಲ್ಲವಾದರೂ, ಚಿದಾಕಾಶವೊಂದನ್ನೇ ಸರ್ವದಾ ಇಷ್ಟಾನುಸಾರವಾಗಿ ಭಾವನೆಮಾಡುತ್ತಿರುವುದರಿಂದ, ನಮ್ಮ ಭಾವನಾನುಗುಣವಾಗಿ ಕಾಣುತಲೂ ಆ ವಿಧವಾಗಿ ಅನುಭವವಿಷಯವಾಗುತಲೂ ಇರುವುದು ॥೧೧॥

ದೇಶಾದ್ದೇಶಾನ್ತರಪ್ರಾಪ್ತೌ ಸಂವಿದೋ ಮಧ್ಯಮೇವ ಯತ್ ।
ನಿಮಿಷೇಣ ಚಿದಾಕಾಶಂ ತದ್ವಿದ್ಧಿ ವರವರ್ಣಿನಿ ॥೧೨॥
ತಸ್ಮಿನ್ ನಿರಸ್ತನಿಶ್ಶೇಷಸಙ್ಕಲ್ಪಾ ಸ್ಥಿತಿಮೇಷಿ ಚೇತ್ ।
ಸರ್ವಾತ್ಮಕಂ ಪದಂ ತತ್ತ್ವಂ ತ್ವಂ ತದಾಪ್ನೋಷ್ಯಸಂಶಯಮ್ ॥೧೩॥
ಅತ್ಯನ್ತಾಭಾವಸಮ್ಪತ್ತ್ಯಾ ಜಗತಶ್ಚೈತದಾಪ್ಯತೇ ।
ನಾನ್ಯಥಾ ಮದ್ವರೇಣಾಶು ತ್ವಂ ತು ಪ್ರಾಪ್ಸ್ಯಸಿ ಸುನ್ದರಿ ॥೧೪॥

ಶ್ರೀವಸಿಷ್ಠ ಉವಾಚ.

ಇತ್ಯುಕ್ತ್ವಾ ಸಾ ಯಯೌ ದೇವೀ ದಿವ್ಯಮಾತ್ಮೀಯಮಾಸ್ಪದಮ್ ।
ಲೀಲಾ ತು ಲೀಲಯೈವಾಸೀತ್ ನಿರ್ವಿಕಲ್ಪಸಮಾಧಿಭಾಕ್ ॥೧೫॥
ತತ್ ತತ್ಯಾಜ ನಿಮೇಷೇಣ ಸಾನ್ತಃಕರಣಪಞ್ಜರಮ್ ।
ಸ್ವದೇಹಂ ಖಮಿವೋಡ್ಡೀನಾ ಮುಕ್ತನೀಡಾ ವಿಹಙ್ಗಮಾ ॥೧೬॥

ಆ ಚಿದಾಕಾಶವಾವುದೆಂದರೆ:—ನಮ್ಮ ಜ್ಞಾನವು ಒಂದೊಂದುವೇಳೆ ಒಂದೊಂದು ಕಡೆಗೆ ಹೋಗುತಿರುವುದಷ್ಟೆ ! ಹೀಗೆ ಹೋಗುವಾಗ ಮೊದಲು ಒಂದುಪದಾರ್ಥದಲ್ಲಿದ್ದು ಬಳಿಕ ಅದನ್ನು ಬಿಟ್ಟು ಮತ್ತೊಂದನ್ನಾಶ್ರಯಿಸುವುದು. ಆಗ ಮೊದಲನೆಯದನ್ನು ಬಿಟ್ಟಮೇಲೆ ಎರಡನೆಯದನ್ನಾಶ್ರಯಿಸುವುದಕ್ಕೆ ಪೂರ್ವಭಾವಿಯಾಗಿ ಒಂದುರೆಪ್ಪೆಹಾಕುವಷ್ಟುಕಾಲ ಯಾವವಿಷಯವನ್ನೂ ಆಶ್ರಯಿಸದೆ ಇರುವುದಷ್ಟೆ? ಎಲೌ ! ಉತ್ತಮಾಂಗಿಯೆ ! ಅದನ್ನೇ ಚಿದಾಕಾಶವೆಂದು ತಿಳಿ ॥೧೨॥

ಈ ವಿಧವಾದ ಚಿದಾಕಾಶದಲ್ಲಿ ಸಮಸ್ತವಾದ ಸಂಕಲ್ಪಗಳನ್ನೂ ಬಿಟ್ಟುಬಿಟ್ಟು ನೀನು ಸ್ಥಿತಿಯನ್ನು ಹೊಂದುವೆಯಾದರೆ, ಆಗ ಸರ್ವಾತ್ಮಕವಾದ ಆ ಪರಮಪದವನ್ನು ನಿಸ್ಸಂಶಯವಾಗಿ ಪಡೆಯುವೆ॥೧೩॥

ಈವಿಧವಾದ ಸ್ಥಿತಿಯನ್ನು ಪಡೆಯುವುದಕ್ಕೇನುಮಾಡಬೇಕೆಂದರೆ:-ಈ ಪ್ರಪಂಚವು ಅತ್ಯಂತವಾಗಿ ಅಭಾವವೆಂಬ ಜ್ಞಾನವುಂಟಾದರೇ ಈಸ್ಥಿತಿಯುಂಟಾಗುವುದಲ್ಲದೆ, ಅನ್ಯಥಾ ಆಗುವುದಿಲ್ಲ. ಎಲೌ ಸುಂದರಿ! ನನ್ನ ವರದಿಂದ ನೀನು ಈವಿಧವಾದ ಜ್ಞಾನವನ್ನು ಶೀಘ್ರವಾಗಿ ಪಡೆಯುವೆ ॥೧೪॥

ಹೀಗೆ ಆ ದೇವಿಯು ಲೀಲೆಯನ್ನು ಕುರಿತು ಹೇಳಿದಳೆಂದು ಹೇಳುತ, ಮತ್ತೆ ರಾಮನನ್ನು ಕುರಿತು ಶ್ರೀವಸಿಷ್ಠರು ಹೇಳುವರು :—

ಹೀಗೆ ಹೇಳಿ ಆ ದೇವಿಯು ದಿವ್ಯವಾದ ತನ್ನ ಸ್ಥಳವನ್ನು ಹೊಂದಿದಳು; ಆ ಲೀಲೆಯಾದರೋ, ಲೀಲೆಯಿಂದಲೇ (ಪ್ರಯಾಸವಿಲ್ಲದೆಯೇ) ನಿರ್ವಿಕಲ್ಪಸಮಾಧಿಯನ್ನು ಹೊಂದಿದವಳಾದಳು ॥೧೫॥

ಹೀಗೆ ಸಮಾಧಿಲೀನಳಾದ ಆ ಲೀಲೆಯು, ಲೋಹಪಂಜರದಂತೆ ದುರ್ಭೇದ್ಯವಾದ ಅಂತಃಕರಣದೊಡಗೂಡಿದ ತನ್ನ ಸ್ಥೂಲ ದೇಹವನ್ನು ಬಿಟ್ಟುಬಿಟ್ಟು, ಗೂಡುಬಿಟ್ಟುಹೋದ ಹೆಣ್ಣುಹಕ್ಕಿಯಂತೆ ಆಕಾಶಕ್ಕೆ ಹಾರಿಹೋದಳು ॥೧೬॥

ದದರ್ಶ ಖಸ್ಥಾ ಭರ್ತಾರಂ ತಸ್ಮಿನ್ನೇವಾಲಯಾಮ್ಬರೇ |
ಸಂಸ್ಥಿತಂ ಪೃಥಿವೀಪಾಲಂ ಆಸ್ಥಾನೇ ಬಹುರಾಜನಿ ||೧೭||
ಸಿಂಹಾಸನೇ ಸಮಾರೂಢಂ ಜಯ ಜೀವೇತಿ ಸಂಸ್ತುತಮ್ |
ಪ್ರಸ್ತುತಂ ಮಣ್ಡಲಾನೀಕಕಾರ್ಯಮಾಹರ್ತುಮುದ್ಯತಮ್ ||೧೮||
ಪತಾಕಾಮಞ್ಜರೀಕೀರ್ಣರಾಜಧಾನೀಗೃಹಸ್ಥಿತಮ್ |
ಪೂರ್ವದ್ವಾರಸ್ಥಿತಾಸಙ್ಖ್ಯಮುನಿವಿಪ್ರರ್ಷಿಮಣ್ಡಲಮ್ ||೧೯||
ದಕ್ಷಿಣದ್ವಾರಗಾಸಙ್ಖ್ಯರಾಜರಾಜೇಶಮಣ್ಡಲಮ್ |
ಪಶ್ಚಿಮದ್ವಾರಗಾಸಙ್ಖ್ಯಲಲನಾಲೋಕಮಣ್ಡಲಮ್ ||೨೦||
ಉತ್ತರದ್ವಾರಗಾಸಙ್ಖ್ಯರಥಹಸ್ತ್ಯಶ್ವಸಙ್ಕುಲಮ್ |
ಏಕಭೃತ್ಯವಿನಿರ್ಣೀತದಕ್ಷಿಣಾಪಥವಿಗ್ರಹಮ್ ||೨೧||
ಕರ್ಣಾಟನಾಥರಚಿತಪೂರ್ವದೇಶಕ್ರಿಯಾಕ್ರಮಮ್ |
ಸುರಾಷ್ಟ್ರಾಧಿಪನಿರ್ಣೀತಸರ್ವಮ್ಲೇಚ್ಛೋತ್ತರಾಪಥಮ್ ||೨೨||
ಮಾಲದೇಶಸಮಾಕ್ರಾನ್ತಸರ್ವಪಾಶ್ಚಾತ್ಯತಙ್ಗಣಮ್ |
ದಕ್ಷಿಣಾಬ್ಧಿತಟಾಯಾತಲಙ್ಕಾದೂತವಿನೋದಿತಮ್ ||೨೩||

ಹೀಗೆ ಆಕಾಶಕ್ಕೆ ಹಾರಿ ಹೋದ ಆ ಲೀಲೆಯು, ಅಲ್ಲಿಯೇ ನಿಂತುಕೊಂಡು, ಆ ತನ್ನ ಅರಮನೆಯ ಮಧ್ಯದಲ್ಲಿಯೇ—ಅನೇಕರಾಜಯುಕ್ತವಾದ ಆ ಆಸ್ಥಾನಮಂಟಪದಲ್ಲಿಯೇ-ಕುಳಿತು ರಾಜ್ಯಭಾರಮಾಡುತಿರುವ ತನ್ನ ಪತಿಯನ್ನು ಕಂಡಳು ||೧೭||

ಆ ಸಮಯದಲ್ಲಿ ಅವನು ಹೇಗಿದ್ದನೆಂದರೆ :—ಸಿಂಹಾಸನದಮೇಲೆ ಕುಳಿತುಕೊಂಡು 'ಜಯ—ಜೀವ' ಎಂದು ಸ್ತುತಿಪಾಠಕರಿಂದ ಹೊಗಳಲ್ಪಡುತಲೂ, ಆ ಸಮಯದಲ್ಲಿ ಮಾಡಬೇಕಾದ ದೇಶಕಾರ್ಯ ಸೇನಾಕಾರ್ಯಗಳನ್ನು ಮಾಡುವುದಕ್ಕುದ್ಯುಕ್ತನಾಗಿಯೂ ಇದ್ದನು. ಪತಾಕಾಸಮೂಹಗಳಿಂದ ವ್ಯಾಪ್ತವಾದ ರಾಜಧಾನಿಯೊಳಗಿನ ಅರಮನೆಯಲ್ಲಿದ್ದನು; ಆ ಅರಮನೆಯ ಪೂರ್ವದಿಕ್ಕಿನ ಬಾಗಿಲಿನೊಳಗೆ ಅನೇಕರಾದ ಬ್ರಹ್ಮರ್ಷಿ ದೇವರ್ಷಿ ಬ್ರಾಹ್ಮಣಸಮೂಹಗಳು ತುಂಬಿದ್ದುವು ; ದಕ್ಷಿಣದಿಕ್ಕಿನ ಬಾಗಿಲಿನಲ್ಲಿ ಅನೇಕರಾದ ಚಿಕ್ಕ ದೊಡ್ಡ ದೊರೆಗಳು ಗುಂಪುಕಟ್ಟಿಕೊಂಡಿದ್ದರು ; ಪಶ್ಚಿಮದ್ವಾರದಲ್ಲಿ ಅಸಂಖ್ಯಾಕರಾದ ಸ್ತ್ರೀಜನರು ಸಮೂಹವಾಗಿದ್ದರು ; ಉತ್ತರಕಡೆಯಬಾಗಿಲಿನಲ್ಲಿ ಅಸಂಖ್ಯಾಕವಾಗಿ ರಥ ಗಜ ತುರಗಗಳು ತುಂಬಿದ್ದುವು ; ಒಬ್ಬ ಭೃತ್ಯನು ಹೇಳಿದ ಮಾತಿನಿಂದಲೇ, ದಕ್ಷಿಣದೇಶದಲ್ಲಿ ಮಾಡಬೇಕಾದ ಯುದ್ಧಪ್ರಕ್ರಮವನ್ನು ಆ ಪದ್ಮರಾಜನು ನಿರ್ಣಯಮಾಡುತಿದ್ದನು ; ಇವನ ಸಾಮಂತನಾದ ಕರ್ಣಾಟದೇಶಾಧೀಶ್ವರನು ಪೂರ್ವದೇಶದಲ್ಲಿ ನಡೆಯಬೇಕಾದ ಕೆಲಸದ ರೀತಿಯನ್ನು ಏರ್ಪಡಿಸುತಿದ್ದನು ; ಸುರಾಷ್ಟ್ರದೇಶಾಧಿಪತಿಯು ಕೇವಲಮ್ಲೇಚ್ಛಮಯವಾದ ಉತ್ತರದೇಶವನ್ನು ಗೆದ್ದು ವಶಪಡಿಸಿಕೊಳ್ಳುವುದರಲ್ಲಿದ್ದನು ; ಮಾಲದದೇಶಪತಿಯು ಕೇವಲ ಪಶ್ಚಿಮದೇಶೀಯಮಯವಾಗಿದ್ದ ತಂಗಣದೇಶವನ್ನು ಆಕ್ರಮಿಸಿಕೊಂಡಿದ್ದನು ; ದಕ್ಷಿಣಸಮುದ್ರತೀರದಿಂದ ಬಂದ ಲಂಕಾಪಟ್ಟಣದ ದೂತನು ಆ ಪದ್ಮರಾಜನನ್ನು ವಿನೋದ

ಪೂರ್ವಾಬ್ಧಿತಟಮಾಹೇನ್ದ್ರಸಿದ್ಧೋಕ್ತಗಗನಾಪಗಮ್ ।
ಉತ್ತರಾಬ್ಧಿತಟಾಯಾತದೂತವರ್ಣಿತಗುಹ್ಯಕಮ್ ॥೨೪॥
ಪಶ್ಚಿಮಾಬ್ಧಿತಟಾಲೋಕವರ್ಣಿತಾಸ್ತಮಯಕ್ರಮಮ್ ।
ಅಸಙ್ಖ್ಯಬದ್ಧಭೂಪಾಲಕಲಾಕೀರ್ಣಾಖಿಲಾಜಿರಮ್ ॥೨೫॥
ಯಜ್ಞವಾಟಪಠದ್ವಿಪ್ರಜಿತತೂರ್ಯಾಗ್ರನಿಸ್ವನಮ್ ।
ವನ್ದಿಕೋಲಾಹಲೋಲ್ಲಾಸಪ್ರತಿಶ್ರುದ್ವನಕುಞ್ಜರಮ್ ॥೨೬॥
ಗೇಯವಾದ್ಯೋದ್ಯತಧ್ವಾನಪ್ರಧ್ವನದ್ಗಗನಾನ್ತರಮ್ ।
ಹಯಹಸ್ತಿರಥಾರಾಜಿರಜೋಮೇಘಘನಾಮ್ಬರಮ್ ॥೨೭॥
ಪುಷ್ಪಕರ್ಪೂರಧೂಪಾಢ್ಯಂ ಗನ್ಧಾಮೋದಿತಪರ್ವತಮ್ ।
ಸರ್ವಮಣ್ಡಲಸಮ್ಭಾರರಚಿತಾನೇಕಶಾಸನಮ್ ॥೨೮॥
ಯಶಃಕರ್ಪೂರಜಲದಸುಶುಭ್ರಾಮ್ಬರಪರ್ವತಮ್ ।
ರೋದಸೀಸ್ತಮ್ಭಭೂತೈಕಸ್ವಪ್ರತಾಪಜಿತಾರ್ಕಕಮ್ ॥ ೨೯ ॥
ಆರಮ್ಭಮನ್ಥರೋದಾರಕಾರ್ಯಸಂವ್ಯಗ್ರಭೂಮಿಪಮ್ ।
ನಾನಾನಗರನಿರ್ಮಾಣಸೋದ್ಯೋಗಸ್ಥಪತೀಶ್ವರಮ್ ॥೩೦॥

ಪಡಿಸುತಿದ್ದನು; ಮಹೇಂದ್ರ ಪರ್ವತದಲ್ಲಿರುವ ಸಿದ್ಧನು ಪೂರ್ವಸಮುದ್ರತೀರದಿಂದ ಬಂದು ದೇವಗಂಗಾಸ್ವರೂಪವನ್ನು ವಿಶದಪಡಿಸುತಿದ್ದನು; ಉತ್ತರ ಸಮುದ್ರತೀರದಿಂದ ಬಂದಿರುವ ದೂತನು ಗುಹ್ಯಕರವಿಷಯವನ್ನು ವರ್ಣಿಸುತಿದ್ದನು; ಪಶ್ಚಿಮಸಮುದ್ರತೀರವನ್ನು ನೋಡಿಬಂದಿರುವ ದೂತನೊಬ್ಬನು ಸೂರ್ಯಾಸ್ತಮಯವಾಗುವ ರೀತಿಯನ್ನು ವರ್ಣಿಸುತಿದ್ದನು; ಅವನ ಅಂಗಳದಲ್ಲಿ ಅಸಂಖ್ಯಾಕರಾಗಿ ಸಾಲುಕಟ್ಟಿ ಕುಳಿತಿರುವ ಭೂಪಾಲಕರ ಕಾಂತಿಯಿಂದ ಆ ಅಂಗಳವೆಲ್ಲ ತುಂಬಿಹೋಗಿತ್ತು; ಅವನ ಯಜ್ಞಶಾಲೆಯಲ್ಲಿ ವೇದಘೋಷಮಾಡುತಿರುವ ಬ್ರಾಹ್ಮಣರ ಧ್ವನಿಯಿಂದ ವಾದ್ಯಧ್ವನಿಗಳೆಲ್ಲವೂ ಹಿಂದಾಗಿದ್ದುವು; ಸ್ತುತಿಪಾಠಕರ ಕೋಲಹಲವಿಕಾಸವನ್ನು ಕೇಳಿ ವನಗಜಗಳೆಲ್ಲವೂ ಪ್ರತಿಧ್ವನಿಮಾಡುತಿದ್ದುವು; ಗೀತ ವಾದ್ಯ ಇವುಗಳ ಧ್ವನಿಯಿಂದ ಅಂತರಿಕ್ಷಮಧ್ಯವೆಲ್ಲವೂ ಮೊಳಗುತಿದ್ದಿತು; ಆನೆ ಕುದುರೆ ರಥ ಇವುಗಳು ಸುತ್ತಲೂ ಸಾಲುಕಟ್ಟಿರುವುದರಿಂದ, ಇವುಗಳ ಧೂಳಿಯೆದ್ದು ಅಂತರಿಕ್ಷದಲ್ಲಿ ಮೇಘದಂತೆ ನಿಬಿಡವಾಗಿದ್ದಿತು; ಮತ್ತು ಆ ಪದ್ಮರಾಜನು ಹೂವುಮುಡಿದು ಕರ್ಪೂರಧೂಪಗಳಿಂದ ಮರಿಮಳಿತನಾಗಿದ್ದನು; ಇವನ ಗಂಧದಿಂದ ಪರ್ವತಸದೃಶವಾದ ಆ ಪ್ರಾಸಾದವೆಲ್ಲವೂ ಸುವಾಸನೆಯಾಗಿದ್ದಿತು; ಸಮಸ್ತವಾದ ದೇಶಗಳಿಂದಲೂ ಉಪಾಯನಗಳನ್ನು ತೆಗೆದುಕೊಂಡು ಬಂದಿರುವ ಭೃತ್ಯರುಗಳಿಗೆ, ಅವನು ಅನೇಕವಿಧವಾದ ಶಾಸನಗಳನ್ನು ಕೊಡುತಿದ್ದನು; ಅವನ ಯಶಸ್ಸೆಂಬ ಪಚ್ಚಕರ್ಪೂರದಂತಿರುವ ಮೇಘಗಳಿಂದ ಆಕಾಶವೂ ಪರ್ವತಗಳೂ ಬೆಳ್ಳಗಾಗಿದ್ದುವು; ಭೂಮ್ಯಾಕಾಶಗಳಿಗೆ ಸ್ತಂಭಭೂತವಾಗಿರುವ ತನ್ನ ಪ್ರತಾಪದಿಂದ ಸೂರ್ಯನನ್ನು ಗೆದ್ದಿದ್ದನು; ಅವನ ಸಾಮಂತ ಭೂಪಾಲಕರೆಲ್ಲರೂ ಅತಿಗುರುತರಾರಂಭವಾದ ದೊಡ್ಡದೊಡ್ಡ ರಾಜಕಾರ್ಯಗಳಲ್ಲಿ ಅತಿಯಾಗಿ ಆಸಕ್ತರಾಗಿದ್ದರು; ಅನೇಕವಿಧವಾದ ಪಟ್ಟಣಗಳನ್ನು ನಿರ್ಮಾಣಮಾಡುವುದರಲ್ಲಿ ದೊಡ್ಡದೊಡ್ಡ ಶಿಲ್ಪಿಗಳು ವ್ಯಾಪೃತರಾಗಿರುತಿದ್ದರು ॥೧೮—೩೦॥

ಪಪಾತಾಥ ಮಹಾರಮ್ಭಾ ಸಾ ತಾಂ ನರಪತೇಃ ಸಭಾಮ್ |
ವ್ಯೋಮಾತ್ಮಿಕಾಂ ವ್ಯೋಮಮಯೀ ಮಿಹಿಕೇವಾಮ್ಬರಾಟವೀಮ್ ‖೨೧‖
ಭ್ರಮನ್ತೀಂ ತತ್ರ ತಾಮಗ್ರೇ ದದೃಶುಸ್ತೇ ನ ಕೇಚನ |
ಸಙ್ಕಲ್ಪಮಾತ್ರರಚಿತಾಂ ಪುರುಷಃ ಕಾಮಿನೀಮಿವ ‖೨೨‖
ತಥಾ ತೇ ತಾಂ ನ ದದೃಶುಃ ಸಞ್ಚರನ್ತೀಂ ಪುರೋಗತಾಮ್ |
ಅನ್ಯಃ ಸಙ್ಕಲ್ಪರಚಿತಾಂ ಅನ್ಯೇನ ನಗರೀಂ ಯಥಾ ‖೨೩‖
ಪ್ರಾಕ್ತನಾನೇವ ತಾನ್ ಸರ್ವಾನ್ ಸ್ವಾನ್ ದದರ್ಶ ಸಭಾಗತಾನ್ |
ಭೂಭೃತೇವ ಸುಸಮ್ಪ್ರಾಪ್ತಾನ್ ನಗರಾನ್ನಗರಾನ್ತರಮ್ ‖೨೪‖
ತದ್ದೇಶಾಂಸ್ತತ್ಸಮಾಚಾರಾನ್ ತಥಾ ತಾನೇವ ಬಾಲಕಾನ್ |
ತಾ ಏವ ಬಾಲವನಿತಾಃ ತಾಂಸ್ತಾನೇವ ಚ ಮನ್ತ್ರಿಣಃ ‖೨೫‖
ತಾನೇವ ಭೂಮಿಪಾಲಾಂಶ್ಚ ತಾಂಸ್ತಾನೇವ ಚ ಪಣ್ಡಿತಾನ್ |
ತಾನೇವ ನರ್ಮಸಚಿವಾನ್ ಭೃತ್ಯಾಂಸ್ತಾನೇವ ತಾದೃಶಾನ್ ‖೨೬‖
ಅಥಾನ್ಯಾನಪ್ಯಪೂರ್ವಾಂಶ್ಚ ಪಣ್ಡಿತಾನ್ ಸುಹೃದಸ್ತಥಾ |
ವ್ಯವಹಾರಾಂಸ್ತಥಾನ್ಯಾಂಶ್ಚ ಪೌರಾನನ್ಯಾಂಸ್ತಥೈವ ಚ ‖೨೭‖

ಈ ವಿಧವಾಗಿರುವ ಪತಿಯನ್ನು ಕಂಡಬಳಿಕ, ಆಕಾಶರೂಪಳಾಗಿರುವ ಆ ಲೀಲೆಯು, ಹಿಮವು ಅಂತರಿಕ್ಷಾಂತರಾಳವನ್ನು ಪ್ರವೇಶಿಸುವಂತೆ, ಮಹಾಸಂಭ್ರಮಯುಕ್ತಳಾಗಿ—ಆಕಾಶಮಯವಾಗಿರುವ ಆ ರಾಜಸಭೆಯನ್ನು ಪ್ರವೇಶಿಸಿದಳು ॥೨೧॥

ಹೀಗೆ ಆ ಲೀಲೆಯು ಅಲ್ಲಿ ಸಂಚರಿಸುತಿದ್ದರೂ --ಪುರುಷನು ತನ್ನ ಸಂಕಲ್ಪಮಾತ್ರದಲ್ಲಿ ರಚಿಸಿಕೊಂಡಿರುವ ಸ್ತ್ರೀಯನ್ನು ಕಾಣದಿರುವಂತೆ--ಅಲ್ಲಿರುವವರೊಬ್ಬರೂ ಅವಳನ್ನು ಕಾಣಲಿಲ್ಲ ॥೨೨॥

ಮತ್ತು, ಒಬ್ಬನು ತನ್ನ ಮನಸ್ಸಂಕಲ್ಪದಲ್ಲಿ ರಚಿಸಿಕೊಂಡಿರುವ ಪಟ್ಟಣವನ್ನು ಮತ್ತೊಬ್ಬನರಿಯದಿರುವಂತೆ, ಅಲ್ಲಿಯೇ ಸಂಚರಿಸುತಿರುವ ಆ ಲೀಲೆಯನ್ನು ಅಲ್ಲಿರುವವರು ಕಾಣಲಿಲ್ಲ ॥೨೩॥

ಆ ಪದ್ಮರಾಜನೊಡನೆ ಒಂದು ಪಟ್ಟಣದಿಂದ ಮತ್ತೊಂದು ಪಟ್ಟಣಕ್ಕೆ ಬಂದಿರುವಂತಿರುವ ತಮ್ಮ ಪೂರ್ವದ ಸಭಾಸದರನ್ನೆಲ್ಲ ಕಂಡಳು. ಆ ಲೀಲೆಯು ನೋಡುವಾಗ—ಆಯಾ ಪ್ರದೇಶಗಳೂ, ಆಯಾ ಆಚರಣೆಗಳೂ, ಬಾಲಕರೂ, ಯುವತಿಯರೂ, ಮಂತ್ರಿಗಳೂ, ದೊರೆಗಳೂ, ಪಂಡಿತರೂ, ನರ್ಮಸಚಿವರೂ, ಭೃತ್ಯರೂ—ಎಲ್ಲರೂಕೂಡ, ಪೂರ್ವದಂತೆಯೇ ಇದ್ದರು; ಮತ್ತು, ಅಲ್ಲಿದ್ದ ಪಂಡಿತರೂ ಮಿತ್ರರೂ ನಾನಾವಿಧವ್ಯವಹಾರಗಳೂ ಪಟ್ಟಣಿಗರೂ ಕೂಡ, ಕೆಲವರು ಪೂರ್ವದವರಾಗಿಯೂ, ಕೆಲವರು ಬೇರೆಯಾಗಿಯೂ ಇದ್ದರು. ಆಗ ಹಗಲು ಮಧ್ಯಾಹ್ನಕಾಲಕ್ಕೆ ಬಂದಿದ್ದಿತು; ದಿಕ್ಕುಗಳಲ್ಲಿ ಕಾಡು ಕಾಣಿಸುತಿದ್ದಿತು; ಅಂತರಿಕ್ಷದಲ್ಲಿ ಚಂದ್ರನೂ ಸೂರ್ಯನೂ ಇದ್ದುದಲ್ಲದೆ, ಮೇಘಧ್ವನಿಯೂ ಉಂಟಾಗಿತ್ತು; ಅಲ್ಲಿ ವೃಕ್ಷಗಳೂ ನದಿಗಳೂ ಪರ್ವತಗಳೂ ಊರುಗಳೂ ಪಟ್ಟಣಗಳೂ ತುಂಬಿದ್ದುವು; ಮತ್ತು ಅನೇಕವಿಧವಾದ ನಗರವಿನ್ಯಾಸಗಳೂ ದೊಡ್ಡದೊಡ್ಡ ಕಾಡು

ಮಧ್ಯಾಹ್ನಕಾಲೇ ದಿವಸೇ ಘನದಾವಾಕುಲಾದಿಶಃ ।
ಅನ್ತರಿಕ್ಷಂ ಸಚನ್ದ್ರಾರ್ಕಂ ಸಾಮೋದಪವನಧ್ವನಿ ॥೩೮॥
ಮಹೀರುಹನದೀಶೈಲಪುರಪತ್ತನಮಣ್ಡಿತಮ್ ।
ನಾನಾನಗರವಿನ್ಯಾಸಜಙ್ಗಲಗ್ರಾಮಸಙ್ಕುಲಮ್ ॥೩೯॥
ದ್ವಿರಷ್ಟವರ್ಷಂ ಭೂಪಾಲಂ ಪ್ರಾಕ್ತನ್ಯಾ ಜರಸೋಜ್ಝಿತಮ್ ।
ಪ್ರಾಕ್ತನೀಂ ಜನತಾಂ ಸರ್ವಾಂ ಸಮಸ್ತಾನ್ ಗ್ರಾಮವಾಸಿನಃ ॥೪೦॥
ಸಾ ತಾನಾಲೋಕ್ಯ ಲಲನಾ ಚಿನ್ತಾಪರವಶಾಭವತ್ ।
ತಸ್ಮಿನ್ ನಗರವಾಸ್ತವ್ಯಾಃ ಕಿಂ ತೇ ಸರ್ವೇ ಮೃತಾ ಇತಿ ॥೪೧॥
ಪುನಃ ಪ್ರಜ್ಞಪ್ತಿಬೋಧೇನ ಪ್ರಾಕ್ತನಾನ್ತಃಪುರಂ ಗತಾ ।
ಕ್ಷಣೇನ ಚ ದದರ್ಶಾತ್ರ ಸಾರ್ಧರಾತ್ರೇ ತಥೈವ ತಾನ್ ॥೪೨॥
ಅಥ ಸೋತ್ಥಾಪಯಾಮಾಸ ನಿದ್ರಾಕ್ರಾನ್ತಂ ಸಖೀಜನಮ್ ।
ಆಹ ಚಾತೀವ ಮೇ ದುಃಖಂ ಆಸ್ಥಾನಂ ದೀಯತಾಮಿತಿ ॥೪೩॥
ಭರ್ತುಃ ಸಿಂಹಾಸನಸ್ಯಾಸ್ಯ ಪಾರ್ಶ್ವೇ ತಿಷ್ಠಾಮ್ಯಹಂ ಯದಿ ।
ಪಶ್ಯಾಮಿ ಸಭ್ಯಸಙ್ಘಾತಂ ತತ್ ಪ್ರಜೀವಾಮಿ ನಾನ್ಯಥಾ ॥೪೪॥
ಸ ರಾಜಪರಿವಾರೋಽಥ ತಯೇತ್ಯುಕ್ತೋ ಯಥಾಕ್ರಮಮ್ ।
ಆಸೀದ್ವಿನಿದ್ರಃ ಸಂವ್ಯಗ್ರಃ ಸರ್ವಃ ಸರ್ವಸ್ವಕರ್ಮಣಿ ॥೪೫॥

ಗಳೂ ಗ್ರಾಮಗಳೂ ವ್ಯಾಪಿಸಿಕೊಂಡಿದ್ದುವು. ಆಗ ಆ ದೊರೆಯು ಹಿಂದಿನ ಮುಪ್ಪಿನಿಂದ ಬಿಡಲ್ಪಟ್ಟವನಾಗಿ ಹದಿನಾರುವರ್ಷದ ಪ್ರಾಯದವನಾಗಿದ್ದನು; ಮತ್ತು ಅಲ್ಲಿದ್ದ ಜನಸಮೂಹವೆಲ್ಲವೂ ಸಮಸ್ತರಾದ ಗ್ರಾಮವಾಸಿಗಳೂ ಪೂರ್ವದಂತೆಯೇ ಇದ್ದರು ॥೩೪–೪೦॥

ಈರೀತಿಯಾಗಿ ಆ ಲೀಲೆಯು, ತನ್ನ ವಾಸನೆಯೆಂಬ ಪಟ್ಟಣದಲ್ಲಿ ಅವರೆಲ್ಲರನ್ನೂ ಕಂಡು, ತನ್ನ ಗಂಡನಂತೆಯೇ ಅವರೆಲ್ಲರೂ ಸತ್ತುಹೋದರೇ?—ಎಂದು ಚಿಂತಾಕ್ರಾಂತಳಾದಳು ॥೪೧॥

ಮತ್ತೆ ಆ ಲೀಲೆಯು, ಸರಸ್ವತೀದೇವಿಯ ಅನುಗ್ರಹದಿಂದುಂಟಾದ (ಸಮಾಧಿವಿರಾಮವಾಗಲಾಗಿ) ಜ್ಞಾನವಿಶೇಷದಿಂದ ಕ್ಷಣದೊಳಗಾಗಿ ಪೂರ್ವದ ಅಂತಃಪುರಕ್ಕೆ ಹೋಗಿ, ಅಲ್ಲಿ ಅರ್ಧರಾತ್ರಿಯಲ್ಲಿ ಪೂರ್ವದಂತೆಯೇ ಇರುವ ಅವರೆಲ್ಲರನ್ನೂ ಕಂಡಳು ॥೪೨॥

ಬಳಿಕ ಅವಳು ನಿದ್ರಾಕ್ರಾಂತರಾಗಿದ್ದ ಸಖಿಯರನ್ನು ಎಬ್ಬಿಸಿ, ಅವರನ್ನು ಕುರಿತು ‘ ನನಗೆ ಬಹಳ ದುಃಖವುಂಟಾಗಿದೆ ; ನನ್ನನ್ನು ಸಭೆಗೆ ಕರೆದುಕೊಂಡುಹೋಗಿರಿ ; ನಾನು ಅಲ್ಲಿ ನನ್ನ ಪತಿಯ ಸಿಂಹಾಸನದ ಮಗ್ಗುಲಿನಲ್ಲಿದ್ದುಕೊಂಡು ಆ ಸಭೆಯ ಜನರ ಸಮುದಾಯವನ್ನು ನೋಡುತಿರುವೆನಾದರೇ ಬದುಕುವೆನಲ್ಲದೆ, ಅನ್ಯಥಾ ಬದುಕಲಾರೆನು ’ ಎಂದು ಹೇಳಿದಳು ॥೪೩–೪೪॥

ಬಳಿಕ ಆ ಲೀಲೆಯು ಹೀಗೆ ಹೇಳಲಾಗಿ, ಆ ಪರಿವಾರದವರೆಲ್ಲರೂ ಕ್ರಮವಾಗಿ ನಿದ್ರಾರಹಿತರಾಗಿ, ತಮ್ಮತಮ್ಮ ಕರ್ಮಗಳಲ್ಲಿ ವ್ಯಾಪೃತರಾದರು ॥೪೫॥

ಪೌರಾನ್ ಸಭ್ಯಾನ್ ಸಮಾನೇತುಂ ಯಯುರ್ಯಾಷ್ಟೀಕಪಙ್ಕ್ತಯಃ ।
ವ್ಯವಹಾರಂ ಕಲಯಿತುಂ ಉರ್ವ್ಯಾಮರ್ಕಕರಾಇವ ॥೪೬॥
ಆಸ್ಥಾನಭೂಮಿಂ ಭೃತ್ಯಾಶ್ಚ ಮಾರ್ಜಯಾಮಾಸುರಾದೃತಾಃ ।
ಪ್ರಾವೃಟ್ಪಯೋದಮಲಿನಂ ಖಂ ಶರದ್ವಾಸರಾಇವ ॥೪೭॥
ಅಙ್ಗಣಂಪ್ರತಿ ದೀಪೌಘಾಃ ತಸ್ಥುಃ ಪೀತತಮೋಮ್ಭಸಃ ।
ಆಶ್ಚರ್ಯದರ್ಶನಾಯೇವ ಸಮ್ಪ್ರಾಪ್ತಾಋಕ್ಷಪಙ್ಕ್ತಯಃ ॥೪೮॥
ಜನತಾಃ ಪೂರಯಾಮಾಸುಃ ಪೂರ್ಯೈರಜಿರಭೂಮಿಕಾಃ ।
ಅಬ್ಧೀನ್ ಪ್ರಳಯಸಂಶುಷ್ಕಾನ್ ಪುರಾಸರ್ಗಇವಾಮ್ಭಸಾ ॥೪೯॥
ಆಜಗ್ಮುರ್ಮನ್ತ್ರಿಸಾಮನ್ತಾಃ ಸ್ವಂಸ್ವಂ ಸ್ಥಾನಮನಿನ್ದಿತಾಃ ।
ತ್ರೈಲೋಕ್ಯೇ ಪುನರುತ್ಪನ್ನೇ ಲೋಕಪಾಲಾಯಥಾ ದಿಶಃ ॥೫೦॥
ವವುರಾಕೀರ್ಣಕರ್ಪೂರಸಾನ್ದ್ರನಶ್ಯಾಯಶೀತಲಾಃ ।
ಉತ್ಫುಲ್ಲಕುಸುಮೋದ್ವಾನ್ತಮಾಂಸಲಾಮೋದಿತಾನಿಲಾಃ ॥೫೧॥
ಪರ್ಯನ್ತೇಷು ಪ್ರತೀಹಾರಾಃ ತಸ್ಥುರ್ಧವಳವಾಸಸಃ ।
ಋಶ್ಯಮೂಕಾರ್ಕತಾಪಾರ್ತಮೇಘಮಾಲಾಇವಾದ್ರಿಷು ॥೫೨॥

ಆಗ, ಭೂಮಿಯಲ್ಲಿ ಕೆಲಸಗಳನ್ನು ನಡೆಯಿಸುವುದಕ್ಕೋಸ್ಕರ ಸೂರ್ಯಕಿರಣಗಳು ಹೋಗುವಂತೆ, ಪೌರರನ್ನೂ ಸಭ್ಯರನ್ನೂ ಕರೆದುಕೊಂಡುಬರುವುದಕ್ಕೋಸ್ಕರ ಕಟ್ಟಿಗೆಯವರು ಸಾಲುಸಾಲಾಗಿ ಹೋದರು ॥೪೬॥

ಮತ್ತು, ವರ್ಷಾಕಾಲದ ಮೇಘಗಳಿಂದ ಮಲಿನವಾಗಿರುವ ಅಂತರಿಕ್ಷವನ್ನು ಶರತ್ಕಾಲದ ದಿವಸಗಳೋಪಾದಿಯಲ್ಲಿ, ಭೃತ್ಯರು ಆಸ್ಥಾನಪ್ರದೇಶವನ್ನು ಆದರದಿಂದ ನಿರ್ಮಲಪಡಿಸಿದರು ॥೪೭॥

ಪ್ರತಿಯೊಂದಂಗಳದಲ್ಲಿಯೂ ದೀಪಸಮೂಹಗಳು ಕಾಣಿಸಿಕೊಂಡುವು, ಅವು, ಇಲ್ಲಿ ನಡೆಯುವ ಆಶ್ಚರ್ಯವನ್ನು ನೋಡುವುದಕ್ಕೋಸ್ಕರ ಬಂದಿರುವ ನಕ್ಷತ್ರಪಂಕ್ತಿಗಳಂತಿದ್ದುವು॥

ಪ್ರಳಯಕಾಲದಲ್ಲಿ ಒಣಗಿಹೋಗಿರುವ ಸಮುದ್ರಗಳನ್ನು ಪೂರ್ವಸೃಷ್ಟಿಯು ಜಲದಿಂದ ಪೂರ್ತಿಮಾಡುವಂತೆ, ಜನಗಳು ಗುಂಪುಗುಂಪಾಗಿ ಚತುಷ್ಪಥಗಳನ್ನು ತುಂಬಿಕೊಂಡರು ॥೪೯॥

ಲೋಕತ್ರಯವೂ ಮತ್ತೆ ಹುಟ್ಟಿದಾಗ ದಿಕ್ಪಾಲಕರು ದಿಕ್ಕುಗಳನ್ನು ಹೊಂದುವಂತೆ, ಉತ್ತಮರಾದ ಮಂತ್ರಿಸಾಮಂತರು ತಮ್ಮತಮ್ಮ ಸ್ಥಾನವನ್ನು ಕುರಿತು ಬಂದರು ॥೫೦॥

ಆಗ ಅಲ್ಲಲ್ಲಿ ಎರೆಚಿರುವ ಪಚ್ಚಕರ್ಪೂರ ಧೂಳಿಗಳಿಂದ ಶೀತವಾಗಿಯೂ, ವಿಕಸಿತವಾದ ಪುಷ್ಪಗಳಿಂದ ಹೊರಡುವ ಪರಿಮಳದಿಂದ ಭರಿತವಾಗಿಯೂ ಇರುವ ವಾಯುಗಳು ಬೀಸಿದುವು ॥೫೧॥

ಋಶ್ಯಮೂಕಪರ್ವತದಲ್ಲಿ ತನ್ನ ಪುತ್ರನಾದ ಸುಗ್ರೀವನನ್ನು ಅನುಗ್ರಹಿಸುವುದಕ್ಕೋಸ್ಕರ ಸನ್ನಿಹಿತನಾದ ಸೂರ್ಯನ ಕಿರಣಗಳಿಂದ ಸಂತಾಪಿತಗಳಾಗಿ ಹಿಮಾಲಯ ಮೊದಲಾದ ಪರ್ವತಗಳನ್ನು ಹೊಂದಿರುವ ಮೇಘಮಾಲೆಗಳಂತೆ, ಶುಭ್ರವಸ್ತ್ರಯುಕ್ತರಾದ ದ್ವಾರಪಾಲಕರುಸುತ್ತಲೂ ಬಂದು ನಿಂತರು ॥೫೨॥

ಪ್ರಭಾಪೀತತಮಃಪುಂಜಾಃ ಪೇತುಃ ಪುಷ್ಪೋತ್ಕರಾ ಭುವಿ ।
ಚಂಡಮಾರುತವಿಧ್ವಸ್ತಾಃ ತಾರಕಾನಿಕರಾ ಇವ ॥೫೩॥
ಆಸ್ಥಾನಂ ಪೂರಯಾಮಾಸುಃ ಮಹೀಪಾಲಾನುಯಾಯಿನಃ ।
ಉತ್ಫುಲ್ಲಕಮಲೋತ್ಕೀರ್ಣಂ ಹಂಸಾ ಇವ ಸರೋವರಮ್ ॥೫೪॥
ಸಿಂಹಾಸನಸಮೀಪಸ್ಥೇ ಹೈಮಚಿತ್ರಾಸನೇ ನವೇ ।
ಉಪಾವಿಶದಸೌ ಲೀಲಾ ಲೀಲೇವ ಸ್ಮರಚೇತಸಿ ॥೫೫॥
ದದರ್ಶ ತಾನ್ ನೃಪಾನ್ ಸರ್ವಾನ್ ಪೂರ್ವಾನೇವ ಯಥಾಸ್ಥಿತಾನ್ ।
ಗುರೂನಾರ್ಯಾನ್ ಸಖೀನ್ ಸಭ್ಯಾನ್ ಸುಹೃತ್ಸಂಬಂಧಿಬಾಂಧವಾನ್ ॥೫೬॥
ಸಕಲಮೇವ ಹಿ ಪೂರ್ವವದೇವ ಸಾ ಸಮವಲೋಕ್ಯ ಮುದಂ ಪರಮಾಂ ಯಯೌ ।
ನೃಪತಿರಾಷ್ಟ್ರಜನಂ ಖಲು ಜೀವನಾಭ್ಯುದಿತಯಾ ಚ ಬಭೌ ಶಶಿವಚ್ಛ್ರಿಯಾ ॥೫೭॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಸನ್ದೇಹರಾಷ್ಟ್ರವರ್ಣನಂ
ನಾಮ ಸಪ್ತದಶಃ ಸರ್ಗಃ.

ಪ್ರಳಯವಾತದಿಂದ ಕೆಡವಲ್ಪಟ್ಟ ನಕ್ಷತ್ರಸಮೂಹಗಳಂತೆ, ತಮ್ಮ ಕಾಂತಿಯಿಂದ ಅಂಧಕಾರಸಮುದಾಯವನ್ನೆಲ್ಲ ನಿರ್ಮೂಲಮಾಡುತಿರುವ ಪುಷ್ಪಸಮೂಹಗಳು ಭೂಮಿಯಲ್ಲಿ ಬಿದ್ದುವು ॥೫೩॥

ವಿಕಸಿತವಾದ ಕಮಲಗಳಿಂದ ವ್ಯಾಪ್ತವಾಗಿರುವ ಸರೋವರವನ್ನು ಹಂಸಗಳು ತುಂಬಿಕೊಳ್ಳುವಂತೆ, ರಾಜರ ಅನುಚರರು ಸಭಾಸ್ಥಾನವನ್ನೆಲ್ಲ ತುಂಬಿಕೊಂಡರು ॥೫೪॥

ಬಳಿಕ ಆ ಲೀಲೆಯು, ಮನ್ಮಥನ ಹೃದಯದಲ್ಲಿ ವಿಲಾಸವಾಶ್ರಯಿಸುವಂತೆ, ಸಿಂಹಾಸನಕ್ಕೆ ಸಮೀಪದಲ್ಲಿರುವ ಹೊಸದಾದ ಸುವರ್ಣಮಯವಾದ ಚಿತ್ರಾಸನದಲ್ಲಿ ಕುಳಿತುಕೊಂಡಳು ॥೫೫॥

ಅಲ್ಲಿ ಕುಳಿತುಕೊಂಡು, ಪೂರ್ವದಂತೆಯೇ ಯಥಾಕ್ರಮವಾಗಿರುವ ಆ ದೊರೆಗಳನ್ನೂ ಗುರುಗಳನ್ನೂ ಹಿರಿಯರನ್ನೂ ಮಿತ್ರರನ್ನೂ ಜೊತೆಗಾರರನ್ನೂ ನೆಂಟರಿಷ್ಟರನ್ನೂ ಕಂಡಳು ॥೫೬॥

ಆಗ ಆ ಲೀಲೆಯು ಆ ಪದ್ಮರಾಜನ ರಾಷ್ಟ್ರದ ಜನರೆಲ್ಲರೂ ಪೂರ್ವದಂತೆಯೇ ಅಲ್ಲಿರುವುದನ್ನು ಕಂಡು, ಅವರೆಲ್ಲರೂ ಬದುಕಿರುವುದರಿಂದುಂಟಾದ ಮುಖಕಾಂತಿವಿಶೇಷದಿಂದ ಚಂದ್ರನಂತೆ ಅಧಿಕವಾಗಿ ಪ್ರಕಾಶಿಸಿದಳು ॥೫೭॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಸಂದೇಹರಾಷ್ಟ್ರ
ವರ್ಣನೆಯೆಂಬ ಹದಿನೇಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟಾದಶಃ ಸರ್ಗಃ.

ಶ್ರೀ ವಷಿಷ್ಠ ಉವಾಚ.

ಇತ್ಥಂ ವಿನೋದಯಾಮಾಸ ದುಃಖದಂ ಚಿತ್ತಮಿತ್ಯಲಮ್ ।
ಬೋಧಯಿತ್ವೇಙ್ಗಿತೈರ್ಭೂಪಾನ್ ಆಸ್ಥಾನಾದುತ್ಥಿತಾಥ ಸಾ ॥೧॥
ಪ್ರವಿಶ್ಯಾನ್ತಃಪುರಂ ಭರ್ತುಃ ಪಾರ್ಶ್ವೇನ್ತಃಪುರಮಣ್ಡಪೇ ।
ವಿವೇಶ ಪುಷ್ಪಗುಪ್ತಸ್ಯ ಚಿನ್ತಯಾಮಾಸ ಚೇತಸಾ ॥೨॥
ಅಹೋ ವಿಚಿತ್ರಾ ಮಾಯೇಯಂ ಏತೇಽಸ್ಮತ್ಪುರಮಾನವಾಃ ।
ಬಹಿರನ್ತರವದ್ದೇಶೇ ತತ್ರ ಚೇಹ ಚ ಸಂಸ್ಥಿತಾಃ ॥೩॥
ತಾಲೀತಮಾಲಹಿನ್ತಾಳಮಾಲಿತಾಗಿರಯೋಽಪ್ಯಮೀ ।
ಯಥಾ ತತ್ರ ತಥೇಹಾಪಿ ಬತ ಮಾಯೇಯಮಾತತಾ ॥೪॥

ಉತ್ಪತ್ತಿಪ್ರಕರಣದಲ್ಲಿ ಹದಿನೆಂಟನೆಯ ಸರ್ಗವು.

ಸಮಾಧಿದೃಷ್ಟಸರ್ಗಸ್ಯ ಪೂರ್ವಸರ್ಗಸ್ಯ ಚಾಧುನಾ ।
ದೃಶ್ಯತ್ವಾತ್ ತುಲ್ಯಮಿಥ್ಯಾತ್ವೇ ಚಿನ್ಮಾತ್ರಸ್ಥಿತಿರುಚ್ಯತೇ ॥

ಸಮಾಧಿಯಲ್ಲಿ ನೋಡಿದ ಸೃಷ್ಟಿಯೂ-ಅದಕ್ಕೆ ಹಿಂದೆ ನೋಡಿದ ಸೃಷ್ಟಿಯೂ-ಎರಡೂ ದೃಶ್ಯವಾಗಿರುವುದರಿಂದ, ಮಿಥ್ಯಾತ್ವವು ಎರಡಕ್ಕೂ ಸಮಾನವಾದಮೇಲೆ, ಕೇವಲ ಚಿನ್ಮಾತ್ರಸ್ಥಿತಿಯುವಶಿಷ್ಟವಾಗುವುದೆಂಬ ವಿಷಯವು, ಈಗ ಹೇಳಲ್ಪಡುವುದು.

ಪುನಃ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:--

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿದ್ದ ಆ ಲೀಲೆಯು, ಕೇವಲದುಃಖಪ್ರದವಾದ ಮನಸ್ಸನ್ನು ಈ ರೀತಿಯಾಗಿ ವಿನೋದಪಡಿಸುತ್ತೇನೆಂದು-ತನ್ನ ಇಂಗಿತಗಳಿಂದ ಅಲ್ಲಿರುವ ದೊರೆಗಳಿಗೆ ಚೆನ್ನಾಗಿ ತಿಳಿಯಪಡಿಸಿ, ಆ ಆಸ್ಥಾನದಿಂದೆದ್ದಳು ॥೧॥

ಬಳಿಕ ಆ ಲೀಲೆಯು ಅಂತಃಪುರವನ್ನು ಪ್ರವೇಶಿಸಿ, ಅಲ್ಲಿ ಮಂಟಪದೊಳಗೆ ಪುಷ್ಪಗಳಿಂದ ಆಚ್ಛಾದಿತನಾದ ತನ್ನ ಪತಿಯ ಪಾರ್ಶ್ವದಲ್ಲಿ ಹೋಗಿ, ತನ್ನ ಮನಸ್ಸಿನಲ್ಲಿ ಈ ರೀತಿಯಾಗಿ ಚಿಂತಿಸಿದಳು ॥೨॥

ಆಹ! ಈ ಮಾಯೆಯತಿವಿಚಿತ್ರವಾದುದು! ಈ ನಮ್ಮ ಪಟ್ಟಣದ ಮನುಷ್ಯರೆಲ್ಲರೂ ಒಳಗಿರುವಂತೆಯೇ ಹೊರಗೂ-ಅಲ್ಲಿಯೂ ಇಲ್ಲಿಯೂ-ಒಂದೇವಿಧವಾಗಿರುವರು ॥೩॥

ತಾಳ ತಮಾಲ ಹಿಂತಾಳ ಮುಂತಾದ ವೃಕ್ಷಗಳಿಂದ ಪರಿವೃತಗಳಾದ ಈ ಪರ್ವತಗಳೂ ಕೂಡ, ಅಲ್ಲಿದ್ದಂತೆಯೇ ಇಲ್ಲಿಯೂ ಇರುವುವು. ಈ ಮಾಯೆಯು ಚೆನ್ನಾಗಿ ವ್ಯಾಪಿಸಿಕೊಂಡಿರುವುದು! ಆಶ್ಚರ್ಯವು! ॥೪॥

ಆದರ್ಶೇನ್ತರ್ಬಹಿಶ್ಚೈವ ಯಥಾ ಶೈಲೋಽನುಭೂಯತೇ ।
ಬಹಿರನ್ತಶ್ಚಿದಾದರ್ಶೇ ತಥಾ ಸರ್ಗೋಽನುಭೂಯತೇ ॥೫॥
ತತ್ರ ಭ್ರಾನ್ತಿಮಯಃ ಸರ್ಗಃ ಕಃ ಸ್ಯಾತ್ ಕಃ ಪಾರಮಾರ್ಥಿಕಃ ।
ಇತಿ ಪೃಚ್ಛಾಮಿ ವಾಗೀಶಾಂ ಅಭ್ಯರ್ಚ್ಯೈಕಮಸಂಶಯಮ್ ॥೬॥
ಇತಿ ನಿಶ್ಚಿತ್ಯ ತಾಂ ದೇವೀಂ ಪೂಜಯಾಮಾಸ ಸಾ ತದಾ ।
ದದರ್ಶ ಚ ಪುರಃ ಪ್ರಾಪ್ತಾಂ ಕುಮಾರೀರೂಪಧಾರಿಣೀಮ್ ॥೭॥
ಭದ್ರಾಸನಗತಾಂ ದೇವೀಂ ಉಪವಿಶ್ಯ ಪುರೋಗತಾ ।
ಪರಮಾರ್ಥಮಹಾಶಕ್ತಿಂ ಲೀಲಾಪೃಚ್ಛದ್ಭುವಿ ಸ್ಥಿತಾ ॥೮॥

ಲೀಲೋವಾಚ.

ಅನುಕಮ್ಪ್ಯಸ್ಯ ನೋ ದೇವಿ ಭಜನ್ತ್ಯುದ್ವೇಗಮುತ್ತಮಾಃ ।
ತ್ವಯೈವಂ ಕಿಲ ಸರ್ಗಾದೌ ಸ್ಥಾಪಿತಾ ಸ್ಥಿತಿರುತ್ತಮಾ ॥೯॥
ತದಿದಂ ಯತ್ ಪುರಃ ಪ್ರಹ್ವಾ ಪೃಚ್ಛಾಮಿ ಪರಮೇಶ್ವರಿ ।
ತದ್ಬ್ರೂಹಿ ತತ್ಕೃತೋ ನೂನಂ ಸಫಲೋ ಮೇಸ್ತ್ವನುಗ್ರಹಃ ॥೧೦॥

ಒಂದು ಪರ್ವತವು, ಒಳಗೂ ಹೊರಗೂ ಕನ್ನಡಿಯಲ್ಲಿಯೂ ಏಕವಿಧವಾಗಿ ಹೇಗೆ ಅನುಭವಿಸಲ್ಪಡುವುದೋ, ಹಾಗೆಯೇ ಈ ಪ್ರಪಂಚವೂಕೂಡ ಹೊರಗೂ ಒಳಗೂ ಚಿತ್ತಂಬ ಕನ್ನಡಿಯಲ್ಲಿಯೂ ಏಕವಿಧವಾಗಿ ಅನುಭವವಿಷಯವಾಗುವುದು ॥೫॥

ಇವುಗಳಲ್ಲಿ ಭ್ರಾಂತಿಜನ್ಯವಾದ ಸೃಷ್ಟಿಯಾವುದು! ಯಾವ ಸೃಷ್ಟಿಯು ಪಾರಮಾರ್ಥಿಕ (ವಾಸ್ತವ್ಯ) ವಾದುದು?—ಎಂಬುದಾಗಿ ಆ ಸರಸ್ವತಿಯನ್ನು ಪೂಜಿಸಿ ಪ್ರಶ್ನೆಮಾಡುವೆನು ॥೬॥

ಈ ರೀತಿಯಾಗಿ ನಿಶ್ಚಯಿಸಿಕೊಂಡು, ಆ ಲೀಲೆಯು ಆಗ ಆ ಸರಸ್ವತಿಯನ್ನು ಪೂಜಿಸಿದಳು; ಆ ಕ್ಷಣವೇ ಬಾಲಿಕೆಯ ರೂಪನ್ನು ಧರಿಸಿಕೊಂಡು ಎದುರಿಗೆ ಬಂದುನಿಂತಿರುವ ಆ ಸರಸ್ವತಿಯನ್ನು ಕಂಡಳು ॥೭॥

ಪ್ರತ್ಯಕ್ಷವಾಗಿ ಬಂದಿರುವ ಆ ಮಹಾಶಕ್ತಿರೂಪಿಣಿಯಾದ ಸರಸ್ವತಿಯು ಭದ್ರಾಸನದಲ್ಲಿ ಕುಳಿತುಕೊಂಡ ಬಳಿಕ, ಅವಳ ಮುಂದುಗಡೆ ಭೂಮಿಯಮೇಲೆ ನಿಂತುಕೊಂಡು, ಲೀಲೆಯು ಈರೀತಿಯಾಗಿ ಪ್ರಶ್ನೆಮಾಡಿದಳು ॥೮॥

ಲೀಲೆಯು ಹೇಳಿದುದೇನೆಂದರೆ :—

ಎಲೌ! ದೇವಿ! ಪ್ರಪಂಚದಲ್ಲಿ ಶ್ರೇಷ್ಠರಾದವರು—ಯಾರ ವಿಷಯದಲ್ಲಿ ದಯೆಯುಳ್ಳವರಾಗುವರೋ, ಅವರ ವಿಷಯದಲ್ಲಿ ಎಂದಿಗೂ ಮನಸ್ಸಿಗೆ ಜುಗುಪ್ಸೆಯುಂಟುಮಾಡಿಕೊಳ್ಳುವುದಿಲ್ಲವಲ್ಲವೆ! ಈರೀತಿಯಾದ ಉತ್ತಮಸ್ಥಿತಿಯನ್ನು ಪ್ರಪಂಚ ಸೃಷ್ಟ್ಯಾದಿಯಲ್ಲಿ ನೀನೇ ನೆಲೆಗೊಳಿಸಿರುವೆಯಲ್ಲವೆ! ॥೯॥

ಅದುಕಾರಣ, ಎಲೌ! ಪರಮೇಶ್ವರಿ! ನಾನು ನಿನ್ನ ಮುಂದೆ ನಮ್ರಳಾಗಿ ಯಾವುದೊಂದು ವಿಷಯವನ್ನು ಪ್ರಶ್ನೆಮಾಡುವೆನೋ, ಅದನ್ನು ನೀನು ಅಪ್ಪಣೆಕೊಡುವವಳಾಗು. ನೀನು ನನ್ನ ವಿಷಯದಲ್ಲಿ ಮಾಡಿದ ಅನುಗ್ರಹವು ನಿಶ್ಚಯವಾಗಿ ಸಫಲವಾಗಲಿ॥

ಅಸ್ಯಾದರ್ಶೋ ಜಗನ್ನಾಮ್ನಃ ಖಾದಪ್ಯಧಿಕನಿರ್ಮಲಃ ।
ಯಸ್ಯ ಯೋಜನಕೋಟೀನಾಂ ಕೋಟಯೋಽವಯವೋ ಮನಾಕ್ ॥೧೧॥
ನಿಸ್ಸನ್ಧಿತವಚೋಜ್ಯೋತಿರ್ಘನೋ ಮೃದುಸುಶೀತಲಃ ।
ಅಚೇತ್ಯಚಿದಿತಿ ಖ್ಯಾತೋ ನಾಮ್ನಾ ಸಿರ್ಭಿತ್ತಿರಗ್ರತಃ ॥೧೨॥
ದಿಕ್ಕಾಲಕಲನಾಕಾಶಪ್ರಕಾಶನಿಯತಿಕ್ರಮಾಃ ।
ಯತ್ರೇಮೇ ಪ್ರತಿಬಿಂಬನ್ತಿ ಪರಾಂ ಪರಿಣತಿಂ ಗತಾಃ ॥೧೩॥
ತ್ರಿಜಗತ್ಪ್ರತಿಬಿಮ್ಬಶ್ರೀಃ ಬಹಿರನ್ತಶ್ಚ ಸಂಸ್ಥಿತಾ ।
ತತ್ರ ವೈ ಕೃತ್ರಿಮಾ ಕಾ ಸ್ಯಾತ್ ಕಾಸೌ ವಾ ಸ್ಯಾದಕೃತ್ರಿಮಾ ॥೧೪॥

ಶ್ರೀ ದೇವ್ಯುವಾಚ.

ಅಕೃತ್ರಿಮತ್ವಂ ಸರ್ಗಸ್ಯ ಕೀದೃಶಂ ವದ ಸುನ್ದರಿ ।
ಕೀದೃಶಂ ಕೃತ್ರಿಮತ್ವಂ ಸ್ಯಾತ್ ಯಥಾವತ್ ಕಥಯೇತಿ ಮೇ ॥೧೫॥

ನನಗುಂಟಾಗಿರುವ ಸಂಶಯವೇನೆಂದರೆ:-ನಿನ್ನ ಅನುಗ್ರಹದಿಂದುಂಟಾಗಿದ್ದ ಸಮಾಧಿಕಾಲದಲ್ಲಿ ನಾನು ಅನುಭವಿಸಿರುವುದನ್ನು ಹೇಳುವೆನು. ಈ ಜಗತ್ತೆಂಬ ಪದಾರ್ಥಕ್ಕೆ ಕನ್ನಡಿಯಾಗಿರುವ ಆ ಚಿತ್ಪದಾರ್ಥವು ಆಕಾಶಕ್ಕಿಂತಲೂ ಹೆಚ್ಚಾಗಿ ನಿರ್ಮಲವಾಗಿರುವುದು. ಈ ಚಿತ್ತೆಂಬ ಕನ್ನಡಿಗೆ ಯೋಜನಕೋಟಿಗಳ ಕೋಟಿಗಳೂ ಕೂಡ ಒಂದಂಶದಲ್ಲಿ ಸ್ವಲ್ಪ ಭಾಗವಾಗುವುವು ॥೧೧॥

ಆ ಚಿದಾದರ್ಶವು ಹೇಗಿತ್ತೆಂದರೆ:—ಅದು ಯಾವ ಮಾತಿಗೂ ವಿಷಯವಾದುದಲ್ಲ; ಜ್ಞಾನಪ್ರಕಾಶಸಾಂದ್ರವಾಗಿರುವುದು; ಶರೀರಗ್ರಹಣವಿಲ್ಲದಕಾರಣ ಕಠಿನವಲ್ಲದಿರುವುದು: ತಾಪಗಳು ನಿಶ್ಶೇಷವಾಗಿ ಉಪಶಾಂತಿಹೊಂದಿರುವುದರಿಂದ ಶೀತಲವಾಗಿರುವುದು; ಇದನ್ನು ಅಚೇತ್ಯವಾದ ಚಿತ್ತೆಂಬ ಹೆಸರಿನಿಂದ ಕರೆಯುವರು. ಇದು ಮಾಯಾವರಣಶೂನ್ಯವಾಗಿರುವುದು; ಇದು ಸರ್ವರಿಗೂ ಅಗ್ರಭಾಗದಲ್ಲಿಯೇ ಸ್ಫುರಿಸುತ್ತಿರುವುದು ॥

ದಿಕ್ಕು, ಕಾಲ, ಇವುಗಳೊಳಗೆ ಸರ್ವಕಾರ್ಯೋತ್ಪತ್ತಿ, ಉತ್ಪತ್ತಿಹೊಂದಿದುವುಗಳಿಗೆ ಆಕಾಶದಲ್ಲಿ ಅವಕಾಶಪ್ರಾಪ್ತಿಯಾಗುವಿಕೆ, ಇವುಗಳಿಗೆ ತೇಜಸ್ಸಿನಿಂದ ಪ್ರಕಾಶವುಂಟಾಗುವಿಕೆ, ಹೀಗೆ ಪ್ರಕಾಶಹೊಂದಿದುವುಗಳಿಗೆ—ಇದರಿಂದ ಇಂತಹುದು ಈರೀತಿಯಾಗಿ ಆಗಬೇಕೆಂಬ—ನಿಯಮ, ಇತ್ಯಾದಿ ಕ್ರಮಗಳೆಲ್ಲವೂ—ದೇಶಕಾಲಭೇದದಿಂದ ವಿಸ್ತಾರವಾದ ಪರಿಣಾಮಹೊಂದಿದುವುಗಳಾಗಿ—ಆ ಚಿದಾದರ್ಶದಲ್ಲಿ ಪ್ರತಿಬಿಂಬಗಳಂತೆ ಒಳಗೆ ಸ್ಫುರಿಸುವುವು ॥೧೩॥

ಹೀಗೆ ತ್ರಿಜಗತ್ತೆಂಬ ಪ್ರತಿಬಿಂಬವು ಹೊರಗೂ ಒಳಗೂ ಇರುವುದು. ಇದರಲ್ಲಿ ಕೃತ್ರಿಮವಾವುದು? ಅಕೃತ್ರಿಮವಾವುದು? ಇದನ್ನು ನೀನು ಹೇಳಬೇಕು; ಇದೇ ನನ್ನ ಸಂಶಯಪ್ರಕಾರವು ॥೧೪॥

ಇದನ್ನು ಕೇಳಿ ಶ್ರೀಸರಸ್ವತಿಯು ಆ ಲೀಲೆಯನ್ನು ಕುರಿತು ಹೇಳುವಳು: —

ಎಲೌ! ಸುಂದರಿ! ಪ್ರಪಂಚವು ಅಕೃತ್ರಿಮವಾಗಿರುವುದೆಂದರೇನು? ಅಥವಾ ಇದು ಕೃತ್ರಿಮವಾಗಿರುವುದೆಂದರೇನು? ಈ ವಿಷಯವನ್ನು ನೀನು ತಿಳಿದುಕೊಂಡಿರುವಂತೆ ಯಥಾವಸ್ಥಿತವಾಗಿ ನನಗೆ ಹೇಳುವವಳಾಗು ॥೧೫॥

ಲೀಲೋವಾಚ.

ಯಥಾಹಮಿಹ ತಿಷ್ಠಾಮಿ ತ್ವಂ ಚ ದೇವಿ ಸ್ಥಿತಾಮ್ಬಿಕೇ |
ಅಸಾವಕೃತ್ರಿಮಃ ಸರ್ಗಃ ಇತಿ ದೇವೇಶಿ ವೇದ್ಮ್ಯಹಮ್ ||೧೬||
ಯತ್ರಾಧುನಾ ಸ ಭರ್ತಾ ಮೇ ಸ್ಥಿತಃ ಸರ್ಗಃ ಸ ಕೃತ್ರಿಮಃ |
ಅಹಂ ಮನ್ಯೇ ಯತಃ ಶೂನ್ಯೋ ದೇಶಕಾಲಾದ್ಯಪೂರಕಃ ||೧೭||

ಶ್ರೀ ದೇವ್ಯುವಾಚ.

ಕೃತ್ರಿಮೋಕೃತ್ರಿಮಾತ್ ಸರ್ಗಾತ್ ನ ಕದಾಚನ ಜಾಯತೇ |
ನ ಹಿ ಕಾರಣತಃ ಕಾರ್ಯಂ ಉದೇತ್ಯಸದೃಶಂ ಕ್ವಚಿತ್ ||೧೮||

ಲೀಲೋವಾಚ.

ದೃಶ್ಯತೇ ಕಾರಣಾತ್ ಕಾರ್ಯಂ ಸುವಿಲಕ್ಷಣಮಮ್ಬಿಕೇ |
ಅಮ್ಬ್ವಾದಾತುಮಶಕ್ತಾ ಮೃತ್ ಘಟಸ್ತಜ್ಜಸ್ತದಾಸ್ಪದಮ್ ||೧೯||

ಲೀಲೆಯು ಹೇಳುವಳು :—

ದೇವಿ! ಅಮ್ಬ! ನಾನು ಇಲ್ಲಿ ಹೇಗಿರುವೆನೋ, ನೀನು ಈಗ ಹೇಗಿರುವೆಯೋ, ದೇವೇಶಿ! ಇದು ಅಕೃತ್ರಿಮವಾದ ಸೃಷ್ಟಿಯೆಂಬುದಾಗಿ ನಾನು ತಿಳಿದಿರುವೆನು ||೧೬||

ಈಗ ಆ ನನ್ನ ಪತಿಯೆಲ್ಲಿರುವನೋ, ಅದು ಕೃತ್ರಿಮಸೃಷ್ಟಿಯೆಂದು ನಾನು ತಿಳಿದಿರುವೆನು. ಏತಕ್ಕೆಂದರೆ:—ಆ ಸೃಷ್ಟಿಯು—ಸ್ವಪ್ನಾದಿಗಳಂತೆ ಶೂನ್ಯವಾಗಿಯೂ, ದೇಶಕಾಲಾದಿಗಳಲ್ಲಿ ಸ್ವಲ್ಪಭಾಗದಲ್ಲಿಯೂ ಸ್ಥಿತಿಯಿಲ್ಲದುದಾಗಿಯೂ ಇರುವುದು. ಅದುಕಾರಣ, ಅದು ಕೃತ್ರಿಮವೆಂದು ತಿಳಿದಿರುವೆನು ||೧೭||

ಬಳಿಕ ಶ್ರೀಸರಸ್ವತಿಯು ಹೇಳುವಳು :—

ಎಲೌ! ಲೀಲೆ! ನೀನು ಹೇಳಿದುದು ಕೇವಲ ವಿಚಿತ್ರವಾಗಿದೆ. ಅಕೃತ್ರಿಮವಾದ ಸೃಷ್ಟಿಯಿಂದ ಕೃತ್ರಿಮವಾದ ಸೃಷ್ಟಿಯು ಎಂದಿಗೂ ಹುಟ್ಟುವುದಿಲ್ಲ; ಪ್ರಪಂಚದಲ್ಲಿ ಕಾರಣವೆಂತಹುದೋ, ಅದರಿಂದುಂಟಾಗುವ ಕಾರ್ಯವೂ ಅಂತಹುದೇ ಆಗಿರುತ್ತದೆಯಲ್ಲದೆ, ಕಾರಣಕ್ಕೆ ಸದೃಶವಲ್ಲದ ಕಾರ್ಯವೆಲ್ಲಿಯೂ ಹುಟ್ಟುವುದಿಲ್ಲ ||೧೮||

ಈಮಾತನ್ನು ಕೇಳಿ, ಮತ್ತೆ ಲೀಲೆಯು ಹೇಳಿದಳು :—

ಅಂಬ! ಕಾರಣಕ್ಕಿಂತ ಅತ್ಯಂತವಿಲಕ್ಷಣವಾದ ಕಾರ್ಯವು ನಮಗೆ ಕಾಣಿಸುವುದಲ್ಲವೆ! ಅದಕ್ಕೊಂದುದಾಹರಣೆಯನ್ನು ಕೊಡುವೆನು. ಈಗ ಮಣ್ಣಿರುವುದಷ್ಟೆ! ಇದು ನೀರನ್ನು ತೆಗೆದುಕೊಳ್ಳುವುದಕ್ಕಸಮರ್ಥವಾಗಿರುವುದು. ಈ ಮಣ್ಣಿನಿಂದ ಹುಟ್ಟಿದ ಮಡಕೆಯಾದರೋ, ಆ ನೀರಿಗೆ ಆಶ್ರಯವಾಗಿರುವುದು. ಹೀಗೆ ಕಾರಣವಾದ ಮೃತ್ತಿಗೂ ಕಾರ್ಯವಾದ ಘಟಕ್ಕೂ ನೀರುತೆಗೆದುಕೊಳ್ಳುವ ವಿಷಯದಲ್ಲಿ ಸಂಪೂರ್ಣವಾಗಿ ವೈಲಕ್ಷಣ್ಯವೇ ಕಾಣುವುದರಿಂದ, ಕಾರಣಕ್ಕೆ ಅಸದೃಶವಾಗಿ ಕಾರ್ಯೋತ್ಪತ್ತಿಯಾಗುವುದಿಲ್ಲವೆಂಬುದನ್ನು ಒಪ್ಪಲಾಗುವುದಿಲ್ಲ ||೧೯||

ಶ್ರೀದೇವ್ಯುವಾಚ.

ಸಮ್ಪದ್ಯತೇ ಹಿ ಯತ್ ಕಾರ್ಯಂ ಕಾರಣೈಃ ಸಹಕಾರಿಭಿಃ |
ಮುಖ್ಯಕಾರಣವೈಚಿತ್ರ್ಯಂ ಕಿಂಚಿತ್‌ತತ್ರಾವಲೋಕ್ಯತೇ ||೨೦||
ವದ ತದ್ಭರ್ತೃಸರ್ಗಸ್ಯ ಕಿಂ ಪೃಥ್ವ್ಯಾದಿಷು ಕಾರಣಮ್ |
ತದ್ಭೂಮಣ್ಡಲತೋ ಭೂತಿಃ ಜಾತಾ ತತ್ರ ವರಾನನೇ ||೨೧||

ಇದನ್ನು ಕೇಳಿ ಶ್ರೀ ಸರಸ್ವತಿಯು ಪುನಃ ಹೇಳಿದಳು :—

ಎಲೌ! ಲೀಲೆ! ನೀನು ಹೇಳಿದುದು ಸರಿಯಾಗಿಲ್ಲ; ಪ್ರಪಂಚದಲ್ಲಿ ಕಾರಣಗಳು ಅನೇಕ ವಿಧವಾಗಿರುವುವು; ಅವುಗಳಲ್ಲಿ ಕೆಲವು ಮುಖ್ಯವಾಗಿಯೂ ಕೆಲವು ಮುಖ್ಯವಲ್ಲದೆಯೂ ಇರುವುವು; ಮುಖ್ಯಕಾರಣಕ್ಕೆ ಉಪಾದಾನಕಾರಣವೆಂದೂ ಮುಖ್ಯವಲ್ಲದ ಕಾರಣಕ್ಕೆ ಸಹಕಾರಿ ಕಾರಣವೆಂದೂ ವ್ಯವಹಾರವುಂಟು. ಹೀಗೆ ಸಹಕಾರಿಯಾದ ಕಾರಣ ಸಹಾಯದಿಂದ ಯಾವ ಕಾರ್ಯವುದ್ಭವಿಸುವುದೋ, ಅಂತಹ ಸ್ಥಳದಲ್ಲಿ ಮುಖ್ಯ ಕಾರಣಕ್ಕಿಂತ ಕಾರ್ಯದಲ್ಲಿ ಸ್ವಲ್ಪ ವೈಲಕ್ಷಣ್ಯವು ಕಾಣಿಸುವುದು. ಅದು ಆ ಸಹಕಾರಿಕಾರಣದ ಶಕ್ತಿಯೆಂದು ತಿಳಿಯಬೇಕು. ಕೇವಲ ಮುಖ್ಯ ಕಾರಣದಿಂದಲೇ ಕಾರ್ಯೋತ್ಪತ್ತಿಯಾಗಿರುವ ಸ್ಥಳದಲ್ಲಿ, ಕಾರ್ಯಕಾರಣಗಳಿಗೆ ಸ್ವಲ್ಪವೂ ವೈಲಕ್ಷಣ್ಯವಿರುವುದಿಲ್ಲ. ಈಗ ಇವಕ್ಕೆ ಉದಾಹರಣೆಯನ್ನು ಹೇಳುವೆನು :—ಒಂದು ಗಡಿಗೆಯಾಗಬೇಕಾದರೆ, ಮೃತ್ತು ಚಕ್ರ ದಂಡ (ಕೋಲು) ಕುಲಾಲ (ಕುಂಬಾರ) ಇತ್ಯಾದಿಗಳೆಲ್ಲವೂ ಬೇಕು. ಇದರಲ್ಲಿ ಮೃತ್ತು ಮುಖ್ಯ ಕಾರಣವೆಂದೂ, ದಂಡ ಚಕ್ರಾದಿಗಳು ಸಹಕಾರಿ ಕಾರಣಗಳೆಂದೂ ಗೊತ್ತೇಇದೆಯಷ್ಟೆ! ಇಲ್ಲಿ, ಘಟವೆಂಬ ಕಾರ್ಯವುತ್ಪನ್ನವಾಗುವುದಕ್ಕೆ ಮೃತ್ತು ಮುಖ್ಯ ಕಾರಣವಾಗಿಯೂ ದಂಡಾದಿಗಳು ಸಹಕಾರಿಕಾರಣಗಳಾಗಿಯೂ ಇರುವಕಾರಣ, ಸಹಕಾರಿ ಕಾರಣಗಳ ಶಕ್ತಿಯಿಂದ ಕಾರ್ಯವಾದ ಘಟದಲ್ಲಿ ಮುಖ್ಯ ಕಾರಣವಾದ ಮೃತ್ತಿಗಿಂತ ವಿಲಕ್ಷಣವಾಗಿ ಜಲಗ್ರಹಣ ಸಾಮರ್ಥ್ಯವಿರುವುದೆಂದು ತಿಳಿಯಬೇಕು. ಅದಲ್ಲದೆ ಕೇವಲ ಮುಖ್ಯ ಕಾರಣದಿಂದಲೇ ಕಾರ್ಯೋತ್ಪತ್ತಿಯಾಗಿರುವ ಸ್ಥಳಗಳಲ್ಲಿ ಹೀಗೆ ವೈಲಕ್ಷಣ್ಯ ತೋರುವುದಿಲ್ಲ. ಈಗ ಒಂದು ದೀಪದಿಂದ ಮತ್ತೊಂದು ದೀಪವು ಹುಟ್ಟುವುದಲ್ಲವೆ! ಇಲ್ಲಿ ಮೊದಲನೆಯ ದೀಪವು ಕಾರಣವಾಗಿಯೂ ಎರಡನೆಯ ದೀಪವು ಕಾರ್ಯವಾಗಿಯೂ ಇರುವುವಷ್ಟೆ! ಮೊದಲನೆಯ ದೀಪದಲ್ಲಿದ್ದಂತೆಯೇ ಎರಡನೆಯ ದೀಪದಲ್ಲಿ ಅಂಧಕಾರನಾಶಕತ್ವಾದಿ ಗುಣಗಳಿರುವುವಲ್ಲದೆ, ಅವೆರಡಕ್ಕೂ ಯಾವ ಭಾಗದಲ್ಲಿಯೂ ವೈಲಕ್ಷಣ್ಯವೇ ತೋರುವುದಿಲ್ಲ. ಹೀಗಿರುವುದರಿಂದ, ಪ್ರಕೃತದಲ್ಲಿ ಕಾರಣಾಂತರ ಸಹಾಯವಿಲ್ಲದೆಯೇ ಬ್ರಹ್ಮನಿಂದ ಜಗತ್ತು ಹುಟ್ಟಿತೆಂದು ಹೇಳುವಕಾರಣ, ಮುಖ್ಯಕಾರಣದಿಂದಲೇ ಕಾರ್ಯೋತ್ಪತ್ತಿಯಾಯಿತೆಂದು ಹೇಳಿದ ಹಾಗಾಗಲಿಲ್ಲವೆ! ಹಾಗಾದಮೇಲೆ, ಕಾರ್ಯಕಾರಣಗಳಿಗೆ ಸ್ವಲ್ಪವೂ ವೈಲಕ್ಷಣ್ಯವಿಲ್ಲದಿರಬೇಕಾಗುವುದು. ಅದುದರಿಂದ, ಒಂದು ಸೃಷ್ಟಿಯು ಅಕೃತ್ರಿಮ (ವಾಸ್ತವ್ಯ) ವೆಂದೂ ಮತ್ತೊಂದು ಕೃತ್ರಿಮವೆಂದೂ ನೀನು ಹೇಳಿದುದು ಅಸಂಗತವಾಯಿತು ||೨೦||

ಅದುಕಾರಣ, ಎಲೌ! ವರಾನನೆಯೆ! ನೀನು ಈಗ ನಿನ್ನ ಪತಿಯ ಸೃಷ್ಟಿಯನ್ನು ಎರಡುವಿಧವಾಗಿ ನೋಡಿರುವಂತೆ ತಿಳಿದಿರುವೆಯಲ್ಲವೆ! ಈ ಸೃಷ್ಟಿಗೆ, ಪೃಥಿವಿ ಮುಂತಾದುವುಗಳಲ್ಲಿ ಯಾವುದು ಕಾರಣವು?—ನೀನೇ ಹೇಳು. ನೀನು ಈಗ ಒಂದು ದೇಹವನ್ನು ನೋಡುತ ಅದು ಒಂದು ಪೃಥಿವಿಯಿಂದ ಹುಟ್ಟಿತೆಂದು ತಿಳಿದುಕೊಂಡಿರುವೆಯಲ್ಲವೆ! ಹಾ

ಗತಂ ಚೇದಿತಉಡ್ಡೀಯ ಕುತಃ ಸ್ಯಾದಿಹ ಭೂತಲಮ್ ।
ಸಹಕಾರೀಣಿ ಕಾನೀವ ಕಾರಣಾನ್ಯತ್ರ ಕಾರಣೇ ॥೨೨॥
ಕಾರಣಾನಾಮಭಾವೇಽಪಿ ಯೋಽದೇತಿ ಸಹಕಾರಿತಾ ।
ತತ್ ಪೂರ್ವಕಾರಣಾನ್ನಾನ್ಯತ್ ಸರ್ವೇಣೇತ್ಯನುಭೂಯತೇ ॥೨೩॥

ಲೀಲೋವಾಚ.

ಸ್ಮೃತಿಃ ಸಾ ದೇವಿ ಮದ್ಭರ್ತುಃ ತಥಾ ಸ್ಫಾರತ್ವಮಾಗತಾ ।
ಸ್ಮೃತಿಸ್ತತ್ಕಾರಣಂ ವೇದ್ಮಿ ಸರ್ಗೋಽಯಮಿತಿ ನಿಶ್ಚಯಃ ॥೨೪॥

ಶ್ರೀದೇವ್ಯುವಾಚ.

ಸ್ಮೃತಿರಾಕಾಶರೂಪಾ ಚ ತಥಾ ತಜ್ಜಸ್ತಥೈವ ತೇ ।
ಭರ್ತುಃ ಸರ್ಗೋಽನುಭೂತೋಽಪಿ ಸ ವ್ಯೋಮೈವ ತಥಾಬಲೇ ॥೨೫॥

ಗೆಯೇ ಮತ್ತೊಂದು (ಸಮಾಧಿಕಾಲದಲ್ಲಿ ಕಂಡ) ದೇಹವನ್ನು ನೋಡುವಾಗ ಅದು ಅದಕ್ಕೆ ತಕ್ಕಂತೆ ಪೃಥಿವಿಯಿಂದ ಹುಟ್ಟಿತೆಂದು ತಿಳಿಯಬೇಕು. ಹೀಗಿರುವುದರಿಂದ—ಇವೆರಡೂ ಮಾಯಾಕಲ್ಪಿತಗಳಾಗಿರುವುದರಿಂದ—ಪರಸ್ಪರ ವ್ಯತ್ಯಾಸಕಲ್ಪನೆಯೇ ಯುಕ್ತವಾಗಿ ಕಾಣುವುದಿಲ್ಲ ॥೨೧॥

ಇಲ್ಲಿರುವ ಭೂಮಿ ಮುಂತಾದುವೇ ಅಲ್ಲಿ ಹೋಗಿ ಕಾಣುತ್ತವೆಯೆಂದರೆ, ಹಾಗಾದ ಮೇಲೆ ಇಲ್ಲಿ ಭೂಮಿಯೆಲ್ಲಿ ಬಂದಿತು? ಇದು ಅಲ್ಲಿ ಹೋದರೆ, ಇಲ್ಲಿ ಕಾಣುವುದಕ್ಕಾಗಲಾರದಷ್ಟೆ! ಮತ್ತು, ಇದು ಮುಖ್ಯಕಾರಣವೆಂದಪಕ್ಷದಲ್ಲಿ, ಇದಕ್ಕೆ ಸಹಕಾರಿಗಳಾದ ಕಾರಣಗಳು ಯಾವುವು? ॥೨೨॥

ಅದುಕಾರಣ, ಈ ಪೃಥಿವ್ಯಾದಿಗಳಿಗೆ ಈಗ ಪ್ರತ್ಯಕ್ಷವಾಗಿ ಸಹಕಾರಿಕಾರಣಗಳು ಯಾವುವೂ ಇಲ್ಲದಿದ್ದರೂ, ಕಾರಣವಿಲ್ಲದೆ ಕಾರ್ಯೋತ್ಪತ್ತಿಯು ಸಂಭವಾದುದರಿಂದ ಕಾರಣವೊಂದಿದೆಯೆಂದು ಕಲ್ಪಿಸಬೇಕಾಗುವುದಲ್ಲವೆ! ಹೀಗೆ ಕಲ್ಪಿತವಾದ ಕಾರಣವಾವುದೆಂದರೆ:—ಅದು ಚಿರತರಸಂಸ್ಕಾರಬಲವೆಂಬುದಲ್ಲದೆ ಮತ್ತೊಂದಲ್ಲ. ಈ ವಿಷಯವು ಸರ್ವರಿಗೂ ಅನುಭವಗೋಚರವಾಗಿರುವುದು ॥೨೩॥

ಮತ್ತೆ ಲೀಲೆಯು ಪ್ರಕಾರಾಂತರವಾಗಿ ಶಂಕೆಪಟ್ಟು ಹೇಳುವಳು:—

ಗೇವಿ! ನನ್ನ ಪತಿಯು ಸತ್ಯವಾದ ಸೃಷ್ಟಿಯನ್ನು ನಾನು ಸ್ಮರಿಸಿಕೊಳ್ಳುವುದಾವುದುಂಟೋ, ಅದೇ (ಆ ಸ್ಮೃತಿಯೇ) ಆಗ ಪ್ರಬಲವಾಗಿ ಆರೀತಿ ತೋರುವುದು. ಆದುಕಾರಣ, ಸ್ಮೃತಿಯೇ ಅದಕ್ಕೆ ಕಾರಣವೆಂದು ನಾನು ತಿಳಿದಿರುವೆನು. ಅಂತು ಇದೇ ಸೃಷ್ಟಿಯಾಯ್ತೆಂದು ನಿಶ್ಚಯವಷ್ಟೆ! ॥೨೪॥

ಇದಕ್ಕೆ ಶ್ರೀ ಸರಸ್ವತಿಯುತ್ತರ ಹೇಳುವಳು:—

ಎಲೌ! ಲೀಲೆಯೆ! ನೀನು ಹೇಳಿದಂತೆಯೇ ವಿಚಾರಮಾಡೋಣ. ನೀನು ಹೇಳುವ ಸ್ಮೃತಿಯೆಂಬುದು ಆಕಾಶರೂಪವಾದುದು. ಆ ಸ್ಮೃತಿಯಲ್ಲಿ ಹುಟ್ಟಿದ ನಿನ್ನ

ಲೀಲೋವಾಚ.

ಸ್ಮೃತ್ಯಾಕಾಶಮಯಃ ಸರ್ಗೋ ಯಥಾ ಭರ್ತುರ್ಮಮೋದಿತಃ |
ತಥೈವೇಮಮಹಂ ಮನ್ಯೇ ಸ ಸರ್ಗೋಽತ್ರ ನಿದರ್ಶನಮ್ ||೨೬||

ಶ್ರೀದೇವ್ಯುವಾಚ.

ಏವಮೇತದಸತ್ಸರ್ಗೋ ಭರ್ತುಸ್ತೈರ್ಭಾತಿ ಭಾಸುರಃ |
ತಥೈವಾಯಮಿಹಾಭಾತಿ ಪಶ್ಯಾಮ್ಯೇತದಹಂ ಸುತೇ ||೨೭||

ಲೀಲೋವಾಚ.

ಯಥಾ ಪತ್ಯುರಮೂರ್ತೋಽಸ್ಮಾತ್ ಸರ್ಗಾತ್ ಸರ್ಗೋ ಭ್ರಮಾತ್ಮಕಃ |
ಜಾತಸ್ತಥಾ ಕಥಯ ಮೇ ಜಗದ್ಭ್ರಮನಿವೃತ್ತಯೇ ||೨೮||

ಶ್ರೀದೇವ್ಯುವಾಚ.

ಪ್ರಾಕ್ಸ್ಮೃತೇರ್ಭ್ರಾನ್ತಿಮಾತ್ರಾತ್ಮಾ ಸರ್ಗೋಽಯಮುದಿತೋ ಯಥಾ |
ಸ್ವಪ್ನಭ್ರಮಾತ್ಮಕೋ ಭಾತಿ ತಥೇದಂ ಕಥ್ಯತೇ ಶೃಣು ||೨೯||

ಪತಿಯೂ ಹಾಗೆಯೇ ಆಕಾಶರೂಪನಾಗಿಯೇ ಇರುವನು. ಅದುಕಾರಣ, ನೀನು ಅನುಭವಿಸಿದ ನಿನ್ನ ಪತಿಯ ಸೃಷ್ಟಿಯೂ ಕೂಡ, ಹಾಗೆಯೇ ಆಕಾಶರೂಪನಾದುದೇಯೆಂದು ತಿಳಿಯಬೇಕು ||೨೫||

ಪುನಃ ಲೀಲೆಯು ಹೇಳುವಳು :—

ಅಂಬ! ನೀನು ಹೇಳಿದುದು ಗೊತ್ತಾಯಿತು. ಸ್ಮೃತಿರೂಪವಾದ ಆಕಾಶಮಯವಾಗಿ ನನ್ನ ಪತಿಯ ಸೃಷ್ಟಿಯು ಹೇಗೆ ಉತ್ಪನ್ನವಾಯಿತೋ, ಹಾಗೆಯೇ ಈಗ ನಾನು ಅನುಭವಿಸುತಿರುವ ಸೃಷ್ಟಿಯೂ ಆಕಾಶಮಯವೆಂದು ನನಗೆ ತಿಳಿವಳಿಕೆಯುಂಟಾಯಿತು. ಈ ವಿಷಯದಲ್ಲಿ (ಆಕಾಶಮಯವಾಗಿ ಸೃಷ್ಟಿಯುಂಟಾಗುತ್ತದೆಂಬ ವಿಷಯದಲ್ಲಿ) ಆ ಸ್ಮೃತಿಮಯವಾದ ಸೃಷ್ಟಿಯೇ ನಿದರ್ಶನವಾಗಿರುವುದು ||೨೬||

ಈ ಲೀಲೆಯ ಮಾತನ್ನನುಮೋದಿಸುತ ಶ್ರೀ ಸರಸ್ವತಿಯು ಮತ್ತೆ ಹೇಳಿದಳು :—

ಮಗಳೆ! ನೀನು ಹೇಳಿದುದು ನಿಜ. ಸರ್ವಥಾ ಸೃಷ್ಟಿರಹಿತನಾದ ಆ ಆತ್ಮನು, ಆಯಾ ಸಂಸಾರಭಾವನೆಗಳಿಂದ, ನಿನ್ನ ಪತಿಯ ದೇಹದಂತೆಯೇ ನಾನಾವಿಧವಾಗಿ ತೋರುತಿರುವನು. ಇದನ್ನೆಲ್ಲ ನಾನು ಚೆನ್ನಾಗಿ ನೋಡುತಿರುವೆನು ||೨೭||

ಪುನಃ ಲೀಲೆಯು ಹೇಳುವಳು :—

ಅಂಬ! ಶರೀರಗ್ರಹಣವಿಲ್ಲದೆಯೇ ಕೇವಲ ಭ್ರಮಾತ್ಮಕವಾಗಿರುವ ಈ ನನ್ನ ಪತಿಸೃಷ್ಟಿಯು, ಪ್ರಾಥಮಿಕವಾದ ಈ ಸೃಷ್ಟಿಯಿಂದ ಹೇಗೆ ಹುಟ್ಟಿತೋ, ಅದನ್ನು—ಜಗದ್ಭ್ರಮನಿವೃತ್ತಿಯುಂಟಾಗುವುದಕ್ಕಾಗಿ—ನನಗೆ ಅಪ್ಪಣೆಕೊಡಿಸು ||೨೮||

ಮತ್ತೆ ಶ್ರೀ ಸರಸ್ವತಿಯು ಹೇಳುವಳು :—

ವತ್ಸೆ! ನೀನು ಹೇಳಿದಂತೆಯೇ ಪೂರ್ವಸ್ಮೃತಿ ಬಲದಿಂದಲೇ ಕೇವಲ ಭ್ರಾಂತಿರೂಪವಾಗಿರುವ ಈ ಸೃಷ್ಟಿಯು ಹೇಗೆ ಹುಟ್ಟಿರುವುದೋ, ಮತ್ತು ಇದು ಸ್ವಪ್ನಭ್ರಾಂತಿರೂಪವಾಗಿ ಹೇಗೆ ತೋರುವುದೋ, ಅದನ್ನು ಹೇಳುವೆನು; ಕೇಳು ||೨೯||

ಅಸ್ತಿ ಕ್ವಚಿಚ್ಚಿದಾಕಾಶೇ ಕಶ್ಚಿತ್ ಸಂಸಾರಮಣ್ಟಪಃ |
ಆಕಾಶಕಾಚದಳವತ್ಸಂಸ್ಥಾನಾಚ್ಛಾದಿತಾಕೃತಿಃ ||೩೦||
ಮೇರುಸ್ತಮ್ಭಸ್ಥಲೋಕೇಶಪುರನಿರ್ಯಾಸಾಲಭಞ್ಜಕಃ |
ಚತುರ್ದಶಾಪವರಕಃ ತ್ರಿಗರ್ತೋ ಭಾನುದೀಪಕಃ ||೩೧||
ಕೋಣಸ್ಥಭೂತವಲ್ಮೀಕವ್ಯಾಪ್ತಪರ್ವತಲೋಷ್ಟಕಃ |
ಅನೇಕಪುತ್ರಜರತಪ್ರಜೇಶಬ್ರಾಹ್ಮಣಾಸ್ಪದಮ್ ||೩೨||
ಜೀವೌಘಕೋಶಕಾರಾಢ್ಯೋ ವ್ಯೋಮೋರ್ಧ್ವತಲಕಾಳಮಾ |
ನಭೋನಿವಾಸಸಿದ್ಧೌಘಮಶಕಾಹಿತಘುಙ್ಘುಮಃ ||೩೩||
ಪಯೋದಗೃಹಧೂಮೋಗ್ರಜಾಲಾವಲಿತಕೋಣಕಃ |
ವಾತಮಾರ್ಗಮಹಾವಂಶಸ್ಥಿತಮೈಮಾನಕೀಟಕಃ ||೩೪||
ಸುರಾಸುರಾದಿದುರ್ಬಾಲಲೀಲಾಕಲಕಲಾಕುಲಃ |
ಲೋಕಾನ್ತರಪುರಗ್ರಾಮಭಾಣ್ಡೋಪಸ್ಕರನಿರ್ಭರಃ ||೩೫||

ಅಖಂಡವಾದ ಚಿದಾಕಾಶದೊಳಗೆ ಅಜ್ಞಾನಾವೃತವಾದ ಒಂದುಭಾಗದಲ್ಲಿ ಸಂಸಾರವೆಂಬ ಒಂದು ಮಂಟಪವಿರುವುದು. ಆಕಾಶವೆಂಬ ಗಾಜಿನ ಚೂರುಗಳು—ಸನ್ನಿವೇಶಕ್ರಮದಿಂದ ಇದರ ಮೇಲುಭಾಗವನ್ನು ಮುಚ್ಚಿಕೊಂಡಿರುವುವು; ಇದರಲ್ಲಿ ಮೇರುಪರ್ವತವೆಂಬ ಕಂಭವಿರುವುದು; ಅದರೊಳಗೆ ದಿಕ್ಪಾಲಕರ ಪತ್ನಿಯರೆಂಬ ಪುತ್ತಳಿಗಳಿರುವುವು; ಚತುರ್ದಶಲೋಕಗಳೂ ಇದಕ್ಕೆ ಕಿರುಮನೆ (ಕೊಟ್ಟಡಿ) ಗಳಾಗಿರುವುವು; ಇದರಲ್ಲಿ ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಹಳ್ಳಗಳಿರುವುವು; ಸೂರ್ಯನೇ ಇದಕ್ಕೆ ದೀಪವಾಗಿರುವನು; ಇದರ ಒಂದು ಮೂಲೆಯಲ್ಲಿ ಪರ್ವತಗಳೆಂಬ ಮಣ್ಣುಹೆಂಟೆಗಳಿರುವುವು; ಇವುಗಳಲ್ಲಿ ಅನೇಕ ಭೂತಗಳೆಂಬ ವಲ್ಮೀಕಗಳು ವ್ಯಾಪಿಸಿಕೊಂಡಿರುವುವು; ಇದು ಚತುರ್ಮುಖನೆಂಬ ಬ್ರಾಹ್ಮಣನಿಗೆ ಆವಾಸಸ್ಥಾನವಾಗಿರುವುದು; ಇವನು ಅನೇಕ ಪುತ್ರಯುಕ್ತನಾಗಿ ಮುದುಕನಾಗಿರುವನು; ಜೀವಸಮುದಾಯಗಳೆಂಬ ಜಾಡರ ಹುಳುಗಳು ಇದರಲ್ಲಿ ತುಂಬಿರುವುವು; (ಜಾಡರಹುಳುಗಳು ತಮಗೆ ಬಂಧಕರವಾದ ಪರೆಯನ್ನು ತಾವೇ ಮಾಡಿಕೊಳ್ಳುವಂತೆ, ಜೀವಗಳು ತಮಗೆ ಬಂಧಜನಕವಾದ ಕರ್ಮಗಳನ್ನು ಮಾಡಿಕೊಳ್ಳುವುವೆಂದು ಭಾವವು.) ಆಕಾಶವೆಂಬುದೇ ಈ ಮಂಟಪಕ್ಕೆ ಮೇಲುಭಾಗದ ಮಚ್ಚಿಯಾಗಿರುವುದು; ಅಂತರಿಕ್ಷದಲ್ಲಿ ವಾಸಮಾಡುವ ಸಿದ್ಧಪುರುಷಸಮುದಾಯವೆಂಬ ಸೊಳ್ಳೆಗಳು ಇದರಲ್ಲಿ ' ಘುಮುಘುಮು ' ಎಂದು ಧ್ವನಿಮಾಡುತಿರುವುವು; ಮೇಘಗಳೆಂಬ ಗೃಹಧೂಮಸ್ತೋಮವು ಇದರಮೂಲೆಗಳಷ್ಟೆಲ್ಲ ಆವರಿಸಿಕೊಂಡಿರುವುದು; ಆಕಾಶಮಾರ್ಗವೆಂಬ ದೊಡ್ಡ ಬಿದುರಿನಲ್ಲಿ ದೇವತೆಗಳೆಂಬ ಕುಟ್ಟಿಹುಳುಗಳು ಮುತ್ತಿರುವುವು; ದೇವಾಸುರಪ್ರಭೃತಿಗಳೆಂಬ ದುಷ್ಟಬಾಲಕರ ಆಟದ ಕೋಲಾಹಲದಿಂದ ಈ ಸಂಸಾರಮಂಟಪವು ತುಂಬಿಹೋಗಿರುವುದು; ಭೂರಾದಿಲೋಕಾಂತರ್ಗತವಾದ ಪುರಗಳೂ ಗ್ರಾಮಗಳೂ ಈ ಮಂಟಪದಲ್ಲಿ ಮಡಕೆ ಕುಡಿಕೆಗಳಾಗಿ ತುಂಬಿರುವು; ಸರಸ್ಸು ಪ್ರವಾಹ ಸಮುದ್ರ ಸಣ್ಣಕೊಳ—ಇವು

ಸರಸ್ಸ್ರೋತೋಬ್ಧಿಸರಸೀಜಲಲೋಕ್ಷಿತಮಹೀತಲಃ ।
ಪಾತಾಳಭೂತಲಸ್ವರ್ಗಭಾಗಭಾಸುರಕೋಟರಃ ॥೩೬॥
ತತ್ರ ಕಸ್ಮಿಂಶ್ಚಿದೇಕಸ್ಮಿನ್ ಕೋಣೇಷ್ವಮ್ಬರಕೋಟರೇ ।
ಶೈಲಲೋಷ್ಟತಲೇಷ್ವೇಕೋ ಗಿರಿಗ್ರಾಮಕಗರ್ತಕಃ ॥೩೭॥
ತಸ್ಮಿನ್ ನದೀಶೈಲವನೋಪಗೂಢೇ ಸಾಗ್ನಿಃ ಸದಾರಃ ಸುತವಾನರೋಗಃ।
ಗೋಕ್ಷೀರವಾನ್ ರಾಜಭಯಾದ್ವಿಮುಕ್ತಃ ಸರ್ವಾತಿಥಿರ್ಧರ್ಮಪರೋ
[ದ್ವಿಜೋಭೂತ್॥೩೮॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಸಕಲಜಗದ್ಭ್ರಾನ್ತಿ
ಪ್ರತಿಪಾದನಂ ನಾಮ ಅಷ್ಟಾದಶಃ ಸರ್ಗಃ.

ಗಳೇ ಇದರಲ್ಲಿ ನೀರುಚಿಮುಕಿಸಿದ ನೆಲವಾಗಿರುವುವು; ಪಾತಾಳ ಭೂಮಿ ಸ್ವರ್ಗ ಇವುಗಳ ಪ್ರದೇಶಗಳೇ ಈ ಸಂಸಾರಮಂಟಪದಲ್ಲಿ ಪ್ರಕಾಶವಾದ ಗೂಡುಗಳಾಗಿರುವುವು॥೩೦-೩೬॥

ಹೀಗಿರುವ ಆ ಸಂಸಾರವೆಂಬ ಮಂಟಪದೊಳಗೆ, ಯಾವುದೋ ಒಂದು ಮೂಲೆಯಲ್ಲಿ, ಆಕಾಶರೂಪವಾದ ಒಂದು ಪೊಟ್ಟರೆಯಲ್ಲಿ, ಪರ್ವತಯುಕ್ತವಾದ ಒಂದು ಸಣ್ಣಹಳ್ಳಿಯು, ಗುಂಡಿಯುಳ್ಳದಾಗಿದ್ದಿತು. ಇದಕ್ಕೆ ಗಿರಿಗ್ರಾಮವೆಂದು ಹೆಸರು ॥೩೭॥

ನದೀ ಶೈಲ ವನಗಳಿಂದ ಪರಿವೃತವಾಗಿರುವ ಆ ಗ್ರಾಮದಲ್ಲಿ, ಸಾಗ್ನಿಕನಾಗಿಯೂ ಸಪತ್ನೀಕನಾಗಿಯೂ ಸಪುತ್ರನಾಗಿಯೂ ಅರೋಗನಾಗಿಯೂ ಗೋಧನಸಂಪನ್ನನಾಗಿಯೂ ಕ್ಷೀರಾದಿಸಮೃದ್ಧನಾಗಿಯೂ ರಾಜಭಯವಿಮುಕ್ತನಾಗಿಯೂ ಸಮಸ್ತ ವರ್ಣಾಶ್ರಮಗಳವರನ್ನೂ ಅತಿಥಿಯಾಗಿ ಭಾವಿಸುತ ಅವರಿಗೆ ಸತ್ಕಾರಮಾಡತಕ್ಕವನಾಗಿಯೂ ಧರ್ಮಪರನಾಗಿಯೂ ಇದ್ದ ಬ್ರಾಹ್ಮಣನೊಬ್ಬನಿದ್ದನು ॥೩೮॥

ಇದು ಉತ್ಪತ್ತಿಪ್ರಕರಣದೊಳಗೆ ಲೀಲೋಪಾಖ್ಯಾನದಲ್ಲಿ ಸಕಲ ಜಗದ್ಭ್ರಾಂತಿ
ಪ್ರತಿಪಾದನವೆಂಬ ಹದಿನೆಂಟನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕೋನವಿಂಶಃ ಸರ್ಗಃ.

ಶ್ರೀದೇವ್ಯುವಾಚ.

ವಿತ್ತವೇಷವಯಃಕರ್ಮವಿದ್ಯಾವಿಭವಚೇಷ್ಟಿತೈಃ ।
ವಸಿಷ್ಠಸ್ಯೈವ ಸದೃಶೋ ನ ತು ವಾಸಿಷ್ಠಚೇಷ್ಟಿತಃ ॥೧॥
ವಸಿಷ್ಠ ಇತಿ ನಾಮ್ನಾಸೌ ತಸ್ಯಾಭೂದಿನ್ದುಸುನ್ದರೀ ।
ನಾಮ್ನಾ ತ್ವರುನ್ಧತೀ ಭಾರ್ಯಾ ಭೂಮಿವ್ಯೋಮನ್ಯರುನ್ಧತೀ ॥೨॥
ವಿತ್ತವೇಷವಯಃಕರ್ಮವಿದ್ಯಾವಿಭವಚೇಷ್ಟಿತೈಃ ।
ಸಮೈವ ಸಾಪ್ಯರುನ್ಧತ್ಯಾ ನ ತು ಚೇತನವತ್ತಯಾ ॥೩॥
ಅಕೃತ್ರಿಮಪ್ರೇಮರಸಾ ವಿಲಾಸಾಲಸಗಾಮಿನೀ ।
ಸಾಸ್ಯ ಸಂಸಾರಸರ್ವಸ್ವಂ ಆಸೀತ್ ಕುಮುದಹಾಸಿನೀ ॥೪॥

ಉತ್ಪತ್ತಿಪ್ರಕರಣದಲ್ಲಿ ಹತ್ತೊಂಭತ್ತನೆಯ ಸರ್ಗನು.

ರಾಜದರ್ಶನರಾಜ್ಯೇಚ್ಛಾದೃಢಸಙ್ಕಲ್ಪತೋ ಜನಿಃ ।
ಪಾದ್ಮಸ್ಯಾಸ್ಯಾಪಿ ಸರ್ಗಸ್ಯ ಪ್ರಾಗ್ಜನ್ಮೋಕ್ತ್ಯಾತ್ರ ವರ್ಣ್ಯತೇ ॥

ಪೂರ್ವೋಕ್ತನಾದ ಪದ್ಮನೆಂಬ ದೊರೆ ಮತ್ತು ಈ ಬ್ರಾಹ್ಮಣ ಇವರುಗಳ ಪೂರ್ವಜನ್ಮ ವೃತ್ತಾಂತವನ್ನು ವರ್ಣಿಸುವುದರ ದ್ವಾರಾ, ರಾಜದರ್ಶನದಿಂದ ರಾಜ್ಯಾಪೇಕ್ಷೆಯಲ್ಲಿ ದೃಢವಾದ ಸಂಕಲ್ಪದಿಂದ ಈ ರೀತಿಯಾದ ಜನ್ಮವುಂಟಾಗಿತ್ತೆಂಬ ವಿಷಯವು ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಪುನಃ ಶ್ರೀಸರಸ್ವತಿಯು ಲೀಲೆಯನ್ನು ಕುರಿತು ಹೇಳಲುಪಕ್ರಮಿಸಿದಳು :—

ಎಲೌ! ಲೀಲೆ! ನಾನು ಹಿಂದೆ ಹೇಳಿದ ಬ್ರಾಹ್ಮಣನು ವಸಿಷ್ಠನೆಂದು ಹೆಸರುಳ್ಳವನು; ಇವನು, ವಿತ್ತ ವೇಷ ವಯಸ್ಸು ಕರ್ಮ ವಿದ್ಯೆ ವಿಭವ ನಡತೆ—ಇವುಗಳಲ್ಲೆಲ್ಲ ಆ ವಸಿಷ್ಠಮುನಿಗೇ ಸಮಾನನಾಗಿದ್ದನು; ಆದರೆ, ಅವನಂತೆ ಇಕ್ಷ್ವಾಕುವಂಶಗುರುತ್ವ ಮುಂತಾದ ಕರ್ಮಗಳು ಮಾತ್ರ ಇವನಲ್ಲಿರಲಿಲ್ಲ. ಇವನಿಗೆ ಚಂದ್ರನಂತೆ ಆಹ್ಲಾದಕಳಾದ ಅರುಂಧತಿಯೆಂಬ ಪತ್ನಿಯಿದ್ದಳು; ಇವಳು ಭೂಮಿಯೆಂಬ ಸ್ವರ್ಗಕ್ಕೆ ಸಾಕ್ಷಾತ್ ಅರುಂಧತಿಯೇ ಆಗಿದ್ದಳು; ಮತ್ತು, ಇವಳೂ ಕೂಡ—ವಿತ್ತ ವೇಷ ವಯಸ್ಸು ಕರ್ಮ ವಿದ್ಯೆ ವಿಭವ ನಡತೆ—ಇವುಗಳಲ್ಲಿ ಆ ಅರುಂಧತಿಗೆ ಸಮವಾಗಿಯೇ ಇದ್ದಳು; ಆದರೆ, ಆ ಅರುಂಧತಿಯಲ್ಲಿದ್ದ ಚೈತನ್ಯವೂ ಇವಳಲ್ಲಿದ್ದ ಚೈತನ್ಯವೂ ಸ್ವಲ್ಪ ಅಸದೃಶಗಳಾಗಿದ್ದುವು ॥೧—೩॥

ಅಕೃತ್ರಿಮವಾದ ಪ್ರೀತಿರಸವುಳ್ಳವಳಾಗಿಯೂ—ವಿಲಾಸದಿಂದ ಮಂದಗಮನೆಯಾಗಿಯೂ—ಬಿಳಿನೈದಿಲೆಯಂತಿರುವ ಮಂದಹಾಸವುಳ್ಳವಳಾಗಿಯೂ ಇರುವ ಆ ಅರುಂಧತಿಯು, ಈ ವಸಿಷ್ಠನಿಗೆ ಸಂಸಾರದಲ್ಲಿ ಸರ್ವಸ್ವಭೂತಳಾಗಿದ್ದಳು ॥೪॥

ಸ ವಿಪ್ರಸ್ತಸ್ಯ ಶೈಲಸ್ಯ ಸಾನೌ ಸರಳಶಾದ್ವಲೇ ।
ಕದಾಚಿದುಪವಿಷ್ಟಃ ಸನ್ ದದರ್ಶಾಧೋ ಮಹೀಪತಿಮ್ ॥೫॥
ಸಮಸ್ತಪರಿವಾರೇಣ ಯಾನ್ತಮಾಖೇಟಕೇಚ್ಛಯಾ ।
ಮಹತಾ ಸೈನ್ಯಘೋಷೇಣ ಮೇರೋರಿವ ಬಿಭಿತ್ಸಯಾ ॥೬॥
ಚಾಮರೈಃ ಕೀರ್ಣಚನ್ದ್ರಾಂಶುಪತಾಕಾಭಿರ್ಲತಾವನಮ್ ।
ಕುರ್ವಾಣಂ ಖಂ ಸಿತಚ್ಛತ್ರಮಣ್ಡಲೈರೂಪ್ಯಕುಟ್ಟಿಮಮ್ ॥೭॥
ಅಶ್ವಪಾದೋತ್ಥಸತ್ಕ್ಷ್ಮಾಜರೇಣುಪೂರಾವೃತಾಮ್ಬರಮ್ ।
ಹಾಸ್ತಿಕೋತ್ತಮ್ಭಿತಕರವಾತಾಟ್ಟಾಲಕಗೋಪಿತಮ್ ॥೮॥
ಮಹಾಕಲಕಲಾವರ್ತದ್ರವದ್ದಿಗ್ಭೂತಮಣ್ಡಲಮ್ ।
ಕಚತ್ಕಾಞ್ಚನಮಾಣಿಕ್ಯಹಾರಕೇಯೂರಮಣ್ಡಲಮ್ ॥೯॥
ತಮಾಲೋಕ್ಯ ಮಹೀಪಾಲಂ ಇದಂ ಚಿನ್ತಿತವಾನಸೌ ।
ಅಹೋ ನು ರಮ್ಯಾ ನೃಪತಾ ಸರ್ವಸೌಭಾಗ್ಯಭಾಸಿತಾ ॥೧೦॥

ಆ ಬ್ರಾಹ್ಮಣನು, ಒಂದಾನೊಂದು ಸಮಯದಲ್ಲಿ, ಹಳ್ಳತಿಟ್ಟಿಲ್ಲದೆ ಸಮವಾಗಿರುವ ಹಸುರುಭೂಮಿಯುಳ್ಳ ಆ ಪರ್ವತದ ಸಾನುಪ್ರದೇಶದಲ್ಲಿ ಕುಳಿತುಕೊಂಡವನಾಗಿ, ಕೆಳಗಡೆ ಯಿದ್ದ ಒಬ್ಬ ದೊರೆಯನ್ನು ಕಂಡನು. ಆಗ ಆ ದೊರೆಯು ಹೇಗಿದ್ದನೆಂದರೆ:—ಅವನು, ಬೇಟೆಯಾಡಬೇಕೆಂಬ ಇಚ್ಛೆಯಿಂದ ಸಮಗ್ರವಾದ ಪರಿವಾರದೊಡನೆ ಹೋಗುತಿದ್ದನು; ಅತ್ಯಧಿಕವಾದ ಸೈನ್ಯಘೋಷದಿಂದ, ಮೇರುಪರ್ವತವನ್ನು ಸೀಳುವುದಕ್ಕಪೇಕ್ಷಿಸಿ ಹೋಗು ವಂತಿದ್ದನು; ಚಾಮರಗಳಿಂದಲೂ ಧ್ವಜಪಟಗಳಿಂದಲೂ ಲತಾವನವನ್ನೆಲ್ಲ ಬೆಳದಿಂಗಳೆರಚಿ ರುವಂತೆಯೂ, ಶ್ವೇತಚ್ಛತ್ರಸಮೂಹಗಳಿಂದ ಆಕಾಶಮಂಡಲವನ್ನೆಲ್ಲ ಬೆಳ್ಳಿಯಿಂದ ಗಚ್ಚು ಹಾಕಿರುವ ನೆಲದಂತೆಯೂ ಮಾಡುತಿದ್ದನು; ಕುದುರೆಗಳ ಕಾಲುಗಳಲ್ಲಿರುವ ಲಾಳಗಳಿಂದ ಭೂಮಿಯಲ್ಲಿರುವ ಧೂಳಿಯು ಮೇಲಕ್ಕೆದ್ದು ಅಂತರಿಕ್ಷವನ್ನೆಲ್ಲ ಆಚ್ಛಾದಿಸುವಂತೆ ಮಾಡು ತಿದ್ದನು; ಆ ಸಮಯದಲ್ಲಿ ಗಜಸಮೂಹಗಳು ತಮ್ಮ ಸೊಂಡಿಲುಗಳನ್ನು ಮೇಲಕ್ಕೆತ್ತಿ ಕೊಂಡು ಗಾಳಿಬೀಸುತ, ಆ ಧೂಳಿಯು ದೊರೆಯಮೇಲೆ ಬೀಳದಂತೆ ಕಾಪಾಡುತಿದ್ದುವು; ಆಗ ಆ ಮಹಾಕಲಕಲಧ್ವನಿಯಿಂದ ಹತ್ತು ದಿಕ್ಕುಗಳಲ್ಲಿರುವ ಮೃಗಾದಿಭೂತಗಳೆಲ್ಲವೂ ಸುತ್ತಿಸುತ್ತಿ ಓಡಿಹೋಗುತಿದ್ದುವು; ಮತ್ತು ಆ ರಾಜನು, ಪ್ರಕಾಶಮಾನವಾದ ಸುವರ್ಣಾ ಭರಣಗಳಿಂದಲೂ ಮಾಣಿಕ್ಯಾದಿ ರತ್ನಖಚಿತವಾದ ಹಾರ ಕೇಯೂರಾದಿ ಭೂಷಣಸಮೂ ಹಗಳಿಂದಲೂ ಅಲಂಕೃತನಾಗಿದ್ದನು ॥೫—೯॥

ಹೀಗಿರುವ ಆ ದೊರೆಯನ್ನು ನೋಡಿ, ಈ ಬ್ರಾಹ್ಮಣನು ಈ ರೀತಿಯಾಗಿ ಚಿಂತಿಸಿ ದನು:—ಅಹ! ಸರ್ವಸೌಭಾಗ್ಯಗಳಿಂದಲಂಕೃತವಾದ ದೊರೆತನವೆಂಬುದು ಬಹುರಮ್ಯವಾ ದುದಲ್ಲವೆ! ಪದಾತಿ ರಥ ಗಜ ಅಶ್ವ ಪತಾಕೆ ಛತ್ರ ಚಾಮರ—ಇವುಗಳಿಂದ, ನಾನು ಯಾ ವಾಗ ದಶದಿಕ್ಕುಗಳ ಮಧ್ಯವನ್ನೂ ತುಂಬತಕ್ಕವನಾದೇನು? ಪರಸ್ತ್ರೀಯರನ್ನುಪಭೋಗಿಸಿ ಆಯಾಸಪಟ್ಟ ನನ್ನ ಶರೀರದಮೇಲಿರುವ ಬೆಮರುಹನಿಗಳನ್ನು, ಕುಂದಕುಸುಮಮಕರಂದ ದಿಂದ ಸುಗಂಧಯುಕ್ತವಾದ ವಾಯುಗಳು ಯಾವಾಗ್ಗ ಪರಿಹರಿಸುವುವು! ಪಚ್ಚಕರ್ಪೂರ

ಪದಾತಿರಥಹಸ್ತ್ಯಶ್ವಪತಾಕಾಚ್ಛತ್ರಚಾಮರೈಃ ।
ಕದಾ ಸ್ಯಾಂ ದಶದಿಕ್ಕುಞ್ಜಪೂರಕೋಽಹಂ ಮಹೀಪತಿಃ ॥೧೧॥
ಕದಾ ಮೇ ವಾಯವಃ ಕುಂದಮಕರಂದಸುಗನ್ಧಯಃ ।
ಪಾಸ್ಯನ್ತ್ಯನ್ತಃ ಪರಸ್ತ್ರೀಣಾಂ ಸುರತಶ್ರಮಶೀಕರಾನ್ ॥೧೨॥
ಕರ್ಪೂರೇಣ ಪುರನ್ಧ್ರೀಣಾಂ ಪೂರ್ಣೇನ ಯಶಸಾ ದಿಶಾಮ್ ।
ಇನ್ದೂದಯಾವದಾತಾನಿ ಕದಾ ಕುರ್ಯಾಂ ಮುಖಾನ್ಯಹಮ್ ॥೧೩॥
ಇತ್ಥಂ ತತಃಪ್ರಭೃತ್ಯೇಷ ವಿಪ್ರಃ ಸಙ್ಕಲ್ಪವಾನಭೂತ್ ।
ಸ್ವಧರ್ಮನಿರತೋ ನಿತ್ಯಂ ಯಾವಜ್ಜೀವಮತನ್ದ್ರಿತಃ ॥೧೪॥
ಹಿಮಾಶನಿರಿವಾಮ್ಭೋಜಂ ಜರ್ಜರೀಕರ್ತುಮಾದೃತಾ ।
ಜಲೇ ಜರ್ಜರಿತೇವಾಥ ಜರಾ ದ್ವಿಜಮುಪಾಯಯೌ ॥೧೫॥
ಆಸನ್ನಮರಣಸ್ಯಾಥ ಭಾರ್ಯಾ ಮ್ಲಾನಿಮುಪಾಯಯೌ ।
ತಸ್ಯ ಶಾಮ್ಯತಿ ಪುಷ್ಪರ್ತೌ ಲತೇವ ಗ್ರೀಷ್ಮಭೀತಿತಃ ॥ ೧೬॥
ಮಾಮಥಾರಾಧಿತವತೀ ಸಾ ತತಸ್ತ್ವಮಿವಾಙ್ಗನಾ ।
ಅಮರತ್ವಂ ಸುದುಷ್ಪ್ರಾಪಂ ಬುದ್ಧ್ವೇಮಂ ಸಾವೃಣೋದ್ವರಮ್ ॥೧೭॥
ದೇವಿ ಸ್ವಮಣ್ಡಪಾದೇವ ಜೀವೋ ಭರ್ತುರ್ಮೃತಸ್ಯ ಮೇ ।
ಮಾಯಾಸೀದಿತ್ಯತಸ್ತಸ್ಯಾಃ ಸಪಿವಾಙ್ಗೀಕೃತೋ ಮಯಾ ॥೧೮॥

ದಿಂದ ಯುವತಿಯರ ಮುಖಗಳನ್ನೂ, ದಿವ್ಯವಾದ ಯಶಸ್ಸಿನಿಂದ ದಿಕ್ಕುಗಳ ಮುಖಗಳನ್ನೂ, ನಾನು ಯಾವಾಗ ಚಂದ್ರೋದಯದಂತೆ ಶುಭ್ರಮಾಡುವೆನು ! ॥೧೦—೧೩॥

ಇತ್ಯಾದಿರೀತಿಯಾಗಿ ಅದು ಮೊದಲು ಆ ವಿಪ್ರನು ಸಂಕಲ್ಪವುಳ್ಳವನಾಗಿ, ಯಾವಜ್ಜೀವವೂ ಸ್ವಧರ್ಮನಿರತರಾಗಿ ಬಹುಜಾಗರೂಕನಾಗಿದ್ದನು ॥೧೪॥

ಬಳಿಕ, ಹಿಮರೂಪವಾದ ವಜ್ರವು ಕಮಲವನ್ನು ಜರ್ಜರಪಡಿಸುವಂತೆಯೂ, ಜಲದಲ್ಲಿರುವ ಸೇತುವೆಯ ಶೈಥಿಲ್ಯವು ಅದನ್ನು ಜರ್ಜರಪಡಿಸುವಂತೆಯೂ, ಈ ಬ್ರಾಹ್ಮಣನನ್ನು ಜರ್ಜರಪಡಿಸುವುದಕ್ಕೋಸ್ಕರ ಜರೆಯು ಆದರವಿಶಿಷ್ಟವಾಗಿ ಸಮೀಪಸ್ಥವಾಯ್ತು ॥೧೫॥

ಬಳಿಕ, ವಸಂತರ್ತುವು ಶಾಂತವಾದಮೇಲೆ ಗ್ರೀಷ್ಮರ್ತುವಿನ ಭಯದಿಂದ ಲತೆಯು ಬಾಡುವಂತೆ, ಆ ಬ್ರಾಹ್ಮಣನು ಆಸನ್ನಮರಣನಾಗಿರುವುದರಿಂದ ಅವನ ಪತ್ನಿಯು ಬಹಳವಾಗಿ ಮ್ಲಾನಿಹೊಂದಿದಳು ॥೧೬॥

ಅನಂತರ, ಆ ಸ್ತ್ರೀಯು ನಿನ್ನಂತೆಯೇ (ಲೀಲೆಯಂತೆ) ನನ್ನನ್ನು (ಸರಸ್ವತಿಯನ್ನು) ಆರಾಧಿಸಿದವಳಾಗಿ, ಮರಣರಾಹಿತ್ಯವು ದುರ್ಲಭವೆಂದು ತಿಳಿದುಕೊಂಡು, ಈ ವರವನ್ನು ಕೇಳಿಕೊಂಡಳು. ಅವಳು ಕೇಳಿದುದೇನೆಂದರೆ:—ದೇವಿ! ಮೃತನಾದ ನನ್ನ ಪತಿಯ ಜೀವವು ಈ ಮಂಟಪದದೆಸೆಯಿಂದ ಹೊರಕ್ಕೆ ಹೋಗಲೇಬಾರದು—ಎಂದು ಅವಳು ಕೇಳಿಕೊಂಡಕಾರಣ, ನಾನು ಆ ವರವನ್ನೇ ಅವಳಿಗೆ ಅಂಗೀಕರಿಸಿದೆನು ॥೧೭—೧೮॥

ಅಥ ಕಾಲವಶಾದ್ವಿಪ್ರಃ ಸ ಪಞ್ಚತ್ವಮುಪಾಯಯೌ ।
ತಸ್ಮಿನ್ನೇವ ಗೃಹಾಕಾಶೇ ಜೀವಾಕಾಶತಯಾ ಸ್ಥಿತಃ ॥೧೯॥

ಸಮ್ಪನ್ನಃ ಪ್ರಾಕ್ತನಾನಲ್ಪಸಙ್ಕಲ್ಪವಶತಃ ಸ್ವಯಮ್ ।
ಆಕಾಶವಪುರೇವೈಷಃ ಪತಿಃ ಪರಮಶಕ್ತಿಮಾನ್ ॥೨೦॥

ಪ್ರಭಾವಜಿತಭೂಪೀಠಃ ಪ್ರತಾಪಾಕ್ರಾನ್ತವಿಷ್ಟಪಃ ।
ಕೃಪಾಪಾಲಿತಪಾತಾಳಃ ತ್ರಿಲೋಕವಿಜಯೀ ನೃಪಃ ॥೨೧॥

ಕಲ್ಪಾಗ್ನಿರರಿವೃಕ್ಷಾಣಾಂ ಸ್ತ್ರೀಣಾಂ ಮಕರಕೇತನಃ ।
ಮೇರುರ್ವಿಷಯವಾಯೂನಾಂ ಸಾಧ್ವಬ್ಜಾನಾಂ ದಿವಾಕರಃ ॥೨೨॥

ಆದರ್ಶಃ ಸರ್ವಶಾಸ್ತ್ರಾಣಾಂ ಅರ್ಥಿನಾಂ ಕಲ್ಪಪಾದಪಃ ।
ಪಾದಪೀಠಂ ದ್ವಿಜಾಗ್ರ್ಯಾಣಾಂ ರಾಕಾ ಧರ್ಮಾಮೃತತ್ವಿಷಃ ॥೨೩॥

ಸ್ವಗೃಹಾಭ್ಯನ್ತರಾಕಾಶೇ ಚಿತ್ತಾಕಾಶಮಯಾತ್ಮನಿ ।
ತಸ್ಮಿನ್ ದ್ವಿಜೇ ಶವೀಭೂತೇ ಭೂತಾಕಾಶಶರೀರಿಣಿ ॥೨೪॥

ಸಾ ತಸ್ಯ ಬ್ರಾಹ್ಮಣೀ ಭಾರ್ಯಾ ಶೋಕೇನಾತ್ಯನ್ತಕರ್ಶಿತಾ ।
ಶುಷ್ಕೇವ ಮಾಷಶಿಮ್ಬಿಕಾ ಹೃದಯೇನ ದ್ವಿಧಾಭವತ್ ॥೨೫॥

ಆಮೇಲೆ ಆ ಬ್ರಾಹ್ಮಣನು ಕಾಲವಶದಿಂದ ಮರಣಹೊಂದಿ, ಆ ಗೃಹಾಕಾಶದಲ್ಲಿಯೇ ಜೀವಾಕಾಶರೂಪನಾಗಿದ್ದನು ॥೧೯॥

ಆಗ ಅವನು, ಪೂರ್ವಜನ್ಮದಲ್ಲಿ ತಾನು ಮಾಡಿದ್ದ ಅತ್ಯಧಿಕವಾದ ಸಂಕಲ್ಪದ ಮಹಿಮೆಯಿಂದ, ಆಕಾಶದೇಹನಾಗಿಯೇ ಇರುತ, ಮಹಾಶಕ್ತಿಯುಕ್ತನಾಗಿ, ತನ್ನ ಮಹಿಮೆಯಿಂದ ಸಮಸ್ತಭೂಮಂಡಲವನ್ನೂ ಗೆದ್ದವನಾಗಿಯೂ, ಪ್ರತಾಪದಿಂದ ಪ್ರಪಂಚವನ್ನೆಲ್ಲ ವ್ಯಾಪಿಸಿರತಕ್ಕವನಾಗಿಯೂ ಕೃಪೆಯಿಂದ ಪಾತಾಳಾದಿಲೋಕವನ್ನು ಸಂರಕ್ಷಿಸತಕ್ಕವನಾಗಿಯೂ, ಮೂರು ಲೋಕವನ್ನೂ ಗೆದ್ದಿರುವವನಾಗಿಯೂ ಇರುವ ದೊರೆಯಾದನು. ಮತ್ತು, ಶತ್ರುಗಳೆಂಬ ವೃಕ್ಷಗಳಿಗೆ ಪ್ರಳಯಕಾಲಿಕವಾದ ಅಗ್ನಿಯಾಗಿಯೂ, ಸ್ತ್ರೀಯರಿಗೆ ಸಾಕ್ಷಾನ್ಮನ್ಮಥನಾಗಿಯೂ, ವಿಷಯಗಳೆಂಬ ವಾಯುಗಳಿಗೆ ಮಹಾಮೇರುಪರ್ವತವಾಗಿಯೂ (ವಿಷಯವೇಗದಿಂದ ಚಂಚಲನಾಗತಕ್ಕವನಲ್ಲ), ಸಾಧುಗಳೆಂಬ ಕಮಲಗಳಿಗೆ ಸೂರ್ಯನಾಗಿಯೂ ಸಕಲ ಶಾಸ್ತ್ರಗಳಿಗೂ ಕನ್ನಡಿಯಾಗಿಯೂ, ಯಾಚಕರಿಗೆ ಕಲ್ಪವೃಕ್ಷಭೂತನಾಗಿಯೂ, ಬ್ರಾಹ್ಮಣಶ್ರೇಷ್ಠರಿಗೆ ಪಾದಪೀಠವಾಗಿಯೂ (ಬ್ರಾಹ್ಮಣರಕಾಲನ್ನು ತಲೆಯಮೇಲಿಟ್ಟುಕೊಳ್ಳುತಿದ್ದನು), ಧರ್ಮವೆಂಬ ಚಂದ್ರನಿಗೆ ಪೂರ್ಣಿಮೆಯಾಗಿಯೂ ಇದ್ದನು ॥೨೦—೨೩॥

ಹೀಗೆ ಆ ಬ್ರಾಹ್ಮಣನು ಶವರೂಪನಾಗಿ—ಚಿತ್ತಾಕಾಶರೂಪವಾದ ತನ್ನ ಮನೆಯೊಳಗಿನ ಆಕಾಶದಲ್ಲಿ ಜೀವಾಕಾಶರೂಪನಾಗಿರಲಾಗಿ, ಅವನ ಪತ್ನಿಯಾದ ಆ ಬ್ರಾಹ್ಮಣಿಯು, ಶೋಕದಿಂದ ಅತ್ಯಂತ ಸಂಕಟಪಟ್ಟವಳಾಗಿ, ಒಣಗಿದ ಉದ್ದಿನಕಾಯಿಯು ಸಿಪ್ಪೆಯಂತೆ, ಎರಡು ಪಾಲಾಗಿ ಸೀಳಿದ ಹೃದಯವುಳ್ಳವಳಾದಳು ॥೨೪—೨೫॥

ಭರ್ತ್ರಾ ಸಹ ಶವೀಭೂತಾ ದೇಹಮುತ್ಸೃಜ್ಯ ದೂರತಃ ।
ಆತಿವಾಹಿಕದೇಹೇನ ಭರ್ತಾರಂ ಸಮುಪಾಯಯೌ ॥೨೬॥

ನದೀ ನಿಖಾತಮಿವ ತಂ ಭರ್ತಾರಮನುಸೃತ್ಯ ಸಾ ।
ಆಜಗಾಮ ವಿಶೋಕತ್ವಂ ಸಾ ವಾಸನ್ತೀವ ಮಞ್ಜರೀ ॥೨೭॥

ತತ್ರಾಸ್ಯ ವಿಪ್ರಸ್ಯ ಗೃಹಾಣಿ ಸನ್ತಿ ಭೂಸ್ಥಾವರಾದೀನಿ ಧನಾನಿ ಸನ್ತಿ ।
ಅದ್ಯಾಷ್ಟಮಂ ವಾಸರಮಸ್ತಮೃತ್ಯೋಃ ಜೀವೋ ಗಿರಿಗ್ರಾಮಕಕನ್ದರಸ್ಥಃ ॥೨೮॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಬ್ರಾಹ್ಮಣಮರಣಂ ನಾಮ
ಏಕೋನವಿಂಶಃ ಸರ್ಗಃ.

ಆಗ, ತನ್ನ ಗಂಡನೊಡನೆ ತಾನೂ ಶವವಾದವಳಾಗಿ, ಸ್ಥೂಲದೇಹವನ್ನು ದೂರವಾಗಿ ಬಿಟ್ಟುಬಿಟ್ಟು, ಸೂಕ್ಷ್ಮದೇಹದಿಂದ ತನ್ನ ಪತಿಯನ್ನು ಸೇರಿದಳು ॥೨೬॥

ಆ ಸ್ತ್ರೀಯು ತನ್ನ ಪತಿಯನ್ನು ಹೊಂದಿ, ನದಿಯಲ್ಲಿ ಆಳವಾದ ಪ್ರದೇಶವನ್ನು ಹೊಂದಿದ ವಸನ್ತಕಾಲಿಕವಾದ ಪುಷ್ಪಗುಚ್ಛದಂತೆ, ದುಃಖರಹಿತಳಾದಳು ॥೨೭॥

ಆ ಬ್ರಾಹ್ಮಣನಿಗೆ, ಅಲ್ಲಿ ಯಥಾಪ್ರಕಾರವಾಗಿ ಮನೆಗಳೂ ಚರಸ್ಥಿರ ದ್ರವ್ಯಗಳೂ ಯಥೇಚ್ಛವಾಗಿರುವುವು, ಅವನು ಸತ್ತು ಈಗ ಎಂಟುದಿನವಾಯಿತು; ಅವನ ಜೀವವು ಪೂರ್ವೋಕ್ತವಾದ ಗಿರಿಗ್ರಾಮದ ಗುಹೆಯಲ್ಲಿರುವುದು ॥೨೮॥

ಇದು ಉತ್ಪತ್ತಿಪ್ರಕರಣದೊಳಗೆ ಲೀಲೋಪಾಖ್ಯಾನದಲ್ಲಿ ಬ್ರಾಹ್ಮಣ
ಮರಣವೆಂಬ ಹತ್ತೊಂಭತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ವಿಂಶಃ ಸರ್ಗಃ.

ಶ್ರೀ ದೇವ್ಯುವಾಚ.

ಸ ತೇ ಭರ್ತಾದ್ಯ ಸಮ್ಪನ್ನೋ ದ್ವಿಜೋ ಭೂಪತ್ವಮಾಗತಃ ।
ಯಾಸಾವರುನ್ಧತೀ ನಾಮ ಬ್ರಾಹ್ಮಣೀ ಸಾ ತ್ವಮಙ್ಗನೇ ॥೧॥
ಇಹೇಮೌ ಕುರುತೋ ರಾಜ್ಯಂ ತೌ ಭವನ್ತೌ ಸುದಮ್ಪತೀ ।
ಚಕ್ರವಾಕಾವಿವ ನವೌ ಭುವಿ ಜಾತೌ ಶಿವಾವಿವ ॥೨॥
ಏಷ ತೇ ಕಥಿತಃ ಸರ್ವಃ ಪ್ರಾಕ್ತನಃ ಸಂಸೃತಿಕ್ರಮಃ ।
ಭ್ರಾನ್ತಿಮಾತ್ರಕಮಾಕಾಶಂ ಏವಂ ಜೀವಸ್ವರೂಪಧೃಕ್ ॥೩॥
ಭ್ರಮಾದಸ್ಮಾಚ್ಚಿದಾಕಾಶೇ ಭ್ರಮೋಽಯಂ ಪ್ರತಿಬಿಮ್ಬತಃ ।
ಅಸತ್ಯಏವ ವಾ ಸತ್ಯೋ ಭವತೋರ್ಭವಭಙ್ಗದಃ ॥೪॥

ಉತ್ಪತ್ತಿಪ್ರಕರಣದಲ್ಲಿ ಇಪ್ಪತ್ತನೆಯ ಸರ್ಗವು.

ಶ್ರುತೇ ಪ್ರಾಗ್ಜನ್ಮಚರಿತೇಽಪ್ಯಸಮ್ಭಾವನಕಾತರಾ ।
ಲೀಲಾತ್ರ ಬೋಧ್ಯತೇ ದೇವ್ಯಾ ದೃಷ್ಟಾನ್ತೈಶ್ಚೋಪಪತ್ತಿಭಿಃ ॥

ಪೂರ್ವಜನ್ಮ ವೃತ್ತಾಂತವನ್ನು ಕೇಳಿದರೂ ಅದರಲ್ಲಿ ನಂಬುಗೆಯಿಲ್ಲದೆ ಕಳವಳಪಡುತಿರುವ ಲೀಲೆಯನ್ನು, ಶ್ರೀ ಸರಸ್ವತಿಯು ದೃಷ್ಟಾಂತಗಳಿಂದಲೂ ಉಪಪತ್ತಿಗಳಿಂದಲೂ ಬೋಧಿಸುವಳೆಂಬ ವಿಷಯವು, ಈ ಸರ್ಗದಲ್ಲಿ ಹೇಳಲ್ಪಡುವುದು.

ಮತ್ತೆ ಲೀಲೆಯನ್ನು ಕುರಿತು ಶ್ರೀ ಸರಸ್ವತಿಯು ಹೇಳಿದಳು:—

ಎಲೌ! ಲೀಲೆ! ನಾನು ಹಿಂದೆ ಹೇಳಿದ ಬ್ರಾಹ್ಮಣನೇ ಈಗ ದೊರೆತನವನ್ನು ಹೊಂದಿ ನಿನಗೆ ಪತಿಯಾಗಿರುವನು. ಆ ಅರುಂಧತಿಯೆಂಬ ಬ್ರಾಹ್ಮಣಸ್ತ್ರೀಯೇ ನೀನು ॥೧॥

ಈ ಉತ್ತಮ ದಂಪತಿಗಳಾದ ನೀವಿಬ್ಬರೂ, ಹೊಸದಾಗಿ ಸೇರಿದ ಚಕ್ರವಾಕ ದಂಪತಿಗಳಂತೆಯೂ—ಭೂಮಿಯಲ್ಲವತರಿಸಿರುವ ಪಾರ್ವತೀಪರಮೇಶ್ವರರಂತೆಯೂ ಕಾಣಿಸುತ, ಇಲ್ಲಿ ರಾಜ್ಯಭಾರಮಾಡುತ್ತಿರುವಿರಿ ॥೨॥

ಈರೀತಿಯಾಗಿ ನಿನ್ನ ಪೂರ್ವಜನ್ಮದ ಸಂಸಾರಕ್ರಮವನ್ನೆಲ್ಲ ಹೇಳಿರುವೆನು; ಹೀಗೆ ಕೇವಲ ಭ್ರಾಂತಿಮಯವಾದ ಆಕಾಶವೇ ಜೀವರೂಪವನ್ನು ಧರಿಸಿರುವುದು ॥೩॥

ಈ ಭ್ರಾಂತಿಯಿಂದ ಆ ಚಿದಾಕಾಶದಲ್ಲಿ ಮತೊಂದು ಜನ್ಮವೆಂಬ ಭ್ರಮೆಯು ಪ್ರತಿಫಲಿಸುವುದು. ಹೀಗೆ ಒಂದು ಭ್ರಾಂತಿಯು ಮತ್ತೊಂದು ಭ್ರಾಂತಿಗೆ ಕಾರಣವಾಗುವುದು. ಈ ಭ್ರಮೆಯು, ನ್ಯಾಯವಾಗಿ ಅಸತ್ಯವೇಯೇ; ಆದರೆ ಒಂದೊಂದುವೇಳೆ ಸತ್ಯವಾಗಿಯೂ ಕಾಣುವುದು. ಇದು—ಸತ್ಯವೆಂಬ ಜ್ಞಾನವುಂಟಾದಾಗ—ನಿಮಗೆ ಜನ್ಮರಾಹಿತ್ಯವುಂಟುಮಾಡತಕ್ಕುದಾಗುವುದು ॥೪॥

ತಸ್ಮಾದ್ಭ್ರಾನ್ತಿಮಯಃ ಕಃ ಸ್ಯಾತ್ ಕೋ ವಾ ಭ್ರಾನ್ತ್ಯುಜ್ಝಿತೋ
[ಭವೇತ್ ।

ಸರ್ಗೋ ನಿರರ್ಗಳಾನರ್ಥಬೋಧಾನ್ನಾನ್ಯೋ ವಿಜೃಮ್ಭತೇ ॥೫॥

ಶ್ರೀವಸಿಷ್ಠ ಉವಾಚ.

ಇತ್ಯಾಕರ್ಣ್ಯ ಚಿರಂ ಚಾರು ವಿಸ್ಮಯೋತ್ಫುಲ್ಲಲೋಚನಾ ।
ಭೂತ್ವೋವಾಚ ವಚೋ ಲೀಲಾ ಲೀಲಾಲಸಪದಾಕ್ಷರಮ್ ॥೬॥

ಲೀಲೋವಾಚ.

ದೇವಿ ಭೋಸ್ತ್ವದ್ವಚೋ ಮಿಥ್ಯಾ ಕಥಂ ಸಮ್ಪನ್ನಮೀದೃಶಮ್ ।
ಕ್ವ ವಿಪ್ರಜೀವಃ ಸ್ವಗೃಹೇ ಕ್ವೇಮೇ ವಯಮಿಹ ಸ್ಥಿತಾಃ ॥೭॥
ತಾದೃಗ್ಲೋಕಾನ್ತರಂ ಸಾ ಭೂಃ ತೇ ಶೈಲಾಸ್ತಾ ದಿಶೋ ದಶ ।
ಕಥಂ ಭಾನ್ತಿ ಗೃಹಸ್ಯಾನ್ತಃ ಮದ್ಭರ್ತಾ ಯೇಷ್ವವಸ್ಥಿತಃ ॥೮॥
ಮತ್ತಐರಾವತೋ ಬದ್ಧಃ ಸರ್ಷಪಸ್ಯೇವ ಕೋಟರೇ ।
ಮಶಕೇನ ಕೃತಂ ಯುದ್ಧಂ ಸಿಂಹೌಘೈರಣುಕೋಟರೇ ॥೯॥

ಆದುಕಾರಣ, ಈಗ ಯಾವ ಸೃಷ್ಟಿಯು ಭ್ರಾಂತಿಮಯವಾಗುವುದು? ಯಾವುದು ತಾನೆ ಭ್ರಾಂತಿರಹಿತವಾಗುವುದು? ಅಂತು ನಿರರ್ಗಳವಾಗಿರುವ ಅನರ್ಥಜ್ಞಾನಹೊರತು ಮತ್ತಾವುದೂ ಈಗ ಇಲ್ಲವೇಯಿಲ್ಲ॥ ೫॥

ಹೀಗೆ ಸರಸ್ವತಿಯು ಲೀಲೆಯನ್ನು ಕುರಿತು ಹೇಳಿದಳೆಂದು ಹೇಳುತ, ಮತ್ತೆ ಶ್ರೀ ವಸಿಷ್ಠರು ಶ್ರೀ ರಾಮನನ್ನು ಕುರಿತು ಹೇಳಿದರು:—

ಅಯ್ಯಾ! ರಾಮ! ಈರೀತಿಯಾಗಿ ಸರಸ್ವತೀದೇವಿಹೇಳಿದ ಅತಿಮನೋಹರವಾದ ಮಾತನ್ನು ಕೇಳಿ, ಲೀಲೆಯು ಆಶ್ಚರ್ಯದಿಂದರಳಿದ ಕಣ್ಣುಳ್ಳವಳಾಗಿ, ವಿಲಾಸದಿಂದ ಮಂದ ವಾದ ಶಬ್ದಗಳುಳ್ಳಂತೆ, ಈರೀತಿಯಾಗಿ ಮಾತಾಡಿದಳು ॥೬॥

ಆ ಲೀಲೆಯು ಹೇಳಿದುದೇನಂದರೆ:—

ಎಲೌ! ದೇವಿ! ನಿನ್ನ ಮಾತು ಅಸತ್ಯವಾದುದು. ಇದು ಈರೀತಿಯಾಗಿ ಹೇಗೆ ಸಂಭವಿಸುವುದು? ತನ್ನ ಮನೆಯೊಳಗಿದ್ದ ಆ ಬ್ರಾಹ್ಮಣನ ಜೀವವೆಲ್ಲಿ! ಇಲ್ಲಿರುವನಾವೆಲ್ಲಿ! ॥

ನನ್ನಪತಿಯು ಯಾವುಗಳಲ್ಲಿ ಇದ್ದನೆಂದು ಹೇಳಿದೆಯೋ, ಅಂತಹ ಲೋಕಾಂತರವೂ, ಆ ಭೂಮಿಯೂ, ಆ ಪರ್ವತಗಳೂ, ಆ ದಶದಿಕ್ಕುಗಳೂ ಈ ನನ್ನ ಮನೆಯುಲ್ಲಿ ಹೇಗೆ ಕಾಣಿಸುವುವು? ॥ ೮॥

ಒಂದು ಸಾಸುವೆಯೊಳಗಡೆ ಮದಿಸಿದ ಐರಾವತಗಜವನ್ನು ಕಟ್ಟಿರುವರು; ಒಂದು ಸೊಳ್ಳೆಯು ಪರಮಾಣುವಿನ ಒಳಭಾಗದಲ್ಲಿ ಸಿಂಹಸಮೂಹಗಳೊಡನೆ ಯುದ್ಧಮಾಡಿತು; ಕಮಲ ಬೀಜದೊಳಗೆ ಮೇರುಪರ್ವತವಿಡಲ್ಪಟ್ಟಿರುವುದು; ಅದನ್ನು ದುಂಬಿಯುಮರಿಯು ನುಂಗಿಬಿಟ್ಟಿತು; ಸ್ವಪ್ನದಲ್ಲಿ ಕಂಡ ಮೇಘವು ಗುಡುಗಿದುದನ್ನು ಕೇಳಿ ಬಹು ವಿಚಿತ್ರವಾಗಿ ನವಿಲುಗಳು ನರ್ತನಮಾಡುವುವು. ಎಲೌ ಸರ್ವೇಶ್ವರಿ! ಇದೆಲ್ಲವೂ ಹೇಗೆ ಅಸಮಂಜಸವೇ

ಪದ್ಮಾಕ್ಷೇ ಸ್ಥಪಿತೋ ಮೇರುಃ ನಿಗೀರ್ಣೋ ಭೃಙ್ಗಸೂನುನಾ ।
ಸ್ವಪ್ನಾಬ್ದಗರ್ಜಿತಂ ಶ್ರುತ್ವಾ ಚಿತ್ರಂ ನೃತ್ಯನ್ತಿ ಬರ್ಹಿಣಃ ॥೧೦॥
ಅಸಮಞ್ಜಸಮೇವೈತತ್ ಯಥಾ ಸರ್ವೇಶ್ವರೇಶ್ವರಿ ।
ತಥಾ ಗೃಹಾನ್ತಃ ಪೃಥ್ವೀ ಚ ಶೈಲಾಶ್ಚೇತ್ಯಸಮಞ್ಜಸಮ್ ॥೧೧॥
ಯಥಾವದೇತದ್ದೇವೇಶಿ ಕಥಯಾಮಲಯಾ ಧಿಯಾ ।
ಪ್ರಸಾದಾನುಗೃಹೀತೇ ಹಿ ನೋದ್ವಿಜನ್ತೇ ಮಹೌಜಸಃ ॥೧೨॥

ಶ್ರೀದೇವ್ಯುವಾಚ.

ನಾಹಂ ಮಿಥ್ಯಾ ವದಾಮೀದಂ ಯಥಾವಚ್ಛೃಣು ಸುನ್ದರಿ ।
ಭೇದನಂ ನಿಯತೀನಾಂ ಹಿ ಕ್ರಿಯತೇ ನಾಸ್ಮದಾದಿಭಿಃ ॥೧೩॥
ವಿಭಿದ್ಯಮಾನಾಮನ್ಯೇನ ಸ್ಥಾಪಯಾಮ್ಯಹಮೇವ ಯಾಮ್ ।
ಮರ್ಯಾದಾಂ ತಾಂ ಮಯಾ ಭಿನ್ನಾಂ ಕೋಪರಃ ಪಾಲಯಿಷ್ಯತಿ ॥೧೪॥
ಸ ಗ್ರಾಮದ್ವಿಜಜೀವಾತ್ಮಾ ತಸ್ಮಿನ್ನೇವ ಸ್ವಸದ್ಮನಿ ।
ವ್ಯೋಮ್ನ್ಯೇವೇದಂ ಮಹಾರಾಷ್ಟ್ರಂ ವ್ಯೋಮಾತ್ಮೈವ ಪ್ರಪಶ್ಯತಿ॥೧೫॥
ಪ್ರಾಕ್ತನೀ ಸಾ ಸ್ಮೃತಿರ್ಲುಪ್ತಾ ಯುವಯೋರುದಿತಾನ್ಯಥಾ ।
ಸ್ವಪ್ನೇ ಜಾಗ್ರತ್ಸ್ಮೃತಿರ್ಯದ್ವತ್ ಏತನ್ಮರಣಮಙ್ಗನೇ ॥೧೬॥

ಆಗಿರುವುದೋ, ಒಂದು ಮನೆಯೊಳಗೆ ಭೂಮಿಯೂ ಶೈಲಗಳೂ ಇರುವುವೆಂಬುದೂ ಹಾಗೆ ಅಸಮಂಜಸವಾಗಿರುವುದು ॥೯—೧೧॥

ಎಲೌ ದೇವೇಶ್ವರಿ! ಈ ವಿಷಯವನ್ನು ನೀನು ನನಗೆ ನಿರ್ಮಲವಾದ ಮನಸ್ಸಿನಿಂದ ಯಥಾಸಿತವಾಗಿ ಹೇಳು. ಮಹಾತ್ಮರಾದವರು ಯಾರಲ್ಲಿ ಅನುಗ್ರಹವಿಡುವರೋ, ಅವರ ವಿಷಯದಲ್ಲಿ ಎಂದಿಗೂ ಬೇಜಾರುಮಾಡಿಕೊಳ್ಳುವುದಿಲ್ಲವಷ್ಟೆ !॥೧೨॥

ಇದನ್ನು ಕೇಳಿ ಶ್ರೀ ಸರಸ್ವತಿಯುತ್ತರಹೇಳುವಳು:—

ಸುಂದರಿ ! ನಾನೆಂದಿಗೂ ಸುಳ್ಳು ಹೇಳುವುದಿಲ್ಲ; ನಾನು ಹೇಳುವುದನ್ನು ಕ್ರಮವಾಗಿ ಕೇಳು. 'ನಾನೃತಂ ವದೇತ್' ಇತ್ಯಾದಿ ನಿಯಮಗಳನ್ನು ನಮ್ಮಂಥವರೆಂದಿಗೂ ಭಂಗ ಪಡಿಸುವುದಿಲ್ಲ ॥೧೩॥

ಇತರರು ಯಾವ ನಿಯಮವನ್ನು ತಪ್ಪಿ ನಡಿದರೆ ನಾನು ಅದನ್ನು ಮತ್ತೆ ಸ್ಥಾಪನೆ ಮಾಡತಕ್ಕವಳಾಗಿರುವೆನೋ, ಅಂತಹ ನಿಯಮವನ್ನು ನಾನೇ ಭೇದಿಸಿಬಿಟ್ಟರೆ—ಮತ್ತಾರು ಕಾಪಾಡತಕ್ಕವರಿರುವರು ? ॥೧೪॥

ನಾನು ಹಿಂದೆ ಹೇಳಿದ ಗಿರಿಗ್ರಾಮದಲ್ಲಿದ್ದ ಬ್ರಾಹ್ಮಣನ ಜೀವಾತ್ಮನೇ, ಆಕಾಶ ರೂಪವಾದ ಆ ತನ್ನ ಮನೆಯಲ್ಲಿಯೇ, ರಾಜಭಾವವಾಸನಾಕ್ರಾಂತನಾಗಿ, ಸ್ವಯಂ ಆಕಾಶ ರೂಪನಾಗಿಯೇ, ಈ ದೊಡ್ಡ ರಾಷ್ಟ್ರಾದಿಗಳನ್ನನುಭವಿಸುತಿರುವನು ॥೧೫॥

ಎಲೌ ! ಲೀಲೆ ! ಸ್ವಪ್ನದಲ್ಲಿ ಜಾಗ್ರತ್ಕಾಲಿಕವಾದ ಸ್ಮೃತಿಯು ಲುಪ್ತವಾಗುವಂತೆ, ನಿಮ್ಮಿಬ್ಬರಿಗೂ ಆ ಪೂರ್ವಸ್ಮೃತಿಯು ಲುಪ್ತವಾಗಿ ಬೇರೆಯಾದ ಸ್ಮೃತಿಯುಂಟಾಗಿರುವುದು. ಇದನ್ನೇ ಮರಣವೆಂದು ನೀವು ತಿಳಿದಿರುವಿರಿ ॥೧೬॥

ಯಥಾ ಸ್ವಪ್ನೇ ತ್ರಿಭುವನಂ ಸಙ್ಕಲ್ಪೇ ತ್ರಿಜಗದ್ಯಥಾ ।
ಯಥಾ ಕಥಾರ್ಥಸಙ್ಗ್ರಾಮೋ ಮರುಭೂಮೌ ಜಲಂ ಯಥಾ ॥೧೭॥
ತಸ್ಯ ಬ್ರಾಹ್ಮಣಶೈಲಸ್ಯ ಸಶೈಲವನಪತ್ತನಾ ।
ಇಯಮನ್ತಃ ಸ್ಥಿತಾ ಭೂಮಿಃ ಸಙ್ಕಲ್ಪಾದರ್ಶಯೋರಿವ ॥೧೮॥
ಅಸತ್ಯೈವೇಯಮಾಭಾತಿ ಸತ್ಯೇವ ಘನಸರ್ಗತಾ ।
ತಸ್ಮಾತ್ ಸತ್ಯಾವಭಾಸಸ್ಯ ಚಿದ್ವ್ಯೋಮ್ನಃ ಕೋಟರೋದರೇ ॥೧೯॥
ಅಸತ್ಯಾದ್ಯತ್ ಸಮುತ್ಪನ್ನಂ ಸ್ಮೃತ್ಯಾ ನಾಮ ತದಪ್ಯಸತ್ ।
ಮೃಗತೃಷ್ಣಾತರಙ್ಗಿಣ್ಯಾಂ ತರಙ್ಗೋಽಪಿ ನ ಸದ್ಯತಃ ॥೨೦॥
ಇದಂ ತ್ವದೀಯಂ ಸದನಂ ತದ್ಗೇಹಾಕಾಶಕೋಶಗಮ್ ।
ವಿದ್ಧಿ ಮಾಂ ತ್ವಾಂ ಚ ಸರ್ವಂ ಚ ತಚ್ಚಿದ್ವ್ಯೋಮ್ನ್ಯೇವ ಕೇವಲಮ್ ॥೨೧॥
ಸ್ವಪ್ನಸಮ್ಭ್ರಮಸಙ್ಕಲ್ಪಸ್ವಾನುಭೂತಿಪರಮ್ಪರಾಃ ।
ಪ್ರಮಾಣಾನ್ಯತ್ರ ಮುಖ್ಯಾನಿ ಸಮ್ಬೋಧಾಯ ಪ್ರದೀಪವತ್ ॥೨೨॥

ಈ ಪೂರ್ವಸ್ಮೃತಿಯು—ಸ್ವಪ್ನದಲ್ಲಿನ ಲೋಕತ್ರಯದಂತೆಯೂ, ಸಂಕಲ್ಪದಲ್ಲಿನ ಜಗತ್ತ್ರಯದಂತೆಯೂ, ಕಥೆಯಲ್ಲಿ ಹೇಳಿದ ಯುದ್ಧದಂತೆಯೂ, ಮರುಭೂಮಿಯಲ್ಲಿಯ ಜಲದಂತೆಯೂ ಲುಪ್ತವಾಗಿರುವುದೆಂದು ತಿಳಿಯಬೇಕು ॥೧೭॥

ನಮ್ಮ ಸಂಕಲ್ಪದಲ್ಲಿ ಇಷ್ಟು ದೊಡ್ಡ ಪ್ರಪಂಚವೂ ಅಡಗಿರುವುದಿಲ್ಲವೆ! ಮತ್ತು, ಕನ್ನಡಿಯಲ್ಲಿಯೂ ಇದು ಅಡಗಿರುವುದಲ್ಲವೆ! ಹಾಗೆಯೇ, ಶೈಲ ವನ ಪಟ್ಟಣ ಇವುಗಳೊಡನೆ ಕೂಡಿಕೊಂಡಿರುವ ಈ ಸಮಸ್ತ ಭೂಮಿಯೂ, ಆ ಬ್ರಾಹ್ಮಣನ ಮನೆಯೊಳಗೆ ಅಡಗಿರುವುದು॥೧೮॥

ಅದುಕಾರಣ, ಸತ್ಯಪ್ರಕಾಶವಾದ ಆ ಚಿದಾಕಾಶದ ಮಧ್ಯದಲ್ಲಿ, ಈ ಸಾಂದ್ರವಾದ ಪ್ರಪಂಚಸೃಷ್ಟಿಯು, ಅಸತ್ಯವೇ ಆಗಿದ್ದರೂ ಸತ್ಯದಂತೆ ಕಾಣುವುದು ॥೧೯॥

ಆದರೆ, ಅಸತ್ಯವಾದುದರ ದೆಸೆಯಿಂದಲೂ ನಮ್ಮ ವಾಸನಾಬಲದಿಂದ ಯಾವುದು ಹುಟ್ಟುವುದೋ, ಅದೂ ಅಸತ್ಯವೇ ಆದುದು. ಅಸತ್ಯವಾದ ಮೃಗತೃಷ್ಣಿಕಾನದಿಯಲ್ಲಿ ಕಾಣಿಸುವ ಅಲೆಯೂ ಅಸತ್ಯವೇ ಆಗಿರುವುದಷ್ಟೆ! ॥೨೦॥

ನಿನ್ನ ಮನೆಯೂ ನಾನೂ ನೀನೂ—ಎಲ್ಲರೂ ಆ ಬ್ರಾಹ್ಮಣನ ಮನೆಯೊಳಗಿನ ಆಕಾಶಮಧ್ಯದಲ್ಲಿರುವೆವೆಂದೂ. ಇದೆಲ್ಲವೂ ಆ ಕೇವಲವಾದ ಚಿದಾಕಾಶವೇಯೆಂದೂ ತಿಳಿ॥

ಈರೀತಿಯಾಗಿ ಸರ್ವಪ್ರಪಂಚವೂ ಮಿಥ್ಯಾಭೂತವೆಂಬುದರಲ್ಲಿಯೂ ಕೇವಲ ಚಿನ್ಮಾತ್ರವೇ ಅವಶಿಷ್ಟವಾಗುವುದೆಂಬುದರಲ್ಲಿಯೂ ಪ್ರಮಾಣವೇನೆಂದರೆ:—ಈ ವಿಷಯದಲ್ಲಿ ಸ್ವಾನುಭವವೇ ಪ್ರಮಾಣವೆಂದು ತಿಳಿಯಬೇಕು. ನಮ್ಮ ಸಪ್ನದಲ್ಲಿಯೂ ಸಂಕಲ್ಪದಲ್ಲಿಯೂ ನಾನಾವಿಧಪದಾರ್ಥಗಳನ್ನು ನೋಡುವೆವು. ಆದರೆ ಅವೆಲ್ಲವೂ ಅಸತ್ಯಗಳೇ ಆಗಿ, ಕೊನೆಗೆ ಜ್ಞಾನವೊಂದುಮಾತ್ರವೇ ನಿಲ್ಲುವುದು. ಹೀಗೆಯೇ ಜಾಗ್ರದವಸ್ಥೆಯಲ್ಲಿ ಕಂಡ ಪದಾರ್ಥಗಳೂ ಅಸತ್ಯಗಳಾಗಿ ಕೇವಲ ಚಿನ್ಮಾತ್ರವೇ ಅವಶಿಷ್ಟವಾಗುವುದು. ಅಂಧಕಾರದಲ್ಲಿ ಪದಾರ್ಥಜ್ಞಾನವುಂಟಾಗುವುದಕ್ಕೆ ದೊಡ್ಡ ದೀಪವು ಸಾಧನವಾಗುವಂತೆ, ಈ ಜ್ಞಾನವುಂಟಾಗುವುದಕ್ಕೆ ಸ್ವಪ್ನಾದ್ಯನುಭವಪರಂಪರೆಯೇ ಮುಖ್ಯಪ್ರಮಾಣವೆಂದು ತಿಳಿಯಬೇಕು॥

ಸ್ಥಿತೋ ಬ್ರಾಹ್ಮಣಗೇಹಾನ್ತಃ ದ್ವಿಜಜೀವಸ್ತದಮ್ಬರೇ ।
ಸಸಮುದ್ರವನಾ ಪೃಥ್ವೀ ಸ್ಥಿತಾಬ್ಜ ಇವ ಷಟ್ಪದಃ ॥೨೩॥
ತಸ್ಯಾಃ ಕಸ್ಮಿಂಶ್ಚಿದೇಕಸ್ಮಿನ್ ಪೇಲವೇ ಕೋಣಕೋಟರೇ ।
ಇದಂ ಪತ್ತನದೇಹಾದಿ ಕೇಶೋಣ್ಡ್ರಕಇವಾಮ್ಬರೇ ॥೨೪॥
ತಸ್ಮಿನ್ನಸ್ಮಿನ್ ಪುರೇ ತನ್ವಿ ತದೇವ ಸದನಂ ಸ್ಥಿತಮ್ ।
ತಸ್ಮಾತ್ ಕಿಂ ತ್ರಸರೇಣ್ವನ್ತಃ ಜಗದ್ಬೃನ್ದಮಿವ ಸ್ಥಿತಮ್ ॥೨೫॥
ಪರಮಾಣೌಪರಮಾಣೌ ಸನ್ತಿ ವತ್ಸೇ ಚಿದಾತ್ಮನಿ ।
ಅನ್ತರನ್ತರ್ಜಗನ್ತೀತಿ ಕಿಂ ತ್ವೇತನ್ನಾಮ ಶಙ್ಕ್ಯತೇ ॥೨೬॥

ಲೀಲೋವಾಚ.

ಅಷ್ಟಮೇ ದಿವಸೇ ವಿಪ್ರಃ ಸ ಮೃತಃ ಪರಮೇಶ್ವರಿ ।
ಗತೋ ವರ್ಷಗಣೋಽಸ್ಮಾಕಂ ಮಾತಃ ಕಥಮಿದಂ ಭವೇತ್ ॥೨೭॥

ಶ್ರೀದೇವ್ಯುವಾಚ.

ದೇಶದೈರ್ಘ್ಯಂ ಯಥಾ ನಾಸ್ತಿ ಕಾಲದೈರ್ಘ್ಯಂ ತಥಾಙ್ಗನೇ ।
ನಾಸ್ತ್ಯೇವೇದಂ ಯಥಾನ್ಯಾಯಂ ಕಥ್ಯಮಾನಂ ಮಯಾ ಶೃಣು ॥೨೮॥

ಹೀಗೆ ಆ ಬ್ರಾಹ್ಮಣನ ಮನೆಯೊಳಗೆ ಅವನ ಜೀವವಿರುವುದು; ಅದರೊಳಗೆ, ಸಮುದ್ರ ವನ ಸಹಿತವಾದ ಈ ಸಮಸ್ತಭೂಮಿಯೂ, ಕಮಲದೊಳಗೆ ಭ್ರಮರವಿರುವಂತೆ—ಇರುವುದು ॥೨೩॥

ಈ ಭೂಮಿಯು ಯಾವುದೋ ಒಂದು ಅತ್ಯಲ್ಪವಾದ ಮೂಲೆಯೊಳಗೆ, ನಿರ್ಮಲವಾದ ಆಕಾಶದಲ್ಲಿ ದುಂಡಾಗಿ ಸುರುಳಿಗಟ್ಟಿರುವ ಕೂದಲಿರುವುದೆಂದು ಭ್ರಾಂತಿಯುಂಟಾಗುವಂತೆ, ಈ ನಿನ್ನ ಪಟ್ಟಣ ದೇಹ ಮುಂತಾದುದಿರುವುದು ॥೨೪॥

ಎಲೌ! ಲೀಲೆ! ಹೀಗಿರುವ ಆ ಪಟ್ಟಣದಲ್ಲಿಯೇ ಅದೇ ಮನೆಯಿರುವುದು. ಅದು ಕಾರಣ, ಪರಮಾಣುವಿನೊಳಗೆ ಜಗತ್ಸಮೂಹವಿರುವಂತೆಯೆಂದು ನೀನು ಹೇಳಿದುದು ಹೇಗೆ? ॥೨೫॥

ವತ್ಸೆ! ಆ ಚಿತ್ತಿನಲ್ಲಿ ಪ್ರತಿಪರಮಾಣುವಿನಲ್ಲಿಯೂ ಹೀಗೆಯೇ ಒಳಗೊಳಗೆ ಜಗತ್ತುಗಳಿದ್ದೇಯಿರುವುವು. ಈ ವಿಷಯದಲ್ಲಿ ಈರೀತಿಯಾಗಿ ಶಂಕೆಪಡುವುದೇನು? ॥೨೬॥

ಹೀಗೆ ಶ್ರೀ ಸರಸ್ವತಿಹೇಳಿದುದನ್ನು ಕೇಳಿ, ಲೀಲೆಯು ಈಗ ಮತ್ತೊಂದುವಿಧವಾಗಿ ಶಂಕೆಪಟ್ಟು ಪ್ರಶ್ನೆಮಾಡುವಳು:—

ಪರಮೇಶ್ವರಿ! ನೀನು ಹೇಳಿದ ಆ ಬ್ರಾಹ್ಮಣನು ಇಂದಿಗೆಂಟನೆಯ ದಿನದಲ್ಲಿ ಮೃತನಾದನಷ್ಟೆ! ನಮಗೆ ಈಗ ಅನೇಕವರ್ಷಗಳು ಕಳೆದುಹೋಗಿವೆ. ಅಂಬ! ಇದು ಹೇಗೆ ಸರಿಯಾಗುವುದು? ॥೨೭॥

ಇದಕ್ಕೆ ಶ್ರೀ ಸರಸ್ವತಿಯುತ್ತರಹೇಳುವಳು:—.

ಎಲೌ! ಲೀಲೆ! ನಾನು ಹಿಂದೆ ಹೇಳಿದಂತೆ ಆ ಸ್ಥಳಕ್ಕೂ ಈ ಸ್ಥಳಕ್ಕೂ ಮಧ್ಯದಲ್ಲಿ

ಯಥೈತತ್ ಪ್ರತಿಭಾಮಾತ್ರಂ ಜಗತ್ಸರ್ಗಾವಭಾಸನಮ್ |
ತಥೈತತ್ ಪ್ರತಿಭಾಮಾತ್ರಂ ಕ್ಷಣಕಲ್ಪಾವಭಾಸನಮ್ ‖೧೯‖
ಕ್ಷಣಕಲ್ಪಂ ಜಗತ್ ಸರ್ವಂ ತ್ವತ್ತಾಮತ್ತಾತ್ಮಜನ್ಮನಾಮ್ |
ಯಥಾವತ್ ಪ್ರತಿಭಾಸಸ್ಯ ವಕ್ಷ್ಯೇ ಕ್ರಮಮಿಮಂ ಶೃಣು ‖೨೦‖
ಅನುಭೂಯ ಕ್ಷಣಂ ಜೀವೋ ಮಿಥ್ಯಾಮರಣಮೂರ್ಛನಮ್ |
ವಿಸ್ಮೃತ್ಯ ಪ್ರಾಕ್ತನಂ ಭಾವಂ ಅನ್ಯಂ ಪಶ್ಯತಿ ಸುವ್ರತೇ ‖೨೧‖
ತದೇವೋನ್ಮೇಷಮಾತ್ರೇಣ ವ್ಯೋಮ್ನ್ಯೇವ ವ್ಯೋಮರೂಪ್ಯಪಿ |
ಆಧೇಯೋಯಮಿಹಾಧಾರೇ ಸ್ಥಿತೋಹಮಿತಿ ಚೇತತಿ ‖೨೨‖
ಹಸ್ತಪಾದಾದಿಮಾನ್ ದೇಹೋ ಮಮಾಯಮಿತಿ ಪಶ್ಯತಿ |
ಯದೇವ ಚೇತತಿ ವಪುಃ ತದೇವೇದಂ ಸ ಪಶ್ಯತಿ ‖೨೩‖
ಏತಸ್ಯಾಹಂ ಪಿತುಃ ಪುತ್ರೋ ವರ್ಷಾಣ್ಯೇತಾನಿ ಸನ್ತಿ ಮೇ |

ಅವಕಾಶವು ಹೇಗೆ ಹೆಚ್ಚಾಗಿಲ್ಲವೋ, ಕಾಲದ ವಿಷಯದಲ್ಲಿಯೂ ಹಾಗೆಯೇ ಹೆಚವ ಕಾಶವಿಲ್ಲವೇಯಿಲ್ಲವೆಂದು ತಿಳಿಯಬೇಕು. ಈ ವಿಷಯದಲ್ಲಿ ನಾನು ಯುಕ್ತಿಯುಕ್ತವಾಗಿ ಹೇಳುವುದನ್ನು ಕೇಳು ‖೧೮‖

ಈ ತ್ರಿಜಗತ್ಸೃಷ್ಟಿ ಕಾಣುವುದು—ಹೇಗೆ ನಮ್ಮ ಪ್ರತಿಭಾಸಮಾತ್ರವಾಗಿರುವುದೋ, ಹಾಗೆ ಕ್ಷಣ ಕಲ್ಪ ಇತ್ಯಾದಿಯಾದ ಈ ಜ್ಞಾನವೂ ನಮ್ಮ ಪ್ರತಿಭಾಸಮಾತ್ರವೇ ಆಗಿರುವುದು ‖೧೯‖

ಕ್ಷಣ ಕಲ್ಪ ಮುಂತಾದ ಪ್ರಪಂಚವೆಲ್ಲವೂ, ನೀನು ನಾನು— ಇತ್ಯಾದಿರೂಪವಾಗಿ ಜನ್ಮಭ್ರಮೆಯುಳ್ಳವರಿಗೆ ಪ್ರತಿಭಾಸವಾಗುವುದಲ್ಲದೆ, ಇತರರಿಗಾಗುವುದಿಲ್ಲ. ಆದುಕಾರಣ, ಆ ಪ್ರತಿಭಾಸದ ಪ್ರಕ್ರಿಯೆಯನ್ನು ಈಗ ನಿನಗೆ ಹೇಳುವೆನು, ಕೇಳು ‖೨೦‖

ಎಲೌ ನಿಯಮಶೀಲಳೆ! ಈ ಜೀವನು, ಒಂದು ಕ್ಷಣಕಾಲ ಮಿಥ್ಯಾರೂಪವಾದ ಮರಣವೆಂಬ ಮೂರ್ಛೆಯನ್ನನುಭವಿಸಿ, ಬಳಿಕ ತನ್ನ ಪೂರ್ವದ ಸ್ಥಿತಿಯನ್ನು ಮರೆತುಬಿಟ್ಟು, ಮತ್ತೊಂದುಸ್ಥಿತಿಯನ್ನು ನೋಡುವನು (ಭಾವನೆಮಾಡುವನು) ‖೨೧‖

ಈ ವಿಧವಾದ ಭಾವನೆಯಿಂದಲೇ, ಸ್ವಯಂ ಆಕಾಶರೂಪನಾಗಿದ್ದರೂ ಒಂದು ನಿಮಿಷ ಮಾತ್ರದಿಂದ ಆಕಾಶದಲ್ಲಿಯೇ—ತಾನು ಆಧೇಯನು; ಈ ಆಧಾರದ ಮೇಲಿರುವೆನು.— ಎಂದು ಜ್ಞಾನವುಳ್ಳವನಾಗುವನು ‖೨೨‖

ಆಮೇಲೆ—ಇದು ನನ್ನ ಹಸ್ತಪಾದಾದಿಯುಕ್ತವಾದ ದೇಹವು—ಎಂದು ಭಾವನೆಯುಳ್ಳವನಾಗುವನು; ಆಗ, ಇವನು ಯಾವವಿಧವಾದ ದೇಹವನ್ನು ಭಾವಿಸುವನೋ, ಅಂತಹ ದೇಹವನ್ನೇ ಕಾಣುವನು ‖೨೩‖

ಅನಂತರ—ನಾನು ಈ ತಂದೆಯ ಮಗನು; ನನಗೆ ಇಷ್ಟುವರ್ಷಗಳಾದುವು; ಇವರು ನನ್ನ ರಮ್ಯರಾದ ಬಂಧುಗಳು; ಇದು ನನ್ನ ಸುಂದರವಾದ ಮಂದಿರವು; ಈಗ ನಾನು ಹುಟ್ಟಿ ಬಾಲಕನಾಗಿರುವೆನು; ಈಗ ಬೆಳೆದಿರುವೆನು; ಈಗ ನಾನು ಈರೀತಿಯಾಗಿರುವೆನು; ನನ್ನ ಈ ಬಂಧುಗಳೆಲ್ಲರೂ ಪೂರ್ವದಂತೆಯೇ ಆಚರಿಸುತಿರುವರು.— ಇತ್ಯಾದಿವಿಧವಾದ ಭಾವನೆಗಳೆಲ್ಲವೂ ಉಂಟಾಗುವುವು. ಆದರೆ, ಇವುಗಳೆಲ್ಲವೂ—ಚಿತ್ತಕ್ಕೂ ಆತ್ಮನಿಗೂ ದೃಢ

ಇಮೇ ಮೇ ಬಾನ್ಧವಾರವ್ಯಾಃ ಮಮೇದಂ ರಮ್ಯಮಾಸ್ಪದಮ್ ‖೩೪‖
ಜಾತೋಽಹಮಭವಂ ಬಾಲೋ ವೃದ್ಧಿಂ ಯಾತೋಽಹಮೀದೃಶಃ ।
ಬಾನ್ಧವಾಶ್ಚಾಸ್ಯ ಮೇ ಸರ್ವೇ ತಥೈವ ವಿಚರನ್ತ್ಯಮೀ ।
ಚಿತ್ತಾಕಾಶಘನೈಕತ್ವಾತ್ ಸ್ವೇಽಪ್ಯನ್ಯೇಽಪಿ ಭವನ್ತಿ ತೇ ‖೩೫‖
ಏವಂ ನಾಮೋದಿತೇಽಪ್ಯಸ್ಯ ಚಿತ್ತೇಽಸಂಸಾರಖಣ್ಡಕೇ ।
ನ ಕಿಂಚಿದಪ್ಯಭ್ಯುದಿತಂ ಸ್ಥಿತಂ ವ್ಯೋಮೈವ ನಿರ್ಮಲಮ್ ‖೩೬‖
ಸ್ವಪ್ನೇ ದ್ರಷ್ಟರಿ ಯದ್ವಚ್ಚಿತ್ ತದ್ವದ್ದೃಶ್ಯೇ ಚಿದೇವ ಸಾ।
ಸರ್ವಗೈಕತಯಾ ಯಸ್ಮಾತ್ ಸಾ ಸ್ವಪ್ನೇ ದೃಷ್ಟದರ್ಶನಾ ‖೩೭‖
ಯಥಾ ಸ್ವಪ್ನೇ ತಥೋದೇತಿ ಪರಲೋಕದೃಗಾದಿಭಿಃ ।
ಪರಲೋಕೇ ಯಥೋದೇತಿ ತಥೈವೇಹಾಭ್ಯುದೇತಿ ಸಾ ‖೩೮‖
ತತ್ ಸ್ವಪ್ನಪರಲೋಕೇಹಲೋಕಾನಾಮಸತಾಂ ಸತಾಮ್ ।
ನ ಮನಾಗಪಿ ಭೇದೋಽಸ್ತಿ ವೀಚೀನಾಮಿವ ವಾರಿಣಿ ‖೩೯‖
ಅತೋಽಜಾತಮಿದಂ ವಿಶ್ವಂ ಅಜಾತತ್ವಾದನಾಶಿ ಚ ।

ತರವಾಗಿ ಐಕ್ಯವನ್ನು ಆರೋಪಿಸಿಕೊಂಡಿರುವುದರಿಂದುಂಟಾಗುವುವು. ವಸ್ತುತಃ ಇವುಗಳು ಭಾವನಾನುಗುಣವಾಗಿ ಸ್ವಕೀಯಗಳಾಗಿಯೂ ಪರಕೀಯಗಳಾಗಿಯೂ ಆಗುವುವು ‖೩೪—೩೫‖

ಈರೀತಿಯಾಗಿ ಇವನ ಚಿತ್ತದಲ್ಲಿ ಸಂಸಾರವಿಭಾಗವುತ್ಪನ್ನವಾದರೂ, ವಸ್ತುತಃ ಯಾವುದೂ ಉತ್ಪನ್ನವಾಗಿಲ್ಲ; ಕೇವಲವಾಗಿ ನಿರ್ಮಲವಾದ ಆಕಾಶಮಾತ್ರವೇ ಇರುವುದು ‖೩೬‖

ಇದಕ್ಕೆ ಕಾರಣವೇನೆಂದರೆ:—ಸ್ವಪ್ನದಲ್ಲಿ ನಾನಾವಿಧವಾದ ಪದಾರ್ಥಗಳನ್ನು ನೋಡಿದ ನಮ್ಮ ಜ್ಞಾನವು, ಸ್ವಪ್ನಕಾಲದಲ್ಲಿ ದರ್ಶನಮಾಡತಕ್ಕವನಿಗೆ ಹೇಗೆ ಸರ್ವತ್ರ ವ್ಯಾಪಿಸಿದ್ದರೂ ವಸ್ತುತಃ ಒಂದೇಆಗಿ ನಿಲ್ಲುವುದೋ, ಹಾಗೆಯೇ ಆ ಜ್ಞಾನವೇ ಈ ದೃಶ್ಯಪ್ರಪಂಚದಲ್ಲಿಯೂ ನಾನಾನಾವಿಧವಾದ ವಿಷಯಗಳನ್ನು ಹೊಂದುವಂತಿದ್ದರೂ-ವಸ್ತುತಃ—ಏಕವಿಧವಾಗಿಯೇ ಕೊನೆಗೆ ನಿಲ್ಲುವುದೆಂದು ತಿಳಿಯಬೇಕು ‖೩೭‖

ಈರೀತಿಯಾಗಿ, ಸ್ವಪ್ನದಲ್ಲಿ ಹೇಗೋ— ಹಾಗೆಯೇ ಪರಲೋಕದರ್ಶನಮುಂತಾದುವುಗಳಿಂದಲೂ ಒಂದುವಿಧವಾದ ಭ್ರಾಂತಿಯುಂಟಾಗುವುದು; ಅದು ಪರಲೋಕದಲ್ಲಿ ಹೇಗೆ ಹುಟ್ಟುವುದೋ, ಇಲ್ಲಿಯೂ ಹಾಗೆಯೇ ಹುಟ್ಟುವುದು ‖೩೮‖

ಅದುಕಾರಣ, ನೀರಿನಲ್ಲಿ ನಾನಾವಿಧವಾದ ಅಲೆಗಳಿಗೆ ಭೇದವಿಲ್ಲದಿರುವಂತೆ, ಸ್ವಪ್ನ ಪರಲೋಕ ಇಹಲೋಕ—ಇವುಗಳಿಗೆ ಸ್ವಲ್ಪವೂ ಭೇದವಿಲ್ಲ. ಇವು ವಸ್ತುತಃ ಅಸತ್ತಾಗಿದ್ದರೂ ಭ್ರಾಂತಿಯಿಂದ ಸತ್ಯವೆಂದು ಕಾಣುವುವು ‖೩೯‖

ಅದುಕಾರಣ, ಈ ಪ್ರಪಂಚವೆಂಬುದು ಹುಟ್ಟಿಯೇ ಇಲ್ಲ; ಹುಟ್ಟದಿರುವುದರಿಂದ ನಾಶವುಳುದೂ ಅಲ್ಲ; ಇದು ಕೇವಲ ಆತ್ಮಸ್ವರೂಪವಾಗಿರುವುದರಿಂದ ತದ್ಭಿನ್ನವಾಗಿ ಇಲ್ಲವೇ

ಸ್ವರೂಪತ್ವಾತ್ ತು ನಾಸ್ತ್ಯೇವ ಯಚ್ಛ ಭಾತಿ ಚಿದೇವ ಸಾ ||೪೦||
ತಥೈವ ಚೇತ್ಯನಿರ್ಹೀನಾ ಪರಮವ್ಯೋಮರೂಪಿಣೀ |
ಸಚೇತ್ಯಾಪಿ ತಥೈವೈಷಾ ಪರಮವ್ಯೋಮರೂಪಿಣೀ ||೪೧||
ತಸ್ಮಾಚ್ಚೇತ್ಯಮತೋ ನಾನ್ಯತ್ ವೀಚಿತ್ವಾದೀವ ವಾರಿತಃ|
ವೀಚಿತ್ವಂ ಚ ರಸೇ ನಾಸ್ತಿ ಶಶಶೃಙ್ಗವದೇವ ಹಿ ||೪೨||
ಸೈವ ಚೇತ್ಯಮಿವಾಸನ್ನಾ ಸ್ವಭಾವಾದಚ್ಯುತಾಪ್ಯಲಮ್ |
ತಸ್ಮಾನ್ನಾಸ್ತ್ಯೇವ ದೃಶ್ಯೋऽರ್ಥಃ ಕುತೋऽತೋ ದ್ರಷ್ಟೃದೃಶ್ಯಧೀಃ ||೪೩||
ನಿಮಿಷೇಣೈವ ಜೀವಸ್ಯ ಮೃತಿಮೋಹಾದನನ್ತರಮ್ |
ತ್ರಿಜಗದ್ದೃಶ್ಯಸರ್ಗಶ್ರೀಃ ಪ್ರತಿಭಾಮುಪಗಚ್ಛತಿ ||೪೪||
ಯಥಾದೇಶಂ ಯಥಾಕಾಲಂ ಯಥಾರಮ್ಭಂ ಯಥಾಕ್ರಮಮ್ |
ಯಥೋತ್ಪಾದಂ ಯಥಾಮಾತೃ ಯಥಾಪಿತೃ ಯಥಾರಸಮ್ ||೪೫||

ಯಿಲ್ಲ. ಆದರೆ, ಪ್ರತ್ಯಕ್ಷಾದಿಪ್ರಮಾಣಗಳಿಂದ ಯಾವುದು ಭಾನ (ಕಾಣಿಸಿಕೊಳ್ಳುವುದು) ಹೊಂದುವುದೋ, ಅದು ಆ ಚಿತ್ತೇ ಆಗಿರುವುದು ||೪೦||

ಹೀಗೆ ಆ ಚಿತ್ತು ಚೇತ್ಯ (ಚೇತನೀಯ = ಜಗತ್ತು) ವಿಹೀನವಾಗಿ ಪರಮಾಕಾಶರೂಪವಾಗಿರುವುದು. ಇದರಲ್ಲಿ ಚೇತ್ಯವನ್ನು ಆರೋಪಿಸಿದರೂ, ಇದು ಮಾತ್ರ ಕೇವಲ ಪರಮಾಕಾಶರೂಪವಾಗಿಯೇ ಇರುವುದು ||೪೧||

ಆದುಕಾರಣ, ವೀಚಿತ್ವ (ಅಲೆಯಾಗಿರುವಿಕೆ) ಮುಂತಾದುದು ನೀರಿಗಿಂತ ಬೇರೆಯಾಗಿಲ್ಲದಿರುವಂತೆ, ಚೇತ್ಯವೆಂಬುದು ಈ ಚಿತ್ತಿಗಿಂತ ಪೃಥಕ್ಕಾಗಿಲ್ಲ. ನೀರಿನಲ್ಲಿ ವೀಚಿತ್ವವಿಲ್ಲವೋ–ಎಂದರೆ, ಅದು ಸುತರಾಂ ಇಲ್ಲ. ಜಲಕ್ಕೆ ಮುಖ್ಯಸಾರವಾದುದು ರಸತನ್ಮಾತ್ರವೇ ಅಲ್ಲವೆ! ಅದರಲ್ಲಿ ವೀಚಿತ್ವವಿಲ್ಲವೇ ಇಲ್ಲ. ಆ ರಸತನ್ಮಾತ್ರವನ್ನು ತಿಳಿಯತಕ್ಕಶಕ್ತಿಯುಳ್ಳದು ರಸನೇಂದ್ರಿಯವು. ಆಯಿಂದ್ರಿಯಕ್ಕೆ ವೀಚಿತ್ವವು ತಿಳಿಯುಬರುವುದಿಲ್ಲ. 'ಕಣ್ಣಿನಿಂದನೋಡಿದಾಗ ವೀಚಿತ್ವವಿರುವಂತೆ ಕಾಣುವುದಲ್ಲವೆ!' ಎಂದರೆ,—ಅದು ಜಲದ ತತ್ವವಲ್ಲ; ಅದು ಇತರಭೂತಸಂಪರ್ಕರೂಪವಾದ ಉಪಾಧಿಯಿಂದುಂಟಾದುದು. ಅಂತು ಜಲದಲ್ಲಿ ವೀಚಿತ್ವವೆಂಬುದು ಶಶಶೃಂಗದಂತೆಯೇ ಕೇವಲ ಮಿಥ್ಯಾಭೂತವಾಗುವುದಲ್ಲವೆ! ||೪೨||

ಹೀಗೆ ಆ ಚಿತ್ತೇ, ಸ್ವಸ್ವರೂಪವನ್ನು ಸಂಪೂರ್ಣವಾಗಿ ಬಿಡದಿದ್ದರೂ, ಚೇತ್ಯದಶೆಯನ್ನು ಹೊಂದಿದಂತೆ ಕಾಣುವುದು. ಆದುಕಾರಣ, ಈ ದೃಶ್ಯವಾದ ಪ್ರಪಂಚವೆಂಬುದಿಲ್ಲವೇಯಿಲ್ಲ; ಹೀಗಾದಬಳಿಕ, ದ್ರಷ್ಟೃದೃಶ್ಯಗಳೆಂಬ ಜ್ಞಾನವೆಲ್ಲಿಯದು? ||೪೩||

ಈ ಜೀವನಿಗೆ, ಮೃತಿಯೆಂಬ ಮೋಹವನ್ನನುಭವಿಸಿದಬಳಿಕ, ಒಂದು ನಿಮಿಷದಲ್ಲಿಯೇ, ಲೋಕತ್ರಯರೂಪವಾದ ಈ ದೃಶ್ಯದ ಸೃಷ್ಟಿಸಂಪತ್ತು ವಾಸನಾಬಲದಿಂದ ಮತ್ತೆ ಪ್ರಕಾಶ (ಭಾವನೆ) ಹೊಂದುವುದು. ಈ ಭಾವನೆಯು, ಪೂರ್ವವಾಸನಾನುಗುಣವಾಗಿ, ಆಗ ಇದ್ದಂತೆಯೇ ಆಯಾಪ್ರದೇಶದಲ್ಲಿದ್ದಂತೆಯೂ–ಆಯಾಕಾಲಗಳಲ್ಲಿದ್ದಂತೆಯೂ-ಆಯಾ ಕಾರ್ಯಗಳನ್ನು ಆಯಾರೀತಿಯಾಗಿ ಮಾಡುತ್ತಿದ್ದಂತೆಯೂ-ಆಯಾಜಾತಿಗಳಲ್ಲಿ ಆಯಾ ತಾಯಿತಂದೆಗಳಲ್ಲಿಯೇ ಹುಟ್ಟಿದಂತೆಯೂ—ಆಯಾ ಮಕ್ಕಳೂ ಅದೇ ವಯಸ್ಸೂ ಅದೇ ಜ್ಞಾನವೂ

ಯಥಾವಯೋ ಯಥಾಸಂವಿತ್ ಯಥಾಸ್ಥಾನಂ ಯಥೇಹಿತಮ್ ।
ಯಥಾಬನ್ಧು ಯಥಾಭೃತ್ಯಂ ಯಥೇಹಾಸ್ತಮಯೋದಯಮ್ ॥೪೬॥
ಅಜಾತಮೇವ ಜಾತೋಽಹಂ ಇತಿ ಚೇತತಿ ಚಿದ್ವಪುಃ ।
ದೇಶಕಾಲಕ್ರಿಯಾದ್ರವ್ಯಮನೋಬುದ್ಧೀನ್ದ್ರಿಯಾದಿ ಚ ॥೪೭॥
ಝುಡಿತ್ಯೇವ ಮೃತೇರನ್ತೇ ವಪುಃ ಪಶ್ಯತಿ ಯೌವನೇ ।
ಏಷಾ ಮಾತಾ ಪಿತಾ ಹ್ಯೇಷಃ ಬಾಲೋಽಭೂವಮಹಂ ತ್ವಿತಿ ॥೪೮॥
ನಾನುಭೂತೋಽನುಭೂತೋ ವಾ ಯಃ ಸ್ಯಾತ್ ಸ್ಮೃತಿಮಯಃ ಕ್ರಮಃ।
ಪಶ್ಚಾದುದೇತ್ಯಸೌ ತಸ್ಯ ಪುಷ್ಪಸ್ಯೇವ ಫಲೋದಯಃ ॥೪೯॥
ನಿಮಿಷೇಣೈವ ಮೇ ಕಲ್ಪೋ ಗತಇತ್ಯನುಭೂಯತೇ ।
ರಾತ್ರಿರ್ದ್ವಾದಶವರ್ಷಾಣಿ ಹರಿಶ್ಚನ್ದ್ರೇ ತಥಾ ಹ್ಯಭೂತ್ ॥೫೦॥
ಕಾನ್ತಾವಿರಹಿಣಾಮೇಕಂ ವಾಸರಂ ವತ್ಸರಾಯತೇ ।
ಮೃತೋ ಜಾತೋಽಹಮನ್ಯೋ ಮೇ ಪಿತೇತಿ ಸ್ವಪ್ನತಾಸ್ವಿವ॥೫೧॥
ಅಭುಕ್ತಸ್ಯೈವ ಭೋಗಸ್ಯ ಭುಕ್ತಧೀರುಪಜಾಯತೇ ।

ಅದೇ ಸ್ಥಿತಿಯೂ ಅದೇ ವ್ಯಾಪಾರವೂ ಆ ಬಂಧುಗಳೂ ಆ ಭೃತ್ಯರೂ ಇದ್ದಂತೆಯೂ—ಕೊನೆಗೆ ಅದೇರೀತಿಯಾಗಿ ಉದಯಾಸ್ತಮಯಗಳಿರುವಂತೆಯೂ ಉಂಟಾಗುವುದು. ಬಳಿಕ ಚಿನ್ಮಾತ್ರಶರೀರನಾಗಿರುವ ಜೀವನು, ತಾನು ಹುಟ್ಟದೆಯೇ ಇದ್ದರೂ, ಈ ವಿಧವಾದ ಭಾವನೆಯಿಂದ ತಾನು ಹುಟ್ಟಿರುವೆನೆಂದು ತಿಳಿದು, ದೇಶ ಕಾಲ ಕ್ರಿಯಾ ದ್ರವ್ಯ ಮನಸ್ಸು ಬುದ್ಧಿ ಇಂದ್ರಿಯ – ಇತ್ಯಾದಿಗಳೆಲ್ಲವೂ ತನಗಿರುವುವೆಂದು ತಿಳಿದುಕೊಳ್ಳುವನು ॥೪೪—೪೭॥

ಈ ಜೀವನು, ಮರಣಾನಂತರದಲ್ಲಿ ಒಂದು ಕ್ಷಣದೊಳಗಾಗಿಯೇ, ತನ್ನ ದೇಹವು ಯೌವನದಶೆಯಲ್ಲಿರುವುದನ್ನು ನೋಡುವನು. ಆಗ—ಇವಳು ನನ್ನ ತಾಯಿ, ಇವನು ನನ್ನ ತಂದೆ, ನಾನು ಇದುವರೆಗೆ ಬಾಲಕನಾಗಿದ್ದೆನು—ಎಂದು ತಿಳಿದುಕೊಳ್ಳುವನು. ಆದರೆ, ಇದೆಲ್ಲವನ್ನೂ ಅವನನುಭವಿಸಿರಬೇಕೆಂಬ ನಿಯಮವಿಲ್ಲ. ಅನುಭವಿಸಿದ್ದರೂ ಅನುಭವಿಸದಿದ್ದರೂ ಇವನಿಗೆ ಈರೀತಿಯಾದ ವಾಸನಾರೂಪವಾಗಿರುವ ಪ್ರಕ್ರಿಯೆ ಯಾವುದಿರುವುದೋ, ಅದೇ ಅನಂತರದಲ್ಲಿ ಇವನಿಗೆ—ಹೂವು ಬಿಟ್ಟನಂತರದಲ್ಲಿ ಹಣ್ಣು ಬಿಡುವಂತೆ-ಉತ್ಪನ್ನವಾಗುವುದು ॥೪೮—೪೯॥

ಮತ್ತು, ಅವನವನ ಭಾವನಾನುಗುಣವಾಗಿ ಕಾಲವೂ ಹ್ರಸ್ವತ್ವ ದೀರ್ಘತ್ವಗಳನ್ನು ಹೊಂದುವುದು. ಒಂದು ನಿಮಿಷದಲ್ಲಿಯೇ-ನನಗೊಂದು ಕಲ್ಪವು ಕಳೆಯಿತೆಂದು-ಒಬ್ಬನನುಭವಿಸುವನು. ಹರಿಶ್ಚಂದ್ರನಿಗೆ ಒಂದು ರಾತ್ರಿಯೇ ಹನ್ನೆರಡುವರ್ಷಗಳಾಗಲಿಲ್ಲವೆ! ಕಾಂತಾವಿಯುಕ್ತರಾದವರಿಗೆ ಒಂದು ರಾತ್ರಿಯೊಂದು ವರ್ಷವಾಗುವುದಿಲ್ಲವೆ! ಆದುಕಾರಣ, –ನಾನು ಸತ್ತೆನು, ಈಗ ಮತ್ತೊಬ್ಬನಾಗಿ ಹುಟ್ಟಿರುವೆನು, ಇವನು ನನ್ನ ತಂದೆಯು– ಇತ್ಯಾದಿ ಜ್ಞಾನವೆಲ್ಲವೂ ಸ್ವಪ್ನಕಾಲಿಕಜ್ಞಾನಸದೃಶವೆಂದು ತಿಳಿಯಬೇಕು ॥೫೦—೫೧॥

ತಾವು ಯಾವುದನ್ನನುಭವಿಸಿಲ್ಲವೋ-ಅದನ್ನನುಭವಿಸಿರುವೆನೆಂಬ ಜ್ಞಾನವೂ, ಯಾವ

ಭುಕ್ತೇಽಪ್ಯಭುಕ್ತಧೀರ್ದೃಷ್ಟಂ ಇತ್ಯಲಙ್ಕಿತವಾದಿಷು ॥೫೨॥
ಶೂನ್ಯಮಾಕೀರ್ಣತಾಮೇತಿ ತುಲ್ಯಂ ವ್ಯಸನಮುತ್ಸವೈಃ ।
ವಿಪ್ರಲಮ್ಭೋಽಪಿ ಲಾಭಶ್ಚ ಮದಸ್ವಪ್ನಾದಿಸಂವಿದಿ ॥೫೩॥
ತೈಕ್ಷ್ಣ್ಯಂ ಯಥಾ ಮರಿಚಬೀಜಕಣೇ ಸ್ಥಿತಂ ಸ್ವಂ
ಸ್ತಮ್ಭೇಷು ಚಾರಚಿತಪುತ್ರಕಜಾಲಮನ್ತಃ ।
ದೃಶ್ಯಂ ತ್ವನನ್ಯದಿದಮೇವಮಜೇಽಸ್ತಿ ಶಾನ್ತಂ
ತಸ್ಯಾಸ್ತಿ ಬನ್ಧನವಿಮೋಕ್ಷದೃಶಃ ಕುತಃ ಕಾಃ ॥೫೪॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಪರಮಾರ್ಥಪ್ರತಿಪಾದನಂ
ನಾಮ ವಿಂಶತಿತಮಃ ಸರ್ಗಃ.

ದನುಭವಿಸಲ್ಪಟ್ಟದೆಯೋ—ಅದನ್ನನುಭವಿಸಿಲ್ಲವೆಂಬ ಜ್ಞಾನವೂ ಕೂಡ, ಕಾಣದಿರುವುದನ್ನು ಹೇಳುವ ಮೂಢರಲ್ಲಿರುವುದೆಂಬುದು ನಮ್ಮನುಭವಕ್ಕೆ ಬಂದಿರುವುದು ॥೫೨॥

ಈ ಅಜ್ಞಾನದಿಂದ—ಅಸತ್ತು ಭಾಸಿಸುವುದೊಂದೇ ಅಲ್ಲ; ಸತ್ತಿಗೆ ವಿರೋಧವಾಗಿಯೂ ಭಾಸವುಂಟಾಗುವುದು. ಮದ ಸ್ವಪ್ನಾದಿ ಕಾಲಿಕವಾದ ಜ್ಞಾನದಲ್ಲಿ ತೋರುವಂತೆ, ಯಾವುದು ಶೂನ್ಯವೋ-ಅದು ನಿಬಿಡವಾಗಿಯೂ, ಯಾವುದು ವ್ಯಸನವೋ-ಅದು ಉತ್ಸವಕ್ಕೆ ಸಮವಾಗಿಯೂ, ಮೊದಲಿದ್ದುದೂ ಹೋಗಿಬಿಟ್ಟು ಯಾವುದು ಮೋಸವಾಗುವುದೋ- ಅದು ಲಾಭವಾಗಿಯೂ ತೋರುವುದು ॥೫೩॥

ಮುಖ್ಯವೇನೆಂದರೆ:—ಮೆಣಸಿನಕಾಯಿಯ ಬೀಜದೊಳಗಿರುವ ಅದರ ಕಾರದಂತೆಯೂ ಕಂಭಗಳಲ್ಲಿ ಕೊರೆಯದಿರುವಾಗ ಅಪ್ರಕಾಶವಾಗಿರುವ ಬೊಂಬೆಗಳಂತೆಯೂ, ಈ ದೃಶ್ಯವು ಜನ್ಮರಹಿತನಾದ ಬ್ರಹ್ಮನಲ್ಲಿ ಅಡಗಿಕೊಂಡು ಅವನಿಗಿಂತ ಪೃಥಕ್ಕಲ್ಲವಾಗಿರುವುದು. ಇದಕ್ಕೆ ಬಂಧಮೋಕ್ಷಗಳೆಂಬ ಜ್ಞಾನಗಳೆಲ್ಲಿಯವು? ಅವು ಯಾವುವು? ॥೫೪॥

ಇದು ಉತ್ಪತ್ತಿಪ್ರಕರಣದೊಳಗೆ ಲೀಲೋಪಾಖ್ಯಾನದಲ್ಲಿ ಪರಮಾರ್ಥಪ್ರತಿ
ಪಾದನವೆಂಬ ಇಪ್ಪತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕವಿಂಶಃ ಸರ್ಗಃ.

ಶ್ರೀದೇವ್ಯುವಾಚ.

ಪ್ರತಿಭಾನ್ತಿ ಜಗನ್ತ್ಯಾಶು ಮೃತಿಮೋಹಾದನನ್ತರಮ್ ।
ಜೀವಸ್ಯೋನ್ಮೀಲನಾದಕ್ಷ್ಣೋಃ ರೂಪಾಣೀವಾಖಿಲಾನ್ಯಲಮ್ ॥೧॥
ದಿಕ್ಕಾಲಕಲನಾಕಾಶ ಧರ್ಮಕರ್ಮಮಯಾನಿ ಚ ।
ಪರಿಸ್ಫುರನ್ತ್ಯನನ್ತಾನಿ ಕಲ್ಪಾನ್ತಸ್ಥೈರ್ಯವನ್ತಿ ಚ ॥೨॥
ನಾನುಭೂತಂ ನ ಯದ್ದೃಷ್ಟಂ ತನ್ಮಯಾಕೃತಮಿತ್ಯಪಿ ॥
ತತ್ಕ್ಷಣಾತ್ ಸ್ಮೃತಿತಾಮೇತಿ ಸ್ವಪ್ನೇ ಸ್ವಮರಣಂ ಯಥಾ ॥೩॥

ಉತ್ಪತ್ತಿಪ್ರಕರಣದಲ್ಲಿ ಇಪ್ಪತ್ತೊಂದನೆಯ ಸರ್ಗವು.

ಸ್ಥೂಲಂ ವಿಚಾರತಃ ಸೂಕ್ಷ್ಮಂ ತದವಿದ್ಯಾ ವಿಚಾರತಃ ।
ಸಾಪಿ ಚಿನ್ಮಾತ್ರಮೇವೇತಿ ದೇವ್ಯಾ ಲೀಲಾತ್ರ ಬೋಧ್ಯತೇ ॥

ಸ್ಥೂಲದೇಹವು ವಿಚಾರಮಾಡಿದರೆ ಸೂಕ್ಷ್ಮದೇಹವೆಂದು ಗೊತ್ತಾಗುವುದೆಂದೂ, ಸೂಕ್ಷ್ಮದೇಹವು ವಿಚಾರಮಾಡಿದಾಗ ಅವಿದ್ಯೆಯೆಂದು ಗೊತ್ತಾಗುವುದೆಂದೂ, ಆ ಅವಿದ್ಯೆಯು ವಿಚಾರಮಾಡಿದರೆ ಕೇವಲ ಚಿನ್ಮಾತ್ರವೇಯೆಂದು ಗೊತ್ತಾಗುವುದೆಂದೂಕೂಡ, ಈ ಸರ್ಗದಲ್ಲಿ ಶ್ರೀ ಸರಸ್ವತಿಯು ಲೀಲೆಯುನ್ನುಪದೇಶಿಸುವಳು ॥

ವಿಶೇಷ ವಿಷಯವನ್ನು ತಿಳಿಯಪಡಿಸುವುದಕ್ಕೋಸ್ಕರ ಪೂರ್ವೋಕ್ತ ವಿಷಯವನ್ನೇ ಮತ್ತೆ ವಿಶದಪಡಿಸುತ ಶ್ರೀ ಸರಸ್ವತಿಯು ಹೇಳುವಳು:—

ಎಲೌ! ಲೀಲೆ! ಮುಚ್ಚಿದ್ದ ಕಣ್ಣನ್ನು ತೆರೆದಕೂಡಲೇ ಸಮಸ್ತವಾದ ರೂಪಗಳೂ ಕಾಣಿಸುವಂತೆ, ಈ ಜೀವನಿಗೆ ಮರಣವೆಂಬ ಮೋಹವನ್ನು ಕಳೆದಕೂಡಲೇ ಸಮಸ್ತ ಜಗತ್ತೂ ಕಾಣುವುದು ॥೧॥

ಈ ಜಗತ್ತೆಂಬುದು, ದಿಕ್ಕು ಕಾಲ ನಾನಾವಿಧವಿಕಲ್ಪ ಆಕಾಶ ಸ್ವರ್ಗಾದಿರೂಪಧರ್ಮಲೋಕ ಭೂವ್ಯಾದಿರೂಪಕರ್ಮಲೋಕ ಕಲ್ಪಾಂತಸ್ಥಿರವಾದ ಪೃಥಿವ್ಯಾದಿಗಳು— ಏತನ್ಮಯವಾಗಿ, ಅನಂತವಾಗಿ ಸ್ಫುರಿಸುವುದು ॥೨॥

ಹಿಂದೆ ಹೇಳಿದ ಸ್ವಪ್ನಾದಿಕಾಲಿಕ ಮಾಯಿಕಸ್ಮೃತಿಗೂ ಪ್ರಸಿದ್ಧಸ್ಮೃತಿಗೂ ವೈಲಕ್ಷಣ್ಯವೇನೆಂದರೆ:—ನಾವು ಯಾವುದನ್ನನುಭವಿಸಿಲ್ಲವೋ, ಯಾವುದನ್ನೆಂದಿಗೂ ನೋಡಿಯೇ ಇಲ್ಲವೋ, ಅದು ಒಂದು ನಿಮಿಷದೊಳಗಾಗಿ ಸ್ವಪ್ನದಲ್ಲಿ ಸ್ಮೃತಿವಿಷಯವಾಗುವುದು. ಇದಕ್ಕೆ ಸ್ವಪ್ನದಲ್ಲಿ ಕಾಣುವ ತನ್ನ ಮರಣವೇ ಉದಾಹರಣೆಯಾಗಿರುವುದು. ಪ್ರಸಿದ್ಧಸ್ಮೃತಿಯಲ್ಲಿ ನಾವು ಹಿಂದೆ ಅನುಭವಿಸಿಯೋ—ನೋಡಿಯೋ—ಇರುವ ವಿಷಯವೇ ವಿಷಯವಾಗುವುದು ॥೩॥

ಭ್ರಾನ್ತಿರೇವಮನನ್ತೇಯಂ ಚಿದ್ವ್ಯೋಮವ್ಯೋಮ್ನಿ ಭಾಸುರಾ।
ಅಪಕುಡ್ಯಾ ಜಗನ್ನಾಮ್ನೀ ನಗರೀ ಕಲ್ಪನಾತ್ಮಿಕಾ ॥೪॥
ಇದಂ ಜಗದಯಂ ಸರ್ಗಃ ಸ್ಮೃತಿರೇವೇತಿ ಜೃಮ್ಭತೇ ।
ದೂರಕಲ್ಪಕ್ಷಣಾಭ್ಯಾಸವಿಪರ್ಯಾಸೈಕರೂಪಿಣೀ ॥೫॥
ನಾನುಭೂತಾನುಭೂತಾ ಚ ಜ್ಞಪ್ತಿರಿತ್ಥಂ ದ್ವಿರೂಪಿಣೀ ।
ಪೂರ್ವಕಾರಣರಿಕ್ತೈವ ಚಿದ್ರೂಪೈವ ಪ್ರವರ್ತತೇ ॥೬॥
ನಾನುಭೂತೇನುಭೂತತ್ವಸಂವಿದನ್ತರುದೇತ್ಯಪಿ ।
ಸ್ವಪ್ನಭ್ರಮಾದಾವನ್ಯಸ್ಮಿನ್ ಪಿತರೀವ ಪಿತುಃ ಸ್ಮೃತಿಃ॥೭॥
ಕದಾಚಿತ್ ಸ್ಮೃತಿತಾಂ ತ್ಯಕ್ತ್ವಾ ಪ್ರತಿಭಾಮಾತ್ರಮೇವ ಸತ್ ।
ಭಾತಿ ಪ್ರಥಮಸರ್ಗೇಷು ರೂಪೇಣ ತದನು ಕ್ರಮಾತ್ ॥೮॥

ಈ ರೀತಿಯಾಗಿ ಜಗತ್ತೆಂಬ ಭ್ರಾಂತಿಯು, ಚಿದಾಕಾಶದ ಆಕಾಶರೂಪವಾದ ಮಾಯೆಯಲ್ಲಿ ಪ್ರಕಾಶಿಸುತಿರುವುದು. ಇದು ಗೋಡೆಯಿಲ್ಲದೆ ಚಿತ್ರಿಸಿರುವ ಪಟ್ಟಣದ ಕಲ್ಪನೆಯಂತಿರುವುದು ॥೪॥

ಈ ಸ್ಮೃತಿಯೇ (ಸ್ಮೃತಿಗೆ ಹೇತುವಾದ ವಾಸನೆಯಂದರ್ಥವು), ಈ ಜಗತ್ತಾಗಿಯೂ ಈ ಸೃಷ್ಟಿಯಾಗಿಯೂ ತೋರುತಿರುವುದು. ಇದು, ಹತ್ತಿರವಿರುವುದರಲ್ಲಿ ದೂರಜ್ಞಾನರೂಪವಾಗಿಯೂ—ಸದ್ಯಃಸ್ಥಿತವಾಗಿರುವುದರಲ್ಲಿ ಕಲ್ಪಜ್ಞಾನರೂಪವಾಗಿಯೂ—ಅತಿದೀರ್ಘಕಾಲಸ್ಥಿತವಾಗಿರುವುದರಲ್ಲಿ ಕ್ಷಣ ಪಕ್ಷ ಇತ್ಯಾದಿ ಜ್ಞಾನರೂಪವಾಗಿಯೂ ಸ್ಫುರಿಸುವುದು ॥೫॥

ಈರೀತಿಯಾಗಿ ಸ್ಮೃತಿಯು ಅನುಭವಶೂನ್ಯವಾಗಿಯೂ ಅನುಭೂತವಾಗಿಯೂ ಎರಡು ವಿಧವಾಗಿರುವುದು. ಇದು ಪೂರ್ವಕಾರಣವಿಹೀನವಾಗಿಯೇ ಕೇವಲ ಜ್ಞಾನರೂಪವಾಗಿಯೇ ಪ್ರವರ್ತಿಸುವುದು ॥೬॥

ಅನುಭವಿಸಲ್ಪಡದಿರುವುದನ್ನು ಅನುಭವಿಸಲ್ಪಟ್ಟಿತೆಂದು ಸ್ಮರಿಸುವುದು ಅಸಂಭವವೆಂದು ಶಂಕಿಸಬಾರದು. ಸ್ವಪ್ನ ಭ್ರಮ ಇತ್ಯಾದಿಗಳಲ್ಲಿ, ಮತ್ತೊಬ್ಬನ ತಂದೆಯನ್ನು ತನ್ನ ತಂದೆಯೆಂಬುದಾಗಿಯೂ ಅಥವಾ ತನಗೇ ಮತ್ತೊಬ್ಬತಂದೆಯಿರುವಂತೆಯೂ ಸ್ಮೃತಿಯುಂಟಾಗುವುದಿಲ್ಲವೆ! ಆ ಸಂದರ್ಭದಲ್ಲಿ, ಮತ್ತೊಬ್ಬನ ತಂದೆಯು ನಮಗೆ ತಂದೆಯಾಗಿರುವನೆ? ಅಥವಾ ನಮಗೆ ಮತ್ತೊಬ್ಬ ತಂದೆಯಿರುವನೆ? ಇವೆರಡನ್ನೂ ನಾವನುಭವಿಸಿರುವೆವೆ? ಆದರೂ ಇದನ್ನನುಭವಿಸಿದಂತೆ ನಾವು ಸ್ಮರಿಸುತ್ತೇವೆಯಲ್ಲವೆ? ಇಂತಹ ಸ್ಥಳದಲ್ಲಿ ಅನುಭವಿಸಲ್ಪಡದಿರುವ ವಿಷಯದಲ್ಲಿಯೂ ಅನುಭವಿಸಲ್ಪಟ್ಟಂತೆ ಸ್ಮೃತಿಯು ಒಳಗೆ ಉತ್ಪನ್ನವಾಗುವುದು ॥೭॥

ಆದರೆ ಈ ಅನಾದಿಯಾದ ಸಂಸಾರದಲ್ಲಿ ಸರ್ವವೂ ಅನುಭೂತವೇ ಆಗಿರುವುದರಿಂದ, ಅನುಭೂತ ಅನನುಭೂತ ಎಂಬ ಭೇದವೇಕೆಂದು ಶಂಕೆಯುಂಟಾಗಬಹುದು. ಚತುರ್ಮುಖಬ್ರಹ್ಮನ ಪ್ರಥಮಸೃಷ್ಟಿಯಲ್ಲಿ, ಈ ಸ್ಮೃತಿತ್ವವನ್ನು ಬಿಟ್ಟುಬಿಟ್ಟು ಕೇವಲ ಅನುಭವಮಾತ್ರರೂಪವಾದುದಾಗಿ ಭಾಸಮಾನವಾಗುವುದು; ಬಳಿಕ ಕ್ರಮವಾಗಿ ಸ್ಮೃತಿರೂಪವಾಗಿ ತೋರುವುದೆಂದು ತಿಳಿಯಬೇಕು ॥೮॥

ದೃಶ್ಯಂ ತ್ರಿಭುವನಾದೀದಂ ಅನುಭೂತಂ ಸ್ಮೃತೌ ಸ್ಥಿತಮ್ ।
ಕೇಷಾಂಚಿತ್ ತನ್ವಿ ಕೇಷಾಂಚಿತ್ ನಾನುಭೂತಂ ಸ್ಮೃತೌ ಸ್ಥಿತಮ್ ‖೯‖
ಪ್ರತಿಭಾಸತಏವೇದಂ ಕೇಷಾಂಚಿತ್ ಸ್ಮರಣಂ ವಿನಾ ।
ಚಿದಣೂನಾಂ ಪ್ರಜೇಶತ್ವಂ ಕಾಕತಾಳೀಯವದ್ಯತಃ ‖೧೦‖
ಅತ್ಯನ್ತವಿಸ್ಮೃತಂ ವಿಶ್ವಂ ಮೋಕ್ಷ ಇತ್ಯಭಿಧೀಯತೇ ।
ಈಪ್ಸಿತಾನೀಪ್ಸಿತೇ ತತ್ರ ನ ಸ್ತಃ ಕಾಚನ ಕಸ್ಯಚಿತ್ ‖೧೧‖
ಅತ್ಯನ್ತಾಭಾವಸಮ್ಪತ್ತಿಂ ವಿನಾಹನ್ತಾಜಗತ್ಸ್ಥಿತೇಃ ।
ಅನುತ್ಪಾದಮಯೀ ಹ್ಯೇಷಾ ನೋದೇತ್ಯೇವ ವಿಮುಕ್ತತಾ ‖೧೨‖
ರಜ್ಜ್ವಾಂ ಸರ್ಪಭ್ರಮಃ ಸರ್ಪಶಬ್ದಾರ್ಥಾಸಮ್ಭವಂ ಸ್ಥಿತಮ್ ।

ಎಲೌ! ಲೀಲೆ! ಅದುಕಾರಣ, ಈ ದೃಶ್ಯವಾದ ಭುವನತ್ರಯ ಮುಂತಾದುದು--ಕೆಲವರಿಗೆ ಮೊದಲು ಅನುಭೂತವಾಗಿ ಸ್ಮೃತಿಯಲ್ಲಿ ನಿಲ್ಲುವುದು ; ಮತ್ತೆ ಕೆಲವರಿಗೆ ಅನುಭವವಿಲ್ಲದೆಯೇ ಸ್ಮೃತಿಯಲ್ಲಿ ನಿಲ್ಲುವುದು ॥೯॥

ಕೆಲವು ಚಿತ್ಪರಮಾಣುಗಳಿಗೆ, ಸ್ಮೃತಿಯೂ ಇಲ್ಲದೆಯೇ ಈ ಜಗತ್ತು ಪ್ರತಿಭಾಸಿಸುವುದು. ಹೇಗೆಂದರೆ:—ಈಗ ಚತುರ್ಮುಖನು ಪ್ರಜೇಶನೆಂಬುದಾಗಿ ಪ್ರಸಿದ್ಧನಷ್ಟೆ! ಇವನು ಆದ್ಯಸೃಷ್ಟಿಕರ್ತನಾದ್ದರಿಂದ ಇವನಿಗೆ ಹಿಂದೆ ಪ್ರಜೇಶತ್ವಾನುಭವವಿಲ್ಲವೇಯಿಲ್ಲ. ಆಗ ಇವನಿಗೆ ಕಾಕತಾಳೀಯ ನ್ಯಾಯದಂತೆ ಆಕಸ್ಮಿಕವಾಗಿ ಪ್ರಜೇಶತ್ವಾನುಭವವುಂಟಾಗುವುದು ॥

ಎಲೌ! ಲೀಲೆ! ಹೀಗೆ ಸ್ಮೃತಿಸ್ವರೂಪವನ್ನು ವಿವರಿಸಿರುವೆನಲ್ಲವೆ! ಈ ಪ್ರಪಂಚವನ್ನು ವಾಸನಾಸಹಿತವಾಗಿ ನಿಶ್ಶೇಷವಾಗಿ ಮರೆತುಬಿಟ್ಟರೆ ಅದೇ ಮೋಕ್ಷವೆನ್ನಲ್ಪಡುವುದು. ಆ ಸ್ಥಿತಿಯಲ್ಲಿ ಯಾರಿಗೂ ಯಾವ ಇಷ್ಟಾನಿಷ್ಟಗಳೂ ಇರುವುದಿಲ್ಲ ॥೧೧॥

ಅಹಂಕಾರ ಜಗತ್ತು ಇವುಗಳ ಸ್ಥಿತಿಯು ಅತ್ಯಂತಾಭಾವವನ್ನು ಹೊಂದದಿದ್ದಪಕ್ಷದಲ್ಲಿ, ಸ್ವತಸ್ಸಿದ್ಧವಾದ ಈ ಮುಕ್ತತೆಯೆಂಬುದು ಉಂಟಾಗುವುದೇಇಲ್ಲ ॥೧೨॥

ಅದು ಹೇಗೆಂದರೆ:—ರಜ್ಜುವನ್ನು ನೋಡಿ ಸರ್ಪವೆಂಬ ಭ್ರಾಂತಿಯುಂಟಾಗುವುದಲ್ಲವೆ! ಅಲ್ಲಿ ರಜ್ಜುವಿನಲ್ಲುಂಟಾಗಿರುವ ಸರ್ಪಭ್ರಮೆಯು ಹೋಗಬೇಕಾದರೆ, ಅದರಲ್ಲಿ ಸರ್ಪವೆಂಬ ಶಬ್ದವೂ ಅದರ ಅರ್ಥವೂ ಸುತರಾಂ ಇಲ್ಲವೆಂಬ ಭಾವನೆಯು ದೃಢವಾಗಬೇಕು. ಈ ಸರ್ಪಶಬ್ದಾರ್ಥಗಳು ಅತ್ಯಂತಾಸಂಭವವೆಂಬುದನ್ನು ನಾವು ಹೊಸದಾಗಿ ಸೃಷ್ಟಿಮಾಡಬೇಕಾಗಿಲ್ಲ; ಅದು ಸ್ವತಸ್ಸಿದ್ಧವಾಗಿರುವುದು. ನಮ್ಮ ಅಜ್ಞಾನದಿಂದ ಭ್ರಮೆಯುಂಟಾಗಿರುವುದು; ಅದನ್ನು ನಿಶ್ಶೇಷವಾಗಿ ಬಿಟ್ಟುಬಿಟ್ಟರೆ ರಜ್ಜುವೆಂಬ ಜ್ಞಾನವೇ ನಿಲ್ಲುವುದು. ಹಾಗಲ್ಲದೆ ಆ ಸರ್ಪಶಬ್ದಾರ್ಥಗಳು ಅತ್ಯಂತಾಸಂಭವಗಳೆಂಬ ಭಾವನೆ ದೃಢವಾಗಿದ್ದರೆ, ಸರ್ಪಭ್ರಮೆಯು ಮಧ್ಯಮಧ್ಯದಲ್ಲಿ ಶಾಂತವಾಗುತಿದ್ದರೂ ಅದು ಶಾಂತವಾಗದೆಯೇ ಇರುವುದು. ಹೀಗೆಯೇ ಬ್ರಹ್ಮನನ್ನು ನೋಡಿ ಜಗತ್ತೆಂದು ಭ್ರಮೆಯುಂಟಾಗುವುದು. ಆಗ ಜಗತ್ತಿಲ್ಲವೆಂದು ದೃಢವಾಗಿ ಭಾವನೆಯುಂಟಾದರೆ ಬಳಿಕ ಕೇವಲ ಬ್ರಹ್ಮವೇ ಸ್ಫುರಿಸುತಿರುವುದು. ರಜ್ಜುವಿನಲ್ಲಿ ಸರ್ಪವಲ್ಲವೆಂಬ ಭಾವನೆಯನ್ನು ನಾವು ಹೊಸದಾಗಿ ಸೃಷ್ಟಿಮಾಡಬೇಕಾದುದು ಹೇಗೆ ಅನಾವಶ್ಯಕವೋ, ಬ್ರಹ್ಮನಲ್ಲಿಯೂ ಜಗತ್ತಿಲ್ಲವೆಂಬ ಭಾವನೆಯನ್ನು ನಾವು ಹೊಸದಾಗಿ ಉಂಟುಮಾಡಬೇಕಾದುದಿಲ್ಲವೆಂದೂ, ಅದು ಸ್ವತಸ್ಸಿದ್ಧವೆಂದೂ,

ಅನುತ್ಪಾದಮಯಂ ತ್ಯಕ್ತ್ವಾ ಶಾನ್ತೋಽಪಿ ಹಿ ನ ಶಾಮ್ಯತಿ ॥೧೩॥
ಅರ್ಧಶಾನ್ತೋ ನ ಶಾನ್ತೋಽಸೌ ಸಮೇತ್ಯರ್ಧತಯಾ ಪುನಃ ।
ಉದೇತ್ಯೇಕಪಿಶಾಚಾನ್ತೇ ಪಿಶಾಚೋಽನ್ಯೋ ಹ್ಯಧೀಮತಃ ॥೧೪॥
ಸಂಸಾರಶ್ಚಾಯಮಾಭೋಗಿ ಪರಮೇವೇತಿ ನಿಶ್ಚಯಃ ।
ಕಾರಣಾಭಾವತೋ ಭಾತಿ ಯದಿಹಾಭಾತಮೇವ ತತ್ ॥೧೫॥

ಲೀಲೋವಾಚ.

ಬ್ರಾಹ್ಮಣಬ್ರಾಹ್ಮಣೀರೂಪೇ ಸರ್ಗೇ ಕಾರಣಸಂಸ್ಮೃತಿಃ ।
ಕಥಮಭ್ಯುತ್ಥಿತಾ ಸಾಸ್ಯ ಸ್ಮರಣೀಯಮಿದಂ ವಿನಾ ॥೧೬॥

ಅಜ್ಞಾನದಿಂದ ಸಂಸಾರಭ್ರಾಂತಿಯುಂಟಾಗಿ ಬಂಧವುಂಟಾಗಿರುವಂತೆ ತೋರುವುದೆಂದೂ, ಅಜ್ಞಾನನಿವೃತ್ತಿಯಾದರೆ ಮೋಕ್ಷವು ಸ್ವತಸ್ಸಿದ್ಧವಾಗಿರುವುದೆಂದೂ ತಿಳಿಯಬೇಕು ॥೧೩॥

ಆದರೆ, ಯೋಗದಿಂದ ಮನೋವೃತ್ತಿಗಳನ್ನು ಶಾಂತಿಪಡಿಸಿದರೇ ಈ ಸಂಸಾರಭ್ರಮವು ಶಾಂತವಾಗುವುದರಿಂದ, ಜ್ಞಾನದಿಂದ ಪ್ರಯೋಜನವೇನೆಂದು ಶಂಕಿಸಬಹುದು; ಇದು ಸರಿಯಲ್ಲ. ಯೋಗದಿಂದ ಈ ಸಂಸಾರ ಭ್ರಮವು ಸಂಪೂರ್ಣವಾಗಿ ಶಾಂತವಾಗುವುದಿಲ್ಲ; ಮೂಢನಾದವನಿಗೆ ಒಂದು ಪಿಶಾಚವು ಕಳೆದಕೂಡಲೆ ಮತ್ತೊಂದು ಪಿಶಾಚವು ತ್ಪನ್ನವಾಗುವುದಲ್ಲವೆ! ಹೀಗೆಯೇ ಈ ಸಂಸಾರಭ್ರಮವು ಸಮಾಧಿ ಕಾಲದಲ್ಲಿ ಮಾತ್ರ ಶಾಂತವಾಗಿದ್ದು, ಸಮಾಧಿವಿಶ್ರಾಂತಿಯಾದಾಗ ಪುನಃ ಉಂಟಾಗುವುದು. ಅದುಕಾರಣ, ಆಗ ಅದು ಅರ್ಧಮಾತ್ರ ಶಾಂತವಾಗಿತ್ತೆಂದು ತಿಳಿಯಬೇಕು. ಹೀಗೆ ಅರ್ಧ ಶಾಂತವಾದ ಈ ಸಂಸಾರಭ್ರಮವು ಶಾಂತವಾದಂತೆಯೇ ಅಲ್ಲ ॥೧೪॥

ಅಂತು, ಈ ವಿಸ್ತಾರವಾದ ಸಂಸಾರವು ಪರಬ್ರಹ್ಮನೇಯೆಂದು ನಿಶ್ಚಯವುಂಟಾಗಬೇಕಾದರೆ, ಜ್ಞಾನದಿಂದಲೇ ಆಗಬೇಕೆಂದು ಸಿದ್ಧವಾಯಿತು. ಸಂಸಾರವೆಂಬುದು ಭಾಸಮಾನವಾಗುವುದಕ್ಕೆ ಕಾರಣವಾದುದು ಅವಿದ್ಯೆಯು; ಇದೇ ಹೋಗಿಬಿಟ್ಟಮೇಲೆ, ನಮಗೆ ಯಾವುದು ಭಾಸಿಸುವುದೋ, ಅದು ಸರ್ವದಾ ಸ್ವಯಂಪ್ರಕಾಶವಾದ ಆ ಪರಬ್ರಹ್ಮವಸ್ತುವೇ ಆಗಿರುವುದು ॥೧೫॥

ಹೀಗೆ ಹೇಳಿದ ಸರಸ್ವತಿಯ ಮಾತನ್ನು ಕೇಳಿ, ಪುನಃ ಲೀಲೆಯು ಶಂಕೆಪಟ್ಟು ಕೇಳುವಳು:—

ಅಂಬ! ನಾವು ಈಗ ಅನುಭವಿಸುತಿರುವ ಸೃಷ್ಟಿಗೆ, ಆ ಬ್ರಾಹ್ಮಣ ಬ್ರಾಹ್ಮಣೀರೂಪ ಸೃಷ್ಟಿಯಲ್ಲಿ ಅಭ್ಯಸ್ತವಾದ ವಾಸನೆಯೇ ಕಾರಣವೆಂದಲ್ಲವೆ ನೀನು ಹೇಳಿದ್ದುದು! ನನಗೆ ಅದೇ ಅನುಪಪನ್ನವೆಂದು ತೋರುವುದು. ವಾಸನೆಯೆಂದರೆ ಅನುಭೂತವಾದ ವಿಷಯದ ಸಂಸ್ಕಾರವೆಂದಲ್ಲವೆ ಮುಖ್ಯಾರ್ಥವು! ನಾವು ಆ ಜನ್ಮದಲ್ಲಿ ಈಜನ್ಮದ ವಿಷಯವನ್ನನುಭವಿಸುವುದೆಲ್ಲಿ ಬಂದೀತು? ಆಗ ಸ್ಮರಣೀಯವಾದ ಈ ಜನ್ಮದ ಸಂಸಾರವೇ ಇಲ್ಲದಿರುವುದರಿಂದ, ಈಕಾರಣ ಸ್ಮೃತಿಯೆಂಬುದು ಹೇಗೆ ಉತ್ಪನ್ನವಾಯಿತು? ॥೧೬॥

ಶ್ರೀದೇವ್ಯುವಾಚ.

ಪಿತಾಮಹಸ್ಮೃತಿಸ್ತತ್ರ ಕಾರಣಂ ತಸ್ಯ ನ ಸ್ಮೃತಿಃ |
ಪೂರ್ವಂ ನ ಸಮ್ಭವತ್ಯೇವ ಮುಕ್ತತ್ವಾತ್ ಪದ್ಮಜನ್ಮನಃ ||೧೭||
ಪೂರ್ವಂ ನ ಸಮ್ಭವತ್ಯೇವ ಸ್ಮರಣೀಯಮಿತಿ ಸ್ವಯಮ್ |
ಪದ್ಮಜಾದಿತ್ವಮಾಯಾತಿ ಚೈತನ್ಯಸ್ಯ ತಥಾ ಸ್ಥಿತೇಃ ||೧೮||
ಅಭೂವಮಹಮಿತ್ಯನ್ಯಃ ಪ್ರಜಾನಾಥಃ ಪ್ರಜಾಪತೇಃ |
ಕಾಕತಾಳೀಯವತ್ ಕಶ್ಚಿತ್ ಭವತಿ ಪ್ರತಿಭಾಮಯಃ ||೧೯||
ಏವಮಭ್ಯುದಿತೇ ಲೋಕೇ ನ ಕಿಂಚಿನ್ನ ಕದಾಚನ|
ಕ್ವಚಿದಭ್ಯುದಿತಂ ನಾಮ ಕೇವಲಂ ಚಿನ್ನಭಃ ಸ್ಥಿತಮ್ ||೨೦||
ದ್ವಿವಿಧಾಯಾಃ ಸ್ಮೃತೇರಸ್ಯಾಃ ಕಾರಣಂ ಪರಮಂ ಪದಮ್ |

ಇದಕ್ಕೆ ಶ್ರೀ ಸರಸ್ವತಿಯುತ್ತರ ಹೇಳಿದಳು:—

ಎಲೌ! ಲೀಲೆ! ನೀನು ಹೇಳುವಹಾಗೆ ಸಂಸ್ಕಾರವೊಂದೇ ವಾಸನೆಯುಲ್ಲ. ಸಂಸ್ಕಾರವೂ ಆವಶ್ಯಕವೆನ್ನುವಪಕ್ಷದಲ್ಲಿ, ಪಿತಾಮಹನು ಸರ್ವಜ್ಞನಾಗಿರುವುದರಿಂದ—ಅವನಿಗೆ ಸರ್ವವಿಧವಾದ ಸ್ಮೃತಿಯೂ ಸಂಭವಿಸಬಹುದಾಗಿರುವಕಾರಣ— ಅವನ ಸ್ಮೃತಿಯನ್ನೇ ಆ ಸರ್ಗದಲ್ಲಿ ಕಾರಣವೆಂದು ತಿಳಿಯಬೇಕು. ಅವನ ದೇಹಾದಿ ಸೃಷ್ಟಿಗೆ ಸ್ಮೃತಿಯು ಕಾರಣವಲ್ಲ. ಪೂರ್ವಪಿತಾಮಹನ ಸ್ಮೃತಿಯೇ ಈಗ ಈ ಪಿತಾಮಹಸೃಷ್ಟಿಯಲ್ಲಿ ಏತಕ್ಕೆ ಕಾರಣವಾಗಬಾರದೆಂದರೆ,— ಆ ಪೂರ್ವಪಿತಾಮಹನು ಮುಕ್ತನಾಗಿಬಿಟ್ಟಿರುವುದರಿಂದ ಅವನ ಸ್ಮೃತಿಯು ಸಂಭವಿಸುವುದೇ ಇಲ್ಲವೆಂದು ತಿಳಿಯಬೇಕು ||೧೭||

ಇದೂ ಅಲ್ಲದೆ, ಸ್ಮೃತಿಯೆಂಬುದು ಸ್ಮರಣೀಯವಾದುದೊಂದಿದ್ದರೇ ಆಗುವುದಲ್ಲದೆ, ಅನ್ಯಥಾ ಆಗುವುದಿಲ್ಲ. ಆಗ ಸ್ಮರಣೀಯವಾದುದೊಂದೂ ಸಂಭವಿಸುವುದೇ ಇಲ್ಲ. ಹೀಗೂ ಸ್ಮೃತಿಯು ಅವನಿಗೆ ಸಂಭವಿಸುವುದಿಲ್ಲವೆಂದು ತಿಳಿಯಬೇಕು. ಹಾಗಾದಮೇಲೆ ಪದ್ಮಜನ್ಮ (ಬ್ರಹ್ಮ)ತ್ವ ಮೊದಲಾದುದುಂಟಾಗುವುದು ಹೇಗೆಂದರೆ,– ಈ ಪದ್ಮಜನ್ಮಾದಿ ದೇಹವಾಸನಾ ವಿಶಿಷ್ಟವಾದ ಮಾಯೆಯಿಂದ ಉಪಾಧಿಯುಕ್ತವಾಗಿರುವ ಚೈತನ್ಯವು ಆ ರೀತಿಯಾಗಿರುವುದರಿಂದ, ಅದೇ ಈ ವಿಧವಾಗಿ ಅಪೂರ್ವವಾದ ಬ್ರಹ್ಮ ಮೊದಲಾದರೂಪದಿಂದ ರೂಪಾಂತರ ಹೊಂದಿರುವುದೆಂದು ತಿಳಿಯಬೇಕು ||೧೮||

ಆದರೆ ತತ್ವಜ್ಞಾನವುಂಟಾದಾಗ ಈ ಪೂರ್ವ ಬ್ರಹ್ಮತ್ವ ವಾಸನಾದಿಗಳೂ ನಷ್ಟವಾಗುವುದೆಂದು ಯೋಚನೆಯುಂಟಾದಾಗಲೋ?—ಎಂದರೆ,— ಆ ಬ್ರಹ್ಮನಿಗೆ 'ನಾನು ಪೂರ್ವದಲ್ಲಿ ಬೇರೆಯಾದ ಒಬ್ಬ ಬ್ರಹ್ಮನಾಗಿದ್ದೆನು' ಎಂಬ ಭಾವನಾರೂಪವಾಗಿ ಒಂದುವಿಧವಾದ ಸಂಸ್ಕಾರವು ಕಾಕತಾಳನ್ಯಾಯದಂತೆ ಆಕಸ್ಮಿಕವಾಗಿ ಹುಟ್ಟುತ್ತದೆಂದು ತಿಳಿಯಬೇಕು||೧೯||

ಹೀಗೆ ಕೇವಲ ಭಾವನಾಮಯವಾಗಿ ಈ ಪ್ರಪಂಚವುತ್ಪನ್ನವಾಗಿರುವಕಾರಣ, ಯಾವುದೂ ಎಂದಿಗೂ ಎಲ್ಲಿಯೂ ಉತ್ಪನ್ನವಾಯ್ತೆಂಬುದೇ ಇಲ್ಲ; ಕೇವಲವಾದ ಚಿದಾಕಾಶಮಾತ್ರವೇ ಇರುವುದು ||೨೦||

ಅಂತು, ಪೂರ್ವಾನುಭವಜನ್ಯಸಂಸ್ಕಾರೋತ್ಪನ್ನವೆಂದೂ, ಅನಾದ್ಯವಿದ್ಯಾಶಕ್ತಿರೂಪವಾಸನಾಜನ್ಯವೆಂದೂ ಸ್ಮರಣೆ ಎರಡುವಿಧವಾಗಿರುವುದೆಂದು ಗೊತ್ತಾಯ್ತಷ್ಟೆ! ಈ

ಕಾರ್ಯಕಾರಣಭಾವೋಽಸೌ ಏಕ ಏವ ಚಿದಂಬರೇ ‖೨೧‖
ಕಾರ್ಯಂ ಚ ಕಾರಣಂ ಚೈವ ಕಾರಣೈಃ ಸಹಕಾರಿಭಿಃ ।
ಕಾರ್ಯಕಾರಣಯೋರೈಕ್ಯಂ ತದಭಾವಾನ್ನ ಶಾಮ್ಯತಿ ‖೨೨‖
ಮಹಾಚಿದ್ರೂಪಮೇವ ತ್ವಂ ಸ್ಮರಣಂ ವಿದ್ಧಿ ವೇದನಮ್ ।
ಕಾರ್ಯಕಾರಣತಾ ತೇನ ಸ ಶಬ್ದೋ ನ ಚ ವಾಸ್ತವಃ ‖೨೩‖
ಏವಂ ನ ಕಿಂಚಿದುತ್ಪನ್ನಂ ದೃಶ್ಯಂ ಚಿಜ್ಜಗದಾದ್ಯಪಿ ।
ಚಿದಾಕಾಶೇ ಚಿದಾಕಾಶಂ ಕೇವಲಂ ಸ್ವಾತ್ಮನಿ ಸ್ಥಿತಮ್ ‖೨೪‖

ಲೀಲೋವಾಚ.

ಅಹೋ ನು ಪರಮಾ ದೃಷ್ಟಿಃ ದರ್ಶಿತಾ ದೇವಿ ಮೇ ತ್ವಯಾ ।

ಎರಡುವಿಧವಾದ ಸ್ಮೃತಿಗೂ ಮಾಯಾಯುಕ್ತವಾದ ಆ ಪರಮಪದವೇ ಕಾರಣವಾಗಿರುವುದು. ಶುದ್ಧವಾದ ಆ ಚಿದಾಕಾಶದಲ್ಲಿಯಾದರೋ, ಕಾರ್ಯಕಾರಣಭಾವವು ಪೃಥಕ್ಕಾಗಿರುವುದೆಂದು ತಿಳಿಯಬಾರದು ‖೨೧‖

ಕಾರ್ಯವೆಂದೂ ಕಾರಣವೆಂದೂ ಭೇದವ್ಯವಹಾರವುಂಟಾಗಿರುವುದು ಸಹಕಾರಿಕಾರಣಗಳಿಂದಲೇಯೆ. ಈ ಸಹಕಾರಿಕಾರಣಗಳೇ ಇಲ್ಲದಿರುವಾಗ, ಕಾರ್ಯಕಾರಣಗಳೆರಡೂ ಒಂದೇ ಆಗಿರುವುದೆಂದಿಗೂ ಶಾಂತವಾಗುವುದಿಲ್ಲ ‖೨೨‖

ಆದರೆ, 'ಯುಕ್ತಿಯಿಂದ ಈರೀತಿಯಾಗಿ ಸಾಧಿಸಬಹುದಾಗಿದ್ದರೂ ಅನುಭವದಲ್ಲಿ ಇದು ದೃಢವಾಗುವುದು ಹೇಗೆ?' ಎಂದರೆ,—ಗಡಿಗೆಯನ್ನು ನೋಡುತ—ಇದು ಕಾರ್ಯವೆಂದೂ ಇದಕ್ಕೆ ಮಣ್ಣು ಕಾರಣವೆಂದೂ—ತಿಳಿಯುವಾಗಲಲ್ಲವೆ ಕಾರ್ಯಕಾರಣಭೇದವು ಬುದ್ಧಿಗೋಚರವಾಗುವುದು! ಗಡಿಗೆಯೆಂಬ ಪದಾರ್ಥವೇ ಕಾಣದಿರುವಾಗ ಕಾರ್ಯವೇ ಇಲ್ಲದುದರಿಂದ ಕಾರಣವೆಂಬ ಜ್ಞಾನವೆಲ್ಲಿ ಬಂದಿತು? ಹೀಗೆಯೇ ಪ್ರಪಂಚವೆಂಬುದು ಕಣ್ಣಿಗೆ ಕಾಣುತಿದ್ದರಲ್ಲವೆ ಇದು ಕಾರ್ಯವೆಂದೂ ಇದಕ್ಕೆ ಬ್ರಹ್ಮನು ಕಾರಣವೆಂದೂ ತಿಳಿವಳಿಕೆಯುಂಟಾಗುವುದು! ಪ್ರಪಂಚಜ್ಞಾನವೇ ಇಲ್ಲದಾಗ ಬ್ರಹ್ಮನು ಇದಕ್ಕೆ ಕಾರಣವೆಂದು ವ್ಯವಹರಿಸುವುದು ಹೇಗೆ? ಎಲೌ! ಲೀಲೆ! ನೀನು ಇದನ್ನೆಲ್ಲ ಮನಸ್ಸಿನಲ್ಲಿ ಚೆನ್ನಾಗಿ ವಿಚಾರಮಾಡಿಕೊಂಡು, ಈಗ ಸ್ಮೃತಿಯುಂಟುಮಾಡತಕ್ಕ ಜ್ಞಾನವೂ ಆ ಮಹಾಚಿದ್ರೂಪವೇಯೆಂದು ತಿಳಿಯುವವಳಾಗು. ಇದರಿಂದ, ಕಾರ್ಯಕಾರಣಭಾವವು ಈರೀತಿಯಾಗಿರುವುದೆಂದು ನಿಶ್ಚಯವುಂಟಾಗಲಿ. ಅಂತು ಕಾರ್ಯಕಾರಣಗಳೆಂಬ ಪೃಥಕ್ಛಬ್ದವಿದ್ದರೂ ಇದು ವಾಸ್ತವ್ಯವಲ್ಲವೆಂದು ತಿಳಿಯುವವಳಾಗು ‖೨೩‖

ಅಂತು ಈರೀತಿಯಾಗಿ ಚಿತ್ತು ದೃಶ್ಯವಾಗಿಯೂ ಪ್ರಪಂಚಾದಿರೂಪವಾಗಿಯೂ ಉತ್ಪತ್ತಿಯನ್ನು ಹೊಂದಿಲ್ಲವೆಂದು ಸಿದ್ಧವಾಯಿತು. ಆ ಚಿದಾಕಾಶದಲ್ಲಿಯೇ ಚಿದಾಕಾಶವು ಸ್ವಯಂ ಸ್ಥಿತವಾಗಿರುವುದು ‖೨೪‖

ಹೀಗೆ ಸರಸ್ವತಿಯಿಂದ ಬೋಧಿತಳಾದ ಲೀಲೆಯು ಹೇಳುವಳು :—

ಎಲೌ! ದೇವಿ! ಕಣ್ಣಿನಿಂದ ನೋಡಲ್ಪಡುವ ಜಗತ್ತಿನ ರೂಪಸಂಪತ್ತನ್ನು ಪ್ರಾತಃ

ರೂಪಶ್ರೀರ್ಜಾಗತೀ ಪ್ರಾಪ್ತಃ ಪ್ರಭಯೇವೇಕ್ಷಣದ್ಯುತಿಃ ||೨೫||
ಇದಾನೀಮಹಮೇತಸ್ಯಾಂ ಯಾವತ್ ಪರಿಣತಾ ದೃಶಿ |
ನಾಭ್ಯಾಸೇನ ವಿನಾ ತಾವತ್ ಭಿನ್ಧೀದಂ ದೇವಿ ಕೌತುಕಮ್ ||೨೬||
ಯತ್ರಾಸೌ ಬ್ರಾಹ್ಮಣೋ ಗೇಹೇ ಬ್ರಾಹ್ಮಣ್ಯಾ ಸಹಿತೋಽಭವತ್ |
ತಂ ಸರ್ಗಂ ತಂ ಗಿರಿಗ್ರಾಮಂ ನಯ ಮಾಂ ತಂ ವಿಲೋಕಯೇ ||೨೭||

ಶ್ರೀದೇವ್ಯುವಾಚ.

ಅಚೇತ್ಯಚಿದ್ರೂಪಮಯೀಂ ಪರಮಾಂ ಪಾವನೀಂ ದೃಶಮ್ |
ಅವಲಮ್ಬ್ಯೇಮಮಾಕಾರಂ ಅವಮುಚ್ಯ ಭವಾಮಲಾ ||೨೮||
ತತಃ ಪ್ರಾಪ್ಸ್ಯಸ್ಯಸನ್ದೇಹಂ ವ್ಯೋಮಾತ್ಮಾನಂ ನಭಸ್ಥಿತಮ್ |
ಭೂಮಿಷ್ಠನರಸಙ್ಕಲ್ಪೋ ಗಗನಾನ್ತಃಪುರಂ ಯಥಾ ||೨೯||
ಏವಂ ಸ್ಥಿತೇ ತಂ ಪಶ್ಯಾವಃ ಸಹ ಸರ್ಗಮನರ್ಗಳಮ್ |
ಅಯಂ ತದ್ದರ್ಶನದ್ವಾರೇ ದೇಹೋ ಹಿ ಪರಮಾರ್ಗಳಮ್ ||೩೦||

ಲೀಲೋವಾಚ.

ಅಮುನಾ ದೇವಿ ದೇಹೇನ ಜಗದನ್ಯದವಾಪ್ಯತೇ |

ಕಾಲಿಕವಾದ ಪ್ರಭೆಯು ತೋರಿಸುವಂತೆ, ನೀನು ನನಗೆ ಸರ್ವೋತ್ಕೃಷ್ಟವಾದ ಜ್ಞಾನ ಮಾರ್ಗವನ್ನು ತೋರಿಸಿರುವೆ ||೨೫||

ಈಗ ನಾನು ಅಭ್ಯಾಸವಿಲ್ಲದೆ ಈ ಜ್ಞಾನಮಾರ್ಗದಲ್ಲಿ ದೃಢವಾದ ಸಂಸ್ಕಾರವನ್ನು ಪಡೆಯುವುದರೊಳಗಾಗಿ, ನನಗುಂಟಾಗಿರುವ ಈ ಕುತೂಹಲವನ್ನು ಪರಿಹರಿಸು ||೨೬||

ಅದೇನೆಂದರೆ:—ಪೂರ್ವೋಕ್ತನಾದ ಬ್ರಾಹ್ಮಣನು ಬ್ರಾಹ್ಮಣಿಯೊಡನೆ ಎಲ್ಲಿ ವಾಸವಾಗಿದ್ದನೋ, ಈ ಸೃಷ್ಟಿಯನ್ನು—ಆ ಗಿರಿಗ್ರಾಮವನ್ನು—ನನ್ನನ್ನು ಹೊಂದಿಸು. ಅವನನ್ನು ನೋಡಬೇಕೆಂದು ನಾನು ಕುತೂಹಲಪಡುತ್ತಿರುವೆನು ||೨೭||

ಶ್ರೀ ಸರಸ್ವತಿಯು ಹೇಳುವಳು:—

ಎಲಾ! ಲೀಲೆ! ನಿನ್ನ ಕುತೂಹಲವನ್ನು ನಾನು ನೆರವೇರಿಸುವೆನು. ನೀನು—ಅಚೇತ್ಯಚಿದ್ರೂಪಮಯವಾದ ಪರಮಪಾವನವಾದ ಜ್ಞಾನದೃಷ್ಟಿಯನ್ನವಲಂಬಿಸಿ, ಈ ದೇಹವನ್ನು ಪರಿತ್ಯಜಿಸಿ, ನಿರ್ಮಲಳಾದವಳಾಗು ||೨೮||

ಬಳಿಕ, ಭೂಮಿಯಲ್ಲಿರುವ ಮನುಷ್ಯನ ಸಂಕಲ್ಪವು ಅಂತರಿಕ್ಷದಲ್ಲಿರುವ ಅಂತಃಪುರವನ್ನು ಹೊಂದುವಂತೆ, ಜ್ಞಾನಾಕಾಶಸ್ಥಿತವಾದ ಮಾಯಾಕಾಶಮಯವಾದ ಆ ಗಿರಿಗ್ರಾಮರೂಪಸರ್ಗವನ್ನು ನೀನು ನಿಸ್ಸಂದೇಹವಾಗಿ ಪಡೆಯುವೆ ||೨೯||

ನಾವಿಬ್ಬರೂ ಒಟ್ಟಿಗೆ ಈರೀತಿಯಾಗಿದ್ದುಗೊಂಡು, ಆ ಸೃಷ್ಟಿಯನ್ನು ನಿರರ್ಗಳವಾಗಿ ನೋಡೋಣ. ಏತಕ್ಕೆಂದರೆ, ಆ ಸೃಷ್ಟಿದರ್ಶನದ ದ್ವಾರದಲ್ಲಿ ಈ ಪಾಂಚಭೌತಿಕವಾದ ಶರೀರವು ದೊಡ್ಡ ಅರ್ಗಳ (ಲಾಳುಮುಂಡಿಗೆ—ತಡೆ) ವಾಗಿರುವುದು ||೩೦||

ಇದನ್ನು ಕೇಳಿ ಲೀಲೆಯು ಹೇಳುವಳು: -

ಎಲೌ! ದೇವಿ! ಈ ದೇಹದಿಂದಲೇ ಮತ್ತೊಂದು ಪ್ರಪಂಚವನು ಏತಕ್ಕೆ

ನ ಕಸ್ಮಾದತ್ರ ಮೇ ಯುಕ್ತಿಂ ಕಥಯಾನುಗ್ರಹಾಗ್ರಹಾತ್ ॥೩೧॥

ಶ್ರೀದೇವ್ಯುವಾಚ.

ಜಗನ್ತೀಮಾನ್ಯಮೂರ್ತಾನಿ ಮೂರ್ತಿಮನ್ತಿ ಮುಧಾಗ್ರಹಾತ್ ।
ಭವದ್ಭಿರವಬುದ್ಧಾನಿ ಹೇಮಾನೀವೋರ್ಮಿಕಾಧಿಯಾ ॥೩೨॥
ಹೇಮ್ನ್ಯೂರ್ಮಿಕಾರೂಪಧರೇಪ್ಯೂರ್ಮಿಕಾತ್ವಂ ನ ವಿದ್ಯತೇ ।
ಯಥಾ ತಥಾ ಜಗದ್ರೂಪೇ ಜಗನ್ನಾಸ್ತಿ ಚ ಬ್ರಹ್ಮಣಿ ॥೩೩॥
ಜಗದಾಕಾಶಮೇವೇದಂ ಬ್ರಹ್ಮೈವೇಹ ತು ದೃಶ್ಯತೇ ।
ದೃಶ್ಯತೇ ಕಾಚಿದಪ್ಯತ್ರ ಧೂಳಿರಮ್ಬುನಿಧಾವಿವ ॥೩೪॥
ಅಯಂ ಪ್ರಪಞ್ಚೋ ಮಿಥ್ಯೈವ ಸತ್ಯಂ ಬ್ರಹ್ಮಾಹಮದ್ವಯಮ್ ।
ಅತ್ರ ಪ್ರಮಾಣಂ ವೇದಾನ್ತಾಃ ಗುರುವೋನುಭವಸ್ತಥಾ ॥೩೫॥
ಬ್ರಹ್ಮೈವ ಪಶ್ಯತಿ ಬ್ರಹ್ಮ ನಾಬ್ರಹ್ಮ ಬ್ರಹ್ಮ ಪಶ್ಯತಿ ।
ಸರ್ಗಾದಿನಾಮ್ನಾ ಪ್ರಥಿತಃ ಸ್ವಭಾವೋಸ್ಯೈವ ಚೇದೃಶಃ ॥೩೬॥

ಹೊಂದಲಾಗುವುದಿಲ್ಲ ? ಈ ವಿಷಯದಲ್ಲಿ ಕಾರಣವನ್ನು ನೀನು ನನ್ನಲ್ಲಿ ಅನುಗ್ರಹಾತಿಶಯದಿಂದ ಹೇಳುವವಳಾಗು ॥೩೧॥

ಶ್ರೀ ಸರಸ್ವತಿಯು ಹೇಳುವಳು :—

ಎಲೌ ! ಲೀಲೆ! ಈ ಪ್ರಪಂಚಗಳು ವಸ್ತುತಃ ಆಕಾರರಹಿತವಾದುವು; ನೀವುಗಳು ವ್ಯರ್ಥವಾದ ಅಭಿನಿವೇಶದಿಂದ—ಸುವರ್ಣವನ್ನು ಉಂಗುರವೆಂದು ತಿಳಿಯುವಂತೆ-ಇವು ಆಕಾರಯುಕ್ತಗಳೆಂದು ತಿಳಿದಿರುವಿರಿ ॥೩೨॥

ಉಂಗುರದ ರೂಪವನ್ನು ಧರಿಸಿದ್ದರೂ ಸುವರ್ಣದಲ್ಲಿ ವಸ್ತುತಃ ಅಂಗುಳೀಯಕತ್ವವು ಹೇಗಿಲ್ಲವೋ, ಹಾಗೆ ಜಗದ್ರೂಪವನ್ನು ಧರಿಸಿರುವಂತೆ ಕಾಣುತಿದ್ದರೂ ಬ್ರಹ್ಮನಲ್ಲಿ ಜಗತ್ತಿಲ್ಲವೇ ಇಲ್ಲ ॥೩೩॥

ಈ ಜಗತ್ತೆಂಬುದು ಆಕಾಶವೇಯೆ; ಇಲ್ಲಿ ಕಾಣುವುದೆಲ್ಲವೂ ಬ್ರಹ್ಮವೇಯೆ. ಆದರೆ, ಸಮುದ್ರದಲ್ಲಿ ಧೂಳುಬಿದ್ದರೆ ಆಕ್ಷಣವೇ ಅದು ಅಡಗಿಹೋಗುವುದಾಗಿರುವುದರಿಂದ, ಅಲ್ಲಿ ಧೂಳು ಕಾಣುವುದು ವಿರುದ್ಧವಾಗಿದ್ದರೂ, ಮೇಲುಗಡೆ ಹಾರಾಡುತಿರುವ ಧೂಳಿಯು ಪ್ರತಿಬಿಂಬವು ಸಮುದ್ರದೊಳಗೆ ಕಾಣಿಸುತ ಧೂಳಿಯಿದೆಯೆಂಬ ಜ್ಞಾನವನ್ನುಂಟುಮಾಡುವಂತೆ, ಈ ಬ್ರಹ್ಮನಲ್ಲಿ ವಿರೋಧಿಯಾದ ಮಾಯೆಯೆಂಬುದು ಕಾಣಿಸುತ್ತಿರುವುದು ॥೩೪॥

ಈ ಪ್ರಪಂಚವೆಂಬುದು ಮಿಥ್ಯಾಭೂತವಾದುದೇಯೆ; ಅದ್ವಿತೀಯವಾದ ಬ್ರಹ್ಮವೊಂದೇ ಸತ್ಯವು. ಈ ವಿಷಯದಲ್ಲಿ ವೇದಾಂತಶಾಸ್ತ್ರಗಳೂ, ಗುರುಗಳೂ ಅನುಭವವೂ ಪ್ರಮಾಣವು ॥೩೫॥

ಬ್ರಹ್ಮವೇ ಬ್ರಹ್ಮವನ್ನು ನೋಡುತ್ತದೆ; ಬ್ರಹ್ಮವಲ್ಲದುದು ಬ್ರಹ್ಮವನ್ನು ನೋಡುವುದಿಲ್ಲ. ಈ ಬ್ರಹ್ಮನ ಸ್ಥಿತಿಯೇ ಈರೀತಿಯಾಗಿ ಸೃಷ್ಟಿ ಮುಂತಾದ ಹೆಸರಿನಿಂದ ಪ್ರಸಿದ್ಧಿಹೊಂದಿರುವುದು ॥೩೬॥

ನ ಬ್ರಹ್ಮಜಗತಾಮಸ್ತಿ ಕಾರ್ಯಕಾರಣತೋದಯಃ ।
ಕಾರಣಾನಾಮಭಾವೇನ ಸರ್ವೇಷಾಂ ಸಹಕಾರಿಣಾಮ್ ॥೩೭॥
ಯಾವದಭ್ಯಾಸಯೋಗೇನ ನ ಶಾನ್ತಾ ಭೇದಧೀಸ್ತವ ।
ನೂನಂ ತಾವದತದ್ರೂಪಾ ನ ಬ್ರಹ್ಮ ಪರಿಪಶ್ಯಸಿ ॥೩೮॥
ತತ್ರ ರೂಢಿಮುಪಾಯಾತಾಃ ಯಇಮೇ ತ್ವಸ್ಮದಾದಯಃ ।
ಅಭ್ಯಾಸಾದ್ಬ್ರಹ್ಮಸಮ್ಪತ್ತೇಃ ಪಶ್ಯಾಮಸ್ತೇ ಹಿ ತತ್ ಪರಮ್ ॥೩೯॥
ಸಙ್ಕಲ್ಪನಗರಸ್ಯೇವ ಮಮಾಕಾಶಮಯಂ ವಪುಃ ।
ಬ್ರಹ್ಮೈವ ಚಾನ್ತಃ ಪಶ್ಯಾಮಿ ದೇಹೇನಾನೇನ ತತ್ ಪದಮ್ ॥೪೦॥
ವಿಶುದ್ಧಜ್ಞಾನದೇಹಾರ್ಹಾಃ ತಥೈತೇ ಪದ್ಮಜಾದಯಃ ।
ಬ್ರಹ್ಮಾತ್ಮಜಗದಾದೀನಾಂ ಅಂಶೇ ಸಂಸ್ಥಾನಮಙ್ಗನೇ ॥೪೧॥
ತವಾಭ್ಯಾಸಂ ವಿನಾಬಾಲೇ ನಾಕಾರೋ ಬ್ರಹ್ಮತಾಂ ಗತಃ ।
ಸ್ಥಿತಃ ಕಲನರೂಪಾತ್ಮಾ ತೇನ ತನ್ನಾನುಪಶ್ಯಸಿ ॥೪೨॥
ಯತ್ರ ಸ್ವಸಙ್ಕಲ್ಪಪುರಂ ಸ್ವದೇಹೇನ ನ ಲಭ್ಯತೇ ।
ತತ್ರಾನ್ಯಸಙ್ಕಲ್ಪಪುರಂ ದೇಹೋನ್ಯೋ ಲಭತೇ ಕಥಮ್ ॥೪೩॥

ಸಮಸ್ತವಾದ ಸಹಕಾರಿಕಾರಣಗಳೂ ಇಲ್ಲದಿರುವುದರಿಂದ, ಜಗತ್ತಿಗೂ ಬ್ರಹ್ಮನಿಗೂ ಕಾರ್ಯಕಾರಣತ್ವವೆಂದಿಗೂ ನಿಷ್ಪನ್ನವಾಗುವುದಿಲ್ಲ ॥೩೭॥

ಈ ವಿಧವಾದ ಅನುಭವವು ಅಭ್ಯಾಸಾತಿಶಯದಿಂದುಂಟಾಗಬೇಕಾಗಿರುವುದು. ನಿನಗೆ ಎಲ್ಲಿಯವರೆಗೆ ಅಭ್ಯಾಸಾತಿಶಯದಿಂದ ಈ ಭೇದಜ್ಞಾನವಡಗುವುದಿಲ್ಲವೋ, ಅದುವರೆಗೆ ನೀನು ಆ ಬ್ರಹ್ಮರೂಪಳಾಗದಿರುವುದರಿಂದ—ಬ್ರಹ್ಮವನ್ನು ನೋಡಲಾರೆ ॥೩೮॥

ಆ ಜ್ಞಾನದಲ್ಲಿ ದಾರ್ಢ್ಯವನ್ನು ಪಡೆದಿರುವ ಅಸ್ಮದಾದಿಗಳಾರುಂಟೋ, ಅಂಥವರು ಅಭ್ಯಾಸದಿಂದ ಬ್ರಹ್ಮರೂಪ ನಿಷ್ಪನ್ನವಾಗುವುದರಿಂದ ಆ ಪರಮಪದವನ್ನು ನೋಡುವೆವು॥

ಸಂಕಲ್ಪನಗರಕ್ಕೆ ಹೇಗೆ ಆಕಾಶಮಯವಾದ ಆಕಾರವಿರುವುದೋ, ನನಗೂ ಹಾಗೆಯೇ ಆಕಾಶಮಯವಾದ ದೇಹವಿರುವುದು. ಈ ದೇಹದಿಂದಲೇ ಆ ಪರಮಪದವಾದ ಬ್ರಹ್ಮವನ್ನು ನಾನು ಅಂತರವಾಗಿ ನೋಡುತಿರುವೆನು ॥೪೦॥

ಮತ್ತು, ಎಲೌ ! ಲೀಲೆ ! ವಿಶುದ್ಧವಾದ ಚಿತ್ತದಿಂದಲೂ, ದೇಹದಿಂದಲೂ ಸರ್ವದಾ ಬ್ರಹ್ಮದರ್ಶನಯೋಗ್ಯರಾಗಿರುವ ಚತುರ್ಮುಖಾದಿಗಳು, ವಸ್ತುತಃ ಬ್ರಹ್ಮರೂಪವಾದ ಜಗದಾದಿಗಳ ಒಂದಂಶದಲ್ಲಿ ಅವಸ್ಥಿತಿಯನ್ನು ನೋಡತಕ್ಕವರಾಗಿರುವರು ॥೪೧॥

ವತ್ಸೆ! ನಿನಗೆ ಅಭ್ಯಾಸವಿಲ್ಲದಿರುವುದರಿಂದ ಆಕಾರವಿನ್ನೂ ಬ್ರಹ್ಮರೂಪವನ್ನು ಹೊಂದದೆ, ಕೇವಲವಾಗಿ ಅಂತಃಕರಣದಲ್ಲಿ ಚಿದಾಭಾಸರೂಪವಾಗಿರುವದು; ಅದುಕಾರಣ, ನೀನು ಆ ಗಿರಿಗ್ರಾಮವನ್ನು ನೋಡಲಾರೆ ॥೪೨॥

ತನ್ನ ಸಂಕಲ್ಪದಲ್ಲಿರುವ ಪಟ್ಟಣವೇ ತನ್ನ ದೇಹದಿಂದ ಯಾವಾಗ ಹೊಂದಲ್ಪಡಲಾರದೋ, ಆಗ ಇತರರ ಸಂಕಲ್ಪದಲ್ಲಿರುವ ಪಟ್ಟಣವನ್ನು ಮತ್ತೊಂದು ದೇಹವು ಹೊಂದುವ ಬಗೆ ಯಾವುದು? ॥೪೩॥

ತಸ್ಮಾದೇನಂ ಪರಿತ್ಯಜ್ಯ ದೇಹಂ ಚಿದ್ವ್ಯೋಮರೂಪಿಣೀ ।
ತತ್ ಪಶ್ಯಸಿ ತದೇವಾಶು ಕುರು ಕಾರ್ಯವಿದಾಂ ವರೇ ॥೪೪॥
ಸಙ್ಕಲ್ಪನಗರಂ ಸತ್ಯಂ ಯಥಾ ಸಙ್ಕಲ್ಪಿತಂ ಪ್ರತಿ ।
ಸದೇಹಂ ವಾ ವಿದೇಹಂ ವಾ ನೇತರಂ ಪ್ರತಿ ಕಿಂಚನ ॥೪೫॥
ಆದಿಸರ್ಗೇ ಜಗದ್ಭ್ರಾನ್ತಿಃ ಯಥೇಯಂ ಸ್ಥಿತಿಮಾಗತಾ ।
ತಥಾ ತದಾಪ್ರಭೃತ್ಯೇವಂ ನಿಯತಿಃ ಪ್ರೌಢಿಮಾಗತಾ ॥೪೬॥

ಲೀಲೋವಾಚ.

ತ್ವಯೋಕ್ತಂ ದೇವಿ ಗಚ್ಛಾವೋ ಬ್ರಾಹ್ಮಣಬ್ರಾಹ್ಮಣೀಜಗತ್ ।
ಸಹೇತೀದಮಿದಂ ವಚ್ಮಿ ಕಥಂ ಗನ್ತವ್ಯಮಮ್ಬ ಹೇ ॥೪೭॥
ಇಮಂ ದೇಹಮಿಹಾಸ್ಥಾಪ್ಯ ಶುದ್ಧಸತ್ತ್ವಾನುಪಾತಿನಾ ।
ಚೇತಸಾ ತಂ ಪರಂ ಯಾಮಿ ಲೋಕಂ ತ್ವಂ ಕಥಮೇಷಿ ತತ್ ॥೪೮॥

ಅದುಕಾರಣ, ನೀನು ಈ ದೇಹವನ್ನು ಬಿಟ್ಟುಬಿಟ್ಟು ಜ್ಞಾನಾಕಾಶರೂಪಳಾಗಿ ಆ ಗಿರಿಗ್ರಾಮವನ್ನು ನೋಡಬಹುದು. ಕಾರ್ಯಜ್ಞರಲ್ಲಿ ಅಗ್ರಗಣ್ಯಳಾದ ಲೀಲೆಯೆ! ನೀನು ಬೇಗನೆ ಅರೀತಿಯಾಗಿಯೇ ಮಾಡುವವಳಾಗು ॥೪೪॥

ಒಬ್ಬ ಮನುಷ್ಯನು ತನ್ನ ಸಂಕಲ್ಪದಲ್ಲಿ ಒಂದು ಪಟ್ಟಣವನ್ನು ರಚಿಸಿಕೊಂಡರೆ, ಅದು ಆಕಾರಸಹಿತವಾಗಿದ್ದರೂ ಅಥವಾ ಆಕಾರರಹಿತವಾಗಿದ್ದರೂ ಸಂಕಲ್ಪಕಾಲದಲ್ಲಿ ಅವನಿಗೆ ಸತ್ಯವಾಗಿಯೇ ಕಾಣುವುದು. ಅದೇ ಪಟ್ಟಣವು ಇತರಕಾಲದಲ್ಲಿ—ಅಂದರೆ ವ್ಯವಹಾರದಶೆಯಲ್ಲಿ-ಏನೊಂದೂ ಕಾಣುವುದಿಲ್ಲವಲ್ಲವೆ! ಹೀಗೆ ಈ ಪ್ರಪಂಚವೂ ಸಾಕಾರವಾಗಿದ್ದರೂ ನಿರಾಕಾರವಾಗಿದ್ದರೂ ಅಜ್ಞಾನದಶೆಯಲ್ಲಿರುವವನಿಗೆ ಸತ್ಯವಾಗಿಯೇಇರುವುದೆಂದೂ, ಜ್ಞಾನದಶೆಯನ್ನು ಹೊಂದಿದಾಗ ಏನೂ ಇರುವುದಿಲ್ಲವೆಂದೂ ತಿಳಿಯಬೇಕು ॥೪೫।

ಚತುರ್ಮುಖಸಂಕಲ್ಪದಿಂದ ನಿಷ್ಪನ್ನವಾದ ಜಗತ್ತಿಗೂ ನಮ್ಮ ಸಂಕಲ್ಪದಿಂದ ನಿಷ್ಪನ್ನವಾದ ಜಗತ್ತಿಗೂ ಸಂಕಲ್ಪಜನ್ಯತ್ವವು ಸಾಮಾನ್ಯವಾಗಿರುವಾಗ, ಅಂತರಾಳಿಕವಾದ ಭೇದಕೆ ಕಾರಣವೇನೆಂದರೆ:—ಪ್ರಥಮಸೃಷ್ಟಿಯಲ್ಲಿ ಈ ಜಗದ್ಭ್ರಮವು ಹೇಗೆ ಸ್ಥಿತಿಯನ್ನು ಹೊಂದಿತೋ, ಅದು ಮೊದಲುಗೊಂಡು ಅದು ಅದೇರೀತಿಯಾಗಿ ರೂಢಮೂಲವಾಗಿರುವುದು. ಇದು ನಿಯತಿರೂಪವಾದ ಈಶ್ವರಶಕ್ತಿಯಾಗಿರುವುದು ॥೪೬॥

ಮತ್ತೆ ಲೀಲೆಯು ಹೇಳುವಳು:—

ದೇವಿ! ನಾವಿಬ್ಬರೂ ಜತೆಯಲ್ಲಿ ಆ ಬ್ರಾಹ್ಮಣ ಬ್ರಾಹ್ಮಣಿಯರ ಮನೆಯನ್ನು ಹೊಂದೋಣವೆಂದು ನೀನು ಹೇಳಿದೆಯಲ್ಲವೆ! ಹೇ! ಅಂಬ! ನಾವಿಬ್ಬರೂ ಜತೆಯಾಗಿ ಅಲ್ಲಿಗೆ ಹೋಗುವುದು ಹೇಗೆ? ॥೪೭॥

ನಾನಂತು, ನೀನು ಹೇಳಿದಹಾಗೆ ಈ ದೇಹವನ್ನು ಇಲ್ಲಿರಿಸಿಬಿಟ್ಟು, ಶುದ್ಧತತ್ವಾನುಗಾಮಿಯಾದ ಮನಸ್ಸಿನಿಂದ(ಸೂಕ್ಷ್ಮದೇಹದಿಂದ)ಆ ಪರಲೋಕವನ್ನು ಹೊಂದುವೆನು. ನೀನು ಈ ದೇಹದಿಂದಲೇ ಅಲ್ಲಿಗೆ ಹೇಗೆ ಬರುವೆ? ॥೪೮॥

ಶ್ರೀದೇವ್ಯುವಾಚ.

ಸಙ್ಕಲ್ಪವ್ಯೋಮವೃಕ್ಷಸ್ತೇ ಯಥಾ ಸನ್ನಪಿ ಖಾತ್ಮಕಃ ।
ನ ಕುಡ್ಯಾತ್ಮಾ ನ ಕುಡ್ಯೇನ ರೋಧ್ಯತೇ ನಾಪಿ ಕುಡ್ಯಹಾ ॥೪೯॥
ಶುದ್ಧೈಕಸತ್ತ್ವನಿರ್ಮಾಣಂ ಚಿದ್ರೂಪಸ್ಯೈವ ತತ್ ಕಿಲ ।
ಪ್ರತಿಭಾನಮತಸ್ತಸ್ಮಾತ್ ಪರಸ್ಮಾದ್ಭಿದ್ಯತೇ ಮನಾಕ್ ॥೫೦॥
ಸೋಯಮೇತಾದೃಶೋ ದೇಹೋ ನೈನಂ ಸನ್ತ್ಯಜ್ಯ ಯಾಮ್ಯಹಮ್ ।
ಅನೇನೈವ ತನೂಪ್ನೋಮಿ ದೇಶಂ ಗನ್ಧಮಿವಾನಿಲಃ ॥೫೧॥
ಯಥಾ ಜಲಂ ಜಲೇನಾಗ್ನಿಃ ಅಗ್ನಿನಾ ವಾಯುನಾನಿಲಃ ।
ಮಿಳತ್ಯೇವಮತೋ ದೇಹೋ ದೇಹೈರನ್ಯೈರ್ಮನೋಮಯೈಃ ॥೫೨॥

ಶ್ರೀ ಸರಸ್ವತಿಯುತ್ತರಹೇಳುವಳು: —

ಎಲೌ! ಲೀಲೆ! ನಿನ್ನ ಸಂಕಲ್ಪದಲ್ಲುಂಟಾದ ಆಕಾಶವೃಕ್ಷವು, ಸಂಕಲ್ಪದಶೆಯಲ್ಲಿ ಸತ್ಯವಾಗಿದ್ದರೂ ವಾಸ್ತವ್ಯವಾಗಿ ಆಕಾಶರೂಪವಾದದುದಲ್ಲವೆ! ಇದು ಕುಡ್ಯರೂಪವಾದುದೂ (ಮೂರ್ತಿಮತ್ತಾದುದು) ಅಲ್ಲ; ಕುಡ್ಯದಿಂದ ಇದಕ್ಕೆ ನಿರೋಧವೂ ಇಲ್ಲ; ಕುಡ್ಯವನ್ನು ಇದು ನಾಶಪಡಿಸುವುದೂ ಇಲ್ಲ. ಇದರಂತೆ ಈ ನನ್ನ ದೇಹವು ಮೂರ್ತಿಮತ್ತೂ ಅಲ್ಲ; ಇತರವಾದ ಮೂರ್ತಿಮತ್ಪದಾರ್ಥಗಳಿಂದ ಇದಕ್ಕೆ ನಿರೋಧವೂ ಇಲ್ಲ; ಇದು ಮೂರ್ತಿಮತ್ತಾದುದನ್ನು ನಾಶಪಡಿಸುವುದೂ ಇಲ್ಲ ॥೪೯॥

ಕೇವಲ ಶುದ್ಧಸತ್ವ ನಿರ್ಮಿತವಾಗಿರುವ ಅಸ್ಮದಾದಿದೇಹವು ಯಾವುದುಂಟೋ, ಅದು ಕೇವಲ ಚಿದ್ರೂಪದ ನಿರ್ಮಾಣವೇ ಅಲ್ಲದೆ ಬೇರೆಯಲ್ಲ. ಅದುಕಾರಣ, ಅಸ್ಮದಾದಿಗಳ ಈ ದೇಹಪ್ರತಿಭಾಸವು ಪರಮಾತ್ಮನಿಗಿಂತ ಸ್ವಲ್ಪಮಾತ್ರವೇ ಭಿನ್ನವಾಗಿರುವುದು. ಇದಕ್ಕೊಂದುದಾಹರಣೆಯನ್ನು ಹೇಳುವೆನು. ಒಂದು ಬಟ್ಟೆಯನ್ನು ಸುಟ್ಟುಬಿಟ್ಟರೆ, ಅದರ ಪೂರ್ವಾವಸ್ಥೆಯಲ್ಲಿದ್ದ ದಾರದ ಗೆರೆಗಳೆಲ್ಲವೂ ಯಥಾವಸ್ಥಿತವಾಗಿ ಕಾಣುತ್ತಿದ್ದರೂ, ವಸ್ತುತಃ ಅದು ಬೂದಿಯಾಗಿರುವುದಲ್ಲವೆ! ಆಗ ಬೂದಿಗೂ ಅದಕ್ಕೂ ಅತ್ಯಲ್ಪವಾದ ವೈಲಕ್ಷಣ್ಯವಿರುವುದಲ್ಲವೆ! (ಇದಕ್ಕೆ ದಗ್ಧಪಟನ್ಯಾಯವೆಂದು ಹೆಸರು) ಇದರಂತೆಯೇ ನಮ್ಮಗಳ ಶರೀರವು ಸಂಪೂರ್ಣವಾಗಿ ಬ್ರಹ್ಮರೂಪವಾಗಿದ್ದರೂ ಇನ್ನೂ ಅತ್ಯಲ್ಪವಾದ ವೈಲಕ್ಷಣ್ಯವುಳ್ಳದಾಗಿರುವುದು ॥೫೦॥

ನನಗಿರುವ ಈ ದೇಹವು ಅಂತಹುದಾಗಿರುವುದು; ನಾನು ಇದನ್ನು ಬಿಟ್ಟು ಹೋಗುವುದಿಲ್ಲ; ವಾಯುವು ವಾಸನೆಯನ್ನು ಸೇರುವಂತೆ—(ಒಬ್ಬರಿಗೂ ಕಾಣದಂತೆ) ನಾನು ಈ ದೇಹದಿಂದಲೇ ಆ ಪ್ರದೇಶವನ್ನು ಹೊಂದುವೆನು ॥೫೧॥

ಈ ದೇಹವು ಅಲ್ಲಿರುವ ನಿನ್ನ ಪತಿಯ ಸಂಕಲ್ಪಸೃಷ್ಟಿಯೊಡನೆ ಸೇರುವ ಬಗೆ ಹೇಗೆಂದರೆ:—ನೀರು ನೀರಿನೊಡನೆಯೂ ಅಗ್ನಿಯು ಅಗ್ನಿಯೊಡನೆಯೂ ವಾಯುವು ವಾಯುವಿನೊಡನೆಯೂ ಹೇಗೆ ಭೇದವಿಲ್ಲದೆಯೇ ಸೇರಿಕೊಂಡುಬಿಡುತ್ತದೆಯೋ, ಹಾಗೆ ಮನೋಮಯವಾದ ನಮ್ಮ ದೇಹವು ಮನೋಮಯವಾದ ಇತರ ದೇಹಗಳೊಡನೆ ಸೇರಿಕೊಂಡು ಬಿಡುತ್ತದೆ ॥೫೨॥

ಸ ಹಿ ಪಾರ್ಥಿವತಾಸಂವಿತ್ ಏತ್ಯಪಾರ್ಥಿವಸಂವಿದಾ ।
ಏಕತ್ವಂ ಕಲ್ಪನಾಶೈಲಶೈಲಯೋಃ ಕ್ವಾಹತಿರ್ಮಿಥಃ ॥೫೩॥
ಆತಿವಾಹಿಕಏವಾಯಂ ತ್ವಾದೃಶೈಶ್ಚಿತ್ತದೇಹಕಃ ।
ಆಧಿಭೌತಿಕತಾಬುದ್ಧ್ಯಾ ಗೃಹೀತಶ್ಚಿರಭಾವನಾತ್ ॥೫೪॥
ಯಥಾ ಸ್ವಪ್ನೇ ಯಥಾ ದೀರ್ಘಕಾಲಧ್ಯಾನೇ ಯಥಾ ಭ್ರಮೇ ।
ಯಥಾ ಚ ಸತಿ ಸಙ್ಕಲ್ಪೇ ಯಥಾ ಗನ್ಧರ್ವಪತ್ತನೇ ॥೫೫॥
ವಾಸನಾತಾನವಂ ನೂನಂ ಯದಾ ತೇ ಸ್ಥಿತಿಮೇಷ್ಯತಿ ।
ತದಾತಿವಾಹಿಕೋ ಭಾವಃ ಪುನರೇಷ್ಯತಿ ದೇಹಕೇ ॥೫೬॥

ಲೀಲೋವಾಚ.

ಆತಿವಾಹಿಕದೇಹತ್ವಪ್ರತ್ಯಯೇ ಘನತಾಂ ಗತೇ ।
ತಾಮುವಾಪ್ನೋತ್ಯಯಂ ದೇಹೋ ದಶಾಮಾಹೋ ವಿನಶ್ಯತಿ ॥೫೭॥

ಆದರೆ, 'ನನ್ನ (ಲೀಲೆಯ) ದೇಹವೂ ವಸ್ತುತಃ ಮನೋಮಾತ್ರವಾಗಿರುವುದರಿಂದ ನಿನ್ನ (ಸರಸ್ವತಿಯ) ದೇಹಕ್ಕೆ ಸಜಾತೀಯವೇ ಆಗಿರುವುದಲ್ಲವೆ! ಹೀಗಿರುವಕಾರಣ, ಇದೂ ನಿನ್ನ (ಸರಸ್ವತಿಯ) ದೇಹದೊಡನೆಯೇ ಸೇರಿಕೊಂಡು ಅಲ್ಲಿಗೆ ಏತಕ್ಕೆ ಹೋಗಬಾರದು?'—ಎಂದು ನೀನು ನನ್ನನ್ನು ಕೇಳಬಹುದು. ನಿನಗಿನ್ನೂ ಆ ಸ್ಥಿತಿಯುಂಟಾಗಿಲ್ಲ; ನೀನು ಇದನ್ನು ಇನ್ನೂ ಪಾರ್ಥಿವವೆಂದು ತಿಳಿದುಕೊಂಡಿರುವೆ; ಹೀಗೆ ತಿಳಿಯಲ್ಪಟ್ಟಿರುವ ಈ ದೇಹವು ಪಾರ್ಥಿವಜ್ಞಾನವಿಲ್ಲದ ದೇಹದೊಡನೆ ಸೇರಲಾರದು. ಸಂಕಲ್ಪಜನ್ಯವಾದ ಪರ್ವತಕ್ಕೂ ಪ್ರತ್ಯಕ್ಷವಾದ ಪರ್ವತಕ್ಕೂ ಎಲ್ಲಿತಾನೆ ಪರಸ್ಪರ ಐಕ್ಯವುಂಟಾದೀತು?॥

ಇದೂ ಮಾನಸವೇ ಆಗಿರುವುದರಿಂದ ಇದಕ್ಕೆ ಪಾರ್ಥಿವತ್ವವೆಲ್ಲಿ ಬಂದಿತೆಂದು ನೀನು ಶಂಕೆಪಡಬಹುದು. ವಸ್ತುತಃ ಇದು ಆತಿವಾಹಿಕವಾದ ಚಿತ್ತದೇಹವೇ ಅಹುದು; ಆದರೂ ನಿಮ್ಮಂಥವರೆಲ್ಲರೂ ಇದನ್ನು ಚಿರಕಾಲ ಭಾವನಾಬಲದಿಂದ ಆಧಿಭೌತಿಕವೆಂಬುದಾಗಿ ತಿಳಿದುಕೊಂಡುಬಿಟ್ಟಿರುವುದರಿಂದ, ಇದು ಈಗಿನ ಸ್ಥಿತಿಯಲ್ಲಿ ನಿಮ್ಮಗಳಿಗೆ ಆಧಿಭೌತಿಕ (ಪಾರ್ಥಿವ) ವಾಗಿಯೇ ಇರುವುದೆಂದು ತಿಳಿಯಬೇಕು ॥೫೪॥

ಇದಕ್ಕೆ ಉದಾಹರಣೆಗಳು ಅನೇಕವಾಗಿವೆ,—ಸ್ವಪ್ನದಲ್ಲಿಯೂ, ದೀರ್ಘಕಾಲ ಧ್ಯಾನ ಮಾಡಿದಾಗಲೂ, ಚಿತ್ತಭ್ರಾಂತಿಕಾಲದಲ್ಲಿಯೂ, ಮನಸ್ಸಂಕಲ್ಪವುಂಟಾದಾಗಲೂ, ಗಂಧರ್ವಪಟ್ಟಣದಲ್ಲಿಯೂ, ಈವಿಧವಾದ ಭಾವನಾಬಲದಿಂದ—ಭಾವನಾನುಗುಣವಾಗಿ ಪದಾರ್ಥಜ್ಞಾನನಿಷ್ಪತ್ತಿಯಾಗುವ ವಿಷಯವು—ನಮ್ಮಗಳ ಅನುಭವಗೋಚರವಾಗಿಯೇ ಇರುವುದು ॥೫೫॥

ಇದು ಹೋಗುವುದು ಯಾವಾಗಲೆಂದರೆ,—ನಿನಗೆ ನಿಶ್ಚಯವಾಗಿ ಯಾವಾಗ ಈ ವಾಸನಾಕ್ಷಯವು ಸ್ಥಿರವಾಗುವುದೋ, ಆಗ ಮತ್ತೆ ಈ ದೇಹವು ಆತಿವಾಹಿಕವೆಂಬ ಅಭಿಪ್ರಾಯವು ನೆಲೆಸುವುದು ॥೫೬॥

ಮತ್ತೆ ಲೀಲೆಯು ಕೇಳುವಳು :—

ಅಂಬ! ಆತಿವಾಹಿಕದೇಹವೆಂಬ ಜ್ಞಾನವು ದೃಢವಾದ ಬಳಿಕ, ಈ ದೇಹವು ಆ ದಶೆಯನ್ನು ಹೊಂದುತ್ತದೆಯೋ?—ಅಥವಾ ಇದು ನಾಶವನ್ನೇ ಹೊಂದುತ್ತದೆಯೋ? ॥

ಶ್ರೀದೇವ್ಯುವಾಚ.

ಯದಸ್ತಿ ನಾಮ ತತ್ರೈವ ನಾಶಾನಾಶಕ್ರಮೋ ಭವೇತ್ !
ವಸ್ತುತೋ ಯಚ್ಚ ನಾಸ್ತ್ಯೇವ ನಾಶಃ ಸ್ಯಾತ್ ತಸ್ಯ ಕೀದೃಶಃ ||೫೮||
ರಜ್ಜ್ವಾಂ ಸರ್ಪಭ್ರಮೋ ನಷ್ಟೇ ಸತ್ಯಬೋಧವಶಾತ್ ಸುತೇ |
ಸರ್ಪೋ ನ ನಷ್ಟಉನ್ನಷ್ಟೋ ವೇತ್ಯೇವಂ ಕ್ವೈವ ಸಾ ಕಥಾ ||೫೯||
ಯಥಾ ಸತ್ಯಪರಿಜ್ಞಾನಾತ್ ರಜ್ಜ್ವಾಂ ಸರ್ಪೋ ನ ದೃಶ್ಯತೇ |
ತಥಾತಿವಾಹಿಕಜ್ಞಾನಾತ್ ದೃಶ್ಯತೇ ನಾಧಿಭೌತಿಕಃ ||೬೦||
ಕಲ್ಪನಾಪಿ ನಿವರ್ತೇತ ಕಲ್ಪಿತಾ ಯದಿ ಕೇನಚಿತ್ |
ಸಾ ಶಿಲಾ ಸನುಪಾಸ್ತ್ಯೈವ ಯಾ ನೇಹಾಸ್ತಿ ಕದಾಚನ ||೬೧||
ಪರಂ ಪರೇ ಪರಾಪೂರ್ಣಂ ಇದಂ ದೇಹಾದಿಕಂ ಸ್ಥಿತಮ್ |
ಇತಿ ಸತ್ಯಂ ವಯಂ ಭದ್ರೇ ಪಶ್ಯಾಮೋ ನಾಭಿಪಶ್ಯಸಿ ||೬೨||
ಆದಿಸರ್ಗೇ ಭವೇಚ್ಚಿತ್ತ್ವಂ ಕಲ್ಪನಾಕಲ್ಪಿತಂ ಯದಾ |
ತದಾ ತತಃಪ್ರಭೃತ್ಯೇಕಸತ್ತ್ವಂ ದೃಶ್ಯಮವೇಕ್ಷತೇ ||೬೩||

ಇದಕ್ಕೆ ಶ್ರೀ ಸರಸ್ವತಿಯುತ್ತರಹೇಳುವಳು :—

ಎಲೌ! ಲೀಲೆ! ಯಾವುದು ವಸ್ತುತಃ ಇರುವುದೋ, ಅದರಲ್ಲಿಯೇ ನಾಶ ಅನಾಶ ಈ ಕ್ರಮವುಂಟಾಗಬಹುದು. ಯಾವುದು ವಸ್ತುತಃ ಇಲ್ಲವೇಇಲ್ಲವೋ, ಅದಕ್ಕೆ ನಾಶ ವೆಂತಹುದು ? ॥೫೮॥

ಹೇ! ಪುತ್ರಿ! ರಜ್ಜುವಿನಲ್ಲಿ ಉಂಟಾಗಿದ್ದ ಸರ್ಪಭ್ರಾಂತಿಯು ಸತ್ಯಜ್ಞಾನದದೆಸೆಯಿಂದ ನಷ್ಟವಾಗಲಾಗಿ, ಆಗ-ಸರ್ಪವು ನಾಶಹೊಂದಿತೆ? ಅಥವಾ ನಾಶಹೊಂದಿಲ್ಲವೆ ?— ಎಂಬುದಾಗಿ ಆ ವಿಚಾರವೆಲ್ಲಿ ಬರುವುದು? ॥೫೯॥

ರಜ್ಜುವಿನಲ್ಲಿ ಸತ್ಯಜ್ಞಾನವಾದಬಳಿಕ ಸರ್ಪವು ಹೇಗೆ ಕಾಣುವುದಿಲ್ಲವೋ, ಹಾಗೆಯೇ ಆತಿವಾಹಿಕವೆಂಬ ಜ್ಞಾನವುಂಟಾದಬಳಿಕ ಆಧಿಭೌತಿಕವು ಕಾಣಿಸುವುದಿಲ್ಲ ॥೬೦॥

ಈ ಪ್ರಪಂಚರೂಪವಾದ ಕಲ್ಪನೆಯು ಜ್ಞಾನಾನಂತರ ಹೋಗುವುದೆಂಬ ಅಭಿಪ್ರಾಯವೂಕೂಡ ಯುಕ್ತವಲ್ಲ. ಇದನ್ನು ಯಾರಾದರೂ ಕಲ್ಪಿಸಿದ್ದರಲ್ಲವೆ ಈ ಕಲ್ಪನೆಯು ನಿವೃತ್ತಿಹೊಂದಬಹುದು! ಅದೇ ಇಲ್ಲದಿರುವಾಗ ಇದರ ನಿವೃತ್ತಿಯೆಂದರೇನು? ನಮ್ಮ ಕಣ್ಣೆದುರಿಗೆ ಯಾವ ಶಿಲೆಯು ಎಂದಿಗೂ ಇಲ್ಲವೇಇಲ್ಲವೋ, ಅದು ಎಂದಿಗೂ ಇಲ್ಲವೆಂದೇ ನಿಶ್ಚಯವಲ್ಲದೆ ಹೊಸದಾಗಿ ಹೋಯ್ತೆಂಬ ವ್ಯವಹಾರವೆಲ್ಲಿರುವುದು? ॥೬೧॥

ಹೇ ಭದ್ರೆ! ಈ ದೇಹಾದಿ ಪದಾರ್ಥವು ಪರಬ್ರಹ್ಮವು ; ಇದು ಪರಬ್ರಹ್ಮನಿಂದ ಪರಿಪೂರ್ಣವಾಗಿ ಪರಬ್ರಹ್ಮನಲ್ಲಿಯೇ ಇರುವುದು. ಈ ರೀತಿಯಾಗಿ ನಿಶ್ಚಯವಾಗಿರುವುದನ್ನು ನಾವುಗಳು ಬಲ್ಲೆವು ; ನೀನು ಇದನ್ನರಿಯೆ ॥೬೨॥

ದೃಶ್ಯವಿಲ್ಲದಿರುವ ಚಿತ್ತು ದೃಶ್ಯರೂಪವನ್ನು ಹೊಂದುವುದು ಹೇಗೆಂದರೆ:-ಪ್ರಥಮತಃ ಲಿಂಗದೇಹಸೃಷ್ಟಿಯಾದಾಗ, ಈ ಲಿಂಗದೇಹವನ್ನು ಗೋಚರಮಾಡಿಕೊಂಡಿರುವ ಆ ಚಿತ್ತಿಗೆ ಚಿತ್ತ್ವವೆಂಬ ಧರ್ಮವೊಂದುಂಟಾಗುವುದು. ಬಳಿಕ ಯಾವಾಗ ಪಂಚೀಕರಣರೂಪ

ಲೀಲೋವಾಚ.

ಏಕಸ್ಮಿನ್ನೇವ ಸಂಶಾನ್ತೇ ದಿಕ್ಕಾಲಾದ್ಯವಿಭಾಗಿನಿ ।
ವಿದ್ಯಮಾನೇ ಪರೇ ತತ್ತ್ವೇ ಕಲನಾವಸರಃ ಕುತಃ ॥೬೪॥

ಶ್ರೀದೇವ್ಯುವಾಚ.

ಕಟಕತ್ವಂ ಯಥಾ ಹೇಮ್ನಿ ತರಙ್ಗತ್ವಂ ಯಥಾಮ್ಭಸಿ ।
ಸತ್ಯತ್ವಂ ಚ ಯಥಾ ಸ್ವಪ್ನಸಙ್ಕಲ್ಪನಗರಾದಿಷು ॥೬೫॥
ನಾಸ್ತ್ಯೇವ ಸತ್ಯನುಭವೇ ತಥಾ ನಾಸ್ತ್ಯೇವ ಬ್ರಹ್ಮಣಿ ।
ಕಲ್ಪನಾವ್ಯತಿರಿಕ್ತಾತ್ಮ ತತ್ ಸ್ವಭಾವಾದನಾಮಯಾತ್ ॥೬೬॥
ಯಥಾ ನಾಸ್ತ್ಯಮ್ಬರೇ ಪಾಂಸುಃ ಪರೇ ನಾಸ್ತಿ ತಥಾ ಕಲಾ ।
ಅಕಲಾಕಲನಂ ಶಾನ್ತಂ ಇದಮೇಕಮಜಂ ತತಮ್ ॥೬೭॥
ಯದಿದಂ ಭಾಸತೇ ಕಿಂಚಿತ್ ತತ್ ತಸ್ಯೈವ ನಿರಾಮಯಮ್ ।
ಕಚನಂ ಕಾಚಕಸ್ಯೇವ ಕಾನ್ತಸ್ಯಾತಿಮಣೇರಿವ ॥೬೮॥

ಲೀಲೋವಾಚ.

ಏತಾವನ್ತಂ ಚಿರಂ ಕಾಲಂ ಏತೇ ದೇವಿ ವಯಂ ವದ ।
ಭ್ರಾಮಿತಾಃ ಕೇನ ನಾಮಾಪಿ ದ್ವೈತಾದ್ವೈತವಿಕಲ್ಪಿತೈಃ ॥೬೯॥

ವಾದ ಕಲ್ಪನೆಯಿಂದ ಸೂಲರೂಪವು ಕಲ್ಪಿಸಲ್ಪಡುವುದೋ, ಆಗ ಅದುಮೊದಲುಗೊಂಡು ಸರ್ವತ್ರ ಅನುಗತವಾದ ಆ ಸತ್ವವೊಂದೇ ತಾನು ದೃಶ್ಯರೂಪವಾಗಿಯೂ ಭ್ರಾಂತಿಯಿಂದ ದೃಶ್ಯವನ್ನು ನೋಡುತಲೂ ಇರುವುದು ॥೬೩॥

ಮತ್ತೆ ಲೀಲೆಯು ಪ್ರಶ್ನೆಮಾಡುವಳು:—

ಅಂಬ! ದಿಕ್ಕಾಲಾದಿ ವಿಭಾಗರಹಿತವಾಗಿ ಶಾಂತವಾದ ಆ ಪರತತ್ವವೊಂದೇ ಇರುವಾಗ ಕಲ್ಪನೆಗೆ ಅವಕಾಶವೆಲ್ಲಿಯದು? ॥೬೪॥

ಶ್ರೀ ಸರಸ್ವತಿಯುತ್ತರ ಹೇಳುವಳು:—

ಲೀಲೆ! ಸುವರ್ಣದಲ್ಲಿ ಕಟಕತ್ವವು ಹೇಗಿಲ್ಲವೋ, ಜಲದಲ್ಲಿ ತರಂಗತ್ವವು ಹೇಗಿಲ್ಲವೋ, ಸ್ವಪ್ನ ಸಂಕಲ್ಪನಗರ ಮುಂತಾದುವುಗಳಲ್ಲಿ ಸತ್ಯತ್ವವು ಹೇಗೆ ಇಲ್ಲವೇಇಲ್ಲವೋ, ಹಾಗೆಯೇ ಬ್ರಹ್ಮನಲ್ಲಿ ಕಲ್ಪನೆಗಿಂತ ಪ್ರತ್ಯೇಕವಾದ ಪದಾರ್ಥವಿಲ್ಲವೇಇಲ್ಲ. ನಿರುಪಾಧಿಕವಾದ ಅದರ ಸ್ವಭಾವವೇ ಇದಕ್ಕೆ ಕಾರಣವಾಗಿರುವುದು ॥೬೫—೬೬॥

ಆಕಾಶದಲ್ಲಿ ಧೂಳಿಯು ಹೇಗಿಲ್ಲವೋ, ಹಾಗೆ ಪರಮಾತ್ಮನಲ್ಲಿ ಕಲ್ಪನೆಯಿಲ್ಲ. ಇದು ನಿರ್ವಿಷಯವಾಗಿಯೂ ಶಾಂತವಾಗಿಯೂ ಅನನ್ಯವಾಗಿಯೂ ಜನ್ಮರಹಿತವಾಗಿಯೂ ಸರ್ವತ್ರ ವ್ಯಾಪ್ತವಾಗಿಯೂ ಇರುವುದು ॥೬೭॥

ಈ ದೃಶ್ಯವೆಂಬ ಯಾವದೋ ಒಂದು ಪದಾರ್ಥವು ಭಾಸಿಸುವುದಾವುದುಂಟೋ, ಅದು—ಗಾಜು ಶ್ರೇಷ್ಠವಾದ ಕಾಂತಮಣಿಯಹಾಗೆ ತೋರುವಂತೆ—ಆ ಬ್ರಹ್ಮನ ನಿರುಪಾಧಿಕವಾದ ಪ್ರತಿಭಾಸವೇ ಆಗಿರುವುದು ॥೬೮॥

ಮತ್ತೆ ಲೀಲೆಯು ಪ್ರಶ್ನೆಮಾಡುವಳು:—

ದೇವಿ! ಇದುವರೆಗೆ ಬಹು ದೀರ್ಘಕಾಲ ನಾವು ಯಾರಿಂದ ದ್ವೈತಾದ್ವೈತ ವಿಕಲ್ಪಗಳನ್ನುಂಟುಮಾಡಿ ಭ್ರಮೆಗೊಳಿಸಲ್ಪಟ್ಟೆದ್ದೆವು? ಇದನ್ನು ನೀನು ನನಗೆ ಅಪ್ಪಣೆಕೊಡಿಸು ॥

ಶ್ರೀದೇವ್ಯುವಾಚ.

ಅವಿಚಾರೇಣ ತರಳೇ ಭ್ರಾನ್ತಾಸಿ ಚಿರಮಾಕುಲಾ ।
ಅವಿಚಾರಃ ಸ್ವಭಾವೋತ್ಥಃ ಸ ವಿಚಾರಾದ್ವಿನಶ್ಯತಿ ॥೨೦॥
ಅವಿಚಾರೋ ವಿಚಾರೇಣ ನಿಮೇಷಾದೇವ ನಶ್ಯತಿ ।
ಏಷಾ ಸತ್ತೈವ ತೇನಾನ್ತಃ ಅವಿದ್ಯೈಷಾ ನ ವಿದ್ಯತೇ ॥೨೧॥
ತಸ್ಮಾನ್ನೈವಾವಿಚಾರೋಽಸ್ತಿ ನಾವಿದ್ಯಾಸ್ತಿ ನ ಬನ್ಧನಮ್ ।
ನ ಮೋಕ್ಷೋಽಸ್ತಿ ನಿರಾಬಾಧಂ ಶುದ್ಧಬೋಧಮಿದಂ ಜಗತ್ ॥೨೨॥
ಏತಾವನ್ತಂ ಯದಾ ಕಾಲಂ ತ್ವಯೈತನ್ನ ವಿಚಾರಿತಮ್ ।
ತದಾ ನ ಸಮ್ಪ್ರಬುದ್ಧಾ ತ್ವಂ ಭ್ರಾನ್ತೈವಾಭವ ಆಕುಲಾ ॥೨೩॥
ಅದ್ಯಪ್ರಭೃತಿ ಬುದ್ಧಾಸಿ ವಿಮುಕ್ತಾಸಿ ವಿವೇಕಿನೀ ।
ವಾಸನಾತಾನವಂ ಬೀಜಂ ಪತಿತಂ ತವ ಚೇತಸಿ ॥೨೪॥
ಆದಾವೇವ ಹಿ ನೋತ್ಪನ್ನಂ ದೃಶ್ಯಂ ಸಂಸಾರನಾಮಕಮ್ ।
ಯದಾ ತದಾ ಕಥಂ ತೇನ ವಾಸ್ಯನ್ತೇ ವಾಸನಾಪಿ ಕಾ ॥೨೫॥

ಶ್ರೀ ಸರಸ್ವತಿಯುತ್ತರ ಹೇಳುವಳು:—

ಎಲೌ ! ಚಂಚಲಳೆ! ನೀನು ಇಷ್ಟು ದೀರ್ಘಕಾಲ ಅವಿಚಾರದಿಂದ ವ್ಯಾಕುಲಳಾಗಿದ್ದೆ. ಆ ಅವಿಚಾರವೆಂಬುದು ಸ್ವಭಾವಜನ್ಯವಾದುದು. ಅದು ವಿಚಾರದಿಂದ ನಾಶಹೊಂದುವುದು ॥೨೦॥

ಅವಿಚಾರವೆಂಬುದು ವಿಚಾರದಿಂದ ಒಂದು ನಿಮಿಷದೊಳಗಾಗಿಯೇ ನಾಶಹೊಂದುವುದು. ಅವಿಚಾರರೂಪವಾದ ಈ ಅವಿದ್ಯೆಯೇ ವಿಚಾರದಿಂದ ಬಾಧಿತವಾಗಿ ಬ್ರಹ್ಮಸತ್ತೆಯಾಗುವುದು. ಆದುಕಾರಣ, ನಮ್ಮಲ್ಲಿ ಈ ಅವಿದ್ಯೆಯೆಂಬುದು ವಾಸ್ತವ್ಯವಾಗಿಲ್ಲ ॥೨೧॥

ಹೀಗಿರುವುದರಿಂದ, ಕೊನೆಗೆ ಈ ವಿಚಾರವೆಂಬುವುದೂ ಇಲ್ಲವೇ ಇಲ್ಲ; ಅವಿದ್ಯೆಯೂ ಇಲ್ಲ; ಬಂಧವೂ ಇಲ್ಲ; ಮೋಕ್ಷವೂ ಇಲ್ಲ. ಈ ಜಗತ್ತೆಂಬುದೆಲ್ಲವೂ ನಿರುಪಾಧಿಕವಾದ ಶುದ್ಧಜ್ಞಾನರೂಪವಾಗಿರುವುದು ॥೨೨॥

ಇದುವರೆಗೂ ನೀನು ಇದನ್ನು ಯಾವಾಗ ವಿಚಾರಮಾಡಲಿಲ್ಲವೋ, ಆಗ ನೀನು ಪ್ರಬುದ್ಧಳಾಗದೆ ಭ್ರಾಂತಳಾಗಿ ವ್ಯಾಕುಲಪಡುತ್ತಿದ್ದೆ ॥೨೩॥

ಇದುಮೊದಲುಗೊಂಡು ನೀನು ಪ್ರಬುದ್ಧಳಾದೆ; ವಿವೇಕಿನಿಯಾದೆ; ನಿನ್ನ ಮನಸ್ಸಿನಲ್ಲಿ ವಾಸನಾಕ್ಷಯರೂಪವಾದ ಬೀಜವು ಈಗ ಬಿದ್ದಿರುವುದು ॥೨೪॥

ಈ ಸಂಸಾರನಾಮವಾದ ದೃಶ್ಯವು ಮೊದಲೇ ಯಾವಾಗ ಉತ್ಪನ್ನವಾಗಲಿಲ್ಲವೋ, ಆಗ ಇದರಿಂದ ಪ್ರಾಣಿಗಳು ವಾಸನಾವಿಶಿಷ್ಟರಾಗುವುದು ಹೇಗೆ? ವಾಸನೆಯೆಂಬುದುತಾನೆ ಯಾವುದು? ॥೨೫॥

ದ್ರಷ್ಟೃ ದೃಶ್ಯ ದರ್ಶನ—ಇವುಗಳಿಗೆ ಅತ್ಯಂತಾಭಾವಸಿದ್ಧಿಯುಂಟಾಗಿ, ನಿರ್ವಿಕಲ್ಪಸಮಾಧಿಯುಕ್ತವಾದ ಸರ್ವೋತ್ಕೃಷ್ಟವಾದ ಆ ಏಕಧ್ಯಾನವು ಮನಸ್ಸನ್ನು ಆಶ್ರಯಿಸಲಾಗಿ,

ಅತ್ಯನ್ತಭಾವನಸಮ್ಪತ್ತ್ಯಾ ದ್ರಷ್ಟೃದೃಶ್ಯದೃಶಾಂ ಮುನಃ ।
ಏಕಧ್ಯಾನೇ ಪರೇ ರೂಢೇ ನಿರ್ವಿಕಲ್ಪಸಮಾಧಿನಿ ॥೨೬॥
ವಾಸನಾಕ್ಷಯಬೀಜೇಽಸ್ಮಿನ್ ಕಿಂಚಿದಙ್ಕುರಿತೇ ಹೃದಿ ।
ಕ್ರಮಾನ್ನೋದಯಮೇಷ್ಯನ್ತಿ ರಾಗದ್ವೇಷಾದಿಕಾದೃಶಃ ॥೨೭॥
ಸಂಸಾರಸಮ್ಭವಶ್ಚಾಯಂ ನಿರ್ಮೂಲತ್ವಮುಪೈಷ್ಯತಿ ।
ನಿರ್ವಿಕಲ್ಪಸಮಾಧಾನಂ ಪ್ರತಿಷ್ಠಾಮಲಮೇಷ್ಯತಿ ॥೨೮॥
ವಿಗತಕಲನಕಾಳಿಮಾಕಳಙ್ಕಾ ಗಗನಕಲಾನ್ತರನಿರ್ಮಲಾಮ್ಬುಸೇನ ।
ಸಕಲಕಲನಕಾರ್ಯಕಾರಣಾನ್ತಃ ಕತಿಪಯಕಾಲವಶಾದ್ಭವಿಷ್ಯಸೀತಿ ॥೨೯॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ವಿಶ್ರಾನ್ತ್ಯುಪದೇಶೋ
ನಾಮ ಏಕವಿಂಶಃ ಸರ್ಗಃ.

ಈ ವಾಸನಾಕ್ಷಯಬೀಜವು ಹೃದಯದಲ್ಲಿ ಸ್ವಲ್ಪ ಅಂಕುರಿಸಲಾಗಿ, ಕ್ರಮವಾಗಿ ರಾಗದ್ವೇಷಾದಿಜ್ಞಾನಗಳು ಉತ್ಪತ್ತಿಹೊಂದುವುದಿಲ್ಲ॥೨೬--೨೭॥

ಬಳಿಕ, ಈ ಸಂಸಾರಸಂಭವವೂ ನಿರ್ಮೂಲವಾಗುವುದು, ನಿರ್ವಿಕಲ್ಪಸಮಾಧಿಯು ಅತ್ಯಂತವಾಗಿ ಸ್ಥೈರ್ಯವನ್ನು ಪಡೆಯುವುದು ॥೨೮॥

ಹೀಗೆ ನೀನು ನಿರ್ವಿಕಲ್ಪಸಮಾಧಿಯುಕ್ತಳಾಗಿ, ಕೆಲವು ಕಾಲಕಳೆದಮೇಲೆ, ಮಾಯಾಕಾಶಕ್ಕೂ ತತ್ಕಾರ್ಯಗಳಿಗೂ ಆಧಾರಭೂತನಾದ ನಿರ್ಮಲನಾದ ಆತ್ಮನನ್ನು ಆಶ್ರಯಿಸಿ, ಭ್ರಾಂತಿರೂಪವಾದ ದೋಷವನ್ನು ಕಳೆದುಕೊಂಡು, ನಿಷ್ಕಳಂಕಳಾಗಿ, ಸಮಸ್ತ ಪ್ರಾಣಿಗಳ ಭ್ರಾಂತಿ--ತತ್ಕಾರ್ಯಭೂತವಾದ ವಾಸನೆ—ಇದಕ್ಕೆ ಕಾರಣವಾದ ಅವಿದ್ಯೆ—ಇವುಗಳಿಗೆಲ್ಲ ಅಂತಭೂತವಾದ ಮೋಕ್ಷಸ್ವರೂಪಳಾಗುವೆ ॥೨೯॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ವಿಶ್ರಾಂತ್ಯುಪ
ದೇಶವೆಂಬ ಇಪ್ಪತೊಂದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವಾವಿಂಶಃ ಸರ್ಗಃ.

ಶ್ರೀದೇವ್ಯುವಾಚ.

ಯಥಾ ಸ್ವಪ್ನಪರಿಜ್ಞಾನಾತ್ ಸ್ವಪ್ನದೇಹೋ ನ ವಾಸ್ತವಃ ।
ಅನುಭೂತೋಽಪ್ಯಯಂ ತದ್ವತ್ ವಾಸನಾತಾನವಾದಸತ್ ॥೧॥
ಯಥಾ ಸ್ವಪ್ನಪರಿಜ್ಞಾನಾತ್ ಸಪ್ನದೇಹಃ ಪ್ರಶಾಮ್ಯತಿ ।
ವಾಸನಾತಾನವಾತ್ ತದ್ವತ್ ಜಾಗ್ರದ್ದೇಹೋಽಪಿ ಶಾಮ್ಯತಿ ॥೨॥
ಸ್ವಪ್ನಸಙ್ಕಲ್ಪದೇಹಾನ್ತೇ ದೇಹೋಽಯಂ ಚೇತ್ಯತೇ ಯಥಾ ।
ತಥಾ ಜಾಗ್ರದ್ಭಾವನಾನ್ತೇ ಉದೇತ್ಯೇವಾತಿವಾಹಿಕಃ ॥೩॥
ಸ್ವಪ್ನೇ ನಿರ್ವಾಸನಾಬೀಜೇ ಯಥೋದೇತಿ ಸುಷುಪ್ತತಾ ।
ಜಾಗ್ರತ್ಯವಾಸನಾಬೀಜೇ ತಥೋದೇತಿ ವಿಮುಕ್ತತಾ ॥೪॥
ಯೇಯಂ ತು ಜೀವನ್ಮುಕ್ತಾನಾಂ ವಾಸನಾ ಸಾ ನ ವಾಸನಾ ।
ಶುದ್ಧಸತ್ತ್ವಾಭಿಧಾನಂ ತತ್ ಸತ್ತಾಸಾಮಾನ್ಯಮುಚ್ಯತೇ ॥೫॥

ಉತ್ಪತ್ತಿಪ್ರಕರಣದಲ್ಲಿ ಇಪ್ಪತ್ತೆರಡನೆಯ ಸರ್ಗವು.

ಅವಸ್ಥಾ ತುರ್ಯಲಕ್ಷ್ಮಾತ್ರ ಜೀವನ್ಮುಕ್ತಸ್ಥಿತಿಸ್ತಥಾ ।
ವಾಸನಾತಾನವೋಪಾಯಃ ತದಭ್ಯಾಸಶ್ಚ ಕೀರ್ತ್ಯತೇ ॥

ತುರ್ಯನಾಮಕವಾದ ಅವಸ್ಥೆಯೂ ಜೀವನ್ಮುಕ್ತಸ್ಥಿತಿಯೂ ವಾಸನಾಕ್ಷಯಕ್ಕೆ ಉಪಾಯವೂ ಅದರ ಅಭ್ಯಾಸವೂಕೂಡ ಈ ಸರ್ಗದಲ್ಲಿ ಹೇಳಲ್ಪಡುವುವು ॥

ಪುನಃ ಸರಸ್ವತಿಯು ಲೀಲೆಯನ್ನು ಕುರಿತು ಹೇಳಲುಪಕ್ರಮಿಸುವಳು:—

ಎಲೌ! ಲೀಲೆ! ನಾವು ಸ್ವಪ್ನದಲ್ಲಿ ಕಂಡ ದೇಹವು—ಇದು ಸ್ವಪ್ನವೆಂದು ಗೊತ್ತಾದಬಳಿಕ—ಹೇಗೆ ವಾಸ್ತವ್ಯವಾಗುವುದಿಲ್ಲವೋ, ಹಾಗೆಯೇ ಪ್ರಥಮದಲ್ಲಿ ಅನುಭವಿಸಲ್ಪಟ್ಟಿದ್ದರೂ ಈ ದೇಹವು ವಾಸನಾಕ್ಷಯದಿಂದ ಅಸತ್ಯವಾಗುವುದು ॥೧॥

ಸ್ವಪ್ನವೆಂದು ತಿಳಿದಬಳಿಕ ಸ್ವಪ್ನದೇಹವು ಹೇಗೆ ಶಾಂತವಾಗುವುದೋ, ಜಾಗ್ರತ್ಕಾಲಿಕವಾದ ದೇಹವೂ ಹಾಗೆಯೇ ವಾಸನಾಕ್ಷಯದಿಂದ ಶಾಂತವಾಗುವುದು ॥೨॥

ಸ್ವಪ್ನದೇಹ ಸಂಕಲ್ಪದೇಹಗಳು ನಷ್ಟವಾದಬಳಿಕ ಈ ದೇಹವು ಹೇಗೆ ಗೊತ್ತಾಗುವುದೋ, ಹಾಗೆ ಜಾಗ್ರದವಸ್ಥೆಯ ವಾಸನೆಯು ಕಳೆದಬಳಿಕ ಆತಿವಾಹಿಕದೇಹವು ಉದಯಿಸಿಯೇತೀರುವುದು ॥೩॥

ಸ್ವಪ್ನವು ವಾಸನಾಬೀಜರಹಿತವಾದಾಗ—ಸುಷುಪ್ತ್ಯವಸ್ಥೆಯು ಹೇಗೆ ಉದಯಿಸುವುದೋ, ಹಾಗೆ ಜಾಗ್ರದವಸ್ಥೆಯು ವಾಸನಾಬೀಜರಹಿತವಾದಾಗ—ಜೀವನ್ಮುಕ್ತಿಯುಂಟಾಗುವುದು ॥೪॥

ಜೀವನ್ಮುಕ್ತರಿಗೆ ವಾಸನೆಯಿಲ್ಲವೋ ? – ಎಂದರೆ, ಅವರಿಗಿರುವ ವಾಸನೆಯಾವುದುಂಟೋ—ಅದು ವಾಸನೆಯೇ ಅಲ್ಲ. ಅದು ಶುದ್ಧಸತ್ವನಾಮಕವಾದ ಸಾಮಾನ್ಯವಾದೊಂದು ಸ್ಥಿತಿಯೆನ್ನಲ್ಪಡುವುದು ॥೫॥

ಯಾ ಸುಪ್ತವಾಸನಾ ನಿದ್ರಾ ಸಾ ಸುಷುಪ್ತಿರಿತಿ ಸ್ಮೃತಾ ।
ಯತ್ ಸುಪ್ತವಾಸನಂ ಜಾಗ್ರತ್ ಘನೋಽಸೌ ಮೋಹಉಚ್ಯತೇ ॥೬॥
ಪ್ರಕ್ಷೀಣವಾಸನಾ ನಿದ್ರಾ ತುರ್ಯಶಬ್ದೇನ ಕಥ್ಯತೇ ।
ಜಾಗ್ರತ್ಯಪಿ ಭವತ್ಯೇವ ವಿದಿತೇ ಪರಮೇ ಪದೇ ॥೭॥
ಪ್ರಕ್ಷೀಣವಾಸನಾ ಯೇಹ ಜೀವತಾಂ ಜೀವನಸ್ಥಿತಿಃ ।
ಅಮುಕ್ತೈರಪರಿಜ್ಞಾತಾ ಸಾ ಜೀವನ್ಮುಕ್ತತೋಚ್ಯತೇ ॥೮॥
ಶುದ್ಧಸತ್ತ್ವಾನುಪತಿತಂ ಚೇತಃ ಪ್ರತನುವಾಸನಮ್ ।
ಆತಿವಾಹಿಕತಾಮೇತಿ ಹಿಮಂ ತಾಪಾದಿವಾಮ್ಬುತಾಮ್ ॥೯॥
ಆತಿವಾಹಿಕತಾಂ ಯಾತಂ ಬುದ್ಧಂ ಚಿತ್ತಾನ್ತರೈರ್ಮನಃ ।
ಸರ್ಗಜನ್ಮಾನ್ತರಗತೈಃ ಸಿದ್ಧೈರ್ಮಿಳತಿ ನೇತರತ್ ॥೧೦॥
ಯದಾ ತೇಯಮಹಮ್ಭಾವಃ ಸ್ವಭ್ಯಾಸಾಚ್ಛಾನ್ತಿಮೇಷ್ಯತಿ ।
ತದೋದೇಷ್ಯತಿ ತೇ ಸ್ಫಾರಾ ದೃಶ್ಯಾನ್ತಾ ಬೋಧತಾ ಸ್ವಯಮ್ ॥೧೧॥

ಹಾಗಾದಮೇಲೆ ಮೂರ್ಛೆಗೂ ಸುಷುಪ್ತಿಗೂ ಭೇದವೇನೆಂದರೆ:—ವಾಸನೆಯು ನಿಶ್ಶೇಷವಾಗಿ ನಾಶಹೊಂದದೆ ನಿರ್ವಿಕಾರವಾಗಿರುವ ಯಾವ ನಿದ್ರೆಯುಂಟೋ, ಅದು ಸುಷುಪ್ತಿಯೆನ್ನಲ್ಪಡುವುದು. ಈ ವಿಧವಾದ ಜಾಗ್ರದವಸ್ಥೆಯಾವುದುಂಟೋ, ಅದು ಮೂರ್ಛೆಯೆನ್ನಲ್ಪಡುವುದು ॥೬॥

ನಿಶ್ಶೇಷವಾಗಿ ವಾಸನೆಯು ನಾಶಹೊಂದಿರುವ ನಿದ್ರೆಯು ತುರ್ಯಾವಸ್ಥೆಯೆನ್ನಲ್ಪಡುವುದು. ಆದರೆ, ಪರತತ್ವಜ್ಞಾನವುಂಟಾಗಿದ್ದರೆ—ಈ ತುರ್ಯಾವಸ್ಥೆಯು ಜಾಗ್ರದವಸ್ಥೆಯಲ್ಲಿಯೂ ಆಗಿಯೇ ಆಗುವುದು ॥೭॥

ಈ ಪ್ರಪಂಚದಲ್ಲಿ ಪ್ರಾಣಿಗಳಿಗೆ ನಿಶ್ಶೇಷವಾಗಿ ವಾಸನೆಯು ಕ್ಷಯಹೊಂದಿ ಬದುಕಿರುವ ಸ್ಥಿತಿ ಯಾವುದುಂಟೋ, ಅದೇ ಜೀವನ್ಮುಕ್ತಿಯೆನ್ನಲ್ಪಡುವುದು; ಇದನ್ನು ಮುಕ್ತರಲ್ಲದವರು ತಿಳಿಯಲಾರರು ॥೮॥

ಹಿಮವು ಕಾವಿನಿಂದ ಕರಗಿ ನೀರಾಗುವಂತೆ, ಶುದ್ಧಸತ್ವಾನುಗಾಮಿಯಾದ ಮನಸ್ಸು ವಾಸನಾಶೂನ್ಯವಾಗಿ ಆತಿವಾಹಿಕ ದೇಹರೂಪವನ್ನು ಧರಿಸುತ್ತದೆ ॥೯॥

ಹೀಗೆ ಆತಿವಾಹಿಕ ರೂಪವನ್ನು ಹೊಂದಿ ವ್ಯವಹಾರಕಾಲದಲ್ಲಿಯೂ ಆತ್ಮಜ್ಞಾನಯುಕ್ತವಾಗಿರುವ ಮನಸ್ಸೇ, ಸೃಷ್ಟ್ಯಂತರಗಳನ್ನೂ ಜನ್ಮಾಂತರಗಳನ್ನೂ ಹೊಂದಿರುವ ಇತರ ಚಿತ್ತಗಳೊಡನೆಯೂ ಸಿದ್ಧರೊಡನೆಯೂ ಐಕ್ಯವಾಗಿ ಸೇರುವುದಲ್ಲದೆ, ಇಂತಹ ಸ್ಥಿತಿಯಿಲ್ಲದುದು ಸೇರಲಾರದು ॥೧೦॥

ನಿನಗೆ ಯಾವಾಗ ದೃಢವಾದ ಅಭ್ಯಾಸದಿಂದ ಈ ಅಹಂಭಾವವು ಶಾಂತವಾಗುವುದೋ, ಆಗ ನಿನಗೆ ಈ ದೃಶ್ಯಕ್ಕೆ ಅಂತರೂಪವಾದ ಸ್ವಾಭಾವಿಕ ಚಿದ್ರೂಪತ್ವವು ಪ್ರಕಾಶವಾಗಿ ಉದಯಿಸುವುದು ॥೧೧॥

ಆತಿವಾಹಿಕತಾಜ್ಞಾನಂ ಸ್ಥಿತಿಮೇಷ್ಯತಿ ಶಾಶ್ವತೀಮ್ ।
ಯದಾ ತದಾ ಹ್ಯಸಙ್ಕಲ್ಪಾನ್ ಲೋಕಾನ್ ದ್ರಕ್ಷ್ಯಸಿ ಪಾವನಾನ್ ॥೧೨॥
ವಾಸನಾಕ್ಷಾನವೇ ತಸ್ಮಾತ್ ಕುರು ಯತ್ನಮನಿನ್ದಿತೇ ।
ತಸ್ಮಿನ್ ಪ್ರೌಢಿಮುಪಾಯಾತೇ ಜೀವನ್ಮುಕ್ತಾ ಭವಿಷ್ಯಸಿ ॥೧೩॥
ಯಾವನ್ನ ಪೂರಿತಸ್ತ್ವೇಷಃ ಶೀತಲೋ ಬೋಧಚನ್ದ್ರಮಾಃ ।
ತಾವದ್ದೇಹಮವಸ್ಥಾಪ್ಯ ಲೋಕಾನ್ತರಮವೇಕ್ಷ್ಯತಾಮ್ ॥೧೪॥
ಮಾಂಸದೇಹೋ ಮಾಂಸದೇಹೇನೈವ ಸಂಶ್ಲೇಷಮೇಷ್ಯತಿ।
ನ ತು ಚಿತ್ತಶರೀರೇಣ ವ್ಯವಹಾರೇಷು ಕರ್ಮಸು ॥೧೫॥
ಯಥಾನುಭವಮೇವೈತತ್ ಯಥಾಸ್ಥಿತಮುದಾಹೃತಮ್ ।
ಆಬಾಲಸಿದ್ಧಸಂಸಿದ್ಧಂ ನ ನಾಮ ವರಶಾಪವತ್ ॥೧೬॥
ಅವಬೋಧಘನಾಭ್ಯಾಸಾತ್ ದೇಹಸ್ಯಾಸ್ಯೈವ ಜಾಯತೇ ।
ಸಂಸಾರರವಾಸನಾಕಾರ್ಶ್ಯೇ ನೂನಂ ಚಿತ್ತಶರೀರತಾ ॥೧೭॥
ಉದೇಷ್ಯನ್ತೀ ಚ ಸೈವಾತ್ರ ಕೇನಚಿನ್ನೋಪಲಕ್ಷ್ಯತೇ ।
ಕೇವಲಂ ತು ಜನೈರ್ದೇಹೋ ಮ್ರಿಯಮಾಣೋಽವಲೋಕ್ಯತೇ ॥೧೮॥

ಯಾವಾಗ ನಿನಗೆ ಆತಿವಾಹಿಕತ್ವಬುದ್ಧಿಯು ಸ್ಥಿರವಾದ ಸ್ಥಿತಿಯನ್ನು ಪಡೆಯು ವುದೋ, ಆಗ—ಸಂಕಲ್ಪರಹಿತಗಳಾದ ಪಾವನಗಳಾದ ಲೋಕಗಳನ್ನು ನೀನು ಕಾಣುವೆ॥

ಆದುಕಾರಣ, ಎಲೌ! ಪ್ರಶಸ್ತಳೆ! ವಾಸನೆಯು ಕ್ಷಯಿಸುವುದಕ್ಕೆ ತಕ್ಕ ಪ್ರಯತ್ನವನ್ನು ಮಾಡು. ಈ ವಾಸನಾಕ್ಷಯವು ಸ್ಥಿರವಾದರೆ, ಆಗ ನೀನು ಜೀವನ್ಮುಕ್ತಳಾಗುವೆ ॥೧೩॥

ಆದರೆ, ಎಲ್ಲಿಯವರೆಗೆ ಶೀತಲವಾದ ಈ ಜ್ಞಾನಚಂದ್ರನು ಪೂರ್ಣನಾಗುವುದಿಲ್ಲವೋ, ಆದುವರೆಗೆ ಈ ದೇಹವನ್ನು ಇಲ್ಲಿರಿಸಿ—ಆ ಪರಲೋಕವನ್ನು ನೋಡುವಳಾಗು ॥೧೪॥

ಮಾಂಸಮಯ ದೇಹವು ಲೋಕವ್ಯವಹಾರ ಕರ್ಮಗಳಲ್ಲಿ ಮಾಂಸಮಯವಾದ ದೇಹದೊಡನೆಯೇ ಒಟ್ಟುಗೂಡುವುದಲ್ಲದೆ, ಮನೋಮಯ ದೇಹದೊಡನೆ ಎಂದಿಗೂ ಸೇರುವುದಿಲ್ಲ ॥೧೫॥

ನಾನು ಇದುವರೆಗೆ ಹೇಳಿದ ಈ ವಿಷಯವು, ನಮ್ಮ ಅನುಭವಕ್ಕೆ ಬಂದಿರುವಂತೆಯೇ ಯಥಾಸ್ಥಿತವಾಗಿಯೇ ಹೇಳಲ್ಪಟ್ಟಿರುವುದು. ಇದು ಬಾಲಕನನ್ನು ಮೊದಲುಗೊಂಡು ಸಿದ್ಧರಾದವರವರೆಗೂ ಸ್ಪಷ್ಟವಾಗಿರುವುದಲ್ಲದೆ, ವರದಂತೆಯೂ ಶಾಪದಂತೆಯೂ ನೂತನ ವಿಷಯವಲ್ಲ ॥೧೬॥

ಅಜ್ಞಾನವನ್ನು ದೃಢತರವಾಗಿ ಅಭ್ಯಸಿಸುವುದರಿಂದ ಸಂಸಾರವಾಸನೆಯು ಕೃಶವಾಗಲಾಗಿ, ಈ ಪಾಂಚಭೌತಿಕ ಶರೀರಕ್ಕೇ ನಿಶ್ಚಯವಾಗಿ ಸೂಕ್ಷ್ಮಶರೀರತ್ವವುಂಟಾಗುವುದು ॥೧೭

ಆದರೆ, ಈ ಸ್ಥೂಲದೇಹದಲ್ಲಿ ಆ ಸೂಕ್ಷ್ಮದೇಹತ್ವವಾವಿರ್ಭವಿಸುವುದನ್ನು ಯಾರೂ ನೋಡುವುದಕ್ಕಾಗುವುದಿಲ್ಲ; ಜನರಾದರೆ, ಈ ದೇಹವು ಸತ್ತಿತೆಂದುಮಾತ್ರವೇ ತಿಳಿಯುವರು ॥೧೮॥

ದೇಹಸ್ತ್ವಯಂ ನ ಮ್ರಿಯತೇ ನ ಚ ಜೀವತಿ ಕಿಂಚ ತೇ ।
ಕೇ ಕಿಲ ಸ್ವಪ್ನಸಙ್ಕಲ್ಪಭ್ರಾನ್ತೌ ಮರಣಜೀವಿತೇ ॥೧೯॥
ಜೀವಿತಂ ಮರಣಂ ಚೈವ ಸಙ್ಕಲ್ಪಪುರುಷೇ ಯಥಾ ।
ಅಸತ್ಯಮೇವ ಭಾತ್ಯೇವಂ ತಸ್ಮಿನ್ ಪುತ್ರಿ ಶರೀರಕೇ ॥೨೦॥

ಲೀಲೋವಾಚ.

ತದೇತದುಪದಿಷ್ಟಂ ಮೇ ಜ್ಞಾನಂ ದೇವಿ ತ್ವಯಾಮಲಮ್ ।
ಯಸ್ಮಿನ್ ಶ್ರುತಿಗತೇ ಶಾನ್ತಿಂ ಏತಿ ದೃಶ್ಯವಿಷೂಚಿಕಾ ॥೨೧॥
ಅತೋಽಪಕುರು ಮೇ ಬ್ರೂಹಿ ಕೋಽಭ್ಯಾಸಃ ಕೀದೃಶೋಽಥವಾ।
ಸ ಕಥಂ ಪೋಷಮಾಯಾತಿ ಪುಷ್ಟೇ ತಸ್ಮಿಂಶ್ಚ ಕಿಂ ಭವೇತ್ ॥೨೨॥

ಶ್ರೀದೇವ್ಯುವಾಚ.

ಯದ್ಯೇನ ಕ್ರಿಯತೇ ಕಿಂಚಿತ್ ಯೇನಯೇನ ಯದಾಯದಾ ।
ವಿನಾಭ್ಯಾಸೇನ ತನ್ನೇಹ ಸಿದ್ಧಿಮೇತಿ ಕದಾಚನ ॥೨೩॥
ತಚ್ಚಿನ್ತನಂ ತತ್ಕಥನಂ ಅನ್ಯೋನ್ಯಂ ತತ್ಪ್ರಬೋಧನಮ್ ।
ಏತದೇಕಪರತ್ವಂ ಚ ತದಭ್ಯಾಸಂ ವಿದುರ್ಬುಧಾಃ ॥೨೪॥

ವಾಸ್ತವ್ಯವಾಗಿಯಾದರೋ, ಈ ನಿನ್ನ ದೇಹವು ಸಾಯುವುದೂ ಇಲ್ಲ; ಬದುಕುವುದೂ ಇಲ್ಲ. ಸ್ವಪ್ನದಲ್ಲಿಯೂ ಸಂಕಲ್ಪದಲ್ಲಿಯೂ ಭ್ರಾಂತಿಯುಂಟಾಗಿರುವಾಗ, ಮರಣಜೀವಿತಗಳೆಂಬುವು ಯಾವುವು ? ॥೧೯॥

ವತ್ಸೆ ! ಸಂಕಲ್ಪಕೃತನಾದ ಪುರುಷನಲ್ಲಿ ಜೀವಿತವೂ ಮರಣವೂ ಹೇಗೆ ಅಸತ್ಯವಾಗಿಯೇ ತೋರುವುವೋ, ಆ ಶರೀರದಲ್ಲಿಯೂ ಹಾಗೆಯೇಯೆಂದು ತಿಳಿಯಬೇಕು ॥೨೦॥

ಮತ್ತೆ ಲೀಲೆಯು ಪ್ರಶ್ನೆಮಾಡುವಳು:—

ಎಲೌ ! ದೇವಿ ! ನೀನು ನನಗೆ ಸರ್ವೋತ್ತಮವಾದ ಈ ನಿರ್ಮಲವಾದ ಜ್ಞಾನವನ್ನು ಪದೇಶಿಸಿರುವೆ. ಇದು ಕಿವಿಗೆ ಬಿದ್ದಮಾತ್ರದಿಂದಲೇ ದೃಶ್ಯ (ಸಂಸಾರ) ವೆಂಬ ವಿಷೂಚಿಕೆಯು ಶಾಂತವಾಗುವುದು ॥೨೧॥

ಆದರೆ, ಈಗ ನೀನು ನನಗೆ ಮತ್ತೊಂದು ವಿಷಯದಲ್ಲಿ ಉಪಕಾರಮಾಡಬೇಕಾಗಿರುವುದು. ಅದೇನೆಂದರೆ:—ನೀನು ಹೇಳಿದ ಅಭ್ಯಾಸವೆಂಬುದು ಯಾವುದು ? ಅಥವಾ ಅದು ಹೇಗಿರುವುದು ? ಅದು ವೃದ್ಧಿಹೊಂದಿರುವುದು ಹೇಗೆ ? ಅದು ಚೆನ್ನಾಗಿ ಸ್ಥಿರವಾದರೆ ನಮಗೆ ಏನುಂಟಾಗುವುದು ? ॥೨೨॥

ಶ್ರೀ ಸರಸ್ವತಿಯುತ್ತರಹೇಳುವಳು:—

ಎಲೌ ! ಲೀಲೆ ! ಯಾವಯಾವ ಮನುಷ್ಯನು ಯಾವಯಾವಾಗ ಯಾವಯಾವ ಕಾರಣದಿಂದ ಯಾವುದೊಂದು ಕೆಲಸವನ್ನು ಮಾಡುವನೋ, ಅದೆಲ್ಲವೂ ಈ ಪ್ರಪಂಚದಲ್ಲಿ ಅಭ್ಯಾಸವಿಲ್ಲದೆ ಎಂದಿಗೂ ಸಿದ್ಧಿಹೊಂದುವುದಿಲ್ಲ ॥೨೩॥

ಯಾವುದನ್ನು ಅಭ್ಯಸಿಸಬೇಕೋ—ಸರ್ವದಾ ಅದನ್ನೇ ಚಿಂತಿಸುತ್ತಿರುವುದು, ಅದನ್ನೇ ಸ್ಮರಿಸುತ್ತಿರುವುದು, ಪರಸ್ಪರವಾಗಿ ಅದನ್ನು ತಿಳಿಯಪಡಿಸುವುದು, ಮುಖ್ಯವಾಗಿ ಅದೊಂ

ಯೇ ವಿರಕ್ತಾ ಮಹಾತ್ಮಾನೋ ಭೋಗಭಾವನತಾನವಮ್ |
ಭಾವಯನ್ತ್ಯಭವಾಯಾನ್ತಃ ಭವ್ಯಾ ಭುವಿ ಜಯನ್ತಿ ತೇ ||೨೫||
ಉದಿತೌದಾರ್ಯಸೌನ್ದರ್ಯವೈರಾಗ್ಯರಸರಞ್ಜಿತಾ |
ಆನನ್ದಸ್ಪನ್ದಿನೀ ಯೇಷಾಂ ಮತಿಸ್ತೇಭ್ಯಾಸಿನಃ ಪರೇ ||೨೬||
ಅತ್ಯನ್ತಾಭಾವಸಮ್ಪತ್ತೌ ಜ್ಞಾತೃಜ್ಞೇಯಸ್ಯ ವಸ್ತುನಃ |
ಯುಕ್ತ್ಯಾ ಶಾಸ್ತ್ರೈರ್ಯತನ್ತೇ ಯೇ ತೇ ಬ್ರಹ್ಮಾಭ್ಯಾಸಿನಃ ಸ್ಥಿತಾಃ ||
ಸರ್ಗಾದಾವೇವ ನೋತ್ಪನ್ನಂ ದೃಶ್ಯಂ ನಾಸ್ತ್ಯೇವ ತತ್ ಸದಾ|
ಇದಂ ಜಗದಹಂ ಚೇತಿ ಬೋಧಾಭ್ಯಾಸಮುದಾಹೃತಃ ||೨೮||
ದೃಶ್ಯಾಸಮ್ಭವಬೋಧೇನ ರಾಗದ್ವೇಷಾದಿತಾನವೇ |
ರತಿರ್ಬಲೋದಿತಾ ಯಾಸೌ ಬ್ರಹ್ಮಾಭ್ಯಾಸಮುದಾಹೃತಃ ||೨೯||
ದೃಶ್ಯಾಸಮ್ಭವಬೋಧೇನ ವಿನಾ ದ್ವೇಷಾದಿತಾನವಮ್ |
ತಪಇತ್ಯುಚ್ಯತೇ ತಸ್ಮಾತ್ ನ ಜ್ಞಾತಂ ದುಃಖತಚ್ಚ ತತ್ ||೩೦||

ದರಲ್ಲೇ ಆಸಕ್ತಿಯಿರುವುದು—ಇವುಗಳನ್ನು ಪಂಡಿತರಾದವರು ಅಭ್ಯಾಸವೆಂದು ತಿಳಿದಿರುವರು ||೨೪||

ಯಾವ ಮಹಾತ್ಮರು, ಪುನಃ ಜನ್ಮವಿಲ್ಲದಿರುವುದಕ್ಕೋಸ್ಕರ, ವಿರಕ್ತರಾಗಿ, ಭೋಗಭಾವನೆಯ ನಾಶವನ್ನು ಭಾವಿಸುತ್ತಿರುವರೋ, ಅಂತಹ ಮಹನೀಯರೇ ಸರ್ವೋತ್ಕೃಷ್ಟರಾದ ಅಭ್ಯಾಸಿಗಳೆನ್ನಿಸುವರು ||೨೫||

ಈ ಪ್ರಪಂಚದಲ್ಲಿ ಇದು ನನ್ನದೆಂದು ಎಣಿಸದೆ ಸಮಸ್ತ ಪರಿಗ್ರಹವನ್ನೂ ಬಿಡುವಿಕೆಯೇ ಔದಾರ್ಯವೆನ್ನಲ್ಪಡುವುದು. ಇಂತಹ ಔದಾರ್ಯಸಂಪತ್ತಿನಿಂದಲೂ ವೈರಾಗ್ಯದಿಂದಲೂ ಮನೋಹರವಾಗಿ ಆನಂದದಿಂದ ಸಂಚರಿಸುತ್ತಿರುವ ಬುದ್ಧಿಯು ಯಾರಿಗೆ ಉತ್ಪನ್ನವಾಗುವುದೋ, ಅವರು ಶ್ರೇಷ್ಠರಾದ ಅಭ್ಯಾಸಿಗಳೆನ್ನಲ್ಪಡುವರು ||೨೬||

ಜ್ಞಾತೃವಿನಿಂದ ಜ್ಞೇಯವಾದ ವಸ್ತುವೊಂದೂ ಅತ್ಯಂತವಾಗಿ ಅಸಂಭವವಾಗುವ ವಿಷಯದಲ್ಲಿ ಯಾರು ಯುಕ್ತಿಯಿಂದಲೂ ಶಾಸ್ತ್ರಜ್ಞಾನಗಳಿಂದಲೂ ಪ್ರಯತ್ನಪಡುವರೋ, ಅವರೇ ಸ್ಥಿರತರರಾದ ಬ್ರಹ್ಮಾಭ್ಯಾಸಿಗಳು ||೨೭||

ಈ ದೃಶ್ಯವು ಸೃಷ್ಟ್ಯಾದಿಯಲ್ಲಿಯೇ ಹುಟ್ಟಿಲ್ಲ; ಅದುಕಾರಣ, ಈ ಜಗತ್ತೂ ನಾನೂ ಎಂಬುದು ಯಾವಾಗಲೂ ಇಲ್ಲವೇಯಿಲ್ಲ. – ಎಂದು ಮಾಡುವ ಅಭ್ಯಾಸವು ಜ್ಞಾನಾಭ್ಯಾಸವೆಂದು ಪ್ರಾಜ್ಞರಿಂದ ಹೇಳಲ್ಪಟ್ಟಿರುವುದು ||೨೮||

ಈ ದೃಶ್ಯವಸಂಭವವೆಂಬ ಜ್ಞಾನವು ಸ್ಥಿರವಾಗಿ, ಇದರಿಂದ ರಾಗದ್ವೇಷಾದಿಗಳು ಕೃಶವಾದಬಳಿಕ, ಮನನದಿಂದುಂಟಾದ ವಿದ್ಯಾಬಲದಿಂದುಟಾಗುವ ಆತ್ಮರತಿಯಾವುದುಂಟೋ, ಇದು ಬ್ರಹ್ಮಾಭ್ಯಾಸವೆನ್ನಲ್ಪಡುವುದು ||೨೯||

ಈ ದೃಶ್ಯಾಸಂಭವಜ್ಞಾನವಿಲ್ಲದೆ ಕೇವಲವಾಗಿ ದ್ವೇಷಾದಿಪರಿತ್ಯಾಗವಾವುದುಂಟೋ, ಅದು ತಪಸ್ಸೆಂದು ಹೇಳಲ್ಪಡುವುದೇ ಹೊರತು ಜ್ಞಾನವಾಗಲಾರದು; ಇದು ಕೇವಲವಾಗಿ ಆಯಾಸವನ್ನು ಹೆಚ್ಚಿಸತಕ್ಕುದಲ್ಲದೆ ಇದರಿಂದ ಯಾವ ಆನಂದಲೇಶವೂ ಉಂಟಾಗುವುದಿಲ್ಲವೆಂದು ತಿಳಿಯಬೇಕು ||೩೦||

ದೃಶ್ಯಾಸಂಭವಬೋಧೋ ಹಿ ಜ್ಞಾನಂ ಜ್ಞೇಯಂ ಚ ಕಥ್ಯತೇ ।
ತದಭ್ಯಾಸೇನ ನಿರ್ವಾಣಂ ಇತ್ಯಭ್ಯಾಸೋ ಮಹೋದಯಃ ॥೩೧॥
ಭವಬಹುಳನಿಶಾನಿತಾನ್ತನಿದ್ರಾ ಸತತವಿವೇಕವಿಬೋಧವಾರಿಸೇಕೈಃ ।
ಪ್ರಗಳತಿ ಹಿಮಶೀತಲೈರಶೇಷಾ ಶರದಿ ಮಹಾಮಿಹಿಕೇವ ಚೇತಸೀತಿ ॥೩೨॥
ಇತ್ಯುಕ್ತವತ್ಯಥ ಮುನೌ ದಿವಸೋ ಜಗಾಮ
ಸಾಯನ್ತನಾಯ ವಿಧಯೇಽಸ್ತಮಿನೋ ಜಗಾಮ।
ಸ್ನಾತುಂ ಸಭಾ ಕೃತನಮಸ್ಕರಣಾ ಜಗಾಮ
ಶ್ಯಾಮಾಕ್ಷಯೇ ರವಿಕರೈಶ್ಚ ಸಹಾಜಗಾಮ ॥೩೩॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ
ವಿಜ್ಞಾನಾಭ್ಯಾಸವರ್ಣನಂ ನಾಮ
ದ್ವಾವಿಂಶಃ ಸರ್ಗಃ.

ಚತುರ್ಥೋ ದಿವಸಃ.

ಈ ದೃಶ್ಯಾಸಂಭವಬೋಧವೇ ಜ್ಞಾನವೆಂದೂ ಜ್ಞೇಯವೆಂದೂ ಹೇಳಲ್ಪಡುವುದು; ಇದರ ಅಭ್ಯಾಸದಿಂದಲೇ ಮೋಕ್ಷವುಂಟಾಗುವುದು. ಅಂತು ಹೀಗೆ ಈ ಅಭ್ಯಾಸವೆಂಬುವುದು ಮಹಾಫಲವಾಗುವುದು ॥೩೧॥

ಎಲೌ! ಲೀಲೆ! ಈರೀತಿಯಾಗಿ, ಮನಸ್ಸಿನಲ್ಲಿ ಚೆನ್ನಾಗಿ ಅಭ್ಯಾಸಮಾಡಲ್ಪಟ್ಟು ನಿರಂತರವಾಗಿ ತಾಪೋಪಶಾಂತಿಮಾಡುವಕಾರಣ ಹಿಮದಂತೆ ತಣ್ಣಗಿರುವ ಸಂತತವಾದ ವಿವೇಕವಿಜ್ಞಾನವೆಂಬ ಜಲಸೇಚನೆಗಳಿಂದ, ಸಂಸಾರವೆಂಬ ಕೃಷ್ಣಪಕ್ಷರಾತ್ರಿಯಲ್ಲಿ ಉಂಟಾಗಿರುವ ಮೋಹವೆಂಬ ಗಾಢನಿದ್ರೆಯು, ಶರತ್ಕಾಲದಲ್ಲಿ ಹಿಮವು ಕರಗುವಂತೆ, ಕರಗಿಹೋಗಿಬಿಡುವುದು. ಎಂದು ಶ್ರೀ ಸರಸ್ವತೀದೇವಿಯು ಲೀಲೆಯನ್ನು ಕುರಿತು ಹೇಳಿದಳೆಂಬುದಾಗಿ ಶ್ರೀ ವಸಿಷ್ಠಮುನೀಶ್ವರರು ಶ್ರೀ ರಾಮಚಂದ್ರನಿಗುಪದೇಶಿಸಿದರು ॥೩೨॥

ಬಳಿಕ, ಹೀಗೆ ಶ್ರೀ ವಸಿಷ್ಠಮುನಿಗಳು ಹೇಳುತಿರಲು, ಆ ಹಗಲು ಕಳೆಯಿತು; ಸೂರ್ಯನು ಸಂಧ್ಯಾಕಾಲಿಕವಾದ ಕರ್ಮಾಚರಣೆಗಾಗಿ ಅಸ್ತಹೊಂದಿದನು; ಆ ಸಭೆಯೆಲ್ಲವೂ ನಮಸ್ಕಾರಮಾಡಿ ಸ್ನಾನಾರ್ಥವಾಗಿ ಹೊರಟುಹೋಯಿತು; ರಾತ್ರಿಯು ಕಳೆಯಲಾಗಿ ಸೂರ್ಯಕಿರಣಗಳೊಡನೆ ಮತ್ತೆ ಬಂದು ಸೇರಿತು ॥೩೩॥

ಇದು ಉತ್ಪತ್ತಿಪ್ರಕರಣದೊಳಗೆ ಲೀಲೋಪಾಖ್ಯಾನದಲ್ಲಿ ವಿಜ್ಞಾನಾಭ್ಯಾಸ
ವರ್ಣನೆಯೆಂಬ ಇಪ್ಪತ್ತೆರಡನೆಯ ಸರ್ಗವು.

ಇಲ್ಲಿಗೆ ನಾಲ್ಕನೆಯದಿವಸ ಮುಗಿಯಿತು.

ಅಥ ಉತ್ಪತ್ತಿಪ್ರಕರಣೇ ತ್ರಯೋವಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಇತಿ ಸಙ್ಕಥನಂ ಕೃತ್ವಾ ತಸ್ಯಾಂ ನಿಶಿ ವರಾಙ್ಗನೇ ।
ಸುಪ್ತೇ ಪರಿಜನೇ ನೂನಂ ಅಥಾನ್ತಃಪುರಮಣ್ಡಪೇ ॥೧॥
ದೃಢಾಖಿಲಾರ್ಗಳದ್ವಾರಗವಾಕ್ಷೇ ದಕ್ಷಚೇತಸಿ ।
ಪುಷ್ಪಪ್ರಕರನಿಷ್ಕ್ರಾನ್ತಮಾಂಸಲಾಮೋದಮನ್ಥರೇ ॥೨॥
ಅಮ್ಲಾನಮಾಲಾವಸನಶವಪಾರ್ಶ್ವಾಸನಸ್ಥಿತೇ ।
ಸಕಲಾಮಲಪೂರ್ಣೇನ್ದುವದನದ್ಯೋತಿತಾಸ್ಪದೇ ॥೩॥
ಸಮಾಧಿಸ್ಥಾನಕಂ ಗತ್ವಾ ತಸ್ಥತುರ್ನಿಶ್ಚಲಾಙ್ಗಿಕೇ ।
ರತ್ನಸ್ತಮ್ಭಾದಿಮೋತ್ಕೀರ್ಣೇ ಚಿತ್ರೇ ಭಿತ್ತಾವಿವಾರ್ಪಿತೇ ॥೪॥

ಉತ್ಪತ್ತಿ ಪ್ರಕರಣದಲ್ಲಿ ಇಪ್ಪತ್ತಮೂರನೆಯ ಸರ್ಗವು.

ಯೋಗಾತ್ ಸ್ಥೂಲತನುಂ ತ್ಯಕ್ತ್ವಾ ಗಿರಿಗ್ರಾಮದಿದೃಕ್ಷಯಾ।
ಗೃಹೇ ವ್ಯೋಮ್ನಿ ಗತಿಃ ಸ್ಫಾರೇ ವರ್ಣ್ಯತೇ ಜ್ಞಪ್ತಿಲೀಲಯೋಃ ॥

ಗಿರಿಗ್ರಾಮವನ್ನು ನೋಡಲಪೇಕ್ಷೆಯಿಂದ ಸರಸ್ವತೀಲೀಲೆಯರಿಬ್ಬರೂ ಯೋಗ ಬಲದಿಂದ ಸ್ಥೂಲದೇಹವನ್ನು ಮನೆಯಲ್ಲಿ ಬಿಟ್ಟುಬಿಟ್ಟು ವಿಶಾಲವಾದ ಅಂತರಿಕ್ಷದಲ್ಲಿ ಸಂಚಾರಮಾಡಿದ ವಿಷಯವು ಈ ಸರ್ಗದಲ್ಲಿ ವರ್ಣಿಸಲ್ಪಟ್ಟಿರುವುದು.

ಮತ್ತೆ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಆ ಉತ್ತಮಸ್ತ್ರೀಯರಾದ ಸರಸ್ವತಿಯೂ ಲೀಲೆಯೂ ಆ ರಾತ್ರಿಯಲ್ಲಿ ಸಂಭಾಷಣೆ ಮಾಡಿದವರಾಗಿ, ಬಳಿಕ ಸಮರ್ಥ ಹೃದಯರಾದ ಸಮಸ್ತ ಪರಿಜನರೂ ಬಾಗಿಲುಗಳಿಗೂ ಕಿಟಕಿಗಳಿಗೂ ಚಿಲುಕವನ್ನು ಬಿಗಿಯಾಗಿ ಹಾಕಿಕೊಂಡು ಅಂತಃಪುರದೊಳಗೆ ಚೆನ್ನಾಗಿ ನಿದ್ರೆಮಾಡುತಿರಲು, ಪುಷ್ಪಸಮೂಹದಿಂದ ಹೊರಟ ಪರಿಪೂರ್ಣವಾದ ಪರಿಮಳದಿಂದ ಆಹ್ಲಾದಪಡುತ, ಬಾಡದಿರುವ ಪುಷ್ಪಮಾಲಿಕೆಯಿಂದಲೂ ವಸ್ತ್ರದಿಂದಲೂ ಯುಕ್ತವಾದ ಆ ಪದ್ಮರಾಜನ ಶವದ ಪಾರ್ಶ್ವದಲ್ಲಿರುವ ಆಸನದಲ್ಲಿ ನಿಂತುಕೊಂಡವರಾಗಿ, ನಿರ್ಮಲನಾದ ಪೂರ್ಣ ಚಂದ್ರನಂತಿರುವ ಮುಖಗಳ ಕಾಂತಿಯಿಂದ ಆ ಗೃಹವನ್ನೆಲ್ಲ ಪ್ರಕಾಶಪಡಿಸುತ, ಸಮಾಧಿಸ್ಥಿತಿಯನ್ನು ಹೊಂದಿದವರಾಗಿ, ರತ್ನಸ್ತಂಭದಲ್ಲಿ ಕೆತ್ತಲ್ಪಟ್ಟಿರುವ ಬೊಂಬೆಗಳಂತೆಯೂ ಗೋಡೆಯಮೇಲೆ ಚಿತ್ರದಲ್ಲಿ ಬರೆಯಲ್ಪಟ್ಟಿರುವರಂತೆಯೂ ನಿಶ್ಚಲವಾದ ದೇಹವುಳ್ಳವರಾಗಿ ನಿಂತುಕೊಂಡರು ॥೧-೪॥

ಸರ್ವಾಸ್ತ್ಯಜತುಶ್ಚಿನ್ತಾಃ ಸಜಿತ್ತ್ವೇಚಂ ಸಮುಪಾಗತೇ |
ದಿವಸಾನ್ತ ಇವಾಬ್ಜಿನ್ಯೌ ಪ್ರಸೂತಾಮೋದಲೇಖಿಕೇ ||೫||
ಬಭೂವತುರ್ಭೃಶಂ ಶಾನ್ತೇ ಶುದ್ಧೇ ಸ್ಪನ್ದವಿವರ್ಜಿತೇ |
ಗಿರೌ ಶರದಿ ನಿರ್ವಾತೇ ಇವ ಭ್ರಷ್ಟಾಭ್ರನಾಲಿಕೇ ||೬||
ನಿರ್ವಿಕಲ್ಪಸಮಾಧಾನಾತ್ ಜಹತುರ್ಬಾಹ್ಯಸಂವಿದಮ್ |
ಯಥಾ ಕಲ್ಪಲತೇ ಕಾನ್ತೇ ಪೂರ್ವಮೃತ್ವನ್ತರೇ ರಸಮ್ ||೭||
ಅಹಂ ಜಗದಿತಿ ಭ್ರಾನ್ತಿರ್ದೃಶ್ಯಸ್ಯಾದಾವನುದ್ಭವಃ |
ಯದಾ ತಾಭ್ಯಾಮವಗತಸ್ತ್ವತ್ಯನ್ತಾಭಾವನಾಮಕಃ ||೮||
ತದಾ ದೃಶ್ಯಪಿಶಾಚೋಽಯಂ ಅಲಮಸ್ತಂ ಗತೋ ದ್ವಯೋಃ |
ಅಸತ್ತ್ವಾದೇವ ಚಾಸ್ಮಾಕಂ ಶಶಶೃಙ್ಗಮಿವಾನಘ ||೯||
ಆದಾವೇವ ಹಿ ಯನ್ನಾಸ್ತಿ ವರ್ತಮಾನೇಽಪಿ ತತ್ ತಥಾ |
ಭಾತಂ ವಾಭಾತಮೇವಾತೋ ಮೃಗತೃಷ್ಣಾಮ್ಬುವಜ್ಜಗತ್ ||೧೦||
ಸ್ವಭಾವಕೇವಲಂ ಶಾನ್ತಂ ಸ್ತ್ರೀದ್ವಯಂ ತದ್ಬಭೂವ ಹ |
ಚನ್ದ್ರಾರ್ಕಾದಿಪದಾರ್ಥೌಘೈಃ ದೂರಮುಕ್ತಮಿವಾಮ್ಬರಮ್ ||೧೧||

ಆಗ ಸಕಲೇಂದ್ರಿಯಗಳನ್ನೂ ಉಪಸಂಹರಿಸಿಕೊಂಡವರಾಗಿ, ಸಂಧ್ಯಾಕಾಲದಲ್ಲಿ ಆಮೋದಪರಂಪರೆಯನ್ನು ಬಿಡುತ್ತಿದ್ದ ಕಮಲಲತೆಗಳಂತೆ ಇರುವವರಾಗಿ, ಸಕಲವಿಧವಾದ ಚಿಂತೆಗಳನ್ನೂ ಬಿಟ್ಟುಬಿಟ್ಟರು ||೫||

ಶರತ್ಕಾಲದಲ್ಲಿ ನಿರ್ವಾತವಾದ ಪರ್ವತದಮೇಲೆ ಬಿದ್ದಿರುವ ಮೇಘಪಂಕ್ತಿಗಳಂತೆ, ಶುದ್ಧರಾಗಿಯೂ ನಿಶ್ಚಲರಾಗಿಯೂ ಅತ್ಯಂತ ಶಾಂತರಾಗಿಯೂ ಆದರು ||೬||

ಮನೋಹರಗಳಾದ ಕಲ್ಪಲತೆಗಳು ಹೊಸದಾದ ಋತುವು ಬಂದಾಗ ಪೂರ್ವಋತುವಿನ ಸೊಗಸನ್ನು ಬಿಟ್ಟುಬಿಡುವಂತೆ, ಇವರಿಬ್ಬರೂ ನಿರ್ವಿಕಲ್ಪಸಮಾಧಿಯುಕ್ತರಾಗಿ ಬಾಹ್ಯಜ್ಞಾನವನ್ನೆಲ್ಲ ಬಿಟ್ಟುಬಿಟ್ಟರು ||೭||

ಯಾವಾಗ ಅವರಿಬ್ಬರೂ—ನಾನು ಜಗತ್ತು—ಎಂಬ ಭ್ರಾಂತಿಯಿಂದ ದೃಶ್ಯವಾದ ಈ ಪದಾರ್ಥವು ಮೊದಲೇ ಇರಲಿಲ್ಲವೆಂದು ಅತ್ಯಂತಾಭಾವನಾಮಕವಾದ ಜ್ಞಾನವನ್ನು ಪಡೆದರೋ, ಆಗ ಅವರಿಬ್ಬರಿಗೂ ಈದೃಶ್ಯವೆಂಬ ಪಿಶಾಚವು ಅತ್ಯಂತವಾಗಿ ಅಸ್ತಹೊಂದಿತು. ನಿರ್ದೋಷನಾದ ರಾಮನೇ! ನಮ್ಮಗಳಿಗೆ ಶಶಶೃಂಗಾದಿಗಳು ಸುತರಾಂ ಇಲ್ಲದುದರಿಂದ ಹೇಗೆ ಅವುಗಳ ಸದ್ಭಾವವು ಅಸ್ತಹೊಂದುವುದೋ, ಅವರಿಗೂ ಹಾಗೆಯೇ ಈ ಜಗತ್ಸದ್ಭಾವವಸ್ತಹೊಂದಿತು ||೮—೯||

ಮುಖ್ಯವಾಗಿ ಯಾವುದು ಮೊದಲೇ ಇಲ್ಲವೋ, ಅದು ವರ್ತಮಾನದಶೆಯಲ್ಲಿಯೂ ಹಾಗೆಯೇಸರಿ. ಅದುಕಾರಣ, ಈ ಜಗತ್ತು—ಕಂಡರೂ ಕಾಣದಿದ್ದರೂ—ಮೃಗತೃಷ್ಣಿಕೆಯಲ್ಲಿನ ನೀರಿನಂತೆಯೇ ಸರಿ ||೧೦||

ಆಗ ಆ ಸ್ತ್ರೀಯುಗ್ಮವು, ಚಂದ್ರ ಸೂರ್ಯ ಮುಂತಾದ ಪದಾರ್ಥಸಮೂಹದಿಂದ ಶೂನ್ಯವಾದ ಅಂತರಿಕ್ಷದಂತೆ, ಸ್ವಭಾವತಃ ಕೇವಲವಾಗಿಯೂ ಶಾಂತವಾಗಿಯೂ ಇದ್ದಿತು ||೧೧||

ತೇನೈವ ಜ್ಞಾನದೇಹೇನ ಚಚಾರ ಜ್ಞಪ್ತಿದೇವತಾ |
ಮಾನುಷೀ ತ್ವಿತರೇಣಾಶು ಧ್ಯಾನಜ್ಞಾನಾನುರೂಪಿಣಾ ||೧೦||
ಗೇಹಾನ್ತರೇವ ಪ್ರಾದೇಶಮಾತ್ರಮಾರುಹ್ಯ ಸಂವಿದಾ |
ಬಭೂವತುಶ್ಚಿದಾಕಾಶರೂಪಿಣ್ಯೌ ವ್ಯೋಮಗಾಕೃತೀ ||೧೩||
ಅಥ ತೇ ಲಲನೇ ಲೀಲಾಲೋಲೇ ಲಲಿತಲೋಚನೇ |
ಸ್ವಭಾವಾಚ್ಚೇತ್ಯಸಂವಿತ್ತೇಃ ನಭೋ ದೂರಮಿತೋ ಗತೇ ||೧೪||
ತತ್ರಸ್ಥೇ ವಾಥ ಚಿದ್ವೃತ್ತ್ಯಾ ಪುಪ್ಲುವಾತೇ ನಭಸ್ಥಲಮ್ |
ಕೋಟಿಯೋಜನವಿಸ್ತೀರ್ಣಂ ದೂರಾದ್ದೂರತರಾನ್ತರಮ್ ||೧೫||
ದೃಶ್ಯಾನುಸನ್ಧಾನನಿಜಸ್ವಭಾವಾತ್ ಆಕಾಶದೇಹೇ ಅಪಿ ತೇ ಮಿಥೋತ್ರ |
ಪರಸ್ಪರಾಕಾರವಿಲೋಕನೇನ ಬಭೂವತುಃ ಸ್ನೇಹಪರೇ ವಯಸ್ಯೇ ||೧೬||

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಲೀಲಾಪ್ರಜ್ಞಾದೇವ್ಯೋಃ ಜ್ಞಾನದೇಹಾಕಾಶಗಮನಂ ನಾಮ ತ್ರಯೋವಿಂಶಃ ಸರ್ಗಃ.

ಆಗ ಆ ಸರಸ್ವತೀದೇವಿಯು ಮೊದಲಿದ್ದ ಆ ಜ್ಞಾನದೇಹದಿಂದಲೇ ಸಂಚರಿಸಿದಳು. ಮನುಷ್ಯಳಾದ ಲೀಲೆಯಾದರೋ, ಆಗತಾನೆ ಪಡೆದ ಸಮಾಧಿಜ್ಞಾನಾನುಗುಣವಾದ ಶರೀರದಿಂದ ಸಂಚರಿಸಿದಳು ||೧೨||

ಅವರಿಬ್ಬರೂ ಚಿದಾಕಾಶರೂಪವುಳ್ಳವರಾಗಿ ಆ ಮನೆಯಲ್ಲಿಯೇ ಜ್ಞಾನದಿಂದ ಒಂದು ಪ್ರಾದೇಶಮಾತ್ರ ಮೇಲಕ್ಕೆ ಹಾರಿದವರಾಗಿ ಆಕಾಶಗಾಮಿಯಾದ ಶರೀರವುಳ್ಳವರಾದರು ||

ಬಳಿಕ, ವಿಲಾಸಚಂಚಲರಾಗಿ ಸುಂದರನೇತ್ರಯುರಾಗಿರುವ ಆ ಸ್ತ್ರೀಯರಿಬ್ಬರೂ, ವಿಷಯಾನುಗುಣವಾದ ವ್ಯವಹಾರವನ್ನು ಕಲ್ಪಿಸಿಕೊಳ್ಳತಕ್ಕವರಾಗಿರುವಕಾರಣ, ಈ ಲೋಕದಿಂದ ದೂರವಾಗಿ ಆಕಾಶದಲ್ಲಿ ಹೋಡವರಾದರು ||೧೪||

ಆಗ ಅವರಿಬ್ಬರೂ ಅಲ್ಲಿಯೇ ಇದ್ದವರಾಗಿ, ಜ್ಞಾನವೃತ್ತಿವಿಶೇಷದಿಂದ, ಕೋಟಿಯೋಜನ ವಿಸ್ತೀರ್ಣವಾದ ಅತಿ ದೂರವಾಗಿರುವ ಅಂತರಿಕ್ಷವನ್ನು ಹಾರಿದವರಾದರು ||೧೫

ಆಗ ಅವರಿಬ್ಬರೂ ವಸ್ತುತಃ ಆಕಾಶರೂಪರಾದವರಾಗಿದ್ದರೂ, ಪೂರ್ವದಲ್ಲಿದ್ದ ದೃಶ್ಯದ ಅನುಸಂಧಾನದಿಂದ ಅವಿಧವಾಗಿರುವ ಚಿತ್ತಸ್ವಭಾವವುಳ್ಳವರಾಗಿ, ಪರಸ್ಪರ ಆಕಾರಗಳನ್ನು ಕಂಡುದದರಿಂದ ಈಗಲೂ ಪರಸ್ಪರ ಸ್ನೇಹಯುಕ್ತರಾದ ಸಖಿಯರೇ ಆಗಿದ್ದರು||೧೬||

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಲೀಲಾಸರಸ್ವತೀ ದೇವಿಯರಿಗೆ ಜ್ಞಾನದೇಹದಿಂದ ಆಕಾಶಗಮನವರ್ಣನವೆಂಬ ಇಪ್ಪತ್ತುಮೂರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಚತುರ್ವಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ದೂರಾದ್ದೂರಮಭಿಪ್ಲುತ್ಯ ಶನೈರುಚ್ಚೈಃ ಪದಂ ಗತೇ ।
ಹಸ್ತಂ ಹಸ್ತೇ ಸಮಾಲಮ್ಬ್ಯ ಯಾನ್ತ್ಯೌ ದದೃಶತುರ್ನಭಃ ॥೧॥
ಏಕಾರ್ಣವಮಿವೋಚ್ಛೂನಂ ಗಮ್ಭೀರಂ ನಿರ್ಮಲಾನ್ತರಮ್ ।
ಕೋಮಲಂ ಕೋಮಲಮರುದಾಸಙ್ಗಸುಖಭೋಗದಮ್ ॥೨॥
ಆಹ್ಲಾದಕಮಲಂ ಸೌಮ್ಯಂ ಶೂನ್ಯತಾಮ್ಭೋನಿಮಜ್ಜನಾತ್ ।
ಅತ್ಯನ್ತಶುದ್ಧಂ ಗಮ್ಭೀರಂ ಪ್ರಸನ್ನಮಪಿ ಸಜ್ಜನಾತ್ ॥೩॥
ಶೃಙ್ಗಸ್ಥನಿರ್ಮಲಾಮ್ಭೋದಪೀನೋದರಸುಧಾಲಯೇ ।
ವಿಶಶ್ರಮತುರಾಶಾಸು ಪೂರ್ಣಚನ್ದ್ರೋದರಾಮಲೇ ॥೪॥

ಉತ್ಪತ್ತಿಪ್ರಕರಣದಲ್ಲಿ ಇಪ್ಪತ್ತನಾಲ್ಕನೆಯ ಸರ್ಗವು.

ಅನನ್ತವಿಶ್ವವೈಚಿತ್ರ್ಯವಿಲಾಸೈಃ ಸಮ್ಭೃತಾನ್ತರಮ್।
ನಭೋತ್ರ ವರ್ಣ್ಯತೇ ಪನ್ಥಾಃ ಪ್ರಯಾನ್ತ್ಯೋರ್ಜ್ಞಪ್ತಿಲೀಲಯೋಃ ॥

ಸರಸ್ವತೀದೇವಿಯೂ ಲೀಲೆಯೂ ಪ್ರಯಾಣಮಾಡುವಕಾಲದಲ್ಲಿ ಅವರಿಗೆ ಮಾರ್ಗವಾಗಿ—ಅಪರಿಮಿತವಾದ ಪ್ರಪಂಚವೈಚಿತ್ರ್ಯವಿಲಾಸಗಳಿಂದ ಅವಕಾಶವೆಲ್ಲ ತುಂಬಿರುವ-ಅಂತರಿಕ್ಷವು, ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಿದರು:—

ಅಯ್ಯಾ! ರಾಮ! ಆಗ ಆ ಸರಸ್ವತೀಲೀಲೆಯರಿಬ್ಬರೂ ಬಹುದೂರವಾಗಿ ಹಾರಿಹೋಗಿ, ಮೆಲ್ಲಗೆ ಮೇಲುಗಡೆಗೆ ಹೋದವರಾಗಿ, ಒಬ್ಬರೊಬ್ಬರು ಕೈಹಿಡಿದುಕೊಂಡು ಹೋಗುತ, ಅಂತರಿಕ್ಷಪ್ರದೇಶವನ್ನು ಕಂಡರು ॥೧॥

ಆಸಮಯದಲ್ಲಿ ಆ ಅಂತರಿಕ್ಷಪ್ರದೇಶವು ಹೇಗಿದ್ದಿತೆಂದರೆ:—ವಿಸ್ತಾರವಾಗಿಯೂ ಗಂಭೀರವಾಗಿಯೂ ನಿರ್ಮಲವಾದ ಒಳಭಾಗವುಳ್ಳದಾಗಿಯೂ ಇರುವ ಪ್ರಳಯಕಾಲದಲ್ಲಿ ಒಟ್ಟುಗೂಡಿದ ಸಮುದ್ರದಂತೆ ಮಿರುಗುತಿದ್ದಿತು; ಮಂದಮಾರುತವು ಬೀಸುತಿರುವುದರಿಂದ, ಅದು ಸರ್ವರಿಗೂ ಸುಖಾನುಭವವುಂಟುಮಾಡತಕ್ಕದಾಗಿತ್ತು ॥೨॥

ಶೂನ್ಯತೆಯೆಂಬ ನೀರಿನಲ್ಲಿ ಮುಳುಗಿರುವುದರಿಂದ, ಅತಿ ಸೌಮ್ಯವಾಗಿಯೂ ಅತ್ಯಾಹ್ಲಾದಕರವಾಗಿಯೂ ಇದ್ದಿತು; ಸಜ್ಜನರಿಗಿಂತಲೂ ಪ್ರಸನ್ನ (ನಿರ್ಮಲ) ವಾಗಿಯೂ ಅತ್ಯಂತ ಶುದ್ಧವಾಗಿಯೂ ಗಂಭೀರವಾಗಿಯೂ ಇದ್ದಿತು ॥೩॥

ಆಗ ಅವರಿಬ್ಬರೂ, ದಿಕ್ಕುಗಳಲ್ಲಿರುವ ಮೇರುವೊದಲಾದ ಪರ್ವತಗಳ ಮೇಲೆ ಕುಳಿತುಕೊಂಡಿರುವ ನಿರ್ಮಲವಾದ ಮೇಘಗಳ ಮಧ್ಯಭಾಗಗಳೆಂಬ ಸೌಧಗಳಲ್ಲಿ ವಿಶ್ರಾಂತಿಪಡೆಯುತ್ತಿದ್ದರು. ಆ ಮೇಘಮಧ್ಯಭಾಗಗಳು ಪೂರ್ಣಚಂದ್ರಮಂಡಲದ ಮಧ್ಯಭಾಗದಂತೆ ನಿರ್ಮಲವಾಗಿ ಆಹ್ಲಾದಕವಾಗಿದ್ದುವು ॥೪॥

ಸಿದ್ಧಗನ್ಧರ್ವಮನ್ದಾರಮಾಲಾಮೋದಮನೋಹರೇ ।
ಚನ್ದ್ರಮಣ್ಡಲನಿಷ್ಕ್ರಾನ್ತೇ ರೇವಾತೇ ಮಧುರಾನಿಲೇ ॥೫॥
ಸಸ್ನತುರ್ಭೂರಿಘರ್ಮಾನ್ತೇ ತಟಿದ್ರಕ್ತಾಬ್ಜಸಙ್ಕುಲೇ ।
ಸರಸೀವ ಜಲಾಪೂರಮನ್ಥರೇ ಮೇಘಮಣ್ಡಲೇ ॥೬॥
ಭೂತಲೌಘಮಹಾಶೈಲಮೃಣಾಳಾಙ್ಕುರಕೋಟಿಷು ।
ದಿಕ್ಷು ಬಭ್ರಮತುಃ ಸ್ವೈರಂ ಭ್ರಮರ್ಯೌ ಸರಸೀಷ್ವಿವ ॥೭॥
ಧಾರಾಗೃಹಧಿಯಾ ಧೀರಗಙ್ಗಾನಿರ್ಝರಧಾರಿಣಿ ।
ಭ್ರೇಮತುರ್ವಾತವಿಕ್ಷುಬ್ಧಮೇಘಮಣ್ಡಲಮಣ್ಡಪೇ ॥೮॥
ತತೋ ಮಧುರಗಾಮಿನ್ಯೌ ವಿಶ್ರಾನ್ತ್ಯಾ ಸ್ವಶಕ್ತಿತಃ ।
ಶೂನ್ಯೇ ದದೃಶತುರ್ವ್ಯೋಮ ಮಹಾರಮ್ಭಾತಿಮನ್ಥರಮ್ ॥೯॥
ಅದೃಷ್ಟಪೂರ್ವಮನ್ಯೋನ್ಯಂ ಸರ್ವಸಙ್ಕಟಕೋಟರಮ್ ।
ಅಪೂರ್ಯಮಾಣಮಾಶೂನ್ಯಂ ಜಗತ್ಕೋಟಿಶತೈರಪಿ ॥೧೦॥

ಆ ಆಕಾಶಮಧ್ಯದಲ್ಲಿ ಚಂದ್ರಮಂಡಲದ ದೆಸೆಯಿಂದ ದಿವ್ಯವಾದ ವಾಯುವು ಹೊರಡುತ್ತಿತ್ತು; ಸಿದ್ಧರೂ ಗಂಧರ್ವರೂ ಧರಿಸಿಕೊಂಡಿರುವ ಮಂದಾರಪುಷ್ಪಮಾಲಿಕೆಗಳ ಸುವಾಸನೆಯು, ಆ ವಾಯುಗಳನ್ನು ಮನೋಹರಮಾಡುತ್ತಿದ್ದಿತು; ಇಂತಹ ಮಂದಮಾರುತದಲ್ಲಿ ಅವರಿಬ್ಬರೂ ಆಟವಾಡುತ್ತಿದ್ದರು ॥೫॥

ಸರಸ್ಸಿನಂತೆ—ಅತ್ಯಧಿಕವಾದ ಬಿಸಿಲುತಾಪಕ್ಕೆ ಅಂತರೂಪವಾಗಿಯೂ ಮಿಂಚುಗಳೆಂಬ ಕೆಂದಾವರೆಗಳಿಂದ ಪರಿಪೂರ್ಣವಾಗಿಯೂ ಜಲಭರಿತವಾಗಿಯೂ ಇರುವ ಮೇಘಮಂಡಲದಲ್ಲಿ ಅವರಿಬ್ಬರೂ ಸ್ನಾನಮಾಡುತ್ತಿದ್ದರು ॥೬॥

ಆಯಾ ಭೂಮಿಪ್ರದೇಶದಲ್ಲಿರುವ ಮಹಾಗಿರಿಗಳೆಂಬ ತಾವರೆದಂಟಿನ ಮೊಳಕೆಗಳಿಂದ ವ್ಯಾಪ್ತವಾದ ದಿಕ್ಕುಗಳಲ್ಲಿ—ಎರಡು ಹೆಣ್ಣುದುಂಬಿಗಳು ಕೊಳಗಳಲ್ಲಿ ಸಂಚರಿಸುವಂತೆ—ಅವರಿಬ್ಬರೂ ಸಂಚರಿಸಿದರು ॥೭॥

ಗಂಭೀರವಾದ ಗಂಗಾಪ್ರವಾಹವನ್ನು ಧರಿಸಿರುವುದಾಗಿಯೂ ವಾಯುವಿನಿಂದ ಕಂಪಿತವಾಗಿಯೂ ಇರುವ ಮೇಘಮಂಡಲವೆಂಬ ಮಂಟಪದಲ್ಲಿ ಮಜ್ಜನಗೃಹವೆಂಬ ಬುದ್ಧಿಯಿಂದ ಅವರಿಬ್ಬರೂ ಭ್ರಮಿಸಿದರು ॥೮॥

ಒಳಿಕ ಅವರಿಬ್ಬರೂ ಮೆಲ್ಲಗೆ ಹೋಗುತ್ತಿರುವರಾಗಿ, ತಮ್ಮ ಶಕ್ತ್ಯನುಸಾರವಾಗಿ ವಿಶ್ರಾಂತಿಪಡೆಯುತ, ಶೂನ್ಯವಾಗಿರುವ ಆ ಪ್ರದೇಶದಲ್ಲಿ ಅನೇಕ ಮಹಾಕಾರ್ಯಪರಿಪೂರ್ಣವಾದ ಅಂತರಿಕ್ಷಪ್ರದೇಶವನ್ನು ನೋಡಿದವರಾದರು ॥೯॥

ಅದನ್ನು ಅವರು ಹಿಂದೆ ಯಾವಾಗಲೂ ನೋಡಿರಲಿಲ್ಲ; ಅದರ ಮಧ್ಯಭಾಗವು ಪರಸ್ಪರವಾಗಿ ಸರ್ವಪ್ರಾಣಿಗಳಿಗೂ ಸಂಕಟ (ಕಿಕ್ಕಿರಿಯುವುದು) ವಾಗಿದ್ದಿತು. ಅನೇಕಕೋಟಿಜಗತ್ತುಗಳಿಂದ ತುಂಬಲ್ಪಡುತ್ತಿದ್ದರೂ ಸುತ್ತಲೂ ಶೂನ್ಯವಾಗಿಯೇ ಕಾಣಿಸುತಿದ್ದಿತು ॥೧೦

ಉಪರ್ಯುಪರ್ಯುಪರ್ಯುಚ್ಚೈಃ ಅನ್ಯೈರನ್ಯೈರ್ವೃತಂ ಪೃಥಕ್ ।
ವಿಚಿತ್ರಾಭರಣಾಕಾರೈಃ ಭೂತಲೈಃ ಸುವಿಮಾನಕೈಃ ॥೧೧॥
ಪರಿತಃ ಪೂರಿತವ್ಯೋಮ್ನಾಂ ಮೇರ್ವಾದಿಕುಲಭೂಭೃತಾಮ್ ।
ಪದ್ಮರಾಗತಟೋದ್ದ್ಯೋತೈಃ ಕಲ್ಪಜ್ವಾಲೋಪಮೋದರಮ್ ॥೧೨॥
ಮುಕ್ತಾಶಿಖರಭಾಪೂರೈಃ ಹಿಮವತ್ಸಾನುಸುನ್ದರಮ್ ।
ಕಾಞ್ಚನಾದ್ರಿಸ್ಥಲಾರ್ಚಿರ್ಭಿಃ ಕಾಞ್ಚನಸ್ಥಲಭಾಸುರಮ್ ॥೧೩॥
ಮಹಾಮರಕತಾಭಾಭಿಃ ಶಾದ್ವಲಸ್ಥಲನೀಲಿಮ ।
ದೃಷ್ಟೃದೃಶ್ಯಕ್ಷಯಾಸಕ್ತಜಾತಧ್ವಾನ್ತೋತ್ಥಕಾಳಿಮ ॥೧೪॥
ಪಾರಿಜಾತಲತಾಲೋಲವಿಮಾನಗಣಕೇತನಮ್ ।
ಅತೋ ಮಞ್ಜರಿಕಾಕಾರಂ ಇವ ವೈದೂರ್ಯಭೂತಲಮ್ ॥೧೫॥
ಮನೋವೇಗಮಹಾಸಿದ್ಧಜಿತವಾತಗಮಾಗಮಮ್ ।
ವಿಮಾನಗೃಹದೇವಸ್ತ್ರೀಗೇಯವಾದ್ಯಸಘುಙ್ಘುಮಮ್ ॥೧೬॥

ಮೇಲುಗಡೆಯಲ್ಲಿ, ವಿಚಿತ್ರವಾದ ಆಭರಣವೂ ಆಕಾರವೂ ಉಳ್ಳವುಗಳಾಗಿಯೂ ಉತ್ತಮ ವಿಮಾನಯುಕ್ತಗಳಾಗಿಯೂ ಇರುವ-ಒಂದಕ್ಕೊಂದು ಸಂಬಂಧವಿಲ್ಲದೆ ಬೇರೆ ಬೇರೆಯಾಗಿರುವ—ಆಯಾ ಲೋಕಪ್ರದೇಶಗಳಿಂದ, ಮೇಲೆಮೇಲೆ ಆವರಿಸಲ್ಪಟ್ಟಿದ್ದಿತು ॥

ಆ ಅಂತರಿಕ್ಷದ ಸುತ್ತಲೂ ಅವಕಾಶವನ್ನೆಲ್ಲ ಪರಿಪೂರ್ತಿಮಾಡಿಕೊಂಡಿರುವ ಮೇರು ಮೊದಲಾದ ಕುಲಪರ್ವತಗಳಿದ್ದುವು; ಅವುಗಳಲ್ಲಿರುವ ಪದ್ಮರಾಗ (ಕೆಂಪು) ರತ್ನಭೂಮಿಗಳ ಕಾಂತಿಗಳು ಮೇಲಕ್ಕೆದ್ದಿರುವುದರಿಂದ, ಅಂತರಿಕ್ಷಮಧ್ಯವೆಲ್ಲವೂ ಪ್ರಳಯಾಗ್ನಿಜ್ವಾಲೆಗೆ ಸಮಾನವಾಗಿದ್ದಿತು ॥೧೨॥

ಮತ್ತು ಆ ಪರ್ವತಗಳ ಮುತ್ತಿನ ಶಿಖರಗಳ ಕಾಂತಿಪ್ರವಾಹಗಳಿಂದ, ಹಿಮವತ್ಪರ್ವತದ ತೊಪ್ಪಲಿನಂತೆ ಮನೋಹರವಾಗಿದ್ದಿತು; ಸುವರ್ಣಮಯವಾದ ಗಿರಿಪ್ರದೇಶಗಳ ಜ್ವಾಲೆಗಳಿಂದ, ಆ ಆಕಾಶವೂ ಸುವರ್ಣಮಯವಾದ ಭೂಮಿಯಂತೆ ಪ್ರಕಾಶಿಸುತ್ತಿದ್ದಿತು॥

ಆ ಪರ್ವತಗಳಲ್ಲಿರುವ ಶ್ರೇಷ್ಠವಾದ ಪಚ್ಚೆಗಳ ಕಾಂತಿಗಳಿಂದ ಹಸುರುಬೆಳೆದಿರುವ ಭೂಮಿಯಂತಿದ್ದಿತು; ನೋಡತಕ್ಕವರನ್ನೂ ನೋಡಲ್ಪಡತಕ್ಕುದನ್ನೂ ಕಾಣದಂತೆ ಮಾಡುವುದರಲ್ಲುದ್ಯುಕ್ತವಾಗಿ ಹುಟ್ಟಿರುವ ಅಂಧಕಾರದಿಂದ ಅಲ್ಲಲ್ಲಿ ಕಪ್ಪುಗವಿದಿದ್ದಿತು ॥೧೪

ಕೆಲವು ಕಡೆಯಲ್ಲಿ ಪಾರಿಜಾತಲತೆಗಳ ಮೇಲುಗಡೆ ಹಾರಾಡುತಿರುವ ವಿಮಾನಸಮೂಹಗಳಿಗೆ ಆಶ್ರಯಸ್ಥಾನವಾಗಿರುವುದರಿಂಚ, ಸಮೀಪದಲ್ಲಿ ನೋಡತಕ್ಕವರಿಗೆ ಆ ಪಾರಿಜಾತಪುಷ್ಪಮಂಜರೀಪುಂಜದಂತೆಯೂ—ದೂರದಲ್ಲಿ ನೋಡತಕ್ಕವರಿಗೆ ವೈಡೂರ್ಯರತ್ನಮಯವಾದ ಭೂಮಿಯಂತೆಯೂ ಕಾಣಿಸುತಿದ್ದಿತು ॥೧೫॥

ಅಲ್ಲಿರುವ ಮಹಾಸಿದ್ಧರು, ಮನೋವೇಗವುಳ್ಳವರಾಗಿ, ತಮ್ಮ ವೇಗದಿಂದ ವಾಯುವಿನ ಗಮನಾಗಮನಗಳನ್ನೂ ಜಯಿಸಿದ್ದರು; ಅಲ್ಲಿರುವ ವಿಮಾನಗಳಲ್ಲಿ ಮನೆಯಂತೆ ವಾಸಮಾಡುತಿರುವ ದೇವಸ್ತ್ರೀಯರ ಗಾನಗಳಿಂದಲೂ ವಾದ್ಯಗಳಿಂದಲೂ ಘುಮಘುಮ ಎಂಬ ಧ್ವನಿಯು ತುಂಬಿಕೊಂಡಿದ್ದಿತು ॥೧೬॥

ತ್ರೈಲೋಕ್ಯವರಭೂತೌಘಸಞ್ಚಾರಾವಿರಳಾನ್ತರಮ್ ।
ಅನ್ಯೋನ್ಯಾದೃಷ್ಟಸಞ್ಚಾರಸುರಾಸುರಕುಲಾಕುಲಮ್ ॥೧೭॥
ಪರ್ಯನ್ತಸ್ಥಿತಕೂಶ್ಮಾಣ್ಡರಕ್ಷಃಪೈಶಾಚಮಣ್ಡಲಮ್ ।
ವಾತಸ್ಕನ್ಧಮಹಾವೇಗವಹದ್ವೈಮಾನಿಕವ್ರಜಮ್ ॥೧೮॥
ವಹದ್ವಿಮಾನಸೀತ್ಕಾರಮುಷ್ಟಿಗ್ರಾಹ್ಯಘನಧ್ವನಿ ।
ಗ್ರಹರ್ಕ್ಷಘನಸಞ್ಚಾರಾತ್ ಪ್ರಚಲದ್ವಾತಯನ್ತ್ರಕಮ್ ॥೧೯॥
ನಿಕಟಾತಪದಗ್ಧಾಲ್ಪಸಿದ್ಧಸಿದ್ಧೋಜ್ಝಿತಾಸ್ಪದಮ್ ।
ಅರ್ಕಾಶ್ವಮುಖವಾತಾಸ್ತದಗ್ಧಮುಗ್ಧವಿಮಾನಕಮ್ ॥೨೦॥
ಲೋಕಪಾಲಾಪ್ಸರೋಬೃನ್ದಸಞ್ಚಾರಾಚಾರಚಞ್ಚಲಮ್ ।
ದೇವ್ಯನ್ತಃಪುರಿಕಾದಗ್ಧಧೂಪಧೂಮಾಮ್ಬುದಾಮ್ಬರಮ್ ॥೨೧॥
ಸ್ವಸ್ವರ್ಗಾಹೂತದೇವಸ್ತ್ರೀಸ್ವಾಙ್ಗವಿಭ್ರಷ್ಟಭೂಷಣಮ್ ।

ಮೂರುಲೋಕದಲ್ಲಿಯೂ ಪ್ರಶಸ್ತವಾದ ಪ್ರಾಣಿಸಮೂಹಗಳು ಸಂಚರಿಸುತಿರುವುದರಿಂದ ಅಲ್ಲಿನ ಅವಕಾಶವೆಲ್ಲ ತುಂಬಿಹೋಗಿದ್ದಿತು; ಅಲ್ಲಿ ಸಂಚರಿಸುತ್ತಿರುವ ದೇವಾಸುರರು, ಒಬ್ಬರ ಸಂಚಾರವನ್ನೊಬ್ಬರು ಕಾಣದೆ, ಗುಂಪುಗುಂಪಾಗಿ ಮುತ್ತಿಕೊಂಡಿದ್ದರು ॥೧೭॥

ಆ ಅಂತರಿಕ್ಷದ ಸುತ್ತಲೂ, ಕೂಶ್ಮಾಂಡ ರಕ್ಷಸ್ಸು ಪಿಶಾಚ-ಇವುಗಳ ಸಮೂಹಗಳು ನಿಂತಿದ್ದುವು; ಆವಹ ಪ್ರವಹ ಮುಂತಾದ ವಾತಗಳ ಮಧ್ಯದಲ್ಲಿ ಮಹಾವೇಗದಿಂದ ವಿಮಾನಚಾರಿಗಳು ಸಂಚರಿಸುತಿದ್ದರು ॥೧೮॥

ಅಲ್ಲಿ ಹಾರಾಡುತ್ತಿರುವ ವಿಮಾನಗಳ ಸೀತ್ಕಾರಧ್ವನಿಗಳು, ಮೇಘಗಳ ಧ್ವನಿಯನ್ನು ಮುಷ್ಟಿಯಲ್ಲಿ ಹಿಡಿದುಕೊಳ್ಳುವಂತಿದ್ದುವು [ಮೇಘಧ್ವನಿಗಿಂತಲೂ ಪ್ರಬಲವಾಗಿದ್ದುವು]; ಗ್ರಹಗಳೂ ನಕ್ಷತ್ರಗಳೂ ಮೇಘಗಳೂ ಅವಿಚ್ಛಿನ್ನವಾಗಿ ಸಂಚರಿಸುತ್ತಿರುವುದರಿಂದ, ವಾಯುಮಂಡಲಚಕ್ರವು ವಿಶೇಷವಾಗಿ ಚಲಿಸುತ್ತಿದ್ದಿತು ॥೧೯॥

ಅಲ್ಲಿ ಇನ್ನೂ ಸಂಪೂರ್ಣವಾಗಿ ಸಿದ್ಧಿಪಡೆಯದಿರುವ ಸಿದ್ಧರು, ಹತ್ತಿರದಲ್ಲಿ ಬಂದ ಬಿಸಿಲಿನಿಂದ ಸಂತಪ್ತರಾಗಿ ತಮ್ಮ ವಾಸಸ್ಥಾನಗಳನ್ನು ಬಿಟ್ಟು ಹೋಗುತಿದ್ದರು; ಸೂರ್ಯನ ಕುದುರೆಗಳು ಸಂಚರಿಸುವಾಗ ಮುಂದುಗಡೆ ಬಂದ ಸಣ್ಣಸಣ್ಣ ವಿಮಾನಗಳನ್ನು ತಮ್ಮ ಮುಖಮಾರುತಗಳಿಂದ ದೂರವಾಗಿ ಓಡಿಸುತ್ತಿದ್ದುವು; ಈ ವಿಮಾನಗಳು ಸೂರ್ಯಕಿರಣಜ್ವಾಲೆಗಳಿಂದ ಕೆಲವುವೇಳೆ ಸುಟ್ಟುಹೋಗುತಲೂ ಇದ್ದುವು ॥೨೦॥

ಲೋಕಪಾಲಕರೂ ಅಪ್ಸರಸ್ತ್ರೀಯರೂ ಕೂಡ, ಗುಂಪುಗುಂಪಾಗಿ ಸಂಚರಿಸುವುದರಿಂದಲೂ, ಇತರವಿಧವಾಗಿ ಕೆಲಸಮಾಡುವುದರಿಂದಲೂ, ಆ ಅಂತರಿಕ್ಷವೇ ಚಂಚಲವಾಗಿರುವಂತೆ ಕಾಣಿಸುತ್ತಿದ್ದಿತು ; ದೇವಸ್ತ್ರೀಯರ ಅಂತಃಪುರದಲ್ಲಿರುವ ಹೆಂಗಸರು, ಚಂದನ ಮುಂತಾದುವುಗಳನ್ನು ಹತ್ತಿಸಲಾಗಿ, ಅವುಗಳ ಧೂಮವೆದ್ದು ಆ ಅಂತರಿಕ್ಷವನ್ನು ಮೋಡಗಟ್ಟಿದಂತೆ ಮಾಡಿಬಿಟ್ಟಿತ್ತು ॥೨೧॥

ಇಂದ್ರ ಚಂದ್ರ ಮೊದಲಾದವರೆಲ್ಲರೂ, ತಮ್ಮತಮ್ಮ ಲೋಕಗಳನ್ನೇ ಸ್ವರ್ಗವೆಂದು ಹೇಳುತ, ಅಪ್ಸರಸ್ತ್ರೀಯರನ್ನು ಕರೆಯುತಿರಲು, ಅವರ ಅಂಗಗಳಿಂದ ಜಾರಿಬಿದ್ದ ಆಭರಣ

ಸಾಮಾನ್ಯಸಿದ್ಧಸಙ್ಘೋಗ್ರತೇಜಃಪುಞ್ಜತಮೋಬಲಮ್ ॥೨೨॥
ಬಲವತ್ಸಿದ್ಧಸಙ್ಘಟ್ಟಗಮಾಗಮವಿಘಟ್ಟಿತೈಃ ।
ಘನೈಃ ಸಾಂಶುಕಪಾರ್ಶ್ವಸ್ಥಹಿಮವನ್ಮೇರುಮನ್ದರಮ್ ॥೨೩॥
ಕಾಕೋಲೂಕೈರ್ಗೃಧ್ರಭಾಸ್ಯೈಃ ರಾಶಿಭೂತೈಶ್ಚ ಲೈರ್ವೃತಮ್ ।
ನೃತ್ಯದ್ಭಿರ್ಡಾಕಿನೀಸಙ್ಘೈಃ ತರಙ್ಗೈರಿವ ವಾರಿಧಿಮ್ ॥೨೪॥
ಪ್ರವೃತ್ತೈರ್ಯೋಗಿನೀಸಙ್ಘೈಃ ಶ್ವಕಾಕೋಷ್ಟ್ರಖರಾನನೈಃ ।
ನಿರರ್ಥಂ ಯೋಜನಶತಂ ಗತ್ವಾಗಚ್ಛದ್ಭಿರಾವೃತಮ್ ॥೨೫॥
ಲೋಕಪಾಲಪುರೋ ಧ್ವಾನ್ತಧೂಮಧೂಮ್ರೋಭ್ರಮನ್ದಿರೇ।
ಸಿದ್ಧಗನ್ಧರ್ವಮಿಥುನಪ್ರಾರಬ್ಧಸುರತೋತ್ಸವಮ್ ॥೨೬॥
ಸ್ವರ್ಗಗೀತಸ್ತವೋನ್ಮತ್ತಮದನಾಕ್ರಾನ್ತಮಾರ್ಗಗಮ್ ।
ಅನಾರತವಹದ್ಧಿಷ್ಣ್ಯಚಕ್ರಲಕ್ಷಿತಪಕ್ಷಕಮ್ ॥೨೭॥
ವಾತಸ್ಕನ್ಧನಿಖಾತಾನ್ತರ್ವಹತ್ತ್ರಿಪಥಗಾಜಲಮ್ ।

ಗಳು ಅಲ್ಲಿ ಕಾಣಿಸುತಿದ್ದುವು; ಅಂತಹ ಸ್ತ್ರೀಯರನ್ನು ಅಪೇಕ್ಷಿಸುತ, ಇಂದ್ರಾದಿಗಳಂತೆ ಮಹಾಸಿದ್ಧರಾಗದೆ-ಸಾಮಾನ್ಯರಾಗಿರುವವರು ಕೋಪಾದಿಗಳನ್ನು ತೋರಿಸುತ್ತಿದ್ದರೆ, ಅವರ ತೇಜಸ್ಸಮೂಹಕ್ಕೆ ಈ ಅಂತರಿಕ್ಷವು ಆಚ್ಛಾದಕರವಾದ ತಮೋಗುಣವೋ ಎಂಬಂತೆ ಕಾಣಿಸುತಿದ್ದಿತು ॥೨೨॥

ಬಲಿಷ್ಠರಾದ ಸಿದ್ಧರು ಸಂಮರ್ದದಿಂದ ಹೋಗಿಬರುತ್ತಿರುವುದರಿಂದ ಚದರಿಹೋದ ಮೇಘಗಳು, ಹಿಮವಂತ ಮೇರು ಮಂದರ ಪರ್ವತಗಳಿಗೆ ಮೊಗ್ಗುಲಿನಲ್ಲಿ ಬರಲಾಗಿ, ಅವುಗಳಿಗೆ ವಸ್ತ್ರಹೊದ್ದಿಸಿದಂತೆ ತೋರುತಿದ್ದಿತು ॥೨೩॥

ಕಾಗೆ ಗೂಗೆ ಹದ್ದು ಗಿಡಗ—ಇವುಗಳು ಗುಂಪುಗುಂಪಾಗಿ ಹಾರುತ ಇಲ್ಲಿ ವ್ಯಾಪಿಸಿಕೊಂಡಿದ್ದುವು; ಡಾಕಿನಿಯೆಂಬ ಪಿಶಾಚಸಮೂಹಗಳು ಕುಣಿಯುತ್ತಿರುವುದರಿಂದ, ಸಮುದ್ರದಲ್ಲಿ ಅಲೆಗಳು ಕುಣಿದಾಡುವಂತೆ ಕಾಣುತ್ತಿದ್ದಿತು ॥೨೪॥

ಅಲ್ಲಿ ನಾಯಿ ಕಾಗೆ ಒಂಟೆ ಕತ್ತೆ ಇವ್ವುಗಳಂತೆ ಮುಖಗಳನ್ನು ಧರಿಸಿರುವಯೋಗಿನಿಯರು, ತಾವಿದ್ದ ಸಳದಲ್ಲಿಯೇ ಇಷ್ಟವಾದುದನ್ನು ಹೊಂದಲು ಸಮರ್ಥರಾಗಿದ್ದರೂ, ವ್ಯರ್ಥವಾಗಿ ನೂರಾರು ಗಾವುದ ಹೋಗಿಬರುತ, ತುಂಬಿಹೋಗಿದ್ದರು ॥೨೫॥

ಅಷ್ಟದಿಕ್ಪಾಲಕರ ಮುಂದೆಯೇ ಇರುವಂತೆ ಕಾಣತಕ್ಕುದಾಗಿಯೂ, ಅಂಧಕಾರದಂತೆ ದೃಷ್ಟಿಪ್ರಸರಣೆಯನ್ನು ತಡೆಯುತಕ್ಕುದಾಗಿಯೂ, ಧೂಮದಂತೆ ಧೂಮ್ರವರ್ಣವಾಗಿಯೂ ಇರುವ ಮೇಘಗಳೆಂಬ ಮನೆಯಲ್ಲಿ, ಸಿದ್ಧರೂ ಗಂಧರ್ವರೂ, ದಂಪತಿಗಳು ಯುಕ್ತರಾಗಿ ಕ್ರೀಡೆಗುಪಕ್ರಮಿಸುತಿದ್ದರು ॥೨೬॥

ಸ್ವರ್ಗಲೋಕದಲ್ಲಿ ಆಗುವ ಗಾನವನ್ನು ಕೇಳಿ ಆಮಾರ್ಗದಲ್ಲಿ ಹೋಗತಕ್ಕವರೆಲ್ಲರೂ ಉನ್ಮತ್ತರಾಗಿ ಮನ್ಮಥಾವಿಷ್ಟರಾಗುತ್ತಿದ್ದರು; ನಿರಂತರವಾಗಿ ಪ್ರವಹಿಸುತಿರುವ ನಕ್ಷತ್ರಾದಿಮಂಡಲಚಕ್ರದಿಂದ ಅಲ್ಲಿ ಶುಕಪಕ್ಷಕೃಷ್ಣಪಕ್ಷಗಳನ್ನು ಗೊತ್ತುಮಾಡುತ್ತಿದ್ದರು ॥೨೭॥

ಸಪ್ತಮರುತ್ಪ್ರಭೇದಗಳೆಂಬ ಗುಂಡಿಗಳೊಳಗೆ ಗಂಗಾನದೀಪ್ರವಾಹವು ಹರಿಯು

ಆಶ್ಚರ್ಯಾಲೋಕನವ್ಯಗ್ರಸಞ್ಚರತ್ತ್ರಿದಶಾರ್ಭಕಮ್ ‖೧೮‖
ಸದೇಹಸಞ್ಚರದ್ವಜ್ರಚಕ್ರಶೂಲಾಸಿಶಕ್ತಿಮತ್ ।
ಕ್ವಚಿನ್ನಿರ್ಭಿತ್ತಿಭವನಂ ಗಾಯನ್ನಾರದತುಮ್ಬುರು ‖೧೯‖
ಮೇಘಮಾರ್ಗಮಹಾಮೇಘಮಹಾರಮ್ಭಾಕುಲಂ ಕ್ವಚಿತ್ ।
ಚಿತ್ರನ್ಯಸ್ತಸಮಾಕಾರಮೂಕಕಲ್ಪಾನ್ತವಾರಿದಮ್ ‖೨೦‖
ಉತ್ಪತತ್ಕಜ್ಜಲಾದ್ರೀನ್ದ್ರಸುನ್ದರಾಮ್ಭೋಧರಂ ಕ್ವಚಿತ್ ।
ಕ್ವಚಿತ್ ಕನಕನಿಸ್ಯನ್ದಕಾನ್ತತಾಪಾನ್ತವಾರಿದಮ್ ‖೨೧‖
ಕ್ವಚಿದ್ದಿಗ್ದಾಹತಾಪಾಢ್ಯಂ ಋಶ್ಯಮೂಕಾಮ್ಬುದಾಂಶುಕಮ್ ।
ಕ್ವಚಿನ್ನಿಷ್ಪವನಾಮ್ಭೋಧಿಸಂರಮ್ಭಂ ಶೂನ್ಯತಾಜಲಮ್ ‖೨೨‖
ಕ್ವಚಿದ್ವಾತನದೀಪ್ರೌಢವಿಮಾನತೃಣಪಲ್ಲವಮ್ ।
ಕ್ವಚಿಚ್ಚಲದಳಿವ್ರಾತಪೃಷ್ಠತ್ವಕ್ಕಾನ್ತಿನಿರ್ಮಲಮ್ ‖೨೩‖
ಕ್ವಚಿನ್ಮೇರುನದೀಕಲ್ಪವಾತಧೂಳಿವಿಧೂಸರಮ್ ।
ಕ್ವಚಿದ್ವಿಮಾನಗೀರ್ವಾಣಪ್ರಭಾಚಿತ್ರಬಲಾಙ್ಗಕಮ್ ‖೨೪‖

ತಿದ್ದಿತು; ಅಲ್ಲಿ ಆಶ್ಚರ್ಯವನ್ನು ನೋಡುವುದರಲ್ಲಿ ಕುತೂಹಲದಿಂದ ದೇವತೆಗಳ ಮಕ್ಕಳುಗಳು ಸಂಚರಿಸುತಿದ್ದುವು ‖೧೮‖

ವಜ್ರ ಚಕ್ರ ಶೂಲ ಅಸಿ ಶಕ್ತಿ ಮುಂತಾದ ಆಯುಧಗಳೆಲ್ಲವೂ ದೇಹಯುಕ್ತಗಳಾಗಿ ಅಲ್ಲಿ ಸಂಚರಿಸುತಿದ್ದುವು; ಕೆಲವುಕಡೆಯಲ್ಲಿ ಗೋಡೆಯಿಲ್ಲದ ಮನೆಗಳಿದ್ದುವು; ನಾರದರೂ ತುಂಬುರರೂ ಗಾನಮಾಡುತಿದ್ದರು ‖೧೯‖

ಕೆಲವುಕಡೆಯಲ್ಲಿ ಮೇಘಮಾರ್ಗದೊಳಗೆ ಮಹಾಮೇಘಗಳು ನಡೆಯಿಸುತಿರುವ ದೊಡ್ಡದೊಡ್ಡ ಕೆಲಸಗಳಿಂದ ವ್ಯಾಕುಲವಾಗಿದ್ದಿತು; ಕೆಲವುಕಡೆ ಪ್ರಳಯಕಾಲಮೇಘಗಳೂ ಕೂಡ ಚಿತ್ರದಲ್ಲಿ ಬರೆಲ್ಪಟ್ಟುವುಗಳಂತೆ ಸದ್ದಿಲ್ಲದಿದ್ದುವು ‖೨೦‖

ಕೆಲವುಗಡೆಯಲ್ಲಿ ಕೃಷ್ಣಮೇಘಗಳು, ಮೇಲಕ್ಕೆ ಹಾರುತಿರುವ ದೊಡ್ಡ ಅಂಜನಪರ್ವತಗಳಂತೆ ಕಾಣಿಸುತಿದ್ದುವು; ಕೆಲವುಕಡೆಯಲ್ಲಿ ಗ್ರೀಷ್ಮಕಾಲಾಂತಮೇಘಗಳು ಕರಗಿದ ಚಿನ್ನದಂತೆ ಸುಂದರವಾಗಿ ಕಾಣುತಿದ್ದುವು ‖೨೧‖

ಕೆಲವುಕಡೆಯಲ್ಲಿ ಕಾಡುಗಿಚ್ಚಿನ ಶಕೆಯು ವ್ಯಾಪಿಸಿರುವುದರಿಂದ, ಋಶ್ಯಮೂಕಪರ್ವತದಮೇಲೆ ಮೇಘಗಳೆಂಬ ವಸ್ತ್ರವು ಹೊದಿಸಲ್ಪಟ್ಟಂತೆ ಕಾಣುತಿದ್ದತು; ಕೆಲವುಕಡೆಯಲ್ಲಿ ಶೂನ್ಯತೆಯೇ ಜಲದಂತೆ ಕಾಣಿಸುತ, ನಿರ್ವಾತವಾದ ಸಮುದ್ರದಂತೆ ಸಂಭ್ರಮಯುಕ್ತವಾಗಿದ್ದಿತು ‖೨೨‖

ಕೆಲವುಕಡೆ ವಾಯುವೆಂಬ ನದೀಪ್ರವಾಹದಲ್ಲಿ ವಿಮಾನಗಳೆಂಬ ಹುಲ್ಲುಗಳೂ ಚಿಗುರುಗಳೂ ತೇಲಿಹೋಗುತಿದ್ದುವು; ಕೆಲವುಕಡೆ ಸಂಚರಿಸುವ ಭ್ರಮರಸಮೂಹದ ಬೆನ್ನಿನ ಕಾಂತಿಯಂತೆ ಮನೋಹರವಾಗಿದ್ದಿತು ‖೨೩‖

ಕೆಲವುಕಡೆ ವಾಯು ಹೊತ್ತುಕೊಂಡುಹೋಗುವ ಧೂಳಿಪಂಕ್ತಿಯು, ಮೇರುಪರ್ವತದಲ್ಲಿ ಹುಟ್ಟಿದ ವರ್ಷಾಕಾಲಿಕನದಿಯಂತೆ ಮಾಸಲಾಗಿ ಕಾಣಿಸುತಿದ್ದಿತು; ಕೆಲವುಕಡೆ ವಿಮಾನದಲ್ಲಿ ಸಂಚರಿಸುತ್ತಿರುವ ದೇವತೆಗಳ ಕಾಂತಿಯಿಂದ ಅವಯವಗಳು ಚಿತ್ರವರ್ಣವಾಗುತಿದ್ದುವು ‖೨೪‖

ಕ್ವಚಿನ್ನಿರಮ್ಬರೋನ್ನೃತ್ತಮಾತೃಮಣ್ಡಲಮಾಲಿತಮ್ ।
ಕ್ವಚಿನ್ನಿತ್ಯಂ ನವಕ್ಷೀಬಕ್ಷುಬ್ಧಯೋಗೀಶ್ವರೀಗಣಮ್ ॥೩೫॥
ಕ್ವಚಿಚ್ಛಾನ್ತಸಮಾಧಿಸ್ಥವಿಶ್ರಾನ್ತಮುನಿಮಾಲಿತಮ್ ।
ಸಮಂ ದೂರಾಸ್ತಸಂರಮ್ಭಸಾಧುಚಿತ್ತಮನೋಹರಮ್ ॥೩೬॥
ಗಾಯತ್ಕಿನ್ನರಗನ್ಧರ್ವಸುರಸ್ತ್ರೀಮಣ್ಡಲಂ ಕ್ವಚಿತ್ ।
ಕ್ವಚಿತ್ ಸ್ತಬ್ಧಪುರಾಪೂರ್ಣಂ ವಹತ್ಪುರವರಂ ಕ್ವಚಿತ್ ॥೩೭॥
ಕ್ವಚಿದ್ರುದ್ರಪುರಾಕೀರ್ಣಂ ಕ್ವಚಿದ್ಬ್ರಹ್ಮಮಹಾಪುರಮ್ ।
ಕ್ವಚಿನ್ಮಾಯಾಕೃತಪುರಂ ಕ್ವಚಿದಾಗಾಮಿಸತ್ತನಮ್ ॥೩೮॥
ಕ್ವಚಿದ್ಭ್ರಮಚ್ಚನ್ದ್ರಸರಃ ಕ್ವಚಿತ್ ಸ್ತಬ್ಧಮಯಂ ಸರಃ ।
ಕ್ವಚಿತ್ ಸರತ್ಸಿದ್ಧಗಣಂ ಕ್ವಚಿದಿನ್ದುಕೃತೋದಯಮ್ ॥೩೯॥
ಕ್ವಚಿತ್ ಸೂರ್ಯೋದಯಮಯಂ ಕ್ವಚಿದ್ರಾತ್ರಿತಮೋಮಯಮ್ ।
ಕ್ವಚಿತ್ ಸನ್ಧ್ಯಾಂಶುಕಪಿಲಂ ಕ್ವಚಿನ್ನೀಹಾರಧೂಸರಮ್ ॥೪೦॥
ಕ್ವಚಿದ್ಧಿಮಾಭ್ರಧವಳಂ ಕಚಿದ್ವರ್ಷತ್ಪಯೋಧರಮ್ ।

ಕೆಲವುಕಡೆ ವಿವಸ್ತ್ರರಾಗಿ ಸಪ್ತಮಾತೃಕೆಯರು ನರ್ತನಮಾಡುತಿದ್ದರು; ಕೆಲವುಕಡೆ ಯೋಗೀಶ್ವರಿಯರ ಸಮೂಹವು ನಿತ್ಯವೂ ಹೊಸಹೊಸದಾಗಿ ಮತ್ತರಾಗುತಿದ್ದುವು ॥೩೫॥

ಕೆಲವುಕಡೆ ಋಷಿಸಮೂಹಗಳು ಶಾಂತವಾಗಿ ಸಮಾಧಿಲೀನವಾಗಿ ವಿಶ್ರಮಿಸಿಕೊಳ್ಳುತಿದ್ದುವು; ಹೀಗಿದ್ದುದರಿಂದ, ಏಕಕಾಲದಲ್ಲಿ ಸಮಸ್ತಸಂಭ್ರಮಗಳನ್ನೂ ದೂರವಾಗಿ ಬಿಟ್ಟಿರುವ ಸಾಧುಗಳ ಮನಸ್ಸಿನಂತೆ ಮನೋಹರವಾಗಿದ್ದಿತು ॥೩೬॥

ಕೆಲವುಕಡೆ ಕಿನ್ನರರೂ ಗಂಧರ್ವರೂ ದೇವಸ್ತ್ರೀಯರೂ ಗುಂಪುಗುಂಪಾಗಿ ಹಾಡುತಿದ್ದರು; ಕೆಲವುಕಡೆ ನಿಶ್ಚಲವಾದ ಪಟ್ಟಣಗಳಿಂದ ವ್ಯಾಪ್ತವಾಗಿದ್ದಿತು; ಕೆಲವುಕಡೆ ಶ್ರೇಷ್ಠವಾದ ಪಟ್ಟಣಗಳು ಸಂಚರಿಸುತಿದ್ದುವು ॥೩೭॥

ಕೆಲವುಕಡೆ ಈಶ್ವರನ ಪಟ್ಟಣವು ವ್ಯಾಪಿಸಿಕೊಂಡಿದ್ದಿತು; ಕೆಲವು ಕಡೆ ಶ್ರೇಷ್ಠವಾದ ಬ್ರಹ್ಮನ ಪಟ್ಟಣವಿದ್ದಿತು; ಕೆಲವುಕಡೆ ಮಾಯಾರಚಿತವಾದ ಪಟ್ಟಣಗಳಿದ್ದುವು; ಕೆಲವುಕಡೆ ಪಟ್ಟಣಗಳು ಮುಂದೆ ಬರತಕ್ಕುವುಗಳಾಗಿದ್ದುವು ॥೩೮॥

ಕೆಲವುಕಡೆ ಚಂದ್ರನೆಂಬ ಸರಸ್ಸು ಚಲಿಸುತಿದ್ದಿತು; ಕೆಲವುಕಡೆ ನಿಶ್ಚಲವಾದ ಸರಸ್ಸು ತೋರುತಿದ್ದಿತು; ಕೆಲವುಕಡೆ ಸಿದ್ಧಸಮೂಹವು ಸರಿಯುತಿದ್ದಿತು; ಕೆಲವುಕಡೆ ಚಂದ್ರೋದಯವಾಗುತಿದ್ದಿತು ॥೩೯॥

ಕೆಲವುಕಡೆ ಸೂರ್ಯೋದಯಮಯವಾಗಿದ್ದಿತು; ಕೆಲವುಕಡೆ ರಾತ್ರಿಕಾಲಿಕವಾದ ತಮಸು ವ್ಯಾಪಿಸಿದ್ದಿತು; ಕೆಲವುಕಡೆ ಸಂಜೆಗೆಂಪಿನಿಂದ ಹೊಂಬಣ್ಣವಾಗಿದ್ದಿತು; ಕೆಲವುಕಡೆ ಮಂಜು ಸುರಿಯುತ ಧೂಸರವರ್ಣ (ಮಾಸಲುಬಣ) ವಾಗಿದ್ದಿತು ॥೪೦॥

ಕೆಲವುಕಡೆ ಹಿಮುಗಂತಿರುವ ಮೋಡಗಳಿಂದ ಶುಭ್ರವಾಗಿದ್ದಿತು; ಕೆಲವುಕಡೆ

ಕ್ವಚಿತ್ ಸ್ಥಲಇವಾಕಾಶೇ ಏವ ವಿಶ್ರಾನ್ತಲೋಕಪಮ್ ॥೪೧॥
ಊರ್ಧ್ವಾಧೋಗಮನವ್ಯಗ್ರಸುರಾಸುರಗಣಂ ಕ್ವಚಿತ್ ।
ಪೂರ್ವಾಪರೋತ್ತರಾಯಾಮ್ಯದಿಕ್ಸಞ್ಚರಾಕುಲಂ ಕ್ವಚಿತ್ ॥೪೨॥
ಅಪಿ ಯೋಜನಲಕ್ಷಾಣಿ ಕ್ವಚಿದ್ದುಷ್ಪ್ರಾಪಭೂಧರಮ್ ।
ಅವಿನಾಶಿತಮಃಪೂರ್ಣಂ ದೃಷದ್ಗರ್ಭೋಪಮಂ ಕ್ವಚಿತ್ ॥೪೩॥
ಅವಿನಾಶಿಬೃಹತ್ತೇಜಃ ಕ್ವಚಿದರ್ಕಾನಲೋಪಮಮ್ ।
ಹಿಮಾನೀಜಠರಾಶೀತಂ ಕ್ವಚಿಚ್ಚನ್ದ್ರಾದಿಸದ್ಮಸು ॥೪೪॥
ಕ್ವಚಿದ್ವಹತ್ಪುರೋವೃತ್ತಕಲ್ಪವೃಕ್ಷಲತಾವನಮ್ ।
ಕ್ವಚಿದ್ದೈತ್ಯಹತೋತ್ತುಙ್ಗಪ್ರಪತದ್ದೇವಪತ್ತನಮ್ ॥೪೫॥
ವೈಮಾನಿಕನಿಪಾತೇನ ವಹ್ನಿಲೇಖಾಙ್ಕಿತಂ ಕ್ವಚಿತ್ ।
ಕ್ವಚಿತ್ ಕೇತುಶತೋತ್ಪಾತಮಿಥಸ್ಸಙ್ಘಟ್ಟಪಟ್ಟಿತಮ್ ॥೪೬॥
ಕ್ವಚಿಚ್ಛುಭಗ್ರಹಗಣಪ್ರಗೃಹೀತಾಗ್ರ್ಯಮಣ್ಡಲಮ್ ।
ಕ್ವಚಿದ್ರಾತ್ರಿತಮೋವ್ಯಾಪ್ತಂ ಕ್ವಚಿದ್ದಿವಸಭಾಸ್ವರಮ್ ॥೪೭॥

ಮೋಡಗಳು ಮಳೆಸುರಿಸುತಿದ್ದುವು; ಕೆಲವುಕಡೆ ಭೂಮಿಯಲ್ಲಿರುವಂತೆ ಆಕಾಶದಲ್ಲಿಯೇ ಲೋಕಪಾಲಕರು ವಿಶ್ರಮಿಸಿಕೊಳ್ಳುತಿದ್ದರು ॥೪೧॥

ಕೆಲವುಕಡೆ ದೇವಾಸುರರು ಊರ್ಧ್ವಭಾಗಕ್ಕೂ ಅಧೋಭಾಗಕ್ಕೂ ಹೋಗುವುದರಲ್ಲಿ ಆಸಕ್ತರಾಗಿಯೂ, ಮತ್ತೆ ಕೆಲವುಕಡೆ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ದಿಕ್ಕುಗಳಲ್ಲಿ ಸಂಚರಿಸುತ ವ್ಯಾಕುಲವಾಗಿಯೂ ಇದ್ದರು ॥೪೨॥

ಕೆಲವುಕಡೆ ಲಕ್ಷಾಂತರ ಯೋಜನ ಹೋದರೂ ಪರ್ವತಗಳೇ ಸಿಕ್ಕುತಿರಲಿಲ್ಲ; ಕೆಲವುಕಡೆ ಎಂದೆಂದಿಗೂ ನಾಶಹೊಂದದೆ ಸ್ಥಿರವಾಗಿರುವ ಕತ್ತಲೆಯಿಂದ ವ್ಯಾಪ್ತವಾಗಿರುವ ಕಾರಣ, ಶಿಲೆಯ ಗರ್ಭಭಾಗದಂತಿದ್ದಿತು ॥೪೩॥

ಕೆಲವುಕಡೆ ಎಂದಿಗೂ ನಾಶವಿಲ್ಲದ ಮಹಾತೇಜಸ್ಸಿರುವಕಾರಣ, ಸೂರ್ಯಾಗ್ನಿಸಮವಾಗಿದ್ದಿತು; ಕೆಲವುಕಡೆ ಚಂದ್ರಾದಿಲೋಕಗಳಲ್ಲಿ ಹಿಮಸಮೂಹದಿಂದ ಒಳಭಾಗವೆಲ್ಲವೂ ತಣ್ಣಗಿದ್ದಿತು ॥೪೪॥

ಕೆಲವುಕಡೆ ಮುಂಭಾಗದಲ್ಲಿರುವ ಕಲ್ಪವೃಕ್ಷಲತೆಗಳು ಗುಂಪುಗುಂಪಾಗಿ ತೇಲುತಿದ್ದುವು; ಕೆಲವುಕಡೆ ದೈತ್ಯರಿಂದ ನಾಶಪಡಿಸಲ್ಪಟ್ಟ ದೊಡದೊಡ್ಡ ದೇವತೆಗಳ ಪಟ್ಟಣಗಳು ಬೀಳುತಿದ್ದುವು ॥೪೫॥

ಕೆಲವುಕಡೆ ದೇವತೆಗಳು ವಿಮಾನದಲ್ಲಿ ಕುಳಿತು ಸಂಚರಿಸುತ್ತಿರುವುದರಿಂದ, ಅವರ ತೇಜಸ್ಸು ಪ್ರಸರಿಸಿರುವಕಾರಣ, ರೇಖಾಕಾರವಾಗಿರುವ ಅಗ್ನಿಯಿಂದ ವ್ಯಾಪ್ತವಾದಂತಿದ್ದಿತು; ಕೆಲವುಕಡೆ ಉತ್ಪಾತಗಳಾದ ಅನೇಕಧೂಮಕೇತುಗಳು ಪರಸ್ಪರಸಂಘಟ್ಟನೆಮಾಡುವುದರಿಂದ, ಪಟ್ಟಿಕಟ್ಟಲ್ಪಟ್ಟಂತೆ ಕಾಣುತಿದ್ದಿತು ॥೪೬॥

ಕೆಲವುಕಡೆ ಶುಭಗ್ರಹಸಮೂಹಗಳು ಶ್ರೇಷ್ಠವಾದ ಉರ್ಧ್ವಮಂಡಲಗಳನ್ನು ಸ್ವೀಕರಿಸಿದ್ದುವು; ಕೆಲವುಕಡೆ ರಾತ್ರಿಯ ಕತ್ತಲುನಿಂದ ವ್ಯಾಪ್ತವಾಗಿದ್ದಿತು; ಕೆಲವುಕಡೆ ಹಗಲಿನ ಪ್ರಕಾಶವುಳ್ಳದಾಗಿದ್ದಿತು ॥೪೭॥

ಕ್ವಚಿದುದ್ಗರ್ಜದಮ್ಭೋದಂ ಕ್ವಚಿನ್ಮೂಕಾಮಲಾಮ್ಬುದಮ್ |
ವಾತಾವಕೀರ್ಣಶುಕ್ಲಾಭ್ರಖಣ್ಡಪುಷ್ಪೋತ್ಕರಂ ಕ್ವಚಿತ್ ||೪೮||
ಕ್ವಚಿದತ್ಯನ್ತನಿಶ್ಶೂನ್ಯಂ ಅವದಾತಮನನ್ತರಮ್ |
ಆನನ್ದಮೃದು ಶಾನ್ತಾಚ್ಛಂ ಜ್ಞಸ್ಯೇವ ಹೃದಯಂ ತತಮ್ ||೪೯||
ಶುಕ್ರವಾಹನಭೇಕೌಘೈಃ ಕ್ವಚಿದ್ಗಳಕೃತಾರವಮ್ |
ಶೂನ್ಯತಾವಾರಿವಲಿತಂ ಕ್ಷೇತ್ರಮಾಕಾಶವಾಸಿನಾಮ್ ||೫೦||
ಮಯೂರಹೇಮಚೂಡಾದಿಪಕ್ಷಿಭಿಃ ಕ್ವಚಿದಾವೃತಮ್|
ವಿದ್ಯಾಧರೀಣಾಂ ದೇವೀನಾಂ ವಾಹನೈರ್ವಿಹಿತಾಸ್ಪದೈಃ ||೫೧||
ಕ್ವಚಿದಭ್ರಾನ್ತರೋನ್ನೃತ್ಯದ್ಗುಹಮಾಯೂರಮಣ್ಡಲಮ್ |
ಕ್ವಚಿದಗ್ನಿಶುಕೈಃ ಶ್ಯಾಮಂ ಶಾದ್ವಲಾನಾಮಿವ ಸ್ಥಲಮ್ ||೫೨||
ಕ್ವಚಿತ್ ಪ್ರೇತೇಶಮಹಿಷಮಹಿಮ್ನಾ ವಾಮನಾಮ್ಬುದಮ್|
ಕ್ವಚಿದಶ್ವೈಸ್ತೃಣಗ್ರಾಮಶಙ್ಕಾಗ್ರಸ್ತಾಸಿತಾಮ್ಬುದಮ್ ||೫೩||
ಕ್ವಚಿದ್ದೇವಪುರವ್ಯಾಪ್ತಂ ಕ್ವಚಿದ್ದೈತ್ಯಪುರಾನ್ವಿತಮ್ |
ಅನ್ಯೋನ್ಯಾಪ್ರಾಪ್ಯನರಂ ನಗರನ್ಧ್ರಕರಾನಿಲಮ್ ||೫೪||

ಕೆಲವುಕಡೆ ಮೇಘಗಳು ಗಟ್ಟಿಯಾಗಿ ಗುಡುಗುತಿದ್ದುವು; ಕೆಲವುಕಡೆ ನಿರ್ಮಲವಾದ ಮೋಡಗಳು ಸದ್ದುಮಾಡದೆ ಇದ್ದುವು; ಕೆಲಕಡೆ ಗಾಳಿಯಿಂದ ಚದುರಿಸಲ್ಪಟ್ಟ ಬಿಳಿಮೋಡಗಳ ತುಂಡುಗಳು, ಪುಷ್ಪಾಸ್ತರಣದಂತೆ ಕಾಣುತಿದ್ದುವು ||೪೮||

ಕೆಲವುಕಡೆ ಜ್ಞಾನಿಯ ಹೃದಯದಂತೆ, ಅತ್ಯಂತ ಶೂನ್ಯವಾಗಿಯೂ ಶುಭ್ರವಾಗಿಯೂ ನಿರಂತರವಾಗಿಯೂ ಆನಂದದಿಂದ ಮೃದುವಾಗಿಯೂ ಶಾಂತವಾಗಿ ನಿರ್ಮಲವಾಗಿಯೂ ವಿಶಾಲವಾಗಿಯೂ ಇದ್ದಿತು ||೪೯||

ಕೆಲವುಕಡೆ ನಭಶ್ಚರರ ವಾಹನಗಳೆಂಬ ಕಪ್ಪೆಗಳು ಕಂಠಧ್ವನಿಮಾಡುತಿದ್ದುವು; ಕೆಲವುಕಡೆ ಶೂನ್ಯತೆಯೆಂಬ ಜಲದಿಂದ ಪರಿಪೂರ್ಣವಾಗಿರುವ ದೇವತೆಗಳ ಕ್ಷೇತ್ರ (ಗದ್ದೆ)ವೋ ಎನ್ನುವಂತೆ ತೋರುತಿದ್ದಿತು ||೫೦||

ಕೆಲವುಕಡೆ ವಿದ್ಯಾಧರಸ್ತ್ರೀಯರಿಗೂ ದೇವಸ್ತ್ರೀಯರಿಗೂ ವಾಹನಭೂತಗಳಾದ ಮಯೂರ (ನವಿಲು) ಹೇಮಚೂಡ ಮುಂತಾದ ಪಕ್ಷಿಗಳು ಆವರಿಸಿಕೊಂಡು ನೆಲೆಸಿದ್ದುವು||

ಕೆಲವುಕಡೆ ಷಣ್ಮುಖನ ವಾಹನಭೂತವಾದ ನವಿಲುಗಳ ಗುಂಪು, ಮೇಘದ ಒಳಗಡೆ ನರ್ತನಮಾಡುತಿದ್ದಿತು ; ಕೆಲವುಕಡೆ ಅಗ್ನಿಯ ವಾಹನಭೂತವಾದ ಗಿಣಿಗಳಿಂದ ಹಸುರಾಗಿರುವುದರಿಂದ, ಹಸುರುಬೆಳೆದಿರುವ ಭೂಮಿಯಂತೆ ಕಾಣುತಿದ್ದಿತು ||೫೨||

ಕೆಲವುಕಡೆ ಯಮನ ವಾಹನಭೂತವಾದ ಕೋಣಗಳು, ತಮ್ಮ ಶಕ್ತಿಮಹಿಮೆಯಿಂದ ಮೋಡಗಳನ್ನೆಲ್ಲ ತಿವಿದುತಿವಿದು ಹ್ರಸ್ವವಾಗಿ ಮಾಡುತಿದ್ದುವು; ಕೆಲವುಕಡೆ ಕೃಷ್ಣಮೇಘಗಳನ್ನು ಕಂಡು ಹುಲ್ಲಿನರಾಶಿಯೆಂಬ ಭ್ರಾಂತಿಯಿಂದ ಕುದುರೆಗಳು ಗ್ರಾಸಮಾಡಲೆಳಿಸುತಿದ್ದುವು ||೫೩||

ಕೆಲವುಕಡೆ ದೇವತೆಗಳ ಪಟ್ಟಣಗಳಿಂದ ವ್ಯಾಪ್ತವಾಗಿದ್ದಿತು ; ಕೆಲವುಕಡೆ ರಾಕ್ಷಸರ ಪಟ್ಟಣಗಳು ತುಂಬಿದ್ದುವು. ಆದರೂ ಒಬ್ಬರ ಪಟ್ಟಣವನ್ನು ಮತ್ತೊಬ್ಬರು ಹೊಂದುವುದ ಸಾಧ್ಯವಾಗಿದ್ದಿತು. ಕೆಲವುಕಡೆ ವಾಯುಗಳು ಪರ್ವತಗಳನ್ನು ಕೊರೆಯುತಿದ್ದುವು ||೫೪||

ಕ್ವಚಿತ್ ಕುಲಾಚಲಾಕಾರನೃತ್ಯದ್ಭೈರವಭಾಸುರಮ್ ।
ಕ್ವಚಿತ್ ಸಪಕ್ಷಶೈಲೇನ್ದ್ರಸಮನೃತ್ಯದ್ವಿನಾಯಕಮ್ ॥೫೫॥
ಕ್ವಚಿದ್ಘರ್ಘರವಾತೌಘಪಕ್ಷಪ್ರೋಡ್ಡೀನಪರ್ವತಮ್ ।
ಕ್ವಚಿದ್ಗನ್ಧರ್ವನಗರಸುರಸ್ತ್ರೀಬೃನ್ದಬನ್ಧುರಮ್ ॥೫೬॥
ಕ್ವಚಿದ್ವಹದ್ಗಿರಿಧ್ವಸ್ತವೃಕ್ಷಲಕ್ಷೋಚ್ಛಿತಾಮ್ಬುದಮ್ ।
ಕ್ವಚಿನ್ಮಾಯಾಕೃತಾಕಾಶನಳಿನೀಜಲಶೀತಲಮ್ ॥೫೭॥
ಕ್ವಚಿದಿನ್ದುಕರಾಕೃಷ್ಟಿಶೀತಲಾಹ್ಲಾದಮಾರುತಮ್ ।
ಕ್ವಚಿತ್ ತಪ್ತಾನಿಲಾದಗ್ಧದ್ರುಮಪರ್ವತವಾರಿದಮ್ ॥೫೮॥
ಕ್ವಚಿದತ್ಯನ್ತಸಂಶಾನ್ತವಾತಾದೇಕಾನ್ತನಿರ್ಧ್ವನಿ ।
ಕ್ವಚಿತ್ ಪರ್ವತತುಲ್ಯಾಭ್ರಶಿಖಾಕೂಟಶತೋದಯಮ್ ॥೫೯॥
ಕ್ವಚಿತ್ ಪ್ರಾವೃಡ್ಭವೋನ್ಮತ್ತಘನಾಭ್ರರವಘರ್ಘರಮ್ ।
ಕ್ವಚಿತ್ ಸುರಾಸುರಗಣಪ್ರವೃತ್ತರಣದುರ್ಗಮಮ್ ॥೬೦॥
ಕ್ವಚಿದ್ವ್ಯೋಮಾಬ್ಜಿನೀಹಂಸೀಸ್ವನಾಹೂತಾಬ್ಜವಾಹನಮ್।
ಕ್ವಚಿನ್ಮನ್ದಾಕಿನೀತೀರನಳಿನೀಲುಣ್ಠಕಾನಿಲಮ್ ॥೬೧॥

ಕೆಲವುಕಡೆ ಕುಲಪರ್ವತಗಳಂತಿರುವ ಭೈರವ (ಕುದ್ರದೇವತಾಭೇದ) ಗಳು ಕುಣಿಯುತಿರುವುದರಿಂದ ಪ್ರಕಾಶವಾಗಿದ್ದಿತು; ಕೆಲವುಕಡೆ ರೆಕ್ಕೆಯೊಡಗೂಡಿದ ಪರ್ವತಗಳಿಗೆ ಸಮಾನವಾಗಿ ವಿನಾಯಕ (ಕ್ಷುದ್ರದೇವತಾಭೇದ) ಗಳು ಕುಣಿಯುತಿದ್ದುವು ॥೫೫॥

ಕೆಲವುಕಡೆ ಪರ್ವತಗಳು ರಕ್ಕೆಗಳಿಂದ ಹಾರಲಾಗಿ, ವಾಯುಗಳು ಘರ್ಘರಧ್ವನಿಮಾಡಲಾರಂಭಿಸಿದುವು; ಕೆಲವುಕಡೆ ಗಂಧರ್ವಪಟ್ಟಣದಲ್ಲಿರುವ ಸುರಯುವತಿಯರ ಸಮೂಹದಿಂದ ವ್ಯಾಪ್ತವಾಗಿದ್ದಿತು ॥೫೬॥

ಕೆಲವುಕಡೆ ತೇಲಿಬರುತಿರುವ ಪರ್ವತಗಳಲ್ಲಿದ್ದ ವೃಕ್ಷಗಳು, ಅಲ್ಲಿಂದ ಜಾರಿಬಿದ್ದು, ಮೇಘಗಳನ್ನೆಲ್ಲ ತಿವಿದು ಮೇಲಕ್ಕೆ ಓಡಿಸುತಿದ್ದುವು; ಕೆಲವುಕಡೆ ಇಂದ್ರಜಾಲರಚಿತವಾದ ಕಮಲಸರಸ್ಸಿನ ಜಲದಿಂದ ತಣ್ಣಗಿದ್ದಿತು ॥೫೭॥

ಕೆಲವುಕಡೆ ಚಂದ್ರಕಿರಣ ಸಂಪರ್ಕದಿಂದ ತಣ್ಣಗೆ ಆಹ್ಲಾದಕರವಾಗಿರುವ ಮಂದಮಾರುತವು ಬೀಸುತಿದ್ದಿತು; ಕೆಲವುಕಡೆ ಪ್ರಜ್ವಲಿಸುತಿರುವ ಅಗ್ನಿಯು, ವೃಕ್ಷ ಪರ್ವತ ಮೇಘಗಳನ್ನು ಸುಡುತಿದ್ದಿತು ॥೫೮॥

ಕೆಲವುಕಡೆ ವಾಯುವು ಅತ್ಯಂತ ಶಾಂತವಾಗಿರುವುದರಿಂದ, ಸುತರಾಂ ಧ್ವನಿಯಿಲ್ಲದಿದ್ದಿತು; ಕೆಲವುಕಡೆ ನೂರಾರು ಮೇಘಶಿಖರಗಳು ಪರ್ವತಗಳಂತೆ ಉದಯಿಸುತ್ತಿದ್ದುವು॥೫೯॥

ಕೆಲವುಕಡೆ ವರ್ಷಾಕಾಲಿಕವಾದ ಮಹಾಮೇಘಗಳು ಉನ್ಮತ್ತಗಳಾಗಿ ಗರ್ಜಿಸುತ್ತಿರುವುದರಿಂದ ಘರ್ಘರಧ್ವನಿಯಾಗುತಿದ್ದಿತು; ಕೆಲವುಕಡೆ ದೇವಾಸುರಸಮೂಹಗಳಿಗೆ ಯುದ್ಧವು ನಡೆಯುತ್ತಿರುವುದರಿಂದ ಸಂಚರಿಸುವುದೇ ಅಸಾಧ್ಯವಾಗಿದ್ದಿತು ॥೬೦॥

ಕೆಲವುಕಡೆ ಆಕಾಶಸರಸ್ಸಿನಲ್ಲಿರುವ ಹೆಣ್ಣುಹಂಸೆಗಳು, ತಮ್ಮ ಧ್ವನಿಯಿಂದ ಬ್ರಹ್ಮವಾಹನವಾದ ಹಂಸವನ್ನು ಕರೆಯುತ್ತಿದ್ದುವು; ಕೆಲವುಕಡೆ ಗಂಗಾತೀರದಲ್ಲಿರುವ ಕಮಲಲತೆಗಳ ಸೌರಭ್ಯವನ್ನು ಮಂದಮಾರುತಗಳು ಅಪಹರಿಸುತ್ತಿದ್ದುವು ॥೬೧॥

ಸ್ವಶರೀರೇಣ ಗಙ್ಗಾದಿಸರಿತಾಂ ಸನ್ನಿಧಾನತಃ |
ಪ್ರೋಡ್ಡೀನಮತ್ಸ್ಯಮಕರಕುಳೀರಾಮ್ಬುಜಕೂರ್ಮಕಮ್ ||೬೦||
ಪಾತಾಳಗಾರ್ಕಜನಿತಭೂಚ್ಛಾಯಾಕಾಕಚೋಪಮೈಃ |
ಕ್ವಚಿತ್‌ಕ್ವಚಿನ್ಮಣ್ಡಲೇಷು ಗ್ರಸ್ತಚನ್ದ್ರಾರ್ಕಮಣ್ಡಲಮ್ ||೬೨||
ಕ್ವಚಿತ್‌ಸರ್ಗಾನಿಲಾಧೂತಮಾಯಾಕುಸುಮಕಾನನಮ್ |
ಪತತ್ಪುಷ್ಪಹಿಮಾಸಾರತ್ರಸದ್ವೈಮಾನಿಕಾಙ್ಗನಮ್ ||೬೪||
ಉದುಮ್ಬರೋದರಮಶಕಕ್ರಮಭ್ರಮಜ್ಜಗತ್ತ್ರಯಾನ್ತರಗತಭೂತಸ
[ಙ್ಘಯಮ್|
ವಿಲಙ್ಘ್ಯ ತದ್ವರಲಲನೇ ಖಮುಚ್ಚಕೈಃ ಮಹೀತಲಂ ಪುನರಪಿ ಗನ್ತು
[ಮುದ್ಯತೇ ||೬೫||
ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಗಗನವರ್ಣನಂ ನಾಮ
ಚತುರ್ವಿಂಶಃ ಸರ್ಗಃ.

ಕೆಲವುಕಡೆ ಗಂಗಾದಿನದಿಗಳು ಶರೀರಯುಕ್ತಗಳಾಗಿ ಸಾನ್ನಿಧ್ಯಗೈದಿರುವುದರಿಂದ, ಮೀನ ಮೊಸಳೆ ನಳ್ಳಿ ಕಮಲ ಆಮೆ ಇವುಗಳೆಲ್ಲವೂ ಮೇಲಕ್ಕೆ ಹಾರಿದಂತೆ ಕಾಣುತಿದ್ದುವು ||೬೦||

ಭೂಮಿಯಸುತ್ತಲೂ ಸೂರ್ಯನು ಸುತ್ತುತಿರುವುದರಿಂದ, ಇವನು ಪಾತಾಳಲೋಕಕ್ಕೆ ಹೋದಾಗ, ಭೂಮಿಯು ನೆಳಲು ಕಾಗೆಯಂತೆ ಕಪ್ಪಾಗಿ ಪ್ರಸರಿಸಿ, ಕೆಲವುಕಡೆ ಚಂದ್ರಮಂಡಲಕ್ಕೆ ಗ್ರಹಣವುಂಟಾಗುವಂತೆ ಮಾಡುತಿದ್ದಿತು! ಹಾಗೆಯೇ ಚಂದ್ರಮಂಡಲಕ್ಕೆ ಹಿಂಭಾಗದಲ್ಲಿ ಸೂರ್ಯಮಂಡಲವಿದ್ದಾಗ, ಚಂದ್ರಮಂಡಲದಲ್ಲಿ ಉಂಟಾದ ಭೂಮಿಚ್ಛಾಯೆಯಿಂದು ಚಂದ್ರಮಂಡಲವು ಕಾಕಾಕಾರವಾಗಿ ಕಾಣುವುದರಿಂದ ಕೆಲವುಕಡೆ ಸೂರ್ಯಗ್ರಹಣವುಂಟಾಗುವಂತೆ ಮಾಡುತಿದ್ದಿತು ||೬೨||

ಕೆಲವುಕಡೆ ವೈಮಾನಿಕರು ತಮ್ಮ ಕಾಂತೆಯರನ್ನು ವಿನೋದಪಡಿಸುವುದಕ್ಕಾಗಿ, ಮಾಯೆಯಿಂದ ಹೂದೋಟಗಳನ್ನು ಸೃಷ್ಟಿಮಾಡಲು ಮತ್ತೆ ಹಾಗೆಯೇ ಆಕಸ್ಮಿಕವಾಗಿ ಲಯಮಾಡುತಲೂ ಇದ್ದರು; ಮತ್ತು ಪುಷ್ಪಗಳು ಮಂಜುಸುರಿದಂತೆ ಸುರಿಯುವಹಾಗೆಯೂ ಮಾಡುತಿದ್ದರು. ಇದರಿಂದ ಆ ಸ್ತ್ರೀಯರು ಗಾಬರಿಪಡುತಿದ್ದರು ||೬೪||

ಈರೀತಿಯಾಗಿ ಅತ್ಯಾಶ್ಚರ್ಯಕರವಾದ ಆ ಅಂತರಿಕ್ಷವನ್ನು ನೋಡುತಿದ್ದರೂ ಆ ಲೀಲಾಸರಸ್ವತಿಯರಿಗೆ ಅದರಲ್ಲಿ ಅನುರಾಗಹುಟ್ಟಲಿಲ್ಲ. ಆಗ ಅವರಿಬ್ಬರೂ, ಅತ್ತಿಯಹಣ್ಣಿನೊಳಗಿರುವ ಸೊಳ್ಳೆಗಳ ರೀತಿಯಲ್ಲಿ ಭ್ರಮಿಸುವ ಲೋಕತ್ರಯಾಂತರ್ಗತವಾದ ಭೂತಸಮುದಾಯಗಳನ್ನೂ ಧರಿಸಿರುವ ಆ ಅಂತರಿಕ್ಷವನ್ನು, ಮೇಲ್ಭಾಗದಲ್ಲಿಯೇ ದಾಟಿದವರಾಗಿ, ಮತ್ತೆ ಭೂಮಿಯನ್ನು ಹೊಂದುವುದಕ್ಕುದ್ಯುಕ್ತರಾದರು ||೬೫||

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಗಗನವರ್ಣನೆಯೆಂಬ
ಇಪ್ಪತ್ತುನಾಲ್ಕನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚವಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ನಭಸ್ಸ್ಥಲಾದ್ಗಿರಿಗ್ರಾಮಂ ಗಚ್ಛನ್ತ್ಯೌ ಕಂಚಿದೇವ ತೇ ।
ಜ್ಞಪ್ತಿಚಿತ್ತಸ್ಥಿತಂ ಭೂಮಿತಲಂ ದದೃಶತುಃ ಸ್ತ್ರಿಯೌ ॥೧॥
ಬ್ರಹ್ಮಾಣ್ಡನರಹೃತ್ಪದ್ಮಂ ದಿಗಷ್ಟಕದಳಂ ಬೃಹತ್ ।
ಗಿರಿಕೇಸರಸಮ್ಬಾಧಂ ಸ್ವಾಮೋದಭರಸುನ್ದರಮ್ ॥೨॥
ಸರಿತ್ಕೇಸರಿಕಾನಾಳಮಧ್ಯೇವಶ್ಯಾಯಬಿನ್ದುಕಮ್ ।
ಶರ್ವರೀಭ್ರಮರೀಭ್ರಾನ್ತಂ ಭೂತೌಘಮಶಕಾಕುಲಮ್ ॥೩॥
ಅನ್ತರ್ಗುಣಗಣಾಕೀರ್ಣಂ ಸುರನ್ಧ್ರೈಃ ಸುಷಿರೈರ್ವೃತಮ್ ।
ಉಹ್ಯಮಾನಪಯಃಪೂರೈಃ ದಿವಸಾಲೋಕಕಾನ್ತಿಮತ್ ॥೪॥

ಉತ್ಪತ್ತಿಪ್ರಕರಣದಲ್ಲಿ ಇಪ್ಪತ್ತೈದನೆಯ ಸರ್ಗವು.

ಸಪ್ತಾಬ್ಧಿದ್ವೀಪಸಂವೀತಂ ಬ್ರಹ್ಮಾಣ್ಡಾವರಣೈರ್ಯುತಮ್।
ಅಪೂರ್ವಂ ಭುವನಂ ತಾಭ್ಯಾಂ ದೃಷ್ಟಮತ್ರೋಪವರ್ಣ್ಯತೇ ॥

ಸಪ್ತಸಮುದ್ರ ಸಪ್ತದ್ವೀಪಗಳಿಂದ ಪರಿವೃತವಾಗಿಯೂ ಬ್ರಹ್ಮಾಂಡಾವರಣಗಳಿಂದ ಯುಕ್ತವಾಗಿಯೂ ಇರುವ ಅಪೂರ್ವವಾದ ಪ್ರಪಂಚವು ಆ ಸರಸ್ವತೀ ಲೀಲೆಯರಿಂದ ನೋಡಲ್ಪಟ್ಟಿತೆಂಬ ವಿಷಯವು ಈ ಸರ್ಗದಲ್ಲಿ ವರ್ಣಿಸಲ್ಪಡುತ್ತದೆ.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಸರಸ್ವತೀದೇವಿಯ ಚಿತ್ತದಲ್ಲಿರುವ ಅಪೂರ್ವವಾದ ಗಿರಿಗ್ರಾಮಕ್ಕೆ ಹೋಗತಕ್ಕವರಾಗಿರುವ ಆ ಸ್ತ್ರೀಯರಿಬ್ಬರೂ ಭೂತಲವನ್ನು ನೋಡಿದರು ॥೧॥

ಆಗ ಆ ಭೂಮಿ ಹೇಗಿತ್ತೆಂದರೆ:—ಬ್ರಹ್ಮಾಂಡವೆಂಬುದೇ ಒಬ್ಬ ಮನುಷ್ಯನೆಂದು ಯೋಚಿಸಿದರೆ, ಈ ಭೂಮಿಯು ಅವನಿಗೆ ದೊಡ್ಡ ಹೃದಯಕಮಲವಾಗಿದ್ದಿತು; ಇದಕ್ಕೆ ಅಷ್ಟದಿಕ್ಕುಗಳೇ ದಳಗಳಾಗಿದ್ದುವು; ಇದು ಪರ್ವತಗಳೆಂಬ ಕೇಸರಗಳಿಂದ ಪರಿಪೂರ್ಣವಾಗಿಯೂ ಸಂತೋಷವೆಂಬ ಪರಿಮಳದಿಂದ ಸುಂದರವಾಗಿಯೂ ಇದ್ದಿತು ॥೨॥

ನದಿಗಳೆಂಬ ಸಣ್ಣಸಣ್ಣ ಕೇಸರಗಳ ಮಧ್ಯದಲ್ಲಿ, ಹಿಮಕಣವೆಂಬ ಮಕರಂದ ಬಿಂದು ವಿದ್ದಿತು; ಇದರಲ್ಲಿ ರಾತ್ರಿಯೆಂಬ ಹೆಣ್ಣುದುಂಬಿಯು ಭ್ರಮಿಸುತಲೂ, ಪ್ರಾಣಿಗಳೆಂಬ ಸೊಳ್ಳೆಗಳು ವ್ಯಾಪಿಸುತಲೂ ಇದ್ದುವು ॥೩॥

ಆಯಾ ವಸ್ತುಗುಣಗಳೆಂಬ ತಂತುಗಳು ನಾಳದೊಳಗೆ ವ್ಯಾಪಿಸಿದ್ದುವು; ಜಲಪ್ರವಾಹ ಹರಿಯುತ್ತಿರುವ ಪಾತಾಳಾದಿ ಲೋಕಗಳೆಂಬ ರಂಧ್ರಗಳು ಇದನ್ನು ವ್ಯಾಪಿಸಿಕೊಂಡಿದ್ದುವು; ಈ ಪದ್ಮವೂ ಕೂಡ ಹಗಲಿನ ಪ್ರಕಾಶದಿಂದಲೇ ಕಾಂತಿಯುಕ್ತವಾಗುವುದು ॥೪॥

ರಸೌರ್ದ್ರಂ ಖೇ ಭ್ರಮದ್ಧಂಸಂ ರಾತ್ರಿಸಙ್ಕೋಚಭಾಜನಮ್ ।
ಪಾತಾಳಪಙ್ಕನಿರ್ಮಗ್ನನಾಗನಾಥಮೃಣಾಳಕಮ್ ॥೫॥
ಕದಾಚಿದಾಸ್ಪದಾಮ್ಭೋಧಿಕಮ್ಪಕಮ್ಪಿತದಿಗ್ದಳಮ್ ।
ಅಧೋನಾಳಗತಾನನ್ತದೈತ್ಯದಾನವಕಣ್ಟಕಮ್ ॥೬॥
ಅಸುರಸ್ತ್ರೀಲತಾವಲ್ಲ್ಯಾ ಸಮ್ಭೋಗಸುಕುಮಾರಯಾ ।
ಪ್ರಾಪ್ಯಂ ಭೂಭೃನ್ಮಹಾಬೀಜಹೃದಯಂ ಭೂತಬೀಜಯಾ ॥೭॥
ಜಮ್ಬೂದ್ವೀಪ ಇತಿ ಖ್ಯಾತಾಂ ವಿಪುಲಾಂ ತತ್ರ ಕರ್ಣಿಕಾಮ್ ।
ಸರಿತ್ಕೇಸರಿಕಾನಾಳಾಂ ನಗರಗ್ರಾಮಕೇಸರಾಮ್ ॥೮॥
ಕುಲಶೈಲೇಶ್ವರೋತ್ತುಙ್ಗಬೀಜಸಪ್ತಕಸುನ್ದರೀಮ್ ।
ಮಧ್ಯಸ್ಥೋಚ್ಚಮಹಾಮೇರುಬೀಜಾಕ್ರಾನ್ತನಭಸ್ಸ್ಥಲೀಮ್ ॥೯॥
ಸರಃಪ್ರಾಲೇಯಕಣಿಕಾಂ ವನಜಙ್ಗಲಧೂಳಿಕಾಮ್ ।
ಸ್ಥಲೇಷ್ವಾಮಣ್ಡಲಾನ್ತಸ್ಸ್ಥಜನಜಾಲಾಳಿಮಣ್ಡಲಾಮ್ ॥೧೦॥

ಶೃಂಗಾರಾದಿ ರಸಗಳೆಂಬ ಮಕರಂದಗಳಿಂದ ಇದು ನೆನೆದಿರುವುದು; ಸೂರ್ಯನೆಂಬ ಹಂಸವು ಇದರ ಮೇಲುಗಡೆ ಅಂತರಿಕ್ಷದಲ್ಲಿ ಭ್ರಮಿಸುತಿರುವುದು; ಈ ಬ್ರಹ್ಮಾಂಡವೆಂಬ ಪದ್ಮವೂ ಕೂಡ ರಾತ್ರಿಯಲ್ಲಿ ಸಂಕೋಚಹೊಂದುವುದು; ಇದಕ್ಕೆ ಆದಿಶೇಷನೇ ಮೃಣಾಳ (ದಂಟು) ವಾಗಿರುವನು; ಇವನು ಪಾತಾಳವೆಂಬ ಕೆಸರಿನಲ್ಲಿ ಮುಳುಗಿರುವನು ॥೫॥

ಒಂದುವೇಳೆ ಇದಕ್ಕೆ ಆಶ್ರಯವಾಗಿರುವ ಸಮುದ್ರವು ಚಲಿಸುವುದರಿಂದ, ಇದರ ದಳಗಳಾದ ದಿಕ್ಕುಗಳೂ ಚಲಿಸುವುವು; ಕೆಳಭಾಗದಲ್ಲಿ ದೈತ್ಯದಾನವರೆಂಬ ಅಪಾರವಾದ ಮುಳ್ಳುಗಳು ಇದರ ನಾಳವನ್ನು ವ್ಯಾಪಿಸಿಕೊಂಡಿರುವುವು ॥೬॥

ಅಸುರಸ್ತ್ರೀ ಸಮೂಹವೆಂಬ ಲತೆಯು ಇದನ್ನು ಕೆಳಗಡೆ ಹೊಂದುತಕ್ಕುದಾಗಿರುವುದು; ಈ ಲತೆಯು ಸಂಭೋಗವಿಷಯದಲ್ಲಿ ಸುಕುಮಾರವಾಗಿರುವುದು; ಇದಕ್ಕೆ ತಮ್ಮ ಸಂತತಿಯೇ ಬೀಜವಾಗಿರುವುದು; ಮತ್ತು ಆ ಪದ್ಮವು, ಮೇರು ಮೊದಲಾದ ಪರ್ವತಗಳೆಂಬ ದೊಡ್ಡ ಬೀಜಗಳಿಗೆ ಹೃದಯ (ಆವಾಸ) ವಾಗಿರುವುದು ॥೭॥

ಇಂತಹ ಬ್ರಹ್ಮಾಂಡ ಕಮಲದ ಮಧ್ಯದಲ್ಲಿ ಜಂಬೂದ್ವೀಪವೆಂದು ಪ್ರಸಿದ್ಧವಾದ ವಿಶಾಲವಾದ ಕರ್ಣಿಕೆಯನ್ನು ಕಂಡರು; ಈ ಕರ್ಣಿಕೆಗೆ—ನದಿಗಳು ಸಣ್ಣಸಣ್ಣ ಕೇಸರಗಳಾಗಿಯೂ ನಾಳಗಳಾಗಿಯೂ ಇದ್ದುವು; ನಗರಗಳೂ ಗ್ರಾಮಗಳೂ ದೊಡ್ಡದೊಡ್ಡ ಕೇಸರಗಳಾಗಿದ್ದುವು॥೮॥

ಕುಲಪರ್ವತಗಳೆಂಬ ದೊಡ್ಡದಾದ ಏಳುಬೀಜಗಳಿಂದ ಆ ಕರ್ಣಿಕೆಯು ರಮಣೀಯವಾಗಿದ್ದಿತು; ಇದರ ಮಧ್ಯದಲ್ಲಿರುವ ಎತ್ತರವಾದ ಮಹಾಮೇರುವೆಂಬ ದೊಡ್ಡ ಬೀಜವು ಅಂತರಿಕ್ಷಪ್ರದೇಶವನ್ನು ಆಕ್ರಮಿಸಿಕೊಂಡಿದ್ದಿತು ॥೯॥

ಸರಸ್ಸುಗಳೇ ಆ ಕರ್ಣಿಕೆಗೆ ಹಿಮಕಣಗಳಾಗಿಯೂ, ತೋಪುಗಳೂ ಕಾಡುಗಳೂ ಧೂಳಿಯಾಗಿಯೂ ಇದ್ದುವು; ಭೂಮಿಯಲ್ಲಿ ಆಯಾ ರಾಷ್ಟ್ರಗಳೊಳಗಿರುವ ಜನಸಮೂಹವೇ ಈ ಕರ್ಣಿಕೆಯಲ್ಲಿ ಭ್ರಮರಪಂಕ್ತಿಯಾಗಿದ್ದಿತು ॥೧೦॥

ತಾಂ ಯೋಜನಶತಾಕಾರೈಃ ಪ್ರತಿರಾಕಂ ಪ್ರಬೋಧಿಭಿಃ ।
ಸಾದರೈರ್ಭ್ರಮರೈರ್ವ್ಯಾಪ್ತಾಂ ದಿಕ್ಚತುಷ್ಟಯಶಾಲಿಭಿಃ ॥೧೧॥
ದಿಗ್ದಳಾಷ್ಟಕವಿಶ್ರಾನ್ತಸಸುರಾಮ್ಭೋಧಿಷಟ್ಪದಾಮ್ ।
ಭ್ರಾತೃಭಿರ್ನವಭಿರ್ಭೂಪೈಃ ನವಧಾ ಪರಿಕಲ್ಪಿತಾಮ್ ॥೧೨॥
ಲಕ್ಷಯೋಜನವಿಸ್ತೀರ್ಣಾಂ ಆಕೀರ್ಣಾಂ ಚ ರಜೋಲವೈಃ।
ನಾನಾಜನಪದವ್ಯೂಹಸ್ಥಿರಾವಶ್ಯಾಯಶೀಕರಾಮ್ ॥೧೩॥
ದ್ವೀಪಾತ್ ತು ದ್ವಿಗುಣಂ ಮಾನಂ ಲವಣಾರ್ಣವಲೇಖಯಾ ।
ದಧತ್ಯಾ ವಳಿತಾಂ ಬಾಹ್ಯೇ ಪ್ರಕೋಷ್ಠಮಿವ ಕಮ್ಬುನಾ ॥೧೪॥
ತತೋಽಪಿ ದ್ವಿಗುಣಂ ದೇಹಂ ದಧತ್ಯಾ ವಲಯಾಕೃತಿಮ್ ।
ಜಗದ್ಭೂತಲತಾವ್ಯಾಪ್ತಾಂ ಶಾಕಾಖ್ಯದ್ವೀಪಲೇಖಯಾ ॥೧೫॥
ತತೋಽಪಿ ದ್ವಿಗುಣಾಕಾರಂ ಧಾರಯನ್ತ್ಯಾ ಚ ವೇಷ್ಟಿತಾಮ್ ।
ಪ್ರತ್ಯಗ್ರಕ್ಷೀರಪೂರ್ಣಾಬ್ಧಿಲೇಖಯಾ ಸ್ವಾದುಶೀತಯಾ ॥೧೬॥
ತತೋಽಪಿ ದ್ವಿಗುಣಾಕಾರಂ ಧಾರಯನ್ತ್ಯೋಪವೇಷ್ಟಿತಾಮ್ ।
ನಾನಾಜನಾಲಙ್ಕೃತಯಾ ಕುಶಾಖ್ಯದ್ವೀಪಲೇಖಯಾ ॥೧೭॥

ಮತ್ತು ಈ ಕರ್ಣಿಕೆಯಲ್ಲಿ ಸಾಗರಗಳೆಂಬ ದುಂಬಿಗಳು ವ್ಯಾಪಿಸಿಕೊಂಡಿದ್ದುವು ; ಈ ದುಂಬಿಗಳು,ನೂರಾರುಯೋಜನ ಆಕಾರವುಳ್ಳವಾಗಿಯೂ-ಪ್ರತಿಪೂರ್ಣಿಮೆಯೂ ಪ್ರಬೋಧಹೊಂದತಕ್ಕುವುಗಳಾಗಿಯೂ–ನಾಲ್ಕುದಿಕ್ಕಿನಲ್ಲಿ ಪ್ರಕಾಶಿಸತಕ್ಕುವುಗಳಾಗಿಯೂಇದ್ದುವು॥

ಮತ್ತು ಈ ಕರ್ಣಿಕೆಯ ಸುತ್ತಲೂ ದಿಕ್ಕುಗಳೆಂಬ ಎಂಟು ದಳಗಳಿದ್ದುವು; ಅವುಗಳಲ್ಲಿ ದೇವತೆಗಳೊಡಗೂಡಿದ ಸಮುದ್ರಗಳೆಂಬ ದುಂಬಿಗಳು ವಿಶ್ರಮಿಸಿಕೊಂಡಿದ್ದುವು; ಈ ಜಂಬೂದ್ವೀಪವೆಂಬ ಕರ್ಣಿಕೆಯನ್ನು ಪೂರ್ವದಲ್ಲಿ ಭದ್ರಾಶ್ವ ಕೇತುಮಾಲ ಮುಂತಾದ ಒಂಭತ್ತು ಮಂದಿ ಸಹೋದರರಾದ ರಾಜರು ಒಂಭತ್ತು ಭಾಗವಾಗಿ ಹಂಚಿಕೊಂಡಿದ್ದರು॥

ಇದು ಲಕ್ಷಯೋಜನ ವಿಸ್ತೀರ್ಣವಾಗಿದ್ದಿತು; ಇದರಲ್ಲಿ ಸಣ್ಣಸಣ್ಣ ರಜಸ್ಸುಗಳು ವ್ಯಾಪಿಸಿದ್ದುವು; ನಾನಾವಿಧವಾದ ದೇಶಸಮೂಹವೆಂಬ ಹಿಮಕಣಗಳು ಇದರಲ್ಲಿ ಸ್ಥಿರವಾಗಿದ್ದುವು॥

ಈ ಜಂಬೂದ್ವೀಪಕ್ಕೆ ಎರಡರಷ್ಟಿರುವ ಲವಣಸಮುದ್ರವು ರೇಖಾಕಾರವಾಗಿ—ಶಂಖದೊಳಗೆ ಕೈಯಿಟ್ಟಾಗ ಆ ಶಂಖವು ಈ ಕೈಯನ್ನು ಸುತ್ತಲೂ ಸುತ್ತಿಕೊಳ್ಳುವಂತೆ—ಹೊರಭಾಗದಲ್ಲಿ ಸುತ್ತಿಕೊಂಡಿರುವುದು. (ಇಲ್ಲಿ ಹೇಳಿರುವ ಈ ಪ್ರಮಾಣಗಳಿಗೂ ಪುರಾಣದಲ್ಲಿರುವ ಪ್ರಮಾಣಗಳಿಗೂ ವ್ಯತ್ಯಾಸವಿರುವುದು) ॥೧೪॥

ಅಲ್ಲಿಂದಾಚೆಗೆ ಅದಕ್ಕೆರಡರಷ್ಟಿರುವ ವಲಯಾಕಾರವಾದ ಶಾಕದ್ವೀಪವು, ಜಗದ್ರೂಪವಾಗಿ ಪರಿಣಮಿಸಿರುವ ಕಮಲಲತೆಯೋ ಎಂಬಂತೆ, ಸುತ್ತಲೂ ವ್ಯಾಪಿಸಿರುವುದು ॥೧೫॥

ಅದರಾಚೆ ಅದಕ್ಕೆರಡರಷ್ಟಿರುವ ಮಧುರವಾಗಿ ಶೀತವಾಗಿರುವ ಹೊಸದಾದ ಹಾಲಿನಿಂದ ಪೂರ್ಣವಾದ ಕ್ಷೀರಸಮುದ್ರವು ಸುತ್ತಿಕೊಂಡಿರುವುದು ॥೧೬॥

ಅದರಾಚೆ ಅದಕ್ಕೆರಡರಷ್ಟಿರುವ ಕುಶದ್ವೀಪವು ನಾನಾವಿಧರಾದ ಜನರಿಂದ ಅಲಂಕೃತವಾಗಿ ಸುತ್ತಿಕೊಂಡಿರುವುದು ॥೧೭॥

ತತೋಽಪಿ ದ್ವಿಗುಣಾಕಾರಂ ಧಾರಯನ್ತ್ಯಾ ಚ ವೇಷ್ಟಿತಾಮ್ |
ದಧ್ಯಬ್ಧಿಲೇಖಯಾ ನಿತ್ಯಸನ್ತರ್ಪಿತಸುರೌಘಯಾ ||೧೮||
ತತಃ ಕ್ರೌಞ್ಚಾಭಿಧದ್ವೀಪಲೇಖಯೈವಮ್ಪ್ರಮಾಣಯಾ |
ವೇಷ್ಟಿತಾಂ ಖಾತರಚಯಾ ನವಾಂ ನೃಪಪುರೀಮಿವ ||೧೯||
ತತೋಽಪಿ ಚ ಘೃತಾಮ್ಭೋಧಿಲೇಖಯೈವಮ್ಪ್ರಮಾಣಯಾ |
ತತೋಽಪಿ ಶಾಲ್ಮಲೀದ್ವೀಪಲೇಖಯಾಮಲಪೂರ್ಣಯಾ ||೨೦||
ತತಃ ಸುರಾಮಹಾಮ್ಭೋಧಿಲೇಖಯಾ ಪುಷ್ಪಶುಭ್ರಯಾ |
ಶೇಷಸ್ಯ ದೇಹಲತಯಾ ಹರಿಮೂರ್ತಿಮಿವಾವೃತಾಮ್ ||೨೧||
ತತೋ ಗೋಮೇದಕದ್ವೀಪಲೇಖಯೈವಮ್ಪ್ರಮಾಣಯಾ |
ಇಕ್ಷ್ವಬ್ಧಿಲೇಖಯಾಪ್ಯೇವಂ ಹಿಮವತ್ಸಾನುಶುದ್ಧಯಾ ||೨೨||
ತತೋಽಪಿ ಪುಷ್ಕರದ್ವೀಪಲೇಖಯಾ ದ್ವಿಗುಣಸ್ಥಯಾ |
ಅನ್ತೇ ಸ್ವಾದೂದಕಾಮ್ಭೋಧಿಲೇಖಯೈವಮ್ಪ್ರಮಾಣಯಾ ||೨೩||
ತತೋ ದಶಗುಣೇನಾಥ ಪಾತಾಳತಲಗಾಮಿನಾ |
ನಿಖಾತವಲಯೇನೋಚ್ಚೈಃ ಶ್ವಭ್ರಸಮ್ಭಾರರೂಪಿಣಾ |
ಪಾತಾಳಗಾಮಿಮಾರ್ಗೇಣ ವಲಿತಾಂ ಭಯದಾತ್ಮನಾ ||೨೪||

ಅದಕ್ಕಾಚೆ ಅದಕ್ಕೆರಡರಷ್ಟಿರುವ ದಧಿಸಮುದ್ರವು ನಿತ್ಯವೂ ದೇವಸಮೂಹಗಳನ್ನು ತೃಪ್ತಿಪಡಿಸುತ್ತ ಸುತ್ತಿಕೊಂಡಿರುವುದು ॥೧೮॥

ಅಲ್ಲಿಂದಾಚೆ ಇಷ್ಟೇ ಪ್ರಮಾಣವುಳ್ಳ ಕ್ರೌಂಚದ್ವೀಪ ರೇಖೆಯು, ಹೊಸದಾದ ರಾಜಧಾನಿಯನ್ನು ಕಂದಕವು ಸುತ್ತಿಕೊಳ್ಳುವಂತೆ ಸುತ್ತಿಕೊಂಡಿರುವುದು ॥೧೯॥

ಅದರಾಚೆ ಇಷ್ಟೇ ಪ್ರಮಾಣವುಳ್ಳ ಘೃತಸಮುದ್ರವೂ, ಅದರಾಚೆ ಇದೇರೀತಿಯಾಗಿ ತುಂಬಿರುವ ಶಾಲ್ಮಲದ್ವೀಪವೂ ಸುತ್ತಿಕೊಂಡಿರುವುವು ॥೨೦॥

ಅದರಾಚೆ ಪುಷ್ಪದಂತೆ ಶುಭ್ರವಾದ ಸುರಾಸಮುದ್ರವು, ವಿಷ್ಣುದೇಹವನ್ನು ಆದಿಶೇಷನು ಸುತ್ತಿಕೊಂಡಿರುವಂತೆ ಸುತ್ತಿಕೊಂಡಿರುವುದು ॥೨೧॥

ಅಲ್ಲಿಂದಾಚೆಗೆ ಪೂರ್ವೋಕ್ತರೀತಿಯಾಗಿಯೇ ಪ್ರಮಾಣವುಳ್ಳ ಗೋಮೇದಕ ದ್ವೀಪವೂ, ಅದರಾಚೆ ಅದೇರೀತಿಯಾಗಿ ಹಿಮವತ್ಪರ್ವತದ ತೊಪ್ಪಲಿನಂತೆ ಶುಭ್ರವಾದ ಇಕ್ಷುಸಮುದ್ರವೂ ವ್ಯಾಪಿಸಿಕೊಂಡಿರುವುವು ॥೨೨॥

ಅಲ್ಲಿಂದಾಚೆ ಅದಕ್ಕೆರಡರಷ್ಟಿರುವ ಪುಷ್ಕರದ್ವೀಪವೂ, ಎಲ್ಲಕ್ಕೂ ಕೊನೆಯಲ್ಲಿ ಪೂರ್ವೋಕ್ತಪ್ರಮಾಣವುಳ್ಳ ಶುದ್ಧೋದಕ ಸಮುದ್ರವೂ ಸುತ್ತಿಕೊಂಡಿರುವುವು ॥೨೩॥

ಈ ಶುದ್ಧೋದಕಸಮುದ್ರದ ಆಚೆ ದೊಡ್ಡದಾದ ಹಳ್ಳವಿರುವುದು; ಅದು ಇದಕ್ಕೆ ಹತ್ತರಷ್ಟಿರುವುದು; ಅದು ಪಾತಾಳದವರೆಗೆ ವ್ಯಾಪಿಸಿಯೂ, ಅನೇಕ ಗುಂಡಿಗಳ ಸಮೂಹದಂತೆಯೂ, ಪಾತಾಳಕ್ಕೆ ಹೋಗುವ ಮಾರ್ಗವಾಗಿಯೂ, ಭಯಂಕರಸ್ವರೂಪವಾಗಿಯೂ ಇದ್ದಿತು ॥೨೪॥

ಏತಸ್ಮಾತ್ ಖಲು ಸರ್ವಸ್ಮಾತ್ ತತೋ ದಶಗುಣೋಚ್ಛ್ರಯಾ ।
ಅವ್ಯೋಮಸು ಚತುರ್ದಿಕ್ಷು ಶ್ವಭ್ರಸಮ್ಭಾರಭೀಷಯಾ ॥೨೫॥
ಅರ್ಧೋನ್ಮ್ಲಾನತಮೋರೂಪಲಗ್ನನೀಲೋತ್ಪಲಸ್ರಜಾ ।
ನಾನಾಮಾಣಿಕ್ಯಶಿಖರಕಹ್ಲಾರಕುಮುದಾಬ್ಜಯಾ ॥೨೬॥
ಲೋಕಾಲೋಕಾಚಲೋತ್ತಾಳವಿಪುಲೋದ್ದಾಮಮಾಲಯಾ ।
ವಲಿತಾಂ ತ್ರಿಜಗಲ್ಲಕ್ಷ್ಮೀಧಮ್ಮಿಲ್ಲವಲನಾಮಿವ ॥೨೭॥
ಏತಸ್ಮಾದೇವ ಸರ್ವಸ್ಮಾತ್ ತತೋ ದಶಗುಣಾತ್ಮನಾ ।
ಅಜ್ಞಾತಭೂತಸಞ್ಚಾರನಾಮ್ನಾರಣ್ಯೇನ ಪಾಲಿತಾಮ್ ॥೨೮॥
ಏತಸ್ಮಾದೇವ ಸರ್ವಸ್ಮಾತ್ ತತೋ ದಶಗುಣಾತ್ಮನಾ ।
ನಭಸೇವ ಚತುರ್ದಿಕ್ಕಂ ವ್ಯಾಪ್ತಾಮತುಲವಾರಿಣಾ ॥೨೯॥
ಏತಸ್ಮಾದೇವ ಸರ್ವಸ್ಮಾತ್ ತತೋ ದಶಗುಣಾತ್ಮನಾ ।
ಮೇರ್ವಾದಿದ್ರಾವಣೋತ್ಕೇನ ಜ್ವಾಲಾಜಾಲೇನ ಮಾಲಿತಾಮ್ ॥೩೦॥
ಏತಸ್ಮಾದಥ ಸರ್ವಸ್ಮಾತ್ ತತೋ ದಶಗುಣಾತ್ಮನಾ ।
ಮೇರ್ವಾದ್ಯಚಲಸಙ್ಘಾತಂ ನಯತಾ ತೃಣಪಾಂಸುವತ್ ॥೩೧॥

ಇವೆಲ್ಲಕ್ಕೂ ಆಚೆಗೆ ಅದಕ್ಕೆ ಹತ್ತರಷ್ಟು ಎತ್ತರವಾಗಿರುವ ಲೋಕಾಲೋಕಪರ್ವತ ಶ್ರೇಣಿಯು, ಎತ್ತರವಾಗಿಯೂ ಆಗಲವಾಗಿಯೂ ವಿಸ್ತಾರವಾಗಿ ಸುತ್ತಿಕೊಂಡಿರುವುದು; ಇದು ಮೇಲ್ಭಾಗದಲ್ಲಿ ಆಕಾಶರಹಿತವಾಗಿ ನಾಲ್ಕುದಿಕ್ಕುಗಳಲ್ಲಿಯೂ ಹರಡಿಕೊಂಡಿರುವುದು. ಮಧ್ಯಮಧ್ಯದಲ್ಲಿ ಅನೇಕ ಗುಂಡಿಗಳಿರುವುದರಿಂದ ಬಹು ಭಯಂಕರವಾಗಿರುವುದು; ಮೇಲ್ಭಾಗದಲ್ಲಿ ಸೂರ್ಯಕಿರಣಪ್ರಸರಣೆಯಿಂದ ಸ್ವಲ್ಪ ಕುಂದಿರುವ ಅಂಧಕಾರವು ಇದರಲ್ಲಿ ಕನ್ನೈದಿಲೆಯ ಮಾಲಿಕೆಯಂತಿದ್ದಿತು; ಅನೇಕವಾದ ಮಾಣಿಕ್ಯಶಿಖರಗಳೇ ಇದರಲ್ಲಿ ಕಲ್ಹಾರ ಕುಮುದ ಕಮಲಗಳಾಗಿದ್ದುವು; ಇಂತಹ ಲೋಕಾಲೋಕ ಪರ್ವತಶ್ರೇಣಿಯು ಲೋಕತ್ರಯಲಕ್ಷ್ಮಿಯ ಜುಟ್ಟು ಗಂಟೋ ಎಂಬಂತೆ ಸುತ್ತಲೂ ಸುತ್ತಿಕೊಂಡಿರುವುದು ॥೨೫—೨೭॥

ಇವೆಲ್ಲಕ್ಕೂ ಆಚೆ ಇದಕ್ಕೆ ಹತ್ತರಷ್ಟಿರುವ ಅರಣ್ಯವು, ಪ್ರಾಣಿಸಂಚಾರದ ಹೆಸರೇ ಇಲ್ಲದೆ ಆವರಿಸಿಕೊಂಡಿರುವುದು ॥೨೮॥

ಇವೆಲ್ಲಕ್ಕೂ ಹೊರಗಡೆ, ಇದಕ್ಕೆ ಹತ್ತರಷ್ಟಿರುವ ಅಸದೃಶವಾದ ಜಲಸಮುದಾಯವು, ಆಕಾಶದಂತೆ ನಾಲ್ಕುದಿಕ್ಕಿನಲ್ಲಿಯೂ ವ್ಯಾಪಿಸಿಕೊಂಡಿರುವುದು ॥೨೯॥

ಇವೆಲ್ಲಕ್ಕೂ ಆಚೆ, ಇದಕ್ಕೆ ಹತ್ತರಷ್ಟಿರುವ ಅಗ್ನಿಜ್ವಾಲಾ ಸಮೂಹವು, ಮೇರು ಮುಂತಾದ ಪರ್ವತಗಳನ್ನೆಲ್ಲ ಕರಗಿಸುವುದರಲ್ಲಾಸಕ್ತವಾಗಿ ವ್ಯಾಪಿಸಿಕೊಂಡಿರುವುದು ॥

ಇವೆಲ್ಲಕ್ಕೂ ಆಚೆ, ಇದಕ್ಕೆ ಹತ್ತರಷ್ಟಿರುವ ವಾಯುಮಂಡಲವು ಸುತ್ತಿಕೊಂಡಿರುವುದು; ಇದು ಮಹಾಮೇರು ಮುಂತಾದ ಪರ್ವತಸಮೂಹಗಳನ್ನು, ಕಸದಂತೆಯೂ ಧೂಳಿನಂತೆಯೂ ಆಚೆಗೆ ಹಾರಿಸಿಬಿಡುತ್ತಿರುವುದು; ಅನೇಕ ಪರ್ವತಗಳನ್ನು ಸೀಳಿಬಿಡುತ್ತ ಇ

ವಹತಾದ್ರೀನ್ದ್ರವಿಸ್ಫೋಟಕಾರಿಣಾ ಜವಹಾರಿಣಾ ।
ನಿಶ್ಶೂನ್ಯತ್ವಾದಶಬ್ದೇನ ಮರುತಾ ಪರಿತೋ ವೃತಮ್ ॥೩೨॥
ಏತಸ್ಮಾದಥ ಸರ್ವಸ್ಮಾತ್ ತತೋ ದಶಗುಣಾತ್ಮನಾ ।
ಪರಿತೋ ವಲಿತಂ ವ್ಯೋಮ್ನಾ ನಿಶ್ಶೂನ್ಯೇನೈಕರೂಪಿಣಾ ॥೩೩॥
ಅಥ ಯೋಜನಕೋಟೀನಾಂ ಶತೇನ ಘನರೂಪಿಣಾ ।
ವ್ಯಾಪ್ತಂ ಬ್ರಹ್ಮಾಣ್ಡಕುಡ್ಯೇನ ಹೈಮೇನಾಪಿ ದ್ವಿಪರ್ವಣಾ ॥೩೪॥
ಇತಿ ಜಲಧಿಮಹಾದ್ರಿಲೋಕಪಾಲತ್ರಿದಶಪುರಾಮ್ಬರಭೂತಲೈಃ ಪರೀತಮ್ ।
ಜಗದುದರಮವೇಕ್ಷ್ಯ ಮಾನುಷೀ ದ್ರಾಕ್ ಭುವಿ ನಿಜಮನ್ದಿರಕೋಟರಂ ದದರ್ಶ ॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಭೂಲೋಕವರ್ಣನಂ
ನಾಮ ಪಞ್ಚವಿಂಶಃ ಸರ್ಗಃ.

ತರ ಭೂತಗಳ ವೇಗವನ್ನು ಅಪಹರಿಸತಕ್ಕದಾಗಿ ಮಹಾ ವೇಗವಾಗಿರುವುದು; ಸರ್ವತಃ ಅತ್ಯಂತ ಶೂನ್ಯವಾಗಿರುವುದರಿಂದ ಇದು ನಿಶ್ಶಬ್ದವಾಗಿರುವುದು: ಇಂತಹ ವಾಯುಮಂಡಲವು ಸುತ್ತಲೂ ಆವರಿಸಿಕೊಂಡಿರುವುದು ॥೩೧—೩೨॥

ಇವೆಲ್ಲಕ್ಕೂ ಆಚೆ, ಇದಕ್ಕೆ ಹತ್ತರಷ್ಟಿರುವ ಆಕಾಶವು, ಸುತರಾಂ ಶೂನ್ಯವಾಗಿ ಏಕಾಕಾರವಾಗಿ ಸುತ್ತಿಕೊಂಡಿರುವುದು ॥೩೩॥

ಆಮೇಲೆ ಅದರಾಚೆ ಶತಕೋಟಿಯೋಜನ ವಿಸ್ತೀರ್ಣವಾಗಿ ಘನಾಕಾರವಾಗಿರುವ ಸುವರ್ಣಮಯವಾದ ಬ್ರಹ್ಮಾಂಡಕುಡ್ಯವು ಎರಡುಭಾಗವಾಗಿ ವ್ಯಾಪಿಸಿಕೊಂಡಿರುವುದು॥

ಈರೀತಿಯಾಗಿ, ಸಮುದ್ರ, ಪರ್ವತ, ಲೋಕಪಾಲ, ಸ್ವರ್ಗ, ಆಕಾಶ, ಭೂಮಿ— ಇವುಗಳಿಂದ ವ್ಯಾಪ್ತವಾಗಿರುವ ಬ್ರಹ್ಮಾಂಡಮಧ್ಯವನ್ನು ನೋಡಿ, ಆ ಲೀಲೆಯು ಶೀಘ್ರವಾಗಿ ಭೂಮಿಯಲ್ಲಿರುವ ತನ್ನ ಮನೆಯ ಮಧ್ಯಭಾಗವನ್ನು ಕಂಡಳು ॥೩೫॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಭೂಲೋಕ ವರ್ಣನೆ
ಯೆಂಬ ಇಪ್ಪತ್ತೈದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಷಡ್ವಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಇತಿ ತೇ ವರವರ್ಣಿನ್ಯೌ ತತೋ ಬ್ರಹ್ಮಾಂಡಮಂಡಲಾತ್ ।
ನಿರ್ಗತ್ಯಾನ್ಯದನುಪ್ರಾಪ್ತೇ ಯತ್ರ ತದ್ಬ್ರಾಹ್ಮಣಾಸ್ಪದಮ್ ॥೧॥
ತತೋ ದದೃಶತುಃ ಸದ್ಮ ಸ್ವಮೇವಂ ಸಿದ್ಧಯೋಷಿತೌ ।
ಅದೃಶ್ಯೇ ಏವ ಲೋಕಸ್ಯ ಮಂಡಪಂ ಬ್ರಾಹ್ಮಣಾಸ್ಪದಮ್ ॥೨॥
ಚಿನ್ತಾವಿಧುರದಾಸೀಕಂ ಬಾಷ್ಪಕ್ಲಿನ್ನಾಙ್ಗನಾಮುಖಮ್ ।
ವಿಧ್ವಸ್ತಪ್ರಾಯವದನಂ ಶೀರ್ಣಪರ್ಣಾಮ್ಬುಜೋಪಮಮ್ ॥೩॥
ನಷ್ಟೋತ್ಸವಪುರಪ್ರಾಯಂ ಅಗಸ್ತ್ಯಾತ್ತಮಿವಾರ್ಣವಮ್ ।
ಗ್ರೀಷ್ಮದಗ್ಧಮಿವೋದ್ಯಾನಂ ವಿದ್ಯುದ್ದಗ್ಧಮಿವ ದ್ರುಮಮ್ ॥೪॥

ಉತ್ಪತ್ತಿಪ್ರಕರಣದಲ್ಲಿ ಇಪ್ಪತ್ತಾರನೆಯ ಸರ್ಗವು

ಸ್ವಗೃಹೇ ಸ್ವಜನಾನ್ ದೃಷ್ಟ್ವಾ ಶ್ರುತ್ವೈಷಾಂ ಪರಿದೇವಿತಮ್ ।
ಅನುಗ್ರಹೋತ್ರ ಲೀಲಾಯಾಃ ಜಗತ್ತತ್ತ್ವಂ ಚ ವರ್ಣ್ಯತೇ ॥

ಲೀಲೆಯು ತನ್ನ ಮನೆಯಲ್ಲಿ ತನ್ನ ಜನಗಳನ್ನು ನೋಡಿ ಅವರು ಅಳುತಿರುವುದನ್ನು ಕೇಳಿ ಬಳಿಕ ಅವರನ್ನು ಅನುಗ್ರಹಿಸುವಿಕೆಯೂ,ಜಗತ್ತಿನ ತತ್ತ್ವವೂ ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳುವರು :—

ಅಯ್ಯಾ! ರಾಮ ! ಈ ರೀತಿಯಾಗಿ ಆ ಉತ್ತಮಸ್ತ್ರೀಯರಿಬ್ಬರೂ ಆ ಬ್ರಹ್ಮಾಂಡ ಮಂಡಲದಿಂದ ಹೊರಟು, ಆ ಬ್ರಾಹ್ಮಣನ ಮನೆಯಿದ್ದ ಮತ್ತೊಂದು ಬ್ರಹ್ಮಾಂಡವನ್ನು ಸೇರಿದವರಾದರು ॥೧॥

ಬಳಿಕ, ಆ ಸಿದ್ಧಸ್ತ್ರೀಯರಿಬ್ಬರೂ ಜನಗಳಿಗೆ ಕಾಣಿಸದೆಯೇ, ಈರೀತಿಯಾಗಿದ್ದ ತಮ್ಮ ಮನೆಯನ್ನೂ ಬ್ರಾಹ್ಮಣನಿಗೆ ಆವಾಸಸ್ಥಾನವಾಗಿದ್ದ ಮಂಟಪವನ್ನೂ ನೋಡಿದರು ॥೨॥

ಆಗ ಆ ಮನೆ ಹೇಗಿತ್ತೆಂದರೆ: —ಅಲ್ಲಿದ್ದ ದಾಸಿಯರು ಚಿಂತೆಯಿಂದ ಕಳವಳಪಡುತ್ತಿದ್ದರು; ಹೆಂಗಸರ ಮುಖವೆಲ್ಲವೂ ಕಣ್ಣೀರಿನಿಂದ ನೆನೆದುಹೋಗಿದ್ದಿತು; ಸಾಮಾನ್ಯವಾಗಿ ಅಲ್ಲಿದ್ದವರ ಮುಖವೆಲ್ಲವೂ ಕಳೆಗುಂದಿಹೋಗಿರುವುದರಿಂದ, ಎಲೆಯೆಲ್ಲಉದುರಿಹೋಗಿರುವ ಕಮಲದಂತಿದ್ದಿತು ॥೩॥

ಉತ್ಸವಶೂನ್ಯವಾದ ಪಟ್ಟಣದಂತೆಯೂ, ಅಗಸ್ತ್ಯರಿಂದ ಕುಡಿಯಲ್ಪಟ್ಟು ಶೂನ್ಯವಾಗಿರುವ ಸಮುದ್ರದಂತೆಯೂ, ಬೇಸಿಗೆಯಿಂದ ಉರಿದುಹೋದ ಉದ್ಯಾನದಂತೆಯೂ, ಮಿಂಚಿನಿಂದ ಸುಡಲ್ಪಟ್ಟ ಮರದಂತೆಯೂ ಇದ್ದಿತು ॥೪॥

ವಾತಚ್ಛಿನ್ನಮಿವಾಮ್ಭೋದಂ ಹಿಮದಗ್ಧಮಿವಾಮ್ಬುಜಮ್ |
ಅಲ್ಪಸ್ನೇಹದಶಂ ದೀಪಂ ಇವಾಲೋಕನಭೇದನಮ್ ||೫||

ಆಸನ್ನಮೃತ್ಯು ಕರುಣಾಕುಲವಕ್ತ್ರಕಾನ್ತಿ
ಸಂಶೀರ್ಣಜೀರ್ಣತರುಪರ್ಣವನೋಪಮಾನಮ್ |
ವೃಷ್ಟಿವ್ಯಪಾಯಪರಿಧೂಸರದೇಶರೂಕ್ಷಂ
ಜಾತಂ ಗೃಹೇಶ್ವರವಿಯೋಗಹತಂ ಗೃಹಂ ತತ್ ||೬||

ಅಥ ಸಾ ನಿರ್ಮಲಜ್ಞಾನಚಿರಾಭ್ಯಾಸೇನ ಸುನ್ದರೀ |
ಸಮ್ಪನ್ನಾ ಸತ್ಯಸಙ್ಕಲ್ಪಾ ಸತ್ಯಕಾಮಾ ಚ ದೇವವತ್ ||೭||
ಚಿನ್ತಯಾಮಾಸ ಮಾಮೇತೇ ದೇವೀಂ ಚೇಮಾಂ ಸ್ವಬನ್ಧವಃ |
ಪಶ್ಯನ್ತು ತಾವತ್ ಸಾಮಾನ್ಯಲಲನಾರೂಪಧಾರಿಣೀಮ್ ||೮||
ತತೋ ಗೃಹಜನಸ್ತತ್ರ ಸ ದದರ್ಶಾಙ್ಗನಾದ್ವಯಮ್ |
ಲಕ್ಷ್ಮೀಗೌರ್ಯೋರ್ಯುಗಮಿವ ಸಮುದ್ಭಾಸಿತಮನ್ದಿರಮ್ ||೯||
ಆಪಾದವಿವಿಧಾಮ್ಲಾನಮಾಲಾವಲನಸುನ್ದರಮ್ |
ವಸನ್ತಲಕ್ಷ್ಮ್ಯೋರ್ಯುಗಳಂ ಇವಾಮೋದಿತಕಾನನಮ್ ||೧೦||

ಮತ್ತು ಗಾಳಿಯಿಂದ ಚದರಿಸಲ್ಪಟ್ಟ ಮೇಘದಂತೆಯೂ, ಮಂಜುಸುರಿದು ಬಣಗಿಹೋದ ಕಮಲದಂತೆಯೂ, ಎಣ್ಣೆಯೂ ಬತ್ತಿಯೂ ಮುಗಿಯುತ ಬಂದು ಪ್ರಕಾಶಹೀನವಾಗಿರುವ ದೀಪದಂತೆ ದೃಷ್ಟಿಭೇದಕ (ನೋಡುವುದಕ್ಕೆ ಅಸಾಧ್ಯ)ವಾಗಿಯೂ ಇದ್ದಿತು||೫||

ಗೃಹಾಧಿಪತಿಯಿಲ್ಲದೆ ಪಾಳಾಗಿರುವ ಆ ಮನೆಯು—ಮೃತ್ಯುಸನ್ನಿಹಿತವಾಗಿಯೂ, ಎಲ್ಲರ ಮುಖಕಾಂತಿಯಲ್ಲಿಯೂ ಶೋಕೋದ್ದೀಪಕಭಾವಯುಕ್ತವಾಗಿಯೂ, ಮರದ ಎಲೆಗಳೆಲ್ಲವೂ ಜೀರ್ಣವಾಗಿ ಉದುರಿಹೋಗಿರುವ ಅರಣ್ಯಕ್ಕೆ ಸಮಾನವಾಗಿಯೂ, ಅನಾವೃಷ್ಟಿಯಿಂದ ಕಳೆಗುಂದಿದ ದೇಶದಂತೆ ಪರುಷವಾಗಿಯೂ ಇದ್ದಿತು ||೬||

ಇಂತಹ ಮನೆಯನ್ನು ನೋಡಿದ ಬಳಿಕ, ಆ ಲೀಲೆಯು ನಿರ್ಮಲಜ್ಞಾನದ ಚಿರತರಾಭ್ಯಾಸಬಲದಿಂದ, ದೇವತೆಗಳಂತೆ ಸತ್ಯಸಂಕಲ್ಪಳಾಗಿಯೂ ಸತ್ಯಕಾಮಳಾಗಿಯೂ ಆದಳು||

ಆಗ ಆ ಲೀಲೆಯು, ತನ್ನ ಮನಸ್ಸಿನಲ್ಲಿ—ಸಾಮಾನ್ಯಸ್ತ್ರೀರೂಪವನ್ನು ಧರಿಸಿರುವ ನನ್ನನ್ನೂ ಸರಸ್ವತೀದೇವಿಯನ್ನೂ ಈ ನನ್ನ ಬಂಧುಗಳು ನೋಡಲಿ— ಎಂದು ಮನಸ್ಸಿನಲ್ಲಿ ಯೋಚಿಸಿದಳು ||೮||

ಬಳಿಕ ಅಲ್ಲಿದ್ದ ಅರಮನೆಯ ಜನಗಳು, ಲಕ್ಷ್ಮಿಯೂ ಗೌರಿಯೂ ಜತೆಯಾಗಿ ಬಂದಿರುವರಂತೆ ಮನೆಯನ್ನೆಲ್ಲ ಬೆಳಗುತ್ತಿರುವ ಆ ಸ್ತ್ರೀಯುಗ್ಮವನ್ನು ಕಂಡರು ||೯||

ಆಗ ಅವರಿಬ್ಬರೂ ಹೇಗಿದ್ದರೆಂದರೆ:—ತಲೆಯಿಂದ ಹಿಡಿದು ಕಾಲಿನವರೆಗೂ ನಾನಾವಿಧವಾದ ಅಮ್ಲಾನ (ಬಾಡದಿರುವ)ಪುಷ್ಪಗಳನ್ನು ಸುತ್ತಿಕೊಂಡು ಸುಂದರರಾಗಿದ್ದುದರಿಂದ, ಅರಣ್ಯವನ್ನೆಲ್ಲಾ ಸುವಾಸನೆಮಾಡುತಿರುವ ವಸಂತಲಕ್ಷ್ಮೀಯುಗ್ಮದಂತೆ ಕಾಣುತ್ತಿದ್ದರು||೧೦||

ಸರ್ವೌಷಧಿವನಗ್ರಾಮಂ ಪೂರಯನ್ತ್ಯೌ ರಸಾಯನೈಃ ।
ಶೀತಲಾಹ್ಲಾದಸುಖದಂ ಚನ್ದ್ರದ್ವಯಮಿವೋದಿತಮ್ ॥೧೧॥
ಲಮ್ಬಾಲಕಲತಾಲೋಲಲೋಚನಾಳಿವಿಲೋಕನೈಃ ।
ಕಿರತ್ ಕುವಲಯೋನ್ಮಿಶ್ರಮಾಲತೀಕುಸುಮೋತ್ಕರಾನ್ ॥೧೨॥
ದ್ರುತಹೇಮರಸಾಪೂರಸರಿತ್ಸರಣಹಾರಿಣಾ ।
ದೇಹಪ್ರಭಾಪ್ರವಾಹೇಣ ಕನಕೀಕೃತಕಾನನಮ್ ॥೧೩॥
ಸಹಜಾಯಾಮವಪುರ್ಲಕ್ಷ್ಮ್ಯಾಃ ಲೀಲಾದೋಲಾವಿಲಾಸಿನಃ ।
ತೇ ಏತೇ ಚ ತರಙ್ಗಾಢ್ಯಾಃ ನಿಜಲಾವಣ್ಯವಾರಿಧೇಃ ॥೧೪॥
ವಿಲೋಲಬಾಹುಲತಿಕಾಯುಗೇನಾರುಣಪಾಣಿನಾ ।
ಕಿರನ್ನವನವಂ ಹೈಮಂ ಕಲ್ಪವೃಕ್ಷಲತಾವನಮ್ ॥೧೫॥
ಪಾದೈರಮೃದಿತಾಮ್ಲಾನಪುಷ್ಪಕೋಮಲಪಲ್ಲವೈಃ ।
ಸ್ಥಲಾಬ್ಜದಳಮಾಲಾಭ್ಯೈಃ ಅಸ್ಪೃಶದ್ಭೂತಲಂ ಪುನಃ ॥೧೬॥
ತಾಳೀತಮಾಲಷಣ್ಡಾನಾಂ ಶುಷ್ಕಾಣಾಂ ಶುಚಿಶೋಚಿಷಾಮ್ ।
ಆಲೋಕನಾಮೃತಾಸೇಕೈಃ ಜನಯದ್ಬಾಲಪಲ್ಲವಾನ್ ॥೧೭॥

ಸಮಸ್ತವಾದ ಓಷಧಿವನಸಮೂಹವನ್ನೂ ಚಂದ್ರಿಕಾಪ್ರವಾಹದಿಂದ ತುಂಬುತ, ಶೀತಲವಾಗಿ ಆಹ್ಲಾದಸೌಖ್ಯವನ್ನು ಕೊಡುವ ಚಂದ್ರಯುಗ್ಮವು ಏಕಕಾಲದಲ್ಲುದಯಿಸಿದಂತಿದ್ದರು ॥೧೧॥

ಜೋಲಾಡುವ ಮುಂಗುರುಳುಗಳ ಸಾನ್ನಿಧ್ಯದಿಂದ ಭ್ರಮರದಂತೆ ಚಂಚಲವಾಗುತಿರುವ ನೇತ್ರಗಳ ಕಾಂತಿಗಳು—ಕಪ್ಪು ಬಿಳುಪು ಮಿಶ್ರವಾಗಿ ಪ್ರಸರಿಸುತ್ತಿರುವುದರಿಂದ, ಕುವಲಯಮಿಶ್ರವಾದ ಜಾತೀಪುಷ್ಪಸಮೂಹಗಳನ್ನು ಎರಚುತಿರುವಂತಿದ್ದರು ॥೧೨॥

ಇವರ ದೇಹಕಾಂತಿಯು—ಕರಗಿದ ಚಿನ್ನದ ರಸದಿಂದ ಪರಿಪೂರ್ಣವಾದ ನದಿಯು ಹರಿಯುವಂತೆ—ಮನೋಹರವಾಗಿ ಪ್ರಸರಿಸುತ್ತಿರುವುದರಿಂದ, ಆ ಆರಣ್ಯವನ್ನೆಲ್ಲ ಚಿನ್ನದಂತೆ ಮಾಡುತ್ತಿದ್ದಿತು ॥೧೩॥

ಇವರಿಬ್ಬರ ಸ್ವಾಭಾವಿಕವಾದ ಶರೀರಕಾಂತಿ ಲಕ್ಷ್ಮಿಗೆ, ಇವರ ಲಾವಣ್ಯವೆಂಬುದು ವಿಲಾಸಾರ್ಥವಾಗಿ ರಚಿಸಲ್ಪಟ್ಟದ್ದ ಡೋಲೆಯಂತೆ ಪ್ರಕಾಶಿಸುತಿದ್ದಿತು; ಇಂತಹ ಲಾವಣ್ಯವೆಂಬ ಸಮುದ್ರಕ್ಕೆ ಇವರಿಬ್ಬರೂ ಪ್ರಶಸ್ತವಾದ ಅಲೆಗಳಾಗಿದ್ದರು ॥೧೪॥

ಕೆಂಪಾದ ಕೈಯಿಂದ ಯುಕ್ತವಾಗಿ ಚಂಚಲವಾದ ಬಾಹುಲತೆಗಳಿಂದ, ಹೊಸಹೊಸದಾಗಿ ಸುವರ್ಣಮಯವಾದ ಕಲ್ಪವೃಕ್ಷ ಲತಾವನಗಳನ್ನು ಎರಚುವಂತೆ ಕಾಣುತ್ತಿದ್ದರು ॥

ಇವರ ಕಾಲುಗಳು, ಯಾರಿಂದಲೂ ಹೊಸಕಲ್ಪಡದೆಯೂ ಬಾಡದೆಯೂ ಇರುವ ಪುಷ್ಪಗಳಿಂದಲೂ ಎಳೆಚಿಗುರುಗಳಿಂದಲೂ ಮಾಡಲ್ಪಟ್ಟ ಸ್ಥಳಕಮಲಮಾಲಿಕೆಗಳಂತಿದ್ದುವು. ಆದರೆ, ದೇವತೆಗಳಾದಕಾರಣ, ಭೂಮಿಯಮೇಲೆ ಮಾತ್ರ ಕಾಲಿಡುತಿರಲಿಲ್ಲ ॥೧೬॥

ಇವರಿಬ್ಬರೂ ಉತ್ತಮಸ್ತ್ರೀಯರಾದುದರಿಂದ, ದೋಹದಶಾಸ್ತ್ರೋಕ್ತರೀತಿಯಾಗಿ, ಒಣಗಿಹೋಗಿ ಬಿಳುಪಾಗಿರುವ ತಾಳತಮಾಲವೃಕ್ಷಸಮೂಹಗಳಿಗೆ, ತಮ್ಮ ದರ್ಶನಗಳೆಂಬ ಅಮೃತಸೇಚನೆಯಿಂದ ಬಾಲಪಲ್ಲವಗಳು ಹುಟ್ಟುವಂತೆ ಮಾಡುತ್ತಿದ್ದರು ॥೧೭॥

ನಮೋಽಸ್ತು ವನದೇವೀಭ್ಯಾಂ ಇತ್ಯುಕ್ತ್ವಾ ಕುಸುಮಾಞ್ಜಲಿಮ್ ।
ತತ್ಯಾಜ ಜ್ಯೇಷ್ಠಶರ್ಮಾಥ ಸಾರ್ಧಂ ಗೃಹಜನೇನ ಸಃ ॥೧೮॥
ಪಪಾತ ಪಾದಯೋರ್ಗೇಹೇ ತಯೋರ್ವೈ ಕುಸುಮಾಞ್ಜಲಿಃ ।
ಪ್ರಾಲೇಯಶೀಕರಾಸಾರಃ ಪದ್ಮಿನ್ಯಾಇವ ಪದ್ಮಯೋಃ ॥೧೯॥

ಜ್ಯೇಷ್ಠಶರ್ಮಾದಯ ಊಚುಃ.

ಜಯತಂ ವನದೇವ್ಯೌ ನೋ ದುಃಖನಾಶಾರ್ಥಮಾಗತೇ ।
ಪ್ರಾಯಃ ಪರಪರಿತ್ರಾಣಂ ಏವ ಕರ್ಮ ನಿಜಂ ಸತಾಮ್ ॥೨೦॥
ಇತಿ ತದ್ವಚನಾನ್ತೇ ತೇ ದೇವ್ಯಾವೂಚತುರಾದರಾತ್ ।
ಆಖ್ಯಾತ ದುಃಖಂ ಯೇನಾಯಂ ಲಕ್ಷ್ಯತೇ ದುಃಖಿತೋ ಜನಃ ॥೨೧॥
ಜ್ಯೇಷ್ಠಶರ್ಮಾದಯಸ್ತೇ ತೇ ದೇವ್ಯೌ ಪ್ರತಿ ಯಥಾಕ್ರಮಮ್ ।
ನಿಜಂ ತದ್ದುಃಖಮಾಚಖ್ಯುಃ ದಮ್ಪತಿವ್ಯಸನಾತ್ಮಕಮ್ ॥೨೨॥

ಜ್ಯೇಷ್ಠಶರ್ಮಾದಯ ಊಚುಃ.

ದೇವ್ಯಾವಭವತಾಂ ಸ್ನಿಗ್ಧೌ ಇಹ ಬ್ರಾಹ್ಮಣದಮ್ಪತೀ ।
ಸರ್ವಾತಿಥೀ ಕುಲಕರೌ ಸ್ತಮ್ಭಭೂತೌ ದ್ವಿಜಸ್ಥಿತೇಃ ॥೨೩॥

ಇಂತಹ ಈ ಸ್ತ್ರೀಯುಗ್ಮವನ್ನು ನೋಡಿದ ಬಳಿಕ, ಅಲ್ಲಿದ್ದ ಜ್ಯೇಷ್ಠಶರ್ಮನೆಂಬ ಆ ಬ್ರಾಹ್ಮಣಪುತ್ರನು—ದೇವಿಯರಿಗೆ ನಮಸ್ಕಾರವಾಗಲಿ—ಎಂದು ಹೇಳಿ, ಮನೆಯವರೊಡನೆ ಪುಷ್ಪಾಂಜಲಿಯನ್ನು ಎರಚಿದನು ॥೧೮॥

ಹೀಗೆ ಆ ಮನೆಯಲ್ಲಿ ಅವರೆರಚಿದ ಪುಷ್ಪಾಂಜಲಿಯು, ಕಮಲಲತೆಯು ಕಮಲದ್ವಯದಮೇಲೆ ಹಿಮಕಣವೃಷ್ಟಿ ಸುರಿಯುವಂತೆ, ಅವರಿಬ್ಬರ ಪಾದಗಳಮೇಲೆ ಬಿದ್ದಿತು ॥೧೯॥

ಬಳಿಕ ಆ ಜ್ಯೇಷ್ಠಶರ್ಮಮೊದಲಾದವರು ಅವರಿಬ್ಬರನ್ನೂ ಕುರಿತು ಹೀಗೆ ಹೇಳಿದರು:—

ನಮ್ಮಗಳ ದುಃಖನಾಶಾರ್ಥವಾಗಿ ಬಂದಿರುವ ವನದೇವಿಯರೆ! ನಿಮಗೆ ಜಯವಾಗಲಿ. ಪ್ರಪಂಚದಲ್ಲಿ ಸತ್ಪುರುಷರಿಗೆ, ಇತರರನ್ನು ಕಾಪಾಡುವುದೇ ಬಹುಳವಾಗಿ ಸ್ವಕರ್ಮವಾಗಿರುವುದಲ್ಲವೆ! ॥೨೦॥

ಈರೀತಿಯಾಗಿ ಅವರುಗಳು ಹೇಳಿದಬಳಿಕ, ಆ ದೇವಿಯರಿಬ್ಬರೂ—ಈ ಜನರೆಲ್ಲರೂ ದುಃಖಿತರಾಗಿರುವುದೇತಕ್ಕೆ ? ಅದೆಂತಹ ದುಃಖವು ? ನಮಗೆ ಹೇಳಿರಿ—ಎಂದು ಅವರಿಗ ಪ್ರಣೆಯಿತ್ತರು ॥೨೧॥

ಆಗ ಆ ಜ್ಯೇಷ್ಠಶರ್ಮಾದಿಗಳು, ಆ ದೇವಿಯರನ್ನು ಕುರಿತು, ಪೂರ್ವೋಕ್ತದಂಪತಿ ಮರಣರೂಪವಾದ ತಮ್ಮ ಆ ದುಃಖವನ್ನು ಯಥಾಕ್ರಮವಾಗಿ ಹೇಳಲುಪಕ್ರಮಿಸಿದರು ॥

ಜ್ಯೇಷ್ಠಶರ್ಮಾದಿಗಳು ಹೇಳಿದುದೇನೆಂದರೆ:—

ಎಲೌ ದೇವಿಯರೇ ? ಈ ಮನೆಯಲ್ಲಿ—ಪರಸ್ಪರ ಪ್ರೇಮಯುಕ್ತರಾಗಿಯೂ ಸರ್ವರಾದ ಅತಿಥಿಗಳನ್ನೂ ಸತ್ಕರಿಸತಕ್ಕವರಾಗಿಯೂ ವಂಶಪ್ರತಿಷ್ಠಾಪಕರಾಗಿಯೂ ಬ್ರಾಹ್ಮಣಮರ್ಯಾದೆಗೆ ಕಂಭದಂತೆ ಆಧಾರಭೂತರಾಗಿಯೂ ಇದ್ದ ಬ್ರಾಹ್ಮಣದಂಪತಿಗಳಿದ್ದರು ॥೨೩॥

ತಾವದ್ಯ ಗೃಹಮುತ್ಸೃಜ್ಯ ಸಪುತ್ರಪಶುಬಾನ್ಧವಮ್ ।
ಸ್ವರ್ಗಂ ಗತೌ ನಃ ಪಿತರೌ ತೇನ ಶೂನ್ಯಂ ಜಗತ್ತ್ರಯಮ್ ॥೨೪॥
ಪಕ್ಷಿಣೋ ಗೃಹಮಾರುಹ್ಯ ವಿಕ್ಷಿಪನ್ತಃ ಪ್ರತಿಕ್ಷಣಮ್ ।
ದೇಹಂ ಶೂನ್ಯೇ ಮೃತಂ ಭಕ್ತ್ಯಾ ಶೋಚನ್ತಿ ಮಧುರೈಃ ಸ್ವರೈಃ ॥೨೫॥
ಗುಹಾಗುರುಗುರಾರಾವಪ್ರಲಾಪಲಪನಾಕುಲಃ ।
ಸರಿತ್ಸ್ಥೂಲಾಶ್ರುಧಾರಾಭಿಃ ಪರಿರೋದಿತಿ ಪರ್ವತಃ ॥೨೬॥
ನಿರ್ಝರಾಕ್ರನ್ದಕಾರಿಣ್ಯೋ ಮುಕ್ತಾಮ್ಬರಪಯೋಧರಾಃ ।
ತಪ್ತನಿಶ್ವಾಸವಿಧ್ವಸ್ತಾಃ ಪರಂ ಕಾರ್ಶ್ಯಮಿತಾದಿಶಃ ॥೨೭॥
ಕ್ಷತವಿಕ್ಷತಸರ್ವಾಙ್ಗಃ ಕರುಣಾಕ್ರನ್ದಕರ್ಕಶಃ ।
ಉಪವಾಸರತೋ ಗ್ರಾಮೋ ದೀನೋ ಮೃತಿಪರಃ ಸ್ಥಿತಃ ॥೨೮॥
ದಿವಸಂಪ್ರತಿ ವೃಕ್ಷಾಣಾಂ ಅವಶ್ಯಾಯಾಶ್ರುಬಿನ್ದವಃ ।
ಗುಚ್ಛಲೋಚನಕೋಶೇಭ್ಯಃ ತಾಪೋಷ್ಣಾ ನಿಪತನ್ತ್ಯಧಃ ॥೨೯॥
ಪ್ರಶಾನ್ತಜನಸಞ್ಚಾರಾ ರಥ್ಯಾ ಕ್ಷಾರವಿಧೂಸರಾ ।
ವಿಧವಾವಿಗತಾನನ್ದಾ ಸಂಶೂನ್ಯಹೃದಯಾ ಸ್ಥಿತಾ ॥೩೦॥

ನಮ್ಮ ತಾಯಿತಂದೆಗಳಾದ ಅವರಿಬ್ಬರೂ, ಈ ದಿವಸ, ಪುತ್ರ, ಪಶು ಬಂಧುಗಳಿಂದ ಯುಕ್ತವಾದ ಈ ಮನೆಯನ್ನು ಬಿಟ್ಟುಬಿಟ್ಟು, ಸ್ವರ್ಗಕ್ಕೆಹೋಗಿಬಿಟ್ಟರು; ಅದುಕಾರಣ, ಮೂರುಲೋಕವೂ ನಮಗೆ ಶೂನ್ಯವಾದಂತಿರುವುದು ॥೨೪॥

ಪಕ್ಷಿಗಳೂ ಕೂಡ, ಭಕ್ತಿವಿಶೇಷದಿಂದ ಮನೆಯಮೇಲೆ ಹತ್ತಿ, ಪ್ರತಿಕ್ಷಣವೂ ತಮ್ಮ ದೇಹವನ್ನು ಶೂನ್ಯವಾದ ಆಕಾಶದಲ್ಲಿ ಎಸೆದಾಡುತ, ಮಧುರಸ್ವರಗಳಿಂದ—ಮೃತನಾದವನನ್ನು ಕುರಿತು ಅಳುತ್ತಿರುವುವು ॥೨೫॥

ಈ ಪರ್ವತವೂ ಕೂಡ, ಗುಹೆಯೆಂಬ ತನ್ನ ಮುಖದಲ್ಲಿ ಗುರುಗುರು ಎಂಬ ಧ್ವನಿಯಿಂದ ವ್ಯಾಕುಲವಾಗಿ, ನದಿಗಳೆಂಬ ಸ್ಥೂಲವಾದ ಅಶ್ರುಧಾರೆಗಳಿಂದ ಅಳುತ್ತಿರುವುದು ॥

ದಿಕ್ಕುಗಳೂ ಕೂಡ, ಗಿರಿನದೀಪ್ರವಾಹಧ್ವನಿಯಿಂದ ಕಿರಿಚಿಕೊಳ್ಳುವಂತೆ ಕಾಣಿಸುತ, ಮೇಘಗಳು ಆಕಾಶರಹಿತವಾಗಿರುವುದರಿಂದ ವಸ್ತ್ರರಹಿತವಾದ ಸ್ತನವುಳ್ಳವುಗಳಂತೆ, ಬಿಸಿಯಾದ ಹಬೆಯೆಂಬ ನಿಟ್ಟುಸಿರನ್ನು ಬಿಡುತ್ತ, ಹೆಚ್ಚಾಗಿ ಕೃಶವಾಗಿರುವುವು ॥೨೭॥

ಈ ಗ್ರಾಮವೇ, (ಗ್ರಾಮದ ಜನರು) ಗಾಯವೊಡೆದ ಸಮಸ್ತ ಶರೀರವುಳ್ಳದ್ದಾಗಿ ದೀನವಾಗಿ ಅಳುತ, ಉಪವಾಸಮಾಡುತ, ದೀನವಾಗಿ ಮರಣೋನ್ಮುಖವಾಗಿರುವುದು ॥

ವೃಕ್ಷಗಳ ಪುಷ್ಪಗುಚ್ಛಗಳೆಂಬ ಕಣ್ಣುಗಳಿಂದ, ಪ್ರತಿಹಗಲಿನಲ್ಲಿಯೂ, ಸೂರ್ಯಕಿರಣಸಂತಾಪವೆಂಬ ಮನಸ್ತಾಪದಿಂದ ಬಿಸಿಯಾಗಿರುವ ಹಿಮವೆಂಬ ಕಣ್ಣೀರುಹನಿಗಳು, ಕೆಳಗೆ ಸುರಿಯುತ್ತಿರುವುವು ॥೨೯॥

ಈ ಗ್ರಾಮದ ಚತುಷ್ಪಥವು, ಜನಸಂಚಾರರಹಿತವಾಗಿ, ಚವುಳುಮಣ್ಣಿನಿಂದ ಮೈಯಲ್ಲಿ ಧೂಳುಬಳಿದುಕೊಂಡಿರುವಂತೆ ಕಾಣಿಸುತ ಶೂನ್ಯಹೃದಯ (ಮಧ್ಯ) ವಾಗಿ, ಗಂಡಸತ್ತಿರುವ ಹೆಂಗಸಿನಂತೆ ಕಾಣಿಸುತ್ತಿರುವುದು ॥೩೦॥

ಕೋಕಿಲಾಳಿಪ್ರಲಾಪಿನ್ಯೋ ವೃಷ್ಟಿಬಾಷ್ಪಹತಾಲತಾಃ |
ಉಷ್ಣೋಷ್ಣಶ್ವಸನಾದೇಹಂ ಘ್ನಂತಿ ಪಲ್ಲವಪಾಣಿಭಿಃ ||೨೧||
ಆತ್ಮಾನಂ ಶತಧಾ ಕರ್ತುಂ ಬೃಹಚ್ಛ್ವಭ್ರಶಿಲಾತಲೇ |
ನಿರ್ಝರಾಃ ಪ್ರಪತನ್ತ್ಯೇತೇ ತಾಪತಪ್ತಶರೀರಕಾಃ ||೨೨||
ನಿಶ್ಶಙ್ಕಯಾ ಗತಶ್ರೀಕಾಃ ಮೂಕಾವಿಲುಲಿತಾಶಯಾಃ |
ಅನ್ಧೇನ ತಮಸಾ ಪೂರ್ಣಾಃ ಗೃಹಾಗಹನತಾಂ ಗತಾಃ ||೨೩||
ಉದ್ಯಾನಪುಷ್ಪಷಣ್ಡೇಭ್ಯೋ ರುದದ್ಭ್ಯೋ ಭ್ರಮರಾರವೈಃ |
ಪೂತಿಗನ್ಧೋ ವಿನಿರ್ಯಾತಿ ಸ್ವಾಮೋದಾಪರನಾಮಕಃ ||೨೪||
ಚೈತ್ರದ್ರುಮವಿಲಾಸಿನ್ಯೋ ವಿರಸಾಃ ಪ್ರತಿವಾಸರಮ್ |
ಲತಾಃ ಕೃಶಾವಿಲೀಯನ್ತೇ ಸಙ್ಕುಚದ್ಗುಚ್ಛಲೋಚನಾಃ ||೨೫||
ಪ್ರಕ್ಷೇಪ್ತುಮಮ್ಬುಧೌ ದೇಹಂ ಪ್ರವೃತ್ತಾ ಗನ್ತುಮಾಕುಲಾಃ |
ಕುಲ್ಯಾಃ ಕಲಕಲಾಲೋಲಂ ದೋಲಯನ್ತ್ಯಸ್ತನುಂ ಭುವಿ ||೨೬||

ಇಲ್ಲಿರುವ ಲತೆಗಳೆಲ್ಲವೂ, ಕೋಕಿಲಸಮೂಹದಧ್ವನಿಯಿಂದ ನಾನಾವಿಧ ಪ್ರಲಾಪ ಮಾಡುತ್ತಿರುವಂತೆ, ವೃಷ್ಟಿಯೆಂಬ ಕಣ್ಣೀರನ್ನು ಸುರಿಸುತ್ತ, ಬಿಸಿಬಿಸಿಯಾದ ವಾಯುವೆಂಬ ನಿಶ್ವಾಸವುಳ್ಳವುಗಳಾಗಿ, ತಮ್ಮ ಚಿಗುರುಗಳೆಂಬ ಕೈಗಳಿಂದ— ಎದೆಬಡಿದುಕೊಳ್ಳುವಂತೆ— ತಮ್ಮನ್ನು ಹೊಡೆದುಕೊಳ್ಳುತ್ತಿರುವುವು ||೨೧||

ಈ ಗಿರಿನದೀ ಪ್ರವಾಹಗಳೂ ಕೂಡ, ಬಿಸಿಲೆಂಬ ಸಂತಾಪದಿಂದ ತಪ್ತವಾದ ಶರೀರವುಳ್ಳವುಗಳಾಗಿ, ದುಃಖವನ್ನು ಸಹಿಸಲಾರದಂತೆ, ತಮ್ಮ ದೇಹವನ್ನು ನೂರಾರುಪಾಲಾಗಿ ಸೀಳಿಕೊಳ್ಳುವುದಕ್ಕೋಸ್ಕರ, ದೊಡ್ಡಹಳ್ಳದಲ್ಲಿರುವ ಕಲ್ಲುಗಳಮೇಲೆ ಬೀಳುತ್ತಿರುವುವು||೨೨||

ಈ ಗ್ರಾಮದಲ್ಲಿರುವ ಮನೆಗಳೆಲ್ಲವೂ, ಯೋಚನೆಯಿಲ್ಲದೆ ತಟ್ಟನೆ ಬಿಟ್ಟುಹೋದ ಗೃಹಲಕ್ಷ್ಮಿಯುಳ್ಳವುಗಳಾಗಿಯೂ, ಕಳವಳಪಡುತಿರುವ ಮಧ್ಯಭಾಗವೆಂಬ ಹೃದಯವುಳ್ಳವುಗಳಾಗಿಯೂ, ಅಂಧತಮಸ್ಸಿನಿಂದ ಪರಿಪೂರ್ಣಗಳಾಗಿಯೂ, ಪ್ರವೇಶಿಸುವುದಕ್ಕೇ ಅಶಕ್ಯಗಳಾಗುವ ಸ್ಥಿತಿಯನ್ನು ಹೊಂದಿರುವುವು ||೨೩||

ಭ್ರಮರಧ್ವನಿಗಳಿಂದ ಅಳುವಂತೆ ಕಾಣುತ್ತಿರುವ ಉದ್ಯಾನತರುಪುಷ್ಪಸಮೂಹಗಳ ದೆಸೆಯಿಂದ, ಅವುಗಳ ಸುವಾಸನೆಯೆಂಬ ನಾಮಾಂತರವುಳ್ಳ ದುರ್ಗಂಧವು ಹೊರಡುತ್ತಿರುವುದು ||೨೪||

ಚೈತ್ರಕಾಲಿಕವಾದ ವೃಕ್ಷಗಳನ್ನು ಅಲಂಕಾರಪಡಿಸುತಿದ್ದ ಲತೆಗಳು, ಪ್ರತಿದಿನವೂ ವಿರಸವಾಗುತ, ಪುಷ್ಪಗುಚ್ಛಗಳೆಂಬ ಕಣ್ಣುಗಳನ್ನು ಮುಚ್ಚಿಕೊಳ್ಳುತ, ಕೃಶಗಳಾಗಿ, ಒಣಗಿ ಹೋಗುತಿರುವುವು ||೨೫||

ಕಾಲುವೆಗಳೂ, ನದಿಗಳೂ, ಕಲಕಲಮಾಡುತ ಚಂಚಲವಾಗಿರುವ ತಮ್ಮ ದೇಹವನ್ನು ಅಲ್ಲಾಡಿಸುತ, ತಮ್ಮ ಶರೀರವನ್ನು ಸಮುದ್ರದಲ್ಲಿ ಹಾಕಿಬಿಡುವುದಕ್ಕೋಸ್ಕರ ಪ್ರವರ್ತಿಸಿ, ಹೊರಡಲುದ್ಯುಕ್ತಗಳಾಗಿರುವುವು ||೨೬||

ಅಶಙ್ಕಮಶಕಾಘಾತಸ್ಪನ್ದಮುಪ್ಯತಿಚಾಪಲಮ್ ।
ಕಲಯನ್ತ್ಯಃ ಸ್ಥಿತಾವಾಪ್ಯೋ ನಿಸ್ಪನ್ದಾನನ್ದಮಾತ್ಮನಿ ॥೩೭॥

ಗಾಯತ್ಕಿನ್ನರಗನ್ಧರ್ವವಿದ್ಯಾಧರಸುರಾಙ್ಗನಮ್ ।
ನೂನಮದ್ಯ ನಭೋ ಜಾತಂ ಅಸ್ಮತ್ತಾತಾಭ್ಯಲಙ್ಕೃತಮ್ ॥೩೮॥

ತದ್ದೇವ್ಯೌ ಕ್ರಿಯತಾಂ ತಾವತ್ ಅಸ್ಮಾಕಂ ಶೋಕನಾಶನಮ್ ।
ಮಹತಾಂ ದರ್ಶನಂ ನಾಮ ನ ಕದಾಚನ ನಿಷ್ಫಲಮ್ ॥೩೯॥

ಇತ್ಯುಕ್ತವನ್ತಂ ಸಾ ಪುತ್ರಂ ಮೂರ್ಧ್ನಿ ಪಸ್ಪರ್ಶ ಪಾಣಿನಾ ।
ಪಲ್ಲವೇನಾನತಾ ನಮ್ರಂ ಮೂಲಗ್ರನ್ಥಿಮಿವಾಬ್ಜಿನೀ ॥೪೦॥

ತಸ್ಯಾಃ ಸ್ಪರ್ಶೇನ ತೇನಾಸೌ ದುಃಖದೌರ್ಭಾಗ್ಯಸಙ್ಕಟಮ್ ।
ಜಹೌ ಪ್ರಾವೃಡ್ಘನಾಸಙ್ಗಾತ್ ಗ್ರೀಷ್ಮತಾಪಮಿವಾಚಲಃ ॥೪೧॥

ಸರ್ವೋ ಗೃಹಜನಃ ಸೋಽಥ ತಯೋರ್ದೇವ್ಯೋರ್ವಿಲೋಕನಾತ್ ।
ಲಕ್ಷ್ಮೀವಾನ್ ದುಃಖನಿರ್ಮುಕ್ತೋ ಬಭೂವಾಮೃತಪೋ ಯಥಾ ॥೪೨॥

ಈ ಗ್ರಾಮದಲ್ಲಿರುವ ಬಾವಿಗಳು, ಪೂರ್ವದಲ್ಲಿ ಜನಸಮೂಹದಿಂದ ಬಹು ಚಾಪಲ್ಯಮಾಡುತ್ತಿದ್ದುವುಗಳಾದರೂ, ಈಗ ಒಂದು ಸೊಳ್ಳೆ ಬರುವಿಕೆಯ ಶಂಕೆಯೂ ಇಲ್ಲದುವುಗಳಾಗಿ, ಸಮಾಧಿನಿಷ್ಠರಂತೆ ನಿಶ್ಚಲಗಳಾಗಿ ಆನಂದಸ್ಪಂದರಹಿತಗಳಾಗಿರುವುವು ॥೩೭॥

ಈಗ ನಮ್ಮ ತಾಯಿ ತಂದೆಗಳಿಂದಲಂಕೃತವಾಗಿರುವ ಅಂತರಿಕ್ಷವು, ಕಿನ್ನರ ಗಂಧರ್ವ ವಿದ್ಯಾಧರ ದೇವಾಂಗನೆ—ಇವರುಗಳ ಗಾನಧ್ವನಿಯುಕ್ತವಾಗಿರುವುದು; ನಿಶ್ಚಯವು ॥೩೮॥

ಅದುಕಾರಣ, ಎಲೌ ದೇವಿಯಿರಾ! ಈಗ ನಿಮ್ಮಗಳಿಂದ ನಮಗೆ ದುಃಖನಾಶವು ಮಾಡಲ್ಪಡಬೇಕು. ಮಹಾತ್ಮರ ದರ್ಶನವೆಂಬುದು ಎಂದಿಗೂ ನಿಷ್ಫಲವಾಗಲಾರದಲ್ಲವೆ! ॥೩೯॥

ಈರೀತಿಯಾಗಿ ಹೇಳಿದ ಆ ಮಗನನ್ನು, ಆ ಲೀಲೆಯು, ಕಮಲಲತೆಯು—ನಮ್ರವಾದ ಬುಡದ ಗಡ್ಡೆಯನ್ನು—ಚಿಗುರಿನಿಂದ ಬೊಗ್ಗಿ ಮುಟ್ಟುವಂತೆ, ತನ್ನ ಕೈಯಿಂದ ಅವನ ತಲೆಯಲ್ಲಿ ಸ್ಪರ್ಶಮಾಡಿದಳು ॥೪೦॥

ವರ್ಷಾಕಾಲಿಕವಾದ ಮೇಘದ ಸಂಪರ್ಕದಿಂದ ಪರ್ವತವು ಗ್ರೀಷ್ಮಕಾಲಿಕತಾಪವನ್ನು ಬಿಡುವಂತೆ, ಆ ಲೀಲಾಹಸ್ತಸ್ಪರ್ಶದಿಂದ ಆ ಜ್ಯೇಷ್ಠಶರ್ಮನು ದುಃಖದೌರ್ಭಾಗ್ಯಸಂಕಟಗಳನ್ನು ಬಿಟ್ಟುಬಿಟ್ಟನು ॥೪೧॥

ಬಳಿಕ, ಆ ಮನೆಯಲ್ಲಿದ್ದವರೆಲ್ಲರೂ, ಆ ದೇವಿಯರ ದರ್ಶನದಿಂದ-ಅಮೃತಪಾನಮಾಡಿದವರಂತೆ ಹರ್ಷಸಂಪದ್ಯುಕ್ತರಾಗಿಯೂ ದುಃಖಮುಕ್ತರಾಗಿಯೂ ಆದರು ॥೪೨॥

ಶ್ರೀರಾಮಉವಾಚ.

ತಯಾಸ್ಯ ಲೀಲಯಾ ಮಾತ್ರಾ ಪುತ್ರಸ್ಯ ಜ್ಯೇಷ್ಠಶರ್ಮಣಃ ।
ಕಸ್ಮಾನ್ನ ದರ್ಶನಂ ದತ್ತಂ ಮೋಹಂ ತಾವನ್ನಿರಾಕುರು ॥೪೩॥

ಶ್ರೀವಸಿಷ್ಠಉವಾಚ.

ಬುದ್ಧಃ ಪೃಥ್ವ್ಯಾದಿಬೋಧೇನ ಯೇನ ಪೃಥ್ವ್ಯಾದಿಸಞ್ಜ್ಞಕಃ ।
ತಸ್ಯ ಪಿಣ್ಡಾತ್ಮತಾಂ ಧತ್ತೇ ವ್ಯೋಮೈವಾನ್ಯಸ್ಯ ಕೇವಲಮ್ ॥೪೪॥
ಅಸದೇವಾಜ್ಞ ಸದಿವ ಭಾತಿ ಪೃಥ್ವ್ಯಾದಿ ವೇದನಾತ್ ।
ಯಥಾ ಬಾಲಸ್ಯ ವೇತಾಳೋ ನಾಭಾತಿ ತದವೇದನಾತ್ ॥೪೫॥
ಯಥಾ ಪೃಥ್ವ್ಯಾದಿನಾ ಭಾತಂ ಅಪೃಥ್ವ್ಯಾದಿ ಭವೇತ್ ಕ್ಷಣಾತ್ ।
ಸ್ವಪ್ನೇ ಸ್ವಪ್ನಪರಿಜ್ಞಾನಾತ್ ತಥಾ ಜಾಗ್ರತ್ಯಪಿ ಸ್ಫುಟಮ್ ॥೪೬॥
ಪೃಥ್ವ್ಯಾದಿ ಖತಯಾ ಬುದ್ಧಂ ಖಮಿತ್ಯೇವಾನುಭೂಯತೇ ।
ತಥಾ ಹಿ ಕ್ಷುಬ್ಧಧಾತೂನಾಂ ಕುಡ್ಯೇಷು ಖಇವೋದ್ಯಮಃ ॥೪೭॥

ಹೀಗೆ ವಸಿಷ್ಠರು ಹೇಳುತಿರಲು, ಶ್ರೀ ರಾಮನು ಒಂದುವಿಧವಾಗಿ ಆಶಂಕೆಮಾಡುತ ಪ್ರಶ್ನೆಮಾಡುವನು:—

ಗುರುವರ್ಯರೇ! ತಾವು ಪೂರ್ವದಲ್ಲಿ ಅಪ್ಪಣೆಕೊಟ್ಟಂತೆ ಸತ್ಯಕಾಮಳಾಗಿ ಸತ್ಯಸಂಕಲ್ಪಳಾಗಿರುವ ತಾಯಿಯಾದ ಲೀಲೆಯು, ತನ್ನ ಮಗನಾದ ಜ್ಯೇಷ್ಠಶರ್ಮನಿಗೆ ತನ್ನ ಶರೀರದಿಂದಲೇ ಏತಕ್ಕೆ ದರ್ಶನ ಕೊಡಲಿಲ್ಲ? ಈವಿಷಯದಲ್ಲಿ ನನಗುಂಟಾಗಿರುವ ಅಜ್ಞಾನವನ್ನು ನಿವೃತ್ತಿಗೊಳಿಸುವವರಾಗಬೇಕು ॥೪೩॥

ಶ್ರೀವಸಿಷ್ಠರು ಉತ್ತರಹೇಳುವರು:—

ಅಯ್ಯಾ! ರಾಮ! ಈ ಪೃಥಿವ್ಯಾದಿ ಸಮೂಹವನ್ನು ಯಾವನು ಪೃಥಿವ್ಯಾದಿಗಳೆಂಬ ಭಾವನೆಯಿಂದ ತಿಳಿಯುವನೋ, ಅವನಿಗೇ ಅದು ಆರೀತಿಯಾದ ಶರೀರವುಳ್ಳದಾಗುವುದು; ಆ ಭಾವನೆಯಿಲ್ಲದವನಿಗಾದರೋ—ಅದು ಕೇವಲವಾದ ಆಕಾಶವೇ!॥೪೪॥

ವತ್ಸ! ಈ ಪೃಥಿವ್ಯಾದಿಗಳೊಂದೂ ಸುತರಾಂ ಇಲ್ಲದುದಾದರೂ, ಇದೆಯೆಂಬ ಭಾವನೆಯುಂಟಾಗುವುದರಿಂದ ಇರುವಂತೆ ಕಾಣುವುದು; ಆ ಭಾವನೆಯಿಲ್ಲದಿದ್ದರೆ—ಹಾಗೆ ಕಾಣಿಸುವುದೇ ಇಲ್ಲ. ಇದಕ್ಕೊಂದು ಉದಾಹರಣೆಯನ್ನು ಕೇಳು. ಬಾಲಕನು ಬೇತಾಳವಿದೆಯೆಂದು ತಿಳಿದುಕೊಂಡಾಗ, ಅದು ಕಾಣಿಸುವುದು; ತಂದೆ ಮೊದಲಾದವರ ಉಪದೇಶದಿಂದ ಅದಿಲ್ಲವೆಂದು ತಿಳಿದುಕೊಂಡುಬಿಟ್ಟಮೇಲೆ, ಅದೂ ಹೋಗಿಬಿಡುವುದು ॥೪೫॥

ಮತ್ತು, ಸ್ವಪ್ನದಲ್ಲಿ ಪೃಥಿವಿ ಮುಂತಾದ ರೂಪದಿಂದ ಕಾಣಿಸಿಕೊಂಡ ಪದಾರ್ಥವು, ಸ್ವಪ್ನವೆಂದು ತಿಳಿದಮೇಲೆ, ಕ್ಷಣದೊಳಗಾಗಿ ಹೇಗೆ ಪೃಥ್ವ್ಯಾದಿಗಳಲ್ಲದೆ ಹೋಗುವುದೋ, ಜಾಗ್ರದವಸ್ಥೆಯಲ್ಲಿಯೂ ಹಾಗೆಯೇ ಸ್ಪಷ್ಟವಾಗುವುದು ॥೪೬॥

ಹಾಗೆಯೇ ಪೃಥಿವ್ಯಾದಿಗಳೂ ಆಕಾಶವೆಂದು ತಿಳಿಯಲ್ಪಟ್ಟರೆ, ಆಕಾಶವೆಂದೇ ಅನುಭವವುಂಟಾಗುವುದು. ಅದು ಹೇಗೆಂದರೆ;—ಪಿತ್ತಮುಂತಾದ ಧಾತುಗಳು ವಿಕಾರಹೊಂದಿರತಕ್ಕವರಿಗೆ, ಗೋಡೆಯಲ್ಲಿ ಆಕಾಶಜ್ಞಾನವುಂಟಾಗಿ ಅದರಂತೆಯೇ ಸಂಚಾರಪ್ರಭೃತಿಕಾರ್ಯೋದ್ಯಮವೂ ಉಂಟಾಗುವುದಲ್ಲವೆ! ॥೪೭॥

ಸ್ವಪ್ನೇ ನಗರಮುರ್ವೀ ವಾ ಶೂನ್ಯಂ ಖಾತಂ ಚ ಬುಧ್ಯತೇ ।
ಸ್ವಪ್ನಾಙ್ಗನಾ ಚ ಕುರುತೇ ಶೂನ್ಯಾಪ್ಯರ್ಥಕ್ರಿಯಾಂ ನೃಣಾಮ್ ॥೪೮॥

ಖಂ ಪೃಥ್ವ್ಯಾದಿತಯಾ ಬುದ್ಧಂ ಪೃಥ್ವ್ಯಾದಿ ಭವತಿ ಕ್ಷಣಾತ್ ।
ಮೂರ್ಛಾಯಾಂ ಪರಲೋಕೋಽಪಿ ಪ್ರತ್ಯಕ್ಷಮನುಭೂಯತೇ ॥೪೯॥

ಬಾಲೋ ವ್ಯೋಮ್ನ್ಯೇವ ವೇತಾಳಂ ಮ್ರಿಯಮಾಣೋಽಮ್ಬರೇ ವನಮ್ ।
ಕೇಶೋಣ್ಡ್ರಕಂ ಖಮನ್ಯಸ್ತು ಖಮನ್ಯೋ ವೇತ್ತಿ ಮೌಕ್ತಿಕಮ್ ॥೫೦॥

ತ್ರಸ್ತಕ್ಷೀಬಾರ್ಧನಿದ್ರಾಶ್ಚ ನೌಯಾನಾಶ್ಚ ಸದೈವ ಖೇ ।
ವೇತಾಳವನವೃಕ್ಷಾದಿ ಪಶ್ಯನ್ತ್ಯನುಭವನ್ತಿ ಚ ॥೫೧॥

ಯಥಾಭಾವಿತಮೇತೇಷಾಂ ಪದಾರ್ಥಾನಾಮತೋ ವಪುಃ ।
ಅಭ್ಯಾಸಜನಿತಂ ಭಾತಿ ನಾಸ್ತ್ಯೇಕಂ ಪರಮಾರ್ಥತಃ ॥೫೨॥

ಲೀಲಯಾ ತು ಯಥಾವಸ್ತು ಬುದ್ಧಾ ಪೃಥ್ವ್ಯಾದಿನಾಸ್ತಿತಾ ।
ಆಕಾಶಮೇವ ಸಂವಿತ್ತ್ಯಾ ಭಾತಿ ಭ್ರಾನ್ತಿತಯೋದಿತಮ್ ॥೫೩॥

ಸ್ವಪ್ನದಲ್ಲಿ, ಪಟ್ಟಣವು ಶೂನ್ಯವಾಗಿಯೂ ಭೂಮಿಯು ಹಳ್ಳವಾಗಿಯೂ ತಿಳಿಯಲ್ಪಡುವುವು. ಸ್ವಪ್ನದಲ್ಲಿ ಕಂಡ ಸ್ತ್ರೀಯು, ಸ್ವಭಾವತಃ ಶೂನ್ಯಳಾಗಿದ್ದರೂ, ಮನುಷ್ಯರಿಗೆ ಸತ್ಯಳಾದವಳಂತೆ ಫಲಜನಕವಾದ ಕ್ರಿಯೆಯನ್ನು ಮಾಡಿಬಿಡುವಳು ॥೪೮॥

ಆಕಾಶವು, ಪೃಥಿವ್ಯಾದಿರೂಪದಿಂದ ತಿಳಿಯಲ್ಪಟ್ಟರೆ, ಕ್ಷಣದೊಳಗಾಗಿ ಪೃಥಿವ್ಯಾದಿ ರೂಪವೇ ಆಗುವುದು. ಒಬ್ಬನು ಮೂರ್ಛೆಹೋಗಿದ್ದಾಗ ಪರಲೋಕವನ್ನೂ ಪ್ರತ್ಯಕ್ಷವಾಗಿ ಅನುಭವಿಸುವನಲ್ಲವೆ ! ॥೪೯॥

ಹಾಗೆಯೇ, ಬಾಲಕನು ಆಕಾಶವನ್ನೇ ಬೇತಾಳನನ್ನಾಗಿಯೂ, ಮುಮೂರ್ಷಾವಸ್ಥೆ ಹೊಂದಿರತಕ್ಕವನು ಆ ಅಂತರಿಕ್ಷವನ್ನೇ ವನವನ್ನಾಗಿಯೂ, ಮತ್ತೊಬ್ಬನು ಆ ಅಂತರಿಕ್ಷವನ್ನು ಕೂದುಲಿನ ಸುಳಿಯನ್ನಾಗಿಯೂ, ಬೇರೊಬ್ಬನು ಅದನ್ನೇ ಮುಕ್ತಾಫಲವನ್ನಾಗಿಯೂ ತಿಳಿಯುವರು ॥೫೦॥

ಮತ್ತು ಹೆದರಿರತಕ್ಕವರೂ ಮದಿಸಿರತಕ್ಕವರೂ ಅರ್ಧನಿದ್ರೆಯುಳ್ಳವರೂ ಹಡಗಿನಲ್ಲಿ ಸಂಚರಿಸತಕ್ಕವರೂ ಕೂಡ, ಆಕಾಶದಲ್ಲಿ ವೇತಾಳ ವನ ವೃಕ್ಷ ಇತ್ಯಾದಿಗಳನ್ನು ನೋಡುವರು; ಆರೀತಿಯಾಗಿ ಅನುಭವವನ್ನೂ ಮಾಡುವರು ॥೫೧॥

ಆದುಕಾರಣ, ಇವರುಗಳಿಗೆ ಈ ಪದಾರ್ಥಗಳ ಆಕಾರವು, ಅವರವರ ಭಾವನಾನುಗುಣವಾಗಿ ಅಭ್ಯಾಸಜನ್ಯವಾಗಿ ಭಾಸಿಸುವುದಲ್ಲದೆ, ಪರಮಾರ್ಥವಾಗಿ ಇವುಗಳ ರೂಪವು ನಿಯತವಲ್ಲ ॥೫೨॥

ಲೀಲೆಯಿಂದಲಾದರೋ, ಆಗ ಯಥಾಸ್ಥಿತವಾಗಿ ಪೃಥವ್ಯಾದಿಗಳನಾಸ್ತಿತ್ವವು(ಅಭಾವ) ತಿಳಿಯಲ್ಪಟ್ಟಿತು. ಆದುಕಾರಣ, ಆಕಾಶವೇ ಮಿಥ್ಯಾಪ್ರಪಂಚರೂಪವಾಗಿ ಉದಯಿಸುತ್ತಿರುವುದೆಂಬುದಾಗಿ ಜ್ಞಾನದಿಂದ ಗೊತ್ತಾಗುವುದು ॥೫೩॥

ಬ್ರಹ್ಮಾತ್ಮೈಕಚಿದಾಭಾಸಮಾತ್ರಬೋಧವತೋ ಮುನೇಃ |
ಪುತ್ರಮಿತ್ರಕಳತ್ರಾಣಿ ಕಥಂ ಕಾಸಿ ಕದಾ ಕುತಃ ||೫೪||
ದೃಶ್ಯಮಾದಾವನುತ್ಪನ್ನಂ ಯಚ್ಚ ಭಾತ್ಯಜಮೇವ ತತ್ |
ಸಮ್ಯಕ್ ಜ್ಞಾನವತಾಮೇವಂ ರಾಗದ್ವೇಷದೃಶೌ ಕುತಃ ||೫೫||
ಹಸ್ತಃ ಶಿರಸಿ ಯದ್ದತ್ತೋ ಲೀಲಯಾ ಜ್ಯೇಷ್ಠಶರ್ಮಣಃ |
ತತ್ಪ್ರಭಾವಸ್ಥಿತಾರಬ್ಧಸದ್ಬೋಧಾಯಾಶ್ಚಿತೇಃ ಫಲಮ್ ||೫೬||

ಬೋಧೋ ಹಿ ಚೇತತಿ ಯಥೈವ ತಥಾಶು ಭಾತಿ
ಸೂಕ್ಷ್ಮಸ್ತು ಖಾದಪಿ ತಥಾತಿತರಾಂ ವಿಶುದ್ಧಃ |
ಸರ್ವತ್ರ ರಾಘವ ಸಪಿವ ಪದಾರ್ಥಜಾಲಂ
ಸ್ವಪ್ನೇಷು ಕಲ್ಪಿತಪುರೇಷ್ವನುಭೂತಮೇತತ್ ||೫೭||

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಸಿದ್ಧದರ್ಶನಹೇತು
ಕಥನಂ ನಾಮ ಷಡ್ವಿಂಶಃ ಸರ್ಗಃ.

ಕೇವಲ ಪರಬ್ರಹ್ಮರೂಪವಾದ ಜ್ಞಾನಾಕಾಶಮಾತ್ರವನ್ನೇ ತಿಳಿಯುತ್ತಿರುವ ಮನನಶೀಲನಿಗೆ, ಪುತ್ರ ಮಿತ್ರ ಕಳತ್ರ ಇತ್ಯಾದಿಗಳು ಹೇಗೆ ಬಂದಾವು ? ಅವು ಯಾವುವು ? ಯಾವಾಗ ಬಂದಾವು ? ಯಾವ ನಿಮಿತ್ತದಿಂದ ಬಂದಾವು ? ||೫೪||

ಈ ದೃಶ್ಯವು ಮೊದಲು ಹುಟ್ಟಿರಲಿಲ್ಲ. ನಮಗೆ ಯಾವುದು ಗೋಚರವಾಗುವುದೋ, ಅದು ಜನ್ಮರಹಿತವಾದುದೇಯೆ,—ಎಂದು ಈ ರೀತಿಯಾದ ಉತ್ತಮಜ್ಞಾನವುಳ್ಳವರಿಗೆ, ರಾಗದ್ವೇಷಜ್ಞಾನಗಳೆಲ್ಲಿರುವುವು ? ||೫೫||

ಆದರೆ, ಲೀಲೆಯು ಜ್ಯೇಷ್ಠಶರ್ಮನ ತಲೆಯಮೇಲೆ ಕೈಯಿಟ್ಟದು ಪುತ್ರಪ್ರೀತಿಯಿಂದಲೆಂದು ಯೋಚಿಸಬಾರದು. ಅವಳು ಅವನ ತಲೆಯಮೇಲೆ ಕೈಯಿಟ್ಟುದು ಯಾವುದುಂಟೋ, ಅದು—ಆ ಜ್ಯೇಷ್ಠಶರ್ಮನಿಗೆ ಮುಂದೆ ಉಂಟಾಗುವ ಶುಭಸಂಪತ್ತಿಗೋಸ್ಕರ ನೆಲೆಸಿರುವ ಪ್ರಾಕ್ತನ ಕರ್ಮಜ್ಞಾನಗಳಿಂದ ಯುಕ್ತವಾದ ಆ ಚಿತ್ತಿನ ಫಲವೇ. (ಚಿತ್ತೇ ಈರೀತಿಯಾಗಿಯೂ ಕಾಣಿಸಿತೆಂದು ಭಾವವು) ||೫೬||

ಅಯ್ಯಾ ! ರಾಘವ! ಸಾರಾಂಶವನ್ನು ಹೇಳುವೆನು. ಜ್ಞಾನವು ಯಾವರೀತಿಯಾಗಿ ಪ್ರಸರಿಸುವುದೋ, ಆರೀತಿಯಾಗಿ ಆಕ್ಷಣವೇ ಭಾಸಿಸುವುದು. ಈ ಜ್ಞಾನವಾದರೋ, ಆಕಾಶಕ್ಕಿಂತ ಸೂಕ್ಷ್ಮವಾಗಿಯೂ ಅತಿನಿರ್ಮಲವಾಗಿಯೂ ಇರುವುದು. ಸ್ವಪ್ನಗಳಲ್ಲಿಯೂ ಸಂಕಲ್ಪನಗರಗಳಲ್ಲಿಯೂ ಈ ವಿಷಯವು ಚೆನ್ನಾಗಿ ಅನುಭವಗೋಚರವಾಗಿರುವುದು||೫೭||

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಸಿದ್ಧದರ್ಶನ
ಹೇತುಕಥನವೆಂಬ ಇಪ್ಪತ್ತಾರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಸಪ್ತವಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ತಸ್ಮಿನ್ ಗಿರಿತಟೇ ಗ್ರಾಮೇ ತಸ್ಯ ಮಣ್ಡಪಕೋಟರೇ ।
ಅನ್ತರ್ಧಿಮಾಶ್ವಾಯಯತುಃ ತತ್ರಸ್ಥೇ ಏವ ತೇ ಸ್ತ್ರಿಯೌ ॥೧॥
ಅಸ್ಮಾಕಂ ವನದೇವೀಭ್ಯಾಂ ಪ್ರಸಾದಃ ಕೃತಇತ್ಯಥ ।
ಶಾನ್ತದುಃಖೇ ಗೃಹಜನೇ ಸ್ವವ್ಯಾಪಾರಪರೇ ಸ್ಥಿತೇ ॥೨॥
ಮಣ್ಡಪಾಕಾಶಸಂಲೀನಾಂ ಲೀಲಾಮಾಹ ಸರಸ್ವತೀ ।
ವ್ಯೋಮರೂಪಾ ವ್ಯೋಮರೂಪಾಂ ಸ್ಮಯಾತ್ ತೂಷ್ಣೀಮಿವ ಸ್ಥಿತಾಮ್॥
ಸಙ್ಕಲ್ಪಸ್ವಪ್ನಯೋರ್ಯೇಷಾಂ ಯತ್ರ ಸಙ್ಕಥನಂ ಮಿಥಃ ।
ಯಥೇಹಾರ್ಥಕ್ರಿಯಾಂ ಧತ್ತೇ ತಯೋಃ ಸಾ ಸಙ್ಕಥಾ ತಥಾ ॥೪॥
ಪೃಥ್ವ್ಯಾದಿ ನಾಡೀಪ್ರಾಣಾದಿ ಖುತೇಪ್ಯಭ್ಯುದಿತಾ ತಯೋಃ ।
ಸಾ ಸಙ್ಕಥನಸಂವಿತ್ತಿಃ ಸ್ವಪ್ನಸಙ್ಕಲ್ಪಯೋರಿವ ॥೫॥

ಉತ್ಪತ್ತಿಪ್ರಕರಣದಲ್ಲಿ ಇಪ್ಪತ್ತೇಳನೆಯ ಸರ್ಗವು.

ಲೀಲಾತ್ರ ವಿಸ್ಮಿತಾ ಭೂಯೋ ಭರ್ತೃದರ್ಶನಲಾಲಸಾ ।
ಜ್ಞಪ್ತ್ಯಾ ಪ್ರಬೋಧಿತಾ ಸ್ಮೃತ್ವಾ ಸ್ವಜನ್ಮಾನ್ಯಾಹ ಭೂರಿಶಃ ॥

ಲೀಲೆಯು ಆಶ್ಚರ್ಯಯುಕ್ತಳಾಗಿ, ಮತ್ತೆ ತನ್ನ ಪತಿಯನ್ನು ನೋಡಬೇಕೆಂದು ಆಶೆಪಟ್ಟು, ಸರಸ್ವತಿಯಿಂದ ಬೋಧಿತಳಾಗಿ, ಪೂರ್ವಸ್ಮೃತಿಯುಂಟಾದ ಬಳಿಕ, ಅನೇಕವಾಗಿ ತನ್ನ ಪೂರ್ವಜನ್ಮಗಳನ್ನು ಈ ಸರ್ಗದಲ್ಲಿ ಹೇಳುವಳು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು :—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ, ಆ ಲೀಲಾಸರಸ್ವತಿಯರಿಬ್ಬರೂ—ಆ ಗಿರಿತಟದಲ್ಲಿರುವ ಗ್ರಾಮದಲ್ಲಿ, ಆ ಮಂಟಪದ ಒಳಭಾಗದಲ್ಲಿಯೇ, ಅಲ್ಲಿಯೇ ಇದ್ದುಗೊಂಡು, ಶೀಘ್ರವಾಗಿ ಅಂತರ್ಧಾನಹೊಂದಿದರು ॥೧॥

ಆ ಬಳಿಕ, ಆ ಗೃಹಜನರೆಲ್ಲರೂ—ನಮಗೆ ವನದೇವತೆಯರು ಅನುಗ್ರಹಮಾಡಿದರು—ಎಂದು ದುಃಖಶಾಂತಿಪಡೆದವರಾಗಿ ತಮ್ಮತಮ್ಮ ಕೆಲಸದಲ್ಲಿ ಆಸಕ್ತರಾಗಿರಲು, ಆ ಮಂಟಪದ ಆಕಾಶದಲ್ಲಿ ಆಕಾಶರೂಪಳಾಗಿ ಅಡಗಿಕೊಂಡು ಆಶ್ಚರ್ಯದಿಂದ ಸುಮ್ಮನಾದಂತಿರುವ ಲೀಲೆಯನ್ನು ಕುರಿತು, ಆಕಾಶರೂಪಳಾಗಿರುವ ಆ ಸರಸ್ವತೀದೇವಿಯು ಹೇಳಿದಳು ॥೨-೩॥

ಅವರಿಬ್ಬರೂ ಆಕಾಶರೂಪರೆಂದಮೇಲೆ—ಅವರು ಮಾತಾಡುವುದು ಹೇಗೆಂದರೆ:—ಸಂಕಲ್ಪದಲ್ಲಿಯೂ ಸ್ವಪ್ನದಲ್ಲಿಯೂ ಯಾರು ಯಾರೊಡನೆ ಮಾತಾಡಿದರೂ ಅದು ಆಗ ಹೇಗೆ ಫಲಿಸುತ್ತದೆಯೋ, ಅವರಿಬ್ಬರ ಪರಸ್ಪರ ಸಂಭಾಷಣೆಯೂ ಆರೀತಿಯಾದುದು ॥೪॥

ಮತ್ತು ಸ್ವಪ್ನದಲ್ಲಿಯೂ ಸಂಕಲ್ಪದಲ್ಲಿಯೂ ಪೃಥಿವ್ಯಾದಿಗಳೂ ನಾಡೀಪ್ರಾಣಾದಿಗಳೂ ಇಲ್ಲದೆಯೇ ಒಬ್ಬರು ಹೇಳಿದುದನ್ನು ಮತ್ತೊಬ್ಬರು ತಿಳಿದುಕೊಳ್ಳುವ ಅನುಭವವುಂಟಾಗುವಂತೆ, ಅವರಿಗೂ ಆಗ ಪರಸ್ಪರ ವಚನಜ್ಞಾನವುಂಟಾಯಿತು ॥೫॥

ಶ್ರೀಸರಸ್ವತ್ಯುವಾಚ.

ಜ್ಞೇಯಂ ಜ್ಞಾತಮಶೇಷೇಣ ದೃಷ್ಟಾದೃಶ್ಯಾರ್ಥಸಂವಿದಃ ।
ಈದೃಶೀಯಂ ಬ್ರಹ್ಮಸತ್ತಾ ಕಿಮನ್ಯದ್ವದ ಪೃಚ್ಛಸಿ ॥೬॥

ಲೀಲೋವಾಚ.

ಮೃತಸ್ಯ ಭರ್ತುರ್ಜೀವೋಽಸೌ ಯತ್ರ ರಾಜ್ಯಂ ಕರೋತಿ ಮೇ ।
ತತ್ರಾಹಂ ಕಿಂ ನ ತೈರ್ದೃಷ್ಟಾ ದೃಷ್ಟಾಸ್ಮೀಹ ಸುತೇನ ಕಿಮ್ ॥೭॥

ಶ್ರೀ ಸರಸ್ವತ್ಯುವಾಚ.

ಅಭ್ಯಾಸೇನ ವಿನಾ ವತ್ಸೇ ತದಾ ತೇ ದ್ವೈತನಿಶ್ಚಯಃ ।
ನೂನಮಸ್ತಂಗತೋ ನಾಭೂತ್ ನಿಶ್ಶೇಷಂ ವರವರ್ಣಿನಿ ॥೮॥
ಅದ್ವೈತಂ ಯೋ ನ ಯಾತೋಽಸೌ ಕಥಮದ್ವೈತಕರ್ಮಭಿಃ ।
ಯುಜ್ಯತೇ ತಾಪಸಂಸ್ಥಸ್ಯ ಛಾಯಾಬ್ದಾನುಭವಃ ಕುತಃ ॥೯॥
ಲೀಲಾಸ್ಮೀತಿ ವಿನಾಭ್ಯಾಸಂ ತವ ನಾಸ್ತಂಗತೋಽಭವತ್ ।
ಯದಾ ಭಾವಸ್ತದಾ ಸತ್ಯಸಙ್ಕಲ್ಪತ್ವಮಭೂನ್ನ ತೇ ॥೧೦॥
ಅದ್ಯಾಪಿ ಸತ್ಯಸಙ್ಕಲ್ಪಾ ಸಮ್ಪನ್ನಾ ತೇನ ಮಾಂ ಸುತಃ ।
ಸಮ್ಪಶ್ಯತ್ವಿತ್ಯಭಿಮತಂ ಫಲಿತಂ ತವ ಸುನ್ದರಿ ॥೧೧॥

ಆಗ ಶ್ರೀ ಸರಸ್ವತಿ ಹೇಳಿದುದೇನೆಂದರೆ:—

ಎಲೌ! ಲೀಲೆ! ನಿನಗೆ ತಿಳಿಯಬೇಕಾದುದೆಲ್ಲವೂ ಸಂಪೂರ್ಣವಾಗಿ ತಿಳಿಯಲ್ಪಟ್ಟಂತಾಯಿತು; ನೋಡಬೇಕಾದುದೆಲ್ಲವೂ ನೋಡಲ್ಪಟ್ಟಂತಾಯಿತು. ಈ ಬ್ರಹ್ಮಸ್ವರೂಪವೀರೀತಿಯಾಗಿರುವುದು. ಇನ್ನೇನನ್ನು ಕೇಳುವೆ? ಹೇಳು ॥೬॥

ಲೀಲೆಯು ಹೇಳಿದಳು:—

ಭಗವತಿ! ಮೃತನಾದ ನನ್ನ ಪತಿಯ ಆ ಜೀವವು ಎಲ್ಲಿ ದೊರೆತನ ಮಾಡುತ್ತಿರುವುದೋ, ಅಲ್ಲಿರುವ ಆ ಜನರಿಂದ ನಾನು ಏತಕ್ಕೆ ನೋಡಲ್ಪಡಲಿಲ್ಲ? ಇಲ್ಲಿ ಈ ಮಗನಿಂದ ಏನುಕಾರಣ ನೋಡಲ್ಪಟ್ಟೆನು? ॥೭॥

ಶ್ರೀ ಸರಸ್ವತಿಯು ಉತ್ತರ ಹೇಳಿದಳು:—

ಎಲೌ ಉತ್ತಮಸ್ತ್ರೀಯಾದ ಬಾಲಿಕೆ! ಆಗ ನಿನಗೆ ಇನ್ನೂ ದೃಢತರಾಭ್ಯಾಸವಿಲ್ಲದಿದ್ದ ಕಾರಣ, ದ್ವೈತನಿಶ್ಚಯಜ್ಞಾನವು ನಿಶ್ಶೇಷವಾಗಿ ಅಸ್ತಹೊಂದಿರಲಿಲ್ಲ. ಇದು ನಿಶ್ಚಯವು ॥೮॥

ಯಾವನು ಅದ್ವೈತ (ಅಭೇದಜ್ಞಾನ) ಜ್ಞಾನವನ್ನು ಹೊಂದಿರುವುದಿಲ್ಲವೋ, ಅವನು ಅದ್ವೈತಕರ್ಮಯುಕ್ತರಾದವರೊಡನೆ ಹೇಗೆ ಸೇರಿಕೊಂಡಾನು? ಬಿಸಿಲಿನಲ್ಲಿರತಕ್ಕವನಿಗೆ ನೆಳಲಲ್ಲಿರುವವನಿಗುಂಟಾಗುವ ಶೈತ್ಯಾನುಭವವೆಲ್ಲಿ ಬರುವುದು? ॥೯॥

ಯಾವಾಗ ನಿನಗೆ ಅಭ್ಯಾಸವಿಲ್ಲದುದರಿಂದ—ನಾನು ಲೀಲೆಯು—ಎಂಬ ಭಾವವು ಅಸ್ತಹೊಂದಿರಲಿಲ್ಲವೋ, ಆಗ ನಿನಗೆ ಸತ್ಯಸಂಕಲ್ಪತ್ವಸಿದ್ಧಿಯುಂಟಾಗಿರಲಿಲ್ಲ ॥೧೦॥

ಈಗ ನೀನು ಚಿರತರಾಭ್ಯಾಸಬಲದಿಂದ ಸತ್ಯಸಂಕಲ್ಪತ್ವಸಿದಿ ಯನು ಪಡೆದವಳಾಗಿ

ಇದಾನೀಂ ತಸ್ಯ ಭರ್ತುಸ್ತ್ವಂ ಸಮೀಪಂ ಯದಿ ಗಚ್ಛಸಿ ।
ತತ್ ತೇನ ವ್ಯವಹಾರಸ್ತೇ ಪೂರ್ವವತ್ ಸಮ್ಪ್ರವರ್ತತೇ ‖೧೨‖

ಲೀಲೋವಾಚ.

ಇಹೈವ ಮನ್ದಿರಾಕಾಶೇ ಪತಿರ್ವಿಪ್ರೋ ಮಮಾಭವತ್ ।
ಇಹೈವ ಸ ಮೃತೋ ಭೂತ್ವಾ ಸಮ್ಪನ್ನೋ ವಸುಧಾಧಿಪಃ ‖೧೩‖
ಇಹೈವ ತಸ್ಯ ಸಂಸಾರೇ ತಸ್ಮಿನ್ ಭೂಮಣ್ಡಲಾನ್ತರೇ ।
ರಾಜಧಾನೀಪುರೇ ತಸ್ಮಿನ್ ಪುರನ್ಧ್ರ್ಯಸ್ಮಿ ವ್ಯವಸ್ಥಿತಾ‖೧೪‖
ಇಹೈವಾನ್ತಃಪುರೇ ತಸ್ಮಿನ್ ಸ ಮೃತೋ ಮಮ ಭೂಪತಿಃ ।
ಇಹೈವಾನ್ತಃಪುರಾಕಾಶೇ ತಸ್ಮಿನ್ನೇವ ಪುರೇ ನೃಪಃ ‖೧೫‖
ಸಮ್ಪನ್ನೋ ವಸುಧಾಪೀಠೇ ನಾನಾಜನಪದೇಶ್ವರಃ ।
ಸರ್ವಾರ್ಜವಜವೀಭಾವಃ ಇಹೈವೈವಂ ವ್ಯವಸ್ಥಿತಃ ‖೧೬‖
ಅಸ್ಮಿನ್ನೇವ ಗೃಹಾಕಾಶೇ ಸರ್ವಾಬ್ರಹ್ಮಾಣ್ಡಭೂಮಯಃ ।
ಸ್ಥಿತಾಃ ಸಮುದ್ಗಕೇ ಮನ್ಯೇ ಯಥಾನ್ತಃ ಸರ್ಷಪೋತ್ಕರಾಃ ‖೧೭‖
ಸದಾಽದೂರಮಹಂ ಮನ್ಯೇ ತದ್ಭರ್ತುರ್ಮಮ ಮಣ್ಡಲಮ್ ।
ಕ್ವಚಿತ್ ಪಾರ್ಶ್ವೇ ಸ್ಥಿತಮಿಹ ಯಥಾ ಪಶ್ಯಾಮಿ ತತ್ ಕುರು‖೧೮‖

ರುವೆ. ಅದುಕಾರಣ, ಎಲೌ ಸುಂದರಿ! ನನ್ನ ಮಗನು ನನ್ನನ್ನು ನೋಡಲಿ—ಎಂಬ ನಿನ್ನ ಮನೋರಥವು ಈಗ ಫಲಿಸಿತು ॥೧೧॥

ಈಗ ನೀನು ಆ ನಿನ್ನ ಪತಿಯ ಸಮೀಪಕ್ಕೆ ಹೋಗುವೆಯಾದರೆ, ಆಗ ನಿನಗೆ ಅವನೊಡನೆ ಪೂರ್ವದಂತೆ ವ್ಯವಹಾರಪ್ರವೃತ್ತಿಯುಂಟಾಗುವುದು ॥೧೨॥

ಲೀಲೆಯು ಮತ್ತೆ ಹೇಳಿದಳು :—

ಅಂಬ! ಈಮನೆಯೊಳಭಾಗದಲ್ಲಿಯೇ, ನನ್ನ ಪತಿಯಾದ ಆ ಬ್ರಾಹ್ಮಣನು ಪೂರ್ವದಲ್ಲಿದ್ದನು; ಇಲ್ಲಿಯೇ ಅವನು ಮೃತನಾದವನಾಗಿ ರಾಜತ್ವವನ್ನು ಪಡೆದವನಾಗಿರುವನು॥

ನಾನೂ ಕೂಡ, ಈ ಸಂಸಾರದಲ್ಲಿಯೇ—ಅದೇ ಭೂಮಂಡಲದೊಳಗಡೆಯೇ—ರಾಜಧಾನಿಯಾದ ಅದೇ ಪಟ್ಟಣದಲ್ಲಿಯೇ—ಅವನಿಗೆ ಮಹಿಷಿಯಾಗಿದ್ದೆನು ॥೧೪॥

ಇಲ್ಲಿಯೇ, ಆ ಅಂತಃಪುರದಲ್ಲಿಯೇ—ಆ ಪಟ್ಟಣದಲ್ಲಿಯೇ—ಆ ಅಂತಃಪುರದೊಳಗಡೆಯೇ—ನನ್ನ ಪತಿಯಾದ ಆ ದೊರೆಯು ಮೃತನಾದನು ॥೧೫॥

ಅವನು, ಇಲ್ಲಿಯೇ—ಈರೀತಿಯಾಗಿ ಸರ್ವಪದಾರ್ಥಗಳ ವಿಷಯದಲ್ಲಿಯೂ ವಕ್ರಹೀನಸ್ವಭಾವನಾದ ಆ ಪರಮಾತ್ಮನಲ್ಲಿ ಮಾಯಾಜನ್ಯವಾದ ಚಲನಾದಿ ವಿಕಾರವುಳವನಾಗಿ, ಭೂತಳದಲ್ಲಿ ನಾನಾದೇಶಾಧಿಪತಿಯಾಗಿ ಏರ್ಪಟ್ಟಿದ್ದನು ॥೧೬॥

ಈ ಮನೆಯೊಳಗಡೆಯೇ, ಭರಣಿಯೊಳಗೆ ಸಾಸುವೆಹುಡಿಗಳು ತುಂಬಿರುವಂತೆ, ಸಮಸ್ತ ಬ್ರಹ್ಮಾಂಡ ಭೂಮಿಗಳೂ ತುಂಬಿರುವುವೆಂದು ನಾನು ತಿಳಿಯುವೆನು ॥೧೭॥

ಅದುಕಾರಣ, ಆ ನನ್ನ ಪತಿಯಿದ್ದ ಭೂಮಂಡಲವೂ ಸರ್ವದಾ ಇಲ್ಲಿಗೆ ಸಮೀಪಸ್ಥವೇ ಆಗಿರುವುದೆಂದು ನಾನು ತಿಳಿಯುವೆನು. ಈಗ ಅದು ನನ್ನ ಮಗ್ಗುಲಿನಲ್ಲಿ ಒಂದು ಕಡೆಯಿದಂತೆ ನಾನು ನೋಡುವಹಾಗೆ ಮಾಡುವವಳಾಗು ॥೧೮॥

ಶ್ರೀದೇವ್ಯುವಾಚ.

ಭೂತಲಾರುನ್ಧತಿ ಸುತೇ ಭರ್ತಾರಸ್ತವ ಸಮ್ಪ್ರತಿ ।
ತ್ರಯೋ ನಾಮಾಥವಾಭೂವರ್ ಬಹವಃ ಶತಸಮ್ಮಿತಾಃ ॥೧೯॥
ನೇದೀಯಸಾಂ ತ್ರಯಾಣಾಂ ತು ದ್ವಿಜಸ್ತೇ ಭಸ್ಮತಾಂ ಗತಃ ।
ರಾಜಾ ಮಾಲ್ಯಾನ್ತರಗತಃ ಸಂಸ್ಥಿತೋನ್ತಃಪುರೇ ಶವಃ ॥೨೦॥
ಸಂಸಾರಮಣ್ಡಲೇ ಹ್ಯಸ್ಮಿನ್ ತೃತೀಯೋ ವಸುಧಾಧಿಪಃ ।
ಮಹಾಸಂಸಾರಜಲಧಿಪತಿತೋ ಭ್ರಮಮಾಗತಃ ॥೨೧॥
ಭೋಗಕಲ್ಲೋಲಕಲನಾವಿಕಲೋ ಮಲಚೇತನಃ ।
ಜಾಡ್ಯಜರ್ಜರಚಿದ್ವೃತ್ತಿಃ ಸಂಸಾರಾಮ್ಭೋಧಿಕಚ್ಛಪಃ ॥೨೨॥
ಚಿತ್ರಾಣಿ ರಾಜಕಾರ್ಯಾಣಿ ಕುರ್ವನ್ನಪ್ಯಾಕುಲಾನ್ಯಪಿ ।
ಸುಪ್ತಃ ಸ್ಥಿತೋ ಜಡತಯಾ ನ ಜಾಗರ್ತಿ ಭವಭ್ರಮೇ ॥೨೩॥
ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ ।
ಇತ್ಯನರ್ಥಮಹಾರಜ್ಜ್ವಾ ವಲಿತೋಽವಶತಾಂ ಗತಃ ॥೨೪॥
ತತ್ ಕಸ್ಯ ವದ ಭರ್ತುಸ್ತ್ವಂ ಸಮೀಪಂ ವರವರ್ಣಿನಿ ।
ವಾತ್ಯಾ ವನಾನ್ತರಂ ಗನ್ಧಲೇಖಾಮಿವ ನಯಾಮ್ಯಹೋ ॥೨೫॥

ಶ್ರೀ ಸರಸ್ವತಿ ಹೇಳುವಳು:—

ಭೂಮಿಗೆ ಅರುಂಧತಿಯಾಗಿರುವ ಮಗಳೆ! ಈಗ ನಿನಗೆ ಮೂರುಮಂದಿ ಪತಿಗಳಿರುವರು; ಅಥವಾ ನೂರಾರುಮಂದಿಯಾಗಿ—ಅನೇಕರಾಗಿರುವರು ॥೧೯॥

ಅವರಲ್ಲಿ ಹತ್ತಿರವಾಗಿರುವವರು ಮೂರುಮಂದಿಗಳು. ಅವರೊಳಗೆ ನಿನ್ನ ಪತಿಯಾದ ಈ ಬ್ರಾಹ್ಮಣನು ಭಸ್ಮರೂಪನಾಗಿ ಬಿದ್ದಿರುವನು; ಪದ್ಮನೆಂಬ ದೊರೆಯು, ಅಂತಃಪುರದೊಳಗೆ ಪುಷ್ಪಮಾಲೆಗಳ ಮಧ್ಯದಲ್ಲಿ ಶವರೂಪನಾಗಿರುವನು ॥೨೦॥

ಈ ಸಂಸಾರಮಂಡಲದಲ್ಲಿ ಮೂರನೆಯವನಾದ ದೊರೆಯು, (ಪದ್ಮರಾಜಜೀವವು) ಮಹಾಸಂಸಾರವೆಂಬ ಸಮುದ್ರದಲ್ಲಿ ಬಿದ್ದವನಾಗಿ ಸುತ್ತುತಿರುವನು ॥೨೧॥

ಈಗ ಅವನು ಭೋಗರೂಪವಾದ ತರಂಗಗಳ ವಿಕ್ಷೇಪದಿಂದ ವಿಕಲಾಂಗನಾಗಿಯೂ, ಅತಏವ ಕಲುಷಚಿತ್ತನಾಗಿಯೂ, ಅಜ್ಞಾನದಿಂದ ಶಿಥಿಲವಾದ ಚಿದ್ವೃತ್ತಿಯುಳ್ಳವನಾಗಿಯೂ ಇರುತ, ಸಂಸಾರವೆಂಬ ಸಮುದ್ರದೊಳಗೆ ಆಮೆಯಾಗಿರುವನು ॥೨೨॥

ಅವನು ಈ ಸಂಸಾರಭ್ರಮದಲ್ಲಿ ವಿಚಿತ್ರವಾದ ಅನೇಕವಿಧ ರಾಜಕಾರ್ಯಗಳನ್ನು ಮಾಡುತಿರುವವನಾದರೂ, ಜಡಸ್ವಭಾವದಿಂದ ಮಲಗಿದವನಂತಿರುವನಲ್ಲದೆ, ಎಚ್ಚರವಾಗಿಲ್ಲ॥

ಅವನು ಈಗ—ನಾನು ಈಶ್ವರನು, ನಾನು ಭೋಗಿಯು, ನಾನು ಸಿದ್ಧನು, ನಾನು ಬಲಾಢ್ಯನು, ನಾನು ಸುಖಿಸುವೆನು,—ಇತ್ಯಾದಿರೂಪವಾಗಿ ಭಾವನೆಮಾಡುತ, ಈ ಅನರ್ಥವೆಂಬ ದೊಡ್ಡ ಹಗ್ಗದಿಂದ ಕಟ್ಟಲ್ಪಟ್ಟವನಾಗಿ, ಕೇವಲ ಪರಾಧೀನನಾಗಿರುವನು ॥೨೪॥

ಆದುಕಾರಣ, ಎಲೌ! ಉತ್ತಮಾಂಗನೆಯೆ! ಸುಂಟರಗಾಳಿಯು ಪರಿಮಳವನ್ನು ಒಂದು ವನದಿಂದ ಮತ್ತೊಂದು ವನಕ್ಕೆ ಕರೆದುಕೊಂಡು ಹೋಗುವಂತೆ, ನಾನು ಈಗ ನಿನ್ನನ್ನು ಯಾವ ಪತಿಯ ಸಮೀಪಕ್ಕೆ ಕರೆದುಕೊಂಡು ಹೋಗಲಿ?—ಹೇಳು ॥೨೫॥

ಅನ್ಯಏವ ಹಿ ಸಂಸಾರಃ ಸೋಽನ್ಯೋ ಬ್ರಹ್ಮಾಣ್ಡಮಣ್ಡಪಃ ।
ಅನ್ಯಾಏವ ತತಾವತ್ಸೇ ವ್ಯವಹಾರಪರಮ್ಪರಾಃ ॥೨೬॥
ಸಂಸಾರಮಣ್ಡಲಾನೀಹ ತಾನಿ ಪಾರ್ಶ್ವೇ ಸ್ಥಿತಾನ್ಯಪಿ ।
ದೂರಂ ಯೋಜನಕೋಟೀನಾಂ ಕೋಟಯಸ್ತೇಷ್ವಿಹಾನ್ತರಮ್ ॥೨೭॥
ಆಕಾಶಮಾತ್ರಮೇತೇಷಾಂ ಇದಂ ಪಶ್ಯ ವಪುಃ ಪುನಃ ।
ಮೇರುಮನ್ದರಕೋಟೀನಾಂ ಕೋಟಯಸ್ತೇಷ್ವವಸ್ಥಿತಾಃ ॥೨೮॥
ಪರಮಾಣೌಪರಮಾಣೌ ಸರ್ಗವರ್ಗಾನಿರರ್ಗಳಮ್ ।
ಮಹಾಚಿತೇಃ ಸ್ಫುರನ್ತ್ಯರ್ಕರುಚೀವ ತ್ರಸರೇಣವಃ ॥೨೯॥
ಮಹಾರಮ್ಭಗುರೂಣ್ಯೇವಂ ಅಪಿ ಬ್ರಹ್ಮಾಣ್ಡಕಾನಿ ಹಿ ।
ತುಲಯಾ ಧಾನಕಾಮಾತ್ರಂ ಅಪಿ ತಾನಿ ಭವನ್ತಿ ನೋ ॥೩೦॥
ನಾನಾರತ್ನಾಮಲೋದ್ದ್ಯೋತೋ ವನವದ್ಭಾತಿ ಖೇ ಯಥಾ ।
ಪೃಥ್ವ್ಯಾದಿಭೂತರಹಿತಾ ಜಗಚ್ಚಿದ್ಭಾತಿ ಚಿನ್ತಯಾ ॥೩೧॥
ಕಚತಿ ಜ್ಞಪ್ತಿರೇವೇದಂ ಜಗದಿತ್ಯಾದಿನಾತ್ಮನಿ ।
ನ ತು ಪೃಥ್ವ್ಯಾದಿ ಸಮ್ಪನ್ನಂ ಸರ್ಗಾದಾವೇವ ಕಿಂಚನ ॥೩೨॥

ವತ್ಸೆ! ಈ ಸಂಸಾರವೇ ಬೇರೆಯಾದುದು; ಆ ಬ್ರಹ್ಮಾಂಡಮಂಟಪವೇ ಬೇರೆಯಾದುದು; ಅಲ್ಲಿನ ವ್ಯವಹಾರಪರಂಪರೆಗಳೇ ಬೇರೆಯಾಗಿರುವುವು ॥೨೬॥

ಆ ಸಂಸಾರಮಂಡಲಗಳೂ ಇಲ್ಲಿಯೇ ಪಾರ್ಶ್ವದಲ್ಲಿರುವಂತೆ ಕಾಣುತಿದ್ದರೂ, ಇಲ್ಲಿ ಅವುಗಳಲ್ಲಿ ಅತಿದೂರವಾಗಿ ಕೋಟ್ಯಂತರ ಯೋಜನಗಳಷ್ಟು ಅವಕಾಶವಿರುವುದು ॥೨೭॥

ಅವುಗಳ ಶರೀರಗಳೂ ಕೇವಲಾಕಾಶಮಾತ್ರ ಮಯವಾಗಿರುವುವು; ಇದನ್ನು ನೀನು ನೋಡು. ಅವುಗಳಲ್ಲಿ ಮೇರುಮಂದರಪರ್ವತಗಳು ಕೋಟಿಸಂಖ್ಯಾಕವಾಗಿ ನೆಲೆಸಿರುವುವು॥

ಬಿಸಿಲುಕೋಲಿನ ಸೂರ್ಯಕಿರಣದಲ್ಲಿ ಸಣ್ಣಸಣ್ಣ ಅಣುಗಳು ಅಸಂಖ್ಯಾಕವಾಗಿ ಕಾಣುವಂತೆ, ಪ್ರತಿಯೊಂದು ಪರಮಾಣುವಿನಲ್ಲಿಯೂ ಆ ಮಹಾಚಿತ್ತಿನ ಸೃಷ್ಟಿಪರಂಪರೆಗಳು ತಡೆಯಿಲ್ಲದಂತೆ ಸ್ಫುರಣಹೊಂದುವುವು ॥೨೯॥

ಹೀಗೆಯೇ ಆ ಬ್ರಹ್ಮಾಂಡಗಳು, ದೊಡ್ಡದಾದ ದ್ವೀಪ ಸಮುದ್ರ ಮೊದಲಾದ ಕಾರ್ಯರೂಪದಿಂದ ಗುರುತರಗಳಾಗಿ ಕಂಡರೂ, ಪರಮಾತ್ಮದೃಷ್ಟ್ಯಾ ತೂಗಿನೋಡಿದರೆ ಒಂದು ಆಲದಬೀಜದಷ್ಟೂ ಆಗುವುದಿಲ್ಲ ॥೩೦॥

ಅನೇಕವಿಧವಾದ ರತ್ನಗಳ ನಿರ್ಮಲವಾದ ಪ್ರಕಾಶವು–ಅಂತರಿಕ್ಷದಲ್ಲಿ ಒಂದು ತೋಟದಂತೆ ಹೇಗೆ ಪ್ರಕಾಶಿಸುವುದೋ, ಪೃಥಿವ್ಯಾದಿಭೂತರಹಿತವಾಗಿರುವ ಚಿತ್ತೂ–ಹಾಗೆಯೇ ವಾಸನಾವಶದಿಂದ–ಜಗತ್ತಾಗಿ ಭಾಸಹೊಂದುವುದು ॥೩೧॥

ಚಿತ್ತೇ, ಈ ಜಗತ್ತು ಮುಂತಾದ ನಾಮಗಳಿಂದ ತನ್ನಲ್ಲಿ ವಿಕಾಸಹೊಂದುವುದು; ಅಷ್ಟೇ ಹೊರತು, ಪೃಥಿವ್ಯಾದಿಗಳೊಂದೂ ಸೃಷ್ಟ್ಯಾದಿಯಲ್ಲಿಯೇ ಉತ್ಪತ್ತಿಹೊಂದಿಲ್ಲ॥೩೨॥

ಯಥಾ ತರಙ್ಗಾಃ ಸರಸಿ ಭೂತ್ವಾಭೂತ್ವಾ ಪುನರ್ಭವೇತ್ ।
ವಿಚಿತ್ರಾಕಾರಕಾಲಾಙ್ಗದೇಶಾಙ್ಗಪ್ರಾಪ್ತವಲಂ ತಥಾ ॥೨೩॥

ಲೀಲೋವಾಚ.

ಏವಮೇತಜ್ಜಗನ್ಮಾತಃ ಮಯಾ ಸ್ಮೃತಮಿಹಾಧುನಾ ।
ಮಮೇದಂ ರಾಜಸಂ ಜನ್ಮ ನ ತಮೋ ನ ಚ ಸಾತ್ವಿಕಮ್ ॥೨೪॥
ಬ್ರಹ್ಮಣಸ್ತ್ವತೀರ್ಣಾಯಾಃ ಅಷ್ಟೌ ಜನ್ಮಶತಾನಿ ಮೇ ।
ನಾನಾಯೋನೀನ್ಯತೀತಾನಿ ಪಶ್ಯಾಮೀವಾಧುನಾ ಪುನಃ ॥೨೫॥
ಸಂಸಾರಮಣ್ಡಲೇ ದೇವಿ ಕಸ್ಮಿಂಶ್ಚಿದಭವಂ ಪುರಾ ।
ಲೋಕಾನ್ತರಾಬ್ಜಭ್ರಮರೀ ವಿದ್ಯಾಧರವರಾಙ್ಗನಾ ॥೨೬॥
ದುರ್ವಾಸನಾಕಲುಷಿತಾ ತತೋಽಹಂ ಮಾನುಷೀ ಸ್ಥಿತಾ ।
ಸಂಸಾರಮಣ್ಡಲೇನ್ಯಸ್ಮಿನ್ ಪನ್ನಗೇಶ್ವರಕಾಮಿನೀ ॥೨೭॥
ಕದಮ್ಬಕುನ್ದಜಮ್ಬೀರಕರಞ್ಜವನವಾಸಿನೀ ।
ಪತ್ರಾಮ್ಬರಧರಾ ಶ್ಯಾಮಾ ಶಬರ್ಯಹಮಥಾಭವಮ್ ॥೨೮॥
ವನವಾಸನಯಾ ಮುಗ್ಧಾ ಸಮ್ಪನ್ನಾಹಮಥೋದ್ಧತಾ ।
ಗುಳುಚ್ಛನಯನಾ ಪತ್ರಹಸ್ತಾ ವನವಿಲಾಸಿನೀ ॥೨೯॥

ಒಂದು ಕೊಳದಲ್ಲಿ ಅಲೆಯು ಹೇಗೆ ಹುಟ್ಟಿಹುಟ್ಟಿ ಮತ್ತೆ ಹುಟ್ಟುತಲೇ ಇರುವುದೋ, ಹಾಗೆಯೇ ವಿಚಿತ್ರಾಕಾರವಾದ ಕ್ಷಣನಿಮಿಷಾದಿಕಾಲಭೇದಗಳೂ ಭೂರಾದಿಲೋಕಗಳೂ ಆ ಚಿತ್ತಿನಲ್ಲಿ ಹುಟ್ಟಿಹುಟ್ಟಿ ಮತ್ತೆಯೂ ಹುಟ್ಟುತಲೇ ಇರುವಂತೆ ಕಾಣುವುವು ॥೨೩॥

ಇದನ್ನು ಕೇಳಿ ಲೀಲೆಯು ಹೇಳುವಳು :—

ಹೇ ಜಗನ್ಮಾತೆ! ನೀನು ಅಪ್ಪಣೆಕೊಟ್ಟುದು ಹಾಗೆಯೇ ಅಹುದು. ನಾನು ಈಗ ಸ್ಮರಿಸಿಕೊಂಡೆನು. ನನಗೆ ಇದು ರಜೋಗುಣಪ್ರಧಾನವಾದ ಜನ್ಮವು; ತಮಃಪ್ರಧಾನವೂ ಅಲ್ಲ; ಸತ್ವಪ್ರಧಾನವೂ ಅಲ್ಲ ॥೨೪॥

ಚತುರ್ಮುಖಬ್ರಹ್ಮನ ದೆಸೆಯಿಂದ ಅವತಾರವೆತ್ತಿದ ನನಗೆ, ನಾನಾ ಯೋನಿಗಳುಳ್ಳ ಎಂಟುನೂರು ಜನ್ಮಗಳು ಈಗ್ಗೆ ಕಳೆದುಹೋದುವು. ಅವುಗಳನ್ನೆಲ್ಲ ನಾನು ಈಗ ಮತ್ತೆ ನೋಡುವಂತಿರುವೆನು ॥೨೫॥

ಅವುಗಳಲ್ಲಿ ಕೆಲವನ್ನು ಮಾತ್ರ ಈಗ ಹೇಳುವೆನು. ಎಲೌ! ದೇವಿ! ನಾನು ಹಿಂದೆ ಒಂದುವೇಳೆ, ಒಂದು ಸಂಸಾರಮಂಡಲದಲ್ಲಿ, ಲೋಕಾಂತರವೆಂಬ ಕಮಲಕ್ಕೆ ಹೆಣ್ಣುದುಂಬಿಯಾಗಿ ವಿದ್ಯಾಧರಸ್ತ್ರೀಯಾಗಿದ್ದೆನು ॥೨೬॥

ಬಳಿಕ ನಾನು, ದುರ್ವಾಸನೆಯಿಂದ ಮಲಿನೀಕೃತಳಾಗಿ ಮನುಷ್ಯಸ್ತ್ರೀಯಾಗಿದ್ದವಳು, ಬಳಿಕ ಮತ್ತೊಂದು ಸಂಸಾರಮಂಡಲ (ಪ್ರಪಂಚ)ದಲ್ಲಿ ನಾಗಕನ್ಯಕೆಯಾದೆನು ॥೨೭॥

ಆಮೇಲೆ ನಾನು, ಕದಂಬ ಕುಂದ ಜಂಬೀರ ಕರಂಜ—ಇವುಗಳ ವನಗಳಲ್ಲಿ ವಾಸಮಾಡುತ, ಎಲೆಗಳ ಬಟ್ಟೆಯನ್ನುಟ್ಟು, ಕಪ್ಪಾದ ಶಬರಸ್ತ್ರೀಯಾಗಿದ್ದೆನು ॥೨೮॥

ಬಳಿಕ ಮೂಢಳಾಗಿ ಉದ್ಧತಳಾದ ನಾನು, ವನವಾಸವಾಸನಾಬಲದಿಂದ ಯುಕ್ತ

ಪುಣ್ಯಾಶ್ರಮಲತಾ ಸಾಹಂ ಮುನಿಸಙ್ಗಪವಿತ್ರಿತಾ ।
ವನಾಗ್ನಿದಗ್ಧಾ ತಸ್ಯೈವ ಕನ್ಯಾಭೂವಂ ಮಹಾಮುನೇಃ ॥೪೦॥
ಅಸ್ತ್ರೀತ್ವಫಲದಾತೄಣಾಂ ಕರ್ಮಣಾಂ ಪರಿಣಾಮತಃ ।
ರಾಜಾಹಮಭವಂ ಶ್ರೀಮಾನ್ ಸುರಾಷ್ಟ್ರೇಷು ಸಮಾಃ ಶತಮ್ ॥೪೧॥
ತಾಳೀನಾಂ ತಲಕಚ್ಛೇಷು ರಾಜದುಷ್ಕೃತದೋಷತಃ ।
ನಕುಲೀ ನವ ವರ್ಷಾಣಿ ಕುಷ್ಠನಷ್ಟಾಙ್ಗಿಕಾಭವಮ್ ॥೪೨॥
ವರ್ಷಾಣ್ಯಷ್ಟೌ ಸುರಾಷ್ಟ್ರೇಷು ದೇವಿ ಗೋತ್ವಂ ಕೃತಂ ಮಯಾ ।
ಮೋಹಾದ್ದುರ್ಜನದುಷ್ಟಾಜ್ಞಬಾಲಗೋಪಾಲಲೀಲಯಾ ॥೪೩॥
ವಿಹಙ್ಗ್ಯಾ ವೈರವಿನ್ಯಸ್ತಾ ವಾಗುರಾ ವಿಪಿನಾವನೌ ।
ಕ್ಲೇಶೇನ ಮಹತಾ ಚ್ಛಿನ್ನಾ ಅಧಮಾವಾಸನಾ ಇವ ॥೪೪॥
ಕರ್ಣಿಕಾಕ್ರೋಡಶಯ್ಯಾಸು ವಿಶ್ರಾನ್ತಮಳಿನಾಸಹ ।
ಪದ್ಮಕುಟ್ಮಲಕೋಶೇಷು ಭುಕ್ತಕಿಞ್ಜಲ್ಕಯಾ ರಹಃ ॥೪೫॥

ಳಾಗಿ, ಪುಷ್ಪಗುಚ್ಛಗಳೆಂಬ ನೇತ್ರಗಳೊಡನೆಯೂ ಪತ್ರಗಳೆಂಬ ಹಸ್ತಗಳೊಡನೆಯೂ ಕೂಡಿಕೊಂಡು, ಗುಳುಚ್ಛನಾಮಕ ಲತೆಯಾಗಿದ್ದೆನು ॥೩೯॥

ಹೀಗೆ ಪುಣ್ಯಾಶ್ರಮದಲ್ಲಿ ಲತೆಯಾಗಿದ್ದ ನಾನು, ಆ ಮಹರ್ಷಿಗಳ ಸಹವಾಸದಿಂದ ಪರಿಶುದ್ಧಳಾಗಿ, ಒಂದಾನೊಂದು ಸಮಯದಲ್ಲಿ ಕಾಡುಗಿಚ್ಚಿನಿಂದ ಸುಡಲ್ಪಟ್ಟವಳಾಗಿ, ಬಳಿಕ–ಆ ಆಶ್ರಮಕ್ಕೆ ಅಧಿಪತಿಯಾದ ಮಹಾಮುನಿಗೇ ಮಗಳಾಗಿ ಹುಟ್ಟಿದೆನು ॥೪೦॥

ಆ ಜನ್ಮದಲ್ಲಿ ಪುರುಷಜನ್ಮಫಲವನ್ನು ಕೊಡತಕ್ಕ ಕರ್ಮಗಳನ್ನು ಮಾಡಿದಕಾರಣ, ಅವುಗಳು ಪರಿಪಕ್ವವಾಗಿ ಫಲಕೊಡುವಕಾಲ ಬಂದಾಗ, ನಾನು ಪುರುಷಜನ್ಮಪಡೆದು, ಸುರಾಷ್ಟ್ರದೇಶದಲ್ಲಿ ಒಂದುನೂರುವರ್ಷ ದೊರೆಯಾಗಿದ್ದೆನು ॥೪೧॥

ಆ ರಾಜಜನ್ಮದಲ್ಲಿ ಅನೇಕವಾಗಿ ದುಷ್ಕರ್ಮಗಳನ್ನು ಮಾಡಿದ ದೋಷದಿಂದ, ನಾನು ಹೆಣ್ಣುಮುಂಗುಸಿಯಾಗಿ ಹುಟ್ಟಿ, ತಾಳೆಯಮರಗಳಕೆಳಗೆ ಜೋಗುಭೂಮಿಗಳಲ್ಲಿ, ಕುಷ್ಠರೋಗದಿಂದ ನಷ್ಟವಾದ ಅಂಗವುಳ್ಳವಳಾದೆನು ॥೪೨॥

ಹೇ! ದೇವಿ! ಬಳಿಕ ನಾನು, ಸುರಾಷ್ಟ್ರದೇಶದಲ್ಲಿ ಹಸುವಾಗಿ ಹುಟ್ಟಿ, ದುರ್ಜನ ದುಷ್ಟ ಅಜ್ಞ ಬಾಲ–ಇವರುಗಳು ಅವಿವೇಕದಿಂದ ವಿಲಾಸಕ್ಕಾಗಿ ಮಾಡುವ ತಾಡನಮುಂತಾದುವುಗಳನ್ನನುಭವಿಸುತ, ಎಂಟುವರ್ಷಗಳನ್ನು ಕಳೆದೆನು ॥೪೩॥

ಬಳಿಕ ಹೆಣ್ಣುಪಕ್ಷಿಯಾಗಿ ಹುಟ್ಟಿದ ನಾನು, ಅರಣ್ಯಭೂಮಿಯಲ್ಲಿ ಬೇಡರು ನಿಷ್ಕಾರಣ ವೈರದಿಂದ ಒಡ್ಡಿದ ಬಲೆಯೊಳಗೆ ಸಿಕ್ಕಿಕೊಂಡು, ಜ್ಞಾನಿಗಳು ದುಷ್ಕರ್ಮವಾಸನೆಯನ್ನು ಕತ್ತರಿಸುವಂತೆ, ಅತಿಪ್ರಯಾಸದಿಂದ ಆ ಬಲೆಯನ್ನು ಕತ್ತರಿಸಿದೆನು ॥೪೪॥

ಆಮೇಲೆ ನಾನು ಹೆಣ್ಣುದುಂಬಿಯ ಜನ್ಮವನ್ನು ಪಡೆದವಳಾಗಿ, ತಾವರೆಹೂವುಗಳಲ್ಲಿ ಗಂಡು ದುಂಬಿಯೊಡನೆ ವಿಹರಿಸುತ, ಅವುಗಳ ಕೇಸರಗಳನ್ನು ಭಕ್ಷಿಸುತ, ಸಂಧ್ಯಾಕಾಲದಲ್ಲಿ ಕಮಲಗಳು ಮುಚ್ಚಿಕೊಂಡು ಮೊಗ್ಗಾದಾಗ— ಆ ಕಮಲಕರ್ಣಿಕೆಗಳ ಮಧ್ಯವೆಂಬ ಹಾಸಿಕೆಯಲ್ಲಿ ವಿಶ್ರಮಿಸಿಕೊಳ್ಳುತಿದ್ದೆನು ॥೪೫॥

ಭ್ರಾನ್ತಮುತ್ತುಙ್ಗಶೃಙ್ಗಾಸು ಹರಿಣ್ಯಾ ಹಾರಿನೇತ್ರಯಾ ।
ವನಸ್ಥಲೀಷು ರಮ್ಯಾಸು ಕಿರಾತಾಹತಮರ್ಮಯಾ ॥೪೬॥
ದೃಷ್ಟಂ ನಷ್ಟಾಸು ದಿಕ್ಷ್ವಬ್ಧಿಕಲ್ಲೋಲೈರುಹ್ಯಮಾನಯಾ ।
ಮತ್ಸ್ಯ್ಯಾಽಮ್ಬುಕಚ್ಛಪಾಚ್ಛೋಡೇ ಮೋಘಮಾನನತಾಡನಮ್ ॥೪೭॥
ಪೀತಂ ಚರ್ಮಣ್ವತೀತೀರೇ ಗಾಯನ್ತ್ಯಾ ಮಧುರಸ್ವರಮ್ ।
ಪುಳಿನ್ದ್ಯಾ ಸುರತಾನ್ತೇಷು ನಾಳಿಕೇರರಸಾಸವಮ್ ॥೪೮॥
ಸಾರಸೀಸರಸಾಳಿನ್ಯಾ ಸೀತ್ಕಾರಮಧುರಸ್ವರಮ್ ।
ಸಾರಸಃ ಸುರಸ್ಯೈಃ ಸ್ವೈರಂ ಸಾಮನ್ತಶ್ಚಾರುರಞ್ಜಿತಃ ॥೪೯॥
ತಾಳೀತಮಾಲಕುಞ್ಜೇಷು ತರಳಾನನನೇತ್ರಯಾ ।
ಕ್ಷೀಬಪ್ರೇಕ್ಷಣವಿಕ್ಷೋಭ್ಯೈಃ ಕೃತಂ ಕಾನ್ತಾವಲೋಕನಮ್ ॥೫೦॥
ಕನಕಸ್ಯನ್ದಸನ್ದೋಹಸುನ್ದರೈರಙ್ಗಪಞ್ಜರೈಃ ।
ಸ್ವರ್ಗೇಽಪ್ಸರೋಮ್ಬುಜಿನ್ಯಾಶು ತೋಷಿತಾಃ ಸುರಷಟ್ಪದಾಃ ॥೫೧॥

ಅನಂತರ ಹೆಣ್ಣುಜಿಂಕೆಯಾಗಿ ಹುಟ್ಟಿದ ನಾನು, ಸುಂದರವಾದ ಕಣ್ಣುಗಳುಳ್ಳವಳಾಗಿ ಉನ್ನತವಾದ ಗಿರಿಶಿಖರಗಳುಳ್ಳ ವನಪ್ರದೇಶಗಳಲ್ಲಿ, ಕಿರಾತರಿಂದ ಮರ್ಮಸ್ಥಳಗಳಲ್ಲಿ ಹೊಡೆಯಲ್ಪಟ್ಟವಳಾಗಿ ಭ್ರಮಿಸಿದೆನು ॥೪೬॥

ಆಮೇಲೆ ನಾನು ಹೆಣ್ಣು ಮೀನಿನ ಜನ್ಮವನ್ನು ಹೊಂದಿದವಳಾಗಿ, ಸಮುದ್ರದಲ್ಲಿ ಅಲೆಗಳಿಂದ ಕೊಚ್ಚಲ್ಪಡುತ, ದಿಕ್ಕುತೋಚದೆ, ಆಕಸ್ಮಿಕವಾಗಿ ಬೆಸ್ತರಿರುವ ಕಡೆಗೆಹೋಗಿ, ಅಲ್ಲಿ ಅವರು ನನ್ನ ಮುಖದಮೇಲೆ ಹೊಡೆಯುವುದಕ್ಕಾಗಿ ಹಾಕಿದ ದೊಣ್ಣೆಯಪೆಟ್ಟು— ದೈವಾನುಕೂಲ್ಯದಿಂದ ನೀರಿನಮೇಲೆಯೂ ಆವೆಗಳ ಬೆನ್ನಿನಮೇಲೆಯೂ ಬಿದ್ದು ವ್ಯರ್ಥವಾದುದನ್ನು ನೋಡಿದೆನು ॥೪೭॥

ಬಳಿಕ ಮತ್ತೆ ಬೇಡರ ಹೆಂಗಸಾಗಿ ಹುಟ್ಟಿದ ನಾನು, ಚರ್ಮಣ್ವತಿಯೆಂಬ ನದಿಯ ತೀರದಲ್ಲಿ, ಮಧುರವಾಗಿ ಧ್ವನಿಯೆತ್ತಿ ಹಾಡುತ, ಕ್ರೀಡಾವಸಾನಗಳಲ್ಲಿ ನಾರಿಕೇಳಮದ್ಯವನ್ನು ಯಥೇಚ್ಛವಾಗಿ ಪಾನಮಾಡುತ್ತಿದ್ದೆನು ॥೪೮॥

ಅನಂತರ ನಾನು ಸಾರಸವೆಂಬ ಪಕ್ಷಿಜಾತಿಯಲ್ಲಿ ಹೆಣ್ಣಾಗಿ ಹುಟ್ಟಿ, ಕಮಲಲತೆಯಲ್ಲಿ ಪ್ರೀತಿಯುಕ್ತಳಾಗಿ ದುಂಬಿಯಂತೆ ನಿಶ್ಚಲವಾಗಿ ಅಲ್ಲಿಯೇ ಇರುತ, ಮಧುರವಾಗಿ ಸೀತ್ಕಾರಧ್ವನಿಮಾಡುತ, ಆಗ ಪತಿಯಾಗಿದ್ದ ಸಾರಸಪಕ್ಷಿಯನ್ನು ನಾನಾವಿಧ ಕ್ರೀಡೆಗಳಿಂದ ಬಲು ಸೊಗಸಾಗಿ ಆನಂದಪಡಿಸಿದೆನು ॥೪೯॥

ಬಳಿಕ ಪುನಃ ಮಾನುಷ್ಯಜನ್ಮ ಹೊಂದಿ, ತಾಳತಮಾಲವೃಕ್ಷಗಳ ಪೊದರುಗಳಲ್ಲಿ, ವಿಲಾಸದಿಂದ ಚಂಚಲವಾದ ಮುಖನೇತ್ರಗಳುಳ್ಳವಳಾಗಿ, ಮತ್ತವಾದ ದರ್ಶನದಿಂದುಂಟಾದ ಮನ್ಮಥ ಚಾಪಲ್ಯದಿಂದ, ಕಾಂತನನ್ನು ನೋಡುತಿದ್ದೆನು ॥೫೦॥

ಅನಂತರ ಸ್ವರ್ಗದಲ್ಲಿ ಅಪ್ಸರಸ್ತ್ರೀಯಾಗಿ ಹುಟ್ಟಿ, ಕಮಲಲತೆಯು ಭ್ರಮರಗಳನ್ನು ತೃಪ್ತಿಪಡಿಸುವಂತೆ, ಸುವರ್ಣದ್ರವಸಮುದಾಯದಹಾಗೆ ಮನೋಹರವಾಗಿರುವ ಅವಯವ ಪಂಜರಗಳಿಂದ ದೇವತೆಗಳನ್ನು ಸಂತೋಷಪಡಿಸಿದೆನು ॥೫೧॥

ಮಣಿಕಾಞ್ಚನಮಾಣಿಕ್ಯಮುಕ್ತಾನಿಕರಭೂತಲೇ ।
ಕಲ್ಪದ್ರುಮವನೇ ಮೇರೌ ಯೂನಾ ಸಹ ರತಂ ಕೃತಮ್ ॥೫೨॥
ಕಲ್ಲೋಲಃಕುಲಕಚ್ಛಾಸು ಲಸದ್ಗುಚ್ಛಲತಾಸು ಚ ।
ವೇಲಾವನಗುಹಾಸ್ವಬ್ಧೇಃ ಚಿರಂ ಕೂರ್ಮತಯಾ ಸ್ಥಿತಮ್ ॥೫೩॥
ತರತ್ತಾರತರಙ್ಗಾಸು ದೋಳನಂ ಸರಸಾಳಿನಾಮ್ ।
ನಳಿನೀನಾಳಡೋಲಾಸು ರಾಜಹಂಸ್ಯಂ ಮಯಾ ಕೃತಮ್ ॥೫೪॥
ಶಾಲ್ಮಲೀದಳಲೋಲಾನಾಂ ಆನ್ದೋಳನದರಿದ್ರತಾಮ್ ।
ಮಶಕಸ್ಯ ಮಯಾಲೋಕ್ಯ ದೀನಂ ಮಶಕಯಾ ಸ್ಥಿತಮ್ ॥೫೫॥
ತರತ್ತಾರತರಙ್ಗಾಸು ಚಞ್ಚದ್ವೀಚ್ಯಗ್ರಚುಮ್ಬನೈಃ ।
ಭ್ರಾನ್ತಂ ಶೈಲಸ್ರವನ್ತೀಷು ಜಲವಞ್ಜುಳಲೀಲಯಾ ॥೫೬॥
ಗನ್ಧಮಾದನಮನ್ದಾರಮನ್ದಿರೇ ಮದನಾತುರಾಃ ।
ಪಾತಿತಾಃ ಪಾದಯೋಃ ಪೂರ್ವಂ ವಿದ್ಯಾಧರಕುಮಾರಕಾಃ ॥೫೭॥

ಆಗ ಮೇರುಪರ್ವತದಮೇಲೆ, ರತ್ನ ಸುವರ್ಣ ಮಾಣಿಕ್ಯ ಮುಕ್ತಾಫಲ—ಇವುಗಳ ಸಮೂಹವೇ ಭೂಮಿ (ನೆಲೆ) ಯಾಗಿರುವ ಕಲ್ಪವೃಕ್ಷ ವನದೊಳಗೆ, ಯೌವನವಂತನಾದ ಪತಿಯೊಡನೆ ಕ್ರೀಡಿಸುತಿದ್ದೆನು ॥೫೨॥

ಆಮೇಲೆ ಕೂರ್ಮಜನ್ಮ ಹೊಂದಿದವಳಾಗಿ, ಅಲೆಗಳಿಂದ ವ್ಯಾಪ್ತವಾದ ಜೋಗು ನೆಲವುಳ್ಳದಾಗಿಯೂ ಪುಷ್ಪಗುಚ್ಛಗಳಿಂದ ಪ್ರಕಾಶಿಸುವ ಲತೆಗಳುಳ್ಳದಾಗಿಯೂ ಇರುವ ಸಮುದ್ರತೀರವನಗುಹೆಗಳಲ್ಲಿ ಬಹುಕಾಲವಿದ್ದೆನು ॥೫೩॥

ಅನಂತರ ರಾಜಹಂಸಸ್ತ್ರೀಯಾಗಿ ಹುಟ್ಟಿ, ರೆಕ್ಕೆಗಳಿಂದ ಚಂಚಲವಾದ ಜಲತರಂಗಗಳನ್ನು ಬಡಿಯುತ, ಕಮಲಲತೆಗಳ ನಾಳವೆಂಬ ಡೋಲೆಗಳಲ್ಲಿ—ಸರಸವಾದ ಭ್ರಮರಗಳಿಗೆ ಆಂದೋಳನ (ತೂಗಾಟ) ವುಂಟಾಗಲು ಸಹಾಯಭೂತಗಳಾಗಿದ್ದೆನು ॥೫೪॥

ಬಳಿಕ ಹೆಣ್ಣುಸೊಳ್ಳೆಯಾಗಿ ಹುಟ್ಟಿ, ಆಗ ಅನೇಕ ಸೊಳ್ಳೆಗಳು ಶಾಲ್ಮಲೀವೃಕ್ಷದ ಎಲೆಗಳಲ್ಲಿ ಆಂದೋಳನ ಸುಖವನ್ನನುಭವಿಸುತಿದ್ದರೂ— ಒಂದು ಸೊಳ್ಳೆಮಾತ್ರ ಅಲ್ಲಿ ಕುಳಿತುಕೊಳ್ಳಲಾರದೆ ಜಾರಿಬಿದ್ದು ಆ ಸುಖಾನುಭವಶೂನ್ಯವಾಗಿರುವುದನ್ನು ನೋಡಿ, ವ್ಯಸನದಿಂದ ನಾನು ಬಹು ದೀನಳಾದೆನು ॥೫೫॥

ಆಮೇಲೆ ನಾನು ನೀರಂಜಿಮರದ ಜನ್ಮವನ್ನು ಹೊಂದಿ, ದೊಡ್ಡದೊಡ್ಡ ಅಲೆಗಳಿಂದ ಕೂಡಿಕೊಂಡಿರುವ ಗಿರಿ ನದಿಗಳಲ್ಲಿ, ಚಂಚಲವಾದ ತರಂಗಾಗ್ರಗಳನ್ನು ಮುಟ್ಟುತ, ವಿಲಾಸದಿಂದ ಭ್ರಮಣಮಾಡಿದೆನು ॥೫೬॥

ಅನಂತರ ವಿದ್ಯಾಧರಸ್ತ್ರೀಯಾಗಿ ಹುಟ್ಟಿ, ಗಂಧಮಾಧನ ಪರ್ವತದಲ್ಲಿ ಮಂದಾರವೃಕ್ಷದ ಮನೆಯೊಳಗೆ, ಕಾಮಾತುರರಾದ ವಿದ್ಯಾಧರಪುತ್ರರು ನನ್ನ ಪಾದಾಕ್ರಾಂತರಾಗುವಂತೆ ಮಾಡಿದ್ದೆನು. ಇದೆಲ್ಲವೂ ನನ್ನ ಪೂರ್ವಜನ್ಮ ವೃತ್ತಾಂತವು ॥೫೭॥

ಕೀರ್ಣಕರ್ಪೂರಪೂರೇಷು ತಲ್ಪೇಷು ವ್ಯಸನಾತುರಾ |
ಚಿರಂ ವಿಲುಲಿತಾಸ್ಮೀನ್ದುಬಿಮ್ಬೇಷ್ವಿವ ಶಶಿಪ್ರಭಾ ||೫೮||

ಯೋನಿಷ್ವನೇಕವಿಧದುಃಖಶತಾನ್ವಿತಾಸು
ಭ್ರಾನ್ತಂ ಮಯೋನ್ನಮನಸನ್ನಮಲಾಕುಲಾಙ್ಗ್ಯಾ |
ಸಂಸಾರದೀರ್ಘಸರಿತಶ್ಚಲಯಾ ಲಹರ್ಯಾ
ದುರ್ವಾರವಾತಹರಿಣೀಸರಣಕ್ರಮೇಣ ||೫೯||

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಲೀಲಾ ಜನ್ಮಾನ್ತರ ವರ್ಣನಂ ನಾಮ ಸಪ್ತವಿಂಶಃ ಸರ್ಗಃ.

ಹೀಗೆ ಮಾಡಿದರೂ ಆ ವಿದ್ಯಾಧರ ಜನ್ಮದಲ್ಲಿಯೂ ನನಗೆ ಸುಖ ತೋರಲಿಲ್ಲ. ಚಂದ್ರಮಂಡಲದಲ್ಲಿ ಚಂದ್ರಿಕೆಯಿರುವಂತೆ, ಪಚ್ಚಕರ್ಪೂರವನ್ನು ತುಂಬ ಹರಡಿರುವ ದಿವ್ಯವಾದ ಹಾಸಿಗೆಗಳಮೇಲೆ ಇರುತ್ತಿದ್ದರೂ, ನಾನು ವ್ಯಸನದಿಂದ ಬಹುಕಾಲ ಹೊರಳಾಡುತಿದ್ದೆನು ||೫೮||

ಈರೀತಿಯಾಗಿ ಸಂಸಾರವೆಂಬ ದೊಡ್ಡ ನದಿಗೆ ಚಂಚಲಪ್ರವಾಹರೂಪಳಾಗಿರುವ ನಾನು, ವಾತಪ್ರಮಿಯೆಂಬ ಒಂದು ಹರಿಣೀ (ಹೆಣ್ಣುಜಿಂಕೆ) ವಿಶೇಷವು ವಾಯುವನ್ನು ಅನುಸರಿಸಿ ಕೆಳಕ್ಕೂ ಮೇಲಕ್ಕೂ ಹಾರಾಡುತ ಬಳಲುವಂತೆ, ಒಂದುವೇಳೆ ಉತ್ತಮಜನ್ಮವನ್ನೂ ಮತ್ತೊಂದುವೇಳೆ ಅಧಮಜನ್ಮವನ್ನೂ ಹೊಂದುತ, ಶರೀರವೆಲ್ಲ ಜರ್ಝರವಾದವಳಾಗಿ, ನಾನಾವಿಧ ದುಃಖಶತಯುಕ್ತವಾದ ಜನ್ಮಪರಂಪರೆಗಳಲ್ಲಿ ಭ್ರಮಿಸಿದೆನು. ಎಂದು ಲೀಲೆಯು ಸರಸ್ವತೀದೇವಿಯೊಡನೆ ಹೇಳಿದಳು ||೫೯||

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಲೀಲೆಯ ಜನ್ಮಾಂತರವರ್ಣನವೆಂಬ ಇಪ್ಪತ್ತೇಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟಾವಿಂಶಃ ಸರ್ಗಃ.

ಶ್ರೀರಾಮಉವಾಚ.

ವಜ್ರಾಙ್ಗಸಾರಾದ್ಬ್ರಹ್ಮಾಣ್ಡಕುಡ್ಯಾನ್ನಿಬಿಡಮಣ್ಡಲಾತ್ ।
ಕೋಟಿಯೋಜನಸಮ್ಪುಷ್ಟಾತ್ ಕಥಂ ತೇ ನಿರ್ಗತೇಽಬಲೇ ॥೧॥

ಶ್ರೀವಸಿಷ್ಠಉವಾಚ.

ಕ್ವ ಬ್ರಹ್ಮಾಣ್ಡಂ ಕ್ವ ತದ್ಭಿತ್ತಿಃ ಕ್ವಾತ್ರಾಸೌ ವಜ್ರಸಾರತಾ ।
ಕಿಲಾವಶ್ಯಂ ಸ್ಥಿತೇ ದೇವ್ಯೌ ಅನ್ತಃಪುರವರಾಮ್ಬರೇ॥೨॥
ತಸ್ಮಿನ್ನೇವ ಗಿರಿಗ್ರಾಮೇ ತಸ್ಮಿನ್ನೇವಾಲಯಾಮ್ಬರೇ ।
ಬ್ರಾಹ್ಮಣಃ ಸ ವಸಿಷ್ಠಾಖ್ಯಃ ಆಸ್ವಾದಯತಿ ರಾಜತಾಮ್ ॥೩॥

ಉತ್ಪತ್ತಿಪ್ರಕರಣದಲ್ಲಿ ಇಪ್ಪತ್ತೆಂಟನೆಯ ಸರ್ಗವು.

ದೃಷ್ಟಪ್ರಪಞ್ಚಮಿಥ್ಯಾತ್ವಾತ್ ಚಿದಾಕಾಶಸ್ಯ ಸತ್ಯತಾ ॥
ಪರ್ವತೋ ವಿಸ್ತರೇಣಾತ್ರ ಗಿರಿಗ್ರಾಮಶ್ಚ ವರ್ಣ್ಯತೇ ॥

ದೃಶ್ಯವಾದ ಪ್ರಪಂಚವು ಮಿಥ್ಯಾಭೂತವಾಗಿರುವುದರಿಂದ ಜ್ಞಾನಾಕಾಶವು ಸತ್ಯವಾಗಿರುವುದೆಂಬ ವಿಷಯವೂ, ಪರ್ವತವೂ, ಗಿರಿಗ್ರಾಮವೂ ಕೂಡ, ಈ ಸರ್ಗದಲ್ಲಿ ವಿಸ್ತಾರವಾಗಿ ವರ್ಣಿಸಲ್ಪಡುವುವು.

ಪೂರ್ವೋಕ್ತರೀತಿಯಾಗಿ ಶ್ರೀವಸಿಷ್ಠ ಮುನೀಶ್ವರರು ಹೇಳಿದುದನ್ನು ಕೇಳಿ, ಶ್ರೀರಾಮನು ಒಂದು ಪ್ರಶ್ನೆಯನ್ನು ಮಾಡುವನು :—

ಪೂಜ್ಯರೆ! ತಾವು ಹಿಂದೆ ಅಪ್ಪಣೆಕೊಟ್ಟಹಾಗೆ—ವಜ್ರದಂತೆ ಗಟ್ಟಿಯಾಗಿಯೂ ಅನೇಕಕೋಟಿ ಯೋಜನ ವಿಸ್ತೀರ್ಣವಾಗಿಯೂ ಸಾಂದ್ರಪ್ರದೇಶವುಳ್ಳದಾಗಿಯೂ ಇರುವ—ಬ್ರಹ್ಮಾಂಡಕುಡ್ಯದ ದೆಸೆಯಿಂದ, ಸ್ವಭಾವತಃ ಅಬಲೆಯರಾಗಿರತಕ್ಕ ಆ ಸರಸ್ವತೀಲೀಲೆಯರು ಹೇಗೆ ದಾಟಿಹೋದರು ? ॥೧॥

ಶ್ರೀ ವಸಿಷ್ಠರು ಉತ್ತರ ಹೇಳುವರು :—

ಅಯ್ಯಾ! ರಾಮ! ಬ್ರಹ್ಮಾಂಡವೆಲ್ಲಿರುವುದು? ಅದರ ಗೋಡೆಯೆಲ್ಲಿರುವುದು? ಇದು ವಜ್ರದಂತೆ ಗಟ್ಟಿಯಾಗಿರುವುದೆಲ್ಲಿ ಬಂದೀತು? ವಸ್ತುತಃ ಆ ಲೀಲಾ ಸರಸ್ವತೀದೇವಿಯರಿಬ್ಬರೂ ಶ್ರೇಷ್ಠವಾದ ಆ ಅಂತಃಪುರದ ಮಧ್ಯದಲ್ಲಿಯೇ ಇದ್ದರು ॥೨॥

ಆ ಗಿರಿಗ್ರಾಮದಲ್ಲಿಯೇ ಅದೇ ಮನೆಯೊಳಗೆಯೇ ವಸಿಷ್ಠನಾಮಕನಾದ ಆ ಬ್ರಾಹ್ಮಣನು ದೊರೆತನವನ್ನನುಭವಿಸುತಿದ್ದನು ॥೩॥

ತಮೇವ ಮಣ್ಡಪಾಕಾಶಕೋಣಕಂ ಶೂನ್ಯಮಾತ್ರಕಮ್ |
ಚತುಸ್ಸಮುದ್ರಪರ್ಯನ್ತಂ ಭೂತಲಂ ಸೋಽನುಭೂತವಾನ್ ||೪||
ಆಕಾಶಾತ್ಮನಿ ಭೂಪೀಠಂ ತಸ್ಮಿಂಸ್ತದ್ರಾಜಪತ್ತನಮ್ |
ರಾಜಸದ್ಮಾನುಭವತಿ ಸ ಚ ಸಾ ಚಾಪ್ಯರುನ್ಧತೀ ||೫||
ಲೀಲಾಭಿಧಾನಾ ಸಾ ಜಾತಾ ತಯಾ ಚ ಜ್ಞಪ್ತಿರರ್ಚಿತಾ |
ಜ್ಞಪ್ತ್ಯಾ ಸಹ ಸಮುಲ್ಲಙ್ಘ್ಯ ಖಮಾಶ್ಚರ್ಯಮನೋಹರಮ್ ||೬||
ಪ್ರಾದೇಶಮಾತ್ರೇ ನಭಸಿ ಸಾ ತತ್ರೈವ ಗೃಹೋದರೇ |
ಬ್ರಹ್ಮಾಣ್ಡಾನ್ತರಮಾಸಾದ್ಯ ಗಿರಿಗ್ರಾಮಗಮನ್ದಿರೇ ||೭||
ಬ್ರಹ್ಮಾಣ್ಡಾತ್ ಪರಿನಿರ್ಗತ್ಯ ಸ್ವಗೃಹೇ ಸ್ಥಿತಿಮಾಯಯೌ |
ಸ್ವಪ್ನಾತ್ ಸ್ವಪ್ನಾನ್ತರಂ ಪ್ರಾಪ್ಯ ಯಥಾ ತಲ್ಪಗತಃ ಪುಮಾನ್ ||೮||
ಪ್ರತಿಭಾಮಾತ್ರಮೇವೈತತ್ ಸರ್ವಮಾಕಾಶಮಾತ್ರಕಮ್ |
ನ ಬ್ರಹ್ಮಾಣ್ಡಂ ನ ಸಂಸಾರೋ ನ ಕುಡ್ಯಾದಿ ನ ದೂರತಾ ||೯||
ಸ್ವಚಿತ್ತಮೇವ ಕಚತಿ ತಯೋಸ್ತದ್ಯನ್ಮನೋಹರಮ್ |
ವಾಸನಾಮಾತ್ರಸೋಲ್ಲೇಖಂ ಕ್ವ ಬ್ರಹ್ಮಾಣ್ಡಂ ಕ್ವ ಸಂಸೃತಿಃ ||೧೦||

ಕೇವಲ ಶೂನ್ಯವಾದ ಆ ಮಂಟಪದ ಆಕಾಶಕೋಣವನ್ನೇ, ಅವನು ಚತುಸ್ಸಮುದ್ರ ಮಧ್ಯಗತವಾದ ಭೂತಲವನ್ನಾಗಿ ಅನುಭವಿಸಿದನು ||೪||

ಆ ಆಕಾಶಾಕಾರದಲ್ಲಿಯೇ, ಆ ವಸಿಷ್ಠನಾಮಕ ಬ್ರಾಹ್ಮಣನೂ ಆ ಅರುಂಧತೀನಾಮಕಳಾದ ಅವನ ಪತ್ನಿಯೂ, ಭೂತಲವನ್ನೂ ಆ ರಾಜಧಾನಿಯನ್ನೂ ಆ ಅರಮನೆಯನ್ನೂ ಅನುಭವಿಸುತಿದ್ದರು ||೫||

ಅವಳೇ ಲೀಲಾನಾಮಕಳಾಗಿ ಹುಟ್ಟಿದಳು; ಬಳಿಕ ಸರಸ್ವತಿಯನ್ನೂ ಪೂಜಿಸಿದಳು; ಅವಳು ಅತ್ಯಾಶ್ಚರ್ಯವಾಗಿಯೂ ಮನೋಹರವಾಗಿಯೂ ಇರುವ ಆಕಾಶವನ್ನು ಸರಸ್ವತಿಯೊಡನೆ ದಾಟಿದವಳಾಗಿ, ಹಾಸಿಗೆಯಮೇಲೆ ಮಲಗಿರುವ ಮನುಷ್ಯನು ಆ ಹಾಸಿಗೆಯಲ್ಲಿಯೇ ಒಂದು ಸ್ವಪ್ನದಿಂದ ಮತ್ತೊಂದು ಸ್ವಪ್ನವನ್ನು ಹೊಂದುವಂತೆ, ಆ ಮನೆಯೊಳಗೆಯೇ ಒಂದು ಚೋಟುದ್ದವಿರುವ ಆಕಾಶದಲ್ಲಿ ಒಂದು ಬ್ರಹ್ಮಾಂಡದಿಂದ ಮತ್ತೊಂದು ಬ್ರಹ್ಮಾಂಡವನ್ನು ಹೊಂದಿ, ಆ ಗಿರಿಗ್ರಾಮದೊಳಗಿರುವ ತನ್ನ ಮನೆಯಲ್ಲಿಯೇ ಸ್ಥಿತಿಯನ್ನು ಹೊಂದಿದಳು ||೬—೮||

ಆದುಕಾರಣ, ಇದೆಲ್ಲವೂ ಕೇವಲ ಪ್ರತಿಭಾಮಾತ್ರವಾದುದೇಯೆ; ಸರ್ವವೂ ಆಕಾಶಮಾತ್ರರೂಪವೆಂದು ತಿಳಿಯಬೇಕು. ಬ್ರಹ್ಮಾಂಡವೂ ಇಲ್ಲ; ಸಂಸಾರವೂ ಇಲ್ಲ; ಗೋಡೆ ಮೊದಲಾದುದೂ ಇಲ್ಲ; ದೂರತ್ವವೂ ಇಲ್ಲ ||೯||

ಅವರಿಬ್ಬರಿಗೂ, ಕೇವಲ ವಾಸನಾಬಲದಿಂದ ನಾನಾವಿಧವಾಗಿ ಉತ್ಪ್ರೇಕ್ಷೆ ಮಾಡುತಿರುವ ತಮ್ಮ ಚಿತ್ತವೇ, ಅಷ್ಟು ಮನೋಹರವಾಗಿ ನಾನಾವಿಧವಾಗಿ ವಿಕಾಸಹೊಂದುತಿದ್ದಿತು. ಬ್ರಹ್ಮಾಂಡವೆಲ್ಲಿರುವುದು? ಸಂಸಾರವೆಲ್ಲಿರುವುದು? ||೧೦||

ನಿರಾವರಣಮೇವೇದಂ ಜ್ಞಪ್ತ್ಯಾಕಾಶಮನನ್ತಕಮ್ ।
ಕಿಂಚಿತ್ ಸ್ವಚಿತ್ತೇನೋನ್ನೀತಂ ಸ್ಪನ್ದಯುಕ್ತ್ಯೇವ ಮಾರುತಃ ॥೧೧॥

ಚಿದಾಕಾಶಮಜಂ ಶಾನ್ತಂ ಸರ್ವತ್ರೈವ ಹಿ ಸರ್ವದಾ ।
ಚಿತ್ತ್ವಾಜ್ಜಗದಿವಾಭಾತಿ ಸ್ವಯಮೇವಾತ್ಮನಾತ್ಮನಿ ॥೧೨॥

ಯೇನ ಬುದ್ಧಂ ತು ತಸ್ಯೈತತ್ ಆಕಾಶದಪಿ ಶೂನ್ಯಕಮ್ ।
ನ ಬುದ್ಧಂ ಯೇನ ತಸ್ಯೈತತ್ ವಜ್ರಸಾರಾಚಲೋಪಮಮ್ ॥೧೩॥

ಗೃಹಏವ ಯಥಾ ಸ್ವಪ್ನೇ ನಗರಂ ಭಾತಿ ಭಾಸುರಮ್ ।
ತಥೈತದಸದೇವಾನ್ತಃ ಚಿದ್ಧಾತೌ ಭಾತಿ ಭಾಸ್ವರಮ್ ॥೧೪॥

ಯಥಾ ಮರೌ ಜಲಂ ಬುದ್ಧಂ ಕಟಕತ್ವಂ ಚ ಹೇಮನಿ ।
ಅಸತ್ ಸದಿವ ಭಾತೀದಂ ತಥಾ ದೃಶ್ಯತ್ವಮಾತ್ಮನಿ ॥೧೫॥

ಏವಮಾಕಥಯನ್ತ್ಯೌ ತೇ ಲಲನೇ ಲಲಿತಾಕೃತೀ ।
ಗೃಹಾನ್ನಿರ್ಯಯತುರ್ಬಾಹ್ಯಂ ಚಾರುಚಙ್ಕ್ರಮಣಕ್ರಮೈಃ ॥೧೬॥

ಆಕಾಶವನ್ನೇ-ಸ್ವಲ್ಪ ಚಲನಸಂಯೋಗವುಂಟಾದಾಗ ವಾಯುವೆಂದು ಹೇಗೆ ವ್ಯವಹರಿಸುವರೋ, ಹಾಗೆಯೇ—ನಿರಾವರಣವೇ ಆಗಿರುವ ಈ ಅನಂತವಾದ ಚಿದಾಕಾಶವನ್ನು ಅವರಿಬ್ಬರೂ ತಮ್ಮ ಚಿತ್ತದಿಂದ ನಾನಾವಿಧ ಬ್ರಹ್ಮಾಂಡರೂಪವಾಗಿ ಕಲ್ಪಿಸಿಕೊಂಡಿದ್ದರು॥

ಆ ಚಿದಾಕಾಶವು, ಸರ್ವದೇಶದಲ್ಲಿಯೂ ಸರ್ವಕಾಲದಲ್ಲಿಯೂ ಜನ್ಮರಹಿತವಾಗಿಯೂ ನಿರುಪಪ್ಲವವಾಗಿಯೂ ಇರುವುದು. ಅದು ಸ್ವಭಾವತಃ ಜ್ಞಾನವೇ ಆಗಿರುವುದರಿಂದ, ಅದರ ಸ್ವರೂಪವನ್ನು ತಿಳಿಯದವರಿಗೆ, ತನ್ನಲ್ಲಿ ತಾನೇ ಜಗತ್ತಿಂಬಂತೆ ತೋರುತ್ತಿರುವುದು ॥೧೨॥

ಯಾವನು ತಿಳಿವಳಿಕೆಯುಳ್ಳವನಾಗುವನೋ, ಅವನಿಗಿದು (ಜಗತ್ತು) ಆಕಾಶಕ್ಕಿಂತ ಶೂನ್ಯವಾಗಿಯೇ ಇರುವುದು; ಯಾವನು ತಿಳಿವಳಿಕೆಯಿಲ್ಲದಿರುವನೋ, ಅವನಿಗಿದು ವಜ್ರದಂತೆ ಗಟ್ಟಿಯಾದ ಪರ್ವತಕ್ಕೆ ಸಮಾನವಾಗುವುದು ॥೧೩॥

ಒಂದು ಮನೆಯೊಳಗೆ ದೊಡ್ಡದೊಂದು ಪಟ್ಟಣವಿರುವುದೆಂದಿಗಾದರೂ ಸಂಭಾವನೀಯವೆ? ಹೀಗಿದ್ದರೂ ಸ್ವಪ್ನಕಾಲದಲ್ಲಿ ಒಂದು ಮನೆಯೊಳಗೆಯೇ ಪ್ರಕಾಶವಾದ ಒಂದು ಪಟ್ಟಣವು ಕಾಣುವುದಿಲ್ಲವೆ! ಇದರಂತೆಯೇ ಆ ಚಿತ್ತಿನಲ್ಲಿಯೂ ಇಲ್ಲದಿದ್ದರೂ ಈ ದೃಶ್ಯಪ್ರಪಂಚವು ಭಾಸಮಾನವಾಗುವುದು ॥೧೪॥

ಮರುಭೂಮಿಯಲ್ಲಿ ತಿಳಿಯಲ್ಪಟ್ಟ ಜಲವೂ, ಸುವರ್ಣದಲ್ಲಿ ತಿಳಿಯಲ್ಪಟ್ಟ ಕಟಕತ್ವವೂ ಹೇಗೆ ಅಸತ್ತಾಗಿದ್ದರೂ ಸತ್ತಿನಂತೆ ಕಾಣುವುವೋ, ಆತ್ಮನಲ್ಲಿಯೂ ಈ ದೃಶ್ಯಪ್ರಪಂಚತ್ವವು ಆರೀತಿಯಾಗಿ ಕಾಣುವುದು ॥೧೫॥

ಅಯ್ಯಾ! ರಾಮ! ಹೀಗಿರುವುದರಿಂದ, ಪೂರ್ವೋಕ್ತರೀತಿಯಾಗಿ ಸಂಭಾಷಣೆ ಮಾಡುತಿರುವ ಸುಂದರಿಯರಾದ ಆ ಸ್ತ್ರೀಯರಿಬ್ಬರೂ, ಮನೋಹರವಾದ ನಡಿಗೆಗಳಿಂದ, ಮನೆಯನ್ನು ಬಿಟ್ಟು ಹೊರಕ್ಕೆ ಹೊರಟರು ॥೧೬॥

ಅದೃಶ್ಯೇ ಗ್ರಾಮಲೋಕೇನ ಪ್ರೇಕ್ಷಮಾಣೇ ಪುರೋ ಗಿರಿಮ್ ।
ಚುಮ್ಬಿತಾಕಾಶಕುಹರಂ ಸಂಸ್ಪೃಷ್ಟಾದಿತ್ಯಮಣ್ಡಲಮ್ ॥೧೭॥
ನಾನಾವರ್ಣಾಖಿಲೋತ್ಫುಲ್ಲವಿಚಿತ್ರವನನಿರ್ಮಲಮ್ ।
ನಾನಾನಿರ್ಝರನಿರ್ಹ್ರಾದಕೂಜದ್ವನವಿಹಙ್ಗಮಮ್ ॥೧೮॥
ವಿಚಿತ್ರಮಞ್ಜರೀಪುಞ್ಜಪಿಞ್ಜರಾಮ್ಬುದಮಣ್ಡಲಮ್ ।
ಸ್ವಭ್ರಮುಚ್ಚಗುಳುಚ್ಛಾಗ್ರವಿಶ್ರಾನ್ತಖಗಸಾರಸಮ್ ॥೧೯॥
ಸಾರವಞ್ಜುಳವಿಸ್ತಾರಗುಪ್ತಾಖಿಲಸರಿತ್ತಟಮ್ ।
ಅಸಮಾಪ್ತಶಿಲಾಶ್ವಭ್ರಲತಾವರ್ತನಮಾರುತಮ್ ॥೨೦॥
ಪುಷ್ಪಾಗ್ರಪಿಹಿತಾಕಾಶಕೋಶಕುಡ್ಯಕವಾರಿದಮ್ ।
ಪತದ್ದೀರ್ಘಸರಿತ್ಸ್ರೋತಸ್ಸ್ಫುರನ್ಮುಕ್ತಾಕಲಾಪಕಮ್ ॥೨೧॥
ಚಲದ್ವೃಕ್ಷವನವ್ಯೂಹವಾತವೇಲ್ಲಿಸರಿತ್ತಟಮ್ ।
ನಾನಾವನಾಕುಲೋಪಾನ್ತಚ್ಛಾಯಾಸತತಶೀತಲಮ್ ॥೨೨॥

ಅಲ್ಲಿ, ಆ ಗ್ರಾಮದಲ್ಲಿರುವ ಜನರಿಗೆ ಕಾಣಿಸದಂತೆಯೇ, ಮುಂದುಗಡೆಯಿರುವ ಪರ್ವತವನ್ನು ಕಂಡರು. ಆಗ ಆ ಪರ್ವತವು ಹೇಗಿದ್ದಿತೆಂದರೆ:—ಆಕಾಶಮಧ್ಯವನ್ನು ಚುಂಬನಮಾಡುತಲೂ, ಸೂರ್ಯಮಂಡಲವನ್ನು ಸ್ಪರ್ಶಮಾಡುತಲೂ ಇದ್ದಿತು ॥೧೭॥

ಅಲ್ಲಿ, ಅನೇಕವರ್ಣವಾದ ವಿಚಿತ್ರವೃಕ್ಷವನಗಳು, ಆಮೂಲಾಗ್ರವಾಗಿ ವಿಕಸಿತಗಳಾಗಿರುವುದರಿಂದ, ಅದು ಶುಭ್ರವಾಗಿದ್ದಿತು ; ಅನೇಕವಾದ ಗಿರಿನದೀಪ್ರವಾಹಗಳ ಶಬ್ದಗಳಿಂದ, ಕಾಡುಹಕ್ಕಿಗಳೂ ಧ್ವನಿಮಾಡುತಿದ್ದುವು ॥೧೮॥

ಅಲ್ಲಿರುವ ನಾನಾವರ್ಣವಾದ ಪುಷ್ಪಮಂಜರಿಗಳ ಸಮೂಹದಿಂದ, ಮೇಘಮಂಡಲವೆಲ್ಲವೂ ನಾನಾವರ್ಣವಾಗಿ ನೋಡುವುದಕ್ಕೆ ರಮಣೀಯವಾಗಿದ್ದಿತು. ನಿರ್ಮಲವಾದ ಗುಳುಚ್ಛಲತೆಗಳ ತುದಿಗಳಲ್ಲಿ, ಸಾರಸಪಕ್ಷಿಗಳು ವಿಶ್ರಮಿಸಿಕೊಂಡಿದ್ದುವು ॥೧೯॥

ಅಲ್ಲಿರುವ ನದಿಗಳ ದಡಗಳನ್ನೆಲ್ಲ, ಗಟ್ಟಿಯಾದ ನೀರಂಜಿ ಮರಗಳು ವಿಸ್ತರಿಸಿಕೊಂಡು ಕಾಪಾಡುತಿದ್ದುವು. ಕಲ್ಲುಗಳ ಗುಂಡಿಗಳಲ್ಲಿ ಹುಟ್ಟಿರುವ ಲತೆಗಳು—ಆಶ್ರಯವೃಕ್ಷವನ್ನು ಇನ್ನೂ ಹೊಂದದಿರುವಾಗ, ಅವುಗಳನ್ನು ಗಾಳಿಯು ಸುತ್ತಿಸುತಿದ್ದಿತು ॥೨೦॥

ಆ ಪರ್ವತದಮೇಲೆ ಕುಳಿತಿರುವ ಮೇಘಗಳು, ಆಕಾಶವೆಂಬ ಕೋಶಗೃಹಕ್ಕೆ ಗೋಡೆಗಳಂತಿದ್ದುವು; ಇಂತಹ ಮೇಘಗಳನ್ನು, ಬೆಟ್ಟದ ತುದಿಯಲ್ಲಿ ಬೆಳೆದಿರುವ ವೃಕ್ಷಗಳ ಪುಷ್ಪಗಳು, ತಮ್ಮ ತುದಿಗಳಿಂದ ಮರೆಮಾಡುತಿದ್ದುವು. ಅಲ್ಲಿ ದೊಡ್ಡದೊಡ್ಡ ಹೊಳೆಗಳು ಬಂಡೆಗಳಮೇಲೆ ಬೀಳುತಿರುವುದರಿಂದ, ಅವು ಮುತ್ತಿನಹಾರದಂತೆ ಪ್ರಕಾಶಿಸುತಿದ್ದುವು ॥೨೧॥

ಅಲ್ಲಿರುವ ನದಿಗಳ ತೀರಗಳಲ್ಲೆಲ್ಲ, ತೋಪುಗಳು ಅಳ್ಳಾಡುತಿರುವುದರಿಂದ, ಆ ತೀರಗಳೆಲ್ಲವೂ ವಾಯುವಿನಿಂದ ಪರಿವೇಷ್ಟಿತವಾಗಿದ್ದುವು; ಮತ್ತು, ಅನೇಕವಾದ ಕಾಡುಗಳು ವ್ಯಾಪಿಸಿಕೊಂಡಿರುವುದರಿಂದ, ಅವುಗಳ ನೆಳಲು ಬಿದ್ದು ಆ ಪರ್ವತ ಸಮೀಪಭಾಗವೆಲ್ಲವೂ ಸರ್ವದಾ ತಣ್ಣಗಿರುತಿದ್ದಿತು ॥೨೨॥

ಅಥ ತೇ ಲಲನೇ ತತ್ರ ತದಾ ದದೃಶತುಃ ಸ್ವಯಮ್ ।
ತಂ ಗಿರಿಗ್ರಾಮಕಂ ವ್ಯೋಮ್ನಃ ಸ್ವರ್ಗಖಣ್ಡಮಿವ ಚ್ಯುತಮ್ ॥೨೩॥
ರಟತ್ಪ್ರಣಾಳೀಪಟಲಂ ಪೂರ್ಣಪುಷ್ಕರಿಣೀಗಣಮ್ ।
ದ್ವಿಜೈಃ ಕುಚಕುಚೈಃ ಕೂಜತ್ಸ್ವಲೀಲಾಶ್ವಭ್ರಕಚ್ಛಕಮ್ ॥೨೪॥
ಗಚ್ಛದ್ಗೋಬೃನ್ದಹುಙ್ಕಾರಕರಾಳಾಖಿಲಕುಞ್ಜಕಮ್ ।
ಕುಞ್ಜಗುಲ್ಮಕಖಣ್ಡಾಢ್ಯಂ ಸಚ್ಛಾಯಘನಶಾದ್ವಲಮ್ ॥೨೫॥
ದುಷ್ಪ್ರವೇಶಾರ್ಕಕಿರಣಂ ದೃಷನ್ನೀಹಾರಧೂಸರಮ್ ।
ಉದಗ್ರಮಞ್ಜರೀಪುಞ್ಜಜಟಾಲಮ್ಬಿಶಿಖಾನ್ತರಮ್ ॥೨೬॥
ಶಿಲಾಕುಹರವಾಸ್ಸ್ಫಲಪ್ರೋಚ್ಛಲನ್ಮುಕ್ತನಿರ್ಝರೈಃ ।
ಸ್ಮಾರಿತಾಚಲನಿರ್ಧೂತಕ್ಷೀರೋದಕಜಲಶ್ರಿಯಮ್ ॥೨೭॥
ಫಲಮಾಲ್ಯಮಹಾಭಾರಭಾಸುರೈರಜಿರದ್ರುಮೈಃ।

ಹೀಗಿರುವ ಆ ಪರ್ವತವನ್ನು ನೋಡಿದ ಬಳಿಕ, ಆಗ ಆ ಸ್ತ್ರೀಯರಿಬ್ಬರೂ, ಅಲ್ಲಿ ಆ ಗಿರಿಗ್ರಾಮವನ್ನು ನೋಡಿದರು. ಅದು ಹೇಗಿದ್ದಿತೆಂದರೆ:—ಆಕಾಶದಿಂದ ಕಳಚಿಬಿದ್ದ ಸ್ವರ್ಗದ ಒಂದು ಖಂಡವೋ ಎಂಬಂತೆ ಸುಂದರವಾಗಿದ್ದಿತು ॥೨೩॥

ಅಲ್ಲಿರುವ ನೀರಿನ ಬಚ್ಚಲುಗಳು ಧ್ವನಿಮಾಡುತ ಹರಿಯುತಿದ್ದುವು; ಕಮಲಸರಸ್ಸುಗಳೆಲ್ಲವೂ ಇವುಗಳಿಂದ ಪರಿಪೂರ್ಣವಾಗಿದ್ದುವು. ಅಲ್ಲಿನ ಜನಗಳು ತಮ್ಮ ವಿಹಾರಾರ್ಥವಾಗಿ ಮಾಡಿಕೊಂಡಿದ್ದ ಕೊಳಗಳ ದಡದಲ್ಲಿ ಪಕ್ಷಿಗಳು ಕಿಚಕಿಚ ಧ್ವನಿ ಮಾಡುತಿದ್ದುವು॥

ಅಲ್ಲಿ ಸಂಚರಿಸುತಿರುವ ಧೇನುಸಮೂಹದ ಹುಂಕಾರಧ್ವನಿಗಳಿಂದ, ಸಮಸ್ತವಾದ ಲತಾಗೃಹಗಳೂ ಮೊಳಗುತಿದ್ದುವು; ಇಂತಹ ಧೇನುಗಳಿಂದ ಪರಿಪೂರ್ಣವಾದ ಲತಾಗೃಹಗಳೂ, ಪೊದರುಗಳೂ ಖಂಡಖಂಡವಾಗಿ ಆ ಗ್ರಾಮವನ್ನೆಲ್ಲ ವ್ಯಾಪಿಸಿಕೊಂಡಿದ್ದುವು; ಇದಲ್ಲದೆ, ಅಲ್ಲಿ ದೊಡ್ಡದೊಡ್ಡ ಹಸುರು ಭೂಮಿಗಳು, ವೃಕ್ಷಚ್ಛಾಯೆಯಿಂದ ತಂಪಾಗಿ ಧೇನುಗಳಿಗನುಕೂಲವಾಗಿದ್ದುವು ॥೨೫॥

ಆ ಕುಂಜಗಳಲ್ಲಿ ಸೂರ್ಯಕಿರಣಗಳು ಪ್ರವೇಶಿಸುವುದು ಅಸಾಧ್ಯವಾಗಿದ್ದಿತು; ಕಲ್ಲುಗಳೂ ಮಂಜುಗಳೂ ತುಂಬಿರುವುದರಿಂದ ಧೂಸರವರ್ಣ (ಮಾಸಲು) ವಾಗಿದ್ದಿತು; ಆ ಲತೆಗಳ ತುದಿಗಳು, ಹೆಚ್ಚಾಗಿ ಪುಷ್ಪಗುಚ್ಛಸಮೂಹಗಳಿಂದ ವ್ಯಾಪ್ತವಾಗಿ, ಮರದ ಬೀಳಿನಂತೆ ಜೋಲಾಡುತಿದ್ದುವು ॥೨೬॥

ಅಲ್ಲಿ, ದೊಡ್ಡದೊಡ್ಡ ಕಲ್ಲುಗಳ ಪೊಟ್ಟರೆಗಳಲ್ಲಿ ಗಿರಿ ನದೀಪ್ರವಾಹಗಳು ಬಿದು ಹಾರಿ ಹೊರಗೆ ಹೊರಡುತಿರುವುದರಿಂದ, ಪೂರ್ವದಲ್ಲಿ ಮಥನಮಾಡಿದಾಗ ಮಂದರಪರ್ವತದ ಪೊಟ್ಟರೆಗಳಲ್ಲಿ ಸೇರಿಕೊಳ್ಳುತಲೂ ಮತ್ತೆ ಈಚೆಗೆ ಬರುತಲೂ ಇದ್ದ ಕ್ಷೀರಸಮುದ್ರದ ನೀರಿನ ಸೊಬಗು ಸ್ಮೃತಿವಿಷಯವಾಗುತಿದ್ದಿತು ॥೨೭॥

ಆ ಗ್ರಾಮದೊಳಗೆ, ಪ್ರತಿಮನೆಯಲ್ಲಿಯೂ ಅಂಗಳದಲ್ಲಿ ಗಿಡಗಳು ಬೆಳೆದಿದ್ದುವು; ಅವು, ಅತ್ಯಧಿಕವಾಗಿ ಫಲಗಳಿಂದಲೂ ಪುಷ್ಪಗಳಿಂದಲೂ ಬೊಗ್ಗಿಕೊಂಡು ಪ್ರಕಾಶಿಸು

ಆನೀಯ ಪುಷ್ಪಸಮ್ಭಾರಂ ತಿಷ್ಠದ್ಭಿರಿವ ಸಙ್ಕುಲಮ್ ‖೨೮‖
ತರತ್ತರಙ್ಗಝಾಙ್ಕಾರಕಾರಿಮಾರುತಕಮ್ಪಿತೈಃ ।
ಕೀರ್ಣಪುಷ್ಪಸಮಾವೃಷ್ಟಂ ದ್ರುಮೈರಪಿ ರಸಾಕುಲೈಃ ‖೨೯‖
ಅಶಙ್ಕಿತಶಿಲಾಕೂಟಸ್ರವದಬ್ಬಿನ್ದುಟಙ್ಕೃತೈಃ ।
ಕಿಂಚಿತ್ ಕೃತರವಂ ಗುಪ್ತೈಃ ಅಶಙ್ಕೈಃ ಶಙ್ಕಿತೈಃ ಖಗೈಃ ‖೩೦‖
ಉತ್ಫಾಲಲಹರೀಶ್ರಾನ್ತಶೀಕರಾಸ್ವಾದನಾಕುಲೈಃ ।
ನದ್ಯಾಮುಡುಪರಾವರ್ತವೃತ್ತಿಭಿರ್ವಿಹಗೈರ್ವೃತಮ್ ‖೩೧‖
ಉತ್ತಾಳತಾಳವಿಶ್ರಾನ್ತಕಾಕಾಲೋಕನಶಙ್ಕಿತೈಃ ।
ಬಾಲೈಃ ಪ್ರಗೋಪಿತಾಮಿಕ್ಷಾಖಣ್ಡಂ ಜೀರ್ಣಸ್ವಭುಕ್ತಕೈಃ ‖೩೨‖
ಪುಷ್ಪಶೇಖರಸಮ್ಭಾರವಸನಗ್ರಾಮಬಾಲಕಮ್ ।
ಖರ್ಜೂರನಿಮ್ಬಜಮ್ಬೀರಗಹನೋಪಾನ್ತಶೀತಲಮ್ ‖೩೩‖

ತ್ತಿರುವುದರಿಂದ, ಆ ಗೃಹಾಧಿಪತಿಗಳಿಗೋಸ್ಕರ ಫಲಪುಷ್ಪ ಸಂಭಾರವನ್ನು ತೆಗೆದುಕೊಂಡುಬಂದು ನಿಂತಿರುವುವೋ ಎಂಬಂತೆ ಕಾಣಿಸುತ, ಆ ಗ್ರಾಮದಲ್ಲೆಲ್ಲ ಪರಿಪೂರ್ಣವಾಗಿದ್ದುವು ॥೨೮॥

ಅಲ್ಲಿ, ವೇಗವಾಗಿ ಹರಿಯುವ ನದಿಯ ತರಂಗದಂತೆ ಝುಂಕಾರಮಾಡುತಿರುವ ವಾಯುವು, ಅಲ್ಲಿದ್ದ ಮರಗಳನ್ನೆಲ್ಲ ಅಳ್ಲಾಡಿಸುತಿದ್ದಿತು ; ಇಂತಹ ಮರಗಳು, ಮಕರಂದರಸ ಪರಿಪೂರ್ಣಗಳಾಗಿ ಆ ಪ್ರದೇಶದಲ್ಲೆಲ್ಲ ಮಳೆ ಸುರಿದಂತೆ ಹೂವೆರಚುತಿದ್ದುವು ॥೨೯॥

ಆ ಪ್ರದೇಶದಲ್ಲಿ, ನಿಶ್ಶಂಕವಾಗಿ ವಾಸಮಾಡುತಿದ್ದ ಪಕ್ಷಿಗಳು, ಅಕಸ್ಮಿಕವಾಗಿ ಶಿಲಾಶಿಖರದಿಂದ ದಪ್ಪನಾದ ನೀರುಹನಿಯು ಟಣ್ಣೆಂದು ಬೀಳಲಾಗಿ, ಧನುರ್ಧ್ವನಿಯೆಂದು ಭಯಪಟ್ಟುವುಗಳಾಗಿ, ತಮ್ಮ ದೇಹವನ್ನು ಮರೆಮಾಡಿಕೊಂಡು, ಸ್ವಲ್ಪವಾಗಿ ಧ್ವನಿಮಾಡುತಿದ್ದುವು ॥೩೦॥

ಆ ಗ್ರಾಮದ ನದಿಯಲ್ಲಿ, ದೊಡ್ಡದೊಡ್ಡ ಅಲೆಗಳ ಬಡಿದಾಟದಿಂದ ಬಳಲಿರುವ ಪಕ್ಷಿಗಳು, ಜಲಬಿಂದುಗಳನ್ನು ಪಾನಮಾಡುವುದರಲ್ಲಾಸಕ್ತಗಳಾಗಿ, ನಕ್ಷತ್ರಗಳಂತೆ ಥಣಥಣನೆ ಹಾರಾಡುತ, ವ್ಯಾಪಿಸಿಕೊಂಡಿದ್ದುವು ॥೩೧॥

ಅಲ್ಲಿರುವ ಬಾಲಕರುಗಳು, ಒಂದಾವರ್ತಿ ಊಟಮಾಡಿದ ಆಹಾರವೆಲ್ಲವೂ ಜೀರ್ಣವಾದ ಬಳಿಕ, ಮತ್ತೊಂದುವೇಳೆ ತಿನ್ನುವುದಕ್ಕೋಸ್ಕರ ಹೆಪ್ಪುಹಾಕಿದ ಹಾಲಿನ ಕೆನೆಯನ್ನು ಕೈಯಲ್ಲಿ ಹಿಡಿದುಕೊಂಡು, ಎತ್ತರವಾದ ತಾಳೆಗಿಡಗಳಲ್ಲಿ ಕುಳಿತಿರುವ ಕಾಗೆಗಳನ್ನು ನೋಡಿದಕೂಡಲೇ ಭಯಪಟ್ಟು, ಅವುಗಳನ್ನು ಹಾಗೆಯೇ ಮುಚ್ಚಿಕೊಳ್ಳುತಿದ್ದರು ॥

ಅಲ್ಲಿದ್ದ ಹಳ್ಳಿಯ ಹುಡುಗರೆಲ್ಲರೂ, ಹೂವುಗಳನ್ನು ಶಿರೋಭೂಷಣವಾಗಿಯೂ ವಸ್ತ್ರವಾಗಿಯೂ ಮಾಡಿಕೊಂಡಿದ್ದರು. ಅಲ್ಲಿ, ಖರ್ಜೂರ ಬೇವು ನಿಂಬೆ ಮೊದಲಾದ ತೋಪುಗಳ ಸಮೀಪವೆಲ್ಲ ತಣ್ಣಗಿದ್ದಿತು ॥೩೩॥

ಕ್ಷೌಮಾಗ್ರಹಸ್ತಾಮ್ಬರಯಾ ಮಞ್ಜರೀಪೂರ್ಣಕರ್ಣಯಾ |
ಕ್ಷುತ್ಕ್ಷೀಣಯಾಕ್ರಾನ್ತರಥ್ಯಂ ಗ್ರಾಮಕೀಟಕಕಾನ್ತಯಾ ||೨೪||
ಸರಿತ್ತರಙ್ಗಸಙ್ಘಟ್ಟಸಂರಾವಾಶ್ರುತಸತ್ಕಥಮ್ |
ಕರ್ಮಜಾಡ್ಯಘನತ್ರಾಸವಾಞ್ಛೈಕಾನ್ತಸಂಸ್ಥಿತಿಮ್ ||೨೫||
ದಧಿಲಿಪ್ತಾಸ್ಯಹಸ್ತಾಂಸೈಃ ಸ್ನಿಗ್ಧಪುಷ್ಪಲತಾಧರೈಃ|
ನಗ್ನೈರ್ಗೋಮಯಪಙ್ಕಾಙ್ಕೈಃ ಬಾಲೈರಾಕುಲಚತ್ವರಮ್ ||೨೬||
ತೀರಶಾದ್ವಲವಲ್ಲೀನಾಂ ಡೋಲಾನ್ದೋಳನಕಾರಿಭಿಃ |
ತರಙ್ಗೈರ್ವಾಹ್ಯಮಾನಸ್ಯ ಲೇಖಿಕಾಙ್ಕಿತಸೈಕತಮ್ ||೨೭||
ದಧಿಕ್ಷೀರಘನಾಮೋದಮತ್ತಮನ್ಥರಮಕ್ಷಿಕಮ್ |
ಕಾಮಭುಕ್ತಾರ್ಥತೋದ್ಬಾಷ್ಪಜರ್ಜರಾಬಲಬಾಲಕಮ್ ||೨೮||
ಗೋಮಯಾಸಿಕ್ತವಲಯಕರನಾರೀಕೃತಕ್ರುಧಮ್ |
ಧಮ್ಮಿಲ್ಲವಲನಾವ್ಯಗ್ರತ್ರಸ್ತಸ್ತ್ರೀವಿಹಸಜ್ಜನಮ್ ||೨೯||

ಆ ಗ್ರಾಮದಲ್ಲಿನ ಕೀಟಗಳಂತೆ ತುಂಬಿರುವ ದರಿದ್ರರ ಸ್ತ್ರೀಯರು, ಆಗಸೆಗಿಡದ ತುದಿಯ ನಾರುಗಳನ್ನು ಬಟ್ಟೆಯಂತೆ ಮಾಡಿ ಕೈಯಲ್ಲಿ ಹಿಡಿದುಕೊಂಡು, ಹೂವುಗೊಂಚಲುಗಳನ್ನು ಕಿವಿಯಮೇಲಿಟ್ಟುಕೊಂಡು, ಹಸಿವಿನಿಂದ ಬಳಲಿದವರಾಗಿ, ಚತುಷ್ಪಥಗಳನ್ನು ತುಂಬಿಕೊಂಡಿದ್ದರು ॥೨೪॥

ಅಲ್ಲಿ ನದಿಯ ತರಂಗಗಳು ಒಂದಕ್ಕೊಂದು ಹೊಡೆದಾಡುತಿರುವುದರಿಂದ, ಆ ಧ್ವನಿಯಲ್ಲಿ ಇತರರ ಪರಸ್ಪರ ಸಲ್ಲಾಪವೊಂದೂ ಕೇಳುತಿರಲಿಲ್ಲ. ಕರ್ಮಮಾಡುವುದರಲ್ಲಿ ಅಶಕ್ತರಾದವರು, ಆ ಆಲಸ್ಯದಿಂದ ಹೆಚ್ಚಾಗಿ ಹೆದರಿ, ನಿರ್ಜನಪ್ರದೇಶದಲ್ಲಿ ವಾಸವನ್ನು ಬಯಸುತಿದ್ದರು ॥೨೫॥

ಅಲ್ಲಿನ ಚತುಷ್ಪಥಗಳಲ್ಲೆಲ್ಲ, ಮೊಖ ಕೈಯಿ ಹೆಗಲು—ಇವುಗಳಲ್ಲಿ ಮೊಸರುಬೊಳಿದುಕೊಂಡು—ಸುಂದರವಾದ ಪುಷ್ಪಗಳನ್ನೂ ಲತೆಗಳನ್ನೂ ಧರಿಸಿಕೊಂಡು—ವಸ್ತ್ರವಿಲ್ಲದೆ—ಮೈಯೆಲ್ಲ ಸಗಣಿಯಾಗಿರುವ ಬಾಲಕರು, ತುಂಬಿಕೊಂಡಿದ್ದರು ॥೨೬॥

ಅಲ್ಲಿ, ನದೀತೀರದಲ್ಲಿರುವ ಹಸುರುಭೂಮಿಗಳಮೇಲೆ ಬೆಳೆದಿರುವ ಲತೆಗಳಿಗೆ—ಡೋಲೆಯಂತೆ ಆಂದೋಳನವುಂಟುಮಾಡುತ್ತಿರುವ ತರಂಗಗಳು ನೀರನ್ನು ಮೇಲಕ್ಕೆ ಹೊತ್ತುಕೊಂಡು ಬಂದು ಇಳಿದುಹೋದಾಗ, ಆ ಮಳಲುಗುಡ್ಡೆಯೆಲ್ಲವೂ ಗೆರೆಗೆರೆಯಾಗುತಿದ್ದಿತು ॥

ಹಾಲು ಮೊಸರುಗಳ ಸಾಂದ್ರವಾದ ಪರಿಮಳದಿಂದ, ನೊಣಗಳು ಮತ್ತವಾಗಿ ಮೆತ್ತಗೆ ಸಂಚರಿಸುತಿದ್ದುವು; ಆ ಹಾಲು ಮೊಸರುಗಳನ್ನು ಯಥೇಚ್ಛವಾಗಿ ಭಕ್ಷಿಸುವುದಕ್ಕೋಸ್ಕರ, ಅಶಕ್ತರಾದ ಬಾಲಕರುಗಳು, ಕಣ್ಣೀರುಸುರಿಸುತ ತಲ್ಲಣಿಸುತಿದ್ದರು ॥೨೮॥

ಕೆಲವು ಸ್ತ್ರೀಯರು, ತಮ್ಮ ಕೈಬಳೆಯಮೇಲೆ ಸಗಣಿಯನ್ನು ಬೊಳಿದ ಇತರ ಸ್ತ್ರೀಯರಮೇಲೆ ಕೋಪಿಸಿಕೊಳ್ಳುತಿದ್ದರು ; ಮತ್ತೆ ಕೆಲವು ಸ್ತ್ರೀಯರು ತಮ್ಮ ಜುಟ್ಟುಗಂಟನ್ನು ಕಟ್ಟುವುದರಲ್ಲಾಸಕ್ತರಾಗಿಯೂ ಅಷ್ಟರಲ್ಲಿಯೇ ಹೆದರುತಲೂ ಇರುವುದನ್ನು ಕಂಡು, ಅಲ್ಲಿನ ಜನರು ಪರಿಹಾಸಮಾಡುತಿದ್ದರು ॥೨೯॥

ದಾನ್ತಪುಷ್ಪಚ್ಛದೋತ್ಸನ್ನಪತತ್ಕಕುದವಾಯಸಮ್ |
ಗೃಹರಥ್ಯಾಗಣದ್ವಾರಕೀರ್ಣಕ್ರೂರಕುರಣ್ಟಕಮ್ ||೪೦||
ಗೃಹಪಾರ್ಶ್ವಸ್ಥಿತಶ್ವಭ್ರಕುಞ್ಜೈಃ ಕುಸುಮಿತದ್ರುಮೈಃ |
ಪ್ರತ್ಯಹಂ ಪ್ರಾತರಾಗುಲ್ಫಂ ಆಕೀರ್ಣಕುಸುಮಾಜಿರಮ್ ||೪೧||
ಚರಚ್ಚಮರಸಾರಙ್ಗಜಾಲಜಙ್ಗಲಖಣ್ಡಕಮ್ |
ಗುಞ್ಜಾನಿಕುಞ್ಜಸಞ್ಜಾತಶಷ್ಪಸುಪ್ತಮೃಗಾರ್ಭಕಮ್ ||೪೨||
ಏಕಾನ್ತಸುಪ್ತವತ್ಸೈಕಕರ್ಣಸ್ಪನ್ದಾಸ್ತಮಕ್ಷಿಕಮ್ |
ಗೋಪೋಚ್ಛಿಷ್ಟೀಕೃತದಧಿಸ್ವಸೃಕ್ವಿಸ್ಪನ್ದಿಮಕ್ಷಿಕಮ್ ||೪೩||
ಸಮಸ್ತಸದ್ಮಸಂಕ್ಷೀಣಮಕ್ಷಿಕಾಕ್ಷಿಪ್ತಮಾಕ್ಷಿಕಮ್ |
ಫುಲ್ಲಾಶೋಕದ್ರುಮೋದ್ಯಾನಕೃತಲಾಕ್ಷಿಕಮನ್ದಿರಮ್ ||೪೪||
ಶೀಕರಾಸಾರಮರುತಾ ನಿತ್ಯಾರ್ದ್ರವಿಕಚದ್ರುಮಮ್ |
ಕದಮ್ಬಮುಕುಳಪ್ರೋತಸಮಸ್ತಚ್ಛಾದನತೃಣಮ್ ||೪೫||

ಆ ಗಿರಿಶಿಖರದಲ್ಲಿದ್ದ ಕಾಗೆಗಳು, ಆ ಗ್ರಾಮದಲ್ಲಿ ಬಲಿಯನ್ನು ತಿನ್ನುವುದಕ್ಕೋಸ್ಕರ ಬರುತಿರಲಾಗಿ, ಅವು ಮುಟ್ಟುವುವೆಂಬ ಭಯದಿಂದ, ಅಲ್ಲಿದ್ದ ಉಪಶಾಂತರಾದವರು, ಅವುಗಳನ್ನು ಹೂವುಗಳಿಂದಲೂ ಎಲೆಗಳಿಂದಲೂ ಅಟ್ಟುತಿದ್ದರು. ಪ್ರತಿಮನೆಯ ಅಂಗಳದ ಬಾಗಿಲಿನಲ್ಲಿಯೂ ಮುಳ್ಳುಮುಳ್ಳಾಗಿರುವ ಗೋರಂಟಿಗಿಡಗಳು ಬೆಳೆದು ವ್ಯಾಪಿಸಿಕೊಂಡಿದ್ದುವು ||೪೦||

ಮತ್ತು ಪ್ರತಿಮನೆಯ ಮೊಗ್ಗುಲಿನಲ್ಲಿಯೂ ಇರುವ ಪಾತಿಗಳಲ್ಲಿ ಪೊದೆಪೊದೆಯಾಗಿ ಬೆಳೆದಿರುವ ಅನೇಕ ಪುಷ್ಪವೃಕ್ಷಗಳಲ್ಲಿ, ಪ್ರತಿದಿನವೂ ಪ್ರಾತಃಕಾಲ ಹೂವು ಅರಳುವುದರಿಂದ, ಈ ಹೂವುಗಳು ಆ ಮನೆಗಳ ಅಂಗಳಗಳಲ್ಲಿ ಹೆಜ್ಜೆಮುಳುಗುವಷ್ಟು ಸುರಿದಿದ್ದುವು ||

ಆ ಗ್ರಾಮದ ಸಣ್ಣಸಣ್ಣ ಹುಲ್ಲುಗಾವಲುಗಳಲ್ಲಿ, ಚಮರಮೃಗಗಳೂ ಜಿಂಕೆಗಳೂ ಗುಂಪುಗುಂಪಾಗಿ ಸಂಚರಿಸುತಿದ್ದುವು; ಗುಲಗಂಜಿಯ ಮೆಳೆಯೊಳಗೆ ಹುಟ್ಟಿರುವ ಗರಿಕೆಯಮೇಲೆ ಜಿಂಕೆಮರಿಗಳು ಮಲಗಿದ್ದುವು ||೪೨||

ಅಲ್ಲಿ ವಿಜನವಾದ ಕಡೆಯಲ್ಲಿ ಮಲಗಿರುವ ಕರುಗಳ ಒಂದು ಕಿವಿಯಮೇಲೆ ನೊಣಗಳು ಕುಳಿತುಕೊಳ್ಳುತಲೂ, ಅವುಗಳನ್ನು—ಆ ಕರುಗಳು ಕಿವಿಯನ್ನು ಅಳ್ಳಾಡಿಸಿ ಹಾರಿಸುತಲೂ ಇದ್ದುವು; ಮತ್ತು, ಗೋಪಾಲಕರು ಮೊಸರುಕುಡಿದು ಅವರ ಕಟವಾಯಿಗಳಲ್ಲಿ ಆ ಮೊಸರಿನ ಶೇಷವು ಅಂಟಿಕೊಂಡಿರುವುದರಿಂದ, ಅದರಮೇಲೆ ನೊಣಗಳು ಮುತ್ತುತಿದ್ದುವು||

ಅಲ್ಲಿ, ಜೇನುಹುಳುಗಳು ಗೂಡುಕಟ್ಟಿಕೊಂಡು, ಆ ಗೂಡಿನ ಪ್ರತಿಯೊಂದು ಮನೆಯಲ್ಲಿಯೂ ಸ್ವಲ್ಪವೂ ನಿಲ್ಲದಂತೆ ಜೇನುತುಪ್ಪವನ್ನು ಸೆಳೆದುಕೊಂಡುಬಿಡುತಿದ್ದುವು; ಮತ್ತು, ವಿಕಸಿತವಾದ ಅಶೋಕವೃಕ್ಷಗಳ ಉದ್ಯಾನದಲ್ಲಿ, ಅರಗುಹುಳುಗಳು ಗೂಡುಕಟ್ಟಿದ್ದುವು ||

ಅಲ್ಲಿ, ವೃಕ್ಷಗಳೆಲ್ಲವೂ ಅರಳಿ, ಅವುಗಳಮೇಲೆ ಗಾಳಿಯು ತುಂತುರುಗಳನ್ನು ವರ್ಷಿಸುವುದರಿಂದ, ಆ ವೃಕ್ಷಗಳು ನಿತ್ಯವೂ ತಂಪಾಗಿದ್ದುವು. ಮತ್ತು, ಮನೆಗಳಮೇಲೆ ಹುಲ್ಲು ಹೊದ್ದಿಸಿದ್ದರು; ಆ ಹುಲ್ಲಿನ ಮಧ್ಯಮಧ್ಯದಲ್ಲಿ ಕದಂಬ ಪುಷ್ಪಗಳ ಮೊಗ್ಗುಗಳು ದಟ್ಟವಾಗಿ ತುಂಬಿದ್ದುವು ||೪೫||

ಪ್ರತಿಕೃತ್ತಲತಾಫುಲ್ಲಕೇತಕೋತ್ಕರಪಾಣ್ಡುರಮ್ ।
ವಹತ್ಪ್ರಣಾಳಪಟಲೀರಣದ್ಗುರುಗುರಾರವಮ್ ॥೪೬॥
ವಾತಾಯನಗುಹಾನಿರ್ಯತ್ಸೌಧವಿಶ್ರಾನ್ತವಾರಿದಮ್ ।
ಪೂರ್ಣಪುಷ್ಕರಿಣೀಪಙ್ಕ್ತಿಪೂರ್ಣರಾಜಪ್ರಥೋತ್ತರಮ್ ॥೪೭॥
ನೀರನ್ಧ್ರವಿಟಪಿಚ್ಛಾಯಾಶೀತಲಾಮಲಶಾದ್ವಲಮ್ ।
ಸರ್ವಶಷ್ಪಾಗ್ರವಾರ್ಬಿನ್ದುಪ್ರತಿಬಿಮ್ಬಿತತಾರಕಮ್ ॥೪೮॥
ಅನಾರತಪತತ್ಫುಲ್ಲಹಿಮವರ್ಷಸಿತಾಲಯಮ್ ।
ವಿಚಿತ್ರಮಞ್ಜರೀಪುಷ್ಪಪತ್ರಸತ್ಫಲಪಾದಪಮ್ ॥೪೯॥
ಗೃಹಕಕ್ಷ್ಯಾನ್ತರಾಲೀನಮೇಘಸುಪ್ತಚಿರಣ್ಟಿಕಮ್ ।
ಸೌಧಸ್ಥಮೇಘವಿದ್ಯುದ್ಭಿಃ ಅನಾದೇಯಪ್ರದೀಪಕಮ್ ॥೫೦॥
ಕನ್ದರಾನಿಲಭಾಙ್ಕಾರಘನಘುಙ್ಘುಮಮಣ್ಟಪಮ್ ।
ಚರಚ್ಚಕೋರಹಾರೀತಹರಿಣೀಹಾರಿಮನ್ದಿರಮ್ ॥೫೧॥

ಅಲ್ಲಿನ ಉದ್ಯಾನಗಳಲ್ಲಿ, ತಾಳೆಗಿಡಗಳು ಹುಟ್ಟಿದ್ದುವು; ಅವುಗಳೊಳಗೆ ಗಿಡದ ಬೆಳೆವಳಿಗೆಗೆ ವಿಘ್ನವಾಗಿದ್ದ ಕೆಲವು ಸಣ್ಣಸಣ್ಣ ಸೊಸಿಗಳನ್ನು ಕತ್ತರಿಸಿಹಾಕುತಿದ್ದುದರಿಂದ, ಮಿಕ್ಕ ಗಿಡಗಳು ಚೆನ್ನಾಗಿ ಹೂವುಬಿಟ್ಟು ಬೆಳ್ಳಗಿದ್ದುವು. ಅಲ್ಲಿ ಸಣ್ಣಸಣ್ಣ ಕಾಲುವೆಗಳಂತೆ ಹರಿಯುವ ನೀರಿನ ಒಚ್ಚಲುಗಳಲ್ಲಿ, ಗುರಗುರ ಎಂದು ಶಬ್ದವಾಗುತಿದ್ದಿತು ॥೪೬॥

ಆ ಗ್ರಾಮದಲ್ಲಿ, ಮೇಘಗಳು ಉಪ್ಪರಿಗೆಯೊಳಗೆ ವಿಶ್ರಮಿಸಿಕೊಂಡಿದ್ದು, ಮನೆಗಳ ಕಿಟಕಿಗಳ ದ್ವಾರದಿಂದ ಹೊರಕ್ಕೆ ಹೊರಡುತಿದ್ದುವು. ಅಲ್ಲಿರುವ ಜಲಪರಿಪೂರ್ಣವಾದ ಕಮಲಸರಸ್ಸುಗಳಲ್ಲಿ ಪೂರ್ಣಚಂದ್ರನಂತೆ ಪ್ರಕಾಶಿಸುವ ಕಮಲಪುಷ್ಪಗಳು ತುಂಬಿರುವುದರಿಂದ, ಆ ಗ್ರಾಮವು ಅತಿಪ್ರಶಸ್ತವಾಗಿದ್ದಿತು ॥೪೭॥

ಅಲ್ಲಿನ ನಿರ್ಮಲವಾದ ಹಸುರುಭೂಮಿಗಳು, ಸಾಂದ್ರವಾದ ವೃಕ್ಷಚ್ಛಾಯೆಯಿಂದ ತಣ್ಣಗಿದ್ದುವು; ಸಮಸ್ತವಾದ ಗರಿಕೆಗಳ ತುದಿಗಳಲ್ಲಿಯೂ ನೀರುಹನಿಗಳು ಅಂಟಿಕೊಂಡು, ಅವುಗಳು ನಕ್ಷತ್ರಪ್ರತಿಬಿಂಬಗಳಂತಿದ್ದುವು ॥೪೮॥

ಅಲ್ಲಿ, ಮನೆಗಳಮೇಲೆಲ್ಲ ನಿರಂತರವಾಗಿ ವಿಶದವಾದ ಹಿಮವೃಷ್ಟಿ ಸುರಿಯುವುದರಿಂದ, ಆ ಮನೆಗಳೆಲ್ಲವೂ ಶುಭ್ರವಾಗಿದ್ದುವು. ಅಲ್ಲಿರುವ ವೃಕ್ಷಗಳೆಲ್ಲವೂ, ವಿಚಿತ್ರವಾದ ಗೊಂಚಲು ಹೂವು ಎಲೆ ಹಣ್ಣು—ಇವುಗಳುಳ್ಳವುಗಳಾಗಿದ್ದುವು ॥೪೯॥

ಅಲ್ಲಿ, ಮನೆಯೊಳಗಿನ ತೊಟ್ಟಿಗಳಲ್ಲಿ ಅಡಗಿರುವ ಮೇಘಗಳೊಳಗೆ, ಸುವಾಸಿನಿಯರು ಮಲಗಿರುತಿದ್ದರು; ಆ ಉಪ್ಪರಿಗೆಗಳೊಳಗಿರುವ ಮೇಘಗಳಲ್ಲಿ ಮಿಂಚುಗಳು ಸರ್ವದಾ ಹೊಳೆಯುತಿರುವುದರಿಂದ, ದೀಪವನ್ನು ತೆಗೆದುಕೊಳ್ಳುವುದೇ ಅನಾವಶ್ಯಕವಾಗಿದ್ದಿತು॥೫೦॥

ಆ ಪರ್ವತದ ಗುಹೆಗಳಿಂದ ಹೊರಟ ಗಾಳಿಯು—ಈ ಗ್ರಾಮದ ಮನೆಗಳ ಮಂಟಪಗಳೊಳಗೆ ನುಗ್ಗುತಿರುವಕಾರಣ, ಆದರ ಭಾಂಕಾರದಿಂದ ಆ ಮಂಟಪಗಳೆಲ್ಲವೂ ಮೇಘದಂತೆ ಘುಮಘುಮ ಧ್ವನಿಯುಕ್ತಗಳಾಗಿದ್ದುವು. ಮತ್ತು, ಚಕೋರ ಹಾರೀತ ಪಕ್ಷಿಗಳೂ ಜಿಂಕೆಗಳೂ ಸಂಚರಿಸುತಿರುವುದರಿಂದ, ಅಲ್ಲಿನ ಮನೆಗಳೆಲ್ಲವೂ ಸುಂದರವಾಗಿದ್ದುವು॥೫೧॥

ಉನ್ನಿದ್ರಕನ್ದಳೋದ್ಧ್ವಾನ್ತಮಾಂಸಲಾಮೋದಮನ್ಥರೈಃ |
ಮರುದ್ಭಿರ್ಮನ್ದಮಾಯಾತುಂ ಆರಬ್ಧೈರ್ಲೋಲಪಲ್ಲವಮ್ ||೫೨||
ಲಾವಕಾಲಾಪಲೀಲಾಯಾಂ ಆಲೀನಲಲನಾಗಣಮ್ |
ಕೋಕಕೋಕಿಲಕಾಕೋಲಕೋಲಾಹಲಸಮಾಕುಲಮ್ ||೫೩||
ಸಾಲತಾಲತಮಾಲಾಬ್ಜನೀಲತತ್ಫಲಮಾಲಿನಮ್ |
ವಲ್ಲೀವಲಯವಿನ್ಯಾಸವಿಲಾಸವಲಿತದ್ರುಮಮ್ ||೫೪||
ಆಲೋಲಪಲ್ಲವಲತಾವಲಿತಾಯನಾನಾಂ
ಉತ್ಫುಲ್ಲಕನ್ದಳಶಿಲೀನ್ಧ್ರಸುಗನ್ಧಿತಾನಾಮ್ |
ತಾಳೀತಮಾಲದಳತಾಣ್ಡವಮಣ್ಡಪಾನಾಂ
ಆರಾಮಫುಲ್ಲಕುಸುಮದ್ರುಮಶೀತಲಾನಾಮ್ ||೫೫||
ಸಾರಾವವಾರಿಚಲನಾಕುಲಗೋಕುಲಾನಾಂ
ಆನೀಲಸಸ್ಯಕುಸುಮಸ್ಥಲಶೋಭಿತಾನಾಮ್ |

ಅಲ್ಲಲ್ಲಿ ಅರಳಿರುವ ಭೂಕಂದಳೀಪುಷ್ಪ (ನಾಯಿಕೊಡೆ) ಗಳಿಂದ ಹೊರಟ ಅಧಿಕವಾದ ಪರಿಮಳದಿಂದ ಪರಿಪೂರ್ಣಗಳಾಗಿಯೂ ಮಂದಗಮನವನ್ನು ಪಕ್ರಮಿಸಿದುವುಗಳಾಗಿಯೂ ಇರುವ ವಾಯುಗಳು, ಮರದ ಚಿಗುರುಗಳನ್ನು ಅಳ್ಳಾಡಿಸುತ್ತಿದ್ದುವು ॥೫೨॥

ಆ ಗ್ರಾಮದ ಸ್ತ್ರೀಸಮೂಹಗಳೆಲ್ಲವೂ, ಲಾವಕ ಮುಂತಾದ ಪಕ್ಷಿಗಳ ಮಾತುಗಳನ್ನು ಕೇಳುವುದರಲ್ಲಿ ನಿರತವಾಗಿದ್ದುವು; ಮತ್ತು, ಚಕ್ರವಾಕ ಕೋಗಿಲೆ ಕಾಕೋಲ (ಕಾಕಭೇದ)—ಇತ್ಯಾದಿ ಪಕ್ಷಿಗಳ ಕಲಕಲಧ್ವನಿಯು ಅಲ್ಲಿ ಪರಿಪೂರ್ಣವಾಗಿದ್ದಿತು ॥೫೩॥

ಅಲ್ಲಲ್ಲಿ ಸಾಲ ತಾಳ ತಮಾಲ (ಹೊಂಗೆ) ಮುಂತಾದ ವೃಕ್ಷಗಳೂ ಕಮಲಲತೆಗಳೂ ಹುಟ್ಟಿರುವುದರಿಂದ— ಆ ಗ್ರಾಮವು ಆ ಪ್ರದೇಶಗಳಲ್ಲಿ ಕಪ್ಪಾಗಿಯೂ ಆ ವೃಕ್ಷಗಳ ಫಲಪಂಕ್ತಿಯಿಂದ ಭರಿತವಾಗಿಯೂ ಇದ್ದಿತು; ಮತ್ತು ಅಲ್ಲಿನ ಮರಗಳನ್ನು ಲತೆಗಳು ಸೊಗಸಾಗಿ ಸುತ್ತಿಕೊಂಡಿದ್ದುವು, ಇಂತಹ ಗಿರಿಗ್ರಾಮವನ್ನು ಆ ಲೀಲಾಸರಸ್ವತಿಯರು ನೋಡಿದರು ॥೫೪॥

ಅಯ್ಯಾ! ರಾಮ! ಮುಖ್ಯವಾಗಿ ಆ ಗ್ರಾಮದ ಮನೆಗಳನ್ನು ವರ್ಣಿಸುವುದೂ ಅಸಾಧ್ಯವಾಗಿದೆ. ಅವು ಹೇಗಿದ್ದುವೆಂದರೆ:—ಆ ಮನೆಗಳ ಹೊರಭಾಗದಲ್ಲಿರುವ ಸಣ್ಣ ಸಣ್ಣ ದಾರಿಗಳಲ್ಲೆಲ್ಲ, ಸುಂದರವಾದ ಲತೆಗಳು ಚಂಚಲವಾದ ಚಿಗುರುಗಳನ್ನು ಧರಿಸಿ ಸುತ್ತಿಕೊಂಡಿದ್ದುವು; ಭೂಕಂದಳಿಗಳು ಚಿಗುರುಬಿಟ್ಟು ಅವುಗಳ ಸುವಾಸನೆಯಿಂದ ಆ ಮನೆಗಳೆಲ್ಲ ಪರಿಮಳವಾಗಿದ್ದುವು. ತಾಳತಮಾಲಪತ್ರಗಳಿಂದ ಅಲ್ಲಲ್ಲಿ ವಿಲಾಸಗೃಹಗಳನ್ನು ಏರ್ಪಡಿಸಿದ್ದರು; ಉದ್ಯಾನವನಗಳಲ್ಲಿನ ಪುಷ್ಪವೃಕ್ಷಗಳು ಚಿಗುರುವುದರಿಂದ, ಆ ಮನೆಗಳೆಲ್ಲವೂ ತಣ್ಣಗಿದ್ದುವು ॥೫೫॥

ಆ ಮನೆಗಳಲ್ಲಿರುವ ಗೋಸಮೂಹಗಳು, ಅಲ್ಲಲ್ಲಿರುವ ಕೈಗಾವಲೆಗಳ ನೀರನ್ನು ದಾಟುತ ಹುಂಕಾರಧ್ವನಿಮಾಡುತ್ತಿದ್ದುವು; ಕಪ್ಪಾದ ಪೈರುಗಳೂ ಹೂವುಗಳೂ ಉಳ್ಳ ಪ್ರದೇಶಗಳಿಂದ, ಆ ಮನೆಗಳು ಅಲಂಕೃತವಾಗಿದ್ದುವು; ಮನೆಗಳ ಹಿಂಭಾಗದಲ್ಲಿ ಹರಿಯುವ

ತೀರದ್ರುಮಪ್ರಕರಗುಪ್ತಸರಿದ್ರಯಾಣಾಂ
ನೀರನ್ಧ್ರಪುಷ್ಪಿತಲತಾಗ್ರವಿತಾನಕಾನಾಮ್ ॥೫೬॥
ಉದ್ಯಾನಕುನ್ದಮಕರನ್ದಸುಗನ್ಧಿತಾನಾಂ
ಗನ್ಧಾನ್ಧಷಟ್ಪದಕುಲಾನ್ತರಿತಾಮ್ಬುಜಾನಾಮ್ ।
ಸೌನ್ದರ್ಯತರ್ಜಿತಪುರನ್ದರಮನ್ದಿರಾಣಾಂ
ರಾಜೀವರಾಜಿರಜಸಾರುಣಿತಾಮ್ಬರಾಣಾಮ್ ॥೫೭॥
ರಂಹೋವಹದ್ಗಿರಿನದೀರವಘುರ್ಘುರಾಣಾಂ
ಕುನ್ದಾವದಾತಜಲದದ್ಯುತಿಭಾಸುರಾಣಾಮ್ ।
ಸೌಧಸ್ಥಿತೋಲ್ಲಸಿತಫುಲ್ಲಲತಾಲಯಾನಾಂ
ಲೀಲಾಪಲೋಲಕಲಕಣ್ಠವಿಹಙ್ಗಮಾನಾಮ್ ॥೫೮॥
ಉಲ್ಲಾಸಿಕೌಸುಮದಳಾಸ್ತರಣಸ್ಥಯೂನಾಂ
ಆಪಾದಮಾವಲಿತಮಾಲ್ಯವಿಲಾಸಿನೀನಾಮ್ ।
ಸರ್ವತ್ರ ಸುನ್ದರನವಾಙ್ಕುರದನ್ತುರಾಣಾಂ
ಶೋಭೋಲ್ಲಸದ್ವರಲತಾಕುಲಮಾರ್ಗಣಾನಾಮ್ ॥೫೯॥
ಸಞ್ಜಾತಕೋಮಲಲತೋತ್ಪಲಸಙ್ಕುಲಾನಾಂ
ತಿಷ್ಠತ್ಪಯೋದಪಟಸಂವಲಿತಾಲಯಾನಾಮ್ ।

ನದಿಯ ಪ್ರವಾಹವನ್ನು, ತೀರದಲ್ಲಿರುವ ಮರಗಳು ಮರೆಮಾಡಿಕೊಂಡಿದ್ದುವು ; ಸಾಂದ್ರವಾಗಿ ಹೂವುಬಿಟ್ಟಿರುವ ಲತಾಗ್ರಗಳೇ ಆ ಮನೆಗಳ ಅಂಗಳಗಳಲ್ಲಿ ಮೇಲುಕಟ್ಟಾಗಿದ್ದುವು॥

ಉದ್ಯಾನಗಳಲ್ಲಿರುವ ಕುಂದಪುಷ್ಪಗಳ ಮಕರಂದದಿಂದ ಆ ಮನೆಗಳೆಲ್ಲವೂ ಪರಿಮಳವಿಶಿಷ್ಟವಾಗಿದ್ದುವು; ಅಲ್ಲಿ ಕೊಳಗಳಲ್ಲಿ ಹುಟ್ಟಿರುವ ಕಮಲಗಳನ್ನು, ಅವುಗಳ ಸುವಾಸನೆಯಿಂದ ಮುಗ್ಧಗಳಾದ ಭ್ರಮರಗಳು ಮುಚ್ಚಿಬಿಟ್ಟಿದ್ದುವು; ಆ ಕಮಲಸಮೂಹಗಳಿಂದ ಹೊರಟ ಪುಷ್ಪಧೂಳಿಯು, ಅಂತರಿಕ್ಷವನ್ನೆಲ್ಲ ಕೆಂಪಗೆ ಮಾಡುತ್ತಿದ್ದಿತು. ಆ ಮನೆಗಳ ಸೊಬಗು ಅಮರಾವತಿಯನ್ನೂ ತಿರಸ್ಕರಿಸುತಿದ್ದಿತು ॥೫೭॥

ಆ ಮನೆಗಳ ಸಮೀಪದಲ್ಲಿಯೇ ಗಿರಿನದಿಗಳು ವೇಗವಾಗಿ ಹರಿಯುತ್ತಿರುವುದರಿಂದ, ಆ ಮನೆಗಳು ಘುರ್ಘುರಧ್ವನಿಯುಕ್ತವಾಗಿದ್ದುವು; ಕುಂದಪುಷ್ಪಗಳಂತೆ ಶುಭ್ರವಾಗಿರುವ ಮೇಘಗಳ ಕಾಂತಿಗಳಿಂದ ಅವು ಪ್ರಕಾಶಿಸುತ್ತಿದ್ದುವು. ಉಪ್ಪರಿಗೆಗಳ ಮೇಲ್ಭಾಗದಲ್ಲಿಯೂ ವಿಕಸಿತವಾದ ಲತಾಗೃಹಗಳಿದ್ದುವು; ಅಲ್ಲಿ ಮಧುರಸ್ವರಯುಕ್ತವಾದ ಪಕ್ಷಿಗಳು ವಿಲಾಸದಿಂದ ಸಂಚರಿಸುತ್ತಿದ್ದುವು ॥೫೮॥

ಆ ಮನೆಗಳಲ್ಲಿ, ವಿಕಸಿತವಾದ ಪುಷ್ಪಗಳಿಂದಲೂ ಪಲ್ಲವಗಳಿಂದಲೂ ಮಾಡಲ್ಪಟ್ಟ ಆಸನದಮೇಲೆ, ಯೌವನಸ್ಥರು ಕುಳಿತುಕೊಳ್ಳುತಿದ್ದರು ; ಯುವತಿಯರು, ವಿಲಾಸಾರ್ಥವಾಗಿ ಕಾಲಿನವರೆಗೂ ಪುಷ್ಪಮಾಲಿಕೆಗಳನ್ನು ಸುತ್ತಿಕೊಳ್ಳುತಿದ್ದರು ; ಸುಂದರವಾದ ಚಿಗುರುಗಳಿಂದ ಆ ಮನೆಗಳು ಸರ್ವತ್ರ ವ್ಯಾಪ್ತವಾಗಿದ್ದುವು ; ಅತ್ಯಂತವಾಗಿ ಪ್ರಕಾಶಿಸುತಿರುವ ಲತಾಸಮೂಹಗಳೇ ಆ ಮನೆಗಳಲ್ಲಿ ಬಾಣದಂತಿದ್ದುವು ॥೫೯॥

ಆ ಮನೆಗಳ ಅಂಗಳಗಳಲ್ಲಿ, ಕೋಮಲವಾದ ಲತೆಗಳೂ ಉತ್ಪಲಗಳೂ ಸಾಂದ್ರವಾಗಿ ಹುಟ್ಟಿದ್ದುವು. ಮೇಘಗಳು ಅಲ್ಲಲ್ಲಿ ನಿಂತುಕೊಂಡು ಆ ಮನೆಗಳನ್ನು ಬಟ್ಟೆಯಂತೆ ಸುತ್ತಿಕೊಳ್ಳುತ್ತಿದ್ದುವು; ಆ ಮೇಘಗಳ ಜಲಬಿಂದು ಪರಂಪರೆಗಳು ಅಲ್ಲಿರುವ ಹಸುರು

ನೀಹಾರಹಾರಹರಿತಸ್ಥಲವಿಶ್ರುತಾನಾಂ ।
ಸೌಧಸ್ಥಮೇಘತಟಿದಾಕುಲಿತಾಙ್ಗನಾನಾಮ್ ॥೬೦॥
ನೀಲೋತ್ಪಲೋಲ್ಲಸಿತಸೌರಭಸುನ್ದರಾಣಾಂ
ಹುಙ್ಕಾರಹಾರಿಹರಿತೋನ್ಮುಖಗೋಕುಲಾನಾಮ್ ।
ವಿಸ್ರಬ್ಧಮುಗ್ಧಮೃಗಸಾರಗೃಹಾಜಿರಾಣಾಂ
ಉನ್ನೃತ್ಯಬರ್ಹಿಘನಶೀಕರನಿರ್ಝರಾಣಾಮ್ ॥೬೧॥
ಸೌಗನ್ಧ್ಯಮತ್ತಪವನಾಹತವಿಕ್ಲಬಾನಾಂ
ವಪ್ರೌಷಧಿಜ್ವಲನವಿಸ್ಮೃತದೀಪಕಾನಾಮ್ ।
ಕೋಲಾಹಲಾಕುಲಕುಲಾಯಕುಲಾಕುಲಾನಾಂ
ಕುಲ್ಯಾಕುಲಾಕಲಕಲಾಶ್ರುತಸಙ್ಕಥಾನಾಮ್ ॥೬೨॥
ಮುಕ್ತಾಫಲಪ್ರಕರಸುನ್ದರಬಿನ್ದುಪಾತ
ಶೀತಾಖಿಲದ್ರುಮಲತಾತೃಣಪಲ್ಲವಾನಾಮ್ ।
ಲಕ್ಷ್ಮೀಮನಸ್ತಮಿತಪುಷ್ಪವಿಕಾಸಭಾಜಾಂ
ಶಕ್ನೋತಿ ಕಃ ಕಲಯಿತುಂ ಗಿರಿಮನ್ದಿರಾಣಾಮ್ ॥೬೩॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಗಿರಿಗ್ರಾಮವರ್ಣನಂ
ನಾಮ ಅಷ್ಟಾವಿಂಶಃ ಸರ್ಗಃ.

ಭೂಮಿಗಳಮೇಲೆ ಬಿದ್ದು, ಅವಕ್ಕೆ ಪ್ರಸಿದ್ಧಿಯುಂಟುಮಾಡಿದ್ದುವು; ಇದಲ್ಲದೆ, ಉಪ್ಪರಿಗೆಗಳಲ್ಲಿ ಮೇಘಗಳ ಮಿಂಚುಗಳು ಹೊಳೆಯುತ್ತಿರುವುದರಿಂದ, ಅಲ್ಲಿನ ಸ್ತ್ರೀಯರು ಗಾಬರಿಯಾಗುತಿದ್ದರು ॥೬೦॥

ಅಂಗಳಗಳಲ್ಲಿ ಹುಟ್ಟಿರುವ ನೀಲೋತ್ಪಲಪುಷ್ಪಗಳಿಂದ ಹೊರಟ ಪರಿಮಳವು, ಆ ಮನೆಗಳನ್ನು ಮನೋಹರಮಾಡುತಿದ್ದಿತು. ಹುಲ್ಲುಗಾವಲುಕಡೆಗೆ ಹೋಗುತಿರುವ ಗೋಸಮೂಹಗಳು, ಹುಂಕಾರಧ್ವನಿಮಾಡುತ ಮನೋಹರವಾಗಿದ್ದುವು. ಆ ಮನೆಗಳ ಅಂಗಳಗಳಲ್ಲಿ, ಜಿಂಕೆಯುಮರಿಗಳು ನಿಶ್ಶಂಕವಾಗಿ ಸಂಚಾರಮಾಡುತಿದ್ದುವು. ಅಲ್ಲಿನ ಗಿರಿನದೀಪ್ರವಾಹಗಳಲ್ಲಿ ಹೆಚ್ಚಾಗಿ ತುಂತುರುಗಳು ಹಾರುತಿರುವುದರಿಂದ, ಅವುಗಳ ದಡದಲ್ಲಿ ನವಿಲುಗಳು ಮನೋಹರವಾಗಿ ನರ್ತನಮಾಡುತಿದ್ದವು ॥೬೧॥

ಪರಿಮಳದಿಂದ ಮತ್ತವಾಗಿರುವ ವಾಯುವು, ಅಲ್ಲಿನ ಜನಗಳಿಗೆ ಆಯಾಸಪರಿಹಾರಮಾಡುತಿದ್ದಿತು. ಕೋಟೆಯಮೇಲೆ ಬೆಳೆದಿರುವ ಜ್ಯೋತಿರ್ಲತೆಗಳು ಉರಿಯುವುದರಿಂದ, ಆ ಮನೆಗಳ ಜನರು ದೀಪವನ್ನು ಸುತರಾಂ ಮರೆತುಬಿಟ್ಟಿದ್ದರು. ಅಲ್ಲಿ ಅನೇಕವಾದ ಹಕ್ಕಿಯುಗೂಡುಗಳು, ಕಲಕಲಧ್ವನಿಭರಿತವಾಗಿ ವ್ಯಾಪಿಸಿಕೊಂಡಿದ್ದುವು. ಸಣ್ಣಸಣ್ಣ ಕೈಗಾಲುವೆಗಳು ಸುತ್ತಲೂ ಕೋಲಾಹಲಧ್ವನಿಮಾಡುತಿರುವುದರಿಂದ, ಒಬ್ಬರಮಾತೊಬ್ಬರಿಗೆ ಕೇಳಿಸಲಾರದಂತಿದ್ದಿತು ॥೬೨॥

ಆ ಮನೆಗಳ ಉದ್ಯಾನಗಳಲ್ಲಿ, ಮುಕ್ತಾಸರದಂತೆ ಸುಂದರವಾದ ಜಲಬಿಂದುಗಳು ಬೀಳುತಿರುವುದರಿಂದ, ಅಲ್ಲಿನ ವೃಕ್ಷಲತಾತೃಣಪಲ್ಲವಗಳೆಲ್ಲವೂ ತಣ್ಣಗಿದ್ದುವು; ಅಲ್ಲಿ ಹೂವುಗಳು ಸರ್ವದಾ ವಿಕಸಿತಗಳಾಗಿಯೇಇದ್ದುವು. ಇಂತಹ ಗಿರಿಗ್ರಾಮದ ಮನೆಗಳ ಸೊಬಗನ್ನು ವರ್ಣಿಸಲು ಯಾವನು ಸಮರ್ಥನಾದಾನು? ॥೬೩॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಗಿರಿಗ್ರಾಮವರ್ಣನವೆಂಬ
ಇಪ್ಪತ್ತೆಂಟನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕೋನವಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ತತ್ರ ತೇ ಪೇತತುರ್ದೇವ್ಯೌ ಗ್ರಾಮೇಽನ್ತಶ್ಶೀತಲಾತ್ಮನಿ ।
ಭೋಗಮೋಕ್ಷಶ್ರಿಯೌ ಶಾನ್ತೇ ಪುಂಸೀವ ವಿದಿತಾತ್ಮನಿ ॥೧॥
ಕಾಲೇನೈತಾವತಾ ಲೀಲಾ ತೇನಾಭ್ಯಾಸೇನ ಸಾಭವತ್ ।
ಶುದ್ಧಜ್ಞಾನೈಕದೇಹತ್ವಾತ್ ತ್ರಿಕಾಲಾಮಲದರ್ಶಿನೀ ॥೨॥
ಅಥ ಸಸ್ಮಾರ ಸರ್ವಾಸ್ತಾಃ ಪ್ರಾಕ್ತನೀಃ ಸಂಸೃತೇರ್ಗತೀಃ ।
ಸಾ ಸ್ವಯಂ ಸ್ವರಸೇನೈವ ಪ್ರಾಗ್ಜನ್ಮಮರಣಾದಿಕಾಃ ॥೩॥

ಲೀಲೋವಾಚ.

ದೇವಿ ದೇಶಮಿಮಂ ದೃಷ್ಟ್ವಾ ತ್ವತ್ಪ್ರಸಾದಾತ್ ಸ್ಮರಾಮ್ಯಹಮ್ ।
ಇಹ ತತ್ ಪ್ರಾಕ್ತನಂ ಸರ್ವಂ ಚೇಷ್ಟಿತಂ ಚೇಷ್ಟಿತಾನ್ತರಮ್ ॥೪॥

ಉತ್ಪತ್ತಿಪ್ರಕರಣದಲ್ಲಿ ಇಪತ್ತೊಂಭತ್ತನೆಯ ಸರ್ಗವು.

ಲೀಲಾಯಾಃ ಪ್ರಾಕ್ಚರಿತಾನಾಂ ಪ್ರತ್ಯಭಿಜ್ಞಾತ್ರ ವರ್ಣ್ಯತೇ ।
ತಥಾ ಪ್ರತಿಪ್ರಯಾಣಂ ಚ ವ್ಯೋಮ್ನಿ ಲೋಕೌಘಮಣ್ಡಿತೇ ॥

ಲೀಲೆಯು ತನ್ನ ಪೂರ್ವಜನ್ಮ ವೃತ್ತಾಂತಗಳನ್ನು ಸ್ಮರಿಸುವಿಕೆಯೂ, ಅನೇಕಲೋಕ ಪರಿಷ್ಕೃತವಾದ ಅಂತರಿಕ್ಷದಲ್ಲಿ ತಿರುಗಿ ಹೋಗುವಿಕೆಯೂಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಆ ಗಿರಿಗ್ರಾಮವನ್ನು ನೋಡಿದ ಬಳಿಕ, ಆತ್ಮಜ್ಞಾನಸಂಪನ್ನನಾಗಿ ಶಾಂತನಾಗಿರುವ ಪುರುಷನಲ್ಲಿ ಭೋಗಮೋಕ್ಷಸಂಪತ್ತುಗಳೆರಡೂ ನೆಲೆಸುವಂತೆ, ಆ ಲೀಲಾ ಸರಸ್ವತಿಯರಿಬ್ಬರೂ ತಂಪಾದ ಒಳಭಾಗವುಳ್ಳ ಆ ಗಿರಿಗ್ರಾಮದಲ್ಲಿ ಇಳಿದರು ॥೧॥

ಇಷ್ಟು ಕಾಲಕ್ಕೆ ಆ ಲೀಲೆಯು, ಆ ಅಭ್ಯಾಸಬಲದಿಂದ—ಕೇವಲ ಶುದ್ಧಜ್ಞಾನ ಶರೀರಳಾಗಿಬಿಟ್ಟಕಾರಣ, ಭೂತಭವಿಷ್ಯದ್ವರ್ತಮಾನಕಾಲ ವಿಷಯಗಳನ್ನೆಲ್ಲ ಸ್ಪಷ್ಟವಾಗಿ ತಿಳಿಯುವ ಶಕ್ತಿಯುಳ್ಳವಳಾದಳು ॥೨॥

ಬಳಿಕ ಆ ಲೀಲೆಯು, ಸ್ವಲ್ಪವೂ ಪ್ರಯತ್ನವಿಲ್ಲದೆಯೇ, ತನ್ನ ಪೂರ್ವಜನ್ಮದ ಮರಣ ಮುಂತಾದ ಪ್ರಾಚೀನ ಸಂಸಾರವ್ಯಾಪಾರಗಳನ್ನೆಲ್ಲ ಸ್ಮರಿಸಿಕೊಂಡಳು ॥೩॥

ಹೀಗೆ ಸ್ಮರಿಸಿಕೊಂಡು, ಆ ಲೀಲೆಯು ಸರಸ್ವತೀದೇವಿಯನ್ನು ಕುರಿತು ಹೇಳಿದಳು:—

ದೇವಿ! ನಾನು ಈ ಪ್ರದೇಶವನ್ನು ನೋಡಿ, ನಿನ್ನ ಅನುಗ್ರಹದಿಂದ, ಇಲ್ಲಿ ಆ ಸಮಸ್ತವಾದ ಪೂರ್ವಜನ್ಮ ವೃತ್ತಾಂತವನ್ನೂ ಅದರ ಹಿಂದಣ ಜನ್ಮಗಳ ವೃತ್ತಾಂತಗಳನ್ನೂ ಸ್ಮರಿಸುವೆನು ॥೪॥

ಇಹಾಭೂವಮಹಂ ಜೀರ್ಣಾ ಸಿರಾಲಾಙ್ಗೀ ಕೃಶಾಙ್ಗಿಸಿತಾ ।
ಬ್ರಾಹ್ಮಣೀ ಶುಷ್ಕದರ್ಭಾಗ್ರಛೇದರೂಕ್ಷಕರೋದರಾ ॥೫॥
ಭರ್ತುಃ ಕುಲಕರೀ ಭಾರ್ಯಾ ದೋಹವನ್ಯಾನಶಾಲಿನೀ ।
ಮಾತಾ ಸಕಲಪುತ್ರಾಣಾಂ ಅತಿಥೀನಾಂ ಪ್ರಿಯಙ್ಕರೀ ॥೬॥
ದೇವದ್ವಿಜಸತಾಂ ಭಕ್ತಾ ಸಿಕ್ತಾಙ್ಗೀ ಘೃತಗೋರಸೈಃ ।
ಭರ್ಜನೀಚರುಕುಮ್ಭಾದಿಭಾಣ್ಡೋಪಸ್ಕರಶೋಧಿನೀ ॥೭॥
ನಿತ್ಯಮನ್ನಲವಾಕ್ತೈಕಕಾಚಕಮ್ಬುಪ್ರಕೋಷ್ಠಕಾ ।
ಜಾಮಾತೃದುಹಿತೃಭ್ರಾತೃಪಿತೃಮಾತೃಪ್ರಪೂಜಿನೀ ॥೮॥
ಆದೇಹಂ ಸದ್ಮಭೃತ್ಯೈವ ಪ್ರಕ್ಷೀಣದಿನಯಾಮಿನೀ ।
ವಾಚಂ ಚಿರಂಚಿರಮಿತಿ ವಾದಿನ್ಯನಿಶಮಾಕುಲಾ ॥೯॥
ಕಾಹಂ ಕಇವ ಸಂಸಾರಃ ಇತಿ ಸ್ವಪ್ನೇಪ್ಯಸಙ್ಕಥಾ ।
ಜಾಯಾ ಶ್ರೋತ್ರಿಯಮೂಢಸ್ಯ ತಾದೃಶಸ್ಯೈವ ದುರ್ಧಿಯಃ ॥೧೦॥

ಈ ಗ್ರಾಮದಲ್ಲಿ ನಾನು ಮೈಯೆಲ್ಲ ನರ ಕಾಣುತಿರುವ ಮುದುಕಿಯಾಗಿಯೂ—ಕೃಶಳಾಗಿ ಕಪ್ಪಾಗಿಯೂ—ಒಣಗಿದ ದರ್ಭೆಗಳನ್ನು ಜೋಡಿಸುವುದರಿಂದ ಅಂಗೈಯ್ಯಲ್ಲಿ ಒಡೆದವಳಾಗಿಯೂ ಇದ್ದ—ಬ್ರಾಹ್ಮಣಸ್ತ್ರೀಯಾಗಿದ್ದೆನು ॥೫॥

ಆಗ ನಾನು, ನನ್ನ ಪತಿಗೆ ಸಂತಾನವೃದ್ಧಿಕರಳಾದ ಪತ್ನಿಯಾಗಿಯೂ, ಹಾಲು ಕರೆಯತಕ್ಕವಳಾಗಿಯೂ,ಕೈಯ್ಯಲ್ಲಿ ಕಡೆಗೋಲು ಹಿಡಿದಿರತಕ್ಕವಳಾಗಿಯೂ, ಸಕಲ ಬಾಲಕರನ್ನೂ ತಾಯಿಯಂತೆ ನೋಡತಕ್ಕವಳಾಗಿಯೂ, ಅತಿಥಿಪೂಜಾಪರಳಾಗಿಯೂ ಇದ್ದೆನು ॥

ಮತ್ತು, ದೇವತೆಗಳು ಬ್ರಾಹ್ಮಣರು ಸತ್ಪುರುಷರು—ಇವರುಗಳಲ್ಲಿ ಭಕ್ತಿಯುಳ್ಳವಳಾಗಿಯೂ,ತುಪ್ಪ ಹಾಲು ಮೊಸರು ಮುಂತಾದುವುಗಳಿಂದ ನೆನೆಯಿಸಲ್ಪಟ್ಟ ಶರೀರವುಳ್ಳವಳಾಗಿಯೂ, ಹುರಿಯುವಓಡು ಚರುಪಾತ್ರೆ ಮುಂತಾದ ಯಜ್ಞಪಾತ್ರೆಗಳನ್ನೂ ಇತರ ಸಾಮಗ್ರಿಗಳನ್ನೂ ಶುದ್ಧಿಮಾಡತಕ್ಕವಳಾಗಿಯೂ ಇದ್ದೆನು ॥೭॥

ಆಗ, ನನ್ನ ಮುಂಗೈಯ್ಯಲ್ಲಿರುವ ಒಂದು ಗಾಜಿನ ಬಳೆಯಲ್ಲಿ ಪ್ರತಿದಿನವೂ ಅನ್ನದಗಳು ಅಂಟಿಕೊಳ್ಳುತ್ತಿದ್ದಿತು. ಮತ್ತು, ಅಳಿಯ ಮಗಳು ಸಹೋದರ ತಂದೆ ತಾಯಿ—ಇವರುಗಳನ್ನು ನಾನು ಯಥಾಯೋಗ್ಯವಾಗಿ ವಿಶೇಷವಾಗಿ ಪೂಜಿಸುತ್ತಿದ್ದೆನು ॥೮॥

ಆಗ ನಾನು ಆ ದೇಹವಿರುವವರೆಗೂ ಗೃಹಕೃತ್ಯನಿರ್ವಹಣದಿಂದಲೇ ಹಗಲು ರಾತ್ರಿಗಳನ್ನೆಲ್ಲಾ ಕಳೆಯುತ್ತಿದ್ದೆನು ; ಆದುಕಾರಣ, ಸರ್ವದಾ ವ್ಯಾಕುಲಳಾಗಿ 'ಹೊತ್ತಾಯಿತು ಹೊತ್ತಾಯಿತು' ಎಂಬ ಮಾತನ್ನೇ ಹೇಳುತ್ತಿದ್ದೆನು ॥೯॥

ಆ ಜನ್ಮದಲ್ಲಿ ನನ್ನ ಕಾಲವೆಲ್ಲವೂ ಹೀಗೆಯೇ ಕಳೆಯಿತಲ್ಲದೆ, ನಾನು ಯಾರು?—ಈ ಸಂಸಾರವಾವುದು?—ಎಂದು ಸ್ವಪ್ನದಲ್ಲಿಯೂ ನಾನು ಬಾಯಲ್ಲಿಯೂ ಹೇಳುತ್ತಿರಲಿಲ್ಲ. ನನ್ನಹಾಗೆ ವಿಶುದ್ಧ ಜ್ಞಾನಶೂನ್ಯನಾಗಿ ಶ್ರದ್ಧಾಜಡನಾಗಿದ್ದ ಶ್ರೋತ್ರಿಯನಿಗೆ ನಾನು ಆಗ ಪತ್ನಿಯಾಗಿದ್ದೆನು ॥೧೦॥

ಏಕನಿಷ್ಠಾ ಸಮಿಚ್ಛಾಕಗೋಮಯೇನ್ಧನಸಞ್ಚಯೇ |
ಮ್ಲಾನಕಮ್ಬಳಸಂವೀತಸಿರಾಲಕೃಶಗಾತ್ರಿಕಾ ||೧೧||
ತರ್ಣಕೀಕರ್ಣಜಾಹಸ್ಥಕ್ರಿಮಿನಿಷ್ಕಾಸತತ್ಪರಾ |
ಗೃಹಶಾಕಾಯನಾಸೇಕಸತ್ವರಾಹೂತಕರ್ಪರಾ ||೧೨||
ನೀಲನೀರತರಙ್ಗಾಸ್ತೃಣತರ್ಪಿತತರ್ಣಕಾ |
ಪ್ರತಿಕ್ಷಣಂ ಗೃಹದ್ವಾರಕೃತಲೇಪನವರ್ಣಕಾ ||೧೩||
ನೀತ್ಯರ್ಥಂ ಗೃಹಭೃತ್ಯಾನಾಂ ಆದೀನಕೃತವಾಚ್ಯತಾ |
ಮರ್ಯಾದಾನಿಯಮಾದಬ್ಧೇಃ ವೇಲೇವಾನಿಶಮಚ್ಯುತಾ ||೧೪||
ಜೀರ್ಣಪರ್ಣಸವರ್ಣೈಕಕರ್ಣಡೋಲಾಧಿರೂಢಯಾ |
ಕಾಷ್ಠತಾಡ್ಯಜರಾಭೀತಜೀವವೃತ್ತ್ಯೇವ ಚಿಹ್ನಿತಾ ||೧೫||
ಇತ್ಯುಕ್ತ್ವಾ ಸಞ್ಚರನ್ತೀ ಸಾ ಶಿಖರಿಗ್ರಾಮಕೋಟರೇ |
ಸಞ್ಚರನ್ತ್ಯಾಃ ಸರಸ್ವತ್ಯಾಃ ದರ್ಶಯಾಮಾಸ ಸಸ್ಮಯಮ್ ||೧೬||

ಹೀಗಿದ್ದುದರಿಂದ, ಸಮಿತ್ತು, ಶಾಕ (ಕಾಯಿಪಲ್ಯ) ಗೋಮಯ ಇಂಧನ (ಸೌದೆ) ಇವುಗಳನ್ನು ಸಂಗ್ರಹಿಸುವುದರಲ್ಲಿ ಕೇವಲ ತತ್ಪರಳಾಗಿದ್ದೆನು. ಬಾಡಿಹೋಗಿ ನರಗಳು ಕಾಣುತಿರುವ ಶರೀರವನ್ನು, ಚಳಿಯಾದಾಗ ಕಂಬಳಿಯಿಂದ ಆಚ್ಛಾದಿಸುತಿದ್ದೆನು ॥೧೧॥

ಮನೆಯಲ್ಲಿರುವ ಹೆಣ್ಣು ಕರುಗಳ ಕಿವಿಯ ಬುಡದಲ್ಲಿ ಸೇರಿಕೊಂಡಿರುವ ಕೂರೆ ಉಣ್ಣೆ ಮುಂತಾದ ಕ್ರಿಮಿಗಳನ್ನು ಜಾಗರೂಕತೆಯಿಂದ ತೆಗೆದುಹಾಕುತಿದ್ದೆನು. ಮನೆಯಲ್ಲಿ ಮಾಡಿಕೊಂಡಿರುವ ಸೊಪ್ಪಿನತೋಟಕ್ಕೆ ನೀರು ಹುಯ್ಯುವುದಕ್ಕೋಸ್ಕರ, ಕೈಯಲ್ಲಿ ಗಡಿಗೆಯನ್ನು ಹಿಡಿದುಕೊಂಡಿರುವ ಭೃತ್ಯರನ್ನು ತ್ವರೆಯಿಂದ ಕರೆಯುತಿದ್ದೆನು ॥೧೨॥

ನದಿಯ ಅಲೆಗಳುಬಿದ್ದು ಬೆಳೆದು ಹಸುರಾಗಿರುವ ಹುಲ್ಲು ಗರಿಕೆಗಳನ್ನು ಕೊಟ್ಟು ಕರುಗಳನ್ನು ತೃಪ್ತಿಪಡಿಸುತಿದ್ದೆನು. ಪ್ರತಿನಿಮಿಷವೂ ಮನೆಯ ಬಾಗಿಲನ್ನು ಸಾರಿಸುತಲೂ ರಂಗವಲ್ಲಿಯಿಡುತಲೂ ಇದ್ದೆನು ॥೧೩॥

ಮನೆಯಲ್ಲಿರುವ ಭೃತ್ಯರ ಶಿಕ್ಷಣಾರ್ಥವಾಗಿ, ಸ್ವಲ್ಪ ಮೆತ್ತಗೆ ಅವರ ದೋಷಗಳನ್ನು ನಿಂದಿಸುತಿದ್ದೆನು; ಸಮುದ್ರವೇಲೆಯಂತೆ, ಎಂದಿಗೂ ಲೋಕಮರ್ಯಾದೆಗೆ ತಪ್ಪಿ ನಡೆಯುತಿರಲಿಲ್ಲ ॥೧೪॥

ಹೀಗೆ ಕೆಲವುಕಾಲ ಕಳೆದಮೇಲೆ ನನಗೆ ಮುಪ್ಪು ಬರಲಾಗಿ, ಆಗ ಜರೆಯು ಕೋಲಿನಿಂದ ಹೊಡೆದು ಓಡಿಸುವುದೆಂದು ಭಯಪಟ್ಟಂತಿರುವ ನನ್ನ ಜೀವವೃತ್ತಿಯು, ಕಳಿತಎಲೆಗೆ ಸಮಾನವರ್ಣವಾಗಿ ಮುಪ್ಪಿನಿಂದ ನಡುಗುತಿರುವ ಒಂದು ಕಿವಿಯೆಂಬ ಡೋಲೆಯನ್ನು ಹತ್ತಿಕೊಂಡು ಉಯ್ಯಾಲೆಯಾಡುತಿರುವಂತೆ, ನನ್ನನ್ನು ಚಿಹ್ನೆಮಾಡಿತು. (ಅಂತ್ಯದಶೆ ಸಮಾಪಿಸಿತು) ಎಂದು ಆ ಲೀಲೆಯು ಹೇಳುತಿದ್ದಳು ॥೧೫॥

ವತ್ಸ! ರಾಮ! ಈರೀತಿಯಾಗಿ ಹೇಳುತ ಆ ಗಿರಿಗ್ರಾಮಮಧ್ಯದಲ್ಲಿ ಸಂಚರಿಸುತಿರುವ ಆ ಲೀಲೆಯು, ತನ್ನ ಜತೆಯಲ್ಲಿಯೇ ಸಂಚರಿಸುತಿರುವ ಆ ಸರಸ್ವತಿಗೆ ಮಂದಹಾಸಪೂರ್ವಕವಾಗಿ ತೋರಿಸಿದಳು ॥೧೬॥

ಇಯಂ ಮೇ ಪಾಟಲಾಷಣ್ಡಮಣ್ಡಿತಾ ಪುಷ್ಪವಾಟಿಕಾ ।
ಇಯಂ ಮೇ ಪುಷ್ಪಿತೋದ್ಯಾನಮಣ್ಡಪಾಶೋಕವಾಟಿಕಾ ॥೧೭॥
ಇಯಂ ಪುಷ್ಕರಣೀ ತೀರದ್ರುಮಾಗ್ರನ್ಥಿತತರ್ಣಕಾ ।
ಇಯಂ ಸಾ ಕರ್ಣಿಕಾನಾಮ್ನಾ ತರ್ಣಿಕಾ ಮುಕ್ತಪರ್ಣಿಕಾ ॥೧೮॥
ಇಯಂ ಸಾ ಮೇಽಲಸಾ ಕೀರ್ಣಾ ವರಾಕೀ ಜಲಹಾರಿಕಾ ।
ಅದ್ಯಾಷ್ಟಮಂ ದಿನಂ ಬಾಷ್ಪಕ್ಲಿನ್ನಾಕ್ಷೀ ಪರಿರೋದಿತಿ ॥೧೯॥
ಇಹ ದೇವಿ ಮಯಾ ಭುಕ್ತಂ ಇಹೋಷಿತಮಿಹ ಸ್ಥಿತಮ್ ।
ಇಹ ಸುಪ್ತಮಿಹಾಪೀತಂ ಇಹ ದತ್ತಮಿಹಾಹೃತಮ್ ॥೨೦॥
ಏಷ ಮೇ ಜ್ಯೇಷ್ಠಶರ್ಮಾಖ್ಯಃ ಪುತ್ರೋ ರೋದಿತಿ ಮನ್ದಿರೇ ।
ಏಷಾ ಮೇ ಜಙ್ಗಲೇ ಧೇನುಃ ದೋಗ್ಧ್ರೀ ಚರತಿ ಶಾದ್ವಲಮ್ ॥೨೧॥
ಗೃಹೇ ವಸನ್ತದಾಹಾಯ ರೂಕ್ಷಕ್ಷಾರವಿಧೂಸರಮ್ ।
ಸ್ವದೇಹಮಿವ ಪಞ್ಜಾಕ್ಷಂ ಪಶ್ಯೇಮಂ ಪ್ರಘಣಂ ಮಮ ॥೨೨॥
ತುಮ್ಬಾ ಲತಾಭಿರುಗ್ರಾಭಿಃ ಪುಷ್ಟಾಭಿರಿವ ವೇಷ್ಟಿತಮ್ ।
ಮಹಾನಸಸ್ಥಾನಮಿದಂ ಮಮ ದೇಹಮಿವಾಪರಮ್ ॥೨೩॥

ಅಂಬ! ಇದು ನನ್ನ ಪಾದರಿಗಿಡಗಳ ತೋಪಿನಿಂದ ಅಲಂಕೃತವಾದ ಪುಷ್ಪೋದ್ಯಾನವೀಧಿಯು. ಇದು ಉದ್ಯಾನ ಮಂಟಪದಲ್ಲಿರುವ ಪುಷ್ಪಿತವಾದ ನನ್ನ ಅಶೋಕವೃಕ್ಷವೀಧಿಯು ॥೧೭॥

ದಡದಲ್ಲಿರುವ ಮರಗಳಲ್ಲಿ ಕರುಗಳನ್ನು ಕಟ್ಟಿರುವ ಕಮಲ ಸರೋವರವಿದು; ಇದೋ ಇಲ್ಲಿ ನನ್ನ ವಿಯೋಗದಿಂದ ಮೇವುತಿನ್ನದೆ ನಿಂತಿರುವ ಕರ್ಣಿಕಾನಾಮಕವಾದ ಹೆಂಗರುವಿರುವುದು ॥೧೮॥

ಧೂಳಿಯಿಂದ ವ್ಯಾಪ್ತಳಾಗಿ ವ್ಯಸನದಿಂದ ಕೆಲಸಮಾಡಲಾರದಿರುವ ಈ ಸ್ತ್ರೀಯೇ, ನನ್ನ ಆ ಬಡವಳಾದ ನೀರಿನವಳು. ಇವಳು ಈಗ, ನನ್ನ ಮರಣವಾಗಿ ಎಂಟು ದಿನವಾಯ್ತೆಂದು, ಕಣ್ಣೀರಿನಿಂದ ಮುಖವನ್ನು ನೆನೆಸಿಕೊಂಡು ಅಳುತ್ತಿರುವಳು ॥೧೯॥

ದೇವಿ! ಇಲ್ಲಿ ನಾನು ಊಟಮಾಡಿದೆನು; ಇಲ್ಲಿ ವಾಸಮಾಡಿದೆನು; ಈ ಸ್ಥಳದಲ್ಲಿ ನಿಂತಿದ್ದೆನು; ಈ ಪ್ರದೇಶದಲ್ಲಿ ಮಲಗಿದ್ದೆನು; ಇಲ್ಲಿ ನೀರುಕುಡಿದೆನು; ಇಲ್ಲಿ ದಾನಮಾಡಿದೆನು. ಈ ಸ್ಥಳದಲ್ಲಿ ಫಲಮೂಲಧಾನ್ಯಮುಂತಾದುವುಗಳನ್ನು ಕೂಡಿಸಿಟ್ಟಿದ್ದೆನು ॥೨೦॥

ಇದೋ ಈ ಜ್ಯೇಷ್ಠಶರ್ಮನೆಂಬ ನನ್ನಮಗನು ಮನೆಯೊಳಗೆ ಅಳುತ್ತಿರುವನು; ಈ ನನ್ನ ಕರೆಯುವ ಹಸುವು, ಹುಲ್ಲುಗಾವಲಿನಲ್ಲಿ ಹುಲ್ಲುತಿನ್ನುತ್ತಿರುವುದು ॥೨೧॥

ಈಕಡೆ ನನ್ನ ಮನೆಯಲ್ಲಿ, ವಸಂತಕಾಲದಲ್ಲಿ ನಡೆಯಬೇಕಾದ ಒಂದು ಉತ್ಸವವಿಶೇಷಕ್ಕೋಸ್ಕರ, ಹೊರಬಾಗಿಲಿನ ಹೊಸ್ತಿಲನ್ನು ಭಸ್ಮದಿಂದ ಲೇಪಿಸಿ, ಬೆಳ್ಳಗೆ ಮಾಡಿರುವರು. ಇದನ್ನು ನೋಡು. ಇದರಲ್ಲಿ ಹತ್ತಿರದಲ್ಲಿ ಕಿಟಕಿಗಳು ಇರುವುವು. ಇದು ನನಗೆ ಸ್ವದೇಹದಂತೆ ಅತಿ ಪ್ರೀತಿಪಾತ್ರವಾದುದು ॥೨೨॥

ಇತ್ತಕಡೆ ನನ್ನ ಅಡಿಗೆಮನೆಯಿರುವುದು; ಇದರ ಮೇಲುಭಾಗದಲ್ಲಿ, ಹೊರಗಡೆ ಬೆಳೆಯಿಸಿ ಹಬ್ಬಿಸಿರುವ ದೊಡ್ಡದೊಡ್ಡ ಸೋರೆಯ ಬಳ್ಳಿಗಳು, ಆಗ ನಾನು ಬೆಳೆಯಿಸಿದಂತೆಯೇ ಇರುತ ವ್ಯಾಪಿಸಿಕೊಂಡಿರುವುವು; ಇದು ನನಗೆ ಎರಡನೆಯ ಶರೀರದಂತಿದ್ದಿತು ॥೨೩॥

ಏತೇ ರೋದನತಾಮ್ರಾಕ್ಷಾಃ ಬನ್ಧವೋ ಭುವಿ ಬನ್ಧನಮ್ ।
ಅಙ್ಗದಾರ್ಪಿತರುದ್ರಾಕ್ಷಾಃ ಆಹರನ್ತ್ಯನಲೇನ್ಧನಮ್ ॥೨೪॥
ಅನಾರತಂ ಶಿಲಾಕಚ್ಛೇ ಗುಚ್ಛಾಚ್ಛೋಟನಕಾರಿಭಿಃ ।
ತರಙ್ಗೈಃ ಸ್ಥಗಿತಾಕಾರಂ ಸ್ಪೃಷ್ಟತೀರಲತಾದಳೈಃ ॥೨೫॥
ಶೀಕರಾಕೀರ್ಣಪರ್ಯನ್ತಶಾದ್ವಲಸ್ಥಲಸಲ್ಲತೈಃ ।
ಶಿಲಾಫಲಕಾಸ್ಫಾಲಫೇನಿಲೋತ್ಪಲಶೀಕರೈಃ ॥೨೬॥
ತುಷಾರೀಕೃತಮಧ್ಯಾಹ್ನದಿವಾಕರಕರೋತ್ಕರೈಃ ।
ಫುಲ್ಲಪುಷ್ಪೋತ್ಕರಾಸಾರಪ್ರಣಾದೋತ್ಕತಟದ್ರುಮೈಃ ॥೨೭॥
ವಿದ್ರುಮೈರಿವ ಸಙ್ಕ್ರಾನ್ತಫುಲ್ಲಕಿಂಶುಕಕಾನ್ತಿಭಿಃ ।
ವ್ಯಾಪ್ತಯಾ ಪುಷ್ಪರಾಶೀನಾಂ ಸಮುಲ್ಲಾಸನಕಾರಿಭಿಃ ॥೨೮॥
ಉಹ್ಯಮಾನಫಲಾಪೂರಸುವ್ಯಗ್ರಗ್ರಾಮಬಾಲಯಾ ।
ಮಹಾಕಲಕಲಾವರ್ತಮತ್ತಯಾ ಗ್ರಾಮಕುಲ್ಯಯಾ ॥೨೯॥

ಭೂಲೋಕದಲ್ಲಿ ಪ್ರತ್ಯಕ್ಷಬಂಧನಭೂತರಾದ ಈ ಬಂಧುಗಳು, ಅತ್ತತ್ತು ಕಣ್ಣುಗಳೆಲ್ಲ ಕೆಂಪಾದವರಾಗಿ, ಅಂಗದಸ್ಥಾನದಲ್ಲಿ ರುದ್ರಾಕ್ಷಮಾಲೆಗಳನ್ನು ಧರಿಸಿ, ಬೆಂಕಿಯನ್ನೂ ಸೌದೆಯನ್ನೂ ತರುತ್ತಿರುವರು ॥೨೪॥

ಇಲ್ಲಿಯೇ ನಾನು ವಾಸವಾಗಿದ್ದ ಮಂಟಪವಿರುವುದು. ಇದರ ಸುತ್ತಲೂ ಆ ಗ್ರಾಮದ ಸಣ್ಣ ಕಾಲುವೆಯು ಹರಿಯುತ್ತಿರುವುದು; ಆ ಕಾಲುವೆಯ ತರಂಗಗಳು—ಶಿಲಾಪ್ರಚುರವಾದ ತೀರಭೂಮಿಯಲ್ಲಿ ಸರ್ವದಾ ಪುಷ್ಪಗುಚ್ಛಗಳಂತೆ ಬಂದು ಬೀಳತಕ್ಕವುಗಳಾಗಿಯೂ, ತೀರದಲ್ಲಿರುವ ಲತೆಗಳ ಎಲೆಗಳನ್ನು ಸ್ಪರ್ಶಮಾಡತಕ್ಕವುಗಳಾಗಿಯೂ, ತಮ್ಮ ತುಂತುರುಗಳಿಂದ ದಡದ ಹಸುರುಭೂಮಿಯಲ್ಲಿರುವ ಉತ್ತಮಲತೆಗಳನ್ನು ವ್ಯಾಪಿಸತಕ್ಕವುಗಳಾಗಿಯೂ, ಉತ್ಪಲಪುಷ್ಪಪರಿಮಳಯುಕ್ತವಾಗಿ ಶಿಲೆಯೆಂಬ ಹಲಗೆಯಮೇಲೆ ಬಿದ್ದು ಹಾರುತಿರುವ ಜಲಕಣವುಳ್ಳವುಗಳಾಗಿಯೂ, ಮಧ್ಯಾಹ್ನಕಾಲದ ಸೂರ್ಯಕಿರಣಸಮೂಹಗಳನ್ನೂ ಕೂಡ ಹಿಮದಂತೆ ತಣ್ಣಗೆ ಮಾಡತಕ್ಕವುಗಳಾಗಿಯೂ, ಅರಳಿದ ಹೂವುಗಳನ್ನು ಸುರಿಸುತ ಧ್ವನಿಮಾಡುತಿರುವ ತೀರವೃಕ್ಷವುಳ್ಳವುಗಳಾಗಿಯೂ, ವಿಕಸಿತವಾದ ಮುತ್ತುಗದ ಹೂವುಗಳ ಕಾಂತಿಯು ವ್ಯಾಪಿಸಿರುವುದರಿಂದ ಹವಳದ ಬಳ್ಳಿಗಳೋ ಎಂಬಂತೆ ಪ್ರಕಾಶಿಸತಕ್ಕವುಗಳಾಗಿಯೂ, ಪುಷ್ಪಸಮೂಹಗಳಿಗಲಂಕಾರವುಂಟುಮಾಡತಕ್ಕವುಗಳಾಗಿಯೂ, ಇರುವುವು. ಮತ್ತು, ಈ ಕಾಲುವೆಯ ಪ್ರವಾಹದಲ್ಲಿ ತಮ್ಮ ಕೈಲಿದ್ದ ಹಣ್ಣುಗಳು ಕೊಚ್ಚಿಹೋಗುತಿರುವುದರಿಂದ, ಗ್ರಾಮದ ಬಾಲಕರುಗಳು ಕಳವಳಪಡುತಿರುವರು. ಇದರಲ್ಲಿ ಹೆಚ್ಚಾದ ಕಲಕಲಧ್ವನಿವಿಶಿಷ್ಟವಾದ ಸುಳಿಯಿರುವುದರಿಂದ, ಇದು ಮತ್ತವಾಗಿರುವಂತೆ ಕಾಣುವುದು. ಇಂತಹ ಸಣ ಕಾಲುವೆಯು, ಈ ನನ್ನ ಮನೆಯ ಮಂಟಪವನ್ನು ಸುತ್ತಲೂ ಬಳಸಿಕೊಂಡಿರುವುದು. ಇದರಲ್ಲಿ ಹಾಸಿರುವ ಕಲ್ಲುಗಳು ನೀರಿನಿಂದ ತೊಳೆಯಲ್ಪಟ್ಟು ನಿರ್ಮಲವಾಗಿರುವುವು; ಇದರ ಮೇಲುಗಡೆ ಸಾಂದ್ರವಾದ ಎಲೆಗಳುಳ್ಳ ಮರಗಳು ಆಚ್ಛಾದಿಸಿ

ವೇಷ್ಟಿತಸ್ತರಳಾಸ್ಫಾಲಜಲಧೌತತಲೋಪಲಃ ।
ಘನಪತ್ರತರುಚ್ಛನ್ನಚ್ಛಾಯಾಸತತಶೀತಲಃ ॥೨೦॥
ಅಯಮಾಲಕ್ಷ್ಯತೇ ಫುಲ್ಲಲತಾವಲನಸುನ್ದರಃ ।
ದಳದ್ಗುಳುಚ್ಛಕಾಚ್ಛನ್ನಗವಾಕ್ಷೋ ಗೃಹಮಣ್ಡಪಃ ॥೨೧॥
ಅತ್ರ ಮೇ ಸಂಸ್ಥಿತೋ ಭರ್ತಾ ಜೀವಾಕಾಶತಯಾಽಕೃತಿಃ ।
ಚತುಸ್ಸಮುದ್ರಪರ್ಯನ್ತಮೇಖಲಾಯಾ ಭುವಃ ಪತಿಃ ॥೨೨॥
ಆಃ ಸ್ಮೃತಂ ಪೂರ್ವಮೇತೇನ ಕಿಲಾಸೀದಭಿವಾಞ್ಛಿತಮ್ !
ಶೀಘ್ರಂ ಸ್ಯಾಮೇವ ರಾಜೇತಿ ತೀವ್ರಸಂವೇಗಧರ್ಮಿಣಾ ॥೨೩॥
ದಿನೈರಷ್ಟಭಿರೇವಾಸೌ ತೇನ ರಾಜ್ಯಂ ಸಮೃದ್ಧಿಮತ್ ।
ಚಿರಕಾಲಪ್ರತ್ಯಯದಂ ಪ್ರಾಪ್ತವಾನ್ ಪರಮೇಶ್ವರಿ ॥೨೪॥
ಅತ್ರಾಸೌ ಭರ್ತೃಜೀವೋ ಮೇ ಸ್ಥಿತೋ ವ್ಯೋಮ್ನಿ ಗೃಹೇ ನೃಪಃ ।
ಅದೃಶ್ಯಃ ಖೇ ಯಥಾ ವಾಯುಃ ಆಮೋದೋ ವಾನಿಲೇ ಯಥಾ ॥೨೫॥
ಇತ್ಯೇವಾಙ್ಗುಷ್ಠಮಾತ್ರಾನ್ತೇ ತದ್ವ್ಯೋಮ್ನ್ಯೇವ ಪದಂ ಸ್ಥಿತಮ್ ।
ಮದ್ಭರ್ತೃರಾಜ್ಯಂ ಸಮವಗತಂ ಯೋಜನಕೋಟಿಭಾಕ್ ॥೨೬॥

ಕೊಂಡಿರುವುದರಿಂದ, ಇದು ಸರ್ವದಾ ತಣ್ಣಗಿರುವುದು; ಇದರ ಸುತ್ತಲೂ ವಿಕಸಿತವಾದ ಲತೆಗಳು ಹಬ್ಬಿರುವುದರಿಂದ, ಇದು ಅತಿ ಮನೋಹರವಾಗಿರುವುದು; ಇದರ ಕಿಟಕಿಯನ್ನು ಚಿಗುರುತಿರುವ ಗುಳುಚ್ಛಕಲತೆಯು ಮರೆಮಾಡಿಕೊಂಡಿರುವುದು. ಇಂತಹ ಈ ನಮ್ಮ ಮನೆಯ ಮಂಟಪವು ಕಂಗೊಳಿಸುತಿರುವುದು ॥೧೫—೨೧॥

ನನ್ನ ಪತಿಯು, ಈಗ ಕೇವಲ ಜೀವಾಕಾಶರೂಪನಾಗಿರುವುದರಿಂದ ನಿಷ್ಕ್ರಿಯನಾಗಿದ್ದರೂ, ಈ ಮಂಟಪದಲ್ಲಿಯೇ ಚತುಸ್ಸಮುದ್ರಮಧ್ಯಗತವಾದ ಭೂಮಿಗೆ ಒಡೆಯನಾಗಿರುವನು ॥೨೨॥

ಆಃ! ಈಗ ಸ್ಮೃತಿಯುಂಟಾಯ್ತು! ದೃಢತರವಾಸನಾಧರ್ಮಯುಕ್ತನಾದ ಇವನು, ತಾನು ಶೀಘ್ರವಾಗಿಯೇ ರಾಜನಾಗಬೇಕೆಂದು—ಪೂರ್ವದಲ್ಲಿಯೇ ಅಪೇಕ್ಷಿಸಿಕೊಂಡಿದ್ದನಲ್ಲವೆ! ॥೨೩॥

ಹೇ ಪರಮೇಶ್ವರಿ! ಆದಕಾರಣವೇ ಇವನು, ಎಂಟುದಿವಸಗಳಲ್ಲಿಯೇ ಬಹುಕಾಲವೆಂಬ ನಂಬುಗೆಕೊಡುವ ಸಂಪತ್ಸಮೃದ್ಧವಾದ ರಾಜ್ಯವನ್ನು ಪಡೆದವನಾದನು ॥೨೪॥

ಆಕಾಶದಲ್ಲಿ ವಾಯುವಿರುವಂತೆಯೂ, ವಾಯುವಿನಲ್ಲಿ ಪರಿಮಳವಿರುವಂತೆಯೂ, ಈ ಗೃಹದ ಆಕಾಶದಲ್ಲಿಯೇ ಅದೃಶ್ಯನಾಗಿ ದೊರೆಯಾದ ನನ್ನ ಪತಿಯ ಜೀವವಿರುವುದು॥೨೫॥

ಇಲ್ಲಿಯೇ, ಒಂದಂಗುಷ್ಠಮಾತ್ರವಾದ ಅವಕಾಶದಲ್ಲಿಯೇ, ಆ ಆಕಾಶದಲ್ಲಿಯೇ, ಕೋಟಿಯೋಜನದಾಚೆಯಿರುವುದೆಂದು ತಿಳಿಯಲ್ಪಟ್ಟಿರುವ ನನ್ನ ಪತಿಯ ರಾಷ್ಟ್ರವೂ ಇರುವುದು ॥೨೬॥

ಆವಾಂ ಖಮೇವ ಖಸ್ಥಂ ಚ ಭರ್ತೃರಾಜ್ಯಂ ಮಮೇಶ್ವರಿ |
ಪೂರ್ಣಂ ಸಹಸ್ರೈಃ ಶೈಲಾನಾಂ ಮಹಾಮಾಯೇಯಮಾತತಾ ||೩೭||
ತದ್ದೇವಿ ಭರ್ತೃನಗರಂ ಪುನರ್ಗನ್ತುಂ ಮಮೇಪ್ಸಿತಮ್ |
ತದೇಹಿ ತತ್ರ ಗಚ್ಛಾವಃ ಕಿಂ ದೂರಂ ವ್ಯವಸಾಯಿನಾಮ್ ||೩೮||

ಶ್ರೀವಸಿಷ್ಠಉವಾಚ.

ಇತ್ಯುಕ್ತ್ವಾ ಪ್ರಣತಾ ದೇವೀಂ ಸಾ ಪ್ರವಿಶ್ಯಾಶು ಮಣ್ಡಪಮ್ |
ವಿಹಙ್ಗೀವ ತಯಾ ಸಾಕಂ ಪುಪ್ಲುವೇಸಿನಿಭಂ ನಭಃ ||೩೯||
ಭಿನ್ನಾಞ್ಜನಚಯಪ್ರಖ್ಯಂ ಸೌಮ್ಯೈಕಾರ್ಣವಸುನ್ದರಮ್ |
ನಾರಾಯಣಾಙ್ಗಸದೃಶಂ ಭೃಙ್ಗಪೃಷ್ಠಮಲಚ್ಛವಿ ||೪೦||
ಮೇಘಮಾರ್ಗಮತಿಕ್ರಮ್ಯ ವಾತಸ್ಕನ್ಧವನಿಂ ತಥಾ |
ಸೌರಮಾರ್ಗಮಥಾಕ್ರಮ್ಯ ಚನ್ದ್ರಮಾರ್ಗಮತೀತ್ಯ ಚ ||೪೧||
ಧ್ರುವಮಾರ್ಗೋತ್ತರಂ ಗತ್ವಾ ಸಾಧ್ಯಾನಾಂ ಮಾರ್ಗಮೇತ್ಯ ಚ|
ಸಿದ್ಧಾನಾಂ ಸಮತೀತ್ಯೋರ್ವೀಂ ಉಲ್ಲಙ್ಘ್ಯ ಸ್ವರ್ಗಮಣ್ಡಲಮ್ ||೪೨||
ಬ್ರಹ್ಮಲೋಕೋತ್ತರಂ ಗತ್ವಾ ತುಷಿತಾನಾಂ ಚ ಮಣ್ಡಲಮ್ |
ಗೋಲೋಕಂ ಶಿವಲೋಕಂಚ ಪಿತೃಲೋಕಮತೀತ್ಯ ಚ ||೪೩||

ಹೇ ಪರಮೇಶ್ವರಿ ! ನಾವಿಬ್ಬರೂ ಆಕಾಶವೇಯೆ; ಸಾವಿರಾರು ಪರ್ವತಗಳಿಂದ ಪರಿಪೂರ್ಣವಾದ ನನ್ನ ಪತಿಯು ರಾಷ್ಟ್ರವೂ ಆಕಾಶವೇಯೆ. ಹೀಗೆ ಈ ಮಹಾಮಾಯೆಯು ಹರಡಿಕೊಂಡಿರುವುದು ||೩೭||

ಆದುಕಾರಣ, ಎಲೌ ದೇವಿ ! ಪುನಃ ನನ್ನ ಪತಿಯ ಪಟ್ಟಣವನ್ನು ಹೊಂದಬೇಕೆಂದು ನನಗೆ ಇಚ್ಛೆಯಾಗುವುದು; ಆದುದರಿಂದ ಅಲ್ಲಿಯೇ ಹೋಗೋಣ; ನೀನು ಬರುವವಳಾಗು. ವ್ಯವಸಾಯಶೀಲರಿಗೆ ದೂರವಾದುದಾವುದು? ||೩೮||

ಶ್ರೀವಸಿಷ್ಠರು ಹೇಳುವರು:—

ಅಯ್ಯಾ ! ರಾಮ ! ಆ ಲೀಲೆಯು ಈರೀತಿಯಾಗಿ ಹೇಳಿ, ಆ ದೇವಿಯನ್ನು ನಮಸ್ಕರಿಸಿ, ಬೇಗನೆ ಆ ಮಂಟಪವನ್ನು ಪ್ರವೇಶಿಸಿ, ಕತ್ತಿಯಲಗಿನಂತೆ ಕಪ್ಪಾಗಿರುವ ಅಂತರಿಕ್ಷವನ್ನು ಕುರಿತು, ಆ ದೇವಿಯೊಡನೆ ಹಾರಿಬಿಟ್ಟಳು ||೩೯||

ಆ ಅಂತರಿಕ್ಷವು, ಒಟ್ಟುಗೂಡಿಸಿದ ಕಾಡಿಗೆಯಂತೆಯೂ, ಪ್ರಳಯಕಾಲದಲ್ಲಿ ಏಕಾರ್ಣವವಾದಾಗ ಅದು ನಿಶ್ಚಲವಾಗಿದ್ದರೆ ಆದರಂತೆ ಸುಂದರವಾಗಿಯೂ, ಶ್ರೀಮನ್ನಾರಾಯಣನ ದೇಹಕ್ಕೆ ಸಮಾನವಾಗಿಯೂ, ದುಂಬಿಗಳ ಹಿಂಭಾಗದಂತೆ ಸುಂದರವಾದ ಕಾಂತಿಯುಳ್ಳದಾಗಿಯೂ ಇದ್ದಿತು. ಇಂತಹ ಆಕಾಶದಲ್ಲಿಯೇ. ಮೇಘಮಾರ್ಗವನ್ನೂ ಹಾಗೆಯೇ ಸಪ್ತಮರುತ್ಪ್ರದೇಶವನ್ನೂ ದಾಟಿ, ಬಳಿಕ ಸೂರ್ಯಲೋಕವನ್ನು ಆಕ್ರಮಿಸಿ, ಚಂದ್ರಲೋಕವನ್ನೂ ದಾಟಿ, ಧ್ರುವಲೋಕಕ್ಕೆ ಉತ್ತರವಾಗಿ ಹೋಗಿ, ಸಾಧ್ಯರ ಮಾರ್ಗವನ್ನು ಹೊಂದಿ, ಸಿದ್ಧರ ಲೋಕವನ್ನು ಅತಿಕ್ರಮಿಸಿ, ಸ್ವರ್ಗಲೋಕವನ್ನೂ ದಾಟಿ, ಬ್ರಹ್ಮಲೋಕಕ್ಕೆ ಉತ್ತರವಾಗಿ ಹೋಗಿ ತುಷಿತರ (ದೇವತೆಗಳಲ್ಲಿ ಪ್ರಭೇದ) ಲೋಕವನ್ನು ದಾಟಿಹೋಗಿ,

ವಿದೇಹಾನಾಂ ಸದೇಹಾನಾಂ ಲೋಕಾನುತ್ತೀರ್ಯ ದೂರಗಮ್ ।
ದೂರಾದ್ದೂರಮಥೋ ಗತ್ವಾ ಕಿಂಚಿದುದ್ಬುದ್ಧಾ ಬಭೂವ ಸಾ ॥೪೪॥
ಪಶ್ಚಾದಾಲೋಕಯಾಮಾಸ ಸಮತೀತಂ ನಭಸ್ಸ್ಥಲಮ್ ।
ಯಾವನ್ನ ಕಿಂಚಿಚ್ಚನ್ದ್ರಾರ್ಕತಾರಾದ್ಯಾಲಕ್ಷ್ಯತೇ ಹ್ಯಧಃ ॥೪೫॥
ತಮಃ ಸ್ತಿಮಿತಗಮ್ಭೀರಂ ಆಶಾಕುಹರಪೂರಕಮ್ ।
ಏಕಾರ್ಣವೋದರಪ್ರಖ್ಯಂ ಶಿಲೋದರಘನಂ ಸ್ಥಿತಮ್ ॥೪೬॥

ಲೀಲೋವಾಚ.

ತದ್ದೇವಿ ಭಾಸ್ಕರಾದೀನಾಂ ಕ್ವಾಧಸ್ತೇಜೋ ಗತಂ ವದ ।
ಶಿಲಾಜಠರನಿಷ್ಪನ್ದಂ ಮುಷ್ಟಿಗ್ರಾಹ್ಯಂ ತಮಃ ಕುತಃ ॥೪೭॥

ಶ್ರೀದೇವ್ಯುವಾಚ.

ಏತಾವತೀಮಿಮಾಂ ವ್ಯೋಮ್ನಃ ಪದವೀಮಾಗತಾಸಿ ಭೋಃ ।
ಅರ್ಕಾದೀನ್ಯಪಿ ತೇಜಾಂಸಿ ಯತೋ ದೃಶ್ಯನ್ತ ಏವ ನೋ ॥೪೮॥
ಯಥಾ ಮಹಾನ್ಧಕೂಪಾಧಃ ಖದ್ಯೋತೋ ನಾವಲೋಕ್ಯತೇ ।
ಪೃಷ್ಠಗೇನ ತಥೇಹಾತೋ ನಾಧಃ ಸೂರ್ಯೋವಲೋಕ್ಯತೇ ॥೪೯॥

ಗೋಲೋಕ ಶಿವಲೋಕ ಪಿತೃಲೋಕಗಳನ್ನು ಅತಿಕ್ರಮಿಸಿ, ವಿದೇಹಮುಕ್ತರಾಗಿಯೂ ಸದೇಹಮುಕ್ತರಾಗಿಯೂ ಇರತಕ್ಕವರ ಲೋಕಗಳನ್ನೆಲ್ಲ ದಾಟಿ, ಆಮೇಲೂ ಬಹುದೂರ ಹೋಗಿ, ಬಳಿಕ ಆ ಲೀಲೆಯು ಸ್ವಲ್ಪ ಜ್ಞಾನಯುಕ್ತಳಾದಳು ॥೪೦—೪೪॥

ಅನಂತರದಲ್ಲಿ, ಕೆಳಗಡೆ ಚಂದ್ರ ಸೂರ್ಯ ನಕ್ಷತ್ರ ಮುಂತಾದುದೊಂದೂ ಯಾವಾಗ ಕಾಣಿಸಲಿಲ್ಲವೋ, ಮತ್ತು ನಿಶ್ಚಲವಾಗಿಯೂ ಗಂಭೀರವಾಗಿಯೂ ದಿಗಂತರಾಳಗಳನ್ನೆಲ್ಲ ಮುಚ್ಚತಕ್ಕುದಾಗಿಯೂ ಏಕಾರ್ಣವಸಮಾನವಾಗಿಯೂ ಶಿಲೆಯ ಮಧ್ಯಭಾಗದಂತೆ ದಟ್ಟವಾಗಿಯೂ ಇರುವ ಅಂಧಕಾರವು ಯಾವಾಗ ಕಾಣಿಸಿತೋ, ಆಗ ಆ ಲೀಲೆಯು, ಇದುವರೆಗೆ ಅತಿಕ್ರಮಿಸಿರುವ ಅಂತರಿಕ್ಷವನ್ನು ಹಿಂದಿರುಗಿ ನೋಡಿದಳು ॥೪೫—೪೬॥

ಹೀಗೆ ನೋಡಿದ ಬಳಿಕ ಆ ಲೀಲೆಯು ಸರಸ್ವತಿಯನ್ನು ಕುರಿತು ಹೇಳಿದಳು:—

ಎಲೌ! ದೇವಿ! ಸೂರ್ಯ ಮೊದಲಾದವರ ಆ ತೇಜಸ್ಸು ಎಲ್ಲಿಗೆ ಹೋಯ್ತು? ಶಿಲಾಗರ್ಭದಂತೆ ಸ್ತಬ್ಧವಾದ ಈ ತಮಸ್ಸು ಎಲ್ಲಿ ಬಂದಿತು? ಹೇಳುವವಳಾಗು ॥೪೭॥

ಶ್ರೀಸರಸ್ವತಿಯುತ್ತರಹೇಳಿದಳು:—

ಎಲೌ! ಲೀಲೆ! ಸೂರ್ಯ ಮುಂತಾದ ತೇಜಸ್ಸುಗಳೂ ಕೂಡ ಸುತರಾಂ ಕಾಣದಿರುವಂತೆ, ನೀನು ಇಷ್ಟುಹೆಚ್ಚಾಗಿ ಆಕಾಶಮಾರ್ಗದಲ್ಲಿ ಬಂದಿರುವೆ ॥೪೮॥

ದೊಡ್ಡದಾದ ಹಾಳುಭಾವಿಯ ಕೆಳಭಾಗದಲ್ಲಿರುವ ಖದ್ಯೋತವನ್ನು—ಭಾವಿಯ ದಡದಲ್ಲಿರುವವನು ಹೇಗೆ ನೋಡಲಾರನೋ, ಹಾಗೆಯೇ ಬಲುಮೇಲಕ್ಕೆ ಬಂದಿರುವುದರಿಂದ ನೀನು ಸೂರ್ಯನನ್ನು ನೋಡಲಾರದಿರುವೆ ॥೪೯॥

ಲೀಲೋವಾಚ.

ಅಹೋ ನು ಪದವೀಂ ದೂರಂ ಆವಾಮೇತಾವುಪಾಗತೇ |
ಸೂರ್ಯೋಽಪ್ಯಧೋಽಣುಕಣವತ್ ನ ಮನಾಗಪಿ ಲಕ್ಷ್ಯತೇ ||೫೦||
ಇತಉತ್ತರಮನ್ಯಾ ಸ್ಯಾತ್ ಪದವೀ ಕಾ ನು ಕೀದೃಶೀ |
ಕಥಂ ಚ ಮಾತರೇತವ್ಯಾ ಕಥ್ಯತಾಮಿತಿ ದೇವಿ ಮೇ ||೫೧||

ಶ್ರೀದೇವ್ಯುವಾಚ.

ಇತಉತ್ತರಮಗ್ರೇ ತೇ ಬ್ರಹ್ಮಾಣ್ಡಪುಟಕರ್ಪರಮ್ |
ಯಸ್ಯ ಚನ್ದ್ರಾದಯೋ ನಾಮ ಧೂಳಿಲೇಶಾಃ ಸಮುತ್ಥಿತಾಃ ||೫೨||

ಶ್ರೀವಸಿಷ್ಠಉವಾಚ.

ಇತಿ ಪ್ರಕಥಯನ್ತ್ಯೌ ತೇ ಪ್ರಾಪ್ತೇ ಬ್ರಹ್ಮಾಣ್ಡಕರ್ಪರಮ್ |
ಭ್ರಮರ್ಯಾವಿವ ಶೈಲಸ್ಯ ಕುಡ್ಯಂ ನಿಬಿಡಮಣ್ಡಪಮ್ ||೫೩||
ಅಕ್ಲೇಶೇನೈವ ತೇ ತಸ್ಮಾತ್ ನಿರ್ಗತೇ ಗಗನಾದಿವ |
ನಿಶ್ಚಯಸ್ಥಂ ಹಿ ಯದ್ವಸ್ತು ತದ್ವಜ್ರಗುರು ನೇತರತ್ ||೫೪||
ನಿರಾವರಣವಿಜ್ಞಾನಾ ಸಾ ದದರ್ಶ ತತಸ್ತತಮ್ |
ಜಲಾದ್ಯಾವರಣಂ ಪಾರೇ ಬ್ರಹ್ಮಾಣ್ಡಸ್ಯಾತಿಭಾಸುರಮ್ ||೫೫||

ಪುನಃ ಲೀಲೆಯು ಪ್ರಶ್ನೆಮಾಡುವಳು:—

ಅಹೋ ! ನಾವು ಇಷ್ಟುದೂರವಾದ ಮಾರ್ಗವನ್ನು ಅತಿಕ್ರಮಿಸಿ ಬಂದಿರುವೆವು ! ಈಗ ಸೂರ್ಯನೂ ಕೂಡ, ಒಂದು ಪರಮಾಣುವಿನಂತೆ ಕೆಳಗಡೆ ಕಣ್ಣಿಗೆ ಕಾಣದಿರುವನು! ॥

ಹೇ ದೇವಿ ! ಹೇ ಮಾತೆ ! ಇಲ್ಲಿಂದ ಮುಂದಕ್ಕೆ ಇನ್ನಾವ ಮಾರ್ಗವಿರುವುದು ? ಅದು ಹೇಗಿರುವುದು ? ಅದನ್ನು ನಾವು ಹೊಂದುವ ಬಗೆಯಾವುದು ? ಇದನ್ನು ನೀನು ನನಗೆ ಅಪ್ಪಣೆಕೊಡಿಸು ॥೫೧॥

ಶ್ರೀಸರಸ್ವತಿ ಹೇಳುವಳು:—

ಎಲೌ ! ಲೀಲೆ ! ಇದರಾಚೆ ನಿನ್ನ ಮುಂದುಗಡೆ, ಬ್ರಹ್ಮಾಂಡಗೋಳದ ಊರ್ಧ್ವಭಾಗವಿರುವುದು. ಚಂದ್ರ ಮೊದಲಾದವರೆಲ್ಲರೂ ಇದರ ಧೂಳಿಲವವಾಗಿ ಉತ್ಪನ್ನರಾಗಿರುವರು ॥೫೨॥

ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಿದರು:—

ಅಯ್ಯಾ! ರಾಮ! ಹೀಗೆ ಮಾತಾಡುತಿರುವ ಆ ಲೀಲಾಸರಸ್ವತಿಯರಿಬ್ಬರೂ, ಸಾಂದ್ರವಾದ ಮಧ್ಯವುಳ್ಳ ಪರ್ವತಕುಡ್ಯವನ್ನು ಭ್ರಮರಗಳು ಹೊಂದುವಂತೆ, ಆ ಬ್ರಹ್ಮಾಂಡಗೋಳವನ್ನು ಹೊಂದಿದವರಾದರು ॥೫೩॥

ಆದರೆ, ಅವರಿಬ್ಬರೂ ಆಕಾಶವನ್ನು ದಾಟುವಂತೆಯೇ ಅದರಿಂದಾಚೆಗೂ ಅನಾಯಾಸವಾಗಿಯೇ ದಾಟಿಹೋದರು. ಇದು ಅಸಂಭಾವನೀಯವೆಂದು ತಿಳಿಯಬಾರದು. ಯಾವ ವಸ್ತುವು ನಿಶ್ಚಯವೆಂದು ಕಲ್ಪನಾವಿಷಯವಾಗಿರುವುದೋ, ಅದು ವಜ್ರದಂತೆ ಗುರುವಾಗಿರುವುದಲ್ಲದೆ, ಇತರವಾದುದೆಂದಿಗೂ ಇರಲಾರದು ॥೫೪॥

ಬಳಿಕ, ಆವರಣಶೂನ್ಯವಾದ ಜ್ಞಾನವುಳ್ಳ ಆ ಲೀಲೆಯು, ಬ್ರಹ್ಮಾಂಡದ ಹೊರಭಾಗದಲ್ಲಿ ಅತಿಪ್ರಕಾಶವಾದ ಜಲಾದ್ಯಾವರಣವನ್ನು ನೋಡಿದವಳಾದಳು ॥೫೫॥

ಬ್ರಹ್ಮಾಣ್ಡಾದ್ದಶಗುಣಿತಃ ತೋಯಂ ತತ್ರ ವ್ಯವಸ್ಥಿತಮ್ ।
ಆಸ್ಥಿತಂ ವೇಷ್ಟಯಿತ್ವಾ ತು ತ್ವಗಿವಾಕ್ಷೋಟಪೃಷ್ಠಗಾ ॥೫೬॥
ತಸ್ಮಾದ್ದಶಗುಣೋ ವಹ್ನಿಃ ತಸ್ಮಾದ್ದಶಗುಣೋಽನಿಲಃ ।
ತತೋ ದಶಗುಣಂ ವ್ಯೋಮ ತತಃ ಪರಮಮಮ್ಬರಮ್ ॥೫೭॥
ತಸ್ಮಿನ್ ಪರಮಕೇ ವ್ಯೋಮ್ನಿ ಮಧ್ಯಾದ್ಯನ್ತವಿಕಲ್ಪನಾಃ ।
ನ ಕಾಶ್ಚನ ಸಮುದ್ಯನ್ತಿ ವನ್ಧ್ಯಾಪುತ್ರಕಥಾ ಇವ ॥೫೮॥
ಕೇವಲಂ ವಿತತಂ ಶಾನ್ತಂ ತದನಾದಿ ಗತಭ್ರಮಮ್ ।
ಆದ್ಯನ್ತಮಧ್ಯರಹಿತಂ ಮಹತ್ಯಾತ್ಮನಿ ತಿಷ್ಠತಿ ॥೫೯॥
ಆಕಲ್ಪಮುತ್ತಮಬಲೇನ ಶಿಲಾ ಪತೇಚ್ಚೇತ್
ತಸ್ಮಿನ್ ಬಲಾತ್ ಪತಗರಾಡಪಿ ಚೋತ್ಪತೇಚ್ಚೇತ್ ।
ತದ್ಯೋಜನಂ ನ ಲಭತೇ ವಿಮಲೇಮ್ಬರೇನ್ತಃ
ಮಾಕಲ್ಪಮೇಕಜವಗೋಽಪ್ಯಥ ಮಾರುತೋಽಪಿ ॥೬೦॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಪರಮಾಕಾಶವರ್ಣನಂ ನಾಮ ಏಕೋನತ್ರಿಂಶಃ ಸರ್ಗಃ.

ಅಲ್ಲಿ, ಬ್ರಹ್ಮಾಂಡಕ್ಕಿಂತ ಹತ್ತುಭಾಗ ಹೆಚ್ಚಾಗಿರುವ ನೀರು, ಅಕ್ರೋಟದ ಹಣ್ಣನ್ನು ಸಿಪ್ಪೆಯು ಸುತ್ತಲೂ ಮುಚ್ಚಿಕೊಂಡಿರುವಂತೆ, ಬ್ರಹ್ಮಾಂಡಮಂಡಲವನ್ನು ಆವರಿಸಿಕೊಂಡಿದ್ದಿತು ॥೫೬॥

ಅದಕ್ಕೆ ಹತ್ತರಷ್ಟು ಅಗ್ನಿಯೂ, ಅದಕ್ಕೆ ಹತ್ತರಷ್ಟು ವಾಯುವೂ, ಅದಕ್ಕೆ ಹತ್ತರಷ್ಟು ಆಕಾಶವೂ, ಅಲ್ಲಿಂದ ಆಚೆಗೆ ಮಹಾಕಾಶವೂ ವ್ಯವಸ್ಥಿತವಾಗಿದ್ದಿತು ॥೫೭॥

ಆ ಮಹಾಕಾಶದಲ್ಲಿ, ವಂಧ್ಯಾಪುತ್ರಕಥೆಯಂತೆ, ಮಧ್ಯ ಆದಿ ಅಂತ ಎಂಬ ವಿಕಲ್ಪನೆಗಳೊಂದೂ ಸಂಭವಿಸುವುದಿಲ್ಲ ॥೫೮॥

ಆ ಮಹಾಕಾಶವು, ಕೇವಲವಾಗಿಯೂ ಸರ್ವತ್ರ ವ್ಯಾಪ್ತವಾಗಿಯೂ ಶಾಂತವಾಗಿಯೂ ಅನಾದಿಯಾಗಿಯೂ ಭ್ರಾಂತಿಶೂನ್ಯವಾಗಿಯೂ ಆದ್ಯಂತಮಧ್ಯರಹಿತವಾಗಿಯೂ ತನ್ನಲ್ಲಿ ತಾನೇ ಇರುವುದು ॥೫೯॥

ವತ್ಸ! ರಾಮ! ಹೆಚ್ಚೇಕೆ? ಆ ಮಹಾಕಾಶದೊಳಗೆ ಒಂದು ಕಲ್ಲು ಅತಿವೇಗವಾಗಿ ಬೀಳಲಾರಂಭಿಸಿ ಪ್ರಳಯಕಾಲದವರೆಗೂ ಬೀಳುತಿದ್ದರೂ, ಗರುಡನು ಹಾರಲಾರಂಭಿಸಿ ಪ್ರಳಯದವರೆಗೂ ಹಾರುತಿದ್ದರೂ, ಬಳಿಕ ವಾಯುವೂ ಕೂಡ ಇವೆರಡಕ್ಕೂ ಸಂಯೋಜನೆಯುಂಟುಮಾಡಬೇಕೆಂದು ಅದಕ್ಕೆ ತಕ್ಕಂತೆ ಒಂದೇವೇಗದಿಂದ ಬೀಸುತ ಎರಡನ್ನೂ ಸೇರಿಸಲು ಹೊರಟರೂ ಕೂಡ, ಆ ನಿರ್ಮಲವಾದ ಮಹಾಕಾಶದ ಅಂತರಾಳದಲ್ಲಿ ಇವೆರಡನ್ನೂ ಸೇರಿಸಲಾರನು. ಇನ್ನು ಅದೆಷ್ಟು ದೊಡ್ಡದಾಗಿರಬಹುದೆಂಬುದನ್ನು ನೀನೇ ಪರ್ಯಾಲೋಚಿಸು ॥೬೦॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಪರಮಾಕಾಶವರ್ಣನವೆಂಬ ಇಪ್ಪತ್ತೊಂಭತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ತ್ರಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಪೃಥಿವ್ಯಪ್ತೇಜಸಾಂ ತತ್ರ ನಭಸ್ವನ್ನಭಸೋರಪಿ ।
ಯಥೋತ್ತರಂ ದಶಗುಣಾನ್ ಅತೀತ್ಯಾವರಣಾನ್ ಕ್ಷಣಾತ್ ‖೧‖
ದದರ್ಶ ಪರಮಾಕಾಶಂ ತತ್ ಪ್ರಮಾಣವಿವರ್ಜಿತಮ್ ।
ತಥಾ ತತಂ ಜಗದಿದಂ ಯಥಾ ತತ್ರಾಣ್ಡಮಾತ್ರಕಮ್ ‖೨‖
ತಾದೃಶಾವರಣಾನ್ ಸರ್ಗಾನ್ ಬ್ರಹ್ಮಾಣ್ಡೇಷು ದದರ್ಶ ಸಾ ।
ಕೋಟಿಶಃ ಸ್ಫುರಿತಾನ್ ವ್ಯೋಮ್ನಿ ತ್ರಸರೇಣೂನಿವಾತಪೇ ‖೩‖
ಮಹಾಕಾಶಮಹಾಮ್ಭೋಧೌ ಮಹಾಶೂನ್ಯತ್ವವಾರಿಣಿ ।
ಮಹಾಚಿದ್ದ್ರವಭಾವೋತ್ಥಾನ್ ಬುದ್ಬುದಾನರ್ಬುದಪ್ರಭಾನ್ ‖೪‖

ಉತ್ಪತ್ತಿಪ್ರಕರಣದಲ್ಲಿ ಮೂವತ್ತನೆಯ ಸರ್ಗವು.

ತಾದೃಶಾಸ್ತದ್ವಿಚಿತ್ರಾಶ್ಚ ಬ್ರಹ್ಮಾಣ್ಡಾನನ್ತಕೋಟಯಃ ।
ಚಿದ್ವ್ಯೋಮ್ನಿ ರೇಣುವದ್ದೃಷ್ಟಾಃ ಲೀಲಯೇತ್ಯತ್ರ ವರ್ಣ್ಯತೇ ‖

ಹಿಂದೆ ನೋಡಿದಂತೆಯೂ ಅದಕ್ಕಿಂತ ವಿಚಿತ್ರವಾಗಿಯೂ ಇರುವ ಅನೇಕಕೋಟಿ ಬ್ರಹ್ಮಾಂಡಗಳನ್ನು, ಚಿದಾಕಾಶದಲ್ಲಿ ಲೀಲೆಯು ನೋಡಿದಳೆಂಬ ವಿಷಯವು, ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಪುನಃ ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಿದರು :—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಆ ಲೀಲೆಯು, ಅಲ್ಲಿ ಉತ್ತರೋತ್ತರ ಹತ್ತರಷ್ಟು ಹೆಚ್ಚಾಗಿರುವ—ಪೃಥಿವಿ ಅಪ್ಪು ತೇಜಸ್ಸು ವಾಯು ಆಕಾಶ—ಇವುಗಳ ಆವರಣಗಳನ್ನು ಒಂದುಕ್ಷಣದೊಳಗಾಗಿ ಅತಿಕ್ರಮಿಸಿ, ಪ್ರಮಾಣಾತೀತವಾದ ಆ ಪರಮಾಕಾಶವನ್ನೂ—ಅದರಲ್ಲಿ ಒಂದು ಸಣ್ಣ ಮೊಟ್ಟೆಯಂತೆ ಕಾಣುತಿರುವ ಈ ವಿಸ್ತಾರವಾದ ಜಗತ್ತನ್ನೂ ನೋಡಿದಳು ‖೧-೨‖

ಮತ್ತು ಆ ಲೀಲೆಯು, ಅಲ್ಲಿ ಯಥಾಪ್ರಕಾರವಾಗಿರುವ ಅನೇಕ ಬ್ರಹ್ಮಾಂಡಗಳೊಳಗೆ, ಬಿಸಿಲುಕೋಲಿನಲ್ಲಿ ಅಣುಗಳಿರುವಂತೆ, ಪೂರ್ವೋಕ್ತರೀತಿಯಾಗಿರುವ ಆವರಣಗಳುಳ್ಳವುಗಳಾಗಿ ಆ ಆಕಾಶದಲ್ಲಿ ಸ್ಫುರಿಸುತಿರುವ ಅನೇಕ ಸೃಷ್ಟಿ (ಜಗತ್ತು) ಗಳನ್ನು ನೋಡಿದವಳಾದಳು ‖೩‖

ಆ ಸೃಷ್ಟಿಗಳು, ಮಹಾಮಾಯೆಯೆಂಬ ಜಲವುಳ್ಳ ಪರಮಾಕಾಶವೆಂಬ ದೊಡ್ಡ ಸಮುದ್ರದಲ್ಲಿ, ಮಹಾಚಿತ್ತೆಂಬ ದ್ರವೀಭಾವದಿಂದ ಉತ್ಪನ್ನವಾಗಿರುವ ಅಸಂಖ್ಯಾಕಗಳಾದ ಗುಳ್ಳೆಗಳಾಗಿದ್ದುವು ‖೪‖

*33

ಕಾಂಶ್ಚಿದಾಪತತೋಽಧಸ್ತಾತ್ ಕಾಂಶ್ಚಿಚ್ಚೋಪರಿ ಗಚ್ಛತಃ ।
ಕಾಂಶ್ಚಿತ್ ತಿರ್ಯಗ್ಗತೀನನ್ಯಾನ್ ಸ್ಥಿತಾನ್ ಸ್ತಬ್ಧಾನ್ ಸ್ವಸಂವಿದಾ ॥೫॥
ಯತ್ರಯತ್ರೋದಿತಾ ಸಂವಿತ್ ಯೇಷಾಂಯೇಷಾಂ ಯಥಾಯಥಾ ।
ತತ್ರತತ್ರೋದಿತಂ ರೂಪಂ ತೇಷಾಂತೇಷಾಂ ತಥಾತಥಾ ॥೬॥
ನೇಹೈವ ತತ್ರ ನಾವೋರ್ಧ್ವಂ ನಾಧೋ ನ ಚ ಗಮಾಗಮಾಃ ।
ಅನ್ಯದೇವ ಪದಂ ಕಿಂಚಿತ್ ತಸ್ಮಾದ್ದೇಹಾಗಮಂ ಹಿ ತತ್ ॥೭॥
ಉತ್ಪದ್ಯೋತ್ಪದ್ಯತೇ ತತ್ರ ಸ್ವಯಂ ಸಂವಿತ್ ಸ್ವಭಾವತಃ ।
ಸ್ವಸಙ್ಕಲ್ಪೈಃ ಶಮಂ ಯಾತಿ ಬಾಲಸಙ್ಕಲ್ಪಜಾಲವತ್ ॥೮॥

ಶ್ರೀರಾಮ ಉವಾಚ.

ಕಿಮಧಃ ಸ್ಯಾತ್ ಕಿಮೂರ್ಧ್ವಂ ಸ್ಯಾತ್ ಕಿಂ ತಿರ್ಯಕ್ ತತ್ರ ಭಾಸುರೇ ।
ಇತಿ ಬ್ರೂಹಿ ಮಮ ಬ್ರಹ್ಮನ್ ಇಹೈವ ಯದಿ ನ ಸ್ಥಿತಮ್ ॥೯॥

ಆಗ ಅವಳು, ಆಯಾಬ್ರಹ್ಮಾಂಡಾಭಿಮಾನಿ ಜೀವಜ್ಞಾನಾನುಸಾರವಾಗಿ, ಕೆಲವು ಬ್ರಹ್ಮಾಂಡಗಳು ಕೆಳಗೆ ಬೀಳುತಿರುವುದನ್ನೂ, ಮತ್ತೆ ಕೆಲವು ಮೇಲಕ್ಕೆ ಹೋಗುತಿರುವುದನ್ನೂ, ಇನ್ನು ಕೆಲವು ಅಡ್ಡವಾಗಿ ಸಂಚರಿಸುತ್ತಿರುವುದನ್ನೂ, ಬೇರೆ ಕೆಲವು ನಿಶ್ಚಲವಾಗಿ ನಿಂತಿರುವುದನ್ನೂ ಕಂಡಳು ॥೫॥

ಇವುಗಳು ಹೀಗೆ ನಾನಾವಿಧವಾಗಿ ಕಾಣಿಸಲು ಕಾರಣವೇನೆಂದರೆ:—ಯಾರುಯಾರಿಗೆ ಯಾವಯಾವ ಕಡೆ ಯಾವಯಾವವಿಧವಾಗಿ ವಾಸನಾಬಲವುಂಟಾಗುವುದೋ, ಅವರವರಿಗೆ ಅಲ್ಲಲ್ಲಿ ಆಯಾವಿಧವಾಗಿ ರೂಪವಾವಿರ್ಭವಿಸಿರುವಂತೆ ಕಾಣುವುದು ॥೬॥

ಹೀಗೆ ಕಾಣಿಸುತಿದ್ದರೂ, ವಸ್ತುತತ್ವವನ್ನು ವಿಚಾರಿಸಿದರೆ ಇದೊಂದೂ ಇಲ್ಲವೆಂದೇ ಗೊತ್ತಾಗುವುದು. ಈ ಬ್ರಹ್ಮಾಂಡದಲ್ಲಿಯೂ ಆ ಚಿದಾಕಾಶದಲ್ಲಿಯೂ ಊರ್ಧ್ವಭಾಗವೂ ಇಲ್ಲ; ಅಧೋಭಾಗವೂ ಇಲ್ಲ; ಗಮನಾಗಮನಗಳೂ ಇಲ್ಲ. ಅವಾಙ್ಮನಸಗೋಚರವಾಗಿರುವ ಆ ವಸ್ತುವೇ ಬೇರೆಯಾದುದು. ಆದುಕಾರಣ, ಅಜ್ಞದೃಷ್ಟಿಗೆ ಕಾಣುವ ದೇಹಪ್ರಾಪ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಆರೀತಿಯಾಗಿ ಬ್ರಹ್ಮಾಂಡವರ್ಣನೆ ಮಾಡಲ್ಪಟ್ಟಿತೆಂದು ತಿಳಿಯಬೇಕು ॥೭॥

'ಹೀಗೆ ಧರ್ಮಿಯಾದ ಪದಾರ್ಥವೇ ಇಲ್ಲದಮೇಲೆ ಉತ್ಪತ್ತ್ಯಾದಿಗಳಾಗುವುದೆಲ್ಲಿ?' ಎಂದರೆ, ಬಾಲಕರ ಸಂಕಲ್ಪ ಸಮುದಾಯಗಳು ನಾನಾವಿಧವಾಗಿ ಹುಟ್ಟುತಲೂ ಲಯಹೊಂದುತಲೂ ಇರುವಂತೆ, ಆ ಚಿತ್ತೇ ತನ್ನ ಸಂಕಲ್ಪದಿಂದ ತಾನು ಪದೇಪದೇ ಹುಟ್ಟಿದಂತೆಯೂ ಲಯಹೊಂದಿದಂತೆಯೂ ತೋರುವುದು ॥೮॥

ಶ್ರೀರಾಮನು ಮತ್ತೆ ಪ್ರಶ್ನೆ ಮಾಡುವನು:—

ಪೂಜ್ಯರೆ! ತಾವು ಅಪ್ಪಣೆ ಕೊಡಿಸಿದಂತೆ ಈ ಅಧಿಷ್ಠಾನಭೂತವಾದ ಚಿತ್ತಿನಲ್ಲಿಯೇ ದಿಗ್ವಿಭಾಗಾದಿಗಳಿಲ್ಲದಿದ್ದಮೇಲೆ, ಅದರಲ್ಲಿ ಕಲ್ಪಿತವಾದ ಈ ದೃಶ್ಯದಲ್ಲಿ ಅಧೋಭಾಗವೆನ್ನುವುದಾವುದು? ಊರ್ಧ್ವವೆನ್ನುವುದಾವುದು? ತಿರ್ಯಕ್ (ಅಡ್ಡಲು) ಎಂಬುದು ಯಾವುದು? ಈ ವಿಷಯವನ್ನು ನನಗೆ ಅಪ್ಪಣೆಕೊಡಿಸಬೇಕು ॥೯॥

ಶ್ರೀ ವಸಿಷ್ಠ ಉವಾಚ.

ಸಸರ್ವಾವರಣಾ ಏತೇ ಮಹತ್ಯನ್ತವಿವರ್ಜಿತೇ ।
ಬ್ರಹ್ಮಾಣ್ಡಾಭಾನ್ತಿ ದುರ್ದೃಷ್ಟೇಃ ವ್ಯೋಮ್ನಿ ಕೇಶೋಣ್ಡ್ರಕೋ ಯಥಾ॥
ಅಸ್ವಾತನ್ತ್ರ್ಯಾತ್ ಪ್ರಧಾವನ್ತಿ ಪದಾರ್ಥಾಃ ಸರ್ವಏವ ಯತ್ ।
ಬ್ರಹ್ಮಾಣ್ಡೋ ಪಾರ್ಥಿವೋ ಭಾಗಃ ತದಧಸ್ತೂರ್ಧ್ವಮನ್ಯಥಾ ॥೧೧॥
ಪಿಪೀಲಿಕಾನಾಂ ಮಹತಾಂ ವ್ಯೋಮ್ನಿ ವರ್ತುಲಲೋಷ್ಟಕೇ ।
ದಶದಿಕ್ಕಮಧಃ ಪಾದಾಃ ಪೃಷ್ಠಮೂರ್ಧ್ವಮುದಾಹೃತಮ್ ॥೧೨॥
ವೃಕ್ಷವಲ್ಮೀಕಜಾಲೇನ ಕೇಷಾಂಚಿದ್ಧೃದಿ ಭೂತಲಮ್ ।
ಸಸುರಾನರದೈತ್ಯೇನ ವೇಷ್ಟಿತಂ ವ್ಯೋಮ ನಿರ್ಮಲಮ್ ॥೧೩॥
ಸಮ್ಭೂತಂ ಸಹಭೂತೇನ ಸಗ್ರಾಮಪುರಪರ್ವತಮ್ ।
ಇದಜ್ಕಲ್ಪನಭೂತೇನ ಪಕ್ವಾಕ್ಷೋಟಮಿವ ತ್ವಚಾ ॥೧೪॥

ಶ್ರೀ ವಸಿಷ್ಠರು ಉತ್ತರಹೇಳುವರು :—

ವತ್ಸ! ರಾಮ! ಅಂಧಕಾರನಿರುದ್ಧವಾದ ದೃಷ್ಟಿಯುಳ್ಳವನಿಗೆ ಅಂತರಿಕ್ಷದಲ್ಲಿ ಕೇಶೋಂಡ್ರಕ (ಕೂದಲು ಸುರುಳಿಯಾಗಿ ಕಾಣುವುದು) ವು ಕಾಣುವಂತೆ, ಅಂತವರ್ಜಿತವಾದ ಆ ಮಹಾಚಿತ್ತಿನಲ್ಲಿ, ಸಮಸ್ತವಾದ ಆವರಣಗಳೊಡನೆ ಕೂಡಿಕೊಂಡಿರುವ ಈ ಬ್ರಹ್ಮಾಣ್ಡಗಳೆಲ್ಲವೂ ನಾನಾವಿಧವಾಗಿ ಕಾಣುವುವಲ್ಲದೆ, ಇವುಗಳಲ್ಲಿ ಈ ಊರ್ಧ್ವಾದಿ ವಿಭಾಗವು ನಿಯತವಾಗಿಲ್ಲ ॥೧೦॥

ಅಥವಾ ಇವುಗಳಿಗೆ ಒಂದೊಂದುವೇಳೆ ನಿಯಮವ್ಯವಹಾರವೂ ಉಂಟಾಗುವುದು. ಈ ಬ್ರಹ್ಮಾಂಡದಲ್ಲಿ, ಸಮಸ್ತ ಪದಾರ್ಥಗಳೂ ತಮ್ಮ ಸ್ವಾತಂತ್ರ್ಯವಿಲ್ಲದುವುಗಳಾಗಿ ಕೇವಲ ಪರವಶತೆಯಿಂದ ಯಾವುದನ್ನು ಕುರಿತು ಹೋಗುವುವೋ, (ಆಕರ್ಷಿಸಲ್ಪಡುವುವೋ) ಆ ಪೃಥಿವ್ಯಂಶವೇ ಅಧೋಭಾಗವೆಂದೂ—ತದ್ವ್ಯತಿರಿಕ್ತವಾದುದು ಊರ್ಧ್ವಭಾಗವೆಂದೂ ತಿಳಿಯಬೇಕು ॥೧೧॥

ಗುಂಡಾಗಿರುವ ಮಣ್ಣುಂಡೆಯಲ್ಲಿ ಇರುವೆಗಳು ಅಂಟಿಕೊಂಡು ಸುತ್ತುವಂತೆ, ಗುಂಡಾಗಿರುವ ಖಗೋಳದಲ್ಲಿ ಸೂರ್ಯ ಮೊದಲಾದ ಮಹಾಭೂತಗಳು ಅಂಟಿಕೊಂಡು ಸುತ್ತುತಿರುವುವು. ಇವುಗಳಿಗೆ ಪಾದಗಳೇ ಅಧೋಭಾಗವೆಂದೂ ಪೃಷ್ಠಭಾಗವು ಊರ್ಧ್ವವೆಂದೂ ಶಾಸ್ತ್ರಜ್ಞರು ಹೇಳಿರುವರು ॥೧೨॥

ಅಯ್ಯಾ! ರಾಮ! ನಿನ್ನ ಶಂಕೆಗೆ ಸಮಾಧಾನವಾಯ್ತಷ್ಟೆ! ಈಗ ಈ ಬ್ರಹ್ಮಾಣ್ಡಸ್ವರೂಪವನ್ನು ಕೇಳುವವನಾಗು. ಕೆಲವು ಬ್ರಹ್ಮಾಣ್ಡಗಳ ಒಳಭಾಗವು, ವೃಕ್ಷವಲ್ಮೀಕ ಇವುಗಳ ಸಮೂಹದಿಂದ ವ್ಯಾಪ್ತವಾಗಿರುವುದು; ಅಲ್ಲಿ ಮನುಷ್ಯರಿಲ್ಲ; ಅಲ್ಲಿನ ನಿರ್ಮಲವಾದ ಅಂತರಿಕ್ಷವು, ದೇವ ಕಿಂಪುರುಷ ರಾಕ್ಷಸ ಯುಕ್ತವಾದ ಲೋಕಸಮೂಹದಿಂದ ವ್ಯಾಪ್ತವಾಗಿರುವುದು ॥೧೩॥

ಮತ್ತೆ ಕೆಲವು ಬ್ರಹ್ಮಾಣ್ಡ ಸಮುದಾಯವು, ಪಕ್ವವಾದ ಅಕ್ರೋಟದಹಣ್ಣು—ಸಿಪ್ಪೆಯಿಂದ ಪರಿವೇಷ್ಟಿತವಾಗಿಯೇ ಹುಟ್ಟುವಂತೆ, ಅಗತಾನೇ ಉತ್ಪತ್ತಿಹೊಂದುತಿರುವ ಭೂತಸಮುದಾಯದೊಡನೆ, ಗ್ರಾಮ ಪಟ್ಟಣ ಪರ್ವತ ಯುಕ್ತವಾಗಿ ಜನಿಸಿರುವುದು ॥

ಯಥಾ ವಿನ್ಧ್ಯವನಾಭೋಗೇ ಪ್ರಸ್ಫುರನ್ತಿ ಕರೇಣವಃ ।
ತಥಾ ತಸ್ಮಿನ್ ಪರಾಭೋಗೇ ಬ್ರಹ್ಮಾಣ್ಡತ್ರಸರೇಣವಃ ॥೧೫॥
ತಸ್ಮಿನ್ ಸರ್ವಂ ತತಃ ಸರ್ವಂ ತತ್ ಸರ್ವಂ ಸರ್ವತಶ್ಚ ಯತ್ ।
ತಚ್ಚ ಸರ್ವಮಯೋ ನಿತ್ಯಂ ತಥಾ ತದಣು ಕಂ ಪ್ರತಿ ॥೧೬॥
ಶುದ್ಧಬೋಧಮಯೇ ತಸ್ಮಿನ್ ಪರಮಾಲೋಕವಾರಿಧೌ ।
ಅಜಸ್ರಮೇತ್ಯ ಗಚ್ಛನ್ತಿ ಬ್ರಹ್ಮಾಣ್ಡಾಖ್ಯಾಸ್ತರಙ್ಗಕಾಃ ॥೧೭॥
ಅನ್ತಃಶೂನ್ಯಾಃ ಸ್ಥಿತಾಃ ಕೇಚಿತ್ ಸಙ್ಕಲ್ಪಕ್ಷಯರಾತ್ರಯಃ ।
ತರಙ್ಗಾ ಇವ ತೋಯೇಬ್ಧೌ ಪ್ರೋಹ್ಯನ್ತೇ ಶೂನ್ಯತಾರ್ಣವೇ ॥೧೮॥
ಕೇಷಾಂಚಿದನ್ತಃ ಕಲ್ಪಾನ್ತಃ ಪ್ರವೃತ್ತೋ ಘುರ್ಘುರಾರವಃ ।
ನ ಶ್ರುತೋನ್ಯೈರ್ನ ಚ ಜ್ಞಾತಃ ಸ್ವಭಾವೇನ ರಸಾಕುಲೈಃ ॥೧೯॥
ಅನ್ಯೇಷಾಂ ಪ್ರಥಮಾರಮ್ಭೇ ಶುದ್ಧಭೂಷು ವಿಜೃಮ್ಭತೇ ।

ವಿಂಧ್ಯಪರ್ವತದ ವಿಸ್ತಾರವಾದ ಕಾಡಿನೊಳಗೆ ಆನೆಗಳು ಹೇಗೆ ಅಸಂಖ್ಯಾತವಾಗಿ ಓಡಾಡುವುವೋ, ಹಾಗೆ ಆ ಪರಾಕಾಶದಲ್ಲಿ ಬ್ರಹ್ಮಾಂಡಗಳೆಂಬ ಪರಮಾಣುಗಳು ಅಸಂಖ್ಯಾಕವಾಗಿರುವುವು ॥೧೫॥

'ಆ ಚಿದಾಕಾಶದೃಷ್ಟ್ಯಾ ಈ ಬ್ರಹ್ಮಾಂಡವು ಹೇಗೆ ಅಣುವಾಗಿರುವುದೋ, ಹಾಗೆ ಆ ಚಿದಾಕಾಶವೂ ಮತ್ತಾವುದಾದರೊಂದು ಪದಾರ್ಥದ ದೃಷ್ಟ್ಯಾ ಅಣುವಾಗಬಹುದಲ್ಲವೆ!' ಎಂದರೆ, ಇದು ಅಸಂಭವವು. ಈ ಸಮಸ್ತವೂ ಪ್ರಳಯವಾದಾಗ ಅದರಲ್ಲಿಯೇ ಲೀನವಾಗುವುದು; ಉತ್ಪತ್ತಿಯಾಗುವಾಗ ಅದರಿಂದಲೇ ಉತ್ಪನ್ನವಾಗುವುದು; ಅದೇ ಸಮಸ್ತವಾಗಿಯೂ ಸರ್ವತಃ ಪ್ರಸೃತವಾಗಿಯೂ ಸರ್ವಮಯವಾಗಿಯೂ ಇರುವುದು. ಹೀಗಿರುವುದರಿಂದ ಇದು ಯಾವುದರ ದೃಷ್ಟ್ಯಾ ಅಣುವಾದೀತು? ॥೧೬॥

ಶುದ್ಧಜ್ಞಾನಮಯವಾಗಿಯೂ ಪರಪ್ರಕಾಶಸಮುದ್ರವಾಗಿಯೂ ಇರುವ ಆ ಚಿತ್ತಿನಲ್ಲಿ, ಬ್ರಹ್ಮಾಂಡಗಳೆಂಬ ತರಂಗಗಳು, ನಿರಂತರವೂ ಬಂದು ಹೋಗುತ್ತಿರುವುವು ॥೧೭॥

ಮತ್ತೆ ಕೆಲವು ಬ್ರಹ್ಮಾಂಡಗಳು, ಪೂರ್ವಕಲ್ಪದ ಸರ್ವ ಸಂಕಲ್ಪವೂ ಕ್ಷಯಹೊಂದಲಾಗಿ ಕೇವಲ ತಮೋರೂಪಗಳಾಗಿರುತ, ಒಳಗೂ ಶೂನ್ಯ (ಅವ್ಯಾಕೃತ) ಗಳಾಗಿರುವುವು. ಸಮುದ್ರದೊಳಗೆ ನೀರಿನಲ್ಲಿ ತರಂಗಗಳಿದ್ದೇಯಿರುವುವೆಂದು ಊಹಿಸಲ್ಪಡುವಂತೆ ಈ ಬ್ರಹ್ಮಾಂಡಗಳು ಇನ್ನೂ ಅವ್ಯಾಕೃತ (ಸ್ಪಷ್ಟವಾಗಿ ಆಕಾರಹೊಂದದಿರುವುದು) ವಾಗಿದ್ದರೂ, ಅಲ್ಲಿ ಇವುಗಳಿರುವುವೆಂದು ಊಹಿಸಲ್ಪಡುವುವೆಂಬುದಾಗಿ ತಿಳಿಯಬೇಕು ॥೧೮॥

ಮತ್ತೆ ಕೆಲವು ಬ್ರಹ್ಮಾಂಡಗಳೊಳಗೆ, ಮಹಾಕಲಕಲಯುಕ್ತವಾಗಿ ಪ್ರಳಯವು ನಡೆಯುತ್ತಿರುವುದು. ಸ್ವಾಭಾವಿಕವಾದ ಅಜ್ಞಾನದಿಂದ ಇದನ್ನು ಇತರರು ಕೇಳುವುದೂ ಇಲ್ಲ; ತಿಳಿಯುವುದೂ ಇಲ್ಲ ॥೧೯॥

ಇನ್ನು ಕೆಲವು ಬ್ರಹ್ಮಾಂಡಗಳಲ್ಲಿ, ಪ್ರಾಥಮಿಕ ಸೃಷ್ಟಿಯಾಗುತಿರುವುದರಿಂದ, ಪೂರ್ವೋತ್ಪನ್ನವಾದ ಪ್ರಾಣಿಗಳ ಸಂಪರ್ಕವಿಲ್ಲದೆ ಪರಿಶುದ್ಧವಾಗಿರುವ ಭುವನಗಳಲ್ಲಿ,

ಸರ್ಗಾಃ ಸಂಸಿಕ್ತಬೀಜಾನಾಂ ಕೋಶೇಭ್ಯಂಕುರಕಲಾ ಯಥಾ ||೨೦||
ಮಹಾಪ್ರಳಯಸಮ್ಪ್ರಾಪ್ತೌ ಸೂರ್ಯಾರ್ಚಿರ್ವಿದ್ಯುತೋದ್ರಯಃ |
ಪ್ರವೃತ್ತಾಗಳಿತುಂ ಕೇಚಿತ್ ತಾಪೇ ಹಿಮಕಣಾ ಇವ ||೨೧||
ಆಕಲ್ಪಂ ನಿಪತನ್ತ್ಯೇವ ಕೇಚಿದಪ್ರಾಪ್ತಭೂಮಯಃ |
ಯಾವದ್ವಿಶೀರ್ಯ ಜಾಯನ್ತೇ ತಥಾ ಸಂವಿನ್ಮಯಾಃ ಕಿಲ ||೨೨||
ಸ್ತಬ್ಧಾ ಇವ ಸ್ಥಿತಾಃ ಕೇಚಿತ್ ಕೇಶೋಣ್ಡ್ರಕಮಿವಾಮ್ಬರೇ |
ವಾಯೋಃ ಸ್ಪನ್ದಾ ಇವಾಭಾನ್ತಿ ತಥಾ ಪ್ರೋದಿತಸಂವಿದಃ ||೨೩||
ಆಚಾರಾದ್ವೇದಶಾಸ್ತ್ರಾಣಾಂ ಆದ್ಯಏವಾನ್ಯಥೋದಿತೇ |
ಆರಮ್ಭೋಪಿ ತಥಾನ್ಯೇಷಾಂ ಅನಿತ್ಯಃ ಸಂಸ್ಥಿತಃ ಕ್ರಮಃ ||೨೪||
ಕೇಚಿದ್ಬ್ರಹ್ಮಾದಿಪುರುಷಾಃ ಕೇಚಿದ್ವಿಷ್ಣ್ವಾದಿಸರ್ಗಪಾಃ |

ನೀರಿನೊಳಗೆ ನೆನೆದ ಬೀಜಗಳಲ್ಲಿ ಸಣ್ಣ ಅಂಕುರಗಳು ತಲೆದೋರುವಂತೆ, ನವೀನಸೃಷ್ಟಿಗಳು ತಲೆದೋರುತಿರುವುವು ||೨೦||

ಮತ್ತೆ ಕೆಲವು ಬ್ರಹ್ಮಾಂಡಗಳಲ್ಲಿರುವ ಸೂರ್ಯ ಮುಂತಾದ ತೇಜಸ್ಸುಗಳೂ ವಿದ್ಯುತ್ತುಗಳೂ ಪರ್ವತಗಳೂ ಕೂಡ, ಮಹಾಪ್ರಳಯಸಂಭವಿಸಿರುವುದರಿಂದ, ಸೆಕೆಯಾದಾಗ ಮಂಜುಹನಿಗಳು ಸುರಿದುಬಿಡುವಂತೆ, ತಾವಾಗಿ ಹೋಗಿಬಿಡುವುದರಲ್ಲುದ್ಯುಕ್ತಗಳಾಗಿರುವುವು (ನಾಶಸನ್ನಿಹಿತವಾಗಿರುವುದು) ||೨೧||

ಇತರವಾದ ಕೆಲವು ಬ್ರಹ್ಮಾಂಡಗಳು, ಕೆಳಗೆ ಬಿದ್ದು ಒಡೆದುಹೋಗಿ, ಪುನಃ ಹುಟ್ಟುವವರೆಗೂ ಆಧಾರಸಿಕ್ಕದೆಯೇ, ಪ್ರಳಯಕಾಲದವರೆಗೂ ಬೀಳುತ್ತಲೇ ಇರುವುವು. ಆದರೆ ಪೂರ್ವೋಕ್ತರೀತಿಯಾಗಿ ಪತನವೇ ಇಲ್ಲದಿರುವಾಗ ಇವು ಬೀಳುವುದು ಹೇಗೆಂದು ಶಂಕಿಸಬಾರದು ; ಅವು ತಾದೃಶಜ್ಞಾನಮಯಗಳಾಗಿರುವುದರಿಂದ, ಹಾಗೆ ಅವಕ್ಕೆ ಪತನಜ್ಞಾನವಸಂಭವಲ್ಲವಷ್ಟೆ ! ||೨೨||

ಮತ್ತೆ ಕೆಲವು ಬ್ರಹ್ಮಾಂಡಗಳು, ಆಕಾಶದಲ್ಲಿ ಕೇಶೋಂಡ್ರಕವಿರುವಂತೆ, ನಿಶ್ಚಲವಾಗಿರುವಹಾಗೆ ಕಾಣುವುವು ; ಇನ್ನು ಕೆಲವು ಬ್ರಹ್ಮಾಂಡಗಳು, ಆ ವಿಧವಾಗಿ ಉತ್ಪನ್ನವಾದ ಜ್ಞಾನವುಳ್ಳುವುಗಳಾಗಿ, ವಾಯುವಿನ ಚಲನೆಯಂತೆ ಭಾಸಮಾನವಾಗುತ್ತಿರುವುವು ||೨೩||

ಇಲ್ಲಿ ಮತ್ತೊಂದು ರೀತಿಯಾಗಿ ಶಂಕೆಯಾಗಬಹುದು.:—'ಧಾತಾ ಯಥಾಪೂರ್ವಮಕಲ್ಪಯತ್' ಇತ್ಯಾದಿ ಶ್ರುತಿಯಿಂದ, ಪೂರ್ವದಲ್ಲಿದ್ದಂತೆಯೇ ಮತ್ತೊಂದು ಬ್ರಹ್ಮಾಂಡವುತ್ಪತ್ತಿಹೊಂದುತಿರುವುದೆಂದು ಸಿದ್ಧವಾಗಿರುವಕಾರಣ, ಪ್ರತಿಯೊಂದು ಬ್ರಹ್ಮಾಂಡಕ್ಕೂ ಪರಸ್ಪರ ಭೇದವರ್ಣನೆಯಸಂಗತವೆಂದು ಶಂಕೆಯುಂಟಾಗಬಹುದು. ಇಂತಹ ಶಂಕೆಗೆ ಇಲ್ಲಿ ಅವಕಾಶವಿಲ್ಲ. ವೇದಶಾಸ್ತ್ರೋಕ್ತವಾದ ಕರ್ಮಜ್ಞಾನಾನುಷ್ಠಾನರೂಪವಾದ ಸದಾಚಾರದಿಂದ ಸೃಷ್ಟಿಕರ್ತನಾಗಿ ಪರಿಣಮಿಸಿರುವ ವಿಧಾತನ ಪ್ರಥಮಸೃಷ್ಟಿಯೇ ಪೂರ್ವಸೃಷ್ಟಿಗಿಂತ ಬೇರೆವಿಧವಾಗಿ ಹುಟ್ಟಲಾಗಿ, ಅಲ್ಲಿಂದ ಮುಂದಕ್ಕೆ ಹುಟ್ಟುವ ಬ್ರಹ್ಮಾಂಡಗಳ ಸೃಷ್ಟಿಯೂ ಹಾಗೆಯೇ ಆಗುವುದು. ಆದುಕಾರಣ, ಒಂದು ಬ್ರಹ್ಮಾಂಡದಂತೆಯೇ ಮತ್ತೊಂದು ಬ್ರಹ್ಮಾಂಡವೂ ಇರುವುದೆಂಬ ಕ್ರಮವು ಅನಿಯತವಾಗಿರುವುದು ||೨೪||

ಕೆಲವು ಬ್ರಹ್ಮಾಂಡಗಳಿಗೆ ಬ್ರಹ್ಮನೇ ಆದಿಪುರುಷನಾಗಿಯೂ, ಮತ್ತೆ ಕೆಲವಕ್ಕೆ

ಕೇಚಿಚ್ಛಾನ್ಯಪ್ರಜಾನಾಥಾಃ ಕೇಚಿನ್ನಿರ್ನಾಥಜನ್ತವಃ ॥೨೫॥
ಕೇಚಿದ್ವಿಚಿತ್ರಸರ್ಗೇಶಾಃ ಕೇಚಿತ್ ತಿರ್ಯಙ್ಮಯಾನ್ತರಾಃ ।
ಕೇಚಿದೇಕಾರ್ಣವಾಪೂರ್ಣಾಃ ಇತರೇ ಜನಿವರ್ಜಿತಾಃ ॥೨೬॥
ಕೇಚಿಚ್ಛಿಲಾಜ್ಗನಿಷ್ಪಿಣ್ಡಾಃ ಕೇಚಿತ್ ಕ್ರಿಮಿಮಯಾನ್ತರಾಃ ।
ಕೇಚಿದ್ದೇವಮಯಾಏವ ಕೇಚಿನ್ನರಮಯಾನ್ತರಾಃ ॥೨೭॥
ಕೇಚಿನ್ನಿತ್ಯಾನ್ಧಕಾರಾಢ್ಯಾಃ ತಥಾ ಶೀಲಿತಜನ್ತವಃ ।
ಕೇಚಿನ್ನಿತ್ಯಪ್ರಕಾಶಾಢ್ಯಾಃ ತಥಾ ಶೀಲಿತಜನ್ತವಃ ॥೨೮॥
ಕೇಚಿನ್ಮಶಕಸಮ್ಪೂರ್ಣಾಃ ಉದುಮ್ಬರಫಲಶ್ರಿಯಃ ।
ನಿತ್ಯಂ ಶೂನ್ಯಾನ್ತರಾಃ ಕೇಚಿತ್ ಶೂನ್ಯಸ್ಪನ್ದಾತ್ಮಜನ್ತವಃ ॥೨೯॥
ಸರ್ಗೇಣ ತಾದೃಶೇನಾನ್ಯೇ ಪೂರ್ಣಾಯೇನ್ತರ್ಧಿಯಾಮಿಹ ।
ಕಲ್ಪನಾಮಪಿ ನಾಯಾನ್ತಿ ವ್ಯೋಮಪೂರ್ಣಾಚಲೋ ಯಥಾ ॥೩೦॥

ವಿಷ್ಣುವೇ ಪ್ರಥಮಸೃಷ್ಟಿಕರ್ತನಾಗಿಯೂ, ಇನ್ನು ಕೆಲವಕ್ಕೆ ಈಶ್ವರ ಮುಂತಾದವರು ಪ್ರಜಾನಾಥರಾಗಿಯೂ, ಇರುವರು; ಬೇರೆ ಕೆಲವಕ್ಕೆ ನಾಥನೇ ಇಲ್ಲದೆ, ಅವುಗಳಲ್ಲಿ ಕೇವಲ ಪಶುಪಕ್ಷ್ಯಾದಿಗಳು ತುಂಬಿರುವುವು. ಹೀಗಿರುವುದರಿಂದ, ಆಯಾ ಅಧಿಪತಿಗಳ ಗುಣತಾರತಮ್ಯದಿಂದ ಆಯಾ ಬ್ರಹ್ಮಾಂಡಗಳಲ್ಲಿರುವ ಜನರಲ್ಲಿಯೂ ತಾರತಮ್ಯವುಂಟಾಗುವುದು ॥೨೫॥

ಕೆಲವು ಬ್ರಹ್ಮಾಂಡಗಳಲ್ಲಿ, ಬ್ರಹ್ಮ ವಿಷ್ಣು ಮುಂತಾದವರಿಗೆಲ್ಲ ಸಮವಾದ ಅಧಿಕಾರವಿರುವುದರಿಂದ, ಅವರು ನಾನಾವಿಧವಾಗಿ ವಿಚಿತ್ರರಾಗಿರುವರು; ಮತ್ತೆ ಕೆಲವಲ್ಲಿ, ಒಳಗಡೆಯೆಲ್ಲ ಕೇವಲ ತಿರ್ಯಗ್ಜಂತುಗಳು ವ್ಯಾಪಿಸಿಕೊಂಡಿರುವುವು; ಇನ್ನು ಕೆಲವಲ್ಲಿ ಜಲವು ಏಕಾರ್ಣವಭೂತವಾಗಿ ತುಂಬಿರುವುದು; ಬೇರೆ ಕೆಲವು ಇನ್ನೂ ಉತ್ಪತ್ತಿಯಿಲ್ಲದೆಯೇ ಇರುವುವು ॥೨೬॥

ಕೆಲವು ಬ್ರಹ್ಮಾಂಡಗಳು, ಶಿಲಾಹೃದಯದಂತೆ ನಿಬಿಡವಾಗಿರುವುವು; ಕೆಲವು ಕೇವಲ ಕ್ರಿಮಿಪೂರ್ಣವಾದ ಒಳಭಾಗವುಳ್ಳವಾಗಿರುವುವು; ಕೆಲವಲ್ಲಿ ಕೇವಲ ದೇವತೆಗಳೇ ಇರುವರು; ಮತ್ತೆ ಕೆಲವಲ್ಲಿ ಕೇವಲ ಮನುಷ್ಯರೇ ಇರುವರು ॥೨೭॥

ಕೆಲವು ಬ್ರಹ್ಮಾಂಡಗಳೊಳಗೆ ನಿತ್ಯವೂ ಅಂಧಕಾರವೇ ವ್ಯಾಪಿಸಿಕೊಂಡು, ಅಲ್ಲಿರುವ ಪ್ರಾಣಿಗಳೂ ಹಾಗೆಯೇ ಕಾಣುವುವು; ಇನ್ನು ಕೆಲವಲ್ಲಿ ನಿತ್ಯವೂ ಪ್ರಕಾಶವೇ ತುಂಬಿಕೊಂಡು, ಅಲ್ಲಿರುವ ಪ್ರಾಣಿಗಳೂ ಹಾಗೆಯೇ ಕಾಣುವುವು ॥೨೮॥

ಮತ್ತೆ ಕೆಲವು ಬ್ರಹ್ಮಾಂಡಗಳು, ಮಶಕ (ಸೊಳ್ಳೆ) ಗಳಿಂದ ಪರಿಪೂರ್ಣಗಳಾಗಿ, ಅತ್ತಿಯಹಣ್ಣಿನ ಸೊಬಗನ್ನು ಹೊಂದಿರುವುವು! ಇನ್ನು ಕೆಲವು, ನಿತ್ಯವೂ ಸ್ಪಂದಶೂನ್ಯವಾದ ಅಂತರ್ಭಾಗವುಳ್ಳವುಗಳಾಗಿ, ಅಲ್ಲಿರುವ ಪ್ರಾಣಿಗಳೂ ಸ್ಪಂದಶೂನ್ಯಸ್ವಭಾವಗಳಾಗಿರುವುವು ॥೨೯॥

ಇನ್ನು ಕೆಲವು ಬ್ರಹ್ಮಾಂಡಗಳು, ಯೋಗಿಗಳ ಮನಸ್ಸಿನಲ್ಲಿ—ಆಕಾಶಪರಿಪೂರ್ಣವಾದ ಪರ್ವತದಂತೆ—ಸವಿಕಲ್ಪಕಜ್ಞಾನವಿಷಯವೂ ಆಗದಿರುವ ಸೃಷ್ಟಿಸಮುದಾಯದಿಂದ ಪೂರ್ಣವಾಗಿರುವುವು ॥೩೦॥

ತಾದೃಗಮ್ಬರಮೇತೇಷಾಂ ಮಹಾಕಾಶಂ ತತಂ ಸ್ಥಿತಮ್ ।
ಆಜೀವಿತಂ ಪ್ರಗಚ್ಛದ್ಭಿಃ ವಿಷ್ಣ್ವಾದ್ಯೈರ್ಯನ್ನ ವಿಮೀಯತೇ ॥೨೧॥
ಪ್ರತ್ಯೇಕಸ್ಯಾಣ್ಡಗೋಳಸ್ಯ ಸ್ಥಿತಃ ಕಟಕರತ್ನವತ್ ।
ಭೂತಾಕೃಷ್ಟಿಕರೋ ಭಾವಃ ಪಾರ್ಥಿವಃ ಸ್ವಸ್ವಭಾವತಃ ॥೨೦॥
ಯಃ ಸರ್ವವಿಭವೋಽಸ್ಮಾಕಂ ಧಿಯಾಂ ನ ವಿಷಯಂ ತತಃ ।
ತಜ್ಜಗತ್ಕಥನೇ ಶಕ್ತಿಃ ನ ಮಮಾಸ್ತಿ ಮಹಾಮತೇ ॥೨೨॥
ಭೀಮಾನ್ಧಕಾರಗಹನೇ ಸುಮಹತ್ಯರಣ್ಯೇ
ನೃತ್ಯನ್ತ್ಯದರ್ಶಿತಪರಸ್ಪರಮೇವ ಮತ್ತಾಃ ।
ಯಕ್ಷಾ ಯಥಾ ಪ್ರವಿತತೇ ಪರಮಾಮ್ಬರೇನ್ತಃ
ಏವಂ ಸ್ಫುರನ್ತಿ ಸುಬಹೂನಿ ಮಹಾಜಗನ್ತಿ ॥೨೪॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ವಿಚಿತ್ರಬ್ರಹ್ಮಾಣ್ಡ
ಕೋಟಿವರ್ಣನಂ ನಾಮ ತ್ರಿಂಶತ್ತಮಃ ಸರ್ಗಃ.

ಹೀಗಿರುವ ಈ ಬ್ರಹ್ಮಾಂಡಗಳ ಆಕಾಶವು, ಮಹಾವಕಾಶಯುಕ್ತವಾಗಿ ವಿಸ್ತರಿಸಿಕೊಂಡಿರುವುದು; ವಿಷ್ಣು ಮೊದಲಾದವರು ತಮ್ಮ ಜೀವಿತವಿರುವವರೆಗೂ ಓಡಿದರೂ, ಇದರ ಪರಿಮಾಣವನ್ನು ತಿಳಿಯಲಾರರು ॥೨೧॥

ಇಂತಹ ಅನೇಕ ಬ್ರಹ್ಮಾಂಡಗಳಲ್ಲಿ, ಪ್ರತಿಯೊಂದು ಬ್ರಹ್ಮಾಂಡಕ್ಕೂ, ಕಡಗದಲ್ಲಿನ ರತ್ನದ ಸುತ್ತಲೂ ಚಿನ್ನವು ಕಚ್ಚಿಕೊಂಡಿರುವಂತೆ, ಸ್ವಭಾವತಃ ಭೂತಗಳನ್ನು ಆಕರ್ಷಣೆಮಾಡುವ ಪೃಥವ್ಯಂಶವಿದ್ದೇ ಇರುವುದು. ಆದುಕಾರಣ, ಹೊರಗಣ ಜಲಾದ್ಯಾವರಣಗಳು ಯಥಾಸ್ಥಾನದಲ್ಲಿ ಅವಸ್ಥಿತವಾಗಿರುವುವು ॥೨೦॥

ಅಯ್ಯಾ! ರಾಮ! ಈ ಜಗತ್ತುಗಳನ್ನು ವರ್ಣಿಸುವ ವಿಷಯದಲ್ಲಿ, ನಮ್ಮ ಬುದ್ಧಿ ವೈಭವವೆಷ್ಟಿರುವುದೋ—ಅದೆಲ್ಲವನ್ನೂ ತೋರಿಸಿಯಾಯಿತು; ಆದುಕಾರಣ, ಇನ್ನು ಹೆಚ್ಚಾಗಿ ವಿವರಿಸಲು ನನಗೆ ಶಕ್ತಿಯಿಲ್ಲ ॥೨೨॥

ಆದರೆ, ಬ್ರಹ್ಮಾಂಡಸಂಖ್ಯೆ ಇಷ್ಟೇಸರಿಯೆಂದು ತಿಳಿಯಬಾರದು; ಅತಿ ಭಯಂಕರವಾದ ಅಂಧಕಾರದಿಂದ ದುಷ್ಪ್ರವೇಶವಾಗಿರುವ ದೊಡ್ಡ ಅರಣ್ಯದಲ್ಲಿ, ಮತ್ತವಾದ ಭೂತಸಂಘಗಳು ಹೇಗೆ ಪರಸ್ಪರ ದರ್ಶನವಿಲ್ಲದುವುಗಳಾಗಿ ನರ್ತನಮಾಡುತಿರುವುವೋ, ಹಾಗೆ ಅತಿವಿಸ್ತಾರವಾದ ಆ ಪರಮಾಕಾಶದೊಳಗೆ ಅನೇಕವಾಗಿ ಮಹಾಬ್ರಹ್ಮಾಂಡಗಳು ಸ್ಫುರಿಸುತ್ತಿರುವುವು ॥೨೪॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ವಿಚಿತ್ರಬ್ರಹ್ಮಾಂಡ
ಕೋಟಿವರ್ಣನವೆಂಬ ಮೂವತ್ತನೆಯ ಸರ್ಗವು

ಅಥ ಉತ್ಪತ್ತಿಪ್ರಕರಣೇ ಏಕತ್ರಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಏವಮಾಕಲಯನ್ತ್ಯೌ ತೇ ನಿರ್ಗತ್ಯ ಜಗತೋ ನಿಜಾತ್ ।
ಅನ್ತಃಪುರಂ ದದೃಶತುಃ ಝಡಿತ್ಯೇವ ವಿನಿರ್ಗತೇ ॥೧॥
ಸ್ಥಿತಪುಷ್ಪಭರಾಪೂರ್ಣ ಮಹಾರಾಜಮಹಾಶವಮ್ ।
ಶವಪಾರ್ಶ್ವೋಪವಿಷ್ಟಾನ್ತಶ್ಚಿತ್ತಲೀಲಾಶರೀರಕಮ್ ॥೨॥
ಘನರಾತ್ರಿತಮಾಲ್ಪಾಲ್ಪಮಹಾನಿದ್ರಾಜನಾಕುಲಮ್ ।
ಧೂಪಚನ್ದನಕರ್ಪೂರಕುಙ್ಕುಮಾಮೋದಮನ್ಥರಮ್ ॥೩॥
ತಮಾಲೋಕ್ಯಾಪರಂ ಭರ್ತುಃ ಸಂಸಾರಂ ಗನ್ತುಮಾದೃತಾ ।
ಪಪಾತ ಲೀಲಾ ಸಙ್ಕಲ್ಪದೇಹೇನಾತ್ರೈವ ತನ್ನಭಃ ॥೪॥

ಉತ್ಪತ್ತಿಪ್ರಕರಣದಲ್ಲಿ ಮೂವತ್ತೊಂದನೆಯ ಸರ್ಗವು.

ಪುನರನ್ತಃಪುರಪ್ರೇಕ್ಷಾ ಬ್ರಹ್ಮಾಣ್ಡಾನ್ತರದರ್ಶನಮ್ ।
ಶೂರಾದಿಲಕ್ಷ್ಮಸನ್ನದ್ಧಸೈನ್ಯಪ್ರೇಕ್ಷಾತ್ರ ವರ್ಣ್ಯತೇ ॥

ಲೀಲಾಸರಸ್ವತಿಯರಿಬ್ಬರೂ—ಪುನಃ ಅಂತಃಪುರವನ್ನೂ ಮತ್ತೊಂದು ಬ್ರಹ್ಮಾಂಡವನ್ನೂ ಶೂರ ಮುಂತಾದ ಲಕ್ಷಣದಿಂದ ಯುಕ್ತವಾಗಿರುವ ಸೈನ್ಯವನ್ನೂ ಕೂಡ ನೋಡುವಿಕೆಯು ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಪುನಃ ಶ್ರೀ ವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಅನೇಕಕೋಟಿ ಬ್ರಹ್ಮಾಂಡಗಳನ್ನು ನೋಡುತಿರುವ ಆ ಲೀಲಾಸರಸ್ವತಿಯರು, ತಾವಿದ್ದ ಪೂರ್ವಜನ್ಮದ ಬ್ರಹ್ಮಾಂಡದಿಂದ ಹೊರಟು, ಆ ಪದ್ಮರಾಜನ ಅಂತಃಪುರವನ್ನು ನೋಡಿದರು. ಬಳಿಕ, ಅಲ್ಲಿಂದಲೂ ಬೇಗನೆಯೇ ಹೊರಟವರಾದರು ॥೧॥

ಆಗ ಆ ಅಂತಃಪುರಮಂಟಪವು ಹೇಗಿದ್ದಿತೆಂದರೆ:— ಅದರೊಳಗೆ ಆ ಪದ್ಮರಾಜನ ಶವವು ಪುಷ್ಪಸಮೂಹದಿಂದ ಆಚ್ಛಾದಿತವಾಗಿ ಇರಿಸಲ್ಪಟ್ಟಿದ್ದಿತು; ಆ ಶವದ ಮಗ್ಗುಲಿನಲ್ಲಿ, ಅಂತರ್ಮುಖಳಾಗಿ ಸಮಾಧಿನಿಷ್ಠಳಾಗಿರುವ ಲೀಲೆಯ ದೇಹವು ಕುಳಿತಿದ್ದಿತು ॥೨॥

ಆಗ ಘನರಾತ್ರಿಯಾಗಿದ್ದುದರಿಂದ, ಅಲ್ಲಿದ್ದ ಜನರೆಲ್ಲರಿಗೂ ಗಾಢನಿದ್ರೆಯು ಸ್ವಲ್ಪ ಸ್ವಲ್ಪವಾಗಿದ್ದಿತು; ಧೂಪ ಗಂಧ ಪಚ್ಚಕರ್ಪೂರ ಕುಂಕುಮಕೇಸರ—ಇವುಗಳ ಪರಿಮಳದಿಂದ ಆ ಮಂಟಪವೆಲ್ಲವೂ ಪರಿಪೂರ್ಣವಾಗಿದ್ದಿತು ॥೩॥

ಇಂತಹ ಮಂಟಪವನ್ನೂ ಆ ಬ್ರಹ್ಮಾಂಡವನ್ನೂ ನೋಡಿದವಳಾಗಿ ಲೀಲೆಯು, ತನ್ನ ಪತಿಯ ಮತ್ತೊಂದು ಸಂಸಾರಪ್ರಪಂಚವನ್ನು ಹೊಂದಲುದ್ಯುಕ್ತಳಾಗಿ, ತನ್ನ ಸಂಕಲ್ಪದೇಹದಿಂದ ಆ ಅಂತಃಪುರ ಮಂಟಪದಲ್ಲಿದ್ದವಳಾಗಿಯೇ ಮತ್ತೊಂದಾಕಾಶವನ್ನು ಕುರಿತು ಹಾರಿದಳು ॥೪॥

ವಿವೇಶ ಭರ್ತುಃ ಸಙ್ಕಲ್ಪಸಂಸಾರಂ ಕಿಂಚಿದಾತತಮ್ |
ಸಂಸಾರಾವರಣಂ ಭಿತ್ತ್ವಾ ಭಿತ್ತ್ವಾ ಬ್ರಹ್ಮಾಣ್ಡಕರ್ಪರಮ್ ‖೫‖
ಪ್ರಾಪ ಸಾರ್ಧಂ ತಯಾ ದೇವ್ಯಾ ಪುನರಾವರಣಾನ್ವಿತಮ್ |
ಬ್ರಹ್ಮಾಣ್ಡಮಣ್ಡಪಂ ಸ್ಫಾರಂ ತಂ ಪ್ರವಿಶ್ಯ ತಥಾ ಜವಾತ್ ‖೬‖
ದದರ್ಶ ಭರ್ತುಃ ಸಙ್ಕಲ್ಪಜಗಜ್ಜಮ್ಬಾಲಪಲ್ವಲಮ್ |
ಸಿಂಹೀವ ಶೈಲಕುಹರಂ ತಮೋಜಲದಸಙ್ಕುಲಮ್ ‖೭‖
ದೇವ್ಯೌ ವಿವಿಶತುಸ್ತತ್ ತೇ ವ್ಯೋಮ ವ್ಯೋಮಾತ್ಮಿಕೇ ಜಗತ್ |
ಬ್ರಹ್ಮಾಣ್ಡೇನ್ತರ್ಯಥಾ ಪಕ್ವಂ ಮೃದು ಬಿಲ್ವಂ ಪಿಪೀಲಿಕೇ ‖೮‖
ತತ್ರ ಲೋಕಾನ್ತರಾಣ್ಯದ್ರೀನ್ ಅನ್ತರಿಕ್ಷಮತೀತ್ಯ ತೇ |
ಪ್ರಾಪತುರ್ಭೂತಲಂ ಶೈಲಮಣ್ಡಲಾಮ್ಭೋಧಿಸಙ್ಕುಲಮ್ ‖೯‖
ಮೇರುಣಾಲಙ್ಕೃತಂ ಜಮ್ಬೂದ್ವೀಪಂ ನವದಳೋದರಮ್ |
ಗತ್ವಾಥ ಭಾರತೇ ವರ್ಷೇ ಲೀಲಾನಾಥಸ್ಯ ಮಣ್ಡಲಮ್ ‖೧೦‖

ಹೀಗೆ ಹಾರಿದವಳಾಗಿ, ಅಲ್ಲಿಯೇ ಬ್ರಹ್ಮಾಂಡಾವರಣವನ್ನೂ ಬ್ರಹ್ಮಾಂಡ ಕಟಾಹವನ್ನೂ ಭೇದಿಸಿಕೊಂಡು, ಆಗ ತನ್ನ ಪತಿಯಿರುವ ಸ್ವಲ್ಪ ವಿಸ್ತಾರವಾದ ಮತ್ತೊಂದು ಸಂಕಲ್ಪಮಯ ಬ್ರಹ್ಮಾಂಡವನ್ನು ಪ್ರವೇಶಿಸಿದಳು ‖೫‖

ಅತಿ ವೇಗದಿಂದ ಆ ಸರಸ್ವತಿಯೊಡನೆ ಅದನ್ನು ಪ್ರವೇಶಿಸಿ, ಮತ್ತೆ ಆವರಣಯುಕ್ತವಾಗಿರುವ ವಿಶಾಲವಾದ ಬ್ರಹ್ಮಾಂಡ ಮಂಟಪವನ್ನು ಹೊಂದಿದಳು ‖೬‖

ಅಲ್ಲಿ, ಮೇಘದಿಂದಲೂ ಅಂಧಕಾರದಿಂದಲೂ ವ್ಯಾಪ್ತವಾದ ಪರ್ವತ ಗುಹೆಯನ್ನು ಹೆಣ್ಣುಸಿಂಹವು ನೋಡುವಂತೆ, ಕೆಸರಿಗೆ ಆಶ್ರಯವಾದ ಕೊಳದಂತಿರುವ–ತನ್ನ ಪತಿಯ ಸಂಕಲ್ಪಮಯವಾದ—ಜಗತ್ತನ್ನೂ ನೋಡಿದವಳಾದಳು ‖೭‖

ಬಳಿಕ, ಆಕಾಶರೂಪವಾಗಿರುವ ಆ ಲೀಲಾ ಸರಸ್ವತಿಯರಿಬ್ಬರೂ, ಪಕ್ವವಾಗಿ ಮೆತ್ತಗಿರುವ ಬಿಲ್ವಫಲದೊಳಗೆ ಎರಡಿರುವೆಗಳು ಪ್ರವೇಶಿಸುವಂತೆ, ಆ ಬ್ರಹ್ಮಾಂಡದೊಳಗಿನ ಆಕಾಶಮಯವಾದ ಜಗತ್ತನ್ನು ಪ್ರವೇಶಿಸಿದರು ‖೮‖

ಅಲ್ಲಿ ಅವರಿಬ್ಬರೂ, ಅನೇಕ ಲೋಕಗಳನ್ನೂ ಪರ್ವತಗಳನ್ನೂ ಅಂತರಿಕ್ಷವನ್ನೂ ದಾಟಿದವರಾಗಿ, ಶೈಲಸಮೂಹಗಳಿಂದಲೂ ಸಮುದ್ರದಿಂದಲೂ ವ್ಯಾಪ್ತವಾದ ಭೂತಲವನ್ನು ಹೊಂದಿದವರಾದರು ‖೯‖

ಅನಂತರದಲ್ಲಿ, ಭಾರತವರ್ಷದೊಳಗೆ, ಮೇರುಪರ್ವತದಿಂದ ಅಲಂಕೃತವಾಗಿಯೂ ನವಖಂಡ ಪರಿಷ್ಕೃತವಾಗಿಯೂ ಇರುವ ಜಂಬೂದ್ವೀಪವನ್ನು ಹೊಂದಿದವರಾಗಿ, ಆ ಲೀಲೆಯ ಪತಿಯಿರುವ ರಾಷ್ಟ್ರವನ್ನು ನೋಡಿದರು ‖೧೦‖

ಇಷ್ಟರಲ್ಲಿಯೇ, ಭೂಮಿಗೆ ಅಲಂಕಾರಪ್ರಾಯವಾದ ಆ ದೇಶದಲ್ಲಿ, ತನ್ನ ಸಹಾಯಭೂತರಾದ ಸಾಮಂತರಾಜರ ಬಲಮಹಿಮೆಯಿಂದ ಮದಿಸಿರುವ ಒಬ್ಬ ರಾಜನು, ಮುತ್ತಿಗೆ ಹಾಕಿದನು ‖೧೧‖

ಏತಸ್ಮಿನ್ನಂತರೇ ತಸ್ಮಿನ್ ಮಣ್ಡಲೇ ಮಣ್ಡಿತಾವನೌ ।
ಚಕ್ರೇವಸ್ಕನ್ದನಂ ಕಶ್ಚಿತ್ ಸಾನುಸ್ತೋದ್ರಿಕ್ತಭೂಮಿಪಃ ॥೧೧॥
ತೇನ ಸಙ್ಗ್ರಾಮಸಂರಮ್ಭೇ ಪ್ರೇಕ್ಷಾರ್ಥಂ ಸಮುಪಾಗತೈಃ ।
ತ್ರೈಲೋಕ್ಯಭೂತೈಸ್ತದ್ವ್ಯೋಮ ಬಭೂವಾತ್ಯನ್ತಸಙ್ಕಟಮ್ ॥೧೨॥
ಅಶಙ್ಕಿತಾಗತೇ ತತ್ ತೇ ದೇವ್ಯೌ ದದೃಶತುರ್ನಭಃ ।
ನಭಶ್ಚರಗಣಾಕ್ರಾನ್ತಂ ಅಮ್ಬುದೈರಿವ ಮಾಲಿತಮ್ ॥೧೩॥
ಸಿದ್ಧಚಾರಣಗನ್ಧರ್ವಗಣವಿದ್ಯಾಧರಾನ್ವಿತಮ್ ।
ಶೂರಗ್ರಹಣಸಂರಬ್ಧಸ್ವರ್ಗಲೋಕಾಪ್ಸರೋವೃತಮ್ ॥೧೪॥
ರಕ್ತಮಾಂಸೋನ್ಮುಖೋನ್ನೃತ್ತಭೂತರಕ್ಷಃಪಿಶಾಚಕಮ್ ।
ಪುಷ್ಪವೃಷ್ಟಿಭಿರಾಪೂರ್ಣಹಸ್ತವಿದ್ಯಾಧರಾಙ್ಗನಮ್ ॥೧೫॥
ವೇತಾಳಯಕ್ಷಕೂಶ್ಮಾಣ್ಡೈಃ ದ್ವನ್ದ್ವಾಲೋಕನತತ್ಪರೈಃ ।
ಆಯುಧಾಪಾತರಕ್ಷಾರ್ಥಂ ಗೃಹೀತಾದ್ರಿತಟೈರ್ವೃತಮ್ ॥೧೬॥
ಅಸ್ತ್ರಮಾರ್ಗನಭೋಭಾಗವಿದ್ರವದ್ಭೂತಮಣ್ಡಲಮ್ ।

ಅವನೊಡನೆ ಯುದ್ಧಪ್ರಸಕ್ತಿಯಾಗಿರಲಾಗಿ, ಆ ಯುದ್ಧವನ್ನು ನೋಡುವುದಕ್ಕೋಸ್ಕರ ಬಂದು ಸೇರಿರುವ ತ್ರಿಲೋಕಸ್ಥಿತವಾದ ಪ್ರಾಣಿಸಮುದಾಯದಿಂದ, ಆ ಅಂತರಿಕ್ಷವೆಲ್ಲವೂ ನಿರವಕಾಶವಾಗಿ ತುಂಬಿಹೋಯಿತು ॥೧೨॥

ಆಗ ಬಬ್ಬರಿಗೂ ಗೊತ್ತಿಲ್ಲದೆ ಹಠಾತ್ತಾಗಿ ಬಂದ ಆ ದೇವಿಯರಿಬ್ಬರೂ, ದೇವತೆಗಳ ಸಮೂಹದಿಂದ ವ್ಯಾಪ್ತವಾಗಿ— ಮೇಘಮಾಲಾವೃತವಾಗಿರುವಂತೆ ಕಾಣುತಿರುವ ಆ ಅಂತರಿಕ್ಷವನ್ನು ನೋಡಿದರು ॥೧೩॥

ಆ ಅಂತರಿಕ್ಷವು, ಸಿದ್ಧ ಚಾರಣ ಗಂಧರ್ವ ವಿದ್ಯಾಧರ—ಇವರುಗಳ ಸಮೂಹದಿಂದ ಯುಕ್ತವಾಗಿದ್ದಿತು; ಅಲ್ಲಿ ಅಪ್ಸರಸ್ತ್ರೀಯರು, ತಂತಮಗೆ ಬೇಕಾದ ಶೂರರನ್ನು ವರಿಸುವುದರಲ್ಲುದ್ಯುಕ್ತರಾಗಿ ತುಂಬಿಕೊಂಡಿದ್ದರು ॥೧೪॥

ಆಗ ಆ ಅಂತರಿಕ್ಷ ಪ್ರದೇಶದಲ್ಲಿ, ಭೂತ ರಕ್ಷಃ ಪಿಶಾಚಗಳು, ರಕ್ತದಲ್ಲಿಯೂ ಮಾಂಸದಲ್ಲಿಯೂ ವ್ಯಗ್ರಗಳಾಗಿ ನರ್ತನಮಾಡುತಿದ್ದುವು; ವಿದ್ಯಾಧರಸ್ತ್ರೀಯರು, ತಮ್ಮ ಕೈತುಂಬ ಪುಷ್ಪವೃಷ್ಟಿಯನ್ನು ತುಂಬಿಕೊಂಡು ನಿಂತಿದ್ದರು ॥೧೫॥

ದ್ವಂದ್ವಯುದ್ಧವನ್ನು ನೋಡುವುದರಲ್ಲಿ ಆದರವಿಶಿಷ್ಟರಾದ—ವೇತಾಳ ಯಕ್ಷ ಕೂಶ್ಮಾಂಡ ಮುಂತಾದ ದೇವತೆಗಳು, ತಮ್ಮಮೇಲೆ ಆಯುಧದ ಏಟು ಬಿದ್ದರೆ ಅದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ, ಅದಕ್ಕೆ ಮರೆಯಾಗಿ ಕೈಯಲ್ಲಿ ಬೆಟ್ಟದ ತುಂಡುಗಳನ್ನು ಹಿಡಿದುಕೊಂಡಿದ್ದರು ॥೧೬॥

ಆ ಆಕಾಶದಲ್ಲಿ ನಿಂತುಕೊಂಡಿದ್ದ ಭೂತಸಮೂಹಗಳು, ಬಾಣ ಬರುವ ಅಂತರಿಕ್ಷಮಾರ್ಗವನ್ನು ಬಿಟ್ಟು ದೂರವಾಗಿ ಓಡಿಹೋಗುತಿದ್ದುವು; ಆ ಯುದ್ಧದ ಭಟರು, ತಾವು ತಾವು ಮೇಲಾಗಬೇಕೆಂಬ ಉದ್ದೇಶದಿಂದ ತಂತಮ್ಮ ಪೌರುಷವನ್ನು ತೋರಿಸಲಾಗಿ, ಅದ

ಆಹೋಪುರುಷಿಕಾಕೃಷ್ಟಬದ್ಧಪ್ರೇಕ್ಷಕಾಮೋದನೋದ್ಭಟಮ್ ||೧೭||
ಆಸನ್ನಭೀಮಸಙ್ಗ್ರಾಮಕಿಂವದನ್ತಿ ಪರಸ್ಪರಮ್ |
ಲೀಲಾಹಾಸವಿಲಾಸೋತ್ಕಸುನ್ದರೀಧೃತಚಾಮರಮ್ ||೧೮||
ಧರ್ಮಪ್ರೇಕ್ಷ್ಯಪ್ರಯುಕ್ತಾಗ್ರ್ಯಮುನಿಸ್ವಸ್ತ್ಯಯನಸ್ತವಮ್ |
ಸಮ್ಪನ್ನಾನೇಕಲೋಕೇಶವನಿತಾವಸರಸ್ತವಮ್ ||೧೯||
ಸ್ವರ್ಗಾರ್ಹಶೂರಾನಯನವ್ಯಗ್ರೇನ್ದ್ರಭಟಭಾಸುರಮ್ |
ಶೂರಾರ್ಥಾಲಙ್ಕೃತೋತ್ತುಙ್ಗಲೋಕಪಾಲಾಖ್ಯವಾರಣಮ್ ||೨೦||
ಆಗಚ್ಛಚ್ಛೂರಸಮ್ಮಾನೋನ್ಮುಖಗನ್ಧರ್ವಚಾರಣಮ್ |
ಶೂರೋನ್ಮುಖಾಮರಸ್ತ್ರೈಣಕಟಾಕ್ಷೇಕ್ಷಿತಸದ್ಭಟಮ್ ||೨೧||
ವೀರದೋರ್ದಣ್ಡಕಾಶ್ಲೇಷಲಮ್ಪಟಸ್ತ್ರೀಗಣಾಕರಮ್ |
ಶುಕ್ಲೇನ ಶೂರಯಶಸಾ ಚನ್ದ್ರೀಕೃತದಿವಾಕರಮ್ ||೨೨||

ಶ್ರೀರಾಮಉವಾಚ.

ಭಗವಞ್ಛೂರಶಬ್ದೇನ ಕೀದೃಶಃ ಪ್ರೋಚ್ಯತೇ ಭಟಃ |
ಸ್ವರ್ಗಾಲಙ್ಕರಣಂ ಕಃ ಸ್ಯಾತ್ ಕೋ ವಾ ಡಿಮ್ಭಾಹವೋ ಭವೇತ್ ||೨೩||

ರಿಂದ ನೋಡತಕ್ಕವರೆಲ್ಲರೂ ಬಲು ಕಳವಳಪಡುತ್ತಿದ್ದರು; ಇಂತಹ ಪ್ರೇಕ್ಷಕರನ್ನು ಆ ಮಹಾಭಟರು ತಮ್ಮ ಪೌರುಷಪ್ರದರ್ಶನದಿಂದ ಸಂತೋಷಪಡಿಸುತಿದ್ದರು ||೧೭||

ಅಲ್ಲಿ ಯುದ್ಧನೋಡುತಿರುವವರೆಲ್ಲರೂ, ಆಗತಾನೆ ನಡೆಯುವ ಭಯಂಕರವಾದ ಯುದ್ಧವಾರ್ತೆಯನ್ನು ಪರಸ್ಪರವಾಗಿ ಹೇಳುತಿದ್ದರು; ಆಟ ನಗು ಸೊಬಗು—ಇವುಗಳಲ್ಲಿ ಉತ್ಸುಕರಾದ ಸುಂದರಿಯರು, ಕೈಯಲ್ಲಿ ಚಾಮರಗಳನ್ನು ಹಿಡಿದಿದ್ದರು||೧೮||

ಅಲ್ಲಿ, ಧರ್ಮಾಚರಣಮಹಿಮೆಯಿಂದ ಇತರರಿಗೆ ನೋಡಲಶಕ್ಯರಾಗಿಯೂ ಯೋಗಾನುಷ್ಠಾನಬಲದಿಂದ ಶ್ರೇಷ್ಠರಾಗಿಯೂ ಇರುವ ಮುನಿಗಳು, ಪ್ರಪಂಚಕ್ಷೇಮಾರ್ಥವಾಗಿ ದೇವತಾಸ್ತೋತ್ರಗಳನ್ನು ಮಾಡುತಿದ್ದರು; ಅಲ್ಲಿ ಸೇರಿರುವ ಅನೇಕ ಲೋಕಪಾಲಕಸ್ತ್ರೀಯರೂ, ತತ್ತತ್ಕಾಲೋಚಿತವಾದ ದೇವತಾಸ್ತೋತ್ರಗಳನ್ನು ಮಾಡುತಿದ್ದರು||೧೯

ವೀರಸ್ವರ್ಗಪ್ರಾಪ್ತಿಗರ್ಹರಾದ ಶೂರರನ್ನು ಕರೆತರುವುದರಲ್ಲಿ ಉದ್ಯುಕ್ತರಾಗಿರುವ ಇಂದ್ರನ ದೂತರು, ಆ ಅಂತರಿಕ್ಷವನ್ನು ಪ್ರಕಾಶಪಡಿಸುತಿದ್ದರು; ಮತ್ತು ಶೂರರಿಗೋಸ್ಕರವಾಗಿ ದೊಡ್ಡದೊಡ್ಡ ದಿಗ್ಗಜಗಳನ್ನೂ ಅಲಂಕರಿಸಿದ್ದರು ||೨೦||

ಭೂಲೋಕದಿಂದ ಬರುತಿರುವ ಶೂರರನ್ನು ಬಹುಮಾನಪಡಿಸುವುದರಲ್ಲಿ, ಗಂಧರ್ವರೂ ಚಾರಣರೂ ಉದ್ಯುಕ್ತರಾಗಿದ್ದರು; ಕೇವಲ ಶೂರರಲ್ಲಿಯೇ ಆಸಕ್ತರಾದ ದೇವಸ್ತ್ರೀಯರು, ತಮ್ಮ ಕಟಾಕ್ಷಗಳಿಂದ ಮಹಾ ವೀರರನ್ನು ನೋಡುತಿದ್ದರು ||೨೧||

ವೀರರ ಭುಜದಂಡಗಳನ್ನು ಆಲಿಂಗಿಸುವುದರಲ್ಲಿ ಆಸಕ್ತೆಗಳಾದ ಸ್ತ್ರೀಸಮೂಹಗಳಿಗೆ, ಆ ಆಕಾಶವು ಮುಖ್ಯಾಶ್ರಯಸ್ಥಾನವಾಗಿದ್ದಿತು; ಶುಭ್ರವಾದ ಶೂರರ ಯಶಸ್ಸಿನಿಂದ ಆ ಆಕಾಶದಲ್ಲಿದ್ದ ಸೂರ್ಯನೂಕೂಡ ಚಂದ್ರನಂತೆ ಆಗಿಬಿಟ್ಟಿದ್ದನು ||೨೨||

ಹೀಗೆ ವಸಿಷ್ಠರು ಹೇಳುತಿರುವಾಗ ಶ್ರೀರಾಮನು ಪ್ರಶ್ನೆಮಾಡುವನು:—

ಪೂಜ್ಯರೆ! ಶೂರನೆಂಬ ಶಬ್ದದಿಂದ ಎಂತಹ ಭಟನು ಹೇಳಲ್ಪಡುವನು? ಯಾವನು ಸ್ವರ್ಗಕ್ಕೆ ಅಲಂಕಾರಭೂತನಾಗುವನು? ಯಾವನು ಡಿಂಭಾಹವ (ಮಕ್ಕಳ ಆಟದಂತೆ ಯುದ್ಧಮಾಡತಕ್ಕವನು) ನೆನ್ನಿಸುವನು?|| ೨೩||

ಶ್ರೀವಸಿಷ್ಠ ಉವಾಚ.

ಶಾಸ್ತ್ರೋಕ್ತಾಚಾರಯುಕ್ತಸ್ಯ ಪ್ರಭೋರರ್ಥೇನ ಯೋ ರಣೇ ।
ಮೃತೋ ವಾಥ ಜಯೀ ವಾ ಸ್ಯಾತ್ ಸ ಶೂರಃ ಶೂರಲೋಕಭಾಕ್ ॥೨೪॥
ಅನ್ಯಥಾ ಪ್ರಣಿಕೃತ್ತಾಙ್ಗೋ ರಣೇ ಯೋ ಮೃತಿಮಾಪ್ನುಯಾತ್ ।
ಡಿಮ್ಭಾಹವಹತಃ ಪ್ರೋಕ್ತಃ ಸ ನರೋ ನರಕಾಸ್ಪದಮ್ ॥೨೫॥
ಅಯಥಾಶಾಸ್ತ್ರಸಞ್ಚಾರವೃತ್ತೇರರ್ಥೇನ ಯುಧ್ಯತೇ ।
ಯೋ ನರಸ್ತಸ್ಯ ಸಙ್ಗ್ರಾಮೇ ಮೃತಸ್ಯ ನಿರಯೋಕ್ಷಯಃ ॥೨೬॥
ಯಥಾಸಮ್ಭವಶಾಸ್ತ್ರಾರ್ಥಲೋಕಾಚಾರಾನುವೃತ್ತಿನಾ ।
ಯುಧ್ಯತೇ ತಾದೃಶಶ್ಚೈವ ಭಕ್ತಃ ಶೂರಃ ಸಉಚ್ಯತೇ ॥೨೭॥
ಗೋರರ್ಥೇಬ್ರಾಹ್ಮಣಸ್ಯಾರ್ಥೇ ಮಿತ್ರಸ್ಯಾರ್ಥೇ ಚ ಸನ್ಮತೇ ।
ಶರಣಾಗತಯತ್ನೇನ ಸ ಮೃತಃ ಸ್ವರ್ಗಭೂಷಣಮ್ ॥೨೮॥
ಪರಿಪಾಲ್ಯಸ್ವದೇಶೈಕಪಾಲನೇ ಯಃ ಸ್ಥಿತಃ ಸದಾ ।
ರಾಜಾ ಮೃತಾಸ್ತದರ್ಥಂ ಯೇ ತೇ ವೀರಾವೀರಲೋಕಿನಃ ॥೨೯॥

ಇದಕ್ಕೆ ಶ್ರೀ ವಸಿಷ್ಠರು ಉತ್ತರ ಹೇಳುವರು :—

ವತ್ಸ! ಶಾಸ್ತ್ರೋಕ್ತವಾದ ಆಚಾರವನ್ನಿಟ್ಟುಕೊಂಡಿರುವ ಪ್ರಭುವಿಗೋಸ್ಕರವಾಗಿ, ಯಾವನು ಯುದ್ಧದಲ್ಲಿ ಮರಣಹೊಂದುವನೋ—ಅಥವಾ ಜಯಹೊಂದುವನೋ, ಅವನೇ ಶೂರಲೋಕವನ್ನು ಹೊಂದಲರ್ಹನಾದ ಶೂರನು ॥೨೪॥

ಹೀಗಲ್ಲದೆ ಕೇವಲವಾಗಿ ಯುದ್ಧದಲ್ಲಿ ಕತ್ತರಿಸಲ್ಪಟ್ಟ ಶರೀರವುಳ್ಳವನಾದ ಯಾವನು ಮರಣಹೊಂದುವನೋ, ಇವನು ಡಿಂಭಾಹವದಲ್ಲಿ ಸತ್ತವನೆಂದು ಹೇಳಲ್ಪಡುವನು ; ಅಂಥವನು ನರಕಭಾಜನನಾಗುವನು ॥೨೫॥

ಶಾಸ್ತ್ರೋಕ್ತವಾದ ಆಚಾರವಿಚಾರವು ಯಥಾಕ್ರಮವಾಗಿ ಇಲ್ಲದಿರುವ ರಾಜನಿಗೋಸ್ಕರ ಯಾವ ಮನುಷ್ಯನು ಯುದ್ಧಮಾಡುವನೋ, ಅವನು ಯುದ್ಧದಲ್ಲಿ ಮೃತನಾದರೆ, ಅವನಿಗೆ ಅಕ್ಷಯವಾದ ನರಕವುಂಟಾಗುವುದು ॥೨೬॥

ಯಥಾಸಂಭವವಾಗಿ ಶಾಸ್ತ್ರೀಯವಾದ ಆಚಾರವನ್ನೂ ಲೋಕಮರ್ಯಾದೆಯನ್ನೂ ಇಟ್ಟುಕೊಂಡಿರುವ ರಾಜನನ್ನು ಅನುಸರಿಸತಕ್ಕವನಾಗಿಯೂ ತಾನೂ ಅಂತಹ ಆಚಾರವುಳ್ಳವನಾಗಿಯೂ ಯಾವನು ಯುದ್ಧಮಾಡುವನೋ, ಅವನು ಸ್ವಾಮಿಭಕ್ತನೆಂದೂ ಶೂರನೆಂದೂ ಹೇಳಲ್ಪಡುವನು ॥೨೭॥

ಮತ್ತು, ಗೋವಿಗೋಸ್ಕರವೂ, ಬ್ರಾಹ್ಮಣರಿಗೋಸ್ಕರವೂ ಮಿತ್ರರಿಗೋಸ್ಕರವೂ ಸತ್ಪುರುಷರಿಗೋಸ್ಕರವೂ ಶರಣಾಗತರಕ್ಷಣೆಗೋಸ್ಕರವೂ ಯಾವನು ಪ್ರಾಣವನ್ನು ಕಳೆದುಕೊಳ್ಳುವನೋ, ಅವನು ಸ್ವರ್ಗಕ್ಕೆ ಅಲಂಕಾರಭೂತನು ॥೨೮॥

ಯಾವ ದೊರೆಯು, ತನ್ನಿಂದ ರಕ್ಷಿಸಲ್ಪಡಬೇಕಾದ ದೇಶದ ರಕ್ಷಣೆಯೊಂದರಲ್ಲಿಯೇ ಸರ್ವದಾ ನಿರತನಾಗಿರುವನೋ, ಅಂತಹ ದೊರೆಗೋಸ್ಕರ ಯಾರು ಮರಣಹೊಂದುವರೋ, ಅಂತಹ ವೀರರೇ ವೀರಲೋಕಪಾತ್ರರಾದವರು ॥೨೯॥

ಪ್ರಜೋಪದ್ರವನಿಷ್ಠಸ್ಯ ರಾಜ್ಞೋಽರಾಜ್ಞೋಽಥ ವಾ ಪ್ರಭೋಃ ।
ಅರ್ಥೇನ ಯೇ ಮೃತಾಯುದ್ಧೇ ತೇ ವೈ ನಿರಯಗಾಮಿನಃ ॥೨೦॥
ಯೇ ಹಿ ರಾಜ್ಞಾಮರಾಜ್ಞಾಂ ವಾಪ್ಯಯಥಾಶಾಸ್ತ್ರಕಾರಿಣಾಮ್ ।
ರಣೇ ಮ್ರಿಯನ್ತೇ ಚ್ಛಿನ್ನಾಙ್ಗಾಃ ತೇ ವೈ ನಿರಯಗಾಮಿನಃ ॥೨೧॥
ಧರ್ಮ್ಯಂ ಯಥಾ ತಥಾ ಯುದ್ಧಂ ಯದಿ ಸ್ಯಾತ್ ತರ್ಹಿ ಸಂಸ್ಥಿತಿಃ ।
ನಾಶಯೇಯುರಲಂ ಮತ್ತಾಃ ಪರಲೋಕಭಯೋಜ್ಝಿತಾಃ ॥೨೨॥
ಯತ್ರಯತ್ರ ಹತಃ ಶೂರಃ ಸ್ವರ್ಗ ಇತ್ಯವಶೋಕ್ತಯಃ ।
ಧರ್ಮ್ಯೇ ಯೋದ್ಧಾ ಭವೇಚ್ಛೂರಃ ಇತ್ಯೇವಂ ಶಾಸ್ತ್ರನಿಶ್ಚಯಃ ॥೨೩॥
ಸದಾಚಾರವತಾಮರ್ಥೇ ಖಡ್ಗಧಾರಾಂ ಸಹನ್ತಿ ಯೇ ।
ತೇ ಶೂರಾ ಇತಿ ಕಥ್ಯನ್ತೇ ಶೇಷಾಡಿಮ್ಭಾಹವಾಹತಾಃ ॥೨೪॥
ತೇಷಾಮರ್ಥೇ ರಣೇ ವ್ಯೋಮ್ನಿ ತಿಷ್ಠನ್ತ್ಯುತ್ಕಣ್ಠಿತಾಶಯಾಃ ।
ಶೂರೀಭೂತಮಹಾಸತ್ವದಯಿತೋಕ್ತಿ ಸುರಾಙ್ಗನಾಃ ॥೨೫॥

ಯಾವ ಸ್ವಾಮಿಯು, ತಾನು ದೊರೆಯಾಗಿದ್ದರೂ, ಅಥವಾ ದೊರೆಯಲ್ಲದಿದ್ದರೂ—ಪ್ರಜೆಗಳಿಗೆ ಉಪದ್ರವಕೊಡುವುದರಲ್ಲುದ್ಯುಕ್ತನಾಗುವನೋ, ಅಂಥವನಿಗೋಸ್ಕರವಾಗಿ ಯಾರು ಯುದ್ಧದಲ್ಲಿ ಮರಣಹೊಂದುವರೋ, ಅವರು ನಿಶ್ಚಯವಾಗಿ ನರಕವನ್ನು ಹೊಂದತಕ್ಕವರು ॥೨೦॥

ಶಾಸ್ತ್ರೋಕ್ತವಾಗಿ ಆಚರಣೆಯಿಲ್ಲದವರು ದೊರೆಗಳಾದರೂ ದೊರೆಗಳಲ್ಲದಿದ್ದರೂ ಅವರಿಗೋಸ್ಕರವಾಗಿ ಯಾರು ಯುದ್ಧದಲ್ಲಿ ಕತ್ತರಿಸಲ್ಪಟ್ಟ ಶರೀರವುಳ್ಳವರಾಗಿ ಮರಣಹೊಂದುವರೋ, ಅವರು ಸತ್ಯವಾಗಿ ನರಕಭಾಜನರಾಗುವರು ॥೨೧॥

ಧರ್ಮಮಾರ್ಗವನ್ನೆ ಬಿಡದಿರುವ ಯುದ್ಧದಿಂದುಂಟಾಗುವಂತೆಯೇ ಅಧರ್ಮಯುದ್ಧದಿಂದಲೂ ಸ್ವರ್ಗಲೋಕಪ್ರಾಪ್ತಿಯುಂಟಾಗುವಪಕ್ಷದಲ್ಲಿ, ಯುದ್ಧಮತ್ತರಾದವರು ಪರಲೋಕಭಯರಹಿತರಾಗಿ-ಪ್ರಪಂಚವನ್ನೆಲ್ಲ ಸಂಪೂರ್ಣವಾಗಿ ನಾಶಮಾಡಿಬಿಟ್ಟಾರು !॥೨೨॥

“ಯತ್ರಯತ್ರ ಹತಃ ಶೂರಃ ಸ್ವರ್ಗಸ್ತತ್ರ ಪದೇಪದೇ” ಎಂದು ಸಾಮಾನ್ಯವಾಗಿ ಯಾವ ಭೇದವೂ ಇಲ್ಲದೆ ಹೇಳಿರುವ ವಚನಗಳಿಗೆಲ್ಲ ಗತಿಯೇನೆಂದರೆ:—ಆ ವಚನಗಳು ಶಾಸ್ತ್ರಜ್ಞರಲ್ಲದವರ ವ್ಯರ್ಥಾಲಾಪಗಳೆಂದು ತಿಳಿಯಬೇಕು. ಧರ್ಮವಾಗಿ ಯುದ್ಧಮಾಡತಕ್ಕವನೇ ಶೂರನೆಂಬುದಾಗಿ ಶಾಸ್ತ್ರನಿಶ್ಚಯವಿರುವುದು ॥೨೩॥

ಮುಖ್ಯವಾಗಿ ಸದಾಚಾರಸಂಪನ್ನರಾಗಿರತಕ್ಕವರಿಗೋಸ್ಕರ ಯಾರು ಕತ್ತಿಯಲಗಿನ ಏಟನ್ನು ಸಹಿಸುವರೋ, ಅವರೇ ಶೂರರೆಂದು ಹೇಳಲ್ಪಡುವರು; ಇಂಥವರಲ್ಲದೆ ಸುಮ್ಮನೆ ಯುದ್ಧದಲ್ಲಿ ಕೊಲ್ಲಲ್ಪಟ್ಟವರು ಪೂರ್ವೋಕ್ತರೀತಿಯಾಗಿ ಡಿಂಭಾಹವರೆನ್ನಲ್ಪಡುವರು ॥೨೪॥

ಹೀಗೆ ಯಥಾವತ್ತಾಗಿ ರಣಾಂಕಣದಲ್ಲಿ ವೀರಸ್ವರ್ಗವನ್ನು ಪಡೆದವರಿಗೋಸ್ಕರ, ಅಂತರಿಕ್ಷದಲ್ಲಿ ಅಪ್ಸರಸ್ತ್ರೀಯರು ಉತ್ಕಂಠಿತಹೃದಯರಾಗಿ, ಶೂರರಾದ ಮಹಾವೀರರಿಗೆ ತಾವು ಕಾಂತೆಯರೆಂದು ಹೇಳಿಕೊಳ್ಳುತ, ಕಾದು ನಿಂತಿರುವರು ॥೨೫॥

ವಿದ್ಯಾಧರೀಮಧುರಮನ್ಥರಗೀತಿಗರ್ಭಂ
ಮನ್ದಾರಮಾಲ್ಯವಲನಾಕುಲಕಾಮಿನೀಕಮ್ ।
ವಿಶ್ರಾನ್ತಶಾನ್ತಸುರಸಿದ್ಧವಿಮಾನಪಙ್ಕ್ತಿ
ವ್ಯೋಮೋತ್ಸವೋಚ್ಚರಿತಶೋಭಮಿವೋಲ್ಲಲಾಸ ॥೩೬॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಯುದ್ಧಪ್ರೇಕ್ಷಿಕಾ
ವರ್ಣನಂ ನಾಮ ಏಕತ್ರಿಂಶಃ ಸರ್ಗಃ.

ಅಯ್ಯಾ ! ರಾಮ ! ಆಗ ಆ ಅಂತರಿಕ್ಷವು, ವಿದ್ಯಾಧರಸ್ತ್ರೀಯರ ಮೃದುಮಧುರವಾದ ಗಾನವು ಮಧ್ಯದಲ್ಲುಳ್ಳದಾಗಿಯೂ, ಮಂದಾರಮಾಲಿಕೆಗಳನ್ನು ಕಟ್ಟುವುದರಲ್ಲಿ ತ್ವರೆಪಡುತ್ತಿರುವ ಕಾಮಿನಿಯರುಳ್ಳದಾಗಿಯೂ, ಸುಂದರರಾದ ದೇವತೆಗಳೂ ಸಿದ್ಧರೂ ವಿಶ್ರಮಿಸಿಕೊಂಡಿರುವ ವಿಮಾನಪರಂಪರೆಯುಳ್ಳದಾಗಿಯೂ, ಉತ್ಸವವಿಶೇಷದಿಂದ ಹೆಚ್ಚಿದ ಕಾಂತಿಯುಳ್ಳದೋ ಎಂಬಂತೆ ಪ್ರಕಾಶಿಸುತಿದ್ದಿತು ॥೩೬॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಯುದ್ಧದರ್ಶನ
ವರ್ಣನವೆಂಬ ಮೂವತ್ತೊಂದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವಾತ್ರಿಂಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಅಥ ವೀರವರೋತ್ಕಣ್ಠಾನೃತ್ಯದಪ್ಸರಸಿ ಸ್ಥಿತಾ ।
ಲೀಲಾವಲೋಕಯಾಮಾಸ ವ್ಯೋಮ್ನಿ ವಿದ್ಯಾನ್ವಿತಾವನೌ ॥೧॥
ಸ್ವರಾಷ್ಟ್ರಮಣ್ಡಲೇ ಭರ್ತೃಪಾಲಿತೇ ಬಲಮಾಲಿತೇ ।
ಕಸ್ಮಿಂಶ್ಚಿದ್ವಿತತಾರಣ್ಯೇ ದ್ವಿತೀಯಾಕಾಶಭೀಷಣೇ ॥೨॥
ಸೇನಾದ್ವಿತಯಮಾಕ್ಷುಬ್ಧಂ ಸೌಮ್ಯಾಬ್ಧಿದ್ವಿತಯೋಪಮಮ್ ।
ಮಹಾರಮ್ಭಘನಂ ಮತ್ತಂ ಸ್ಥಿತಂ ರಾಜದ್ವಯಾನ್ವಿತಮ್ ॥೩॥
ಯುದ್ಧಸಜ್ಜಂ ಸುಸನ್ನದ್ಧಂ ಇದ್ಧಮಗ್ನಿಮಿವಾದ್ಭುತಮ್ ।
ಪೂರ್ವಪ್ರಹಾರಸಮ್ಪಾತಪ್ರೇಕ್ಷಾಕ್ಷುಬ್ಧಾಕ್ಷಿಲಕ್ಷಿತಮ್ ॥೪॥

ಉತ್ಪತ್ತಿಪ್ರಕರಣದಲ್ಲಿ ಮೂವತ್ತೆರಡನೆಯ ಸರ್ಗವು.

ಸಾಙ್ಕಲ್ಪಿಕವಿಮಾನಸ್ಥಜ್ಞಪ್ತಿಲೀಲಾವಲೋಕಿತಮ್ ।
ಸನ್ನದ್ಧಸೇನಾದ್ವಿತಯಂ ಯುಯುತ್ಸ್ವತ್ರೋಪವರ್ಣ್ಯತೇ ॥

ಸರಸ್ವತೀ ಲೀಲೆಯರಿಬ್ಬರೂ ತಮ್ಮ ಸಂಕಲ್ಪಜನ್ಯವಾದ ವಿಮಾನದಲ್ಲಿ ಕುಳಿತುಕೊಂಡು ಯುದ್ಧಾಪೇಕ್ಷೆಯಿಂದ ಸನ್ನದ್ಧರಾಗಿರುವ ಎರಡು ಸೈನ್ಯಗಳನ್ನೂ ನೋಡಿದರೆಂಬ ವಿಷಯವು ಈ ಸರ್ಗದಲ್ಲಿ ಹೇಳಲ್ಪಡುವುದು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ವತ್ಸ! ಆ ಲೀಲಾ ಸರಸ್ವತಿಯರಿಬ್ಬರೂ ಪೂರ್ವೋಕ್ತರೀತಿಯಾದ ಅಂತರಿಕ್ಷವನ್ನು ನೋಡಿದಬಳಿಕ, ವೀರಶ್ರೇಷ್ಠರನ್ನು ವರಿಸುವುದರಲ್ಲಿ ಉತ್ಕಂಠೆಯಿಂದ ನರ್ತನಮಾಡುತಿರುವ ಅಪ್ಸರಸ್ತ್ರೀಯರುಳ್ಳ ಅಂತರಿಕ್ಷದೊಳಗೆ ಆ ಸರಸ್ವತೀದೇವಿಯೊಡನೆ ನಿಂತಿರುವ ಆಲೀಲೆಯು, ಭೂಮಿಯಲ್ಲಿ ತನ್ನ ಪತಿಯಿಂದ ಸಂರಕ್ಷಿತವಾಗಿಯೂ ಸೈನ್ಯದಿಂದ ಪರಿವೃತವಾಗಿಯೂ ವಿಸ್ತಾರವಾದ ಅರಣ್ಯವುಳ್ಳದಾಗಿಯೂ ಎರಡನೆಯ ಆಕಾಶವೋ ಎಂಬಂತೆ ಭಯಂಕರವಾಗಿಯೂ ಇರುವ ಒಂದಾನೊಂದು ರಾಷ್ಟ್ರದೊಳಗೆ, ಎರಡು ಸೈನ್ಯಗಳು—ಸ್ವಲ್ಪ ಕಳವಳಪಡುತಕ್ಕುವಾಗಿಯೂ ಸೌಮ್ಯವಾದ ಎರಡು ಸಮುದ್ರಗಳಿಗೆ ಸಮವಾಗಿಯೂ ಮಹಾಕಾರ್ಯಾರಂಭವ್ಯಾಪೃತವಾಗಿಯೂ ಮತ್ತವಾಗಿಯೂ ರಾಜಯುಗ್ಮಯುಕ್ತವಾಗಿಯೂ ಇರುವುದನ್ನು ನೋಡಿದಳು ॥೧-೩॥

ಆಗ ಆ ಸೈನ್ಯಯುಗ್ಮವು ಹೇಗಿದ್ದಿತೆಂದರೆ:—ಯುದ್ಧಕ್ಕೆ ಸಿದ್ಧವಾಗಿಯೂ, ಸಂಪೂರ್ಣ ಸನ್ನಾಹಯುಕ್ತವಾಗಿಯೂ, ಪ್ರಜ್ವಲಿತವಾದ ಅಗ್ನಿಯಂತೆ ಅದ್ಭುತವಾಗಿಯೂ ಇದ್ದಿತು; ಮೊದಲು ಏಟುಬೀಳುವುದನ್ನು ಎದುರುನೋಡುತ ಆ ಸೈನ್ಯಗಳ ನೇತ್ರಗಳು ಬಹು ಕ್ಷೋಭೆಪಟ್ಟಿದ್ದುವು ॥೪॥

ಉದ್ಯತಾಮಲನಿಸ್ತ್ರಿಂಶಧಾರಾಸಾರವಹಜ್ಜನಮ್ ।
ಕಚತ್ಪರಶ್ವಥಪ್ರಾಸಭಿನ್ದಿಪಾಲರ್ಷ್ಟಿಮುದ್ಗರಮ್ ॥೫॥
ಗರುತ್ಮತ್ಪಕ್ಷವಿಕ್ಷುಬ್ಧವನಸವ್ರಾತಕಮ್ಪಿತಮ್ ।
ಉದ್ಯದ್ದಿನಕರಾಲೋಕಚಞ್ಚತ್ಕನಕಕಙ್ಕಟಮ್ ॥೬॥
ಪರಸ್ಪರಮುಖಾಲೋಕಕೋಪಪ್ರೋದ್ದಾಮಿತಾಯುಧಮ್ ।
ಅನ್ಯೋನ್ಯಬದ್ಧದೃಷ್ಟಿತ್ವಾತ್ ಚಿತ್ರಂ ಭಿತ್ತಾವಿವಾರ್ಪಿತಮ್ ॥೭॥
ಲೇಖಾಮರ್ಯಾದಯಾ ದೀರ್ಘಬದ್ಧಯಾ ಸ್ಥಾಪಿತಸ್ಥಿತಿ ।
ಅನಿವಾರ್ಯಮಹಾಸೈನ್ಯಝಾಙ್ಕಾರಾಶ್ರುತಸಙ್ಕಥಮ್ ॥೮॥
ಪೂರ್ವಪ್ರಹಾರಸ್ಮಯತಃ ಚಿರಂ ಸಂಶಾನ್ತದುನ್ದುಭಿ ।
ನಿಬದ್ಧಯೋಧಸಂಸ್ಥಾನನಿಖಿಲಾನೀಕಮನ್ಥರಮ್ ॥೯॥
ಧನುರ್ದ್ವಿತಯಮಾತ್ರಾತ್ಮಶೂನ್ಯಮಧ್ಯೈಕಸೇತುನಾ ।
ವಿಭಕ್ತಂ ಕಲ್ಪವಾತೇನ ಮತ್ತಮೇಕಾರ್ಣವಂ ಯಥಾ ॥೧೦॥

ಆ ಸೈನ್ಯಗಳ ಜನರು, ನಿರ್ಮಲವಾದ ಕತ್ತಿಯ ಅಲಗನ್ನು ವಹಿಸಿಕೊಂಡಿದ್ದರು; ಆ ಸೇನಾದ್ವಯದಲ್ಲಿ, ಪರಶ್ವಥ, (ಕೊಡಲಿ) ಪ್ರಾಸ, ಭಿಂಡಿವಾಳ, ಆರ್ಷ್ಟಿ, ಮುದ್ಗರ ಮುಂತಾದ ಆಯುಧಗಳು ಪ್ರಕಾಶಿಸುತ್ತಿದ್ದುವು ॥೫॥

ಗರುಡ ಪಕ್ಷಿಗಳ ರೆಕ್ಕೆಗಳಿಂದ ವಿಕ್ಷುಬ್ಧವಾದ ಅರಣ್ಯದಂತೆ ಆ ಸೈನ್ಯಗಳು ಕಂಪಿಸುತ್ತಿದ್ದುವು; ಆಗತಾನೆ ಸೂರ್ಯೋದಯವಾಗುತಿರುವುದರಿಂದ, ಸೂರ್ಯಕಿರಣಗಳು ಆ ಸೈನಿಕರು ತೊಟ್ಟಿರುವ ಚಿನ್ನದ ಕವಚಗಳಮೇಲೆ ಬೀಳಲಾಗಿ, ಆ ಕವಚಗಳು ತಳತಳಗುಟ್ಟುತಿದ್ದುವು ॥೬॥

ಆ ಸೈನಿಕರು ಪರಸ್ಪರವಾಗಿ ಮುಖಗಳನ್ನು ನೋಡುತ, ಕೋಪಯುಕ್ತರಾಗಿ, ತಮ್ಮ ಆಯುಧಗಳನ್ನು ಎತ್ತುತ್ತಿದ್ದರು; ಒಬ್ಬರ ದೃಷ್ಟಿಯು ಮತ್ತೊಬ್ಬರ ಮುಖದಲ್ಲಿ ನಿಶ್ಚಲವಾಗಿ ನಿಂತಿರುವುದರಿಂದ, ಆ ಸೈನ್ಯವು ಗೋಡೆಯಲ್ಲಿ ಬರೆಯಲ್ಪಟ್ಟ ಚಿತ್ರದಂತೆ ಕಾಣಿಸುತಿದ್ದುವು॥ ೭॥

ಬಲು ಉದ್ದವಾಗಿ ಎಲ್ಲೆಗಟ್ಟಿನ ಗುರುತನ್ನು ಹಾಕಿ, ಆ ಸೈನ್ಯಗಳು ಅದರೊಳಗೇ ಇರುವಂತೆ ಏರ್ಪಡಿಸಿದ್ದರು; ಆ ಸೈನ್ಯಗಳ ಮಹಾಶಬ್ದವು ತಡೆಯಲಸಾಧ್ಯವಾಗಿದ್ದುದರಿಂದ, ಒಬ್ಬರ ಮಾತೊಬ್ಬರಿಗೆ ಕೇಳದಂತಾಯ್ತು ॥೮॥

ಆ ಸೈನಿಕರಿಬ್ಬರೂ ತಾವು ಮೊದಲು ಬಾರಿಸಬಾರದೆಂದು ಯೋಚಿಸುತಿರುವುದರಿಂದ, ಆ ಸೇನೆಗಳಲ್ಲಿರುವ ದುಂದುಭಿಗಳು ಬಹುಕಾಲ ಶಾಂತವಾಗಿದ್ದುವು; ಆ ಸೈನ್ಯಗಳಲ್ಲಿ ಪ್ರತಿಯೊಂದು ಗುಂಪಿಗೂ ಸರಿಯಾಗಿ ಯೋಧರ ಸನ್ನಿವೇಶವನ್ನು ಏರ್ಪಡಿಸಿದ್ದರು ॥೯॥

ಮಧ್ಯದಲ್ಲಿ ಎರಡು ಧನುಃಪ್ರಮಾಣವುಳ್ಳ ಅವಕಾಶದಲ್ಲಿ ಮಾತ್ರ ಜನರಹಿತವಾಗಿ ಒಟ್ಟಾಗಿ ಕಾಣುವ ಆ ಯೆರಡು ಸೈನ್ಯಗಳೂ, ಪ್ರಳಯಕಾಲದಲ್ಲಿ ಏಕಾರ್ಣವವಾಗಿರುವಾಗ ಪ್ರಳಯಮಾರುತವು ಬೀಸಲಾಗಿ ಅದರಿಂದ ಮಧ್ಯದಲ್ಲಿ ವಿಭಾಗ ಮಾಡಲ್ಪಟ್ಟಿರುವ ಸಮುದ್ರದಂತೆ ಕಾಣುತಿದ್ದುವು ॥೧೦॥

ಕಾರ್ಯಸಙ್ಕಟಸಂರಮ್ಭಚಿನ್ತಾಪರವಶೇಶ್ವರಮ್ |
ವಿರಟದ್ಭೇಕಕಣ್ಠತ್ವಗ್ಭಙ್ಗುರಾತುರಹೃದ್ಗುಹಮ್ ||೧೧||
ಪ್ರಾಣಸರ್ವಸ್ವಸನ್ತ್ಯಾಗಸೋದ್ಯೋಗಾಸಙ್ಖ್ಯಸೈನಿಕಮ್ |
ಕರ್ಣಾಕೃಷ್ಟಶರೌಘೌಘತ್ಯಾಗೋನ್ಮುಖಧನುರ್ಧರಮ್ ||೧೨||
ಪ್ರಹಾರಪಾತಸಮ್ಪ್ರೇಕ್ಷಾನಿಷ್ಪನ್ದಾಸಙ್ಖ್ಯಸೈನಿಕಮ್ |
ಅನ್ಯೋನ್ಯೋತ್ಕಣ್ಠಕಾಠಿನ್ಯಭರಭ್ರುಕುಟಿಸಙ್ಕಟಮ್ ||೧೩||
ಪರಸ್ಪರಸುಸಙ್ಘಟ್ಟಕಟುಟಙ್ಕಾರಸಙ್ಕಟಮ್ |
ವೀರಯೋಧಮುಖಾದಗ್ಧಭೀರುಪ್ರೇಪ್ಸಿತಕೋಟರಮ್ ||೧೪||
ಮಿಥಸ್ಸಂಸ್ಥಾನಕಾಲೋಕಮಾತ್ರಾಸನ್ದಿಗ್ಧಜೀವಿತಮ್ |
ಸಮಸ್ತಾಙ್ಗರುಹಾಸಕ್ತಪ್ರಾಂಶುವೃದ್ಧೇಭಮಾನವಮ್ ||೧೫||
ಪೂರ್ವಪ್ರಹಾರಸಮ್ಪ್ರೇಕ್ಷಾವ್ಯಗ್ರಪ್ರಾಣತಯಾ ತಯಾ |

ಆಯೆರಡುಸೈನ್ಯಗಳ ದೊರೆಗಳೂ, ಆಯಾ ಯುದ್ಧಕಾರ್ಯಗಳಲ್ಲಿ ತೊಡಕುಂಟಾದಾಗ ಬಹುಸಂಭ್ರಮಪಟ್ಟು ಚಿಂತಾಪರವಶರಾಗುತಿದ್ದರು ; ಆ ಸೈನ್ಯಗಳಲ್ಲಿ ಭಯಗ್ರಸ್ತರಾದ ವರ ಹೃದಯಗಳು, ಡವಡವ ಎಂದು ಬಡಿದುಕೊಳ್ಳುತಿರುವುದರಿಂದ, ಅರಚಿಕೊಳ್ಳುತಿರುವ ಕಪ್ಪೆಗಳ ಕುತ್ತಿಗೆಯ ಚರ್ಮದಂತೆ, ಯಾವಾಗ ಒಡೆದುಹೋಗುವುವೋ ಎಂದು ತೋರು ತಿದ್ದುವು ||೧೧||

ಆ ಸೈನ್ಯಗಳಲ್ಲಿದ್ದ ಅಸಂಖ್ಯಾಕರಾದ ಸೈನಿಕರು, ತಮ್ಮ ಪ್ರಾಣಸರ್ವಸ್ವವನ್ನೂ ಸ್ವಾಮಿಗೋಸ್ಕರವಾಗಿ ಬಿಡುವುದರಲ್ಲಿ ಉದ್ಯುಕ್ತರಾಗಿದ್ದರು. ಧನುರ್ಧಾರಿಗಳು, ಬಾಣ ಗಳನ್ನು ಕಿವಿಯವರೆಗೆ ಎಳೆದು ಗುಂಪುಗುಂಪಾಗಿ ಬಿಡುವುದರಲ್ಲಿ ಉನ್ಮುಖರಾಗಿದ್ದರು ||೧೨||

ಅಲ್ಲಿರುವ ಅಸಂಖ್ಯಾಕರಾದ ಸೈನಿಕರು, ಏಟುಬೀಳುತಿರುವುದನ್ನು ನೋಡಿ ನಿಶ್ಚಲ ರಾಗಿ ನಿಲ್ಲುತಿದ್ದರು; ಪರಸ್ಪರವಾಗಿ ಯುದ್ಧದಲ್ಲಿ ಉತ್ಕಂಠೆ ಹೆಚ್ಚುತಿರುವುದರಿಂದ, ಅತಿಶಯ ವಾಗಿ ನಿರ್ದಯತ್ವವುಂಟಾಗಿರುವಕಾರಣ, ಅತಿಕ್ರೂರವಾಗಿ ಹುಬ್ಬುಗಂಟುಗಳನ್ನು ಹಾಕು ತಿದ್ದರು ||೧೩||

ಆ ಸೈನಿಕರ ಕವಚಗಳು ಪರಸ್ಪರವಾಗಿ ತಗುಲುವುದರಿಂದ, ಬಹುಕಠಿನವಾಗಿ ಟಂಕಾ ರಧ್ವನಿಗಳು ಹುಟ್ಟುತಿದ್ದುವು; ವೀರರಾದ ಭಟರ ಮುಖವನ್ನು ನೋಡಿದ ಕ್ಷಣವೇ, ಭಯ ಸ್ಥರಾದವರು ದಹಿಸಲ್ಪಟ್ಟವರಂತೆ ಆಗಿ, ತಮ್ಮ ದೇಹರಕ್ಷಣೆಗೋಸ್ಕರ ಪರ್ವತ ಗುಹೆಗ ಳನ್ನು ಆಶ್ರಯಿಸಲು ಅಪೇಕ್ಷಿಸುತಿದ್ದರು ||೧೪||

ಆ ಸೈನ್ಯಗಳು ಪರಸ್ಪರವಾಗಿ ಸನ್ನಿವೇಶಮಾಡಿಕೊಂಡಿರುವುದನ್ನು ನೋಡುವ ಕಾಲ ದಲ್ಲಿಯೇ ಜೀವಿತದಲ್ಲಿ ಸಂಶಯವುಂಟಾಗುತಿದ್ದಿತು. ಅಲ್ಲಿರುವ ಆನೆಗಳೂ ಮನುಷ್ಯರೂ ಕೋಪದಿಂದ ಅತ್ಯಧಿಕವಾಗಿ ರೋಮಾಂಚವಾಗುತಿರುವಕಾರಣ, ಪೂರ್ವಾಪೇಕ್ಷಯಾ ಉಬ್ಬವಾಗಿಯೂ ದಪ್ಪವಾಗಿಯೂ ಕಾಣುತಿದ್ದರು ||೧೫||

ಪೂರ್ವೋಕ್ತರೀತಿಯಾಗಿ ಯಾರು ಮೊದಲು ಹೊಡೆಯುತ್ತಾರೆಯೋ ನೋಡಬೇಕೆಂ

ಸಂಶಾನ್ತಕಲ್ಲೋಲರವಂ ನಿದ್ರಾಮುದ್ರಪುರೋಪಮಮ್ ॥೧೬॥
ಸಂಶಾನ್ತಶಙ್ಖಸಙ್ಘಾತತೂರ್ಯನಿರ್ಹ್ರಾದದುನ್ದುಭಿ ।
ಭೂತಲಾಕಾಶಸಂಲೀನಸರ್ವಪಾಂಸುಪಯೋಧರಮ್ ॥೧೭॥
ಪಲಾಯನಪರೈಃ ಪಶ್ಚಾತ್ ತ್ಯಕ್ತಮಙ್ಗಲಮಣ್ಡಲಮ್ ।
ವಿಸಾರಿಮಕರವ್ಯೂಹಮತ್ಸ್ಯಸಙ್ಘಾಬ್ಧಿಭಾಸುರಮ್ ॥೧೮॥
ಪತಾಕಾಮಞ್ಜರೀಪುಞ್ಜವಿಜಿತಾಕಾಶತಾರಕಮ್ ।
ಹಾಸ್ತಿಕೋತ್ತಮ್ಭಿತಕರಕಾನನೀಕೃತಖಾನ್ತರಮ್ ॥೧೯॥
ತರತ್ತರಳಭಾಪೂರಸಪಕ್ಷಸಕಲಾಯುಧಮ್ ।
ಧಮದ್ಧಮಿತಿಶಬ್ದೈಶ್ಚ ಶ್ವಾಸೋತ್ಥೈರ್ಧ್ಮಾತಖಾನ್ತರಮ್ ॥೨೦॥
ಚಕ್ರವ್ಯೂಹಕರಾಕ್ರಾನ್ತದುರ್ವೃತ್ತಸುರಭಾಸುರಮ್ ।
ಗರುಡವ್ಯೂಹಸಂರಮ್ಭವಿದ್ರವನ್ನಾಗಸಞ್ಚಯಮ್ ॥೨೧॥

ಬುದರಲ್ಲಿ ಮನಸ್ಸು ವ್ಯಗ್ರವಾಗಿರುವುದರಿಂದ, ಅಲೆಗಳ ಧ್ವನಿಯು ಶಾಂತವಾದಂತೆಯೂ-ನಿದ್ರಾವಶವಾದ ಪಟ್ಟಣದಂತೆಯೂ ಇದ್ದಿತು ॥೧೬॥

ಆಗ, ಶಂಖಸಮುದಾಯವೂ ತೂರ್ಯಧ್ವನಿಯೂ ದುಂದುಭಿಯೂ—ಎಲ್ಲವೂ ಚೆನ್ನಾಗಿ ಶಾಂತವಾಗಿದ್ದಿತು. ಸಮಸ್ತವಾದ ಧೂಳಿಯೂ ಮೇಘಗಳೂ, ಭೂಮಿಯಲ್ಲಿಯೂ ಆಕಾಶದಲ್ಲಿಯೂ ಅಡಗಿಕೊಂಡಿದ್ದುವು ॥೧೭॥

ಯುದ್ಧಪರಾಙ್ಮುಖರಾಗಿ ಓಡಿಹೋಗುವುದರಲ್ಲುದ್ಯುಕ್ತರಾದವರು, ಸೇನೆಗೆ ಅಲಂಕಾರಭೂತರಾದ ಶೂರರನ್ನೂ ಬಿಟ್ಟು ಓಡುತಿದ್ದರು. ಮತ್ತು ಮತ್ಸ್ಯಗಳಿಗೂ ಮಕರ (ಮೊಸಳೆ) ಗಳಿಗೂ ಯುದ್ಧನಡೆಯುತಿರುವ ಸಮುದ್ರದಂತೆ ಕಾಣಿಸುತಿದ್ದಿತು ॥೧೮॥

ಪುಷ್ಪಗುಚ್ಛಗಳಂತಿರುವ ಪತಾಕಾಸಮೂಹಗಳು, ಆಕಾಶದಲ್ಲಿರುವ ನಕ್ಷತ್ರಗಳನ್ನು ಜಯಿಸಿಬಿಟ್ಟಿದ್ದುವು; ಆನೆಯ ಮಾವಟಿಗರು ತಮ್ಮ ಕೈಗಳನ್ನು ಎತ್ತಿಕೊಂಡಿರುವುದರಿಂದ, ಆ ಅಂತರಿಕ್ಷಮಧ್ಯವೆಲ್ಲವೂ ಮರದ ತೋಪಿನಂತೆ ಕಾಣುಸುತಿದ್ದಿತು ॥೧೯॥

ಸಮಸ್ತವಾದ ಆಯುಧಗಳಿಗೂ, ತಳತಳನೆ ಚಂಚಲವಾಗಿರುವ ಕಾಂತಿಯು ಪ್ರಸರಿಸುತಿರುವುದರಿಂದ, ಮೊಗ್ಗುಲಿನಲ್ಲಿ ರೆಕ್ಕೆಯು ಹುಟ್ಟಿರುವುದೋ ಎಂಬಂತೆ ಕಾಣುತಿದ್ದಿತು. ಶಂಖ ಮುಂತಾದುವುಗಳಲ್ಲಿ ಮನುಷ್ಯರ ನಿಶ್ವಾಸ ಮಾರುತವು ತುಂಬಿಕೊಂಡು ಹುಟ್ಟುತಿರುವ ಧಮಧಮ ಎಂಬ ಶಬ್ದಗಳಿಂದ, ಅಂತರಿಕ್ಷದ ಅವಕಾಶವೆಲ್ಲವೂ ಶಬ್ದಯುಕ್ತವಾಗಿದ್ದಿತು ॥೨೦॥

ಆ ಸೇನಾದ್ವಯದೊಳಗೆ, ಕೆಲವುಕಡೆ ಚಕ್ರವ್ಯೂಹವನ್ನು ರಚಿಸುತಿರುವ ಮನುಷ್ಯರು, ದುಷ್ಟರಾದವರನ್ನು ಹಿಡಿದು ಮೆಟ್ಟಿಕೊಂಡಿರುವುದರಿಂದ, ರಾಕ್ಷಸನಿಗ್ರಹಮಾಡುತಿರುವ ದೇವತೆಗಳಂತೆ ಪ್ರಕಾಶಿಸುತಿದ್ದರು; ಮತ್ತೆ ಕೆಲವುಕಡೆ ಗರುಡವ್ಯೂಹಗಳನ್ನು ಸಂಭ್ರಮವಾಗಿ ಕಟ್ಟುತಿರುವುದರಿಂದ, ಆನೆಗಳೆಂಬ ಸರ್ಪಗಳು ಓಡಿಹೋಗುತಿದ್ದುವು ॥

ಶ್ಯೇನವ್ಯೂಹವಿಭಿನ್ನಾಗ್ರಸನ್ನಿವೇಶೋತ್ಥಮಧ್ವನಿ ।
ಅನ್ಯೋನ್ಯಾಸ್ಫೋಟನಿಶ್ಶೇಷಪ್ರಪತದ್ಭೂರಿಬೃನ್ದಕಮ್ ॥೨೨॥
ವಿವಿಧವ್ಯೂಹವಿನ್ಯಾಸವಾನ್ತವೀರವರಾರವಮ್ ।
ಕರಪ್ರತೋಲನೋಲ್ಲಾಸಮತ್ತಮುದ್ಗರಮಣ್ಡಲಮ್ ॥೨೩॥
ಕೃಷ್ಣಾಯುಧಾಂಶುಜಲದಶ್ಯಾಮೀಕೃತದಿವಾಕರಮ್ ।
ಅನಿಲಾಧೂತಸಲ್ಯೌಲಸೂತ್ಕೃತಾಭಶರಧ್ವನಿ ॥೨೪॥
ಅನೇಕಕಲ್ಪಕಲ್ಪಾಗ್ರಸಬೃನ್ದಮಿವ ಸಂಸ್ಥಿತಮ್ ।
ಪ್ರಳಯಾನಿಲಸಂಕ್ಷುಬ್ಧಂ ಏಕಾರ್ಣವಮಿವೋತ್ಥಿತಮ್ ॥೨೫॥
ಸದ್ಯಶ್ಛಿನ್ನಂ ಮಹಾಮೇರೋಃ ಪಕ್ಷದ್ವಯಮಿವ ಸ್ಫುರತ್ ।
ಕ್ಷುಬ್ಧಮಾರುತನಿರ್ಧೂತಮಿವ ಕಜ್ಜಲಪರ್ವತಮ್ ॥೨೬॥
ಪಾತಾಳಕುಹರಾತ್ ಕ್ಷುಬ್ಧಂ ಅನ್ಧಕಾರಮಿವೋತ್ಥಿತಮ್ ।
ಲೋಕಾಲೋಕಮಿವೋನ್ಮತ್ತನೃತ್ಯಲೋಲಲಸತ್ತಟಮ್ ।
ಮಹಾನರಕಸಙ್ಘಾತಂ ಭಿತ್ತ್ವಾವನಿಮಿವೋತ್ಥಿತಮ್ ॥೨೭॥

ಮತ್ತೆ ಕೆಲವು ಕಡೆ, ಶ್ಯೇನವ್ಯೂಹವನ್ನು ರಚಿಸಿ ಪ್ರತಿಸೈನ್ಯದ ಮುಂಭಾಗವನ್ನು ಭೇದಿಸಿಬಿಟ್ಟಕಾರಣ, ಅತ್ಯಧಿಕವಾದ ಧ್ವನಿ ಹುಟ್ಟುತಿದ್ದಿತು. ಇನ್ನು ಕೆಲವುಕಡೆ, ಪರಸ್ಪರವಾಗಿ ಸಂಘರ್ಷಣದಿಂದ ಭಟರು ಗುಂಪುಗುಂಪಾಗಿ ಬೀಳುತಿದ್ದರು ॥೨೨॥

ಮತ್ತು, ಅಲ್ಲಿರುವ ಮಹಾವೀರರು, ನಾನಾವಿಧವಾದ ವ್ಯೂಹರಚನೆಗಳನ್ನು ಮಾಡುತ, ಸಿಂಹನಾದಗಳನ್ನು ಮಾಡುತಿದ್ದರು. ಮತ್ತರಾದವರು ಮುದ್ಗರದಿಂದ ಹೊಡೆಯುಲಾಗಿ, ಅವನ್ನು ಪ್ರತಿಭಟರು ಕೈಗಳಿಂದ ಹಿಡಿದುಕೊಂಡು ಎಸೆದುಬಿಡುತಿದ್ದರು ॥೨೩॥

ಅಲ್ಲಿ ಆಯುಧಗಳ ಕೃಷ್ಣಕಾಂತಿಯೆಂಬ ಮೇಘವು ಸೂರ್ಯನನ್ನೂ ಕಪ್ಪಾಗಿ ಮಾಡಿಬಿಟ್ಟಿತು. ವಾಯುವಿನಿಂದ ಅಳ್ಳಾಡಿಸಲ್ಪಟ್ಟ ತೃಣದಂತೆ, ಬಾಣಗಳು ಸೂತ್ಕಾರಧ್ವನಿಮಾಡುತಿದ್ದುವು ॥೨೪॥

ಪ್ರಳಯಕಾಲಿಕವಾದ ಪುಷ್ಕರಾವರ್ತಕಾದ್ಯನೇಕಮೇಘಗಳು—ಆ ಸೇನೆಗಳ ಮುಂಭಾಗದಲ್ಲಿ ಗುಂಪುಗಟ್ಟಿಕೊಂಡಿರುವುವೋ ಎಂಬಂತೆಯೂ, ಪ್ರಳಯವಾಯುವಿನಿಂದ ಕಲಕಲ್ಪಟ್ಟು ಉತ್ಥಿತವಾಗಿರುವ ಏಕಾರ್ಣವದಂತೆಯೂ ತೋರುತಿದ್ದುವು ॥೨೫॥

ಆಯೆರಡು ಸೈನ್ಯಗಳೂ, ಆಗತಾನೆ ಕತ್ತರಿಸಲ್ಪಟ್ಟಿರುವ ಮಹಾಮೇರುಪರ್ವತದ ಪ್ರಕಾಶಮಾನವಾದ ಎರಡು ರಕ್ಕೆಗಳೋ ಎಂಬಂತೆಯೂ, ಮಹಾವೇಗವಾಗಿ ಬೀಸುತಿರುವ ವಾಯುವಿನಿಂದ ಅಳ್ಳಾಡಿಸಲ್ಪಟ್ಟ ಅಂಜನಪರ್ವತವೋ ಎಂಬಂತೆಯೂ ಕಾಣುತಿದ್ದುವು ॥೨೬॥

ಮತ್ತು, ಪಾತಾಳಗುಹೆಯಿಂದ ಚಂಚಲವಾಗಿ ಮೇಲಕ್ಕೆದ್ದಿರುವ ಅಂಧಕಾರವೋ ಎಂಬಂತೆಯೂ, ಉನ್ಮತ್ತರಾದವರ ನೃತ್ಯದಿಂದ ಪ್ರಕಾಶಿಸುತಿರುವ ತಪ್ಪಲುಳ್ಳ ಲೋಕಾಲೋಕಪರ್ವತವೋ ಎಂಬಂತೆಯೂ, ಭೂಮಿಯನ್ನು ಭೇದಿಸಿಕೊಂಡು ಮೇಲಕ್ಕೆದ್ದಿರುವ ಮಹಾನರಕಸಮುದಾಯವೋ ಎಂಬಂತೆಯೂ ಕಾಣುತಿದ್ದುವು ॥೨೭॥

ಆಲೋಲಕುನ್ತಮುಸಲಾಸಿಪರಶ್ವಥಾಂಶು
ಶ್ಯಾಮಾಯಮಾನದಿವಸಾತಪವಾರಿಪೂರೈಃ ।
ಏಕಾರ್ಣವಂ ಭುವನಕೋಶಮಿವಾಚಿರೇಣ
ಕರ್ತುಂ ಸಮುದ್ಯತಮಗಾಧಮನನ್ತಪೂರೈಃ ॥೨೮॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಆಹವಾರಮ್ಭದರ್ಶನಂನಾಮ
ದ್ವಾತ್ರಿಂಶಃ ಸರ್ಗಃ.

ಆಗ ಆ ಸೈನ್ಯದ್ವಯವು, ಚಂಚಲವಾದ ಕುಂತ (ಕೊಣತ) ಮುಸಲ (ಒನಿಕೆ) ಅಸಿ (ಕತ್ತಿ) ಪರಶ್ವಥ- ಇವುಗಳ ಕಾಂತಿಯಿಂದ ಕಪ್ಪಾಗುತಿರುವ ಅತ್ಯಧಿಕವಾದ ಬಿಸಿಲೆಂಬ ಜಲಪ್ರವಾಹಗಳಿಂದ, ಭುವನಮಂಡಲವನ್ನೆಲ್ಲ ಬೇಗನೆ ಏಕಾರ್ಣವವನ್ನಾಗಿ ಮಾಡಲುದ್ಯುಕ್ತವಾಗಿದೆಯೋ ಎಂಬಂತೆ ತೋರುತಿದ್ದಿತು ॥೨೮॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಯುದ್ಧಾರಂಭದರ್ಶನ
ವೆಂಬ ಮೂವತ್ತೆರಡನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ತ್ರಯಸ್ತ್ರಿಂಶಃ ಸರ್ಗಃ.

ಶ್ರೀರಾಮಉವಾಚ.

ಭಗವನ್ ಯುದ್ಧಮೇತನ್ಮೇ ಸಮಾಸೇನ ಮನಾಗ್ವದ ।
ಶ್ರುತಿರಾಹ್ಲಾದ್ಯತೇ ಶ್ರೋತುಃ ಯಸ್ಮಾದೇತಾಭಿರುಕ್ತಿಭಿಃ ‖೧‖

ಶ್ರೀವಸಿಷ್ಠಉವಾಚ.

ಅಥ ತತ್ರೈವ ತೇ ದೇವ್ಯೌ ಸಙ್ಗ್ರಾಮಂ ತಮವೇಕ್ಷಿತುಮ್ ।
ವಿಮಾನೇ ಕಲ್ಪಿತೇ ಕಾನ್ತೇ ರುದ್ಧೇ ರುರುಹತುಃ ಸ್ಥಿತೇ ‖೨‖
ಏತಸ್ಮಿನ್ನನ್ತರೇ ತತ್ರ ಲೀಲೇಶಃ ಪ್ರತಿಪಕ್ಷತಃ ।
ತಮುತ್ಸೋಢುಮಶಕ್ತಃ ಸನ್ ಮುಖವ್ಯತಿಕರೇ ರಣೇ ‖೩‖
ಪ್ರಳಯಾರ್ಣವಕಲ್ಲೋಲಇವೋತ್ಪತ್ಯೋದ್ಭಯೇ ಭಟೇ ।
ಜಹೌ ಸಾನಾವಿವ ಶಿಲಾಂ ಭಟಸ್ಯೋರಸಿ ಮುದ್ಗರಮ್ ‖೪‖

ಉತ್ಪತ್ತಿಪ್ರಕರಣದಲ್ಲಿ ಮೂವತ್ತುಮೂರನೆಯ ಸರ್ಗವು.

ಸಾಙ್ಕಲ್ಪಿಕವಿಮಾನಸ್ಥಪ್ರಜ್ಞಾಲೀಲಾಸಮೀಕ್ಷಿತಃ ।
ಅಥ ಪ್ರವೃತ್ತಃ ಸಙ್ಗ್ರಾಮಃ ಸೇನಯೋರತ್ರ ವರ್ಣ್ಯತೇ ‖

ಬಳಿಕ, ಸರಸ್ವತೀ ಲೀಲೆಯರು ಸ್ವಸಂಕಲ್ಪಜನ್ಯವಾದ ವಿಮಾನದಲ್ಲಿ ಕುಳಿತುಕೊಂಡು ಎರಡು ಸೈನ್ಯಗಳಿಗೂ ನಡೆದ ಯುದ್ಧವನ್ನು ನೋಡಿದರೆಂಬ ವಿಷಯವು, ಈ ಸರ್ಗದಲ್ಲಿ ವರ್ಣಿಸಲ್ಪಡುವುದು.

ಶ್ರೀರಾಮನು ವಸಿಷ್ಠರನ್ನು ಕೇಳುವನು.—

ಪೂಜ್ಯರೆ! ಈ ಯುದ್ಧವನ್ನು ಸ್ವಲ್ಪ ಸಂಕ್ಷೇಪವಾಗಿ ನನಗೆ ಅಪ್ಪಣೆಕೊಡಿಸಿರಿ; ಈ ಮಾತುಗಳು, ಕೇಳತಕ್ಕವರಿಗೆ ಕಿವಿಗೆ ಆಹ್ಲಾದವುಂಟುಮಾಡುತಿರುವುವು ‖೧‖

ಶ್ರೀವಸಿಷ್ಠರು ಹೇಳುವರು.—

ವತ್ಸ! ಬಳಿಕ ಆ ಲೀಲಾ ಸರಸ್ವತಿಯರಿಬ್ಬರೂ, ಅಲ್ಲಿಯೇ ಆ ಯುದ್ಧವನ್ನು ನೋಡುವುದಕ್ಕೋಸ್ಕರ, ತಮ್ಮ ಸಂಕಲ್ಪದಿಂದ ಸೃಷ್ಟವಾಗಿಯೂ ಮನೋಹರವಾಗಿಯೂ ಅಂತರಿಕ್ಷದಲ್ಲಿ ನಿಶ್ಚಲವಾಗಿ ನಿಲ್ಲಿಸಲ್ಪಟ್ಟುದಾಗಿಯೂ ಗಟ್ಟಿಯಾಗಿಯೂ ಇರುವ ವಿಮಾನಗಳನ್ನು ಹತ್ತಿಕೊಂಡರು ‖೨‖

ಇಷ್ಟರೊಳಗೇ ಆಯೆರಡು ಸೈನ್ಯಗಳಿಗೂ ಮುಂಭಾಗದಲ್ಲಿ ಸಂಘಟನೆಯುಂಟಾಗಲಾಗಿ, ಶತ್ರುಸೈನ್ಯದಿಂದ ಪ್ರಳಯಕಾಲದ ಸಮುದ್ರದ ಅಲೆಯಂತೆ ನಿರ್ಭಯನಾಗಿರುವ ಒಬ್ಬ ಭಟನು ಹಾರಿಬಂದು ಹೊಡೆಯಲಪೇಕ್ಷಿಸಲಾಗಿ, ಆಗ ವಿದೂರಥನೆಂದು ಹೆಸರಿಟ್ಟುಕೊಂಡು ಜನಿಸಿರುವ ಲೀಲಾದೇವೀಪತಿಯು, ಆ ಭಟನನ್ನು ಸಹಿಸಲಾರದವನಾಗಿ, ಬೆಟ್ಟದ ತಪ್ಪಲಿನಮೇಲೆ ಬಂಡೆಯು ಬೀಳುವಂತೆ, ಆ ಭಟನ ಎದೆಯಮೇಲೆ ಮುದ್ಗರಾಯುಧವನ್ನು ಪ್ರಹರಿಸಿದನು ‖೩—೪‖

ಅಥ ಪ್ರವತ್ತಃ ಪ್ರಸಭಂ ಪ್ರಳಯಾರ್ಣವರಂಹಸಾ ।
ಸೇನಯೋಃ ಶಸ್ತ್ರಸಮ್ಪಾತಃ ಕಿರನ್ನನಲವಿದ್ಯುತಃ ॥೫॥
ತರತ್ತರಳಧಾರಾಗ್ರರೇಖಾಙ್ಕಿತನಭಸ್ತಲಃ ।
ಧ್ವನತ್ಕಣಕಣಾಶಬ್ದಮಧ್ಯಲಕ್ಷಿತಟಾಙ್ಕೃತಿಃ ॥೬॥
ಧೀರಹುಙ್ಕಾರಮಿಶ್ರೋಷ್ಮಘುರ್ಘುರಾರವಘಸ್ಮರಃ ।
ಪ್ರವೃತ್ತಶರಧಾರಾಗ್ರಭಾಸ್ಕರಾರ್ಚಿರ್ವಿತಾನಕಃ ॥೭॥
ಸದತ್ಕಙ್ಕಟಟಙ್ಕಾರಪ್ರೋಡ್ಡೀನಕಣಪಾವಕಃ ।
ಪರಸ್ಪರಾಹತಿಚ್ಛಿನ್ನಹೇತಿಖಣ್ಡಖಗಾಮ್ಬರಃ ॥೮॥
ವೀರದೋರ್ದ್ರುಮಸಙ್ಘಾರವಹದ್ವನನಭಸ್ಸ್ಥಲಃ ।
ಕೋದಣ್ಡಚಕ್ರಕ್ರೇಙ್ಕಾರದ್ರವದ್ವೈಮಾನಿಕಾಙ್ಗನಃ ॥೯॥
ಮಹಾಹಲಹಲಾರಾವಭೃಙ್ಗೀಕೃತಘನಧ್ವನಿಃ ।
ನಿರ್ವಿಕಲ್ಪಸಮಾಧಿಸ್ಥಃ ಇವೈಕಘನತಾವಶಾತ್ ॥೧೦॥

ಬಳಿಕ ಆ ಎರಡು ಸೈನ್ಯಗಳಿಗೂ, ಪ್ರಳಯಕಾಲದ ಸಮುದ್ರದಂತೆ ಅತಿವೇಗದಿಂದ—ಬಲುಬಲವಾಗಿ—ಬೆಂಕಿಕೆಂಡಗಳನ್ನೂ ಮಿಂಚುಗಳನ್ನೂ ಎರಚುತಿರುವ—ಶಸ್ತ್ರಪ್ರಹಾರವು ಉಪಕ್ರಮಿಸಿತು ॥೫॥

ಮತ್ತು, ಆ ಯುದ್ಧಸಂಭ್ರಮವು ಹೇಗಿದ್ದಿತೆಂದರೆ:—ಮೇಲುಗಡೆ ಹಾರಿಹೋಗುತಿರುವ ಶಸ್ತ್ರಗಳ ಅಲಗುಗಳಿಂದ, ಆಕಾಶ ಪ್ರದೇಶದಲ್ಲಿ ಗೆರೆಹಾಕಿದಂತೆ ಕಾಣುತಿದ್ದಿತು; ಅವುಗಳ ಕಣಕಣಧ್ವನಿಯ ಮಧ್ಯದಲ್ಲಿ ಧನುಷ್ಟಂಕಾರವೂ ಕೇಳಿಸುತಿದ್ದಿತು ॥೬॥

ಧೀರವಾದ ಹುಂಕಾರದಿಂದ ಮಿಶ್ರವಾಗಿರುವಕಾರಣ, ಬೇಸಿಗೆ ಕಳೆದಮೇಲೆ ಗರ್ಜಿಸುವ ಮೇಘಗಳ ಘುರ್ಘುರಧ್ವನಿಯನ್ನು ತಿರಸ್ಕರಿಸುತಿದ್ದಿತು. ಬಾಣಪರಂಪರೆಗಳ ತುದಿಯಲ್ಲಿ ಸೂರ್ಯಕಿರಣವು ಸಂಮಿಳಿತವಾಗಿರುವುದರಿಂದ, ಮೇಲುಕಟ್ಟು ಕಟ್ಟಿದಂತೆ ಕಾಣುತಿದ್ದಿತು॥೭॥

ವೀರರು ತೊಟ್ಟಿರುವ ಕಬ್ಬಿಣದ ಕವಚಗಳಮೇಲೆ ಆಯುಧಗಳ ಏಟು ಬೀಳಲಾಗಿ, ಅವುಗಳಿಂದ ಟಂಕಾರಧ್ವನಿಯೂ ಬೆಂಕಿಕಿಡಿಗಳೂ ಹೊರಡುತಿದ್ದುವು. ಪರಸ್ಪರವಾಗಿ ಹೊಡೆಯೋಣದರಿಂದ ಆಯುಧಗಳು ಕತ್ತರಿಸಲ್ಪಟ್ಟು, ಅವುಗಳ ಚೂರುಗಳು ಮೇಲಕ್ಕೆ ಹಾರಿಹೋಗಿ, ಅಂತರಿಕ್ಷದಲ್ಲಿ ಪಕ್ಷಿಸಮುದಾಯದಂತೆ ಕಾಣುತಿದ್ದುವು ॥೮॥

ವೀರರ ಬಾಹುವೃಕ್ಷಗಳು ಸಂಚರಿಸುತ್ತಿರುವುದರಿಂದ, ಅಂತರಿಕ್ಷಪ್ರದೇಶದಲ್ಲಿ ಒಂದು ವನವು ಹಾರಾಡುತಿರುವಂತೆ ತೋರುತಿದ್ದಿತು. ಧನುಸ್ಸಮೂಹಗಳ ಕ್ರೇಂಕಾರಧ್ವನಿಯನ್ನು ಕೇಳಿ, ಆಗ ವಿಮಾನದಲ್ಲಿ ಸಂಚರಿಸುತಿದ್ದ ದೇವಸ್ತ್ರೀಯರುಗಳು ಓಡಿಹೋಗುತಿದ್ದರು ॥೯॥

ಆ ಯುದ್ಧದ ಮಹಾಕೋಲಾಹಲಧ್ವನಿಯು, ಮೇಘದ ಧ್ವನಿಯನ್ನೂ ಕೂಡ ದುಂಬಿಯ ಧ್ವನಿಯಂತೆ ಮಾಡಿಬಿಟ್ಟಿತು. ನಿರ್ವಿಕಲ್ಪ ಸಮಾಧಿಯಲ್ಲಿರತಕ್ಕವನಿಗೆ, ಆಗ ಆ ಪರಮಾತ್ಮನೊಬ್ಬನೇ ಕಾಣುತಿರುವುದರಿಂದ, ಇತರ ಶಬ್ದಗಳೊಂದೂ ಹೇಗೆ ಗೋಚರವಾಗುವುದಿಲ್ಲವೋ, ಹಾಗೆ ಆ ಯುದ್ಧಕಾಲದಲ್ಲಿಯೂ ಮತ್ತಾವ ಶಬ್ದವೂ ಕೇಳಿಬರುತಿರಲಿಲ್ಲ॥

ನಾರಾಚಾಸಾರಧಾರಾಗ್ರಲೂನಶೂರಶಿರಸ್ಕರಃ ।
ಪರಸ್ಪರಾಂಸಸಙ್ಘಟ್ಟರಣತ್ಕಙ್ಕಟಸಙ್ಕಟಃ ॥೧೧॥
ಹುಙ್ಕಾರಹತಹೇತ್ಯಗ್ರಸಙ್ಘಟ್ಟಕಟುಟಾಙ್ಕೃತಃ ।
ತರದ್ಧಾರಾತರಙ್ಗಭ್ರದನುತ್ರಾಶೇಷದಿಙ್ಮುಖಃ ॥೧೨॥
ಹೇತಿಸಙ್ಘಟ್ಟವಿಕ್ಷೋಭಮುಷ್ಟಿಗ್ರಾಹ್ಯಝಣಜ್ಝಣಃ ।
ಚಿರವಾಸಸ್ಫೋಟಕಾಸ್ಫೋಟಲುಠಚ್ಚಟಚಟಾರವಃ ॥೧೩॥
ಪ್ರವಹತ್ಖಡ್ಗಸೀತ್ಕಾರಜ್ವಲತ್ಕಣಸಣಧ್ವನಿಃ ।
ಸರಚ್ಛರಭರಾಧ್ವಾನ್ತಶರತ್ಖರಖರಾರವಃ ॥೧೪॥
ಧಗದ್ಧಗಿತಿ ವಿಚ್ಛಿನ್ನಕಣ್ಠೋತ್ಥಪ್ರಾಣಲೋಹಿತಃ ।
ಛಿನ್ನಬಾಹುಶಿರಃಖಡ್ಗಖಣ್ಡನಿರ್ವಿವರಾಮ್ಬರಃ ॥೧೫॥
ಕಙ್ಕಟೋತ್ಥಸ್ಫುರದ್ವಹ್ನಿಸಟಾಸ್ಪೃಷ್ಟಶಿರೋರುಹಃ ।
ರಣತ್ಪತದಸಿವ್ರಾತಮತ್ತಪೀನಝಣಜ್ಝಣಃ ॥೧೬॥

ಬಾಣ ಪರಂಪರೆಗಳ ಅಲಗುಗಳಿಂದ ಕತ್ತರಿಸಲ್ಪಟ್ಟ ವೀರರ ತಲೆಗಳು ಹರಡುತಿದ್ದುವು. ಒಬ್ಬರೊಬ್ಬರಿಗೆ ಹೆಗಲು ತಾಕುವುದರಿಂದ, ಕವಚಗಳು ಧ್ವನಿಮಾಡುತಿದ್ದುವು ॥

ಆಗ ವೀರರು ಬಿಡುವ ಹುಂಕಾರಧ್ವನಿಗಳು, ಆಯುಧಗಳ ಪರಸ್ಪರ ಸಂಘಟನೆಯಿಂದಾಗುವ ಪ್ರಬಲವಾದ ಟಾಂಕಾರಶಬ್ದಗಳನ್ನು ಕೇಳಿಸದಂತೆ ಮಾಡುತಿದ್ದುವು. ಅಲ್ಲಲ್ಲಿ ಹಾರಿಹೋಗಿ ಬೀಳುತಿರುವ ಶಸ್ತ್ರಧಾರಾಪರಂಪರೆಗಳು, ಸಮಸ್ತದಿಕ್ಕುಗಳಲ್ಲಿಯೂ ಮೇಘಗಳಂತೆ ವ್ಯಾಪಿಸಿಕೊಂಡಿದ್ದುವು ॥೧೨॥

ಅಲ್ಲಿ, ಆಯುಧಗಳು ಒಂದಕ್ಕೊಂದು ತಗುಲಿ ಚಂಚಲವಾಗುತಿರುವುದರಿಂದ, ಅದರಿಂದುಂಟಾಗುವ ಝಣಝಣಶಬ್ದವು ಕೈಯಲ್ಲಿ ಹಿಡಿದುಕೊಳ್ಳಬಹುದಾಗುವ ಮಟ್ಟಿಗೆ ತುಂಬಿಕೊಂಡಿದ್ದಿತು. ವೀರರು ಬಹಳಹೊತ್ತು ತೋಳುತಟ್ಟಿಕೊಳ್ಳುತಿರುವುದರಿಂದ, ಚಟಚಟಶಬ್ದವು ಆ ಪ್ರದೇಶದಲ್ಲೆಲ್ಲ ಹೊರಳಾಡುತಿರುವಂತೆ ವ್ಯಾಪಿಸಿದ್ದಿತು ॥೧೩॥

ಕತ್ತಿಗಳನ್ನು ಸರ್ರನೆ ಒರೆಯಿಂದ ಹಿರಿಯುವುದರಿಂದ, ಆ ಕತ್ತಿಗಳಿಗೂ ಒರೆಗಳಿಗೂ ಪರಸ್ಪರ ಸಂಘಟನೆಯಾಗಿ, ಅದರಿಂದ ಸಣ್ಣ ಚೂರುಗಳು ಹುಟ್ಟಿ, ಸಣಸಣ ಶಬ್ದವಾಗುತಿದ್ದಿತು. ಅನೇಕ ಬಾಣಗಳು ಹೊರಟು ತಮ್ಮ ಗುರಿಯನ್ನು ಸೇರುವುದರಿಂದ, ಅವುಗಳಿಂದ ಸೀಳಿಹೋಗತಕ್ಕವರು ಖರಖರ ಶಬ್ದಮಾಡುತಿದ್ದರು ॥೧೪॥

ಪ್ರಾಣಿಗಳ ಕತ್ತುಕತ್ತರಿಸಲ್ಪಟ್ಟಮೇಲೆ, ಅವುಗಳ ಕುತ್ತಿಗೆಯಿಂದ ಧಗಧಗಶಬ್ದದೊಡನೆ ರಕ್ತವೂ ಪ್ರಾಣವೂ ಹೊರಡುತಿದ್ದಿತು. ಕತ್ತರಿಸಲ್ಪಟ್ಟ ಬಾಹುಗಳೂ ಶಿರಸ್ಸುಗಳೂ ಖಡ್ಗಗಳೂ ಚೂರುಚೂರಾಗಿ ಅಂತರಿಕ್ಷವನ್ನು ನಿರವಕಾಶವಾಗಿ ಮುಚ್ಚಿಕೊಂಡಿದ್ದುವು ॥೧೫॥

ಕಬ್ಬಿಣದ ಕವಚಗಳಮೇಲೆ ಖಡ್ಗಪ್ರಹಾರ ಬಿದ್ದುದರಿಂದ, ಅವುಗಳ ದೆಸೆಯಿಂದ ಹುಟ್ಟಿದ ಬೆಂಕಿಯು ಉರಿಯು, ಕೂದಲುಗಳನ್ನು ಸುಟ್ಟುಬಿಡುತಿದ್ದಿತು. ಧ್ವನಿಮಾಡುತ ಬೀಳುತಿರುವ ಖಡ್ಗಸಮೂಹಗಳ ಝಣಝಣ ಶಬ್ದವು, ಅಲ್ಲಿದ್ದ ಮಹಾ ವೀರರನ್ನು ಹರ್ಷಪರವಶರನ್ನಾಗಿಯೂ ಯುದ್ಧೋತ್ಸಾಹದಿಂದ ಉಬ್ಬಿದವರನ್ನಾಗಿಯೂ ಮಾಡುತ್ತಿದ್ದಿತು ॥

ಕುನ್ತಕುಣ್ಠಿತಮಾತಙ್ಗತರಙ್ಗೋತ್ತುಙ್ಗಲೋಹಿತಃ ।
ದನ್ತಿದನ್ತವಿನಿಷ್ಪೇಷತಾರಚೀತ್ಕಾರಕರ್ಕಶಃ ॥೧೭॥
ಮಹಾಮುಸಲಸಮ್ಪಾತಪಿಷ್ಟಕಷ್ಟೋದ್ಧುರಸ್ವರಃ ।
ತರಚ್ಛಿರಶಿರಃಪದ್ಮಪ್ರಕರಾಚ್ಛಾದಿತಾಮ್ಬರಃ ॥೧೮॥
ವ್ಯೋಮನ್ಯಸ್ತಭುಜಾಹೀನ್ದ್ರಃ ಪೂರ್ಣಧೂಳಿಮಯಾಮ್ಬುದಃ ।
ಛಿನ್ನಹೇತಿನರಾರಬ್ಧಕೇಶಾಕೇಶಿಪ್ರತಿಕ್ರಿಯಃ ॥೧೯॥
ನಖಾನಖಿನಿಕೃತ್ತಾಕ್ಷಿಕರ್ಣನಾಸೋಷ್ಠಕನ್ಧರಃ ।
ಛಿನ್ನಾಯುಧಮಹಾಮಲ್ಲಹೇಲೋಲ್ಲಾಲನಲಬ್ಧಭೂಃ ॥೨೦॥
ಪತತ್ಸಮದಮಾತಙ್ಗಕಮ್ಪಿತೋರ್ವೀಲುಠದ್ರಥಃ ।
ರಣದ್ರಥರಯೋತ್ಪನ್ನಕ್ಷರದ್ರಕ್ತಸರಿತ್ಪಥಃ ॥೨೧॥
ರಜೋರಚಿತನೀಹಾರಃ ಕಚತ್ಪ್ರವಹದಾಯುಧಃ ।
ಏಕೀಕೃತಘನಕ್ಷೋಭಸೈನ್ಯಸಾಗರಗರ್ಜಿತಃ ॥೨೨॥

ಕುಂತಾಯುಧದಿಂದ ಕತ್ತರಿಸಲ್ಪಟ್ಟ ಆನೆಗಳ ದೆಸೆಯಿಂದ, ತೆರೆತೆರೆಯಾಗಿ ರಕ್ತ ಪ್ರವಾಹವು ಹರಿಯುತಿದ್ದಿತು; ಆ ಸಮಯದಲ್ಲಿ ಆನೆಗಳು ಕೊಂಬುಗಳನ್ನು ತಿಕ್ಕುವ ಧ್ವನಿಯು, ಆ ಆನೆಗಳ ಚೀತ್ಕಾರಧ್ವನಿಯೊಡನೆ ಸೇರುತಿರುವುದರಿಂದ ಬಹು ಕರ್ಕಶವಾಗಿದ್ದಿತು॥

ದೊಡ್ಡದೊಡ್ಡ ಮುಸಲಾಯುಧಗಳ ಏಟಿನಿಂದ ಮರ್ದಿಸಲ್ಪಟ್ಟವರು, ಕಷ್ಟದಿಂದ ಗಟ್ಟಿಯಾಗಿ ಕಿರಿಚುತಿದ್ದರು; ಶೂರಪುರುಷರ ತಲೆಗಳೆಂಬ ಕಮಲಸಮೂಹಗಳು, ಮೇಲಕ್ಕೆ ಹಾರಿಹೋಗಿ, ಅಂತರಿಕ್ಷವನ್ನು ಆಚ್ಛಾದಿಸುತಿದ್ದುವು ॥೧೮॥

ಆಯುಧ ಪ್ರಹಾರದಿಂದ ಕತ್ತರಿಸಲ್ಪಟ್ಟ ಬಾಹುಗಳು, ಆಕಾಶದಲ್ಲಿ ದೊಡ್ಡದೊಡ್ಡ ಹಾವುಗಳಂತೆ ಕಾಣುತಿದ್ದುವು. ಆಗ ಮೇಘಗಳೆಲ್ಲವೂ ಸಂಪೂರ್ಣ ಧೂಳಿಮಯವಾಗಿ ಬಿಟ್ಟುವು. ಭಟರುಗಳು, ತಮ್ಮ ಕೈಯಲ್ಲಿದ್ದ ಆಯುಧಗಳನ್ನು ಪರಸ್ಪರವಾಗಿ ಪ್ರತಿಭಟರು ಕತ್ತರಿಸಲಾಗಿ, ಅವರಿಬ್ಬರೂ ಜುಟ್ಟುಹಿಡಿದುಕೊಂಡು ಯುದ್ಧಮಾಡುತ, ಪ್ರತೀಕಾರವನ್ನು ತೋರಿಸುತಿದ್ದರು ॥೧೯॥

ಉಗುರುಗಳಿಂದ ಪರಸ್ಪರವಾಗಿ ಯುದ್ಧಮಾಡುವಾಗ, ಕಣ್ಣುಗಳನ್ನೂ ಕಿವಿಗಳನ್ನೂ ಮೂಗುಗಳನ್ನೂ ತುಟಿಗಳನ್ನೂ ಕುತ್ತಿಗೆಗಳನ್ನೂ ಕತ್ತರಿಸುತಿದ್ದರು. ಆಯುಧಕತ್ತರಿಸಿ ಹೋದ ಮಹಾವೀರರು, ಪ್ರತಿಭಟರನ್ನು ಲೀಲೆಯಿಂದ ಮೇಲಕ್ಕೆ ಎಸೆದಾಡುತ, ವಿಜಯಸ್ಥಾನವನ್ನು ಹೊಂದುತಿದ್ದರು ॥೨೦॥

ಮದ್ದಾನೆಗಳು ಬಿದ್ದುದರಿಂದ ಆ ಯುದ್ಧಭೂಮಿಯು ನಡುಗುತಿದ್ದಿತು. ಅಂತಹ ಭೂಮಿಯಮೇಲೆ, ಪೆಟ್ಟುತಿಂದು ಕೈಲಾಗದೆ ಬಿದ್ದಿರುವವರು ವೇಗದಿಂದ ಹೊರಳಾಡುತಿದ್ದರು ರಥಗಳು ಧ್ವನಿಮಾಡುತ ವೇಗವಾಗಿ ಹರಿಯುತ್ತಿರುವುದರಿಂದ, ಆಗ ಉಂಟಾದ ರಕ್ತನದಿಯು ಆ ಮಾರ್ಗವನ್ನು ತುಂಬುತಿದ್ದಿತು ॥೨೧॥

ಧೂಳಿಯು, ಆ ಯುದ್ಧರಂಗದಲ್ಲೆಲ್ಲ ಮಂಜಿನಂತೆ ವ್ಯಾಪಿಸಿದ್ದಿತು. ಆಯುಧಗಳು, ತಣತಣನೆ ಹಾರಾಡುತಿದ್ದುವು; ಆ ಸೈನ್ಯವೆಂಬ ಸಮುದ್ರದ ಗರ್ಜನೆಯು, ಬಲುಚಟುವಟಿಕೆಯಿಂದ, ಪ್ರಪಂಚವನ್ನೆಲ್ಲ ಏಕಾಕಾರವಾಗಿ ವ್ಯಾಪಿಸಿಕೊಂಡಿದ್ದಿತು ॥೨೨॥

ಮತ್ತಹಾಸವಿಲಾಸೇನ ಮೃತ್ಯುನಾ ಪರಿಚರ್ವಿತಃ |
ಗರ್ವಿತಾದ್ರೀನ್ದ್ರನಾಗೇನ್ದ್ರಚರ್ವಿತಾಮ್ಭೋದಗರ್ಜಿತಃ ||೨೩||
ವೃಕ್ಷಶ್ವಭ್ರತಟೀಚ್ಛನ್ನಚಕ್ರಶಕ್ತ್ಯೃಷ್ಟಿಮುದ್ಗರಃ |
ಶರೌಘಾರ್ತನುನ್ನನೀರನ್ಧ್ರಘೃಷ್ಟಿಯೋಧಾದ್ರಿಮೇಖಲಃ ||೨೪||
ಮೇಘವಿಶ್ರಾನ್ತವಿಚ್ಛಿನ್ನಪತಾಕಾಪಟಚಾಮರಃ |
ಯನ್ತ್ರಪಾಷಾಣಚಕ್ರೌಘದೂರವಿದ್ರುತಖೇಚರಃ ||೨೫||
ಮರಣವ್ಯಗ್ರಕೃತ್ತಾಙ್ಗಯೋಧಾಕ್ರನ್ದಾತಿಘುರ್ಘುರಃ |
ಕುಠಾರಾಘಾತಸಞ್ಛಿತವಿದಳನ್ಮಸ್ತಕವ್ರಜಃ ||೨೬||
ದೂರೋಡ್ಡೀನಕಚತ್ಖಡ್ಗಖಣ್ಡತಾರಕಿತಾಮ್ಬರಃ |
ಶಕ್ತಿನಿರ್ಮುಕ್ತಶಕ್ತ್ಯೋಘವಿಭಿನ್ನೇಭಾವೃತಾವನಿಃ ||೨೭||
ಸೈನ್ಯವ್ಯಾಕುಲವೇತಾಳಲಲನೋನ್ಮುಕ್ತಮುದ್ಗರಃ |

ಆ ಯುದ್ಧರಂಗದಲ್ಲಿ, ಮೃತ್ಯುವು ಮತ್ತನಾಗಿ ಮಂದಹಾಸಮಾಡುತ ವಿಲಾಸದಿಂದ ಭಕ್ಷಣೆಮಾಡುತಿದ್ದನು; ದೊಡ್ಡ ಬೆಟ್ಟಗಳಂತಿರುವ ಮದ್ದಾನೆಗಳು, ತಮ್ಮ ಧ್ವನಿಗಳಿಂದ ಮೇಘಗರ್ಜನೆಯನ್ನೂ ಹ್ರಸ್ವಮಾಡುತಿದ್ದುವು ||೨೩||

ಮರ ಹಳ್ಳ ಮುಂತಾದ ಕಡೆಯಲ್ಲಿ ನಿಂತುಕೊಂಡು ಯುದ್ಧ ಮಾಡತಕ್ಕವರನ್ನು ಹೊಡೆಯುವುದಕ್ಕಾಗಿ, ಪ್ರತಿಭಟರು ಚಕ್ರ ಶಕ್ತಿ ಖುಷ್ಟಿ ಮುದ್ಗರ ಮೊದಲಾದ ಆಯುಧಗಳನ್ನು ಬಿಡಲಾಗಿ. ಆ ಆಯುಧಗಳು ಮರಗಳಲ್ಲಿಯೂ ಹಳ್ಳಗಳಲ್ಲಿಯೂ ಸಿಕ್ಕಿಕೊಳ್ಳುತಿದ್ದುವು. ಪರ್ವತದ ತೊಪ್ಪಲನ್ನು ಜಾಡನ ಪರೆಗಳು ಮುತ್ತಿಕೊಳ್ಳುವಂತೆ, ಮಹಾಯೋಧರನ್ನು ಬಾಣಗಳು ಎಡೆಬಿಡದೆ ಮುತ್ತುತಿದ್ದುವು ||೨೪||

ಆ ಸೈನ್ಯದ ರಥಗಳ ಧ್ವಜಪಟಗಳಲ್ಲಿ ಕಟ್ಟಿದ್ದ ಚಾಮರಗಳಮೇಲೆ ಮೇಘಗಳು ಬಂದು ವಿಶ್ರಮಿಸಿಕೊಂಡುದರಿಂದ, ಅವುಗಳು ಮುರಿದುಹೋಗುತಿದ್ದುವು. ಕವಣೆ ಕಲ್ಲುಗಳನ್ನು ರಾಶಿರಾಶಿಯಾಗಿ ಬೀಸಿ ಎಸೆಯುತ್ತಿದ್ದುದರಿಂದ, ಅಂತರಿಕ್ಷದಲ್ಲಿ ಸಂಚರಿಸತಕ್ಕ ಪ್ರಾಣಿಗಳೆಲ್ಲವೂ ದೂರವಾಗಿ ಓಡುತಿದ್ದುವು ||೨೫||

ಅಂಗಗಳು ಕತ್ತರಿಸಲ್ಪಟ್ಟ ಯೋಧರುಗಳು, ಮರಣೋನ್ಮುಖರಾಗಿ ಕಳವಳಪಟ್ಟು ಅಳುತಿರುವುದರಿಂದ, ಆ ಪ್ರದೇಶವೆಲ್ಲವೂ ಘುರ್ಘುರಧ್ವನಿಯುಕ್ತವಾಗಿದ್ದಿತು. ಅಲ್ಲಿ ಕೊಡಲಿಗಳ ಏಟುಗಳು ಪದೇಪದೇ ಬೀಳುತಿರುವುದರಿಂದ, ಲೆಕ್ಕವಿಲ್ಲದಷ್ಟು ತಲೆಗಳು ಸೀಳಿಹೋಗುತಿದ್ದುವು ||೨೬||

ಕತ್ತಿಯ ಚೂರುಗಳು ದೂರವಾಗಿ ಹಾರಿಹೋಗಿ ಮಿನುಗುತಿರುವುದರಿಂದ, ಅಂತರಿಕ್ಷದಲ್ಲಿ ನಕ್ಷತ್ರೋದಯವಾದಂತೆ ತೋರುತಿದ್ದುವು. ಮಹಾಬಲಪೂರ್ವಕವಾಗಿ ಬಿಡಲ್ಪಟ್ಟ ಶಕ್ತ್ಯಾಯುಧಸಮೂಹಗಳು, ಆನೆಗಳನ್ನು ಕತ್ತರಿಸಿ ನೆಲದಮೇಲೆ ಹರಡುತಿದ್ದುವು ||೨೭||

ವೇತಾಳನಾಮಕ ಪಿಶಾಚಭೇದಗಳ ಸ್ತ್ರೀಯರು ಸೈನ್ಯಮಧ್ಯದಲ್ಲಿ ಓಡಾಡುತಿರುವುದರಿಂದ, ಸೈನಿಕರು ಬಿಟ್ಟ ಮುದ್ಗರಾಯುಧಗಳು, ಅವರಮೇಲೆ ಬೀಳುತಿದ್ದುವು.

ಗಗನೋತ್ತಮ್ಭಿತೋತ್ತುಙ್ಗಶೂರತೋಮರತೋರಣಃ ‖೧೮‖
ಭುಶುಣ್ಡೀಭಗ್ನಖಡ್ಗೌಘಖಣ್ಡಾಳೀವ್ಯೋಮಕುನ್ತಲಃ ।
ಕುನ್ತವೇಣುವನನ್ಯಸ್ತತಾಪಾಮ್ಬರಕಚಚ್ಛವಿಃ ‖೧೯‖
ಖಡ್ಗಟ್ಟಿವೃಷ್ಟಿಸಮ್ಪುಷ್ಟರಾಜಪೂಜಿತಸೈನಿಕಃ ।
ಶೂಲೋತ್ತಮ್ಭಿತಸಚ್ಛೂರಗ್ರಹಣೋದ್ಯಮಿತಾಪ್ಸರಾಃ ‖೨೦‖
ಗದಾತುಷಾರವಿಗಳತ್ಸ್ಫುರಿತಾಙ್ಗದದಿಙ್ಮುಖಃ ।
ಪ್ರಾಸಪ್ರಸಭಸಮ್ಪಿಷ್ಟಕಷ್ಟಚೇಷ್ಟತಯೋತ್ಕಟಃ ‖೨೧‖
ಚಕ್ರಕ್ರಕಚಸಞ್ಚಾರಚ್ಛಿನ್ನಾಶ್ವನರವಾರಣಃ ।
ಪರಶುವ್ರಾತಸಮ್ಪಾತಪತತ್ಸಮದವಾರಣಃ ‖೨೨‖
ಲಗುಡೋಲ್ಲೋಡನೋಡ್ಡೀನಪ್ರೋಡ್ಡಾಮರಜಟದ್ಭಟಃ ।
ಯನ್ತ್ರಪಾಷಾಣಸಮ್ಪಾತಪಿಷ್ಟಕೇತುರಥದ್ರುಮಃ ‖೨೩‖

ಶೂರಪುರುಷರು ಉದ್ದವಾದ ತೋಮರಾಯುಧವನ್ನು ಮೇಲಕ್ಕೆ ಎತ್ತಿ ಹಿಡಿದುಕೊಂಡಿರುವುದರಿಂದ, ಅಂತರಿಕ್ಷದಲ್ಲಿ ತೋರಣಕಟ್ಟಿದಂತೆ ಕಾಣುತಿದ್ದಿತು ‖೧೮‖

ಭುಶುಂಡೀನಾಮಕವಾದ ಆಯುಧವಿಶೇಷಗಳಿಂದ ಕತ್ತರಿಸಲ್ಪಟ್ಟ ಖಡ್ಗಸಮೂಹಗಳ ಚೂರುಗಳು, ಅಂತರಿಕ್ಷದ ಕೂದಲುಗಳಂತೆ ಕಾಣಿಸುತಿದ್ದುವು. ಕುಂತಾಯುಧಗಳನ್ನು ಆಕಾಶದಲ್ಲಿ ಬೀಸುತಿದ್ದಾಗ, ಅವುಗಳ ಕಾಂತಿಯು ಥಣಥಣಗುಟ್ಟುತಿದ್ದರೆ, ಬಿದುರುಮೆಳೆಯಲ್ಲುರಿಯುವ ಕಾಡುಗಿಚ್ಚಿನಂತೆ ಕಾಣಿಸುತಿದ್ದಿತು ‖೧೯‖

ಖಡ್ಗ ಖುಷ್ಟಿಮುಂತಾದ ಆಯುಧಗಳನ್ನು ತಮ್ಮ ಸೈನಿಕರು ಮಳೆಗರೆಯಲಾಗಿ, ಆಯಾ ದೊರೆಗಳು ಅವರುಗಳನ್ನು ಬಹುಮಾನಿಸುತಿದ್ದರು. ಒಬ್ಬ ಭಟನು, ಒಬ್ಬ ಮಹಾಶೂರನನ್ನು ತನ್ನ ಶೂಲಾಯುಧದ ತುದಿಯಲ್ಲಿ ಸಿಕ್ಕಿಸಿಕೊಂಡು ಮೇಲಕ್ಕೆತ್ತಿದಾಗ, ಅವನನ್ನು ವರಿಸುವುದಕ್ಕೋಸ್ಕರ ಅಪ್ಸರಸ್ತ್ರೀಯರು ಉದ್ಯಮಪಡುತಿದ್ದರು ‖೨೦‖

ಗದಾಯುಧಪ್ರಹಾರದಿಂದ, ಭಟರ ತೋಳಿನಲ್ಲಿದ್ದ ಅಂಗದಗಳು (ಬಾಜೂಬಂದು) ನುಚ್ಚುನುಚ್ಚಾಗಿ ಹಾರಿಹೋಗಿ, ದಿಙ್ಮಂಡಲಗಳಲ್ಲಿ ಪ್ರಕಾಶಿಸುತಿದ್ದುವು. ಪ್ರಾಸಾಯುಧಪ್ರಹಾರದಿಂದ ಮರ್ದಿತರಾದ ಭಟರು ಕಷ್ಟದಿಂದ ಹೊರಳುತಿದ್ದಕಾರಣ, ಆ ಯುದ್ಧಪ್ರಸಂಗವು ಅತಿ ಪ್ರಬಲವಾಗಿತ್ತು ‖೨೧‖

ಚಕ್ರಾಯುಧಗಳೆಂಬ ಗರಗಸಗಳ ಸಂಚಾರದಿಂದ, ಕುದುರೆ ಆನೆ ಕಾಲಾಳು ಇವರೆಲ್ಲರೂ ಕತ್ತರಿಸಲ್ಪಡುತಿದ್ದರು. ಕೊಡಲಿಗಳು ಗುಂಪುಗುಂಪಾಗಿ ಬೀಳುತಿರುವುದರಿಂದ, ಮದ್ದಾನೆಗಳು ಭೂಮಿಯಮೇಲೆ ಉರುಳಿಕೊಳ್ಳುತಿದ್ದುವು ‖೨೨‖

ದೊಣ್ಣೆಗಳನ್ನು ಬರಸೆಯಾಗಿ ತಿರುಗಿಸುತಿರುವುದರಿಂದ, ಭಯಪಟ್ಟು ಹಾರಿಹೋದ ಭಟರುಗಳು, ಮರವೊದಲಾದುವುಗಳಿಂದ ತಮ್ಮನ್ನು ಮರೆಮಾಡಿಕೊಳ್ಳುತಿದ್ದರು. ಕವಣೆಕಲ್ಲುಗಳು ಬಂದು ಬೀಳುತಿರುವುದರಿಂದ, ವೃಕ್ಷದಂತೆ ಉನ್ನತವಾಗಿರುವ ರಥಗಳ ಧ್ವಜಗಳು ಪುಡಿಪುಡಿಯಾಗಿದ್ದುವು ‖೨೩‖

ಕರವಾಳವಿಲೂನಾಗ್ರಚ್ಛತ್ರಪಙ್ಕಜಪಾಣ್ಡುರಃ ।
ಕ್ಷೇಪಣಕ್ಷೋಭಸಙ್ಕ್ಷೀಣ ಸೈನ್ಯಕ್ಷೋಭೋಽಪ್ಯಲಕ್ಷಣಃ ॥೩೪॥
ಕಬನ್ಧಬನ್ಧಸನ್ನೇತೃಪಾತಸಮ್ಪಿಷ್ಟಪಾರ್ಶ್ವಗಃ ।
ಸಾಙ್ಕುಶಾಙ್ಕಿತಸಙ್ಖ್ಯಸ್ಥವೀರವಾರಿತವಾರಣಃ ॥೩೫॥
ಪರಶುವ್ರಾತಸಮ್ಪಾತಪತತ್ಸಮದವಾರಣಃ ।
ಪಾಶಾಪಾಶಿವಿಶೇಷಜ್ಞವೀರಾತಿಪರಿದೇವನಃ ॥೩೬॥
ಕ್ಷುರಿಕಾಕುಕ್ಷಿನಿರ್ಭೇದಗಳತ್ಪದ್ಮಪತಜ್ಜನಃ ।
ತ್ರಿಶೂಲವಲನೋನ್ಮತ್ತಶೂರಸಙ್ಕರನರ್ತಿತಃ ॥
ಧಾವದ್ಧಾನುಷ್ಕಸಮ್ಪೂರ್ಣಕುಲಕೂಜಿತಕಾಕಲಿಃ ॥೩೭॥
ಭಿನ್ದಿಪಾಲಸಟಾಟೋಪಹುಙ್ಕಾರಾರಭಟೀನಟಃ ।

ಕತ್ತಿಯ ಪೆಟ್ಟಿನಿಂದ ಶ್ವೇತಚ್ಛತ್ರಗಳ ತುದಿಗಳು ಕತ್ತರಿಸಿ ಬೀಳುತಿದ್ದುದರಿಂದ, ಬಿಳಿದಾವರೆಹೂವುಗಳನ್ನು ಹರಡಿದಂತೆ ಬೆಳ್ಳಗೆ ಕಾಣುತಿದ್ದುವು. ಕವಣೆ ಯೇಟುಗಳಿಂದ ಗಾಬರಿಬಿದ್ದು ಕ್ರಮವಾಗಿ ಸೈನ್ಯವು ಕ್ಷಯಿಸುತಿದ್ದರೂ, ಅದನ್ನು ಯಾರೂ ಲಕ್ಷ್ಯಮಾಡುತಿರಲಿಲ್ಲ ॥೩೪॥

ಅಲ್ಲಿ ರಥಿಕರಾದವರನ್ನು ಪದಾತಿಗಳು ಜೀವದೊಡನೆ ಹಿಡಿದುಕೊಳ್ಳಬೇಕೆಂದು ಹಾರುತಿದ್ದರು; ಆಗ ಆ ರಥಿಕರು ಮಧ್ಯದಲ್ಲಿ ಅವರ ತಲೆಯನ್ನು ಕತ್ತರಿಸಿಬಿಡುತಿದ್ದರು; ಆದರೂ ಆವರ ಕಬಂಧ (ಮುಂಡ) ಗಳು ಹಾರಿಹೋಗಿ ಜೀವಂತರಾದ ಆ ರಥಿಕರನ್ನು ಹಿಡಿದುಕೊಳ್ಳುತಿದ್ದುವು. ಇಂತಹ ರಥಿಕರು ಕೆಳಗೆ ಬೀಳುತಿರುವುದರಿಂದ, ಮೊಗ್ಗುಲಿನಲ್ಲಿರುವವರು ಮರ್ದಿಸಲ್ಪಡುತಿದ್ದರು. ಆನೆಯಮೇಲೆ ಕುಳಿತು ಅಂಕುಶಹಸ್ತರಾಗಿ ಯುದ್ಧಮಾಡತಕ್ಕವರು, ತಮ್ಮ ಅಂಕುಶದಿಂದ ಎದುರಾಳುಗಳನ್ನು ಹೊಡೆಯುತಿದ್ದರು; ಆದರೂ ಆ ವೀರರಾದ ಎದುರಾಳುಗಳು, ಭಯಪಡದೆ ಯುದ್ಧರಂಗದಲ್ಲಿಯೇ ನಿಂತುಕೊಂಡು ಆನೆಗಳನ್ನು ತಡೆಯುತಿದ್ದರು ॥೩೫॥

ಪೂರ್ವೋಕ್ತರೀತಿಯಾಗಿ, ಕೊಡಲಿಗಳ ಸಮುದಾಯದ ಏಟಿನಿಂದ, ಮದ್ದಾನೆಗಳು ಬೀಳುತಿದ್ದುವು. ಪಾಶ (ಹಗ್ಗ) ಯುದ್ಧದಲ್ಲಿ ಅತಿ ನಿಪುಣರಾದ ವೀರರು, ತಮ್ಮ ಪ್ರಾಣಗಳನ್ನು ಬೇಕಾದಹಾಗೆ ಜೂಜುಗಟ್ಟುತಿದ್ದರು ॥೩೬॥

ಕ್ಷುರಿಕಾಯುಧ (ಬಾಕು) ದಿಂದ ಹೊಟ್ಟೆಯನ್ನು ಸೀಳಲಾಗಿ, ಭಟರುಗಳು, ಹೃದಯಕಮಲವೀಚೆಗೆ ಹೊರಟುಕೊಂಡವರಾಗಿ ಬೀಳುತಿದ್ದರು. ತ್ರಿಶೂಲಾಯುಧವನ್ನು ತಿರುಗಿಸುತ ಮತ್ತರಾಗಿರುವ ಶೂರರು ನರ್ತನಮಾಡುತಿರುವುದರಿಂದ, ಧನುರ್ಧಾರಿಗಳಾದವರು ಓಡಿಹೋಗಿ ಗುಂಪುಗಳನ್ನು ಸೇರಿಕೊಳ್ಳುತಿದ್ದರು; ಆಗ ಅವರ ಧನುಸ್ಸುಗಳ ಟಂಕಾರಧ್ವನಿಗಳು, ಅವ್ಯಕ್ತಮಧುರವಾಗಿ ಅಲ್ಲೆಲ್ಲ ವ್ಯಾಪಿಸುತಿದ್ದುವು ॥೩೭॥

ಭಿಂದಿಪಾಲಗಳೆಂಬ ಸಟೆ (ಸಿಂಹದ ಕೂದಲು) ಗಳ ಆಡಂಬರದಿಂದಲೂ, ಹುಂಕಾರಗಳೆಂಬ ಸಿಂಹನಾದಾಡಂಬರಗಳಿಂದಲೂ, ಅಲ್ಲಿರುವ ಭಟರುಗಳು, ನರಸಿಂಹಾವತಾರದ

ವಜ್ರಮುಷ್ಟಿವಿನಿಷ್ಪಿಷ್ಟಪಿಷ್ಟಸದ್ಭಟಸಙ್ಕಟಃ ॥೩೮॥
ಶ್ಯೇನವದ್ವ್ಯೋಮಪದವೀಪ್ರೋತ್ಪತತ್ಪಟುಪಟ್ಟಿಶಃ ।
ಅಙ್ಕುಶಾಕೃಷ್ಟಶೂರೇಶರಥೇಭಹಯಕೇತನಃ ॥೩೯॥
ಹಲಾಹಲಿಹತಾಲೂನಹೇಲಾಕುಲಕುಲಾಚಲಃ ।
ಸುತಾಳೋತ್ತಾಳಕುದ್ದಾಲನಿಖಾತವನಭೂತಲಃ ॥೪೦॥
ಧನುರ್ದ್ವಿಗುಣಮಾತ್ರಾಸ್ತಲೂನಲೋಕಶಿಲಾವಳಿಃ ।
ಕ್ರಕಚೋಭಯಪಾರ್ಶ್ವೇಭಚ್ಛಿನ್ನಮತ್ತಮತಙ್ಗಜಃ ॥೪೧॥
ಸಙ್ಗ್ರಾಮೋಲೂಖಲಕ್ಷುಣ್ಣಲೋಕತಣ್ಡುಲಮೌಸಲೀ ।
ಅಸ್ತ್ರಭಶೃಙ್ಖಲಾಜಾಲಬದ್ಧಸೇನಾವಿಹಙ್ಗಮಃ ॥೪೨॥
ಲೋಲಾಸಿವೀರನಿಸ್ತ್ರಿಂಶನೀತವಾದಿಗೃಹಾಙ್ಗಣಃ ।
ಗಣಶೋನೀಯಮಾನಾಗ್ರ್ಯಶ್ವಪದಾರಾವನಿರ್ಭರಃ ॥೪೩॥

ವೇಷವನ್ನು ಧರಿಸಿರುವಂತೆತೋರುತಿದ್ದರು. ವಜ್ರಮುಷ್ಟಿಯ ಏಟುಗಳಿಂದ ಚೂರ್ಣಿತರಾದ ಮಹಾಭಟರುಗಳು, ಆ ಯುದ್ಧರಂಗದಲ್ಲಿ ನಿರವಕಾಶವಾಗಿ ತುಂಬಿದ್ದರು ॥೩೮॥

ಹರಿತವಾದ ಪಟ್ಟಿಶಾಯುಧಗಳು, ಗಿಡಗನಂತೆ ಅಂತರಿಕ್ಷಕ್ಕೆ ಹಾರಿಹೋಗುತಿದ್ದವು. ಶೂರರೂ ಸೇನಾಪತಿಗಳೂ ರಥಗಳೂ ಆನೆಗಳೂ ಕುದುರೆಗಳೂ ಧ್ವಜಗಳೂ ಕೂಡ, ಅಂಕುಶಗಳಿಂದ ಸೆಳೆಯಲ್ಪಟ್ಟು ಬೀಳುತಿದ್ದುವು ॥೩೯॥

ಕುಲಪರ್ವತಗಳಂತೆ ನಿಶ್ಚಲರಾದ ವೀರರು, ಹಲಾಹಲಿ (ನೇಗಲಿನಿಂದ ಹೊಡೆದಾಡುವುದು) ಯುದ್ಧದಲ್ಲಿ ಏಟುತಿಂದು ಸ್ವಲ್ಪ ಕತ್ತರಿಸಲ್ಪಟ್ಟವರಾದರೂ, ಲಕ್ಷ್ಯವಿಲ್ಲದೆ ಆಟವಾಡುವಂತಿದ್ದರು. ತಾಳೆಯಮರದಂತೆ ಎತ್ತರವಾಗಿರುವ ಭಟರು, ತಮ್ಮ ಕೈಲಿರುವ ಗುದ್ದಲಿಗಳನ್ನು ಮೇಲಕ್ಕೆ ಎತ್ತಿಬಿಡುತಿದ್ದುದರಿಂದ, ಆ ಅರಣ್ಯಭೂಮಿಯು ಅಗೆಯಲ್ಪಡುತಿದ್ದಿತು ॥೪೦॥

ಅಲ್ಲಿ ಜನಗಳನ್ನೂ ಕಲ್ಲುಗಳನ್ನೂ ಎರಡು ಧನುಃಪ್ರಮಾಣ (ಧನುಸ್ಸನ್ನು ಎಸೆದರೆ ಅದು ಬೀಳುವಷ್ಟು ಅವಕಾಶ) ಕ್ಕೆ ಎಸೆಯುತಿರುವುದರಿಂದ, ಅವುಗಳು ಸೀಳಿಸೀಳಿ ಬೀಳುತಿದ್ದುವು. ಎರಡು ಮಗ್ಗುಲುಗಳಲ್ಲಿಯೂ ಗರಗಸವನ್ನು ಕಟ್ಟಿರುವ ಆನೆಗಳು, ಮದ್ದಾನೆಗಳ ಗುಂಪುಗಳಿಗೆ ನುಗಿ ಕತ್ತರಿಸಿಹಾಕುತಿದ್ದುವು ॥೪೧॥

ಯುದ್ಧವೆಂಬ ಒರಳಿನೊಳಗೆ, ಜನಗಳೆಂಬ ಅಕ್ಕಿಗಳನ್ನು, ಮುಸಲಯುದ್ಧವೆಂಬ ಒನಕೆಯು ನುಚ್ಚುಮಾಡುತಿದ್ದಿತು. ಅಸ್ತ್ರಕಾಂತಿಗಳೆಂಬ ಸರಪಳಿಯ ಬಲೆಗಳು, ಸೇನೆಗಳೆಂಬ ಪಕ್ಷಿಗಳನ್ನು ಕಟ್ಟುತಿದ್ದುವು ॥೪೨॥

ಅಂತಹ ಪಕ್ಷಿಗಳನ್ನು, ಕೈಯಲ್ಲಿ ಕತ್ತಿಯನ್ನು ಝಳಪಿಸುತಿರುವ ವೀರರು, ತಮ್ಮ ಕತ್ತಿಗಳಿಂದ, ವೈವಸ್ವತ (ಯಮ) ನೆಂಬ ವ್ಯಾಧಾಧಿಪತಿಯ ಮನೆಯಂಗಳಕ್ಕೆ ಸೇರಿಸುತಿದ್ದರು. ಆಗ, ದುಷ್ಟಮೃಗಗಳು, ಮಹಾವೀರರ ಶರೀರಗಳನ್ನು ಗುಂಪುಗುಂಪಾಗಿ ಹೊತ್ತುಕೊಂಡು ಹೋಗುತ, ತಮ್ಮ ಕೂಗುಗಳಿಂದ ಆ ಪ್ರದೇಶವನ್ನೆಲ್ಲ ತುಂಬಿಬಿಟ್ಟಿದ್ದುವು ॥

ನಖಾಙ್ಗುಷ್ಠಖನತ್ಪುಙ್ಖಪ್ರೇಙ್ಖಾರಣರಣಾರವೈಃ ।
ಮರಿಚೈರ್ವ್ಯಞ್ಜನಾನೀವ ರಞ್ಜಯನ್ ಸಕಲಾರವಾನ್ ॥೪೪॥
ಸೈನ್ಯನಿಕ್ಷಿಪ್ತಕುಮ್ಭಾಗ್ನಿಮೃತಯೋಧೇರಿತಾಯುಧಃ ।
ಸೈನ್ಯನಿಕ್ಷಿಪ್ತಕುಮ್ಭಾಗ್ನಿದಗ್ಧಯೋಧೋಜ್ಝಿತಾಯುಧಃ ॥೪೫॥
ಸೈನ್ಯನಿಕ್ಷಿಪ್ತಕುಮ್ಭಸ್ಥತಪ್ತಾಙ್ಗಾರಹತೇಕ್ಷಣಃ ।
ಸೈನ್ಯನಿಕ್ಷಿಪ್ತಕುಮ್ಭಸ್ಥವಿಷವಾರಿದಳಜ್ಜನಃ ॥೪೬॥

ನಾರಾಚವರ್ಷವರವಾರಿದವೀರಪೂರೇ
ಮತ್ತಾಭ್ರಸಮ್ಭ್ರಮಸನೃತ್ತಕಬನ್ಧಬರ್ಹೀ ।
ಕಲ್ಪಾನ್ತಕಾಲಇವವೇಗವಿವರ್ತಮಾನ
ಮಾತಙ್ಗಶೈಲವಲಿತೋ ರಣಸಮ್ಭ್ರಮೋಭೂತ್ ॥೪೭॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಸೇನಯೋಃ ಪ್ರಥಮ
ಪಾತವರ್ಣನಂ ನಾಮ ತ್ರಯಸ್ತ್ರಿಂಶಃ ಸರ್ಗಃ.

ಮಧ್ಯಮಧ್ಯದಲ್ಲಿ, ಮೇಲಕ್ಕೆ ಹಾರುತಿರುವ ಬಾಣಗಳ ಹಿಂಭಾಗದೊಳಗೆ, ಹೆಬ್ಬೆಟ್ಟಿನ ಉಗುರುಗಳಿಂದ ಧ್ವನಿಯಾಗುತಿದ್ದಿತು. ಇದು, ವ್ಯಂಜನಗಳನ್ನು ಮೆಣಸಿನಕಾಯಿಯು ರುಚಿಪಡಿಸುವಂತೆ, ಇತರ ಸಮಸ್ತಶಬ್ದಗಳನ್ನೂ ಮಧುರಮಾಡುತಿದ್ದಿತು ॥೪೪॥

ಸೈನ್ಯದಲ್ಲಿ ಎಸೆಯಲ್ಪಟ್ಟ ಕುಂಭಾಗ್ನಿ (ಒಂದು ಗಡಿಗೆಯಲ್ಲಿ ಮದ್ದು ಗುಂಡು ಮುಂತಾದುವುಗಳನ್ನು ತುಂಬಿ ಎಸೆಯುವುದು) ಯಿಂದ ಮೃತರಾದ ಯೋಧರು, ತಮ್ಮ ಕೈಲಿದ್ದ ಆಯುಧಗಳನ್ನು ಹಿಡಿದಿದ್ದಹಾಗೆಯೇ ಎಸೆಯುತಿದ್ದರು. ಮತ್ತು ಸೈನ್ಯದಲ್ಲಿ ಎಸೆಯಲ್ಪಟ ಕುಂಭಾಗ್ನಿಯಿಂದ ಸುಡಲ್ಪಟ್ಟ ಯೋಧರುಗಳು, ತಮ್ಮ ಕೈಲಿದ್ದ ಆಯುಧಗಳನ್ನು ಹಿಡಿದಿದ್ದಹಾಗೆಯೇ ಬಿಟ್ಟುಬಿಡುತಿದ್ದರು ॥೪೫॥

ಸೈನ್ಯದಲ್ಲಿ ಎಸೆಯಲ್ಪಟ್ಟ ಕುಂಭದಲ್ಲಿರುವ ಕಾದಕೆಂಡಗಳಿಂದ ಜನಗಳ ಕಣ್ಣುಗಳು ಹೋಗುತಿದ್ದುವು. ಹಾಗೆಯೇ, ಸೈನ್ಯದಲ್ಲಿ ಎಸೆಯಲ್ಪಟ್ಟ ಕುಂಭದೊಳಗಿರುವ ವಿಷಜಲದಿಂದ, ಜನಗಳು ಆಕ್ಷಣವೇ ಸೀಳಿಸೀಳಿ ಬೀಳುತಿದ್ದರು ॥೪೬॥

ವತ್ಸ! ರಾಮ! ಹೆಚ್ಚು ವರ್ಣಿಸಲೇಕೆ? ಆಗ ಬಾಣವೃಷ್ಟಿಗಳೆಂಬ ಉತ್ತಮವಾದ ನೀರನ್ನು ವರ್ಷಿಸುತ್ತಿರುವ ವೀರಸಮುದಾಯಗಳೆಂಬ ಮಹಾಮೇಘಗಳ ಆಡಂಬರದಿಂದ, ಕಬಂಧಗಳೆಂಬ ನವಿಲುಗಳು ಕುಣಿಯುತಿದ್ದುವು; ದೊಡ್ಡ ದೊಡ್ಡ ಆನೆಗಳೆಂಬ ಪರ್ವತಗಳು, ವೇಗದಿಂದ ಸಂಚರಿಸುತ ತುಂಬಿಕೊಂಡಿದ್ದುವು. ಇಂತಹ ಯುದ್ಧಸಂಭ್ರಮವು ಪ್ರಳಯಕಾಲದಂತಿದ್ದಿತು ॥೪೭॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಸೈನ್ಯಗಳ ಪ್ರಥಮಸಮಾಗಮವರ್ಣನೆಯೆಂಬ ಮೂವತ್ತುಮೂರನೆಯ ಸರ್ಗವು.

ಅಥ ವೈರಾಗ್ಯಪ್ರಕರಣೇ ಚತುಸ್ತ್ರಿಂಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ—

ಅಥ ರಾಜ್ಞಾಂ ಯುಯುತ್ಸೂನಾಂ ಭಟಾನಾಂ ಮನ್ತ್ರಿಣಾಮಪಿ ।
ನಭಸಃ ಪ್ರೇಕ್ಷಕಾಣಾಂ ಚ ತತ್ರೇಮಾಃ ಪ್ರೋದಗುರ್ಗಿರಃ ॥೧॥
ಚಲತ್ಪದ್ಮಂ ಸರಇವ ವಹದ್ವಿಹಗಮೇವ ಚ ।
ನಭಃ ಶೂರಶಿರಃಕೀರ್ಣಂ ಭಾತಿ ತಾರಕಿತಾಕೃತಿ ॥೨॥
ಪಶ್ಯ ರಕ್ತಪೃಷತಸ್ಫಾರಸಿನ್ದೂರಾರುಣ ಮಾರುತೈಃ ।
ಸನ್ಧ್ಯಾಇವ ವಿಭಾನ್ತ್ಯೇತೇ ಮಧ್ಯಾಹ್ನೇಮ್ಬುದ ಭಾನವಃ ॥೩॥
ಕಿಮಿದಂ ಭಗವನ್ ವ್ಯೋಮ ಪಲಾಲಭರಿತಂ ಸ್ಥಿತಮ್ ।
ನೇದಂ ಪಲಾಲಂ ವೀರಾಣಾಂ ಏತೇ ಶರಭರಾಮ್ಬುದಾಃ ॥೪॥

ಉತ್ಪತ್ತಿಪ್ರಕರಣದಲ್ಲಿ ಮೂವತ್ತುನಾಲ್ಕನೆಯ ಸರ್ಗವು.

ವರ್ಣ್ಯತೇತ್ರ ವಿಶೇಷೇಣ ವಿಚಿತ್ರಾರ್ಥನಿಬನ್ಧನೈಃ ।
ರಣಪ್ರೇಕ್ಷಕವಕ್ತ್ರೇಣ ಯುದ್ಧಸ್ಯೈವ ಚಮತ್ಕೃತಿಃ ॥

ಈ ಸರ್ಗದಲ್ಲಿಯೂ, ವಿಚಿತ್ರವಿಷಯಸಂಘಟನೆಯಿಂದ, ಯುದ್ಧದ ಚಮತ್ಕಾರವೇ, ಯುದ್ಧವನ್ನು ನೋಡುತಿದ್ದವರ ಮುಖದಿಂದ, ವಿಶೇಷವಾಗಿ ವರ್ಣಿಸಲ್ಪಡುವುದು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ವತ್ಸ! ಪೂರ್ವೋಕ್ತರೀತಿಯಾಗಿ ಯುದ್ಧಸಂಭ್ರಮವುಂಟಾದ ಬಳಿಕ, ಆ ರಣರಂಗದಲ್ಲಿ, ಯುದ್ಧಮಾಡಲಿಚ್ಛಿಸುತಿರುರ ದೊರೆಗಳು ಭಟ್ಟರುಗಳು ಮಂತ್ರಿಗಳು ಇವರ ಮುಖದಿಂದಲೂ—ಅಂತರಿಕ್ಷದಲ್ಲಿರುವ ಯುದ್ಧಪ್ರೇಕ್ಷಕರ ಮುಖದಿಂದಲೂ ಕೂಡ, ಮುಂದೆ ಹೇಳುವ ರೀತಿಯಾಗಿ ಮಾತುಗಳು ಹೊರಟುವು॥೧॥

ಆ ಮಾತುಗಳು ಯಾವುವೆಂದರೆ:—ಶೂರರ ಶಿರಸ್ಸುಗಳಿಂದ ವ್ಯಾಪ್ತವಾಗಿ ನಕ್ಷತ್ರೋದಯವಾಗಿರುವಂತಿರುವ ಅಂತರಿಕ್ಷವು, ಚಂಚಲವಾದ ಕಮಲಗಳುಳ್ಳ ಸರಸ್ಸಿನಂತೆಯೂ, ಹಾರುತಿರುವ ಪಕ್ಷಿಗಳುಳ್ಳಂತೆಯೂ ಪ್ರಕಾಶಿಸುತ್ತಿರುವುದು ॥೨॥

ರಕ್ತದ ಹನಿಗಳು ತುಂಬಿರುವುದರಿಂದ ಚಂದ್ರದಂತೆ ಕೆಂಪಾಗಿರುವ ವಾಯುಗಳು ಬೀಸುತಿರುವ ಕಾರಣ, ಈ ಮೇಘಕಾಂತಿಗಳು, ಮಧ್ಯಾಹ್ನಕಾಲದಲ್ಲಿಯೂ ಸಂಧ್ಯಾಕಾಲಿಕಗಳಂತೆ ಪ್ರಕಾಶಿಸುತ್ತಿರುವುವು ॥೩॥

ಸ್ವಾಮಿ! ಇದೇನು? ಅಂತರಿಕ್ಷವು ಸಿಪ್ಪೆಗಳಿಂದ ತುಂಬಲ್ಪಟ್ಟಿರುವುದು? (ಎಂದು ಒಬ್ಬನು ಪ್ರಶ್ನೆಮಾಡಿದನು) ಇದು ಸಿಪ್ಪೆಯಲ್ಲ; ಇವು ವೀರರ ಬಾಣಸಮುದಾಯುಗಳೆಂಬ ಮೇಘಗಳು. (ಎಂದು ಮತ್ತೊಬ್ಬನು ಉತ್ತರಹೇಳಿದನು) ॥೪॥

ಯಾವನ್ತೋ ಭುವಿ ಸಿಚ್ಯನ್ತೇ ರುಧಿರೈರ್ರಣರೇಣವಃ ।
ತಾವನ್ತ್ಯಬ್ದಸಹಸ್ರಾಣಿ ಭಟಾನಾಮಾಸ್ಪದಂ ದಿವಿ ॥೫॥
ಮಾಭೈಷ್ಟ ನೈತೇ ನಿಸ್ತ್ರಿಂಶಾಃ ನೀಲೋತ್ಪಲದಳತ್ವಿಷಃ ।
ಅಮೀ ವೀರಾವಲೋಕಿನ್ಯಾಃ ಲಕ್ಷ್ಮ್ಯಾನಯನವಿಭ್ರಮಾಃ ॥೬॥
ವೀರಾಲಿಙ್ಗನಲೋಲಾನಾಂ ನಿತಮ್ಬೇ ಸುರಯೋಷಿತಾಮ್ ।
ಮೇಖಲಾಃ ಶಿಥಿಲೀಕರ್ತುಂ ಪ್ರವೃತ್ತಃ ಕುಸುಮಾಯುಧಃ ॥೭॥
ಲಸದ್ಭುಜಲತಾಲೋಲರಕ್ತಪಲ್ಲವ ಶಾಣಯಃ ।
ಮಞ್ಜರೀಮತ್ತನಯನಾಃ ಮಧ್ವಾಮೋದ ಸುಗನ್ಧಯಃ ॥೮॥
ಗಾಯನ್ತ್ಯೋ ಮಧುರಾಲಾಪೈಃ ನನ್ದನೋದ್ಯಾನ ದೇವತಾಃ ।
ತವಾಗಮನಮಾಶಙ್ಕ್ಯ ಪ್ರವೃತ್ತಾಃ ಪರಿನರ್ತಿತುಮ್ ॥೯॥
ಪ್ರತ್ಯನೀಕಂ ಭಿನತ್ತ್ಯನ್ತಃ ಕುಠಾರೈಃ ಕಠಿನೈರಿಯಮ್ ।
ಸೇನಾಽಗ್ರಾಮ್ಯೇವ ವನಿತಾ ದಯಿತಂ ದೃಷ್ಟಿಚೇಷ್ಟಿತೈಃ ॥೧೦॥
ಹಾ ಪಿತುರ್ಮಮ ಭಲ್ಲೇನ ಶಿರೋ ಜ್ವಲಿತಕುಣ್ಡಲಮ್ ।
ಸೂರ್ಯಸ್ಯ ನಿಕಟಂ ನೀತಂ ಕಾಲೇನೇವಾಷ್ಟಮೋ ಗ್ರಹಃ ॥೧೧॥

ಭೂಮಿಯಲ್ಲಿ ರಣಾಂಕಣದೊಳಗೆ ರಕ್ತದಿಂದ ಎಷ್ಟು ಧೂಳಿಗಳು ನೆನೆಯಿಸಲ್ಪಡುವುವೋ, ಅಷ್ಟು ಸಹಸ್ರವರ್ಷಗಳು ವೀರರಿಗೆ ಸ್ವರ್ಗದಲ್ಲಿ ಆವಾಸವು ॥೫॥

ಹೆದರಬೇಡಿರಿ; ಇವು ಕತ್ತಿಗಳಲ್ಲ; ಇವುಗಳು, ವೀರರನ್ನು ನೋಡುತಿರುವ ರಣಲಕ್ಷ್ಮಿಯ ಲೀಲಾರ್ಥವಾದ ಉತ್ಪಲದಳದ ಕಾಂತಿಯುಳ್ಳ—ನೇತ್ರವಿಲಾಸಗಳು ॥೬॥

ವೀರರನ್ನು ಆಲಿಂಗಿಸುವುದರಲ್ಲಿ ಆಸಕ್ತರಾದ ಅಪ್ಸರಸ್ತ್ರೀಯರ ಕಟಿಪಶ್ಚಾದ್ಭಾಗದಲ್ಲಿ, ಮನ್ಮಥನು, ಒಡ್ಯಾಣ ಡಾಬುಗಳನ್ನು ಸಡಲಿಸುವುದಕ್ಕೆ ಉಪಕ್ರಮಿಸಿರುವನು ॥೭॥

ವಿಲಾಸದಿಂದ ಚಂಚಲವಾದ ಭುಜಲತೆಯುಳ್ಳವರಾಗಿಯೂ, ಕೆಂದಳಿರಿನಂತೆ ಸುಂದರವಾದ ಹಸ್ತತಲವುಳ್ಳವರಾಗಿಯೂ, ಮುಕುಳಿತವಾದ ಪುಷ್ಪಗುಚ್ಛದಂತಿರುವ ಮತ್ತವಾದ ನೇತ್ರವುಳ್ಳವರಾಗಿಯೂ, ಪುಷ್ಪರಸಪರಿಮಳದಿಂದ ಸುವಾಸಿತರಾಗಿಯೂ, ಮಧುರಸ್ವರಗಳಿಂದ ಗಾನಮಾಡತಕ್ಕವರಾಗಿಯೂ ಇರುವ, ನಂದನವನದ ದೇವತೆಗಳು, ನಿನ್ನ ಬರುವಿಕೆಯನ್ನು ಯೋಚಿಸಿ, ನರ್ತನಮಾಡಲುದ್ಯುಕ್ತರಾಗಿರುವರು. (ಎಂದು ಒಬ್ಬ ವೀರನು ಮತ್ತೊಬ್ಬವೀರನೊಡನೆ ಹೇಳಿದನು) ॥೮—೯॥

ನಾಗರಕಳಾದ ನಾಯಿಕೆಯು ದೃಷ್ಟಿವಿಲಾಸಗಳಿಂದ ನಾಯಕನ ಹೃದಯವನ್ನು ಭೇದಿಸುವಂತೆ, ಈ ಸೇನೆಯು ಕಠಿನವಾದ ಕುಠಾರಗಳಿಂದ ಎದುರುಸೈನ್ಯದ ಒಳಭಾಗವನ್ನು ಸೀಳುತಿರುವುದು ॥೧೦॥

ಅಯ್ಯೋ! ಗ್ರಹಣಕಾಲವು ರಾಹುವನ್ನು ಸೂರ್ಯನಹತ್ತಿರಕ್ಕೆ ಒಯ್ಯುವಂತೆ, ಕುಂತಲದಿಂದ ಪ್ರಕಾಶಿಸುತಿರುವ ನನ್ನ ತಂದೆಯ ತಲೆಯನ್ನು ಭಲ್ಲಾಯುಧವು ಸೂರ್ಯನ ಹತ್ತಿರಕ್ಕೆ ಸೇರಿಸಿಬಿಟ್ಟಿತು ! ॥೧೧॥

ಆಪಾದಶೃಙ್ಖಲಾಪ್ರೋತ ಭ್ರಮತ್ಸ್ಥೂಲೋಪಲದ್ವಯಮ್ ।
ಭ್ರಮಯಂಶ್ಚಿತ್ರದಣ್ಡಾಖ್ಯಂ ಚಕ್ರಮೂರ್ಧ್ವಭುಜೋ ಜವಾತ್ ॥೧೨॥

ಯೋಧೋ ಯಮಇವಾಭಾತಿ ಯಾಮ್ಯಾದಾಯಾತಿ ದಿಕ್ತಟಾತ್ ।
ಸರ್ವತಃ ಸಂಹರನ್ ಸೇನಾಂ ಏಹಿ ಯಾಮೋ ಯಥಾಗತಮ್ ॥೧೩॥

ಸದ್ಯಶ್ಛಿನ್ನಶಿರಶ್ಶ್ವಭ್ರಮಜ್ಜತ್ಕಙ್ಕಕುಲಾಕುಲಾಃ ।
ಕಬನ್ಧಾಃ ಪರಿನೃತ್ಯನ್ತಿ ತಾಳೋತ್ತಾಳಾ ರಣಾಙ್ಗಣೇ ॥೧೪॥

ಗೀರ್ವಾಣಗಣಗೋಷ್ಠೀಷು ಪ್ರವೃತ್ತಾಃ ಸಙ್ಕಥಾಮಿಥಃ ।
ಕದಾ ಲೋಕಾನ್ತರಂ ಧೀರಾಃ ಕಥಂ ಯಾಸ್ಯನ್ತಿ ಕೇ ಕುತಃ ॥೧೫॥

ನಿಗಿರತ್ಯಾಗತಾಃ ಸೇನಾಃ ಸ್ರವನ್ತೀರಿವ ಸಾಗರಃ ।
ಸಮತ್ಸ್ಯಮಕರವ್ಯೂಹಾಃ ಅಹೋಸು ವಿಷಮೋ ಭಟಃ ॥೧೬॥

ಕಟೇಷು ಕರಿಣಾಂ ಕೀರ್ಣಾಃ ಧಾರಾನಾರಾಚರಾಜಯಃ ।
ಪತಿತಾಇವ ಸಮ್ಪೂರ್ಣಾಃ ಶೃಙ್ಗಸಙ್ಘೇಷು ವೃಷ್ಟಯಃ ॥೧೭॥

ಕಾಲಿನಿಂದಲೂ ಸರಪಳಿಯಲ್ಲಿ ಪೋಣಿಸಲ್ಪಟ್ಟು—ಸುತ್ತುತಿರುವ ಎರಡು ದೊಡ್ಡ ಕಲ್ಲುಗಳುಳ್ಳ—ಚಿತ್ರದಂಡನಾಮಕವಾದ ಚಕ್ರವಿಶೇಷವನ್ನು, ತೋಳೆತ್ತಿಕೊಂಡು ವೇಗವಾಗಿ ಸುತ್ತಿಸುತಿರುವ ಈ ಯೋಧನು, ಯಮನಂತೆ ಕಾಣಿಸುತಿರುವನು; ಇವನು, ಎಲ್ಲಕಡೆಯಲ್ಲಿಯೂ ಸೈನ್ಯವನ್ನು ಸಂಹರಿಸುತ, ದಕ್ಷಿಣದಿಕ್ಕಿನ ಕಡೆಯಿಂದಲೇ ಬರುತಿರುವನು, ನಾವು ಬಂದದಾರಿಯನ್ನು ಹಿಡಿದುಕೊಂಡು ಹೊರಟುಹೋಗೋಣ; ಬಾ॥೧೨-೧೩॥

ಈಗತಾನೆ ಕತ್ತರಿಸಲ್ಪಟ್ಟಿರುವ ಶಿರಸ್ಸ್ಥಾನಗಳೆಂಬ ಗುಂಡಿಗಳಲ್ಲಿ ಮುಳುಗುತಿರುವ ಹದ್ದುಗಳಿಂದ ಪರಿಪೂರ್ಣಗಳಾಗಿ ತಾಳೆಯಗಿಡಗಳಂತೆ ಉದ್ದವಾಗಿರುವ ಈ ಕಬಂಧಗಳು, ಯುದ್ಧಾಂಕಣದಲ್ಲಿ ನರ್ತನಮಾಡುತಿರುವುವು ॥೧೪॥

ಅಯ್ಯಾ! ರಾಮ! ಭೂತಲದಲ್ಲಿರುವವರು ಈ ರೀತಿಯಾಗಿ ಸಂಭಾಷಣೆಮಾಡುತಿರಲು, ದೇವಸಮಾಜಗಳಲ್ಲಿಯೂ ಈ ರೀತಿಯಾಗಿ ಪರಸ್ಪರ ಸಲ್ಲಾಪಗಳು ನಡೆದುವು:—ಧೀರರಾದವರು—ಯಾವಾಗ ಲೋಕಾಂತರಕ್ಕೆ ಹೋಗುವರು? ಅವರು ಹೋಗುವುದು ಹೇಗೆ? ಅವರು ಯಾರು? ಏತಕ್ಕಾಗಿ ಹೋಗುವರು?॥೧೫॥

ಮತ್ಸ್ಯಮಕರವ್ಯೂಹಯುಕ್ತವಾಗಿ ಬರುತಿರುವ ಸೇನೆಗಳನ್ನೆಲ್ಲ—ನದಿಗಳನ್ನು ಸಮುದ್ರದಂತೆ—ಈ ವೀರನು ನುಂಗಿಬಿಡುತಿರುವನಲ್ಲ! ಅಹೋ! ಇವನು ಅತಿ ಕ್ರೂರನಾದ ಭಟನು!! ॥೧೬॥

ಗಜಗಳ ಗಂಡಸ್ಥಳಗಳಲ್ಲಿ ತುಂಬಿಕೊಂಡಿರುವ ಬಾಣಪರಂಪರಾವೃಷ್ಟಿಗಳು, ಗಿರಿಶಿಖರಸಮೂಹಗಳಲ್ಲಿ ಬಿದ್ದಿರುವ ಸಂಪೂರ್ಣವಾಗಿರುವ ಜಲವೃಷ್ಟಿಗಳಂತೆ ಕಾಣಿಸುತಿರುವುವು ॥೧೭॥

ಹಾ ಕುನ್ತೇನ ಶಿರೋ ನೀತಂ ಮಮೇತ್ಯೇವಂ ವಿವಕ್ಷತಃ ।
ಶಿರಸಾಽಜೀವಮಿತ್ಯೇವಂ ಖೇ ಖಗೇನೇವ ವಾಶಿತಮ್ ॥೧೮॥
ಯಸ್ತ್ವಪಾಷಾಣವರ್ಷೇಣ ಯೈಷಾಸ್ಮಾನ್ ಪರಿಷಿಞ್ಚತಿ ।
ಸೇನಾನುಶೃಙ್ಖಲಾಜಾಲವಲನಾ ಕ್ರಿಯತಾಂ ಬಲಾತ್ ॥೧೯॥
ವಳೀಪಲಿತನಿರ್ಮುಕ್ತಂ ಪೂರ್ವಭಾರ್ಯಾಪ್ಸರಾಃ ಸತೀ ।
ಅಙ್ಗೀಕರೋತಿ ಭರ್ತಾರಂ ಪರಿಜ್ಞಾಯ ರಣೇ ಹತಮ್ ॥೨೦॥
ಆದಿವಂ ರಚಿತಾಕಾರಾಃ ಕುನ್ತಕಾನನಕಾನ್ತಯಃ ।
ವೀರಾಣಾಂ ಸ್ವರ್ಗಮಾರೋಢುಂ ಇವ ಸೋಪಾನಪಙ್ಕ್ತಯಃ ॥೨೧॥
ಕಾನ್ತಕಾಞ್ಚನಕಾನ್ತಾಙ್ಗೀ ಭಟಸ್ಯೋರಸಿ ಕಾಮಿನೀ ।
ದೃಷ್ಟಾ ದೇವಪುರನ್ಧ್ರೀಯಂ ಭರ್ತುರನ್ವೇಷಣಾನ್ವಿತಾ ॥೨೨॥
ಹಾ ಹನ್ತ ಸೈನ್ಯಮಸ್ಮಾಕಂ ಭಟೈರುದ್ಧತಮುಷ್ಟಿಭಿಃ ।
ಮಹಾಪ್ರಳಯಕಲ್ಲೋಲೈಃ ಸುರಶೈಲಸ್ಥಲಂ ಯಥಾ ॥೨೩॥

ಇಲ್ಲಿ ಒಬ್ಬನು 'ಅಯ್ಯೋ! ನನ್ನ ತಲೆಯು ಕುಂತಾಯುಧದಿಂದ ಕತ್ತರಿಸಲ್ಪಟ್ಟಿತ್ತು ಎಂದು ಹೇಳುತಿರುವಷ್ಟರಲ್ಲಿಯೇ, ಅವನ ತಲೆಯು ಪಕ್ಷಿಯಂತೆ ಮೇಲಕ್ಕೆ ಹಾರಿಹೋಗಿ, ಅಲ್ಲಿ ಸ್ವರ್ಗಲೋಕದ ಆನಂದವನ್ನು ಕಂಡು 'ನಾನು ಬದುಕಿಕೊಂಡೆನು' ಎಂದು ಕೂಗಿ ಕೊಂಡಿತು ॥೧೮॥

ಯಾವ ಈ ಸೈನ್ಯವು, ನಮ್ಮಗಳಮೇಲೆ ಕವಣೆಕಲ್ಲುಗಳನ್ನು ಮಳೆಗರವಂತೆ ಎರಚು ತಿದೆಯೋ, ಇದನ್ನು ಬಲಾತ್ಕರಿಸಿ ಸರಪಳಿಯಿಂದ ಕಟ್ಟಿಹಾಕಬೇಕು ॥೧೯॥

ಒಬ್ಬ ವೀರನ ಪೂರ್ವಪತ್ನಿಯು, ಮೊದಲೇ ಮೃತಳಾಗಿ ಅಪ್ಸರಸ್ತ್ರೀಯಾಗಿದ್ದು, ಈಗ ವೀರಸ್ವರ್ಗವನ್ನು ಹೊಂದಿ ಬಂದಿರುವ—ವಾರ್ಧಕ್ಯಜನ್ಯವಾದ ಸುಕ್ಕಿನಿಂದಲೂ ನರೆ ಯಿಂದಲೂ ವಿಮುಕ್ತನಾದ-ತನ್ನ ಪತಿಯನ್ನು ಗುರುತುಹಿಡಿದು ಸ್ವೀಕರಿಸುತ್ತಿರುವಳು ॥೨೦

ಭೂಮಿಯಿಂದ ಸ್ವರ್ಗದವರೆಗೂ ಹಬ್ಬಿಕೊಂಡಿರುವ ಕುಂತವನಗಳ ಕಾಂತಿಗಳು, ವೀರರು ಸ್ವರ್ಗವನ್ನು ಹತ್ತುವುದಕ್ಕೋಸ್ಕರ ರಚಿಸಲ್ಪಟ್ಟಿರುವ ಸೋಪಾನಪಙ್ಕ್ತಿಗಳಂತೆ ಕಾಣಿಸುತ್ತಿರುವುವು ॥೨೧॥

ಸ್ವತಸ್ಸುಂದರವಾಗಿಯೂ ಸುವರ್ಣದಿಂದ ಮನೋಹರವಾಗಿಯೂ ಇರುವ ಅವಯ ವಗಳುಳ್ಳ ತನ್ನ ಪತಿಯಾದ ಶೂರನ ಎದೆಯಮೇಲೆ ಬಿದ್ದುಕೊಂಡು ಯಾವ ಸ್ತ್ರೀಯು ಮೃತ ಳಾದುದನ್ನು ನಾವು ಈಗತಾನೆ ನೋಡಿದೆವೋ, ಅವಳು ಆಗಲೇ ದೇವಸ್ತ್ರೀಯಾಗಿ ಹುಟ್ಟಿ ಬಿಟ್ಟು, ತನ್ನ ಪತಿಯನ್ನು ಹುಡುಕುತಿರುವಳು ॥೨೨॥

ಹೀಗೆ ದೇವತೆಗಳು ಹೇಳುತಿರುವಾಗ, ಮತ್ತೆ ಮನುಷ್ಯರು ಹೇಳುವರು:— ಅಯ್ಯೋ! ಮಹಾಪ್ರಳಯಕಾಲದ ಜಲತರಂಗಗಳು ಮೇರುಪರ್ವತಪ್ರದೇಶವನ್ನು ಹೊಡೆ ಯುವಂತೆ, ಗಟ್ಟಿಯಾಗಿ ಮುಷ್ಟಿಹಿಡಿದಿರುವ ಭಟರುಗಳು ನಮ್ಮ ಸೈನ್ಯವನ್ನು ಹೊಡೆದು ಬಿಟ್ಟರು! ॥೨೩॥

ಯುಧ್ಯಧ್ವಮಗ್ರತೋ ಮೂಢಾಃ ನಯತಾರ್ಧಮೃತಾನ್ ನರಾನ್ ।
ನಿಜಾನ್ ಪಾದಪ್ರಹಾರೇಣ ಮೈತಾನ್ ದಾರಯತಾಧಮಾಃ ॥೨೪॥
ಧಮ್ಮಿಲ್ಲವಲನಾವ್ಯಗ್ರೇ ಘನೋತ್ಕಣ್ಠೇಽಪ್ಸರೋಗಣೇ ।
ಭಟೋ ದಿವ್ಯಶರೀರೇಣ ಪಾರ್ಶ್ವಪ್ರಾಪ್ತೋ ನಿರೀಕ್ಷ್ಯತಾಮ್ ॥೨೫॥
ಫುಲ್ಲಹೇಮಾರವಿನ್ದಾಸು ಚ್ಛಾಯಾಶೀತಜಲಾನಿಲೈಃ ।
ಸ್ವರ್ಗನದ್ಯಾಸ್ತಟೇಷ್ವೇನಂ ದೂರಾಯಾತಂ ವಿನೋದಯ ॥೨೬॥
ವಿವಿಧಾಯುಧಸಙ್ಘಟ್ಟಖಣ್ಡಿತೋಗ್ರಾಸ್ಥಿಕೋಟಯಃ ।
ಖೇ ಕವನ್ತ್ಯಃ ಕಣತ್ಕಾರೈಃ ಪ್ರಸೃತಾಸ್ತಾರಕಾ ಇವ ॥೨೭॥
ವ್ಯೋಮ್ನಿ ಜೀವನದೀವಾಹೇ ವಹತ್ಸಾಯಕವಾರಿಣಿ ।
ಚಕ್ರಾವರ್ತಿನಿ ಗಚ್ಛನ್ತಿ ಗಿರಯೋಽಪ್ಯಣುಪಙ್ಕತಾಮ್ ॥೨೮॥
ಭ್ರಮದ್ಭಿರ್ಗ್ರಹಮಾರ್ಗೇಷು ಶಿರೋಭಿರ್ವೀರಭೂಭೃತಾಮ್ ।
ಆಯುಧಾಂಶುಲತಾಲಾನಲಗ್ನಾಸಿದಳಕಣ್ಟಕೈಃ ॥೨೯॥

ಅಯ್ಯೋ! ಮೂಢರೆ! ಮುಂದಕ್ಕೆ ಹೋಗಿ ಯುದ್ಧಮಾಡಿರಿ; ಅರ್ಧಪ್ರಾಣವಾಗಿರುವ ನಿಮ್ಮವರನ್ನು ತೆಗೆದುಕೊಂಡು ಹೋಗಿರಿ; ಅಯ್ಯೋ ಅಧಮರೆ! ಇವರನ್ನೂ ತುಳಿದುಕೊಂದುಬಿಡಬೇಡಿರಿ ॥೨೪॥

ದೇವತೆಗಳು ಹೇಳುವರು:—ಯುದ್ಧದಲ್ಲಿ ವೀರಸ್ವರ್ಗಹೊಂದಿ ದೇವಶರೀರಯುಕ್ತನಾಗಿರುವ ಭಟನು, ತಮ್ಮ ಜುಟ್ಟುಗಂಟನ್ನು ಕಟ್ಟಿಕೊಳ್ಳುತ ಅತ್ಯುತ್ಕಂಠಾಯುಕ್ತರಾಗಿರುವ ಅಪ್ಸರಸ್ತ್ರೀಸಮೂಹದ ಮಧ್ಯದಲ್ಲಿ ಮೊಗ್ಗುಲಲ್ಲಿ ಬಂದು ನಿಂತಿರುವನು; ಇವನನ್ನು ನೋಡು ॥೨೫॥

ವಿಕಸಿತವಾದ ಸುವರ್ಣಕಮಲಗಳುಳ್ಳ ದೇವಗಂಗಾನದಿಯ ತೀರಪ್ರದೇಶಗಳಲ್ಲಿ, ದೂರದಿಂದ ಆಯಾಸಪಟ್ಟು ಬಂದಿರುವ ಇವನನ್ನು, ನೆಳಲುಬಿದ್ದು ತಂಪಾದ ನೀರಿನಮೇಲೆ ಬೀಸುವ ವಾಯುಗಳಿಂದ ದಣುವಾರಿಸು ॥೨೬॥

ನಾನಾವಿಧವಾದ ಆಯುಧಗಳ ಏಟಿನಿಂದ ಕತ್ತರಿಸಲ್ಪಟ್ಟ ಮೂಳೆಗಳ ತುದಿಗಳು, ಕಣತ್ಕಾರಧ್ವನಿಮಾಡುತ, ನಕ್ಷತ್ರಗಳಂತೆ ಅಂತರಿಕ್ಷದಲ್ಲಿ ಪ್ರಸರಿಸಿರುವುವು ॥೨೭॥

ಬಾಣಗಳೆಂಬ ನೀರು ಹರಿಯುತಕ್ಕುದಾಗಿಯೂ ಚಕ್ರಗಳೆಂಬ ಸುಳಿಗಳುಳ್ಳುದಾಗಿಯೂ ಇರುವ, ಜೀವಗಳೆಂಬ ನದಿಗಳಿಗೆ ಪ್ರವಾಹರೂಪವಾದ ಅಂತರಿಕ್ಷದಲ್ಲಿ, ಪರ್ವತಗಳೂ ಕೂಡ ಸ್ವಲ್ಪ ಕೆಸರಿನಂತಾಗಿರುವುವು ॥೨೮॥

ಈ ಅಂತರಿಕ್ಷದಲ್ಲಿ, ವೀರರಾದ ದೊರೆಗಳ ಶಿರಸ್ಸುಗಳು ತುಂಬಿರುವುದರಿಂದ, ಇದು ಒಂದು ಕಮಲಸರಸ್ಸಾಗಿ ಮಾಡಲ್ಪಟ್ಟಿರುವಂತಿರುವುದು; ಇದರಲ್ಲಿ ಆ ತಲೆಗಳೇ ಕಮಲಗಳಾಗಿರುವುವು: ಇವು ಚಲಿಸುತಿರುವುದರಿಂದ, ಗಾಳಿ ಬೀಸಿದಾಗ ಕಮಲಗಳು ಅಲ್ಲಾಡಿದಂತೆ ಕಾಣುವುವು; ಇವಕ್ಕೆ ಆಯುಧಗಳ ಕಾಂತಿಗಳೇ ಲತೆಗಳಾಗಿರುವುವು; ಇಂತಹ ಲತೆಗಳಲ್ಲಿ, ಕತ್ತಿಯು ಅಲಗೆಂಬ ಮುಳ್ಳುಗಳು ಅಂಟಿಕೊಂಡಿರುವುವು; ಶುಭ್ರವಾದ ಧ್ವಜಪಟ

ಕೇತುಪಟ್ಟಮೃಣಾಲಾಙ್ಗದಳೈರ್ಲಬ್ಧಶಿಲೀಮುಖೈಃ|
ವಹದ್ವಾತಚಲತ್ಪದ್ಮಂ ನಭಃ ಪದ್ಮಸರಃ ಕೃತಮ್ ॥೩೦॥
ಮೃತಮಾತಙ್ಗಸಙ್ಘಾತೇ ಗಿರಾವಿವ ಪಿಪೀಲಿಕಾಃ |
ಭೀರವಃ ಪರಿಲೀಯನ್ತೇ ಸ್ತ್ರಿಯಃ ಪುಂವಕ್ಷಸೀವ ಚ ॥೩೧॥
ಅಪೂರ್ವೋತ್ತಮಸೌನ್ದರ್ಯಕಾನ್ತಸಙ್ಗಮಶಂಸಿನಃ |
ವಾನ್ತಿ ವಿದ್ಯಾಧರಸ್ತ್ರೀಣಾಂ ಅಳಕೋಲ್ಲಾಸಿನೋಽನಿಲಾಃ ॥೩೨॥
ಛತ್ರೇಷೂಡ್ಡೀಯಮಾನೇಷು ಸ್ಥಿತೇಷು ವ್ಯೋಮ್ನಿ ಚನ್ದ್ರತಾ |
ಇನ್ದುನೇವ ಯಶೋಮೂರ್ತ್ಯಾ ಕೃತಾ ಶುಭ್ರಾತಪತ್ರತಾ ॥೩೩॥
ಭಟೋ ಮರಣಮೂರ್ಛಾನ್ತೇ ನಿಮೇಷೇಣಾಮರಂ ವಪುಃ |
ಸ್ವಕರ್ಮಶಿಲ್ಪಿರಚಿತಂ ಪ್ರಾಪ್ತಃ ಸ್ವಪ್ನಪುರಂ ಯಥಾ ॥೩೪॥
ಶೂಲಶಕ್ತ್ಯೃಷ್ಟಿಚಕ್ರಾಣಾಂ ವೃಷ್ಟಯೋ ಮುಕ್ತತುಷ್ಟಯಃ |
ವ್ಯೋಮಾಬ್ಧೌ ಮತ್ಸ್ಯಮಕರಸಙ್ಕುಲಾವಯವಾಃ ಸ್ಥಿತಾಃ ॥೩೫॥
ಕರೋತ್ಕೃತ್ತಸಿತಚ್ಛತ್ರಕಲಹಂಸೈರ್ನಭಸ್ಥಲಮ್ |
ಭಾತಿ ಸಞ್ಚಿತಪೂರ್ಣೇನ್ದುಬಿಮ್ಬಲಕ್ಷೈರಿವಾವೃತಮ್ ॥೩೬॥

ಗಳೇ ಬಿಸತಂತುಗಳಾಗಿರುವುವು ; ಬಾಣಗಳೆಂಬ ದುಂಬಿಗಳು ಇವುಗಳಲ್ಲಿ ಮುತ್ತಿರುವುವು; ಈರೀತಿಯಾಗಿರುವ ರಾಜರ ತಲೆಗಳು, ನವಗ್ರಹಮಾರ್ಗಗಳಲ್ಲಿ ಚಲಿಸುತ, ಅಂತರಿಕ್ಷವನ್ನು ಕಮಲಸರಸ್ಸಿನಂತೆ ಮಾಡಿರುವುವು ॥೨೯—೩೦॥

ಬೆಟ್ಟದಲ್ಲಿ ಇರುವೆಗಳಂತೆಯೂ, ಪುರುಷರ ಹೃದಯದಲ್ಲಿ ಸ್ತ್ರೀಯರಂತೆಯೂ, ಭಯಗ್ರಸ್ತರಾದವರು ಸತ್ತಾನೆಗಳ ರಾಶಿಯೊಳಗೆ ಅಡಗಿಕೊಳ್ಳುತಿರುವರು ॥೩೧॥

ವಿದ್ಯಾಧರಸ್ತ್ರೀಯರ ಮುಂಗುರುಳುಗಳನ್ನು ಅಲುಗಿಸುವ ಮಂದಮಾರುತಗಳು, ಅಪೂರ್ವವಾದ ಉತ್ತಮಸೌಂದರ್ಯವುಳ್ಳ ಕಾಂತನೊಡನೆ ಸಮಾಗಮವಾಗುವುದೆಂದು ಹೇಳುತ ಬೀಸುತಿರುವುವು ॥೩೨॥

ಛತ್ರಗಳು ಹಾರಿಹೋಗಿ ಮೇಲುಗಡೆ ನಿಂತಿರಲು, ಅವು ಆಕಾಶದಲ್ಲಿ ಚಂದ್ರನನ್ನು ಉಂಟುಮಾಡಿರುವಂತೆಯೂ, ಯಶೋರೂಪನಾದ ಚಂದ್ರನು ಭೂಮಿಯಲ್ಲಿ ಶ್ವೇತಚ್ಛತ್ರವನ್ನುಂಟುಮಾಡಿರುವಂತೆಯೂ ತೋರುವುದು ॥೩೩॥

ಈ ಭಟನು, ಮರಣವೆಂಬ ಮೂರ್ಛೆಯು ಕಳೆದ ಬಳಿಕ, ಸ್ವಪ್ನದಲ್ಲಿ ಒಂದು ಪಟ್ಟಣದಿಂದ ಮತ್ತೊಂದು ಪಟ್ಟಣವನ್ನು ಹೊಂದುವಂತೆ, ತನ್ನ ಕರ್ಮವೆಂಬ ಶಿಲ್ಪಿಯಿಂದ ರಚಿಸಲ್ಪಟ್ಟಿರುವ ದೇವಶರೀರವನ್ನು ನಿಮಿಷಮಾತ್ರದಲ್ಲಿ ಹೊಂದಿದನು ॥೩೪॥

ಶೂಲ ಶಕ್ತಿ ಋಷ್ಟಿ ಚಕ್ರ ಇತ್ಯಾದ್ಯಾಯುಧವೃಷ್ಟಿಗಳು, ಸಂತೋಷವಿಲ್ಲದುವುಗಳಂತೆ, ಆಕಾಶವೆಂಬ ಸಮುದ್ರದೊಳಗೆ, ಮತ್ಸ್ಯ ಮಕರ---ಇವುಗಳ ರೂಪವನ್ನು ಧರಿಸಿ ವ್ಯಾಕುಲಪಡುವಂತಿರುವುವು ॥೩೫॥

ಬಾಣಗಳಿಂದ ಕತ್ತರಿಸಲ್ಪಟ್ಟ ಶ್ವೇತಚ್ಛತ್ರಗಳೆಂಬ ಕಲಹಂಸಪಕ್ಷಿಗಳಿಂದ ಪರಿಪೂರ್ಣವಾಗಿರುವ ಅಂತರಿಕ್ಷಪ್ರದೇಶವು, ಬಹುಕಾಲದಿಂದ ಕೂಡಿಸಿಟ್ಟಿರುವ ಅಸಂಖ್ಯಾಕಗಳಾದ ಪೂರ್ಣಚಂದ್ರಮಂಡಲಗಳಿಂದ ಭರಿತವಾಗಿರುವಂತೆ ಕಾಣುವುದು ॥೩೬॥

ಕ್ರಿಯತೇ ಗಗನೋಡ್ಡೀನೈಃ ಚಾಮರೈಶ್ಚಾರುಘುರ್ಘುರೈಃ ।
ವಾತಾವಧೂತಸಂರೋಧತರಙ್ಗನಿಕರದ್ಯುತಿಃ ॥೩೭॥
ದೃಶ್ಯನ್ತೇ ಹೇತಿದಳಿತಾಃ ಛತ್ರಚಾಮರಕೇತವಃ ।
ಆಕಾಶಕ್ಷೇತ್ರವಿಕ್ಷಿಪ್ತಾಃ ಯಶಶ್ಶಾಲಿಲತಾಇವ ॥೩೮॥
ವಹದ್ಭಿರ್ವ್ಯೋಮ್ನಿ ಸಕ್ಷೇಮ ಪಶ್ಯ ನೀತಾ ಕ್ಷಯಂ ಶರೈಃ ।
ಶಕ್ತಿವೃಷ್ಟಿರುಪಾಯಾನ್ತೀ ಸಸ್ಯಶ್ರೀಃ ಶಲಭೈರಿವ ॥೩೯॥
ಏಷಾ ಪ್ರಸೃತದೋರ್ದಣ್ಡಭಟಖಡ್ಗಘಟಾತ್ಕೃತಿಃ ।
ಕಠಿನಾತ್ ಕಙ್ಕಟಾಜ್ಜಾತಾ ಮೃತ್ಯೋರೇವೋಗ್ರಹುಙ್ಕೃತಿಃ ॥೪೦॥
ಹೇತಿಕಲ್ಪಾನಿಲಕ್ಷುಣ್ಣಾಃ ದನ್ತನಿರ್ಝರವಾರಯಃ ।
ಜನತಾಕ್ಷಯಕಾಲೇಸ್ಮಿನ್ ಭಗ್ನಾನಾಗಾನಗಾಇವ ॥೪೧॥
ಸಚಕ್ರನಾಥಸೂತಾಶ್ವಂ ವ್ಯೂಢಂ ರಕ್ತಮಹಾಹ್ರದೇ ।
ಹಾಹಾಭಿಭೂತಗತಿಕಂ ಚೇಷ್ಟತೇ ರಥಪತ್ತನಮ್ ॥೪೨॥
ಕರಕಙ್ಕಟಕುಟ್ಯಙ್ಕಖಡ್ಗಸಙ್ಘಟ್ಟಟಾಙ್ಕೃತೈಃ ।
ಕಾಳರಾತ್ರ್ಯಾ ಪ್ರನೃತ್ಯನ್ತ್ಯಾ ರಣವೀಣೇವ ವಾದ್ಯತೇ ॥೪೩॥

ಅಂತರಿಕ್ಷದಲ್ಲಿ ಹಾರಿಹೋಗಿ ಸೊಗಸಾಗಿ ಘರ್ಘರಧ್ವನಿಮಾಡುತಿರುವ ಚಾಮರಗಳು, ಗಾಳಿಯಿಂದ ತಡೆಬಿಡಿಸಲ್ಪಟ್ಟ ತರಂಗನಿಕರಗಳ ಕಾಂತಿಯನ್ನು ವಹಿಸಿರುವುವು ॥೩೭

ಆಯುಧಗಳಿಂದ ಕತ್ತರಿಸಲ್ಪಟ್ಟ ಛತ್ರ ಚಾಮರ ಧ್ವಜಗಳು, ಆಕಾಶವೆಂಬ ಭೂಮಿಯಲ್ಲಿ ಬಿತ್ತಲ್ಪಟ್ಟಿರುವ ಕೀರ್ತಿಯೆಂಬ ಬತ್ತದ ಪೊಳಕೆಗಳಂತೆ ಕಾಣಿಸುತಿರುವುವು ॥೩೮॥

ಎಲೈ ನಿರ್ಭಯನಾಗಿರುವ ಮಿತ್ರನೆ! ಇಲ್ಲಿ ನೋಡು; ಬೆಳೆಯುತಿರುವ ಪೈರನ್ನು ಮಿಡತೆಗಳು ಕ್ಷಯಪಡಿಸುವಂತೆ, ಅಂತರಿಕ್ಷದಲ್ಲಿ ಬರುತಿರುವ ಶಕ್ತ್ಯಾಯುಧಪರಂಪರೆಯನ್ನು ಅಲ್ಲಿ ಹಾರುತಿರುವ ಬಾಣಗಳು ನಾಶಹೊಂದಿಸಿದುವು ॥೩೯॥

ಕಠಿನವಾದ ಕವಚಗಳಮೇಲೆ ಭಟರ ಬಾಹುದಂಡದಲ್ಲಿರುವ ಖಡ್ಗಗಳು ತಗುಲಿ ಉಂಟಾಗುತಿರುವ ಈ ಛಟಾತ್ಕಾರಧ್ವನಿಯು, ಆ ಮೃತ್ಯುವಿನ ಕ್ರೂರವಾದ ಹುಂಕಾರವೇಯೆ! ॥೪೦॥

ಈ ಸೇನೆಯಲ್ಲಿರುವ ಆನೆಗಳು, ಪ್ರಳಯಕಾಲದಲ್ಲಿ ಪರ್ವತಗಳಂತೆ, ಆಯುಧಗಳೆಂಬ ಪ್ರಳಯಾಗ್ನಿಯಿಂದ ಚೂರ್ಣೀಕೃತಗಳಾಗಿ, ಕೊಂಬುಗಳೆಂಬ ಗಿರಿನದೀಜಲಗಳಿಂದೊಡಗೂಡಿ, ಜನಕ್ಷಯಕರವಾದ ಈ ಯುದ್ಧವೆಂಬ ಪ್ರಳಯಸಮಯದಲ್ಲಿ ಮುರಿದು ಬೀಳುತಿರುವುವು ॥೪೧॥

ಇತ್ತಲಾಗಿ, ಪಟ್ಟಣದಂತೆ ವಿಶಾಲವಾಗಿರುವ ಈ ರಥವು, ಚಕ್ರ ಸ್ವಾಮಿ ಸಾರಥಿ ಕುದುರೆ–ಇವುಗಳೆಲ್ಲ ಇದ್ದರೂ ಕೂಡ, ರಕ್ತವೆಂಬ ದೊಡ್ಡ ಮಡುವಿನಲ್ಲಿ ಕೊಚ್ಚಿಕೊಂಡು ಹೋಗಿ, ಮಧ್ಯದಲ್ಲಿ ಸ್ವಲ್ಪ ಚಕ್ರ ಹೂತುಕೊಂಡು, ಮುಂದೆ ಹೋಗಲಾರದೆ, ಅಲ್ಲಿಯೇ ಒದ್ದಾಡುತಿರುವುದು. ಅಯ್ಯೋ! ಖೇದವು! ॥೪೨॥

ಮತ್ತೊಂದುಕಡೆ, ಸತ್ತುಹೋದವರ ಕೈಗಳೂ ಕವಚಗಳೂ ಬಿದ್ದಿರುವುವು; ಆಗ ಆಕಸ್ಮಿಕವಾಗಿ ಕೈಲಿದ್ದ ಖಡ್ಗಗಳಿಗೂ ಕವಚಗಳಿಗೂ ಸಂಘಟನೆಯಾಗುವುದು; ಇದರಿಂದ ವೀಣೆಯ ತಂತಿಯನ್ನು ನುಡಿಸಿದಂತೆ ಧ್ವನಿ ಹುಟ್ಟುತಿರುವುದು. ಇದನ್ನು ನೋಡಿದರೆ, ಇಲ್ಲಿ ನರ್ತನಮಾಡುತಿರುವ ಕಾಳರಾತ್ರಿಯು ಯುದ್ಧವೀಣೆಯನ್ನು ಬಾರಿಸುತಿರುವಳೋ ಎಂಬಂತಿರುವುದು ॥೪೩॥

ನರೇಭಖರವಾಜಿಭ್ಯೋ ಯೇ ಚ್ಯುತಾರಕ್ತನಿರ್ಝರಾಃ |
ಪಶ್ಯ ತದ್ಬಿನ್ದುಸಿಕ್ತೇನ ವಾಯುನಾರುಣಿತಾದಿಶಃ ||೪೪||
ಶಸ್ತ್ರಾಂಶುಜಲದೇ ವ್ಯೋಮ್ನಿ ಕಾಳೀಚಿಕುರಮೇಚಕೇ |
ಶರಕೋರಕಭಾರಸ್ರಕ್ ಮೇಘೇ ವಿದ್ಯುದಿವೋದಿತಾ ||೪೫||
ಅನನ್ತರಕ್ತಸಂಸಿಕ್ತಸನ್ನಾವನಿತಲಾಯುಧೈಃ |
ಭುವನಂ ಭಾತ್ಯಭಿಜ್ವಾಲಂ ಅಗ್ನಿಲೋಕಇವಾಕುಲಮ್ ||೪೬||
ಭ್ರುಶುಣ್ಡೀಶಕ್ತಿಶೂಲಾಸಿಮುಸಲಪ್ರಾಸವೃಷ್ಟಯಃ |
ಅನ್ಯೋನ್ಯಚ್ಛೇದಭೇದಾಭ್ಯಾಂ ಕರಪ್ರಕರತೋಪತನ್ ||೪೭||
ಅಕ್ಷೋಭ್ಯೈಕಪ್ರಹರಣಾತ್ ಯಾತುಧಾನ್ಯೋನ್ಯಚೇಷ್ಟಿತಮ್ |
ಸಂರಮ್ಭಾವೇಕ್ಷಣಪ್ರಜ್ಞಂ ರಣಂ ಸ್ವಪ್ನಮಿವ ಸ್ಥಿತಮ್ ||೪೮||
ಅನನ್ಯಶಬ್ದಾವಿರತಹತಾಹತಿರಣಜ್ಝಣೈಃ |
ಗಾಯತೀವ ಕ್ಷತಕ್ಷೋಭಮುದಿತೋ ರಣಭೈರವಃ ||೪೯||

ಅಯ್ಯಾ! ಮಿತ್ರ! ಮನುಷ್ಯರು ಆನೆಗಳು ಹೇಸರಕತ್ತೆಗಳು ಕುದುರೆಗಳು—ಇವುಗಳಿಂದ ಯಾವ ರಕ್ತಪ್ರವಾಹಗಳು ಹೊರಟಿವೆಯೋ, ಅವುಗಳ ಹನಿಗಳಿಂದ ವ್ಯಾಪ್ತವಾದ ವಾಯುವು, ದಿಕ್ಕುಗಳನ್ನೆಲ್ಲ ಕೆಂಪಗೆ ಮಾಡುತಿರುವುದು. ನೋಡು ||೪೪||

ಶಸ್ತ್ರಕಾಂತಿಗಳೆಂಬ ಮೋಡಗಳೊಡನೆ ಕೂಡಿಕೊಂಡಿರುವುದರಿಂದ ಕಾಳಿಕಾದೇವಿಯ ಕೂದಲಿನಂತೆ ಕಪ್ಪಾಗಿರುವ ಆಕಾಶಪ್ರದೇಶದಲ್ಲಿ, ಮೇಘದಲ್ಲಿ ಮಿಂಚು ಹೊಳೆಯುವಂತೆ, ಬಾಣಗಳೆಂಬ ಮೊಗ್ಗುಗಳಿಂದ ರಚಿತವಾಗಿರುವ ಮಾಲಿಕೆಯು ಪ್ರಕಾಶಿಸುತ್ತಿರುವುದು ||೪೫||

ಅಪರಿಮಿತವಾಗಿ ರಕ್ತಸಿಕ್ತವಾಗಿ ಮುರಿದು ಬಿದ್ದಿರುವ ಭೂಮಿಭಾಗಗಳಿಂದಲೂ, ಆಯುಧ ವಿಶೇಷಗಳಿಂದಲೂ, ಈ ಲೋಕವು, ಸುತ್ತಲೂ ಜ್ವಾಲಾಪರಿವೃತವಾಗಿ ಕಾಣುತ, ಅಗ್ನಿಲೋಕದಂತೆ, ಅತಿ ವ್ಯಾಕುಲವಾಗಿ ತೋರುತಿರುವುದು ||೪೬||

ಭ್ರುಶುಂಡಿ ಶಕ್ತಿ ಶೂಲ ಅಸಿ (ಕತ್ತಿ) ಮುಸಲ ಪ್ರಾಸ—ಮುಂತಾದ ಆಯುಧಗಳ ವೃಷ್ಟಿಗಳು, ಪರಸ್ಪರವಾಗಿ ಕತ್ತರಿಸುವಿಕೆಯಿಂದಲೂ, ಸೀಳಿಬಿಡೋಣದರಿಂದಲೂ, ಯೋಧರ ಹಸ್ತಸಮೂಹದಿಂದ ಕಳಚಿ ಬಿದ್ದುಹೋಗುತಿರುವುವು ||೪೭||

ಅಯ್ಯಾ! ಮಿತ್ರನೆ! ನಾನು ಈ ರಣವನ್ನು ಸ್ವಪ್ನದಂತಿರುವುದನ್ನಾಗಿ ಎಣಿಸುವೆನು. ಸ್ವಪ್ನದಲ್ಲಿ ನಾನಾವಿಧವಾಗಿ ಕಂಡರೂ ವಾಸ್ತವ್ಯವಾಗಿ ನಿಶ್ಚಲವಾದ ಪದಾರ್ಥಗಳನ್ನು—ಜಾಗ್ರದವಸ್ಥೆಯೊಂದುಂಟಾದ ಮಾತ್ರದಿಂದಲೇ ರಾಕ್ಷಸಮಾಯೆಯೊಡನೆ ಹೋಲಿಸಬಹುದಾಗಿರುವಂತೆ, ಅಳ್ಳಾಡಲಾರದೆ ಬಿದ್ದಿರುವವರನ್ನೂ ಕೂಡ ಒಬ್ಬ ಯೋಧನು ಹೊಡೆಯುತಲಿರುವುದರಿಂದ ಇದನ್ನೂ ರಾಕ್ಷಸರ ಮಾಯೆಗೆ ಹೋಲಿಸಬಹುದಾಗಿರುವುದು; ಸ್ವಪ್ನದಲ್ಲಿ ಆತ್ಮಪ್ರಜ್ಞೆಯು ಸಂಭ್ರಮದಿಂದ ನೋಡುತಿರುವಂತೆ, ಇಲ್ಲಿ ಯೋಧರ ಪ್ರಜ್ಞೆಯು ಕೇವಲ ಕೋಪಾವೇಶದಿಂದ ನೋಡುತಿರುವುದು ||೪೮||

ಅನ್ಯೋನ್ಯರಣಹೇತ್ಯುಗ್ರಚೂರ್ಣಪೂರ್ಣೋ ರಣಾರ್ಣವಃ ।
ವಾಲುಕಾಮಯಏವಾಭೂತ್ ಛಿನ್ನಛತ್ರತರಙ್ಗಕಃ ॥೫೦॥
ಸರಭಸರಸವದ್ವಿಸಾರಿತೂರ್ಯಪ್ರತಿರವಪೂರಿತಲೋಕಪಾಲಲೋಕಂ ।
ರಣಗಿರಿರಯಮುಗ್ರಸಕ್ಷದಕ್ಷಪ್ರತಿಸೃತಿವೃತ್ತ ಇವಾಮ್ಬರೇ ಯುಗಾನ್ತೇ ॥೫೧॥
ಹಾಹಾಧಿಕ್ಪ್ರವಿಕಟಕಙ್ಕಟಾನನೋದ್ಯತ್ಪ್ರೋಡ್ಡೀನಪ್ರಕಟತಟಿಚ್ಛಟಾಪ್ರತಪ್ತಾಃ ।
ಕ್ರೇಙ್ಕಾರಸ್ಫುರಿತಗುಣೇರಿತಾರಣನ್ತೋ ನಾರಾಚಾಃ ಶಿಖರಿಶಿಲಾಗಣಂ ವಹನ್ತಿ ॥
ಛಿನ್ನೇಚ್ಛಾ ಛಮಿತಿ ನ ಯಾವದಙ್ಗಭಙ್ಗಂ
ಕುರ್ವನ್ತೋ ಜ್ವಲದನಲೋಜ್ವಲಾಃ ಪೃಷತ್ಕಾಃ ।
ತಾವದ್ದ್ರಾಗುದ್ದ್ರುತಮಿತಏಹಿ ಮಿತ್ರ ಯಾಮೋ
ಯಾಮೋಯಂ ಪ್ರವಹತಿ ವಾಸರಶ್ಚತುರ್ಥಃ ॥೫೩॥
ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ರಣಪ್ರೇಕ್ಷಕಜನೋಕ್ತಿವರ್ಣನಂ
ನಾಮ ಚತುಸ್ತ್ರಿಂಶಃ ಸರ್ಗಃ.

ಮತ್ತಾವ ಶಬ್ದವೂ ಕೇಳಿಸದಂತೆ—ನಿರಂತರವಾಗಿರುವ ಪರಸ್ಪರ ಪ್ರಹಾರದಿಂದುಂಟಾಗಿರುವ ಝಣಝಣ ಶಬ್ದವನ್ನು ಕೇಳಿದರೆ, ಗಾಯವಡೆದು ಬಿದ್ದಿರುವವರ ಸಂಕಟವನ್ನು ನೋಡಿ ಸಂತೋಷಪಡುತಿರುವ ರಣಭೈರವಮೂರ್ತಿಯು ವಿಲಾಸದಿಂದ ಗಾನಮಾಡುತಿರುವಂತೆ ತೋರುವುದು ॥೪೯॥

ಈ ಯುದ್ಧರಂಗವೆಂಬ ಸಮುದ್ರವು, ಪರಸ್ಪರವಾಗಿ ಉಪಯೋಗಿಸುತಿರುವ ಆಯುಧಗಳ ಚೂರ್ಣಗಳಿಂದ ಪರಿಪೂರ್ಣವಾಗಿ, ಕೇವಲ ವಾಲುಕಾ (ಮಳಲು) ಮಯವಾಗಿಯೇ ಇರುವಂತೆ ಕಾಣುವುದು ; ಮುರಿದುಹೋದ ಛತ್ರಗಳು ಈ ಸಮುದ್ರದಲ್ಲಿ ಅಲೆಗಳಾಗಿರುವುವು ॥೫೦॥

ಕೇವಲ ರಭಸದೊಡನೆ ಮಧುರವಾಗಿ ಪ್ರಸರಿಸುತಿರುವ ತೂರ್ಯವಾದ್ಯಗಳ ಪ್ರತಿಧ್ವನಿಯಿಂದ ದಿಕ್ಪಾಲಕರ ಲೋಕವನ್ನೆಲ್ಲ ತುಂಬಿರುವ ಈ ಯುದ್ಧಪರ್ವತವು, ಪ್ರಳಯಕಾಲದಲ್ಲಿ ಅತ್ಯುಗ್ರವಾದ ರಕ್ಕೆಗಳಿಂದ ಅಂತರಿಕ್ಷದಲ್ಲಿ ಹಾರುವುದಕ್ಕೆ ಪ್ರವರ್ತಿಸಿದಂತೆ ಕಾಣುವುದು ॥

ಇತ್ತಲಾಗಿ ಕ್ರೇಂಕಾರಧ್ವನಿಮನೋಹರವಾದ ಮೌರ್ವಿ (ಧನುಸ್ಸಿನಹೆದೆ) ಯಿಂದ ಹೊರಡುತಿರುವ ಬಾಣಗಳು, ಸರಸರನೆ ಧ್ವನಿಮಾಡುತ, ವಿಶಾಲವಾದ ಕವಚಗಳನ್ನು ಭೇದಿಸಲಾರದೆ, ಆ ಕವಚಗಳಿಂದ ಹುಟ್ಟಿದ ವಿದ್ಯುತ್ಸದೃಶವಾದ ಅಗ್ನಿಜ್ವಾಲೆಗಳಿಂದ ಸಂತಪ್ತಗಳಾಗಿ, ಅಲ್ಲಿಂದ ಹೊರಟು ಪರ್ವತಗಳಮೇಲೆ ಹೊಡೆದು, ಅವುಗಳ ಕಲ್ಲುಗಳನ್ನು ಹೊತ್ತುಕೊಂಡು ಹೋಗುತಿರುವುವು. ಹಾಹಾ! ಧಿಕ್ !! ॥೫೨॥

ಯುದ್ಧದಲ್ಲಿ ಆಶೆಯಿಲ್ಲದ ಎಲೈ ಮಿತ್ರನೆ! ನಾನು ಹೇಳುವ ಈ ಹಿತವಚನವನ್ನು ಕೇಳು. ಜಾಜ್ವಲ್ಯಮಾನವಾದ ಅಗ್ನಿಯಂತೆ ಪ್ರಕಾಶಿಸುತಿರುವ ಈ ಬಾಣಗಳು ನಮಗೆ ಶರೀರಭಂಗವುಂಟುಮಾಡುವುದರೊಳಗಾಗಿ, ಬೇಗನೆ ಇತ್ತ ಬರುವವನಾಗು. ನಾವು ಹೊರಟುಹೋಗೋಣ. ಈಗ ಹಗಲಿನ ನಾಲ್ಕನೆಯ ಯಾಮವೂ ಕಳೆಯುತ ಬಂದಿರುವುದು. ಎಂದು ಈರೀತಿಯಾಗಿ ಆ ರಣಪ್ರೇಕ್ಷಕರು ಮಾತನಾಡುತಿದ್ದರು ॥೫೩॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ರಣಪ್ರೇಕ್ಷಕವಚನ
ವರ್ಣನೆಯೆಂಬ ಮೂವತ್ತುನಾಲ್ಕನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚತ್ರಿಂಶಃ ಸರ್ಗಃ.

ಶ್ರೀವಸಿಷ್ಠಉವಾಚ.

ಅಥ ಪ್ರೋಡ್ಡಯನೋದ್ಯುಕ್ತತುರಙ್ಗಮತರಙ್ಗಕಃ ।
ಉತ್ತಾಣ್ಡವಇವೋನ್ಮತ್ತೋ ಬಭೂವ ಸ ರಣಾರ್ಣವಃ ॥೧॥
ಛತ್ರಡಿಣ್ಡೀರವಿಶ್ರಾನ್ತಸಿತೇಷುಶಫರೋತ್ಕರಃ ।
ಅಶ್ವಸೈನ್ಯೋಲ್ಲಸಲ್ಲೋಲಕಲ್ಲೋಲಾಕುಲಕೋಟರಃ ॥೨॥
ನಾನಾಯುಧನದೀನೀತಸೈನ್ಯಾವರ್ತವಿವೃತ್ತಿಮಾನ್ ।
ಮತ್ತಹಸ್ತಿಘಟಾಪೀಠಚಲಾಚಲಕುಲಾಚಲಃ ॥೩॥
ಕಚಚ್ಚಕ್ರಶತಾವರ್ತನೃತ್ತಿಭ್ರಾನ್ತಶಿರಸ್ತೃಣಃ ।
ಧೂಳೀಜಲಧರಾಪೀತಭ್ರಮತ್ಖಡ್ಗಪ್ರಭಾಜಲಃ ॥೪॥

ಉತ್ಪತ್ತಿಪ್ರಕರಣದಲ್ಲಿ ಮೂವತ್ತೈದನೆಯ ಸರ್ಗವು.

ಸಮುದ್ರವನಕಲ್ಪಾನ್ತನಾನಾರೂಪಕವಿಸ್ತರೈಃ ।
ಸಙ್ಗ್ರಾಮಶ್ಚ ತುರಙ್ಗಾಣಾಂ ವಿಸ್ತರೇಣಾತ್ರ ವರ್ಣ್ಯತೇ ॥

ಸಮುದ್ರ ವನ ಪ್ರಳಯಕಾಲ ಇವುಗಳಂತೆ ನಾನಾವಿಧವಾಗಿ ರೂಪಕಮಾಡಿ ಯುದ್ಧವೂ, ವಿಶೇಷವಾಗಿ ಅಶ್ವಯುದ್ಧವೂ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಿದರು :—

ಅಯ್ಯಾ ! ರಾಮ ! ಬಳಿಕ, ಆ ಯುದ್ಧರಂಗವೆಂಬ ಸಮುದ್ರವು, ನೆಗೆದಾಡುತಿರುವ ಕುದುರೆಗಳೆಂಬ ಅಲೆಗಳುಳ್ಳುದಾಗಿ, ಉನ್ಮತ್ತವಾಗಿ ನರ್ತನಮಾಡುತಿರುವಂತೆ ಆಯ್ತು ॥೧॥

ಆ ಯುದ್ಧರಂಗವೆಂಬ ಸಮುದ್ರದಲ್ಲಿ, ಶ್ವೇತಚ್ಛತ್ರಗಳೇ ನೊರೆಯಾಗಿದ್ದುವು; ಇವುಗಳೊಳಗೆ, ಶುಭ್ರವಾದ ಬಾಣಗಳೆಂಬ ಮತ್ಸ್ಯಸಮೂಹಗಳು ವಿಶ್ರಮಿಸಿಕೊಳ್ಳುತಿದ್ದುವು. ಅಶ್ವಸೈನ್ಯಗಳೆಂಬ ಚಂಚಲವಾದ ತರಂಗಪರಂಪರೆಗಳು, ತೀರದಲ್ಲಿರುವ ಪ್ರದೇಶವನ್ನೆಲ್ಲ ವ್ಯಾಪಿಸಿದ್ದುವು ॥೨॥

ಅಲ್ಲಿ, ನಾನಾವಿಧವಾದ ಆಯುಧಗಳೆಂಬ ನದಿಗಳು, ಸೈನ್ಯಗಳೆಂಬ ಸುಳಿಗಳನ್ನು ಸುತ್ತಿಸುತ್ತಿದ್ದುವು. ದೊಡ್ಡದೊಡ್ಡ ಗಜಸಮೂಹಗಳೆಂಬ ಕುಲಪರ್ವತಗಳು, ಬುಡದವರೆಗೂ ಚಂಚಲವಾಗಿದ್ದುವು ॥೩॥

ಆ ಯುದ್ಧಾಂಕಣವೆಂಬ ಸಮುದ್ರದಲ್ಲಿ, ಪ್ರಕಾಶಮಾನವಾದ ನೂರಾರು ಚಕ್ರಗಳೆಂಬ ಸುಳಿಗಳು ಸುತ್ತುತಿರುವುದರಿಂದ, ಅವುಗಳ ಮಧ್ಯದಲ್ಲಿ ತಲೆಗಳೆಂಬ ಹುಲ್ಲುಕಡ್ಡಿಗಳು ಸಿಕ್ಕಿಕೊಂಡು ಸುತ್ತುತಿದ್ದುವು. ಧೂಳಿಯೆಂಬ ಮೇಘಗಳು, ಚಂಚಲವಾದ ಖಡ್ಗಗಳ ಕಾಂತಿಯೆಂಬ ಜಲವನ್ನು ಪಾನಮಾಡುತಿದ್ದುವು ॥೪॥

ಮಕರವ್ಯೂಹವಿಸ್ತಾರಭಗ್ನಾಭಗ್ನಭಟೌಘನೌಃ ।
ಮಹಾಗುಡುಗುಡಾವರ್ತಪ್ರತಿಶ್ರುದ್ಘನಕನ್ಧರಃ ॥೫॥
ಮೀನವ್ಯೂಹವಿನಿಷ್ಕ್ರಾನ್ತಶರಬೀಜೌಘಸರ್ಷಪಃ ।
ಹೇತಿವೀಚಿವರಾಲೂನಪತಾಕಾವೀಚಿಮಣ್ಡಲಃ ॥೬॥
ಶಸ್ತ್ರವಾರಿಕೃತಾಮ್ಭೋದಸದೃಶಾವರ್ತಕುಣ್ಡಲಃ ।
ಸಂರಮ್ಭಘನಸಕ್ಷೋಭರಸೇನಾತಿಮಿತಿಮಿಙ್ಗಿಲಃ ॥೭॥
ಕೃಷ್ಣಾಯಸಪರೀಧಾನವಲತ್ಸೇನಾಮ್ಬುಭೀಷಣಃ ।
ಕಬನ್ಧಾವರ್ತಲೇಖಾನ್ತರ್ಬದ್ಧಸೈನ್ಯಾದಿಭೂಷಣಃ ॥೮॥
ಶರಶೀಕರನೀಹಾರಸಾನ್ಧಕಾರಕಕುಬ್ಗಣಃ ।
ನಿರ್ಘೋಷಾಶೇಷಿತಾಶೇಷಶಬ್ದೈಕಘನಘುಙ್ಘುಮಃ ॥೯॥
ಪತನೋತ್ಪತನವ್ಯಗ್ರಶಿರಶ್ಶಕಲಶೀಕರಃ ।
ಆವರ್ತಚಕ್ರವ್ಯೂಹೇಷು ಪ್ರಭ್ರಮದ್ಭಟಕಾಷ್ಠಕಃ ॥೧೦॥

ಮಕರವ್ಯೂಹವನ್ನು ರಚಿಸಿಕೊಂಡು ವಿಸ್ತಾರವಾಗಿರುವ ಭಟಸಮೂಹಗಳೆಂಬ ಹಡಗುಗಳು, ಕೆಲವು ಮುರಿದುವುಗಳಾಗಿಯೂ ಮತ್ತೆ ಕೆಲವು ಮುರಿಯದುವುಗಳಾಗಿಯೂ ಇದ್ದುವು. ಅನೇಕರಾದ ವೀರರ ಕುತ್ತಿಗೆಗಳೆಂಬ ಸುಳಿಗಳಲ್ಲಿ ಗುಡುಗುಡು ಶಬ್ದದ ಪ್ರತಿಧ್ವನಿಯು ತುಂಬಿದ್ದಿತು ॥೫॥

ಮೃತರಾದ ಜನಗಳ ಸಮೂಹಗಳ ದೆಸೆಯಿಂದ ಹೊರಟುಬರುತಿರುವ ಬಾಣಸಮುದಾಯಗಳೆಂಬ ಬೀಜಗಳು, ಸಾಸುವೆ ಕಾಳಿನಂತೆ, ಆ ಯುದ್ಧರಂಗಸಮುದ್ರದ ತೀರದಲ್ಲಿರುವ ಭೂಮಿಯಮೇಲೆ ಬೀಳುತಿದ್ದುವು. ಆಯುಧಗಳೆಂಬ ದೊಡ್ಡ ಅಲೆಗಳು, ಪತಾಕೆಗಳೆಂಬ ಸಣ್ಣ ಅಲೆಗಳನ್ನು ಕತ್ತರಿಸುತಿದ್ದುವು ॥೬॥

ಶಸ್ತ್ರಗಳೆಂಬ ನೀರು, ಆ ಸಮುದ್ರದೊಳಗೆ, ಕುಂಡಲಗಳೆಂಬ ಮೇಘಸದೃಶವಾದ ಸುಳಿಯನ್ನುಂಟುಮಾಡುತಿದ್ದಿತು. ಸೇನೆಗಳೆಂಬ ತಿಮಿತಿಮಿಂಗಿಲಗಳು, ಕೋಪವೇಗದಿಂದ ಅತಿಶಯವಾಗಿ ಸಂಚರಿಸುತಿದ್ದುವು ॥೭॥

ಉಕ್ಕಿನಕವಚವನ್ನು ತೊಟ್ಟುಕೊಂಡು ಸಂಚರಿಸುತಿರುವ ಸೈನ್ಯವೆಂಬ ಜಲದಿಂದ, ಆ ಸಮುದ್ರವು ಭಯಂಕರವಾಗಿದ್ದಿತು. ಕಬಂಧ (ತಲೆಯಿಲ್ಲದ ಮುಂಡ) ಗಳೆಂಬ ಸುಳಿಗಳೊಳಗೆ, ಸೈನ್ಯಮೊದಲಾದುವುಗಳ ಆಭರಣಗಳು ಮುಣುಗಿಹೋಗುತಿದ್ದುವು ॥೮॥

ಬಾಣಗಳೆಂಬ ತುಂತುರುಗಳಿಂದ ದಿಕ್ಸಮೂಹಗಳನ್ನೆಲ್ಲ ಕತ್ತಲೆಗವಿಯುವಂತೆ ಮಾಡುತಿದ್ದಿತು. ತನ್ನ ಧ್ವನಿಯಿಂದ ಇತರವಾದ ಸಮಸ್ತ ಧ್ವನಿಗಳನ್ನೂ ನಿಶ್ಶೇಷಮಾಡಿಬಿಟ್ಟು ಘುಮಘುಮ ಧ್ವನಿಯೊಂದು ಮಾತ್ರವೇ ಉಳ್ಳದಾಗಿದ್ದಿತು ॥೯॥

ತಲೆಬುರುಡೆಗಳ ಚೂರುಗಳೆಂಬ ಜಲಕಣಗಳು, ಬೀಳುತಲೂ ಏಳುತಲೂ ಇದ್ದುವು. ಚಕ್ರವ್ಯೂಹಗಳೆಂಬ ಸುಳಿಗಳ ಮಧ್ಯದಲ್ಲಿ, ಭಟರೆಂಬ ಕಟ್ಟಿಗೆಗಳು ಸಿಕ್ಕಿಕೊಂಡು ಸುತ್ತಾಡುತಿದ್ದುವು ॥೧೦॥

ಕಷ್ಟಟಾಙ್ಕಾರಕೋದಣ್ಡಕುಣ್ಡಲೋನ್ಮಥನೋದ್ಭಟಃ ।
ಅಶಙ್ಕಮೇವ ಪಾತಾಳಾದಿವೋದ್ಯತ್ಸೈನಿಕೋರ್ಮಿಮಾನ್ ॥೧೧॥
ಗಮಾಗಮಪರಾನನ್ತಪತಾಕಾಚ್ಛತ್ರಫೇನಿಲಃ ।
ವಹದ್ರಕ್ತನದೀರಂಹಃಪ್ರೋಹ್ಯಮಾನರಥದ್ರುಮಃ ॥೧೨॥
ಗಜಪ್ರತಿಮಸಮ್ಪನ್ನಮಹಾರುಧಿರಬುದ್ಬುಧಃ ।
ಸೈನ್ಯಪ್ರವಾಹವಿಚಲದ್ಧಯಹಸ್ತಿಜಲೇಚರಃ ॥೧೩॥
ಸ ಸಙ್ಗ್ರಾಮೋಮ್ಬರಗ್ರಾಮಃ ಇವಾಶ್ಚರ್ಯಕರೋ ನೃಣಾಮ್ ।
ಅಭೂತ್ ಪ್ರಳಯಭೂಕಮ್ಪಕಮ್ಪಿತಾಚಲಚಞ್ಚಲಃ ॥೧೪॥
ತರತ್ತುರಙ್ಗವಿಹಗಃ ಪತತ್ಕರಿಘಟಾತಟಃ ।
ತ್ರಸ್ತಭೀರುಮೃಗಾನೀಕಸ್ಫೂರ್ಜದ್ಘುರಘುರಾರವಃ ॥೧೫॥
ಸರಚ್ಛರಾಳೀಶಲಭಶತಭಙ್ಗುರಸೈನಿಕಃ ।
ತರತ್ತುರಙ್ಗಶರಭಃ ಶರಭಾರವನಾವನಿಃ ॥೧೬॥
ಚಲದ್ದ್ವಿರೇಫನಿರ್ಹ್ರಾದೋ ರಸತ್ತೂರ್ಯಗುಹಾಗುರುಃ ।
ಚಿರಾತ್ ಸಸೈನ್ಯಜಲದೋ ಲುಠದ್ಭಟಮೃಗಾಧಿಪಃ ॥೧೭॥

ಅತಿಕಷ್ಟವಾಗಿ ಟಂಕಾರಧ್ವನಿಮಾಡುತಿರುವ ಧನುಸ್ಸೆಂಬ ಸರ್ಪಶರೀರಗಳನ್ನು ಕತ್ತರಿಸುವುದರಲ್ಲಿ, ಅದು ಅತಿ ಸಮರ್ಥವಾಗಿದ್ದಿತು. ಅಲ್ಲಿ ಸೈನಿಕರೆಂಬ ಅಲೆಗಳು, ಶಂಕೆಯಿಲ್ಲದೆ ಪಾತಾಳದದೆಸೆಯಿಂದ ಉದಯಿಸುವಂತೆ ಕಾಣುತಿದ್ದುವು ॥೧೧॥

ಹೋಗುತಲೂ ಬರುತಲೂ ಇರುವ ಅನೇಕವಾದ ಧ್ವಜಗಳೂ, ಛತ್ರಿಗಳೂ, ಅದರಲ್ಲಿ ನೊರೆಯಾಗಿದ್ದುವು. ಅಲ್ಲಿ ಪ್ರವಹಿಸುತಿರುವ ರಕ್ತನದಿಗಳಲ್ಲಿ ರಥಗಳೆಂಬ ವೃಕ್ಷಗಳು ಕೊಚ್ಚಿಕೊಂಡು ಹೋಗುತಿದ್ದುವು ॥೧೨॥

ಮತ್ತು, ಆ ಯುದ್ಧರಂಗವೆಂಬ ಸಮುದ್ರದಲ್ಲಿ, ದೊಡ್ಡದಾದ ರಕ್ತಪ್ರವಾಹದ ಗುಳ್ಳೆಗಳು ಗಜಸದೃಶವಾಗಿ ಸ್ಥೂಲವಾಗಿ ಹುಟ್ಟುತ್ತಿದ್ದುವು. ಸೈನ್ಯವೆಂಬ ಪ್ರವಾಹದೊಳಗೆ, ಆನೆ ಕುದುರೆಗಳೆಂಬ ಜಲಜಂತುಗಳು ಸಂಚಲಿಸುತಿದ್ದುವು ॥೧೩॥

ಅಯ್ಯಾ ! ರಾಮ ! ಇನ್ನೂ ಆ ಯುದ್ಧರಂಗವು, ಆಕಾಶಮಂಡಲದಂತೆ (ಗಂಧರ್ವನಗರದಂತೆ) ಜನರಿಗೆ ಆಶ್ಚರ್ಯವುಂಟುಮಾಡತಕ್ಕದಾಗಿಯೂ, ಪ್ರಳಯಕಾಲದಲ್ಲಿ ಭೂಮಿ ನಡುಗಿದಾಗ ಚಂಚಲವಾದ ಪರ್ವತಗಳಂತೆ ಚಂಚಲವಾಗಿಯೂ ಇದ್ದಿತು ॥೧೪॥

ಆ ಯುದ್ಧರಂಗವೆಂಬ ಪರ್ವತದಲ್ಲಿ, ಕುದುರೆಗಳೆಂಬ ಪಕ್ಷಿಗಳು ಹಾರಾಡುತಿದ್ದುವು. ಆನೆಗಳೆಂಬ ದಡಗಳು ಕುಸಿದು ಬೀಳುತಿದ್ದುವು. ಸ್ವಭಾವತಃ ಭಯಶಾಲಿಗಳಾದ ಮೃಗಗಳಂತೆ ಸೈನ್ಯಗಳು ಹೆದರಿಕೊಂಡು ಕೂಗುತಿರುವುದರಿಂದ, ಅಲ್ಲಿ ಘುರಘುರಶಬ್ದವು ವಿಜೃಂಭಿಸುತಲಿದ್ದಿತು ॥೧೫॥

ಧನುಸ್ಸಿನದೆಸೆಯಿಂದ ಹೊರಡುತಿರುವ ಬಾಣಪರಂಪರೆಗಳಿಂದ ಭಗ್ನರಾಗಿ ಬೀಳುತಿರುವ ಅನೇಕ ಸೈನಿಕರು, ಅಲ್ಲಿ ಶಲಭ (ಮಿಡತೆ) ಗಳಾಗಿದ್ದರು. ಅಲ್ಲಲ್ಲಿ ಓಡಾಡುತಿರುವ ಕುದುರೆಗಳು ಶರಭ (ಮೃಗವಿಶೇಷ) ಗಳಾಗಿದ್ದುವು. ಶರಸಮೂಗಳೇ ವನಭೂಮಿಯಾಗಿದ್ದುವು ॥೧೬॥

ಅಲ್ಲಿ ಭ್ರಮರಗಳ ಧ್ವನಿಯು ಸಂಚರಿಸುತ್ತಿತು. ಧ್ವನಿಮಾಡುತಿರುವ ತೂರ್ಯವಾದ್ಯಗಳೇ, ಆ ಯುದ್ಧಪರ್ವತದಲ್ಲಿ ದೊಡ್ಡ ಗುಹೆಗಳಾಗಿದ್ದುವು. ಸೈನ್ಯಗಳೇ ಮೇಘಗಳಾಗಿದ್ದುವು. ಭಟರೆಂಬ ಸಿಂಹಗಳು ಹೊರಳಾಡುತಿದ್ದುವು ॥೧೭॥

ಪ್ರಸರದ್ಧೂಳಿಜಲದೋ ವಿಗಳತ್ಸೈನ್ಯಸಾನುಮಾನ್ |
ಪತದ್ರಥವರಾಭ್ಯಾಗ್ರಃ ಪ್ರಪತತ್ಖಡ್ಗಮಣ್ಡಲಃ ||೧೮||
ಪ್ರೋತ್ಪತತ್ಪದಪುಷ್ಪೌಘಃ ಪತಾಕಾಚ್ಛತ್ರವಾರಿದಃ |
ವಹದ್ರಕ್ತನದೀಪೂರಪತತ್ಸಾರಾವವಾರಣಃ ||೧೯||
ಸೋಽಭೂತ್ ಸಮರಕಲ್ಪಾನ್ತೋ ಜಗತ್ಕಬಳನಾಕುಲಃ |
ಪರ್ಯಸ್ತಸಧ್ವಜಚ್ಛತ್ರಪತಾಕಾರಥಪತ್ತನಃ ||೨೦||
ಪತದ್ವಿಮಲಹೇತ್ಯೋಘಭೂರಿಭಾಸ್ವರಭಾಸ್ಕರಃ |
ಕಠಿನಪ್ರಾಣಸನ್ತಾಪತಾಪಿತಾಖಿಲಮಾನಸಃ ||೨೧||
ಕೋದಣ್ಡಪುಷ್ಕರಾವರ್ತಶತಧಾರಾನಿರನ್ತರಃ |
ವಹತ್ಖಡ್ಗಶಿಲಾಲೇಖಾವಿದ್ಯುದ್ವಲಯಿತಾಮ್ಬರಃ ||೨೨||
ಉಚ್ಛಿನ್ನರಕ್ತಜಲಧಿಪತಿತೇಭಕುಲಾಚಲಃ |
ನಭೋವಿಕೀರ್ಣನಿಪತದ್ಯುತಾರಕಣತಾರಕಃ ||೨೩||

ಧೂಳಿಯೆಂಬ ಮೇಘಗಳು ಮೇಲಕ್ಕೆ ಹಾರುತಿದ್ದುವು. ಸೈನ್ಯಗಳೆಂಬ ತೊಪ್ಪಲುಗಳು ಜಾರಿಬೀಳುತಿದ್ದುವು. ದೊಡ್ಡದೊಡ್ಡ ರಥಗಳೆಂಬ ಅವಯವ (ಪರ್ವತದ ಭಾಗ) ಗಳು ಬೀಳುತಿದ್ದುವು. ಖಡ್ಗಗಳೆಂಬ ಖಡ್ಗಮೃಗಗಳು ಪ್ರಕಾಶಿಸುತಿದ್ದುವು ||೧೮||

ಸೈನಿಕರಿಂದ ಕತ್ತರಿಸಲ್ಪಟ್ಟು ಮೇಲಕ್ಕೆ ಹಾರುತಿರುವ ಕಾಲುಗಳು, ಆ ಯುದ್ಧರಂಗವೆಂಬ ಪರ್ವತದಲ್ಲಿ ಪುಷ್ಪಸಮೂಹಗಳಾಗಿದ್ದುವು. ಧ್ವಜಗಳೂ ಛತ್ರಗಳೂ ಮೇಘಗಳಾಗಿದ್ದುವು. ಅಲ್ಲಿ ಪ್ರವಹಿಸುತ್ತಿರುವ ರಕ್ತನದಿಗಳಲ್ಲಿ, ಆನೆಗಳು ಬಿದ್ದು ಕೂಗಿಕೊಳ್ಳುತಿದ್ದುವು ||೧೯||

ಮತ್ತು, ಆ ಯುದ್ಧರಂಗವು ಪ್ರಳಯಕಾಲದಂತೆ ಇದ್ದಿತು. ಇದೂ ಪ್ರಳಯಕಾಲದಂತೆಯೇ ಜಗತ್ತನ್ನು ನುಂಗಿಬಿಡುವುದರಲ್ಲಿ ಆಸಕ್ತವಾಗಿದ್ದಿತು. ಧ್ವಜ ಛತ್ರ ಪತಾಕೆ ರಥ—ಇವುಗಳು, ಪ್ರಳಯಕಾಲದಲ್ಲಿ ಪಟ್ಟಣಗಳಂತೆ ಉರುಳಿ ಬೀಳುತಿದ್ದುವು ||೨೦||

ನಿರ್ಮಲವಾದ ಆಯುಧಸಮುದಾಯಗಳೆಂಬ ಸೂರ್ಯಮಂಡಲಗಳು ಬೀಳುತಿದ್ದುವು. ಅತಿಕಠಿಣವಾದ ಪ್ರಾಣಸಂಕಟವನ್ನುಂಟುಮಾಡಿ, ಆ ಯುದ್ಧಪ್ರಳಯವು ಸಕಲರ ಮನಸ್ಸನ್ನೂ ತಪಿಸುತಿದ್ದಿತು ||೨೧||

ಧನುಸ್ಸುಗಳೆಂಬ ಪುಷ್ಕರಾವರ್ತ ಮೇಘಗಳು, ಆಗ ನಿರಂತರವಾಗಿ ಬಾಣಪರಂಪರೆಗಳೆಂಬ ಜಲಧಾರೆಗಳನ್ನು ಸುರಿಸುತಿದ್ದುವು. ಲತಾಸದೃಶವಾದ ಖಡ್ಗಗಳೆಂಬ ಮಿಂಚುಗಳು, ರೇಖಾಕಾರವಾಗಿ ಅಂತರಿಕ್ಷವನ್ನೆಲ್ಲ ಆವರಿಸಿಕೊಂಡಿದ್ದುವು ||೨೨||

ರಕ್ತಸಮುದ್ರಗಳಲ್ಲಿ ಗಜಸಮೂಹಗಳೆಂಬ ಕುಲಪರ್ವತಗಳು ಛಿನ್ನಭಿನ್ನವಾಗಿ ಬೀಳುತಿದ್ದುವು. ಅಂತರಿಕ್ಷದಲ್ಲಿ ಹಾರಿಹೋದ ರಕ್ತಬಿಂದುಗಳು ಅಲ್ಲಿಂದ ಬೀಳುತಿರುವಾಗ, ಮತ್ತೆ ಕೆಲವು ಭೂಮಿಯಿಂದ ಮೇಲಕ್ಕೆ ಹಾರುತ, ಇವೆರಡೂ ಮಧ್ಯದಲ್ಲಿ ಸೇರಿ ದಪ್ಪದಪ್ಪ ಬಿಂದುಗಳಾಗುತಿದ್ದುವು. ಇಂತಹ ರಕ್ತಬಿಂದುಗಳೆಂಬ ನಕ್ಷತ್ರಗಳು ಅಂತರಿಕ್ಷದಿಂದ ಕಳಚಿಬೀಳುತಿದ್ದುವು ||೨೩||

ಚಕ್ರಕುಲ್ಯಾಮ್ಬುದಾವರ್ತಪೂರ್ಣವ್ಯೋಮಸರಾಮ್ಬುದಃ ।
ಅಸ್ತ್ರಕಲ್ಪಾಗ್ನಿನಿರ್ದಗ್ಧಸೈನ್ಯಲೋಕಾನ್ತರಕ್ರಮಃ ॥೨೪॥
ಹೇತಿವರ್ಷಾಶನಿಚ್ಛನ್ನಭೂತಳಾಮಲಭೂಧರಃ ।
ಗಜರಾಜಗಿರಿವ್ರಾತಪಾತಪಿಷ್ಟಜನವ್ರಜಃ ॥೨೫॥
ಶರಧಾರಾಘನಾನೀಕಮೇಘಚ್ಛನ್ನಮಹೀನಭಾಃ ।
ಮಹಾನೀಕಾರ್ಣವಕ್ಷೋಭಸಙ್ಘಟ್ಟಘಟಿತಾದ್ರವಃ ॥೨೬॥
ವ್ಯಾಪ್ತ ಉಗ್ರಾನಿಲೋದ್ಧೂತೈಃ ಜಲವ್ಯಾಳೈರಿವಾಚಲಃ ।
ಅನ್ಯೋನ್ಯದಳನವ್ಯಗ್ರೈಃ ಶಸ್ತ್ರೋತ್ಪಾತಇವೋತ್ಥಿತೈಃ ॥೨೭॥
ಶೂಲಾಸಿಚಕ್ರಶರಶಕ್ತಿಗದಾಭುಶುಣ್ಡೀ
ಪ್ರಾಸಾದಯೋ ವಿದಳನೇನ ಮಿಥೋ ಧ್ವನನ್ತಃ ।
ದೀಪ್ತಾ ಅಧುರ್ದಶ ದಿಶಃ ಶತಶೋ ಭ್ರಮನ್ತಃ
ಕಲ್ಪಾನ್ತವಾತಪರಿವೃತ್ತಪದಾರ್ಥಲೀಲಾಮ್ ॥೨೮॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ರಣವರ್ಣನಂ ನಾಮ
ಪಞ್ಚತ್ರಿಂಶಃ ಸರ್ಗಃ.

ಕಾಲುವೆಯಂತೆ ಪ್ರವಹಿಸುತ್ತಿರುವ ಚಕ್ರಪರಂಪರಗಳೆಂಬ ಮೇಘಮಂಡಲಗಳು, ಅಂತರಿಕ್ಷಪ್ರಣಾಳಿಗಳನ್ನೂ ಮೇಘಮಾರ್ಗಗಳನ್ನೂ ತುಂಬಿಕೊಂಡಿದ್ದುವು. ಮಂತ್ರಾಸ್ತ್ರಗಳೆಂಬ ಪ್ರಳಯಾಗ್ನಿಯು, ಸೈನ್ಯಗಳೆಂಬ ನಾನಾಲೋಕಗಳನ್ನು ಸುಟ್ಟುಬಿಡುತಿದ್ದಿತು ॥೨೪॥

ಆಯುಧವೃಷ್ಟಿಯೆಂಬ ವಜ್ರಾಯುಧಗಳು, ಭೂಮಿಯೆಂಬ ಪರ್ವತಗಳನ್ನು ಆಚ್ಛಾದಿಸುತಿದ್ದವು. ಮದ್ದಾನೆಗಳೆಂಬ ಪರ್ವತಸಮುದಾಯಗಳು ಬೀಳುತಿರುವುದರಿಂದ, ಜನಸಮೂಹವೆಲ್ಲ ಮರ್ದಿತವಾಗುತಿದ್ದಿತು ॥೨೫॥

ಬಾಣವೃಷ್ಟಿಯೆಂಬ ಜಲಧಾರೆಯೊಡಗೂಡಿದ ಸೈನ್ಯವೆಂಬ ಮೇಘಗಳು, ಭೂಮಿಯೆಂಬ ಆಕಾಶವನ್ನು ಆಚ್ಛಾದಿಸುತಿದ್ದುವು. ದೊಡ್ಡ ಸೈನ್ಯಗಳೆಂಬ ಸಮುದ್ರಗಳು ಪರಸ್ಪರವಾಗಿ ಸೇರಿಕೊಂಡು ಬಹುದೂರವಾಗಿ ಪ್ರವಹಿಸುತಿದ್ದುವು ॥೨೬॥

ಸಮುದ್ರಮಧ್ಯಗತವಾದ ಪರ್ವತವು ನೀರುಹಾವುಗಳಿಂದ ವ್ಯಾಪ್ತವಾಗುವಂತೆ, ಉಗ್ರವಾದ ವಾಯುವಿನಿಂದ ಮೇಲಕ್ಕೆಬ್ಬಿಸಲ್ಪಟ್ಟ ಶಸ್ತ್ರಸಮೂಹಗಳಿಂದ ವ್ಯಾಪ್ತವಾಗಿದ್ದಿತು. ಆ ಹಾವುಗಳು ಪರಸ್ಪರವಾಗಿ ಕಚ್ಚುವುದರಲ್ಲಾಸಕ್ತಗಳಾಗಿರುವಂತೆ, ಈ ಶಸ್ತ್ರಗಳೂ ಪ್ರತಿಶಸ್ತ್ರಗಳನ್ನು ನಾಶಪಡಿಸುವುದಕ್ಕೋಸ್ಕರ ಎದ್ದಿರುವಂತೆ ಕಾಣುತಿದ್ದುವು ॥

ಮತ್ತು, ಆ ಯುದ್ಧಸಮಯದಲ್ಲಿ, ಶೂಲ ಅಸಿ (ಕತ್ತಿ) ಚಕ್ರ ಶರ (ಬಾಣ) ಶಕ್ತಿ ಗದೆ ಭುಶುಂಡಿ ಪ್ರಾಸ- ಇತ್ಯಾದ್ಯಾಯುಧಗಳು, ಪರಸ್ಪರವಾಗಿ ಸೀಳುತ, ಧ್ವನಿಗೈಯುತ, ಪ್ರಕಾಶಮಾನಗಳಾಗಿ, ನೂರಾರುವೇಳೆ ಸುತ್ತುತ, ಪ್ರಳಯಮಾರುತದಿಂದ ಸುತ್ತಲ್ಪಡುತಿರುವ ಪದಾರ್ಥಗಳ ವಿಲಾಸವನ್ನು ಧರಿಸುತಿದ್ದುವು ॥೨೮॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ರಣವರ್ಣನೆಯೆಂಬ
ಮೂವತ್ತಯ್ದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಷಟ್ತ್ರಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಅಥ ಶೃಙ್ಗೋಪಮಾನೇಷು ಸ್ಥಿತೇಷು ಶರರಾಶಿಷು ।
ಸರ್ವಭೀರುಷು ಭಗ್ನೇಷು ವಿದ್ರುತೇಷು ದಿಶೋ ದಶ ॥೧॥
ಮಾತಙ್ಗಶವಶೈಲೇಷು ವಿಶ್ರಾನ್ತ್ಯಮ್ಬುದಪಙ್ಕ್ತಿಷು ।
ಯಕ್ಷರಕ್ಷಃಪಿಶಾಚೇಷು ಕ್ರೀಡತ್ಸು ರುಧಿರಾರ್ಣವೇ ॥೨॥
ಮಹತಾಂ ಧರ್ಮನಿಷ್ಠಾನಾಂ ಶೀಲೌಜಸ್ಸತ್ತ್ವಶಾಲಿನಾಮ್ ।
ಶುದ್ಧಾನಾಂ ಕುಲಪದ್ಮಾದಾಂ ವೀರಾಣಾಮನಿವರ್ತಿನಾಮ್ ॥೩॥
ದ್ವನ್ದ್ವಯುದ್ಧಾನಿ ಜಾತಾನಿ ಮೇಘಾನಾಮಿವ ಗರ್ಜತಾಮ್ ।
ಮಿಥೋನಿಗರಣೋತ್ಕಾನಿ ಮಿಳನ್ತ್ಯಾಪಗಪೂರವತ್ ॥೪॥

ಉತ್ಪತ್ತಿಪ್ರಕರಣದಲ್ಲಿ ಮೂವತ್ತಾರನೆಯ ಸರ್ಗವು

ಸಮಾಯುಧದ್ವನ್ದ್ವಯುದ್ಧಂ ಸಹಾಯಾಶ್ಚಾತ್ರ ವರ್ಣಿತಾಃ ।
ಪ್ರಾಚ್ಯಾದಿಭಿರ್ಜನಪದೈಃ ಸಮಂ ಜನಪದೇಶ್ವರಾಃ ॥

ಪರಸ್ಪರ ಸಮಾನವಾದ ಆಯುಧಗಳಿಂದ ನಡೆಸಿದ ದ್ವಂದ್ವಯುದ್ಧವೂ, ಪೂರ್ವದೇಶಾಧಿಪತಿ ಮೊದಲಾದವರೊಡನೆ ಸೇರಿದ ಸಹಾಯಭೂತರಾದ ದೇಶಾಧೀಶ್ವರರೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವರು.

ಪುನಃ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಿದರು :—

ಅಯ್ಯಾ! ರಾಮ! ಬಳಿಕ, ಆ ಯುದ್ಧರಂಗದಲ್ಲಿ, ಬಾಣಸಮೂಹಗಳು ದೊಡ್ಡ ಪರ್ವತದ ಶಿಖರಗಳಂತೆ ಬಿದ್ದಿರಲಾಗಿ, ಭಯಗ್ರಸ್ತರಾದವರೆಲ್ಲರೂ ಭಗ್ನರಾಗಿ ಹತ್ತುದಿಕ್ಕುಗಳಿಗೂ ಓಡಿಹೋಗಲಾಗಿ, ಆನೆಗಳ ಶವಗಳೆಂಬ ಪರ್ವತಗಳಲ್ಲಿ ಮೇಘಸಮೂಹಗಳು ವಿಶ್ರಮಿಸಿಕೊಳ್ಳುತಿರಲಾಗಿ, ಯಕ್ಷ ರಕ್ಷಸ್ಸು ಪಿಶಾಚಗಳು ರಕ್ತಸಮುದ್ರದಲ್ಲಿ ಕ್ರೀಡಿಸುತ್ತಿರಲಾಗಿ, ಮಹಾತ್ಮರಾಗಿಯೂ ಧರ್ಮನಿಷ್ಠರಾಗಿಯೂ ಶೀಲ ಓಜಸ್ಸು ಸತ್ವ ಇವುಗಳಿಂದ ಯುಕ್ತರಾಗಿಯೂ ಪರಿಶುದ್ಧರಾಗಿಯೂ ತಮ್ಮ ವಂಶಕ್ಕೆ ಪದ್ಮಪ್ರಾಯರಾಗಿಯೂ ಯುದ್ಧದಿಂದ ಹೆದರಿ ಹಿಂದಿರುಗದಿರತಕ್ಕವರಾಗಿಯೂ ಮೇಘಗಳಂತೆ ಗರ್ಜಿಸತಕ್ಕವರಾಗಿಯೂ ಇದ್ದ ಶೂರರಿಗೆ, ದ್ವಂದ್ವಯುದ್ಧಗಳು ಪ್ರಾರಂಭಿಸಿದುವು. ಆಗ ಒಬ್ಬರನ್ನೊಬ್ಬರು ನುಂಗಿಬಿಡಬೇಕೆಂದು ಕುತೂಹಲಪಡುತಿದ್ದರು. ನದೀಪ್ರವಾಹಗಳು ಒಂದಕ್ಕೊಂದು ಸೇರುವಂತೆ ಪರಸ್ಪರವಾಗಿ ಸೇರುತಿದ್ದರು ॥೧—೪॥

ಪಞ್ಜರಃ ಪಞ್ಜರೇಣೇವ ಗಜೌಘೇನ ಗಜೋಚ್ಚಯಃ ।
ಸವನಃ ಸವನೇನಾದ್ರಿಃ ಅದ್ರಿಣೇವಾಮಿಳದ್ಬಲಾತ್ ॥೫॥
ಅಶ್ವೌಘೋಮಿಳದಶ್ವಾನಾಂ ಬೃನ್ದೇನಾರಾವಿರಂಹಸಾ ।
ತರಙ್ಗೌಘೇನ ಘೋಷೇಣ ತರಙ್ಗೌಘಇವಾರ್ಣವೇ ॥೬॥
ನರಾನೀಕಂ ನರಾನೀಕಃ ಸಮಾಯುಧಮಯೋಧಯತ್ ।
ವೇಣ್ವೋಘಮಿವ ವೇಣ್ವೋಘೋ ಮರುಲ್ಲೋಲೋ ಮರುದ್ವಲಮ್ ॥೭॥
ರಥೌಘಶ್ಚ ರಥೌಘೇನ ನಿಷ್ಪಿಪೇಷಾಖಿಲಂ ವಪುಃ ।
ನಗರಂ ನಗರೇಣೇವ ದೈವೇನೋಡ್ಡೀನಮಾಸುರಮ್ ॥೮॥
ಸರಜ್ಝರಭರಾಸಾರರಚಿತಾಪೂರ್ವವಾರಿದಮ್ ।
ಯುಯುಧೇ ಸ್ಥಗಿತಾಕಾಶಾ ಧನುರ್ಧರಪತಾಕಿನೀ ॥೯॥
ವಿಷಮಾಯುಧಯುದ್ಧೇಷು ಯೋದ್ಧಾರಃ ಪೇಲವಾಶಯಾಃ ।
ಯದಾ ಯುಕ್ತ್ಯಾ ಪಲಾಯನ್ತೇ ರಣಕಲ್ಪಾನಲೇ ತದಾ. ॥೧೦॥
ಮಿಳಿತಾಶ್ಚಕ್ರಿಣಶ್ಚಕ್ರೈಃ ಧನುರ್ಧಾರೈರ್ಧನುರ್ಧರಾಃ ।

ಪಂಜರದೊಡನೆ ಪಂಜರದಂತೆಯೂ, ಅರಣ್ಯಸಹಿತವಾದ ಪರ್ವತದೊಡನೆ ಅರಣ್ಯಯುಕ್ತವಾದ ಪರ್ವತದಂತೆಯೂ, ಗಜಸಮೂಹದೊಡನೆ ಗಜಸಮೂಹವು ಬಲಾತ್ಕಾರವಾಗಿ ಸೇರಿತು ॥೫॥

ಸಮುದ್ರದಲ್ಲಿ ತರಂಗಸಮೂಹದೊಡನೆ ತರಂಗಸಮೂಹವು ಧ್ವನಿಗೈಯುತ ಸೇರುವಂತೆ, ಧ್ವನಿಗೈಯುತ ವೇಗವಾಗಿರುವ ಅಶ್ವಸಮೂಹದೊಡನೆ ಅಶ್ವಸಮೂಹವು ಸೇರಿತು॥

ವಾಯುವಿನಿಂದ ಚಂಚಲವಾಗಿರುವ ವೇಣುಸಮೂಹದೊಡನೆ ವಾಯುಚಂಚಲವಾದ ವೇಣುಸಮೂಹವು ಸೇರುವಂತೆ, ಸಮಾನವಾದಾಯುಧವುಳ್ಳ ಪದಾತಿಸೈನ್ಯದೊಡನೆ ಪದಾತಿಸೈನ್ಯವು ಯುದ್ಧಮಾಡಿತು ॥೭॥

ಮೇಲಕ್ಕೆ ಹಾರಿಹೋದ ರಾಕ್ಷಸಪಟ್ಟಣವು ದೇವತೆಗಳ ಪಟ್ಟಣದೊಡನೆ ಸೇರಿದಂತೆ, ರಥಸಮೂಹದೊಡನೆ ಸೇರಿದ ರಥಸಮೂಹವು ಸಮಸ್ತವಾದ ಶರೀರಭಾಗವನ್ನೂ ಚೂರುಚೂರು ಮಾಡಿತು ॥೮॥

ಧನುರ್ಧಾರಿಗಳ ಸೈನ್ಯವು, ಬತ್ತಳಿಕೆಯಿಂದ ಹೊರಟ ಬಾಣಸಮೂಹವರ್ಷಣದಿಂದ ಅಪೂರ್ವವಾದ ಮೇಘಮಂಡಲವನ್ನುಂಟುಮಾಡುತ, ಆಕಾಶಮಂಡಲವನ್ನು ಮರೆಮಾಡುತ, ಯುದ್ಧಮಾಡಿತು ॥೯॥

ಕೇವಲ ಕ್ರೂರವಾದ ಆಯುಧಗಳಿಂದ ಯುದ್ಧ ನಡೆಯುತಿರುವಾಗ, ಅಲ್ಲಿ ರಣವೆಂಬ ಕಲ್ಪಾಗ್ನಿಯಲ್ಲಿ ಯುದ್ಧಮಾಡುತಿದ್ದ ಅಧೀರರು, ಯಾವಾಗ ಯುಕ್ತಿಯಿಂದ ತಪ್ಪಿಸಿಕೊಂಡು ಓಡಿಹೋಗುವರೋ, ಆಗ, ಚಕ್ರಾಯುಧವುಳ್ಳವರು ಚಕ್ರಾಯುಧವುಳ್ಳವರೊಡನೆಯೂ, ಧನುರ್ಧಾರಿಗಳು ಧನುರ್ಧಾರಿಗಳೊಡನೆಯೂ, ಖಡ್ಗದಿಂದ ಯುದ್ಧಮಾಡತಕ್ಕವರು ಖಡ್ಗಾಯುಧವುಳ್ಳವರೊಡನೆಯೂ, ಭುಶುಂಡಿಯುಳ್ಳವರು ಭುಶುಂಡಿಯುಳ್ಳವರೊ

ಖಡ್ಗಿಭಿಃ ಖಡ್ಗಯೋದ್ಧಾರೋ ಭ್ರುಶುಣ್ಡೀಭಿರ್ಭ್ರುಶುಣ್ಡಯಃ ॥೧೧॥
ಮುಸಲೈರ್ಮುಸಲೋದಾರಾಃ ಕುನ್ತಿನಃ ಕುನ್ತಧಾರಿಭಿಃ ।
ಋಷ್ಟ್ಯಯುಧಾಋಷ್ಟಿಧರೈಃ ಪ್ರಾಸಿಭಿಃ ಪ್ರಾಸಪಾಣಯಃ ॥೧೨॥
ಸಮುದ್ಗರಾಮುದ್ಗರಿಭಿಃ ಸಗದೈರ್ವಿಲಸದ್ಗದಾಃ ।
ಶಾಕ್ತೀಕೈಃ ಶಕ್ತಿಯೋದ್ಧಾರಃ ಶೂಲೈಃ ಶೂಲವಿಶಾರದಾಃ ॥೧೩॥
ಪ್ರಾಸಾಸನವಿದಃ ಪ್ರಾಸೈಃ ಪರಶೂಕ್ತಾಃ ಪರಶ್ವಧೈಃ ।
ಲಗುಡೋದ್ಯೈರ್ಲಗುಡಿನಶ್ಚೋಪಲೈರುಪಲಾಯುಧಾಃ ॥೧೪॥
ಪಾಶಿಭಿಃ ಪಾಶಧಾರಿಣ್ಯಃ ಶಙ್ಕುಭಿಃ ಶಙ್ಕುಧಾರಿಣಃ ।
ಕ್ಷುರಿಕಾಭಿಸ್ತು ಕ್ಷುರಿಕಾಃ ಭಿನ್ದಿಪಾಲೈಶ್ಚ ತದ್ಗತಾಃ ॥೧೫॥
ವಜ್ರಮುಷ್ಟಿಧರಾವಜ್ರೈಃ ಅಙ್ಕುಶೈರಙ್ಕುಶೋದ್ಧತಾಃ ।
ಹಲೈರ್ಹಲನಿಕಾಷಜ್ಞಾಃ ತ್ರಿಶೂಲೈಶ್ಚ ತ್ರಿಶೂಲಿನಃ ॥೧೬॥
ಶೃಙ್ಖಲಾಜಾಲಿನೋ ಜಾಲೈಃ ಶೃಙ್ಖಲೈರಳಿಕೋಮಲೈಃ ।
ಕ್ಷುಭಿತಾಃ ಕಲ್ಪವಿಕ್ಷುಬ್ಧಸಾಗರೋರ್ಮಿಘಟಾಇವ ॥೧೭॥

ಡನೆಯೂ, ಒನಕೆಯನ್ನು ಹಿಡಿದಿರತಕ್ಕವರು ದೊಡ್ಡ ಒನಕೆಯುಳ್ಳವರೊಡನೆಯೂ, ಕುಂತಾಯುಧವುಳ್ಳವರು ಕುಂತಾಯುಧವನ್ನು ಧರಿಸಿರತಕ್ಕವರೊಡನೆಯೂ, ಋಷ್ಟಿಯೆಂಬ ಆಯುಧವುಳ್ಳವರು ಋಷ್ಟಿಯನ್ನು ಹಿಡಿದಿರತಕ್ಕವರೊಡನೆಯೂ, ಪ್ರಾಸಾಯುಧವನ್ನು ಕೈಯಲ್ಲಿ ಧರಿಸಿರತಕ್ಕವರು ಪ್ರಾಸಾಯುಧವುಳ್ಳವರೊಡನೆಯೂ, ಮುದ್ಗರಾಯುಧಯುಕ್ತರಾಗಿರತಕ್ಕವರು ಮುದ್ಗರವುಳ್ಳವರೊಡನೆಯೂ, ಪ್ರಕಾಶಮಾನವಾದ ಗದೆಯುಳ್ಳವರು ಗದಾಯುಧಯುಕ್ತರಾದವರೊಡನೆಯೂ, ಶಕ್ತ್ಯಾಯುಧದಿಂದ ಯುದ್ಧಮಾಡತಕ್ಕವರು ಶಕ್ತ್ಯಾಯುಧವುಳ್ಳವರೊಡನೆಯೂ, ಶೂಲಯುದ್ಧದಲ್ಲಿ ಸಮರ್ಥರಾದವರು ಶೂಲಾಯುಧವುಳ್ಳವರೊಡನೆಯೂ, ಪ್ರಾಸಾಯುಧವನ್ನು ಎಸೆಯುವುದರಲ್ಲಿ ಬುದ್ಧಿವಂತರಾದವರು ಪ್ರಾಸಾಯುಧಧಾರಿಗಳೊಡನೆಯೂ, ಪರಶುವಿನಲ್ಲಿ ಪ್ರಸಿದ್ಧರಾದವರು ಪರಶುಧಾರಿಗಳೊಡನೆಯೂ, ದೊಣ್ಣೆಯುಳ್ಳವರು ದೊಣ್ಣೆಯನ್ನು ಎತ್ತಿ ಹಿಡಿದಿರತಕ್ಕವರೊಡನೆಯೂ, ಶಿಲೆಯನ್ನು ಆಯುಧವಾಗಿ ಉಪಯೋಗಿಸತಕ್ಕವರು ಶಿಲಾಯುಧವುಳ್ಳವರೊಡನೆಯೂ, ಪಾಶಗಳನ್ನು ಧರಿಸಿರುವ ಸೇನೆಗಳು ಪಾಶಾಯುಧವುಳ್ಳವರೊಡನೆಯೂ, ಶಂಕುವೆಂಬ ಸಣ್ಣ ಆಯುಧವನ್ನು ಧರಿಸಿರತಕ್ಕವರು ಶಂಕುವುಳ್ಳವರೊಡನೆಯೂ, ಕ್ಷುರಿಕೆ (ಸಣ್ಣ ಕತ್ತಿ) ಯುಳ್ಳವರು ಕ್ಷುರಿಕೆಯುಳ್ಳವರೊಡನೆಯೂ, ಭಿಂದಿಪಾಲವನ್ನು ಹೊಂದಿರತಕ್ಕವರು ಭಿಂದಿಪಾಲವುಳ್ಳವರೊಡನೆಯೂ, ವಜ್ರಮುಷ್ಟಿಯನ್ನು ಧರಿಸಿರತಕ್ಕವರು ವಜ್ರಮುಷ್ಟಿಯುಳ್ಳವರೊಡನೆಯೂ, ಅಂಕುಶದಿಂದ ಗರ್ವಿತರಾದವರು ಅಂಕುಶವುಳ್ಳವರೊಡನೆಯೂ, ಹಲಾಯುಧದಿಂದ ಯುದ್ಧಮಾಡಲು ಬಲ್ಲವರು ಹಲಾಯುಧವುಳ್ಳವರೊಡನೆಯೂ, ತ್ರಿಶೂಲವುಳ್ಳವರು ತ್ರಿಶೂಲವುಳ್ಳವರೊಡನೆಯೂ, ಶೃಂಖಲಾಜಾಲ (ಕಬ್ಬಿಣದ ಸರಪಳಿಯಿಂದ ಮಾಡಿರುವ ಕವಚ) ವುಳ್ಳವರು ಭ್ರಮರಗಳಂತೆ ಮಿರುಗುತಿರುವ ಶೃಂಖಲಾಜಾಲವುಳ್ಳವರೊಡನೆಯೂ, ಈರೀತಿಯಾಗಿ ತಮತಮಗೆ ಸಮಾನರಾದವರೊಡನೆ ಮಹಾಸಂಭ್ರಮಯುಕ್ತರಾಗಿ, ಪ್ರಳಯಕಾಲದಲ್ಲಿ ಪ್ರಕ್ಷುಭಿತವಾದ ಸಮುದ್ರತರಂಗ ಪರಂಪರೆಗಳಂತೆ, ಅನ್ಯೋನ್ಯವಾಗಿ ಸೇರಿಬಿಟ್ಟರು ॥

ಕ್ಷುಬ್ಧಚಕ್ರದಳಾವರ್ತಃ ಶರಶೀಕರಮಾರುತಃ ।
ಪ್ರಭ್ರಮದ್ಧೇತಿಮಕರೋ ವ್ಯೋಮೈಕಾರ್ಣವಆಬಭೌ ॥೧೮॥
ಉತ್ಫುಲ್ಲಾಯುಧಕಲ್ಲೋಲಸಿರಾಕುಲಜಲೇಚರಃ ।
ರೋದೋರಂಧ್ರಸಮುದ್ರೋಽಸೌ ಬಭೂವಾಮರದುಸ್ತರಃ ॥೧೯॥
ದಿವ್ಯಾಷ್ಟಕಜನಾನೀಕಂ ಪಕ್ಷದ್ವಯುತಯಾ ತಯಾ ।
ಅರ್ಧೇನಾರ್ಧೇನ ಕುಪಿತಂ ಭೂಪಾಲಾಭ್ಯಾಂ ತಥಾ ಸ್ಥಿತಮ್ ॥೨೦॥
ಮಧ್ಯದೇಶಾದಿಸಙ್ಖ್ಯಾನೇ ಪ್ರಾಗ್ದಿಗ್ಭ್ಯೋಽಭ್ಯಾಗತಾನಿಮಾನ್ ।
ಲೀಲಾನಾಥಸ್ಯ ಪದ್ಮಸ್ಯ ಪಕ್ಷೇ ಜನಪದಾಞ್ಛೃಣು ॥೨೧॥
ಪೂರ್ವಸ್ಯಾಂ ಕೋಸಲಾಃ ಕಾಶಿಮಗಧಾಮಿಥಿಲೋತ್ಕಲಾಃ ।
ಮೇಖಲಾಃ ಕರ್ಕರಾಮುದ್ರಾಃ ತಥಾ ಸಙ್ಗ್ರಾಮಶೌಣ್ಡಕಾಃ ॥೨೨॥
ಮುಖ್ಯಾಹಿಮಾರುದ್ರಮುಖ್ಯಾಃ ತಾಮ್ರಲಿಪ್ತಾಸ್ತಥೈವ ಚ ।
ಪಾಗ್ಜ್ಯೋತಿಷಾವಾಜಿಮುಖಾಃ ಅಮ್ಬಷ್ಠಾಃ ಪುರುಷಾದಕಾಃ ॥೨೩॥

ಎಲೆಗಳಂತಿರುವ ಚಕ್ರಗಳೆಂಬ ಸುಳಿಗಳು ಸುತ್ತುತಿರುವುದಾಗಿಯೂ, ಬಾಣಗಳೆಂಬ ತುಷಾರಯುಕ್ತವಾದ ವಾಯುವುಳ್ಳದಾಗಿಯೂ, ಆಯುಧಗಳೆಂಬ ಮೊಸಳೆಗಳು ಭ್ರಮಿಸುತಿರುವುದಾಗಿಯೂ ಇರುವ ಆ ಯುದ್ಧರಂಗದ ಆಕಾಶವೆಂಬ ಏಕಾರ್ಣವವು ಪ್ರಕಾಶಿಸುತಿದ್ದಿತು ॥೧೮॥

ವಿಸ್ತಾರವಾಗಿ ಹರಡಿಕೊಂಡಿರುವ ಆಯುಧಗಳೆಂಬ ತರಂಗಪಂಕ್ತಿಗಳಿಂದ ವ್ಯಾಕುಲಪಡುವ ಜಲಚರಗಳುಳ್ಳ ಭೂಮ್ಯಂತರಿಕ್ಷಾವಕಾಶವೆಂಬ ಈ ದೊಡ್ಡ ಸಮುದ್ರವು, ದೇವತೆಗಳಿಗೂ ದಾಟಲಸಾಧ್ಯವಾಗಿತ್ತು ॥೧೯॥

ಈರೀತಿಯಾಗಿ, ಒಂದುಕಡೆ ಸಿಂಧುರಾಜನೂ ಮತ್ತೊಂದುಕಡೆ ವಿದೂರಥನೂ ನಿಂತು ಎರಡು ಪಕ್ಷಗಳಾಗಿರುವುದರಿಂದ, ಆ ದೊಡ ಸೇನಾಸಮೂಹದಲ್ಲಿ ಒಂದೊಂದುಕಡೆ ಅರ್ಧಅರ್ಧವಾಗಿ, (೧) ದಿವ್ಯಾಷ್ಟಕವುಳ್ಳ ಜನರ ಆ ಸೈನ್ಯವು, ಮಹಾಕೋಪಯುಕ್ತವಾಗಿ ನಿಂತಿತು ॥೨೦॥

ಅಯ್ಯಾ! ರಾಮ! ಈಗ ಮಧ್ಯದೇಶಮುಂತಾದವರ ಗಣನೆಯನ್ನು ಉಪಕ್ರಮಿಸಲಾಗಿ, ಲೀಲಾದೇವಿಗೆ ಪತಿಯಾದ ಪದ್ಮರಾಜನ ಪಕ್ಷದಲ್ಲಿ ಸಹಾಯಭೂತರಾಗಿ ಪೂರ್ವದಿಗ್ದೇಶಗಳಿಂದ ಬಂದ ಈ ದೇಶಾಧಿಪತಿಗಳನ್ನು ಕೇಳುವವನಾಗು ॥೨೧॥

ಪೂರ್ವದಿಕ್ಕಿನಲ್ಲಿ ಮುಖ್ಯವಾದ—ಕೋಸಲದೇಶದವರೂ ಕಾಶೀದೇಶದವರೂ ಮಗಧದೇಶದವರೂ ಮಿಥಿಲದೇಶದವರೂ ಉತ್ಕಲದೇಶದವರೂ ಮೇಖಲದೇಶದವರೂ ಕರ್ಕರಮುದ್ರ ಇವರೆಲ್ಲರೂ ಯುದ್ಧದಲ್ಲಿ ಧೀರರಾದವರು ॥೨೨॥

ಮತ್ತು, ಮುಖ್ಯಾಹಿಮ ರುದ್ರಮುಖ್ಯ ತಾಮ್ರಲಿಪ್ತ ಪ್ರಾಗ್ಜ್ಯೋತಿಷ ವಾಜಿಮುಖ (ಕುದುರೆಯಂತೆ ಮುಖವುಳ್ಳವರು) ಅಂಬಷ್ಠ ಪುರುಷಾದಕ (ಮನುಷ್ಯರನ್ನು ತಿನ್ನತಕ್ಕವರು)

---

(೧) ವಿದ್ಯೆ ಬುದ್ಧಿ ಬಲ ಶೌರ್ಯ ಅಸ್ತ್ರ ಅಶ್ವ ರಥ ಧನುಸ್ಸು ಇವೆಂಟಕ್ಕೂ ದಿವ್ಯಾಷ್ಟಕವೆಂದು ಹೆಸರು. ಇವುಗಳು ಆಜನರಲ್ಲಿ ಬಹು ಪ್ರಶಸ್ತವಾಗಿದ್ದುವೆಂದು ಭಾವವು.

ವರ್ಣಕೋಷ್ಠಾಃ ಸವಿಶೋತ್ರಾಃ ಆಮಮೀನಾಶನಾಸ್ತಥಾ |
ವ್ಯಾಘ್ರವಕ್ತ್ರಾಃ ಕಿರಾತಾಶ್ಚ ಸೌವೀರಾಏಕಪಾದಕಾಃ ||೨೪||
ಮಾಲ್ಯವಾನ್ ನಾಮ ಶೈಲೋತ್ರ ಶಿಬಿರಾಜ್ಞ ಏವ ಚ |
ವೃಷಲಧ್ವಜಪದ್ಮಾನ್ಯಾಃ ತಥೋದಯಕರೋ ಗಿರಿಃ ||೨೫||
ಅಥ ಪ್ರಾಗ್ದಕ್ಷಿಣಾಯಾಂ ತು ಇಮೇ ವಿನ್ಧ್ಯದಿವಾಸಿನಃ |
ಚೇದಯೋ ವತ್ಸದಾಶಾರ್ಣಾಃ ಅಙ್ಗವಙ್ಗೋಪವಙ್ಗಕಾಃ ||೨೬||
ಕಳಿಙ್ಗಪುಣ್ಡ್ರಜಠರಾಃ ವಿದರ್ಭಾಮೇಖಲಾಸ್ತಥಾ |
ಶಬರಾನನವರ್ಣಾಶ್ಚ ಕರ್ಣಾತ್ರಿಪುರಪೂರಕಾಃ ||೨೭||
ಕಣ್ಟಕಸ್ಥಲನಾಮಾನಃ ಪೃಥಗ್ದ್ವೀಪಕಕೋಮಲಾಃ |
ಕರ್ಣಾನ್ಧ್ರಾಶ್ಚೌಲಿಕಾಶ್ಚೈವ ತಥಾ ಚಾರ್ಮಣ್ವತಾಅಪಿ ||೨೮||
ಕಾಕಕಾಹೇಮಕುಡ್ಯಾಶ್ಚ ತಥಾ ಶ್ಮಶ್ರುಧರಾಅಪಿ |
ವಳಿಗ್ರೀವಮಹಾಗ್ರೀವಾಃ ಕಿಷ್ಕಿನ್ಧಾ ನಾಳಿಕೇರಿಣಃ ||೨೯||
ಅಥ ಲೀಲಾಪತೇರಸ್ಯ ದಕ್ಷಿಣಸ್ಯಾಮಿಮೇ ನೃಪಾಃ |
ವಿನ್ಧ್ಯೋಥ ಕುಸುಮಾಪೀಡೋ ಮಹೇನ್ದ್ರೋ ದರ್ದುರಸ್ತಥಾ ||೩೦||

ವರ್ಣಕೋಷ್ಠ ವಿಶೋತ್ರ ಆಮಮೀನಾಶನ (ಬೇಯಿಸದಿರುವ ಮೀನನ್ನು ತಿನ್ನತಕ್ಕವರು) ವ್ಯಾಘ್ರವಕ್ತ್ರ (ಹುಲಿಯಂತೆ ಮುಖವುಳ್ಳವರು) ಕಿರಾತ ಸೌವೀರ ಏಕಪಾದ (ಒಂದು ಕಾಲುಳ್ಳವರು) ಇವರೆಲ್ಲರೂ ಅಲ್ಲಿ ಬಂದು ಸೇರಿದರು ||೨೩—೨೪||

ಇದಲ್ಲದೆ, ಆ ಪೂರ್ವದಿಕ್ಕಿನಲ್ಲಿ ಮಾಲ್ಯವಂತ ಶಿಬಿರಾಂಜನ ವೃಷಲಧ್ವಜ ಪದ್ಮ ಇತ್ಯಾದಿ ಪರ್ವತಗಳೂ, ಮತ್ತು ಉದಯಪರ್ವತವೂ ಇರುವುವಷ್ಟೆ! ಆ ಪರ್ವತಗಳಲ್ಲಿದ್ದವರೂ ಈ ಯುದ್ಧರಂಗಕ್ಕೆ ಬಂದು ಸೇರಿದ್ದರು ||೨೫||

ಬಳಿಕ, ಆಗ್ನೇಯದಿಕ್ಕಿನವರಾಗಿ ವಿಂಧ್ಯ ಮೊದಲಾದ ಪರ್ವತಗಳಲ್ಲಿ ವಾಸಮಾಡತಕ್ಕವರೂ ಚೇದಿ ವತ್ಸ ದಶಾರ್ಣ ಅಂಗ ವಂಗ ಉಪವಂಗ ಕಲಿಂಗ ಪುಂಡ್ರ ಜಠರ ವಿದರ್ಭ ಆಮೇಖಲ ಈ ದೇಶಗಳಲ್ಲಿದ್ದವರೂ, ಶಬರಾನನವರ್ಣರೂ (ಬೇಡರಂತೆ ಮುಖವರ್ಣವುಳ್ಳವರು), ಕರ್ಣಾತ್ರಿಪುರದಲ್ಲಿ ತುಂಬಿರತಕ್ಕವರೂ, ಕಂಟಕಸ್ಥಲನಾಮಕರೂ ಬೇರೆಬೇರೆ ದ್ವೀಪಗಳಲ್ಲಿ ಕೋಮಲರಾದವರು, ಕರ್ಣ ಆಂಧ್ರ ಚೌಳಿಕ (ಚಾಳುಕ್ಯ) ಚರ್ಮಣ್ವತ ಈ ದೇಶದವರೂ, ಕಾಕಕ ಹೇಮಕುಡ್ಯ ಶ್ಮಶ್ರುಧರ (ಮೀಸೆಯುಳ್ಳವರು) ವಳಿಗ್ರೀವ (ಕುತ್ತಿಗೆಯಲ್ಲಿ ಸುಕ್ಕುಗಟ್ಟಿರತಕ್ಕವರು) ಮಹಾಗ್ರೀವ(ಉದ್ದವಾದ ಕುತ್ತಿಗೆಯುಳ್ಳವರು) ಕಿಷ್ಕಿಂಧ ನಾಳಿಕೇರ—ಇತ್ಯಾದಿ ನಾಮಧೇಯವುಳ್ಳವರೂ ಆ ಯುದ್ಧರಂಗದಲ್ಲಿ ಸೇರಿದ್ದರು ||೨೬—೨೯||

ಅಯ್ಯಾ! ರಾಮ! ಬಳಿಕ, ಆ ಪದ್ಮರಾಜನಿಗೆ ಸಹಾಯಾರ್ಥವಾಗಿ ದಕ್ಷಿಣದಿಕ್ಕಿನಿಂದ ಬಂದ ಈ ದೊರೆಗಳನ್ನು ಕೇಳುವವನಾಗು. ವಿಂಧ್ಯ ಕುಸುಮಾಪೀಡ ಮಹೇಂದ್ರ ದರ್ದುರ ಮಲಯ ಸೂರ್ಯವಾನ್—ಎಂಬ ಪರ್ವತಗಳಲ್ಲಿ ವಾಸಮಾಡತಕ್ಕವರಾಗಿಯೂ ರಾಜ್ಯ

ಮಲಯಾಃ ಸೂರ್ಯವಾಂಶ್ಚೈವ ಗಣಾರಾಜ್ಯಸಮೃದ್ಧಕಾಃ ।
ಅವಂತೀತಿ ಚ ವಿಖ್ಯಾತಾಃ ತಥಾ ಶಾಂಬವತೀತಿ ಚ ॥೨೧॥
ದಶಪೂರಕಥಾಚಕ್ರಾಃ ರೇಷಿಕಾತುರಕಚ್ಛಪಾಃ ।
ವನವಾಸೋಪಗಿರಯಃ ತೇ ಭದ್ರಗಿರಿಯಸ್ತಥಾ ॥೨೨॥
ನಾಗರಾದಣ್ಡಕಾಶ್ಚೈವ ಗಣರಾಷ್ಟ್ರನೃರಾಷ್ಟ್ರಕಾಃ ।
ಸಾಹಾಶ್ಚೈವಾರ್ಶ್ಯಮೂಕಾಶ್ಚ ಕಕಾಟೂವನಬಿಬಿಲಾಃ ॥೨೩॥
ಪಂಪಾನಿವಾಸಿನಶ್ಚೈವ ಕೈರಕಾಃ ಕರ್ಕವೀರಕಾಃ ।
ಸ್ವೇರಿಕಾಯಾಸಿಕಾಶ್ಚೈವ ಧರ್ಮಪತ್ತನಪಞ್ಜಕಾಃ ॥೨೪॥
ಕಾಶಿಕಾಸ್ತೃಷ್ಣಖಲ್ಲೂಲಾಃ ಯಾದಾಸ್ತೇ ತಾಮ್ರಪರ್ಣಿಕಾಃ ।
ಗೋನರ್ದಾಃ ಕಣಕಾಶ್ಚೈವ ದೀನಪತ್ತನನಾಮಕಾಃ ॥೨೫॥
ತಾವಿಶ್ರಕಾದಮ್ಭರಾಕೀರ್ಣಾಃ ಸಹಕಾರೈಣಕಾಸ್ತಥಾ ।
ವೈತುಣ್ಡಕಾಸ್ತುಮ್ಬವನಾಃ ಲಾಜಿನದ್ವೀಪಕರ್ಣಿಕಾಃ ॥೨೬॥
ಕರ್ಣಿಕಾಭಾಶ್ಚ ಶಿಬಯಃ ಕೌಙ್ಕಣಾಶ್ಚಿತ್ರಕೂಟಕಾಃ ।
ಕರ್ಣಾಟಮುಣ್ಟವಟಕಾಃ ಮಹಾಕಟಕಿಕಾಸ್ತಥಾ ॥೨೭॥
ಆನ್ಧ್ರಾಶ್ಚಕೋಲಗಿರಯಶ್ಚಾವನ್ತಿಕವಿಜೇರಕಾಃ ।
ಚಣ್ಡಾಯತ್ತಾದೇವಸಕಾಃ ಕ್ರೌಞ್ಚಾವಾಹಾಸ್ತಥೈವ ಚ ॥೨೮॥
ಶಿಲಾಕ್ಷಾರೋದಭೋನನ್ದಮರ್ದನಾಮಲಯಾಭಿಧಾಃ।
ತೇ ಚಿತ್ರಕೂಟಶಿಖರಾಃ ಲಙ್ಕಾರಕ್ಷೋಗಣಾಃ ಸ್ಮೃತಾಃ ॥೨೯॥

ಪರಿಪೂರ್ಣರಾಗಿಯೂ ಇರುವ ನೃಪರ ಸಮೂಹಗಳೂ, ಅವಂತಿಯೆನ್ನುವುದಾಗಿಯೂ ಶಾಂಬವತಿಯೆನ್ನುವುದಾಗಿಯೂ ಪ್ರಸಿದ್ಧರಾದವರೂ, ದಶಪೂರ ಕಥಾಚಕ್ರ ರೇಷಿಕ ಆತುರಕಚ್ಛಪ ವನವಾಸ ಉಪಗಿರಿ ಭದ್ರಗಿರಿ ನಾಗರ ದಂಡಕ ಗಣರಾಷ್ಟ್ರ ನೃರಾಷ್ಟ್ರ ಸಾಹಾಶೈವ ಆರ್ಶ್ಯಮೂಕ (ಋಶ್ಯಮೂಕಪರ್ವತಸಮೀಪ) ಕಕಾಟ ವನಬಿಂಬಿಲ ಪಂಪಾ (ಹಂಪೆ) ಕೈರಕ ಕರ್ಕವೀರಕ ಸ್ವೇರಿಕ ಯಾಸಿಕ ಧರ್ಮಪತ್ತನ ಪಂಜಿಕ ಕಾಶಿಕ ತೃಷ್ಣಖಲ್ಲೂಲ ಯಾದ ತಾಮ್ರಪರ್ಣ (ತಾಮ್ರಪರ್ಣೀನದೀತೀರ) ಗೋನರ್ದ ಕಣಕ ದೀನಪತ್ತನ ತಾವಿಶ್ರಕ ದಂಭರಾಕೀರ್ಣ ಸಹಕ ರೈಣಕ ವೈತುಂಡ ತುಂಬವನ ಲಾಜಿನ ದ್ವೀಪಕರ್ಣಿಕ ಕರ್ಣಿಕಾಭ ಶಿಬಿ ಕೌಂಕಣ (ಕೊಂಕಣ) ಚಿತ್ರಕೂಟಕ ಕರ್ಣಾಟ ಮುಂಟವಟಕ ಮಹಾಕಟಕಿಕ ಆಂಧ್ರ ಚಕೋಲಗಿರಿ ಆವಂತಿಕ ವಿಜೇರಿಕ ಚಂಡಾಯತ್ತ ದೇವಸಕ ಕ್ರೌಂಚಾವಾಹ ಶಿಲಾಕ್ಷಾರೋದ ಭೋನಂದ ಮರ್ದನ ಮಲಯ (ಮಲಯಾಳ) ಈ ದೇಶಗಳಲ್ಲಿ ವಾಸ ಮಾಡತಕ್ಕವರೂ, ಚಿತ್ರಕೂಟಶಿಖರದಲ್ಲಿರತಕ್ಕವರೂ, ಕೆಳಗೆ ಲಂಕೆಯಲ್ಲಿದ್ದ ರಾಕ್ಷಸಸಮೂಹಗಳೂ ಕೂಡ, ಈ ಪದ್ಮರಾಜನ ಸಹಾಯಾರ್ಥವಾಗಿ ಯುದ್ಧರಂಗಕ್ಕೆ ಬಂದು ಸೇರಿದ್ದರು॥

ಅಥ ಪ್ರತ್ಯಗ್ದಕ್ಷಿಣಸ್ಯಾಂ ಮಹಾರಾಜ್ಯಸುರಾಷ್ಟ್ರಕಾಃ |
ಸಿನ್ಧುಸೌವೀರಶೂದ್ರಾಖ್ಯಾಃ ಆಭೀರಾದ್ರವಿಡಾಸ್ತಥಾ ||೪೦||
ಕೀಕಟಾಃ ಸಿದ್ಧಖಣ್ಡಾಖ್ಯಾಃ ತಥಾ ಕಾಳಿರುಹಾಅಪಿ |
ಅತ್ರ ಹೇಮಗಿರಿಃ ಶೈಲಃ ತಥಾ ರೈವತಕೋ ಗಿರಿಃ ||೪೧||
ಜಯಕಚ್ಛೋ ಮಯವರೋ ಯವನಾಸ್ತತ್ರ ಜನ್ತವಃ |
ಬಾಹ್ಲೀಕಾಮಾರ್ಗಣಾವನ್ತಾಃ ಧೂಮ್ರಾಸ್ತುಮ್ಬಕನಾಮಕಾಃ ||೪೨||
ತಥಾ ಲಾಜಗಣಾಶ್ಚೈವ ತಥಾತ್ರಗಿರಿವಾಸಿನಃ |
ತತೋಬ್ಧಿತೋಕನಿಯುತಾಃ ಏತೇ ಲೀಲಾಪತೇರ್ಜನಾಃ ||೪೩||
ಅಥ ತತ್ಪ್ರತಿಪಕ್ಷಸ್ಥಾನ್ ಇಮಾನ್ ಜನಪದಾನ್ ಶೃಣು |
ಪಶ್ಚಿಮಾಯಾಂ ದಿಶಿ ಪ್ರೌಢಾಃ ಇಮೇ ತಾವನ್ಮಹಾದ್ರಯಃ ||೪೪||
ಮಣಿಮಾನ್ ನಾಮ ಶೈಲೇನ್ದ್ರಃ ಕುರಾರ್ಪಣಗಿರಿಸ್ತಥಾ |
ವನೋರ್ಕಹೋ ಮೇಘಭವಃ ಚಕ್ರವಾನಸ್ತಪರ್ವತಃ ||೪೫||
ಜನಾಃ ಪಞ್ಚಜನಾನಾಮ ಕಾಶಬ್ರಹ್ಮಚಯಾನ್ತಕಾಃ |
ತಥೈವ ಭಾರಕ್ಷತಧಾಃ ಪಾರಕಾಃ ಶಾನ್ತಿಕಾಸ್ತಥಾ ||೪೬||
ಶೈಬ್ಯಾರಮರಕಾಯಾಚ್ಛಾಃ ಗುಹುತ್ವಾನಿಯಮಾಸ್ತಥಾ |
ಹೈಹಯಾಃ ಗುಹ್ಯಗಾಯಾಶ್ಚ ತಾಜಿಕಾಹೂಣಕಾಸ್ತಥಾ ||೪೭||

ಅಯ್ಯಾ! ರಾಮ! ಬಳಿಕ ನಿರ್ಋತಿದಿಕ್ಕಿನಲ್ಲಿದ್ದವರನ್ನು ಹೇಳುವೆನು; ಕೇಳು. ಮಹಾ ರಾಜ್ಯ ಸುರಾಷ್ಟ್ರ ಸಿಂಧು ಸೌವೀರ ಶೂದ್ರ ಆಭೀರ ದ್ರವಿಡ ಕಕಟ ಸಿದ್ಧಖಂಡ ಕಾಳಿರುಹ ಈದೇಶಗಳಲ್ಲಿರತಕ್ಕವರೂ, ಹೇಮಗಿರಿ ರೈವತಕ ಜಯಕಚ್ಛ ಮಯವರ ಈ ಪರ್ವತಗಳಲ್ಲಿರ ತಕ್ಕವರೂ, ಅಲ್ಲಿ ಹುಟ್ಟಿದ್ದ ಯವನರೂ, ಬಾಹ್ಲೀಕ ಮಾರ್ಗಣ ಅವಂತ ಧೂಮ್ರ ತಂಬಕ ಲಾಜಗಣ ಅತ್ರಗಿರಿ ಅಬ್ಧತೋಕ ನಿಯುತ ಈ ದೇಶಗಳಲ್ಲಿರತಕ್ಕವರೂ ಕೂಡ ಬಂದು ಸೇರಿದರು. ಇದುವರೆಗೆ ಹೇಳಲ್ಪಟ್ಟ ಈ ಇಷ್ಟು ಜನಗಳೂ ಲೀಲಾದೇವಿಯ ಪತಿಯಾದ ಪದ್ಮರಾಜನ ಸಹಾಯಾರ್ಥವಾಗಿ ಬಂದವರೆಂದು ತಿಳಿಯಬೇಕು ||೪೦ - ೪೩||

ವತ್ಸ! ರಾಮ! ಬಳಿಕ, ಆ ಪದ್ಮರಾಜನ ಪ್ರತಿಪಕ್ಷದಲ್ಲಿ ಸಹಾಯಾರ್ಥವಾಗಿ ಬಂದಿದ್ದ ಈ ದೊರೆಗಳನ್ನು ಕೇಳುವವನಾಗು. ಪಶ್ಚಿಮದಿಕ್ಕಿನಲ್ಲಿ ಪ್ರಸಿದ್ಧವಾದುವು ಈಯಿಷ್ಟು ಪರ್ವತಗಳು. ಯಾವುವೆಂದರೆ:—ಮಣಿಮಂತ ಕುರಾರ್ಪಣ ವನ ಅರ್ಕಹ ಮೇಘಭವ ಚಕ್ರವಂತ ಅಸ್ತಗಿರಿ—ಇವಿಷ್ಟು ಪರ್ವತಗಳೂ ಪಶ್ಚಿಮದಿಕ್ಕಿನಲ್ಲಿ ಪ್ರಸಿದ್ಧವಾದುವುಗಳು || ೪೪—೪೫ ||

ಅಲ್ಲಿರತಕ್ಕ ಜನರು ಪಂಚಜನರೆಂದು ಪ್ರಸಿದ್ಧರಾದವರು; ಇವರು, ಕಾಶರಿಗೂ ಬ್ರಾಹ್ಮಣಸಮೂಹಕ್ಕೂ ಅಂತಕಪ್ರಾಯರಾದವರು. ಮತ್ತು, ಭಾರಕ್ಷತಧ ಪಾರಕ ಶಾಂತಿಕ ಶೈಬ್ಯಾರ ಮರಕಾಯಾಚ್ಛ ಗುಹುತ್ವ ಅನಿಯಮ ಹೈಹಯ ಸುಹ್ಯಗಾಯ ತಾಜಿಕ ಹೂಣಕ ಕರ್ಕ ಗಿರಿಪರ್ಣ ವಮ—ಇವರೆಲ್ಲರೂ, ಸೇನಾನಿವೇಶಗಳ ಪಾರ್ಶ್ವದಲ್ಲಿ ನಿಂತಿದರು.

ಪಾರ್ಶ್ವೇ ಕಟಿಕಯೋಃ ಕರ್ಣಾಃ ಗಿರಿಪರ್ಣಾವಮಾಸ್ತಥಾ ।
ಸನ್ತ್ಯಕ್ತಧರ್ಮಮರ್ಯಾದಾಃ ತೇಽವರ್ಣಾಮ್ಲೇಚ್ಛ ಜನ್ತವಃ ॥೪೮॥
ತತೋಽಜನಸದಾ ಭೂಮಿಃ ಯೋಜನಾನಾಂ ಶತದ್ವಯಮ್ ।
ತತೋ ಮಹೇನ್ದ್ರಶಿಖರೀ ಮುಕ್ತಾಮಣಿಮಯಾವನಿಃ ॥೪೯॥
ಯುತೋ ಮಹೀಧರಶತೈಃ ಅಥಾಶ್ವೋ ನಾಮ ಪರ್ವತಃ ।
ತತೋ ಮಹಾರ್ಣವೋ ಭೀಮಃ ಪಾರಿಯಾತ್ರಗಿರಿಸ್ತಟೇ ॥೫೦॥
ಪಶ್ಚಿಮೋತ್ತರದಿಗ್ಭಾಗೇ ದೇಶೋ ಗಿರಿಮತಿ ಸ್ಥಿತಃ ।
ತಥಾ ವೇಣುಪತಿಶ್ಚೈವ ತತೋಽನರಪತಿರ್ಮಹಃ ॥೫೧॥
ತಥಾ ಫಲ್ಗುಣಕಾಶ್ಚೈವ ಮಣ್ಡವ್ಯಾನೇಕನೇತ್ರಕಾಃ ।
ಪುರುಕುನ್ದಾಶ್ಚ ಪಾರಾಶ್ಚ ಭಾನುಮಣ್ಡಲಭಾವನಾಃ ॥೫೨॥
ವನ್ಮಿಲಾನಳಿನಾದೀರ್ಘಾಃ ದೀರ್ಘಕೇಶಾಙ್ಗಬಾಹವಃ ।
ರಙ್ಗಸ್ತನಿಕಾಶ್ಚಾನ್ಯಾಃ ಗುರುಹಾಚ್ಚಲುಹಾಸ್ತಥಾ ॥೫೩॥
ತತಃ ಸ್ತ್ರೀರಾಷ್ಟ್ರಮತುಲಂ ಗೋವೃಷಾಪತ್ಯಭೋಜನಮ್ ।
ಅಥೋತ್ತರಸ್ಯಾಂ ಹಿಮವಾನ್ ಕ್ರೌಞ್ಚೋಥ ಮಧುಮಾನ್ ಗಿರಿಃ ॥೫೪॥

ಇವರು, ಧರ್ಮಮರ್ಯಾದೆಯನ್ನು ಬಿಟ್ಟರತಕ್ಕವರು ; ವರ್ಣಬಾಹ್ಯರು ; ಮ್ಲೇಚ್ಛಜಾತಿಯವರು ॥೪೬—೪೮॥

ಈ ದೇಶಗಳ ಆಚೆಗೆ, ಇನ್ನೂರು ಯೋಜನ ಪರ್ಯಂತವೂ ಭೂಮಿಯು ದೇಶರಹಿತವಾಗಿರುವುದು. ಅದರಾಚೆ ಮಹೇಂದ್ರಪರ್ವತವಿರುವುದು. ಇದರ ಭೂಮಿಯೆಲ್ಲವೂ ಮುಕ್ತಾಮಣಿಮಯವಾಗಿರುವುದು ॥೪೯॥

ಅಲ್ಲಿಂದ ಮುಂದಕ್ಕೆ, ನೂರಾರು ಸಣ್ಣಗುಡ್ಡಗಳಿಂದ ಕೂಡಿರುವ ಅಶ್ವವೆಂಬ ಪರ್ವತವಿರುವುದು. ಅದರಾಚೆಗೆ, ಭಯಂಕರವಾದ ಸಮುದ್ರವಿರುವುದು. ಅದರ ತೀರದಲ್ಲಿ ಪಾರಿಯಾತ್ರವೆಂಬ ಪರ್ವತವಿರುವುದು ॥೫೦॥

ಅಯ್ಯಾ! ರಾಮ! ಕೇವಲ ಪರ್ವತಮಯವಾಗಿರುವ ವಾಯುವ್ಯದಿಗ್ಭಾಗದಲ್ಲಿ, ವೇಣುಪತಿಯೆಂದೂ ನಿತ್ಯವೂ ಉತ್ಸವಮಯವಾದ ನರಪತಿಯೆಂದೂ ದೇಶಗಳಿರುವುವು ॥

ಮತ್ತು, ಫಲ್ಗುಣಕ ಮಾಂಡವ್ಯ ಅನೇಕನೇತ್ರ ಪುರುಕುಂದ ಪಾರ—ಈ ದೇಶದವರು, ಸೂರ್ಯಮಂಡಲವನ್ನು ಭಾವನೆಮಾಡತಕ್ಕವರಾಗಿರುವರು ॥೫೨॥

ವನ್ಮಿಲ ನಳಿನ—ಈ ದೇಶದವರು, ಕೂದಲೂ ಅಂಗಗಳೂ ಬಾಹುಗಳೂದೀರ್ಘವಾಗಿ ಉಳ್ಳವರಾದಕಾರಣ, ದೀರ್ಘವೆಂದು ಹೆಸರನ್ನು ಪಡೆದಿರುವರು. ರಂಗಸ್ತನಿಕ ಗುರುಹ ಅಚ್ಚಲುಹ—ಈ ದೇಶದವರೂ ಹಾಗೆಯೇ ಇರುವರು ॥೫೩॥

ಅಲ್ಲಿಂದ ಮುಂದಕ್ಕೆ, ಅಸದೃಶವಾದ ಸ್ತ್ರೀರಾಷ್ಟ್ರವಿರುವುದು. ಅಲ್ಲಿನವರು, ಗೋವುಗಳನ್ನೂ ಎತ್ತುಗಳನ್ನೂ ಮಕ್ಕಳುಗಳನ್ನೂ ಆಹಾರವಾಗಿ ಉಪಯೋಗಿಸುವರು. ಆಮೇಲೆ ಉತ್ತರದಿಕ್ಕನ್ನು ಹೇಳುವೆನು; ಕೇಳು. ಅಲ್ಲಿ, ಹಿಮವಂತ ಕ್ರೌಂಚ ಮಧುಮಂತ ಕೈಲಾಸ ವಸುಮಾನ್ ಮೇರು—ಎಂಬ ಪರ್ವತಗಳಿರುವುವು. ಆ ಪರ್ವತಗಳ ಹತ್ತಿ

ಕೈಲಾಸೋ ವಸುಮಾನ್ ಮೇರುಃ ತತ್ಪ್ರದೇಷು ಜನಾಲುಘೇ |
ಮದ್ರವಾರೇವಯೌಧೇಯಾಃ ಮಾಳವಾಃ ಶೂರಸೇನಿಕಾಃ ||೫೫||
ರಾಜನ್ಯಾಶ್ಚ ತಥಾ ಜ್ಞೇಯಾಃ ಅರ್ಜುನಾತನಯಾಸ್ತಥಾ |
ತ್ರಿಗರ್ತಏಕಪಾತ್ ಕ್ಷುದ್ರಾಮವಲಾಸ್ವಸ್ತವಾಸಿನಃ ||೫೬||
ಅಬಲಾಃ ಪ್ರಖಲಾಃ ಶಾಕಾಃ ಕ್ಷೇಮಧೂರ್ತಯಏವ ಚ |
ದಶಧಾನಾಗಾವಸನ್ಯದಣ್ಡಾಹನ್ಯಸನಾಸ್ತಥಾ ||೫೭||
ಧಾನದಾಃ ಸರಕಾಶ್ಚೈವ ವಾಟಧಾನಾಸ್ತಥೈವ ಚ |
ಅನ್ತರದ್ವೀಪಗಾನ್ಧಾರಾಃ ತಥಾವನ್ತಿಸುರಾಸ್ತಥಾ ||೫೮||
ಅಥ ತಕ್ಷಶಿಲಾ ನಾಮ ತತೋ ವೀಲವಗೋಧನೀ ||
ಪುಷ್ಕರಾವರ್ತದೇಶಸ್ಯ ಯಶೋಽವತಿ ಮಹೀ ತತಃ ||೫೯||
ತತೋ ನಾಭಿಮತಿರ್ಭೂಮಿಃ ತಿಕ್ಷುಕಾಲವರಾಸ್ತಥಾ |
ಕಾಹಕಂ ನಗರಂ ಚೈವ ಸುರಭೂತಿಪುರಂ ತಥಾ ||೬೦||
ತಥೈವ ರತಿಕಾದರ್ಶಾಃ ಅನ್ತರಾದರ್ಶಏವ ಚ |
ತತಃ ಪಿಙ್ಗಳಪಾಣ್ಡ್ವ್ಯೇ ಯಾಮುನೇ ಯಾತುಧಾನಕಾಃ ||೬೧||
ಖಾನಪಾನಾಙ್ಗನಾಹೇಮತಾಳಾಃ ಸ್ವಸ್ವಮುಖಾಸ್ತಥಾ |
ಹಿಮವಾನ್ ವಸುಮಾನ್ ಕ್ರೌಞ್ಚಃ ಕೈಲಾಸಾವಿತ್ಯಗಾಸ್ತಥಾ ||೬೨||

ರವಿರುವ ಸಣ್ಣ ಸಣ್ಣ ಗುಡ್ಡಗಳಲ್ಲಿ ವಾಸಮಾಡುವ ಜನಗಳು ಎರಡುಕಡೆಗೂ ಬಂದಿದ್ದರು. ಮತ್ತು, ಮದ್ರ ವಾರೇವ ಯೌಧೇಯ ಮಾಳವ ಶೂರಸೇನ—ಈ ದೇಶದವರೆಲ್ಲರೂ ಕ್ಷತ್ರಿಯರೆಂದು ತಿಳಿಯಬೇಕು. ಆಮೇಲೆ, ಅರ್ಜುನಾತನೀಯ ತ್ರಿಗರ್ತ ಏಕಪಾದ ಕ್ಷುದ್ರ ಮವಲ ಸ್ವಸ್ತವಾಸಿ ಅಬಲ ಪ್ರಖಲ ಶಾಕ ಕ್ಷೇಮಧೂರ್ತಿ ದಶಧಾನ ಗಾವಸನ್ಯ ದಂಡಾ ಹನ್ಯಸನ ಧಾಸದ ಸರಕ ವಾಟಧಾನ ಅಂತರದ್ವೀಪ ಗಾಂಧಾರ ಅವಂತಿಸುರ—ಎಂಬ ದೇಶ ಗಳಿರುವುವು. ಬಳಿಕ, ತಕ್ಷಶಿಲೆಯೆಂಬ ಪಟ್ಟಣವಿರುವುದು. ಆಮೇಲೆ, ವೀಲವ ಗೋಧನಿ ಎಂಬ ದೇಶಗಳಿರುವುವು. ಅಲ್ಲಿಂದ ಮುಂದಕ್ಕೆ, ಪುಷ್ಕರಾವರ್ತವೆಂಬ ದೇಶದ ಯಶಸ್ಸನ್ನು ಅಲ್ಲಿನ ಭೂಮಿಯು ಕಾಪಾಡಿಕೊಂಡಿರುವುದು. ಅಲ್ಲಿಂದ ಆಚೆಗೆ, ನಾಭಿಮತಿಯೆಂಬ ಭೂಭಾಗವಿರುವುದು ; ಅಲ್ಲಿ ತಿಕ್ಷುಕ ಲವರ ಎಂಬವರಿರುವರು. ಆಮೇಲೆ, ಕಾಹಕವೆಂಬ ನಗರವೂ ಸುರಪೂತಿಯೆಂಬ ನಗರವೂ ಇರುವುವು. ಮತ್ತು, ರತಿಕಾದರ್ಶ ಅಂತರಾದರ್ಶ ಎಂಬ ದೇಶಗಳೂ, ಅಲ್ಲಿಂದಾಚೆಗೆ ಪಿಂಗಳ ಪಾಂಡವ್ಯ ಯಾಮುನೇಯ ಯಾತುಧಾನಕ ಖಾನಪ ನಾಂಗನ ಹೇಮತಾಳ ಸ್ವಮುಖ—ಎಂಬ ದೇಶಗಳೂ ಇರುವುವು. ಇವುಗಳಲ್ಲಿ ಹಿಮವಾನ್ ವಸುಮಾನ್ ಕ್ರೌಂಚ ಕೈಲಾಸ—ಎಂಬ ಈ ಪರ್ವತಗಳು ಮುಖ್ಯಗಳೆಂದು ತಿಳಿಯಬೇಕು. ಇಲ್ಲಿರತಕ್ಕವರೆಲ್ಲರೂ ಆ ಪದ್ಮರಾಜನ ಪ್ರತಿಪಕ್ಷದಲ್ಲಿ ಸಹಾಯಾರ್ಥವಾಗಿ ಬಂದಿದ್ದರು ||೫೪—೬೨||

ತತೋಽಜನಪದಾ ಭೂಮಿಃ ಅಶೀತಿಶತಯೋಜನಾ ।
ಅಥ ಪ್ರಾಗುತ್ತರಸ್ಯಾಂ ತು ಕ್ರಮಾಜ್ಜನಪದಾಞ್ಛೃಣು ॥೬೩॥
ಕಾಲುತಾಬ್ರಹ್ಮಪುತ್ರಾಶ್ಚ ಕುಣಿದಾಃ ಖದಿನಾಸ್ತಥಾ ।
ಮಾಳವಾರನ್ಧ್ರರಾಜ್ಯಾಶ್ಚ ವನಾರಾಷ್ಟ್ರಾಸ್ತಥೈವ ಚ ॥೬೪॥
ಕೇಡವಸ್ತ್ರಾಃ ಸಿಂಹಪುತ್ರಾಃ ತಥಾ ವಾಮನತಾಂ ಗತಾಃ ।
ಸಾವಾಕಚಾಪಲವಹಾಃ ಕಾಮಿರಾದರದಾಸ್ತಥಾ ॥೬೫॥
ಅಭಿಸಾಸದಜಾರ್ವಾಕಾಃ ಪಲೋಲಕುವಿಕೌತುಕಾಃ ।
ಕಿರಾತಾಯಾಮುಪಾತಾಶ್ಚ ದೀನಾಃ ಸ್ವರ್ಣಮಹೀ ತತಃ ॥೬೬॥

ದೇವಸ್ಥಲೋಪವನಭೂಸ್ತದನೂದಿತಶ್ರೀಃ
ವಿಶ್ವಾವಸೋಸ್ತದನು ಮನ್ದಿರಮುತ್ತಮಂ ಚ ।
ಕೈಲಾಸಭೂಸ್ತದನು ಮಞ್ಜುವನಶ್ಚ ಶೈಲಃ
ವಿದ್ಯಾಧರಾಮರವಿಮಾನಸಮಾನಭೂಮಿಃ ॥೬೭॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಜನಪದವರ್ಣನಂ ನಾಮ
ಷಟ್ತ್ರಿಂಶಃ ಸರ್ಗಃ.

ಅಯ್ಯಾ! ರಾಮ! ಅಲ್ಲಿಂದಾಚೆ ಇರುವ ಭೂಮಿಯಲ್ಲಿ ದೇಶವಿಲ್ಲ. ಆಮೇಲೆ, ಈಶಾನ್ಯದಿಕ್ಕಿನಲ್ಲಿರುವ ದೇಶಗಳನ್ನು ಕ್ರಮವಾಗಿ ಕೇಳುವವನಾಗು ॥೬೩॥

ಕಾಲುತ ಬ್ರಹ್ಮಪುತ್ರ ಕುಣಿದ ಖದಿನ ಮಾಳವ ರಂಧ್ರರಾಜ್ಯ ವನರಾಷ್ಟ್ರ ಕೇಡವಸ್ತ್ರ ಸಿಂಹಪುತ್ರ—ಮತ್ತು ಕುಳ್ಳರಾಗಿರುವ—ಸಾವಕ ಚಾಪಲವಹ ಕಾಮಿರ ದರದ ಅಭಿಸಾಸದ ಜಾರ್ವಾಕ ಪಲೋಲಕು ವಿಕೌತುಕ ಕಿರಾತ ಯಾಮುಪಾತ ದೀನ—ಈ ದೇಶಗಳಿರುವುವು. ಅಲ್ಲಿಂದ ಆಚೆಗೆ ಸುವರ್ಣಮಯವಾದ ಭೂಮಿಯಿರುವುದು ॥೬೪-೬೬॥

ಅಲ್ಲಿಂದ ಆಚೆಗೆ, ಕಾಂತಿಮಯವಾಗಿರುವ ಸ್ವರ್ಗದ ಉಪವನ ಭೂಮಿಯಿರುವುದು. ಆಮೇಲೆ, ವಿಶ್ವಾವಸುವಿನ ಉತ್ತಮವಾದ ಗೃಹವಿರುವುದು, ಅಲ್ಲಿಂದ ಮುಂದಕ್ಕೆ, ಕೈಲಾಸಪರ್ವತ ಭೂಮಿಯೂ ಮಂಜುವನವೆಂಬ ಪರ್ವತವೂ ಇರುವುವು. ಇದರ ಭೂಮಿಯು, ದೇವ ವಿದ್ಯಾಧರರ ವಿಮಾನಗಳಿಗೆ ಸಮಾನವಾಗಿರುವುದು. ಇಂತಹ ಪ್ರದೇಶಗಳಲ್ಲಿರತಕ್ಕವರೆಲ್ಲರೂ, ಆ ಪದ್ಮರಾಜನ ಪ್ರತಿಪಕ್ಷದಲ್ಲಿ ಸಹಾಯಾರ್ಥವಾಗಿ ಬಂದಿದ್ದರು ॥೬೭॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಜನಪದವರ್ಣನವೆಂಬ
ಮೂವತ್ತಾರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಸಪ್ತತ್ರಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ರಣೇ ರಭಸನಿಲ್ಡೂನನರವಾರಣದಾರುಣೇ ।
ಅಹಂಪೂರ್ವಮಹಂಪೂರ್ವಂ ಇತಿ ಬೃನ್ದಾನುಪಾತಿನಿ ॥೧॥
ಏತೇ ಚಾನ್ಯೇ ಚ ಬಹವಃ ತತ್ರ ಭಸ್ಮತ್ವಮಾಗತಾಃ ।
ಪ್ರವಿಶನ್ತಃ ಪ್ರಯತ್ನೇನ ಶಲಭಾಇವ ಪಾವಕೇ ॥೨॥
ಅತಾನ್ಯೇ ಮಧ್ಯದೇಶೀಯಾಃ ಜನಾನೋದಾಹೃತಾಮಯಾ ।
ತಾನಿಮಾನ್ ಶೃಣು ವಕ್ಷ್ಯಾಮಿ ಪಕ್ಷಾನ್ ಲೀಲಾಮಹೀಭೃತಃ॥೩॥
ತದ್ದೇಹಿಕಾಃ ಶೂರಸೇನಾಃ ಗುಡಾಅಶ್ವಘನಾಯಕಾಃ ।
ಉತ್ತಮಜ್ಯೋತಿಭದ್ರಾಣಿ ಮದಮಧ್ಯಮಕಾದಯಃ ॥೪॥

ಉತ್ಪತ್ತಿಪ್ರಕರಣದಲ್ಲಿ ಮೂವತ್ತೇಳನೆಯ ಸರ್ಗವು.

ಕೀರ್ತ್ಯನ್ತೇ ಮಧ್ಯದೇಶೀಯಾಃ ಜನಾಜನಪದಾಖ್ಯಯಾ ।
ತಥಾ ಜನಪದಾನಾಂ ಚ ದ್ವನ್ದ್ವಯುದ್ಧಜಯಾಜಯಾಃ ॥

ಆಯಾ ದೇಶಗಳ ನಾಮಗ್ರಹಣಪೂರ್ವಕವಾಗಿ ಮಧ್ಯದೇಶದ ಜನರುಗಳೂ, ಮತ್ತು ಆಯಾ ದೇಶಗಳಿಗೆ ಉಂಟಾದ ದ್ವಂದ್ವಯುದ್ಧಗಳೂ, ಜಯಾಪಜಯಗಳೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು :—

ಅಯ್ಯಾ! ರಾಮ ! ಆಗ, ಮನುಷ್ಯರೂ ಆನೆಗಳೂ ಕತ್ತರಿಸಲ್ಪಟ್ಟು ಬಹುಕ್ರೂರವಾಗಿಯೂ, ನಾನು ಮುಂದೆ ನಾನು ಮುಂದೆ ಎಂದು ಗುಂಪುಗುಂಪಾಗಿ ಜನರು ಮುಂದು ಬೀಳುತಿರುವುದಾಗಿಯೂ ಇರುವ ಯುದ್ಧವು ಪ್ರವರ್ತಿಸಲಾಗಿ, ಶಲಭಗಳು (ಮಿಡತೆ) ತಾವಾಗಿ ಪ್ರಯತ್ನದಿಂದ ಅಗ್ನಿಯಲ್ಲಿ ಪ್ರವೇಶಿಸಿ ಭಸ್ಮವಾಗುವಂತೆ, ಈ ಪೂರ್ವೋಕ್ತರಾದವರೂ ಇತರರೂ ಕೂಡ ಅನೇಕವಾಗಿ ಆ ಯುದ್ಧದಲ್ಲಿ ಪ್ರವೇಶಮಾಡಿ ಭಸ್ಮೀಭೂತರಾದರು ॥೧—೨॥

ಇಲ್ಲಿ, ಇನ್ನೂ ಕೆಲವರು ಮಧ್ಯದೇಶೀಯರಾದ ಜನಗಳನ್ನು ಹಿಂದೆ ನಾನು ಹೇಳಲಿಲ್ಲ. ಈಗ ಅವರನ್ನು ಹೇಳುವೆನು ; ಕೇಳು. ಅವರೆಲ್ಲರೂ ಲೀಲಾದೇವಿಯ ಪತಿಯಾದ ಪದ್ಮರಾಜನಿಗೆ ಸಪಕ್ಷರಾದವರು ॥೩॥

ಅವರು ಯಾರೆಂದರೆ :—ತದ್ದೇಹಿಕ ಶೂರಸೇನ ಗುಡ ಅಶ್ವಘನಾಯಕ ಉತ್ತಮಜ್ಯೋತಿಭದ್ರ ಮದಮಧ್ಯಮಿಕ—ಇತ್ಯಾದಿಗಳು. ಮತ್ತು, ಸಾಲೂಕ ಆಕೋದ್ಯಮ ಲಾಸ್ಯ ದೌಜ್ಞೇಯ ಪಿಪ್ಪಲಾಯನ ಮಾಂಡವ್ಯ ಪಾಂಡುನಗರ ಸೌಗ್ರೀವ—ಇತ್ಯಾದಿಗಳೆಲ್ಲರೂ ಅಧಿಕವಾಗಿ ಯುದ್ಧಾಭಿನಿವೇಶವುಳ್ಳವರಾಗಿದ್ದರು. ಪಾರಿಯಾತ್ರ ಕುರಾಷ್ಟ್ರ ಯಾ

ಸಾಲೂಕಾಕೋದ್ಯಮಾಲಾಸ್ಯಾಃ ದೌರ್ಜ್ಞೇಯಾಃ ಪಿಪ್ಪಲಾಯನಾಃ |
ಮಾಣ್ಡವ್ಯಾಃ ಪಾಣ್ಡುನಗರಾಃ ಸೌಗ್ರೀವಾದ್ಯಾಗುರುಗ್ರಹಾಃ ||೫||
ಪಾರಿಯಾತ್ರಾಃ ಕುರಾಷ್ಟ್ರಾಶ್ಚ ಯಾಮುನೋದುಮ್ಬರಾಅಪಿ |
ರಾಜ್ವಾಹ್ವಾಉಜ್ಜಿಹಾನಾಶ್ಚ ಕಾಲಕೋಟಿಕಮಾಥುರಾಃ ||೬||
ಪಾಞ್ಚಾಲಾಧರ್ಮಾರಣ್ಯಾಶ್ಚ ತಥೈವೋತ್ತರದಕ್ಷಿಣಾಃ |
ಪಾಞ್ಚಾಲಕಾಃ ಕುರುಕ್ಷೇತ್ರಾಃ ತಥಾಸಾರಸ್ವತಾಜನಾಃ ||೭||
ಅವನ್ತೀಸ್ಯನ್ದನಶ್ರೇಣೀ ಕುನ್ತಿಪಾಞ್ಚನದೇರಿತೈಃ |
ಸ್ಪನ್ದಮಾನಾ ವಿದ್ರವನ್ತೀ ನಿಪಪಾತ ಮಹಾಭೃಗೌ ||೮||
ಕೋಶಬ್ರಹ್ಮವಸಾನಾಶ್ಚ ಚ್ಛಿನ್ನಾವಸ್ತ್ರವತೀಜನೈಃ |
ಭೂಮೌ ನಿಪತಿತಾಃ ಸನ್ತೋ ಮಿಳಿತಾಮತ್ತವಾರಣೈಃ ||೯||
ಶೂರಾದಾಶಪುರಾಃ ಶಸ್ತ್ರನಿಕೃತ್ತೋದರಕನ್ಧರಾಃ |
ಬಾಣಕ್ಷಿತಿಭಿರಾಕ್ರಮ್ಯ ಯೋಜಿತಾಯೋಜನೇ ಹ್ರದೇ ||೧೦||
ದೀರ್ಣೋದರವಿನಿರ್ಯಾತಸ್ವಾನ್ತ್ರತನ್ತ್ರೀನಿಯನ್ತ್ರಿತಾಃ |
ಶಾನ್ತಿಕಾಃ ಶಾನ್ತಸಞ್ಚಾರಾಃ ಪಿಶಾಚೈಶ್ಚರ್ವಿತಾನಿಶಿ ||೧೧||

ಮುನ ಉದುಂಬರ ರಾಜ್ಯಾಹ್ವ ಉಜ್ಜಿಹಾನ ಕಾಲಕೋಟಿಕ ಮಾಥುರ ಪಾಂಚಾಲ ಧರ್ಮಾರಣ್ಯ ಉತ್ತರಪಾಂಚಾಲಕ ದಕ್ಷಿಣಪಾಂಚಾಲಕ ಉತ್ತರಕುರು ದಕ್ಷಿಣಕುರು ಸಾರಸ್ವತ— ಈ ದೇಶದವರೆಲ್ಲರೂ ಆ ಪದ್ಮರಾಜನ ಪಕ್ಷದಲ್ಲಿ ಸಹಾಯಾರ್ಥವಾಗಿ ಬಂದಿದ್ದರು ||೪-೭||

ಈರೀತಿಯಾಗಿ ಆಯಾದೇಶದವರು ಸೇರಿದಮೇಲೆ, ಅವರವರಿಗೆ ದ್ವಂದ್ವಯುದ್ಧವುಪಕ್ರಮಿಸಿತು. ಆಗ, ಕುಂತಿದೇಶದವರಿಂದಲೂ ಪಂಚನದದೇಶದವರಿಂದಲೂ ದೂರವಾಗಿ ಓಡಿಸಲ್ಪಟ್ಟ ಅವನ್ತಿದೇಶದ ರಥಪಂಕ್ತಿಯು, ಚಂಚಲವಾಗಿ ಓಡಿಹೋಗುತ, ದೊಡ್ಡ ಕಮರಿಯಲ್ಲಿ ಬಿದ್ದಿತು ||೮||

ಕೋಶಬ್ರಹ್ಮವಸಾನರೆಂಬವರು, ವಸ್ತ್ರವತೀದೇಶದ ಜನರಿಂದ ಕತ್ತರಿಸಲ್ಪಟ್ಟವರಾಗಿ, ಭೂಮಿಯಲ್ಲಿ ಬಿದ್ದು, ಸತ್ತುಬಿದ್ದಿದ್ದ ಮದ್ದಾನೆಗಳೊಡನೆ ಸೇರಿಹೋದರು ||೯||

ಬಾಣದೇಶದವರು, ಶಸ್ತ್ರಗಳಿಂದ ಶೂರರಾದ ದಶಪುರದವರ ಹೊಟ್ಟೆಯನ್ನು ಕತ್ತರಿಸಿಬಿಟ್ಟು, ಅವರು ಓಡಿಹೋಗಲಾಗಿ ತಾವೂ ಒಂದು ಗಾವುದದೂರ ಅವರ ಬೆನ್ನಟ್ಟಿಕೊಂಡು ಹೋಗಿ, ಅಲ್ಲಿ ಅವರನ್ನು ಹಿಡಿದು, ಆಕಸ್ಮಿಕವಾಗಿ ಸಿಕ್ಕಿದ ದೊಡ್ಡ ಮಡುವಿನಲ್ಲಿ ತಳ್ಳಿಬಿಟ್ಟರು ||೧೦||

ಶಾಂತಿದೇಶದವರು, ಸೀಳಲ್ಪಟ್ಟ ತಮ್ಮ ಹೊಟ್ಟೆಯಿಂದ ಹೊರಟಿರುವ ನರಗಳೆಂಬ ತಂತಿಗಳಿಂದ ಕಟ್ಟಲ್ಪಟ್ಟವರಾಗಿ, ನಡೆಯಲಾರದೆ, ರಾತ್ರಿಯಹೊತ್ತು ಪಿಶಾಚಗಳಿಂದ ತಿನ್ನಲ್ಪಟ್ಟರು ||೧೧||

ಉದ್ಧ್ರವೈರ್ಭದ್ರಗಿರಿಭಿಃ ಸಙ್ಗ್ರಾಮಾಧ್ವರದೀಕ್ಷಿತೈಃ ।
ಕ್ಷೋಣೀಗರ್ತೇಷು ನಿಕ್ಷಿಪ್ತಾಃ ಮುರಗಾಃ ಕಮಠಾ ಇವ ॥೧೨॥

ಪ್ರದ್ರುತಾವಿದ್ರವದ್ರಕ್ತಾಃ ವಿದ್ರಾವಿತಮಹಾರಯಃ ।
ದಣ್ಡಿಕಾಸ್ತಾನಿಲೋದ್ಧೂತಾಃ ಹೈಹಯೈರ್ಹರಿಣಾ ಇವ ॥೧೩॥

ದನ್ತಿದನ್ತವಿನಿರ್ಭಿನ್ನಾಃ ದರದಾದಳಿತಾರಯಃ ।
ನೀತಾರಕ್ತಮಹಾನದ್ಯಾ ದ್ರುಮಾಣಾಂ ಪಲ್ಲವಾ ಇವ ॥೧೪॥

ನಾರಾಚೈಶ್ಛಿದ್ರಿತಾಶ್ಶೀನಾಃ ಜೀರ್ಣಾ ಜರ್ಜರಜೀವಿತಾಃ ।
ಜಹುರ್ಜಲನಿಧೌ ದೇಹಾನ್ ಭಾರಭೂತಾನಿವ ಸ್ಥಿತಾನ್ ॥೧೫॥

ಕರ್ಣಾಟಸುಭಟೋಡ್ಡೀನಕುನ್ತಕಲಿತಕನ್ಧರಾಃ ।
ಭಗ್ನಾನಲದಶೂರಾಶ್ಚ ತಾರಕಾನಿಕರಾ ಇವ ॥೧೬॥

ಕರೀನ್ದ್ರಮಕರವ್ಯೂಹರಂಹಸ್ಸಂಹತಹೇತಯಃ ।
ಕೇಶಾಕೇಶಿಕೃತಾರಮ್ಭಾಃ ವಿನೇದುರ್ದಾಶಕಾಃ ಶಕಾಃ ॥೧೭॥

ಸಂಗ್ರಾಮವೆಂಬ ಯಜ್ಞದಲ್ಲಿ ದೀಕ್ಷೆಯನ್ನು ಧರಿಸಿರತಕ್ಕವರಾಗಿ ವೇಗಶಾಲಿಗಳಾಗಿರುವ ಭದ್ರಗಿರಿದೇಶದವರು, ಮುರದೇಶದವರನ್ನು ಆಮೆಗಳಂತೆ ಭೂಮಿಯಲ್ಲಿ ಹಳ್ಳದೊಳಗೆ ಹೂತುಬಿಟ್ಟರು ॥೧೨॥

ದಂಡಿಕಾನಗರಿಯ ಜನರು, ದೊಡ್ಡದೊಡ್ಡ ಶತ್ರುಗಳನ್ನೆಲ್ಲ ಓಡಿಸಿದವರಾಗಿ, ಕೊನೆಗೆ ಹೈಹಯದೇಶದವರ ಏಟಿಗೆ ಸಿಕ್ಕಿಬಿದ್ದು, ಮೈಯೆಲ್ಲ ರಕ್ತಸುರಿಯುತ, ಚಂಡಮಾರುತದಿಂದ ಓಡಿಸಲ್ಪಟ್ಟ ಜಿಂಕೆಗಳಂತೆ ಓಡಿಹೋದರು ॥೧೩॥

ಅನೇಕರಾದ ಶತ್ರುಗಳನ್ನು ಸೀಳಿದ ದರದದೇಶದವರು, ಆನೆಗಳ ಕೊಂಬುಗಳಿಂದ ಮರದ ಚಿಗುರುಗಳಂತೆ ಸೀಳಲ್ಪಟ್ಟವರಾಗಿ, ರಕ್ತದ ಮಹಾನದಿಯಿಂದ ದೂರವಾಗಿ ಒಯ್ಯಲ್ಪಟ್ಟವರಾದರು ॥೧೪॥

ಚೀನದೇಶದವರು, ಬಾಣಗಳಿಂದ ಕತ್ತರಿಸಲ್ಪಟ್ಟವರಾಗಿ, ಶಿಥಿಲರಾಗಿ, ಪ್ರಾಣೋತ್ಕ್ರಮಣಸ್ಥಿತಿಯನ್ನು ಹೊಂದಿ, ತಮಗೆ ಭಾರಭೂತಗಳಂತೆ ಇದ್ದ ದೇಹಗಳನ್ನು ಸಮುದ್ರದಲ್ಲಿ ಬಿಟ್ಟುಬಿಟ್ಟರು ॥೧೫॥

ಶ್ರೇಷ್ಠರಾದ ಕರ್ಣಾಟದೇಶದ ಭಟರಿಂದ ಬಿಡಲ್ಪಟ್ಟ ಕುಂತಾಯುಧಗಳಿಂದ ಕತ್ತು ಕತ್ತರಿಸಲ್ಪಟ್ಟ ಶೂರರಾದ ನಲದದೇಶದವರು, ನಕ್ಷತ್ರಸಮೂಹಗಳಂತೆ ಉದುರಿಬೀಳುತಿದ್ದರು ॥೧೬॥

ದಾಶಕರೂ ಶಕರೂ ಕೂಡ, ಪರಸ್ಪರವಾಗಿ ಕೇಶಾಕೇಶಿ (ಜುಟ್ಟುಹಿಡಿದು) ಯುದ್ಧದಲ್ಲಿ ಉಪಕ್ರಮಮಾಡಿದವರಾಗಿ, ಮಕರವ್ಯೂಹಕಟ್ಟಿಕೊಂಡು ನಿಂತಿದ್ದ ಮದ್ದಾನೆಗಗಳ ವೇಗದಿಂದ ಮುರಿಯಲ್ಪಟ್ಟ ಆಯುಧವುಳ್ಳವರಾಗಿ ಕೂಗಿಕೊಳ್ಳುತಿದ್ದರು ॥೧೭॥

ದಶಾರ್ಣಾಃ ಪಾಶನಿರ್ಮುಕ್ತಶೃಙ್ಖಲಾಜಾಲಭೀರವಃ ।
ನಿಲೀನಾರಕ್ತಜಮ್ಬಾಲೇ ವೈತಸಾಸ್ತಿಮಯೋ ಯಥಾ ॥೧೮॥
ಗುರ್ಜರಾನೀಕನಾಶೇನ ಗುರ್ಜರೀಕೇಶಲುಞ್ಚನಮ್ ।
ವಿಹಿತಂ ತಙ್ಗಣೋತ್ತುಙ್ಗನಾಸಿಶಙ್ಕುಶತೇ ರಣೇ ॥೧೯॥
ಸಿಷಿಚುಃ ಶಸ್ತ್ರಕರ್ಣೌಘಾತ್ ಬಿನ್ದುಭ್ಯೋ ನಿಗಡಾಗುಹಾನ್ ।
ಶರಧಾರಾವನಾನೀವ ವೀರಹೇತಿಪ್ರಭಾಮ್ಬುದಾಃ ॥೨೦॥
ಭ್ರುಶುಣ್ಡೀಮಣ್ಡಲೋದ್ದ್ಯೋತಶ್ಯಾಮಾರ್ಕೋತ್ಪಾತಭೀರುಷು ।
ಆಭೀರೇಷ್ವರಯಃ ಪೇತುಃ ಗೋಗಣಾಹರಿತೇಷ್ವಿವ ॥೨೧॥
ಕಾನ್ತಕಾಞ್ಚನಕಾನ್ತಾಸೀತ್ ತಾಮ್ರಸಙ್ಗ್ರಾಮವಾಹಿನೀ ।
ಭುಕ್ತಾ ಗೌಡಭಟೇನಾಙ್ಗ ನಖಕೇಶನಿಕರ್ಷಣೈಃ ॥೨೨॥
ರಣೇ ನಗನಯಾಸಙ್ಖ್ಯಕವಚ್ಚಕ್ರನಿಕೃನ್ತನೈಃ ।
ತಙ್ಗಣಾಃ ಕಣಶಃ ಕೀರ್ಣಾಃ ಕಙ್ಕಗೃಧ್ರೇಷು ಭಾಸಕೈಃ ॥೨೩॥

ದಶಾರ್ಣದೇಶದವರು, ಪಾಶದೇಶದವರಿಂದ ಎಸೆಯಲ್ಪಟ್ಟ ಸಂಕೋಲೆಗಳನ್ನು ಕಂಡು ಹೆದರಿದವರಾಗಿ, ಜೊಂಡುಹುಲ್ಲಿನ ಬುಡದಲ್ಲಿ ಹುಟ್ಟಿದ ಮೀನುಗಳಂತೆ, ರಕ್ತಪಂಕದಲ್ಲಿ ಅಡಗಿಕೊಂಡರು ॥೧೮॥

ತಂಗಣದೇಶದವರು, ಅನೇಕವಾದ ಕತ್ತಿಗಳನ್ನೂ ಶಂಕುಗಳನ್ನೂ ಎಸೆದು, ಯುದ್ಧದಲ್ಲಿ ಗೂರ್ಜರಸೈನ್ಯವನ್ನು ನಾಶಪಡಿಸಿ, ಅವರ ಸ್ತ್ರೀಯರಿಗೆ ಕೇಶಮುಂಡನವುಂಟಾಗುವಂತೆ ಮಾಡಿದರು ॥೧೯॥

ಶಸ್ತ್ರಗಳನ್ನು ಕರ್ಣಗಳಂತೆ ಮೇಲಕ್ಕೆತ್ತಿಕೊಂಡಿರುವುದರಿಂದ ಶಸ್ತ್ರಕರ್ಣರೆಂದು ಪ್ರಸಿದ್ಧಿಯನ್ನು ಪಡೆದಿರುವವರ ಗುಂಪಿನದೆಸೆಯಿಂದ ಹೊರಟುಬಂದ ನಿಗಡದೇಶದವರು, ಗುಹದೇಶದವರನ್ನು ಉದ್ದೇಶಿಸಿ ಶರಪರಂಪರೆಗಳನ್ನು ವರ್ಷಿಸಿದರು. ಇದನ್ನು ನೋಡಿದರೆ, ವೀರರ ಆಯುಧಗಳ ಕಾಂತಿಯೆಂಬ ಮೇಘಗಳು—ತಮ್ಮ ಜಲಬಿಂದುಗಳಿಂದ ವನಗಳನ್ನು ವರ್ಷಿಸುತವೆಯೋ ಎನ್ನುವಹಾಗಿದ್ದಿತು ॥೨೦॥

ಭ್ರುಶುಂಡೀಸಮೂಹದ ಅಧಿಕವಾದ ಕಾಂತಿಯಿಂದ ಕಪ್ಪಾಗಿ ಹೋದ ಸೂರ್ಯನನ್ನು ನೋಡಿ ಉತ್ಪಾತವೆಂದು ಹೆದರಿದ ಆಭೀರದೇಶದವರ ಮೇಲೆ, ಗೋಸಮೂಹಗಳು ಹಸುರು ಭೂಮಿಯಮೇಲೆ ಬೀಳುವಂತೆ, ಅವರ ಶತ್ರುಗಳು ಬಿದ್ದರು ॥೨೧॥

ವತ್ಸ! ರಾಮ! ಉತ್ತಮವಾದ ಸುವರ್ಣಾಭರಣದಿಂದ ಮನೋಹರಳಾಗಿರುವ, ತಾಮ್ರರೆಂಬ ಯವನದೇಶದವರ ಯುದ್ಧಸೇನೆಯೆಂಬ ಯುವತಿಯು, ಗೌಡದೇಶದ ಭಟನೆಂಬ ನಾಯಕನಿಂದ, ನಖಕ್ಷತಗಳಿಂದಲೂ ಕೇಶಕರ್ಷಣಗಳಿಂದಲೂ (೧) ಭುಕ್ತಳಾದಳು॥

ಭಾಸಕದೇಶದವರು, ಪರ್ವತಗಳನ್ನೂ ಕೂಡ ಹೊತ್ತುಕೊಂಡು ಹೋಗುತ ಧ್ವನಿಮಾಡುತಿರುವ ಅನೇಕ ಚಕ್ರಗಳಿಂದ ತಂಗಣದೇಶದವರನ್ನು ಚೂರುಚೂರಾಗಿ ಕತ್ತರಿಸಿ, ಆ ಯುದ್ಧರಂಗದಲ್ಲಿ ಹದ್ದು ಗೂಗೆಗಳಿಗೋಸ್ಕರ ಎರಚಿಬಿಟ್ಟರು ॥೨೩॥

---

(೧) ಅನುಭವಿಸಲ್ಪಟ್ಟಳು ; ಸೇನಾಪರವಾಗಿ—ತಿನ್ನಲ್ಪಟ್ಟಿತು.

ಲಗುಡಾಲೋಡನೋಡ್ಡೀನಂ ಗೌಡಂ ಗುಡುಗುಡಾರವಮ್ |
ಶ್ರುತ್ವಾ ಗಾನ್ಧಾರಗಾವೋಗ್ರೇ ದುದ್ರುವುರ್ದ್ರಾವಿಡಾ ಇವ ||೨೪||
ಆಕಾಶಗಾರ್ಣವಪ್ರಖ್ಯೋ ವಹಚ್ಛಕಕದಮ್ಬಕಃ |
ಅಕರೋತ್ ಪಾರಸೀಕಾನಾಂ ಘನನೈಶತಮೋಭ್ರಮಮ್ ||೨೫||
ಮನ್ದರಾಹನನೋಡ್ಡೀನಸ್ವಚ್ಛಕ್ಷೀರಾರ್ಣವೋದರೇ |
ವನಾನೀವಾಯುಧಾನ್ಯಾಸನ್ ಶತ್ರುಪ್ರಾಲೇಯಸಾನುನಿ ||೨೬||
ಯುದಮ್ಬುದೈರಿವೋಡ್ಡೀನಂ ಶಸ್ತ್ರಬೃನ್ದೈರ್ನಭೋಙ್ಗಣೇ |
ತದ್ದೃಷ್ಟಂ ವೀಚಿವಲನೈಃ ಲೋಲೈಃ ಪ್ಲುತಮಿವಾರ್ಣವೇ ||೨೭||
ಶತಚನ್ದ್ರಂ ಸಿತಚ್ಛತ್ರೈಃ ಶರೈಃ ಶಲಭನಿರ್ಭರಮ್ |
ಶಕ್ತಿಭಿಃ ಕಿಲ ನೀರನ್ಧ್ರಂ ದೃಷ್ಟಮಾಕಾಶಕಾನನಮ್ ||೨೮||
ವೀರಾಸವಸಮಾಕ್ರನ್ದಕಾರಿಣಃ ಕೇಕಯೈಃ ಕೃತಾಃ |
ಕಙ್ಕಾಃ ಕಙ್ಕಕುಲಾಕ್ರಾನ್ತವ್ಯೋಮೋದ್ಧೂಳಿತಮಸ್ತಕಾಃ ||೨೯||

ಗೌಡದೇಶದವರು ದೊಣ್ಣೆಗಳನ್ನು ಬೀಸುವುದರಿಂದ ಉತ್ಪನ್ನವಾದ ಗುಡಗುಡ ಎಂಬ ಶಬ್ದವನ್ನು ಕೇಳಿ, ಗಾಂಧಾರದೇಶದವರೆಂಬ ಹಸುಗಳು, ದ್ರವಿಡದೇಶದವರಂತೆ ಮುಂದೆ ಓಡಿಹೋದುವು ॥೨೪॥

ಪರ್ವತಗಳ ದೆಸೆಯಿಂದ ಇಳಿದು ಬರುತಿರುವ ಕಪ್ಪಾದ ಶಕರ ಸಮೂಹವು, ಆಕಾಶದಲ್ಲಿರುವ ಸಮುದ್ರದಂತೆ ತೋರುತ, ಪಾರಸೀಕರಿಗೆ, ರಾತ್ರಿಯ ಸಾಂದ್ರವಾದ ಅಂಧಕಾರವೆಂಬ ಭ್ರಮೆಯನ್ನುಂಟುಮಾಡಿತು ॥೨೫॥

ಬಳಿಕ ಬೆಳ್ಳಗಿರುವ ಪಾರಶೀಕರಮೇಲೆ ಆ ಶಕರು ಕಪ್ಪಾಗಿರುವ ಆಯುಧಗಳನ್ನು ಬಿಡಲಾಗಿ, ಮಂದರಪರ್ವತವು ಬಿದ್ದಾಗ ನೀರೆಲ್ಲವೂ ಮೇಲಕ್ಕೆದ್ದುಹೋಗಿ ಸ್ವಚ್ಛವಾಗಿರುವ ಕ್ಷೀರಸಮುದ್ರದೊಳಗೆ ಬಿದ್ದ ಆ ಮಂದರಪರ್ವತದ ಕಾಡುಗಳಂತೆಯೂ, ಶುಭ್ರವಾಗಿರುವ ಹಿಮವತ್ಪರ್ವತದ ತೊಪ್ಪಲಿನಲ್ಲಿ ಕಾಡುಗಳು ಹುಟ್ಟಿರುವಂತೆಯೂ ತೋರುತಿದ್ದಿತು ॥೨೬॥

ಆ ಯುದ್ಧರಂಗದಲ್ಲಿ, ಶಸ್ತ್ರಸಮೂಹಗಳು ಮೇಘಗಳಂತೆ ಅಂತರಿಕ್ಷದಲ್ಲಿ ಹಾರಾಡುತಿರುವುದನ್ನು ನೋಡಿದರೆ, ಸಮುದ್ರದಲ್ಲಿ ಅಲೆಗಳು ಒಂದಕ್ಕೊಂದು ಬಡಿದಾಡಿ ಮೇಲಕ್ಕೆ ಹಾರಿಹೋಗುವಂತೆ ಕಾಣುತಿದ್ದಿತು ॥೨೭॥

ಮತ್ತು, ಆಗ ಆಕಾಶವೆಂಬ ಅರಣ್ಯವು, ಶ್ವೇತಚ್ಛತ್ರಸಮುದಾಯಗಳಿಂದ ನೂರಾರುಚಂದ್ರಮಂಡಲವಿರುವಂತೆಯೂ, ಬಾಣಸಮುದಾಯಗಳಿಂದ ಮಿಡತೆಗಳು ತುಂಬಿರುವಂತೆಯೂ, ಶಕ್ತ್ಯಾಯುಧಗಳಿಂದ ಅವಕಾಶರಹಿತವಾಗಿಯೂ ಕಾಣಿಸಿತು ॥೨೮॥

ಕೇಕಯದೇಶದವರು, ವೀರಪಾನಮಾಡುತ ಸಿಂಹನಾದಗೈಯುತಿರುವ ಕಂಕದೇಶದವರನ್ನು, ಹದ್ದುಗಳಿಂದ ವ್ಯಾಪ್ತವಾದ ಆಕಾಶದಲ್ಲಿ— ಧೂಳಿನಂತೆ ಹಾರಾಡುತಿರುವ ತಲೆಯುಳ್ಳವರಾಗುವಂತೆ ಮಾಡಿಬಿಟ್ಟರು ॥೨೯॥

ಕಿರಾತಸೈನ್ಯಕನ್ಯಾನಾಂ ಕಾಮಂ ಕಲಕಲಾರವೈಃ ।
ಅಙ್ಗೈರನಙ್ಗತಾಂ ನೀತ್ವಾ ಭೈರವೈರಿವ ಗರ್ಜಿತಮ್ ॥೩೦॥
ಕಾಶೈಸ್ತದ್ದೇಹಕಾಃ ಕ್ರಾನ್ತಾಃ ಅದೃಶ್ಯೈರ್ಮಾಯಯಾ ಖಗೈಃ ।
ನಿರ್ಧೂತಪಕ್ಷೈಃ ಕ್ಷುಭಿತೈಃ ಪವನೈರಿವ ಪಾಂಸವಃ ॥೩೧॥
ಉನ್ಮತ್ತಾಸ್ಸುವಿನಿರ್ಧೂತಾಃ ತ್ಯಕ್ತಹೇತಿರಣಾಮ್ಬರಾಃ ।
ನಾರ್ಮದಾನರ್ಮನಿರ್ಮಾತೃ ನನೃತುರ್ಜಹಸುರ್ಜಗುಃ ॥೩೨॥
ಪ್ರಕ್ವಣತ್ಕಿಙ್ಕಿಣೀಜಾಲಂ ಶಕ್ತಿವರ್ಷಮುಪಾಗತಮ್ ।
ಸಾಲ್ವಬಾಣಾನಿಲೋದ್ಧೂತಂ ಅಗಮತ್ ಪೃಷದಾಕೃತಿಮ್ ॥೩೩॥
ಶೈಬ್ಯಾಸ್ತು ಖಣ್ಡಿತಾಃ ಕೌನ್ತೈಃ ಭ್ರಮತ್ಕುನ್ತೈರ್ವಿಘಟ್ಟಿತಾಃ ।
ಶವೀಭೂತಾದಿವಂ ನೀತಾಃ ದೃಷ್ಟ್ವಾವಿದ್ಯಾಧರಾಇವ ॥೩೪॥
ಧರಾಧರಣಧರ್ಮಿಣ್ಯಾ ಧೀರಯಾಽಹೀನಸೇನಯಾ ।
ಲುಣ್ಠಿತಾಃ ಪಾಣ್ಡುನಗರಾಃ ಚಲನೋಲ್ಲಾಸಮಾತ್ರತಃ ॥೩೫॥
ತನ್ದೇಹಕಾಃ ಪಾಞ್ಚನದೈಃ ದಳಿತಾಮತ್ತಕಾಶಿಭಿಃ ।

ಅಂಗದೇಶದವರು, ಕಲಕಲಧ್ವನಿಮಾಡುತ, ಕಿರಾತಸೇನೆಗಳೆಂಬ ಕನ್ಯೆಯರಿಗೆ (೧) ಅನಂಗತ್ವವನ್ನುಂಟುಮಾಡಿ, ಭೈರವಮೂರ್ತಿಯಂತೆ ಬಹುಭಯಂಕರವಾಗಿ ಗರ್ಜನೆ ಮಾಡಿದರು ॥೩೦॥

ಕಾಶದೇಶೀಯರು, ಮಾಯೆಯಿಂದ ಪಕ್ಷಿರೂಪಧರಿಸಿದವರಾಗಿ, ಬಹು ಚಂಚಲರಾಗಿ, ರಕ್ಕೆಗಳನ್ನು ಕೊಡುವುತ, ವಾಯುವು ಧೂಳಿಯನ್ನಾಕ್ರಮಿಸುವಂತೆ, ತದ್ದೇಶದವರನ್ನು ಆಕ್ರಮಿಸಿಕೊಂಡರು ॥೩೧॥

ಯುದ್ಧಮತ್ತರಾದ ನರ್ಮದಾತೀರವಾಸಿಗಳು, ಶತ್ರುಗಳನ್ನು ಚೆನ್ನಾಗಿ ಸೋಲಿಸುತ, ಆಯುಧಗಳನ್ನೂ ಕವಚಗಳನ್ನೂ ಬಿಟ್ಟುಬಿಡುತ, ಕೇವಲ ಲೀಲಾಪರರಾಗಿ, ನರ್ತನಮಾಡುತಲೂ ನಗುತಲೂ ಇದ್ದರು ॥೩೨॥

ಕರುಗಂಟೆಗಳನ್ನು ಧ್ವನಿಮಾಡುತ ಬರುತಿರುವ ಶಕ್ತ್ಯಾಯುಧವೃಷ್ಟಿಯು, ಸಾಲ್ವರ ಬಾಣಗಳೆಂಬ ವಾಯುವಿನಿಂದ ಓಡಿಸಲ್ಪಟ್ಟದಾಗಿ, ಜಲಬಿಂದುವಿನಂತೆ ಸೂಕ್ಷ್ಮರೂಪವನು ಧರಿಸಿತು ॥೩೩॥

ಶೈಬ್ಯದೇಶದವರು, ಕುಂತಾಯುಧವನ್ನು ತಿರುಗಿಸುತ್ತಿರುವ ಕುಂತಿದೇಶದವರಿಂದ ಕತ್ತರಿಸಲ್ಪಟ್ಟುಹೊಡೆಯಲ್ಪಟ್ಟವರಾಗಿ, ಶವವಾಗಿ ಬಿದ್ದುಕೊಂಡು, ಒಂದು ಕ್ಷಣದೊಳಗಾಗಿ ಅಂತರಿಕ್ಷವನ್ನು ಹೊಂದಿದವರಾಗಿ, ವಿದ್ಯಾಧರರಂತೆ ಕಾಣಿಸಿಕೊಳ್ಳುತಿದ್ದರು॥

ಯುದ್ಧಭೂಮಿಯನ್ನಾಶ್ರಯಿಸುತಿರುವ ಧೀರವಾದ ಅಹೀನದೇಶದ ಸೈನ್ಯವು, ತನ್ನ ಚಲನಾವಿಲಾಸಮಾತ್ರದಿಂದಲೇ ಪಾಂಡುದೇಶೀಯರನ್ನು ಪರಿಹರಿಸಿಬಿಟ್ಟಿತು ॥೩೫॥

ಕುಂತಾಯುಧ ಆನೆಯುಕೊಂಬು ಮರ-ಇವುಗಳನ್ನು ಹಿಡಿದುಕೊಂಡು ಬಹು ಕ್ರೂ

---

(೧) ದೇಹವಿಲ್ಲದಿರುವಿಕೆ (ಮರಣ), ಕನ್ಯಾಪರವಾಗಿ ಮನ್ಮಥವಿಕಾರ.

ಕುನ್ತದನ್ತದ್ರುಮೋದ್ದಾಮಾಃ ನಗಾಇವ ಮತಙ್ಗಜೈಃ ॥೩೬॥
ಬ್ರಹ್ಮಾವತ್ಸನಕಾನೀಪೈಃ ಚಕ್ರೈಃ ಕೃತ್ತಾಗತಾಮಹೀಮ್ ।
ಸಹಯಾಃ ಕ್ರಕಚೋತ್ಕೃತ್ತಾಃ ವೃಕ್ಷಾಃ ಕುಸುಮಿತಾಇವ ॥೩೭॥
ಶ್ವೇತಕಾಕಾನನಂ ಲೂನಂ ಕುಠಾರೈರ್ಜಠರೇರಿತೈಃ ।
ಏತದ್ದದಾಹ ಪಾರ್ಶ್ವಸ್ಥೋ ಭದ್ರೇಶಃ ಶರವಹ್ನಿನಾ ॥೩೮॥
ಕಾಷ್ಠಯೋಧೇ ನಿರಾಲಾನಂ ಮಗ್ನಾಜೀರ್ಣಮತಙ್ಗಜಾಃ ।
ಲಯಮಾಜಗ್ಮುರಾಯುದ್ಧಂ ಇದ್ಧೇಽಗ್ನಾವಿನ್ಧನಂ ಯಥಾ ॥೩೯॥
ಮಿತ್ರಗರ್ತಾಸ್ತ್ರಿಗರ್ತಾತ್ತಾಃ ಭ್ರಮಿತ್ವೋರ್ಧ್ವಂ ತೃಣೋಪಮಮ್ ।
ವಿವಿಶುರ್ವ್ಯಸ್ತಮೂರ್ಧಾನಃ ಪಾತಾಳಾನ್ತಂ ಪಲಾಯಿತುಮ್ ॥೪೦॥
ಮನ್ದಾನಿಲಚಲಾಮ್ಭೋಧಿಭಾಸುರೇ ಮಾಗಧೇ ಬಲೇ ।
ನಿರ್ಮಗ್ನಾವನಿಲಾಮನ್ದಾಃ ಪಙ್ಕೇ ಜೀರ್ಣಗಜಾಇವ ॥೪೧॥
ಚೇದಯಶ್ಛೇತನಾಂ ಜಹ್ರುಃ ತಙ್ಗಣಾನಾಂ ರಣಾಙ್ಗಣೇ ।
ಪುಷ್ಪಾಣಾಂ ಪಥಿ ಶೀರ್ಣಾನಾಂ ಸೌಕುಮಾರ್ಯಮಿವಾತಪಃ ॥೪೨॥

ರರಾಗಿರುವ ತಂದೇಹಕದೇಶದವರು, ಆನೆಗಳಿಂದ ಮರಗಳು ಸೀಳಲ್ಪಡುದಂತೆ, ಮತ್ತವಾಗಿರುವ ಪಂಚನದದೇಶದವರಿಂದ ಸೀಳಲ್ಪಟ್ಟರು ॥೩೬॥

ಹೂವುಬಿಟ್ಟಿರುವ ಮರಗಳು ಗರಗಸದಿಂದ ಕತ್ತರಿಸಲ್ಪಟ್ಟು ಉರುಳಿ ಬೀಳುವಂತೆ, ಬ್ರಹ್ಮಾವತ್ಸನಕದೇಶದವರು, ನೀಪದೇಶದವರ ಚಕ್ರಗಳಿಂದ ಕತ್ತರಿಸಲ್ಪಟ್ಟವರಾಗಿ, ಕುದುರೆಗಳೊಡನೆ ನೆಲಕ್ಕೆ ಬಿದ್ದುಬಿಟ್ಟರು ॥೩೭॥

ಜಠರದೇಶದವರಿಂದ ಬಿಡಲ್ಪಟ್ಟ ಕೊಡಲಿಗಳಿಂದ, ಶ್ವೇತಕಾಕದೇಶದವರೆಂಬ ಕಾಡು ಕತ್ತರಿಸಲ್ಪಟ್ಟಿತು. ಈ ಜಠರ ದೇಶದ ಸೈನ್ಯವನ್ನು, ಮಗ್ಗುಲಿನಲ್ಲಿದ್ದ ಭದ್ರದೇಶಾಧಿಪತಿಯು, ಬಾಣವೆಂಬ ಅಗ್ನಿಯಿಂದ ಸುಟ್ಟುಬಿಟ್ಟನು॥೩೮॥

ಬಂಧನರಹಿತಗಳಾಗಿ ಜೀರ್ಣವಾಗಿರುವ ಮತಂಗದೇಶದವರೆಂಬ ಆನೆಗಳು, ಕಾಷ್ಠಯೋಧರೆಂಬ ಕೆಸರಿನಲ್ಲಿ ಮುಣುಗಿಕೊಂಡುವುಗಳಾಗಿ, ಉರಿಯುತಿರುವ ಬೆಂಕಿಯಲ್ಲಿ ಸೌದೆಗಳು ಲಯಹೊಂದುವಂತೆ, ಯುದ್ಧಮುಗಿಯುವವರೆಗೂ ಅಡಗಿಹೋದರು ॥೩೯॥

ಮಿತ್ರಗರ್ತದೇಶದವರು, ತ್ರಿಗರ್ತದೇಶದವರಿಂದ ಹಿಡಿಯಲ್ಪಟ್ಟವರಾಗಿ, ಹುಲ್ಲಿನಂತೆ ಅಂತರಿಕ್ಷದಲ್ಲಿ ಭ್ರಮಿಸಿ, ಓಡಿಹೋಗುವುದಕ್ಕೋಸರ, ತಲೆಕೆಳಗಾಗಿ ಪಾತಾಳಪ್ರದೇಶವನ್ನು ಪ್ರವೇಶಿಸಿದರು ॥೪೦॥

ಯುದ್ಧದಲ್ಲಿ ಮಂದರಾದ ವನಿಲದೇಶದವರು, ಮಂದಮಾರುತದಿಂದ ಚಂಚಲವಾದ ಸಮುದ್ರದಂತೆ ಪ್ರಕಾಶಿಸುತಿರುವ ಮಗಧದೇಶೀಯ ಸೈನ್ಯದಲ್ಲಿ, ಕೆಸರಿನಲ್ಲಿ ಮರಿಯಾನೆಗಳು ಮುಣುಗುವಂತೆ—ಮುಣುಗಿಹೋದರು ॥೪೧॥

ಮಾರ್ಗದಲ್ಲಿ ಬಿದ್ದು ಒಣಗುತಿರುವ ಪುಷ್ಪಗಳ ಸೊಬಗನ್ನು ಬಿಸಿಲು ಅಪಹರಿಸುವಂತೆ, ಚೇದಿದೇಶೀಯರು, ಯುದ್ಧಾಂಗಣದಲ್ಲಿ ತಂಗಣದೇಶದವರ ಪ್ರಾಣವನ್ನು ಅಪಹರಿಸಿದರು॥

ಕೌಸಲಾಃ ಪೌರವಾರಾವಂ ಅಸಹನ್ತೋನ್ತಕಾಇವ ।
ತೈರುನ್ಮುಕ್ತಗದಾಪ್ರಾಸಶರಶಕ್ತ್ಯತಿವೃಷ್ಟಯಃ ॥೪೩॥
ಬಭೂವುರ್ಭಲ್ಲಕೃತ್ತಾಙ್ಗ ವಿಸ್ಮಯಾವಿದ್ರುಮದ್ರುಮಾಃ ।
ಇವಾದ್ರೌ ವಿದ್ರವನ್ತ್ಯದ್ರ್ಯಸಾನ್ದ್ರಾಸೃಕ್ಸೂರ್ಯಮೂರ್ತಯಃ ॥೪೪॥
ನಾರಾಚೌಘಮಹಾಹೇತಿಮಾರುತಾಧೂತಮೂರ್ತಯಃ ।
ಬಭೂವುರ್ಭ್ರಮರಾನೀಕಭಾಸುರಾಜಲದಾಇವ ॥೪೫॥
ಶರಧಾರಾಧರಾಮೇಘಾಃ ಶರೋರ್ಣಾಪೂರ್ಣಮೇಷಕಾಃ ।
ಶರಪತ್ರಾವೃತಾವೃಕ್ಷಾಃ ಭ್ರೇಮುಸ್ತದ್ಗರ್ಜನಾಗಜಾಃ ॥೪೬॥
ವನರಾಜ್ಯಜರಾಜೀರ್ಣಾಃ ಕನ್ದಾಕಸ್ಥಲಜನ್ತವಃ ।
ಅತುಟ್ಯ ಪರಮಾಕೃಷ್ಟಾಃ ಪೇಲವಾಇವ ತನ್ತವಃ ॥೪೭॥
ರಥೇಷು ಧ್ವಸ್ತಚಕ್ರೇಷು ನಿಖಾತೇಮುತ್ರ ಮೂರ್ಧಸು ।
ನಿಪೇತುರ್ಜನಸಙ್ಘಾತಾಃ ಮೇಘಾಇವ ವನಾದ್ರಿಷು ॥೪೮॥

ಕೋಸಲದೇಶದವರು, ಪುರುದೇಶದವರ ಸಿಂಹನಾದವನ್ನು ಸಹಿಸಲಾರದವರಾಗಿ, ಕೋಪದಿಂದ ಯಮನಂತೆ ಕಾಣಿಸುತಿದ್ದರು; ಆಗ, ಆ ಪುರುದೇಶೀಯರು, ಅವರಮೇಲೆ ಗದೆ ಪ್ರಾಸ ಬಾಣ ಶಕ್ತಿ – ಇವುಗಳನ್ನು ಅತಿಯಾಗಿ ಮಳೆಗರೆದರು. ಇವರಲ್ಲಿ ಕೆಲವರು ಆ ಪುರುದೇಶದವರ ಭಲ್ಲಾಯುಧಗಳಿಂದ ಮೈಯೆಲ್ಲ ಗಾಯಪಡೆದವರಾಗಿ, ಆಗತಾನೆ ಸುರಿಯುತ ಹಸಿಯಾಗಿರುವ ರಕ್ತದಿಂದ ವ್ಯಾಪ್ತವಾಗಿ ಬಾಲಸೂರ್ಯನಂತೆ ಕಾಣಿಸುತ್ತಿರುವ ಶರೀರವುಳ್ಳವರಾಗಿ, ಆದರೂ ಮನಸ್ಸಿನಲ್ಲಿ ಕಳವಳಪಡದೆ, ಪರ್ವತಗಳಲ್ಲಿ ಚಂಚಲವಾದ ಪ್ರವಾಳವೃಕ್ಷಗಳಂತೆ, ಆ ಯುದ್ಧಾಂಗಣದಲ್ಲಿ ಓಡಾಡುತ್ತಿದ್ದರು ॥೪೩—೪೪॥

ಮತ್ತೆ ಕೆಲವರು, ಬಾಣಸಮೂಹಗಳಿಂದಲೂ ಆಯುಧವಿಶೇಷಗಳಿಂದಲೂ—ವಾಯುವಿನಿಂದಲೋಪಾದಿಯಲ್ಲಿ—ಓಡಿಸಲ್ಪಟ್ಟವರಾಗಿ, ಭ್ರಮರಪಂಕ್ತಿಯಂತೆ ಕಪ್ಪಾಗಿ ಪ್ರಕಾಶಿಸುತಿರುವ ಮೇಘಗಳಹಾಗೆ, ಆ ಯುದ್ಧರಂಗದಲ್ಲಿ ಸಂಚರಿಸುತಿದ್ದರು ॥೪೫॥

ಮತ್ತು, ಆ ಕೋಸಲದೇಶದವರ ಗರ್ಜನೆಯೊಡಗೂಡಿರುವ ಆನೆಗಳು, ಶರಧಾರೆಗಳೆಂಬ ಜಲಧಾರೆಗಳನ್ನು ಧರಿಸಿಕೊಂಡಿರುವ ಮೇಘಗಳಾಗಿಯೂ, ಶರಗಳೆಂಬ ತುಬಟಗಳಿಂದ ಪೂರ್ಣಗಳಾದ ಮೇಷಗಳಾಗಿಯೂ, ಶರಗಳೆಂಬ ಎಲೆಗಳಿಂದ ಆವರಿಸಲ್ಪಟ್ಟ ವೃಕ್ಷಗಳಾಗಿಯೂ, ಆ ಯುದ್ಧರಂಗದಲ್ಲಿ ಭ್ರಮಿಸುತಿದ್ದುವು ॥೪೬॥

ಕಂದಾಕಪ್ರದೇಶದಲ್ಲಿ ಹುಟ್ಟಿದ ಪ್ರಾಣಿಗಳು ವನರಾಜ್ಯದೇಶೀಯರೆಂಬ ಮುಪ್ಪಿನಿಂದ ಶಿಥಿಲಪಡಿಸಲ್ಪಟ್ಟವರಾಗಿ, ಹೆಚ್ಚಾಗಿ ಎಳೆಯಲ್ಪಟ್ಟ ಸಣ್ಣ ದಾರಗಳಂತೆ, ಕಿತ್ತುಹೋದರು ॥೪೭॥

ಆಗ, ರಥಗಳ ಚಕ್ರಗಳು ಹಳ್ಳಗಳಲ್ಲಿ ಸಿಕ್ಕಿಕೊಂಡು ಚೂರ್ಣಗಳಾಗಲಾಗಿ, ಮೇಘಗಳು ವನಪರ್ವತಗಳಮೇಲೆ ಬೀಳುವಂತೆ, ಶತ್ರುಸೇನಾಜನಸಮೂಹಗಳು ಪ್ರಹರಣಾಶಕ್ತಿಯಿಂದ ಈ ರಥಗಳ ಮೇಲುಗಡೆ ಬಿದ್ದುವು ॥೪೮॥

ಸಾಲತಾಲವನಂ ಪ್ರಾಪ್ಯ ಜನತಾವಲನಂ ವನಮ್ |
ಭುಜಾವಕರ್ತನಂ ಚಾಸೀತ್ ಉತ್ತಾಳಂ ಸ್ಥಾಣುಕಾನನಮ್ ||೪೯||
ನನರ್ದುರ್ನನ್ದನೋದ್ಯಾನಸುನ್ದರ್ಯೋ ಮತ್ತಯೌವನಾಃ |
ವನೋಪವನದೇಶೇಷು ಮೇರೋರ್ವೀರವರಾಶ್ರಿತಾಃ ||೫೦||
ತಾವತ್ ತಾರಾರವಂ ರೇಜೇ ಸೈನ್ಯಕಾನನಮುತ್ತಮಮ್ |
ಯಾವನ್ನ ಪರಪಕ್ಷೇಣ ಪ್ರಾಪ್ತಂ ಕಲ್ಪಾಸಿಲಾರ್ಚಿಷಾ ||೫೧||
ಛಿನ್ನಾಃ ಪಿಶಾಚಸಂಯುಕ್ತಾಃ ಭೂತಾಪಹೃತಹೇತಯಃ |
ಪಾತಯಿತ್ವಾ ಯಯುಃ ಕರ್ಣಾನ್ ದಶಾರ್ಣಾಸ್ತರ್ಣಕಾ ಇವ ||೫೨||
ಜಹುರ್ಭಗ್ನೇಶ್ವರಾಃ ಕಾನ್ತಿಂ ತಾಞ್ಜಿಗೀಷವನೌಜಸಾ |
ಕಾಶಯಃ ಕಮಲಾನೀವ ಶುಷ್ಕಸ್ರೋತಸ್ವಿನೌಜಸಾ ||೫೩||
ತುಷಾಕಾಮೇಖಲೈಃ ಕೀರ್ಣಾಃ ಶರಶಕ್ತ್ಯಸಿಮುದ್ಗರೈಃ |
ವಿದ್ರುತಾನರಕೈಃ ಕ್ಷಿಪ್ತಾಃ ಕಟಕಚ್ಛಲನಾ ಅಪಿ ||೫೪||

ಎರಡು ಸೈನ್ಯದ ಜನಗಳೂ ಸೇರಿರತಕ್ಕ ಯುದ್ಧರಂಗದಲ್ಲಿ, ಆ ಸೈನಿಕರಿಂದ ಆಯುಧವಾಗಿ ಬಿಡಲ್ಪಟ್ಟ ಸಾಲವೃಕ್ಷಗಳೂ ತಾಳವೃಕ್ಷಗಳೂ ಗುಂಪುಗುಂಪಾಗಿ ಬಂದುವು; ಆಗ ಅಲ್ಲಿ ಸಾಲವೃಕ್ಷಗಳಿಗೆ ಕೊಂಬೆ ಮುರಿದುಹೋದಕಾರಣ —ಅವುಗಳು ದೊಡ್ಡ ತಾಳವೃಕ್ಷಗಳಾಗಿಯೂ, ತಾಳವೃಕ್ಷಗಳಿಗೆ ತುದಿ ಮುರಿದಕಾರಣ—ಅವು ಮೋಟುಮರಗಳಾಗಿಯೂ ಆದುವು ||೪೯||

ಇಂಥ ಯುದ್ಧಸಮಯದಲ್ಲಿ, ಯೌವನಮತ್ತರಾಗಿರುವ ನಂದನವನದ ಅಪ್ಸರಸ್ತ್ರೀಯರು, ಮಹಾವೀರರುಗಳನ್ನು ಆಶ್ರಯಿಸಿದವರಾಗಿ, ಮೇರುಪರ್ವತದ ವನಗಳಲ್ಲಿಯೂ ಉಪವನಗಳಲ್ಲಿಯೂ ವಿಲಾಸದಿಂದ ಕೂಗುತ್ತಿದ್ದರು ||೫೦||

ಮತ್ತು ಸೈನ್ಯವೆಂಬ ಅರಣ್ಯವು, ಶತ್ರುಪಕ್ಷ ಸೈನ್ಯವೆಂಬ ಪ್ರಳಯಾಗ್ನಿಜ್ವಾಲೆಯಿಂದ ಎದುವರೆಗೆ ಆವರಿಸಲ್ಪಡಲಿಲ್ಲವೋ, ಅದುವರೆಗೂ ಗಟ್ಟಿಯಾಗಿ ಸಿಂಹನಾದಮಾಡುತ ಪ್ರಕಾಶಿಸಿತು ||೫೧||

ದಶಾರ್ಣದೇಶದವರು, ಶತ್ರುಗಳಿಂದ ಹೊಡೆಯಲ್ಪಟ್ಟವರಾಗಿ, ಪಿಶಾಚಾವಿಷ್ಟರಾಗಿ, ಭೂತಗಳಿಂದ ಅಪಹರಿಸಲ್ಪಟ್ಟ ಆಯುಧವುಳ್ಳವರಾಗಿ, ಮಕ್ಕಳುಗಳಂತೆ ಓಡುತ, ಮಧ್ಯದಲ್ಲಿ ಸಿಕ್ಕಿದ ಕರ್ಣದೇಶೀಯರನ್ನು ಬೀಳಿಸಿಬಿಟ್ಟು ಓಡಿಹೋದರು ||೫೨||

ಕಾಶೀದೇಶದವರು, ತಾಂಜಿಗೀಷವನದೇಶದವರ ಕಾಂತಿಯಿಂದ ಭಗ್ನನಾದ ತಮ್ಮ ಸ್ವಾಮಿಯುಳ್ಳವರಾಗಿ, ನದೀಪ್ರವಾಹವನ್ನೆಲ್ಲ ಒಣಗಿಸುತ್ತಿರುವ ಸೂರ್ಯತೇಜಸ್ಸಿನಿಂದ ಭಗ್ನಗಳಾದ ಕಮಲಗಳಂತೆ, ಕಾಂತಿಹೀನರಾದರು ||೫೩||

ಕಟಕಚ್ಛಲನದೇಶೀಯರು, ತುಷಾಕಾಮೇಖಲನದೇಶೀಯರಿಂದ ಶರ ಶಕ್ತಿ ಅಸಿ ಮುದ್ಗರ—ಇವುಗಳಿಂದ ಹೊಡೆಯಲ್ಪಟ್ಟವರಾಗಿಯೂ, ನರಕದೇಶೀಯರಿಂದ ಬೆನ್ನಟ್ಟಲ್ಪಟ್ಟವರಾಗಿಯೂ ಓಡಿಹೋದರು ||೫೪||

ಕೌನ್ತಕ್ಷೇತ್ರಾಃ ಪ್ರಸ್ಥವಾಸ್ಯೈಃ ಸ್ಥಿತ್ವಾಯೋಧಿಭಿರಾವೃತಾಃ ।
ಗುಣಾಇವ ಖಲಾಕ್ರಾನ್ತಾಃ ಗತಾವ್ಯಕ್ತಮಶಕ್ತತಾಮ್ ॥೫೫॥
ದ್ವಿಪಯೋ ಬಾಹುಧಾನಾನಾಂ ಕ್ಷಣೇನಾದಾಯ ಮಸ್ತಕಮ್ ॥
ಭಲ್ಲೈಃ ಪಲಾಯ್ಯಾಶು ಗತಾಃ ವಿಲೂನಕಮಲಾಇವ ॥೫೬॥
ಮಿಥಃ ಸಾರಸ್ವತಾನೀತ್ವಾ ಆದಿನಾನ್ತಂ ಕೃತಾಜಯಃ ।
ಪಣ್ಡಿತಾಇವ ವಾದೇಷು ನೋದ್ವಿಗ್ನಾನ ಪರಾಜಿತಾಃ ॥೫೭॥
ಖರ್ವಗಾಃ ಖದಿತಾಃ ಕ್ಷುದ್ರಾಃ ಯಾತುಧಾನೈಃ ಪರಾವೃತಾಃ ।
ತೇಜಃ ಪರಮವಾಜಗ್ಮುಃ ಶಾನ್ತಾಗ್ನಯಇವೇನ್ಧನೈಃ ॥೫೮॥
ಕಿಮುದಾಖ್ಯಾಯತಏತತ್ ಜಿಹ್ವಾಸಿಚಯೈಃ ಕಿಲಾಲಮಾಕುಲಿತಃ ।
ವಾಸುಕಿರಪಿ ವರ್ಣಯಿತುಂ ನ ಸಮರ್ಥೋ ರಣವರಂ ರಾಮ ॥೫೯॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಜನಪದಯುದ್ಧವರ್ಣನಂ.
ನಾಮ ಸಪ್ತತ್ರಿಂಶಃ ಸರ್ಗಃ.

ಕುಂತಕ್ಷೇತ್ರದವರು, ತಮ್ಮ ಸ್ಥಳದಲ್ಲಿಯೇ ನಿಂತು ಯುದ್ಧಮಾಡತಕ್ಕವರಾದ ಪ್ರಸ್ಥದೇಶವಾಸಿಗಳಿಂದ ಆವರಿಸಲ್ಪಟ್ಟವರಾಗಿ, ನೀಚರಿಂದ ಆಕ್ರಮಿಸಲ್ಪಟ್ಟ ಸದ್ಗುಣಗಳಂತೆ, ಸಂಪೂರ್ಣವಾಗಿ ಅಸಮರ್ಥರಾದರು ॥೫೫॥

ದ್ವೀಪಿಗಳೆಂಬವರು, ಬಾಹುಧಾನರೆಂಬವರ ತಲೆಗಳನ್ನು ಭಲ್ಲಾಯುಧಗಳಿಂದ ಕ್ಷಣದೊಳಗಾಗಿ ಕತ್ತರಿಸಿ ತೆಗೆದುಕೊಂಡು, ಕಮಲವನ್ನು ಕೊಯ್ದು ಹಿಡಿದುಕೊಂಡಿರುವವರಂತೆ, ಬೇಗನೆ ಓಡಿಹೋದರು ॥೫೬॥

ಸರಸ್ವತೀದೇಶೋತ್ಪನ್ನರಾದವರು,ಪರಸ್ಪರ ಯುದ್ಧಮಾಡಿದವರಾಗಿ, ಸಂಜೆಯುವರೆಗೂ ಕಾಲಕಳೆದು, ವಾದಗಳಲ್ಲಿ ಕುಳಿತಿರುವ ಪಂಡಿತರಂತೆ, ಹೆದರದೆಯೂ ಪರಾಜಿತರಾಗದೆಯೂ ಇದ್ದರು ॥೫೭॥

ಅಲ್ಪರಾದ ಖರ್ವಗರು, ಓಡಿಹೋದವರಾಗಿ, ಮಧ್ಯದಲ್ಲಿ ಸಹಾಯಭೂತರಾಗಿ ಬಂದ ರಾಕ್ಷಸರಿಂದ ಹಿಂದಿರುಗಿಸಲ್ಪಟ್ಟು, ಆರಿಹೋಗಿದ್ದ ಅಗ್ನಿಗಳು ಸೌದೆಗಳಿಂದ ತೇಜಸ್ಸನ್ನು ಹೊಂದುವಂತೆ, ಅಧಿಕವಾದ ತೇಜಸ್ಸನ್ನು ಹೊಂದಿದರು ॥೫೮॥

ಅಯ್ಯಾ ! ರಾಮ ! ಹೆಚ್ಚೇಕೆ ? ಎರಡುಸಹಸ್ರನಾಲಿಗೆಗಳಿಂದ ಪರಿಪೂರ್ಣನಾದ ಆ ಆದಿಶೇಷನೂ ಕೂಡ, ಬಹು ಶ್ರೇಷ್ಠವಾದ ಆ ಯುದ್ಧವನ್ನು ವರ್ಣಿಸುವುದಕ್ಕೆ ಸಮರ್ಥನಾಗಲಾರನು. ಹೀಗಿರುವಾಗ, ನಾನು ಇದನ್ನು ಎಷ್ಟು ಹೇಳುವುದಕ್ಕಾಗುದೀತು ? ॥೫೯॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಜನಪದಯುದ್ಧವೆಂಬ
ಮೂವತ್ತೇಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟತ್ರಿಂಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಏವಮುತ್ಕ್ಯಾಕುಲೇ ಯುದ್ಧೇ ಸಾಸ್ಫೋಟಭಯಸಙ್ಕುಲೇ |
ಆದಿತ್ಯೇ ತಮಸಾ ವೃದ್ಧೇ ಚಟತ್ಕಠಿನಕಙ್ಕಟೇ||೧||
ವಹತ್ಯಮೂತ್ರಪತನ್ತೀಷು ಪತನ್ತೀಷ್ವಶ್ಮವೃಷ್ಟಿಷು |
ನದೀಷು ಕ್ಷೇಪಣಾಚಾಷ್ಟಸು ವರಕೇಷ್ವಬ್ಜಪಙ್ಕ್ತಿಷು ||೨||
ಮಿಥಃಫಲಾಗ್ರಕಾಟೋತ್ಥವಹ್ನಿಶೀಕರಿಣೀಷು ಚ |
ಆಯಾನ್ತೀಷು ಪ್ರಯಾನ್ತೀಷು ದೂರಂ ಶರನದೀಷು ಚ ||೩||
ವಹಲ್ಲೂನಶಿರಃಪದ್ಮಚಕ್ರಾವರ್ತೈಸ್ತರಙ್ಗಿತೈಃ |
ಖಾರ್ಣವೇ ಪೂರಿತೇ ಹೇತಿಬೃನ್ದಮನ್ದಾಕಿನೀಗಣೈಃ ||೪||

ಉತ್ಪತ್ತಿಪ್ರಕರಣದಲ್ಲಿ ಮೂವತ್ತೆಂಟನೆಯ ಸರ್ಗವು.

ದಿನಾನ್ತೇ ಸೇನಯೋರ್ಯುದ್ಧಾತ್ ಪರಾವೃತ್ತೇ ರಣಕ್ಷಿತಿಃ |
ಪಿಶಾಚಭೀಮಬೀಭತ್ಸಾ ವಿಸ್ತರೇಣಾತ್ರ ವರ್ಣ್ಯತೇ ||

ಸಾಯಂಕಾಲದಲ್ಲಿ ಎರಡುಸೇನೆಗಳೂ ಯುದ್ಧವನ್ನು ಬಿಟ್ಟಿರುವುದರಿಂದ, ಆ ಕಾಲದಲ್ಲಿ ಪಿಶಾಚಾದಿಗಳಿಂದ ಭಯಂಕರವಾಗಿಯೂ ಜುಗುಪ್ಸಾವಹವಾಗಿಯೂ ಇರುವ ರಣಭೂಮಿಯು, ಈ ಸರ್ಗದಲ್ಲಿ ವಿಸ್ತಾರವಾಗಿ ವರ್ಣಿಸಲ್ಪಡುವುದು ||

ಮತ್ತೆ ಶ್ರೀ ವಸಿಷ್ಠರು ಹೇಳಲುಪಕ್ರಮಿಸಿದರು:—

ವತ್ಸ! ರಾಮ! ಈರೀತಿಯಾಗಿ ಅತಿವ್ಯಾಕುಲವಾದ ಯುದ್ಧವು ಆ ಸ್ಫೋಟಧ್ವನಿಯುಕ್ತವಾಗಿ ಭಯವ್ಯಾಪ್ತವಾಗಿರಲಾಗಿ, ಸೂರ್ಯನು ಅಂಧಕಾರದಿಂದ ಪರಿಪೂರ್ಣನಾಗಿರಲಾಗಿ, ರಕ್ತಸುರಿಯುವಿಕೆಯನ್ನು ಮುಚ್ಚುತ್ತಿರುವ ಕಠಿನವಾದ ಕವಚವು ಆ ರಕ್ತದಿಂದ ನೆನೆದು ನೀರು ಸುರಿಸುತ್ತಿರಲಾಗಿ, ಕವಣೆಕಲ್ಲು ತುಂಬಿ ಶುಭ್ರವಾಗಿರುವ ನದಿಗಳೊಳಗೆ ಶಿಲಾವರ್ಷಗಳು ಹಾರುತಲೂ ಬೀಳುತ್ತಲೂ ಇರಲಾಗಿ, ಕಮಲಸಮೂಹಗಳು ಮುಕುಳಿತಗಳಾಗುತಿರಲಾಗಿ, ಅಲಗುಗಳು ಒಂದಕ್ಕೊಂದು ಬಡಿದಾಡುವುದರಿಂದ ಉತ್ಪನ್ನವಾದ ಬೆಂಕಿಯ ಕಿಡಿಗಳೊಡನೆ ಕೂಡಿಕೊಂಡಿರುವ ಬಾಣನದಿಗಳು—ದೂರವಾಗಿ ಬರುತಲೂ ಹೋಗುತಲೂ ಇರಲಾಗಿ, ಕತ್ತರಿಸಲ್ಪಟ್ಟ ತಲೆಗಳೆಂಬ ಕಮಲಗಳನ್ನು ಹೊತ್ತುಕೊಂಡು ಹೋಗುತ—ಚಕ್ರಗಳೆಂಬ ಸುಳಿಯುಳ್ಳದಾಗಿ—ತರಂಗತರಂಗವಾಗಿ ಪ್ರವಹಿಸುತಿರುವ—ಆಯುಧಸಮೂಹವೆಂಬ ಗಂಗಾಪ್ರವಾಹಸಮೂಹಗಳಿಂದ ಆಕಾಶವೆಂಬ ಸಮುದ್ರವು ಪರಿ

ಸವಿಶಾರಣರಣತ್ಕ್ವಾಣಶಸ್ತ್ರಪೂರಘನೈರ್ಘನೈಃ ।
ಸನ್ದೇಹಾನ್ತೇಷು ಸಿದ್ಧೇಷು ಕಪಿಕಚ್ಛವ್ಯಥಾಪ್ರದೈಃ ॥೫॥
ಅಷ್ಟಭಾಗದಶಾಶೇಷಪ್ರತಾಪಮಧುರಾಕೃತಿ ।
ಶಸ್ತ್ರಘಾತೌಜಸಾ ವೀರಃ ಇವಾಹಸ್ತನುತಾಂ ಯಯೌ ॥೬॥
ಶ್ರಾನ್ತಾಶ್ವೇಭಾಃ ಪ್ರಭಗ್ನಾಶ್ಚ ಹೇತಿಸಙ್ಘಾತದೀಪ್ತಯಃ ।
ದಿವಸೇನ ಸಮಂ ಸೇನಾಃ ಯಯುರ್ಮನ್ದಪ್ರತಾಪತಾಮ್ ॥೭॥
ಅಥ ಸೇನಾಧಿನಾಥಾಭ್ಯಾಂ ವಿಚಾರ್ಯ ಸಹ ಮನ್ತ್ರಿಭಿಃ ।
ದೂತಾಃ ಪರಸ್ಪರಂ ವೃತ್ತಾಃ ಯುದ್ಧಂ ಸಂಹ್ರಿಯತಾಮಿತಿ ॥೮॥
ತತ್ರ ಶ್ರಮವಶಾನ್ಮನ್ದಯನ್ತ್ರಶಸ್ತ್ರಪರಾಕ್ರಮೈಃ ।
ರಣಸಂಹರಣಂ ಕಾಲೇ ಸರ್ವೈರೇವೋರರೀಕೃತಮ್ ॥೯॥
ತತೋ ಮಹಾರಥೋತ್ತುಙ್ಗಕೇತುಪ್ರಾನ್ತಕೃತಾಸ್ಪದಮ್ ।
ಬಲಯೋರಾರುರೋಹೈಕಏಕೋ ಯೋಧೋ ಧ್ರುವೋ ಯಥಾ ॥೧೦॥

ಪೂರ್ಣವಾಗುತಿರಲಾಗಿ, ವಾಯುವಿನಂತೆ ಧ್ವನಿಮಾಡುತಿರುವ ಶಸ್ತ್ರಗಳಿಂದ ಪರಿಪೂರ್ಣಗಳಾಗಿ —(೧) ಕಪಿಗಳಿಗೆ ಕಚ್ಛಭಾಗದಲ್ಲಿ ಆರುಣ್ಯವನ್ನು ಹೆಚ್ಚಿಸಿ—ಕಾಮವ್ಯಥೆಯುಂಟುಮಾಡುವ ವರ್ಷಾಕಾಲಿಕಮೇಘಗಳನ್ನು ನೋಡಿ—ಸಿದ್ಧರುಪ್ರಳಯುವುಂಟಾಗುತದೆಯೆಂದು ಸಂದೇಹಪಡುತಿರಲಾಗಿ, ಆ ಹಗಲು, ಎಂಟನೆಯೊಂದುಭಾಗಮಾತ್ರವೇ ಅವಶೇಷವಾಗಿರುವ ಸೂರ್ಯತಾಪವುಳ್ಳದಾಗಿ, ನೋಡುವುದಕ್ಕೆ ಮನೋಹರವಾಗಿ, ಶಸ್ತ್ರಪ್ರಹಾರದಿಂದುಂಟಾದ ಆರುಣ್ಯದೊಡಗೂಡಿದ ವೀರನಂತೆ, ಕೃಶವಾಗುತಬಂದಿತು (ಸೂರ್ಯಾಸ್ತವಾಗುತಬಂದಿತು) ॥೧—೬॥

ಆಗ, ಸಮಸ್ತಸೇನೆಗಳನೂ, ಆಯಾಸಪಟ್ಟ ಆನೆಕುದುರೆಗಳುಳ್ಳವಾಗಿ, ಆಯುಧಸಮೂಹಗಳ ಕಾಂತಿಯುಳ್ಳವಾಗಿ ಆ ಹಗಲಿನೊಡನೆ ತಾವು(೨)ಮಂದಪ್ರತಾಪಗಳಾದುವು॥

ಬಳಿಕ, ಎರಡುಕಡೆಯ ಸೇನಾಪತಿಗಳೂ ಮಂತ್ರಿಗಳೊಡನೆ ಆಲೋಚನೆಮಾಡಿ, ಪರಸ್ಪರ ಯುದ್ಧವು ನಿಲ್ಲಿಸಲ್ಪಡಲೆಂದು ದೂತರನ್ನು ಪ್ರೇರಿಸಿದರು ॥೮॥

ಆ ಸಮಯದಲ್ಲಿ, ಸರ್ವರಿಗೂ ಆಯಾಸಹೆಚ್ಚಿ ಶತಘ್ನಿ (ಫಿರಂಗಿ) ಮುಂತಾದ ಯಂತ್ರಗಳೂ ಶಸ್ತ್ರಗಳೂ ಪರಾಕ್ರಮವೂ ಮಂದವಾಗಿದ್ದಕಾರಣ, ಯುದ್ಧೋಪಸಂಹರಣವನ್ನು ಸರ್ವರೂ ಅಂಗೀಕರಿಸಿದರು ॥೯॥

ಅನಂತರದಲ್ಲಿ ಎರಡು ಸೈನ್ಯಗಳಲ್ಲಿಯೂ ಒಬ್ಬೊಬ್ಬವೀರನು, ದೊಡ್ಡದಾದ ರಥದ ಧ್ವಜಾಗ್ರದಲ್ಲಿ ಏರ್ಪಡಿಸಿದ್ದ ಒಂದು ಸ್ಥಳವನ್ನು ಹತ್ತಿದನು; ಆಗ ಅವನು, ಧ್ರುವನಕ್ಷತ್ರದಂತೆ ಕಾಣಿಸುತ್ತಿದ್ದನು ॥೧೦॥

---

(೧) ವರ್ಷಾಕಾಲದಲ್ಲಿ ಕಪಿಗಳಿಗೆ ಕಚ್ಛಭಾಗವು ಕೆಂಪಾಗುವುದೆಂದೂ, ಕಾಮೋದ್ರೇಕವಾಗುವುದೆಂದೂ ಪ್ರಸಿದ್ಧಿಯುಂಟು.

(೨) ಹಗಲು ಸೂರ್ಯತಾಪ ಕಡಮೆಯಾದುದಾಯ್ತು. ಸೇನೆಗಳು ಪರಾಕ್ರಮ ಕಡಮೆಯಾದುವುಗಳಾದುವು.

ಸೋಂಶುಕಂ ಭ್ರಾಮಯಾಮಾಸ ಸರ್ವದಿಙ್ಮಣ್ಡಲೇ ಸಿತಮ್ ।
ಶ್ಯಾಮೇವ ದೀರ್ಘಂ ಶುಭ್ರಾಂಶುಂ ಯುದ್ಧಂ ಸಂಹ್ರಿಯತಾಮಿತಿ ॥೧೧॥
ತತೋ ದುನ್ದುಭಯೋ ನೇದುಃ ಪ್ರತಿಧ್ವನಿತದಿಙ್ಮುಖಾಃ ।
ಮಹಾಪ್ರಳಯಸಂಶಾನ್ತೌ ಪುಷ್ಕರಾವರ್ತಕಾ ಇವ ॥೧೨॥
ಶರಾದಿಹೇತಿಸರಿತೋ ವಿಸ್ತೀರ್ಣೇ ಗಗನೇ ಸ್ಥಿತಾಃ।
ಪ್ರವೃತ್ತಾಃ ಸುಖಮಾಗನ್ತುಂ ಸರಸಃ ಸರಿತೋ ಯಥಾ ॥೧೩॥
ಯೋಧಯೋರ್ದ್ರುಮಸಞ್ಚಾರಃ ತನುತಾಮಾಯಯೌ ಶನೈಃ ।
ಭೂಕಮ್ಪಾನ್ತೇ ವನಸ್ಪನ್ದಃ ಇವಾಭ್ರಾನ್ತ ಇವಾರ್ಣವಃ ॥೧೪॥
ವಿನಿರ್ಗನ್ತುಂ ಪ್ರವವೃತೇ ರಣಾದಥ ಬಲದ್ವಯಮ್ ।
ವಾರಿಪೂರಶ್ಚತುರ್ದಿಕ್ಷು ಪ್ರಳಯೈಕಾರ್ಣವಾದಿವ ॥೧೫॥
ಉತ್ಕ್ಷಿಪ್ತಮನ್ದರಕ್ಷೀರಸಮುದ್ರವದನಾಕುಲಮ್ ।
ಸೈನ್ಯಂ ಪ್ರಶಾಮ್ಯದಾವರ್ತಂ ಶನೈಃ ಸಾಮ್ಯಮುಪಾಯಯೌ ॥೧೬॥
ಕ್ರಮೇಣಾಸೀನ್ಮುಹೂರ್ತೇನ ವಿಕಟೋದರಭೀಷಣಮ್ ।

ಅವನು, ಯುದ್ಧವನ್ನು ನಿಲ್ಲಿಸಿರೆಂದು ಹೇಳುತ, ಅದನ್ನು ಸೂಚಿಸುವುದಕ್ಕೋಸ್ಕರ, ರಾತ್ರಿಯು ದೀರ್ಘವಾದ ಕಿರಣವುಳ್ಳ ಚಂದ್ರನನ್ನು ತಿರುಗಿಸುವಂತೆ, ಶುಭ್ರವಾದ ವಸ್ತ್ರವನ್ನು ಸಕಲದಿಕ್ಕಿನಲ್ಲಿಯೂ ತಿರುಗಿಸಿದನು ॥೧೧॥

ಅನಂತರ, ಮಹಾಪ್ರಳಯಾಂತದಲ್ಲಿ ಪುಷ್ಕರಾವರ್ತಕಮೇಘಗಳಂತೆ, ರಣದುಂದುಭಿಗಳು, ದಿಙ್ಮುಖಗಳಲ್ಲಿ ಪ್ರತಿಧ್ವನಿಯುಂಟಾಗುವಹಾಗೆ ಶಬ್ದಮಾಡಿದುವು ॥೧೨॥

ಆಗ, ಅದುವರೆಗೂ ಬರುವುದಕ್ಕವಕಾಶವಿಲ್ಲದೆ ವಿಶಾಲವಾದ ಅಂತರಿಕ್ಷದಲ್ಲಿಯೇ ನಿಂತಿದ್ದ ಬಾಣಾದ್ಯಾಯುಧಗಳೆಂಬ ನದಿಗಳು, ಮಾನಸ ಸರಸ್ಸಿನ ದೆಸೆಯಿಂದ ಸರಯು ಮುಂತಾದ ನದಿಗಳು ಹೊರಡುವಂತೆ, ಆ ಆಕಾಶದ ದೆಸೆಯಿಂದ ತಡೆಯಿಲ್ಲದೆ ಸುಖವಾಗಿ ಬರಲುಪಕ್ರಮಿಸಿದುವು ॥೧೩॥

ಭೂಕಂಪವಾಗಿ ನಿಂತಬಳಿಕ ಅರಣ್ಯಗಳ ಚಲನೆಯು ಕಡಮೆಯಾಗುವಂತೆಯೂ, ವರ್ಷಾಕಾಲ ಕಳೆದಬಳಿಕ ಸಮುದ್ರವು ಶಾಂತವಾಗುತ ಬರುವಂತೆಯೂ, ಆ ಯುದ್ಧರಂಗದಲ್ಲಿ ಎರಡುಕಡೆಯ ಸೈನಿಕರೂ ಆಯುಧರೂಪವಾಗಿ ತಿರಗಿಸುತಿದ್ದ ವೃಕ್ಷಗಳ ಸಂಚಾರವು ಮೆಲ್ಲಗೆ ಕಡಮೆಯಾಗುತ ಬಂದಿತು ॥೧೪॥

ಬಳಿಕ, ಪ್ರಳಯಕಾಲದಲ್ಲಾಗಿದ್ದ ಏಕಾರ್ಣವದ ದೆಸೆಯಿಂದ ಜಲಪ್ರವಾಹವು ನಾಲ್ಕುಕಡೆಗೂ ಹೊರಡುವಂತೆ, ಎರಡು ಸೈನ್ಯವೂ ಯುದ್ಧರಂಗದ ದೆಸೆಯಿಂದ ತಮ್ಮತಮ್ಮ ಸ್ಥಳಕ್ಕೆ ಹೊರಡಲುಪಕ್ರಮಿಸಿತು ॥೧೫॥

ಮಥನಕಾಲದಲ್ಲಿ ಮಂದರಪರ್ವತವನ್ನು ಮೇಲಕ್ಕೆತ್ತಿದಬಳಿಕ ಕ್ಷೀರಸಮುದ್ರವು ಸುಳಿಗಳಿಲ್ಲದೆ ಸಮಾಧಾನಹೊಂದಿದಂತೆ, ಆ ಸೈನ್ಯವು ಕಳವಳವಿಲ್ಲದೆ ಮೆಲ್ಲಗೆ ಸಮಾಧಾನಸ್ಥಿತಿಯನ್ನು ಹೊಂದಿತು ॥೧೬॥

ಕ್ರಮೇಣ, ಒಂದು ಮುಹೂರ್ತದೊಳಗಾಗಿ, ಆ ಯುದ್ಧರಂಗವು, ಅಗಸ್ತ್ಯರಿಂದ

ಅಗಸ್ತ್ಯಪೀತಾರ್ಣವವತ್ ಶೂನ್ಯಮೇವ ರಣಾಙ್ಗಣಮ್ ||೧೭||
ಶರಸನ್ತತಿಸಮ್ಪೂರ್ಣಂ ವಹದ್ರಕ್ತನದಾಕುಲಮ್ |
ಪರಿಕೂಜನಝಙ್ಕಾರಪೂರ್ಣಝಿಲ್ಲಿವನೋಪಮಮ್ ||೧೮||
ವಹದ್ರಕ್ತಸರಿತ್ಸ್ರೋತಸ್ತರಙ್ಗರವಘರ್ಘರಮ್ |
ಸಾಕ್ರನ್ದಾರ್ಧಮೃತಾಹೂತಸಪ್ರಾಣವ್ಯಗ್ರಮಾನವಮ್ ||೧೯||
ಮೃತಾರ್ಧಮೃತದೇಹೌಘಸ್ರುತಾಸೃಕ್ಪ್ಲುತನಿರ್ಝರಮ್ |
ಸಜೀವನರಪೃಷ್ಠಸ್ಥಶವಸ್ಪನ್ದನಭ್ರಾನ್ತಿದಮ್ ||೨೦||
ಕರೀನ್ದ್ರಶವರಾಶ್ಯಗ್ರವಿಶ್ರಾನ್ತಾಮ್ಬುದಖಣ್ಡಕಮ್ |
ವಿಶೀರ್ಣರಥಸಙ್ಘಾತಂ ವಾತಚ್ಛಿನ್ನಮಹಾವನಮ್ ||೨೧||
ವಹದ್ರಕ್ತನದೀರಂಹಃಪ್ರೋಹ್ಯಮಾನಹಯದ್ವಿಪಮ್ |
ಶರಶಕ್ತ್ಯೃಷ್ಟಿಮುಸಲಗದಾಪ್ರಾಸಾಸಿಸಙ್ಕುಲಮ್ ||೨೨||
ಪರ್ಯಾಣಾವನಸನ್ನಾಹಕವಚಾವೃತಭೂತಲಮ್ |

ಪಾನಮಾಡಲ್ಪಟ್ಟ ಸಮುದ್ರದಂತೆ, ಶೂನ್ಯವಾಗಿಯೂ ವಿಶಾಲವಾದ ಮಧ್ಯಭಾಗದಲ್ಲಿ ಬಹು ಭಯಂಕರವಾಗಿಯೂ ಆಯ್ತು ||೧೭||

ಮತ್ತು, ಆಗ ಆ ಯುದ್ಧರಂಗಸ್ಥಳವು ಹೇಗಿದ್ದಿತೆಂದರೆ:—ಅಲ್ಲಿ ಶವ ಸಮೂಹಗಳು ತುಂಬಿದ್ದುವು; ರಕ್ತನದಿಗಳು ಪ್ರವಹಿಸುತ ವ್ಯಾಕುಲವಾಗಿದ್ದುವು; ಬೊಯ್ಯೆಂದು ಧ್ವನಿ ತುಂಬಿಕೊಂಡಿರುವುದರಿಂದ, ಝಿಲ್ಲಿಕಾಪಕ್ಷಿಧ್ವನಿಪರಿಪೂರ್ಣವಾದ ವನದಂತೆ ಕಾಣುತ್ತಿದ್ದಿತು ||೧೮||

ರಕ್ತನದಿಗಳು ಪ್ರವಹಿಸುತಿರುವುದರಿಂದ, ಅವುಗಳ ತೆರೆಗಳು ಅಲ್ಲಿ ಘರ್ಘರ ಧ್ವನಿ ಮಾಡುತಿದ್ದುವು. ಅರ್ಧಪ್ರಾಣ ಹೋಗಿರತಕ್ಕವರು ಕಿರಿಚಿಕೊಳ್ಳುತ, ಸಂಪೂರ್ಣಪ್ರಾಣರಾಗಿದ್ದವರನ್ನು ಕೂಗುತಿದ್ದರು; ಅವರು ಅದನ್ನು ಕಂಡು ತುಂಬಾ ಕಳವಳಪಡುತಿದ್ದರು ||

ಅರ್ಧಮೃತರಾದವರ ದೇಹಗಳಿಂದಲೂ ಪೂರ್ಣಮೃತರಾದವರ ದೇಹಗಳಿಂದಲೂ ಸುರಿದಿರುವ ರಕ್ತಪ್ರವಾಹದಿಂದ, ಅಲ್ಲಿ ಮೊದಲಿದ್ದ ಗಿರಿನದೀ ಪ್ರವಾಹವೆಲ್ಲವೂ ತೇಲಿಹೋಯ್ತು; ಸಜೀವರಾಗಿ ಬಿದ್ದಿರುವ ಮನುಷ್ಯರ ಮೇಲುಗಡೆ ಬಿದ್ದಿರುವ ಶವಗಳು—ಅವರ ಶ್ವಾಸೋಚ್ಛ್ವಾಸಕಾಲದಲ್ಲಿ ಅಲುಗುವಕಾರಣ, ಇವುಗಳೂ ಬದುಕಿರುವುವೆಂಬ ಭ್ರಾಂತಿಯುಂಟಾಗುತಿದ್ದಿತು ||೨೦||

ದೊಡ್ಡದೊಡ ಆನೆಗಳ ಶವಗಳು ರಾಶಿರಾಶಿಯಾಗಿ ಬಿದ್ದಿರಲು, ಅವುಗಳ ತುದಿಯಲ್ಲಿ ಸಣ್ಣಸಣ್ಣ ಮೇಘಗಳು ಬಂದು ಕುಳಿತುಕೊಂಡು ವಿಶ್ರಮಿಸಿಕೊಳ್ಳುತಿದ್ದುವು. ರಥ ಸಮೂಹಗಳು ಚೂರುಚೂರಾಗಿ ಬಿದ್ದಿರುವ ಕಾರಣ, ವಾಯುವೇಗದಿಂದ ಮುರಿದುಬಿದ್ದಿರುವ ದೊಡ್ಡ ಅರಣ್ಯಕ್ಕೆ ಸಮಾನವಾಗಿದ್ದಿತು ||೨೧||

ಅಲ್ಲಿ ಹರಿಯುತಿರುವ ರಕ್ತನದೀಪ್ರವಾಹವೇಗದಿಂದ, ಆನೆಗಳೂ ಕುದುರೆಗಳೂ ಕೊಚ್ಚಿಕೊಂಡುಹೋಗಲ್ಪಡುತಿದ್ದುವು. ಶರ ಶಕ್ತಿ ಋಷ್ಟಿ ಮುಸಲ ಗದೆ ಪ್ರಾಸ ಅಸಿ ಇವುಗಳು, ಅಲ್ಲಿ ಪರಿಪೂರ್ಣವಾಗಿ ಬಿದ್ದಿದ್ದುವು ||೨೨||

ಆನೆಕುದುರೆಗಳಮೇಲೆ ಹಾಕಿದ್ದ ಜೀನುಗಳೂ, ದೇಹವನ್ನು ಕಾಪಾಡತಕ್ಕ ಚರ್ಮ

ಕೇತುಚಾಮರಪಟ್ಟೌಘಗುಪ್ತಶವಶರೀರಕಮ್ ॥೨೩॥
ಫಣಾಸ್ಫುಟಕತೂಣೀರಕುಞ್ಜಕೂಜತ್ಸಮೀರಣಮ್ ।
ಶವರಾಶಿಪಲಾಲೌಘತಲ್ಪಸುಪ್ತಪಿಶಾಚಕಮ್ ॥೨೪॥
ಮೌಳಿಹಾರಾಙ್ಗದದ್ಯೋತಶಕ್ರಚಾಪವನಾವೃತಮ್ ।
ಶ್ವಸೃಗಾಲಕರಾಕೃಷ್ಟಸಾನ್ದ್ರಾನ್ತ್ರದೀರ್ಘರಜ್ಜುಕಮ್ ॥೨೫॥
ರಕ್ತಕ್ಷೇತ್ರಕ್ವಣತ್ಕಿಞ್ಚಿಚ್ಛೇಷಜೀವನೃದನ್ತುರಮ್ ।
ರಕ್ತಕರ್ದಮನಿರ್ಮಗ್ನಸಜೀವನರದರ್ದುರಮ್ ॥೨೬॥
ನರಾಙ್ಗಕವಚಪ್ರಖ್ಯನಿರ್ಗತಾಕ್ಷಿಶತೋಚ್ಚಯಮ್ ।
ಮಹದ್ಭುಜೋರುಕಾಷ್ಠೌಘಘೋರರಕ್ತಸರಿಚ್ಛತಮ್ ॥೨೭॥
ಸಾಕ್ರನ್ದಬನ್ಧುವಳಿತಮೃತಾರ್ಧಮೃತಮಾನವಮ್ ।
ಶರಾಯುಧರಥಾಶ್ವೇಭಪರ್ಯಾಣಾಸಂವರಾನ್ತರಮ್ ॥೨೮॥
ನೃತ್ಯತ್ಕಬನ್ಧದೋರ್ದಣ್ಡಮಣ್ಡಲಾನಮಿತಾಮ್ಬರಮ್ ।

ಮುಂತಾದ ಪದಾರ್ಥಗಳೂ, ನಡುಕಟ್ಟುಗಳೂ, ಕವಚಗಳೂ ಕೂಡ, ಆ ರಣಭೂಮಿಯು ನ್ನೆಲ್ಲ ಮುಚ್ಚಿಬಿಟ್ಟಿದ್ದುವು. ಧ್ವಜಪಟಗಳೂ ಚಾಮರಗಳೂ ಕೂಡ, ಗುಂಪುಗುಂಪಾಗಿ ಬಿದ್ದು, ಅಲ್ಲಿದ್ದ ಹೆಣಗಳನ್ನು ಮರೆಮಾಡಿದ್ದುವು ॥೨೩॥

ಹಾವಿನ ಹೆಡೆಯಂತೆ ಮೇಲ್ಮುಖವಾಗಿ ಬಿದ್ದಿರುವ—ಸ್ವಲ್ಪ ಹರಿದುಹೋದ—ಬತ್ತಳಿಕೆಗಳಲ್ಲಿ, ಗಾಳಿಯು ನುಗ್ಗಿ ಸ್ವಲ್ಪವಾಗಿ ಧ್ವನಿಮಾಡುತಿದ್ದಿತು. ಅಲ್ಲಿ ಹೆಣದ ರಾಸಿಗಳೆಂಬ ಹೊಟ್ಟಿನ ಗುಡ್ಡೆಯಮೇಲೆ, ಪಿಶಾಚಗಳು ಮಲಗಿ ನಿದ್ರೆಮಾಡುತಿದ್ದುವು ॥೨೪॥

ಕಿರೀಟ ಹಾರ ಅಂಗದ—ಇವುಗಳ ಕಾಂತಿಗಳೆಂಬ ಇಂದ್ರಚಾಪ (ಕಾಮನಬಿಲ್ಲು) ಸಮೂಹವು, ಆ ಪ್ರದೇಶವನ್ನೆಲ್ಲ ವ್ಯಾಪಿಸಿಕೊಂಡಿದ್ದಿತು. ನರಗಳು, ಒಟ್ಟಾಗಿ ಹೆಣೆದುಕೊಂಡು, ಉದ್ದವಾಗಿ ಹಗ್ಗದಂತೆ ಬಿದ್ದಿದ್ದುವು; ಅವುಗಳನ್ನು, ನಾಯಿಗಳೂ ನರಿಗಳೂ ಎಳೆದುಕೊಂಡು ಹೋಗುತಿದ್ದುವು ॥೨೫॥

ರಕ್ತಪರಿಪೂರಿತವಾದ ಪ್ರದೇಶದಲ್ಲಿ, ಅಲ್ಪಶೇಷಪ್ರಾಣವುಳ್ಳವರಾಗಿ ಬಿದ್ದಿರುವ ಮನುಷ್ಯರು, ಸ್ವಲ್ಪ ಶಬ್ದಮಾಡುತ, ಆ ಸ್ಥಳವನ್ನು ತುಂಬಿಬಿಟ್ಟಿದ್ದರು. ರಕ್ತದ ಕೆಸರಿನಲ್ಲಿ, ಸಜೀವರಾದ ಮನುಷ್ಯರೆಂಬ ಕಪ್ಪೆಗಳು ಮುಣುಗಿಹೋಗಿದ್ದುವು ॥೨೬॥

ನೂರಾರು ಕಣ್ಣುಗಳು ಕಳಚಿಬಿದ್ದು, ಅಲ್ಲಿರುವ ತಲೆಬುರುಡೆಗಳಿಗೆ ಕವಚಹಾಕಿದಂತೆ ಮಾಡುತಿದ್ದುವು. ಘೋರವಾಗಿರುವ ನೂರಾರು ರಕ್ತನದೀಪ್ರವಾಹಗಳಲ್ಲಿ, ತೋಳು ತೊಡೆಗಳೆಂಬ ದೊಡ್ಡದೊಡ್ಡ ಕಟ್ಟಿಗೆಗಳು, ಗುಂಪುಗುಂಪಾಗಿ ತೇಲುತಿದ್ದುವು ॥೨೭॥

ತೀರ ಸತ್ತವರಾಗಿಯೂ ಅರ್ಧ ಸತ್ತವರಾಗಿಯೂ ಅಲ್ಲಿ ಬಿದ್ದಿರುವ ಮನುಷ್ಯರ ಸುತ್ತಲೂ, ಅವರ ಬಂಧುಗಳು ಅಳುತ ಕುಳಿತುಕೊಂಡಿದ್ದರು. ಬಾಣ ಆಯುಧ ರಥ ಅಶ್ವ ಗಜ ಪರ್ಯಾಣ (ಜೀನು)—ಇವುಗಳಿಂದ, ಆ ರಣರಂಗದ ಮಧ್ಯಭಾಗವೆಲ್ಲವೂ ಆಚ್ಛಾದಿತವಾಗಿದ್ದಿತು ॥೨೮॥

ತಲೆಯಿಲ್ಲದ ಮುಂಡಗಳು ಕುಣಿಯುತಿರಲಾಗಿ, ಅವುಗಳ ಎತ್ತರವಾದ ಬಾಹುದಂಡ

ಮದಮೇದೋವಸಾಗನ್ಧಪೀಡಾರ್ದ್ರಘ್ರಾಣಕೋಟರಮ್ ||೨೯||
ಉತ್ತಾಲ್ಯರ್ಧಮೃತೇಭಾಶ್ವಮಾರ್ಯಮಾಣಾಲ್ಪಜೀವಿತಮ್ |
ವಹದ್ರಕ್ತನದೀವೀಚಿಪ್ರಹಾರಹತದುನ್ದುಭಿ ||೩೦||
ಉಹ್ಯಮಾನಮೃತೇಭಾಶ್ವಮಕರಾಸೃಕ್ಸರಿಚ್ಛತಮ್ |
ಮ್ರಿಯಮಾಣನರಾನೀಕಫೂತ್ಕೃತಾಸೃಕ್ಪ್ರಣಾಳಿಕಮ್ ||೩೧||
ಸ್ವಲ್ಪಜೀವಶರಾಪೂರ್ಣಮುಖದೃಕ್ಕ್ಲಾನ್ತಿತಸ್ವನಮ್ |
ಪಿಣ್ಡಭಾರ್ಯಾವಸಾಗನ್ಧವಾತಾನ್ತೋತ್ಪೀತಲೋಹಿತಮ್ ||೩೨||
ಉನ್ಮಾಸಾರ್ಧಮೃತೇಭೇನ್ದ್ರಕರಾಕ್ರಾನ್ತಕಬನ್ಧಕಮ್ |
ನಿರಧಿಷ್ಠಿತಹಸ್ತ್ಯಶ್ವಪಾತಿತೋಚ್ಚಕಬನ್ಧಕಮ್ ||೩೩||
ರುದತ್ಕ್ರನ್ದತ್ಪರಿಭ್ರಷ್ಟಶವಕ್ಷುಬ್ಧಾಸೃಗುದ್ಧತಿ |
ಮೃತಭರ್ತೃಗಳೇ ಶಸ್ತ್ರತ್ಯಕ್ತಪ್ರಾಣಕುಲಾಙ್ಗನಮ್ ||೩೪||

ಗಳಿಂದ ಅಂತರಿಕ್ಷವೇ ಕೆಳಗೆ ಮಾಡಲ್ಪಟ್ಟಿರುವಂತೆ ಕಾಣುತಿದ್ದಿತು. ಮದೋದಕ ಮೇದಸ್ಸು ಕೊಬ್ಬು—ಇವುಗಳ ಗಂಧದಿಂದ, ಅಲ್ಲಿ ಆಗತಾನೆ ಬಿದ್ದಿರುವವರ ಮೂಗುಗಳು ಪೀಡಿಸಲ್ಪಡುತಿದ್ದುವು ||೨೯||

ಅರ್ಧಮೃತವಾಗಿ ಮೇಲ್ಮುಖವಾಗಿ ಬಿದ್ದಿರುವ ಆನೆಕುದುರೆಗಳ ಹಲ್ಲುಗಳ ಏಟಿಗೆ ಸಿಕ್ಕಿ, ಮೊದಲೇ ಅಲ್ಪಾವಶಿಷ್ಟಜೀವರಾಗಿದ್ದವರು, ಈಗ ಪ್ರಾಣಬಿಡುತಿದ್ದರು. ಅಲ್ಲಿ ಹರಿಯುತಿರುವ ರಕ್ತನದೀ ಪ್ರವಾಹದ ಅಲೆಗಳು, ಬಿದ್ದಿರುವ ದುಂದುಭಿಗಳನ್ನು ಹೊಡೆಯುತಿದ್ದುವು ||೩೦||

ಮತ್ತು, ನೂರಾರು ರಕ್ತನದೀಪ್ರವಾಹಗಳಲ್ಲಿ, ಮೃತವಾದ ಗಜಾಶ್ವಗಳೆಂಬ ಮೊಸಳೆಗಳು ಕೊಚ್ಚಿಕೊಂಡು ಹೋಗುತಿದ್ದುವು. ಸಾಯುತಿರುವವರು, ಪ್ರಾಣೋತ್ಕ್ರಮಣ ಕಾಲದಲ್ಲಿ ಬಾಯಿಯಿಂದ ಫೂತ್ಕಾರಮಾಡುತಿದ್ದರೆ, ಆಗ, ರಕ್ತವು ನಲ್ಲಿಯಿಂದ ಹೊರಟಂತೆ ಹೊರಕ್ಕೆ ಹಾರುತಿದ್ದಿತು ||೩೧||

ಮುಖದಲ್ಲಿಯೂ ನೇತ್ರದಲ್ಲಿಯೂ ಬಾಣ ಚುಚಿಕೊಂಡು ಅರ್ಧಜೀವರಾಗಿರತಕ್ಕವರು ಗೋಳಾಡುತಿದ್ದರು. (೧) ಪಿಂಡಭಾರ್ಯಾ ವಸಾ—ಇವುಗಳು ಸೇರಿ ಹೊರಟರುವ ದುರ್ಗಂಧದಿಂದ ಯುಕ್ತವಾದ ರಕ್ತವು, ವಾಯುಸ್ಪರ್ಶದಿಂದ ಘನವಾಗುತಿದ್ದಿತು ||೩೨||

ಅರ್ಧಮೃತವಾಗಿ ಮೂಗುಮೇಲೆಮಾಡಿಕೊಂಡು ಬಿದ್ದಿರುವ ಆನೆಗಳು, ಅಲ್ಲಿ ಓಡಾಡುತಿರುವ ಕಬಂಧ (ತಲೆಯಿಲ್ಲದ ಮುಂಡ) ಗಳನ್ನು, ತಮ್ಮ ಸುಂಡಿಲುಗಳಿಂದ ಹಿಡಿದುಕೊಳ್ಳುತಿದ್ದುವು. ಆನೆಗಳೂ ಕುದುರೆಗಳೂ, ತಮ್ಮ ಮೇಲೆ ಕುಳಿತುಕೊಂಡಿದ್ದ ಮಾವುತರು ಸತ್ತುಬಿದ್ದುಹೋದಕಾರಣ ಸ್ವೇಚ್ಛಾಸಂಚಾರಿಗಳಾಗಿ, ದೊಡ್ಡದೊಡ್ಡ ಕಬಂಧಗಳನ್ನು ಬೀಳಿಸುತಿದ್ದುವು ||೩೩||

ಅಳುತಲೂ ಕಿರಿಚಿಕೊಳ್ಳುತಲೂ ಸತ್ತುಬಿದ್ದವರ ಹೆಣಗಳಿಂದ, ರಕ್ತವು ಮೇಲಕ್ಕೆ ಏರುತಿದ್ದಿತು. ಕುಲಸ್ತ್ರೀಯರು, ಸತ್ತುಬಿದ್ದಿರುವ ತಮ್ಮ ಪತಿಗಳ ಕುತ್ತಿಗೆಯನ್ನು ಕಟ್ಟಿಕೊಂಡು, ಅಲ್ಲಿದ್ದ ಶಸ್ತ್ರಗಳು ಹಠಾತ್ತಾಗಿ ತಗುಲುವುದರಿಂದ ತಮ್ಮ ಪ್ರಾಣಗಳನ್ನೂ ಕಳೆದುಕೊಳ್ಳುತಿದ್ದರು ||೩೪||

---

(೧) ಹೊಟ್ಟೆಯ ಎಡಭಾಗದಲ್ಲಿರುವ ಒಂದು ಮಾಂಸದ ಗಂಟು.

ಸೇನೋತ್ಕ್ರಾನ್ತತತಕ್ಷಿಪ್ರಬಹುಪಾನ್ಥಪರೀಕ್ಷಣಮ್ |
ಶವಹಾರಕರಾಕೃಷ್ಟಸಪ್ರಾಣಾನುಚರಾಕುಲಮ್ ॥೩೫॥
ಕೇಶಶೈವಾಲವಕ್ತ್ರಾಬ್ಜಚಕ್ರಾವರ್ತನದೀಶತಮ್ |
ತರತ್ತುಙ್ಗತರಙ್ಗಾಢ್ಯವಹದ್ರಕ್ತಮಹಾನದಮ್ ॥೩೬॥
ಅಙ್ಗಲಗ್ನಾಯುಧೋದ್ಧಾರವ್ಯಗ್ರಾರ್ಧಮೃತಮಾನವಮ್ |
ವಿದೇಶಮೃತಸಾಕ್ರನ್ದಹುತಾಙ್ಗಗಜವಾಜಿಕಮ್ ॥೩೭॥
ಪ್ರಾಣಾನ್ತಸ್ಮೃತಪುತ್ರೇಷ್ಟಮಾತೃದೇವಪರಾಭಿಧಮ್ |
ಹಾಹಾ ಹೀಹೀತಿ ಕಥಿತಮರ್ಮಚ್ಛೇದನವೇದನಮ್ ॥೩೮॥
ಮ್ರಿಯಮಾಣಮಥೌಜಿಷ್ಠದ್ವಿಷ್ಟಪ್ರಾರಬ್ಧಸಞ್ಚಯಮ್ |
ದನ್ತಿಯುದ್ಧಾಸಮರ್ಥಾಗ್ರಮೃತದೇಹೇಷ್ಟದೈವತಮ್ ॥೩೯॥
ಮ್ರಿಯಮಾಣಮಹಾವಜ್ಞಶೂರಾಶ್ರಿತಪಲಾಯನಮ್ |

ಆ ಕಾಲದಲ್ಲಿ, ಸಂಸ್ಕಾರಮಾಡಬೇಕಾದವರ ಶವಗಳನ್ನು ಹುಡುಕಿ ತೆಗೆದುಕೊಂಡು ಹೋಗುವುದಕ್ಕೋಸ್ಕರ ಸೇನೆಯಿಂದ ಹೊರಟುಬಂದ ಅನೇಕ ಜನಗಳು, ಗುಂಪುಕೂಡಿ, ಬಹು ತ್ವರೆಯಾಗಿ ಮಾರ್ಗದಲ್ಲಿ ಬಂದು, ತಮ್ಮ ಕಡೆಯವರ ಶವಗಳನ್ನು ಪರೀಕ್ಷಿಸುತಿದ್ದರು. ಬಳಿಕ, ಶವಗಳನ್ನು ಹೊತ್ತುಕೊಂಡು ಹೋಗತಕ್ಕವರು, ತ್ವರಾಗೌರವದಿಂದ ಪ್ರಾಣ ಸಹಿತರಾಗಿರುವವರನ್ನು ಕೂಡ ಎಳೆದುಕೊಂಡು ಹೋಗುತಿದ್ದರು ॥೩೫॥

ಕೂದಲೆಂಬ ಪಾಚಿಯೂ ಮುಖವೆಂಬ ಕಮಲವೂ ಚಕ್ರವೆಂಬ ಸುಳಿಯೂ ಉಳ್ಳವುಗಳಾಗಿರುವ ನೂರಾರು ರಕ್ತನದಿಗಳೂ, ದೊಡ್ಡದೊಡ್ಡ ಅಲೆಗಳಿಂದ ಪರಿಪೂರ್ಣವಾಗಿರುವ ರಕ್ತಮಹಾನದಗಳೂ ಪ್ರವಹಿಸುತ್ತಿದ್ದುವು ॥೩೬॥

ಅರ್ಧಮೃತರಾಗಿರುವವರು, ತಮ್ಮ ಮೈಯಲ್ಲಿ ಸಿಕ್ಕಿಕೊಂಡಿರುವ ಶಸ್ತ್ರಾಸ್ತ್ರಗಳನ್ನು ಕಿತ್ತುಹಾಕುವುದರಲ್ಲಿ ಪ್ರಯತ್ನಪಡುತ್ತಿದ್ದರು. ಪರದೇಶೀಯರಾಗಿ ಬಂದು ಯುದ್ಧದಲ್ಲಿ ಸತ್ತವರ ಆಭರಣ ಗಜ ತುರಗಗಳನ್ನು, ಅಲ್ಲಿದ್ದವರು ವ್ಯಸನದಿಂದ ಅಳುತ ಇತರರಿಗೆ ಕೊಟ್ಟುಬಿಡುತ್ತಿದ್ದರು ॥೩೭॥

ಅಲ್ಲಿ ಯುದ್ಧಹತರಾಗಿ ಬಿದ್ದಿರತಕ್ಕವರು, ತಮ್ಮ ಪ್ರಾಣೋತ್ಕ್ರಮಣಕಾಲದಲ್ಲಿ, ಮಕ್ಕಳನ್ನೂ ಇಷ್ಟಮಿತ್ರರನ್ನೂ ತಾಯಿತಂದೆಗಳನ್ನೂ ಇಷ್ಟದೇವತೆಗಳನ್ನೂ ಪರಮಾತ್ಮನನ್ನೂ ಸ್ಮರಿಸುತ, ಆ ಹೆಸರುಗಳನ್ನು ಹೇಳುತಿದ್ದರು; ಮತ್ತು, 'ಹಾಹಾ ಹೀಹೀ' ಇತ್ಯಾದಿ ಧ್ವನಿಗಳಿಂದ, ಮರ್ಮಚ್ಛೇದನೆಯಿಂದುಂಟಾದ ತಮ್ಮ ವೇದನೆಯನ್ನು ತೋರ್ಪಡಿಸುತ್ತಿದ್ದರು॥

ಬಹಳ ಬಲಾಢ್ಯರಾಗಿದ್ದ ಯೋಧರು, ತಮ್ಮ ಪರಾಕ್ರಮವನ್ನು ತೋರಿಸುವುದಕ್ಕವಕಾಶವೇ ಸಿಕ್ಕದೆ, ದೈವಯೋಗದಿಂದ ಅಪಾಯಕ್ಕೆ ಸಿಕ್ಕಿಬಿಟ್ಟು, ಪ್ರಾಣಬಿಡುವಾಗ ತಮ್ಮ ಪ್ರಾಕ್ತನ ದುಷ್ಕರ್ಮಸಮುದಾಯವನ್ನು ನಿಂದಿಸುತಿದ್ದರು. ಗಜಯುದ್ಧಮಾಡತಕ್ಕವರು, ಅದರಲ್ಲಿ ಅಸಮರ್ಥರಾಗಿ, ಮೊದಲೇ ದೇಹತ್ಯಾಗಮಾಡಿದವರಾಗಿ, ತಮ್ಮ ತಮ್ಮ ದೇವತೆಗಳನ್ನು ಪ್ರಾರ್ಥನೆಮಾಡುತ್ತಿದ್ದರು ॥೩೯॥

ಶೌರ್ಯವಿಲ್ಲದವರು, ಶೌರ್ಯದಿಂದ ಯುದ್ಧಮಾಡಿ ಪ್ರಾಣಬಿಡುತ್ತಿರುವವರನ್ನು ನೋಡಿ

ಅಶಙ್ಕಿತಾಸೃಗಾವರ್ತಭೀಮಾಸ್ಪದಗಮೋತ್ಸುಕಮ್ ‖೪೦‖
ಮರ್ಮಚ್ಛೇದಿಶರಾಘಾತವ್ಯಥಾವಿದಿತದುಷ್ಕೃತಿ ।
ಕಬನ್ಧಬನ್ಧಪ್ರಾರಬ್ಧವೇತಾಳವದನಾಕ್ರಮಮ್ ‖೪೧‖
ಉಹ್ಯಮಾನಧ್ವಜಚ್ಛತ್ರಚಾರುಚಾಮರಪಙ್ಕಜಮ್ ।
ಕಿರತ್ಸನ್ಧ್ಯಾರುಣಂ ದಿಕ್ಷು ತೇಜಸ್ಕಂ ರಕ್ತಪಙ್ಕಜಮ್ ‖೪೨‖
ರಥಚಕ್ರಧರಾವರ್ತಂ ರಕ್ತಾರ್ಣವಮಿವಾಷ್ಟಮಮ್ ।
ಪತಾಕಾಫೇನಪುಞ್ಜಾಢ್ಯಂ ಚಾರುಚಾಮರಬುದ್ಬುದಮ್ ‖೪೩‖
ವಿಪರ್ಯಸ್ತರಥಂ ಭೂಮಿಪಙ್ಕಮಗ್ನಪುರೋಪಮಮ್ ।
ಉತ್ಪಾತವಾತನಿರ್ಧೂತದ್ರುಮಂ ವನಮಿವಾತತಮ್ ‖೪೪‖
ಕಲ್ಪದಗ್ಧಜಗತ್ಪ್ರಖ್ಯಂ ಮುನಿಪೀತಾರ್ಣವೋಪಮಮ್ ।
ಅತಿವೃಷ್ಟಿಹತಂ ದೇಶಂ ಇವ ಪ್ರೋಜ್ಝಿತಮಾನವಮ್ ‖೪೫‖
ಕಲಾಪಕುನ್ತವಲಿತಂ ಭ್ರುಶುಣ್ಡೀಮಣ್ಡಲಾಕುಲಮ್ ।
ಮತ್ತನಾಗಶತಾಕಾರಶವತೋಮರಮುದ್ಗರಮ್ ‖೪೬‖

ಬಹಳವಾಗಿ ತಿರಸ್ಕಾರಮಾಡುತ, ತಾವು ಪಲಾಯನವನ್ನು ಆಶ್ರಯಿಸಿ, ಮಧ್ಯದಲ್ಲಿ ಗೊತ್ತಿಲ್ಲದೆ ರಕ್ತಪ್ರವಾಹದಲ್ಲಿ ಬಿದ್ದು, ಸುಳಿಯೊಳಗೆ ಸಿಕ್ಕಿಕೊಂಡು, ಭಯಂಕರವಾದ ಆ ಸ್ಥಳದಿಂದ ಹೊರಡಲು ಪ್ರಯತ್ನಪಡುತ್ತಿದ್ದರು ‖೪೦‖

ಮರ್ಮಚ್ಛೇದಕವಾದ ಬಾಣಪ್ರಹಾರವ್ಯಥೆಯಿಂದ, ಕೆಲವರು ತಮ್ಮ ಪೂರ್ವಜನ್ಮದ ದುಷ್ಕರ್ಮಸ್ವರೂಪವನ್ನು ತಿಳಿದುಕೊಳ್ಳುತಿದ್ದರು. ಅಲ್ಲಿರುವ ವೇತಾಳಗಳು, ಕಬಂಧಗಳನ್ನು ಹಿಡಿದುಕೊಂಡು, ತಮ್ಮ ಮುಖದಿಂದ ರಕ್ತಪಾನಮಾಡಲುಪಕ್ರಮಿಸುತಿದ್ದುವು ‖೪೧‖

ಅಲ್ಲಿನ ರಕ್ತನದೀಪ್ರವಾಹದೊಳಗೆ, ಧ್ವಜಚ್ಛತ್ರಚಾಮರಗಳೆಂಬ ಮನೋಹರವಾದ ಕಮಲಗಳು ತೇಲುತಿದ್ದುವು. ಸಂಧ್ಯಾಸಮಯದಲ್ಲಿ ಕೆಂಪಾದ ತೇಜಸ್ಸಮೂಹವೆಂಬ ಕೆಂದಾವರೆಯನ್ನು ದಿಕ್ಕುಗಳಲ್ಲಿ ಎರಚುತಿರುವಂತೆ ಕಾಣುತಿದ್ದಿತು ‖೪೨‖

ರಥವೆಂಬ ಪರ್ವತದೊಡನೆಯೂ, ಚಕ್ರವೆಂಬ ಸುಳಿಯೊಡನೆಯೂ, ಪತಾಕೆಯೆಂಬ ಫೇನ (ನೊರೆ) ಸಮೂಹದೊಡನೆಯೂ, ಮನೋಹರವಾದ ಚಾಮರವೆಂಬ ಗುಳ್ಳೆಗಳೊಡನೆಯೂ, ಯುಕ್ತವಾದ—ಸಪ್ತಸಮುದ್ರಾಧಿಕವಾಗಿ ಬ್ರಹ್ಮನಿಂದ ಸೃಷ್ಟವಾದ—ಎಂಟನೆಯ ರಕ್ತಸಮುದ್ರವೋ ಎನ್ನುವಹಾಗೆ ತೋರುತಿದ್ದಿತು ‖೪೩‖

ರಥಗಳು ತಲೆಕೆಳಗಾಗಿ ಬಿದ್ದಿರುವುದರಿಂದ, ಭೂಮಿಯ ಕೆಸರಿನಲ್ಲಿ ಮುಣುಗಿಹೋದ ಪಟ್ಟಣದಂತೆಯೂ, ಉತ್ಪಾತಸೂಚಕವಾದ ವಾಯುವಿನಿಂದ ಕಂಪಿತವಾದ ವೃಕ್ಷಗಳುಳ್ಳ ವಿಶಾಲವಾದ ಅರಣ್ಯದಂತೆಯೂ ತೋರುತಿದ್ದಿತು ‖೪೪‖

ಜನರಹಿತವಾಗಿರುವುದರಿಂದ, ಪ್ರಳಯಾಗ್ನಿದಗ್ಧವಾದ ಜಗತ್ತಿನಂತೆಯೂ, ಅಗಸ್ತ್ಯಮುನಿಯಿಂದ ಪಾನಮಾಡಲ್ಪಟ್ಟ ಸಮುದ್ರದಂತೆಯೂ, ಅತಿವೃಷ್ಟಿಯಿಂದ ಹಾಳಾದ ದೇಶದಂತೆಯೂ ಇದ್ದಿತು ‖೪೫‖

ಸತ್ತವರ ಆಭರಣಗಳೂ ಆಯುಧಗಳೂ ಅಲ್ಲಿ ತುಂಬಿದ್ದುವು. ಭ್ರುಶುಂಡೀಸಮೂ

ಶಿಲಾಶಿಖರಸಞ್ಜಾತತಾಳಜಾಲಮಿವಾತತಮ್ |
ತರದ್ರಕ್ತನದೀತೀರಜಾತಕುನ್ತೋನ್ನತದ್ರುಮಮ್ ||೪೭||
ನಾಗಾಙ್ಗಸ್ಯೂತಹೇತ್ಯೋಘವೃಕ್ಷಾಂಶುಕುಸುಮಾಕುಲಮ್ |
ಕಙ್ಕಕೃಷ್ಟಾನ್ತ್ರರಸನಾಬೃನ್ದಜಾಲಕಿತಾಮ್ಬರಮ್ ||೪೮||
ಅಸೃಕ್ಸರಿತ್ತೀರಜಾತಕುನ್ತೋನ್ನತವನದ್ರುಮಮ್ |
ಅಸೃಕ್ಸರೋವರೋರ್ಧ್ವಸ್ಥಪತಾಕಾನಳಿನೀಗಣಮ್ ||೪೯||
ರಕ್ತಕರ್ದಮನಿರ್ಮಗ್ನನರಾಹೂತಸುಹೃಜ್ಜನಮ್ |
ಕರೀನ್ದ್ರಕುಣಪಾಪಾತನಿರ್ಯದ್ಭಗ್ನಜನೇಕ್ಷಿತಮ್ ||೫೦||
ಹೇತಿಲೂನಲತೈರ್ವೃಕ್ಷೈಃ ಸನ್ದಿಗ್ಧಾರ್ಧಕಬನ್ಧಕಮ್ |
ಅಸೃಙ್ನದೀವಹದ್ಧಸ್ತಿಕಟಕರ್ಪಟನೌಗುಣಮ್ ||೫೧||
ರಕ್ತಸ್ರೋತಸ್ಸ್ಫುರಚ್ಛುಕ್ಲವಸ್ತ್ರಡಿಣ್ಡೀರಪಿಣ್ಡಕಮ್ |

ಹಗಳು ವ್ಯಾಪ್ತವಾಗಿದ್ದುವು. ಅಲ್ಲಿ ಬಿದ್ದಿದ್ದ ಹೆಣಗಳು ನೂರಾರುಮದ್ದಾನೆಗಳಂತೆಯೂ ತೋಮರ ಮುದ್ಗರಗಳು ನೂರಾರು ಸರ್ಪಗಳಂತೆಯೂ ಕಾಣುತಿದ್ದುವು ||೪೬||

ಪ್ರವಹಿಸುತ್ತಿರುವ ರಕ್ತನದಿಗಳ ದಡದಲ್ಲಿ ಕುಂತಾಯುಧಗಳು ಎತ್ತರವಾದ ಮರಗಳಂತೆ ನಿಂತಿದ್ದುವು; ಹೀಗಿರುವುದರಿಂದ, ಪರ್ವತಾಗ್ರದಲ್ಲಿ ಹುಟ್ಟಿರುವ ವಿಶಾಲವಾದ ತಾಳವೃಕ್ಷಸಮೂಹಗಳೋ ಎಂಬಂತೆ ಕಾಣುತ್ತಿದ್ದುವು ||೪೭||

ಆನೆಗಳ ಶರೀರಗಳಲ್ಲಿ, ಆಯುಧಸಮೂಹಗಳು ಮರಗಳಂತೆ ಸೇರಿಕೊಂಡಿದ್ದುವು; ಅವುಗಳ ಕಾಂತಿಯೂ ಪುಷ್ಪಮಾಲಿಕೆಯಂತೆ ಕಾಣುತಿದ್ದಿತು. ಹದ್ದುಗಳು, ನರಗಳನ್ನೂ ನಾಲಿಗೆಗಳನ್ನೂ ಗುಂಪುಗುಂಪಾಗಿ ಎಳೆದುಕೊಂಡು ಹಾರಿಹೋಗುತಿದ್ದುವು; ಇವುಗಳಿಂದ ಅಂತರಿಕ್ಷದಲ್ಲಿ ಬಲೆಯನ್ನು ಬೀಸಿದಂತೆ ತೋರುತಿದ್ದಿತು ||೪೮||

ರಕ್ತನದಿಗಳ ದಡದಲ್ಲಿ, ಕುಂತಾಯುಧಗಳೆಂಬ ಎತ್ತರವಾದ ಕಾಡುಮರಗಳು ಬೆಳೆದಿದ್ದುವು. ಮತ್ತು, ರಕ್ತಸರೋವರಗಳಲ್ಲಿ, ಧ್ವಜಪಟಗಳೆಂಬ ಕಮಲಲತಾಸಮೂಹಗಳು ಮೇಲ್ಮುಖವಾಗಿ ಬೆಳೆದಿದ್ದುವು ||೪೯||

ರಕ್ತದ ಕೆಸರಿನಲ್ಲಿ ಮುಣುಗಿಹೋಗಿರುವ ಜನಗಳು, ತಮ್ಮನ್ನು ಎತ್ತುವುದಕ್ಕಾಗಿ ತಮ್ಮ ಮಿತ್ರರುಗಳನ್ನು ಕರೆಯುತ್ತಿದ್ದರು. ಆನೆಗಳ ಶವಗಳ ಮಧ್ಯದಲ್ಲಿ ಸಿಕ್ಕಿಕೊಂಡು ತಟ್ಟನೆ ತಪ್ಪಿಸಿಕೊಂಡು ಹೊರಗೆಬಂದ ಜನಗಳು, ಕೈಕಾಲು ಮುರಿದವರಾಗಿ ಅಲ್ಲಲ್ಲಿ ನೋಡುತ್ತಿದ್ದರು ||೫೦||

ಆಯುಧಗಳು ತಗುಲಿ ಕೊಂಬೆಗಳು ಕತ್ತರಿಸಿಹೋದ ಮರಗಳು, ನೋಡತಕ್ಕವರಿಗೆ, ಅರ್ಧವಾದ ಕಬಂಧಗಳೋ ಎಂಬ ಸಂದೇಹವನ್ನುಂಟುಮಾಡುತಿದ್ದುವು, ಆನೆಗಳ ಗಂಡಸ್ಥಲಗಳೂ ಜೇನುಗಳೂ ಕೂಡ, ರಕ್ತನದಿಗಳಲ್ಲಿ ತೆಪ್ಪಗಳಂತೆ ತೇಲುತಿದ್ದುವು ||೫೧||

ರಕ್ತಪ್ರವಾಹಗಳಲ್ಲಿ, ಶುಭ್ರವಾದ ವಸ್ತ್ರಗಳು, ಉಂಡೆಯಾದ ನೊರೆಗಳಂತೆ ಪ್ರಕಾಶಿಸುತಿದ್ದುವು. ಸಂಚಾರಮಾಡುತಿರುವುದಕ್ಕೋಸ್ಕರ (ಪಹರೆ ಕೊಡುವುದು) ಆಜ್ಞಾಪಿತ

ಸಂಚಾರನಿಯತಕ್ಷಿಪ್ರಭೃತ್ಯವಿಚ್ಛಿನ್ನಮಾನವಮ್ ॥೫೨॥
ಇತಶ್ಚೇತಶ್ಚ ನಿಪತತ್ಕಬನ್ಧನವದಾನವಮ್ ।
ಊರ್ಧ್ವಸ್ಥೂಲಾಕ್ಷಚಕ್ರಾಘುಚ್ಛಿನ್ನಸೈನ್ಯದ್ರವಜ್ಜನಮ್ ॥೫೩॥
ರಕ್ತನಿಸ್ವನಭಾಙ್ಕಾರಘೇಙ್ಕಾರಾರ್ಧಮೃತಾರವಮ್ ।
ಶಿಲಾಮುಖಲಲದ್ರಕ್ತಧಾರಾಧೂತರಜಃಖಗಮ್ ॥೫೪॥
ಸುತಾಳೋತ್ತಾಳವೇತಾಳತಾಳತಾಣ್ಡವಸಙ್ಕಟಮ್ ।
ಪರ್ಯಸ್ತರಥದಾರ್ವನ್ತರರ್ಧಾನ್ತರಿತಸದ್ಭಟಮ್ ॥೫೫॥
ಅನ್ತಸ್ಸ್ಥಸಜ್ಜೀವಭಟಸ್ಪನ್ದಿಸ್ಪನ್ದನಭೀತಿದಮ್ ।
ರಕ್ತಕರ್ದಮಪೂರ್ಣಾಸ್ಯಕಿಞ್ಚಿಜ್ಜೀವಕೃಪಾಚ್ಛವಮ್ ॥೫೬॥
ಕಿಞ್ಚಿಜ್ಜೀವನರೋದ್ಗ್ರೀವದುಃಖದೃಷ್ಟಶ್ವವಾಯಸಮ್ ।
ಏಕಾಮಿಷೋತ್ಕಕ್ರವ್ಯಾದಯುದ್ಧಕೋಲಾಹಲಾಕುಲಮ್ ।
ಏಕಾಮಿಷಾರ್ಥಯುದ್ಧೇಹಾಮೃತಕ್ರವ್ಯಾದಸಙ್ಕುಲಮ್ ॥೫೭॥

ರಾಗಿ ಬೇಗಬೇಗನೆ ತಿರುಗುತ್ತಿರುವ ಭೃತ್ಯರು, ಮಧ್ಯದಲ್ಲಿ ಸಿಕ್ಕಿದವರನ್ನು ದಾರಿಬಿಡಿಸಿಕೊಂಡು ಹೋಗುತಿದ್ದರು ॥೫೨॥

ಕಬಂಧಗಳೆಂಬ ನೂತನರಾದ ರಾಕ್ಷಸರು, ಇತ್ತಲೂ ಅತ್ತಲೂ ಓಡಾಡುತಿದ್ದರು. ಆ ರಣರಂಗದಲ್ಲಿ, ಓಡುತಿರುವ ಜನಗಳು ಮೇಲ್ಮುಖವಾಗಿ ಬಿದ್ದಿರುವ ದಪ್ಪನಾದ ಅಚ್ಚುಳ್ಳ ರಥಸಮೂಹಗಳಲ್ಲಿ ಎಡವಿ ಬಿದ್ದು, ಕೈಕಾಲು ಮುರಿದುಕೊಳ್ಳುತಿದ್ದರು ॥೫೩॥

ಅರ್ಧಮೃತರಾದ ಜನಗಳ ಧ್ವನಿಗಳು, ರಕ್ತಪ್ರವಾಹಗಳ ಭಾಂಕಾರಘೇತ್ಕಾರಧ್ವನಿಗಳೊಡನೆ ಮಿಶ್ರವಾಗಿ ಹೊರಡುತಿದ್ದುವು. ಮೈಮೇಲೆಧೂಳುಕುಳಿತಿರುವ ಪಕ್ಷಿಗಳು, ಬಂಡೆಗಳ ಮೇಲಿನಿಂದ ಜಾರಿಬೀಳುವ ರಕ್ತಧಾರೆಗಳಲ್ಲಿ,ತಮ್ಮ ಮೈಯಲ್ಲಿರುವ ಧೂಳನ್ನು ತೊಳೆದುಕೊಳ್ಳುತಿದ್ದವು ॥೫೪॥

ಸುತಾಳವೃಕ್ಷಗಳಂತೆ ಉನ್ನತವಾಗಿರುವ ವೇತಾಳಗಳು, ತಾಳಸಹಿತವಾಗಿ ನರ್ತನ ಮಾಡುತ ತುಂಬಿದ್ದುವು. ಜೀವಿಸಿರುವ ಭಟರುಗಳು, ತಲೆಕೆಳಗಾಗಿ ಬಿದ್ದ ರಥಗಳ— ಮರಗಳ ಮಧ್ಯದಲ್ಲಿ ಅರ್ಧವಾಗಿ ಮರೆಯಾಗುತಿದ್ದರು ॥೫೫॥

ಒಳಗೆ ಪ್ರಾಣಸಹಿತವಾಗಿ ಬಿದ್ದಿರುವ ಭಟರುಗಳು ಅಲ್ಲಾಡುವುದರಿಂದ, ಮೇಲೆಬಿದ್ದಿರುವ ಶವಗಳೂ ಅಲ್ಲಾಡುತಿದ್ದುವು. ಇದರಿಂದ, ಆ ಹೆಣಗಳೇ ಅಲ್ಲಾಡುತ್ತವೆಯೆಂದು ಭಯವುಂಟಾಗುತಿದ್ದಿತು. ರಕ್ತದ ಕೆಸರಿನಿಂದ ಬಾಯಿತುಂಬಿಕೊಂಡು ಸ್ವಲ್ಪ ಜೀವವುಳ್ಳ ಪ್ರಾಣಿಗಳು, ಶವಗಳನ್ನು ನೋಡಿ ದಯೆಪಡುತ್ತಿದ್ದುವು ॥೫೬॥

ಸ್ವಲ್ಪಜೀವವುಳ್ಳ ಮನುಷ್ಯರು, ಅಲ್ಲಿ ತೊಂದರೆಕೊಡುತಿರುವ ನಾಯಿಗಳನ್ನೂ ಕಾಗೆಗಳನ್ನೂ, ಕತ್ತೆತ್ತಿ ನೋಡುತಿದ್ದರು. ಒಂದೇ ಮಾಂಸದಲ್ಲಿ ಆಸೆಪಟ್ಟಿರುವ ಮಾಂಸಾಹಾರಿಗಳಾದ ಪಕ್ಷಿಗಳು, ಪರಸ್ಪರವಾಗಿ ಜಗಳವಾಡಿ, ಕೋಲಾಹಲಮಾಡುತಿದ್ದುವು; ಮತ್ತು, ಈ ಯುದ್ಧವ್ಯಾಪಾರದಿಂದ, ಅನೇಕವಾಗಿ ಮಾಂಸಾಹಾರಿ ಪಕ್ಷಿಗಳು ಸತ್ತುಹೋದುವು ॥೫೭॥

ವಿವೃತ್ತಾ ಸಜಾಖ್ಯಶ್ವದ್ವಿರದಪುರುಷಾಧೀಶ್ವರರಥಿ
ಪ್ರಕೃತ್ತೋಷ್ಟ್ರಗ್ರೀವಾಪ್ರಸೃತರುಧಿರೋದ್ಗಾರಸುಸರಿತ್ ।
ರಣೋದ್ಯಾನಂ ಮೃತ್ಯೋಸ್ತದಘನದಶುಷ್ಕಾಯುಧಲತಂ
ಸಶೈಲಂ ಕಲ್ಪಾನ್ತೇ ಜಗದಿವ ವಿಪರ್ಯಸ್ತಮಖಿಲಮ್ ॥೫೮॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಆಹವವರ್ಣನಂ ನಾಮ
ಅಷ್ಟತ್ರಿಂಶಃ ಸರ್ಗಃ.

ಮತ್ತು ಆ ರಣರಂಗವು ಮೃತ್ಯುವಿನ ಉದ್ಯಾನವನದಂತೆ ಕಾಣುತ್ತಿದಿತು. ಈ ರಣೋದ್ಯಾನದಲ್ಲಿ, ಅಸಂಖ್ಯಾತವಾಗಿ ಮೃತವಾದ—ಆನೆ ಕುದುರೆ ಕಾಲಾಳು ದೊರೆ ರಥಿಕ ಒಂಟೆ ಇವುಗಳ ಕತ್ತುಗಳಿಂದ ಸುರಿಯುತ್ತಿರುವ ರಕ್ತವೇ, ನದಿಯಾಗಿ ಪ್ರವಹಿಸುತಿದ್ದಿತು; ಇದರಿಂದ, ಆಯುಧಗಳೆಂಬ ಲತೆಗಳು ಒಣಗದೆ ಹಸಿಯಾಗಿದ್ದುವು. ಇದನ್ನೆಲ್ಲ ಒಟ್ಟಾಗಿ ನೋಡಿದರೆ. ಪ್ರಳಯಕಾಲದಲ್ಲಿ ಪರ್ವತಗಳೊಡನೆ ವ್ಯತ್ಯಸ್ತವಾಗಿರುವ ಸಮಸ್ತವಾದ ಜಗತ್ತಿನಂತೆ ತೋರುತಿದ್ದಿತು ॥೫೮॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಯುದ್ಧವರ್ಣನೆಯೆಂಬ
ಮೂವತ್ತೆಂಟನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕೋನಚತ್ವಾರಿಂಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.—

ಅಥ ವೀರಇವಾರಕ್ತಃ ಕಾಲೇನಾಸ್ತಮಿತೋ ರವಿಃ ।
ಅಸ್ತ್ರತೇಜಃಪರಿಮ್ಲಾನಪ್ರತಾಪೋಽಬ್ಧೌ ಸಮುಜ್ಝಿತಃ ॥೧॥
ರಣರಕ್ತರುಚಿರ್ವ್ಯೋಮದರ್ಪಣಪ್ರತಿಬಿಮ್ಬಿತಾ ।
ಜಹೌ ಸೂರ್ಯಶಿರಶ್ಛೇದೇ ಸನ್ಧ್ಯಾಲೇಖೋದಭೂತ್ ಕ್ಷಣಮ್ ॥೨॥
ಭೂಪಾತಾಳನಭೋದಿಗ್ಭ್ಯಃ ಪ್ರಳಯಾಬ್ಧಿಜಲೌಘವತ್ ।
ಸಮಾಜಗ್ಮುಃ ಸ್ತನತ್ತಾಳಾಃ ವೇತಾಳಾವಲಯಾ ಇವ ॥೩॥
ಮೃಷ್ಟಧ್ವಾನ್ತಾಸಿವಲಿತೇ ದಿನನಾಗೇನ್ದ್ರಮಸ್ತಕೇ ।
ಸನ್ಧ್ಯಾರಾಗಾರುಣಂ ಕೀರ್ಣಂ ತಾರಾನಿಕರಮೌಕ್ತಿಕಮ್ ॥೪॥

ಉತ್ಪತ್ತಿಪ್ರಕರಣದಲ್ಲಿ ಮೂವತ್ತೊಂಭತ್ತನೆಯ ಸರ್ಗವು.

ಸೂರ್ಯಸ್ಯಾಸ್ತಮಯಃ ಸನ್ಧ್ಯಾ ರಕ್ಷೋವೇತಾಳಸಙ್ಕುಲಾ ।
ಬೀಭತ್ಸಬಹುಳಂ ರಾತ್ರೌ ರಣಸ್ಥಾನಂ ಚ ವರ್ಣ್ಯತೇ ॥

ಸೂರ್ಯಾಸ್ತಮಯವೂ, ರಾಕ್ಷಸವೇತಾಳಗಳಿಂದ ವ್ಯಾಕುಲವಾಗಿರುವ ಸಂಧ್ಯಾಕಾಲವೂ, ರಾತ್ರಿಯಲ್ಲಿ ಬಹು ಬೀಭತ್ಸವಾಗಿರುವ ಯುದ್ಧಾಂಕಣವೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಹೀಗೆ ಯುದ್ಧೋಪಸಂಹಾರವಾದ ಬಳಿಕ, ಸ್ವಲ್ಪ ಕಾಲದಲ್ಲಿಯೇ, ಸೂರ್ಯನು ವೀರನಂತೆ ರಕ್ತಾಕಾರನಾಗಿ ಅಸ್ತಹೊಂದಿದನು; ಮತ್ತು, ಅಸ್ತ್ರಗಳ ತೇಜಸ್ಸಿನಿಂದ ಮ್ಲಾನವಾದ ಪ್ರತಾಪವುಳ್ಳವನೋ ಎಂಬಂತೆ, ಸಮುದ್ರದಲ್ಲಿ ಮುಣುಗಿಸಿದನು॥೧॥

ರಣರಂಗದಲ್ಲಿರುವ ರಕ್ತದ ಕಾಂತಿಯು ಅಂತರಿಕ್ಷವೆಂಬ ಕನ್ನಡಿಯಲ್ಲಿ ಪ್ರತಿಬಿಂಬಿಸಿರುವಂತೆಯೂ, ಸೂರ್ಯನ ಶಿರಸ್ಸು ಮುರಿದುಹೋಗಿ ರಕ್ತ ಸುರಿಯುತಿದೆಯೋ ಎಂಬಂತೆಯೂ, ಒಂದು ಕ್ಷಣಕಾಲ ಸಂಧ್ಯಾರಾಗವುತ್ಪನ್ನವಾಗಿದ್ದಿತು ॥೨॥

ಕೈಯಲ್ಲಿ ತಾಳಹಾಕುತಿರುವ ವೇತಾಳಗಳು, ಸುತ್ತಲೂ ಬರುತಿರುವುದರಿಂದ ವಲಯಾಕಾರಗಳಾಗಿ ಕಾಣಿಸುತ, ಪ್ರಳಯಕಾಲದಲ್ಲಿ ಸಮುದ್ರದ ಜಲಪ್ರವಾಹದಂತೆ, ಭೂಮಿ ಪಾತಾಳ ಆಕಾಶ ದಶದಿಕ್ಕುಗಳಿಂದಲೂ ಬಂದು ಸೇರುತಿದ್ದುವು ॥೩॥

ಕತ್ತಲೆಯೆಂಬ ಹರಿತವಾದ ಕತ್ತಿಯುಳ್ಳದಾಗಿರುವ—ಹಗಲೆಂಬ ಮದ್ದಾನೆಯ ತಲೆಯಮೇಲೆ, ಸಂಧ್ಯಾರಾಗದಿಂದ ಕೆಂಪಾಗಿರುವ ನಕ್ಷತ್ರಸಮೂಹವೆಂಬ ಮುಕ್ತಾಸರವು ಹಾಕಲ್ಪಟ್ಟಿತು ॥೪॥

ನಿಸ್ಸತ್ತ್ವೇಷು ತಮೋಽನ್ಧೇಷು ರಸನಾರಸಶಾಲಿಷು ।
ಸಙ್ಕೋಚಮಾಯಯುಃ ಪದ್ಮಾಃ ಮೃತಾನಾಂ ಹೃದಯೇಷ್ವಿವ ॥೫॥
ಮಿಲತ್ಪಕ್ಷಾಃ ಕ್ಷಣಾತ್ ಸುಪ್ತಾಃ ಕೃಛ್ರಪ್ರೋಚ್ಛ್ರಿತಕನ್ಧರಾಃ ।
ಕುಲಾಯೇಷು ಖಗಾಆಸನ್ ಶವಾಙ್ಗೇಷ್ವಿವ ಹೇತಯಃ ॥೬॥
ಆಸನ್ನಚನ್ದ್ರಸುಭಗಾಃ ಲೋಕಾಃ ಕುಸುಮಪಙ್ಕ್ತಯಃ ।
ಉಲ್ಲಸದ್ಧೃದಯಾಜಾತಾಃ ವೀರಪಕ್ಷೇಷ್ವಿವ ಶ್ರಿಯಃ ॥೭॥
ರಕ್ತವಾರಿಮಯೀ ಸಾಯಂ ಅಙ್ಗಗುಪ್ತಶಿಲೀಮುಖಾ ।
ಸಙ್ಕುಚದ್ವಕ್ತ್ರಪದ್ಮಾಭೂತ್ ರಣಭೂಮಿರಿವಾಬ್ಜಿನೀ ॥೮॥
ಉಪರ್ಯಭೂದ್ವ್ಯೋಮಸರಃ ತಾರಾಕುಸುಮಮಣ್ಡಿತಮ್ ।
ಅಧಸ್ತ್ವಭೂದ್ವಾರಿಸರಃ ಸ್ಫುರತ್ಕುಮುದತಾರಕಮ್ ॥೯॥
ತಮಸ್ಯಪೇತಭೀತೀನಿ ಭೂತಾನಿ ಮಿಳಿತಾನ್ಯಲಮ್ ।
ಪಯಾಂಸೀವ ವಿಸೇತೂನಿ ಪ್ರಸೃತಾನಿ ದಿಶಂ ಪ್ರತಿ ॥೧೦॥
ಆಸೀದ್ರಣಾಙ್ಗಣಂ ಗಾಯದ್ವೇತಾಳಕುಲಸಙ್ಕುಲಮ್ ।

ಪ್ರಾಣರಹಿತವಾಗಿಯೂ ಅಜ್ಞಾನಾವೃತವಾಗಿಯೂ ಮೊದಲು ಬದುಕಬೇಕೆಂದು ಆಸೆಯುಳ್ಳದಾಗಿಯೂ ಇರುವ ಮೃತರಾದವರ ಹೃದಯಗಳಲ್ಲಿಯೋಪಾದಿಯಲ್ಲಿ, ಪ್ರಾಣಿರಹಿತವಾಗಿಯೂ ಅಂಧಕಾರಾವೃತವಾಗಿಯೂ ಜಲಸಹಿತವಾಗಿಯೂ ಇರುವ ಸರಸ್ಸುಗಳಲ್ಲಿ, ಅದುವರೆಗೂ ಭ್ರಮರಾದಿಧ್ವನಿಯುಕ್ತವಾಗಿದ್ದ ಕಮಲಗಳು ಸಂಕೋಚಹೊಂದಿದುವು॥

ಶವಗಳ ದೇಹದಲ್ಲಿ ಆಯುಧಗಳಂತೆ, ಗೂಡುಗಳಲ್ಲಿ ಪಕ್ಷಿಗಳು-ರೆಕ್ಕೆಗಳನ್ನು ಮುದುರಿಕೊಂಡುವುಗಳಾಗಿಯೂ-ಕ್ಷಣದೊಳಗಾಗಿ ಮಲಗಿದುವುಗಳಾಗಿಯೂ-ಕಷ್ಟದಿಂದ ಕತ್ತೆತ್ತಿದುವುಗಳಾಗಿಯೂ ಆದುವು ॥೬॥

ಚಂದ್ರೋದಯ ಸನ್ನಿಹಿತವಾಗಿರುವುದರಿಂದ ಮನೋಹರವಾಗಿರುವ ಜನರೆಂಬ ಪುಷ್ಪಸಮುದಾಯಗಳು, ವೀರಸಮೂಹಗಳಲ್ಲಿ ಜಯಲಕ್ಷ್ಮಿಯಂತೆ, ವಿಕಸಿತಹೃದಯಗಳಾದುವು ॥೭॥

ಆಗ, ಸಾಯಂಕಾಲದಲ್ಲಿ, ನೀರೆಲ್ಲಾ ಕೆಂಪಾಗಿ—ಕಮಲದೊಳಗೆ ದುಂಬಿಗಳು ಸೇರಿಕೊಂಡು—ಕಮಲಗಳು ಮುಚ್ಚುತ್ತಿರುವ ಕಮಲಸರೋವರವು, ರಕ್ತಪರಿಪೂರ್ಣವಾಗಿ ಜನರ ಮೈಯಲ್ಲೆಲ್ಲ ಬಾಣಗಳು ಸೇರಿಕೊಂಡು ಮುಖಗಳು ಬಾಡುತಿರುವ ರಣಭೂಮಿಯಂತಿದ್ದಿತು ॥೮॥

ಮೇಲುಗಡೆಯಲ್ಲಿ, ಆಕಾಶವೆಂಬ ಸರಸ್ಸು—ನಕ್ಷತ್ರಗಳೆಂಬ ಬಿಳಿನೈದಿಲೆಗಳಿಂದ ಅಲಂಕೃತವಾಯ್ತು. ಅಧೋಭಾಗದಲ್ಲಿಯಾದರೋ, ಜಲಮಯವಾದ ಸರಸ್ಸು—ಬಿಳಿನೈದಿಲೆಗಳೆಂಬ ನಕ್ಷತ್ರಗಳಿಂದ ಪ್ರಕಾಶಮಾನವಾಯ್ತು ॥೯॥

ಆಗ ತಮಃಪ್ರಾದುರ್ಭಾವವಾಗಲು, ನಾನಾವಿಧವಾದ ಭೂತಗಳು ನಿರ್ಭಯಗಳಾಗಿ ಒಟ್ಟುಸೇರುತ, ಅಣೆಕಟ್ಟಿಲ್ಲದ ನೀರಿನಂತೆ ನಾನಾದಿಕ್ಕುಗಳಿಗೆ ಓಡಿಹೋಗುತಿದ್ದುವು ॥೧೦॥

ಆಗ, ಆ ರಣರಂಗವು, ಗಾನಮಾಡುತಿರುವ ವೇತಾಳಗಳ ಸಮೂಹದಿಂದ ವ್ಯಾಪ್ತ

ಕ್ವಣತ್ಕಙ್ಕಾಲಕಾಙ್ಕಸ್ಥಕಙ್ಕಕಾಕೋಲಕೇಳಿಮತ್ ॥೧೧॥
ಅಥ ಕಾಷ್ಠಚಿತಾಜ್ವಾಲಸತಾರಾಮ್ಬರಭಾಸ್ವರಮ್ ।
ಪಚತ್ಪಚಪಚಾಶಬ್ದಮೇದೋಮಾಂಸಮಯಾನಲಮ್ ॥೧೨॥
ಸರ್ವಾಙ್ಗಾಸ್ಥಿಸ್ಫುಟಾಸ್ಫೋಟಸ್ಫುಟಚ್ಛಿತಿಚಯೋನ್ಮುಖಮ್ ।
ವೇತಾಳಲಲನಾರಬ್ಧಜಲಲೀಲಾತಿರೋಹಿತಮ್ ॥೧೩॥
ಶ್ವಕಾಕಯಕ್ಷವೇತಾಳತಾಳಕೋಲಾಹಲೋಲ್ಬಣಮ್ ।
ಗಮಾಗಮೇನ ಭೂತಾನಾಂ ಸಮುಡ್ಡೀನವನೋಪಮಮ್ ॥೧೪॥
ರಕ್ತಮಾಂಸವಸಾಮೇದೋಹರಣವ್ಯಗ್ರಡಾಕಿನಿ ।
ಚರ್ವಿತಾಸೃಗ್ವಸಾಮಾಂಸಸ್ರವತ್ಸೃಕ್ವಿಪಿಶಾಚಕಮ್ ॥೧೫॥
ಮಧ್ಯಮಧ್ಯಚಿತಾಲೋಕಪ್ರಕಟಾಸೃಕ್ಛವವ್ರಜಮ್ ।
ವಿರೂಪಿಕಾನೀಯಮಾನಸ್ವಾಂಸನ್ಯಸ್ತಮಹಾಶವಮ್ ॥೧೬॥

ವಾಗಿಯೂ, ಶವಗಳ ತೊಡೆಯಮೇಲೆ ಕುಳಿತುಕೊಂಡು ಕೂಗುತ ಆಟವಾಡುತಿರುವ ಕಾಗೆ ಹದ್ದು ಮುಂತಾದ ಪಕ್ಷಿಗಳುಳ್ಳದಾಗಿಯೂ ಆಯ್ತು ॥೧೧॥

ಬಳಿಕ, ಅಲ್ಲಿ, ಕಟ್ಟಿಗೆಗಳನ್ನು ಒಟ್ಟಿ ಮಾಡಿರುವ ಚಿತಿಗಳು ಪ್ರಜ್ವಲಿಸುತಿರುವುದರಿಂದ, ದೂರದಲ್ಲಿ ನೋಡತಕ್ಕವರಿಗೆ, ನಕ್ಷತ್ರಸಹಿತವಾದ ಅಂತರಿಕ್ಷದಂತೆ ತೋರುತಿದ್ದಿತು. ಅಗ್ನಿಯಲ್ಲಿ ಮೇದಸ್ಸೂ ಮಾಂಸವೂ ಬೇಯುತಿರುವುದರಿಂದ ಪಚಪಚ ಎಂಬ ಶಬ್ದವುಂಟಾಗುತಿದ್ದಿತು ॥೧೨॥

ಚಿತಿಗಳಲ್ಲಿ ಬೇಯುತಿರುವ ಶವಗಳ ಸರ್ವಾಂಗಗಳಲ್ಲಿಯೂ ತುಂಬಿರುವ ದೊಡ್ಡದೊಡ್ಡ ಮೂಳೆಗಳು ಹಾರುತಿರುವುದರಿಂದ, ಆ ಚಿತಿಗಳು ಮೇಲ್ಮುಖವಾಗಿ ಸ್ವಲ್ಪ ಅಲುಗುತಿದ್ದುವು. ಹೆಣ್ಣು ಬೇತಾಳಗಳು, ಜಲಕ್ರೀಡೆಯಾಡಿದಂತೆ ಆ ಚಿತಾಗ್ನಿಗಳಲ್ಲಿ ಕುಣಿದಾಡುತ ಮರೆಯಾಗುತಿದ್ದುವು ॥೧೩॥

ನಾಯಿ ಕಾಗೆ ಪಿಶಾಚ ವೇತಾಳ—ಇವುಗಳು, ತಾಳಹಾಕುತ ಗಟ್ಟಿಯಾಗಿ ಕೋಲಾಹಲ ಮಾಡುತಿದ್ದುವು. ಭೂತಗಳು ಹೋಗುತಲೂ ಬರುತಲೂ ಇರುವುದರಿಂದ, ದೊಡ್ಡದೊಂದು ಅರಣ್ಯವು ಹಾರಾಡುತಿರುವಂತೆ ಕಾಣುತಿದ್ದಿತು ॥೧೪॥

ಡಾಕಿನಿಯೆಂಬ ಪಿಶಾಚಭೇದಗಳು, ರಕ್ತ ಮಾಂಸ ವಸೆ ಮೇದಸ್ಸು—ಇವುಗಳನ್ನು ಹೊತ್ತುಕೊಂಡು ಹೋಗುವುದರಲ್ಲಿ ಆಸಕ್ತವಾಗಿದ್ದುವು. ಪಿಶಾಚಗಳು ವಸೆಯನೂ ಮಾಂಸವನ್ನೂ ಅಗಿಯುತಿರುವುದರಿಂದ, ಅವುಗಳ ಕಟವಾಯಿಯಲ್ಲಿ, ಆ ವಸಾಮಾಂಸಗಳು ಸುರಿಯುತಿದ್ದುವು ॥೧೫॥

ಚಿತೆಯ ಮಧ್ಯಮಧ್ಯಗಳಲ್ಲಿ ಶವಗಳಿಂದ ಹೊರಡುತಿರುವ ರಕ್ತಸಮುದಾಯವನ್ನು, ಅಲ್ಲಿನ ಪಿಶಾಚಗಳು ನೋಡುತಿದ್ದುವು. ಪೂತನೆಗಳು (ಒಂದುವಿಧವಾದ ಪಿಶಾಚ) ತಮ್ಮ ಹೆಗಲುಮೇಲೆ ದೊಡ್ಡದೊಡ್ಡ ಶವಗಳನ್ನು ಹೊತ್ತುಕೊಂಡು ಹೋಗುತಿದ್ದುವು ॥೧೬॥

ಉತ್ತಾಣ್ಡವೋಗ್ರಕುಮ್ಭಾಣ್ಡಮಣ್ಡಲೋಡ್ಡಾಮರೋದರಮ್ ।
ಛಮಿಚ್ಛಮಿತ್ಪ್ರಲಾಪಾನ್ತಂ ಮೇದೋಸೃಗ್ಬಾಷ್ಪಸಾಮ್ಬುದಮ್ ॥೧೭॥
ವಹದ್ರಕ್ತನದೀರಂಹೋರೂಢಭೂಚರರೂಪಿಕಮ್ ।
ವೇತಾಳಕುಲಕಙ್ಕಾಳಕರ್ಷಣಾಕುಲಕಾಕಲಮ್ ॥೧೮॥
ಮೃತೇಭೋದರಮಞ್ಜೂಷಾಸುಪ್ತವೇತಾಳಬಾಲಕಮ್ ।
ವಿವಿಕ್ತೈಕರಣೋದ್ದೇಶಪಾನಕ್ರೀಡಾಸ್ಥರಾಕ್ಷಸಮ್ ॥೧೯॥
ಮತ್ತವೇತಾಳಕಲಹಚಿತಾಲಾತರಣೋಜ್ಜ್ವಲಮ್ ।
ವಹದ್ರಕ್ತವಸಾಮಿಶ್ರಗನ್ಧಬನ್ಧುರಮಾರುತಮ್ ॥೨೦॥
ರೂಪಿಕಾಪೇಟಿಕಾವಾನ್ತರಣದ್ರಟರಟಾರವಮ್ ।
ಅರ್ಧಪಕ್ವಶವಾಸ್ವಾದಲುಬ್ಧಯಕ್ಷೋಲ್ಲಸತ್ಕಲಿ ॥೨೧॥
ತುಙ್ಗವಙ್ಗಕಳಿಙ್ಗಾಙ್ಗತಙ್ಗಣಾಙ್ಗಲಗತ್ಖಗಮ್ ।
ತಾರಾಪಾತೋಪಮಹಸತ್ಸಮ್ಮುಖಜ್ವಾಲರೂಪಿಕಮ್ ॥೨೨॥

ಕುಂಭಾಂಡಗಳೆಂಬ ದೊಡ್ಡ ಹೊಟ್ಟೆಯ ಪಿಶಾಚಸಮೂಹಗಳು, ಆ ರಣರಂಗದ ಮಧ್ಯಭಾಗದಲ್ಲೆಲ್ಲ ಉದ್ಧತವಾಗಿ ನರ್ತನಮಾಡುತಿದ್ದುವು. ಅಲ್ಲಿದ್ದ ಶವಗಳ ಬಾಯಿಯಲ್ಲಿ 'ಛಮಿತ' ಛಮಿತ'' ಎಂಬ ಧ್ವನಿ ಬರುತಿರುವುದರಿಂದ, ಅವುಗಳು ಪ್ರಲಾಪಮಾಡುತಿವೆಯೋ ಎಂಬಂತೆ ಕಾಣುತಿದ್ದಿತು. ಶವಗಳು ಬೇಯುತಿರುವಾಗ, ಮೇದಸ್ಸೂ ರಕ್ತವೂ ಆವಿಯಾಗಿ ಮೇಲಕ್ಕೆ ಹೋಗಿ, ಮೇಘದಂತೆ ನಿಂತಿದ್ದಿತು ॥೧೭॥

ರೂಪಿಕೆಗಳೆಂಬ ಪಿಶಾಚಗಳು, ರಕ್ತನದೀಪ್ರವಾಹದ ವೇಗದಲ್ಲಿ ಕಾಲು ಹೂತುಕೊಂಡಿರುವುದರಿಂದ, ಭೂಮಿಯಲ್ಲಿ ಸಂಚರಿಸತಕ್ಕುವೋ ಎಂಬಂತೆ ಕಾಣುತಿದ್ದುವು. ವೇತಾಳಸಮೂಹಗಳು, ಶವಗಳನ್ನು ಎಳೆದುಕೊಂಡುಹೋಗುತ, ಸ್ವೇಚ್ಛೆಯಾಗಿ ಕೋಲಾಹಲಮಾಡುತಿದ್ದುವು ॥೧೮॥

ಸಣ್ಣಸಣ್ಣ ವೇತಾಳಗಳು, ಸತ್ತುಹೋಗಿರುವ ಆನೆಗಳ ಹೊಟ್ಟೆಗಳಮೇಲೆ, ತೊಟ್ಟಿಲಿನಲ್ಲಿ ಮಲಗುವಂತೆ ಮಲಗಿಕೊಳ್ಳುತಿದ್ದುವು. ಆ ರಣರಂಗದ ನಿರ್ಜನವಾದ ಒಂದು ಪ್ರದೇಶದೊಳಗೆ, ರಾಕ್ಷಸರುಗಳು ಪಾನಕ್ರೀಡೆಯನ್ನು ಅನುಭವಿಸುತಿದ್ದರು ॥೧೯॥

ಮತ್ತವಾಗಿರುವ ವೇತಾಳಗಳು, ಪರಸ್ಪರವಾಗಿ ಜಗಳವಾಡಿಕೊಂಡು, ಆಮೇಲೆ ಅಲ್ಲಿ ಉರಿಯುತಿರುವ ಚಿತಿಯ ಕೊಳ್ಳಿಗಳನ್ನು ತೆಗೆದುಕೊಂಡು, ಹೊಡೆದಾಡಲುಪಕ್ರಮಿಮಿಸುತಿದ್ದುವು. ರಕ್ತವಸಾಗಂಧದಿಂದ ಪರಿಪೂರ್ಣವಾಗಿ ವಾಯುವು ಬೀಸುತಿದ್ದಿತು ॥

ರೂಪಿಕೆಗಳೆಂಬ ಪಿಶಾಚಗಳ ಕೈಯಲ್ಲಿರುವ ಬುರುಡೆಗಳ ಮುಖದಿಂದ ರಟರಟ ಎಂಬ ಧ್ವನಿಯು ಹೊರಡುತಿದ್ದಿತು. ಅರ್ಧ ಪಕ್ವವಾದ ಶವಗಳನ್ನು ತಿನ್ನಬೇಕೆಂದು ಆಶೆಪಡುತಿರುವ ಯಕ್ಷಗಳು (ಪಿಶಾಚಭೇದ), ಒಂದಕ್ಕೊಂದು ಹೋರಾಡುತಿದ್ದುವು ॥೨೧॥

ವಂಗ ಕಳಿಂಗ ಅಂಗ ತಂಗಣ— ಈ ದೇಶದವರ ಎತ್ತರವಾದ ಶರೀರಗಳಲ್ಲಿ, ರಾತ್ರಿಚರಗಳಾದ ಪಕ್ಷಿಗಳು ಕುಳಿತುಕೊಳ್ಳುತಿದ್ದುವು. ಕೈಯಲ್ಲಿ ಕೊಳ್ಳಿಯನ್ನು ಹಿಡಿದುಕೊಂಡು ಎದುರುಮುಖವಾಗಿ ಬರುತಿರುವ ರೂಪಿಕೆಯೆಂಬ ಪಿಶಾಚಗಳನ್ನು ನೋಡಿದರೆ, ನಕ್ಷತ್ರಪಾತವಾಗುತಿರುವಂತೆ ಕಾಣುತಿದ್ದಿತು ॥೨೨॥

ಏತದ್ವೇತಾಳಸೋಲ್ಲಾಸಮಧ್ಯಸ್ಥಾಸೃಗ್ವಿರೂಪಿಕಮ್ ।
ಪಿಶಾಚಾಕರ್ಣಿತಾಭ್ಯರ್ಣಯೋಗಿನೀಗಣನಾಯಕಮ್ ॥೨೩॥
ಪ್ರಸೃತಾನ್ತ್ರಮಹಾತನ್ತ್ರೀಪ್ರಾಯಸಮ್ಪನ್ನವಾದನಮ್ ।
ಪಿಶಾಚವಾಸನೋತ್ಕ್ರಾನ್ತಪಿಶಾಚೀಭೂತಮಾನವಮ್ ॥೨೪॥
ರೂಪಿಕಾಲೋಕನಾಪೂರ್ವತ್ರಾಸಾರ್ಧಮೃತಸದ್ಭಟಮ್ ।
ಕ್ವಚಿದ್ವೇತಾಳರಕ್ಷೋಭಿಃ ಅಪರೀಪೂರ್ಣಮುದ್ರಕಮ್ ॥೨೫॥
ಸ್ವರೂಪಿಕಾಸ್ಕನ್ಧಪತಚ್ಛವತ್ರಸ್ತನಿಶಾಚರಮ್ ।
ನಭಸ್ಸಙ್ಘಟ್ಟಿತಾಪೂರ್ವಭೂತಪೇಟಕಸಙ್ಕಟಮ್ ॥೨೬॥
ಅತಿಪ್ರಯತ್ನಾಪಹೃತಮ್ರಿಯಮಾಣನರಾಮಿಷಮ್ ।
ಸ್ವಭಕ್ಷ್ಯಾಪೇಕ್ಷಪಕ್ಷೇಷು ವಿಕ್ಷಿಪ್ತಶವರಾಶಿಮತ್ ॥೨೭॥
ಶಿವಾಮುಖಾನಲಶಿಖಾಖಣ್ಡೋತ್ಥಮಿತಿರಕ್ತಗೈಃ ।
ಸಮುಡ್ಡೀನನವಾಶೋಕಪುಷ್ಪಗುಚ್ಛಮಿವಾಭಿತಃ ॥೨೮॥

ಆ ರಣರಂಗದ ಮಧ್ಯದಲ್ಲಿರುವ ವಿರೂಪಿಕೆಯೆಂಬ ಪಿಶಾಚಗಳು, ಮೈಯೆಲ್ಲ ರಕ್ತ ಬೊಳಿದುಕೊಂಡು, ವೇತಾಳಗಳು ರಕ್ತದಲ್ಲಿ ಜಾರಿ ಬೀಳುತಿರುವುದನ್ನು ನೋಡಿ ಪರಿಹಾಸ ಮಾಡುತಿದ್ದುವು. ಯೋಗಿನೀಸಮೂಹಕ್ಕೆ ಸ್ವಾಮಿಯಾದವನು ಹತ್ತಿರ ಬರುತಿರುವುದನ್ನು ಪಿಶಾಚಗಳು ಕೇಳುತಿದ್ದುವು ॥೨೩॥

ಅಲ್ಲಿ ಬಿದ್ದಿದ್ದ ವಾದ್ಯಗಳೆಲ್ಲವೂ, ಸತ್ತವರ ದೇಹದಿಂದ ಹೊರಬಿದ್ದಿರುವ ನರಗಳೆಂಬ ದೊಡ್ಡದೊಡ್ಡ ತಂತಿಗಳಿಂದ ಪ್ರಾಯಶಃ ಯುಕ್ತವಾಗಿದ್ದುವು. ಆಗತಾನೆ ಪಿಶಾಚವಾಗಿದ್ದ ಮನುಷ್ಯರು, ಹಿಂದೆಯೇ ಪಿಶಾಚವಾಗಿದ್ದವರ ವಾಸನೆಯನ್ನು ಸಹಿಸಲಾರದೆ ಓಡಿಹೋಗುತಿದ್ದರು ॥೨೪॥

ಕೆಲವುಕಡೆಯಲ್ಲಿ, ಜೀವಸಹಿತವಾಗಿರುವ ಭಟರುಗಳು, ರೂಪಿಕೆಗಳೆಂಬ ಪಿಶಾಚಗಳನ್ನು ನೋಡಿ, ಆಕಸ್ಮಿಕವಾಗಿ ಭಯಪಟ್ಟು, ತಟ್ಟನೆ ಅರ್ಧಮೃತರಾಗುತಿದ್ದರು. ಮತ್ತೆ ಕೆಲವುಕಡೆಯಲ್ಲಿ, ಬೇತಾಳಗಳೂ ರಾಕ್ಷಸರೂ ಪ್ರಾರಂಭಿಸಿರುವ ಕಲ್ಯಾಣೋತ್ಸವವು, ಇನ್ನೂ ಪರಿಪೂರ್ಣವಾಗದೆ ನಡೆಯುತಿದ್ದುವು ॥೨೫॥

ಸ್ವರೂಪಿಕೆಗಳೆಂಬ ಪಿಶಾಚಗಳ ಹೆಗಲಿನಿಂದ ಹೆಣಗಳು ಬೀಳುತಿರುವುದನ್ನು ನೋಡಿ, ಪಿಶಾಚಗಳು ಹೆದರುತಿದ್ದುವು. ಆಕಾಶದಲ್ಲಿ, ಅಪೂರ್ವವಾದ ಭೂತವಿಶೇಷಸಮುದಾಯಗಳು ಓಡಾಡುತ ಸಮ್ಮರ್ದಮಾಡುತಿದ್ದುವು ॥ ೨೬ ॥

ಆಗತಾನೆ ಪ್ರಾಣಬಿಡುತಿರುವ ಮನುಷ್ಯರ ಮಾಂಸವನ್ನು, ಪಿಶಾಚಾದಿಗಳು ಅತಿ ಪ್ರಯತ್ನದಿಂದ ಅಪಹರಿಸುತಿದ್ದುವು. ಭಕ್ಷ್ಯವನ್ನು ಅಪೇಕ್ಷಿಸತಕ್ಕ ತಮ್ಮತಮ್ಮ ಕಡೆಯವರಲ್ಲಿ, ಬೇಕಾದಷ್ಟು ಶವರಾಶಿಗಳನ್ನು ಇಡುತಿದ್ದುವು ॥೨೭॥

ರಕ್ತದಲ್ಲಿ ಮುಣುಗಿ ಶೈತ್ಯದಿಂದ ಜ್ಞಾನಹೋಗಿದ್ದ ಜನಗಳು, ನರಿಗಳ ಮುಖದಿಂದ ಹೊರಕ್ಕೆ ಬರುವ ಬೆಂಕಿಯ ಕಿಡಿಗಳಿಂದ ಶಾಕಹುಟ್ಟಿದವರಾಗಿ, ಅಲ್ಲಲ್ಲಿ ಸ್ವಲ್ಪವಾಗಿ ಸಂಚರಿಸಲುಪಕ್ರಮಿಸುತಿದ್ದರು; ಹೀಗೆ ರಕ್ತಮಯವಾಗಿ ಸಂಚರಿಸುತಿದ್ದವರನ್ನು ನೋಡಿದರೆ, ಹೊಸದಾಗಿ ಅರಳಿರುವ ಅಶೋಕಪುಷ್ಪಗುಚ್ಛಗಳು ಸುತ್ತಲೂ ಹಾರುತಿರುವಂತೆ ಕಾಣುತಿದ್ದಿತು ॥೨೮॥

ಕಬನ್ಧಕನ್ಧರಾಬನ್ಧವ್ಯಗ್ರವೇತಾಳಬಾಲಕಮ್ ।
ಯಕ್ಷರಕ್ಷಃಪಿಶಾಚಾದಿಕಚದಾಕಾಶಗೋಲ್ಮುಕಮ್ ॥೨೯॥
ಆಕಾಶಭೂಧರನಿಕುಞ್ಜಗುಹಾನ್ತರಾಳ
ಪಿಣ್ಡೀಪಮಣ್ಡಿತತಮೋಮ್ಬುದಪೀಠಪೂರಮ್ ।
ವ್ಯಾಲೋಲಭೂತರಭಸಾಕುಲಕಲ್ಪವಾತ
ವ್ಯಾಧೂತಲೋಕಕರಕಾಣ್ಡಕಪೇಟಕಲ್ಪಮ್ ॥೩೦॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ನಿಶಾಚರಾಕುಲರಾತ್ರಿ
ರಣಾಂಗಣವರ್ಣನಂ ನಾಮ ಏಕೋನಚತ್ವಾರಿಂಶಃ ಸರ್ಗಃ.

ಬೇತಾಳಬಾಲಕರು, ಕಬಂಧಗಳಿಗೆ ಕತ್ತುಗಳನ್ನು ತಂದು ಸೇರಿಸುತ ಆಟವಾಡುತಿದ್ದರು. ಯಕ್ಷ ರಾಕ್ಷಸ ಪಿಶಾಚಾದಿಗಳು ಮೇಲಕ್ಕೆ ಎಸೆಯುವ ಕೊಳ್ಳಿಗಳು, ಆಕಾಶಕ್ಕೆ ಹಾರಿಹೋಗಿ, ಅಲ್ಲಿ ಜ್ವಲಿಸುತಿದ್ದುವು ॥೨೯॥

ಮತ್ತು, ಆ ರಣರಂಗದಲ್ಲಿ, ಆ ರಾತ್ರಿಕಾಲದೊಳಗೆ, ತಮಸ್ಸೆಂಬ ಮೇಘಸಮೂಹಗಳು, ಆಕಾಶದಲ್ಲಿಯೂ ಪರ್ವತಗಳಲ್ಲಿಯೂ ಲತಾಗೃಹಗಳಲ್ಲಿಯೂ ಗುಹೆಗಳಲ್ಲಿಯೂ ಒಟ್ಟಾಗಿ ಸೇರಿಸಿ ಕಟ್ಟಿದಂತೆ, ಸ್ಥಿರವಾಗಿ ನೆಲೆಸಿದುವು. ಅಲ್ಲಿ ಅನೇಕ ಭೂತಗಳು ವೇಗವಾಗಿ ಸಂಚರಿಸುತಿದ್ದ ಕಾರಣ, ಪ್ರಳಯಮಾರುತದಿಂದ ಕಂಪಿತವಾದ ಜನಸಮುದಾಯವುಳ್ಳ ಬ್ರಹ್ಮಾಂಡಮಧ್ಯದಂತೆ ಕಾಣುತಿದ್ದಿತು ॥೩೦॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ನಿಶಾಚರಾಕುಲವಾದ
ರಾತ್ರಿ ಯುದ್ಧರಂಗದ ವರ್ಣನೆಯೆಂಬ ಮೂವತ್ತೊಂಭತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಚತ್ವಾರಿಂಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಏವಂ ನಿಶಾಚರಾಚಾರಚಿರಘೋರೇ ರಣಾಙ್ಗಣೇ ।
ಅಹನೀವ ಜನಾಚಾರೇ ಸ್ಥಿತೇ [1]ಯಾಮಾವರೇಹಿತೇ ॥೧॥
ಹಸ್ತಹಾರ್ಯತಮಃಪಿಣ್ಡಸ್ಫುಟಕುಡ್ಯನಿಶಾಗೃಹೇ ।
[2]ಲಾಭೋಚ್ಛದೋಚ್ಛಲಚತೇ ಭೂತಸಙ್ಘೇ ಪ್ರವಲ್ಗತಿ ॥೨॥
ನಿಶ್ಶಬ್ದೇ ಧ್ವಾನ್ತಸಙ್ಘಾರೇ ನಿದ್ರಾರುದ್ಧೇ ಕಕುಬ್ಗಣೇ ।
ಲೀಲಾಪತಿರುದಾರಾತ್ಮಾ ಕಿಞ್ಚಿತ್ಖಿನ್ನಮನಾ ಇವ ॥೩॥
ಪ್ರಾತಃ ಕಾರ್ಯಂ ವಿಚಾರ್ಯಾಶು ಮನ್ತ್ರಿಭಿರ್ಮನ್ತ್ರಕೋವಿದೈಃ ।
ದೀರ್ಘಚನ್ದ್ರಸಮಾಕಾರೇ ಶಯನೇ ಹಿಮಶೀತಲೇ ॥೪॥

ಉತ್ಪತ್ತಿಪ್ರಕರಣದಲ್ಲಿ ನಾಲ್ವತ್ತನೆಯ ಸರ್ಗವು.

ಸುಪ್ತೇ ವಿದೂರಥೇ ವೇಶ್ಮಪ್ರವೇಶೋ ಜ್ಞಪ್ತಿಲೀಲಯೋಃ ।
ಆತಿವಾಹಿಕದೇಹಸ್ಯ ತತ್ತ್ವಂ ಚಾತ್ರ ನಿರೂಪ್ಯತೇ ॥

ವಿದೂರಥರಾಜನು ಮಲಗಿರಲಾಗಿ, ಸರಸ್ವತೀಲೀಲೆಯರಿಬ್ಬರೂ ಮನೆಯನ್ನು ಪ್ರವೇಶಿಸುವಿಕೆಯೂ, ಸೂಕ್ಷ್ಮದೇಹದ ತತ್ವವೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ವತ್ಸ! ರಾಮ! ಪೂರ್ವೋಕ್ತರೀತಿಯಾಗಿ ರಾತ್ರಿಚರಪ್ರಾಣಿಗಳ ನಡತೆಯಿಂದ ಬಹಳಹೊತ್ತು ಘೋರವಾಗಿರುವ ರಣರಂಗದಲ್ಲಿ, ಹಗಲುಹೊತ್ತಿನಲ್ಲಿ ಮನುಷ್ಯರ ಆಚರಣೆಗಳು ನಡೆಯುತ್ತಿರುವಂತೆ—ಯಮದೂತರೂ ಪಿಶಾಚಿಗಳೂ ಮಾಡುವ ಕೆಲಸಗಳು ನಡೆಯುತಿದ್ದುವು. ಕತ್ತಲೆಯು ಉಂಡೆಯಾಗಿ ಕೈಯಿಂದ ಅಪಹರಿಸಲು ಸಾಧ್ಯವಾಗುವಂತಿದ್ದಿತು; ಇಂತಹ ತಮಃಪಿಂಡಗಳು, ಆ ರಾತ್ರಿಯೆಂಬ ಗೃಹಕ್ಕೆ, ಪ್ರಕಾಶವಾದ ಗೋಡೆಯಾಗಿದ್ದುವು. ಆಗ ಪ್ರಾಣಿವರ್ಗಗಳು, ತಾವು ತಿನ್ನಬೇಕೆಂದಪೇಕ್ಷಿಸಿದ ಭಕ್ಷ್ಯಗಳು ಯಥೇಚ್ಛವಾಗಿ ಸಿಕ್ಕಿದಾಗ, ತಮ್ಮ ವಸಗಳನ್ನೂ ಮೇಲಕ್ಕೆ ಹಾರಿಸಿಕೊಂಡು ಕುಣಿಯುತಿದ್ದುವು; ಮತ್ತು ಇವುಗಳ ಯಾಚನಾದೈನ್ಯವೆಂಬುದು ಓಡಿಹೋಯಿತು. ಆ ಯುದ್ಧರಂಗದ ಸ್ಥಿತಿ ಈರೀತಿಯಾಗಿರಲಾಗಿ, ಅಂಧಕಾರವು ಸದ್ದಿಲ್ಲದೆ ಸಂಚರಿಸುತ್ತಿರಲಾಗಿ, ಸಮಸ್ತ

---

1. ಯಾಮಾನಾಂ = ಯಮದೂತನಾಮ್, ಅವರಾಣಾಂ = ನೀಚಾನಾಂ ಪಿಶಾಚಾದೀನಾಂ ಚ. ಈಹಿತೇ = ಚೇಷ್ಟಿತೇ.
2. ಲಾಭೇ = ಭಕ್ಷ್ಯಸಮೃದ್ಧಿಪ್ರಾಪ್ತೌ, = ಉಚ್ಛದಂ = ಉದ್ಗತವಸ್ತ್ರಮ್; ಉಚ್ಛಲಂ = ಪಲಾಯಮಾನಂ, ಚತಂ = ಯಾಚ್ಞಾದೈನ್ಯಂ ಯಸ್ಮಾತ್.

ಚನ್ದ್ರೋದರಸಿಭೇ ಚಾರುಗೃಹೇ ಶಿಶಿರಕೋಟರೇ |
ನಿತಾಂ ಮುಹೂರ್ತ್ತಮಗಮತ್ ಮುದ್ರಿತೇಕ್ಷಣಪುಷ್ಕರಃ ||೫||
ಅಥ ತೇ ಲಲನೇ ವ್ಯೋಮ ತತ್ ಪರಿತ್ಯಜ್ಯ ತದ್ಗೃಹಮ್ |
ರನ್ಧ್ರೈರ್ವಿವಿಶತುರ್ವಾತಲೇಖೇ[1]ಬ್ಜಮುಕುಳಂ ಯಥಾ ||೬||

ಶ್ರೀ ರಾಮ ಉವಾಚ.

ಕಿಯನ್ಮಾತ್ರಮಿದಂ ಸ್ಥೂಲಂ ಶರೀರಂ ವಾಗ್ವಿದಾಂ ವರ |
ರನ್ಧ್ರೇಣ ತನ್ತುತನುನಾ ಕಥಮಾಶ್ವಾವಿಶತ್ ಪ್ರಭೋ ||೭||

ಶ್ರೀ ವಸಿಷ್ಠ ಉವಾಚ.

ಆಧಿಭೌತಿಕದೇಹೋಹಂ ಇತಿ ಯಸ್ಯ ಮತಿಭ್ರಮಃ |
ತಸ್ಯಾಸಾವಣುರನ್ಧ್ರೇಣ ಗನ್ತುಂ ಶಕ್ನೋತಿ ನಾನಘ ||೮||
ರೋಧಿತೋಹಮನೇನೇತಿ ನ ಮಾನ್ಯತ್ರೇತಿ ಯಸ್ಯ ಧೀಃ |

ದಿಕ್ಕಿನ ಜನಗಳೂ ನಿದ್ರಾವೃತರಾಗಿರಲಾಗಿ, ಆ ಮಹಾತ್ಮನಾದ ಪದ್ಮರಾಜನು ಸ್ವಲ್ಪ ಖಿನ್ನವಾದ ಮನಸುಳ್ಳವನಂತೆ, ಕಾರ್ಯ್ಯಾಲೋಚನಾದಕ್ಷರಾದ ಮಂತ್ರಿಗಳೊಡನೆ ಬೆಳಗ್ಗೆ ಮಾಡಬೇಕಾದ ಕೆಲಸವನ್ನು ಬೇಗನೆ ಆಲೋಚಿಸಿದವನಾಗಿ, ಚಂದ್ರಮಂಡಲಮಧ್ಯದಂತೆ ಒಳಗಡೆ ತಣ್ಣಗಿರುವ ಸುಂದರವಾದ ಮಂದಿರದಲ್ಲಿ, ದೀರ್ಘವಾದ ಚಂದ್ರನಹಾಗೆ ಕಾಣಿಸುವ ಹಿಮದಂತೆ ಶೀತಲವಾದ ಉತ್ತಮವಾದ ಹಾಸಿಗೆಯಮೇಲೆ, ನೇತ್ರಕಮಲಗಳನ್ನು ಮುಚ್ಚಿಕೊಂಡು, ಒಂದು ಕ್ಷಣಕಾಲ ನಿದ್ರೆಹೊಂದಿದನು ||೧—೫||

ಬಳಿಕ, ಆ ಲೀಲಾಸರಸ್ವತಿಯರಿಬ್ಬರೂ ಇದುವರೆಗೆ ತಾವು ನಿಂತಿದ್ದ ಆ ಅಂತರಿಕ್ಷಪ್ರದೇಶವನ್ನು ಪರಿತ್ಯಜಿಸಿ, ಸಣ್ಣದಾದ ಎರಡು ವಾಯುರೇಖೆಗಳು ಕಮಲಮುಕುಳವನ್ನು ಪ್ರವೇಶಿಸುವಂತೆ ಸಣ್ಣ ರಂಧ್ರಗಳಿಂದ ಆ ಮನೆಯನ್ನು ಪ್ರವೇಶಿಸಿದರು ||೬||

ಹೀಗೆ ಹೇಳುತಿರುವ ವಸಿಷ್ಠಮುನಿಯನ್ನು ಕುರಿತು ಶ್ರೀರಾಮನು ಪ್ರಶ್ನೆಮಾಡುವನು:—

ಶಿಷ್ಯರಿಗುಪದೇಶಿಸುವವರಲ್ಲಿ ಪ್ರಶಸ್ತರಾದ ಮಹಾಗುರುವೇ! ಈ ನಮ್ಮ ಶರೀರವು ಎಷ್ಟು ಸ್ಥೂಲವಾಗಿರುವುದು! ಹೀಗಿರುವಾಗ, ಆ ಲೀಲೆಯೂ ಸರಸ್ವತಿಯೂ, ದಾರದಂತೆ ಸೂಕ್ಷ್ಮವಾದ ರಂಧ್ರದಿಂದ ಬೇಗನೆ ಪ್ರವೇಶಮಾಡಿದರೆಂಬುದು ಹೇಗೆ? ||೭||

ಶ್ರೀ ವಸಿಷ್ಠರು ಉತ್ತರಹೇಳುವರು:—

ಎಲೈ ನಿರ್ದೋಷನಾದ ರಾಮನೆ! ಯಾವನಿಗೆ ನಾನು ಪಾಂಚಭೌತಿಕಶರೀರವೆಂಬ ಬುದ್ಧಿಭ್ರಮೆ ಇರುವುದೋ, ಅವನಿಗೆ ಈ ಸ್ಥೂಲದೇಹವು ಸಣ್ಣ ರಂಧ್ರದೊಳಗೆ ಪ್ರವೇಶಮಾಡಲು ಸಮರ್ಥವಾಗುವುದಿಲ್ಲ ||೮||

ಯಾವನ ಬುದ್ಧಿಯು, ನಾನು ಇದರಿಂದ ತಡೆಯಲ್ಪಟ್ಟಿರುವೆನೆಂದೂ—ನಾನು ಇದರೊಳಗೆ ಹಿಡಿಸಲಾರೆನೆಂದೂ ಹಿಂದೆ ನೂರಾರುವೇಳೆ ಅನುಭವಿಸಿದುದನ್ನೇ ಅನುಭವಿಸತಕ್ಕ

---

1. ಸನ್ಧಿರಾರ್ಷಃ.

ಅನುಭೂತಾನುಭವತೀ[1] ಭವತೀ[2]ತ್ಯನುಭೂಯತೇ ||೯||
ಯೇನಾನುಭೂತಂ [3]ಪೂರ್ವಾರ್ಥಂ ಗಚ್ಛಾಮಿತಿ ಸ ತತ್ಕ್ರಿಯಃ |
ಕಥಂ ಭವತಿ ಪಶ್ಚಾರ್ಥಂ ಗಮನೋನ್ಮುಖಚೇತನಃ ||೧೦||
ನ ಹಿ ವಾರ್ಯೂರ್ಧ್ವಮಾಯಾತಿ ನಾಧೋ ಗಚ್ಛತಿ ಪಾವಕಃ |
ಯಾ ಯಥೈವ ಪ್ರವೃತ್ತಾ ಚಿತ್ ಸಾ ತಥೈವ ಪ್ರತಿಷ್ಠಿತಾ ||೧೧||
ಛಾಯಾಯಾಮುಪವಿಷ್ಟಸ್ಯ ಕುತಸ್ತಾಪಾನುಭೂತಯಃ |
ಯಸ್ಯ ಸಂವೇದನೇನ್ಯೋರ್ಥಃ ಕೇನಚಿನ್ನಾನುಭೂಯತೇ ||೧೨||
ಯಥಾ ಸಂವಿತ್ ತಥಾ ಚಿತ್ತಂ ಸಾ ತಥಾವಸ್ಥಿತಿಂ ಗತಾ |

ದಾಗಿರುವುದೋ, ಅವನು ಈರೀತಿಯಾಗಿ ಗಮನಾಭಾವವನ್ನೇ (ಹೋಗದಿರುವಿಕೆ) ಅನುಭವಿಸುವನು ||೯||

ಯಾವನಾದರೆ, ಪೂರ್ವವಾಸನಾಪರಿಪೂರ್ಣನಾಗಿ ನಾನು ಸೂಕ್ಷ್ಮತಮವಾದ ಛಿದ್ರದಲ್ಲಿಯಾದರೂ ಹೋಗುವೆನೆಂದು ಅನೇಕವೇಳೆ ಅನುಭವವುಳ್ಳವನಾಗುವನೋ, ಅವನು ಆವಿಧವಾಗಿ ಗಮನದಲ್ಲಿ ಅಭಿಮುಖವಾದ ಚೇತನಸ್ವಭಾವವುಳ್ಳವನಾಗಿಬಿಡುವುದರಿಂದ, ಸ್ಥೂಲದೇಹಾನುಗುಣವಾದ ನಿರೋಧಾದಿವ್ಯಾಪಾರವುಳ್ಳವನಾಗಿ ಹೇಗೆ ಆಗುವನು? ||೧೦||

ಈ ವಸ್ತುಸ್ವಭಾವವು ಒಳಗೆ ಮಾತ್ರವೇ ಹೀಗಿರುವುದೆಂದು ತಿಳಿಯಬಾರದು; ಬಾಹ್ಯಪ್ರಪಂಚದಲ್ಲಿಯೂ ಹೀಗೆಯೇ ಇರುವುದು. ಜಲವು ಎಂದಿಗೂ ಮೇಲ್ಮುಖವಾಗಿ ಹೋಗುವುದಿಲ್ಲ; ಅಗ್ನಿಯೆಂದಿಗೂ ಕೆಳಮುಖವಾಗಿಯೂ ಹೋಗುವುದಿಲ್ಲ. ಹೀಗೆ ಯಾವ ಚೈತನ್ಯಕ್ಕೆ ಯಾವರೀತಿಯಾಗಿ ಪೂರ್ವದಲ್ಲಿ ಶಕ್ತ್ಯಾವಿರ್ಭವಿಸುವುದೋ, ಅದು ಆರೀತಿಯಾಗಿಯೇ ಸ್ಥಿರಪಡುವುದು ||೧೧||

ಸಾಮಾನ್ಯವಾಗಿ ಒಬ್ಬನು ನೆಳಲಿನಲ್ಲಿ ಕುಳಿತಿದ್ದರೆ ಅವನಿಗೆ ತಾಪಾನುಭವವೆಲ್ಲಿ ಬರುವುದು? ಹೀಗೆ ಸ್ಥೂಲದೇಹಾಭಿಮಾನವಿಲ್ಲದಿರುವುದರಿಂದ ಯೋಗಿ ಪಿಶಾಚ ಇತ್ಯಾದಿಗಳಿಗೂ ನಿರೋಧ (ತಡೆ) ಮುಂತಾದ ದುಃಖಾನುಭವವಿಲ್ಲದಿರುವಾಗ, ಯಾವ ಪರಮಾತ್ಮನ ಸಾಕ್ಷಾತ್ಕಾರವಾದಮೇಲೆ ಪದಾರ್ಥಾಂತರವನ್ನು ಯಾವನೂ ಅನುಭವಿಸುವುದೇ ಇಲ್ಲವೋ— ಅಂತಹ ಪರಮಾತ್ಮಸಾಕ್ಷಾತ್ಕಾರವಾದವರಿಗೆ ಹೇಳತಕ್ಕುದೇನು ? ಅಂತು ಅಧಿಷ್ಠಾನ (ಆಶ್ರಯ) ರೂಪವಾದ ಜ್ಞಾನವು ಯಾವರೀತಿಯಾಗಿ ಪ್ರವರ್ತಿಸಿದರೆ, ಎಲ್ಲವೂ ಅದೇರೀತಿಯಾಗಿ ಪ್ರವರ್ತಿಸುವುವೆಂದು ತಿಳಿಯಬೇಕು ||೧೨||

ಆದರೆ—'ಅಧಿಷ್ಠಾನವಾದ ಜ್ಞಾನದಲ್ಲಿ ಸ್ಥೂಲತ್ವಸೂಕ್ಷ್ಮತ್ವಾದಿಶಕ್ತ್ಯಾವಿರ್ಭವಿಸಿದರೂ ಮನಸ್ಸು ಆರೀತಿಯಾಗಿ ಅದನ್ನನುಸರಿಸಿ ಕೆಲಸಮಾಡುವ ಬಗೆ ಹೇಗೆ?'—ಎಂದು ಶಂಕೆಯುಂಟಾಗಬಹುದು. ಜ್ಞಾನವು ಯಾವರೀತಿಯಾಗಿರುವುದೋ, ಮನಸ್ಸೂ ಅದೇರೀ

---

1. ನುವಂಭಾವಶಬ್ದಸಃ. ಅನುಭವನ್ನಿತ್ಯರ್ಥಃ.
2. ಇತಿ = ಏವಂರೀತ್ಯಾ, ಗಮನಾಭಾವಇತ್ಯರ್ಥಃ.
3. ಪೂರ್ವಮಾ = ಪೂರ್ವಕಾಲಿಕವಾಸನಯಾ, ಋದ್ಧಂ = ಪರಿಪೂರ್ಣಂ ಯಥಾತಥಾ.

ಪರಮೇಣ ಪ್ರಯತ್ನೇನ ನೀಯತೇಽನ್ಯದಶಾಂ ಪುನಃ ||೧೩||
ಸರ್ಪೈಕಪ್ರತ್ಯಯೋ ರಜ್ಜ್ವಾಂ ಅಸರ್ಪಪ್ರತ್ಯಯೋ ಬಲಾತ್ |
ನಿವರ್ತತೇಽನ್ಯಥಾ ತ್ವೇಷಃ ತಿಷ್ಠತ್ಯೇವ ಯಥಾ ಸ್ಥಿತಃ ||೧೪||
ಯಥಾ ಸಂವಿತ್ ತಥಾ ಚಿತ್ತಂ ಯಥಾ ಚಿತ್ತಂ ತಥೇಹಿತಮ್ |
ಬಾಲಂ ಪ್ರತ್ಯಪಿ ಸಂಸಿದ್ಧಂ ಏತತ್ ಕೋ ನಾನುಭೂತವಾನ್ ||೧೫||
ಯಃ ಪುನಃ ಸ್ವಪ್ನಸಙ್ಕಲ್ಪಪುರುಷಪ್ರತಿಮಾಕೃತಿಃ |
ಆಕಾಶಮಾತ್ರಕಾಕಾರಃ ಸ ಕಥಂ ಕೇನ ರೋಧ್ಯತೇ ||೧೬||
ಚಿತ್ತಮಾತ್ರಂ ಶರೀರಂ ತು ಸರ್ವಸ್ಯೈವ ಹಿ ಸರ್ವತಃ |
ವಿದ್ಯತೇ ವೇದನಾಚ್ಛೈತತ್ ಕ್ವಚಿದೇತೀವ ಹೃದ್ಗತಾತ್ ||೧೭||

ತಿಯಾಗಿರುವುದು. ಜ್ಞಾನವೇ ಆ ಮನೋರೂಪವಾಗಿ ಸ್ಥಿರಪಟ್ಟಿರುವುದು. 'ಈ ಚಿತ್ತವು ಅವಸ್ಥಾಂತರವನ್ನು (ಮತ್ತೊಂದು ದಶೆ) ಹೊಂದುತಿದೆಯಲ್ಲ! ಅದು ಹೇಗೆ?' ಎಂದರೆ, ಚಿತ್ತಕ್ಕೆ ಅವಸ್ಥಾಂತರವುಂಟಾಗುವುದು ಯೋಗ ಜ್ಞಾನ ಅಭ್ಯಾಸ ಮುಂತಾದ ಪ್ರಯತ್ನ ವಿಶೇಷದಿಂದಲೆಂದು ತಿಳಿಯಬೇಕು ||೧೩||

ಈಗ ಜ್ಞಾನಪ್ರಯತ್ನದಿಂದ ಅವಸ್ಥಾಂತರವುಂಟಾಗುವುದಕ್ಕೊಂದುದಾಹರಣೆಯನ್ನು ನೋಡುವವನಾಗು. ರಜ್ಜುವನ್ನು ನೋಡಿ ಸರ್ಪವೆಂದು ದೃಢವಾದ ಪ್ರತ್ಯಯವುಂಟಾಗಿರುವುದು; ಇದು ನಿವೃತ್ತಿಹೊಂದಬೇಕಾದರೆ, ಕಾರಣವಿಲ್ಲದೆ ಸುಮ್ಮನೆ ಆಗುವುದೇ? ಬಲಾತ್ಕಾರಪೂರ್ವಕವಾಗಿ ಸರ್ಪವಲ್ಲವೆಂಬ ಪ್ರತ್ಯಯವುಂಟಾದರೆ, ಆಗ ಅದು ಹೋಗುವುದು. ಹಾಗಲ್ಲದಿದ್ದರೋ, ಆ ಸರ್ಪಪ್ರತ್ಯಯವು ಪೂರ್ವದಲ್ಲಿದ್ದಂತೆಯೇ ಸ್ಥಿರವಾಗಿ ನಿಂತಿರುವುದು||

ಹೀನೆ ಜ್ಞಾನವು ಯಾವರೀತಿಯಾಗುವುದೋ, ಮನಸ್ಸೂ ಅದೇರೀತಿಯಾಗುವುದು. ಮನಸ್ಸು ಹೇಗೆ ಆಗುವುದೋ, ಕೆಲಸವೂ ಹಾಗೆಯೇ ಆಗುವುದು. ಇದು ಒಬ್ಬ ಬಾಲಕನ ವಿಷಯದಲ್ಲಿಯೂ ಸ್ಪಷ್ಟವಾಗಿರುವುದು. ಅಂತು ಈ ವಿಷಯವು ಸರ್ವರಿಗೂ ಅನುಭವಸಿದ್ಧವಾಗಿಯೇ ಇರುವುದು ||೧೫||

ಯಾವನಾದರೆ ಸ್ವಪ್ನಸಂಕಲ್ಪಗಳಲ್ಲಿ ಕಂಡ ಪುರುಷನಿಗೆ ಸಮಾನವಾಗಿ ಆಕಾಶಮಾತ್ರವಾದ ಶರೀರವುಳ್ಳವನಾಗುವನೋ, ಅವನಿಗೆ ತಡೆಯುಂಟುಮಾಡುವ ಪದಾರ್ಥವಾವುದು? ಅದು ಹೇಗೆ? ||೧೬||

ಆದರೆ—'ಸ್ವಭಾವತಃ ಪಂಚಭೂತವಿಕಾರವಾದ ಈ ದೇಹವು, ಜ್ಞಾನಬಲದಿಂದಲಾಗಲಿ ಚಿತ್ತಶರೀರತ್ವ (ಸೂಕ್ಷ್ಮದೇಹಭಾವ) ವನ್ನು ಹೊಂದುವುದು ಹೇಗೆ?'—ಎಂದು ಕೇಳಿದರೆ, ಸರ್ವಪ್ರಾಣಿಗಳಿಗೂ ಸರ್ವವಿಧವಾಗಿಯೂ ಶರೀರವೆಂಬುದು ಕೇವಲ ಚಿತ್ತಮಾತ್ರವೇ ಆಗಿರುವುದು. ಆದರೆ ನಮ್ಮ ಮನೋಗತವಾದ ಜ್ಞಾನಬಲದಿಂದ—ಇದು ಆಯಾರೀತಿಯಾಗಿ ಬರುವಂತೆ ತೋರುತ್ತದೆಯಲ್ಲದೆ, ಪರಮಾರ್ಥವಾಗಿ ಭೂತಗಳು ಚಿತ್ತಕ್ಕಿಂತ ಬೇರೆಯಾಗಿಲ್ಲ ||೧೭||

ಯಥಾಭಿಮತಮೇವಾಸ್ಯ ಭವತ್ಯಸ್ತಮಯೋದಯಮ್ ।
ಆದಿಸರ್ಗೇ ಸ್ವಭಾವೋತ್ಥಂ ಪಶ್ಚಾದ್ದ್ವೈತೈಕ್ಯಕಾರಣಮ್ ॥೧೮॥
ಚಿತ್ತಾಕಾಶಂ ಚಿದಾಕಾಶಂ ಆಕಾಶಂ ಚ ತೃತೀಯಕಮ್ ।
ವಿದ್ಧ್ಯೇತತ್ ತ್ರಯಮೇಕಂ ತ್ವಂ ಅವಿನಾಭವನಾವಶಾತ್ ॥೧೯॥
ಏತಚ್ಚಿತ್ತಶರೀರತ್ವಂ ವಿದ್ಧಿ ಸರ್ವಗತೋದಯಮ್ ।
ಯಥಾಸಂವೇದನೇಚ್ಛತ್ವಾತ್ ಯಥಾಸಂವೇದನೋದಯಮ್ ॥೨೦॥
ವಸತಿ ತ್ರಸರೇಣ್ವಂತಃ ಧ್ರಿಯತೇ ಗಗನೋದರೇ ।
ಲೀಯತೇಙ್ಕುರಕೋಶೇಷು ರಸೀಭವತಿ ಪಲ್ಲವೇ ॥೨೧॥
ಉಲ್ಲಸತ್ಯಮ್ಬುವೀಚಿತ್ವೇ ಪ್ರನೃತ್ಯತಿ ಶಿಲೋದರೇ ।
ಪ್ರವರ್ಷತ್ಯಮ್ಬುದೋ ಭೂತ್ವಾ ಶಿಲೀಭೂಯಾವತಿಷ್ಠತೇ ॥೨೨॥

ಈ ಭೂತಜಾತದ ಅಸ್ತೋದಯಗಳು, ಆ ಪರಮಾತ್ಮನ ಅಭಿಮತವಿದ್ದಂತೆಯೇ ಆಗುವುವು. ಆದಿಸೃಷ್ಟಿಯಲ್ಲಿ ಇವು ಸ್ವಾಭಾವಿಕವಾದ ಅಜ್ಞಾನದಿಂದ ಉಂಟಾದಂತೆ ತೋರುವುವು; ಬಳಿಕ ಸ್ಥೂಲಭೂತಗಳೂ ಭೌತಿಕಪ್ರಾಣಿಗಳೂ ಪೃಥಕ್ಕಾಗಿರುವುವೆಂಬ ಜ್ಞಾನಕ್ಕೂ, ಇವೆರಡೂ ಸೇರಿದಾಗ ಒಂದೇ ಇರುವುದೆಂಬ ಜ್ಞಾನಕ್ಕೂ, ಅವೇ ಕಾರಣವಾಗುವುವು ॥೧೮॥.

ಅಯ್ಯಾ! ರಾಮ! ಹೀಗೆ ಚಿತ್ತಾಕಾಶ ಚಿದಾಕಾಶ ಮಹಾಕಾಶ ಈ ಮೂರೂ ಬೇರೆಬೇರೆಯಾಗಿ ಅವಸ್ಥಿತಿಹೊಂದದಿರುವ ಕಾರಣ, ಈ ಮೂರೂ ಒಂದೇ ಎಂದು ನೀನು ತಿಳಿ ॥೧೯॥

ಹೀಗೆ ಈ ಸೂಕ್ಷ್ಮಸ್ಥೂಲದೇಹಗಳೆರಡೂ ಅಧಿಷ್ಠಾನಕ್ಕೆ (ಆಶ್ರಯಭೂತವಾದ ಚಿತ್ತು) ಅಧೀನವಾದ ಸದ್ಭಾವವುಳ್ಳವುಗಳೇ ಆಗಿದ್ದರೂ, ಸೂಕ್ಷ್ಮದೇಹಕ್ಕೆ ನಿರೋಧವಿಲ್ಲದಿರುವುದಕ್ಕೂ ಸ್ಥೂಲದೇಹಕ್ಕೆ ಮಾತ್ರ ನಿರೋಧವುಂಟಾಗುವುದಕ್ಕೂ ಕಾರಣವಾದ ಒಂದು ವಿಶೇಷವಿರುವುದು. ಏನೆಂದರೆ:—ಈ ಚಿತ್ತ (ಸೂಕ್ಷ್ಮ) ಶರೀರತ್ವವೆಂಬುದು ಸರ್ವವಸ್ತುಗಳಲ್ಲಿಯೂ ಆವಿರ್ಭವಿಸತಕ್ಕ ಶಕ್ತಿಯುಳ್ಳದಾಗಿರುವುದು. ಅದೇತಕ್ಕೆಂದರೆ,—ಇದು ಜ್ಞಾನಾನುಗುಣವಾದ ಇಚ್ಛೆಯುಳ್ಳದಾಗಿರುವಕಾರಣ, ಜ್ಞಾನಾನುಗುಣವಾದ ಉದಯವುಳ್ಳದಾಗಿಯೂ ಇರುವುದು. ಹೀಗಿರುವುದರಿಂದ, ಸೂಕ್ಷ್ಮದೇಹವು ಸರ್ವವಸ್ತುಗಳಲ್ಲಿಯೂ ಬೇಕಾದಂತೆ ಉದಯವುಳ್ಳದಾಗಿರುವುದೆಂದು ತಿಳಿಯಬೇಕು ॥೨೦॥

ಈ ಚಿತ್ತಶರೀರತ್ವವು ಸರ್ವಗತವಾಗಿರುವುದು ಹೇಗೆಂದರೆ,—ಇದು ತ್ರಸರೇಣುವಿನ (ಬಿಸಿಲುಕೋಲಿನಲ್ಲಿ ಕಾಣುವ ಧೂಳಿ) ಒಳಗೂ ವಾಸಮಾಡುವುದು; ಅಂತರಿಕ್ಷಮಧ್ಯದಲ್ಲಿಯೂ ಇರುವುದು; ಮೊಳಕೆ ಮೊಗ್ಗುಗಳಲ್ಲಿಯೂ ಲೀನವಾಗುವುದು; ಚಿಗುರಿನಲ್ಲಿಯೂ ರಸರೂಪವಾಗಿರುವುದು ॥೨೧॥

ಇದು ಜಲತರಂಗಾವಸ್ಥೆಯಲ್ಲಿ ಉಲ್ಲಾಸಪಡುವುದು; ಶಿಲೆಯ ಒಳಗಡೆ ನರ್ತಿಸುವುದು; ಮೇಘವಾಗಿ ಮಳೆಗರೆವುದು; ತಾನೇ ಕಲ್ಲಾಗಿಯೂ ಇರುವುದು ॥೨೨॥

ಯಥೇಚ್ಛಮಮ್ಬರೇ ಯಾತಿ ಜಠರೇಷ್ಟಿಜ ಭೂಭೃತಾಮ್ ।
ಅನನ್ತರಾಕಾಶವಪುಃ ಧತ್ತೇಽಥ ಪರಮಾಣುವತ್ ॥೨೩॥
ಭವತ್ಯದ್ರಿರ್ಧರಾಧಾರೋ ಬದ್ಧಪೀಠೋ ನಭಶ್ಶಿರಾಃ ।
ದೇಹಸ್ಯಾನ್ತರ್ಬಹಿರಪಿ ದಧದ್ವನತನೂರುಹಮ್ ॥೨೪॥
ಭವತ್ಯಾಕಾಶಮಾಧತ್ತೇ ಕೋಟೀಃ ಪದ್ಮಜಸದ್ಮನಾಮ್ ।
ಅನನ್ಯಾಃ ಸ್ವಾತ್ಮನೋಽಮ್ಭೋಧಿಃ ಆವರ್ತರಚನಾಇವ ॥೨೫॥
ಅನುದ್ವಿಗ್ನಪ್ರಬೋಧೋಽಸೌ ಸರ್ಗಾದೌ ಚಿತ್ತದೇಹಕಃ ।
ಆಕಾಶಾತ್ಮಾ ಮಹಾನ್ ಭೂತ್ವಾ ವೇತ್ತಿ ಪ್ರಕೃತತಾಂ ತತಃ ॥೨೬॥
ಅಸತ್ಯಮೇವ ವಾರಿತ್ವೇ ಬುದ್ಧ್ಯೋದೇತೀವ ತತ್ ತಥಾ ।
ವನ್ಧ್ಯಾಪುತ್ರೋಽಯಮಸ್ತೀತಿ ಯಥಾ ಸ್ವಪ್ನೇ ಭ್ರಮೋ [1]ನರಃ ॥೨೭॥

ಶ್ರೀರಾಮ ಉವಾಚ.

ಕಿಂ ಚಿತ್ತಮೇತದ್ಭವತಿ ಕಿಂ ವಾ ಭವತಿ ನೋ ಕಥಮ್ ।

ಇದು ಯಥೇಚ್ಛವಾಗಿ ಅಂತರಿಕ್ಷದಲ್ಲೂ ಪರ್ವತೋದರಗಳಲ್ಲಿಯೂ ಹೋಗುವುದು; ಮತ್ತು ಒಳಗೆ ನಿರವಕಾಶವಾದ ಸ್ವರೂಪವುಳ್ಳದಾಗಿ ಪರಮಾಣುದಶೆಯನ್ನೂ ಧರಿಸುವುದು॥

ಇದು ಭೂಮಿಗೆ ಆಶ್ರಯಭೂತವಾಗಿ—ದೃಢಮೂಲವಾಗಿ—ಅಂತರಿಕ್ಷವೇ ಶಿರಸ್ಸಾಗಿರುವ ಪರ್ವತವಾಗಿರುವುದು; ಈ ಪರ್ವತಾವಸ್ಥೆಯಲ್ಲಿ ದೇಹದ ಒಳಗೂ ಹೊರಗೂ ವನಗಳೆಂಬ ರೋಮಸಮುದಾಯವನ್ನು ಧರಿಸುವುದು ॥೨೪॥

ಇದು, ಸ್ವಯಂ ಆಕಾಶವೂ ಆಗುವುದು ; ಸಮುದ್ರವು ತನಗಿಂತ ಬೇರೆಯಾದ ಪದಾರ್ಥವಲ್ಲದಿರುವ ತರಂಗರಚನೆಯನ್ನು ಧರಿಸುವಂತೆ, ಇದು—ತನಗಿಂತ ಪೃಥಕ್ಕಲ್ಲದ ಅನೇಕಕೋಟಿ ಬ್ರಹ್ಮಾಂಡಗಳನ್ನು ಧರಿಸುವುದು ॥೨೫॥

ಈ ಚಿತ್ತದೇಹವು, ಸೃಷ್ಟ್ಯಾದಿಯಲ್ಲಿ, ಸ್ವಲ್ಪವೂ ವ್ಯತ್ಯಾಸವಿಲ್ಲದೆ ಕರ್ಮಾನುಸಾರಿಯಾದ ಪ್ರಬೋಧವುಳ್ಳದಾಗಿ, ಕ್ರಮೇಣ ಆಕಾಶರೂಪವಾದುದಾಗಿ, ಮಹತ್ತತ್ವಸ್ವರೂಪವನ್ನು ಪಡೆದು, ಬಳಿಕ ಪ್ರಾರಬ್ಧಕರ್ಮಾನುಸಾರಿಯಾದ ಪ್ರವೃತ್ತಿಯನ್ನು ನೋಡುವುದು॥

ಆದರೆ, ಈ ಪೂರ್ವೋಕ್ತವಾದ ಪ್ರವೃತ್ತಿಯೆಲ್ಲವೂ, ಸರಿಯಾದ ತತ್ವಜ್ಞಾನವಿಲ್ಲದವರಿಗೆ, ಮೃಗತೃಷ್ಣಿಕೆಯಲ್ಲಿ—ಅಸತ್ಯವಾಗಿಯೇ ಇದ್ದರೂ ಜಲತ್ವವು ನಮ್ಮ ಬುದ್ಧಿಯಿಂದ ಹೇಗೆ ಉದ್ಭವಿಸುವಂತಿರುವುದೋ, ಸ್ವಪ್ನಕಾಲದಲ್ಲಿ—ವಂಧ್ಯಾಪುತ್ರನಾದ ಈ ಮನುಷ್ಯನಿರುವನೆಂದು ಹೇಗೆ ಭ್ರಮೆಯುಂಟಾಗುವುದೋ, ಆ ರೀತಿಯಾಗಿರುವುದೆಂದು ತಿಳಿಯಬೇಕು॥

ಶ್ರೀರಾಮನು ಪ್ರಶ್ನೆಮಾಡುವನು:—

ಸ್ವಾಮೀ! ತಾವು ಅಪ್ಪಣೆಕೊಡಿಸಿದಮೇರೆಗೆ—"ಸೂಕ್ಷ್ಮತಮವಾದ ಚಿತ್ತವೇ ಸಮಸ್ತಜಗತ್ತು; ಇದು ಸರ್ವಶಕ್ತಿಯುಕ್ತವಾದುದು ; ಇದೇ, ತತ್ವತಿಳಿಯದಿದ್ದಾಗ ಸ್ಥೂಲಶರೀರದಂತಾಗಿ ಪರಾಧೀನವಾಗುವುದು ; ಇದಕ್ಕೇ ನಿರೋಧಾದಿಗಳು ಸಂಭವಿಸುವುವು. ತತ್ವತಿಳಿದಕಾಲದಲ್ಲಿ, ಇದು ಸಕಲವ್ಯಾಪಾರದಲ್ಲಿಯೂ ಅಪ್ರತಿಹತವಾಗಿರುವುದು."—

---

1. ಇದಂ ಪದಂ ವನ್ಧ್ಯಾಪುತ್ರಇತ್ಯತ್ರ ಸಮ್ಬಧ್ಯತೇ.

ಕಥಮೇವ ನ ಸದ್ರೂಪಂ ನಾನ್ಯದ್ಭವತಿ ವೀಕ್ಷಣಾತ್ ||೨೮||

ಶ್ರೀ ವಸಿಷ್ಠ ಉವಾಚ.

ಪ್ರತ್ಯೇಕಮೇವ ಯಚ್ಚಿತ್ತಂ ತದೇವಂರೂಪಶಕ್ತಿಕಮ್ |
ಪೃಥಕ್ ಪ್ರತ್ಯೇಕಮುದಿತಃ ಪ್ರತಿಚಿತ್ತಂ ಜಗದ್ಭ್ರಮಃ ||೨೯||
ಕ್ಷಣಕಲ್ಪಜಗತ್ಸಙ್ಘಾಃ ಸಮುದ್ಯನ್ತಿ ಗಳನ್ತಿ ಚ |
ನಿಮೇಷಾತ್ ಕಸ್ಯಚಿತ್ ಕಲ್ಪಾತ್ ಕಸ್ಯಚಿಚ್ಚ ಕ್ರಮಂ ಶೃಣು ||೩೦||
ಮರಣಾದಿಮಯೀಂ ಮೂರ್ಛಾಂ ಪ್ರತ್ಯೇಕೇನಾನುಭೂಯತೇ |
ಯೈಷಾ ತಾಂ ವಿದ್ಧಿ ಸುಮತೇ ಮಹಾಪ್ರಳಯಯಾಮಿನೀಮ್ ||೩೧||
ತದನ್ತೇ ತನುತೇ ಸರ್ಗಂ ಸರ್ವಏವ ಪೃಥಕ್‌ಪೃಥಕ್ |

ಎಂದು ಸ್ಪಷ್ಟವಾಗಿ ಏರ್ಪಟ್ಟಿತು. ಹಾಗಾದಮೇಲೆ ನನಗೊಂದು ಸಂಶಯವುಂಟಾಗುವುದು :—ಈ ನಮ್ಮಗಳ ಚಿತ್ತವೆಲ್ಲವೂ ಪೃಥಕ್ಪೃಥಕ್ಕಾಗಿ ಈ ವಿಧವಾದ ಶಕ್ತಿಯುಳ್ಳದಾಗಿರುವುದೆ? ಅಥವಾ ಹಾಗಿಲ್ಲವೆ? ಪ್ರಥಮಪಕ್ಷವನ್ನಾಶ್ರಯಿಸಿದರೆ, ಆಗ ಪ್ರತಿಯೊಂದು ಚಿತ್ತಕ್ಕೂ ಒಂದೊಂದು ಜಗತ್ತು ಭಿನ್ನಭಿನ್ನವಾಗಿ ಆಕಾರಹೊಂದಬೇಕಾಗುವುದು; ಈಗ ಹಾಗೆ ಆಗಿಲ್ಲ. ಇದು ಹೇಗೆ? ಅದಲ್ಲದೆ ದ್ವಿತೀಯಪಕ್ಷವನ್ನಾಶ್ರಯಿಸಿದರೆ, ಆಗ ಈ ಜಗತ್ಸ್ವರೂಪವು ಚಿತ್ತದಿಂದ ಹುಟ್ಟದಿರತಕ್ಕುದಾಗಿಯೂ ಚಿತ್ತಕ್ಕಿಂತ ಬೇರೆಯಾದುದಾಗಿಯೂ ಇರಬೇಕಾಗುವುದು. ಜನರ ತಿಳಿವಳಿಕೆಯು ಹೀಗೆಯೇ ಇರುತ್ತದೆ. ಅದುಕಾರಣ, ಇದು ಪೃಥಕ್ಕಲ್ಲದಿರುವುದು ಹೇಗೆ? ಆದರೆ, ಈ ಪಕ್ಷವು ಯುಕ್ತವೆಂದೊಪ್ಪಿಕೊಂಡರೆ, ಆಗ ಮತ್ತೊಂದು ಅನುಪಪತ್ತಿಯುಂಟಾಗಬಹುದು. ಚಿತ್ತವೂ ಜಗತ್ತೂ ಬೇರೆಯಾದುದರಿಂದ, ಜ್ಞಾನದಿಂದ ಚಿತ್ತನಾಶವಾದರೂ—ಜಗತ್ತಿಗೆ ನಾಶವುಂಟಾಗದಿರಬೇಕಾಗುವುದು ||೨೮||

ಈ ರೀತಿಯಾಗಿ ಪ್ರಶ್ನೆಮಾಡಿದ ರಾಮನನ್ನು ಕುರಿತು, ಶ್ರೀವಸಿಷ್ಠರು ಉತ್ತರ ಹೇಳುವರು :—

ವತ್ಸ! ನೀನು ಬಲುಚೆನ್ನಾಗಿ ಪ್ರಶ್ನೆಮಾಡಿದೆ. ನೀನು ಹೇಳಿದ ಎರಡುಪಕ್ಷಗಳಲ್ಲಿ, ಪ್ರಥಮಪಕ್ಷವೇ ಶಾಸ್ತ್ರಸಮ್ಮತವಾದುದು. ಪ್ರತಿಮನುಷ್ಯನಲ್ಲಿಯೂ ಪ್ರತ್ಯೇಕವಾಗಿರುವ ಯಾವ ಚಿತ್ತವುಂಟೋ, ಅದೇ ಈ ರೀತಿಯಾದ ಶಕ್ತಿಯುಳ್ಳದೆಂದು ತಿಳಿಯಬೇಕು. ಪ್ರತಿಯೊಂದು ಚಿತ್ತದಲ್ಲಿಯೂ ಪ್ರತ್ಯೇಕವಾಗಿ ಬೇರೆಬೇರೆ ಜಗದ್ಭ್ರಮೆಯುತ್ಪನ್ನವಾಗಿರುವುದು ||೨೯||

ಇದರಲ್ಲಿ, ಕ್ಷಣತುಲ್ಯವಾದ ಈ ಜಗತ್ಸಮೂಹಗಳು, ಒಬ್ಬನಿಗೆ ಒಂದು ನಿಮಿಷದೊಳಗಾಗಿ ಉತ್ಪತ್ತಿ ಲಯಗಳನ್ನು ಹೊಂದುವುವು; ಮತ್ತೊಬ್ಬನಿಗೆ ಒಂದು ಕಲ್ಪಕಾಲವಾಗುವುದು. ನಾನು ಹೇಳುವ ಈ ಕ್ರಮವನ್ನು ಚೆನ್ನಾಗಿ ಲಾಲಿಸು. ||೩೦||

ಹಾಗಾದರೆ—'ಮಹಾಪ್ರಳಯಾನಂತರದಲ್ಲಿ ಸೃಷ್ಟಿಯಾಗುತ್ತದೆಂಬ ಪ್ರವಾದವು ಹೇಗೆ?' – ಎಂದು ಕೇಳಿದರೆ, ಆಗ ಮರಣಮುಂತಾದ ಮೋಹವನ್ನು ಪ್ರತಿಯೊಬ್ಬನೂ ಅನುಭವಿಸುವನು. ಅಯ್ಯಾ! ಸುಬುದ್ಧಿಯಾದ ರಾಮನೆ! ಹೀಗೆ ಯಾವುದನುಭವಿಸಲ್ಪಡುವುದೋ, ಅದನ್ನೇ ಮಹಾಪ್ರಳಯ ರಾತ್ರಿಯೆಂದು ತಿಳಿ ||೩೧||

ಹೀಗೆ ಎಲ್ಲರೂ ಲಯವನ್ನನುಭವಿಸಿದನಂತರದಲ್ಲಿ, ಎಲ್ಲರೂ ಬೇರೆಬೇರೆಯಾಗಿ ಸೃಷ್ಟಿಯನ್ನೂ ಅನುಭವಿಸುವರು. ಆಗ, ನಮ್ಮ ಮನೋಭ್ರಾಂತಿಯಿಂದ ಪರ್ವತವು ಕುಣಿಯು

ಸಹಜಸ್ವಪ್ನಸಙ್ಕಲ್ಪಾನ್ ಸಮ್ಭ್ರಮಾಚಲನೃತ್ಯವತ್ ‖೩೦‖
ಮಹಾಪ್ರಳಯರಾತ್ರ್ಯನ್ತೇ ಚಿರಾದಾತ್ಮಮನೋವಪುಃ ।
ಯಥೇದಂ ತನುತೇ ತದ್ವತ್ ಪ್ರತ್ಯೇಕಂ ಮೃತ್ಯನನ್ತರಮ್ ‖೩೩‖

ಶ್ರೀ ರಾಮಉವಾಚ.

ಮೃತೇರನನ್ತರಂ ಸರ್ಗೋ ಯಥಾ ಸ್ಮೃತ್ಯಾನುಭೂಯತೇ ।
ಚಿರಾತ್ ತಥಾನುಭವತಿ ನಾತೋ ವಿಶ್ವಮಕಾರಣಂ ‖೩೪‖

ವುದನ್ನು ಕಾಣುವಂತೆ, ಸ್ವಾಭಾವಿಕವಾದ ಅವಿದ್ಯೆಯಿಂದ ಹುಟ್ಟಿದ ಸ್ವಪ್ನಗಳನ್ನೂ ಸಂಕಲ್ಪಗಳನ್ನೂ ಎಲ್ಲರೂ ಅನುಭವಿಸುವರು ‖೩೨‖

ಹೀಗೆ, ಪರಮಾತ್ಮನ ಸಮಷ್ಟಿಮನೋರೂಪನಾದ ಹಿರಣ್ಯಗರ್ಭನು, ಈ ಜಗತ್ತನ್ನು ಮಹಾಪ್ರಳಯರಾತ್ರಿಯ ಕೊನೆಯಲ್ಲಿ ಹೇಗೆ ಮಾಡುವನೋ, ಪ್ರತಿಯೊಬ್ಬನ ಮರಣಾನಂತರದಲ್ಲಿಯೂ ಹಾಗೆಯೇ ಮಾಡುವನಲ್ಲದೆ, ಅದನ್ನತಿಕ್ರಮಿಸಿ ಮಾಡುವುದಿಲ್ಲ. ಅದುಕಾರಣ, ಪ್ರತಿಯೊಂದು ಚಿತ್ತಕ್ಕೂ ಒಂದೊಂದು ಜಾಗ್ರತ್ಪ್ರಪಂಚವಿರಬೇಕಾಗುವುದೆಂಬ ಶಂಕೆಯು ಸಂಗತವಾಗಲಾರದು ‖೩೩‖

ಹೀಗೆ ಶ್ರೀವಸಿಷ್ಠರು ಹೇಳುತ್ತಿರಲಾಗಿ, ಶ್ರೀರಾಮನಿಗೆ ಮತ್ತೊಂದುವಿಧವಾದ ಆಶಂಕೆಯುಂಟಾಯ್ತು. ಅದು ಹೇಗೆಂದರೆ:—(೧) 'ಯದ್ಧಿ ಮನಸಾ ಧ್ಯಾಯತಿ; ತದಾಚಾ ವದತಿ; ತತ್ ಕರ್ಮಣಾ ಕರೋತಿ' ಇತ್ಯಾದಿಶ್ರುತಿಯಿರುವುದರಿಂದಲೂ, ಸರ್ವಾನುಭವಸಿದ್ಧವಾಗಿರುವುದರಿಂದಲೂ, ಸ್ಮೃತಿಯಂತೆ ಕ್ರಿಯೆಗಳೂ ಏಕವಸ್ತುವನ್ನೇ ಆಶ್ರಯಿಸಿರಬೇಕೆಂಬುದು ನಿಶ್ಚಯವಾಗಿರುವುದು. ಸ್ಮೃತಿಯೆಂಬುದು, ಪೂರ್ವದಲ್ಲಿ ಅನುಭವಿಸಿದ ವಿಷಯದಿಂದ ಹುಟ್ಟತಕ್ಕುದಾಗಿರುವುದು. ಹೀಗೆ ಈ ಸ್ಮೃತಿಗೆ ಕಾರಣವಾದ ಪೂರ್ವಾನುಭವವು—ಸತ್ಯವಾದ ವಿಷಯವುಳ್ಳುದಾಗಿದ್ದರೆ, ಅದು ಈಗ ಯಥಾರ್ಥಸ್ಮೃತಿಯಾಗುವುದು; ಅದಲ್ಲದೆ ಆ ವಿಷಯವು ಅಸತ್ಯವಾಗಿದ್ದರೆ, ಸ್ಮೃತಿಯೂ ಅಯಥಾರ್ಥವಾಗುವುದು. ಹೀಗಿರುವುದರಿಂದ, ಅಸ್ಮದಾದಿಗಳು ಕೇವಲ ಭ್ರಾಂತಿಬಹುಳರಾಗಿಯೂ ಸತ್ಯಸಂಕಲ್ಪರಲ್ಲದೆಯೂ ಇರುವಕಾರಣ, ನಮಗುಂಟಾಗುವ ಸ್ಮೃತಿಯು ಅಯಥಾರ್ಥವಾಗಬಹುದು. ಹಿರಣ್ಯಗರ್ಭನಾದರೋ, ಸರ್ವಜ್ಞನಾಗಿಯೂ ಭ್ರಾಂತಿರಹಿತನಾಗಿಯೂ ಸತ್ಯಸಂಕಲ್ಪನಾಗಿಯೂ ಇರುವನು. ಅವನಿಗುಂಟಾಗುವ ಸ್ಮೃತಿಯು ಎಂದಿಗೂ ಅಯಥಾರ್ಥವಾಗಲಾರದು. ಇಂತಹ ಯಥಾರ್ಥವಾದ ಸ್ಮೃತಿಯಿಂದ ಆ ಹಿರಣ್ಯಗರ್ಭನು ಸೃಷ್ಟಿಮಾಡಿದ ಪ್ರಪಂಚವು ಮಿಥ್ಯಾಭೂತವೆಂದು ಸಾಧಿಸುವುದಕ್ಕಾಗಲಾರದು. ಎಂದು ಈ ರೀತಿಯಾಗಿ ಶ್ರೀರಾಮನು ಶಂಕೆಪಟ್ಟು, ಪುನಃ ಶ್ರೀವಸಿಷ್ಠರನ್ನು ಕುರಿತು ಪ್ರಶ್ನೆಮಾಡುವನು:—

ಪೂಜ್ಯರೆ! ನನಗೆ ಈಗ ಮತ್ತೊಂದುವಿಧವಾಗಿ ಶಂಕೆಯುಂಟಾಗಿರುವುದು. ವ್ಯಷ್ಟಿಜೀವಗಳೆಂದೂ ಸಮಷ್ಟಿಜೀವವೆಂದೂ ಎರಡು ಭೇದವುಂಟಷ್ಟೆ! ಅದರಲ್ಲಿ, ವ್ಯಷ್ಟಿಜೀವನು

---

(೧) ಮನಸ್ಸಿನಲ್ಲಿ ಯಾವುದನ್ನು ಧ್ಯಾನಮಾಡುವನೋ, ಬಾಯಲ್ಲಿ ಅದನ್ನು ಹೇಳುವನು; ಕೆಲಸದಲ್ಲಿ ಅದನ್ನು ಮಾಡುವನು.

ಶ್ರೀ ವಸಿಷ್ಠ ಉವಾಚ.

ಮಹತಿ ಪ್ರಳಯೇ ರಾಮ ಸರ್ವೇ ಹರಿಹರಾದಯಃ |
ವಿದೇಹಮುಕ್ತತಾಂ ಯಾನ್ತಿ ಸ್ಮೃತೇಃ ಕ ಇವ ಸಮ್ಭವಃ ||೩೫||
ಅಸ್ಮದಾದಿಃ ಪ್ರಬುದ್ಧಾತ್ಮಾ ಕಿಲಾವಶ್ಯಂ ವಿಮುಚ್ಯತೇ |

ಮರಣವಾದ ಉತ್ತರಕ್ಷಣವೇ ಸ್ಮೃತಿಯಿಂದ ಪೂರ್ವಸೃಷ್ಟಿಯನ್ನು ಹೇಗೆ ಅನುಭವಿಸುವನೋ, ಹಾಗೆಯೇ ಸಮಷ್ಟಿರೂಪನಾದ ಹಿರಣ್ಯಗರ್ಭನೂ ಕೂಡ, ಮಹಾಪ್ರಳಯವಾದ ನಂತರದಲ್ಲಿ ಸ್ವಕೀಯವಾದ ಯಥಾರ್ಥಸ್ಮೃತಿಯಿಂದ ಸೃಷ್ಟವಾದ ಪ್ರಪಂಚವನ್ನನುಭವಿಸುವನು. ಆದುಕಾರಣ, ಅವನ ಸ್ಮೃತಿಯಲ್ಲಿ ನೆಲೆಸಿದ್ದ ಪೂರ್ವಸೃಷ್ಟಿಯ ಸತ್ಯಪದಾರ್ಥಗಳೇ ಈಗಿನ ಸೃಷ್ಟಿಗೆ ಕಾರಣವಾಗುವುದರಿಂದ, ಈಗಿನ ಸೃಷ್ಟಿಯಲ್ಲಿನ ಪದಾರ್ಥವೂ ಸತ್ಯವೇ ಆಯಿತು; ಮತ್ತು, ಈಗಿನ ಸೃಷ್ಟಿಗೆ ಪ್ರಾಕ್ತನಸೃಷ್ಟಿಸ್ಮೃತಿಯೇ ಕಾರಣವಾಗುವುದರಿಂದ, ಈ ಪ್ರಪಂಚಸೃಷ್ಟಿಗೆ ಬ್ರಹ್ಮನೇ ಕಾರಣವಲ್ಲದೆ ಮತ್ತೊಂದೂ ಕಾರಣವಿಲ್ಲವೆಂದು ತಾವು ಪೂರ್ವದಲ್ಲಿ ಅಪ್ಪಣೆಕೊಟ್ಟದ್ದುದು ಅಸಂಗತವಾಗುವುದೆಂದು ತೋರುವುದು ||೩೪||

ಇದಕ್ಕೆ ಶ್ರೀವಸಿಷ್ಠರು ಉತ್ತರಹೇಳುವರು:—

ವತ್ಸ ! ರಾಮ ! ನೀನು ಚೆನ್ನಾಗಿ ಪ್ರಶ್ನೆಮಾಡುತ್ತಿರುವೆ. ಆದರೆ, ಈಗಿನ ಸೃಷ್ಟಿಗೆ ಪೂರ್ವಸೃಷ್ಟಿಸ್ಮೃತಿಯೂ, ಅದಕ್ಕೆ ಅದರ ಹಿಂದಣ ಸೃಷ್ಟಿಯ ಸ್ಮೃತಿಯೂ ಕಾರಣವಾಗುವುದು. ಹೀಗೆಯೇ ಹೋಗುತ ಬಂದರೆ, ಕೊನೆಗೆ ಪ್ರಥಮಸೃಷ್ಟಿಯು ಸರ್ವಸೃಷ್ಟಿಗೂ ಕಾರಣವಾದಂತಾಗುವುದು. ಹಾಗಾದಮೇಲೆ ಪ್ರಥಮಸೃಷ್ಟಿಗೆ ಕಾರಣವಾದ ಸ್ಮೃತಿಯೊಂದು ಇರಬೇಕಾಗುವುದು. ಅದು ಯಥಾರ್ಥಾನುಭವದಿಂದ ಹುಟ್ಟಿದ್ದುದಾದರೆ, ಆಗ ನೀನು ಹೇಳುವುದೆಲ್ಲವೂ ಸಂಗತವಾಗಬಹುದು. ಪ್ರಥಮಸೃಷ್ಟಿಯಲ್ಲಿ ಹಿರಣ್ಯಗರ್ಭಪದವನ್ನು ಹೊಂದಿದ್ದವನಿಗೆ ಅಂತಹ ಸ್ಮೃತಿಯೇ ಇಲ್ಲ. ಅವನು ಹೇಗೆ ಸೃಷ್ಟಿಮಾಡಿದನೆಂದರೆ:— ಅವನು ತಾತ್ಕಾಲಿಕವಾಗಿ ಒಂದುವಿಧವಾಗಿ ಉಪಾಸನೆ (ಮನಸ್ಸಿನಲ್ಲಿ ಧ್ಯಾನ) ಮಾಡುವನು; ಅದರಿಂದ ಒಂದು ಸಂಸ್ಕಾರ ಹುಟ್ಟುವುದು; ಆ ಸಂಸ್ಕಾರದಿಂದ ಹುಟ್ಟಿದ ಸ್ಮೃತಿಯೇ ಆಗಿನ ಸೃಷ್ಟಿಗೆ ಕಾರಣವಾಗುವುದು. ಇಷ್ಟೇಹೊರತು, ಆ ಸ್ಮೃತಿಯು ಯಥಾರ್ಥಾನುಭವದಿಂದ ಹುಟ್ಟಿದುದೆಂದು ತಿಳಿಯಬಾರದು. ಆ ಉಪಾಸನೆಯೆಂಬುದು ಯಾವುದೆಂದರೆ, ವ್ಯಷ್ಟಿಯನ್ನೇ ಸಮಷ್ಟಿಯೆಂದು ಚಿಂತಿಸುವುದೇ ಉಪಾಸನೆಯಾಗುವುದಲ್ಲದೆ, ಯಥಾರ್ಥಾನುಭವವಲ್ಲ. ಆದುಕಾರಣ, ಪ್ರಥಮಸೃಷ್ಟಿಯಲ್ಲಿಯೇ, ಯಥಾರ್ಥವಲ್ಲದ ಉಪಾಸನಾಸಂಸ್ಕಾರಜನ್ಯವಾದ ಸ್ಮೃತಿಯೇ ಕಾರಣವಾಗಿರುವುದರಿಂದ, ಅದು ಸತ್ಯವೆಂದು ಹೇಳುವುದಕ್ಕೆ ಅವಕಾಶವಿಲ್ಲ. 'ಹಿಂದಿನ ಸರ್ವಜ್ಞರಾದವರು ಯಾರಾದರೂ ಆಗ ಇರಬಹುದಲ್ಲವೆ ! ಅವರ ಯಥಾರ್ಥ ಸ್ಮೃತಿಯೇತಕ್ಕೆ ಕಾರಣವಾಗಬಾರದು ?' ಎಂದರೆ,— ಅಯ್ಯಾ ! ರಾಮ ! ಮಹಾಪ್ರಳಯವಾದಾಗ ಹರಿಹರಾದಿಗಳೆಲ್ಲರೂ ವಿದೇಹಮುಕ್ತರಾಗಿಬಿಡುವರು. ಆಮೇಲೆ ದ್ವಿತೀಯಾದಿ ಸೃಷ್ಟಿಗೆ ಕಾರಣಭೂತವಾದ ಸ್ಮೃತಿಯು, ಅಯಥಾರ್ಥಾನುಭವಜನ್ಯವಾದುದಾಯ್ತು. ಹೀಗಿರುವಾಗ, ಯಥಾರ್ಥಸ್ಮೃತಿಯೆಂಬುದೆಲ್ಲಿ ಬಂದಿತು? ಇದೇ ಇಲ್ಲದಮೇಲೆ, ಸೃಷ್ಟಿಯು ಸತ್ಯವೆಂಬುದು ಎಂದಿಗೂ ಎಲ್ಲಿಯೂ ಸಂಭವಿಸುವುದಿಲ್ಲವೆಂದು ತಿಳಿಯಬೇಕು ||೩೫||

ಮಹಾಪ್ರಳಯದಲ್ಲಿ ಹರಿಹರಾದಿಗಳೆಲ್ಲರೂ ಮುಕ್ತರಾಗುವರೆಂಬ ವಿಷಯದಲ್ಲಿ ಸ್ವಲ್ಪವೂ ಸಂಶಯಪಡಬೇಡ. ತತ್ವಜ್ಞಾನಪಡೆದಿರುವ ಅಸ್ಮದಾದಿಗಳೇ ಅವಶ್ಯವಾಗಿ ವಿಮು

ಕಥಂ ಭವನ್ತು ನೋ ಮುಕ್ತಾಃ ವಿದೇಹಾಃ ಪದ್ಮಜಾದಯಃ ‖೩೬‖
ಅನ್ಯೇ ತ್ವಮಿವ ಯೇ ಜೀವಾಃ ತೇಷಾಂ ಮರಣಜನ್ಮಸು ।
ಸ್ಮೃತಿಃ ಕಾರಣತಾಮೇತಿ ಮೋಕ್ಷಾಭಾವವಶಾದಿಹ ‖೩೭‖
ಜೀವೋ ಹಿ ಮೃತಿಮೂರ್ಛಾನ್ತೇ ಯದನ್ತಃ ಪ್ರೋನ್ಮಿಷನ್ನಿವ ।
ಅನುನ್ಮಿಷಿತಏವಾಸ್ತೇ ತತ್ ಪ್ರಧಾನಮುದಾಹೃತಮ್ ‖೩೮‖
ತದ್ವ್ಯೋಮಪ್ರಕೃತಿಃ ಪ್ರೋಕ್ತಾ ತದವ್ಯಕ್ತಂ ಜಡಾಜಡಮ್ ।
ಸಂಸ್ಮೃತೇರಸ್ಮೃತೇಶ್ಚೈವ ಕ್ರಮಏಷ ಭವೋದಯೇ ‖೩೯‖
ಬೋಧೋನ್ಮುಖತ್ವೇ ಹಿ ಮಹತ್ ತತ್ ಪ್ರಬುದ್ಧಂ ಯದಾ ಭವೇತ್ ।
ತದಾ ತನ್ಮಾತ್ರದಿಕ್ಕಾಲಕ್ರಿಯಾಭೂತಾದ್ಯುದೇತಿ ಖಾತ್ ‖೪೦‖

ಕ್ತರಾಗುವೆವು. ಹೀಗಿರುವಾಗ, ಬ್ರಹ್ಮಾದಿಗಳು ಹೇಗೆತಾನೆ ವಿದೇಹಮುಕ್ತರಾಗದಿರ ಬಹುದು? ‖೩೬‖

ಆದರೆ, ನಿನ್ನಂತೆ ಇನ್ನೂ ತತ್ವಜ್ಞಾನಪಡೆಯದಿರುವ ಯಾವ ಜೀವಗಳುಂಟೋ, ಅವು ಗಳಿಗೆ ಇನ್ನೂ ಮೋಕ್ಷಸಂಭವಿಸಿಲ್ಲವಾದಕಾರಣ, ಅವುಗಳಿಗೆ ಅಯಥಾರ್ಥಸ್ಮೃತಿಯು ಜನ್ಮ ಮರಣಗಳಿಗೆ ಕಾರಣಭೂತವಾಗಬಹುದು ‖೩೭‖

ಆದರೆ,—'ಹಿರಣ್ಯಗರ್ಭಸೃಷ್ಟಿಯಲ್ಲಿ, ಪ್ರಧಾನ ಮಹತ್ತು ಅಹಂಕಾರ – ಇತ್ಯಾದಿ ಕ್ರಮವಾಗಿ ಸೃಷ್ಟಿಕಾರಣಗಳಿರುವುವೆಂದು ಪುರಾಣಾದಿಗಳಲ್ಲಿ ಉಕ್ತವಾಗಿರುವುದು; ಜೀವ ಸೃಷ್ಟಿಯಾದರೋ, ಇದೊಂದೂ ಇಲ್ಲದೆಯೇ ತಟ್ಟನೆ ಉಂಟಾಗುವುದು. ಹೀಗಿರುವುದರಿಂದ, ಈ ಜೀವಸೃಷ್ಟಿಯನ್ನು ಹಿರಣ್ಯಗರ್ಭಸೃಷ್ಟಿಗೆ ಹೋಲಿಸುವುದು ಹೇಗೆ?'—ಎಂದು ಶಂಕೆ ಯುಂಟಾಗಬಹುದು. ಈ ವಿಷಯದಲ್ಲಿ ನಾನು ಹೇಳುವುದನ್ನು ಕೇಳು. ಈ ಜೀವಸೃಷ್ಟಿಯ ಲ್ಲಿಯೂ ಪ್ರಧಾನ ಮಹತ್ತು—ಇತ್ಯಾದಿ ಕ್ರಮವು ಯಥಾಸಂಭವವಾಗಿ ಇದ್ದೇಇರುವುದು. ಈ ಜೀವನು, ಮರಣವೆಂಬ ಮೂರ್ಛೆಯನ್ನನುಭವಿಸಿದಬಳಿಕ, ಹೊರಗೆ ವಿಕಾಸವಿಲ್ಲದೆಯೇ ಇದ್ದರೂ ಒಳಗೆ ವಿಕಾಸಯುಕ್ತನಂತೆ ಇರುವಿಕೆಯಾವುದುಂಟೋ, ಆ ಅವಸ್ಥೆಯೇ ಈ ಜೀವಸೃಷ್ಟಿಯಲ್ಲಿ ಪ್ರಧಾನವೆಂದು ಪ್ರಾಜ್ಞರು ಹೇಳುವರು ‖೩೮‖

ಈ ಅವಸ್ಥೆಯೇ ಆಕಾಶವೆಂದೂ ಪ್ರಕೃತಿಯೆಂದೂ ಹೇಳಲ್ಪಟ್ಟಿರುವುದು. ಆಗ ಚಿತ್ತಿ ನ ಪ್ರತಿಬಿಂಬವಿರುವುದರಿಂದ ಅದು ಅಜಡವಾಗಿಯೂ, ಸ್ವಭಾವತಃ ಜಡವಾಗಿಯೂ ಇರುವುದು. ಇದನ್ನು ಅವ್ಯಕ್ತವೆಂದೂ ಹೇಳುವರು. ಈ ಸಂಸಾರಮಾರ್ಗದಲ್ಲಿ ಸ್ಮೃತಿಗೂ ಅಸ್ಮೃತಿಗೂ ಇದೇ ಕ್ರಮವಾಗಿರುವುದು ‖೩೯‖

ಇದೇ, ಬೋಧೋನ್ಮುಖವಾಗಿರುವಾಗ ಮಹತ್ತತ್ವವೆನ್ನಿಸಿಕೊಳ್ಳುವುದು. ಪ್ರಬುದ್ಧ ವಾದಬಳಿಕ, ಆ ಆಕಾಶದಿಂದಲೇ ತನ್ಮಾತ್ರ ದಿಕ್ಕು ಕಾಲ ಕ್ರಿಯೆ ಭೂತ—ಇತ್ಯಾದಿಗಳೆ ಲ್ಲವೂ ಹುಟ್ಟುವುವು ‖೪೦‖

ತದೇವ್ಯೋಚಞ್ಚನವಾಬುದ್ಧಂ ಭವತೀನ್ದ್ರಿಯಪಞ್ಚಕವ್ |
ತದೇವ ಬುಧ್ಯತೇ ದೇಹಃ ಸಪಿಷೋಽಸ್ಯಾತಿವಾಹಿಕಃ ||೪೧||

ಚಿರಕಾಲಪ್ರತ್ಯಯತಃ ಕಲ್ಪನಾಪರಿಪೀವರಃ |
ಆಧಿಭೌತಿಕತಾಬೋಧಂ ಆಧತ್ತೇ ಚೈಷ ಬಾಲವತ್ ||೪೨||

ತತೋ ದಿಕ್ಕಾಲಕಲನಾಃ ತದಾಧಾರತಯಾ ಸ್ಥಿತಾಃ |
ಉದ್ಯನ್ತ್ಯನುದಿತಾಏವ ವಾಯೋಃ ಸ್ಪನ್ದಕ್ರಿಯಾಇವ ||೪೩||

ವೃದ್ಧಿಮಿತ್ಥಮಯಂ ಯಾತೋ ಮುಧೈವ ಭುವನಭ್ರಮಃ |
ಸ್ವಪ್ನಾಙ್ಗನಾಸಙ್ಗಸಮಸ್ತ್ವನುಭೂತೋಽಪ್ಯಸನ್ಮಯಃ ||೪೪||

ಯತ್ರೈವ ಮ್ರಿಯತೇ ಜನ್ತುಃ ಪಶ್ಯತ್ಯಾಶು ತದೇವ ಸಃ |
ತತ್ರೈವ ಭುವನಾಭೋಗಂ ಇಮಮಿತ್ಥಮಿವ ಸ್ಥಿತಮ್ ||೪೫||

ವ್ಯೋಮ್ನೈವಾನುಭವತ್ಯಚ್ಛಂ ಅಹಂಜಗದಿತಿ ಭ್ರಮಮ್ |
ವ್ಯೋಮರೂಪಂ ವ್ಯೋಮರೂಪೀ ಜೀವೋ ಜಾತಇವಾತ್ಮವಾನ್ ||೪೬||

ಈ ಮಹತ್ತತ್ವವೇ, ಸ್ವಲ್ಪವಿಕಾಸವಾಗಿ ಸ್ವಲ್ಪ ಬೋಧವಾಗಿರುವಾಗ, ಇಂದ್ರಿಯಪಂಚಕವಾಗುವುದು. ಹೀಗೆ ಇಂದ್ರಿಯಪಂಚಕವಿಶಿಷ್ಟವಾದುದೇ ಜೀವನಿಗೆ ಆತಿವಾಹಿಕಶರೀರವೆಂದು ಸ್ವಪ್ನ ಜಾಗರಗಳಲ್ಲಿ ತಿಳಿಯಲ್ಪಡುವುದು ॥೪೧॥

ಈ ಸೂಕ್ಷ್ಮದೇಹವೇ, ಕಲ್ಪನೆಯಿಂದ ಪರಿಪೂರ್ಣವಾಗಿ, ಚಿರತರಾಭ್ಯಾಸಬಲದಿಂದ, ಬಾಲಕರು ಪಿಶಾಚವೆಂದು ನಂಬುವಂತೆ, ಸ್ಥೂಲದೇಹಾಭಿಮಾನವನ್ನು ಪಡೆಯುವುದು॥೪೨॥

ಬಳಿಕ, ಆ ಸ್ಥೂಲದೇಹಾಶ್ರಿತವಾದ ಚಕ್ಷುರಾದೀಂದ್ರಿಯಗಳಿಗೆ ಅಧೀನವಾಗಿ, ಆಯಾ ದೇಶಕಾಲನಿಷ್ಠಪದಾರ್ಥಕಲ್ಪನೆಗಳು ಹುಟ್ಟುವುವು. ಇವು ಸ್ವಭಾವವಾಗಿ ಅನುತ್ಪನ್ನಗಳಾದರೂ, ವಾಯುವಿನಿಂದ ಚಲನಕ್ರಿಯೆ ಹುಟ್ಟಿದಹಾಗೆ ತೋರುವಂತೆ, ಉತ್ಪನ್ನವಾದುವೆಂಬ ಪ್ರತ್ಯಯವನ್ನುಂಟುಮಾಡುವುವು ॥೪೩॥

ಈರೀತಿಯಾಗಿ, ಈ ಪ್ರಪಂಚವೆಂಬ ಭ್ರಮೆಯು ವ್ಯರ್ಥವಾಗಿ ವೃದ್ಧಿಹೊಂದಿರುವುದು. ಇದು ಸ್ವಪ್ನಕಾಲದಲ್ಲುಂಟಾಗುವ ಸ್ತ್ರೀಸಮಾಗಮದಂತೆ ಅನುಭವವಿಷಯವಾದರೂ ಅಸತ್ಯವಾದುದು ॥೪೪॥

ಈ ಪ್ರಾಣಿಯು ಯಾವ ಸ್ಥಿತಿಯಲ್ಲಿ ಮರಣಹೊಂದುವನೋ, ಆ ಸ್ಥಿತಿಯನ್ನೇ ಉತ್ತರತ್ರ ಅನುಭವಿಸುವನು. ಅದರಲ್ಲಿಯೇ ಈ ವಿಶಾಲವಾದ ಪ್ರಪಂಚವೀರೀತಿಯಾಗಿರುವಂತೆಯೂ ತಿಳಿಯುವನು ॥೪೫॥

ನಿರ್ಮಲವಾದ ಆ ಚಿದಾಕಾಶವೇ, ನಾನೆಂದೂ ಜಗತ್ತೆಂದೂ ಭ್ರಮೆಯನ್ನನುಭವಿಸುವುದು. ಈ ಭ್ರಮೆಯೂ ಕೇವಲ ಆಕಾಶರೂಪವಾದುದು. ಈರೀತಿಯಾಗಿ ಜೀವನು ಆಕಾಶರೂಪನಾಗಿದ್ದರೂ, ಆಗಂತುಕದೇಹಾದಿರೂಪದಿಂದ ಜನ್ಮವೆತ್ತಿದವನಂತೆ ಕಾಣುವನು ॥೪೬॥

ಸುರಪತ್ತನಶೈಲಾರ್ಕತಾರಾನಿಕರಸುನ್ದರಮ್ |
ಜರಾಮರಣವೈಕಲ್ಯವ್ಯಾಧಿಸಙ್ಕಟಕೋಟರಮ್ ||೪೭||
ಸ್ವಭಾವಾಭಾವಸಂರಮ್ಭಸ್ಥೂಲಸೂಕ್ಷ್ಮಚರಾಚರಮ್ |
ಸಾಬ್ಧ್ಯದ್ರ್ಯುರ್ವೀನದೀಶಾಹೋರಾತ್ರಿಕಲ್ಪಕ್ಷಣಕ್ಷಯಮ್ ||೪೮||
ಅಹಂ ಜಾತೋಽಮುನಾಪಿತ್ರಾ ಕಿಲಾತ್ರೇತ್ಯಾಪ್ತನಿಶ್ಚಯಮ್ |
ಇಯಂ ಮಾತಾ ಧನಮಿದಂ ಮಮೇತ್ಯುದಿತವಾಸನಮ್ ||೪೯||
ಸುಕೃತಂ ದುಷ್ಕೃತಂ ಚೇದಂ ಮಮೇತಿ ಕೃತಕಲ್ಪನಮ್ |
ಬಾಲೋಽಭೂವಮಹಂ ತ್ವದ್ಯ ಯುವೇತಿ ವಿಲಸದ್ಧೃದಿ ||೫೦||
ಪ್ರತ್ಯೇಕಮೇವಮುದಿತಃ ಸಂಸಾರವನಖಣ್ಡಕಃ |
ತಾರಾಕುಸುಮಿತೋ ನೀಲಮೇಘಚಞ್ಚಲಪಲ್ಲವಃ ||೫೧||
ಚರನ್ನರಮೃಗಾನೀಕಃ ಸುರಾಸುರವಿಹಙ್ಗಮಃ |
ಆಲೋಕಕೌಸುಮರಜಾಃ ಶ್ಯಾಮಾಗಹನಕುಞ್ಜಕಃ ||೫೨||
ಅಬ್ಧಿಪುಷ್ಕರಿಣೀಪೂರ್ಣೋ ಮೇರ್ವಾದ್ಯಚಲಲೋಷ್ಟಕಃ |

ಆಗ ಈ ಜೀವನಿಗುಂಟಾಗುವ ಜಗತ್ತೆಂಬ ಭ್ರಮೆ ಹೇಗಿರುವುದೆಂದರೆ:—ಸ್ವರ್ಗ ಪರ್ವತ ಸೂರ್ಯ ನಕ್ಷತ್ರಮಂಡಲ—ಇತ್ಯಾದಿಗಳಿಂದ ಮನೋಹರವಾಗಿರುವುದು. ಇದರೊಳಗೆ, ಜರೆ ಮರಣ ವ್ಯಸನ ರೋಗ—ಇತ್ಯಾದಿಗಳು ತುಂಬಿಕೊಂಡಿರುವುವು ॥೪೭॥

ಮತ್ತು ಆ ಜಗದ್ಭ್ರಮದೊಳಗೆ ಸ್ಥೂಲಗಳಾಗಿಯೂ ಸೂಕ್ಷ್ಮಗಳಾಗಿಯೂ ಚರಗಳಾಗಿಯೂ ಅಚರಗಳಾಗಿಯೂ ಇರುವ ಪ್ರಾಣಿಗಳೆಲ್ಲವೂ, ತಮಗೆ ಅನುಕೂಲವಾದುದನ್ನು ಸಂಪಾದಿಸಿಕೊಳ್ಳುವುದರಲ್ಲಿಯೂ ಪ್ರತಿಕೂಲವಾದುದನ್ನು ನಿವಾರಿಸಿಕೊಳ್ಳುವುದರಲ್ಲಿಯೂ ಸಂಭ್ರಮಪಡುತಿರುವುವು. ಸಮುದ್ರ ಪರ್ವತ ಭೂಮಿ ನದಿ ಇವುಗಳ ಅಭಿಮಾನಿದೇವತೆ ಅಹಸ್ಸು ರಾತ್ರಿ ಕಲ್ಪ ಕ್ಷಣ ಕ್ಷಯ—ಇವುಗಳೆಲ್ಲವೂ ಅಲ್ಲಿರುವಂತೆ ಕಾಣುವುವು ॥೪೮॥

'ನಾನು ಇಲ್ಲಿ ಈ ತಂದೆಯಿಂದ ಹುಟ್ಟಿದೆನು' ಎಂಬುದಾಗಿ ಇದರಲ್ಲಿ ನಿಶ್ಚಯಜ್ಞಾನವುಂಟಾಗುವುದು. 'ಇವಳು ನನ್ನ ತಾಯಿ; ಇದು ನನ್ನ ಧನ' ಇತ್ಯಾದಿರೀತಿಯಾಗಿ ವಾಸನೆಯಾವಿರ್ಭವಿಸುವುದು ॥೪೯॥

'ಇದು ನನ್ನ ಸುಕೃತ; ಇದು ನನ್ನ ದುಷ್ಕೃತ' ಎಂದು ಇದರಲ್ಲಿ ನಾನಾವಿಧವಾಗಿ ಕಲ್ಪನೆಮಾಡಿಕೊಂಡಿರುವರು. 'ನಾನು ಹಿಂದೆ ಬಾಲಕನಾಗಿದ್ದೆನು; ಈಗ ಯೌವನಸ್ಥನಾಗಿರುವೆನು' ಇತ್ಯಾದಿರೀತಿಯಾಗಿ ಹೃದಯದಲ್ಲಿ ವಿಲಾಸವುಂಟಾಗುವುದು ॥೫೦॥

ಈರೀತಿಯಾಗಿರುವ ಸಂಸಾರವೆಂಬ ವನಪ್ರದೇಶವು, ಪ್ರತಿಯೊಬ್ಬ ಜೀವನಿಗೂ ಹುಟ್ಟುವುದು. ಈ ಸಂಸಾರವನಕ್ಕೆ, ನಕ್ಷತ್ರಗಳೇ ಪುಷ್ಪಗಳಾಗಿಯೂ—ನೀಲಮೇಘಗಳೇ ಚಂಚಲವಾದ ಚಿಗುರುಗಳಾಗಿಯೂ ಇರುವುವು ॥೫೧॥

ಮತ್ತು, ಈ ಸಂಸಾರವೆಂಬ ವನದಲ್ಲಿ—ಮನುಷ್ಯರೆಂಬ ಮೃಗಸಮೂಹಗಳೂ, ಸುರಾಸುರರೆಂಬ ಪಕ್ಷಿಗಳೂ ಸಂಚರಿಸುತ್ತಿರುವುವು; ಪ್ರಕಾಶಮಾನವಾದ ಹಗಲುಗಳೇ ಪುಷ್ಪಪರಾಗವಾಗಿಯೂ, ರಾತ್ರಿಯೇ ಲತಾಗೃಹವಾಗಿಯೂ ಇರುವುವು ॥೫೨॥

ಚಿತ್ತಪುಷ್ಕರಬೀಜಾನ್ತರ್ನಿಲೀನಾನುಭವಾಙ್ಕುರಃ ‖೫೩‖
ಯತ್ರೈವ ಮ್ರಿಯತೇ ಜೀವಃ ತತ್ರೈವಂ ಪಶ್ಯತಿ ಕ್ಷಣಾತ್ ।
ಪ್ರತ್ಯೇಕಮುದಿತೇಷ್ವೇವಂ ಜಗತ್ಖಣ್ಡೇಷು ಭೂರಿಶಃ ‖೫೪‖
ಕೋಟಯೋ ಬ್ರಹ್ಮರುದ್ರೇನ್ದ್ರಮರುದ್ವಿಷ್ಣುವಿವಸ್ವತಾಮ್ ।
ಗಿರ್ಯಬ್ಧಿಮಣ್ಡಲದ್ವೀಪಲೋಕಾನ್ತರದೃಶಾಂ ಗತಾಃ ‖೫೫‖
ಯಾತಾಯಾಸ್ಯನ್ತಿ ಯಾನ್ತ್ಯೇತಾಃ ದೃಷ್ಟಯೋ [1]ನಷ್ಟರೂಪಿಣೀಃ ।
ಯಾಬ್ರಹ್ಮಣ್ಯುಪಬೃಂಹಾಢ್ಯಾಃ ತಾಃ ಕೇ ಗಣಯಿತುಂ ಕ್ಷಮಾಃ ‖೫೬‖
ಏವಂ ಕುಡ್ಯಮಯಂ ವಿಶ್ವಂ ನಾಸ್ತ್ಯೇವ ಮನನಾದೃತೇ ।
ಮನನೇ ಚಲಮೇವಾನ್ತಃ ತದಿದಾನೀಂ ವಿಚಾರಯ ‖೫೭‖

ಈ ಸಂಸಾರವೆಂಬ ವನವು, ಸಮುದ್ರವೆಂಬ ಪುಷ್ಕರಿಣಿಯಿಂದ ಪರಿಪೂರ್ಣವಾಗಿಯೂ, ಮೇರು ಮುಂತಾದ ಪರ್ವತಗಳೆಂಬ ಮಣ್ಣುಹೆಂಟೆಗಳಿಂದ ಭರಿತವಾಗಿಯೂ ಇರುವುದು. ಮತ್ತು, ಇದರಲ್ಲಿ—ಚಿತ್ತವೆಂಬ ಕಮಲಬೀಜವಿರುವುದು; ಆದರೊಳಗೆ ಪ್ರಾಕ್ತನವಾಸ ಯೆಂಬ ಅಂಕುರಗಳು ಅಡಗಿಕೊಂಡಿರುವುವು ‖೫೩‖

ಈ ಜೀವನು ಯಾವ ಸ್ಥಿತಿಯಲ್ಲಿದ್ದುಗೊಂಡು ಮೃತನಾಗುವನೋ, ಆ ಸ್ಥಿತಿಯಲ್ಲಿಯೇ ಒಂದು ಕ್ಷಣಕಾಲದೊಳಗಾಗಿ ಈ ಪೂರ್ವೋಕ್ತರೀತಿಯಾದ ಸಂಸಾರವನಪ್ರದೇಶವನ್ನು ಕಾಣುವನು. ಈರೀತಿಯಾಗಿ ಅನೇಕವಾದ ಜಗತ್ಖಂಡಗಳು ಬೇರೆಬೇರೆಯಾಗಿ ಹುಟ್ಟಲಾಗಿ, ಬ್ರಹ್ಮ ರುದ್ರ ಇಂದ್ರ ವಾಯು ವಿಷ್ಣು ಸೂರ್ಯ—ಇವರುಗಳು ಅನೇಕಕೋಟಿ ಸಂಖ್ಯಾಕರಾಗಿ ಕಾಣಬರುವರು. ಇವರು, ಪರ್ವತ ಸಮುದ್ರಮಂಡಲ ದ್ವೀಪ ನಾನಾವಿಧಲೋಕ ಸಮೂಹ—ಇತ್ಯಾದಿಗಳೆಲ್ಲವೂ ಈ ಬ್ರಹ್ಮಾಣ್ಡದೊಳಗೆ ಅನೇಕವಾಗಿರುವಂತೆ ನೋಡುತ್ತಿರುವರು. ಇಂತಹ ಬ್ರಹ್ಮಾದಿಗಳು, ಅನೇಕಕೋಟಿ ಸಂಖ್ಯಾಕರಾಗಿ ಈಗ ಆಗಿಹೋಗಿರುವರು ‖೫೪—೫೫‖

ಈವಿಧವಾದ ಜ್ಞಾನಗಳು, ಇದುವರೆಗೆ ಅನೇಕವಾಗಿ ಕಳೆದುಹೋಗಿರುವುವು; ಮುಂದೆಯೂ ಕಳೆದುಹೋಗುವುವು; ಈಗಲೂ ಕಳೆಯುತ್ತಿರುವುವು. ಇವು ಸ್ವಭಾವತಃ ಅಸತ್ಯಸ್ವರೂಪಗಳು. ಇಂತಹ ಜ್ಞಾನಗಳು, ಅಧಿಷ್ಠಾನರೂಪನಾದ ಬ್ರಹ್ಮನಲ್ಲಿ ಎಷ್ಟು ಹುಟ್ಟುವುವೋ—ಅದನ್ನು ಎಣಿಸುವುದಕ್ಕೆ ಯಾರು ಸಮರ್ಥರು ? ‖೫೬‖

ಈರೀತಿಯಾಗಿ, ನಮ್ಮ ಮನಃಕಲ್ಪನೆಹೊರತು ಬೇರೆಯಾದ ಸ್ಥೂಲಪ್ರಪಂಚವೆಂಬುದು ಇಲ್ಲವೇಇಲ್ಲ. ಆದರೆ—'ಸ್ಥೂಲವಾದುದು ಸ್ಥಿರಸ್ವಭಾವವಾಗಿಯೂ ಸೂಕ್ಷ್ಮವಾದುದು ಚಲಸ್ವಭಾವವಾಗಿಯೂ ಪ್ರಸಿದ್ಧವಾಗಿರುವಾಗ, ಈ ಸ್ಥೂಲಪ್ರಪಂಚವೆಲ್ಲವೂ ಕೇವಲ ಮನೋಮಾತ್ರವೆಂಬುದು ಹೇಗೆ?' ಎಂದು ಆಕ್ಷೇಪಿಸಬಹುದು. ವತ್ಸ! ರಾಮ! ಯದ್ಯಪಿ ಈ ಬಾಹ್ಯಪ್ರಪಂಚವು ಸ್ಥಿರವಾಗಿರುವಂತೆ ತೋರುವುದು; ಆದರೂ, ಮನಸ್ಸಿನಲ್ಲಿ ಚೆನ್ನಾಗಿ ವಿಚಾರಮಾಡಿದರೆ, ಇದು ಚಲವೆಂಬುದಾಗಿಯೇ ನಿಷ್ಕರ್ಷೆಯುಂಟಾಗುವುದು. ಆದುಕಾರಣ, ನೀನು ಇದನ್ನು ಚೆನ್ನಾಗಿ ವಿಚಾರಮಾಡು ‖೫೭‖

ಯದೇವ ತಚ್ಚಿದಾಕಾಶಂ ತದೇವ ಮನನಂ ಸ್ಮೃತಮ್ ।
ಯದೇವ ಚ ಚಿದಾಕಾಶಂ ತದೇವ ಪರಮಂ ಪದಮ್ ॥೫೮॥
ಯದೇವಾಮ್ಬು ಸಆವರ್ತೋ ನ ತ್ವಸ್ಯಾವರ್ತವಸ್ತು ಸತ್ ।
ದ್ರಷ್ಟೈವಾಸ್ತೇ ದೃಶ್ಯಮಿವ ದೃಶ್ಯಂ ನ ತ್ವಸ್ತಿ ವಸ್ತು ಸತ್ ॥೫೯॥
ಚಿದ್ವ್ಯೋಮ್ನೋಽಭೂತನಭಸಿ ಕಚನಂ ಯನ್ಮಣೇರಿವ ।
ತಜ್ಜಗದ್ಭಾವಿ ನಾನಾ ಸತ್ ತತ್ತ್ವಂ ಶ್ವಭ್ರಮಿವಾಮ್ಬರೇ ॥೬೦॥
ಮದ್ಬುದ್ಧ್ಯಾರ್ಥೋ ಜಗಚ್ಚಬ್ದೋ ವಿದ್ಯತೇ ಪರಮಾಮೃತಮ್ ।
ತ್ವದ್ಬುದ್ಧ್ಯಾರ್ಥಸ್ತು ನಾಸ್ತ್ಯೇವ ತ್ವಮಹಂಶಬ್ದಕಾದಪಿ ॥೬೧॥
ತಸ್ಮಾಲ್ಲೀಲಾಸರಸ್ವತ್ಯಾ ಆಕಾಶವಪುಷೌ ಸ್ಥಿತೇ ।
ಸರ್ವಗೇ ಪರಮಾತ್ಮಾಚ್ಛೇ ಸರ್ವತ್ರಾಪ್ರತಿಘೇನಘೇ ॥೬೨॥
ಯತ್ರಯತ್ರ ಸದಾ ವ್ಯೋಮ್ನಿ ಯಥಾಕಾಮಂ ಯಥೇಪ್ಸಿತಮ್ ।
ಉದಯಂ ಕುರುತಸ್ತೇನ ತದ್ಗೇಹೇಸ್ತಿ ಗತಿಸ್ತಯೋಃ ॥೬೩॥

ಹೀಗೆ ಚೆನ್ನಾಗಿ ವಿಚಾರಮಾಡಿದರೆ, ಆ ಚಿದಾಕಾಶವೆಂಬುದಾವುದುಂಟೋ ಅದೇ ಮನನವೆಂದೂ ಆ ಚಿದಾಕಾಶವೆಂಬುದೇ ಪರಮಪದವೆಂದೂ ಪ್ರಾಜ್ಞರು ಹೇಳಿರುವುದು ನಿಶ್ಚಯವೆಂಬ ಅನುಭವವುಂಟಾಗುವುದು ॥೫೮॥

ಪ್ರಪಂಚದಲ್ಲಿ, ನೀರು ಯಾವುದುಂಟೋ—ಅದೇ ಸುಳಿಯೆಂದೂ ಪ್ರಸಿದ್ಧಿಹೊಂದುವುದು; ಇಷ್ಟೇಹೊರತು ಈ ನೀರಿನ ಸುಳಿಯೆಂಬುದೊಂದು ಪೃಥಕ್ಕಾದ ವಸ್ತುವು ಸತ್ಯವಲ್ಲ. ಹೀಗೆ, ದ್ರಷ್ಟೃವೇ ಈ ದೃಶ್ಯರೂಪನಾಗಿರುವನಲ್ಲದೆ, ದೃಶ್ಯವೆಂಬುದೊಂದು ಸತ್ಯವಾದ ವಸ್ತುವಿಲ್ಲ ॥೫೯॥

ಇಂದ್ರಜಾಲಮಾಡತಕ್ಕವನು ತನ್ನ ಶಕ್ತಿಯಿಂದ ಒಂದು ಮಣಿಯನ್ನುಂಟುಮಾಡಿದರೆ, ಅದರ ಮಧ್ಯದೊಳಗೆ ಗಂಧರ್ವನಗರ ಮುಂತಾದ ಛಿದ್ರಗಳೆಲ್ಲವೂ ಇರುವಂತೆ ಕಾಣುವುದಲ್ಲವೆ! ಹಾಗೆ ಅನಾದಿಯಾದ ಮಾಯಾಕಾಶದಲ್ಲಿ ಆಚಿದಾಕಾಶಸ್ಫುರಣವೆಂಬುದಾವುದುಂಟೋ, ಅದೇ ನಾನಾರೂಪವಾಗಿ ಜಗತ್ತೆನ್ನಿಸಿಕೊಳ್ಳುವುದು. ಇದೇ ನಿಜವಾದ ತತ್ವವು ॥೬೦॥

ವತ್ಸ! ರಾಮ! ನಾನು ಆ ಅಧಿಷ್ಠಾನಬ್ರಹ್ಮವೇ ಜಗತ್ತೆಂದು ತಿಳಿದುಕೊಂಡಿರುವೆನು; ಹೀಗಿರುವುದರಿಂದ ನಾನು ತಿಳಿದಿರುವ ಜಗಚ್ಛಬ್ದಾರ್ಥವಾದ ಆ ಪರಮಾಮೃತವು ಸತ್ಯವಾಗಿಯೇ ಇರುವುದು. ನೀನಾದರೋ, ಆರೋಪಿತವಾದುದನ್ನು ಸತ್ಯವೆಂದು ತಿಳಿದಿರುವೆ; ಅದುಕಾರಣ, ನೀನು ತಿಳಿದಿರುವ ಜಗಚ್ಛಬ್ದಾರ್ಥವು ಇಲ್ಲವೇಯಿಲ್ಲ. ಮತ್ತು, ತ್ವಂಶಬ್ದ ಅಹಂಶಬ್ದಗಳನ್ನು ಅಭಿಲಪಿಸತಕ್ಕ ಜಗತ್ಪ್ರಮಾತನೂಕೂಡ, ನನ್ನ ತಿಳಿವಳಿಕೆಯಲ್ಲಿ ಸತ್ಯವಾಗಿಯೇ ಇರುವನು; ನಿನ್ನ ತಿಳಿವಳಿಕೆಯಲ್ಲಿ ಅಸತ್ಯನಾಗುವನು ॥೬೧॥

ಹೀಗಿರುವುದರಿಂದ ಆ ಲೀಲಾಸರಸ್ವತಿಯರಿಬ್ಬರೂ ಆಕಾಶರೂಪರಾಗಿದ್ದರು; ಅವರು ಸರ್ವತ್ರ ಗಮನಶೀಲರಾಗಿಯೂ ಪರಮಾತ್ಮನಂತೆ ನಿರ್ಮಲರಾಗಿಯೂ ನಿರ್ದೋಷರಾಗಿಯೂ ಸರ್ವತ್ರ ಅಪ್ರತಿಹತರಾಗಿಯೂ ಇದ್ದರು ॥೬೨॥

ಅವರಿಬ್ಬರೂ ಸರ್ವದಾ ಯಾವಯಾವ ಆಕಾಶದಲ್ಲಿ ತಮ್ಮ ಇಷ್ಟಾನುಸಾರವಾಗಿ ಹೇಗೆ ಹೇಗೆ ಅಪೇಕ್ಷಿಸುವರೋ, ಹಾಗೆಲ್ಲವೂ ಉದಯವನ್ನು ಹೊಂದುವರು. ಅದುಕಾರಣ

ಸರ್ವತ್ರ ಸಮ್ಭವತಿ ಚಿದ್ಗಗನಂ ತದತ್ರ
ಸಂವೇದನಂ ಕಲನಮಾಮನನಂ ವಿಸಾರಿ |
ತಚ್ಚಾತಿವಾಹಿಕಮಿಹಾಹುರಕುಡ್ಯಮೇವ
ದೇಹಂ ಕಥಂ ಕಇವ ತಂ ವದ ಕಿಂ ರುಣದ್ಧಿ ||೬೪||

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಸಮರಸಮನನ್ತರ ಸಂಸ್ಮೃತ್ಯನು ಭವವರ್ಣನಂ ನಾಮ ಚತ್ವಾರಿಂಶಃ ಸರ್ಗಃ.

ಪೂರ್ವೋಕ್ತರೀತಿಯಾಗಿ ಆ ಅರಮನೆಯಲ್ಲಿ ಸೂಕ್ಷ್ಮವಾದ ರಂಧ್ರದೊಳಗೂ ಅವರಿಗೆ ಪ್ರವೇಶವುಂಟೆಂದು ತಿಳಿಯಬೇಕು ||೬೩||

ಅಯ್ಯಾ! ರಾಮ! ಆ ಚಿದಾಕಾಶವೆಂಬುದು, ಸರ್ವಪ್ರದೇಶದಲ್ಲಿಯೂ ನೆಲೆಸಿರುವುದು. ಅದೇ ಕಲ್ಪನಾರೂಪವಾಗಿ, ವಿಷಯಜ್ಞಾನಪರ್ಯಂತವಾಗಿ ಹೊರಗೆ ಪ್ರಸರಣೆಹೊಂದಿ, ಭಾವನಾವಿಶೇಷದಿಂದ ಯಥಾರ್ಥಜ್ಞಾನರೂಪವಾಗುವುದು. ಅದನ್ನೇ—ಆ ಸೂಕ್ಷ್ಮದೇಹವನ್ನೇ—ಆತಿವಾಹಿಕವೆಂದು ಪ್ರಾಜ್ಞರು ಹೇಳುವರು. ಹೀಗಿರುವುದರಿಂದ ಈ ದೇಹವನ್ನು ತಡೆಯುವುದು ಹೇಗೆ? ಇದನ್ನು ತಡೆಯತಕ್ಕವನಾರು? ಏತಕ್ಕಾಗಿ ತಡೆಯುವನು?—ನೀನು ಹೇಳುವವನಾಗು ||೬೪||

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಯುದ್ಧಾನಂತರ ಸ್ಮೃತ್ಯನುಭವವರ್ಣನೆಯೆಂಬ ನಾಲ್ವತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕಚತ್ವಾರಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ತಯೋಃ ಪ್ರವಿಷ್ಟಯೋರ್ದೇವ್ಯೋಃ ಪದ್ಮಸದ್ಮ ಬಭೂವ ತತ್ ।
ಚನ್ದ್ರದ್ವಯೋದಯೋದ್ದ್ಯೋತಧವಳೋದರಸುನ್ದರಮ್ ॥೧॥
ಕೋಮಲಾಮಲಸೌಗನ್ಧ್ಯಮ್ಮ ದಮನ್ದಾರಮಾರುತಮ್ ।
ತತ್ಪ್ರಭಾವೇನ ನಿದ್ರಾಳುನೃಪೇತರಸರಾಜ್ಞನಮ್ ॥೨॥
ಸೌಭಾಗ್ಯನನ್ದನೋದ್ಯಾನಂ ವಿದ್ರುತವ್ಯಾಧಿವೇದನಮ್ ।
ಸವಸನ್ತಂ ವನಮಿವ ಫುಲ್ಲಂ ಪ್ರಾತರಿವಾಮ್ಬುಜಮ್ ॥೩॥
ತಯೋರ್ದೇಹಪ್ರಭಾಪೂರೈಃ ಶಶಿನಿಷ್ಯನ್ದಶೀತಳೈಃ ।
ಆಹ್ಲಾದಿತೋಽಸೌ ಬುಬುಧೇ ರಾಜೋಕ್ಷಿತಇವಾಮೃತೈಃ ॥೪॥

ಉತ್ಪತ್ತಿ ಪ್ರಕರಣದಲ್ಲಿ ನಾಲ್ವತ್ತೊಂದನೆಯ ಸರ್ಗವು

ಪ್ರವಿಷ್ಟಯೋಸ್ತಯೋರಾಜ್ಞಾ ಸುಪ್ತಬುದ್ಧೇನ ಪೂಜನಮ್ ।
ರಾಜ್ಞೋಽನ್ವಯಸ್ಮೃತಿರ್ಜ್ಞಪ್ತ್ಯಾತ್ಮೋಪದೇಶಶ್ಚ ವರ್ಣ್ಯತೇ ॥

ಆ ಲೀಲಾಸರಸ್ವತಿಯರಿಬ್ಬರೂ ಪ್ರವೇಶಮಾಡಿದಾಗ ಮಲಗಿದ್ದು ಎದ್ದ ಆ ಪದ್ಮರಾಜನು ಪೂಜೆಮಾಡಿದ ಪ್ರಕಾರವೂ, ಸರಸ್ವತೀ ದೇವಿಯು ಆ ಪದ್ಮರಾಜನಿಗೆ ಅವನ ಪೂರ್ವ ಜನ್ಮಸ್ಮೃತಿಯನ್ನುಂಟುಮಾಡುವಿಕೆಯೂ, ಮತ್ತು ಆತ್ಮೋಪದೇಶಮಾಡುವಿಕೆಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು:—

ವತ್ಸ! ರಾಮ! ನಾನು ಹಿಂದೆ ಹೇಳಿದಂತೆ ಆ ಲೀಲಾಸರಸ್ವತಿಯರಿಬ್ಬರೂ ಪ್ರವೇಶಮಾಡಲಾಗಿ, ಆ ಪದ್ಮರಾಜನು ಮಲಗಿದ್ದ ಮನೆಯು, ಏಕಕಾಲದಲ್ಲಿ ಎರಡು ಚಂದ್ರರು ದಯಿಸಿದಂತೆ, ಒಳಗಡೆಯಲ್ಲಿ ಶುಭ್ರವಾಗಿಯೂ ಮನೋಹರವಾಗಿಯೂ ಆಯ್ತು ॥೧॥

ಆಗ, ಮಂದಾರಪುಷ್ಪಮಾಲಿಕೆಯ ಮೇಲೆ ಬಿದ್ದು ಹೊರಡುತಿರುವ ಗಾಳಿಯು, ಕೋಮಲವಾಗಿಯೂ ನಿರ್ಮಲವಾದ ಸುವಾಸನೆಯುಳ್ಳದಾಗಿಯೂ ಮೃದುವಾಗಿಯೂ ಅಲ್ಲಿ ಬೀಸುತಿದ್ದಿತು. ಮತ್ತು ಅವರ ಮಹಿಮೆಯಿಂದ, ದೊರೆಯೊಬ್ಬನು ಹೊರತು ಮಿಕ್ಕ ಗಂಡಸರುಹೆಂಗಸರೆಲ್ಲರೂ ನಿದ್ರೆಮಾಡುತಿದ್ದರು ॥೨॥

ಆಗ ಆ ಅರಮನೆಯು, ತನ್ನ ಸೊಬಗಿನಿಂದ ನಂದನವನದಂತೆ ಕಾಣುತಿದ್ದಿತು; ವ್ಯಾಧಿಯಿಂದುಂಟಾದ ಯಾತನೆಯೆಲ್ಲವೂ ಆ ಅರಮನೆಯಿಂದಾಚೆಗೆ ಓಡಿಹೋಗಿಬಿಟ್ಟಿತು. ಮತ್ತ ಆ ಗೃಹವು, ವಸಂತಕಾಲದ ಸೊಬಗಿನಿಂದ ಕೂಡಿರುವ ವನದಂತೆಯೂ, ಬೆಳಗ್ಗೆ ಅರಳಿರುವ ಕಮಲಪುಷ್ಪದಂತೆಯೂ ಶೋಭಿಸುತಿದ್ದಿತು ॥೩॥

ಬಳಿಕ, ಚಂದ್ರನೇ ಕರಗಿಸಿ ಸುರಿಯಲ್ಪಡುತಿರುವನೋ ಎಂಬಂತೆ ತಣ್ಣಗಿರುವ—ಆ ಲೀಲಾಸರಸ್ವತಿಯರ ದೇಹಕಾಂತಿಪ್ರವಾಹಗಳಿಂದ, ಆ ಪದ್ಮರಾಜನು, ಅಮೃತಸಿಕ್ತನಾದವನಂತೆ ಎಚ್ಚರಗೊಂಡನು ॥೪॥

ಆಸನದ್ವಯವಿಶ್ರಾನ್ತಂ ಸ ದದರ್ಶಾಪ್ಸರೋದ್ವಯಮ್ |
ಮೇರುಶೃಙ್ಗದ್ವಯೇ ಚನ್ದ್ರಬಿಮ್ಬದ್ವಯಮಿವೋದಿತಮ್ ||೫||
ನಿಮೇಷಮಿವ ಸಞ್ಚಿನ್ತ್ಯ ಸ ವಿಸ್ಮಿತಮನಾನೃಪಃ |
ಉತ್ತಸ್ಥೌ ಶಯನಾಚ್ಛೇಷಾತ್ ಇವ ಚಕ್ರಗದಾಧರಃ ||೬||
ಪರಿಸಂಯಮಿತಾಲಮ್ಬಮಾಲ್ಯಹಾರಾಧರಾಮ್ಬರಃ |
ಪುಷ್ಪಾಹರಇವೋತ್ಫುಲ್ಲಂ ಜಗ್ರಾಹ ಕುಸುಮಾಞ್ಜಲಿಮ್ ||೭||
ಉಪಧಾನಪ್ರದೇಶಸ್ಥಾತ್ ಸ್ವಯಂ ಪಟಲಕೋಟರಾತ್ |
ಬದ್ಧಪದ್ಮಾಸನೋ ಭೂಮೌ ಭೂತ್ವೋವಾಚೇದಮಾನತಃ ||೮||
ಜಯತಾಂ ಜನ್ಮದೌಸ್ಸ್ಥ್ಯದಾಹದೋಷಶಶಿಪ್ರಭೇ |
ದೇವ್ಯೌ ಬಾಹ್ಯಾನ್ತರತಮೋವಿದ್ರಾವಣರವಿಪ್ರಭೇ ||೯||
ತಯೋರುಕ್ತ್ವೇತಿ ತತ್ಯಾಜ ಪಾದಯೋಃ ಕುಸುಮಾಞ್ಜಲಿಮ್ |
ತೀರದ್ರುಮೋ ವಿಕಸಿತಃ ಪದ್ಮಿನ್ಯೋಃ ಪದ್ಮಯೋರಿವ ||೧೦||

ಆಮೇಲೆ ಆ ಪದ್ಮರಾಜನು, ಮೇರುಪರ್ವತದ ಎರಡು ಶಿಖರದಮೇಲೆ ಉದಯಿಸಿರುವ ಎರಡು ಚಂದ್ರಮಂಡಲಗಳೋ ಎನ್ನುವಹಾಗೆ—ಎರಡು ಆಸನಗಳಮೇಲೆ ಕುಳಿತಿರುವ ಇಬ್ಬರು ಅಪ್ಸರಸ್ತ್ರೀಯರನ್ನು ಕಂಡನು ||೫||

ಅನಂತರದಲ್ಲಿ ಆ ದೊರೆಯು, ಮನಸ್ಸಿನಲ್ಲಿ ಆಶ್ಚರ್ಯಪಟ್ಟು, ಒಂದು ನಿಮಿಷಕಾಲಮಾತ್ರ ಸ್ವಲ್ಪ ಚಿಂತಾಪರನಾಗಿದ್ದು, ಶ್ರೀಮನ್ನಾರಾಯಣನು ಆದಿಶೇಷನ ಮೇಲಿನಿಂದ ಏಳುವಂತೆ, ಆ ಹಾಸಿಗೆಯ ಮೇಲಿಂದ ಎದ್ದನು ||೬||

ಬಳಿಕ, ನಿದ್ರಾಕಾಲದಲ್ಲಿ ವ್ಯತ್ಯಸ್ತವಾಗಿ ಜೋಲಾಡುತಿದ್ದ ಪುಷ್ಪಮಾಲಿಕೆಯನ್ನೂ ಮುಕ್ತಾಸರವನ್ನೂ ಉಟ್ಟಿರುವ ವಸ್ತ್ರವನ್ನೂ ಕ್ರಮವಾಗಿ ಸರಿಮಾಡಿಕೊಂಡು, ಹೂವು ತೆಗೆದುಕೊಂಡು ಬರುವ ಭೃತ್ಯನಂತೆ, ತಲೆದಸಿಯಲ್ಲಿಟ್ಟಿದ್ದ ಹೂವಿನಬುಟ್ಟಿಯಲ್ಲಿರುವ ವಿಕಸಿತವಾದ ಪುಷ್ಪಗಳನ್ನು ಬೊಗಸೆಯಲ್ಲಿ ತೆಗೆದುಕೊಂಡನು. ಅನಂತರ, ನೆಲದಮೇಲೆ ಪದ್ಮಾಸನಹಾಕಿ ಕುಳಿತುಕೊಂಡು, ನಮ್ರನಾಗಿ ಈ ಮಾತನ್ನುಹೇಳಿದನು ||೭—೮||

ಈ ಜನ್ಮದಲ್ಲಿ ದುಃಖಜೀವನವೆಂಬ ದಾಹದೋಷಕ್ಕೆ ಚಂದ್ರಕಿರಣಪ್ರಾಯರಾಗಿರುವ ಈ ದೇವಿಯರಿಗೆ ಜಯವಾಗಲಿ; ಮತ್ತು, ಬಾಹ್ಯವಾಗಿಯೂ ಆಂತರವಾಗಿಯೂ ಇರುವ ತಮಸ್ಸುಗಳನ್ನು ಓಡಿಸುವುದರಲ್ಲಿ ಸೂರ್ಯಕಿರಣಪ್ರಾಯರಾಗಿರುವ ಈ ದೇವಿಯರಿಗೆ ಜಯವಾಗಲಿ ||೯||

ಈ ರೀತಿಯಾಗಿ ಹೇಳಿ ಆ ಪದ್ಮರಾಜನು, ಸರೋವರತೀರದಲ್ಲಿರುವ ವೃಕ್ಷವು ಕಮಲಲತೆಗಳ ಪುಷ್ಪಗಳಮೇಲೆ ತನ್ನ ಹೂವನ್ನು ಎರಚುವಂತೆ, ಆ ದೇವಿಯರ ಪಾದಗಳಮೇಲೆ ಪುಷ್ಪಾಂಜಲಿಯನ್ನೆರಚಿದನು ||೧೦||

ಲೀಲಾಯೈ ಭೂಪಜನ್ಮಾಥ ವಕ್ತುಂ ಮನ್ತ್ರಿಣಮೀಶ್ವರೀ ।
ಬೋಧಯಾಮಾಸ ಪಾರ್ಶ್ವಸ್ಥಂ ಸಙ್ಕಲ್ಪೇನ ಸರಸ್ವತೀ ॥೧೧॥

ಪ್ರಬುದ್ಧೋಽಪ್ಸರಸೌ ದೃಷ್ಟ್ವಾ ಪ್ರಣಮ್ಯ ಕುಸುಮಾಞ್ಜಲಿಮ್ ।
ತಯೋಃ ಪಾದೇಷು ಸನ್ತ್ಯಜ್ಯ ವಿವೇಶ ಪುರತೋ ನತಃ ॥೧೨॥

ಉವಾಚ ದೇವೀ ಹೇ ರಾಜನ್ ಕಸ್ತ್ವಂ ಕಸ್ಯ ಸುತಃ ಕದಾ ।
ಇಹ ಜಾತಇತಿ ಶ್ರುತ್ವಾ ಸ ಮನ್ತ್ರೀ ವಾಕ್ಯಮಬ್ರವೀತ್ ॥೧೩॥

ದೇವ್ಯೌ ಯುಷ್ಮತ್ಪ್ರಸಾದೋಽಯಂ ಭವತ್ಯೋರಪಿ ಯತ್ ಪುರಃ ।
ವಕ್ತುಂ ಶಕ್ನೋಮಿ ತದ್ದೇವ್ಯೌ ಶ್ರೂಯತಾಂ ಜನ್ಮ ಮತ್ಪ್ರಭೋಃ ॥

ಆಸೀದಿಕ್ಷ್ವಾಕುವಂಶೋತ್ಥೋ ರಾಜಾ ರಾಜೀವಲೋಚನಃ ।
ಶ್ರೀಮಾನ್ ಕುನ್ದರಥೋ ನಾಮ ದೋಶ್ಛಾಯಾಚ್ಛಾದಿತಾವನಿಃ ॥೧೫॥

ತಸ್ಯಾಭೂದಿನ್ದುವದನಃ ಪುತ್ರೋ ಭದ್ರರಥಾಭಿಧಃ ।
ತಸ್ಯ ವಿಶ್ವರಥಃ ಪುತ್ರಃ ತಸ್ಯ ಪುತ್ರೋ ಬೃಹದ್ರಥಃ ॥೧೬॥

ಬಳಿಕ ಆ ಸರಸ್ವತಿಯು, ಆ ದೊರೆಯ ಜನ್ಮವೃತ್ತಾಂತವನ್ನು ಲೀಲೆಗೆ ತಿಳಿಯಪಡಿಸುವುದಕ್ಕೋಸ್ಕರ, ಮೊಗ್ಗುಲಿನಲ್ಲಿ ಮಲಗಿದ್ದ ಮಂತ್ರಿಯನ್ನು ತನ್ನ ಸಂಕಲ್ಪಶಕ್ತಿಯಿಂದ ಎಚ್ಚರಪಡಿಸಿದಳು ॥೧೧॥

ಆ ಮಂತ್ರಿಯು ಎದ್ದವನಾಗಿ, ಆ ಅಪ್ಸರಸ್ತ್ರೀಯರನ್ನು ಕಂಡು, ನಮಸ್ಕಾರಮಾಡಿ, ಅವರ ಕಾಲುಗಳಮೇಲೆ ಪುಷ್ಪಾಂಜಲಿಯನ್ನು ಸಮರ್ಪಿಸಿ, ನಮ್ರನಾಗಿ ಮುಂದುಗಡೆ ಕುಳಿತುಕೊಂಡನು ॥೧೨॥

ಆಗ ಆ ಸರಸ್ವತಿಯು ಹೀಗೆ ಹೇಳಿದಳು:—ಎಲೈದೊರೆಯೆ! ನೀನು ಯಾರು? ಯಾರ ಮಗನು? ನೀನು ಯಾವಾಗ ಇಲ್ಲಿ ಹುಟ್ಟಿದೆ? – ಹೀಗೆ ಹೇಳಿದ ಆ ಸರಸ್ವತಿಯ ವಚನವನ್ನು ಕೇಳಿ, ಆ ಮಂತ್ರಿಯು ಈ ಮಾತನ್ನು ಹೇಳಿದನು ॥೧೩॥

ಎಲೌ ದೇವಿಯರೆ! ಸರ್ವಜ್ಞೆಯರಾದ ನಿಮ್ಮಗಳ ಮುಂದೆಯೂ ಕೂಡ—ಅಲ್ಪಜ್ಞನಾದ ನಾನು ಹೇಳಲು ಶಕ್ತನಾಗುತಿರುವುದನ್ನು ನೋಡಿದರೆ, ಇದು ನಿಮ್ಮಗಳ ಅನುಗ್ರಹವೇ ಹೊರತು ಬೇರೆಯಲ್ಲವೆಂದು ಗೊತ್ತಾಯ್ತು. ಆದುಕಾರಣ, ಎಲೌ ದೇವಿಯರೆ! ನಮ್ಮ ಪ್ರಭುವಿನ ಜನ್ಮವೃತ್ತಾಂತವನ್ನು ವಿಜ್ಞಾಪಿಸುವೆನು; ನೀವು ಕೇಳಬೇಕು ॥೧೪॥

ಪೂರ್ವದಲ್ಲಿ ಇಕ್ಷ್ವಾಕುವಂಶೋತ್ಪನ್ನನಾದ ಕಮಲನೇತ್ರನಾದ ಕುಂದರಥನೆಂಬ ದೊರೆಯಿದ್ದನು. ಅವನು ಲಕ್ಷ್ಮೀಯುಕ್ತನಾಗಿಯೂ ತನ್ನ ಬಾಹುಚ್ಛಾಯೆಯಿಂದ ಭೂಮಿಯನ್ನೆಲ್ಲ ಆಚ್ಛಾದಿಸಿದವನಾಗಿಯೂ ಇದ್ದನು ॥೧೫॥

ಅವನಿಗೆ ಭದ್ರರಥನೆಂಬ ಹೆಸರುಳ್ಳ ಕಮಲನೇತ್ರನಾದ ಮಗನಾದನು. ಈ ಭದ್ರರಥನಿಗೆ ವಿಶ್ವರಥನೆಂಬವನೂ, ವಿಶ್ವರಥನಿಗೆ ಬೃಹದ್ರಥನೆಂಬವನೂ ಮಕ್ಕಳಾದರು ॥೧೬॥

ತಸ್ಯ ಸಿನ್ಧುರಥಃ ಪುತ್ರಃ ತಸ್ಯ ಶೈಲರಥಃ ಸುತಃ ।
ತಸ್ಯ ಕಾಮರಥಃ ಪುತ್ರಃ ತಸ್ಯ ಪುತ್ರೋ ಮಹಾರಥಃ ।
ತಸ್ಯ ವಿಷ್ಣುರಥಃ ಪುತ್ರಃ ತಸ್ಯ ಪುತ್ರೋ ನಭೋರಥಃ ॥೧೭॥
ಅಯಮಸ್ಮತ್ಪ್ರಭುಸ್ತಸ್ಯ ಪುತ್ರಃ ಪೂರ್ಣಾಮಲಾಕೃತಿಃ ।
ಅಮೃತಾಪೂರಿತಜನಃ ಕ್ಷೀರೋದಸ್ಯೇವ ಚನ್ದ್ರಮಾಃ ॥೧೮॥
ಮಹದ್ಭಿಃ ಪುಣ್ಯಸಮ್ಭಾರೈಃ ವಿದೂರಥಇತಿ ಶ್ರುತಃ ।
ಜಾತೋ ಮಾತುಃ ಸುಮಿತ್ರಾಯಾಃ ಗೌರ್ಯಾಗುಹಇವಾಪರಃ ॥೧೯॥
ಪಿತಾಸ್ಯ ದಶವರ್ಷಸ್ಯ ದತ್ವಾ ರಾಜ್ಯಂ ವನಂ ಗತಃ ।
ಪಾಲಯತ್ಯೇಷ ಭೂಪೀಠಂ ತತಃಪ್ರಭೃತಿ ಧರ್ಮತಃ ॥೨೦॥
ಭವತ್ಯಾವದ್ಯ ಸಮ್ಪ್ರಾಪ್ತೇ ಫಲಿತೇ ಸುಕೃತದ್ರುಮೇ ।
ದೇವ್ಯೌ ದೀರ್ಘತಪಃಕ್ಲೇಶಶತೈರ್ದುಷ್ಪ್ರಾಪದರ್ಶನೇ ॥೨೧॥
ಇತ್ಯಯಂ ವಸುಧಾಧೀಶೋ ವಿದೂರಥಇತಿ ಶ್ರುತಃ ।
ಅದ್ಯ ಯುಷ್ಮತ್ಪ್ರಸಾದೇನ ಪರಾಂ ಪಾವನತಾಂ ಗತಃ ॥೨೨॥
ಇತ್ಯುಕ್ತ್ವಾ ಸಂಸ್ಥಿತೇ ತೂಷ್ಣೀಂ ಮನ್ತ್ರಿಣ್ಯವನಿಪೇ ತಥಾ ।

ಈ ಬೃಹದ್ರಥನಿಗೆ ಸಿಂಧುರಥನೂ, ಸಿಂಧುರಥನಿಗೆ ಶೈಲರಥನೂ, ಅವನಿಗೆ ಕಾಮರಥನೂ, ಆ ಕಾಮರಥನಿಗೆ ಮಹಾರಥನೆಂಬವನೂ, ಮಹಾರಥನಿಗೆ ವಿಷ್ಣುರಥನೂ, ವಿಷ್ಣುರಥನಿಗೆ ನಭೋರಥನೆಂಬವನೂ ಮಕ್ಕಳಾದರು ॥೧೭॥

ಆ ನಭೋರಥನ ಪುತ್ರನೇ ಈ ನಮ್ಮ ಪ್ರಭುವು; ಇವನು ಸಂಪೂರ್ಣವಾಗಿ ನಿರ್ಮಲವಾದ ಆಕಾರವುಳ್ಳವನಾಗಿ, ಕ್ಷೀರಸಮುದ್ರದಿಂದ ಹುಟ್ಟಿದ ಚಂದ್ರನಂತೆ, ತನ್ನ ಸೌಶೀಲ್ಯಾದಿ ಗುಣಗಳೆಂಬ ಅಮೃತದಿಂದ ಜನಗಳನ್ನೆಲ್ಲ ಆಪ್ಯಾಯನಪಡಿಸುತ್ತಿರುವನು ॥೧೮॥

ವಿದೂರಥನೆಂದು ಪ್ರಸಿದ್ಧನಾಗಿರುವ ಈ ನಮ್ಮ ಪ್ರಭುವು, ಜನರು ಮಾಡಿದ ಮಹಾಪುಣ್ಯವಿಶೇಷ ಸಮುದಾಯಗಳಿಂದ, ಪಾರ್ವತೀದೇವಿಯಲ್ಲಿ ಜನ್ಮವೆತ್ತಿದ ಎರಡನೆಯ ಕುಮಾರಸ್ವಾಮಿಯೋಪಾದಿಯಲ್ಲಿ, ತಾಯಿಯಾದ ಸುಮಿತ್ರಾದೇವಿಯಲ್ಲಿ ಜನ್ಮಪಡೆದಿರುವನು ॥೧೯॥

ಇವನ ತಂದೆಯು, ಇವನಿಗೆ ಹತ್ತುವರ್ಷವಾಗಿರುವಾಗಲೇ ರಾಜ್ಯಭಾರವನ್ನು ಕೊಟ್ಟುಬಿಟ್ಟು, ತಾನು ತಪಸ್ಸಿಗೋಸ್ಕರ ಅರಣ್ಯಕ್ಕೆ ಹೊರಟುಹೋದನು. ಆಗಿನಿಂದಲೂ ಇವನು ಧರ್ಮದಿಂದ ಭೂಮಂಡಲವನ್ನು ಕಾಪಾಡುತ್ತಿರುವನು॥೨೦॥

ಎಲೌ ದೇವಿಯರೆ! ಈದಿವಸ ಇವನ ಪುಣ್ಯವೃಕ್ಷವು ಫಲಿಸಿತಾದಕಾರಣ, ಅತಿದೀರ್ಘವಾದ ತಪಃಕ್ಲೇಶಗಳಿಂದಲೂ ನೋಡಲಸಾಧ್ಯರಾಗಿರುವ ನೀವುಗಳಿಬ್ಬರೂ ಇಲ್ಲಿಗೆ ದಯೆಮಾಡಿಸಿದಿರಿ ॥೨೧॥

ಈರೀತಿಯಾಗಿ, ವಿದೂರಥನೆಂಬ ಪ್ರಸಿದ್ಧನಾದ ಈ ನಮ್ಮ ರಾಜನು, ಈಗ ನಿಮ್ಮಗಳ ಅನುಗ್ರಹದಿಂದ ಅತಿಪವಿತ್ರನಾದನು ॥೨೨॥

ಹೀಗೆ ಹೇಳಿ ಆ ಮಂತ್ರಿಯು ಸುಮ್ಮನಾಗಲಾಗಿ, ಆ ದೊರೆಯು ಮೊದಲಿನಂತೆಯೇ ಪದ್ಮಾಸನಹಾಕಿಕೊಂಡು ಕೈಮುಗಿದುಕೊಂಡು ತಲೆಬೊಗ್ಗಿಸಿಕೊಂಡು ನಮ್ರತೆಯಿಂದ ಕುಳಿ

ಕೃತಾಞ್ಜಲೌ ನತಮುಖೇ ಬದ್ಧಪದ್ಮಾಸನೇ ವನೌ ||೨೩||
ರಾಜನ್ ಸ್ಮರ ವಿವೇಕೇನ ಪೂರ್ವಜಾತಿಮಿತಿ ಸ್ವಯಮ್ |
ವದನ್ತೀ ಮೂರ್ಧ್ನಿ ಸಸ್ಪರ್ಶ ತಂ ಕರೇಣ ಸರಸ್ವತೀ ||೨೪||
ಅಥ ಹಾರ್ದಂ ತಮೋ ಮಾಯಾಪದ್ಮಸ್ಯ ಕ್ಷಯಮಾಯಯೌ |
ಸುವಿಕಾಸಂ ಚ ಹೃದಯಂ ಜ್ಞಪ್ತಿಸ್ಪರ್ಶೋದಯೇಭವತ್ ||೨೫||
ಸಸ್ಮಾರ ಪೂರ್ವವೃತ್ತಾನ್ತಂ ಅನ್ತಃಸ್ಫುರದಿವ ಸ್ಥಿತಮ್ |
[1]ತ್ಯಕ್ತದೇಹೈಕರಾಜ್ಯತ್ವಂ ಲೀಲಾವಿಲಸಿತಾನ್ವಿತಮ್ ||೨೬||
ಜ್ಞಾತ್ವಾ ಪ್ರಜ್ಞಪ್ತಿವೃತ್ತಾನ್ತಂ ಲೀಲಾಯಾಸ್ತು ವಿಜೃಮ್ಭಿತಮ್ |
ಆತ್ಮೋದನ್ತಂ ಬಭೂವಾಸೌ ಉಹ್ಯಮಾನಇವಾರ್ಣವೇ ||೨೭||
ಉವಾಚಾತ್ಮನಿ ಸಂಸಾರೇ ಬತ ಮಾಯೇಯಮಾತತಾ |
ಪರಿಜ್ಞಾತಾ ಪ್ರಸಾದೇನ ದೇವ್ಯೋರಿಹ ಮಯಾಧುನಾ ||೨೮||

ತಿರಲಾಗಿ, ಸರಸ್ವತೀದೇವಿಯು ಆವನನ್ನು ಕುರಿತು—'ಎಲೈ ರಾಜನೆ! ವಿವೇಕದಿಂದ ನಿನ್ನ ಪೂರ್ವಜನ್ಮವೃತ್ತಾಂತವನ್ನು ಸ್ಮರಿಸಿಕೊ'—ಎಂದು ಹೇಳುತ, ತನ್ನ ಕೈಯಿಂದ ಅವನ ತಲೆಯನ್ನು ತಡವರಿಸಿದಳು ||೨೩—೨೪||

ಬಳಿಕ ಮಾಯಾಪದ್ಮನಾಗಿದ್ದ ಆ ವಿದೂರಥನಿಗೆ, ಆ ಸರಸ್ವತೀಕರಸ್ಪರ್ಶವಾದಕಾಲದಲ್ಲಿ, ಹೃದಯಾಕಾಶಸ್ಥನಾದ ಜೀವನನ್ನು ಮರೆಯಾಗಿಸಿದ್ದ ಅಜ್ಞಾನವು ಕ್ಷಯಹೊಂದಿತು; ಮನಸ್ಸೂಕೂಡ ಚೆನ್ನಾಗಿ ವಿಕಾಸಪಡೆಯಿತು ||೨೫||

ಆಗ ಆ ರಾಜನು, ತನ್ನ ಮನಸ್ಸಿನಲ್ಲಿ ಸ್ಫುರಿಸುತ್ತಿರುವಂತೆ ಕಾಣುವ ತನ್ನ ಪೂರ್ವಜನ್ಮವೃತ್ತಾಂತವೆಲ್ಲವನ್ನೂ, ಎಕಚ್ಛತ್ರಾಧಿಪತ್ಯ ದೇಹ ಇವುಗಳನ್ನು ಪರಿತ್ಯಜಿಸಿದುದನ್ನೂ, ಲೀಲಾದೇವಿಯೊಡನೆ ತಾನು ವಿಲಾಸಪಡುತಿದ್ದುದನ್ನೂ, ಯಥಾವಸ್ಥಿತವಾಗಿ ಸ್ಮರಿಸಿಕೊಂಡನು ||೨೬||

ಅನಂತರದಲ್ಲಿ, ಅವನು ಆ ಸರಸ್ವತಿಯ ವೃತ್ತಾಂತವನ್ನೂ ಈಗ ಲೀಲೆಗಿರುವ ಉತ್ತಮದಶೆಯನ್ನೂ ತನ್ನ ವೃತ್ತಾಂತವನ್ನೂ ತಿಳಿದವನಾಗಿ, ಆಶ್ಚರ್ಯಪಟ್ಟು, ಸಮುದ್ರದಲ್ಲಿ ತೇಲಿಕೊಂಡು ಹೋಗುತ್ತಿರುವವನಂತೆ ಆದನು ||೨೭||

ಆಗ ತನ್ನ ಮನಸ್ಸಿನಲ್ಲಿ ಹೀಗೆ ಹೇಳಿಕೊಂಡನು:—ಸಂಸಾರದಲ್ಲಿ ಈ ಮಾಯೆಯು ಬಹು ವಿಸ್ತಾರವಾಗಿ ವ್ಯಾಪಿಸಿಕೊಂಡಿರುವುದು. ಇದು ಬಹು ಖೇದಕರವು! ಈಗ ಈ ದೇವಿಯರ ಅನುಗ್ರಹದಿಂದ ನಾನು ಈ ಮಾಯೆಯೆಂಬುದನ್ನು ತಿಳಿದುಕೊಂಡೆನು ||೨೮||

---

1. ಏಕಮೇವ ರಾಜಾ ಯಸ್ಯ, ತಸ್ಯ ಭಾವಃ ಐಕರಾಜ್ಯಂ, ದೇಹಶ್ಚ ಐಕರಾಜ್ಯಂ ಚ ದೇಹೈಕರಾಜ್ಯೇ, ತ್ಯಕ್ತೇ ದೇಹೈಕ ರಾಜ್ಯೇ ಯೇನ, ತಸ್ಯ ಭಾವಃ.

ರಾಜೋವಾಚ.

ಹೇದೇವ್ಯೌ ಕಿಮಿದಂ ನಾಮ ದಿನಮೇಕಂ ಮೃತಸ್ಯ ಮೇ ।
ಗತಮದ್ಯೇಹ ಜಾತಾನಿ ವಯೋವರ್ಷಾಣಿ ಸಪ್ತತಿಃ ॥೨೯॥
ಸ್ಮರಾಮ್ಯನೇಕಕಾರ್ಯಾಣಿ ಸ್ಮರಾಮಿ ಪ್ರಪಿತಾಮಹಮ್ ।
ಸ್ಮರಾಮಿ ಬಾಲ್ಯಂ ತಾರುಣ್ಯಂ ಮಿತ್ರಂ ಬನ್ಧುಪರಿಚ್ಛದಮ್ ॥೩೦॥

ಜ್ಞಪ್ತಿರುವಾಚ.

ರಾಜನ್ ಮೃತಿಮಹಾಮೋಹಮೂರ್ಛಾಯಾಃ ಸಮನನ್ತರಮ್ ।
ತಸ್ಮಿನ್ ಲೋಕಾನ್ತರೇತೀತೇ ತಸ್ಮಿನ್ನೇವ ಮುಹೂರ್ತಕೇ ॥೩೧॥
ತಸ್ಮಿನ್ನೇವ ಗೃಹೇಚಾಸ್ಮಿನ್ ಏವ ವ್ಯೋಮ್ನ್ಯಪಿ ಸದ್ಮನಿ ।
ಅಯಂ ತಸ್ಯ ಗೃಹಸ್ಯಾನ್ತಃ ವ್ಯೋಮನ್ಯೇವ ಕಿಲ ಸ್ಥಿತೇ॥೩೨॥
ಗಿರಿಗ್ರಾಮಕವಿಪ್ರಸ್ಯ ಗೃಹೇ ನೃಭೂಪಮಣ್ಡಪಃ ।
ತಸ್ಯಾನ್ತರೇಯಮಾಭಾತಿ ಪ್ರತ್ಯೇಕಂ ಚ ಜಗದ್ಗೃಹಮ್ ॥೩೩॥
ಕಿಲ ಬ್ರಾಹ್ಮಣಗೇಹಾನ್ತಃ ಜೀವಸ್ತೇ ಮದುಪಾಸ್ಥಿತಃ ।
ತತ್ರೈವ ತಸ್ಯ ಭೂಪೀಠಂ ತಸ್ಮಿಂಶ್ಚ ಕಿಲ ಮಣ್ಡಪೇ ॥೩೪॥

ಈರೀತಿಯಾಗಿ ಯೋಚಿಸಿ ಆ ದೊರೆಯು ಆ ಲೀಲಾಸರಸ್ವತಿಯರನ್ನು ಕುರಿತು ಮಾತ ನಾಡಿದನು:—

ಎಲೌ ದೇವಿಯರೆ! ಇದೇನು? ನಾನು ಸತ್ತು ಇನ್ನೂ ಒಂದುದಿವಸಮಾತ್ರವೇ ಆಗಿರುವುದು; ಈ ಜನ್ಮವೆತ್ತಿ ಈಗಾಗಲೇ ಎಪ್ಪತ್ತು ವರ್ಷಗಳು ಕಳೆದುಹೋಗಿರುವುವು! ಇದೇನಾಶ್ಚರ್ಯವು!! ॥೨೯॥

ಈ ಯೆಪ್ಪತ್ತುವರ್ಷಗಳಲ್ಲಿ ನಡೆದಿರುವ ಕಾರ್ಯಗಳೆಲ್ಲವೂ ಈಗ ನನ್ನ ಸ್ಮೃತಿಗೆ ಬರುತಿರುವುವು. ನನ್ನ ಮುತ್ತಾತ ಇದ್ದುದನ್ನೂ ನಾನು ಈಗ ಸ್ಮರಿಸುವೆನು. ನಾನು ಈ ಜನ್ಮದಲ್ಲಿ ಅನುಭವಿಸಿದ ಬಾಲ್ಯವನ್ನೂ ಯೌವನವನ್ನೂ ನನ್ನ ಮಿತ್ರರನ್ನೂ ಬಂಧು ಬಳಗಗಳನ್ನೂ ಈಗ ನಾನು ಸ್ಮರಿಸುತ್ತಿರುವೆನು. ಇದೆಲ್ಲವೂ ಕೇವಲ ವಿಚಿತ್ರವಾಗಿರುವುದಲ್ಲವೆ!॥

ಹೀಗೆ ಆಶ್ಚರ್ಯಯುಕ್ತನಾಗಿ ಪ್ರಶ್ನೆಮಾಡುತಿರುವ ಆ ದೊರೆಯನ್ನು ಕುರಿತು, ಸರಸ್ವತೀದೇವಿಯು ಉತ್ತರಹೇಳಿದಳು:—

ಎಲೈ ದೊರೆಯೆ! ನೀನು ಹೀಗೆ ಆಶ್ಚರ್ಯಪಡಬೇಕಾದುದು ಅನಾವಶ್ಯಕವು. ನೀನು ಆಗ ಮರಣಮೋಹವೆಂಬ ಮೂರ್ಛೆಯನ್ನನುಭವಿಸಿದ ಉತ್ತರಕ್ಷಣವೇ, ಆ ಮುಹೂರ್ತದಲ್ಲಿಯೇ ಆ ಲೋಕಾಂತರವು ಅತಿಕ್ರಮಿಸಿಹೋಗಲಾಗಿ, ಮತ್ತು ಈಗ ನೀನು ಆಶ್ರಯಿಸಿಕೊಂಡಿರುವ ಮನೆಯೂ ಅದಕ್ಕೆ ಆಶ್ರಯವಾದ ಚಿದಾಕಾಶವೂ ಮಾಯಾವರಣದಿಂದ ಮರೆಯಾಗಲಾಗಿ, ಆ ಗಿರಿಗ್ರಾಮದ ವಸಿಷ್ಠನೆಂಬ ಬ್ರಾಹ್ಮಣನ ಮನೆಯೊಳಗೆ ಆ ಆಕಾಶದಲ್ಲಿಯೇ ಇದ್ದ ಈ ರಾಜಗೃಹಮಂಡಪವೂ ಅದರೊಳಗೆ ಬೇರೆಬೇರೆಯಾಗಿ ಈ ಜಗತ್ತೆಂಬ ಮನೆಯೂ ನಿನಗೆ ಭಾಸಮಾನವಾದುವು ॥೩೧—೩೩॥

ಆ ಬ್ರಾಹ್ಮಣನ ಮನೆಯೊಳಗೆ ನನ್ನನ್ನು ಸೇವಿಸುತಿರುವ ನಿನ್ನ ಜೀವವೂ ಇರುವುದು; ಅಲ್ಲಿ ಅದರ ಭೂಭಾಗವೂ, ಆ ಮನೆಯೊಳಗಿನ ಆ ಮಂಟಪದಲ್ಲಿಯೇ ಈ ಸಂಸಾ

ತಸ್ಯೈವ ಚ ಗೃಹಸ್ಯಾನ್ತಃ ಇದಂ ಸಂಸಾರಮಣ್ಡಲಮ್ ।
ತತ್ರೈವೇದಂ ತವ ಗೃಹಂ ಸ್ಥಿತಮಾರಮ್ಭಮನ್ಥರಮ್ ॥೩೫॥
ತತ್ರೈವ ಚೇತಸಿ ತವ ನಿರ್ಮಲಾಕಾಶನಿರ್ಮಲೇ ।
ಪ್ರತಿಭಾಮಾಗತಮಿದಂ ವ್ಯವಹಾರಭ್ರಮಾತತಮ್ ॥೩೬॥
ಯಥೇದಂ ನಾಮ ಮೇ ಜನ್ಮ ತಥೇಕ್ಷ್ವಾಕುಕುಲಂ ಮಮ ।
ಏವಂನಾಮಾನಏತೇ ಮೇ ಪುರಾಭೂರ್ವ ಪಿತಾಮಹಾಃ ॥೩೭॥
ಜಾತೋಽಹಮಭವಂ ಬಾಲೋ ದಶವರ್ಷಸ್ಯ ಮೇ ಪಿತಾ ।
ಪರಿವ್ರಾಡ್ವಿಪಿನಂ ಯಾತಃ ಇಹ ರಾಜ್ಯೇಽಭಿಷಿಚ್ಯ ಮಾಮ್ ॥೩೮॥
ತತೋ ದಿಗ್ವಿಜಯಂ ಕೃತ್ವಾ ಕೃತ್ವಾ ರಾಜ್ಯಮಕಣ್ಟಕಮ್ ।
ಅಮೀಭಿರ್ಮನ್ತ್ರಿಭಿಃ ಪೌರೈಃ ಪಾಲಯಾಮಿ ವಸುನ್ಧರಾಮ್ ॥೩೯॥
ಯಜ್ಞಕ್ರಿಯಾಕ್ರಮವತೋ ಧರ್ಮೇ ಪಾಲಯತಃ ಪ್ರಜಾಃ ।
ವಯಸಃ ಸಮತೀತಾನಿ ಮಮ ವರ್ಷಾಣಿ ಸಪ್ತತಿಃ ॥೪೦॥
ಇದಂ ಪರಬಲಂ ಪ್ರಾಪ್ತಂ ಮಮ ದಾರುಣವಿಗ್ರಹಃ ।
ಯುದ್ಧಂ ಕೃತ್ವೇದಮಾಯಾತೋ ಗೃಹಮಸ್ಮಿ ಯಥಾಸ್ಥಿತಮ್ ॥೪೧॥

ರಮಂಡಲವೂ, ಅಲ್ಲಿಯೇ ನಾನಾವಿಧಕಾರ್ಯಾರಂಭಪರಿಪೂರ್ಣವಾಗಿರುವ ಈ ನಿನ್ನ ಮನೆಯೂ ಇರುವುವು ॥೩೪—೩೫॥

ಅಲ್ಲಿಯೇ ನಿರ್ಮಲವಾದ ಆಕಾಶದಂತೆ ಸ್ವಚ್ಛವಾದ ನಿನ್ನ ಮನಸ್ಸಿನಲ್ಲಿ, ಈ ವಿಸ್ತಾರವಾದ ಪ್ರಪಂಚವ್ಯವಹಾರವೆಂಬ ಭ್ರಮೆಯು ಭಾಸಮಾನವಾಯ್ತು ॥೩೬॥

ನಿನಗುಂಟಾದ ಭ್ರಮೆ ಹೇಗಿರುವುದೆಂದರೆ:—ನಾನು ಈ ಜನ್ಮವನ್ನು ಪಡೆದಿರುವೆನು. ನನ್ನದು ಇಕ್ಷ್ವಾಕುಮಹಾರಾಯನ ವಂಶವು. ನನ್ನ ಪ್ರಾಚೀನ ಪಿತಾಮಹಂದಿರು ಈ ನಾಮಧೇಯವುಳ್ಳವರಾಗಿದ್ದರು ॥೩೭॥

ನಾನು ಹುಟ್ಟಿ ಇನ್ನೂ ಬಾಲಕನಾಗಿಯೇ ಇದ್ದೆನು. ಆಗಲೇ—ನನಗೆ ಹತ್ತುವರ್ಷವಾಗಿರುವಾಗಲೇ —ನನ್ನತಂದೆಯು ಈ ರಾಜ್ಯದಲ್ಲಿ ನನಗೆ ಅಭಿಷೇಕಮಾಡಿ ತಾನು ಸನ್ಯಾಸಿಯಾಗಿ ಅರಣ್ಯಕ್ಕೆ ಹೊರಟುಹೋದನು ॥೩೮॥

ಅನಂತರ ನಾನು ದಿಗ್ವಿಜಯಮಾಡಿ ರಾಜ್ಯವನ್ನು ನಿಷ್ಕಂಟಕವಾಗಿ ಮಾಡಿ ಈಮಂತ್ರಿಗಳೊಡನೆಯೂ ಪೌರಜನಗಳೊಡನೆಯೂ ಭೂಮಿಯನ್ನು ಪರಿಪಾಲಿಸುತಿರುವೆನು ॥೩೯॥

ಈಗ ಕ್ರಮವಾಗಿ ಯಜ್ಞಕರ್ಮಗಳನ್ನು ನಡೆಯಿಸುತಲೂ ಪ್ರಜೆಗಳನ್ನು ಧರ್ಮವಾಗಿ ಕಾಪಾಡುತಲೂ ಇರುವ ನನ್ನ ಆಯುಸ್ಸಿನಲ್ಲಿ ಎಪ್ಪತ್ತು ವರ್ಷಗಳು ಕಳೆದುಹೋದುವು ॥೪೦॥

ಈಗ ಈ ಶತ್ರುಸೈನ್ಯವು ಪ್ರಾಪ್ತವಾಯ್ತು. ನನಗೆ ಅದರೊಡನೆ ಕ್ರೂರವಾದ ಯುದ್ಧವೂ ಪ್ರಾಪ್ತವಾಯ್ತು. ಆ ಯುದ್ಧವನ್ನು ಮುಗಿಸಿಕೊಂಡು ಪುನಃ ಪೂರ್ವದಂತೆಯೇ ಇದ್ದ ಈ ನನ್ನ ಮನೆಗೆ ಬಂದೆನು ॥೪೧॥

ಇಮೇ ದೇವ್ಯೌ ಗೃಹೇ ಪ್ರಾಪ್ತೇ ಮಯ್ಯೇತೇ ಪೂಜಯಾಮ್ಯಹಮ್ ।
ಪೂಜಿತಾಹಿ ಪ್ರಯಚ್ಛನ್ತಿ ದೇವತಾಃ ಸ್ವಸಮೀಹಿತಮ್ ‖೪೨‖
ಮಮೇಯಮೇತಯೋರೇಕಾ ಜ್ಞಾನಂ ಜಾತಿಸ್ಮೃತಿಪ್ರದಮ್ ।
ಇಹ ದತ್ತವತೀ ದೇವೀ ಭಾಬ್ಜಸ್ಯೇವ ವಿಕಾಸನಮ್ ‖೪೩‖
ಇದಾನೀಂ ಕೃತಕೃತ್ಯೋಽಸ್ಮಿ ಜಾತೋಽಸ್ಮಿ ಗತಸಂಶಯಃ ।
ಶಾಮ್ಯಾಮಿ ಪರಿನಿರ್ವಾಮಿ ಸುಖಮಾಸೇ ಚ ಕೇವಲಮ್ ‖೪೪‖
ಇತೀಯಮಾತತಾ ಭ್ರಾನ್ತಿಃ ಭವತೋ ಭೂರಿಸಮ್ಭ್ರಮಾ ।
ನಾನಾಚಾರವಿಹಾರಾಢ್ಯಾ ಸಲೋಕಾನ್ತರಸಙ್ಗರಾ ‖೪೫‖
ಯಸ್ಮಿನ್ನೇವ ಮುಹೂರ್ತೇ ತ್ವಂ ಮೃತಿಮಭ್ಯಾಗತಃ ಪುರಾ।
ತದೈವ ಪ್ರತಿಭೈಷಾ ತೇ ಸ್ವಯಮೇವೋದಿತಾ ಹೃದಿ ‖೪೬‖
ಏಕಾಮಾವರ್ತಚಲನಾಂ ತ್ಯಕ್ತ್ವಾದತ್ತೇ ಯಥಾ ಪರಾಮ್ ।
ಕ್ಷಿಪ್ರಮೇವ ನದೀವಾಹೋ ಚಿತ್ತಪ್ರವಾಹಸ್ತಥೈವ ಚ ‖೪೭‖
ಆವರ್ತಾನ್ತರಸಮ್ಮಿಶ್ರೋ ಯಥಾವರ್ತಃ ಪ್ರವರ್ತತೇ ।
ಕದಾಚಿದೇವಂ ಸರ್ಗಶ್ರೀಃ ಮಿಶ್ರಾಽಮಿಶ್ರಾ ಚ ವರ್ಧತೇ ‖೪೮‖

ಈ ಯಿಬ್ಬರು ದೇವಿಯರು ಈಗ ನನ್ನ ಮನೆಗೆ ಬಂದಿರುವರು. ನಾನು ಇವರನ್ನು ಈಗ ಪೂಜಿಸಿದೆನು. ನಮ್ಮಿಂದ ಪೂಜಿತರಾದ ದೇವತೆಗಳು ನಮ್ಮ ಇಷ್ಟಾರ್ಥವನ್ನು ಕೊಡುವರು ॥೪೨॥

ಇವರಲ್ಲಿ ಒಬ್ಬಳು, ಸೂರ್ಯಕಾಂತಿಯು ಕಮಲಕ್ಕೆ ವಿಕಾಸವನ್ನು ಕೊಡುವಂತೆ, ನನಗೆ ಪೂರ್ವಜನ್ಮಸ್ಮೃತಿಯನ್ನುಂಟುಮಾಡುವ ಜ್ಞಾನವನ್ನು ಕೊಟಳು ॥೪೩॥

ಈಗ ನಾನು ಕೃತಕೃತ್ಯನಾದೆನು. ನನ್ನ ಸಂಶಯವೆಲ್ಲವೂ ಈಗ ನಿವೃತ್ತಿಹೊಂದಿತು. ನಾನು ಈಗ ಶಾಂತನಾಗಿ ಸುಹಿತನಾಗಿ ಕೇವಲ ಸುಖವಾಗಿರುವೆನು ॥೪೪॥

ಎಂದು ಈರೀತಿಯಾಗಿ ನಿನಗೆ ಭ್ರಾಂತಿಯು ಹಬ್ಬಿಕೊಂಡಿರುವುದು; ಇದು, ಬಹು ಸಂಭ್ರಮಯುಕ್ತವಾಗಿಯೂ, ನಾವಿಧವಾದ ಆಚರಣೆಗಳಿಂದಲೂ ವಿಹಾರಗಳಿಂದಲೂ ಪರಿಪೂರ್ಣವಾಗಿಯೂ, ಲೋಕಾಂತರ ಸಂಚಾರಯುಕ್ತವಾಗಿಯೂ ಇರುವುದು ॥೪೫॥

ಅಯ್ಯಾ! ದೊರೆಯೆ! ನೀನು ಹಿಂದೆ ಯಾವ ಮುಹೂರ್ತದಲ್ಲಿ ಮರಣವನ್ನು ಹೊಂದಿದೆಯೋ, ಆಗಲೇ ನಿನ್ನ ಮನಸ್ಸಿನಲ್ಲಿ ಈ ವಿಧವಾದ ಪ್ರತಿಭೆಯು ತಾನಾಗಿ ಹುಟ್ಟಿತು ॥

ನದಿಯ ಪ್ರವಾಹವು ಒಂದು ಸುಳಿಯನ್ನು ಬಿಟ್ಟು ಕ್ಷಿಪ್ರದಲ್ಲಿಯೇ ಮತ್ತೊಂದನ್ನು ಹೇಗೆ ಸ್ವೀಕರಿಸುತ್ತಿರುವುದೋ, ಈ ಚಿತ್ತಪ್ರವಾಹವೂ ಹಾಗೆಯೇ ಒಂದಾದಮೇಲೆ ಮತ್ತೊಂದು ಭ್ರಾಂತಿಯನ್ನು ಬೇಗನೆ ಸ್ವೀಕರಿಸುವುದು ॥೪೭॥

ಮತ್ತು, ಒಂದು ಸುಳಿಯು ಮತ್ತೊಂದು ಸುಳಿಯೊಡನೆ ಮಿಶ್ರವಾಗಿ ಹೇಗೆ ಪ್ರವರ್ತಿಸುವುದೋ, ಹಾಗೆ ಈ ಸೃಷ್ಟಿಸಂಪತ್ತೂ ಕೂಡ ಜಾಗ್ರದವಸ್ಥೆಯಲ್ಲಿ ಬೇರೆಜೀವಗಳ ಸೃಷ್ಟಿಯೊಡನೆ ಮಿಶ್ರವಾಗಿಯೂ, ಸ್ವಪ್ನದಲ್ಲಿ ಆ ಜೀವಾಂತರಸೃಷ್ಟಿರಹಿತವಾಗಿಯೂ ಪ್ರವರ್ತಿಸುವುದು ॥೪೮॥

ತಸ್ಮಿನ್ ಮೃತಿಮುಹೂರ್ತೇ ತೇ ಪ್ರತಿಭಾಸಮುಪಾಗತಮ್ ।
ಏತಜ್ಜಾಲಮಸದ್ರೂಪಂ ಚಿದ್ಭಾನೋಃ ಸಮುಪಸ್ಥಿತಮ್ ॥೪೯॥
ಯಥಾ ಸ್ವಪ್ನಮುಹೂರ್ತಾನ್ತಃ ಸಂವತ್ಸರಶತಭ್ರಮಃ ।
ಯಥಾ ಸಙ್ಕಲ್ಪನಿರ್ಮಾಣೇ ಜೀವನಂ ಮರಣಂ ಪುನಃ ॥೫೦॥
ಯಥಾ ಗನ್ಧರ್ವನಗರೇ ಕುಡ್ಯಮಣ್ಡನವೇದನಮ್ ।
ಯಥಾ ನೌಯಾನಸಂರಮ್ಭೇ ವೃಕ್ಷಪರ್ವತವೇಪನಮ್ ॥೫೧॥
ಯಥಾ ಸ್ವಧಾತುಸಂಕ್ಷೋಭೇ ಽಪೂರ್ವಪರ್ವತನರ್ತನಮ್ ।
ಯಥಾಽಸಮಞ್ಜಸಂ ಸ್ವಪ್ನೇ ಸ್ವಶಿರಃಪ್ರವಿಕರ್ತನಮ್ ॥೫೨॥
ಮಿಥ್ಯೈವೈವಮಿಯಂ ಪ್ರೌಢಾ ಭ್ರಾನ್ತಿರಾತತರೂಪಿಣೀ ॥೫೩॥
ವಸ್ತುತಸ್ತು ನ ಜಾತೋಽಸಿ ನ ಮೃತೋಽಸಿ ಕದಾಚನ ।
ಶುದ್ಧವಿಜ್ಞಾನರೂಪಸ್ತ್ವಂ ಶಾನ್ತ ಆತ್ಮನಿ ತಿಷ್ಠಸಿ ॥೫೪॥

ನೀನು ಮರಣಹೊಂದಿದ್ದ ಆ ಸಮಯದಲ್ಲಿ ನಿನಗೆ ಪ್ರತಿಭಾಸಮಾನವಾಗುತ್ತಿದ್ದ ಈ ಜಗತ್ಸಮೂದಾಯವೆಲ್ಲವೂ, ಅಸತ್ಯರೂಪವಾದುದು. ಇದು ಆ ಚಿತ್ತಿನ ಪ್ರಕಾಶದಿಂದ ನಿನಗೆ ಆರೀತಿಯಾಗಿ ಅನುಭವವಿಷಯವಾಗಿದ್ದಿತು ॥೪೯॥

ನಾವು ಸ್ವಪ್ನದಲ್ಲಿ ಒಂದು ಮುಹೂರ್ತದೊಳಗಾಗಿ ನೂರಾರುವರ್ಷಗಳನ್ನು ಅನುಭವಿಸಿದಂತೆ ಭ್ರಮೆಯಾಗುವುದಿಲ್ಲವೆ! ನಮ್ಮ ಮನಸ್ಸಿನಲ್ಲಿ ನಿರ್ಮಾಣಮಾಡಿಕೊಳ್ಳುವಂತೆ, ಆಗ ಮತ್ತೆಮತ್ತೆ ಬದುಕುವುದೂ ಸಾಯುವುದೂ ಕಾಣಬರಬಹುದಲ್ಲವೆ! ಗಂಧರ್ವನಗರದಲ್ಲಿ ಗೋಡೆಯಿರುವಂತೆಯೂ ಅದರಮೇಲೆ ಚಿತ್ರಬರೆದಿರುವಂತೆಯೂ ತಿಳಿದುಕೊಳ್ಳುವುದಿಲ್ಲವೆ! ವೇಗವಾಗಿ ಹೋಗುತಿರುವ ಹಡಗಿನಲ್ಲಿ ಕುಳಿತು ಪ್ರಯಾಣಮಾಡುತಿರುವಾಗ, ದಡದಲ್ಲಿರುವ ವೃಕ್ಷಗಳೂ ಪರ್ವತಗಳೂ ಓಡುತಿರುವಹಾಗೆ ನಮಗೆ ಕಾಣುವುದಿಲ್ಲವೆ! ನಮ್ಮ ದೇಹದಲ್ಲಿರುವ ವಾತಪಿತ್ತಶ್ಲೇಷ್ಮಗಳು ಒಂದಕ್ಕೊಂದು ಸೇರಿಕೊಂಡು ವಿಕಾರವುಂಟುಮಾಡಿದಾಗ, ಹೊಸದಾಗಿರುವುದೊಂದು ಪರ್ವತವು ಕುಣಿಯುತಿರುವಂತೆ ತೋರುವುದಿಲ್ಲವೆ! ನಮ್ಮ ಶಿರಚ್ಛೇದವನ್ನು ನಾವು ಕಾಣುವುದು ಎಂದಿಗೂ ಅಸಮಂಜಸವಾಗಿದ್ದರೂ, ಸ್ವಪ್ನದಲ್ಲಿ ನಾವು ಅದನ್ನು ಅನುಭವಿಸುವುದಿಲ್ಲವೆ! ಆದರೆ, ಇವೆಲ್ಲವೂ ಕೇವಲ ಮಿಥ್ಯಾಭೂತಗಳೆಂದು ಹೇಗೆ ಸಿದ್ಧವಾಗಿರುವುದೋ, ಹಾಗೆಯೇ---ವಿಸ್ತಾರವಾಗಿ ಹರಡಿಕೊಂಡು ಬೇರುಬಿಟ್ಟುಕೊಂಡಿರುವ—ನಾನು ಹುಟ್ಟುತ್ತೇನೆ ನಾನು ಸಾಯುತ್ತೇನೆ—ಇತ್ಯಾದಿರೂಪವಾದ ಭ್ರಾಂತಿಯೂ ಕೂಡ ಕೇವಲ ಮಿಥ್ಯಾಭೂತವಾದುದೆಂದು ತಿಳಿಯಬೇಕು ॥೫೦—೫೩॥

ಅಯ್ಯಾ! ದೊರೆಯೆ! ವಾಸ್ತವ್ಯವಾಗಿ ವಿಚಾರಮಾಡಿನೋಡಿದರೋ, ನೀನು ಹುಟ್ಟಿಯೂ ಇಲ್ಲ; ಸತ್ತೂ ಇಲ್ಲ. ಕೇವಲ ಶುದ್ಧಜ್ಞಾನಸ್ವರೂಪನಾಗಿರುವ ನೀನು, ಶಾಂತನಾಗಿ ಆತ್ಮನಿಷ್ಠನಾಗಿರುವೆ ॥೫೪॥

ಪಶ್ಯಸೀವೈತದಖಿಲಂ ನ ಚ ಪಶ್ಯಸಿ ಕಿಂಚನ ।
ಸರ್ವಾತ್ಮಕತಯಾ ನಿತ್ಯಂ ಪ್ರಕಚಸ್ಯಾತ್ಮನಾತ್ಮನಿ ।
ಮಹಾಮಣಿರಿವೋದಾರಃ ಆಲೋಕಇವ ಭಾಸ್ವರಃ ॥೫೫॥
ವಸ್ತುತಸ್ತು ನ ಭೂಪೀಠಂ ಇದಂ ನ ಚ ಭವಾನಯಮ್ ।
ನ ಚೇಮೇ ಗಿರಯೋ ಗ್ರಾಮಾಃ ನ ಚೈತೇ ನ ಚ ವೈ ವಯಮ್॥೫೬॥
ಗಿರಿಗ್ರಾಮಕವಿಪ್ರಸ್ಯ ಮಣ್ಡಪಾಕಾಶಕೇ ಕಿಲ ।
ತಲ್ಲೀಲಾಭರ್ತೃದಾರಾಢ್ಯಂ ಜಗದಾಭಾತಿ ಭಾಸ್ವರಮ್ ॥೫೭॥
ತತ್ರ ಲೀಲಾರಾಜಧಾನೀ ಮಣ್ಡಪಾಮಣ್ಡಿತಾಕೃತಿಃ ।
ಭಾತಿ ತಸ್ಯೋದರೇ ವ್ಯೋಮ್ನಿ ತದೇವಂ ವಿದಿತಂ ಜಗತ್ ॥೫೮॥
ತಸ್ಮಿನ್ ಜಗತಿ ಗೇಹೇನ್ತಃ ಯಸ್ಮಿನ್ ವಯಮಿಹ ಸ್ಥಿತಾಃ ।
ಏವಂ ತೇಷಾಂ ಮಣ್ಡಪಾನಾಂ ವ್ಯೋಮಾವ್ಯೋಮೈವನಿರ್ಮಲಮ್ ॥೫೯॥
ತಥೈವ ಮಣ್ಡಪೇಷ್ವಸ್ತಿ ನ ಮಹೀ ನ ಚ ಪತ್ತನಮ್ ।
ನ ವನಾನಿ ನ ಶೈಲೌಘಾಃ ನ ಮೇಘಸರಿದರ್ಣವಾಃ ॥೬೦॥
ಕೇವಲಂ ತತ್ರ ನಿಶ್ಶೂನ್ಯೇ ವಿಹರನ್ತಿ ಗೃಹೇ ಜನಾಃ ।
ನ ಪಶ್ಯನ್ತಿ ಜನಾನಾಪಿ ಪಾರ್ಥಿವಾನ ಚ ಭೂಧರಾಃ ॥೬೧॥

ನೀನು ಇದೆಲ್ಲವನ್ನೂ ನೋಡುವೆನೆಂದು ತಿಳಿದಿರುವೆ; ಆದರೆ, ತಾತ್ವಿಕವಾಗಿ ನೀನು ಇದಾವುದನ್ನೂ ನೋಡುವುದಿಲ್ಲ. ಶ್ರೇಷ್ಠವಾದ ಮಹಾಮಣಿಯುಂತೆಯೂ, ಪ್ರಕಾಶಕವಾದ ತೇಜಸ್ಸಿನಂತೆಯೂ, ನೀನು ನಿತ್ಯವೂ ಸರ್ವಾತ್ಮಕನಾಗಿ ನಿನ್ನಲ್ಲಿ ನೀನೇ ವಿಕಾಸಪಡೆಯುತಿರುವೆ ॥೫೫॥

ವಾಸ್ತವ್ಯವಾಗಿ ವಿಚಾರಮಾಡಿದರೋ, ಈ ಭೂಮಂಡಲವೂ ಇಲ್ಲ; ನಮ್ಮ ಎದುರಿಗೆ ಕುಳಿತಿರುವ ನೀನೂ ಇಲ್ಲ; ಈ ಪರ್ವತಗಳೂ ಈ ಗ್ರಾಮಗಳೂ ಇಲ್ಲ; ಇಲ್ಲಿರುವ ಈ ಜನರೂ ಇಲ್ಲ; ಕೊನೆಗೆ ನಾವೂ ಇಲ್ಲ ॥೫೬॥

ಆ ಗಿರಿಗ್ರಾಮದಲ್ಲಿರುವ ಬ್ರಾಹ್ಮಣನ ಮನೆಯ ಮಂಟಪದಲ್ಲಿನ ಆಕಾಶದೊಳಗೆ, ಆ ಲೀಲಾಪತಿಯಾದ ಪದ್ಮರಾಜನಿಂದಲೂ ಆತನ ಪತ್ನಿಯಿಂದಲೂ ಯುಕ್ತವಾಗಿ ಪ್ರಕಾಶಮಾನವಾಗಿರುವ ಪ್ರಪಂಚವು ಕಾಣಿಸುತ್ತಿರುವುದು. ಹೀಗೆ ಇಷ್ಟು ಸೂಕ್ಷ್ಮವಾಗಿರುವ ಆಕಾಶದಲ್ಲಿ ದೊಡ್ಡದೊಂದು ಪ್ರಪಂಚವು ಕಾಣುವುದೆಂದರೆ, ಅದು ಸುತರಾಂ ಸಂಗತವಲ್ಲವೆಂದು ಗೊತ್ತಾಯಿರುವುದಷ್ಟೆ ॥೫೭॥

ಅಲ್ಲಿ ಆ ಗೃಹದೊಳಗಿನ ಆಕಾಶದಲ್ಲಿಯೇ, ಮಂಟಪಗಳಿಂದ ಅಲಂಕರಿಸಲ್ಪಟ್ಟ ಲೀಲಾದೇವಿಯ ರಾಜಧಾನಿಯಿರುವುದು. ಈಗ ನಾವಿರುವ ಮನೆಯೂ ಅದೇಯೇ. ಹೀಗೆ ಆ ಮಂಡಪಗಳ ಆಕಾಶವೂ ಕೂಡ ಕೇವಲವಾದ ಪರಬ್ರಹ್ಮವೇಯೇ ॥೫೮—೫೯॥

ಹಾಗೆಯೇ ಆ ಮಂಟಪದಲ್ಲಿ—ಭೂಮಿಯೂ ಇಲ್ಲ; ಪಟ್ಟಣವೂ ಇಲ್ಲ; ವನಗಳೂ ಇಲ್ಲ; ಪರ್ವತಸಮುದಾಯಗಳೂ ಇಲ್ಲ; ಮೇಘಗಳೂ ನದಿಗಳೂ ಸಮುದ್ರಗಳೂ ಇಲ್ಲ ॥

ಕೇವಲ ಶೂನ್ಯವಾಗಿ ಬ್ರಹ್ಮಮಾತ್ರಾಕಾರವಾಗಿರುವ ಆ ಮನೆಯಲ್ಲಿ, ಜನಗಳು ಆರೀತಿಯಾಗಿ ಕಲ್ಪಿಸಿಕೊಂಡು ವಿಹಾರಮಾಡುತ್ತಿರುವರು. ವಸ್ತುತಃ ಇಲ್ಲಿ ಜನಗಳೂ ನೋಡುವುದಿಲ್ಲ; ದೊರೆಗಳೂ ಇಲ್ಲ; ಪರ್ವತಗಳೂ ಇಲ್ಲ ॥೬೧॥

ವಿದೂರಥಉವಾಚ.

ಏವಂ ಚೇತ್ ತತ್ ಕಥಂ ದೇವಿ ಮಮೇಹಾನುಚರಾಇಮೇ |
ಸಮ್ಪನ್ನಾ ಆತ್ಮನಾ ಸನ್ತಿ ತೇ ಕಿಮಾತ್ಮನಿ ನಾಽಥವಾ ||೬೦||
ಜಗತ್ ಸ್ವಪ್ನಾರ್ಥವದ್ಭಾತಿ ತಸ್ಯ ಸ್ವಪ್ನನರಾದಯಃ |
ಕಥಮಾತ್ಮನಿ ಸತ್ಯಾಃ ಸ್ಯುಃ ನ ಸತ್ಯಾವೇತಿ ಮೇ ವದ ||೬೧||

ಶ್ರೀಸರಸ್ವತ್ಯುವಾಚ.

ರಾಜನ್ ವಿದಿತವೇದ್ಯೇಷು ಶುದ್ಧಬೋಧೈಕರೂಪಿಷು |
ನ ಕಿಂಚಿದೇತತ್ ಸದ್ರೂಪಂ ಚಿದ್ವ್ಯೋಮಾತ್ಮಸು ಜಾಗತಮ್ ||೬೪||
ಶುದ್ಧಬೋಧಾತ್ಮನೋ ಭಾತಿ ಕುತೋ ನಾಮ ಜಗದ್ಭ್ರಮಃ |

ಹೀಗೆ ಸರಸ್ವತಿಯು ಹೇಳುತಿರಲು, ವಿದೂರಥನು ಪ್ರಶ್ನೆಮಾಡುವನು:—

ದೇವಿ! ನೀನು ಅಪ್ಪಣೆಕೊಟ್ಟಂತೆಯಾದರೆ, ಅಲ್ಲಿರುವ ಮಂತ್ರಿಭೃತ್ಯಾದಿಗಳೆಲ್ಲರೂ ಸ್ವಪ್ನದಲ್ಲಿ ಕಂಡ ಪದಾರ್ಥಗಳಿಗೆ ಸಮಾನರೆಂದು ಸ್ಥಿರಪಡುವುದು. ಇಲ್ಲಿ ಕಾಣುವ ನನ್ನ ಈ ಅನುಚರರೆಲ್ಲರೂ ಜೀವಾತ್ಮನಿಂದ ಯುಕ್ತರಾಗಿರುವರು; ಸ್ವಪ್ನದೃಷ್ಟರಾದವರು ನಿರ್ಜೀವರಾಗಿರುವರು. ನೀನು ಹೇಳಿದಹಾಗಿದ್ದಪಕ್ಷದಲ್ಲಿ, ಇವರು ಸಜೀವರಾಗಿರುವುದು ಹೇಗೆ? ಅವರು ನನ್ನಂತೆ ಸತ್ಯವಾದ ರೂಪದಲ್ಲಿ ಇರುವುದು ಹೇಗೆ? ಅಥವಾ ಅವರು ಹಾಗಿಲ್ಲವೆ? ॥೬೦॥

ಹೀಗೆಯೇ, ಈ ಜಗತ್ತು ಸ್ವಪ್ನದೃಷ್ಟಪದಾರ್ಥಗಳಂತೆ ಭಾಸಮಾನವಾಗುವುದೆಂದೂ, ನಿನ್ನ ಮಾತಿನಿಂದ ಸ್ಥಿರಪಟ್ಟಿರುವುದಷ್ಟೆ! ಆಗ ಈ ಮನುಷ್ಯಾದಿಗಳೂ ಸ್ವಪ್ನಸದೃಶರೇ ಆದರು. ಹೀಗೆ ಸ್ವಪ್ನಕಾಲಿಕರಾದ ಈ ಮನುಷ್ಯಾದಿಗಳು, ನನ್ನ ಮನಸ್ಸಿನಲ್ಲಿ ಸತ್ಯರೆಂದು ಕಾಣುತಿರುವುದು ಹೇಗೆ? ಅಥವಾ, ಇವರು ಖಂಡಿತವಾಗಿ ಸತ್ಯರಲ್ಲದಿರುವರೆ? ಈ ವಿಷಯವನ್ನು ನೀನು ನನಗೆ ಸ್ಪಷ್ಟವಾಗಿ ಅಪ್ಪಣೆಕೊಡಿಸಬೇಕು ॥೬೧॥

ಇದನ್ನು ಕೇಳಿ ಸರಸ್ವತಿಯುತ್ತರಹೇಳುವಳು:—

ಅಯ್ಯಾ! ದೊರೆಯೆ! ಅಜ್ಞದೃಷ್ಟಿಯೆಂದೂ ತಾತ್ವಿಕದೃಷ್ಟಿಯೆಂದೂ ಎರಡು ಮಾರ್ಗವುಂಟಷ್ಟೆ! ಅದರಲ್ಲಿ, ನೀನು ಈಗ ಅಜ್ಞದೃಷ್ಟಿಯಿಂದ ವಿಚಾರಮಾಡತಕ್ಕವನಾಗಿದ್ದರೆ, ನೀನು ಹೇಳುವ ಪದಾರ್ಥಗಳು ಹೇಗೆ ಅಸತ್ಯಗಳೋ, ನೀನೂ ಹಾಗೆಯೇ ಅಸತ್ಯನೆಂದೇ ತಿಳಿಯಬೇಕು. ಆಗ ನಿನ್ನ ತಿಳಿವಳಿಕೆಯೂ ಅಸತ್ಯವೇ ಆಯ್ತು. ಅದಲ್ಲದೆ ತತ್ವದೃಷ್ಟಿಯಿಂದ ವಿಚಾರಮಾಡತಕ್ಕವನಾಗಿದ್ದರೆ, ಆಗ ಸಮಸ್ತವೂ ಅಧಿಷ್ಠಾನಚಿನ್ಮಾತ್ರವೇ ಆಗಿರುವುದರಿಂದ, ಆ ಸ್ಥಿತಿಯಲ್ಲಿ ಸಕಲವೂ ಸತ್ಯವೇಯೆ. ಅದುಕಾರಣ, ತತ್ವಜ್ಞಾನಿಗಳಾಗಿ ಶುದ್ಧಜ್ಞಾನೈಕಸ್ವರೂಪರಾಗಿ ಕೇವಲ ಚಿದಾಕಾಶರೂಪರಾಗಿರುವವರ ವಿಷಯದಲ್ಲಿ, ಈ ಪ್ರಾಪಂಚಿಕವಾದ ಪದಾರ್ಥವೊಂದೂ ಯಥಾಪದಾರ್ಥತ್ವೇನ ಸತ್ಯವಾಗಿರುವುದಿಲ್ಲವೆಂದು ತಿಳಿಯಬೇಕು ॥೬೪॥

ಕೇವಲ ಶುದ್ಧ ಜ್ಞಾನರೂಪನಾಗಿರತಕ್ಕವನಿಗೆ, ಈ ಜಗತ್ತೆಂಬ ಭ್ರಮೆಯು ಹೇಗೆ ತಾನೆ ಭಾಸಿಸುವುದು! ರಜ್ಜುವನ್ನು ನೋಡಿ ಸರ್ಪವೆಂದು ಉಂಟಾಗಿದ್ದ ಭ್ರಾಂತಿಯು ಶಾಂತ

ರಜ್ಜ್ವಾಂ ಸರ್ಪಭ್ರಮೇ ಶಾನ್ತೇ ಪುನಃ ಸರ್ಪಭ್ರಮಃ ಕುತಃ ॥೬೫॥
ಅಸದ್ಭಾವೇ ಪರಿಜ್ಞಾತೇ ಕುತಃ ಸತ್ತಾ ಜಗದ್ಭ್ರಮೇ ।
ಪರಿಜ್ಞಾತೇ ಮೃಗಜಲೇ ಪುನರ್ಜಲಮತಿಃ ಕುತಃ ॥೬೬॥
ಸ್ವಪ್ನಕಾಲೇ ಪರಿಜ್ಞಾತೇ ಸ್ವೇ ಸ್ವಪ್ನಮರಣಂ ಕುತಃ ।
ಸ್ವಸ್ವಪ್ನೇ ಸ್ವಪ್ನಮೃತಿಭೀಃ ಅಮೃತಸ್ಯೈವ ಜಾಯತೇ ॥೬೭॥
ಬುದ್ಧಸ್ಯ ಶುದ್ಧಸ್ಯ ಶರನ್ನಭಶ್ರೀಸ್ವಚ್ಛಾವದಾತಾತಿತತಾಶಯಸ್ಯ ।
ಅಹಂಜಗಚ್ಚೇತಿ ಕುಶಬ್ದಕಾರ್ಥೋ ನ ವಸ್ತುತಃ ಸೋಽಙ್ಗ ಹಿ ವಾಚಿಕಂ ತತ್ ॥
ಇತ್ಯುಕ್ತವತ್ಯಥ ಮುನೌ ದಿವಸೋ ಜಗಾಮ
ಸಾಯನ್ತನಾಯ ವಿಧಯೇಸ್ತಮಿನೋ ಜಗಾಮ ।
ಸ್ನಾತುಂ ಸಭಾ ಕೃತನಮಸ್ಕರಣಾ ಜಗಾಮ
ಶ್ಯಾಮಾಕ್ಷಯೇ ರವಿಕರೈಶ್ಚ ಸಹಾಜಗಾಮ ॥೬೮॥
ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಭ್ರಾನ್ತಿವಿಚಾರ
ವರ್ಣನಂ ನಾಮ ಏಕಚತ್ವಾರಿಂಶಃ ಸರ್ಗಃ.
ಪಞ್ಚಮಂ ದಿನಮ್.

ವಾದಮೇಲೆ, ಮತ್ತೆ ಆ ಸರ್ಪಭ್ರಾಂತಿಯೆಲ್ಲಿರುವುದು ? ॥೬೫॥

ಈ ಜಗತ್ತೆಂಬ ಭ್ರಮೆಯಲ್ಲಿ ಅಸತ್ಯತಾಜ್ಞಾನವು ದೃಢವಾದ ಬಳಿಕ, ಮತ್ತೆ ಸದ್ಭಾವೆಲ್ಲಿಯದು ? ಮೃಗತೃಷ್ಣಿಕೆಯಲ್ಲಿ ಜಲವಿಲ್ಲವೆಂದು ತಿಳಿದಮೇಲೆ, ಪುನಃ ಜಲವೆಂಬ ಬುದ್ಧಿಯೆಲ್ಲಿರುವುದು ? ॥೬೬॥

ಮನುಷ್ಯನು, ತನ್ನ ಸ್ವಪ್ನದಲ್ಲಿ, ತಾನು ಸಾಯುದಿದ್ದರೂ ಸತ್ತೆನೆಂದೇ ತಿಳಿದುಕೊಂಡು ಭಯಪಡುವನು. ಆದರೆ, ಇದು ತನ್ನ ಸ್ವಪ್ನಕಾಲವೆಂದು ತಿಳಿದುಕೊಂಡಮೇಲೆ, ಆ ಸ್ವಪ್ನಕಾಲಿಕವಾದ ಮರಣವೆಲ್ಲಿರುವುದು ? ಹಾಗೆಯೇ ಜಗತ್ತಿಲ್ಲವೆಂದು ತಿಳಿದುಕೊಂಡಿರುವ ತತ್ವಜ್ಞನಿಗೆ, ಮತ್ತೆ ಜಗತ್ತೆಂಬ ಭ್ರಾಂತಿಯೆಲ್ಲಿರುವುದು ? ॥೬೭॥

ಅಯ್ಯಾ ! ರಾಜನೆ ! ಮುಖ್ಯವಾದ ವಿಷಯವನ್ನು ಕೇಳುವವನಾಗು, ಜ್ಞಾನಿಯಾಗಿಯೂ ನಿರ್ಮಲನಾಗಿಯೂ, ಶರತ್ಕಾಲದ ಅಂತರಿಕ್ಷದಂತೆ ಸ್ವಚ್ಛವಾದ ಶುಭ್ರವಾದ ವಿಶಾಲವಾದ ಮನಸ್ಸುಳ್ಳವನಾಗಿಯೂ ಇರತಕ್ಕವನಿಗೆ, ನಾನೆಂದೂ ಜಗತ್ತೆಂದೂ ಈ ಅಲ್ಪವಾದ ಕುಶಬ್ದದ ಅರ್ಥವೊಂದೂ ವಾಸ್ತವ್ಯವಾಗಿರುವುದಿಲ್ಲ. ಅದೆಲ್ಲವೂ ಕೇವಲ ಶಬ್ದವ್ಯವಹಾರಮಾತ್ರವಾಗಿ ಕಾಣುವುದು.—ಎನ್ನುವುದಾಗಿ, ಆ ವಿದೂರಥರಾಜನನ್ನು ಕುರಿತು, ಸರಸ್ವತೀದೇವಿಯು ಸಮಾಧಾನಹೇಳಿದಳು ॥೬೮॥

ಹೀಗೆಂದು ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಲಾಗಿ, ಆ ಹಗಲು ಕಳೆದುಹೋಯಿತು. ಸೂರ್ಯನು ಸಂಧ್ಯಾಕಾಲಿಕವಾದ ವ್ಯಾಪಾರಕ್ಕೋಸ್ಕರ ಅಸ್ತಹೊಂದಿದನು. ಆ ಸಭೆಯು ವಸಿಷ್ಠರಿಗೆ ನಮಸ್ಕರಿಸಿ ಸ್ನಾನಾರ್ಥವಾಗಿ ಹೊರಟುಹೋಯಿತು ; ರಾತ್ರಿಯು ಕಳೆಯಲಾಗಿ ಸೂರ್ಯಕಿರಣಗಳ ಜತೆಯಲ್ಲಿ ಪುನಃ ಬಂದುಸೇರಿತು॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಭ್ರಾಂತಿವಿಚಾರ
ವರ್ಣನೆಯೆಂಬ ನಾಲ್ವತ್ತೊಂದನೆಯ ಸರ್ಗವು.

ಐದನೆಯ ದಿವಸವು ಮುಗಿಯಿತು.

ಅಥ ಉತ್ಪತ್ತಿಪ್ರಕರಣೇ ದ್ವಿಚತ್ವಾರಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಯಸ್ತ್ವಬುದ್ಧಮತಿರ್ಮೂಢೋ ರೂಢೋ ನ ವಿತತೇ ಪದೇ ।
ವಜ್ರಸಾರಮಿದಂ ತಸ್ಯ ಜಗದಸ್ತ್ಯಸದೇವ ಸತ್ ॥೧॥
ಯಥಾ ಬಾಲಸ್ಯ ವೇತಾಳೋ ಮೃತಿಪರ್ಯನ್ತ ದುಃಖದಃ ।
ಅಸದೇವ ಸದಾಕಾರಂ ತಥಾ ಮೂಢಮತೇರ್ಜಗತ್ ॥೨॥
ತಾಪಏವ ಯಥಾ ವಾರಿ ಮೃಗಾಣಾಂ ಭ್ರಮಕಾರಣಮ್ ।

ಉತ್ಪತ್ತಿಪ್ರಕರಣದಲ್ಲಿ ನಾಲ್ವತ್ತೆರಡನೆಯ ಸರ್ಗವು.

ಸತ್ಯತ್ವಂ ಜಗತೋಽಜ್ಞಾನೇ ಸ್ವಪ್ನಸ್ಯಾಪಿ ಪ್ರಪಞ್ಚ್ಯತೇ ।
ಅತ್ರಾನ್ತೇ ತು ಕಥಾಶೇಷೋ ವರದಾನಾನ್ತ ಉಚ್ಯತೇ ॥

ಅಜ್ಞಾನಾವಸ್ಥೆಯಲ್ಲಿ ಜಗತ್ತೂ ಸ್ವಪ್ನವೂ ಸತ್ಯವಾಗಿ ಕಾಣುವಬಗೆಯೂ, ಕೊನೆಯಲ್ಲ ವಿದೂರಥನಿಗೆ ವರಪ್ರದಾನವಾಗುವವರೆಗಿನ ಕಥಾಶೇಷವೂ ಕೂಡ, ಈ ಸರ್ಗದಲ್ಲಿ ಹೇಳಲ್ಪಡುವುವು.

ಪೂರ್ವೋಕ್ತರೀತಿಯಾಗಿ ವಿದೂರಥನನ್ನು ಕುರಿತು ಶ್ರೀಸರಸ್ವತೀದೇವಿಯುಪದೇಶ ಮಾಡಿದ ವಿಷಯವನ್ನು ಹೇಳುತಿರುವ ಶ್ರೀವಸಿಷ್ಠಮಹರ್ಷಿಗಳು, ಮಾರನೆಯದಿನ ಯಥಾಪ್ರಕಾರ ಸಭೆಸೇರಿದಾಗ, ಪುನಃ ಶ್ರೀರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು :—

ಅಯ್ಯಾ! ರಾಮ! ಹಿಂದೆ ಲೀಲಾದೇವಿಯು ಹೇಳಿದ ವಾಕ್ಯದಿಂದ, ತತ್ವಜ್ಞನ ದೃಷ್ಟಿಗೆ ಜಗತ್ತು ಮಿಥ್ಯಾಭೂತವಾಗಿರುವ ಬಗೆಯು ವಿಶದವಾಗಿ ಗೊತ್ತಾಯಿತ್ತಷ್ಟೆ! ಈ ವಿಷಯವು ಚೆನ್ನಾಗಿ ದೃಢಪಡುವುದಕ್ಕೋಸ್ಕರ, ಅಜ್ಞರ ದೃಷ್ಟಿಗೆ ಈ ಪ್ರಪಂಚವು ಅತ್ಯಂತ ಸತ್ಯವಾಗಿ ಕಾಣುವ ಬಗೆಯನ್ನು ಈಗ ನಿನಗೆ ಹೇಳುವೆನು. ಯಾವ ಮೂಢನು, ಜ್ಞಾನರಹಿತನಾಗಿಯೂ ಆ ಪರಮಪದದಲ್ಲಿ ಸ್ಥಿತಿಯನ್ನು ಪಡೆಯದವನಾಗಿಯೂ ಇರುವನೋ, ಅವನ ಭಾಗಕ್ಕೆ, ಈ ಪ್ರಪಂಚವು ವಜ್ರದಂತೆ ಸ್ಥಿರವಾಗಿರುವುದು ; ಸತ್ಪದಾರ್ಥವು ಅವನಿಗೆ ಅಸತ್ಯವೇ ಆಗಿಬಿಡುವುದು ॥೧॥

‘ ಇದು ಅಸತ್ಯವಾಗಿದ್ದರೆ, ಇದರಿಂದ ನಾನಾವಿಧಕಾರ್ಯಗಳು ಜರುಗುತಿದ್ದುವೆ?’ ಎಂದು ಶಂಕಿಸಬಾರದು. ಬೇತಾಳನೆಂಬ ಪದಾರ್ಥವೊಂದು ಸುತರಾಂ ಇಲ್ಲವಷ್ಟೆ! ಆದರೂ ಅದು ಬಾಲಕನ ಮನಸ್ಸಿನಲ್ಲಿ ತೋರಿದಾಗ, ನಾನಾವಿಧದುಃಖಗಳನ್ನುಂಟುಮಾಡಿ, ಕೊನೆಗೆ ಮರಣವನ್ನೂ ಉಂಟುಮಾಡುವುದಿಲ್ಲವೆ! ಇದರಂತೆಯೇ, ಅಸತ್ಯವಾಗಿಯೇ ಇರುವ ಜಗತ್ತು, ಮೂಢಬುದ್ಧಿಯಾದವನಿಗೆ ಸತ್ಯವಾಗಿ ಕಾಣಿಸುತ, ಸತ್ಯವಾಗಿದ್ದರೆ ಯಾವಯಾವ ಕೆಲಸಗಳು ನಡೆಯಬಹುದೋ—ಅವೆಲ್ಲವನ್ನೂ ಉಂಟುಮಾಡಿಬಿಡುವುದು ॥೨॥

ಮರುಭೂಮಿಯಲ್ಲಿ ಜಲವಿರುವುದೆಂದು ಮೃಗಗಳು ಭ್ರಮೆಪಡುವುದಕ್ಕೆ—ಆ ಮರು

ಅಸತ್ಯಮೇವ ಸತ್ಯಾಭಂ ತಥಾ ಮೂಢಮತೇರ್ಜಗತ್ ॥೩॥
ಯಥಾ ಸ್ವಪ್ನಮೃತಿರ್ಜನ್ತೋಃ ಅಸತ್ಯಾ ಸತ್ಯರೂಪಿಣೀ ।
ಅರ್ಥಕ್ರಿಯಾಕರೀ ಭಾತಿ ತಥಾ ಮೂಢಧಿಯಾಂ ಜಗತ್ ॥೪॥
ಅವ್ಯುತ್ಪನ್ನಸ್ಯ ಕನಕೇ ಕಾನಕೇ ಕಟಕೇ ಯಥಾ ।
ಕಟಕಜ್ಞಪ್ತಿರೇವಾಸ್ತಿ ನ ಮನಾಗಪಿ ಹೇಮಧೀಃ ॥೫॥
ತಥಾಜ್ಞಸ್ಯ ಪುರಾಗಾರನಗನಾಗೇನ್ದ್ರಭಾಸುರಾ ।
ಇಯಂ ದೃಶ್ಯದೃಗೇವಾಸ್ತಿ ನ ತ್ವನ್ಯಾ ಪರಮಾರ್ಥದೃಕ್ ॥೬॥
ಯಥಾ ನಭಸಿ ಮುಕ್ತಾಳೀಪಿಞ್ಛಕೇಶೋಣ್ಡ್ರಕಾದಯಃ ।
ಅಸತ್ಯಾಃ ಸತ್ಯತಾಂ ಯಾತಾಃ ಭಾತ್ಯೇವಂ ದುರ್ದೃಶಾಂ ಜಗತ್ ॥೭॥
ದೀರ್ಘಸ್ವಪ್ನಮಿದಂ ವಿಶ್ವಂ ವಿದ್ಧ್ಯಹನ್ತಾದಿಸಂಯುತಮ್ ।
ಅತ್ರಾನ್ಯೇ ಸ್ವಪ್ನಪುರುಷಾಃ ಯಥಾ ಸತ್ಯಾಸ್ತಥಾ ಶೃಣು ॥೮॥
ಅಸ್ತಿ ಸರ್ವಗತಂ ಶಾನ್ತಂ ಪರಮಾರ್ಥಘನಂ ಶುಚಿ ।

ಭೂಮಿಯ ತಾಪವೇ ಹೇಗೆ ಕಾರಣವೋ, ಹಾಗೆ ಮೂಢಮತಿಯಾದವನಿಗೆ—ಅಸತ್ಯವೇ ಆಗಿದ್ದರೂ ಸತ್ಯವೆಂದು ತೋರುತಿರುವ ಜಗತ್ತು—ಭ್ರಮಕಾರಣವಾಗಿರುವುದು ॥೩॥

ಸ್ವಪ್ನದಲ್ಲಿ ಕಂಡ ಮರಣವು, ಅಸತ್ಯವಾಗಿದ್ದರೂ ಪ್ರಾಣಿಗೆ ಸತ್ಯಸ್ವರೂಪವಾಗಿ ತೋರುತ, ರೋದನಮುಂತಾದ ಕೆಲಸಗಳನ್ನು ಹೇಗೆ ಹುಟ್ಟಿಸುವುದೋ, ಹಾಗೆ ಮೂಢಬುದ್ಧಿಗಳಿಗೂ ಜಗತ್ತು ಸತ್ಯವಾಗಿ ತೋರುತ ತನ್ನಿಂದಾಗಬಹುದಾದ ಕೆಲಸಗಳನ್ನೆಲ್ಲ ಮಾಡಿಬಿಡುವುದು ॥೪॥

ಸುವರ್ಣದ ಸ್ವರೂಪವನ್ನು ಮೊದಲಿಂದಲೂ ತಿಳಿಯದೆಯೇ ಇರತಕ್ಕವನು, ಸುವರ್ಣರಚಿತವಾದ ಕಟಕವನ್ನು ನೋಡಿ, ಅದು ಕಟಕವೆಂದು ಮಾತ್ರವೇ ತಿಳಿದುಕೊಳ್ಳುವನಲ್ಲದೆ, ಅದು ಸುವರ್ಣವೆಂದು ತಿಳಿಯುವುದೇ ಇಲ್ಲವಷ್ಟೆ! ಇದು ಹೇಗೋ; ಹಾಗೆಯೇ, ಅಜ್ಞನಾಗಿರತಕ್ಕವನಿಗೆ, ಪಟ್ಟಣ ಮನೆ ಬೆಟ್ಟ ಆನೆ—ಇತ್ಯಾದಿ ರೂಪಗಳಿಂದ ಪ್ರಕಾಶಿಸುತಿರುವ ಈ ದೃಶ್ಯಜ್ಞಾನವೇ ಇರುತ್ತದೆಯಲ್ಲದೆ, ಇತರವಿಧವಾದ ಪರಮಾರ್ಥಜ್ಞಾನವಿರುವುದೇ ಇಲ್ಲ ॥೫—೬॥

ನಿರ್ಮಲವಾದ ಆಕಾಶದಲ್ಲಿ, ಮುಕ್ತಾಸರ ನವಿಲುಗರಿ ಕೇಶೋಂಡ್ರಕ—ಇತ್ಯಾದಿಗಳು ಅಸತ್ಯಗಳೇ ಆಗಿದ್ದರೂ ನಮ್ಮ ಭ್ರಾಂತಿದೋಷದಿಂದ ಹೇಗೆ ಸತ್ಯವಾಗಿರುವಂತೆ ಕಾಣಿಸುವುವೋ, ಹೀಗೆಯೇ, ಅಜ್ಞಾನಿಗಳಿಗೆ ಜಗತ್ತೆಂಬುದು ಅಸತ್ಯವಾಗಿದ್ದರೂ ಸತ್ಯದಂತೆ ಕಾಣಿಸುವುದು ॥೭॥

ಅಯ್ಯಾ! ರಾಮ! ಅಹಂಕಾರಾದಿಯುಕ್ತವಾಗಿರುವ ಈ ಪ್ರಪಂಚವನ್ನು ದೀರ್ಘವಾದ ಸ್ವಪ್ನವೆಂದು ತಿಳಿಯುವನಾಗು. ಆದರೆ,—'ಸ್ವಪ್ನದಲ್ಲಿರುವಂತೆ ಇಲ್ಲಿಯೂ ಇರತಕ್ಕಪಕ್ಷದಲ್ಲಿ, ಶಾಸ್ತ್ರಗಳು ಪುರುಷರನ್ನುದ್ದೇಶಿಸಿ ಮಾಡಿರುವ ಉಪದೇಶಗಳೆಲ್ಲವೂ ವ್ಯರ್ಥವಾಗುವುದಿಲ್ಲವೆ?'—ಎಂದರೆ, ಈ ಸ್ವಪ್ನಪುರುಷರು ಸತ್ಯರಾಗಿರುವ ಬಗೆಯನ್ನು ಕೇಳುವವನಾಗು ॥೮॥

ಸರ್ವಗತವಾಗಿಯೂ ಶಾಂತವಾಗಿಯೂ ಪರಮಾರ್ಥಸತ್ಯವಾಗಿಯೂ ನಿರ್ಮಲವಾಗಿ

ಅಚೇತ್ಯಚಿನ್ಮಾತ್ರವಪುಃ ಪರಮಾಕಾಶಮಾತತಮ್ ॥೯॥
ತತ್ ಸರ್ವಗಂ ಸರ್ವಶಕ್ತಿ ಸರ್ವಂ ಸರ್ವಾತ್ಮಕಂ ಸ್ವಯಮ್ ।
ಯತ್ರಯತ್ರ ಯಥೋದೇತಿ ತಥಾಸ್ತೇ ತತ್ರತತ್ರ ವೈ ॥೧೦॥
ತೇನ ಸ್ವಪ್ನಪುರೇ ದ್ರಷ್ಟಾ ಯಾನ್ ವೇತ್ತಿ ಪುರವಾಸಿನಃ ।
ನರಾನಿತಿ ನರಾಏವ ಕ್ಷಣಾತ್ ತಸ್ಯ ಭವನ್ತಿ ತೇ ॥೧೧॥
ಯದ್ದ್ರಷ್ಟುಶ್ಚಿತ್ಸ್ವರೂಪಂ ತತ್ ಸ್ವಪ್ನಾಕಾಶಾನ್ತರಸ್ಥಿತಮ್ ।
ಸ್ವಪ್ನಾಕಾಶಚಿತ್ತಾಭಂ ಹಿ ನರಾಣಾಮೇತಿ ಭಾವಿತಮ್ ॥೧೨॥
ವೇದಿತ್ರತ್ವೈಕ್ಯವಶತೋ ನರತೇವಾವಬುಧ್ಯತೇ ।
ಆತ್ಮನ್ಯತಶ್ಚಿದ್ಬಲೇನ ದ್ವಯೋರಪ್ಯೇತಿ ಸತ್ಯತಾ ॥೧೩॥

ಶ್ರೀರಾಮಉವಾಚ.

ಸ್ವಪ್ನೇಪಿ ಸ್ವಪ್ನಪುರುಷಾಃ ನ ಸತ್ಯಾಃ ಸ್ಯುರ್ಮನೇ ಯದಿ ।

ಯೂ ಚೇತನೀಯವಲ್ಲದೆ ಕೇವಲ ಚಿನ್ಮಾತ್ರ ದೇಹವಾಗಿಯೂ ವಿಶಾಲವಾಗಿಯೂ ಇರುವ ಪರಮಾಕಾಶಪದಾರ್ಥವಿರುವುದು ॥೯॥

ಅದು, ಸರ್ವಗತವಾಗಿಯೂ ಸರ್ವಶಕ್ತವಾಗಿಯೂ ತಾನೇ ಸರ್ವವಾಗಿಯೂ ಸರ್ವಾತ್ಮಕವಾಗಿಯೂ ಇದ್ದುಕೊಂಡು, ಎಲ್ಲೆಲ್ಲಿ ಹೇಗೆಹೇಗೆ ಉದಯಿಸುವುದೋ, ಅಲ್ಲಲ್ಲಿ ಹಾಗೆಹಾಗೆ ಇರುವುದು ॥೧೦॥

ಅದುಕಾರಣ, ದ್ರಷ್ಟೃವಾಗಿರತಕ್ಕವನು ಸ್ವಪ್ನಕಾಲಿಕವಾದ ಪಟ್ಟಣದಲ್ಲಿ ವಾಸಮಾಡತಕ್ಕವರನ್ನಾಗಿ ಯಾರನ್ನು ಮನುಷ್ಯರೆಂದು ಭಾವಿಸುವನೋ, ಅವರು ಅವನಿಗೆ ಒಂದು ಕ್ಷಣದೊಳಗಾಗಿ ಮನುಷ್ಯರೇ ಆಗುವರು ॥೧೧॥

ಹೀಗೆ ದ್ರಷ್ಟೃವಾದವನ ಯಾವ ಜ್ಞಾನರೂಪವು—ಸ್ವಪ್ನಕಾಲದಲ್ಲಿ ಸೂಕ್ಷ್ಮತಮವಾದ ನಾಡಿಯೊಳಗಿರುವುದೋ, ಅದೇ ಸ್ವಪ್ನಸಮಯದಲ್ಲಿ ಚಿತ್ತಾಕಾರವಾಗಿ ಮನುಷ್ಯರೆಂದು ಭಾವಿಸಲ್ಪಡುವುದು ॥೧೨॥

ಸತ್ಯವಾಗಿಯೂ ಸ್ವಪ್ರಕಾಶವಾಗಿಯೂ ಇರುವ ಯಾವ ಚೈತನ್ಯವುಂಟೋ, ಅದರಲ್ಲಿ ತಾದಾತ್ಮ್ಯವುಂಟಾಗುವುದರಿಂದ, ಈ ಮನುಷ್ಯತ್ವವೆಂಬುದು ಆತ್ಮನಲ್ಲಿ ತಿಳಿಯಲ್ಪಡುವುದು. ಹೀಗಿರುವುದರಿಂದ, ಸ್ವಪ್ನಜಾಗರಗಳೆರಡರಲ್ಲಿಯೂ ಜ್ಞಾನಬಲದಿಂದಲೇ ಸತ್ಯತೆಯು ತೋರುವುದು. ಅಂತು, ಆತ್ಮನಲ್ಲಿ ಮನುಷ್ಯತ್ವಜ್ಞಾನಕ್ಕೂ ಈ ಮನುಷ್ಯನಲ್ಲಿ ಆರೋಪಿತವಾದ ಸತ್ಯಜ್ಞಾನಕ್ಕೂ ಕೂಡ, ಪರಸ್ಪರ ತಾದಾತ್ಮ್ಯಜ್ಞಾನವೇ ಕಾರಣವೆಂದು ತಿಳಿಯಬೇಕು ॥೧೩॥

ಹೀಗೆ ಶ್ರೀವಸಿಷ್ಠರು ಹೇಳುತಿರುವಾಗ, ರಾಮಚಂದ್ರನು ಮತ್ತೊಂದುವಿಧವಾದ ಶಂಕೆಯುಂಟಾದವನಾಗಿ ಪ್ರಶ್ನೆಮಾಡುವನು :—

ಸ್ವಾಮಿ ! ಗುರುಗಳೆ ! ಜಾಗ್ರತ್ಕಾಲದಲ್ಲಂತು, ಈ ಮನುಷ್ಯರು ಅಧಿಷ್ಠಾನಸತ್ತೆಯಿಂದ ಸತ್ಯರೆಂದು ಹೇಳದಿದ್ದರೆ—ದೃಶ್ಯಮಾನವಾದ ವ್ಯವಹಾರಕ್ಕೆ ವಿರೋಧವೂ ಕರ್ಮವಿಧಾಯಕವಾದ ಶಾಸ್ತ್ರಗಳಿಗೆ ಅಪ್ರಾಮಾಣ್ಯವೂ ಉಂಟಾಗಬಹುದಾದಕಾರಣ, ಆ ಜಾಗ್ರತ್ಪುರುಷರು ಅಧಿಷ್ಠಾನಸತ್ತೆಯಿಂದ ಸತ್ಯರೆಂದು ಒಪ್ಪಿಕೊಳ್ಳೋಣ. ಆದರೆ, ಕೇವಲ

ವದ ತತ್ ಕೋ ಭವೇದ್ದೋಷೋ ಮಾಯಾಮಾತ್ರಶರೀರಿಣಿ ॥೧೪॥

ಶ್ರೀವಸಿಷ್ಠ ಉವಾಚ.

ಸ್ವಪ್ನೇ ನ ಪುರವಾಸ್ತವ್ಯಾಃ ವಸ್ತುತಃ ಸತ್ಯರೂಪಿಣಃ ।
ಪ್ರಮಾಣಮತ್ರ ಶೃಣು ಮೇ ಪ್ರತ್ಯಕ್ಷಂ ನಾಮ ನೇತರತ್ ॥೧೫॥
ಸರ್ಗಾದಾವಾತ್ಮಭೂರ್ಭಾತಿ ಸ್ವಪ್ನಾಭಾನುಭವಾತ್ಮಕಃ ।
ತತ್ಸಙ್ಕಲ್ಪಕಲಂ ವಿಶ್ವಂ ಏವಂ ಸ್ವಪ್ನಾಭಮೇವ ತತ್ ॥೧೬॥
ಏವಂ ವಿಶ್ವಮಿದಂ ಸ್ವಪ್ನಃ ತತ್ರ ಸತ್ಯಂ ಭವಾನ್ ಮಮ ।
ಯಥೈವ ತ್ವಂ ತಥೈವಾನ್ಯೇ ಸ್ವಪ್ನೇ ಸ್ವಪ್ನನರಾನೃಣಾಮ್ ॥೧೭॥
ಸ್ವಪ್ನೇ ನಗರವಾಸ್ತವ್ಯಾಃ ಸತ್ಯಾನ ಸ್ಯುರಿಮೇ ಯದಿ ।
ತದಿಹಾಪಿ ತದಾಕಾರೇ ನ ಸತ್ಯಂ ಮೇ ಮನಾಗಪಿ ॥೧೮॥
ಯಥಾಹಂ ತವ ಸತ್ಯಾತ್ಮಾ ಸತ್ಯಂ ಸರ್ವಂ ಭವೇನ್ಮಮ ।

ಮಾಯಾಮಾತ್ರಶರೀರವಾದ ಸ್ವಪ್ನದಲ್ಲಿಯೂ ಆ ಸ್ವಪ್ನಪುರುಷರು ಸತ್ಯರೆಂದು ಒಪ್ಪಿಕೊಳ್ಳದೆ ಹೋದರೆ ಏನು ದೋಷವು? ಅಪ್ಪಣೆಯಾಗಬೇಕು ॥೧೪॥

ಇದಕ್ಕೆ ವಸಿಷ್ಠಮಹರ್ಷಿಗಳು ಉತ್ತರಹೇಳುವರು :—

ವತ್ಸ ! ಸ್ವಪ್ನದಲ್ಲಿ, ಪಟ್ಟಣದೊಳಗೆ ವಾಸಮಾಡುವಂತೆ ಕಾಣುವ ಜನ ಮೊದಲಾದ ಪದಾರ್ಥಗಳೆಲ್ಲವೂ ಪರಮಾತ್ಮನಂತೆ ಪಾರಮಾರ್ಥಿಕಸತ್ಯಗಳಲ್ಲವೆಂದು ಇಷ್ಟುಮಾತ್ರ ಹೇಳಬಹುದಾಗಿದೆಯಲ್ಲದೆ, ಸರ್ವವಿಧವಾಗಿಯೂ ಅಸತ್ಯಗಳೆಂದು ಹೇಳಲಾಗಲಾರದು. ಈ ವಿಷಯದಲ್ಲಿ, ನಾನು ಹೇಳುವ ಮುಖ್ಯವಾದ ಪ್ರತ್ಯಕ್ಷಪ್ರಮಾಣವನ್ನು ಕೇಳುವವನಾಗು. ಇತರ ಪ್ರಮಾಣಗಳ ಮಾತು ಈಗ ಬೇಡ. ಆತ್ಯಂತಿಕವಾಗಿ ಅಸತ್ಯವಾದ ಪದಾರ್ಥವಾಗಿದ್ದರೆ, ಅದು ಶಶವಿಷಾಣಾದಿಗಳಂತೆ ಪ್ರತ್ಯಕ್ಷಗೋಚರವಾಗದೆಯೇ ಇರಬೇಕು. ಈಗ, ಸ್ವಪ್ನಪದಾರ್ಥವು ಸ್ವಪ್ನಕಾಲದಲ್ಲಿ ಪ್ರತ್ಯಕ್ಷಗೋಚರವಾಗುವುದರಿಂದ, ಅದಕ್ಕೆ ಆಕಾಲದಲ್ಲಿ ಒಂದುವಿಧವಾದ ಸತ್ಯತೆಯಿರುವುದೆಂದು ಒಪ್ಪಬೇಕಾಗುವುದು ॥೧೫॥

ಮತ್ತು, ಸೃಷ್ಟ್ಯಾದಿಯಲ್ಲಿ ಆ ಹಿರಣ್ಯಗರ್ಭನೂ ಸ್ವಪ್ನಸದೃಶವಾದ ಅನುಭವಾತ್ಮಕನಾಗಿಯೇ ಪ್ರಕಾಶಿಸುವನು. ಅಂತಹ ಹಿರಣ್ಯಗರ್ಭನ ಸಂಕಲ್ಪದಿಂದ ನಿರ್ಮಿತವಾದ ಈ ಪ್ರಪಂಚವೂ ಕೂಡ, ಹೀಗೆ ಸ್ವಪ್ನಸದೃಶವೇ ಆಗುವುದು. ಅದುಕಾರಣ, ಸ್ವಪ್ನವು ಅತ್ಯಂತಾಸತ್ಯವೆಂದರೆ, ಜಾಗ್ರತ್ತೂ ಹಾಗೆಯೇ ಆಗುವುದು ॥೧೬॥

ಹೀಗೆ ಈ ವಿಶ್ವವು ಸ್ವಪ್ನವಾಗುವುದು. ಇಂತಹ ಸ್ವಪ್ನವಾದ ಈ ಪ್ರಪಂಚದಲ್ಲಿ, ನೀನು ನನಗೆ ಸತ್ಯನಾಗಿ ಕಾಣುವೆ. ನಿನ್ನ ಸತ್ಯತೆಯನ್ನು ನೀನೇ ಅಪಲಾಪಮಾಡುವುದಕ್ಕಾಗಲಾರದಲ್ಲವೆ! ಅದುಕಾರಣ, ನೀನು ನನ್ನ ದೃಷ್ಟಿಗೆ ಹೇಗೆ ಸತ್ಯನಾಗಿರುವೆಯೋ, ಹಾಗೆಯೇ ಇತರರಾದ ಮನುಷ್ಯರೂ ಕಂಡವರ ದೃಷ್ಟಿಗೆ ಸತ್ಯರಾಗಿಯೇ ಇರುವರು ॥

ಸ್ವಪ್ನಕಾಲದಲ್ಲಿ ಈ ಪಟ್ಟಣದೊಳಗಿರುವ ಪದಾರ್ಥಗಳು ಸತ್ಯವಾಗದಿರುವಪಕ್ಷದಲ್ಲಿ, ಆ ಸ್ವಪ್ನಾಕಾರವಾಗಿರುವ ಈ ಜಾಗ್ರತ್ತಿನಲ್ಲಿಯೂ ಇದೊಂದೂ ನನಗೆ ಸ್ವಲ್ಪವೂ ಸತ್ಯವಲ್ಲವೇ ಅಲ್ಲ ॥೧೮॥

ನಿನಗೆ ನಾನು ಹೇಗೆ ಸತ್ಯನಾಗಿ ಕಾಣುವೆನೋ, ಹಾಗೆ ನನಗೆ ಎಲ್ಲವೂ ಸತ್ಯವಾಗು

ಸ್ವಪ್ನೋಪಲಮ್ಭೇ ಸಂಸಾರೇ ಮಿಥಃ ಸಿದ್ಧ್ಯೈ ಪ್ರಮೇದೃಶೀ ||೧೯||

ಸಂಸಾರೇ ವಿಪುಲೇ ಸ್ವಪ್ನೇ ಯಥಾ ಸತ್ಯಮಹಂ ತವ |

ಯಥಾ ತ್ವಮಪಿ ಮೇ ಸತ್ಯಂ ಸರ್ವಂ ಸ್ವಪ್ನೇಷ್ವಿತಿ ಕ್ರಮಃ ||೨೦||

ಶ್ರೀರಾಮಉವಾಚ.

ಸ್ವಪ್ನದ್ರಷ್ಟರಿ ನಿರ್ನಿದ್ರೇ ತದ್ದ್ರಷ್ಟುಃ ಸ್ವಪ್ನಪತ್ತನಮ್ |

ಸದ್ರೂಪತ್ವಾತ್ ತಥೈವಾಸ್ತೇ ಮಮೇತಿ ಭಗವನ್ ಮತಿಃ ||೨೧||

ಶ್ರೀವಸಿಷ್ಠಉವಾಚ.

ಏವಮೇತತ್ ತಥೈವಾಸ್ತೇ ಸತ್ಯತ್ವಾತ್ ಸ್ವಪ್ನಪತ್ತನಮ್ |

ಸ್ವಪ್ನದ್ರಷ್ಟರಿ ನಿರ್ನಿದ್ರೇಪ್ಯಾಕಾಶವಿಶದಾಕೃತಿಃ ||೨೨||

ಏತದಾಸ್ತಾಮಿದಂ ತಾವತ್ ಯಜ್ಜಾಗ್ರದಿವ ಮನ್ಯಸೇ |

ವುದು. ಸ್ವಪ್ನಾನುಭವರೂಪವಾಗಿರುವ ಈ ಸಂಸಾರದಲ್ಲಿ, ಪರಸ್ಪರ ವ್ಯವಹಾರಸಿದ್ಧಿಗೋಸ್ಕರ, ಈ ವಿಧವಾದ ಜ್ಞಾನವನ್ನಿಟ್ಟುಕೊಂಡಿರಬೇಕು ||೧೯||

ಈ ಸಂಸಾರವೆಂಬ ವಿಶಾಲವಾದ ಸ್ವಪ್ನದಲ್ಲಿ, ನಾನು ನಿನಗೆ ಹೇಗೆ ಸತ್ಯನಾಗಿರುವೆನೋ—ಮತ್ತು ನೀನು ನನಗೆ ಹೇಗೆ ಸತ್ಯನಾಗಿರುವೆಯೋ, ಹಾಗೆ ಸರ್ವವೂ ಪರಸ್ಪರವಾಗಿ ಸತ್ಯವಾಗಿರುವುದು. ಈ ಸ್ವಪ್ನವಿಷಯದಲ್ಲಿ ಈವಿಧವಾದ ಕ್ರಮವಿರುವುದೆಂದು ತಿಳಿಯಬೇಕು ||೨೦||

ಹೀಗೆ ಹೇಳಿದ ವಸಿಷ್ಠರ ವಚನವನ್ನು ಕೇಳಿ, ಶ್ರೀರಾಮನು ಮತ್ತೊಂದುವಿಧವಾಗಿ ಶಂಕೆಪಟ್ಟು ಪ್ರಶ್ನೆಮಾಡುತ್ತಾನೆ :—

ಎಲೈ ಪೂಜ್ಯರೆ! ತಾವು ಹೇಳಿದಂತೆ ಸ್ವಪ್ನಪದಾರ್ಥವು ಸತ್ಯವಾಗಿದ್ದಪಕ್ಷದಲ್ಲಿ, ಆ ಸ್ವಪ್ನದಲ್ಲಿ ಕಂಡ ಪಟ್ಟಣವು ಸತ್ಯರೂಪವಾದಕಾರಣ, ಆ ಸ್ವಪ್ನನೋಡತಕ್ಕವನು ಎಚ್ಚರವಾದಮೇಲೆಯೂ—ಅವನಿಗೆ ಹಿಂದೆ ಕಾಣಿಸುತಿದ್ದ ಆ ಸ್ವಪ್ನ ಪಟ್ಟಣವು ಪೂರ್ವದಲ್ಲಿದ್ದಂತೆಯೇ ಇರಬೇಕಾಗುವುದೆಂದು ನನಗೆ ತೋರುವುದು ||೨೧||

ವಸಿಷ್ಠಮುನಿಗಳು ಅದನ್ನು ಒಪ್ಪಿಕೊಂಡು ಸಮಾಧಾನ ಹೇಳುವರು :—

ವತ್ಸ! ರಾಮ! ನೀನು ಹೇಳಿದುದು ಹಾಗೆಯೇಸರಿ. ಆ ಸ್ವಪ್ನಪಟ್ಟಣವು, ಸತ್ಯವಾದಕಾರಣ ಹಾಗೆಯೇ ಇರುವುದೆಂದು ತಿಳಿಯುವನಾಗು. ಸ್ವಪ್ನನೋಡತಕ್ಕವನು ಎಚ್ಚರವಾದಮೇಲೆಯೂ, ಆಕಾಶದಂತೆ ನಿರ್ಮಲವಾದ ಅಧಿಷ್ಠಾನಚೈತನ್ಯವು ಪೂರ್ವದಂತೆಯೇ ಇರುವುದು ||೨೨||

ಇದು ಹೀಗಿರಲಿ; 'ಜಾಗ್ರತ್ಕಾಲಿಕವಾದ ಪದಾರ್ಥಗಳು ಸತ್ಯವಾಗಿರುವುದರಿಂದ, ಪರಸ್ಪರ ಸಾದೃಶ್ಯ ಕಾಣುವುದು; ಹೀಗೆಯೇ ಸ್ವಪ್ನಕಾಲಿಕ ಪದಾರ್ಥಗಳೂ ಸತ್ಯವಾಗಿದ್ದರೆ ಪರಸ್ಪರ ಸಾದೃಶ್ಯವಿರಬೇಕಾಗಿದ್ದಿತು' ಎಂದು ನೀನು ಶಂಕಿಸಬಹುದು. ಅಂತಹ ಶಂಕೆಗೆ ಅವಕಾಶವಿಲ್ಲ. ನೀನು ಈಗ ಯಾವುದನ್ನು ಜಾಗ್ರತ್ತೆಂದು ತಿಳಿಯುವೆಯೋ, ಅದನ್ನು ಸ್ವಪ್ನವೆಂದೇ ತಿಳಿ. ಇದೂಕೂಡ, ಒಳಭಾಗದಲ್ಲಿ ವಿಚಾರಮಾಡಿದರೆ, ದೇಶಕಾಲ ಮುಂತಾದ ವಿಷಯಗಳಲ್ಲಿ ಪರಸ್ಪರ ಸಾಮ್ಯವಿಲ್ಲದುದಾಗಿಯೇ ಇರುವುದು. ಸ್ವಪ್ನದಲ್ಲಿ

ವಿದ್ಧಿ ತತ್ ಸ್ವಪ್ನವೇವಾನ್ತಃ ದೇಶಕಾಲಾದ್ಯಪೂರಕಮ್ ‖೨೩‖
ಏವಂ ಸರ್ವಮಿದಂ ಭಾತಿ ನ ಸತ್ಯಂ ಸತ್ಯವತ್ ಸ್ಥಿತಮ್ ।
ರಞ್ಜಯತ್ಯಪಿ ಮಿಥ್ಯೈವ ಸ್ವಪ್ನಸ್ತ್ರೀಸುರತೋಪಮಮ್ ‖೨೪‖
ಸರ್ವತ್ರ ವಿದ್ಯತೇ ಸರ್ವಂ ದೇಹಸ್ಯಾನ್ತರ್ಬಹಿಸ್ತಥಾ ।
ಯತ್ ತು ವೇತ್ತಿ ಯಥಾ ಸಂವಿತ್ ತತ್ ತಥಾ ಸ್ವೈವ ಪಶ್ಯತಿ ‖೨೫‖
ಯತ್ ಕೋಶೇ ವಿದ್ಯತೇ ದ್ರವ್ಯಂ ತದ್ದ್ರಷ್ಟ್ರಾ ಲಭ್ಯತೇ ತಥಾ ।
ತಥಾಸ್ತಿ ಸರ್ವಂ ಚಿದ್ವ್ಯೋಮ್ನಿ ಚೇತ್ಯತೇ ತತ್ ತ್ವನೇನ ವೈ ‖೨೬‖
ಅನನ್ತರಮುವಾಚೇದಂ ದೇವೀ ಜ್ಞಪ್ತಿರ್ವಿದೂರಥಮ್ ।
ಕೃತ್ವಾ ಬೋಧಾಮೃತಾಸೇಕೈಃ ವಿವೇಕಾಙ್ಕುರಸುನ್ದರಮ್ ‖೨೭‖

ಒಬ್ಬೊಬ್ಬರ ಸ್ವಪ್ನಪದಾರ್ಥಗಳು ಒಂದೊಂದುವಿಧವಾಗಿರುವಂತೆಯೇ, ಜಾಗ್ರತ್ತಿನಲ್ಲಿಯೂ ಆಯಾದೇಶಕಾಲಾದಿ ಭೇದಗಳಿಂದ ಪದಾರ್ಥಗಳು ಒಂದಕ್ಕೊಂದು ಸಾಮ್ಯವಿಲ್ಲದಿರುವುವೆಂದು ತಿಳಿಯಬೇಕು ‖೨೩‖

ಅಯ್ಯಾ! ರಾಮ! ಈರೀತಿಯಾಗಿ ಅಧಿಷ್ಠಾನಸತ್ತೆಯಿಂದ ಸತ್ಯತ್ವವಿದ್ದಾಗ್ಯೂ, ಸಮಸ್ತ ದೇಶಕಾಲಾದಿಗಳನ್ನೂ ವ್ಯಾಪಿಸಿಕೊಂಡಿಲ್ಲವಾದಕಾರಣ, ಸ್ವಪ್ನಜಾಗರಗಳೆರಡೂ ಸ್ವತಃ ಸತ್ಯಗಳಾಗದಿರುವುದರಿಂದ, ಇವೆರಡಕ್ಕೂ ಸಮವಾಗಿಯೇ ಮಿಥ್ಯಾತ್ವಸಿದ್ಧಿಯಾಯ್ತೆಂದು ತಿಳಿಯಬೇಕು. ಹೀಗೆ ಇದೆಲ್ಲವೂ, ಸತ್ಯವಲ್ಲದಿದ್ದರೂ ಸತ್ಯದಂತೆ ಪ್ರಕಾಶಹೊಂದುತಿರುವುದು. ಮತ್ತು ಇದು, ಸ್ವಪ್ನಕಾಲಿಕವಾದ ಸ್ತ್ರೀಸಮಾಗಮದಂತೆ, ಸ್ವಯಂ ಅಸತ್ಯವಾಗಿಯೇ ಇದ್ದರೂ—ಸತ್ಯವಾಗಿರುವಂತೆ ತನ್ನಲ್ಲಿ ಆಸಕ್ತಿಯುಂಟುಮಾಡಿ ಮೋಹಪಡಿಸುವುದು ‖೨೪‖

ಆ ಚಿತ್ಪದಾರ್ಥವಾದರೋ—ಅದು ಸರ್ವದೇಶದಲ್ಲಿಯೂ ಸರ್ವಕಾಲದಲ್ಲಿಯೂ ಸರ್ವಪದಾರ್ಥವಾಗಿಯೂ ದೇಹದ ಒಳಗೂ ಹೊರಗೂ ಇರುವುದು. ಇದು, ಯಾವುದನ್ನು ಯಾವರೀತಿಯಾಗಿ ತಿಳಿಯುವುದೋ, ಅದನ್ನು ಆರೀತಿಯಾಗಿ ತಾನೇ ನೋಡುವುದು. ಹೀಗಿರುವುದರಿಂದ, ಇದು ಸತ್ಯಪದಾರ್ಥವೆಂದೂ ಮಾಯಾಶಕ್ತಿಯಿಂದ ಸರ್ವರೂಪವಾಗಿ ಸ್ಫುರಣಹೊಂದತಕ್ಕದೆಂದೂ ತಿಳಿಯಬೇಕು ‖೨೫‖

ವತ್ಸ! ಪ್ರಪಂಚದಲ್ಲಿ ಸಾಮಾನ್ಯವಾಗಿ ನೋಡಿದರೂ ಈ ವಿಷಯವು ಗೊತ್ತಾಗುವುದಲ್ಲವೆ! ಬೊಕ್ಕಸದಲ್ಲಿ ಯಾವ ದ್ರವ್ಯವಿರುವುದೋ, ನೋಡತಕ್ಕವನಿಗೆ ಅದು ಆರೀತಿಯಾಗಿಯೇ ಸಿಕ್ಕುವುದು. ಇದು ಸರ್ವಾನುಭವಸಿದ್ಧವಷ್ಟೆ! ಹೀಗೆಯೇ, ಆ ಚಿದಾಕಾಶದಲ್ಲಿ ಈ ಸಮಸ್ತವೂ ಇರುವುದು. ಅದು ಈ ಚಿದಾಕಾಶದಿಂದಲೇ ಚೇತನೀಯವಾಗಿಯೂ ಇರುವುದು ‖೨೬‖

ಹೇ ರಾಮ! ಈ ವಿಷಯವು ಗೊತ್ತಾಯ್ತಷ್ಟೆ! ಮುಂದೆ ಆ ಲೀಲಾಸರಸ್ವತಿಯರ ಅವಶಿಷ್ಟ ವೃತ್ತಾಂತವನ್ನು ತಿಳಿಸುವೆನು; ಕೇಳು. ಆ ಬಳಿಕ, ಆ ಸರಸ್ವತಿಯು ವಿದೂರಥನನ್ನು ಜ್ಞಾನೋಪದೇಶವೆಂಬ ಅಮೃತಸೇಚನೆಯಿಂದ ವಿವೇಕೋದಯವುಂಟಾಗಿ ಸುಂದರನಾಗುವಂತೆ ಮಾಡಿ, ಈ ಮುಂದೆ ಹೇಳುವಂತೆ ಹೇಳಿದಳು ‖೨೭‖

ಏತದೇವ ಮಯಾ ರಾಜನ್ ಲೀಲಾರ್ಥಮುಪವರ್ಣಿತಮ್ |
ಸ್ವಸ್ತಿ ತೇಸ್ತು ಗಮಿಷ್ಯಾವೋ ದೃಷ್ಟಾ ದೃಷ್ಟಾಂತದೃಷ್ಟಯಃ ||೨೮||

ಶ್ರೀವಸಿಷ್ಠಉವಾಚ.

ಇತಿ ಪ್ರೋಕ್ತೇ ಸರಸ್ವತ್ಯಾ ಗಿರಾ ಮಧುರವರ್ಣಯಾ |
ಉವಾಚ ವಚನಂ ಧೀಮಾನ್ ಭೂಮಿಪಾಲೋ ವಿದೂರಥಃ ||೨೯||

ವಿದೂರಥಉವಾಚ.

ಮಮಾಪಿ ದರ್ಶನಂ ದೇವಿ ಮೋಘಂ ಭವತಿ ನಾರ್ಥಿನಿ |
ಮಹಾಫಲಪ್ರದಾಯಾಸ್ತು ಕಥಂ ತವ ಭವಿಷ್ಯತಿ ||೩೦||
ಅಹಂ ದೇಹಂ ಸಮುತ್ಸೃಜ್ಯ ಲೋಕಾಂತರಮಿತೋಪರಮ್ |
ನಿಜಮಾಯಾಮಿ ಹೇ ದೇವಿ ಸ್ವಪ್ನಾತ್ ಸ್ವಪ್ನಾಂತರಂ ಯಥಾ ||೩೧||
ಪಶ್ಯಾದಿಶಾಶು ಮಾಂ ಮಾತಃ ಪ್ರಪನ್ನಂ ಶರಣಾಗತಮ್ |
ಭಕ್ತೇಷ್ವವಹೇಳಾ ವರದೇ ಮಹತಾಂ ನ ವಿರಾಜತೇ ||೩೨||

ಅಯ್ಯಾ! ರಾಜನೆ! ನಾನು ಈಗ ನಿನಗೆ ಹೇಳಿದುದನ್ನೇ ಹಿಂದೆ ಲೀಲೆಗೋಸ್ಕರವಾಗಿಯೂ ವಿಸ್ತರಿಸಿ ಹೇಳಿರುವೆನು. ನಿನಗೆ ಮಂಗಳವಾಗಲಿ. ಇನ್ನು ನಾವಿಬ್ಬರೂ ಹೋಗುವೆವು. ನಾನು ಹೇಳಿರುವ ಪ್ರಪಂಚಮಿಥ್ಯಾತ್ವಕ್ಕೆ ಅನೇಕವಾದ ದೃಷ್ಟಾಂತಗಳನ್ನು ಈ ಲೀಲೆಯು ನೋಡಿರುವಳು ||೨೮||

ಎಂದು ಲೀಲಾದೇವಿಯು ಹೇಳಿದ ಮಾತನ್ನು ಹೇಳುತ, ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಿದರು :—

ಅಯ್ಯಾ! ರಾಮ! ಈರೀತಿಯಾಗಿ ಸರಸ್ವತಿಯು ಮಧುರಾಕ್ಷರವಾದ ಮಾತನ್ನು ಹೇಳಲಾಗಿ, ಪ್ರಾಜ್ಞನಾದ ಆ ವಿದೂರಥಮಹಾರಾಜನು, ಮತ್ತೆ ಆ ಸರಸ್ವತಿಯನ್ನು ಕುರಿತು ಹೀಗೆ ಹೇಳಿದನು ||೨೯||

ಆ ವಿದೂರಥನು ಹೇಳಿದುದೇನೆಂದರೆ :—

ಹೇ ದೇವಿ! ಅತ್ಯಲ್ಪ ಮನುಷ್ಯನಾದ ನನ್ನನ್ನು ಒಬ್ಬ ಯಾಚಕನು ನೋಡಿದರೂ ಕೂಡ, ಅವನ ವಿಷಯದಲ್ಲಿ ನನ್ನಂಥವನ ದರ್ಶನವೂ ವಿಫಲವಾಗುವುದಿಲ್ಲ. ಹೀಗಿರುವಾಗ, ಎಂತಹ ಮಹಾಫಲವನ್ನು ಬೇಕಾದರೂ ಕೊಡತಕ್ಕವಳಾಗಿರುವ ನಿನ್ನ ದರ್ಶನವು, ನಮ್ಮಂತಹ ಅರ್ಥಿಗಳಲ್ಲಿ ಹೇಗೆತಾನೆ ವಿಫಲವಾಗುವುದು! ||೩೦||

ಈಗ ನನ್ನ ಪ್ರಾರ್ಥನೆಯೇನೆಂದರೆ,—ಹೇದೇವಿ! ಮನುಷ್ಯರು ಒಂದು ಸ್ವಪ್ನದಿಂದ ಮತ್ತೊಂದು ಸ್ವಪ್ನವನ್ನು ಹೊಂದುವಂತೆ ನಾನು ಈ ದೇಹವನ್ನು ಬಿಟ್ಟುಬಿಟ್ಟು, ಇದಕ್ಕಿಂತ ಬೇರೆಯಾಗಿರುವ ನನ್ನ ಸ್ವಕೀಯವಾದ ಲೋಕವನ್ನು ಹೊಂದಬೇಕೆಂದಪೇಕ್ಷಿಸುವೆನು ||೩೧||

ಹೇ ಜನನಿ! ವಿನೀತನಾಗಿ ಶರಣಾಗತನಾಗಿರುವ ನನ್ನನ್ನು, ಕೃಪಾದೃಷ್ಟಿಯಿಂದ ನೋಡುವವಳಾಗು ; ಶೀಘ್ರವಾಗಿ ಅಜ್ಞಾಪಿಸು. ಎಲೌ ವರದಳಾದ ದೇವಿಯೆ! ಭಕ್ತರಾದವರ ವಿಷಯದಲ್ಲಿ ತಿರಸ್ಕಾರತೋರಿಸುವುದು ಮಹಾತ್ಮರಿಗೆಂದಿಗೂ ಶೋಭಿಸುವುದಿಲ್ಲ||

ಯಂ ಪ್ರದೇಶಮಹಂ ಯಾಮಿ ತಮೇವಾಯಾತ್ವಯಂ ಮಮ ।
ಮನ್ತ್ರೀ ಕುಮಾರೀ ಚೈವೇಯಂ ಬಾಲೇತಿ ಕುರು ಮೇ ದಯಾಮ್ ॥೩೩

ಶ್ರೀಸರಸ್ವತ್ಯುವಾಚ.

ಆಗಚ್ಛ ರಾಜ್ಯಮುಚಿತಾರ್ಥವಿಲಾಸಚಾರು
ಪ್ರಾಗ್ಜನ್ಮಮಣ್ಡಲಪತೇ ಕುರು ನಿರ್ವಿಶಙ್ಕಮ್ ।
ಅಸ್ಮಾಭಿರರ್ಥಿಜನಕಾಮನಿರಾಕೃತಿರ್ಹಿ
ದೃಷ್ಟಾ ನ ಕಾಚನ ಕದಾಚಿದಪೀತಿ ವಿದ್ಧಿ ॥೩೪॥

ಇತಿ ಉತ್ಪತ್ತಿಪ್ರಕರಣೇ ಸ್ವಪ್ನಪುರುಷಸತ್ಯತ್ವನಿರೂಪಣಂ ನಾಮ
ದ್ವಿಚತ್ವಾರಿಂಶಃ ಸರ್ಗಃ.

ನಾನು ಯಾವ ಪ್ರದೇಶಕ್ಕೆ ಹೋಗುವೆನೋ, ಆ ಪ್ರದೇಶಕ್ಕೆ ಈ ನನ್ನ ಮಂತ್ರಿಯೂ ಬಾಲಿಕೆಯಾದ ಈ ಕುಮಾರಿಯೂ ಬರುವವರಾಗಲಿ. ಈ ವಿಷಯದಲ್ಲಿ ನೀನು ನನ್ನಮೇಲೆ ಕೃಪೆಯನ್ನು ಮಾಡುವವಳಾಗು ॥೩೩॥

ಹೀಗೆಂದು ಆ ವಿದೂರಥನು ಹೇಳಲಾಗಿ, ಮತ್ತೆ ಆ ಸರಸ್ವತಿ ಹೇಳುವಳು :—

ಪೂರ್ವಜನ್ಮದಲ್ಲಿ ಮಂಡಲೇಶ್ವರನಾಗಿದ್ದ ಎಲೈ ವಿದೂರಥನೆ! ನೀನು ಬರುವವನಾಗು; ಲೀಲೆಯ ಭಕ್ತಿಭಾಗ್ಯಗಳಿಗೆ ತಕ್ಕಂತಹ ಪದಾರ್ಥಗಳ ವಿಲಾಸದಿಂದ ಮನೋಹರವಾಗಿರುವ ದೊರೆತನವನ್ನು ಮಾಡು. ನಿನ್ನ ಇಷ್ಟದಂತೆ ನಾನು ವರವನ್ನು ಕೊಡುವೆನು. ಯಾಚಕರ ಇಷ್ಟಾರ್ಥದ ವಿಷಯದಲ್ಲಿ ನಮ್ಮಂಥವರು ತಿರಸ್ಕಾರತೋರಿಸುವರೆಂಬುದನ್ನು ಯಾರೂ ಎಲ್ಲಿಯೂ ಎಂದಿಗೂ ಸ್ವಲ್ಪವೂ ನೋಡಿಲ್ಲವೆಂದು ತಿಳಿ ॥೩೪॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಸ್ವಪ್ನಪುರುಷಸತ್ಯತ್ವನಿರೂಪಣವೆಂಬ ನಾಲ್ವತ್ತೆರಡನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ತ್ರಿಚತ್ವಾರಿಂಶಃ ಸರ್ಗಃ.

ಶ್ರೀಸರಸ್ವತ್ಯುವಾಚ.

ಅಸ್ಮಿನ್ ರಣವರೇ ರಾಜನ್ ಮರ್ತ್ತವ್ಯಂ ಭವತಾಧುನಾ ।
ಪ್ರಾಪ್ತವ್ಯಂ ಪ್ರಾಕ್ತನಂ ರಾಜ್ಯಂ ಸರ್ವಂ ಪ್ರತ್ಯಕ್ಷಮೇವ ತೇ ॥೧॥
ಕುಮಾರ್ಯಾ ಮನ್ತ್ರಿಣಾ ಚೈವ ತ್ವಯಾ ಚ ಪ್ರಾಕ್ತನಂ ಪುರಮ್ ।
ಆಗನ್ತವ್ಯಂ ಶವೀಭೂತಂ ಪ್ರಾಪ್ತವ್ಯಂ ತಚ್ಛರೀರಕಮ್ ॥೨॥
ಆವಾಂ ಯಾವೋ ಯಥಾಯಾತಂ ವಾತರೂಪೇಣ ಚ ತ್ವಯಾ ।
ಆಗನ್ತವ್ಯಃ ಸ ದೇಶಸ್ತು ಕುಮಾರ್ಯಾ ಮನ್ತ್ರಿಣಾಪಿ ಚ ॥೩॥
ಅನ್ಯೈವ ಗತಿರಶ್ವಸ್ಯ ಗತಿರನ್ಯಾ ಖರೋಷ್ಟ್ರಯೋಃ ।
ಮದಸ್ವಿನ್ನಕಪೋಲಸ್ಯ ಗತಿರನ್ಯೈವ ದನ್ತಿನಃ ॥೪॥

ಉತ್ಪತ್ತಿಪ್ರಕರಣದಲ್ಲಿ ನಾಲ್ವತ್ತುಮೂರನೆಯ ಸರ್ಗವು.

ಅಭೀಷ್ಟವರದಾನಂ ಚ ಪುರಸ್ಯಾಕ್ರಮದೀಪನಮ್ ।
ವರ್ಣ್ಯತೇ ದಹ್ಯಮಾನಾನಾಂ ಚೇಷ್ಟಾ ಚ ಪುರವಾಸಿನಾಮ್ ॥

ಸರಸ್ವತೀದೇವಿಯು ಇಷ್ಟವಾದ ವರವನ್ನು ಕೊಡುವಿಕೆಯೂ, ಶತ್ರುಗಳು ಪಟ್ಟಣವನ್ನು ಆಕ್ರಮಿಸಿಕೊಂಡು ಅದನ್ನು ಅಗ್ನಿಯಿಂದ ಉರಿಸುವಿಕೆಯೂ, ಅಗ್ನಿಯಲ್ಲಿ ಸುಡಲ್ಪಡುತಿರುವ ಪಟ್ಟಣಿಗರ ನಾನಾವಿಧ ವ್ಯಾಪಾರವೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀ ಸರಸ್ವತಿಯು ವಿದೂರಥನನ್ನು ಕುರಿತು ಹೇಳಲುಪಕ್ರಮಿಸಿದಳು :—

ಅಯ್ಯಾ! ರಾಜನೆ! ನೀನು ಪ್ರಾರ್ಥಿಸಿದಂತೆ ನಿನ್ನ ಇಷ್ಟಾರ್ಥವನ್ನು ಕೊಡುವೆನು. ಅದು ನೆರವೇರಬೇಕಾದರೆ, ಈ ಪ್ರಶಸ್ತವಾದ ಯುದ್ಧದಲ್ಲಿ ನೀನು ಈಗ ಮೊದಲು ಮರಣ ಹೊಂದಬೇಕು; ಬಳಿಕ, ನಿನ್ನ ಪ್ರಾಕ್ತನವಾದ ರಾಜ್ಯವನ್ನು ಹೊಂದುವೆ. ಇದೆಲ್ಲವೂ ನಿನಗೆ ಪ್ರತ್ಯಕ್ಷಗೋಚರವೇ ಆಗುವುದು ॥೧॥

ಈ ಕುಮಾರಿಯೂ ಈ ಮಂತ್ರಿಯೂ ನೀನೂ ಕೂಡ, ನಿಮ್ಮ ಪುರಾತನವಾದ ಪುರಕ್ಕೆ ಬರುವವರಾಗಿರಿ; ಅಲ್ಲಿ ಶವವಾಗಿ ಬಿದ್ದಿರುವ ನಿಮ್ಮಗಳ ಪ್ರಾಕ್ತನದೇಹವನ್ನು ನೀವು ಹೊಂದಬಹುದು ॥೨॥

ನಾನೂ ಈ ಲೀಲೆಯೂ ಕೂಡ, ಈಗ ಹೊರಟುಹೋಗುವೆವು. ನೀನೂ ಈ ಬಾಲಿಕೆಯೂ ಈ ಮಂತ್ರಿಯೂ ಕೂಡ, ಇಲ್ಲಿ ಮರಣಹೊಂದಿ, ಸೂಕ್ಷ್ಮದೇಹದಿಂದ ಆ ಪ್ರದೇಶಕ್ಕೆ ಬನ್ನಿರಿ ॥೩॥

ಅದೇತಕ್ಕೆಂದರೆ :—ಪ್ರಪಂಚದಲ್ಲಿ ಕುದುರೆಯ ಗಮನರೀತಿಯೇ ಬೇರೆ; ಒಂಟೆ ಕತ್ತೆಗಳ ಗಮನರೀತಿಯೇ ಬೇರೆ; ಮದೋದಕದಿಂದ ನೆನೆದಿರುವ ಗಂಡಸ್ಥಲವುಳ್ಳ ಮದ್ದಾನೆಯ ಗಮನರೀತಿಯೇ ಬೇರೆ. ಹೀಗೆ ಅವರವರ ತಾರತಮ್ಯಾನುಗುಣವಾಗಿ ಹೋಗಬೇಕಾಗಿರುವುದು ॥೪॥

ಪ್ರಸ್ತುತೇತಿ ಕಥಾ ಯಾವತ್ ಮಿಥೋ ಮಧುರಭಾಷಿಣೋಃ ।
ತಾವತ್ ಪ್ರವಿಶ್ಯ ಸಂಭ್ರಾಂತಃ ಉವಾಚೋರ್ಧ್ವಸ್ಥಿತೋ ನರಃ ॥೫॥
ದೇವ ಸಾಯಕಚಕ್ರಾಸಿಗದಾಪರಿಘವೃಷ್ಟಿಮತ್ ।
ಮಹತ್ ಪರಬಲಂ ಪ್ರಾಪ್ತಂ ಏಕಾರ್ಣವಇವೋದ್ಧತಃ ॥೬॥
ಕಲ್ಪಕಾಲಾನಿಲೋದ್ಧೂತಕುಲಾಚಲಶಿಲೋಪಮಮ್ ।
ಗದಾಶಕ್ತಿಭುಶುಂಡೀನಾಂ ವೃಷ್ಟಿಂ ಮುಂಚತಿ ತುಷ್ಟಿಮತ್ ॥೭॥
ನಗರೇ ನಗಸಙ್ಕಾಶೇ ಲಗ್ನೋಗ್ನಿರ್ವ್ಯಾಪ್ತದಿಕ್ತಟಃ ।
ದಹಂಶ್ಚಟಚಟಾಸ್ಫೋಟೈಃ ಪಾರಯತ್ಯುತ್ತಮಾಂ ಪುರೀಮ್ ॥೮॥
ಕಲ್ಪಾಮ್ಬುದಘಟಾತುಲ್ಯಾಃ ವ್ಯೋಮ್ನಿ ಧೂಮಮಹಾದ್ರಯಃ ।
ಬಲಾತ್ ಪ್ರೋಡ್ಡಯನಂ ಕರ್ತುಂ ಪ್ರವೃತ್ತಾ ಗರುಡಾಇವ ॥೯॥

ಶ್ರೀವಸಿಷ್ಠಉವಾಚ.

ಸಸಂಭ್ರಮಂ ವದತ್ಯೇವಂ ಪುರುಷೇ ಪರುಷಾರವಃ ।

ಅಯ್ಯಾ! ರಾಮ! ಮಧುರಭಾಷಿಗಳಾದ ಆ ಸರಸ್ವತಿಗೂ ವಿದೂರಥನಿಗೂ ಈ ಪೂರ್ವೋಕ್ತರೀತಿಯಾಗಿ ಸಂಭಾಷಣೆಯು ನಡೆಯುತಿರುವಷ್ಟರಲ್ಲಿಯೇ, ಒಬ್ಬ ಪುರುಷನು ಕಳವಳದಿಂದ ಪ್ರವೇಶಮಾಡಿ, ಮೇಲುಗಡೆಯೇ ನಿಂತುಕೊಂಡವನಾಗಿ, ಈರೀತಿಯಾಗಿ ಹೇಳಿದನು ॥೫॥

ಹೇ ದೇವ! ಬಾಣ ಚಕ್ರ ಕತ್ತಿ ಗದೆ ಪರಿಘ—ಇವುಗಳನ್ನು ಮಳೆಗರೆಯುತ, ದೊಡ್ಡದಾದ ಶತ್ರುಸೈನ್ಯವು, ಪ್ರಳಯಕಾಲದಲ್ಲಿ ಹೆಚ್ಚಿರುವ ಏಕಾರ್ಣವದಂತೆ ಕಾಣುತ, ಪಟ್ಟಣವನ್ನು ಪ್ರವೇಶಿಸಿರುವುದು ॥೬॥

ಆ ಸೈನ್ಯವು, ಪ್ರಳಯಮಾರುತವು ಕುಲಾಚಲಗಳ ಶಿಲೆಗಳನ್ನು ಹಾರಿಸಿಬಿಡುವಂತೆ, ಕೇವಲ ಸಂತೋಷದಿಂದ, ಗದೆ ಶಕ್ತಿ ಭುಶುಂಡಿ ಇತ್ಯಾದಿಗಳನ್ನು ಮಳೆಗರೆಯುತ್ತಿರುವುದು ॥೭॥

ಆ ಸೈನ್ಯದಿಂದ ಹಾಕಲ್ಪಟ್ಟ ಅಗ್ನಿಯು, ಉಪ್ಪರಿಗೆಗಳಿಂದಲೂ ಅರಮನೆಗಳಿಂದಲೂ ಪರ್ವತದಂತೆ ಕಣ್ಗೊಳಿಸುತಿರುವ ನಮ್ಮ ಪಟ್ಟಣದಲ್ಲಿ ಹೊತ್ತಿಕೊಂಡು, ದಿಗಂತಗಳನ್ನೆಲ್ಲ ವ್ಯಾಪಿಸಿ, ಚಟಚಟ ಶಬ್ದದೊಡನೆ ಎಲ್ಲವನ್ನೂ ಭಸ್ಮಮಾಡುತ, ಪ್ರಶಸ್ತವಾದ ಈ ನಮ್ಮ ಪಟ್ಟಣವನ್ನು ಕೊನೆಗಾಣಿಸುತಿರುವುದು ॥೮॥

ಇದರಿಂದ ಹುಟ್ಟಿದ ಪರ್ವತಾಕಾರವಾದ ಧೂಮರಾಶಿಗಳು, ಪ್ರಳಯಕಾಲದ ಮೇಘಸಮೂಹಗಳಿಗೆ ಸಮಾನಗಳಾಗಿ, ಗರುಡಪಕ್ಷಿಗಳಂತೆ ಬಲದಿಂದ ಮೇಲಕ್ಕೆ ಹಾರಲುಪಕ್ರಮಿಸಿರುವುವು ॥೯॥

ಎಂದು ಆ ದೂತನು ವಿದೂರಥನಿಗೆ ಹೇಳಿದ ಮಾತನ್ನು ಹೇಳಿ, ಶ್ರೀವಸಿಷ್ಠರು ಮತ್ತೆ ರಾಮಚಂದ್ರನನ್ನು ಕುರಿತು ಹೇಳಿದರು:—

ಅಯ್ಯಾ! ರಾಮ! ಆ ಪುರುಷನು ಹೀಗೆ ಗಾಬರಿಯೊಡನೆ ಹೇಳುತಿರುವಷ್ಟರಲ್ಲಿಯೇ, ಹೊರಗಡೆ, ಮಹಾಕ್ರೂರವಾಗಿ ದಿಕ್ಕುಗಳನ್ನೆಲ್ಲ ವ್ಯಾಪಿಸುತಿರುವ ದೊಡ್ಡ ಕೋ

ಉದಭೂತ್ ಪೂರಯನ್ನಾಶಾಃ ಬಹುಃ ಕೋಲಾಹಲೋ ಮಹಾನ್ ‖೧೦‖
ಬಲಾದಾಕರ್ಣಕೃಷ್ಟಾನಾಂ ಧನುಷಾಂ ಶರವರ್ಷಿಣಾಮ್ ।
ಬೃಂಹತಾಮತಿಮತ್ತಾನಾಂ ಕುಞ್ಜರಾಣಾಂ ತರಸ್ವಿನಾಮ್ ‖೧೧‖
ಪುರೇ ಚಟಚಟಾಸ್ಫೋಟೈಃ ದಹತಾಂ ಜಾತವೇದಸಾಮ್ ।
ಪೌರಾಣಾಂ ದಗ್ಧದಾರಾಣಾಂ ಮಹಾಹಲಹಲಾರವೈಃ ‖೧೨‖
ತರತಾಮಗ್ನಿಖಣ್ಡಾನಾಂ ಟಾಙ್ಕಾರಃ ಕಥಿತೋ ರವೈಃ ।
ಜ್ವಲಿತಾನಾಂ ಪರಿಸ್ಪನ್ದಾತ್ ಧಗದ್ಧಗಿತಿ ಚಾರ್ಚಿಷಾಮ್ ‖೧೩‖
ಅಥ ವಾತಾಯನಾದ್ದೇವ್ಯೌ ಮನ್ತ್ರೀ ರಾಜಾ ವಿದೂರಥಃ ।
ದದೃಶುಃ ಪ್ರೋಲ್ಲಸನ್ನಾದಂ ಮಹಾನಿಶಿ ಮಹಾಪುರಮ್ ‖೧೪‖
ಪ್ರಳಯಾನಲಸಙ್ಕ್ಷುಬ್ಧಪೂರ್ಣೈಕಾರ್ಣವರಂಹಸಾ ।
ಪೂರ್ಣಂ ಪರಬಲೇನೋಗ್ರಹೇತಿಮೇಘತರಙ್ಗಿಣಾ ‖೧೫‖
ಕಲ್ಪಾನ್ತವಹ್ನಿವಿಗಳನ್ಮೇರುಭೂಧರಭಾಸುರೈಃ ।
ದಹ್ಯಮಾನಂ ಮಹಾಜ್ವಾಲಾಜ್ವಾಲೈರಮ್ಬರಪೂರಕೈಃ ‖೧೬‖
[1] ಮುಷ್ಟಿಗ್ರಾಹ್ಯಮಹಾಮೇಘಗರ್ಜಾಸನ್ತರ್ಜಿತೋರ್ಜಿತೈಃ ।

ಲಾಹಲವೆದ್ದಿತು. ಆ ಕೋಲಾಹಲದಲ್ಲಿ,—ಬಲವಾಗಿ ಕರ್ಣಪರ್ಯಂತ ಎಳೆಯಲ್ಪಟ್ಟ ಬಾಣಗಳನ್ನು ವರ್ಷಿಸುತಿರುವ ಧನುಸ್ಸುಗಳ ಟಂಕಾರಧ್ವನಿಯೂ, ಕೂಗಿಕೊಳ್ಳುತ ವೇಗವಾಗಿ ಸಂಚರಿಸುತಿರುವ ಅತಿಮತ್ತಗಳಾದ ಆನೆಗಳ ಚೀತ್ಕಾರಧ್ವನಿಯೂ, ಆ ಪಟ್ಟಣದಲ್ಲಿ ಮನೆಗಳನ್ನೆಲ್ಲ ಸುಡುತಿರುವ ಅಗ್ನಿಯ ಚಟಚಟಧ್ವನಿಯೂ, ತಮ್ಮ ಹೆಂಡರು ಸುಟ್ಟುಹೋದುದನ್ನು ನೋಡಿ ಅಳುತಿರುವ ಪಟ್ಟಣಿಗರ ಮಹಾಕಲಕಲಧ್ವನಿಯೂ, ಅತ್ತಿತ್ತ ಹಾರುತಿರುವ ಅಗ್ನಿಖಂಡಗಳ ಟಾಂಕಾರಧ್ವನಿಯೂ, ಸ್ಪಂದನ (ಅಲುಗುವಿಕೆ) ದಿಂದ ಉರಿಯುತಿರುವ ಜ್ವಾಲೆಗಳ ಧಗಧಗ ಶಬ್ದವೂ, ಇತ್ಯಾದಿಗಳೆಲ್ಲವೂ ಸೇರಿದ್ದುವು ‖೧೦—೧೩‖

ಇಂತಹ ಕೋಲಾಹಲವೆದ್ದ ಬಳಿಕ, ಆ ಲೀಲಾಸರಸ್ವತಿಯರೂ ಮಂತ್ರಿಯೂ ದೊರೆಯಾದ ವಿದೂರಥನೂ ಕೂಡ, ಮಹಾಶಬ್ದದೊಡಗೂಡಿರುವ ಆ ದೊಡ್ಡ ಪಟ್ಟಣವನ್ನು, ಆ ಮಹಾನಿಶಿಯಲ್ಲಿ ಕಿಟಕಿಯಿಂದ ನೋಡಿದರು ‖೧೪‖

ಆ ಸಮಯದಲ್ಲಿ ಆ ಪಟ್ಟಣವು ಹೇಗಿದ್ದಿತೆಂದರೆ:—ಪ್ರಳಯಕಾಲಿಕವಾದ ಅಗ್ನಿಯಿಂದ ಕ್ಷೋಭೆಪಟ್ಟಿರುವ ಏಕಾರ್ಣವದಂತೆ ಮಹಾವೇಗಪರಿಪೂರ್ಣವಾಗಿಯೂ, ಕ್ರೂರವಾದ ಆಯುಧಗಳೆಂಬ ಮೇಘಮಾಲೆಯೊಡಗೂಡಿದುದಾಗಿಯೂ ಇರುವ ಶತ್ರುಸೈನ್ಯವು ಆ ಪಟ್ಟಣವನ್ನೆಲ್ಲ ತುಂಬಿಕೊಂಡಿದ್ದಿತು ‖೧೫‖

ಪ್ರಳಯಾಗ್ನಿಜ್ವಾಲೆಯಿಂದ ಕಳಚಿಬಿದ್ದಿರುವ ಮೇರುಪರ್ವತಗಳೋ ಎಂಬಂತೆ ಪ್ರಕಾಶಮಾನವಾದ ಅಗ್ನಿಜ್ವಾಲಾಶಿಖೆಗಳು, ಅಂತರಿಕ್ಷವನ್ನು ಮುಟ್ಟುತ, ಆ ಪಟ್ಟಣವನ್ನು ಸುಡುತಿದ್ದುವು ‖೧೬‖

ಅದೇ ಸಮಯದಲ್ಲಿ, ಆ ಪಟ್ಟಣದೊಳಗೆ, ಕಳ್ಳರು, ತಾವು ಕದಿಯಬೇಕೆಂದಿರುವ

---

1. ಮುಷ್ಟಿಃ = ಮೋಷಣಂ, ಅಪಹರಣಮಿತಿ ಯಾವತ್. ತಯಾ ಗ್ರಾಹ್ಯೇಷು ವಿಷಯೇ, (ಪರಭೀಷಣಾಯ) ಮಹಾಮೇಘಗರ್ಜಾಸದೃಶೈಃ, ತರ್ಜಿತೈಃ = ತರ್ಜನೈಃ, ಊರ್ಜಿತೈಃ = ಪ್ರಬಲೈಃ ; ದಸ್ಯುಜಲ್ಪಿತೈರಿತ್ಯಸ್ಯ ವಿಶೇಷಣಮ್.

ಘೋರಂ ಕಲಕಲಾರಾವೈಃ ಮಾಂಸಲೈರ್ದಸ್ಯುಜಲ್ಪಿತೈಃ ॥೧೭॥
ಪುಷ್ಕರಾವರ್ತಸಙ್ಕಾಶಧೂಮಾಭ್ರಪಿಹಿತಾಮ್ಬರಮ್ ।
ಸ್ಫೋಡ್ಡೀನಹೇಮಾಗ್ರನಿಭೈಃ ಜ್ವಾಲಾಪುಞ್ಜೈರ್ನಿರನ್ತರಮ್ ॥೧೮॥
ತರದುಲ್ಮುಕಖಣ್ಡೋಗ್ರತಾರಾತರಳಿತಾಮ್ಬರಮ್ ।
ಅನ್ಯೋನ್ಯದೇಶಸದ್ಮೌಘಪ್ರಜ್ವಲಜ್ಜ್ವಲನಾಕುಲಮ್ ॥೧೯॥
[1]ಹತಸೈನ್ಯಪುರಾಪಾತಂ [2]ದ್ರುತಾಙ್ಗಾರಾಭ್ರಕೋಟರೈಃ ।
[3]ಕರ್ಕಶಾಕ್ರನ್ದನಿರ್ದಗ್ಧಲೋಕಪೂಗೋಗ್ರಗರ್ಜಿತಮ್ ॥೨೦॥
ಕೃಶಾನುಕಣನಾರಾಚನಿರನ್ತರತರಾಮ್ಬರಮ್ ।
ಬಹುಹೇತಿಶಿಲಾಜಾಲಲುಠದ್ದಗ್ಧಪುರೋತ್ಕರಮ್ ॥೨೧॥
ರಣದ್ದ್ವಿರದಸಙ್ಘಟ್ಟಕುಟ್ಟಿತೋದ್ಭಟಸದ್ಭಟಮ್ ।

ಪದಾರ್ಥಗಳಿಗೋಸ್ಕರ, ಇತರರನ್ನು ಹೆದರಿಸುವುದಕ್ಕೆ ಮಹಾಮೇಘದಂತೆ ಗರ್ಜಿಸುತಿದ್ದರು. ಇಂತಹ ಗರ್ಜನೆಯಿಂದಲೂ ಕಲಕಲ ಧ್ವನಿಯಿಂದಲೂ ಪರಿಪೂರ್ಣವಾದ ಆ ಕಳ್ಳರ ಸಲ್ಲಾಪಗಳಿಂದ, ಆ ಪಟ್ಟಣವು ಘೋರವಾಗಿದ್ದಿತು ॥೧೭॥

ಪುಷ್ಕರಾವರ್ತಸದೃಶಗಳಾದ ಧೂಮರೂಪವಾದ ಮೇಘಗಳು, ಆ ಪಟ್ಟಣದಲ್ಲಿ ಆಕಾಶವನ್ನೆಲ್ಲ ಮುಚ್ಚಿಬಿಟ್ಟಿದ್ದುವು. ಚಿನ್ನದ ರೇಕುಗಳು ಹಾರುತಿವೆಯೋ ಎಂಬಂತಿರುವ ಜ್ವಾಲಾಸಮೂಹಗಳು, ಆ ಪಟ್ಟಣವನ್ನು ಅವಕಾಶರಹಿತವನ್ನಾಗಿ ಮಾಡಿಬಿಟ್ಟಿದ್ದುವು ॥೧೮॥

ಅತ್ತಿತ್ತ ಹಾರಾಡುತಿರುವ ಕೊಳ್ಳಿಗಳು, ಕ್ರೂರವಾದ ನಕ್ಷತ್ರಗಳಂತೆ, ಅಂತರಿಕ್ಷವನ್ನು ವ್ಯಾಪಿಸಿದ್ದುವು. ಪರಸ್ಪರವಾಗಿ ಬೆಂಕಿಯನ್ನು ಎಸೆದಾಡುವುದರಿಂದ, ಅಲ್ಲಿದ್ದ ಒಬ್ಬೊಬ್ಬರ ಮನೆಗಳೂ ಅಗ್ನಿಪರ್ವತದಂತೆ ಉರಿಯುತಿದ್ದುವು ॥೧೯॥

ಹತಾವಶಿಷ್ಟರಾದ ಸೈನಿಕ ಜನಗಳು, ಹಿಂದಿರುಗಿ ಊರಿಗೆ ಬರುತಿದ್ದರು. ಮೇಘಮಧ್ಯಗಳಲ್ಲಿ ಕಿಡಿಗಳು ಹಾರುತಿದ್ದುವು. ಶತ್ರುಸೈನಿಕರು, ಅಲ್ಲಿನ ಜನಸಮೂಹವನ್ನು, ಬಹುಕರ್ಕಶವಾಗಿ ರೋದನಮಾಡುವಂತೆ ಸುಟ್ಟುಬಿಟ್ಟು, ತಾವು ಕ್ರೂರವಾಗಿ ಗರ್ಜನೆ ಮಾಡುತಿದ್ದರು ॥೨೦॥

ಅಗ್ನಿಕಣಗಳೂ ಬಾಣಗಳೂ ಆ ಪುರದ ಆಕಾಶವನ್ನೆಲ್ಲ ಬಹುದಟ್ಟವಾಗಿ ಮುಚ್ಚಿಬಿಟ್ಟಿದ್ದುವು. ಅನೇಕವಾದ ಆಯುಧಗಳಿಂದಲೂ ಶಿಲಾಸಮೂಹಗಳಿಂದಲೂ ಪೆಟ್ಟುತಿಂದು, ಪಟ್ಟಣದಲ್ಲಿರುವ ಜನಸಮೂಹಗಳು ಬಿದ್ದು ಹೊರಳುತಿದ್ದುವು ॥೨೧॥

ಯುದ್ಧದಲ್ಲಿ ಆನೆಗಳ ಸಂಘಟ್ಟನೆಯಿಂದ ಏಟುತಿಂದ ಉತ್ತಮರಾದ ವೀರಭಟರು,

---

1. ಹತಾನಾಂ, ಸೈನ್ಯಾನಾಂ = ಸೈನಿಕಾನಾಂ, ಪುರಂ ಪ್ರತಿ, ಆಪಾತಃ = ಆಗಮನಂ, ಯತ್ರ.

2. ದ್ರುತಾಃ = ಪ್ರಸೃತಾಃ, ಅಙ್ಗಾರಾಃ, ಯೇಭ್ಯಃ; ತೈಃ ಅಭ್ರಕೋಟರೈಃ = ಮೇಘಾನ್ತರಾಳೈಃ, ಉಪಲಕ್ಷಿತಮ್.

3. ಕರ್ಕಶಃ ಆಕ್ರನ್ದಃ ಯಸ್ಮಿನ್ಕರ್ಮಣಿ, ತಥಾ ನಿರ್ದಗ್ಧಾಃ ಲೋಕಪೂಗಾಃ ಯೈಃ, ತಾದೃಶೈಃ ಶತ್ರುಭಿಃ (ಅಧ್ಯಾಹಾರಃ) ಉಗ್ರಂ ಗರ್ಜಿತಂ ಯತ್ರ.

ವಿದ್ರವತ್ತಸ್ಕರಚ್ಛೇದಮಾರ್ಗಕೀರ್ಣಮಹಾಧನಮ್ ||೨೨||
ಅಙ್ಗಾರರಾಶಿನಿಪತನ್ನರನಾರ್ಯುಗ್ರರೋದನಮ್ |
ಸ್ಫುಟಚ್ಚಟಚಟಾಶಬ್ದಪ್ರಲುಠತ್ಸ್ಫುಟಕಾಷ್ಠಕಮ್ ||೨೩||
ವಿಪುಲಾಲಾತಚಕ್ರೌಘಶತಸೂರ್ಯನಭಸ್ತಲಮ್ |
ಅಙ್ಗಾರಶಿಖರಾಕೀರ್ಣಸಮಸ್ತವಸುಧಾತಲಮ್ ||೨೪||
ದಗ್ಧಾಗ್ನಿಕಾಷ್ಠಕ್ರೇಙ್ಕಾರರಣಜ್ಜ್ವಲನವೈಣವಮ್ |
ದಗ್ಧಜನ್ತುಘನಾಕ್ರನ್ದರುದತ್ಸಕಲಸೈನಿಕಮ್ ||೨೫||
ಪಾಂಸುಶೇಷಾತ್ತರಾಜಶ್ರೀವೃದ್ಧತೃಪ್ತಹುತಾಶನಮ್ |
ಸಕಲಗ್ರಸನಾರಮ್ಭಸೋದ್ಯೋಗಾಗ್ನಿಮಹಾಶನಮ್ ||೨೬||
[1]ಯದೃಚ್ಛಾತ್ಕಾರಡಾತ್ಕಾರಕರಿನಾಗ್ನಿರಟದ್ಗೃಹಮ್ |

ಚೂರ್ಣವಾಗುತಿದ್ದರು. ಕಳ್ಳರು ಕದ್ದುಕೊಂಡು ಓಡಿಹೋಗುತ, ಮಾರ್ಗಮಧ್ಯದಲ್ಲಿ ಕತ್ತುಕತ್ತರಿಸಲ್ಪಟ್ಟವರಾಗಿ, ತಾವು ಕದ್ದ ಮಹಾಧನವನ್ನೆಲ್ಲ ದಾರಿಯಲ್ಲಿಯೇ ಚೆಲ್ಲಿಬಿಡುತ್ತಿದ್ದರು ॥೨೨॥

ಬೆಂಕಿಕೆಂಡಗಳ ರಾಶಿಗಳಲ್ಲಿ, ಹೆಂಗಸರೂ ಗಂಡಸರೂ ಬೀಳುತ ಘೋರವಾಗಿ ಅಳುತಿದ್ದರು. ಬೆಂಕಿಯೊಳಗೆ ಸುಟ್ಟುಹೋಗುತಿರುವ ಕಟ್ಟಿಗೆಗಳು, ಬೆಂಕಿಯ ಕಾವಿನಿಂದ ತಟ್ಟನೆ ಸೀಳಿಹೋಗುತ, ಚಟಚಟ ಶಬ್ದಮಾಡುತಿದ್ದುವು ॥೨೩॥

ದೊಡ್ಡದೊಡ್ಡ ಕೊಳ್ಳಿಗಳು ಗಾಳಿಯಿಂದ ಮೇಲಕ್ಕೆ ಹಾರಿಹೋಗಿ, ಅಲ್ಲಿ ಚಕ್ರಾಕಾರವಾಗಿ ನೂರಾರುಕಡೆ ಸುತ್ತುತಿರುವುದರಿಂದ, ಅಂತರಿಕ್ಷದಲ್ಲಿ ಏಕಕಾಲದಲ್ಲಿಯೇ ನೂರಾರು ಸೂರ್ಯಮಂಡಲಗಳುದಯಿಸಿರುವುವೋ ಎಂಬಂತೆ ಕಾಣುತಿದ್ದಿತು. ಬೆಂಕಿಯ ಕೆಂಡಗಳು, ಪರ್ವತಶಿಖರಗಳಂತೆ, ಆ ಪಟ್ಟಣದ ಸಮಸ್ತ ಭೂಮಿಯಮೇಲೂ ಹರಡಿಕೊಂಡಿದ್ದುವು ॥೨೪॥

ಬೆಂಕಿಯ ಕೊಳ್ಳಿಗಳು, ಆ ಪಟ್ಟಣದ ಹೊರಭಾಗದಲ್ಲಿರುವ ಬಿದಿರುಮೆಳೆಗಳಮೇಲೆ ಬಿದ್ದು ಉರಿಯುತಿದ್ದುವು. ಇವುಗಳಿಂದ ಆ ಬಿದಿರುಮೆಳೆಗಳೂ ಹೊತ್ತಿಕೊಂಡು, ಕ್ರೇಂಕಾರಧ್ವನಿಮಾಡುತ ಉರಿದುಹೋಗುತಿದ್ದುವು. ಅನೇಕ ಪ್ರಾಣಿಗಳು ಸುಟ್ಟುಹೋಗಿ ಗಟ್ಟಿಯಾಗಿ ಕೂಗಿಕೊಳ್ಳುತಿರುವುದನ್ನು ಕೇಳಿ, ಸೈನಿಕರೆಲ್ಲರೂ ಅಳುತಿದ್ದರು ॥೨೫॥

ಚೆನ್ನಾಗಿ ಅಭಿವೃದ್ಧಿಪಡೆದಿದ್ದ ಆ ಅಗ್ನಿಯು, ಆ ಪಟ್ಟಣದ ರಾಜಸಂಪತ್ತನ್ನೆಲ್ಲ ಧೂಳಿಶೇಷವಾಗುವಂತೆ ಸ್ವೀಕರಿಸಿ ತೃಪ್ತಿಹೊಂದುತಿದ್ದಿತು ; ಮತ್ತು, ಆ ಅಗ್ನಿಯೆಂಬ ಮಹಾಶನನು (ಹೊಟ್ಟೆಬಾಕ) , ಅಲ್ಲಿರುವ ಸಮಸ್ತ ಪದಾರ್ಥವನ್ನೂ ಗ್ರಾಸಮಾಡಿಬಿಡಬೇಕೆಂದು ಉದ್ಯೋಗಪಡುತಿದ್ದನು ॥೨೬॥

ಆ ಪಟ್ಟಣದಲ್ಲಿ, ಯೋಧರು ಆಕಸ್ಮಿಕವಾಗಿ ಸರ್ವವನ್ನೂ ಕಿತ್ತುಕೊಂಡುಹೋಗುವಿಕೆಯಿಂದಲೂ (ಕೊಳ್ಳೆ = ಲೂಟಿ), ಕಳ್ಳರು ಕದಿಯುವುದಕ್ಕೆ ಬಂದಾಗ ಜನರನ್ನು ಹೊಡೆ

---

1. ಯದೃಚ್ಛಯಾ = ಅಕಸ್ಮಾತ್, ಆತ್ಕಾರಃ = ಸರ್ವಸ್ವಾದಾನಮ್, ಡಾತ್ಕಾರಃ = ದಸ್ಯುಭಿಃ ಪ್ರಹರಣಮ್.

ಅನನ್ತಜನ್ತುಭೋಜ್ಯಾನ್ನವಹ್ನಿಭುಕ್ತೇನ್ಧನಸ್ಪೃಹಮ್ ‖೨೩‖
ಅಥ ಶುಶ್ರಾವ ತತ್ರಾಸೌ ಗಿರೋ ರಾಜಾ ವಿದೂರಥಃ ।
ಯೋಧಾನಾಂ ದಗ್ಧದಾರಾಣಾಂ ಪಶ್ಯತಾಮಭಿಧಾವತಾಮ್ ‖೨೮‖
ಹಾ ಮತ್ತಮರುದೂರ್ಧ್ವಸ್ಥ [1]ಅಜ್ಗಾರ ಗೃಹಪಾದಪಾಃ ।
ರಣತ್ಖರಖರಂ [2]ನೀರಜಾಲಾನಾತಾಪಸನ್ನಿಧಿನಃ ‖೨೯‖
ಹಾ ದಗ್ಧದಾರಾಃ ಪ್ರಾಲೇಯಶೀತಾದೇಹೇಷು ದನ್ತಿನಾಮ್ ।
ಮಗ್ನಾಮನಸ್ಸು ಮಹತಾಂ ಇವ ವಿಜ್ಞಾನಸೂಕ್ತಯಃ ‖೩೦‖
ಹಾ ತಾತ ಹೇತಯೋ ಲಗ್ನಾಃ ತರುಣೀಕಬರೀತೃಣೇ ।
ಜ್ವಲನ್ತಿ ಶುಷ್ಕಪರ್ಣೌಘೇ ಇವ ವೀರಾನಿಲೇರಿತಾಃ ‖೩೧‖
ಆವರ್ತನನದೀದೀರ್ಘಾ ವಹನ್ತ್ಯೂರ್ಧ್ವತರಜ್ಗಿಣೀ ।

ಯುವಿಕೆಯಿಂದಲೂ, ಕ್ರೂರವಾದ ಅಗ್ನಿಜ್ವಾಲೆಯಿಂದಲೂ ಕೂಡ, ಮನೆಗಳೆಲ್ಲವೂ ಧ್ವನಿ ಮಾಡುತಿದ್ದುವು. ಅನೇಕ ಪ್ರಾಣಿಗಳ ಆಹಾರಯೋಗ್ಯವಾದ ಸಾಮಗ್ರಿಗಳೆಲ್ಲವನ್ನೂ ಅಗ್ನಿಯು ಭಕ್ಷಿಸಿಬಿಡಲಾಗಿ, ಅವಶಿಷ್ಟವಾದ ಕಾಷ್ಠವನ್ನಾದರೂ ಉಳಿಸಿಕೊಳ್ಳಬೇಕೆಂದು ಅಲ್ಲಿ ಕೆಲವರು ಪ್ರಯತ್ನಪಡುತಿದ್ದರು ‖೨೩‖

ಅಯ್ಯಾ! ರಾಮ! ಹೀಗಿರುವ ಆ ಪಟ್ಟಣವನ್ನು ಕಿಟಕಿಯಿಂದಲೇ ನೋಡಿದ ಬಳಿಕ, ದೊರೆಯಾದ ಆ ವಿದೂರಥನು, ತಮ್ಮತಮ್ಮ ಹೆಂಡರುಮಕ್ಕಳು ಸುಟ್ಟುಹೋಗುತಿರುವುದನ್ನು ನೋಡಿ ಸಹಿಸಲಾರದೆ ಓಡುತಿರುವ ಯೋಧರುಗಳ ಈ ವಿಧವಾದ ಮಾತುಗಳನ್ನು ಕೇಳಿದವನಾದನು ‖ ೨೮ ‖

ಆ ಯೋಧರುಗಳು ಏನೇನು ಹೇಳುತಿದ್ದರೆಂದರೆ,— ಅಯ್ಯೋ! ಅಪ್ಪ! ನೀರು ತುಂಬಿರುವಕಾರಣ ಬೆಂಕಿಯು ಸಂತಾಪದಿಂದ ಬೇಯದೆ ಉಳಿದಿದ್ದ ಎತ್ತರವಾಗಿ ಬೆಳೆದಿರುವ ಉದ್ಯಾನವೃಕ್ಷಗಳನ್ನೂ, ಈ ಪ್ರಚಂಡಮಾರುತವು, ಖರಖರಧ್ವನಿಮಾಡುತ, ಹೊತ್ತುಕೊಂಡು ಹೋಯಿತು! ಹಾ! ‖೨೯ ‖

ಪೂರ್ವದಲ್ಲಿ ಹಿಮದಂತೆ ಶೀತಸ್ಪರ್ಶರಾಗಿದ್ದ ನಮ್ಮ ಪತ್ನಿಯರು, ಈಗ ಅಗ್ನಿಯಲ್ಲಿ ದಗ್ಧರಾಗಿ, ಮಹಾತ್ಮರ ಹೃದಯದಲ್ಲಿ ಜ್ಞಾನೋಪದೇಶಗಳಡಗಿರುವಂತೆ, ಮೃತವಾದ ಆನೆಗಳ ಶರೀರಗಳೊಳಗೆ ಅಡಗಿಹೋದರು. ಅಯ್ಯೋ! ‖ ೩೦ ‖

ಹಾ! ತಾತ! ವೀರರೆಂಬ ಅಗ್ನಿಯಿಂದ ಪ್ರೇರಿತಗಳಾದ ಆಯುಧಗಳೆಂಬ ಜ್ವಾಲೆಗಳು, ತರುಣಿಯರ ಕೇಶಪಾಶವೆಂಬ ತೃಣಸಮೂಹದ ಮೇಲೆ ಬಿದ್ದು, ತರಗೆಲೆಯ ಗುಡ್ಡೆಯಮೇಲೆ ಅಗ್ನಿಯು ಉರಿಯುವಂತೆ— ಉರಿಯುತ್ತಿರುವುವು ‖೩೧‖

ಈ ಧೂಮಸ್ತೋಮವೆಂಬ ಯಮುನಾನದಿಯು, ಸುಳಿಗಳಿಂದಲೂ ಸಣ್ಣ ಪ್ರವಾಹಗಳಿಂದಲೂ ದೀರ್ಘವಾಗಿ, ಊರ್ಧ್ವಮುಖವಾದ ತರಂಗಗಳಿಂದ ಯುಕ್ತವಾಗಿ ಹರಿಯು

---

1. ಅಜ್ಗ ಆರ ಇತಿ ಚ್ಛೇದಃ ‘ಆರ’ ಇತಿ ಕ್ರಿಯಾಪದಮ್. ಆಜಗಾಮೇತ್ಯರ್ಥಃ.

2. ನೀರಾಣಾಂ ಜ್ವಾಲೇನ ಆನಾಃ ಹರಿತಾಃ, ಶಿಶಿರಾಇತ್ಯರ್ಥಃ; ಅತಏವ ಆತಾಪಸ್ಯ= ಸನ್ತಾಪಸ್ಯ, ಪನ್ಥಿನಃ= ಪರಿಪನ್ಥಿನಃ, ತದ್ವಿರುದ್ಧಾಃ ; ತಾಃ.

ಪಶ್ಯೇಯಂ ಧೂಮಯಮುನಾ ವ್ಯೋಮಗಙ್ಗಾಂ ಪ್ರಧಾವತಿ ||೩೦||
ವಹದುಲ್ಮುಕಕಾಷ್ಠೋರ್ಧ್ವಗಾಮಿನೀ ಧೂಮನಿಮ್ನಗಾ |
ವೈಮಾನಿಕಾನನ್ಧಯತಿ ಪಶ್ಯಾಗ್ನಿಕಣಬುದ್ಬುದಾ ||೩೩||
ಅಸ್ಯಾಮಾತಾ ಪಿತಾ ಭ್ರಾತಾ ಜಾಮಾತಾ ಸ್ತನಪಾಃ ಸುತೇ |
ಅಸ್ಮಿನ್ ಸದ್ಮನಿ ನಿರ್ದಗ್ಧಾಃ ದಗ್ಧೈವಾಸೀತ್ ಸಮಿನ್ಧನೇ ||೩೪||
ಹಾ ಹಾಹಾಗಚ್ಛ ತೇ ಶೀಘ್ರಂ ಏತದಙ್ಗಾರಮನ್ದಿರಮ್ |
ಇತಃ ಪ್ರವೃತ್ತಂ ಪತಿತುಂ ಸುಮೇರುಃ ಪ್ರಳಯೇ ಯಥಾ ||೩೫||
ಅಹೋ ಶರಶಿಲಾಶಕ್ತಿಕುನ್ತಪ್ರಾಸಾಸಿಹೇತಯಃ |
ಜಾಲಸನ್ಧ್ಯಾಭ್ರಪಟಲಂ ವಿಶನ್ತಿ ಶಲಭಾ ಇವ ||೩೬||
ಹೇತಿಪ್ರವಾಹಾಜ್ಜ್ವಲನಂ ನಭಸ್ಯನ್ತ್ಯಂ ವಿಶನ್ತ್ಯಹೋ |
ಬಡಬಾನಲಮುಜ್ಜ್ವಲಂ ಅರ್ಣಃಪೂರಾ ಇವಾರ್ಣವಾತ್ ||೩೭||
ಧೂಮಾಯಾನ್ತಿ ಮಹಾಭ್ರಾಣಿ ಜ್ವಾಲಾಃ ಶಿಖರಿಕೋಟಿಷು |

ತ, ಆಕಾಶದಲ್ಲಿರುವ ಗಂಗೆಯನ್ನು ಕುರಿತು ಓಡಿಹೋಗುತ್ತಿರುವುದು. ಇದನ್ನು ನೋಡು ||೩೨||

ಮತ್ತು ಈ ಧೂಮವೆಂಬ ನದಿಯು, ಕೊಳ್ಳಿಗಳೆಂಬ ಕಟ್ಟಿಗೆಗಳು ತೇಲುತಿರುವುದಾಗಿಯೂ ಅಗ್ನಿಕಣವೆಂಬ ಗುಳ್ಳೆಗಳುಳ್ಳದಾಗಿಯೂ ಮೇಲುಮುಖವಾಗಿ ಹೋಗುತ, ವಿಮಾನದಲ್ಲಿ ಸಂಚರಿಸುತಿರುವ ದೇವತೆಗಳನ್ನೆಲ್ಲ ಕುರುಡುಮಾಡುತಿರುವುದು. ಇದನ್ನು ನೋಡು||

ಎಲೌ ಮಗಳೇ! ಇತ್ತಲಾಗಿ, ಇವಳ ತಾಯಿಯೂ ತಂದೆಯೂ ಸಹೋದರನೂ ಅಳಿಯನೂ ಮಕ್ಕಳುಗಳೂ, ಈ ಮನೆಯಲ್ಲಿ ಸುಟ್ಟುಹೋದರು. ಹೀಗೆನ್ನುವಷ್ಟರಲ್ಲಿಯೇ, ಇವಳೂ ಆ ಪ್ರಜ್ವಲಿತವಾದ ಅಗ್ನಿಯಲ್ಲಿ ಸಿಕ್ಕಿ ಹೋದಳು || ೩೪ ||

ಅಯ್ಯೊ! ಅಯ್ಯೋ! ನೀನು ಬೇಗನೆ ಮನೆಯಿಂದ ಹೊರಕ್ಕೆ ಬಾ. ನಿನ್ನ ಈ ಮನೆಯೆಲ್ಲವೂ ಉರಿದುಹೋಗಿ ಕೇವಲ ಅಂಗಾರರೂಪವಾಗಿರುವುದು. ಇದೂ ಕೂಡ, ಪ್ರಳಯಕಾಲದಲ್ಲಿ ಸುಮೇರುಪರ್ವತ ಬೀಳುವಂತೆ, ಇತ್ತಕಡೆ ಬೀಳುವುದಕ್ಕೆ ಸಿದ್ಧವಾಗಿರುವುದು || ೩೫ ||

ಅಯ್ಯೋ! ಶರ ಶಿಲಾ ಶಕ್ತಿ ಕುಂತ ಪ್ರಾಸ ಅಸಿ—ಇತ್ಯಾದ್ಯಾಯುಧಗಳು, ಶಲಭಗಳಂತೆ, ಗವಾಕ್ಷಜಾಲಗಳೆಂಬ ಸಂಧ್ಯಾಕಾಲಿಕ ಮೇಘ ಸಮುದಾಯಗಳನ್ನು ಪ್ರವೇಶಿಸುತಿರುವುವು || ೩೬ ||

ಆಹ! ಈಗ ನೋಡಿದರೆ, ಈ ಪಟ್ಟಣವು ಭಯದಿಂದ ಅಂತರಿಕ್ಷಕ್ಕೆ ಓಡಿಹೋಗಲಪೇಕ್ಷಿಸುವಂತೆ ತೋರುವುದು; ಇಂತಹ ಈ ಪಟ್ಟಣದಲ್ಲಿ, ಸಮುದ್ರದಲ್ಲಿ ಹುಟ್ಟಿದ ಜಲಪ್ರವಾಹಗಳು ಬಡಬಾಗ್ನಿಯನ್ನು ಸೇರುವಂತೆ, ಅಸಂಖ್ಯಾಕವಾದ ಜ್ವಾಲೆಗಳು ಹುಟ್ಟಿ ಅಗ್ನಿಯನ್ನು ಸೇರುತ್ತಿರುವುವು || ೩೭ ||

ಹೊಗೆಗಳು ಮಹಾ ಮೇಘಗಳನ್ನು ಹೊಂದುತಿರುವುವು; ಅಗ್ನಿಜ್ವಾಲೆಗಳು ಪರ್ವತ

ಸರಸಾನ್ಯಪಿ ಶುಷ್ಯನ್ತಿ ಹೃದಯಾನೀವ ರಾಗಿಣಾಮ್ ॥೩೮॥
ಆಲಾನತ್ವರುಷೇವೈತಾಃ ದನ್ತಿಭಿರ್ವೃಕ್ಷಪಙ್ಕ್ತಯಃ ।
ಸ್ಫುರತ್ಕಟಕಟಾರಾವಂ ಪಾತ್ಯನ್ತೇ ಕೃತಚೀತ್ಕೃತೈಃ ॥೩೯॥
ಪ್ಲುಷ್ಟಪುಷ್ಪಫಲಸ್ಕನ್ಧಾಃ ಗತಶ್ರೀಕಾಗೃಹದ್ರುಮಾಃ ।
ಗತಾನಿರ್ದಗ್ಧಸರ್ವಸ್ವಾಃ ಗೃಹಸ್ಥಾ ಇವ ದೀನತಾಮ್ ॥೪೦॥
ಮಾತಾಪಿತೃವಿನಿರ್ಮುಕ್ತಾಃ ಬಾಲಕಾಸ್ತ್ವಿರಾವಳೀಮ್ ।
[1]ಮಗ್ನನ್ತೋಙ್ಗೇಷು ರಥ್ಯಾಸು ಕುಡ್ಯಪಾತೇನ ಹಾ ಹತಾಃ ॥೪೧॥
ವಾತವಿದ್ರಾವಿತಾತ್ [2] ತ್ರಸ್ಯನ್ತಿ ಕರಿಣ್ಯೋ ರಣಮೂರ್ಧನಿ ।
ಪತದಙ್ಗಾರಕಾಗಾರಛಾದಿನಃ ಕಟುಕೂಜಿತಮ್ ॥೪೨॥
ಹಾ ಕಷ್ಟಮಸಿನಿರ್ಭಿನ್ನೇ ಸ್ಕನ್ಧೇ ಸನ್ನದೃಢೋಲ್ಮುಕೇ ।
ಪತಿತೋ ಯನ್ತ್ರಪಾಷಾಣಃ ಪುರುಷಸ್ಯಾಶನಿರ್ಯಥಾ ॥೪೩॥

ಶಿಖರಗಳನ್ನು ಹೊಂದುತ್ತಿರುವುವು. ಕೇವಲ ಕಾಮಾಸಕ್ತರ ಹೃದಯಗಳಂತೆ, ಸರಸಗಳಾದ ಪದಾರ್ಥಗಳೂ ಕೂಡ ಒಣಗುತಿರುವುವು ॥ ೩೮ ॥

ಇತ್ತಲಾಗಿ, ಇವೇ ನಮಗೆ ಬಂಧಸ್ತಂಭಗಳಾಗಿದ್ದುವೆಂಬ ಕೋಪದಿಂದಲೋ ಎಂಬಹಾಗೆ, ವೃಕ್ಷಪಂಕ್ತಿಗಳನ್ನು, ಮದ್ದಾನೆಗಳು ಚೀತ್ಕಾರಮಾಡುತ—ಕಟಕಟ ಶಬ್ದವಾಗುವಹಾಗೆ ಮುರಿದು ಕೆಡುವುತ್ತಿರುವುವು ॥ ೩೯ ॥

ಈ ಆರಾಮವೃಕ್ಷಗಳು, ಪುಷ್ಪ ಫಲ ಸ್ಕಂಧ (ಕವಲು)-ಇವುಗಳೆಲ್ಲವೂ ಒಣಗಿ ಹೋಗಿರುವುದರಿಂದ ಕಾಂತಿಹೀನಗಳಾಗಿ, ಸರ್ವಸ್ವವೂ ಸುಟ್ಟುಹೋಗಿರುವ ಮನೆಯ ಜನಗಳಂತೆ, ಅತಿಯಾಗಿ ದೈನ್ಯವನ್ನು ಹೊಂದಿರುವುವು ॥ ೪೦ ॥

ಹೇ ತಾತ! ಇತ್ತಲಾಗಿ, ಈ ಬಾಲಕರು, ಮಾತಾಪಿತೃಗಳಿಂದ ವಿಹೀನರಾಗಿ, ಬಾಣಪರಿಪೂರ್ಣವಾಗಿರುವ ರಾಜಮಾರ್ಗಗಳಲ್ಲಿ ಹೋಗುತ, ಎಲ್ಲಿಯಾದರೂ ಮರೆಯಾಗಿರಬೇಕೆಂದು ಕತ್ತಲೆಯನ್ನು ಹುಡುಕುತ, ಅಷ್ಟರಲ್ಲಿಯೇ ಮುರಿದು ಬಿದ್ದುಹೋದ ಗೋಡೆಯ ಪೆಟ್ಟಿಗೆ ಸಿಕ್ಕಿ ಸತ್ತುಹೋದರು. ಹಾಹಾ! ॥ ೪೧ ॥

ಇನ್ನೊಂದುಕಡೆ, ಬೆಂಕಿಯ ಕೆಂಡಗಳನ್ನು ಉದುರಿಸುತ್ತಿರುವ ಮನೆಯ ಮೇಲುಹೊದ್ದಿಕೆ (ಛಾವಣಿ) ಗಳು, ಗಾಳಿಯಿಂದ ದೂರವಾಗಿ ಎಸೆಯಲ್ಪಡುತ್ತಿರುವುವು; ಇವುಗಳನ್ನು ನೋಡಿ, ರಣಾಂಗಣದಲ್ಲಿರುವ ಹೆಣ್ಣಾನೆಗಳು ಕಿರಿಚಿಕೊಳ್ಳುತ ಹೆದರಿ ಓಡುತಿರುವುವು ॥ ೪೨ ॥

ಈಕಡೆಯಲ್ಲಿ, ಈ ಮನುಷ್ಯನ ಹೆಗಲು, ಮೊದಲೇ ಕತ್ತಿಯಿಂದ ಕತ್ತರಿಸಲ್ಪಟ್ಟಿದ್ದಿತು; ಆದರಮೇಲೆ, ಗಟ್ಟಿಯಾದ ಕೊಳ್ಳಿಯೂ ಬಿದ್ದು ಮುರಿದುಹೋಯ್ತು; ಇಷ್ಟೆಲ್ಲ ಆದಮೇಲೆ, ದೊಡ್ಡದಾದೊಂದು ಕವಣೆಕಲ್ಲು, ಸಿಡಿಲುಬಿದ್ದಂತೆ ಆದರಮೇಲೆ ಬಿದ್ದುಬಿಟ್ಟಿತು. ಹಾ! ಕಷ್ಟ !! ॥ ೪೩ ॥

---

1. ಮಗ್ನನ್ತಃ=ಮೃಗಯಮಾಣಾಃ. ಛಾನ್ದಸಂ ರೂಪಮ್.

2. ತ್ರಸ್ಯನ್ತಿ, ಅಡಭಾವಆರ್ಷಃ; ಅತ್ರಸ್ಯನ್ನಿತ್ಯರ್ಥಃ.

ಗವಾಶ್ವಮಹಿಷೇಭೋಷ್ಟ್ರಶ್ವಸೃಗಾಲೈಡಕೈರಹೋ ।
ಘೋರೈರಣಮಿವಾರಬ್ಧಂ ಮಾರ್ಗರೋಧಕಮಾಕುಲೈಃ ॥೪೪॥
ಪಟೈಃ ಪಟಪಟಾಶಬ್ದಜಲಜಾಲಾಳಿಮಾಲಿತೈಃ ।
ಆಕ್ರನ್ದನ್ತ್ಯಃ ಸ್ತ್ರಿಯೋ ಯಾನ್ತಿ ಸ್ಥಲಪದ್ಮಾಚಿತಾಇವ ॥೪೫॥
ಸ್ತ್ರೀಣಾಂ ಜ್ವಾಲಾಲವಾಃ ಪಶ್ಯ ಲಿಹನ್ತ್ಯಲಕವಲ್ಲರೀಃ ।
ಕುರ್ವನ್ತೋಽಶೋಕಪುಷ್ಪಾಭಾಂ ಕರಭಾಇವ [1] ಪನ್ನಗೀಃ ॥೪೬॥
ಹಾಹಾ ಹರಿಣಶಾಬಾಕ್ಷ್ಯಾಃ ಪಕ್ಷ್ಮಲಕ್ಷಣಪಕ್ಷ್ಮಸು ।
ಕುಮಾರ್ಗೇಷ್ವಿವ ವಿಶ್ರಾನ್ತಿಂ ಏತಿ ಕಾರ್ಶಾನವೀ ಶಿಖಾ ॥೪೭॥
ದಹ್ಯಮಾನೋ ವಿನಿರ್ಯಾತಿ ನ ಕಳತ್ರಂ ವಿನಾ ನರಃ ।
ಅಹೋ ಬತ ದುರುಚ್ಛೇದಾಃ ಪ್ರಾಣಿನಾಂ ಸ್ನೇಹಪಾಗುದಾಃ ॥೪೮॥
ಕರೀ ರಭಸನಿರ್ಲೂನಜ್ವಲದಙ್ಘ್ರಿಪಾದಪಃ ।

ಮತ್ತೊಂದುಕಡೆ, ಹಸು ಕುದುರೆ ಎಮ್ಮೆ ಆನೆ ಒಂಟೆ ನಾಯಿ ನರಿ ಟಗರು—ಇವುಗಳೆಲ್ಲವೂ, ಮಹಾಘೋರಗಳಾಗಿ, ಜನರು ತಿರುಗುವ ಮಾರ್ಗವನ್ನು ಅಡ್ಡಗಟ್ಟಿಗೊಂಡು, ಪರಸ್ಪರ ಯುದ್ಧಾರಂಭಮಾಡಿದಂತೆ ಕಾಣುತಿರುವುವು ॥೪೪॥

ಆಕಡೆ, ಸ್ತ್ರೀಯರು ಬೆಂಕಿಯಲ್ಲಿ ಸಿಕ್ಕಿ ಸತ್ತೇವೆಂಬ ಭಯದಿಂದ ಮೈಗೆಲ್ಲ ಒದ್ದೆಒಟ್ಟೆಯನ್ನು ಸುತ್ತಿಕೊಂಡು ಮನೆಯಿಂದ ಈಚೆಗೆ ಬರುತಿರುವರು; ಆಗ, ಅವರ ಬಟ್ಟೆಗಳು, ನೀರು ಸೋರುತಿರುವುದರಿಂದ, ಪಟಪಟಧ್ವನಿಮಾಡುತಕ್ಕುವುಗಳಾಗಿಯೂ ಜಲಬಿಂದುಗಳೆಂಬ ಭ್ರಮರಪಂಕ್ತಿಯೊಡನೆ ಪರಿವೃತವಾಗಿಯೂ ಇರುವುವು. ಹೀಗಿರುವ ಈ ಸ್ತ್ರೀಯರು, ಸ್ಥಲಪದ್ಮಗಳಿಂದ ವ್ಯಾಪ್ತರಾಗಿರುವಂತೆ ಕಾಣುವರು ॥೪೫॥

ಮತ್ತೊಂದು ಕಡೆಯಲ್ಲಿ, ರಕ್ತಾಶೋಕಪುಷ್ಪಗಳ ಕಾಂತಿಯನ್ನು ಧರಿಸಿರುವ ಸಣ್ಣ ಸಣ್ಣ ಅಗ್ನಿಜ್ವಾಲೆಗಳು, ಒಂಟೆಗಳು ನೆಲಕ್ಕೆ ಬೊಗ್ಗಿರುವ ಮರದ ಕೊಂಬೆಗಳನ್ನು ಹಿಡಿದುಕೊಳ್ಳುವಂತೆ, ಸ್ತ್ರೀಯರ ಮುಂಗುರುಳುಗಳನ್ನು ಆಕ್ರಮಿಸುತಿರುವುವು ; ಇದನ್ನು ನೋಡು॥

ಇತ್ತಲಾಗಿ, ಈ ಮೃಗಲೋಚನೆಯ ಭ್ರಮರಪಕ್ಷಸದೃಶವಾದ ಕಣ್ಣುರೆಪ್ಪೆಗಳೊಳಗೆ, ಅಗ್ನಿಜ್ವಾಲೆಯು ಭೂಮಾರ್ಗದಲ್ಲಿಯೋಪಾದಿಯಲ್ಲಿ ವಿಶ್ರಾಂತಿಪಡೆಯುವುದು. ಹಾಹಾ !! ॥

ಇಲ್ಲಿ ಈ ಮನುಷ್ಯನು, ಅಗ್ನಿಯಿಂದ ತಾನು ಸುಡಲ್ಪಡುತಲಿದ್ದರೂ, ತನ್ನ ಹೆಂಡತಿಯು ಒಳಗಿರುವುದರಿಂದ, ಅವಳನ್ನು ಮನೆಯೊಳಗೆ ಬಿಟ್ಟು ತಾನು ಮಾತ್ರ ಹೊರಕ್ಕೆ ಹೋಗಲಾರದೆ ಸಂಕಟಪಡುತಿರುವನು. ಅಯ್ಯೋ! ಬಹು ಖೇದಕರವು! ಈ ಪ್ರಪಂಚದಲ್ಲಿ ಪ್ರಾಣಿಗಳಿಗೆ ಸ್ನೇಹವೆಂಬ ಬಲೆಯು, ಎಂತಹ ಸಮಯದಲ್ಲಿಯೂ ಕತ್ತರಿಸಲಸಾಧ್ಯವಾಗಿರುವುದು ॥ ೪೮ ॥

ಅತ್ತಲಾಗಿ ಆ ಆನೆಯು, ಉರಿಯುತಿರುವ ಮರವನ್ನು ವೇಗದಿಂದ ಕಿತ್ತುಕೊಂಡು,

---

1. ಪನ್ನಂ=ಪತಿತಂ ಯಥಾತಥಾ ಗಚ್ಛನ್ತೀತಿ ಪನ್ನಗ್ಯಃ ; ತಾಃ. ಆನಭುಗ್ನಾಃ ವೃಕ್ಷಶಾಖಾಇತ್ಯರ್ಥಃ.

ಪ್ಲುಷ್ಟಪುಷ್ಕರಕಃ ಕೋಪಾತ್ ಮಗ್ನಃ ಪುಷ್ಕರದಂ ಸರಃ ‖೪೯‖
ಧೂಮೋಮ್ಬುದಪದಂ ಪ್ರಾಪ್ಯ ವಿಲೋಲಾನ್ತಸ್ತಟಿಲ್ಲತಃ ।
ಜ್ವಲದಗ್ನಿರನಾರಾಚನಿಕರಂ ಪರಿವರ್ಷತಿ ‖೫೦‖
ದೇವ ಧೂಮಃ ಸ್ಫುರದ್ವಹ್ನಿಕಣ ಆವರ್ತವೃತ್ತಿಮಾನ್ ।
ಸ್ಥಿತಆಪೀಡವಾನ್ ವ್ಯೋಮ್ನಿ ರತ್ನಪೂರ್ಣಇವಾರ್ಣವಃ ‖೫೧‖
ಗೌರಮಮ್ಬರಮಾಭಾತಿ ಜ್ವಾಲಾಶಿಖರತೇಜಸಾ ।
ಮೃತ್ಯನೇವೋತ್ಸವೇ ದತ್ತಃ ಕುಙ್ಕುಮಾಕ್ತಕರಣ್ಡಕಃ ‖೫೨‖
ಅಹೋ ನು ವಿಷಮಂ ಚೇದಂ ವರ್ತತೇ ವೃತ್ತವರ್ಜಿತಮ್ ।
ಧ್ರಿಯನ್ತೇ ರಾಜನಾರ್ಯೋಪಿ ವೈರಿವೀರೈರುದಾಯುಧೈಃ ‖೫೩‖
ಲೋಲಸ್ರಗ್ದಾಮಕುಸುಮೈಃ ಮಾರ್ಗೇಪ್ರಾಕಾರಕಾರಕೈಃ ।
ಅರ್ಧನಿರ್ದಗ್ಧಕಬರೀಕೀರ್ಣವಕ್ಷಸ್ಸ್ಥಲಸ್ತನಾಃ ‖೫೪‖
ಆಲೋಲಾಮ್ಬರಸಂಲಕ್ಷ್ಯನಿತಮ್ಬಜಘನಸ್ಥಲಾಃ ।

ತನ್ನ (೧) ಪುಷ್ಕರವು ಸುಟ್ಟುಹೋದಕಾರಣ, ಪುಷ್ಕರವನ್ನು ಕೊಡಲು ಸಮರ್ಥವಾದ ಸರಸ್ಸಿನಲ್ಲಿ ಮುಣುಗಿಕೊಂಡಿತು ‖ ೪೯ ‖

ಈ ಪಟ್ಟಣದಲ್ಲಿ ಹುಟ್ಟಿದ ಹೊಗೆಯು, ಮೇಘಪದವಿಯನ್ನು ಹೊಂದಿ, ಒಳಗಡೆ ಅಗ್ನಿಜ್ವಾಲೆಗಳೆಂಬ ವಿದ್ಯುಲ್ಲತೆಯುಳ್ಳದಾಗಿ, ಜಾಜ್ವಲ್ಯಮಾನವಾದ ಅಗ್ನಿಬಾಣಸಮೂಹವನ್ನು ವರ್ಷಿಸುತಿರುವುದು ‖೫೦‖

ಸ್ವಾಮಿ! ಇತ್ತಲಾಗಿ ಈ ಹೊಗೆಯು, ಪ್ರಕಾಶಮಾನವಾದ ಅಗ್ನಿಕಣವುಳ್ಳದಾಗಿ, ಸುಳಿಯಂತೆ ಗುಂಡಾಗಿ ಸುತ್ತುತ, ವಹ್ನಿಶಿಖಾಸಮುದಾಯವುಳ್ಳದಾಗಿ, ಅಂತರಿಕ್ಷದಲ್ಲಿ ರತ್ನಪರಿಪೂರ್ಣವಾದ ಸಮುದ್ರದಂತೆ ಕಾಣಿಸುತಿರುವುದು ‖೫೧‖

ಶುಭ್ರವಾಗಿದ್ದ ಅಂತರಿಕ್ಷಪ್ರದೇಶವು, ಅಗ್ನಿಜ್ವಾಲಾಶಿಖೆಗಳಿಂದ ಕೆಂಪಾದುದಾಗಿ, ಮೃತ್ಯುದೇವರಿಂದ ಈ ಉತ್ಸವಕಾಲದಲ್ಲಿ ದಿಗ್ವಧುಗಳಿಗೆ ಕೊಡಲ್ಪಟ್ಟ ಕುಂಕುಮದ ಭರಣಿಯೋ ಎಂಬಂತೆ ಪ್ರಕಾಶಿಸುತ್ತಿರುವುದು ‖೫೨‖

ಅಯ್ಯೋ! ಇತ್ತಕಡೆ ಬಹುವಿಷಮವಾದ ಸಂದರ್ಭವು ನಡೆಯುತ್ತಿರುವುದು! ಏನೆಂದರೆ,—ಇಲ್ಲಿ ಅಂತಃಪುರಸ್ತ್ರೀಯರನ್ನೂ ಕೂಡ, ಆಯುಧವೆತ್ತಿಹಿಡಿದಿರುವ ಶತ್ರುಪಕ್ಷವೀರರು ಹಿಡಿದುಕೊಳ್ಳುತಿರುವರು ‖೫೩‖

ಈ ಸ್ತ್ರೀಯರ ಅವಸ್ಥೆಯನ್ನು ನೋಡುವುದಕ್ಕಾಗಲಾರದು! ಇವರ ತಲೆಯಲ್ಲಿರುವ ಪುಷ್ಪಮಾಲಿಕೆಗಳೂ, ಕಂಠದಲ್ಲಿರುವ ಸರಗಳೂ, ಮಾರ್ಗದಲ್ಲೆಲ್ಲ ಚೆಲ್ಲಿರುವುವು. ಅರ್ಧವಾಗಿ ಸುಟ್ಟುಹೋಗಿರುವ ಕೇಶಪಾಶಗಳು, ವಕ್ಷಸ್ಥಳವನ್ನೂ ಸ್ತನಗಳನ್ನೂ ಆಚ್ಛಾದಿಸುತಿರುವುವು ‖೫೪‖

ಈ ಸ್ತ್ರೀಯರ ವಸ್ತ್ರಗಳು ಚಂಚಲವಾಗಿ ಹಾರಾಡುತಿರುವುದರಿಂದ, ಇವರ ನಿತಂಬ

---

೧ ಪುಷ್ಕರ= ಸುಂಡಿಲಿನ ತುದಿ, ಮತ್ತು ಕಮಲ.

ಪತನ್ಮಾಣಿಕ್ಯವಲಯವಲಿತಾವನಿಮಣ್ಡಲಾಃ ||೫೫||
ಛಿನ್ನಹಾರಲತಾಜಾಲವಿಕೀರ್ಣಾಮಲಮೌಕ್ತಿಕಾಃ |
ದೃಷ್ಟಾದೃಷ್ಟಸ್ತನಶ್ರೇಣೀಪಾರ್ಶ್ವೋದ್ಯತ್ಕನಕಪ್ರಭಾಃ || ೫೬ ||
ಕುರರೀಕರ್ಕಶಾಕ್ರನ್ದಮನ್ದೀಕೃತರಣಾರವಾಃ |
ಧಾರಾವಾಹಾಸ್ರುತಾರಾವಭಿನ್ನಪಾರ್ಶ್ವವಿಚೇತನಾಃ ||೫೭||
ರಕ್ತಕರ್ದಮಬಾಷ್ಪಾಮ್ಬುಕ್ಲಿನ್ನಗ್ರನ್ಥಿತವಾಸಸಃ |
ಭುಜಮೂಲಾರ್ಪಿತಭುಜೈಃ ನೀಯಮಾಲಾಬಲಾನ್ನೃಭಿಃ ||೫೮||
ಕಇವಾಸ್ಮಿನ್ ಪರಿತ್ರಾತಾ ಸ್ಯಾದಿತ್ಯಾದೀನವೀಕ್ಷಿತೈಃ |
ಉತ್ಪಲಾನೀವ ವರ್ಷದ್ಭಿಃ ಪರಿರೋದಿತಸೈನಿಕಾಃ ||೫೯||
ಮೃಣಾಳಕೋಮಲಾಚ್ಛೋರುಮೂಲಜಾಲೈಃ ಸುನಿರ್ಮಲೈಃ |
ಸ್ವಚ್ಛಾಮ್ಬರತಲಾಲಕ್ಷ್ಯೈಃ ಆಕಾಶನಳಿನೀನಿಭಾಃ ||೬೦||

ಜಘನಗಳು ದೃಷ್ಟಿಗೋಚರವಾಗುತಿರುವುವು. ಇವರ ಕೈಲಿದ್ದ ಮಾಣಿಕ್ಯರತ್ನಖಚಿತವಾದ ಬಳೆಗಳು ಬಿದ್ದು ಭೂಮಿಯನ್ನೆಲ್ಲ ಆವರಿಸಿಕೊಂಡಿರುವುವು ||೫೫||

ಇವರ ಕತ್ತಿನಲ್ಲಿದ್ದ ಮುಕ್ತಾಸರಗಳು ಕಿತ್ತುಹೋಗಿ, ಶುಭ್ರವಾದ ಮುತ್ತುಗಳು ಅಲ್ಲೆಲ್ಲ ಎರಚಿರುವುವು. ಕಂಡೂ ಕಾಣದೆಯೂ ಇರುವ ಇವರ ಸ್ತನಪಂಕ್ತಿಗಳ ಪಾರ್ಶ್ವ ಭಾಗದಲ್ಲಿ ದಿವ್ಯವಾದ ಸುವರ್ಣಕಾಂತಿಯುದ್ಭವಿಸುತಿರುವುದು ||೫೬||

ಇವರು ಹೆಣ್ಣುಗುಬ್ಬಚ್ಚಿಗಳಂತೆ ಗಟ್ಟಿಯಾಗಿ ಅಳುತ, ತಮ್ಮ ರೋದನಧ್ವನಿಯಿಂದ ಯುದ್ಧರಂಗದ ಇತರಶಬ್ದಗಳನ್ನೆಲ್ಲ ಮಂದವಾಗಿ ಮಾಡಿರುವರು. ಧಾರಾಪ್ರವಾಹವಾಗಿ ಕಿರಿಚಿಕೊಳ್ಳುತಿರುವುದರಿಂದ, ಇವರ ಅಳ್ಳೆಯು ಒಡೆದುಹೋಗಿ, ಇವರು ಜ್ಞಾನತಪ್ಪಿ ಬಿದ್ದು ಬಿಟ್ಟಿರುವರು ||೫೭||

ಇವರು ಉಟ್ಟುಕೊಂಡಿರುವ ವಸ್ತ್ರಗಳು ರಕ್ತಕರ್ದಮ (ಕೆಸರು) ದಿಂದಲೂ ಬಾಷ್ಪೋದಕದಿಂದಲೂ ನೆನೆದು ಹೋಗಿ ಜಾರಿಬೀಳುತಿರುವುದರಿಂದ, ಅವುಗಳನ್ನು ಇವರು ಸರಿಯಾಗಿ ಕಟ್ಟಿಕೊಳ್ಳುತಿರುವರು. ಇವರನ್ನು ಪುರುಷರು ಕೊಂಕುಳಿನಲ್ಲಿ ತಮ್ಮ ತೋಳುಗಳಿಂದ ಹಿಡಿದುಕೊಂಡು ಬಲಾತ್ಕಾರವಾಗಿ ಹೊತ್ತುಕೊಂಡು ಹೋಗುತಿರುವರು ||೫೮||

'ಇಂತಹ ಕಷ್ಟದಶೆಯಲ್ಲಿ ನಮ್ಮನ್ನು ಕಾಪಾಡತಕ್ಕವನಾರಿರುವನು ?' ಎಂಬುದಾಗಿ ಹೇಳುತ, ಉತ್ಪಲಪುಷ್ಪಗಳನ್ನು ವರ್ಷಿಸುತವೆಯೋ ಎಂಬಂತೆ ಕಾಣುವ ತಮ್ಮ ಅತಿ ದೀನವಾದ ದರ್ಶನಗಳಿಂದ ಅಲ್ಲಿರುವ ಸೈನಿಕರೆಲ್ಲರಿಗೂ ಅಳುವುಂಟುಮಾಡುತಿರುವರು ||೫೯||

ಇವರ ನಿರ್ಮಲವಾದ ವಸ್ತ್ರದೊಳಗಡೆ, ಮೃಣಾಳಕೋಮಲವಾದ ಶುಭ್ರವಾದ ಇವರ ತೊಡೆಗಳು ಕಾಣುತಿರುವುದರಿಂದ, ಇವರು ಆಕಾಶದಲ್ಲಿ ಹುಟ್ಟಿದ ಕಮಲಲತೆಯಂತೆ ಕಾಣುತಿರುವರು ||೬೦||

ಆಲೋಲಮಾಲ್ಯವಸನಾಭರಣಾಙ್ಗರಾಗಾಃ
ಬಾಷ್ಪಾಕುಲಾತತಚಲಾಲಕವಲ್ಲರೀಕಾಃ ।
ಆನನ್ದಮನ್ದರನಿರನ್ತರಮಥ್ಯಮಾನಾತ್
ಕಾಮಾರ್ಣವಾತ್ ಸಮುದಿತಾಇವ ರಾಜಲಕ್ಷ್ಮ್ಯಃ ॥೬೧॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಅಗ್ನಿದಗ್ಧಗೃಹಾದಿವರ್ಣನಂ
ನಾಮ ತ್ರಿಚತ್ವಾರಿಂಶಃ ಸರ್ಗಃ.

ಈ ಸ್ತ್ರೀಯರ, ಮಾಲಿಕೆ ವಸ್ತ್ರ ಆಭರಣ ಅಂಗರಾಗ (ಮೈಗೆ ಹಚ್ಚಿಕೊಂಡಿರುವ ಗಂಧ)—ಇವುಗಳೆಲ್ಲವೂ ವ್ಯತ್ಯಾಸಹೊಂದಿ ಬಿದ್ದಿರುವುವು. ಇವರ ಅಲಕಲತೆಗಳು, ಚಂಚಲವಾಗಿ ಬಿದ್ದುಹೋಗಿ, ಕಣ್ಣೀರಿನಿಂದ ನೆನೆಯಿಸಲ್ಪಟ್ಟಿರುವುವು. ಇವರ ಸೌಂದರ್ಯಾತಿಶಯವನ್ನು ನೋಡಿದರೆ, ಆನಂದವೆಂಬ ಮಂದರಪರ್ವತದಿಂದ ಕಡೆಯಲ್ಪಟ್ಟ ಮನ್ಮಥನೆಂಬ ಕ್ಷೀರಸಮುದ್ರದಲ್ಲಿ ಹುಟ್ಟಿರುವ ರಾಜಲಕ್ಷ್ಮಿಯರೋ ಎನ್ನುವಹಾಗೆ ತೋರುವುದು. ಇತ್ಯಾದಿರೂಪವಾಗಿ ಆ ಪಟ್ಟಣಿಗರು ವಿಲಾಪಮಾಡುತಿದ್ದುದನ್ನು, ಅರಮನೆಯ ಉಪ್ಪರಿಗೆಯಲ್ಲಿ ನಿಂತು ನೋಡುತಿರುವ ಆ ವಿದೂರಥನು ಕೇಳಿದವನಾದನು ॥೬೧॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಅಗ್ನಿದಗ್ಧಗೃಹಾದಿವರ್ಣನೆ
ಯೆಂಬ ನಾಲ್ವತ್ತುಮೂರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಚತುಶ್ಚತ್ವಾರಿಂಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಏತಸ್ಮಿನ್ನನ್ತರೇ ರಾಜಮಹಿಷೀ ಮತ್ತಯೌವನಾ ।
ತದ್ವಿವೇಶ ಗೃಹಂ ಲಕ್ಷ್ಮೀರಿವ ಪಙ್ಕಜಕೋಟರಮ್ ॥೧॥
ಆಲೋಲಮಾಲ್ಯವಸನಾ ಭಿನ್ನಹಾರಲತಾಕುಲಾ ।
ಅನುಯಾತಾ ವಯಸ್ಯಾಭಿಃ ದಾಸೀಭಿರ್ಭಯವಿಹ್ವಲಾ ॥೨॥
ಚನ್ದ್ರಾನನಾವದಾತಾಙ್ಗೀ ಶ್ವಾಸೋತ್ಕಮ್ಪಿಪಯೋಧರಾ ।
ತಾರಕಾಕಾರದಶನಾ ಸ್ಥಿತಾ ದ್ಯೌರಿವ ರೂಪಿಣೀ ॥೩॥

ಉತ್ಪತ್ತಿಪ್ರಕರಣದಲ್ಲಿ ನಾಲ್ವತ್ತುನಾಲ್ಕನೆಯ ಸರ್ಗವು.

ಭೀತಾಂ ವಿಲೋಕ್ಯ ಮಹಿಷೀಂ ಶ್ರುತ್ವಾನ್ತಃಪುರಧರ್ಷಣಮ್ ।
ಯುದ್ಧಾಯ ರಾಜ್ಞೋ ನಿರ್ಯಾಣಂ ಲೀಲಾತತ್ತ್ವಂ ಚ ವರ್ಣ್ಯತೇ ॥

ಭೀತಳಾದ ಮಹಿಷಿಯನ್ನು ನೋಡಿ—ಅಂತಃಪುರದಲ್ಲಿ ಶತ್ರುಗಳು ಮಾಡುತಿರುವ ಕೊಳ್ಳೆಯನ್ನೂ ಕೇಳಿ—ಆ ವಿದೂರಥನು ಯುದ್ಧಕ್ಕೋಸ್ಕರ ಹೊರಡುವಿಕೆಯೂ, ಲೀಲಾದೇವಿಯ ತತ್ವವೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು :—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಆ ವಿದೂರಥನು ಮಂತ್ರಿ ಮುಂತಾದವರೊಡನೆ ಆ ಪಟ್ಟಣದ ಸ್ಥಿತಿಯನ್ನು ನೋಡುತ ಜನಗಳ ವಿಲಾಪವನ್ನು ಕೇಳುತಿರುವಾಗಲೇ, ಯೌವನಮತ್ತಗಳಾಗಿರುವ ಅವನ ಮಹಿಷಿಯು, ಲಕ್ಷ್ಮಿಯು ಕಮಲಗೃಹವನ್ನು ಪ್ರವೇಶಿಸುವಂತೆ, ಆ ವಿದೂರಥಾದಿಗಳಿದ್ದ ಪ್ರಾಸಾದವನ್ನು ಪ್ರವೇಶಿಸಿದಳು ॥೧॥

ಅವಳು ಅಲ್ಲಿಗೆ ಬರುವಕಾಲದಲ್ಲಿ, ಅವಳ ಪುಷ್ಪಮಾಲಿಕೆಯೂ ವಸ್ತ್ರವೂ ವ್ಯತ್ಯಾಸವಾಗಿ ಜೋಲಾಡುತಿದ್ದುವು; ಅವಳ ಮುಕ್ತಾಸರಲತೆಯು, ವ್ಯಾಕುಲವಾಗಿ ಕಿತ್ತುಹೋಗಿದ್ದಿತು. ಅವಳು, ತನ್ನ ಸಖಿಯರೊಡನೆಯೂ ದಾಸಿಯರೊಡನೆಯೂ ಅನುಸೃತಳಾಗಿ ಕೇವಲ ಭಯಚಕಿತಳಾಗಿ ಬರುತಿದ್ದಳು ॥೨॥

ಅವಳ ಮುಖವು ಚಂದ್ರನಂತೆ ಶೋಭಿಸುತಲೂ, ದೇಹವು ಶುಭ್ರವಾಗಿಯೂ ಇದ್ದುವು; ಅವಳ ಸ್ತನಗಳು, ನಿಟ್ಟುಸುರಿನಿಂದ ಮೇಲ್ಮುಖವಾಗಿ ಕಂಪಿಸುತಿದ್ದುವು. ಅವಳ ಹಲ್ಲುಗಳು ನಕ್ಷತ್ರಗಳಂತೆ ಶೋಭಿಸುತಿರುವುದರಿಂದ, ಅಂತರಿಕ್ಷಲಕ್ಷ್ಮಿಯೇ ಶರೀರಗ್ರಹಣಮಾಡಿ ಬಂದಿರುವಂತೆ ಅವಳು ಕಾಣುತಿದ್ದಳು ॥೩॥

ಅಥ ತಸ್ಯಾವಯಸ್ಯೈಕಾ ರಾಜಾನಾಂ ತಂ ವ್ಯಜಿಜ್ಞಪತ್ |
ಭೂತಸಙ್ಗ್ರಾಮಸಂರಬ್ಧಂ ಅಮರೇನ್ದ್ರಮಿವಾಪ್ಸರಾಃ ‖೪‖
ದೇವ ದೇವೀ ಸಹಾಸ್ಮಾಭಿಃ ಪಲಾಯ್ಯಾನ್ತಃಪುರಾನ್ತರಾತ್ |
ಶರಣಂ ದೇವಮಾಯಾತಾ ವಾತಾರ್ತೇವ ಲತಾ ದ್ರುಮಮ್ ‖೫‖
ರಾಜನ್ ದಾರಾಹೃತಾಸ್ತಾಸ್ತೇ ಬಲವದ್ಭಿರುದಾಯುಧೈಃ |
ಊರ್ಮಿಜಾಲೈರ್ಮಹಾಬ್ಧೀನಾಂ ತೀರದ್ರುಮಲತಾಇವ ‖೬‖
ಅನ್ತಃಪುರಾಧಿಪಾಃ ಸರ್ವೇ ಪಿಷ್ಟಾಃ ಶತ್ರುಭಿರುದ್ಧತೈಃ |
ಅಶಙ್ಕಿತಾಭಿಪತಿತೈಃ ವಾತೈರಿವ ವರದ್ರುಮಾಃ ‖೭‖
ದೂರೇಣಾಶಙ್ಕಮಾಯಾತೈಃ ಪರೈರ್ನಃ ಪುರಮಾಹೃತಮ್ |
ರಾತ್ರೌ ವರ್ಷಾಸ್ವಿವೋದ್ಘೋಷೈಃ ಕಮಲಾನೀವ ವಾರಿಭಿಃ ‖೮‖
ಧೂಮಂ ವರ್ಷದ್ಭಿರುನ್ನಾದೈಃ ಲೇಲಿಹಾನೋಗ್ರಹೇತಿಭಿಃ |
ವಹ್ನಿಭಿರ್ನಃ ಪುರಂ ಪ್ರಾಪ್ತಂ ಪರಯೋಧೈಶ್ಚ ಭೂರಿಭಿಃ ‖೯‖

ಇಂತಹ ಮಹಿಷಿಯು ಅಲ್ಲಿಗೆ ಬಂದಬಳಿಕ, ಭೂತಗ್ರಾಮಯುದ್ಧದಲ್ಲಿ ಸಿದ್ಧನಾಗಿರುವ ದೇವೇಂದ್ರನನ್ನು ಕುರಿತು ಅಪ್ಸರಸ್ತ್ರೀಯು ಹೇಳುವಂತೆ, ಆ ವಿದೂರಥರಾಜನನ್ನು ಕುರಿತು ಅವನ ಪಟ್ಟಮಹಿಷೀಸಖಿಯೊಬ್ಬಳು ಈ ರೀತಿಯಾಗಿ ವಿಜ್ಞಾಪಿಸಿಕೊಂಡಳು ॥೪॥

ದೇವ! ಈ ದೇವಿಯು, ನಮ್ಮೊಡನೆ ಅಂತಃಪುರಮಧ್ಯದಿಂದ ಓಡಿಬಂದು, ವಾತವೇಗಪೀಡಿತವಾದ ಲತೆಯು ವೃಕ್ಷವನ್ನಾಶ್ರಯಿಸುವಂತೆ, ತಮ್ಮನ್ನು ಶರಣಹೊಂದಿರುವಳು॥

ದೊರೆಯೆ! ಅಂತಃಪುರದಲ್ಲಿ ನಡೆಯುತಿರುವ ಅತ್ಯಾಚಾರವನ್ನು ಏನೆಂದು ಹೇಳಲಿ! ಮಹಾಸಮುದ್ರಗಳ ತರಂಗಸಮೂಹಗಳು ತೀರದಲ್ಲಿರುವ ವೃಕ್ಷಗಳನ್ನೂ ಲತೆಗಳನ್ನೂ ಅಪಹರಿಸಿಬಿಡುವಂತೆ, ಆಯುಧವನ್ನು ಎತ್ತಿ ಹಿಡಿದುಕೊಂಡಿರುವ ಬಲಿಷ್ಠರಾದ ಶತ್ರುಭಟರು ನಿನ್ನ ಆ ಲೋಕೋತ್ತರರಾದ ಪತ್ನಿಯರನ್ನೆಲ್ಲ ಅಪಹರಿಸಿಬಿಟ್ಟರು ॥೬॥

ನಮ್ಮ ಅಂತಃಪುರದಲ್ಲಿದ್ದ ಅಧಿಕಾರಿಗಳೆಲ್ಲರೂ, ಮಹಾವಾಯುವಿನಿಂದ ವೃಕ್ಷಗಳು ಚೂರ್ಣೀಕೃತವಾಗುವಂತೆ, ಗೊತ್ತಿಲ್ಲದೆ ತಟ್ಟನೆ ಒಳಕ್ಕೆ ನುಗ್ಗಿದ ಉದ್ಧತರಾದ ಶತ್ರುಗಳಿಂದ ಚೂರ್ಣಮಾಡಲ್ಪಟ್ಟರು ॥೭॥

ವರ್ಷಾಕಾಲದಲ್ಲಿ ಅತಿಯಾಗಿ ಗರ್ಜಿಸುತಿರುವ ಜಲಪ್ರವಾಹಗಳು ಕಮಲಗಳನ್ನು ಅಪಹರಿಸುವಂತೆ, ರಾತ್ರಿಯಲ್ಲಿ ದೂರದಿಂದ ನಿಶ್ಶಂಕವಾಗಿ ಬಂದುಬಿಟ್ಟಿರುವ ಶತ್ರುಗಳು ನಮ್ಮ ಪಟ್ಟಣವನ್ನು ಅಪಹರಿಸಿಬಿಟ್ಟರು ॥೮॥

ಧೂಮವನ್ನು ವರ್ಷಿಸುತಲೂ ಗಟ್ಟಿಯಾಗಿ ಶಬ್ದಮಾಡುತಲೂ ಅತಿಚಂಚಲವಾಗಿ ಕ್ರೂರವಾಗಿರುವ ಜ್ವಾಲೆಗಳನ್ನು ಧರಿಸಿಕೊಂಡೂ ಇರುವ ಅಗ್ನಿಯು, ಗುಂಪುಗುಂಪಾಗಿ ನಮ್ಮ ಪಟ್ಟಣವನ್ನು ವ್ಯಾಪಿಸಿಬಿಟ್ಟಿರುವುದು; ಮತ್ತು ಅನೇಕರಾದ ಯೋಧರೂಕೂಡ, ಅತಿಯಾಗಿ ಸಿಂಹನಾದಮಾಡುತ, ಕ್ರೂರವಾದ ಆಯುಧಗಳನ್ನು ಝಳಪಿಸುತ, ಈ ಪಟ್ಟಣವನ್ನು ಮುತ್ತಿಕೊಂಡಿರುವರು ॥೯॥

ಪರಿವಾರೈರ್ವಿಲಾಸಿನ್ಯೋ ದೇವ್ಯಆಹೃತ್ಯ ಮೂರ್ಧಜೈಃ ।
ಆಕ್ರನ್ದನ್ತ್ಯೋ ಬಲಾನ್ನೀತಾಃ ಕುರರ್ಯ ಇವ ಧೀವರೈಃ ॥೧೦॥
ಇತಿ ನೋ ಯೇಯಮಾಯಾತಾ ಶಾಖಾಪ್ರಸರಶಾಲಿನೀ ।
ಆಪತ್ ತಾಮುಲಮುದ್ಧರ್ತುಂ ದೇವಸ್ಯೈವಾಸ್ತಿ ಶಕ್ತತಾ ॥೧೧॥
ಇತ್ಯಾಕರ್ಣ್ಯಾವಲೋಕ್ಯಾಸೌ ದೇವ್ಯೌ ಯುದ್ಧಾಯ ಯಾಮ್ಯತಃ ।
ಕ್ಷಮ್ಯತಾಂ ಮಮ ಭಾರ್ಯೇಯಂ ಯುಷ್ಮತ್ಪಾದಾಬ್ಜಷಟ್ಪದೀ ॥೧೨॥
ಇತ್ಯುಕ್ತ್ವಾ ನಿರ್ಯಯೌ ರಾಜಾ ಕೋಪಾರುಣಿತಲೋಚನಃ ।
ಮತ್ತೇಭನಿರ್ಭಿನ್ನವನಃ ಕನ್ದರಾದಿವ ಕೇಸರೀ ॥೧೩॥
ಲೀಲಾ ಲೀಲಾಂ ದದರ್ಶಾಥ ಸ್ವಾಕಾರಸದೃಶಾಕೃತಿಮ್ ।
ಪ್ರತಿಬಿಮ್ಬಮಿವಾಯಾತಾಂ ಆದರ್ಶೇ ಚಾರುಲೋಚನಾಮ್ ॥೧೪॥

ಪ್ರಬುದ್ಧಲೀಲೋವಾಚ.

ಶತ್ರುಪರಿವಾರದ ಜನರುಗಳು, ವಿಲಾಸಯುಕ್ತರಾಗಿದ್ದ ಅಂತಃಪುರಸ್ತ್ರೀಯರನ್ನು ಕೂದಲುಹಿಡಿದು ಎಳೆಯುತ, ಅವರು ಅಳುತ್ತಿದ್ದರೂ ಲಕ್ಷ್ಯಮಾಡದೆ, ವ್ಯಾಧರು ಹೆಣ್ಣು ಪಕ್ಷಿಗಳನ್ನು ತೆಗೆದುಕೊಂಡುಹೋಗುವಂತೆ, ಬಲಾತ್ಕಾರಪೂರ್ವಕವಾಗಿ ಎಳೆಗುಕೊಂಡು ಹೋದರು ॥೧೦॥

ಮಹಾಪ್ರಭೋ! ಈ ರೀತಿಯಾಗಿ ಪುಂಖಾನುಪುಂಖವಾಗಿ ನಮಗೆ ಯಾವುದೊಂದು ವಿಪತ್ತು ಬಂದಿರುವುದೋ, ಅದನ್ನು ಸಂಪೂರ್ಣವಾಗಿ ನಿವಾರಣೆಮಾಡುವುದಕ್ಕೆ ತಮಗೊಬ್ಬರಿಗೇ ಶಕ್ತಿಯಿರುವುದು.—ಎಂದು ಆ ಪಟ್ಟಮಹಿಷಿಯ ಸಖಿಯು ವಿಜ್ಞಾಪಿಸಿದಳು ॥೧೧॥

ವತ್ಸ! ರಾಮ! ಹೀಗೆ ಆ ಸ್ತ್ರೀಯು ಹೇಳಿದುದನ್ನು ಕೇಳಿ ಆ ವಿದೂರಥನು, ಸುತ್ತಲೂ ನೋಡಿದವನಾಗಿ, ಆ ಲೀಲಾಸರಸ್ವತಿಯರನ್ನು ಕುರಿತು—'ಎಲೌ ದೇವಿಯರೆ! ಇಂತಹ ವಿಷಮಸಂದರ್ಭವೊದಗಿರುವುದರಿಂದ, ನಾನು ಯುದ್ಧಾರ್ಥವಾಗಿ ಹೊರಡುವೆನು; ನಿಮ್ಮನ್ನು ಹೀಗೆಯೇ ಬಿಟ್ಟು ಹೊರಡುವ ನನ್ನ ಅಪರಾಧವನ್ನು ಕ್ಷಮಿಸಬೇಕು. ಈ ನನ್ನ ಪತ್ನಿಯು, ನಿಮ್ಮ ಪಾದಗಳೆಂಬ ಕಮಲದಲ್ಲಿ ದುಂಬಿಯಾಗಿರುವಳು (ನಿಮ್ಮ ಪಾದಕ್ಕೆ ಸಮರ್ಪಿಸಿರುವೆನು)'-ಎಂದು ಹೇಳಿ, ಮದ್ದಾನೆಯಿಂದ ತನ್ನ ವನವು ಮುರಿಯಲ್ಪಟ್ಟಾಗ ಸಿಂಹವು ಗುಹೆಯಿಂದ ಹೊರಡುವಹಾಗೆ, ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, ಆ ಪ್ರಾಸಾದಭೂಮಿಯಿಂದ ಹೊರಟುಬಿಟ್ಟನು ॥೧೨—೧೩॥

ಆ ವಿದೂರಥನು ಯುದ್ಧಾರ್ಥವಾಗಿ ಹೊರಟುಹೋದ ಬಳಿಕ, ಸರಸ್ವತಿಯೊಡನೆ ಮೊದಲು ಬಂದಿದ್ದ ಲೀಲೆಯು, ತನ್ನ ಆಕಾರಕ್ಕೆ ಸಮಾನವಾದ ಆಕಾರವುಳ್ಳವಳಾಗಿ ಪ್ರತಿಬಿಂಬದಂತಿರುವ ಚಾರುನೇತ್ರೆಯಾದ ಮತ್ತೊಬ್ಬ ಲೀಲೆಯನ್ನು ಕಂಡಳು ॥೧೪॥

ಹೀಗೆ ನೋಡಿದಮೇಲೆ, ಆ (೧) ಪ್ರಬುದ್ಧಲೀಲೆಯು, ಸರಸ್ವತಿಯನ್ನು ಕುರಿತು ಹೇಳುವಳು: —

---

(೧) ಇಲ್ಲಿ ಸರಸ್ವತೀ ದೇವಿಯೊಡನೆ ಬಂದಿದ್ದ ಲೀಲೆಯು ತತ್ವಜ್ಞಾನಪಡೆದಿರುವಕಾರಣ, ಪ್ರಬುದ್ಧಲೀಲೆಯೆಂದು ವ್ಯವಹರಿಸಲ್ಪಡುವಳು; ಅವಳೇ ಜನ್ಮಾಂತರವೆತ್ತಿ ಪೂರ್ವದಲ್ಲಿ ಪದ್ಮರಾಜನಾಗಿದ್ದ ವಿದೂರಥನಿಗೆ ಪತ್ನಿಯಾಗಿರುವಕಾರಣ, ಇವಳಿಗೂ ಲೀಲೆಯೆಂದೇ ವ್ಯವಹಾರವಿರುವುದು.

ಕಿಮಿದಂ ದೇವಿ ಹೇ ಬ್ರೂಹಿ ಕಸ್ಮಾದಿಯಮಹಂ ಸ್ಥಿತಾ |
ಯಾ ಸಾಭವಮಹಂ ಪೂರ್ವಂ ಕಥಂ ಸೇಯಮಹಂ ಸ್ಥಿತಾ ||೧೫||
ಮನ್ತ್ರಿಪ್ರಭೃತಯಃ ಪೌರಾಃ ಯೋಧಾಃ ಸಬಲವಾಹನಾಃ |
ಸರ್ವಏವ ತಏವೇಮೇ ಸ್ಥಿತಾಸ್ತತ್ರ ತಥೈವ ತೇ ||೧೬||
ತತ್ರಾಪೀಹ ಚ ಹೇದೇವಿ ಸರ್ವೇ ಕಥಮವಸ್ಥಿತಾಃ |
ಬಹಿರನ್ತಶ್ಚ ಮುಕುರೇ ಇವೈತೇ ಕಿಂ ಪ್ರಚೇತನಾಃ ||೧೭||

ದೇವ್ಯುವಾಚ.

ಯಥಾ ಜ್ಞಪ್ತಿರುದೇತ್ಯನ್ತಃ ತಥಾನುಭವತಿ ಕ್ಷಣಾತ್ |
ಚಿತಿಶ್ಚೇತ್ಯಾರ್ಥತಾಮೇತಿ ಚಿತ್ತಂ ಚೇತ್ಯಾರ್ಥತಾಮಿವ ||೧೮||
ಯಾದೃಗರ್ಥಂ ಜಗದ್ರೂಪಂ ತತ್ರೈವೋದೇತಿ ತತ್ಕ್ಷಣಾತ್ |
ನ ದೇಶಕಾಲದೀರ್ಘತ್ವಂ ನ ವೈಚಿತ್ರ್ಯಂ ಪದಾರ್ಥಜಮ್ |
ಬಾಹ್ಯಮಾಭ್ಯನ್ತರಂ ಭಾತಿ ಸ್ವಪ್ನಾರ್ಥೋತ್ರ ನಿದರ್ಶನಮ್ ||೧೯||

ಹೇ ದೇವಿ! ಇದೇನು? ನೀನು ಅಪ್ಪಣೆಕೊಡು. ಇಲ್ಲಿ ಕಾಣುವ ಈ ಸ್ತ್ರೀಯು, ಏನುಕಾರಣ ನಾನಾಗಿರುವಳು? ನಾನು ಪೂರ್ವದಲ್ಲಿ ಯಾವ ವಯಸ್ಸಿನವಳಾಗಿದ್ದೆನೋ, ಈಗ ಈ ನನ್ನೆದುರಿಗಿರುವ ಶರೀರದಲ್ಲಿಯೂ ಅದೇ ವಯಸ್ಸುಳ್ಳವಳಾಗಿರುವೆನಲ್ಲವೆ! ಇದು ಹೇಗೆ? ||೧೫||

ಇದಿರಲಿ; ಈ ಮಂತ್ರಿ ಮೊದಲಾದವರೂ, ಪಟ್ಟಣಿಗರೂ, ಯೋಧರೂ, ಸೈನ್ಯ ವಾಹನ ಮುಂತಾದುವೂ, ಇವೆಲ್ಲವೂ ಪೂರ್ವದಲ್ಲಿದ್ದಂತೆಯೇ ಅವರವರೇ ಆಗಿರುವರಲ್ಲವೆ! ಇದು ಹೇಗೆ? ||೧೬||

ಒಂದು ದರ್ಪಣವನ್ನಿಟ್ಟದ್ದರೆ—ಅದಕ್ಕೆ ಸಮೀಪದಲ್ಲಿಟ್ಟ ಪದಾರ್ಥಗಳು ಅದರ ಹೊರಗೂ ಒಳಗೂ ಕಾಣುತಿರುವಂತೆ, ಇವರೆಲ್ಲರೂ ಅಲ್ಲಿಯೂ ಇಲ್ಲಿಯೂ ಸಮಕಾಲದಲ್ಲಿ ಏಕವಿಧವಾಗಿ ಇರುವರಲ್ಲವೆ! ಇದು ಹೇಗೆ? ಇವರು ಎರಡುಕಡೆಯಲ್ಲಿಯೂ ಸಚೇತನರಾಗಿಯೇ ಇರುವರೆ? ||೧೭||

ಹೀಗೆ ಪ್ರಶ್ನೆ ಮಾಡುತಿರುವ ಪ್ರಬುದ್ಧಲೀಲೆಯನ್ನು ಕುರಿತು, ಸರಸ್ವತೀದೇವಿಯು ಉತ್ತರ ಹೇಳುವಳು :—

ಎಲೌ! ಲೀಲೆ! ನೀನು ಈ ವಿಷಯದಲ್ಲಿ ಆಶ್ಚರ್ಯಪಡಬೇಕಾದುದಿಲ್ಲ. ಮನುಷ್ಯನಿಗೆ, ಒಳಗೆ ಯಾವವಿಧವಾಗಿ ಜ್ಞಾನವಾವಿರ್ಭವಿಸುವುದೋ, ಆ ವಿಧವಾದ ಅನುಭವವು ಒಂದು ಕ್ಷಣದೊಳಗಾಗಿ ಉಂಟಾಗುವುದು. ನಮ್ಮ ಚಿತ್ತವು ಒಂದು ಪದಾರ್ಥವನ್ನು ಸಂಕಲ್ಪಿಸಿಕೊಂಡರೆ—ಉತ್ತರತ್ರ ಆವಿಧವಾದ ಪದಾರ್ಥಾನುಭವವನ್ನೇ ಹೊಂದುವಂತೆ, ಚಿತ್ಪದಾರ್ಥವು ಯಾವವಿಧವಾದ ಚೇತನೀಯ ಪದಾರ್ಥವನ್ನು ಸಂಕಲ್ಪಿಸಿಕೊಂಡರೂ—ಆವಿಧವಾದ ಪದಾರ್ಥಾನುಭವವನ್ನು ಹೊಂದುವುದೆಂದು ತಿಳಿಯುವವಳಾಗು ||೧೮||

ಆ ಚಿತ್ತಿನಲ್ಲಿಯೂ ಚಿತ್ತದಲ್ಲಿಯೂ ಈ ಜಗದ್ರೂಪವು ಯಾವವಿಧವಾದ ಪದಾರ್ಥವುಳ್ಳದೆಂದು ಸಂಕಲ್ಪಿತವಾಗುವುದೋ, ಅಲ್ಲಿ ಆಕ್ಷಣವೇ ಆವಿಧವಾದ ಪದಾರ್ಥವುಳ್ಳದಾ

ಯದನ್ತಃ ಸ್ವಪ್ನಸಙ್ಕಲ್ಪಪುರಂ ಚ ಕಚನಂ ಚಿತೇಃ ।
ತದೇತದ್ಬಾಹ್ಯನಾಮ್ನೈವ ಸ್ವಭಾಸಾತ್ ಸತ್ ಸ್ಫುಟಂ ಸ್ಥಿತಮ್ ॥೨೦॥
ಯಾದೃಗ್ಭಾವೋ ಮೃತೋ ಭರ್ತಾ ತವ ತಸ್ಮಿಂಸ್ತದಾ ಪುರೇ ।
ತಾದೃಗ್ಭಾವಸ್ತಮೇವಾರ್ಥಂ ತತ್ರೈವ ಸಮುಪಾಗತಃ ॥೨೧॥
ಅನ್ಯಏವ ಹ್ಯಮೀ ಭೂತಾಃ ತೇಽಭ್ಯಸ್ತಾಸ್ತಾದೃಶಾಅಪಿ ।
ಸದ್ರೂಪಾಏವ ಚೈತಸ್ಯ ಸ್ವಪ್ನಸಙ್ಕಲ್ಪಸೈನ್ಯವತ್ ॥೨೨॥
ಅವಿಸಂವಾದಿಸರ್ವಾರ್ಥರೂಪಂ ಯದನುಭೂಯತೇ ।
ತಸ್ಯ ತಾವದ್ವದ ಕಥಂ ಕೀದೃಶೀ ವಾಪಿ ಸತ್ಯತಾ ॥೨೩॥

ಗಿಯೇ ಉತ್ಪನ್ನವಾಗುವುದು. ಹೀಗಿರುವುದರಿಂದ, ದೇಶಕಾಲಜನ್ಯವಾದ ವೈಪರೀತ್ಯವೂ ಪದಾರ್ಥನಿಷ್ಠವಾದ ಪರಸ್ಪರ ವೈಚಿತ್ರ್ಯವೂ ಇವೊಂದೂ ಇಲ್ಲ. ಈ ದೇಶ ಕಾಲ ಪದಾರ್ಥ ನಿಷ್ಠವಾದ ವ್ಯತ್ಯಾಸವು ವಾಸ್ತವ್ಯವಾಗಿದ್ದಪಕ್ಷದಲ್ಲಿ, ಇದರಿಂದ ಪರಸ್ಪರ ಸ್ವಭಾವ ವಿರೋಧ ತೋರಬಹುದಾಗಿದ್ದಿತು ; ಇದೇ ಅಸತ್ಯವಾಗಿರುವುದರಿಂದ, ಅಂತಹ ವಿರೋಧ ಶಂಕೆಗೇ ಅವಕಾಶವಿಲ್ಲ. ಚೈತನ್ಯದಲ್ಲಿ ಅಧ್ಯಸ್ತವಾಗಿರುವುದರಿಂದ ಆಭ್ಯಂತರವೆನ್ನಿಸಿಕೊಳ್ಳುವ ಆ ಜಗದ್ರೂಪವು, ಹೊರಗಡೆ ಇರುವಂತೆ ನಮಗೆ ತೋರುವುದು. ಈ ವಿಷಯದಲ್ಲಿ, ಸ್ವಪ್ನದೃಷ್ಟವಾದ ಪದಾರ್ಥವೇ ನಮಗೆ ನಿದರ್ಶನವೆಂದು ತಿಳಿಯಬೇಕು. ಸ್ವಪ್ನದಲ್ಲಿಯೂ ನಮ್ಮ ಮನಸ್ಸಿನಲ್ಲಿ ಉಂಟಾದ ನಾನಾವಿಧಪದಾರ್ಥಗಳೇ ಹೊರಗೆ ಕಾಣುವುವಲ್ಲದೆ, ಬಾಹ್ಯವಾದ ಪದಾರ್ಥಗಳೊಂದೂ ಸತ್ಯವಲ್ಲವಷ್ಟೆ ! ಹಾಗೆಯೇ ನಮ್ಮ ಮನಸ್ಸಿನಲ್ಲಿ ಕಲ್ಪಿತವಾಗಿ ಆತ್ಮನಲ್ಲಿ ಆರೋಪಿಸಲ್ಪಟ್ಟ ಈ ಜಗದ್ಭಾವವೇ ಹೊರಗೂ ಕಾಣಬರುವುದು ॥೧೯॥

ನಮ್ಮ ಮನಸ್ಸಿನೊಳಗೆ ಉಂಟಾಗುವ ಸ್ವಪ್ನ ಸಂಕಲ್ಪಪಟ್ಟಣಾದಿಗಳೂ ಆ ಚಿತ್ತಿನ ಪ್ರಕಾಶವೂ ಯಾವುದುಂಟೋ, ಅದೇ—ದೃಢತರಾಭ್ಯಾಸದಿಂದ ಬಾಹ್ಯಪ್ರಪಂಚವೆಂಬ ಹೆಸರುಳ್ಳುದಾಗಿ ಸತ್ಯವಾಗಿರುವಂತೆ ಏರ್ಪಡುವುದು ॥೨೦॥

ಹೀಗಿರುವುವರಿಂದ, ಈ ನಿನ್ನ ಗಂಡನು ಆಗ ಆ ಪಟ್ಟಣದಲ್ಲಿ ಯಾವವಿಧವಾದ ವಾಸನೆಯುಳ್ಳವನಾಗಿ ಮರಣಹೊಂದಿದನೋ, ಅದೇ ವಾಸನೆಯುಳ್ಳವನಾಗಿ ಆ ಪದಾರ್ಥವನ್ನೇ ಅಲ್ಲಿಯೇ ಹೊಂದಿಬಿಟ್ಟನು. ಹೀಗೆ ನಿನ್ನ ಪತಿಯು ಪೂರ್ವಜನ್ಮದವನೇ ಆಗಿರುವನು ॥೨೧॥

ಆದರೆ, ಇಲ್ಲಿ ಕಾಣುವ ಮಂತ್ರಿ ಮುಂತಾದ ಪ್ರಾಣಿಗಳು, ಪೂರ್ವದಲ್ಲಿದ್ದವರಂತೆಯೇ ಕಾಣುತಿದ್ದರೂ, ಇವರು ಬೇರೆಯಾದವರೆಂದೇ ತಿಳಿಯಬೇಕು. ಇವರೂ ಕೂಡ, ಆ ಸತ್ಪದಾರ್ಥವಾದ ಬ್ರಹ್ಮರೂಪರಾದವರೇಯೆ. ಆದರೆ, ಈ ದೊರೆಗೆ ಇವರು ಸ್ವಪ್ನಸಂಕಲ್ಪಗಳಲ್ಲಿ ಕಂಡ ಸೈನ್ಯದಂತೆ, ಈ ಸ್ಥಿತಿಯಲ್ಲಿ ಅಸತ್ಯವಾಗಿದ್ದರೂ ಸತ್ಯರೂಪರಾಗಿ ತೋರುವರು ॥೨೨॥

ಸ್ವಪ್ನದೃಷ್ಟವಾದ ಪದಾರ್ಥವು ಒಬ್ಬೊಬ್ಬರಿಗೆ ಒಂದೊಂದು ವಿಧವಾಗಿ ತೋರುವುದು ; ಜಾಗ್ರತ್ಕಾಲಿಕಪದಾರ್ಥವಾದರೋ, ಸರ್ವರಿಗೂ ಏಕವಿಧವಾಗಿ ಕಾಣುವುದು. ಇದಿಷ್ಟೇ ಪರಸ್ಪರ ವೈಲಕ್ಷಣ್ಯವೆಂದು ಹೇಳಲ್ಪಡತಕ್ಕುದು. ತಾವನ್ಮಾತ್ರದಿಂದಲೇ, ಜಾಗ,

ಅಥವೋತ್ತರಕಾಲೇ ತು ಭಙ್ಗುರತ್ವಾದವಸ್ತು ತತ್ |
ಈದೃಕ್ ಚ ಸರ್ವಮೇವೇದಂ ತತ್ರ ಕಾ ನಾಸ್ತಿತಾಧಿಕಾ ||೨೪||
ಸ್ವಪ್ನೇ ಜಾಗ್ರದಸದ್ರೂಪಾ ಸ್ವಪ್ನೋ ಜಾಗ್ರತ್ಯಸನ್ಮಯಃ |
ಮೃತಿರ್ಜನ್ಮನ್ಯಸದ್ರೂಪಾ ಮೃತ್ಯಾಂ ಜನ್ಮಾಪ್ಯಸನ್ಮಯಮ್ ||೨೫||
ವಿಶರೇದ್ವಿಶರಾರುತ್ವಾತ್ ಅನುಭೂತೇಶ್ಚ ರಾಘವ |
ಏವಂ ನ ಸನ್ನಾಸದಿದಂ ಭ್ರಾನ್ತಿಮಾತ್ರಂ ವಿಭಾಸತೇ ||೨೬||
ಮಹಾಕಲ್ಪಾನ್ತಸಮ್ಪ್ರಾಪ್ತೌ ಅಪ್ಯದ್ಯಾಥ ಯುಗೇನಘೇ |
ನ ಕದಾಚನ ಯನ್ನಾಸ್ತಿ ತದ್ಬ್ರಹ್ಮೈವಾಸ್ತಿ ತಜ್ಜಗತ್ ||೨೭||

ತ್ಪದಾರ್ಥವು ಸತ್ಯವೆಂದು ಸಾಧಿಸುವುದಕ್ಕಾಗಲಾರದು. ಜಾಗ್ರತ್ಕಾಲಿಕವಾದ ಇಂದ್ರಜಾಲಾದಿಗಳಲ್ಲಿಯೂ ಪರಸ್ಪರ ವೈಲಕ್ಷಣ್ಯವು ಯಥೇಚ್ಛವಾಗಿರುವುದು. ಅದುಕಾರಣ; ಈ ಸಮಸ್ತ ಪದಾರ್ಥರೂಪವೂ ಅವಿಸಂವಾದಿ (ಪರಸರ ವ್ಯತ್ಯಾಸವಿಲ್ಲದುದು) ಯಾಗಿರುವ ಮಾತ್ರದಿಂದಲೇ, ಇದಕ್ಕೆ ಸತ್ಯತ್ವವು ಹೇಗುಂಟಾಗುವುದು? ಅದೆಂತಹುದು?—ನೀನೇ ಹೇಳು ||೨೩||

ಅಥವಾ—'ಆ ಸ್ವಪ್ನವು, ಉತ್ತರಕ್ಷಣದಲ್ಲಿಯೇ ಕಾಣದೆ ಹೋಗುವುದರಿಂದ ಅದು ಅಸತ್ಯವಾದುದು '—ಎಂದು ಹೇಳುವ ಪಕ್ಷದಲ್ಲಿ, ಈ ಜಾಗ್ರತ್ಕಾಲಿಕವಾದ ಸಮಸ್ತ ಪದಾರ್ಥವೂ ಕೂಡ ಹೀಗೆಯೇ (ಕ್ಷಣಿಕವಾಗಿಯೇ) ಇರುವುದು. ಅದುಕಾರಣ, ಜಾಗ್ರತ್ತಿಗಿಂತಲೂ ಸ್ವಪ್ನದಲ್ಲಿ ಹೆಚ್ಚಾದ ನಾಸ್ತಿತ್ವ (ಇಲ್ಲವೆಂಬುವಿಕೆ) ವೆಂಬುದಾವುದು? ||೨೪||

ಹಾಗೆಯೇ ಯೋಚನೆಮಾಡಿ ನೋಡಿದರೆ,—ಸ್ವಪ್ನಕಾಲದಲ್ಲಿ ಜಾಗ್ರತ್ತು ಅಸತ್ಯವಾಗಿರುವುದು; ಜಾಗ್ರತ್ತಿನಲ್ಲಿ ಸ್ವಪ್ನವೂ ಅಸತ್ಯವಾಗಿರುವುದು. ಜನ್ಮವೆತ್ತಿರುವಾಗ ಮರಣವೂ ಅಸತ್ಯವೇ ಆಗುವುದು ; ಮೃತಿಯಲ್ಲಿ ಜನ್ಮವೂ ಅಸತ್ಯವೇ ಆಗಿರುವುದು. ಹೀಗಿರುವುದರಿಂದ, ಒಂದುಕಾಲದಲ್ಲಿ ಒಂದು ಅಸತ್ಯವಾಗಿ ಕಂಡಮಾತ್ರದಿಂದಲೇ ಅದು ಅಸತ್ಯವೆಂದೂ—ಸತ್ಯವಾಗಿ ಕಂಡರೆ ಅದು ಸತ್ಯವೆಂದೂ ನಿರ್ಧರಿಸಲಾಗಲಾರದು ||೨೫||

ಮತ್ತು, ಈ ಪದಾರ್ಥಸಮುದಾಯವು, ಸ್ವಭಾವತಃ ನಶಿಸಿಹೋಗತಕ್ಕುದಾಗಿರುವುದರಿಂದಲೂ, ಆವಿಧವಾದ ಅನುಭವವುಂಟಾಗಿರುವುದರಿಂದಲೂ, ನಶಿಸಿ ಹೋಗುವುದು. ಈರೀತಿಯಾಗಿ, ಈ ಪ್ರಪಂಚವ್ಯವಹಾರವು ಸತ್ಯವಲ್ಲವೆಂದು ಈಗ ನಿರ್ಧಾರಿತವಾಯ್ತಷ್ಟೆ! ಇದು ಬ್ರಹ್ಮದೃಷ್ಟ್ಯಾ ಸತ್ಯವೆಂಬ ವಿಷಯವನ್ನು ಹಿಂದೆಯೇ ದೃಢಪಡಿಸಿರುವೆನು. ಅಂತು, ಇದು ಕೇವಲ ಭ್ರಾಂತಿಮಾತ್ರವಾಗಿ ಪ್ರಭಾಸಮಾನವಾಗುವುದೆಂದು ತಿಳಿಯಬೇಕು (೧)||

ಎಲೌ ನಿರ್ದೋಷಳಾದ ಲೀಲೆಯೇ! ಮಹಾಪ್ರಳಯವುಂಟಾದಾಗಲಾಗಲಿ—ಅಥವಾ ಈ ಯುಗದಲ್ಲಿಯೇ ಆಗಲಿ-ಯಾವ ಪದಾರ್ಥವು ಯಾವಾಗಲೂ ಇಲ್ಲವೆಂಬುದಿಲ್ಲವೋ, ಅಂತಹ ಬ್ರಹ್ಮ ಪದಾರ್ಥವೊಂದೇ ಇರುವುದು. ಅದೇ ಈ ಜಗತ್ತೆಂಬುದೂ ಆಗಿರುವುದು ||೨೭||

---

(೧) ಮೂಲದಲ್ಲಿ 'ರಾಘವ' ಎಂಬ ಶಬ್ದವಿರುವುದರಿಂದ, ಲೀಲೆಗೆ ಸರಸ್ವತಿಯು ಹೇಳಿದ ವಿಷಯುವನ್ನು ಶ್ರೀರಾಮನಿಗೆ ವಸಿಷ್ಠರು ಅನುವಾದಮಾಡಿ ಹೇಳುತ—ಮಧ್ಯದಲ್ಲಿ—ಅಯ್ಯಾ! ರಾಮ! ಲೀಲೆಯು ಹೀಗೆ ಹೇಳುತಿದ್ದಳೆಂದು ಹೇಳಿದರೆಂಬುದಾಗಿ ಅರ್ಥಮಾಡಬೇಕು.

ತಸ್ಮಿನ್ ಮಧ್ಯೇ ಕಚನ್ತೀಮಾಃ ಭ್ರಾನ್ತಯಃ ಸೃಷ್ಟಿನಾಮಿಕಾಃ ।
ವ್ಯೋಮ್ನಿ ಕೇಶೋಣ್ಡ್ರಕಾನೀವ ನ ಕಚನ್ತೀವ ವಸ್ತುತಃ ॥೨೮॥
ಯಥಾ ತರಙ್ಗಾ ಜಲಧೌ ತಥೇಮಾಃ ಸೃಷ್ಟಯಃ ಪರೇ ।
ಉತ್ಪತ್ಯೋತ್ಪತ್ಯ ಲೀಯನ್ತೇ ರಜಾಂಸೀವ ಮಹಾನಿಲೇ ॥೨೯॥
ತಸ್ಮಾದ್ಭ್ರಾನ್ತಿಮಯಾಭಾಸೇ ಮಿಥ್ಯಾತ್ವಮಹಮಾತ್ಮನಿ ।
ಮೃಗತೃಷ್ಣಾಜಲಚಯೇ ಕೈವಾಸ್ಥಾ ಸರ್ಗಭಸ್ಮನಿ ॥೩೦॥
ಭ್ರಾನ್ತಯಶ್ಚ ನ ತತ್ರಾನ್ಯಾಃ ತಾಸ್ತದೇವ ಪರಂ ಪದಮ್ ।
ಘನೇ ತಮಸಿ ಯಕ್ಷಾಭಾಃ ತಮಏವ ನ ಯಕ್ಷಕಃ ॥ ೩೧॥
ತಸ್ಮಾಜ್ಜನ್ಮ ಮೃತಿರ್ಮೋಹೋ ವ್ಯಾಮೋಹತ್ವಮಿದಂ ತತಮ್ ।
ಸರ್ವಂ ತತ್ ಸಮಹಾಕಲ್ಪಂ ಶಾನ್ತೌ ಯದವಶಿಷ್ಯತೇ ॥೩೨॥

ಆ ಬ್ರಹ್ಮಪದಾರ್ಥದಲ್ಲಿ, ಆಕಾಶದಲ್ಲಿ ಕೇಶೋಂಡ್ರಕಗಳು ತೋರುವಂತೆ, ಈ ಸೃಷ್ಟಿ ನಾಮಕವಾದ ಭ್ರಾಂತಿಗಳು ಮಧ್ಯದಲ್ಲಿ ಸ್ಫುರಣಹೊಂದುವುವು. ವಾಸ್ತವ್ಯವಾಗಿಯಾದರೋ, ಕೊನೆಗೆ ಈ ಸ್ಫುರಣಹೊಂದುವಂತೆ ಕಾಣುವುದೆಂಬುದೂ ಅನೃತವೇಯೆ. ಬ್ರಹ್ಮವೊಂದು ಹೊರತು, ಇತರವಾದ (೧) ಭಾವಾಭಾವ ಪದಾರ್ಥವೊಂದೂ ಇಲ್ಲವೆಂದು ತಿಳಿಯಬೇಕು ॥೨೮॥

ಸಮುದ್ರದಲ್ಲಿ ತರಂಗಗಳಂತೆಯೂ ಪ್ರಚಂಡಮಾರುತದಲ್ಲಿ ಧೂಳಿಗಳಂತೆಯೂ, ಆ ಪರಮಾತ್ಮನಲ್ಲಿ ಈ ಸೃಷ್ಟಿಗಳು ಅಸಂಖ್ಯಾಕಗಳಾಗಿ ಹುಟ್ಟಿಹುಟ್ಟಿ ಲೀನವಾಗುವುವು॥೨೯॥

ಆದುಕಾರಣ, ಕೇವಲ ಭ್ರಾಂತಿಮಯವಾಗಿ ಭಾಸಮಾನವಾಗಿಯೂ—ನೀನು ನಾನು ಇತ್ಯಾದಿ ಪದಾರ್ಥರೂಪವೆಲ್ಲವನ್ನೂ —ಅಸತ್ಯವಾಗಿದ್ದರೂ— ಕಲ್ಪಿಸಿಕೊಂಡಿರತಕ್ಕುದಾಗಿಯೂ—ಮೃಗತೃಷ್ಣಿಕಾ ಜಲಪ್ರವಾಹರೂಪವಾಗಿಯೂ ಇರುವ —ಈ ಸೃಷ್ಟಿಯೆಂಬ ಭಸ್ಮದಲ್ಲಿ ಆಸ್ಥೆಯಾವುದು ? ॥೩೦॥

ಆ ಪರಮಾತ್ಮನಲ್ಲಿ ಉಂಟಾಗುವ ಭ್ರಮೆಗಳೂ ಕೂಡ, ಪರಮಾತ್ಮವ್ಯತಿರಿಕ್ತವಾದುವುಗಳೆಂದು ತಿಳಿಯಬಾರದು; ಅವೂ ಆ ಪರವಸ್ತುವೆಂದೇ ತಿಳಿಯಬೇಕು. ಗಾಢಾಂಧಕಾರದಲ್ಲಿ ಪಿಶಾಚಭ್ರಾಂತಿಯುಂಟಾಗುವುದಷ್ಟೆ! ಅದು ಆ ಅಂಧಕಾರವೇ ಹೊರತು ಪಿಶಾಚವೆಂಬ ಪದಾರ್ಥಾಂತರವಲ್ಲವಲ್ಲವೆ! ॥೩೧॥

ಆದುಕಾರಣ, ಜನನವೆಂಬುದೂ ಮರಣವೆಂಬುದೂ ಕೇವಲ ಮೋಹವು. ಅಜ್ಞಾನದ (೨) ಆವರಣ ವಿಕ್ಷೇಪಶಕ್ತಿರೂಪವಾಗಿ ಈ ಪ್ರಪಂಚರಚನೆಯು ಹರಡಿಕೊಂಡಿರು

---

(೧) ಶಾಸ್ತ್ರಕಾರರು ಭಾವಪದಾರ್ಥವೆಂದೂ ಅಭಾವಪದಾರ್ಥವೆಂದೂ ಎರಡುವಿಧವಾಗಿ ಹೇಳುವರು. ಭಾವವೆಂದರೆ ಇರತಕ್ಕುದೆಂದೂ, ಅಭಾವವೆಂದರೆ ಇಲ್ಲದುದೆಂದೂ ಅರ್ಥವು. ಭ್ರಾಂತಿಯು ಅಭಾವವೆಂದು ಹೇಳಿದರೆ, ಆಗಲೂ ಬ್ರಹ್ಮವ್ಯತಿರಿಕ್ತವಾದ ಪದಾರ್ಥವೊಂದಿರುವುದೆಂದು ಹೇಳಿದಹಾಗಾಗುವುದರಿಂದ, ಭ್ರಾಂತ್ಯಭಾವವೂ ಅಸತ್ಯವೆಂದು ಶಾಸ್ತ್ರಕಾರರ ಮುಖ್ಯಾಭಿಪ್ರಾಯವು.

(೨) ಅಜ್ಞಾನಕ್ಕೆ ಆವರಣಶಕ್ತಿಯೆಂದೂ, ವಿಕ್ಷೇಪಶಕ್ತಿಯೆಂದೂ ಎರಡು ಶಕ್ತಿಗಳಿರುವುವು ಆವರಣ ಶಕ್ತಿಯಿಂದ ಪ್ರಳಯವೂ, ವಿಕ್ಷೇಪಶಕ್ತಿಯಿಂದ ಮರಣವೂ ಉಂಟಾಗುವಂತೆ ತೋರುವುವು.

ನಾತಃ ಸತ್ಯಮಿದಂ ದೃಶ್ಯಂ ನ ಚಾಸತ್ಯಂ ಕದಾಚನ ।
ದ್ವಯಮೇವೈತದಥವಾ ಬ್ರಹ್ಮ ತತ್ರೈವ ಸಮ್ಭವಾತ್ ॥೩೩॥
ಆಕಾಶೇ ಪರಮಾಣ್ವನ್ತಃ ದ್ರವ್ಯಾದೇರಣುಕೇಽಪಿ ಚ ।
ಜೀವಾಣುರ್ಯತ್ರ ತತ್ರೇದಂ ಜಗದ್ವೇತ್ತಿ ನಿಜಂ ವಪುಃ ॥೩೪॥
ಅಗ್ನಿರೌಷ್ಣ್ಯಂ ಯಥಾ ವೇತ್ತಿ ನಿಜಭಾವಕ್ರಮೋದಿತಮ್ ।
ಪಶ್ಯತೀದಂ ತಥೈವಾತ್ಮಾ ಸ್ವಾತ್ಮಭೂತಂ ವಿಶುದ್ಧಚಿತ್ ॥೩೫॥
ಯಥಾ ಸೂರ್ಯೋದಯೇ ಗೇಹೇ ಭ್ರಮನ್ತಿ ತ್ರಸರೇಣವಃ ।
ತಥೇಮೇ ಪರಮಾಕಾಶೇ ಬ್ರಹ್ಮಾಣ್ಡತ್ರಸರೇಣವಃ ॥೩೬॥
ಯಥಾ ವಾಯೌ ಸ್ಥಿತಃ ಸ್ಪನ್ದಃ ಆಮೋದಃ ಶೂನ್ಯಮಮ್ಬರೇ ।
ಪಿಣ್ಡಗ್ರಹವಿನಿರ್ಮುಕ್ತಂ ತಥಾ ವಿಶ್ವಂ ಸ್ಥಿತಂ ಪರೇ ॥೩೭॥

ವುದು. (೧) ಮಹಾ ಕಲ್ಪದೊಡನೆ ಸರ್ವವೂ ಶಾಂತವಾದಮೇಲೆ ಯಾವುದು ಅವಶಿಷ್ಟವಾಗಿರುವುದೋ, ಅದೇ ಈ ಸರ್ವ ದೃಶ್ಯವೂ ಆಗಿರುವುದೆಂದು ತಿಳಿಯಬೇಕು ॥೩೨॥

ಅದುಕಾರಣ, ಈ ದೃಶ್ಯವು ಎಂದಿಗೂ ಸತ್ಯವೂ ಅಲ್ಲ; ಅಸತ್ಯವೂ ಅಲ್ಲ. ಅಥವಾ– 'ಸತ್ಯಾಸತ್ಯೋಭಯಾತ್ಮಕವಾಗಿರುವುದೋ!'—ಎಂದರೆ, ಹಾಗೂ ಇಲ್ಲ. ಈ ಮೂರು ಪಕ್ಷದಲ್ಲಿಯೂ ವಿರೋಧ ಸಂಭವಿಸುವುದರಿಂದ, ದಶ್ಯವೆಂಬ ಪದಾರ್ಥವನ್ನೇ ಬಿಟ್ಟುಬಿಟ್ಟು—ಸರ್ವವೂ ಬ್ರಹ್ಮವೆಂದೇ ನಿಶ್ಚಯಿಸಬೇಕು ॥ ೩೩॥

ಆಕಾಶದಲ್ಲಿಯೂ, ಪರಮಾಣುವಿನಲ್ಲಿಯೂ, ದ್ರವ್ಯ ಗುಣ ಮುಂತಾದುವುಗಳ ಸೂಕ್ಷ್ಮತಮವಾದ ಅಂತರ್ಭಾಗದಲ್ಲಿಯೂ, ಎಲ್ಲೆಲ್ಲಿ ಈ ಜೀವಪರಮಾಣುವಿರುವುದೋ, ಅಲ್ಲೆಲ್ಲ ತನ್ನ ಶರೀರವನ್ನೇ ಜಗತ್ತೆಂಬುದಾಗಿ ತಿಳಿದುಕೊಳ್ಳುವುದು. ಹೀಗೆ, ಈ ಪ್ರಪಂಚವು ಕೇವಲ ಕಲ್ಪನಾಮಾತ್ರಶರೀರವೆಂಬುದು ಸರ್ವತ್ರ ಸಿದ್ಧವಾಗಿರುವುದೆಂದು ತಿಳಿಯಬೇಕು॥

ಪ್ರಪಂಚದಲ್ಲಿ, ಒಬ್ಬ ಪುರುಷನು ಅಗ್ನಿಯನ್ನು ಉಪಾಸನೆಮಾಡುವನು. ಆಗ ಅವನು, ತಾನು ಅಗ್ನಿಯಲ್ಲದಿದ್ದರೂ ತಾನೇ ಆ ಅಗ್ನಿಯೆಂದು ಉಪಾಸನೆಮಾಡುತಿರುವನು. ಆಗ ಆ ಸಂಸ್ಕಾರಬಲದಿಂದ, ಇವನು ತನ್ನಲ್ಲಿ ಇಲ್ಲದಿದ್ದರೂ ಅಗ್ನಿನಿಷ್ಠವಾದ ಉಷ್ಣತ್ವವು ತನ್ನಲ್ಲಿರುವಂತೆ ತಿಳಿದುಕೊಂಡಂತಾಯ್ತಷ್ಟೆ! ಹೀಗೆಯೇ, ಕೇವಲ ವಿಶುದ್ಧಜ್ಞಾನರೂಪನಾಗಿರುವ ಪರಮಾತ್ಮನೂ ಕೂಡ, ಸ್ವಾತ್ಮಭೂತವಾದ ಈ ಪ್ರಪಂಚವನ್ನು ನೋಡುವನು. ಹೀಗಿರುವಕಾರಣ, ಆತ್ಮನಲ್ಲಿ ಸಂಸ್ಕಾರಬಲದಿಂದ ಅನಾತ್ಮಾರೋಪವುಂಟಾಗಿರುವುದೆಂದು ತಿಳಿಯಬೇಕು ॥೩೫॥

ಸೂರ್ಯೋದಯವಾದಾಗ ಮನೆಯೊಳಗೆ ಬಿಸಿಲುಕೋಲಿನಲ್ಲಿ ತ್ರಸರೇಣುಗಳು ಹೇಗೆ ಭ್ರಮಿಸುವುವೋ, ಹಾಗೆ ಪರಮಾಕಾಶದಲ್ಲಿ ಈ ಬ್ರಹ್ಮಾಂಡಗಳೆಂಬ ತ್ರಸರೇಣುಗಳು ಅಸಂಖ್ಯಾಕಗಳಾಗಿ ಭ್ರಮಿಸುತಿರುವುವು ॥೩೬॥

ವಾಯುವಿನಲ್ಲಿ ಚಲನೆಯೂ ವಾಸನೆಯೂ ಹೇಗಿರುವುವೋ, ಆಕಾಶದಲ್ಲಿ ಶೂನ್ಯತ್ವವು

---

(೧) ಬ್ರಹ್ಮಜ್ಞಾನವಾದಮೇಲೆ ಸಕಲಪದಾರ್ಥವೂ ನಷ್ಟವಾಗುವಿಕೆಗೆ ಮಹಾಕಲ್ಪವೆಂದು ಹೆಸರು. ಇದನ್ನು ವೈಜ್ಞಾನಿಕ ಪ್ರಳಯವೆಂದೂ ವ್ಯವಹರಿಸಿರುವರು. ವೈಜ್ಞಾನಿಕನೆಂದರೆ ಜ್ಞಾನದಿಂದ ನಿಷ್ಪನ್ನವಾದುದೆಂದರ್ಥವು.

ಭಾವಾಭಾವಗ್ರಹೋತ್ಸರ್ಗಸ್ಥೂಲಸೂಕ್ಷ್ಮಚರಾಚರಾಃ |
ವಿವರ್ಜಿತಸ್ಯಾವಯವೈಃ ಭಾಗಾಬ್ರಹ್ಮಣಕಲ್ಪಿತಾಃ ‖೩೮‖

ಸಾಕಾರಸ್ಯಾವಬೋಧಾಯ ವಿಜ್ಞೇಯಾಭವತಾಧುನಾ |
ಅನನ್ಯಾಃ ಸ್ವಾತ್ಮನಸ್ತಸ್ಯ ತೇನಾನವಯವಾ ಇವ ‖೩೯‖

ಯಥಾ ಸ್ಥಿತಮಿದಂ ವಿಶ್ವಂ ನಿಜಭಾವಕ್ರಮೋದಿತಮ್ |
ರಿಕ್ತಂ ನ ವಿಶ್ವಶಬ್ದಾರ್ಥೈಃ ಅನನ್ಯದ್ಬ್ರಹ್ಮಣಿ ಸ್ಥಿತಮ್ ‖೪೦‖

ನ ತತ್ ಸತ್ಯಂ ನ ಚಾಸತ್ಯಂ ರಜ್ಜುಸರ್ಪಭ್ರಮೋ ಯಥಾ |
ಮಿಥ್ಯಾನುಭೂತಿತಃ ಸತ್ಯಂ ಅಸತ್ಯಂ ಸತ್ ಪರೀಕ್ಷಿತಮ್ ‖೪೧‖

ಪರಮಂ ಕಾರಣಂ ಚಿತ್ತ್ವಾತ್ ಜೀವತ್ವಮಿತಿ ವೇತ್ತ್ಯಲಮ್ |
ತತಸ್ತಥೈವಾನುಭವಾತ್ ಜೀವತ್ವಂ ವಿನ್ದತಿ ಸ್ಫುಟಮ್ ‖೪೨‖

ಹೇಗಿರುವುದೋ, ಹಾಗೆ ಆ ಪರಮಾತ್ಮನಲ್ಲಿ ಈ ವಿಶ್ವವು ಶರೀರಗ್ರಹಣರಹಿತವಾಗಿರುವುದು॥

ಸೃಷ್ಟಿ ಲಯ ಸ್ವೀಕಾರ ಪರಿತ್ಯಾಗ—ಇತ್ಯಾದಿ ಕ್ರಿಯೆಗಳೂ, ಸ್ಥೂಲ ಸೂಕ್ಷ್ಮ ಚರ ಅಚರ–ಇತ್ಯಾದಿದ್ರವ್ಯಗಳೂ, ಇವೆಲ್ಲವೂ-ನಿರವಯವನಾಗಿರುವ ಆ ಬ್ರಹ್ಮನ ಕಲ್ಪಿತವಾದ ಅಂಶಗಳೇಯೆ ॥೩೮॥

ಸಾಕಾರವಾದ ಈ ವಿಶ್ವವು ನಿರಾಕಾರವೆಂದು ತಿಳಿವಳಿಕೆಯುಂಟಾಗುವುದಕ್ಕೋಸ್ಕರ ಈ ಅಂಶಗಳೂ ಆ ಆತ್ಮನಿಗಿಂತ ಪೃಥಕ್ಕಲ್ಲದುವುಗಳೆಂದು ನೀನು ತಿಳಿಯಬೇಕು. ಅದು ಕಾರಣ, ಈ ಅವಯವಗಳೂ (ಅಂಶ) ಅವಯವವಲ್ಲದಂತೆಯೇ ಆಧುವು ॥೩೯॥

ಹೀಗೆ ಸ್ವಕೀಯ ಭಾವನಾನುಗುಣವಾಗಿ ಉತ್ಪನ್ನವಾಗಿ ಯಥಾವಸ್ಥಿತವಾಗಿರುವ ಈ ವಿಶ್ವವು, 'ವಿಶ್ವ' ಎಂಬ ಶಬ್ದಾರ್ಥಗಳಿಂದ, ಎಂದಿಗೂ ಶೂನ್ಯವಾಗಿರುವುದಿಲ್ಲ. (ಎಂದರೆ) 'ವಿಶ್ವ' ಎಂಬ ಶಬ್ದವು 'ಪೂರ್ಣ' ಎಂಬ ಅರ್ಥವನ್ನು ಬೋಧಿಸತಕ್ಕುದಾಗಿರುವುದು. ಪೂರ್ಣವಾದಮೇಲೆ, ಅದು ರಿಕ್ತ (ಶೂನ್ಯ—ಇಲ್ಲದ್ದು) ವೆಂದು ಹೇಳುವುದು ಯುಕ್ತವಾಗಲಾರದು. ಅದುಕಾರಣ, ಇದು ಆ ಪರಬ್ರಹ್ಮನಲ್ಲಿ ಅನನ್ಯವಾಗಿ (ಪೃಥಕ್ಕಲ್ಲದೆ) ಇರುವುದು ॥೪೦॥

ಹೀಗಿರುವ ಆ ವಿಶ್ವವು, ರಜ್ಜುಸರ್ಪಭ್ರಮದಂತೆ, ಸತ್ಯವಾದುದೂ ಅಲ್ಲ; ಅಥವಾ ಅಸತ್ಯವಾದುದೂ ಅಲ್ಲ. ಏಕೆಂದರೆ,— ಭ್ರಾಂತಿಜ್ಞಾನಾನುಭವ ವಿಷಯವಾಗಿರುವುದರಿಂದ, ಇದು ಸತ್ಯವೆಂದು ಹೇಳಲಾಗದು. ಪರೀಕ್ಷೆಮಾಡಿ ತಿಳಿದಮೇಲೆ ಇದು ಕೇವಲ ಸತ್ಪದಾರ್ಥವಾಗಿರುವುದರಿಂದ, ಅದನ್ನು ಅಸತ್ಯವೆಂದೂ ಹೇಳಲಾಗದು ॥ ೪೧ ॥

ಪರಮ ಕಾರಣವಾದ ಈ ಬ್ರಹ್ಮವು, ಮಾಯೆಯಿಂದ ಆಚ್ಛಾದಿತಸ್ವರೂಪವುಳ್ಳದಾಗಿರುವುದರಿಂದ, ತನ್ನಲ್ಲಿ ಜೀವತ್ವವಿರುವಂತೆ ಚೆನ್ನಾಗಿ ತಿಳಿದುಕೊಳ್ಳುವುದು. ಬಳಿಕ, ಆವಿಧವಾಗಿಯೇ ಅನುಭವವುಂಟಾಗಿಬಿಡುವುದರಿಂದ ಜೀವತ್ವವನ್ನು ಹೊಂದಿಬಿಡುವುದು. ಇದೇ ನಿಶ್ಚಯವು ‖ ೪೨ ‖

ಸತ್ಯಂ ಭವತ್ವಸತ್ಯಂ ವಾ ಖೇ ವಿಭಾತಮಿದಂ ಜಗತ್ ।
ರಜ್ಞಯತ್ಯೇವ ಜೀವಾಣುಃ ಸ್ವೇಚ್ಛಾಭಿರನುಭೂತಿಭಿಃ ॥೪೩॥
ಅನುಭೂಯನ್ತ ಏವಾಶು ಕಾಶ್ಚಿತ್ ಪೂರ್ವಾನುಭೂತಿತಃ ।
ಅಪೂರ್ವಾನುಭವಾಃ ಕಾಶ್ಚಿತ್ ಸಮಾಶ್ಚೈವಾಸಮಾಸ್ತಥಾ ॥೪೪॥
ಕ್ವಚಿತ್ ಕದಾಚಿತ್ ತಾ ಏವ ಕ್ವಚಿದರ್ಧಸಮಾ ಅಪಿ ।
ಕಚನ್ತ್ಯಸತ್ಯಾಃ ಸತ್ಯಾಭಾಃ ಜೀವಾಕಾಶೇನುಭೂತಯಃ ॥೪೫॥
ತತ್ಕುಲಾಸ್ತತ್ಸಮಾಚಾರಾಃ ತಜ್ಜನ್ಮಾನಸ್ತದೀಹಿತಾಃ ।
ತ ಏವ ಮನ್ತ್ರಿಣಃ ಪೌರಾಃ ಪ್ರತಿಭಾನೇ ಭವನ್ತಿ ಚ ॥೪೬॥
ತೇ ಚೈವಾತ್ಮನ್ಯಲಂ ಸತ್ಯಾಃ ದೇಶಕಾಲೇಹಿತೈಃ ಸಮಾಃ ।
ಸರ್ವಗಾತ್ಮಸ್ವರೂಪಾಯಾಃ ಪ್ರತಿಭಾಯಾ ಇತಿ ಸ್ಥಿತಿಃ ॥೪೭॥
ಯಥಾ ರಾಜಾತ್ಮನಿ ವ್ಯೋಮ್ನಿ ಪ್ರತಿಭೋದೇತಿ ಸನ್ಮಯೀ ।
ತಥಾ ತದಗ್ರಗೋದೇತಿ ಸತ್ಯೇವ ಪ್ರತಿಭಾಮ್ಬರೇ ॥೪೮॥

ಆ ಪರಮಾಕಾಶದಲ್ಲಿ ಭಾಸಮಾನವಾದ ಈ ಜಗತ್ತು, ಸತ್ಯವಾದರೂ ಆಗಲಿ; ಅಥವಾ ಅಸತ್ಯವಾದರೂ ಆಗಲಿ. ಇದರ ಸತ್ಯತ್ವವೂ ಅಸತ್ಯತ್ವವೂ ಇಲ್ಲಿ ವಿಷಯವಲ್ಲ. ಆ ಜೀವಪರಮಾಣುವೇ, ತನ್ನ ಇಚ್ಛಾನುರೂಪವಾದ ಅನುಭವಗಳಿಂದ ವಿಷಯರಂಜನೆ ಮಾಡುವುದು. ಇದೇ ಈ ಸಂಸಾರಹೇತುವಾಗುವುದೆಂದು ತಿಳಿಯಬೇಕು ॥೪೩॥

ಎಲೌ ಲೀಲೆ! ಈ ಪ್ರಸಕ್ತಾನುಪ್ರಸಕ್ತಿಯಿಲ್ಲಿಗಿರಲಿ. ಪ್ರಕೃತವಾದ ನಿನ್ನ ಪ್ರಶ್ನೆಗೆ ಸಮಾಧಾನ ಹೇಳುವೆನು. ನಾನು ಹಿಂದೆ ಹೇಳಿದಂತೆ, ಕೆಲವು ಅನುಭವಗಳು ಪೂರ್ವಾನುಭವದಿಂದಲೇ ಈಗ ತಟ್ಟನೆ ಉಂಟಾಗುವುವು; ಮತ್ತೆ ಕೆಲವು ಹಿಂದಿನ ಅನುಭವವಿಲ್ಲದೆಯೇ ಉಂಟಾಗುವುವು. ಹೀಗೆ, ಕೆಲವು ಪೂರ್ವಾನುಭವಕ್ಕೆ ಸಮವಾಗಿಯೂ, ಮತ್ತೆ ಕೆಲವು ವಿರುದ್ಧವಾಗಿಯೂ ಉಂಟಾಗುವುವು ॥ ೪೪॥

ಮತ್ತು, ಈ ಜೀವಾಕಾಶದಲ್ಲುಂಟಾಗುವ ಅನುಭವಗಳು, ಕೆಲವುಕಡೆಯಲ್ಲಿ ಒಂದೊಂದು ಕಾಲದಲ್ಲಿ ಹಿಂದಿನವುಗಳಾಗಿಯೇ ಇರುವುವು; ಮತ್ತೆ ಕೆಲವುಕಡೆಯಲ್ಲಿ ಪೂರ್ವಾನುಭವಕ್ಕೆ ಅರ್ಧಸಮವಾಗಿರುವುವು. ಹೀಗೆ ಈ ಅನುಭವಗಳು, ವಸ್ತುತಃ ಅಸತ್ಯವಾಗಿದ್ದರೂ ಸತ್ಯವಾದುವುಗಳಂತೆ ಭಾಸಮಾನವಾಗುವುವು ॥೪೫॥

ಹೀಗಿರುವುದರಿಂದ, ಈಗ ನಿನಗೆ ಪ್ರತಿಭಾವಿಷಯರಾಗಿರುವ ಇವರು, ಅದೇ ಕುಲವುಳ್ಳವರಾಗಿಯೂ ಅದೇ ನಡತೆಯುಳ್ಳವರಾಗಿಯೂ ಅದೇ ಜನ್ಮವುಳ್ಳವರಾಗಿಯೂ ಅದೇ ವ್ಯಾಪಾರವುಳ್ಳವರಾಗಿಯೂ ಆ ಪೂರ್ವದ ಮಂತ್ರಿಗಳೇ ಆ ಪೌರರೇ ಆಗಿಯೂ ಭಾಸಮಾನರಾಗುತಿರುವರು ॥೪೬॥

ಹೀಗೆ ಭಾಸಮಾನರಾಗುತಿರುವ ಆ ಮಂತ್ರಿಪೌರಾದಿಗಳು, ಆತ್ಮತ್ವೇನ ವಿಚಾರಮಾಡಿದಾಗ, ಅತ್ಯಂತ ಸತ್ಯರೂಪರಾಗಿ ಭೇದರಹಿತರಾಗಿಯೇ ಇರುಪರು; ದೇಶ ಕಾಲ ವ್ಯಾಪಾರ ಮುಂತಾದುವುಗಳನ್ನು ಹಿಡಿದು ವಿಚಾರಮಾಡಿದಾಗ, ಪರಸ್ಪರ ಭಿನ್ನರಾಗಿ ಪೂರ್ವಾನುಭೂತಸದೃಶರಾಗಿ ಕಾಣುವರು. ಸರ್ವತ್ರ ಆತ್ಮಸ್ವರೂಪವಾದ ಪ್ರತಿಭೆಯು ಸ್ಥಿತಿಯು ಈರೀತಿಯಾಗಿಯೇ ಇರುವುದು ॥೪೭॥

ಈ ರಾಜರೂಪವಾಗಿರುವ ಆಕಾಶದಲ್ಲಿ ಯಾವವಿಧವಾಗಿ ಸರ್ವಸಾಧಾರಣವಾದ ಪ್ರತಿಭೆಯುದಯಿಸುವುದೋ, ಆ ವಿಧವಾದುದಾಗಿಯೇ-ಅದಕ್ಕೆ ಪೂರ್ವಭಾವಿಯಾಗಿಯೇ-ಆ ಸತ್ಪದಾರ್ಥವಾದ ಆಕಾಶದಲ್ಲಿಯೂ ಉದಯಿಸಿರುವುದು ॥೪೮॥

ತ್ವಚ್ಛೀಲಾ ತ್ವತ್ಸಮಾಚಾರಾ ತ್ವತ್ಕುಲಾ ತ್ವದ್ವಪುರ್ಮಯೀ ।
ಇತಿ ಲೀಲೇಯಮಾಭಾತಿ ಪ್ರತಿಭಾಪ್ರತಿಬಿಮ್ಬಜಾ ॥೪೯॥
ಸರ್ವಗೇ ಸಂವಿದಾದರ್ಶೇ ಪ್ರತಿಭಾ ಪ್ರತಿಬಿಮ್ಬತಿ ।
ಯಾದೃಶೀ ಯತ್ರ ಸಾ ತತ್ರ ತಥೋದೇತಿ ನಿರನ್ತರಮ್ ॥೫೦॥
ಜೀವಾಕಾಶಸ್ಯ ಯಾನ್ತಸ್ಸ್ಥಾ ಪ್ರತಿಭಾ ಕುರುತೇ ಸ್ವಯಮ್ ।
ಸಾ ಬಹಿಶ್ಚ ಚಿದಾದರ್ಶೇ ಪ್ರತಿಬಿಮ್ಬಾದಿಯಂ ಸ್ಥಿತಾ ॥೫೧॥
ಏಷಾ ತ್ವಮಮ್ಬರಮಹಂ ಭುವನಂ ಧರಾ ಚ
ರಾಜೇತಿ ಸರ್ವಮಹಮೇವ ವಿಭಾತಮಾತ್ರಮ್ ।
ಚಿದ್ವ್ಯೋಮಬಿಲ್ವಜಠರಂ ವಿದುರಙ್ಗ ವಿದ್ಧಿ
ತ್ವಂ ತೇನ ಶಾನ್ತಮಮಲಾಸ್ವ ಯಥಾಸ್ಥಿತೇಹ ॥೫೨॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಅಗ್ನಿದಾಹ ರಾತ್ರಿಯುದ್ಧೇ
ಜಗದ್ಬ್ರಹ್ಮವರ್ಣನಂ ನಾಮ ಚತುಶ್ಚತ್ವಾರಿಂಶಃ ಸರ್ಗಃ.

ಹೀಗೆ ಪ್ರತಿಭಾಪ್ರತಿಬಿಂಬದಲ್ಲಿ ಉತ್ಪನ್ನಳಾಗಿರುವ ಈ ಲೀಲೆಯು (ಹೊಸಬಳಾಗಿ ಎದುರಿಗಿರುವ ವಿದೂರಥನ ಪತ್ನಿ), ನಿನ್ನಂತೆ ಶೀಲವುಳ್ಳವಳಾಗಿಯೂ, ನಿನ್ನ ಆಚಾರವುಳ್ಳವಳಾಗಿಯೂ, ನೀನು ಹುಟ್ಟಿದ ವಂಶದಲ್ಲಿ ಹುಟ್ಟಿದವಳಾಗಿಯೂ, ನಿನ್ನ ದೇಹವುಳ್ಳವಳಾಗಿಯೂ ಭಾಸಮಾನಳಾಗುತಿರುವಳು ॥೪೯॥

ಈ ಪ್ರಕ್ರಮವು ಇಲ್ಲಿ ಮಾತ್ರವೆಂದು ತಿಳಿಯಬಾರದು. ಸರ್ವತ್ರ ವ್ಯಾಪ್ತವಾಗಿರುವ ಆ ಜ್ಞಾನಾದರ್ಶ (ಕನ್ನಡಿ) ದಲ್ಲಿ, ಎಲ್ಲೆಲ್ಲಿ ಯಾವಯಾವವಿಧವಾದ ಪ್ರತಿಭೆಯುತ್ಪನ್ನವಾಗುವುದೋ—ಅಲ್ಲಲ್ಲಿ ಆಯಾವಿಧವಾಗಿಯೇ ಸ್ಥಿರವಾಗಿ ಕಾಣುವುದು ॥೫೦॥

ಜೀವಾಕಾಶದೊಳಗೆ ಅಂತರ್ಗತವಾದ ಯಾವ ಪ್ರತಿಭೆಯು—ತಾನು ತನ್ನಿಷ್ಟಾನುಸಾರವಾಗಿ ಕಾರ್ಯರಚನೆಮಾಡುವುದೋ, ಅದೇ ಹೊರಗೂ ಕೂಡ (ಬಾಹ್ಯಪ್ರಪಂಚ) ಜ್ಞಾನಾದರ್ಶದಲ್ಲಿ ಕೆಲಸಮಾಡುವುದು. ಇದು ಆ ಜ್ಞಾನಾದರ್ಶದಲ್ಲಿ ಪ್ರತಿಬಿಂಬಿಸಿ ಇರುವುದು ॥

ಎಲೌ! ಲೀಲೆ ! ಎದುರಿಗಿರುವ ನಿನ್ನ ಪ್ರತಿಬಿಂಬರೂಪಳಾಗಿರುವ ಈ ಲೀಲೆ ನೀನು ಆಕಾಶ ನಾನು ಪ್ರಪಂಚ ಭೂಮಿ ರಾಜ—ಇವೆಲ್ಲವೂ, ಪ್ರತಿಭಾಸಮಾನವಾದ ಆ ಪ್ರತ್ಯಗ್ರೂಪವಾದ ಚೈತನ್ಯವೇಯೆ. ನಾನು ಮಾತ್ರ ಹಾಗೆ ಹೇಳುವೆನೆಂದು ತಿಳಿಯಬೇಡ; ಇತರರಾದ ತತ್ವಜ್ಞಾನಿಗಳೂಕೂಡ, ಈ ಸಮಸ್ತವೂ ಚಿದಾಕಾಶವೆಂಬ ಬಿಲ್ವಫಲಕ್ಕೆ ಗರ್ಭರೂಪವಾಗಿರುವುದೆಂದು ತಿಳಿದಿರುವರು. ನೀನೂ ಹಾಗೆಯೇ ತಿಳಿಯುವವಳಾಗು. ಇಂತಹ ಜ್ಞಾನದಿಂದ, ನೀನು ಇಲ್ಲಿ ಈಗ ಇರುವಂತೆಯೇ ನಿಷ್ಕಳಂಕಳಾಗಿ ವಿಕ್ಷೇಪವಿಲ್ಲದೆ ಸುಖವಾಗಿರು ॥೫೨॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಅಗ್ನಿದಾಹ ರಾತ್ರಿಯುದ್ಧ
ಜಗದ್ಬ್ರಹ್ಮ ವರ್ಣನೆಯೆಂಬ ನಾಲ್ವತ್ತುನಾಲ್ಕನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚಚತ್ವಾರಿಂಶಃ ಸರ್ಗಃ.

ಶ್ರೀ ಸರಸ್ವತ್ಯುವಾಚ.

ವಿದೂರಥಸ್ತೇ ಭರ್ತೃಪಃ ತನುಂ ತ್ಯಕ್ತ್ವಾ ರಣಾಜ್ಗಣೇ ।
ತದೇವಾನ್ತಃಪುರಂ ಪ್ರಾಪ್ಯ ತಾದೃಗಾತ್ಮಾ ಭವಿಷ್ಯತಿ ॥೧॥

ಶ್ರೀ ವಸಿಷ್ಠ ಉವಾಚ.

ಇತ್ಯಾಕರ್ಣ್ಯ ವಚೋ ದೇವ್ಯಾಃ ಲೀಲಾ ಸಾ ತತ್ಪುರಾಸ್ಪದಾ ।
ಪುರಃ ಪ್ರಹ್ವಾ ಸ್ಥಿತೋವಾಚ ವಚನಂ ವಿಹಿತಾಞ್ಜಲಿಃ ॥೨॥

ದ್ವಿತೀಯಲೀಲೋವಾಚ.

ದೇವೀ ಭಗವತೀ ಜ್ಞಪ್ತಿಃ ನಿತ್ಯಮೇವಾರ್ಚಿತಾ ಮಯಾ ।
ಸ್ವಪ್ನೇ ಸಂದರ್ಶನಂ ದೇವಿ ಸಾ ದದಾತಿ ನಿಶಾಸು ಮೇ ॥೩॥

ಉತ್ಪತ್ತಿಪ್ರಕರಣದಲ್ಲಿ ನಾಲ್ವತ್ತೈದನೆಯ ಸರ್ಗವು.

ವರೋ ದ್ವಿತೀಯಲೀಲಾಯಾಃ ಪದ್ಮಪ್ರಾಪ್ತಿರಿಹೋಚ್ಯತೇ ।
ಜೀವಾನಾಂ ಫಲಲಾಭಶ್ಚ ಸ್ವಸಙ್ಕಲ್ಪಾನುಸಾರತಃ ॥

ದ್ವಿತೀಯಲೀಲೆಗೆ ಸರಸ್ವತಿಯ ದೆಸೆಯಿಂದ ಪದ್ಮರಾಜಲಾಭರೂಪ ವರಪ್ರಾಪ್ತಿಯಾಗುವಿಕೆಯೂ, ಜೀವರುಗಳಿಗೆ ಅವರವರ ಸಂಕಲ್ಪಾನುಸಾರವಾಗಿ ಫಲಪ್ರಾಪ್ತಿಯಾಗುವುದೆಂಬ ವಿಷಯವೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಆ ವಾಗ್ದೇವಿಯು ಪುನಃ ಲೀಲೆಯನ್ನು ಕುರಿತು ಹೇಳಿದಳು:—

ಎಲೌ! ಲೀಲೆ! ಇನ್ನೂ ಕೇಳುವವಳಾಗು. ಪೂರ್ವಜನ್ಮದಲ್ಲಿ ನಿನ್ನ ಪತಿಯಾಗಿದ್ದ ಈ ವಿದೂರಥನು, ಯುದ್ಧರಂಗದಲ್ಲಿ ಈ ದೇಹವನ್ನು ಬಿಟ್ಟು, ಪೂರ್ವದಲ್ಲಿದ್ದ ಆ ಅಂತಃಪುರವನ್ನೇ ಹೊಂದಿ, ಪುನಃ ಆ ಪದ್ಮರಾಜರೂಪನಾಗುವನು ॥೧॥

ಹೀಗೆ ಸರಸ್ವತಿಯು ಮಾತನ್ನು ಹೇಳುತಿರುವ ವಸಿಷ್ಠರು, ರಾಮಚಂದ್ರನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಹೀಗೆ ಆ ಸರಸ್ವತಿ ಹೇಳುತಿರುವುದನ್ನು ಕೇಳಿ, ಆ ಪಟ್ಟಣದಲ್ಲಿದ್ದ ಆ ದ್ವಿತೀಯ ಲೀಲೆಯು, ಮುಂದುಗಡೆ ವಿನೀತಳಾಗಿ ನಿಂತುಕೊಂಡು, ಕೈಮುಗಿದುಕೊಂಡು, ಆ ವಾಗ್ದೇವಿಯನ್ನು ಕುರಿತು ಹೇಳಿಕೊಂಡಳು ॥೨॥

ಆ ದ್ವಿತೀಯಲೀಲೆಯು ಹೇಳಿದುದೇನೆಂದರೆ:—

ಪೂಜ್ಯಳಾದ ಸರಸ್ವತೀದೇವಿಯು ನನ್ನಿಂದ ಪ್ರತಿದಿನವೂ ಅರ್ಚಿಸಲ್ಪಟ್ಟಿರುವಳು. ಅವಳು, ರಾತ್ರಿಕಾಲದಲ್ಲಿ ನನಗೆ ಸ್ವಪ್ನದಲ್ಲಿ ದರ್ಶನವನ್ನು ಕೊಡುತಿರುವಳು ॥೩॥

ಸಾ ಯಾದೃಶ್ಯೇವ ದೇವೇಶಿ ತಾದೃಶ್ಯೇವ ತ್ವಮಮ್ಬಿಕೇ ।
ತಸ್ಮೇ ಕೃಪಣಕಾರುಣ್ಯಾತ್ ವರಂ ದೇಹಿ ವರಾನನೇ ॥೪॥

ಶ್ರೀ ವಸಿಷ್ಠ ಉವಾಚ.

ಇತ್ಯುಕ್ತ್ವಾ ಸಾ ತದಾ ಜ್ಞಪ್ತಿಃ ಸ್ಮೃತ್ವಾ ತದ್ಭಕ್ತಿಭಾವನಮ್ ।
ಇದಂ ಪ್ರಸನ್ನಾ ಪ್ರೋವಾಚ ತಾಂ ಲೀಲಾಂ ತತ್ಪುರಾಸ್ಪದಾಮ್ ॥೫॥

ಶ್ರೀದೇವ್ಯುವಾಚ.

ಅನನ್ಯಯಾ ಭಾವನಯಾ ಯಾವಜ್ಜೀವಮನುಜ್ಝಿತಯಾ ।
ಪರಿತುಷ್ಟಾಸ್ಮಿ ತೇ ವತ್ಸೇ ಗೃಹಾಣಾಭಿಮತಂ ವರಮ್ ॥೬॥

ತದ್ದೇಶಲೀಲೋವಾಚ.

ರಣಾದ್ದೇಹಂ ಪರಿತ್ಯಜ್ಯ ಯತ್ರ ತಿಷ್ಠತಿ ಮೇ ಪತಿಃ ।
ಅನೇನೈವ ಶರೀರೇಣ ತತ್ರ ಸ್ಯಾಮೇತದಙ್ಗನಾ ॥೭॥

ಶ್ರೀದೇವ್ಯುವಾಚ.

ಏವಮಸ್ತು ತ್ವಯಾಽವಿಘ್ನಂ ಪೂಜಿತಾಸ್ಮಿ ಸುತೇ ಚಿರಮ್ ।
ಅನನ್ಯಭಾವಯಾ ಭೂರಿಪುಷ್ಪಧೂಪಸಪರ್ಯಯಾ ॥೮॥

ಹೇ ದೇವೇಶ್ವರಿ! ಹೇ ಅಮ್ಮ! ಅವಳು ಹೇಗಿರುವಳೋ, ನೀನೂ ಹಾಗೆಯೇ ಇರುವೆ. ನಿನಗೂ ಅವಳಿಗೂ ಸ್ವಲ್ಪವೂ ಭೇದವೇ ಕಾಣುವುದಿಲ್ಲ. ಆದುಕಾರಣ, ಹೇ ವರಾನನೆ! ನೀನು ನನ್ನಲ್ಲಿ ದೀನಳೆಂದು ಕರುಣೆಯಿಟ್ಟು, ವರವನ್ನನುಗ್ರಹಿಸು ॥೪॥

ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಆಗ ಈ ರೀತಿಯಾಗಿ ದ್ವಿತೀಯಲೀಲೆಯಿಂದ ಪ್ರಾರ್ಥಿತಳಾದ ಆ ವಾಗ್ದೇವಿಯು, ಅವಳು ಭಕ್ತಿಯಿಂದ ಮಾಡುತಿದ್ದ ಧ್ಯಾನ ಪೂಜಾದಿಗಳನ್ನು ನೆನೆಸಿ ಕೊಂಡು, ಅವಳ ವಿಷಯದಲ್ಲಿ ಅನುಗ್ರಹವುಳ್ಳವಳಾಗಿ, ಆ ವಿದೂರಥನ ಪಟ್ಟಣದಲ್ಲಿರುವ ಲೀಲೆಯನ್ನು ಕುರಿತು ಈ ಮಾತನ್ನು ಹೇಳಿದಳು ॥೫॥

ಆ ವಾಗ್ದೇವಿ ಹೇಳಿದುದೇನೆಂದರೆ:—

ವತ್ಸೆ! ನೀನು ಯಾವಜ್ಜೀವವೂ ಅನನ್ಯವಾಗಿ ನನ್ನಲ್ಲಿಟ್ಟಿದ್ದ ಭಕ್ತಿಭಾವನೆಯಿಂದ ನಾನು ನಿನ್ನ ವಿಷಯದಲ್ಲಿ ಸಂತುಷ್ಟಳಾಗಿರುವೆನು. ನಿನಗೆ ಬೇಕಾದ ವರವನ್ನು ತೆಗೆದುಕೊ॥

ಆ ಪ್ರದೇಶದಲ್ಲಿದ್ದ ದ್ವಿತೀಯಲೀಲೆಯು ಹೇಳುವಳು:—

ಭಗವತಿ! ಈ ನನ್ನ ಪತಿಯಾದ ವಿದೂರಥನು ಈಗ ಯುದ್ಧದಲ್ಲಿ ಈ ದೇಹವನ್ನು ಬಿಟ್ಟಬಳಿಕ ಎಲ್ಲಿ ಇರುವನೋ, ಅಲ್ಲಿ ನಾನು ಇದೇ ಶರೀರದಿಂದಲೇ ಈ ಸ್ತ್ರೀಯಾಗಿಯೇ ಇರಬೇಕೆಂದು ಪ್ರಾರ್ಥಿಸುವೆನು ॥೭॥

ಹೀಗೆ ಆ ದ್ವಿತೀಯಲೀಲೆಯಿಂದ ಪ್ರಾರ್ಥಿಸಲ್ಪಟ್ಟ ಶ್ರೀ ವಾಗ್ದೇವಿಯು ಹೇಳುವಳು:-

ವತ್ಸೆ! ನೀನು ನನ್ನನ್ನು ಬಹುಕಾಲ ಅನನ್ಯಚಿತ್ತಳಾಗಿ ಪುಷ್ಪ ಧೂಪ ಮುಂತಾದ ಪೂಜೆಯಿಂದ ಅಧಿಕವಾಗಿ ಪೂಜಿಸಿರುವೆಯಾದಕಾರಣ, ನೀನು ಪ್ರಾರ್ಥಿಸಿಕೊಂಡಂತೆಯೇ ಆಗಲಿ ॥೮॥

ಶ್ರೀ ವಸಿಷ್ಠ ಉವಾಚ.

ಅಥ ತದ್ದೇಶಲೀಲಾಯಾಂ ಫುಲ್ಲಾಯಾಂ ತದ್ವರೋದಯಾತ್ ।
ಪೂರ್ವಲೀಲಾಬ್ರವೀದ್ದೇವೀಂ ಸನ್ದೇಹಲುಲಿತಾಶಯಾ ॥೯॥

ಪೂರ್ವಲೀಲೋವಾಚ.

ಯೇ ಸತ್ಯಕಾಮಾಃ ಸನ್ತ್ಯೇವಂ ಸಙ್ಕಲ್ಪಾಬ್ರಹ್ಮರೂಪಿಣಃ ।
ತ್ವಾದೃಶಾಃ ಸರ್ವಮೇವಾಶು ತೇಷಾಂ ಸಿಧ್ಯತ್ಯಭೀಪ್ಸಿತಮ್ ॥೧೦॥
ತತ್ ತೇನೈವ ಶರೀರೇಣ ಕಿಮರ್ಥಂ ನಾಹಮೀಶ್ವರಿ ।
ಲೋಕಾನ್ತರಮಿದಂ ನೀತಾ ತಂ ಗಿರಿಗ್ರಾಮಕಂ ವದ ॥೧೧॥

ಶ್ರೀದೇವ್ಯುವಾಚ.

ನ ಕಿಂಚಿತ್ ಕಸ್ಯಚಿದಹಂ ಕರೋಮಿ ವರವರ್ಣಿನಿ ।
ಸರ್ವಂ ಸಮ್ಪಾದಯತ್ಯಾಶು ಸ್ವಯಂ ಜೀವಃ ಸ್ವಮಾಹಿತಮ್ ॥೧೨॥
ಅಹಂ ಹಿತಂ ರಟೀ ಜ್ಞಪ್ತಿಃ ಸಂವಿನ್ಮಾತ್ರಾಧಿದೇವತಾ ।
ಪ್ರತ್ಯೇಕಮಸ್ತಿ ಚಿಚ್ಛಕ್ತಿಃ ಜೀವಶಕ್ತಿಸ್ವರೂಪಿಣೀ ॥೧೩॥

ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳುವರು:—

ಅಯ್ಯಾ! ರಾಮ! ಈ ರೀತಿಯಾಗಿ ಆ ವಾಗ್ದೇವಿಯು ವರಪ್ರದಾನ ಮಾಡಿದ ಬಳಿಕ, ಆ ಪ್ರದೇಶದಲ್ಲಿದ್ದ ಲೀಲೆಯು ಆ ವರಪ್ರಾಪ್ತಿಯಿಂದ ಹೃಷ್ಟಳಾಗಲಾಗಿ, ಪೂರ್ವ ಲೀಲೆಯು ಸಂದೇಹಗ್ರಸ್ತ ಹೃದಯಳಾಗಿ ಆ ಸರಸ್ವತಿಯನ್ನು ಕುರಿತು ಮಾತನಾಡಿದಳು॥೯॥

ಆ ಪೂರ್ವಲೀಲೆ ಹೇಳಿದುದೇನೆಂದರೆ:—

ಎಲೌ! ದೇವಿ! ಹೀಗೆ ಸತ್ಯಕಾಮರಾಗಿರುವ ಸತ್ಯಸಂಕಲ್ಪರಾದ ಪರಬ್ರಹ್ಮಸ್ವರೂಪರಾದ ನಿನ್ನಂತಹ ಯಾವ ಮಹಾತ್ಮರಿರುವರೋ, ಅವರ ಸಮಸ್ತವಾದ ಇಷ್ಟಾರ್ಥವೂ ಆಕ್ಷಣವೇ ಸಿದ್ಧಿಸುವುದು ॥೧೦॥

ಆದುಕಾರಣ, ಎಲೌ ಪರಮೇಶ್ವರಿ! ಈ ಲೀಲೆಗೆ ವರಪ್ರದಾನಮಾಡಿದಂತೆ, ನನ್ನನ್ನು ನೀನು ಏತಕ್ಕಾಗಿ ಈ ಸ್ಥೂಲದೇಹದಿಂದಲೇ ಇಲ್ಲಿಗೆ ಕರೆದುಕೊಂಡು ಬರಲಿಲ್ಲ? ಮತ್ತು ಆ ಗಿರಿಗ್ರಾಮಕ್ಕೂ ಸ್ಥೂಲದೇಹದಿಂದಲೇ ಏತಕ್ಕೆ ಕರೆದುಕೊಂಡು ಹೋಗುವುದಿಲ್ಲ?— ಇದನ್ನು ಅಪ್ಪಣೆಕೊಡು ॥೧೧॥

ಇದನ್ನು ಕೇಳಿ ಆ ವಾಗ್ದೇವಿಯು ಉತ್ತರ ಹೇಳಿದಳು:—

ಎಲೌ! ಲೀಲೆ! ನಾನು ಯಾರಿಗೂ ಯಾವುದನ್ನೂ ಉಂಟುಮಾಡತಕ್ಕವಳಲ್ಲ. ಜೀವನು, ತಾನೇ ತನ್ನ ಅಭೀಪ್ಸಿತವಾದುದನ್ನೆಲ್ಲ ಸಂಪಾದಿಸಿಕೊಳ್ಳುವನು ॥೧೨॥

ಚಿನ್ಮಾತ್ರಾಧಿದೇವತೆಯಾಗಿರುವ ನಾನು, ಕೇವಲಜ್ಞಪ್ತಿರೂಪಳಾಗಿ, ಪ್ರಾಣಿಗಳ ಇಷ್ಟಾರ್ಥಗಳೆಲ್ಲವನ್ನೂ ಪ್ರಕಾಶಪಡಿಸತಕ್ಕವಳಾಗಿರುವೆನು. ಇಷ್ಟೇಹೊರತು, ಅವುಗಳನ್ನು ಕೊಡತಕ್ಕ ಶಕ್ತಿಯು ನನಗಿರುವುದಿಲ್ಲ. ಈ ವಿಷಯದಲ್ಲಿ ಶಕ್ತವಾದ ಜೀವಶಕ್ತಿರೂಪವಾಗಿರುವ ಚಿಚ್ಛಕ್ತಿಯು ಬೇರೆಯಾಗಿರುವುದು ॥೧೩॥

ಜೀವಸ್ಯೋದೇತಿ ಯಾ ಶಕ್ತಿಃ ಯಸ್ಯಯಸ್ಯ ಯಥಾಯಥಾ |
ಭಾತಿ ತತ್ಫಲದಾ ನಿತ್ಯಂ ತಸ್ಯತಸ್ಯ ತಥಾತಥಾ ||೧೪||
ಮಾಂ ಸಮಾರಾಧಯನ್ತ್ಯಾಸ್ತು ಜೀವಶಕ್ತಿಸ್ತವೋದಿತಾ |
ತದಾಭವದ್ಯದೀಹ ಸ್ಯಾಂ ಮುಕ್ತಾಸ್ಮೀತಿ ಚಿರಂ ತದಾ ||೧೫||
ತೇನ ತೇನ ಪ್ರಕಾರೇಣ ತ್ವಂ ಮಯಾ ಸಮ್ಪ್ರಬೋಧಿತಾ |
ತಯಾ ಯುಕ್ತ್ಯಾವಲಂಭಾವಂ ನೀತಾಸಿ ವರವರ್ಣಿನಿ ||೧೬||
ಅನಯೈವಂ ಭಾವನಯಾ ಬೋಧಿತಾಸಿ ಚಿರಂ ತದಾ |
ತಮೇವಾರ್ಥಂ ಪ್ರಾಪ್ತವತೀ ಸದಾ ಸ್ವಚಿತಿಶಕ್ತಿತಃ ||೧೭||
ಯಸ್ಯಯಸ್ಯ ಯಥೋದೇತಿ ಸ್ವಚಿತ್ಪ್ರಯತನಂ ಚಿರಮ್ |
ಫಲಂ ದದಾತಿ ಕಾಲೇನ ತಸ್ಯತಸ್ಯ ತಥಾತಥಾ ||೧೮||
ತಪೋ ವಾ ದೇವತಾ ವಾಪಿ ಭೂತ್ವಾ ಸ್ವೈವ ಚಿದನ್ಯಥಾ |
ಫಲಂ ದದಾತ್ಯಥ ಸ್ವೈರಂ ನಭಃಫಲನಿಪಾತವತ್ ||೧೯||

ಚಿಚ್ಛಕ್ತಿಯು, ಯಾವಯಾವ ಜೀವನಿಗೆ ಯಾವಯಾವವಿಧವಾಗಿ ಯಾವಯಾವರೂಪವಾಗಿ ಉದಯಿಸುವುದೋ, ಆಯಾ ಜೀವನಿಗೆ ಆಯಾವಿಧವಾಗಿ ಅಂತಹ ಫಲವನ್ನು ಕೊಡತಕ್ಕುದಾಗಿ ಪ್ರಕಾಶಮಾನವಾಗಿರುವುದು ||೧೪||

ಪೂರ್ವದಲ್ಲಿ ನೀನು ನನ್ನನ್ನು ಆರಾಧಿಸುವಾಗ, ನಿನಗೆ—ಈಗಲೇ ನಾನು ಮುಕ್ತಳಾಗಬೇಕು—ಎನ್ನುವುದಾಗಿ ಜೀವಶಕ್ತಿಯುತ್ಪನ್ನವಾಗಿದ್ದಿತು ||೧೫||

ಅದುಕಾರಣ, ಎಲೌ ! ಲೀಲೆ! ನಾನು ನಿನ್ನನ್ನು ಅಪ್ರಕಾರವಾಗಿ ಪ್ರಬುದ್ಧಳನ್ನಾಗಿ ಮಾಡಿದೆನು. ಆ ಮಾರ್ಗವಾಗಿಯೇ ಜ್ಞಾನಾವಿರ್ಭಾವದಿಂದ ಅಜ್ಞಾನಾವರಣವನ್ನು ಕಳೆದುಕೊಂಡಿರುವವಳನ್ನಾಗಿಯೂ ಮಾಡಿರುವೆನು ||೧೬||

ಆಗ ನೀನು ಆವಿಧವಾದ ಭಾವನೆಯಿಂದಲೇ ಬೋಧಿತಳಾದೆ. ಅದುಕಾರಣ ಸ್ವಕೀಯವಾದ ಜ್ಞಾನಬಲದಿಂದ, ಸರ್ವದಾ ಆವಿಧವಾಗಿರುವ ಇಷ್ಟಾರ್ಥವನ್ನೇ ಹೊಂದಿದವಳೂ ಆಗಿರುವೆ ||೧೭||

ಯಾವಯಾವನಿಗೆ ಯಾವಯಾವವಿಧವಾಗಿ ಚಿರಕಾಲಿಕವಾದ ತನ್ನ ಜ್ಞಾನಪ್ರಯತ್ನವುದಯಿಸುವುದೋ, ಅವನವನಿಗೆ ಭವಿಷ್ಯತ್ಕಾಲದಲ್ಲಿ ಆಯಾವಿಧವಾಗಿ ಫಲವನ್ನೂ ಕೊಡತಕ್ಕುದಾಗುವುದು ||೧೮||

ಪುರುಷರಿಗೆ ಸ್ವಕೀಯವಾದ ಜ್ಞಾನವೇ, ತಪಸ್ಸಾಗಿಯೋ—ಅಥವಾ ದೇವತೆಯೋಗಿಯೋ—ರೂಪಾಂತರವುಳ್ಳುದಾಗಿ, ಆಕಾಶಫಲಪತನಸದೃಶವಾದ(ಅನೃತ) ಫಲವನ್ನು ತನ್ನಿಚಾನುಗುಣವಾಗಿ ಕೊಡುವುದು ||೧೯||

ಸ್ವಸಂವಿದ್ಯತನಾದನ್ಯತ್ ನ ಕಿಂಚಿಚ್ಚ ಕದಾಚನ ।
ಫಲಂ ದದಾತಿ ತೇನಾಶು ಯಥೇಚ್ಛಸಿ ತಥಾ ಕುರು ॥೨೦॥

ಚಿದ್ಭಾವಏವ ನನು ಸರ್ಗಗತೋನ್ತರಾತ್ಮಾ
ಯಚ್ಚೇತತಿ ಪ್ರಯತತೇ ಚ ತದೈತಿ ತಚ್ಛ್ರೀಃ।
ರಮ್ಯಂ ಹ್ಯರಮ್ಯಮಥವೇತಿ ವಿಚಾರಯಸ್ವ
ಯತ್ ಪಾವನಂ ತದವಬುಧ್ಯ ತದನ್ತರಾಸ್ವ ॥೨೧॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಸತ್ಯಕಾಮಸತ್ಯಸಙ್ಕ
ಲ್ಪಾಸ್ತಿತಾನಾಮ ಪಞ್ಚಚತ್ವಾರಿಂಶಃ ಸರ್ಗಃ.

ಸ್ವೀಯವಾದ ಜ್ಞಾನಪ್ರಯತ್ನಹೊರತು, ಮತ್ತಾವುದೂ ಯಾವಾಗಲೂ ಫಲದಾಯಕ ವಾದುದಲ್ಲ. ಆದುಕಾರಣ, ನೀನು ಹೇಗೆ ಅಪೇಕ್ಷಿಸುವೆಯೋ—ಹಾಗೆ ಶೀಘ್ರವಾಗಿ ಮಾಡು ವವಳಾಗು ॥೨೦॥

ಎಲೌ! ಲೀಲೆ! ಆ ಚಿತ್ತಿನ ಸದ್ಭಾವವೇ, ಸೃಷ್ಟಿಯನ್ನು ಹೊಂದಿರುವ ಅಂತರಾತ್ಮನೆನಿ ಸಿಕೊಳ್ಳುವುದು. ಆದರ ಸೊಬಗು, ಯಾವುದನ್ನು ಕುರಿತು ಪ್ರಬೋಧವುಳ್ಳದಾಗಿ ಪ್ರಯ ತ್ನಪಡುವುದೋ, ಅದನ್ನು ಹೊಂದುವುದು. ಆದುಕಾರಣ, ನೀನು— 'ಯಾವುದು ರಮ್ಯವಾ ಗಿರುವುದು ?—ಎಂದು ಚೆನ್ನಾಗಿ ಪರ್ಯಾಲೋಚಿಸು. ಬಳಿಕ, ಯಾವುದು ಅತಿಪವಿತ್ರವಾಗಿ ಕಾಣುವುದೋ, ಅದನ್ನು ತಿಳಿದು ಅದರಲ್ಲಿಯೇ ಸುಖವಾಗಿರು ॥೨೧॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಸತ್ಯಕಾಮಸತ್ಯ
ಸಂಕಲ್ಪಾಸ್ತಿತ್ವನಿರೂಪಣವೆಂಬ ನಾಲ್ವತ್ತೈದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಷಟ್ಚತ್ವಾರಿಂಶಃ ಸರ್ಗಃ.

ಶ್ರೀ ರಾಮಉವಾಚ.

ಏವಂ ಸಜ್ಜಕಥಯನ್ತೀಷು ತಾಸು ತಸ್ಮಿನ್ ಗೃಹೋದರೇ ।
ವಿದೂರಥಃ ಕಿಮಕರೋತ್ ನಿರ್ಗತ್ಯ ಕುಪಿತೋ ಗೃಹಾತ್ ॥೧॥

ಶ್ರೀ ವಸಿಷ್ಠ ಉವಾಚ.

ವಿದೂರಥಃ ಸ್ವಸದನಾತ್ ನಿರ್ಗತ್ಯ ಪರಿವಾರಿತಃ ।
ಪರಿವಾರೇಣ ಮಹತಾ ಋಕ್ಷೌಘೇಣೇವ ಚನ್ದ್ರಮಾಃ ॥೨॥
ಸನ್ನದ್ಧಸರ್ವಾವಯವೋ ಲಗ್ನಹಾರವಿಭೂಷಣಃ ।
ಮಹಾಜಯಜಯಾರಾವೈಃ ಸುರೇನ್ದ್ರ ಇವ ನಿರ್ಗತಃ ॥೩॥

ಉತ್ಪತ್ತಿಪ್ರಕರಣದಲ್ಲಿ ನಾಲ್ವತ್ತಾರನೆಯ ಸರ್ಗವು.

ವಿದೂರಥಸ್ಯ ಯುದ್ಧಾರ್ಥಂ ನಿರ್ಗಮಃ ಸೈನ್ಯಸಮ್ಭ್ರಮೈಃ ।
ರಣಭೂಮಿಪ್ರವೇಶೇನ ಯುದ್ಧಾರಮ್ಭಶ್ಚ ವರ್ಣ್ಯತೇ ॥

ವಿದೂರಥನು ಯುದ್ಧಾರ್ಥವಾಗಿ ಸೈನ್ಯಸಂಭ್ರಮದೊಡನೆ ಹೊರಡುವಿಕೆಯೂ ಯುದ್ಧಭೂಮಿಪ್ರವೇಶಮಾಡಿದ ಬಳಿಕ ಯುದ್ಧಪ್ರಾರಂಭವಾಗುವಿಕೆಯೂ ಈ ಸರ್ಗದಲ್ಲಿ ವರ್ಣಿಸಲ್ಪಡುಡುವುವು ॥

ಶ್ರೀರಾಮನು ಪ್ರಶ್ನೆ ಮಾಡುವನು:—

ಪೂಜ್ಯರೆ ! ಆ ಅರಮನೆಯೊಳಗೆ ಆ ಸ್ತ್ರೀಯರು ಪೂರ್ವೋಕ್ತರೀತಿಯಾಗಿ ಮಾತನಾಡುತ್ತಿರುವಾಗ, ಕೋಪಾವಿಷ್ಟನಾಗಿ ಅರಮನೆಯಿಂದ ಹೊರಟುಹೋದ ಆ ವಿದೂರಥನು ಏನುಮಾಡಿದನು ? ॥೧॥

ಶ್ರೀ ವಸಿಷ್ಠರು ಉತ್ತರ ಹೇಳುವರು:—

ಅಯ್ಯಾ ! ರಾಮ ! ಪೂರ್ವೋಕ್ತರೀತಿಯಾಗಿ ತನ್ನ ಮನೆಯಿಂದ ಹೊರಟುಹೋದ ಆ ವಿದೂರಥನು, ನಕ್ಷತ್ರಸಮೂಹದಿಂದ ಚಂದ್ರನು ಪರಿವೃತನಾಗುವಂತೆ, ದೊಡ್ಡದಾದ ಪರಿವಾರದಿಂದ ಪರಿವೃತನಾದನು ॥೨॥

ಆಗ ಅವನು, ಸಮಸ್ತವಾದ ಅವಯವಗಳಿಗೂ ಕವಚ ಮುಂತಾದುದನ್ನು ಕ್ರಮವಾಗಿ ಕಟ್ಟಿಕೊಂಡು, ಮುಕ್ತಾಸರ ಮುಂತಾದ ಆಭರಣಗಳನ್ನಿಟ್ಟುಕೊಂಡು, ವಂದಿಗಳು ಮಾಡುತ್ತಿರುವ ‘ ಜಯಜಯ ’ ಎಂಬ ಮಹಾಕೋಲಾಹಲವನ್ನು ಕೇಳುತ, ಸಾಕ್ಷಾದ್ದೇವೇಂದ್ರನಂತೆ ಹೊರಟನು ॥೩॥

ಸಮಾದಿಶನ್ ಯೋಧಗಣಂ ಶೃಣ್ವನ್ ಮಣ್ಡಲಸಂಸ್ಥಿತಿಮ್ |
ಆಲೋಕಯನ್ ವೀರಗಣಾನ್ ಆರುರೋಹ ನೃಪೋ ರಥಮ್ ||೪||
ಕೂಟಾಕಾರಸಮಾಕಾರಂ ಮುಕ್ತಾಮಾಣಿಕ್ಯಮಣ್ಡಿತಮ್ |
ಪತಾಕಾಪಞ್ಚಭಿರ್ವ್ಯಾಪ್ತಂ ದ್ಯುವಿಮಾನಮಿವೋತ್ತಮಮ್ ||೫||
ಚಕ್ರಭಿತ್ತಿಪರಿಪ್ರೋತಸ್ರಕಚತ್ಕಾಞ್ಚನಾಙ್ಕುರಮ್ |
ಮುಕ್ತಾಜಾಲರಣತ್ಕಾರಚಾರುವಿಕ್ರಸುಕೂಬರಮ್ ||೬||
ಸುಗ್ರೀವೈರ್ಲಕ್ಷಣೋಪೇತೈಃ ಪ್ರಶಸ್ತೈಃ ಪ್ರಚಲೈಃ ಕೃಶೈಃ |
ಜವೋಡ್ಡಯನವೇಗೇನ ಪ್ರವಹದ್ಭಿಃ ಸುರಾನಿವ ||೭||
ವಾಯುಂ ಜವೇನ ಸಹಸಾ ಅಸಹದ್ಭಿರ್ಗತಿಕ್ರಮೈಃ |
ಪ್ರೋಹ್ಯದ್ಭಿರಿವ ಪಶ್ಚಾರ್ಧಂ ಆಪಿಬದ್ಭಿರಿವಾಮ್ಬರಮ್ ||೮||
ಯೋಜಿತೈರಿವ ಸಮ್ಪೂರ್ಣೈಃ ಚನ್ದ್ರೈಶ್ಚಾಮರದೀಪ್ತಿಭಿಃ |
ಅಶ್ವೈರಷ್ಟಭಿರಾಬದ್ಧಂ ಆಶಾಪೂರಕಹೇಷಿತೈಃ ||೯||

ಮತ್ತು ಆ ದೊರೆಯು, ಯೋಧಸಮೂಹಗಳನ್ನು ಆಯಾ ಕೆಲಸಗಳಲ್ಲಿ ಆಜ್ಞಾಪಿಸುತ, ಉಭಯಸೈನ್ಯಗಳಲ್ಲಿಯೂ ಮಾಡಿರುವ ವ್ಯೂಹರಚನಾ ವಿಶೇಷಗಳನ್ನು ಕೇಳುತ, ವೀರ ಸಮುದಾಯಗಳನ್ನು ಮರ್‍ಯಾದೆಯಿಂದ ನೋಡುತ, ದಿವ್ಯವಾದ ರಥವನ್ನು ಹತ್ತಿದನು ॥೪॥

ಆ ರಥವು, ದೊಡ್ಡ ಪರ್ವತಶಿಖರಕ್ಕೆ ಸಮಾನವಾಗಿದ್ದಿತು. ಮುತ್ತು ಮಾಣಿಕ್ಯಗಳಿಂದ ಅದನ್ನಲಂಕರಿಸಿದ್ದರು. ಅದಕ್ಕೆ ಐದು ಧ್ವಜಪಟಗಳನ್ನು ಕಟ್ಟಿದ್ದರು. ಅದು ಪುಷ್ಪಕವಿಮಾನದಂತೆ ಬಹು ಪ್ರಶಸ್ತವಾಗಿದ್ದಿತು ॥೫॥

ಅದರ ಚಕ್ರಗಳಲ್ಲಿಯೂ ಸುತ್ತಲೂ ಇರುವ ಭಿತ್ತಿ(ಆವರಣ)ಗಳಲ್ಲಿಯೂ ಥಳಥಳನೆ ಹೊಳೆಯುವ ಚಿನ್ನದ ಮೊಳೆಗಳನ್ನು ಸೇರಿಸಿದ್ದರು. ತುದಿಯಲ್ಲಿ ಕಟ್ಟಿರುವ ಮುತ್ತಿನ ಗುದಿಗಳು ಒಂದಕ್ಕೊಂದು ತಗುಲಿ ಸದ್ದುಮಾಡುತ, ಅದರ ಮೇಲುಭಾಗವೆಲ್ಲ ಮನೋಹರವಾಗುವಂತೆ ಮಾಡಿದ್ದುವು ॥೬॥

ಆ ರಥಕ್ಕೆ, ದಿವ್ಯವಾದ ಎಂಟು ಕುದುರೆಗಳನ್ನು ಕಟ್ಟಿದ್ದರು. ಅವುಗಳ ಕುತ್ತಿಗೆಯು ಬಹು ಸುಂದರವಾಗಿದ್ದಿತು. ಸಮಸ್ತ ಸಲ್ಲಕ್ಷಣಗಳೂ ಅವುಗಳಲ್ಲಿದ್ದುವು. ಅವು ಉತ್ತಮವಾಗಿಯೂ ವೇಗಶಾಲಿಗಳಾಗಿಯೂ ಕೃಶಾಂಗಗಳಾಗಿಯೂ ಇದ್ದುವು. ಅವುಗಳು ವೇಗವಾಗಿ ಹಾರಿಹೋಗುತ್ತಿರುವುದನ್ನು ನೋಡಿದರೆ, ದೇವತೆಗಳನ್ನೂ ಹೊತ್ತುಕೊಂಡು ಹೋಗುವುವೋ ಎನ್ನುವಹಾಗಿದ್ದಿತು. ಅವುಗಳು ನಡೆಯುತ್ತಿರುವ ಕ್ರಮವನ್ನು ನೋಡಿದರೆ, ಅತಿಶಯಿತವಾದ ವೇಗದ ವಿಷಯದಲ್ಲಿ ವಾಯುವನ್ನೂ ಸಹಿಸಲಾರದಿರುವುವೋ ಎಂಬಂತೆ ಕಾಣುತಿದ್ದುವು. ದೇಹದ ಪೂರ್ವಭಾಗದಿಂದಲೇ ಹಾರಿಹೋಗುವಾಗ, ನೋಡುವವರಿಗೆ—ಹಿಂಭಾಗವನ್ನು ಎಳೆದುಕೊಂಡು ಹೋಗುತಿರುವಂತೆಯೂ ಆಕಾಶವನ್ನು ಪಾನಮಾಡುತಿರುವಂತೆಯೂ ಭ್ರಮೆಯುಂಟಾಗುತಿದ್ದಿತು. ಅವುಗಳ ತಲೆಯಮೇಲೆ ಕಟ್ಟಿರುವ ಚಾಮರಗಳ ಪ್ರಕಾಶವನ್ನು ನೋಡಿದರೆ, ಪೂರ್ಣಚಂದ್ರಬಿಂಬವನ್ನು ತಂದು ಕಟ್ಟಿರುವರೋ ಎಂಬಂತೆ ಕಾಣುತಿದ್ದಿತು. ಅವುಗಳ ಧ್ವನಿಯು ದಿಗಂತಗಳನ್ನೆಲ್ಲ ವ್ಯಾಪಿಸುತಿದ್ದಿತು ॥೭-೯॥

ಅಥೋದಪತದುದ್ದಾಮನಾಗಾಭ್ರರವನಿರ್ಭರಃ ।
ಶೈಲಭಿತ್ತಿಪ್ರತಿಧ್ವಾನದಾರುಣೋ ದುನ್ದುಭಿಧ್ವನಿಃ ॥೧೦॥
ಮತ್ತಸೈನಿಕನಿರ್ಮುಕ್ತೈಃ ವ್ಯಾಪ್ತಂ ಕಲಕಲಾರವೈಃ ।
ಕಿಙ್ಕಿಣೀಜಾಲನಿರ್ಧ್ವಾನೈಃ ಹೇತಿಸಙ್ಘಟ್ಟಘಟ್ಟಿತೈಃ ॥೧೧॥
ಧನುಶ್ಚಟಚಟಾಶಬ್ದೈಃ ಶರಸೀತ್ಕಾರಗಾಯನೈಃ ।
ಪರಸ್ಪರಾಙ್ಗನಿಷ್ಪಿಷ್ಟಕವಚೌಘಝುಣಜ್ಝಣೈಃ ॥೧೨॥
ಜ್ವಲದಗ್ನಿಟಣತ್ಕಾರೈಃ ಆರ್ತಿಮತ್ಕ್ರನ್ದನಾರವೈಃ ।
ಪರಸ್ಪರಭಟಾಹ್ವಾನೈಃ ಬನ್ದಿವಿಕ್ಷುಬ್ಧರೋದನೈಃ ॥೧೩॥
ಶಿಲಾಘನೀಕೃತಾಶೇಷಬ್ರಹ್ಮಾಣ್ಡಕುಹರೋ ಧ್ವನಿಃ ।
ಹಸ್ತಗ್ರಾಹ್ಯೋಭವದ್ಭೀಮೋ ದಶಾಶಾಕುಞ್ಜಪೂರಕಃ ॥೧೪॥
ಅಥೋದಪತದಾದಿತ್ಯಪಥಪೀವರರೋಧಕಮ್ ।
ರಜೋನಿಭೇನ ಭೂಪೀಠಂ ಅಮ್ಬರೋಡ್ಡಯನೋನ್ಮುಖಮ್ ॥೧೫॥

ಇಂತಹ ರಥೋತ್ತಮವನ್ನು ಆ ವಿದೂರಥನು ಹತ್ತಿದಬಳಿಕ, ಆ ಸೈನ್ಯದಲ್ಲಿ ದೊಡ್ಡದೊಂದು ದುಂದುಭಿಧ್ವನಿಯುತ್ಪನ್ನವಾಯಿತು. ಗಜಗಳೆಂಬ ಮೇಘಗಳ ಉದ್ದಾಮವಾದ ಶಬ್ದದಿಂದ ಅದು ಪರಿಪೂರ್ಣವಾಗಿದ್ದಿತು. ಪರ್ವತಗಳ ಗುಹಾಂತರಾಳದಲ್ಲಿ ಪ್ರವೇಶಿಸಿ ಅಲ್ಲಿಂದ ಪ್ರತಿಧ್ವನಿ ಹೊರಡುತಿರುವುದರಿಂದ, ಈ ದುಂದುಭಿಧ್ವನಿಯು ಮತ್ತೂ ಘೋರವಾಗಿದ್ದಿತು ॥೧೦॥

ಮತ್ತರಾದ ಸೈನಿಕರು ಮಾಡುತಿರುವ ಕಲಕಲಧ್ವನಿಯೂ, ಸಣ್ಣಸಣ್ಣ ಗಂಟೆಗಳಮೇಲೆ ಆಯುಧಗಳು ತಗುಲುವುದರಿಂದ ಉಂಟಾಗುವ ನಾದಗಳೂ, ಧನುಸ್ಸುಗಳಿಂದ ಹೊರಡುವ ಚಟಚಟ ಶಬ್ದವೂ, ಬಾಣಮೋಕ್ಷಕಾಲದಲ್ಲಾಗುವ ಸೀತ್ಕಾರಧ್ವನಿಯೂ, ಸೈನಿಕರು ಹಾಕಿಕೊಂಡಿರುವ ಕವಚಗಳು ಒಂದಕ್ಕೊಂದು ತಿಕ್ಕುವುದರಿಂದ ಹುಟ್ಟುವ ಝುಣಝುಣ ಶಬ್ದವೂ, ಉರಿಯುತಿರುವ ಬೆಂಕಿಯ ಟಣತ್ಕಾರಧ್ವನಿಯೂ, ಏಟುತಿಂದು ಯಾತನೆಯನ್ನನುಭವಿಸುತ್ತಿರುವವರ ರೋದನಧ್ವನಿಯೂ, ಭಟರುಗಳು ಒಬ್ಬರನ್ನೊಬ್ಬರು ಕರೆಯುತಿರುವ ಕೂಗೂ, ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟವರ ರೋದನಶಬ್ದವೂ, ಆ ದುಂದುಭಿಧ್ವನಿಯೊಡನೆ ಸೇರಿಕೊಂಡಿದ್ದುವು ॥೧೧—೧೩॥

ಇಂತಹ ರಣದುಂದುಭಿಧ್ವನಿಯು, ಸಮಸ್ತವಾದ ಬ್ರಹ್ಮಾಂಡಗರ್ಭವನ್ನೂ ಕಲ್ಲಿನಂತೆ ಗಟ್ಟಿಯಾಗುವಹಾಗೆ ಮಾಡಿತು. ಎಲ್ಲಿ ಬೇಕಾದರೂ ಆ ಧ್ವನಿಯು ಕೈಯೊಳಗೆ ಹಿಡಿದುಕೊಳ್ಳುವುದಕ್ಕೆ ಸಿಕ್ಕುವಂತೆ ತೋರುತಿದ್ದಿತು. ಇಂತಹ ದುಂದುಭಿಧ್ವನಿಯು, ದಶದಿಕ್ಕುಗಳ ಅಂತರಾಳವನ್ನು ಮುಚ್ಚುತ ಹೊರಟಿತು ॥೧೪॥

ಇಂತಹ ದುಂದುಭಿಶಬ್ದವೆದ್ದಬಳಿಕ, ಭೂಮಿಪ್ರದೇಶವು, ಆಕಾಶಕ್ಕೆ ಹಾರಬೇಕೆಂದು ಉದ್ಯುಕ್ತವಾದುದಾಗಿ, ಧೂಳಿಯೆಂಬ ವ್ಯಾಜದಿಂದ ಸೂರ್ಯನ ಮಾರ್ಗವನ್ನೇ ತಡೆಯುತ ಮೇಲಕ್ಕೆದ್ದಿತು ॥೧೫॥

ಗರ್ಭವಾಸಮಿವಾಪನ್ನಂ ತೇನಾಸೀತ್ ತನ್ಮಹಾಪುರಮ್ ।
ಮೂಢತ್ವಂ ಯೌವನೇನೇವ ಘನತಾಮಾಯಯೌ ತಮಃ ॥೧೬॥
ಪ್ರಯಯುಃ ಕ್ವಾಪಿ ದೀಪೌಘಾಃ ದಿವಸೇನೇವ ತಾರಕಾಃ ।
ಆಯಯುರ್ಬಲಮಾಲೋಲಾಃ ನೈಶಭೂತಪರಮ್ಪರಾಃ ॥೧೭॥
ದದೃಶುಸ್ತನ್ಮಹಾಯುದ್ಧಂ ದ್ವೇ ಲೀಲೇ ಸಾ ಕುಮಾರಿಕಾ ।
ಪ್ರಸ್ಫುಟದ್ಧೃದಯೇನೇವ ದೇವೀದತ್ತಮಹಾದೃಶೌ ॥೧೮॥
ಪ್ರಶೇಮುರಥಹೇತೀಷುಪ್ರೋದ್ಯತ್ಕಟಕಟಾರವಾಃ ।
ಏಕಾರ್ಣವಪಯಃಪೂರೈಃ ಬಾಡಬಾ ಇವ ವಹ್ನಯಃ ॥೧೯॥
ಶನೈಃ ಸೇನಾಂ ಸಮಾಕರ್ಷನ್ ನಾಜ್ಞಾಯ ಚ ಬಲಾನ್ತರಮ್ ।
ವಿವೇಶ ಪಕ್ಷಪ್ರೋಡ್ಡೀನೋ ಮೇರುರೇಕಮಿವಾರ್ಣವಮ್ ॥೨೦॥
ಅಥೋದಭೂದ್ಗುಣಧ್ವಾನಂ ಚಟಚ್ಚಟದಿತಿ ಸ್ಫುಟಮ್ ।
ರಚಿತಾಂಶುಮಯಾಮ್ಭೋದಾಃ ಚೇರುಃ ಪರಪರಮ್ಪರಾಃ ॥೨೧॥

ಆ ಪಟ್ಟಣದ ಸುತ್ತಲೂ ಈ ಧೂಳಿಯು ವ್ಯಾಪಿಸಿಕೊಂಡಿರುವುದರಿಂದ, ಆ ಪಟ್ಟಣವು ಗರ್ಭವಾಸವನ್ನು ಹೊಂದಿರುವಂತೆ ಕಾಣುತಿದ್ದಿತು. ಯೌವನಪ್ರಾದುರ್ಭಾವದಿಂದ ಮೂಢತನವು ನಿಬಿಡವಾಗುವಂತೆ, ಇದರಿಂದ ಅಂಧಕಾರವು ಮತ್ತೂ ನಿಬಿಡವಾಯ್ತು ॥೧೬॥

ಹಗಲುಂಟಾದಮೇಲೆ ನಕ್ಷತ್ರಗಳು ಓಡಿಹೋಗುವಂತೆ, ಆ ರಜಃಪ್ರಸರಣವಾದಾಗ ದೀಪಸಮುದಾಯಗಳು ಎಲ್ಲಿಯೋ ಹೋಗಿಬಿಟ್ಟುವು. ರಾತ್ರಿಕಾಲದಲ್ಲಿ ಸಂಚಾರಮಾಡತಕ್ಕ ಪ್ರಾಣಿಸಮೂಹಗಳು, ಅಲ್ಲಲ್ಲಿ ಸುಳಿದಾಡುತ, ಬಲಾಧಿಕ್ಯವನ್ನು ಹೊಂದಿದುವು॥

ಆಗ, ಆ ವಾಗ್ದೇವಿಯಿಂದ ದಿವ್ಯದೃಷ್ಟಿಕೊಡಲ್ಪಟ್ಟವರಾಗಿರುವ ಆ ಇಬ್ಬರು ಲೀಲೆಯರೂ ಆ ಕುಮಾರಿಕೆಯೂ ಆ ದೊಡ್ಡ ಯುದ್ಧವನ್ನು ನೋಡುತ್ತಿದ್ದರು. ಆ ಕಾಲದಲ್ಲಿ ಅವರ ಎದೆಯು ಒಡೆದುಹೋಗುವಹಾಗಾಯ್ತು ॥೧೮॥

ಆ ವಿದೂರಥನು ಯುದ್ಧಭೂಮಿಯನ್ನು ಪ್ರವೇಶಮಾಡಿದ ಬಳಿಕ, ಪ್ರಳಯಕಾಲದಲ್ಲಿ ಏಕಾರ್ಣವಜಲಪ್ರವಾಹಗಳಿಂದ ಬಡಬಾಗ್ನಿಯು ಶಾಂತವಾಗುವಂತೆ, ಪಟ್ಟಣದಲ್ಲಿ ಕೊಳ್ಳೆಮಾಡುತ್ತಿದ್ದ ಶತ್ರುಭಟರ ಆಯುಧಗಳಿಂದಲೂ ಬಾಣಗಳಿಂದಲೂ ಹೊರಡುತ್ತಿದ್ದ ಕಟಕಟಶಬ್ದಗಳು ಶಾಂತವಾದುವು ॥೧೯॥

ಆಗ ಆ ವಿಧೂರಥನು, ಮೆಲ್ಲಗೆ ತನ್ನ ಸೈನ್ಯವನ್ನು ಎಳೆದುಕೊಂಡುಹೋಗುತ, ತನ್ನ ಸೈನ್ಯಕ್ಕೂ ಶತ್ರುಸೈನ್ಯಕ್ಕೂ ಇರುವ ತಾರತಮ್ಯವನ್ನು ತಿಳಿಯದೆಯೇ, ಪೂರ್ವದಲ್ಲಿ ರೆಕ್ಕೆಯಿಂದ ಹಾರಿಹೋಗುತ್ತಿದ್ದ ಮಹಾಮೇರುವು ಏಕಾರ್ಣವವನ್ನು ಪ್ರವೇಶಿಸಿದಂತೆ, ತಟ್ಟನೆ ಶತ್ರುಸೇನೆಯೊಳಗೆ ನುಗ್ಗಿದನು ॥೨೦॥

ಬಳಿಕ, ಧನುಸ್ಸುಗಳ ಹೆದೆಗಳಲ್ಲಿ ಚಟಚಟಶಬ್ದವು ಅತ್ಯಧಿಕವಾಗಿ ಉತ್ಪನ್ನವಾಯ್ತು. ಶತ್ರುಸಮೂಹಗಳು, ತಮ್ಮ ಆಯುಧಗಳನ್ನು ಝಳಪಿಸುತ, ಅವುಗಳ ಕಾಂತಿಯಿಂದ ಮೇಘಾವರಣವುಂಟಾದಂತೆ ಮಾಡುತ, ಸಂಚರಿಸಲುಪಕ್ರಮಿಸಿದರು ॥೨೧॥

ಯಯುರಮ್ಬರಮಾಶ್ರಿತ್ಯ ನಾನಾಹೇತಿವಿಹಙ್ಗಮಾಃ ।
ಪ್ರಸಸ್ರುರಲಮಾತ್ತಾಸುಮಲಿನಾಃ ಶಸ್ತ್ರದೀಪ್ತಯಃ ॥೨೨॥
ಜಜ್ವಲುಃ ಶಸ್ತ್ರಸಙ್ಘಟ್ಟಜ್ವಲನಾಉಲ್ಮುಕಾಗ್ನಿವತ್ ।
ಜಗರ್ಜುಃ ಶರಧಾರೌಘೈರ್ವರ್ಷನ್ತೋ ವೀರವಾರಿದಾಃ ॥೨೩॥
ವಿವಿಶುಃ ಕ್ರಕಚಕ್ರೂರಾಃ ವೀರಾಙ್ಗೇಷು ಚ ಹೇತಯಃ ।
ಪೇತುಃ ಪಟಪಟಾರಾವಂ ಹೇತಿನಿಷ್ಪಿಷ್ಟಯೋಮ್ಬರೇ ॥೨೪॥
ಜಗ್ಮುಃ ಶಮಂ ತಮಾಂಸ್ಯಾಶು ಶಸ್ತ್ರಕಾನಲದೀಪಕೈಃ ।
ಬಭೂವುರಖಿಲಾಃ ಸೇನಾಃ ನವನಾರಾಚರೋಮಶಾಃ ॥೨೫॥
ಉತ್ತಸ್ಥುರ್ಯಮಯಾತ್ರಾಯಾಂ ಕಬನ್ಧನಟಪಙ್ಕ್ತಯಃ ।
ಜಗುರುಚ್ಚೈರ್ರಣೋದ್ರೇಕಂ ಪಿಶಾಚ್ಯೋ ರಣದಾರಿಕಾಃ ॥೨೬॥
ಉದಗುರ್ದನ್ತಸಙ್ಘಟ್ಟಟಙ್ಕಾರಾದನ್ತಿನಾಂ ಬಲಾತ್ ।
ಊಹುಃ ಕ್ಷೇಪಣಪಾಷಾಣಮಹಾನದ್ಯೋ ನಭಸ್ತಲೇ ॥೨೭॥
ಪೇತುಃ ಶವನಿವಾತಾಸ್ತಸಂಶುಷ್ಕವನಪರ್ಣವತ್ ।
ನಿರ್ಯಯುರ್ಲೋಹಿತಾನದ್ಯೋ ರಣಾದ್ರೇರ್ಮೃತಿವರ್ಷಿಣಃ ॥೨೮॥

ಅನೇಕವಿಧವಾದ ಆಯುಧಗಳೆಂಬ ಪಕ್ಷಿಗಳು, ಅಂತರಿಕ್ಷದಲ್ಲಿ ಹಾರಾಡುತ್ತಿದ್ದುವು. ಶಸ್ತ್ರಗಳ ಕಾಂತಿಗಳು ಇತರರ ಪ್ರಾಣಾಪಹರಣದಿಂದುಂಟಾದ ಪಾಪದಿಂದ ಮಲಿನವಾಗಿರುವಂತೆ ಪ್ರಸರಿಸುತ್ತಿದ್ದುವು ॥೨೨॥

ಶಸ್ತ್ರಗಳು ಪರಸ್ಪರವಾಗಿ ತಗುಲಿದಾಗ ಹುಟ್ಟಿದ ಅಗ್ನಿಗಳು ಕೊಳ್ಳಿಗಳಂತೆ ಉರಿಯುತ್ತಿದ್ದವು. ವೀರರೆಂಬ ಮೇಘಗಳು, ಬಾಣಗಳೆಂಬ ಜಲಧಾರೆಯನ್ನು ವರ್ಷಿಸುತ ಗರ್ಜಿಸಲುಪಕ್ರಮಿಸಿದುವು ॥೨೩॥

ಗರಗಸದಂತೆ ಕ್ರೂರವಾಗಿರುವ ಆಯುಧಗಳು ವೀರರ ಅಂಗಗಳಲ್ಲಿ ಪ್ರವೇಶಮಾಡಿದುವು. ಆಯುಧಪ್ರಹಾರಗಳು ಆಕಾಶದಲ್ಲಿ ಪಟಪಟಧ್ವನಿಮಾಡುತಿದ್ದುವು ॥೨೪॥

ಶತ್ರುಸಂಘರ್ಷದಿಂದ ಹುಟ್ಟಿದ ಅಗ್ನಿಯೆಂಬ ದೀಪಗಳು, ಅಂಧಕಾರವನ್ನೆಲ್ಲ ಶಮನಮಾಡಿದುವು. ಸಮಸ್ತವಾದ ಸೈನ್ಯಗಳಮೇಲೆಯೂ, ಬಾಣಗಳೆಂಬ ಅಪೂರ್ವವಾದ ರೋಮಗಳು ಹುಟ್ಟಿದುವು ॥೨೫॥

ಆಗ—ಯಮಮಹಾರಾಜನು ಜೈತ್ರಯಾತ್ರೆಮಾಡುತ್ತಿರುವ ಸಮಯದಲ್ಲಿ—ಕಬಂಧಗಳೆಂಬ ನಟರು ಸಾಲುಸಾಲಾಗಿ ಎದ್ದು ನಿಲ್ಲುತಿದ್ದರು. ರಣರಂಗದಲ್ಲಿರುವ ಪಿಶಾಚಿಗಳೆಂಬ ವಾರಯುವತಿಯರು ಆ ಯುದ್ಧರಂಗದ ಪ್ರಾಶಸ್ತ್ಯವನ್ನು ಗಟ್ಟಿಯಾಗಿ ಗಾನಮಾಡುತ್ತಿದ್ದರು ॥೨೬॥

ಆನೆಗಳು ಪರಸ್ಪರ ಹೊಡೆದಾಡುವುದರಿಂದ, ಅವುಗಳ ಕೊಂಬುಗಳು ಬಲವಾಗಿ ಒಂದಕ್ಕೊಂದು ತಗುಲಿ ಟಂಕಾರಶಬ್ದಗಳು ಉದಯಿಸುತ್ತಿದ್ದುವು. ಕವಣೆಗಲ್ಲುಗಳು, ಅಂತರಿಕ್ಷದಲ್ಲಿ ದೊಡ್ಡ ನದಿಗಳಂತೆ ಪ್ರವಹಿಸುತ್ತಿದ್ದುವು ॥೨೭॥

ಕಾಡಿನಲ್ಲಿ ಒಣಗಿ ಬಿದ್ದಿರುವ ತರಗುಗಳು ಪ್ರಚಂಡವಾಯುವಿನಿಂದ ದೂರವಾಗಿ ಹಾರಿಸಲ್ಪಟ್ಟು ಬೀಳುವಂತೆ, ಶವಗಳು ಅಲ್ಲಲ್ಲಿ ಹಾರಾಡುತ ಬೀಳುತ್ತಿದ್ದುವು. ಪ್ರಾಣಿಗಳ ಮರಣವೆಂಬ ಜಲವೃಷ್ಟಿಯಿಂದ ಪರಿಪೂರ್ಣವಾಗಿರುವ ರಣಾಂಗಣವೆಂಬ ಪರ್ವತದ ದೆಸೆಯಿಂದ, ರಕ್ತಪ್ರವಾಹಗಳು ಹೊರಡುತಿದ್ದುವು ॥೨೮॥

ಪ್ರಶೇಮುಃ ಪಾಂಸವೋ ರಕ್ತೈಃ ತಮಾಂಸ್ಯಾಯುಧವಹ್ನಿಭಿಃ |
ಯುದ್ಧೈಕಧ್ಯಾನತಃ ಶಬ್ದಾಃ ಭಯಾನಿ ಮೃತಿನಿಶ್ಚಯೈಃ ||೨೯||
ಅಭವತ್ ಕೇವಲಂ ಯುದ್ಧಂ ಅಪಶಬ್ದಮಸಂಭ್ರಮಮ್ |
ಅನಾಕುಲಾಮ್ಬುವಾಹಾಭಂ ಖಡ್ಗವೀಜಿತಟಾಙ್ಕೃತಮ್ ||೩೦||

ಖದಖದರವಸಂಪತಚ್ಛರೌಘಂ
ಟಕಟಕಿತಾರವಸಮ್ಪತದ್ಭುಶುಣ್ಡಿ |
ಝುಣಝುಣರವಸಮ್ಮಿಳನ್ಮಹಾಸ್ತ್ರಂ
ತಿಮಿತಿಮಿವದ್ರಣಮಾಸ ದುಸ್ತರಂ ತತ್ ||೩೧||

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ವಿದೂರಥನಿರ್ಯಾಣೇ
ಷಟ್ಚತ್ವಾರಿಂಶಃ ಸರ್ಗಃ.

ಆ ಯುದ್ಧರಂಗದಲ್ಲಿ, ಧೂಳಿಗಳು ರಕ್ತದಿಂದಲೂ, ಅಂಧಕಾರವು ಆಯುಧಾಗ್ನಿಗಳಿಂದಲೂ, ಭಟರು ಯುದ್ಧವೊಂದನ್ನೇ ಧ್ಯಾನಿಸುವುದರಿಂದ ಅವರಿಗೆ ಇತರವಾದ ವಾಕ್ಪ್ರಸರಣಗಳೂ, ಯುದ್ಧರಂಗದಲ್ಲಿ ಸಾಯುವುದೇ ಲೇಸೆಂದು ನಿಶ್ಚಯಮಾಡಿಕೊಂಡಿರುವುದರಿಂದ ಇತರ ಭಯಗಳೂ ಶಾಂತಿಹೊಂದಿದ್ದುವು ||೨೯||

ಆಗ, ಸ್ವಲ್ಪಕಾಲ ಯಾವವಿಧವಾದ ಶಬ್ದವೂ ಯಾವ ಸಂಭ್ರಮವೂ ಇಲ್ಲದೆ, ನಿಶ್ಚಲವಾದ ಮೇಘಕ್ಕೆ ಸಮಾನವಾಗಿ ಕಾಣುತ್ತಿರುವ ಯುದ್ಧವು ನಡೆಯಿತು. ಆದರೆ, ಖಡ್ಗಗಳನ್ನು ಝಳಪಿಸುವುದರಿಂದ ಟೇಂಕಾರಧ್ವನಿಮಾತ್ರ ಸ್ವಲ್ಪವಾಗಿ ಕೇಳಿಸುತ್ತಿದ್ದಿತು ||೩೦||

ಮತ್ತು ಆ ಯುದ್ಧರಂಗದಲ್ಲಿ, ಬಾಣಸಮೂಹಗಳು ಖದಖದರವಮಾಡುತ ಪ್ರವಹಿಸುತಿದ್ದುವು. ಭುಶುಂಡಿಗಳು ಟಕಟಕ ಎಂಬ ಸದ್ದುಮಾಡುತ ಒಂದಕ್ಕೊಂದು ಸೇರುತಿದ್ದುವು. ದೊಡ್ಡದೊಡ್ಡ ಮಂತ್ರಾಸ್ತ್ರಗಳು ಝುಣಝುಣಧ್ವನಿಮಾಡುತ ಪರಸ್ಪರವಾಗಿ ಮಿಳಿತವಾಗುತಿದ್ದುವು. ಇದಲ್ಲದೆ ಇನ್ನೂ ಇತರವಾದ ಶಸ್ತ್ರಾಸ್ತ್ರಗಳು ತಿಮಿತಿಮಿ ಎಂದು ಶಬ್ದಮಾಡುತ್ತಿದ್ದುವು. ಇಂತಹ ಆ ರಣವು ಕೇವಲ ದುಸ್ತರವಾಗಿ ನಡೆಯುತಿದ್ದಿತು ||೩೧||

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ವಿದೂರಥನ
ಯುದ್ಧಾರ್ಥವಾದ ನಿರ್ಗಮನವೆಂಬ ನಾಲ್ವತ್ತಾರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಸಪ್ತಚತ್ವಾರಿಂಶಃ ಸರ್ಗಃ.

ಶ್ರೀವಸಿಷ್ಠಉವಾಚ.

ಏತಸ್ಮಿನ್ ವರ್ತಮಾನೇ ತು ಘೋರೇ ಸಮರಸಂಭ್ರಮೇ ।
ಲೀಲಾದ್ವಯಮುವಾಚೇದಂ ಜ್ಞಪ್ತಿಂ ಭಗವತೀಂ ಪುನಃ ॥೧॥

ಲೀಲಾದ್ವಯಮುವಾಚ.

ದೇವಿ ಕಸ್ಮಾದಕಸ್ಮಾನ್ನೋ ಭರ್ತಾ ಜಯತಿ ನೋ ರಣೇ ।
ವದ ತ್ವಯ್ಯಪಿ ತುಷ್ಟಾಯಾಂ ಅಸ್ಮಿನ್ ವಿದ್ರುತವಾರಣೇ ॥೨॥

ಶ್ರೀಸರಸ್ವತ್ಯುವಾಚ.

ಚಿರಮಾರಾಧಿತಾನೇನ ವಿದೂರಥನೃಪಾರಿಣಾ ।
ಅಹಂ ಪುತ್ರಿ ಜಯಾರ್ಥೇನ ನ ವಿದೂರಥಭೂಭೃತಾ ।
ತೇನಾಸಾವೇವ ಜಯತಿ ಜೀಯತೇ ಚ ವಿದೂರಥಃ ॥೩॥

ಉತ್ಪತ್ತಿಪ್ರಕರಣದಲ್ಲಿ ನಾಲ್ವತ್ತೇಳನೆಯ ಸರ್ಗವು.

ಸಿನ್ಧೋಃ ಶತ್ರುಜಯೇ ಹೇತುಃ ಸೂರ್ಯೋದಯರಣಕ್ರಮಃ ।
ಯುದ್ಧಂ ಚ ದ್ವೈರಥಂ ರಾಜ್ಞೋಃ ಮನ್ತ್ರಾಸ್ತ್ರೈರಿಹ ಕೀರ್ತ್ಯತೇ ॥

ಸಿಂಧುರಾಜನು ಶತ್ರುಗಳನ್ನು ಜಯಿಸುವುದಕ್ಕೆ ಕಾರಣವೂ, ಸೂರ್ಯೋದಯಕಾಲದ ಯುದ್ಧಪ್ರಕ್ರಮವೂ, ದೊರೆಗಳಿಬ್ಬರೇ ಎರಡುರಥಗಳಲ್ಲಿದ್ದು ಮಂತ್ರಾಸ್ತ್ರಗಳಿಂದ ಯುದ್ಧ ಮಾಡುವಿಕೆಯೂ ಕೂಡ ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಮಹಾಘೋರವಾದ ಯುದ್ಧಸಂಭ್ರಮವು ನಡೆಯುತ್ತಿರಲಾಗಿ, ಆ ಇಬ್ಬರು ಲೀಲೆಯರೂ ಪೂಜ್ಯಳಾದ ವಾಗ್ದೇವಿಯನ್ನು ಕುರಿತು ಈ ಮಾತನ್ನು ಹೇಳಿದರು ॥೧॥

ಆ ಲೀಲಾದ್ವಯವು ಹೇಳಿದುದೇನೆಂದರೆ:—

ಎಲೌ ದೇವಿ! ನೀನು ಅನುಗ್ರಹಮಾಡುತಿದ್ದರೂ ಕೂಡ, ಅನೇಕ ಗಜಸಮ್ಮರ್ದ ಯುಕ್ತವಾದ ಈ ರಣರಂಗದಲ್ಲಿ ನಮ್ಮ ಪತಿಯಾದ ವಿದೂರಥನು—ಏನುಕಾರಣ ನಿಷ್ಕಾರಣವಾಗಿ ಅಪಜಯಹೊಂದುವನು? ಇದನ್ನು ಅಪ್ಪಣೆಕೊಡು ॥೨॥

ಇದಕ್ಕೆ ಶ್ರೀ ಸರಸ್ವತಿಯುತ್ತರಹೇಳುವಳು:—

ಹೇ ಪುತ್ರಿ! ಈ ವಿದೂರಥರಾಜನ ಶತ್ರುವಾದ ಸಿಂಧುರಾಜನು, ಜಯಾರ್ಥಿಯಾಗಿ ನನ್ನನ್ನು ಬಹಳಕಾಲ ಆರಾಧಿಸಿರುವನು; ವಿದೂರಥನಾದರೋ, ನನ್ನನ್ನು ಆರೀತಿಯಾಗಿ ಆರಾಧಿಸಲಿಲ್ಲ. ಅದುಕಾರಣ, ಈ ಸಿಂಧುರಾಜನೇ ಗೆಲ್ಲುವನು; ವಿಧೂರಥನಿಗೆ ಅಪಜಯವೂ ಆಗುವುದು ॥೩॥

ಜ್ಞಪ್ತಿರನ್ತರ್ಗತಾ ಸಂವಿತ್ ಏತಾಂ ಮಾಂ ಯೋ ಯದಾ ಯಥಾ ।
ಪ್ರೇರಯತ್ಯಾಶು ತತ್ ತಸ್ಯ ತದಾ ಸಮ್ಪಾದಯಾಮ್ಯಹಮ್ ‖೪‖
ಯೋ ಯಥಾ ಪ್ರೇರಯತಿ ಮಾಂ ತಸ್ಯ ತಿಷ್ಠಾಮಿ ತತ್ಫಲಾ ।
ನ ಸ್ವಭಾವೋನ್ಯತಾಂ ಧತ್ತೇ ವಹ್ನೇರೌಷ್ಣ್ಯಮಿವೈಷ ಮೇ ‖೫‖
ಅನೇನ ಮುಕ್ತ ಏವ ಸ್ಯಾಂ ಅಹಮಿತ್ಯಸ್ಮಿ ಭಾವಿತಾ ।
ಪ್ರತಿಭಾರೂಪಿಣೀ ತೇನ ಬಾಲೇ ಮುಕ್ತೋ ಭವಿಷ್ಯತಿ ‖೬‖
ಏತದೀಯಸ್ತ್ವಯಂ ಶತ್ರುಃ ಸಿದ್ಧುರ್ನಾಮ ಮಹೀಪತಿಃ ।
[1]ಜಯಾಮ್ಯಹಂ ಸ್ಯಾಂ ಸಙ್ಗ್ರಾಮೇ ಇತ್ಯನೇನಾಸ್ಮಿ ಪೂಜಿತಾ ‖೭‖
ತಸ್ಮಾದ್ವಿದೂರಥೋ ದೇಹಂ ತತ್ ಪ್ರಾಪ್ಯ ಸಹ ಭಾರ್ಯಯಾ ।
ತ್ವಯಾನಯಾ ಚ ಕಾಲೇನ ಬಾಲೇ ಮುಕ್ತೋ ಭವಿಷ್ಯತಿ ‖೮‖
ಏತದೀಯಃ ಸ್ವಯಂ ಶತ್ರುಃ ಸಿನ್ಧುರ್ನಾಮ ಮಹೀಪತಿಃ ।
ಹತ್ವೈನಂ ವಸುಧಾಪೀಠೇ ಜಯೀ ರಾಜ್ಯಂ ಕರಿಷ್ಯತಿ ‖೯‖

'ನಾನು' ಎಂದರೆ ಯಾರೆಂದು ಕೇಳುವೆಯೋ? ಸರ್ವಪ್ರಾಣಿಗಳಲ್ಲಿಯೂ ಅಂತರ್ಗತವಾದ ಜ್ಞಾನವಾವುದುಂಟೋ, ಅದೇ ಜ್ಞಪ್ತಿಯೆನ್ನಿಸುವುದು ; ಆ ಜ್ಞಪ್ತಿಯೇ ನಾನು. ಇಂತಹ ನನ್ನನ್ನು ಯಾವ ಮನುಷ್ಯನು ಯಾವಾಗ ಯಾವರೀತಿಯಾಗಿ ಕಾರ್ಯೋನ್ಮುಖ ಮಾಡುವನೋ, ಆಕ್ಷಣವೇ ಅವನಿಗೆ ಆರೀತಿಯಾದ ಫಲವನ್ನು ನಾನು ಉಂಟುಮಾಡುವೆನು. (ಯಾವರೀತಿಯಾಗಿ ಜ್ಞಾನಪ್ರವೃತ್ತಿಯುಂಟಾಗುವುದೋ, ಫಲನಿಷ್ಪತ್ತಿಯೂ ಅದೇರೀತಿಯೇ ಆಗುವುದೆಂದು ಭಾವವು) ॥೪॥

ಯಾವನು ಯಾವರೀತಿಯಾಗಿ ನನ್ನನ್ನು ಕಾರ್ಯದಲ್ಲಿ ಪ್ರವರ್ತನೆಮಾಡುವನೋ, ಅವನಿಗೆ ಆರೀತಿಯಾದ ಫಲವನ್ನು ಕೊಡತಕ್ಕವಳಾಗಿರುವೆನು. ಅಗ್ನಿಗೆ ಉಷ್ಣತ್ವವು ಹೇಗೆ ಬದಲಾಗುವುದಿಲ್ಲವೋ, ಹಾಗೆಯೇ ನನ್ನ ಈ ಸ್ವಭಾವವೂ ಬದಲಾಗುವುದಿಲ್ಲ ॥೫॥

ಎಲೌ ಅಪ್ರಬುದ್ಧಳಾದ ಲೀಲೆಯೆ ! ನಿನ್ನ ಪತಿಯಾದ ಈ ವಿದೂರಥನು, ಆತ್ಮಪ್ರತಿಭಾರೂಪಳಾದ ನನ್ನನ್ನು,-ತಾನು ಮುಕ್ತಿಯನ್ನೇ ಪಡೆಯಬೇಕೆಂದು ಭಾವನೆಮಾಡಿದನು. ಅದುಕಾರಣ ಅವನು ಮುಕ್ತನಾಗುವನು ॥೬॥

ಇವನ ಶತ್ರುವಾದ ಸಿಂಧುವೆಂಬ ಈ ರಾಜನಿರುವನಲ್ಲವೆ ! ಇವನು,—ತಾನು ಯುದ್ಧದಲ್ಲಿ ಜಯದಿಂದ ಶತ್ರುಗಳನ್ನು ಪೀಡಿಸತಕ್ಕವನಾಗಬೇಕೆಂದು ನನ್ನನ್ನು ಪೂಜಿಸಿದನು ॥

ಆದುಕಾರಣ, ಎಲೌ ಬಾಲೆ ! ಈ ವಿದೂರಥನು, ಆ ಪೂರ್ವದ ಶರೀರವನ್ನು ಹೊಂದಿ, ಪತ್ನಿಯಾದ ನಿನ್ನೊಡನೆಯೂ ಈ ಪ್ರಬುದ್ಧಲೀಲೆಯೊಡನೆಯೂ ಕೂಡ ಮುಕ್ತನಾಗುವನು ॥೮॥

ಇವನ ಶತ್ರುವಾದ ಈ ಸಿಂಧುನಾಮಕಮಹೀಪತಿಯು, ತಾನೇ ಇವನನ್ನು ಕೊಂದು, ಭೂಮಿಯಲ್ಲಿ ಜಯಶಾಲಿಯಾಗಿ ರಾಜ್ಯಭಾರ ಮಾಡುವನು ॥೯॥

1. ಜಯೇನ ಆಮಯತಿ= ಪೀಡಯತಿ ಇತಿ ಜಯಾಮೀ.

ಶ್ರೀ ವಸಿಷ್ಠ ಉವಾಚ.

ಏವಂ ದೇವ್ಯಾಂ ವದನ್ತ್ಯಾಂ ತು ಬಲಯೋರ್ಯುದ್ಧಮಾನಯೋಃ ।
ರವಿರ್ದ್ರಷ್ಟುಮಿವಾಶ್ಚರ್ಯಂ ಆಜಗಾಮೋದಯಾಚಲಮ್ ॥೧೦॥
ಚೇಲುಸ್ತಿಮಿರಸಙ್ಘಾತಾಃ ಬಲಾನೀವಾರಿರೂಪಿಣಃ ।
ಅಸೃಜನ್ ಜೀವಸಙ್ಘಾನ್ ಯೇ ಸನ್ಧ್ಯಾಯಾಂ ತಾರಕಾ ಇವ ॥೧೧॥
ಶನೈಃ ಪ್ರಕಟತಾಂ ಜಗ್ಮುಃ ಬಿಲಾಕಾಶಾದ್ರಿಭೂಮಯಃ ।
ಭುವನಂ ಕಜ್ಜಲಾಮ್ಭೋಧೇಃ ಇವೋತ್ಕ್ಷಿಪ್ತಮರಾಜತ ॥೧೨॥
ಪೇತುಃ ಕನಕನಿಷ್ಯನ್ದಸುನ್ದರಾ ರವಿರಶ್ಮಯಃ ।
ಶೈಲೇಷು ವರವೀರೇಷು ರಣೇ ರಕ್ತಚ್ಛಟಾ ಇವ ॥೧೩॥
ಅದೃಶ್ಯತ ತತೋ ವ್ಯೋಮ ತಥಾ ರಣಮಹೀತಲಮ್ ।
ಬಾಹುಭಿರ್ಭ್ರಾನ್ತಭುಜಗಂ ಪ್ರಭಾಭಿಃ ಕೀರ್ಣಕಾಞ್ಚನಮ್ ॥೧೪॥

ಈರೀತಿಯಾಗಿ ವಾಗ್ದೇವಿಯು ಹೇಳಿದ ಮಾತನ್ನು ಹೇಳುತ, ಪುನಃ ಶ್ರೀವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಿದರು:—

ಅಯ್ಯಾ ! ರಾಮ ! ಆ ವಾಗ್ದೇವಿಯೀರೀತಿಯಾಗಿ ಹೇಳುತಿರುವಾಗ, ಎರಡು ಸೈನ್ಯಗಳೂ ಯುದ್ಧಮಾಡುವ ಆಶ್ಚರ್ಯವನ್ನು ನೋಡುವುದಕ್ಕೋ ಎಂಬಂತೆ, ಸೂರ್ಯನು ಉದಯಪರ್ವತಕ್ಕೆ ಬಂದನು ॥೧೦॥

ಆಗ ಸೂರ್ಯೋದಯವಾದಕಾಲದಲ್ಲಿ—ಸೈನ್ಯಗಳು ಚಲಿಸಿದಂತೆಯೇ ಅಂಧಕಾರಸಮುದಾಯಗಳೂ ಚಲಿಸಿದುವು. ಈ ಅಂಧಕಾರಗಳು, ಆ ವಿಧೂರಥನಿಗೆ ಇದುವರೆಗೂ ಶತ್ರುಗಳಂತೆ ಇದ್ದುಗೊಂಡು, ಸಂಧ್ಯಾಕಾಲದಲ್ಲಿ ನಕ್ಷತ್ರಗಳುದಯಿಸುವಹಾಗೆ-ಪಿಶಾಚಾದಿಪ್ರಾಣಿಸಮೂಹವನ್ನು ಸೃಷ್ಟಿಮಾಡುತಿದ್ದುವು. ಇಂತಹ ಅಂಧಕಾರಸಮುದಾಯಗಳು ಈಗ ಪಲಾಯನಮಾಡಿಬಿಟ್ಟುವು ॥೧೧॥

ಹೀಗೆ ಅಂಧಕಾರ ಕಳೆಯುತಬಂದ ಬಳಿಕ, ಗುಹೆಗಳೂ ಆಕಾಶವೂ ಪರ್ವತಗಳೂ ಭೂಮಿಯೂ ಬೇರೆಬೇರೆಯಾಗಿ ಕಾಣುತಬಂದುವು. ಪ್ರಪಂಚವು ಇದುವರೆಗೆ ಕಾಡಿಗೆಯ ಸಮುದ್ರದಲ್ಲಿ ಮುಣುಗಿದ್ದು ಈಗ ಮೇಲಕ್ಕೆದ್ದಿತೋ ಎಂಬಂತೆ ಪ್ರಕಾಶಿಸಿತು ॥೧೨॥

ಸುವರ್ಣರಸದಂತೆ ಸುಂದರವಾದ ಸೂರ್ಯಕಿರಣಗಳು, ಯುದ್ಧರಂಗದಲ್ಲಿ ವೀರಶ್ರೇಷ್ಠರಮೇಲೆ ರಕ್ತಪ್ರವಾಹಗಳುಪ್ರಸರಿಸಿರುವಂತೆ, ಪರ್ವತಗಳಮೇಲೆ ಪ್ರಸರಿಸಲಾರಂಭಿಸಿದುವು ॥೧೩॥

ಬಳಿಕ, ಅಂತರಿಕ್ಷವೂ ಆ ಯುದ್ಧಭೂಮಿಯೂ ಹೇಗೆ ಕಾಣಿಸುತಿದ್ದುವೆಂದರೆ:— ಭಟರ ತೋಳುಗಳು ಚಲಿಸುತಿರುವುದರಿಂದ—ಸರ್ಪಗಳು ಸುತ್ತುತ್ತಿವೆಯೋ ಎಂಬಂತೆಯೂ, ಕಾಂತಿಯು ಸರ್ವತ್ರ ವ್ಯಾಪಿಸಿರುವುದರಿಂದ ಸುವರ್ಣವನ್ನು ಚೆಲ್ಲಿರುವರೋ ಎಂಬಂತೆಯೂ ಕಾಣಿಸುತಿದ್ದಿತು ॥೧೪॥

ಕುಣ್ಡಲೈಃ ಕೀರ್ಣರತ್ನೌಘಂ ಶಿರೋಭಿರ್ದೃಷ್ಟಪಙ್ಕಜಮ್ ।
ಆಯುಧೈಃ ಖಡ್ಗನೀರನ್ಧ್ರಂ ಶರೈಃ ಶಲಭನಿರ್ಭರಮ್ ॥೧೫॥

ರಕ್ತಾಭಾಸ್ಥಿರಸನ್ಧ್ಯಾಭ್ರಂ ಸಸಿದ್ಧಪುರುಷಂ ಶವೈಃ ।
ಹಾರೈಃ ಸಸರ್ಪನಿರ್ಮೋಕಂ ಕಟ್ಯೈರಿದ್ಧಂ ಸುಸಙ್ಕುಲಮ್ ॥೧೬॥

ಲಸಲ್ಲತಂ ಪತಾಕಾಭಿಃ ಊರುಭಿಃ ಕೃತತೋರಣಮ್ ।
ಹಸ್ತೈಃ ಪಾದೈಃ ಪಲ್ಲವಿತಂ ಶರೈಃ ಶರವಣೋಪಮಮ್ ॥೧೭॥

ಶಸ್ತ್ರಾಂಶುಶಾದ್ವಲಶ್ಯಾಮಂ ಶಸ್ತ್ರಪೂರೈಃ ಸಕೇತಕಮ್ ।
ಕೀರ್ಣಮಾಯುಧಮಾಲಾಭಿಃ ಉನ್ಮತ್ತಮಿವ ಭೈರವಮ್ ॥೧೮॥

ಫುಲ್ಲಾಶೋಕವನಾಕಾರಂ ಶಸ್ತ್ರಸಙ್ಘಟ್ಟವಹ್ನಿಭಿಃ ।
[1]ಉದಘುಙ್ಘುಮಹಾಶಬ್ದೈಃ ವಿದ್ರವತ್ಸಿದ್ಧನಾಯಕೈಃ ॥೧೯॥

ಕರ್ಣಕುಂಡಲಗಳು ತುಂಬಿರುವುದರಿಂದ ರತ್ನಸಮೂಹವನ್ನು ಎರಚಿರುವಂತೆಯೂ, ತಲೆಬುರುಡೆಗಳು ಹರಡಿಕೊಂಡಿರುವುದರಿಂದ ಕಮಲಗಳು ಕಾಣಿಸುತ್ತಿರುವಂತೆಯೂ, ಆಯುಧಸಮೂಹಗಳು ಬಿದ್ದಿರುವುದರಿಂದ ಖಡ್ಗಮೃಗಗಳು ದಟ್ಟವಾಗಿ ನಿಂತಿರುವಂತೆಯೂ, ಬಾಣಸಮುದಾಯಗಳು ತುಂಬಿರುವುದರಿಂದ ಶಲಭ (ಮಿಡತೆ) ಗಳು ವ್ಯಾಪಿಸಿರುವಂತೆಯೂ ತೋರುತಿದ್ದಿತು ॥೧೫॥

ರಕ್ತಕಾಂತಿಯು ಪ್ರಸರಿಸುವುದರಿಂದ ಅಚಂಚಲವಾದ ಸಂಧ್ಯಾಕಾಲವುಂಟಾಗಿದೆಯೋ ಎಂಬಂತೆ ಕಾಣಿಸುತಿದ್ದಿತು; ಶವಗಳು ತುಂಬಿರುವುದನ್ನು ನೋಡಿದರೆ, ಅನೇಕ ಸಿದ್ಧಪುರುಷರು ಸಂಚರಿಸುತಿರುವರೋ ಎಂಬ ಭ್ರಮೆಯುಂಟಾಗುತಿದ್ದಿತು ; ಮುಕ್ತಾಹಾರಗಳು ಹಾರಾಡುತಿರುವುದರಿಂದ ಹಾವಿನ ಪೊರೆಗಳು ಹಾರಾಡುತಿರುವಂತೆ ತೋರುತಿದ್ದಿತು. ಮತ್ತು ಅಲ್ಲಿ ಅನೇಕವಾದ ಕವಚಗಳು ವ್ಯಾಕುಲವಾಗಿ ಬಿದ್ದು ಪ್ರಕಾಶಿಸುತಿದ್ದುವು॥೧೬॥

ಇನ್ನೂ, ಅಲ್ಲಿ ಪತಾಕೆಗಳು ಲತೆಗಳಂತೆಯೂ, ತೊಡೆಗಳು ತೋರಣಕಟ್ಟಿದಂತೆಯೂ, ಕೈಕಾಲುಗಳು ಚಿಗುರಿನಂತೆಯೂ, ಬಾಣಗಳು ಜೊಂಡುಹುಲ್ಲಿನ ಕಾಡಿನಂತೆಯೂ ಕಾಣುತಿದ್ದುವು ॥೧೭॥

ಶಸ್ತ್ರಕಾಂತಿಗಳು ಹಸುರುಭೂಮಿಯಂತೆಯೂ, ಶಸ್ತ್ರಸಮೂಹಗಳು ಕೇತಕಪುಷ್ಪಗಳಂತೆಯೂ ಕಾಣುತಿದ್ದುವು. ಇಷ್ಟೆಲ್ಲವೂ ಇರುವ ಆ ರಣಭೂಮಿಯನ್ನೂ ಅಂತರಿಕ್ಷವನ್ನೂ ನೋಡಿದರೆ, ಆಯುಧಮಾಲೆಗಳಿಂದ ಪರಿವೃತನಾದ ಕಾಲಭೈರವನು ಉನ್ಮತ್ತನಾಗಿ ಸಂಚರಿಸುತಿರುವನೋ ಎಂಬಂತೆ ಜ್ಞಾನವುಂಟಾಗುತಿದ್ದಿತು ॥೧೮॥

ಮತ್ತು, ಅಲ್ಲಿ ಶಸ್ತ್ರಗಳು ಪರಸ್ಪರವಾಗಿ ಸಂಘಟ್ಟನೆಮಾಡಿ ಅಗ್ನಿಕಣಗಳುಹುಟ್ಟುತಿರುವುದರಿಂದ, ಚಿಗುತಿರುವ ಅಶೋಕವನದಂತೆ ಪ್ರಕಾಶವುಂಟಾಗುತಿದ್ದಿತು. ಆ ಅಗ್ನಿಕಣಗಳು, ಸಮುದ್ರದಂತೆ ‘ಘುಮ್‌ಘುಮ್’ ಎಂದು ಮಹಾಧ್ವನಿಮಾಡುತಲೂ, ಮಹಾಸಿದ್ಧರನ್ನೆಲ್ಲ ಓಡಿಸುತ್ತಲೂ ಇದ್ದುವು ॥೧೯॥

1. ಉದಧಿರಿವ ಘುಙ್ಘುಮಹಾಶಬ್ದೈಃ. ಉದಧಿಶಬ್ದೇ ಆರ್ಷೋ ಧಿಶಬ್ದಲೋಪಃ.

ಸೌವರ್ಣನಗರಾಕಾರಂ ಬಾಲಾರ್ಕಕಚಿತಾಯುಧೈಃ ।
ಪ್ರಾಸಾಸಿಶಕ್ತಿಚಕ್ರರ್ಷ್ಟಿಮುದ್ಗರಾರಣಿತಾಮ್ಬರಮ್ ॥೨೦॥
ವಹದ್ರಕ್ತನದೀರಂಹಃಪ್ರೋಹ್ಯಮಾನಶವೋತ್ಕರಮ್ ।
ಭ್ರುಶುಣ್ಡೀಶಕ್ತಿಕುನ್ತಾಸಿಶೂಲಪಾಷಾಣಸಙ್ಕುಲಮ್ ॥೨೧॥
ಶೂಲಶಸ್ತ್ರಹತಚ್ಛಿನ್ನಕಬನ್ಧಪತನಾನ್ವಿತಮ್ ।
ಕಾಲತಾಣ್ಡವವೇತಾಳಕುಲಾರಬ್ಧಹಲಾರವಮ್ ॥೨೨॥
ಶೂನ್ಯೇ ರಣಾಙ್ಗಣೇ ದೀಪ್ತೌ ಪದ್ಮಸಿನ್ಧ್ವೋರಥೌ ಚಲೌ ।
ಅದೃಶ್ಯೇತಾಂ ನಭಶ್ಚಿಹ್ನೌ ಚನ್ದ್ರಸೂರ್ಯೌ ದಿವೀವ ತೌ ॥೨೩॥
ಚಕ್ರಶೂಲಭ್ರುಶುಣ್ಡ್ಯೃಷ್ಟಿಪ್ರಾಸಾಯುಧಸಮಾಕುಲೌ ।
ಸಹಸ್ರೇಣಸಹಸ್ರೇಣ ವೀರಾಣಾಂ ಪರಿವಾರಿತೌ ॥೨೪॥
ವಿಚರನ್ತೌ ಯಥಾಕಾಮಂ ಮಣ್ಡಲೈರ್ವಿತತಾರವೈಃ ।
ಸಚೀತ್ಕಾರಮಹಾಚಕ್ರಪಿಷ್ಟಾನೇಕಮೃತಾಮೃತೌ ॥೨೫॥
ತರನ್ತೌ ರಕ್ತಸರಿತೌ ಮತ್ತವಾರಣಲೀಲಯಾ ।

ಎಳೆಬಿಸಿಲಿನಿಂದ ಆಯುಧಗಳು ಥಣಥಣನೆ ಮಿರುಗುತಿರುವಕಾರಣ, ಸುವರ್ಣಮಯವಾದ ನಗರದಂತಿದ್ದಿತು. ಪ್ರಾಸ ಅಸಿ ಶಕ್ತಿ ಚಕ್ರ ಋಷ್ಟಿ ಮುದ್ಗರ---ಇವುಗಳು ಆಕಾಶದಲ್ಲಿ ಬೊಯ್ಯೆಂದು ಧ್ವನಿಯುಂಟುಮಾಡುತಿದ್ದುವು ॥೨೦॥

ವೇಗವಾಗಿ ಪ್ರವಹಿಸುತ್ತಿರುವ ರಕ್ತನದೀಪ್ರವಾಹಗಳಲ್ಲಿ ಅನೇಕ ಶವಸಮುದಾಯಗಳು ಕೊಚಿಹೋಗುತಿದ್ದುವು. ಭ್ರುಶುಂಡಿ ಶಕ್ತಿ ಕುಂತ ಅಸಿ ಶೂಲ ಪಾಷಾಣ (ಕವಣೆಕಲ್ಲು)—ಇವುಗಳು ತುಂಬಿಹೋಗಿದ್ದುವು ॥೨೧॥

ಶೂಲಗಳಿಂದಲೂ ಶಸ್ತ್ರಗಳಿಂದಲೂ ಏಟುಬಿದ್ದು ಕತ್ತರಿಸಿಹೋದ ಕಬಂಧಗಳು, ತುಂಡುತುಂಡಾಗಿ ಬೀಳುತಿದ್ದುವು. ವೇತಾಳಸಮೂಹಗಳು, ಪ್ರಳಯಕಾಲದಲ್ಲಿ ನರ್ತನಮಾಡುವಂತೆ ನರ್ತನಮಾಡುತ, ಕೋಲಾಹಲಮಾಡಲಾರಂಭಿಸಿದುವು ॥೨೨॥

ಹೀಗಿರುವಾಗ, ಎರಡುಕಡೆಯ ಸೈನಿಕರೂ ಪರಸ್ಪರ ಹತರಾದುದರಿಂದ ಬರಿದಾಗಿ ಕಾಣುತಿರುವ ರಣಾಂಗಣದಲ್ಲಿ, ಆ ಪದ್ಮಸಿಂಧುರಾಜರ ಎರಡು ರಥಗಳು ಸಂಚರಿಸುತ ಕಾಣಿಸಿಕೊಂಡುವು. ಅವೆರಡೂ, ಅಂತರಿಕ್ಷಕ್ಕೆ ಲಕ್ಷಣಭೂತರಾದ ಚಂದ್ರಸೂರ್ಯರು ಆಕಾಶದಲ್ಲಿ ಪ್ರಕಾಶಿಸುವಂತೆ ರಣಾಂಗಣದಲ್ಲಿ ಪ್ರಕಾಶಿಸುತಿದ್ದುವು ॥೨೩॥

ಆ ರಥಗಳಲ್ಲಿ, ಚಕ್ರ ಶೂಲ ಭ್ರುಶುಂಡಿ ಋಷ್ಟಿ ಪ್ರಾಸ-- ಇತ್ಯಾದ್ಯಾಯುಧಗಳು ಪರಿಪೂರ್ಣವಾಗಿದ್ದುವು. ಆಗ ಪ್ರತಿಯೊಂದು ರಥವನ್ನೂ, ಸಾವಿರಸಾವಿರ ವೀರರು ಸುತ್ತುವರಿದರು ॥೨೪॥

ಬಳಿಕ, ಆಯೆರಡು ರಥಗಳೂ, ವಿಶೇಷವಾಗಿ ಧ್ವನಿಮಾಡುತ, ಯಥೇಚ್ಛವಾಗಿ ನಾನಾವಿಧ ಚಲನೆಗಳಿಂದ ಸುತ್ತಲಾರಂಭಿಸಿದುವು. ಚೀತ್ಕಾರಧ್ವನಿಯುಕ್ತವಾಗಿರುವ ಆ ರಥಚಕ್ರಗಳು ಮೃತರಾದವರನ್ನೂ ಮೃತರಲ್ಲದವರನ್ನೂ ಅನೇಕವಾಗಿ ಅರೆದುಬಿಟ್ಟುವು ॥೨೫॥

ಮತ್ತು ಆ ರಥಗಳು, ಮದ್ದಾನೆಗಳಂತೆ ಲೀಲೆಯಿಂದ ರಕ್ತನದಿಗಳನ್ನು ದಾಟುತಿ

ಕೇಶಶೈವಲಸಮ್ಪನ್ನೇ ಚಕ್ರಚಕ್ರಜಲೇನ್ದುಕೇ ॥೨೬॥
ವಹಚ್ಚಕ್ರಾಹತಿಕ್ಷೋಭಪಾತಿತಾಕುಲವಾರಣೌ ।
ಮಣಿಮುಕ್ತಾಝುಣತ್ಕಾರರಣತ್ಕೂಬರಕಾರವೌ ॥೨೭॥
ವಾತಾಹತಪತಾಕಾಗ್ರಪಟತ್ಪಟಪಟಾರವೌ ।
ಅನುಯಾತೌ ಮಹಾವೀರೈಃ ಭೂರಿಭಿರ್ಭೀರುಸೈನಿಕೈಃ ॥೨೮॥
ಧಾರಾವಮುದ್ಭಿಃ ಕುನ್ತಾನಾಂ ಶರಾಣಾಂ ಧನುಷಾಮಪಿ ।
ಶಕ್ತೀನಾಂ ಪ್ರಾಸಶಙ್ಕೂನಾಂ ಚಕ್ರಾಣಾಂ ಕಚತಾಂ ರಣೇ ॥೨೯॥
ತತ್ರ ತೌ ಕ್ಷಣಮಾವೃತ್ಯ ಮಣ್ಡಲೇ ಭೂಮಿಕುಣ್ಡಲೇ ।
ಉಭೌ ವ್ಯತಿಬಭೂವಾತೇ ಸಮ್ಮುಖಾ[1]ವಾಯುಧಾವುಭೌ ॥೩೦॥
ನಾರಾಚಧಾರಾನಿಕರವಿಕ್ಷೇಪಕರಕಧ್ವನೌ ।

ದ್ದುವು. ಆ ರಕ್ತನದಿಗಳಲ್ಲಿ, ಕೇಶಗಳು ಪಾಚಿಯಾಗಿಯೂ, ಚಕ್ರಸಮುದಾಯಗಳು ಜಲದಲ್ಲಿರುವ ಚಂದ್ರಪ್ರತಿಬಿಂಬಗಳಾಗಿಯೂ ಕಾಣುತಿದ್ದುವು ॥೨೬॥

ಬಹು ಸಂಭ್ರಮವಾಗಿ ಸಂಚರಿಸುತ್ತಿರುವ ಮದ್ದಾನೆಗಳು, ಆ ರಥಗಳ ಚಕ್ರಗಳಿಗೆ ಸಿಕ್ಕಿ ಪೆಟ್ಟುತಿಂದು ಬೀಳುತಿದ್ದುವು. ಆ ರಥಗಳ ಕೂಬರಕ್ಕೆ (ಮೂಕಿಯಮರ) ಕಟ್ಟಿರುವ ಮುಕ್ತಾಮಣಿಗಳು, ಝುಣಝುಣನೆ ಧ್ವನಿಗೈಯುತಿದ್ದುವು ॥೨೭॥

ಆ ರಥಗಳ ಧ್ವಜಪಟಗಳು, ಗಾಳಿಯಿಂದ ಹೊಡೆಯಲ್ಪಟ್ಟು ಪಟಪಟಶಬ್ದಮಾಡಿದುವು. ಭಯಗ್ರಸ್ತರಾದ ಸೈನಿಕರನ್ನು ಸಮಾಧಾನಪಡಿಸುತ್ತಿರುವ ಮಹಾವೀರರು, ಆಯೆರಡು ರಥಗಳ ಹಿಂದೆಯೂ ಅನುಸರಿಸಿಬಂದರು ॥೨೮॥

ಆ ಮಹಾವೀರರು, ಪ್ರಕಾಶಮಾನವಾದ ಕುಂತ ಬಾಣ ಧನುಸ್ಸು ಶಕ್ತಿ ಪ್ರಾಸ ಶಂಕು ಚಕ್ರ—ಇತ್ಯಾದ್ಯಾಯುಧಗಳನ್ನು ಅವಿಚ್ಛಿನ್ನವಾಗಿ ವರ್ಷಿಸುತ, ಆಯೆರಡು ರಥಗಳ ಹಿಂದೆಯೂ ಅನುಸರಿಸಿಬಂದರು ॥೨೯॥

ರಣಭೂಮಿಗೆ ಕುಂಡಲದಂತೆ ಅಲಂಕಾರವಾಗಿರುವ ಆಯೆರಡುರಥಗಳೂ, ಆ ಯುದ್ಧರಂಗದಲ್ಲಿ ಒಂದುಕ್ಷಣಕಾಲ ಸುತ್ತಿ, ಪರಸ್ಪರವಾಗಿ ಒಂದರಂತೆ ಮತ್ತೊಂದೂ ಕೆಲಸಮಾಡಲುಪಕ್ರಮಿಸಿದುವು ॥೩೦॥

ಆಗ ಆ ರಥಗಳ ದೆಸೆಯಿಂದ ಬಾಣಗಳೂ ಪ್ರಾಸಕುಂತಾದ್ಯಾಯುಧಗಳೂ, ಅವಿಚ್ಛಿನ್ನವಾಗಿ ಹೊರಡಲುಪಕ್ರಮಿಸಿದುವು; ಆ ಬಾಣಗಳು ಜಲಧಾರೆಯಂತೆಯೂ, ಆಯುಧಗಳು ಕರಕ (ಆನೆಕಲ್ಲು) ಗಳಂತೆಯೂ ಇದ್ದುವು. ಹೀಗೆ ಬಾಣಗಳೆಂಬ ಜಲಧಾರೆಗಳನ್ನೂ ಆಯುಧಗಳೆಂಬ ಕರಕಗಳನ್ನೂ ವರ್ಷಿಸುತ ಗರ್ಜನೆಮಾಡುತಿರುವ ಆ ರಥಗಳೇ ಮೇಘಗಳಾದುವು. ಇಂತಹ ಬಾಣಾಯುಧವೃಷ್ಟಿಯು ಯಾವ ರಥದಿಂದ ಹೊರಡುವುದೋ-ಅದು ಮೇಘವಾಗಿಯೂ, ಯಾವ ರಥದಲ್ಲಿ ಬೀಳುವುದೋ—ಅದು ಸಮುದ್ರವಾಗಿಯೂ ಆಗುತಿದ್ದುವು. ಒಂದುವೇಳೆ ಒಂದು ರಥವು ಮೇಘವಾದರೆ ಮತ್ತೊಂದು ರಥವು ಸಮುದ್ರವಾಗಿಯೂ, ಅದು ಮೇಘವಾದಾಗ ಇದು ಸಮುದ್ರವಾಗಿಯೂ ಆಗುತಿದ್ದುವು.

---

1. ಆಯುಧಿಃ=ಆಯೋಧನಂ, ಯುದ್ಧಮಿತ್ಯರ್ಥಃ ; ತಸ್ಯಾಂ.

ಅನ್ಯೋನ್ಯಮಪಿ ಗರ್ಜನ್ತೌ ಮತ್ತಾಬ್ಧಿಜಲದಾವಿವ ‖೩೧‖
ತಯೋಃ ಪ್ರಹರತೋರ್ಬಾಣಾಃ ವಸುಧಾನರಸಿಂಹಯೋಃ ।
ಪಾಷಾಣಮುಸಲಾಕಾರಾಃ ವ್ಯೋಮವಿಸ್ತಾರಿಣೋಭವನ್ ‖೩೨‖
ಕರವಾಳಮುಖಾಃ ಕೇಚಿತ್ ಮುದ್ಗರಾನನಕಾಃ ಪರೇ ।
ಶಿತಚಕ್ರಮುಖಾಃ ಕೇಚಿತ್ ಕೇಚಿತ್ ಪರಶುವಕ್ತ್ರಕಾಃ ‖೩೩‖
ಕೇಚಿಚ್ಛಕ್ತಿಮುಖಾಃ ಕೇಚಿತ್ ಕೇಚಿಚ್ಛೂಲಶಿಲಾಮುಖಾಃ ।
ತ್ರಿಶೂಲವದನಾಃ ಕೇಚಿತ್ ಸ್ಥೂಲಾ ಇವ ಮಹಾಶಿಲಾಃ ‖೩೪‖
ಪ್ರಳಯಪವನಪಾತಿತಾಃ ಶಿಲೌಘಾಃ ಇವ ನಿಪತನ್ತಿ ಶಿಲೀಮುಖಾಸ್ತದಾಸ್ಮ ।
ಪ್ರಮಿಳತಮಭವತ್ ತಯೋಸ್ತದಾನೀಂ ಪ್ರಳಯವಿಜೃಮ್ಭಿತಸಿನ್ಧುಸಮ್ಭ್ರಮೋಽಣ‖

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ವಿದೂರಥಸಿನ್ಧು
ಸಮಾಗಮೋ ನಾಮ ಸಪ್ತಚತ್ವಾರಿಂಶಃ ಸರ್ಗಃ.

(ಒಂದಾವೃತ್ತಿ ಒಂದು ರಥದಿಂದ ಬಾಣಾದಿಗಳು ಬರುತಲೂ, ಮತ್ತೊಂದು ರಥದಲ್ಲಿದ್ದವರು ಅದನ್ನು ಸಹಿಸುತಲೂ, ಹಾಗೆಯೇ ಆಮೇಲೆ ಆ ರಥದವರು ಹೊಡೆಯಲುಪಕ್ರಮಿಸಿದಾಗ ಮೊದಲಿನವರು ಅದನ್ನು ಸಹಿಸುತಲೂ ಇದ್ದರೆಂದು ಭಾವವು) ‖೩೧‖

ಹೀಗೆ ಪ್ರಹಾರಮಾಡುತ—ಭೂಮಿಯಲ್ಲಿ ಅವತರಿಸಿರುವ ಅಪರನರಸಿಂಹಮೂರ್ತಿಗಳೋ ಎಂಬಂತಿರುವ ಆ ಸಿಂಧುವಿದೂರಥರಾಜರುಗಳು ಯುದ್ಧಮಾಡುತಿರಲಾಗಿ, ದೊಡ್ಡ ಬಂಡೆಯಂತೆಯೂ ಒನಕೆಗಳಂತೆಯೂ ಕಾಣುತಿರುವ ಬಾಣಸಮೂಹಗಳು, ಅಂತರಿಕ್ಷದಲ್ಲೆಲ್ಲ ಹರಡಿಕೊಂಡುಬಿಟ್ಟುವು ‖೩೨‖

ಆ ಬಾಣಗಳ ಅಲಗುಗಳಲ್ಲಿ, ಕೆಲವು ಖಡ್ಗಾಕಾರಗಳಾಗಿಯೂ, ಕೆಲವು ಮುದ್ಗರರೂಪಗಳಾಗಿಯೂ, ಕೆಲವು ಹರಿತವಾದ ಚಕ್ರರೂಪಗಳಾಗಿಯೂ, ಕೆಲವು ಪರಶು(ಕೊಡಲಿ) ರೂಪಗಳಾಗಿಯೂ, ಕೆಲವು ಶಕ್ತ್ಯಾಯುಧಾಕಾರಗಳಾಗಿಯೂ, ಕೆಲವು ಶೂಲರೂಪಗಳಾಗಿಯೂ, ಕೆಲವು ಪಾಷಾಣಾಕಾರಗಳಾಗಿಯೂ, ಕೆಲವು ತ್ರಿಶೂಲಾಕಾರಗಳಾಗಿಯೂ, ಇದ್ದುವು; ಮತ್ತೆ ಕೆಲವು ಬಾಣಗಳು, ದೊಡ್ಡ ಬಂಡೆಗಳಂತೆಯೇ ಇದ್ದುವು ‖೩೩—೩೪‖

ಅಯ್ಯಾ! ರಾಮ! ಆರೀತಿಯಾದ ಬಾಣಗಳು, ಪ್ರಳಯಮಾರುತದಿಂದ ಪ್ರೇರಿತವಾದ ಶಿಲಾಸಮೂಹದಂತೆ ಬೀಳುತಿದ್ದುವು. ಹೀಗಿರುವಾಗ, ಪ್ರಳಯಕಾಲದಲ್ಲಿ ಉಕ್ಕಿಬರುವ ಸಮುದ್ರಗಳ ರೀತಿಯಲ್ಲಿ, ಆ ಸಿಂಧುರಾಜನಿಗೂ ವಿದೂರಥನಿಗೂ ಆ ಯುದ್ಧರಂಗದಲ್ಲಿ ಸಂಮೇಳನವಾಯ್ತು ‖೩೫‖

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಸಿಂಧುವಿದೂರಥ
ಸಮಾಗಮವರ್ಣನೆಯೆಂಬ ನಾಲ್ವತ್ತೇಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟಚತ್ವಾರಿಂಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಪ್ರಾಪ್ಯ ರಾಜಾ ಪುರಃ ಪ್ರಾಪ್ತಂ ಸಿನ್ಧುಮುದ್ಧುರಕನ್ಧರಮ್ ।
ಮಧ್ಯಾಹ್ನತಪನಾನ್ತೇನ[1] ಕೋಪೇನ ವಿತತೋಽಭವತ್ ॥೧॥
ಧನುರಾಸ್ಫಾಲಯಾಮಾಸ ಚಿರಾರಾವಿತದಿಙ್ಮುಖಮ್ ।
ಕಲ್ಪಾನ್ತಪವನಾಸ್ಫೋಟಇವ ಮೇರುಗಿರೇಸ್ತಟಮ್ ॥೨॥
ವಿಸಸರ್ಜೋರ್ಜಿತೋ ರಾಜಾ ಪ್ರಳಯಾರ್ಕಃ ಕರಾನಿವ ।
ತೂಣೀರ[2] ರಜನೀಬದ್ಧಾಃ ಶಿಲೀಮುಖಪರಮ್ಪರಾಃ ॥೩॥
ಏಕಏವ ವಿನಿರ್ಯಾತಿ ಗುಣಾತ್ ತಸ್ಯ ಶಿಲೀಮುಖಃ ।
ಸಹಸ್ರಂ ಭವತಿ ವ್ಯೋಮ್ನಿ ಗಚ್ಛನ್ ಪತತಿ ಲಕ್ಷಶಃ ॥೪॥

ಉತ್ಪತ್ತಿಪ್ರಕರಣದಲ್ಲಿ ನಾಲ್ವತ್ತೆಂಟನೆಯ ಸರ್ಗವು.

ವಿಚಿತ್ರಮಾಯಾಜನನೈಃ ಮನ್ತ್ರಾಸ್ತ್ರೈರ್ವಿಶ್ವಮೋಹನಃ ।
ವರ್ಣ್ಯತೇ ವಿಸ್ತರೇಣಾತ್ರ ಸಮರಃ ಸಿನ್ಧುಪದ್ಮಯೋಃ ॥

ನಾನಾವಿಧವಾದ ಮಾಯೆಯನ್ನು ಉಂಟುಮಾಡುತಿರುವ ಮಂತ್ರಾಸ್ತ್ರಗಳಿಂದ ಜಗತ್ತಿಗೆಲ್ಲ ಮೋಹವುಂಟುಮಾಡುವಂತೆ, ಸಿಂಧುರಾಜ ಪದ್ಮರಾಜರು ಮಾಡಿದ ಯುದ್ಧವು ಈಸರ್ಗದಲ್ಲಿ ವಿಸ್ತಾರವಾಗಿ ವರ್ಣಿಸಲ್ಪಡುವುದು.

ಪುನಃ ಶ್ರೀವಸಿಷ್ಠರು ಶ್ರೀರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಆ ಸಿಂಧುರಾಜನೂ ವಿದೂರಥನೂ ಸೇರಿದ ಬಳಿಕ, ವಿದೂರಥನು, ಗರ್ವದಿಂದ ಕತ್ತೆತ್ತಿಕೊಂಡು ಬಂದು ನಿಂತಿರುವ ವಿದೂರಥನನ್ನು ಕಂಡು, ಮಧ್ಯಾಹ್ನಸೂರ್ಯಸದೃಶವಾದ ಕೋಪದಿಂದ ಪ್ರಜ್ವಲಿತನಾದನು ॥೧॥

ಹೀಗೆ ಕೋಪಾವಿಷ್ಟನಾಗಿ, ಪ್ರಳಯಮಾರುತಸಂಘಟ್ಟನೆಯು ಮೇರುಪರ್ವತದ ದಡವನ್ನು ಧ್ವನಿಗೈಯಿಸುವಂತೆ, ವಿದೂರಥನು ತನ್ನ ಧನುಸ್ಸನ್ನು ಧ್ವನಿಮಾಡಿಸಿದನು ॥೨॥

ಕೇವಲ ಬಲಿಷ್ಠನಾದ ಆ ವಿದೂರಥನು, ಪ್ರಳಯಕಾಲಿಕನಾದ ಸೂರ್ಯನು ಕಿರಣಪರಂಪರೆಯನ್ನು ಬಿಡುವಂತೆ, ತೂಣೀರವೆಂಬ ಕಮಲಮುಕುಳದಲ್ಲಿ ಭ್ರಮರಗಳಹಾಗಿರುವ ಬಾಣಪರಂಪರೆಗಳನ್ನು ಶತ್ರುವಿನಮೇಲೆ ಬಿಟ್ಟನು ॥೩॥

ಆ ವಿದೂರಥನು ಬಾಣಮೋಕ್ಷಮಾಡುವಾಗ, ಅವನ ಧನುರ್ಗುಣದದೆಸೆಯಿಂದ ಒಂದೇಬಾಣವು ಹೊರಡುತಿತ್ತು; ಅದು ಅಂತರಿಕ್ಷದಲ್ಲಿ ಹೋಗುವಾಗ ಸಾವಿರವಾಗುತಲೂ, ಶತ್ರುಗಳಮೇಲೆ ಬೀಳುವಾಗ ಲಕ್ಷವಾಗುತಲೂ ಇದ್ದಿತು ॥೪॥

---

1. ಅನ್ತೇನ=ಸದೃಶೇನ.
2. ರಜನೀಶಬ್ದೇನ ತನ್ನಿಷ್ಠಕಮಲಾನಿ ಲಕ್ಷ್ಯನ್ತೇ.

ಸಿನ್ಧೋರಪಿ ತಥೈವಾಸೀತ್ ಶಕ್ತಿರ್ಲಾಘವಮೇವ ಚ |
ವರೇಣ ವರದಸ್ಯೈವಂ ವಿಷ್ಣೋರ್ಧಾನುಷ್ಕತಾ ತಯೋಃ ||೫||
ಮುಸಲಾನಾಮ ತೇ ಬಾಣಾಃ ಮುಸಲಾಕೃತಯೋಽಮ್ಬರಮ್ |
ಛಾದಯಾಮಾಸುರುನ್ನಾದಾಃ ಕಲ್ಪಾನ್ತಾಶನಯೋ ಯಥಾ ||೬||
ರೇಜುಃ ಕನಕನಾರಾಚರಾಜಯೋ ವ್ಯೋಮ್ನಿ ಸಸ್ವನಾಃ |
ರಸನ್ತ್ಯಃ ಕಲ್ಪವಾತಾರ್ತಾಃ ಪತನ್ತ್ಯ ಇವ ತಾರಕಾಃ ||೭||
ವಿದೂರಥಾಚ್ಛರಾಸಾರಾಃ ಅಜಸ್ರಮಭಿನಿರ್ಯಯುಃ |
ಅಬ್ಧೇರಿವ ಪಯಃಪೂರಾಃ ಸೂರ್ಯಾದಿವ ಮರೀಚಯಃ ||೮||
ಪ್ರಚಣ್ಡಪವನೋದ್ಧೂತಾತ್ ಪುಷ್ಪಾಣೀವ ಮಹಾತರೋಃ |
ಅಯಃಪಿಣ್ಡಾದಿವೋತ್ತಪ್ತಾತ್ ತಾಡಿತಾತ್ ಕಣಸಙ್ಕ್ತಯಃ ||೯||
ಧಾರಾವರ್ಷಮುಚ ಇವ ಶೀಕರಾ ಇವ ನಿರ್ಝರಾತ್ |
ತತ್ಪುರಾಗ್ನಿಮಹಾದಾಹಾತ್ ಸ್ಫುಲಿಙ್ಗಾ ಇವ ಭಾಸುರಾಃ ||೧೦||
ತಯೋಶ್ಚಟಚಟಾಸ್ಫೋಟಶೃಣ್ವತ್ಕೋದಣ್ಡಯೋರ್ದ್ವಯೋಃ |
ಬಲದ್ವಯಮಭೂತ್ ಪ್ರೇಕ್ಷಾಮೂಕಂ ಶಾನ್ತ ಇವಾಮ್ಬುಧಿಃ ||೧೧||

ಸಿಂಧುರಾಜನಿಗೂ, ಪದ್ಮರಾಜನಂತೆಯೇ ಶಕ್ತಿಯೂ ಲಾಘವ (ಬಾಣಮೋಕ್ಷಾದಿಗಳಲ್ಲಿ ಕೈಯಿನ ಚಮತ್ಕಾರ) ವೂ ಉಂಟಾಗುತಿದ್ದುವು. ಭಕ್ತರಿಗೆ ಇಷ್ಟವಾದ ವರವನ್ನು ಕೊಡತಕ್ಕವನಾಗಿರುವ ಶ್ರೀಮನ್ಮಹಾವಿಷ್ಣುವಿನ ವರಬಲದಿಂದ, ಅವರಿಬರಿಗೂ ಇಷ್ಟಮಟ್ಟಿಗೆ ಧನುರ್ಯುದ್ಧದಲ್ಲಿ ಸಾಮರ್ಥ್ಯವುಂಟಾಗಿದ್ದಿತು ॥೫॥

ಅವರು ಬಿಟ್ಟ ಮುಸಲನಾಮಕಗಳಾದ ಮುಸಲಾಕಾರಗಳಾದ ಬಾಣಗಳು, ಪ್ರಳಯಕಾಲದ ಸಿಡಿಲುಗಳಂತೆ ಮಹಾಧ್ವನಿಮಾಡುತ, ಅಂತರಿಕ್ಷವನ್ನೆಲ್ಲ ಮುಚ್ಚಿಬಿಟ್ಟುವು ॥೬॥

ಸುವರ್ಣಮಯವಾದ ಬಾಣಗಳ ಪರಂಪರೆಗಳು, ಪ್ರಳಯಮಾರುತಪೀಡಿತಗಳಾಗಿ ಧ್ವನಿಮಾಡುತ ಬೀಳುವ ನಕ್ಷತ್ರಗಳಂತೆ, ಅಂತರಿಕ್ಷದಲ್ಲಿ ಧ್ವನಿಮಾಡುತ ಪ್ರಕಾಶಿಸಿದುವು ॥

ಬಳಿಕ ಸಮುದ್ರದೆಸೆಯಿಂದ ಜಲಪ್ರವಾಹಗಳು ಹೊರಡುವಂತೆಯೂ, ಸೂರ್ಯನ ದೆಸೆಯಿಂದ ಕಿರಣಗಳು ಹೊರಡುವಂತೆಯೂ, ಚಂಡಮಾರುತದಿಂದ ಕಂಪಿತವಾದ ದೊಡ್ಡ ಮರದದೆಸೆಯಿಂದ ಪುಷ್ಪಗಳು ಹೊರಡುವಂತೆಯೂ, ಚೆನ್ನಾಗಿ ಕಾಯಿಸಿ ಹೊಡೆಯಲ್ಪಟ್ಟ ಕಬ್ಬುಣದಗಟ್ಟಿಯದೆಸೆಯಿಂದ ಚೂರುಗಳು ಹೊರಡುವಂತೆಯೂ, ಮೇಘದದೆಸೆಯಿಂದ ಜಲಧಾರೆಗಳಂತೆಯೂ, ಗಿರಿನದೀಪ್ರವಾಹದದೆಸೆಯಿಂದ ಜಲಕಣಗಳಂತೆಯೂ, ಮತ್ತು ಆ ವಿದೂರಥನ ಪಟ್ಟಣವು ಉರಿಯುತಿರುವಾಗ ಅದರ ದೆಸೆಯಿಂದ ಪ್ರಕಾಶಮಾನವಾದ ಕಿಡಿಗಳಂತೆಯೂ, ವಿದೂರಥನದೆಸೆಯಿಂದ ಬಾಣಪರಂಪರೆಗಳು ಅವಿಚ್ಛಿನ್ನನಾಗಿ ಹೊರಟುವು ॥೮—೧೦॥

ಹೀಗೆ ಆ ವಿದೂರಥ ಸಿಂಧುರಾಜರಿಬ್ಬರೂ ಚಟಪಟಶಬ್ದ ಕೇಳಿಬರುತಿರುವ ಧನುಸ್ಸುಳ್ಳವರಾಗಿ ಪ್ರಹರಣಮಾಡುತಿರುವಾಗ, ಅವರಿಬ್ಬರ ಸೈನ್ಯವೂ, ಶಾಂತವಾದ ಸಮುದ್ರದಂತೆ ಜ್ಞಾನಶೂನ್ಯವಾಗಿ ಸ್ತಬ್ಧವಾಗಿ ನಿಂತಿದ್ದಿತು ॥೧೧॥

ವಹನ್ತಿ ಸ್ಮ ಶರಾಪೂರಾಃ ಗಙ್ಗಾಪೂರಾ ಇವಾಮ್ಬರೇ ।
ಸಿನ್ಧೋರಭಿಮುಖಂ ಯುದ್ಧೇ ಘುರ್ಘುರಾರಾವರಂಹಸಃ ॥೧೨॥
ಕಚತ್ಕನಕನಾರಾಚಶರವರ್ಷಾ ಅನಾರತಮ್ ।
ವಹಚ್ಛವಶವಾಶಬ್ದಂ ನಿರ್ಯಯುರ್ಧನುರಮ್ಬುದಾತ್ ॥೧೩॥
ಬಾಣಮನ್ದಾಕಿನೀಪೂರಂ ವ್ರಜನ್ತಂ ಸಿನ್ಧುಪೂರಣೇ ।
ವಾತಾಯನಾತ್ ತಮಾಲೋಕ್ಯ ಲೀಲಾ ತತ್ಪುರವಾಸಿನೀ ॥೧೪॥
ತೇನ ಬಾಣಸಮೂಹೇನ ಜಯಮಾಶಙ್ಕ್ಯ ಭರ್ತ್ತರಿ ।
ಉವಾಚ ವಾಕ್ಯಮಾನನ್ದವಿಕಸನ್ಮುಖಪಙ್ಕಜಾ ॥೧೫॥
ಜಯ ದೇವಿ ಜಯತ್ಯೇಷಃ ನಾಥೋಽಸ್ಮಾಕಂ ವಿಲೋಕಯ ।
ಕಿಂಚಾನೇನ ಶರೌಘೇಣ ಮೇರುರಪ್ಯೇತಿ ಚೂರ್ಣತಾಮ್ ॥೧೬॥
ತಸ್ಯಾಮೇವಂ ವದನ್ತ್ಯಾಂ ತು ಘನಸ್ನೇಹರವಾಕುಲಮ್ ।
ಪ್ರೇಕ್ಷಣವ್ಯಗ್ರಯೋರ್ದೇವ್ಯೋಃ ಹಸನ್ತ್ಯೋರ್ಮಾನುಷೀಂ ಹೃದಾ ॥೧೭॥
ತಚ್ಛರಾರ್ಣವಮಾಮತ್ತಂ ಅಪಿಬತ್ ಸಿನ್ಧುಬಾಡಬಃ ।

ಆಗ, ಆ ಯುದ್ಧದಲ್ಲಿ ಘರ್ಘರಧ್ವನಿಯೊಡನೆ ವೇಗವಾಗಿ ಸಂಚರಿಸುತಿರುವ ಸಿಂಧುರಾಜನಿಗಭಿಮುಖವಾಗಿ, ಗಂಗಾಪ್ರವಾಹದಂತೆ ಅಂತರಿಕ್ಷದಲ್ಲಿ ಶರಪರಂಪರೆಗಳು ಪ್ರವಹಿಸಿದುವು ॥೧೨॥

ತಣತಣನೆ ಹೊಳೆಯುತಿರುವ ಸುವರ್ಣಪುಂಖಯುಕ್ತವಾದ ಬಾಣಗಳೆಂಬ ಜಲವೃಷ್ಟಿಗಳು, ಪದ್ಮರಾಜನ ಧನುಸ್ಸೆಂಬ ಮೇಘದದೆಸೆಯಿಂದ, ನಿರಂತರವಾಗಿ ಧ್ವನಿಮಾಡುತ ಹೊರಟುವು ॥೧೩॥

ಈರೀತಿಯಾಗಿ ಆ ಬಾಣಪರಂಪರೆಯೆಂಬ ಗಂಗಾಪ್ರವಾಹವು ಸಿಂಧುರಾಜನೆಂಬ ಸಮುದ್ರವನ್ನು ಪೂರ್ತಿಮಾಡುವುದಕ್ಕೆ ಹೋಗುತಿರುವುದನ್ನು ಕಿಟಕಿಯಿಂದಲೇ ನೋಡಿದವಳಾಗಿ, ಆ ಪಟ್ಟಣದಲ್ಲಿದ್ದ ಅಪ್ರಬುದ್ಧ ಲೀಲೆಯು, ಆ ಬಾಣಸಮೂಹದಿಂದ ತನ್ನ ಗಂಡನಿಗೆ ಜಯವಾಗುವುದೆಂದು ನಂಬಿಕೊಂಡು, ಸತೋಷದಿಂದ ಮುಖದಲ್ಲಿ ವಿಕಾಸಪಡೆಯುತ, ವಾಗ್ದೇವಿಯನ್ನು ಕುರಿತು ಈ ಮಾತು ಹೇಳಿದಳು ॥೧೪—೧೫॥

ದೇವಿ! ನಿನಗೆ ಜಯವಾಗಲಿ. ಈ ನಮ್ಮ ನಾಥನು ಜಯಿಸುತ್ತಿರುವನು; ಅಲ್ಲಿ ನೋಡು. ಮತ್ತು, ಇವನು ಬಿಡುತ್ತಿರುವ ಶರಸಮೂಹದಿಂದ ಮೇರುಪರ್ವತವೂ ಚೂರ್ಣವಾಗುವುದರಲ್ಲಿ ಸಂಶಯವಿಲ್ಲ ॥೧೬॥

ಹೀಗೆಂದು ಅವಳು ಅತಿಸ್ನೇಹದಿಂದ ಪರ್ಯಾಕುಲವಾದ ಧ್ವನಿಯೊಡನೆ ಹೇಳುತ್ತಿರುವಾಗ, ಆ ಯುದ್ಧಪ್ರಕ್ರಮವನ್ನು ನೋಡುವುದರಲ್ಲಾಸಕ್ತರಾದ ಆ ಪ್ರಬುದ್ಧಲೀಲೆಯೂ ವಾಗ್ದೇವಿಯೂ, ಮನಸ್ಸಿನಲ್ಲಿಯೇ ಈ ಮಾನುಷಿಯಾದ ಅಪ್ರಬುದ್ಧಲೀಲೆಯನ್ನು ಪರಿಹಾಸಮಾಡುತಿರಲು, ಜಹ್ನುಮುನಿಯು ಗಂಗಾನದಿಯನ್ನು ಪಾನಮಾಡಿದಂತೆ, ಆ ಪದ್ಮರಾಜನ ಬಾಣಸಮುದಾಯವೆಂಬ ಮಹಾಸಮುದ್ರವನ್ನು, ಸಿಂಧುರಾಜನೆಂಬ ಬಡಬಾಗ್ನಿಯು ಪಾನ

ಶರೋಽಷ್ಮಣಾ ಹ್ಯಗಸ್ತ್ಯೇನ ಜಹ್ನುರ್ನಾದ್ಧಿಕಿಸೇಮಿವ ॥೧೮॥
ಬಾಣವರ್ಷೇಣ ಕಣಶಃ ತಂ ಸಾಯಕಮಹಾಘನಮ್ ।
ಛಿತ್ತ್ವಾ ತನು ರಜಃ ಕೃತ್ವಾ ಚಿಕ್ಷೇಪ ಗಗನಾರ್ಣವೇ ॥೧೯॥
ಯಥಾ ದೀಪಸ್ಯ ಶಾನ್ತಸ್ಯ ನ ಪರಿಜ್ಞಾಯತೇ ಗತಿಃ ।
ತಸ್ಯ ಸಾಯಕಸಙ್ಘಸ್ಯ ನ ವಿಜ್ಞಾತಾ ತಥಾ ಗತಿಃ ॥೨೦॥
ತಂ ಛಿತ್ವಾ ಸಾಯಕಾಸಾರಂ ಶರೀರಾಮ್ಬುಧರಂ ಘನಮ್ ।
ವ್ಯೋಮ್ನಿ ಪ್ರಸಾರಯಾಮಾಸ ರಸಾಚ್ಛವಶತಾನ್ವಿತಮ್ ॥೨೧॥
ವಿದೂರಥಸ್ತಮಪ್ಯಾಶು ವ್ಯಧಮತ್ ಸಾಯಕೋತ್ತಮೈಃ ।
ಸಾಮಾನ್ಯಜಲದಂ ಮತ್ತಂ ಕಲ್ಪಾನ್ತಪವನೋ ಯಥಾ ॥೨೨॥
ಕೃತಪ್ರತಿಕೃತ್ಯೈರೇವಂ ಬಾಣವರ್ಷೈರ್ಮಹೀಪತೀ ।
ವ್ಯರ್ಥೀಕೃತೈರನಯತಾಂ [1]ಪ್ರಹಾರಮವಿಚಾರಣೈಃ ॥೨೩॥
ಅಥಾದಧೇ ಮೋಹನಾಸ್ತ್ರಂ ಸಿನ್ಧುರ್ಗನ್ಧರ್ವಸೌಹೃದಾತ್ ।

ಮಾಡಿಬಿಟ್ಟಿತು. ಈ ಸಂದರ್ಭಗಲ್ಲಿ, ಅಸ್ತ್ರತೇಜಸ್ಸು ಸಾಕ್ಷಾತ್ ಅಗಸ್ತ್ಯಮುನಿಯಂತೆ ಸಹಾಯವಾಯ್ತು ॥೧೭–೧೮॥

ಹೀಗೆ ದೊಡ್ಡ ಮೇಘದಂತಿರುವ ಆ ಬಾಣಗಳನ್ನು, ಸಿಂಧುರಾಜನು ತನ್ನ ಬಾಣವೃಷ್ಟಿಯಿಂದ ಚೂರುಚೂರಾಗಿ ಕತ್ತರಿಸಿ, ಸಣ್ಣಧೂಳಿಯಂತೆ ಪುಡಿಮಾಡಿ, ಆ ಧೂಳನ್ನು ಆಕಾಶವೆಂಬ ಸಮುದ್ರದಲ್ಲಿ ಹಾಕಿಬಿಟ್ಟನು ॥೧೯॥

ಆಬಳಿಕ, ಆರಿಹೋದ ದೀಪವು ಎಲ್ಲಿಹೋಯಿತೆಂಬುದು ಹೇಗೆ ಗೊತ್ತಾಗುವುದಿಲ್ಲವೋ, ಹಾಗೆ ಆ ಪದ್ಮರಾಜನ ಬಾಣವು ಎಲ್ಲಿಹೋಯಿತೆಂಬುದು ಯಾರಿಗೂ ಗೊತ್ತೇ ಆಗಲಿಲ್ಲ ॥೨೦॥

ಹೀಗೆ ಆ ಸಿಂಧುರಾಜನು, ವಿದೂರಥನ ಬಾಣಸಮೂಹವನ್ನು ಕತ್ತರಿಸಿ, ತನ್ನ ಬಾಣವೃಷ್ಟಿಗಳೆಂಬ ಮೇಘವನ್ನು ಅಂತರಿಕ್ಷದಲ್ಲಿ ಹರಡಿಬಿಟ್ಟನು. ಈ ಬಾಣವೃಷ್ಟಿಯು ಅನೇಕರನ್ನು ಕತ್ತರಿಸಿ ಆ ಶವಗಳನ್ನು ಹೊತ್ತುಕೊಂಡು ಹೋಗುತಿರುವುದರಿಂದ, ಆ ಶರೀರಗಳೇ ಬಾಣಗಳೆಂಬ ಮೇಘದಲ್ಲಿ ಜಲಧಾರೆಗಳಾಗಿದ್ದುವು ॥೨೧॥

ಈ ಸಿಂಧುರಾಜನ ಬಾಣವರ್ಷವನ್ನೂ ಕೂಡ, ಮಂದವಾದ ಸಾಮಾನ್ಯಮೇಘವನ್ನು ಪ್ರಳಯಮಾರುತವು ಓಡಿಸಿಬಿಡುವಂತೆ, ವಿದೂರಥನು ತನ್ನ ಉತ್ತಮವಾದ ಬಾಣಗಳಿಂದ ದೂರವಾಗಿ ಓಡಿಸಿಬಿಟ್ಟನು ॥೨೨॥

ಈರೀತಿಯಾಗಿ, ಆ ದೊರೆಗಳಿಬ್ಬರೂ, ಒಬ್ಬನು ಮಾಡಿದುದಕ್ಕೆ ಮತ್ತೊಬ್ಬನು ಪ್ರತೀಕಾರಮಾಡುತ, ಪರಸ್ಪರ ಬಾಣವೃಷ್ಟಿಗಳನ್ನು ವಿಚಾರವೇ ಇಲ್ಲದೆ ವ್ಯರ್ಥಮಾಡುತ, ಒಂದು ಜಾವಹೊತ್ತು ಕಳೆದರು ॥೨೩॥

ಬಳಿಕ ಸಿಂಧುರಾಜನು, ಗಂಧರ್ವರ ಅನುಗ್ರಹದಿಂದ ಲಬ್ಧವಾಗಿದ್ದ ಸಮ್ಮೋಹನಾ

---

1. ಪ್ರಹಾರಂ = ಪ್ರಹರಪರಿಮಿತಂ ಕಾಲಮ್.

ಪ್ರಾಸ್ತಂ ತೇನ ಯಯುರ್ಲೋಕಾಃ ವಿನಾ ಮೋಹಂ ವಿದೂರಥಾತ್ ||೨೪||
ವ್ಯಸ್ತಶಸ್ತ್ರಾಮ್ಬರಾ ಮೂಕಾಃ ವಿಷಣ್ಣವದನೇಕ್ಷಣಾಃ |
ಮೃತಾ ಇವಾಭವನ್ಯೋಧಾಃ ಚಿತ್ರನ್ಯಸ್ತಾ ಇವಾಥವಾ ||೨೫||
ಯಾವದ್ವಿದೂರಥಾದನ್ಯಂ ಮೋಹೋ ನಯತಿ ಮನ್ದತಾಮ್ |
ತಾವದ್ವಿದೂರಥೋ ರಾಜಾ ಪ್ರಬೋಧಾಸ್ತ್ರಮಥಾದದೇ ||೨೬||
ತತಃ ಪ್ರಬೋಧಮಾಪನ್ನಾಃ ಪ್ರಜಾಃ ಪ್ರಾತರಿವಾಬ್ಜಿನೀ |
ವಿದೂರಥೇಽಭವತ್ ಸಿನ್ಧುಃ ಕ್ರುದ್ಧೋಽರ್ಕ ಇವ ರಾಕ್ಷಸೇ ||೨೭||
ನಾಗಾಸ್ತ್ರಮಾದದೇ ಭೀಮಂ ಪಾಶಬನ್ಧನಖೇದದಮ್ |
ತೇನಾಭವನ್ನಭೋ ವ್ಯಾಪ್ತಂ ಭೋಗಿಭಿಃ ಪರ್ವತೋಪಮೈಃ ||೨೮||
ಸರ್ಪೈರ್ವಿಲಸಿತಾ ಭೂಮಿಃ ಮೃಣಾಳೈಃ ಸರಸೀ ಯಥಾ |
ಸಮ್ಪನ್ನಾ ಗಿರಯಃ ಸರ್ವೇ ಕೃಷ್ಣಪನ್ನಗಕಮ್ಬಳಾಃ ||೨೯||
ಪದಾರ್ಥಾಃ ಸರ್ವ ಏವೇಮೇ ವಿಷೋಷ್ಮಖಿನ್ನತಾಂ ಯಯುಃ |
ಸಪರ್ವತವನಾಭೋಗಾ ಯಯೌ ವಿವಶತಾಂ ಮಹೀ ||೩೦||

ಸ್ತ್ರವನ್ನು ಧನುಸ್ಸಿನಲ್ಲಿ ಸೇರಿಸಿದನು. ಅದರ ಮಹಿಮೆಯಿಂದ, ವಿದೂರಥ ಹೊರತಾಗಿ ಮಿಕ್ಕ ಸಮಸ್ತಜನರೂ ಮೋಹಹೊಂದಿಬಿಟ್ಟರು ||೨೪||

ಆಗ, ಆ ಯೋಧರ ಆಯುಧಗಳೂ ವಸ್ತ್ರಗಳೂ ವ್ಯತ್ಯಸ್ತವಾಗಿ ಬಿದ್ದಿದ್ದುವು; ಅವರೆಲ್ಲರೂ, ಮೂಗರಾಗಿಯೂ, ಮುಖದಲ್ಲಿಯೂ ನೇತ್ರದಲ್ಲಿಯೂ ವಿಷಾದವುಳ್ಳವರಾಗಿಯೂ ಆಗಿಬಿಟ್ಟು, ಮೃತರಾದವರಂತೆ ಕಾಣಿಸುತಿದ್ದರು. ಅಥವಾ ಅವರೆಲ್ಲರನ್ನೂ ಚಿತ್ರದಲ್ಲಿ ಬರೆದಿರುವರೋ ಎಂದು ಭ್ರಮೆಯುಂಟಾಗುತಿದ್ದಿತು ||೨೫||

ಹೀಗೆ ವಿದೂರಥನೊಬ್ಬನನ್ನು ಬಿಟ್ಟು ಉಳಿದವರೆಲ್ಲರೂ ಆ ಸಮ್ಮೋಹನಾಸ್ತ್ರಮಹಿಮೆಯಿಂದ ಮೂಢರಾಗಿರುವಷ್ಟರಲ್ಲಿಯೇ, ವಿದೂರಥರಾಜನು ಪ್ರಬೋಧಾಸ್ತ್ರವನ್ನು ತಾನು ಕೈಗೊಂಡನು ||೨೬||

ಬಳಿಕ, ಸೂರ್ಯೋದಯಕಾಲದಲ್ಲಿ ಕಮಲಲತೆಯು ವಿಕಸಿತವಾಗುವಂತೆ, ಆ ಜನರೆಲ್ಲರೂ ಎಚ್ಚರಗೊಂಡರು. ಇದನ್ನು ನೋಡಿ, ಮಂದೇಹರೆಂಬ ರಾಕ್ಷಸರಮೇಲೆ ಸೂರ್ಯನು ಕೋಪಿಸಿಕೊಳ್ಳುವಂತೆ, ವಿದೂರಥನಮೇಲೆ ಸಿಂಧುರಾಜನು ಕ್ರೋಧಾವಿಷ್ಟನಾದನು ||೨೭||

ಹೀಗೆ ಕೋಪಿಸಿಕೊಂಡಿರುವ ಆ ಸಿಂಧುರಾಜನು, ಶತ್ರುಗಳಿಗೆ ಪಾಶಬಂಧದಿಂದ ಖೇದಕೊಡತಕ್ಕುದಾಗಿರುವ ಭಯಂಕರವಾದ ನಾಗಾಸ್ತ್ರವನ್ನು (ಸರ್ಪಾಸ್ತ್ರ) ಸ್ವೀಕರಿಸಿದನು. ಇದರಿಂದ, ಪರ್ವತಸದೃಶಗಳಾದ ಸರ್ಪಗಳು ಹೊರಟು ಅಂತರಿಕ್ಷವನ್ನೆಲ್ಲ ವ್ಯಾಪಿಸಿಬಿಟ್ಟುವು ||೨೮||

ಮತ್ತು, ತಾವರೆದಂಟುಗಳಿಂದ ಸರೋವರವು ವ್ಯಾಪ್ತವಾಗುವಂತೆ, ಸರ್ಪಗಳಿಂದ ಭೂಮಿಯೆಲ್ಲವೂ ವ್ಯಾಪ್ತವಾಯ್ತು; ಸಮಸ್ತ ಪರ್ವತಗಳಮೇಲೂ ಕೃಷ್ಣಸರ್ಪಗಳು ತುಂಬಿಬಿಟ್ಟಿರುವುದರಿಂದ, ಅವಕ್ಕೆಲ್ಲ ಕರಿಯ ಕಂಬಳಿಯನ್ನು ಹೊದ್ದಿಸಿರುವಂತೆ ಕಾಣಿಸಿತು||

ಆಗ, ಸಮಸ್ತ ಪದಾರ್ಥಗಳೂ ವಿಷಸಂತಾಪದಿಂದ ಆಯಾಸಪಟ್ಟುವು. ಪರ್ವತವನಸಹಿತವಾದ ಸಕಲ ಭೂಮಣ್ಡಲವೂ ಮೋಹಪರವಶವಾಗಿಬಿಟ್ಟಿತು ||೩೦||

ಪ್ರೋತಾಙ್ಗಾರಸಮಾಕೀರ್ಣಂ ವಿಷವೈಷಮ್ಯಶಂಸಿನಃ ।
ವವ್ರೂರೂಕ್ಷೋಷ್ಣನೀಹಾರವಾತಾಜ್ವಲನರೇಣವಃ ॥೩೧॥
ವಿದೂರಥೋಽಥ ಸೌಪರ್ಣಂ ಆದದೇಽಸ್ತ್ರಂ ಮಹಾಸ್ತ್ರವಿತ್ ।
ಉದಗುರ್ಗರುಡಾಸ್ತ್ರೇಣ ಸೌಪರ್ಣಾಃ ಪರ್ವತಾ ಇವ ॥೩೨॥
ಕಾಞ್ಚನೀಕೃತಸರ್ವಾಶಾಃ ಸರ್ವಾಶಾಪರಿಪೂರಕಾಃ ।
ಪಕ್ಷಪರ್ವತಸಂರಮ್ಭಜನಿತಪ್ರಳಯಾನಿಲಾಃ ॥೩೩॥
ಘೋರಾಣಾನಿಲಜವಾಕೃಷ್ಟಶ್ವಸದ್ಭುಜಗಮಣ್ಡಲಾಃ ।
ಮಹಾಘುರಘುರಾರಾವಪೂರಿತಾಮ್ಭೋಧಿಖಣ್ಡಕಾಃ ॥೩೪॥
ಸ ಸುಪರ್ಣಘನೋಽಪಾತ್ ತಂ ಸರ್ಪೌಘಂ ಭೂಪ್ರಪೂರಕಮ್ ।
ಕೃಷ್ಟಂ ಶಲಶಲಾಯನ್ತಂ ಅಗಸ್ತ್ಯ ಇವ ವಾರಿಧಿಮ್ ॥೩೫॥
ಸರ್ಪಕಮ್ಬಳನಿರ್ಮುಕ್ತಂ ಭೂಮಣ್ಡಲಮರಾಜತ ।
ಚಿರಾತ್ತಮವನೀರನ್ಧ್ರಮಿವ ನಿರ್ವಾರಿರಾಶಿ ಚ ॥೩೬॥

ಆಗ, ಆ ಸರ್ಪಗಳ ವಿಷದಿಂದ ವ್ಯಾಪ್ತವಾಗಿ ವಿಷದ ಕ್ರೌರ್ಯವನ್ನು ಪ್ರಕಾಶಪಡಿಸುತಿರುವ ವಾಯುಗಳು, ಹಿಮದಂತೆ ಮೃದುಶೀತಲವಾಗಿದ್ದ ಪದಾರ್ಥಗಳನ್ನೂ ಕೂಡ ಕಠಿನಗಳನ್ನಾಗಿಯೂ ಉಷ್ಣಗಳನ್ನಾಗಿಯೂ ಮಾಡುತ, ಬೆಂಕಿಕಿಡಿಗಳ ಸ್ವರೂಪವನ್ನು ಧರಿಸಿದುವುಗಳಾಗಿ, ಬೂದಿಯಿಲ್ಲದ ಕೆಂಡಗಳು ಸುತ್ತಲೂ ಹರಚುವಂತೆ ಬೀಸಲುಪಕ್ರಮಿಸಿದುವು॥

ಬಳಿಕ, ಮಹಾಸ್ತ್ರಜ್ಞಾನಯುಕ್ತನಾಡ ವಿದೂರಥನು ಗರುಡಾಸ್ತ್ರವನ್ನು ಸ್ವೀಕರಿಸಿದನು. ಆ ಗರುಡಾಸ್ತ್ರದಿಂದ ಪರ್ವತಾಕಾರಗಳಾದ ಅನೇಕ ಗರುಡಗಳು ಉದ್ಭವಿಸಿದುವು॥೩೨॥

ಆ ಗರುಡಗಳು, ತಮ್ಮ ಕಾಂತಿಯಿಂದ ಸಮಸ್ತ ದಿಕ್ಕುಗಳನ್ನೂ ಸುವರ್ಣಮಯವನ್ನಾಗಿ ಮಾಡುತ, ಪರ್ವತಾಕಾರವಾಗಿರುವ ರಕ್ಕೆಗಳ ಸಂಭ್ರಮದಿಂದಲೇ ಪ್ರಳಯಮಾರುತದಂತಿರುವ ಗಾಳಿಯನ್ನು ಹುಟ್ಟಿಸುತ, ಸಮಸ್ತ ದಿಕ್ಕುಗಳಲ್ಲಿಯೂ ತುಂಬಿಕೊಳ್ಳುತಿದ್ದುವು ॥೩೩॥

ಅವುಗಳ ಮೂಗಿನಿಂದ ಹೊರಡುವ ಗಾಳಿಯು, ಅಲ್ಲಿದ್ದ ಸರ್ಪಗಳನ್ನೆಲ್ಲ ವೇಗವಾಗಿ ಎಳೆದುಕೊಂಡು ಹೋಯ್ತು; ಆಗ ಆ ಸರ್ಪಗಳು ನಿಟ್ಟುಸಿರುಬಿಡುತಿದ್ದುವು. ಮತ್ತು ಆ ಗರುಡಪಕ್ಷಿಗಳ ಮುಖದಿಂದ ಹೊರಡುತಿರುವ ಘುರಘುರಶಬ್ದವು ಸಮುದ್ರಭಾಗವನ್ನೆಲ್ಲ ತುಂಬಿಬಿಟ್ಟಿತು ॥೩೪॥

ಆ ಗರುಡಗಳೆಂಬ ಮೇಘವು, ಭೂಮಿಯನ್ನೆಲ್ಲ ವ್ಯಾಪಿಸತಕ್ಕುದಾಗಿಯೂ ಶಲಶಲಶಬ್ದಮಾಡುತಲೂ ಇರುವ ಸರ್ಪಗಳೆಂಬ ಸಮುದ್ರಜಲ ಪ್ರವಾಹವನ್ನು, ತಾನೇ ಸೆಳೆದುಕೊಂಡು, ಅಗಸ್ತ್ಯರು ಸಮುದ್ರವನ್ನು ಪಾನಮಾಡಿದಂತೆ–ಪಾನಮಾಡಿಬಿಟ್ಟಿತು ॥೩೫॥

ಹೀಗೆ ಕಂಬಳಿಯಂತೆ ಭೂಮಿಯಮೇಲೆಲ್ಲ ಹರಡಿಕೊಂಡಿದ್ದ ಸರ್ಪಗಳು ಬಿಟ್ಟು ತೊಲಗಿದ ಬಳಿಕ, ಭೂಮಂಡಲವೆಲ್ಲವೂ, ಪೂರ್ವದಲ್ಲಿ ಸಮುದ್ರದಲ್ಲಿ ಮುಣುಗಿಹೋಗಿದ್ದು ಆದಿವರಾಹಮೂರ್ತಿಯಿಂದ ಮೇಲಕ್ಕೆತ್ತಲ್ಪಡುವಾಗ ಸಮುದ್ರದಿಂದ ಹೊರಗೆ ಹೊರಡುತಿದ್ದ ಭೂರಂಧ್ರದಂತೆ ವಿರಾಜಿಸಿತು ॥೩೬॥

ತತಸ್ತದ್ಗರುಡಾನೀಕಂ ಕ್ವಾಪ್ಯಗಚ್ಛದದೃಶ್ಯತಾಮ್ |
ದೀಪೌಘ ಇವ ವಾತೇನ ಶರದೇವಾಬ್ದಮಣ್ಡಲಮ್ ||೩೭||
ವಜ್ರಭೀತ್ಯೇವ [1]ಪಕ್ಷೌಘಪರ್ವತಪ್ರಕರಃ ಪುರಾ |
ಸ್ವಪ್ನದೃಷ್ಟಂ ಜಗದಿವ ಸಙ್ಕಲ್ಪಪುರಪೂರವತ್ ||೩೮||
ತತಸ್ತಮೋಽಸ್ತ್ರಮಸೃಜತ್ ಸಿನ್ಧುರನ್ಧಾನ್ಧಕಾರದಮ್ |
ತೇನಾನ್ಧಕಾರೋ ವವೃಧೇ ಕೃಷ್ಣೋ ಭೂಜಠರೋಪಮಃ ||೩೯||
ರೋದೋರನ್ಧ್ರೇ ಪ್ರವಿಸೃತಃ ಏಕಾರ್ಣವ ಇವಾಭವತ್ |
ಮತ್ಸ್ಯಾ ಇವಾಭವನ್ ಸೇನಾಃ ತಾರಾಶ್ಚ ಮಣಯೋಽಭವನ್ ||೪೦||
[2]ಅನ್ಧಕಾರಪ್ರವತ್ತೇನ [3]ಮಷೀಪಙ್ಕಾರ್ಣವೋಪಮಮ್ |
ಕಜ್ಜಲಾಚಲಸಮ್ಭಾರೋದ್ಭೂತಕಲ್ಪಾನಿಲೈರಿವ[4] ||೪೧||
ಅನ್ಧಕೂಪೇ ನಿಪತಿತಾಃ ಇವಾಸನ್ ಸಕಲಾಃ ಪ್ರಜಾಃ |
ಕಲ್ಪಾನ್ತ ಇವ ಸಂಶೇಮುಃ ವ್ಯವಹಾರಾದಿಶಂ ಪ್ರತಿ ||೪೨||

ಬಳಿಕ ಆ ಗರುಡಸಮೂಹವೂ ಕೂಡ, ಗಾಳಿಯಿಂದ ಆರಿಸಲ್ಪಟ್ಟ ದೀಪದಂತೆಯೂ, ಶರತ್ಕಾಲೋದಯದಿಂದ ಓಡಿಸಲ್ಪಟ್ಟ ಮೇಘಮಂಡಲದಂತೆಯೂ, ಪೂರ್ವದಲ್ಲಿ ಪಕ್ಷಯುಕ್ತವಾಗಿದ್ದು ವಜ್ರಾಯುಧಕ್ಕೆ ಹೆದರಿ ಓಡುತಿರುವ ಪರ್ವತಸಮುದಾಯದಂತೆಯೂ, ಸ್ವಪ್ನದಲ್ಲಿ ಕಂಡ ಜಗತ್ತಿನಂತೆಯೂ, ಸಂಕಲ್ಪದಲ್ಲಿ ಕಲ್ಪಿತವಾದ ಪಟ್ಟಣ ನದಿಗಳಂತೆಯೂ, ಕಣ್ಣಿಗೆ ಕಾಣದಂತೆ ಎಲ್ಲಿಯೋ ಹೋಗಿಬಿಟ್ಟಿತು ॥ ೩೭-೩೮ ॥

ಅನಂತರ ಆ ಸಿಂಧುರಾಜನು, ಜಗತ್ತಿಗೆಲ್ಲ ಅಂಧತಮಸ್ಸನ್ನುಂಟುಮಾಡುವ ತಮೋಸ್ತ್ರವನ್ನು ಬಿಟ್ಟನು. ಇದರಿಂದ, ಭೂಗರ್ಭಸದೃಶವಾದ ಅಂಧಕಾರವು ಅಭಿವರ್ಧಿಸಿತು ॥೩೯॥

ಆ ಅಂಧಕಾರವು, ಭೂವ್ಯಂತರಿಕ್ಷಗಳ ಅವಕಾಶದಲ್ಲೆಲ್ಲ ಪ್ರಸರಿಸಿಕೊಂಡು, ಏಕಾರ್ಣವದಂತೆ ಕಾಣಿಸಿತು. ಆಯೇಕಾರ್ಣವದಲ್ಲಿ ಸಮಸ್ತ ಸೇನೆಗಳೂ ಮತ್ಸ್ಯಗಳಂತೆಯೂ, ನಕ್ಷತ್ರಗಳು ರತ್ನಗಳಂತೆಯೂ ವಿರಾಜಿಸಿದುವು ॥೪೦॥

ಈ ರೀತಿಯಾಗಿ ಅಂಧಕಾರವು ಪ್ರವರ್ತಿಸಿದುದರಿಂದ, ಸಮಸ್ತ ಜಗತ್ತೂ, ಮಷೀಪಂಕ (ಶಾಯಿ) ಪೂರಿತವಾದ ಸಮುದ್ರಕ್ಕೆ ಸಮಾನವಾಗಿಯೂ, ಅಂಜನಪರ್ವತದ ರೇಣುಸಮುದಾಯದೊಡನೆ ಉತ್ಪನ್ನವಾಗಿ ಬೀಸುತಿರುವ ಪ್ರಳಯಮಾರುತಗಳಿಂದ ವ್ಯಾಪ್ತವಾದುದಂತೆಯೂ ಆಯ್ತು॥೪೧॥

ಆಗ ಸಮಸ್ತ ಪ್ರಜೆಗಳೂ ಅಂಧಕೂಪದಲ್ಲಿ ಬಿದ್ದವರಂತೆ ಆದರು. ಪ್ರಳಯಕಾಲದಲ್ಲಾಗುವಂತೆ, ಪ್ರತಿ ದಿಕ್ಕಿನಲ್ಲಿಯೂ ಸಕಲ ವ್ಯವಹಾರಗಳೂ ನಿಂತುಹೋದುವು ॥೪೨॥

---

1. ಪಕ್ಷೌಘಯುಕ್ತಃ ಪರ್ವತಪ್ರಕರಃ.
2. ಪ್ರವೃತ್ತಂ=ಪ್ರವೃತ್ತಿಃ.
3. ಜಗತ್ ಅಭೂತ್, ಇತಿ ಶೇಷಃ.
4. ವ್ಯಾಪ್ತಮಿತಿ ಶೇಷಃ.

ವಿದೂರಥೋಽಥ ಮಾರ್ತಣ್ಡಂ ದೀಪಂ ಬ್ರಹ್ಮಾಣ್ಡಮಣ್ಡಪೇ ।
ಅಸ್ತ್ರಂ ಮನ್ತ್ರವಿದಾಂಶ್ರೇಷ್ಠಃ ಸೃಷ್ಟ್ವಾಽಮನ್ತ್ರೋ ವ್ಯಚೇಷ್ಟಯತ್ ॥
ಅಥೋದಿತಸ್ತಮೋಽಮ್ಭೋಧಿಂ ಅರ್ಕಾಗಸ್ತ್ಯೋ ಗಭಸ್ತಿಭಿಃ ।
ಅಪಿಬತ್ ಕೃಷ್ಣಮಮ್ಭೋದಂ ಶರತ್ಕಾಲ ಇವಾಮಲಃ ॥೪೪॥
ಅನ್ಧಕಾರಾಮ್ಬರೋನ್ಮುಕ್ತಾಃ ವಿರೇಜುರಮಲಾ ದಿಶಃ ।
ಭೂಪತೇಃ ಪುರತಃ ಕಾನ್ತಾ ಇವ ರಮ್ಯಪಯೋಧರಾಃ ॥೪೫॥
ಯಯುಃ ಪ್ರಕಟತಾಮನ್ತಃ ಅಖಿಲಾ ವನರಾಜಯಃ ।
ಲೋಭಕಜ್ಜಲಜಾಲೇನ ಮುಕ್ತಾ ಇವ ಸತಾಂ ಧಿಯಃ ॥೪೬॥
ಅಥ ಕೋಪಾಕುಲಃ ಸಿನ್ಧುಃ ರಾಕ್ಷಸಾಸ್ತ್ರಂ ಮಹಾಭಯಮ್ ।
ಕ್ಷಣಾದುದೀರಯಾಮಾಸ ಮನ್ತ್ರೋದೀರ್ಣಶರಾತ್ಮಕಮ್ ॥೪೭॥
ಉದಗುರ್ಭೀಷಣಾ ದಿಗ್ಭ್ಯಃ ಪರುಷಾ ವನರಾಕ್ಷಸಾಃ ।
ಪಾತಾಳಗಜಫೂತ್ಕಾರಕ್ಷುಬ್ಧಾ ಇವ ಮಹಾರ್ಣವಾಃ ॥೪೮॥
ಕಪಿಲೋರ್ಧ್ವಜಟಾ ಧೂಮ್ರಾಃ ಸ್ಫುಟಚ್ಚಟಚಟಾರವಾಃ ।

ಬಳಿಕ ಮಂತ್ರಜ್ಞರಲ್ಲಿ ಶ್ರೇಷ್ಠನಾದ ವಿದೂರಥನು, ಬ್ರಹ್ಮಾಣ್ಡವೆಂಬ ಮಂಟಪವನ್ನೆಲ್ಲ ಬೆಳಗುವುದರಲ್ಲಿ ದೀಪವಾಗಿರುವ ಸೂರ್ಯಾಸ್ತ್ರವನ್ನು ಪ್ರಯೋಗಿಸಿ, ಸ್ವಲ್ಪವೂ ಆಲೋಚನೆಯೇ ಇಲ್ಲದೆ ಪ್ರಪಂಚವನ್ನೆಲ್ಲ ಪೂರ್ವದಂತೆ ವ್ಯಾಪಾರಯುಕ್ತವಾಗಿ ಮಾಡಿದನು ॥೪೩॥

ಅನಂತರದಲ್ಲಿ, ಈ ರೀತಿಯಾಗಿ ಅಸ್ತ್ರಬಲದಿಂದ ಉತ್ಪನ್ನನಾದ ಸೂರ್ಯನೆಂಬ ಅಗಸ್ತ್ಯಮುನಿಯು, ಜಲಪರಿಪೂರ್ಣವಾಗಿರುವ ಕೃಷ್ಣಮೇಘವನ್ನು ನಿರ್ಮಲವಾದ ಶರತ್ಕಾಲವು ಪಾನ (ಅಪಹರಣ) ಮಾಡುವಂತೆ ಅಂಧಕಾರವೆಂಬ ಸಮುದ್ರವನ್ನು, ತನ್ನ ಕಿರಣಗಳೆಂಬ ಹಸ್ತದಿಂದ ಪಾನಮಾಡಿಬಿಟ್ಟನು ॥೪೪॥

ಹೀಗೆ ವಸ್ತ್ರದಂತೆ ಆವರಿಸಿಕೊಂಡಿದ್ದ ಆ ಅಂಧಕಾರದಿಂದ ಬಿಡಲ್ಪಟ್ಟು ನಿರ್ಮಲವಾಗಿ ಕಾಣುತಿರುವ ದಿಕ್ಕುಗಳು, ರಾಜನೆದುರಿಗೆ ಏಕಾಂತದಲ್ಲಿ ವಸ್ತ್ರರಹಿತರಾಗಿರುವ ಸುಂದರಿಯರಂತೆ ವಿರಾಜಿಸಿದುವು ॥೪೫॥

ಆಗ, ಲೋಭವೆಂಬ ದೋಷದಿಂದ ರಹಿತವಾದ ಸತ್ಪುರುಷರ ಬುದ್ಧಿಯಂತೆ, ಸಮಸ್ತವನಪಂಕ್ತಿಗಳೂ ಒಳಗಡೆ ಪ್ರಕಾಶಯುಕ್ತವಾದುವು ॥೪೬॥

ಅನಂತರ, ಮಹಾಕೋಪಾವಿಷ್ಟನಾದ ಸಿಂಧುರಾಜನು, ಒಂದು ಬಾಣದಲ್ಲಿ ರಾಕ್ಷಸಾಸ್ತ್ರಮಂತ್ರವನ್ನಭಿಮಂತ್ರಿಸಿ, ಅತಿಭಯಂಕರವಾದ ಆ ರಾಕ್ಷಸಾಸ್ತ್ರವನ್ನು ಒಂದು ಕ್ಷಣದೊಳಗಾಗಿ ಪದ್ಮರಾಜನ ಮೇಲೆ ಬಿಟ್ಟನು ॥೪೭॥

ಬಳಿಕ, ಪಾತಾಳದಲ್ಲಿರುವ ದಿಗ್ಗಜಗಳ ಫೂತ್ಕಾರದಿಂದ ಅಲ್ಲೋಲಕಲ್ಲೋಲವಾದ ಸಮುದ್ರಗಳಂತೆ, ಮಹಾಕ್ರೂರರಾದ ಅತಿಭಯಂಕರರಾದ ರಾಕ್ಷಸರು ಸಕಲದಿಕ್ಕುಗಳಿಂದಲೂ ಬಂದು ಸೇರಿದರು ॥೪೮॥

ಆ ರಾಕ್ಷಸರ ಜುಟ್ಟುಗಳು ಕಪಿಲವರ್ಣವಾಗಿ ಊರ್ಧ್ವಮುಖವಾಗಿ ಬೆಳೆದಿದ್ದುವು; ಅವರು ಧೂಮ್ರವರ್ಣವಾಗಿಯೂ ಚಟಚಟಶಬ್ದಮಾಡುತಲೂ ಇದ್ದರು. ಹೀಗಿರುವುದ

ಅಗ್ನಯೋ ಲೇಲಿಹಾನೋಗ್ರಜಿಹ್ವಾಆರ್ದ್ರೇನ್ಧನಾಇವ ‖೪೯‖
ಸಾವರ್ತವೃತ್ತಯೋ ವ್ಯೋಮ್ನಿ ಭೀಮಚೀತ್ಕಾರಟಾಙ್ಕೃತಾಃ ।
ಅಗ್ನಿದಾಹಾಮಹಾಧೂಮವಿಲೋಲಾಇವ ಸೋಲ್ಮುಕಾಃ ‖೫೦‖
ದಂಷ್ಟ್ರಾಬಿಸಾಙ್ಕುರಾಕ್ರಾನ್ತಮುಖಪಙ್ಕಕ್ಷದೇಹಕಾಃ ।
ಉದಿತಾಲೋಮಜಮ್ಬಾಲದುಷ್ಪಲ್ವಲತಟಾಇವ ‖೫೧‖
ನಿಗಿರನ್ತಃ ಪ್ರಧಾವನ್ತೋ ಗರ್ಜನ್ತಃ ಸರ್ಜಿತಾಇವ ।
ಜಟಾಜಾಲತಟಿತ್ಪುಞ್ಜಾಃ ಜಲದಾಃ ಸಜಲಾಇವ ‖೫೨‖
ಏತಸ್ಮಿನ್ನನ್ತರೇ ತಸ್ಮಿನ್ ಲೀಲಾನಾಥೋ ವಿದೂರಥಃ ।
ನಾರಾಯಣಾಸ್ತ್ರಂ ಪ್ರದದೇ ದುಷ್ಟಭೂತನಿವಾರಣಮ್ ‖೫೩‖
ಉದೀರ್ಯಮಾಣಏವಾಸ್ಮಿನ್ ಮನ್ತ್ರರಾಜೇಸ್ತ್ರರಾಜಯಃ ।
ರಾಕ್ಷಸಾನಾಂ ಪ್ರಶೇಮುಸ್ತಾಃ ಅನ್ಧಕಾರಇವೋದಯೇ ‖೫೪‖
ಪ್ರಮುಷ್ಟರಾಕ್ಷಸಾನೀಕಂ ಅಭವದ್ಭುವನತ್ರಯಮ್ ।
ಶರದೀವ ಗತಾನ್ಭೋದಂ ವ್ಯೋಮ ನಿರ್ಮಲಮಾಬಭೌ ‖೫೫‖

ರಿಂದ, ಹಸಿಯಾದ ಸೌದೆಯನ್ನು ಹಾಕಿದಾಗ ಸ್ವಲ್ಪ ಜ್ವಾಲೆಗಳನ್ನು ಪ್ರಸರಿಸುತಲೂ ಧೂಮ್ರವಾಗಿಯೂ ಚಟಚಟಶಬ್ದ ಮಾಡುತಲೂ ಇರುವ ಅಗ್ನಿಗಳಂತೆ ಕಾಣುತಿದ್ದರು ॥೪೯॥

ಮತ್ತು ಆ ರಾಕ್ಷಸರು, ಅಂತರಿಕ್ಷದಲ್ಲಿ ಚಕ್ರಾಕಾರವಾಗಿ ಸುತ್ತುತ, ಭಯಂಕರವಾಗಿ ಚೀತ್ಕಾರಮಾಡುತ, ಕೈಯಲ್ಲಿ ಕೊಳ್ಳಿಗಳನ್ನು ಹಿಡಿದುಕೊಂಡು ಬರುತ್ತಿದ್ದರು. ಹೀಗಿರುವುದರಿಂದ, ಹೆಚ್ಚಾಗಿ ಹೊಗೆಯಾಡುತ ಚಟಚಟ ಶಬ್ದಮಾಡುತಿರುವ ಅಗ್ನಿದಾಹಗಳಂತೆ ಕಾಣುತಿದ್ದರು ॥೫೦॥

ಇನ್ನೂ, ಆ ರಾಕ್ಷಸರು ತುಚ್ಛವಾದ ಅಲ್ಪಸರಸ್ಸುಗಳಂತೆ ಕಾಣುತಿದ್ದರು, ಅವರ ಮುಖಮುಂತಾದ ದೇಹೇಂದ್ರಿಯಗಳೇ ಕೆಸರಿನಂತೆಯೂ, ಕೋರೆದಾಡೆಗಳೇ ತಾವರೆದಂಟಿನಂತೆಯೂ, ರೋಮಸಮೂಹಗಳೇ ಪಾಚಿಯಂತೆಯೂ ಕಾಣುತಿದ್ದುವು ॥೫೧॥

ಇಂತಹ ರಾಕ್ಷಸರು, ಸಿಕ್ಕಿದುದನ್ನು ನುಂಗುತಲೂ ಓಡುತಲೂ ಗರ್ಜಿಸುತಲೂ ಬಂದರು. ಇವರು ಜಗತ್ತನ್ನು ನುಂಗುವುದಕ್ಕಾಗಿಯೇ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟರುವಂತೆ ಕಾಣುತಿದ್ದರು. ಕೇವಲ ಕೃಷ್ಣವರ್ಣವಾಗಿರುವುದರಿಂದ, ನೀರುಕುಡಿದ ಮೇಘಗಳಂತೆ ವಿರಾಜಿಸುತಿದ್ದರು; ಇವರ ಜಟೆಗಳೇ ವಿದ್ಯುಲ್ಲತೆಯಾಗಿದ್ದುವು ॥೫೨॥

ಇಷ್ಟರೊಳಗಾಗಿಯೇ, ಲೀಲಾದೇವಿಯ ನಾಥನಾದ ವಿದೂರಥನು, ಆ ಯುದ್ಧರಂಗದಲ್ಲಿ, ದುಷ್ಟಪ್ರಾಣಿಗಳನ್ನು ನಿವಾರಣೆಮಾಡತಕ್ಕುದಾಗಿರುವ ದಿವ್ಯವಾದ ನಾರಾಯಣಾಸ್ತ್ರವನ್ನು ಸಂಧಾನಮಾಡಿದನು ॥೫೩॥

ಪ್ರಶಸ್ತವಾದ ಆ ನಾರಾಯಣಾಸ್ತ್ರಮಂತ್ರವನ್ನು ಇನ್ನೂ ಉಚ್ಚರಿಸುತಿರುವಾಗಲೇ ಸೂರ್ಯೋದಯವಾದಾಗ ಅಂಧಕಾರವಡಗುವಂತೆ, ಆ ರಾಕ್ಷಸಾಸ್ತ್ರಪರಂಪರೆಗಳೆಲ್ಲವೂ ಅಡಗಿಹೋದುವು ॥೫೪॥

ಬಳಿಕ, ಮೂರುಲೋಕಗಳೂ ರಾಕ್ಷಸಸಮೂಹಶೂನ್ಯವಾಯಿತು. ಮತ್ತು ಶರತ್ಕಾಲದಲ್ಲಿ ಮೇಘಶೂನ್ಯವಾದಾಗಿನಂತೆ, ಅಂತರಿಕ್ಷಪ್ರದೇಶವೆಲ್ಲವೂ ನಿರ್ಮಲವಾಗಿ ಪ್ರಕಾಶಿಸಿತು ॥೫೫॥

ಅಥ ಸಿನ್ಧುರ್ಮ್ಮುಮೋಚಾಸ್ತ್ರಂ ಆಗ್ನೇಯಂ ಜ್ವಲಿತಾಮ್ಬರಮ್ |
ಜಜ್ವಲುಃ ಕಕುಭಸ್ತೇನ ಕಲ್ಪಾಗ್ನಿಜ್ವಲಿತಾ ಇವ ||೫೬||
ಧೂಮಾಮ್ಬುದಘನಾಚ್ಛನ್ನಾಃ ಬಭೂವುಃ ಸಕಲಾದಿಶಃ |
ಗಗನೇ ಪ್ರೋತಪಾತಾಳತಿಮಿರಾಕುಲಿತಾ ಇವ ||೫೭||
ಬಭೂವುರ್ಜ್ವಲಿತಾಕಾರಾಃ ಗಿರಯಃ ಕಾಞ್ಚನಾ ಇವ |
ಪ್ರಫುಲ್ಲಘನನೀರನ್ಧ್ರಚಮ್ಪಕೌಘವನಾ ಇವ ||೫೮||
ಯಯುರ್ವ್ಯೋಮಾದ್ರಿದಿಕ್ಕುಞ್ಜಾಃ ಜ್ವಾಲಾಜಾಲಜಟಾಲತಾಮ್ |
ಕುಙ್ಕುಮೇನೋತ್ಸವೇ ಮೃತ್ಯೋಃ ಸಮಾಲಬ್ಧಾ ಇವ ಸ್ರಜಃ ||೫೯||
ಜ್ವಲಿತಾ ಜನತಾ ಚೈಕಶಙ್ಕಿನೀ ಸಾ [1]ನಭಸ್ಸ್ಪೃಶಾ |
ಸಹಸ್ರಾಕೃತಿನಾವೇಗ[2]ಚಲಿತೇನೇವ [3]ಸಾಗರಾತ್ ||೬೦||
ಜಿತ್ವಾ ರಿಪುಂ ಪುನರಸೌ ಯಥಾ ಪ್ರಹರತೇ ತಥಾ |
ವಾರುಣಂ ವಿಸಸರ್ಜಾಸ್ತ್ರಂ ಪೂಜಯಿತ್ವಾ ವಿದೂರಥಃ ||೬೧||

ಬಳಿಕ, ಸಿಂಧುರಾಜನು, ಅಂತರಿಕ್ಷವನ್ನೆಲ್ಲ ಉರಿಯಿಸುತಿರುವಂತೆ ಆಗ್ನೇಯಾಸ್ತ್ರವನ್ನು ಬಿಟ್ಟನು. ಆದರಿಂದ, ಸಮಸ್ತ ದಿಕ್ಕುಗಳೂ, ಪ್ರಳಯಾಗ್ನಿ ಜ್ವಾಲಾಪರಿವೃತಗಳಾದಂತೆ ಉರಿಯಲಾರಂಭಿಸಿದುವು ||೫೬||

ಆಗ, ಮೇಘದಂತೆ ಕಾಣುತಿರುವ ಧೂಮಸಮೂಹದಿಂದ ಆಚ್ಛಾದಿತಗಳಾದ ಸಮಸ್ತ ದಿಕ್ಕುಗಳೂ, ಅಂತರಿಕ್ಷಪ್ರದೇಶದಲ್ಲಿ, ಪಾತಾಳದಿಂದ ಹೊರಟುಬಂದು ಸಾಂದ್ರವಾಗಿ ವ್ಯಾಪಿಸುತಿರುವ ಅಂಧಕಾರನಿಕರದಿಂದ ಪರಿವೃತವಾಗಿವೆಯೋ ಎಂಬಂತೆ ಆದುವು ||೫೭||

ಸಮಸ್ತ ಪರ್ವತಗಳಮೇಲೂ ಅಗ್ನಿಜ್ವಾಲೆಯು ಪ್ರಸರಿಸಿರುವುದರಿಂದ, ಆ ಪರ್ವತಗಳು—ಸುವರ್ಣಮಯಗಳಾಗಿರುವಂತೆಯೂ, ಅವುಗಳ ಮೇಲುಭಾಗದಲ್ಲಿ ಸಂಪಿಗೆತೋಪುಗಳು ದಟ್ಟವಾಗಿ ಹೂವುಬಿಟ್ಟಿರುವಂತೆಯೂ ವಿರಾಜಿಸುತಿದ್ದುವು ||೫೮||

ಅಂತರಿಕ್ಷ ಪರ್ವತ ದಿಗಂತ— ಇವುಗಳೆಲ್ಲವೂ, ಅಗ್ನಿಜ್ವಾಲಾಸಮೂಹಗಳಿಂದ ಪರಿವೃತವಾದುವು. ಇವುಗಳನ್ನು ನೋಡಿದರೆ, ಮೃತ್ಯುದೇವನು ಉತ್ಸವಕಾಲದಲ್ಲಿ ಕುಂಕುಮಕೇಸರದಲ್ಲಿ ಅದ್ದಿರುವ ಪುಷ್ಪಮಾಲಿಕೆಗಳನ್ನು ಧರಿಸಿರುವನೋ ಎಂಬಂತೆ ಊಹೆಯುಂಟಾಗುತಿದ್ದಿತು ||೫೯||

ಆಗ, ಅಲ್ಲಿದ್ದ ಆ ಜನಸಮೂಹವೆಲ್ಲವೂ, ಸಾವಿರಾರು ವಿಧವಾಗಿ ಹಡಗು ಚಲಿಸುತಿರುವುದರಿಂದ ಸಮುದ್ರವನ್ನು ಬಿಟ್ಟು ಹೊರಗೆ ಬಂದಿರುವ ಬಡಬಾಗ್ನಿಜ್ವಾಲೆಯೋ ಎಂಬಂತೆ ಅಂತರಿಕ್ಷಗಾಮಿಯಾದ ಅಗ್ನಿಜ್ವಾಲಾಸಮೂಹದಿಂದ ಉರಿಯಲಾರಂಭಿಸಿತು. ಇಂತಹ ಸಮಯದಲ್ಲಿ ಆ ಜನರೆಲ್ಲರೂ ಅಗ್ನಿಯೊಂದನ್ನೇ ತಿಳಿಯುತಿದ್ದರಲ್ಲದೆ, ಪದಾರ್ಥಾಂತರಜ್ಞಾನವೇ ಅವರಿಗೆ ಆಗುತಿರಲಿಲ್ಲ ||೬೦||

ಅನಂತರ ಆ ವಿದೂರಥನು, ಶತ್ರುವನ್ನು ಗೆದ್ದು ತಾನು ಜಯಿಸುವುದಕ್ಕನುಕೂಲವಾಗಿ, ಮಂತ್ರಪುರಶ್ಚರಣೆ ಮಾಡಿ ವಾರುಣಾಸ್ತ್ರವನ್ನು ಬಿಟ್ಟನು ||೬೧||

---

1. ಅಗ್ನಿನೇತಿ ಶೇಷಃ. 2. ಬಾಡಬವಹ್ನಿನೇತಿ ಶೇಷಃ.
3. ಆಗತೇನೇತಿ ಶೇಷಃ.

ಆಯಯುಃ ಸಲಿಲಾಪೂರಾಃ ತಮಃಪೂರಾಇವಾಭಿತಃ ।
ಅಧಸ್ತಾದೂರ್ಧ್ವತೋ ದಿಗ್ಭ್ಯೋ ದ್ರವರೂಪಾಇವಾದ್ರಯಃ ॥೬೨॥
ಭಾಗಾಇವ ಶರವ್ಯೋಮ್ನಿ ಧೃತಯಾನಾಇವಾಮ್ಬುದಾಃ ।
ಮಹಾರ್ಣವಾಇವೋಚ್ಛಸ್ಥಾಃ ಕುಲಶೈಲಶಿಲಾಇವ ॥೬೩॥
ತಮಾಲೌಘಾಇವೋಡ್ಡೀನಾಃ ಸನ್ಧಿತಾಇವ ರಾತ್ರಯಃ ।
ಕಜ್ಜಲೌಘಾಇವೋದ್ಭೂತಾಃ ಲೋಕಾಲೋಕತಟಾದಿವ ॥೬೪॥
ರಸಾತಲಗುಹಾಭೋಗಾಇವ ವ್ಯೋಮದಿದೃಕ್ಷವಃ ।
ಮಹಾಘುರಘುರಾರಾವರಂಹೋಬೃಂಹಿತಮೂರ್ತಯಃ ॥೬೫॥
ತಾಮಗ್ನಿಸನ್ತತಿಂ ಮತ್ತಾಂ ಆಚಚಾಮಾಮ್ಬುಸನ್ತತಿಃ ।
ಭುವನವ್ಯಾಪಿನೀ ಸನ್ಧ್ಯಾಂ ಆಶುಕೃಷ್ಣೇವ ಯಾಮಿನೀ ॥೬೬॥
ತಾಮಗ್ನಿಸನ್ತತಿಂ ಪೀತ್ವಾ ಪೂರಯಾಮಾಸ ಭೂತಲಮ್ ।
ಜಲಶ್ರೀರ್ಜಟಿತಂ ದೇಹಂ ನಿದ್ರೇವ ವ್ಯಕ್ತಿಮೇಯುಷೀ ॥೬೭॥

ಈ ವಾರುಣಾಸ್ತ್ರಮಹಿಮೆಯಿಂದ, ಕತ್ತಲೆಗವಿದಂತೆ ಸಾಂದ್ರವಾಗಿರುವ ಜಲಪ್ರವಾಹಗಳು, ಕೆಳಗಡೆಯಿಂದಲೂ ಮೇಲುಗಡೆಯಿಂದಲೂ ಸಮಸ್ತ ದಿಕ್ಕುಗಳಿಂದಲೂ, ದೊಡ್ಡ ಬೆಟ್ಟಗಳೇ ನೀರಾಗಿ ಹರಿಯಲುಪಕ್ರಮಿಸಿರುವುವೋ ಎಂಬಂತೆ ಬರುವುದಕ್ಕುಪಕ್ರಮಿಸಿದುವು ॥೬೩॥

ಆ ಜಲಪ್ರವಾಹಗಳು, ಬಾಣಮಾರ್ಗವಾದ ಅವಕಾಶದಲ್ಲಿ ಅವುಗಳ ಭಾಗಗಳೋ ಎಂಬಂತೆಯೂ, ಮೇಘಗಳೇ ಸ್ವೇಚ್ಛೆಯಾಗಿ ಸಂಚರಿಸುತಿವೆಯೋ ಎಂಬಂತೆಯೂ, ಮಹಾಸಮುದ್ರಗಳೇ ಮೇಲುಗಡೆಗೆ ಬಂದು ನೀರನ್ನು ಸುರಿಸುತ್ತಿರುವುವೋ ಎಂಬಂತೆಯೂ, ಕುಲಾಚಲಗಳ ಶಿಲೆಗಳು ಬಂದು ಬೀಳುತಿರುವುವೋ ಎಂಬಂತೆಯೂ ಪ್ರವಹಿಸುತಿದ್ದುವು ॥

ಮತ್ತು, ತಮಾಲವೃಕ್ಷಸಮುದಾಯಗಳು ಮೇಲಕ್ಕೆ ಹಾರಿಹೋಗಿರುವಂತೆಯೂ, ಅನೇಕ ರಾತ್ರಿಗಳನ್ನು ಒಟ್ಟಾಗಿ ಸೇರಿಸಿರುವಂತೆಯೂ, ಲೋಕಾಲೋಕ ಪರ್ವತಪ್ರದೇಶದಿಂದ ಉದಯಿಸಿರುವ ಅಂಧಕಾರರೂಪವಾದ ಅಂಜನ ಸಮೂಹವೋ ಎಂಬಂತೆಯೂ ಭಾಸಮಾನವಾಗುತಿದ್ದಿತು ॥೬೪॥

ಅಂತರಿಕ್ಷವನ್ನು ನೋಡಲಪೇಕ್ಷಿಸಿ ಬಂದಿರುವ ಪಾತಾಳಗುಹಾಪ್ರದೇಶಗಳೋ ಎಂಬಂತೆ ನೋಡತಕ್ಕವರಿಗೆ ಜ್ಞಾನವನ್ನುಂಟುಮಾಡುತ, ಅಧಿಕವಾಗಿ ಘುರಘುರಧ್ವನಿ ಮಾಡುತ, ವೇಗಾತಿಶಯದಿಂದ ಕ್ಷಣಕ್ಷಣಕ್ಕೆ ಹೆಚ್ಚುತಿರುವ ಆ ವಾರುಣಾಸ್ತ್ರಜಲಪ್ರವಾಹಗಳು ಪ್ರಸರಿಸಿದುವು ॥೬೫॥

ಈ ರೀತಿಯಾಗಿ ಪ್ರಸರಿಸಿದ ಜಲಸಮುದಾಯವು, ಪ್ರಪಂಚವನ್ನೆಲ್ಲ ವ್ಯಾಪಿಸುತ, ಅಂಧಕಾರಮಯವಾದ ರಾತ್ರಿಯು ಸಂಧ್ಯಾಕಾಲವನ್ನು ಮರೆಯಾಗಿಸುವಂತೆ, ಆ ಅಗ್ನಿಸಮೂಹವನ್ನೆಲ್ಲ ಬೇಗನೆ ಆಚಮನಮಾಡಿಬಿಟ್ಟಿತು. (ಹೋಗಲಾಡಿಸಿತು) ॥೬೬॥

ಹೀಗೆ ಅಗ್ನಿಸಮೂಹವನ್ನೆಲ್ಲ ಪಾನಮಾಡಿ, ಆ ಜಲಸಮೂಹವು, ಜಟೆಯನ್ನು ಬೆಳೆ

ಏವಂವಿಧಾನಸ್ತ್ರವ್ಯಾಮೋಹಾನ್ ವಿದಧುರ್ಧಾವನೇತರೇ ।
ಮಿಥೋ ಮಾಯಾಮಯಾನಗ್ರೇ ಪಶ್ಯನ್ತ್ಯನುಭವನ್ತಿ ಚ ॥೬೮॥
ಹೇತಿಭಾರವರಾಃ ಸಿನ್ಧೋಃ ಚಕ್ರುರಕ್ಷಾಸ್ತತೋಽಮ್ಬುನಾ ।
ತೃಣಾನೀವ ಗತಾಃ ಪ್ರೋಹ್ಯ ರಥಶ್ಚಾಸ್ಯಾಭವತ್ ಪ್ಲುತಃ ॥೬೯॥
ಏತಸ್ಮಿನ್ನನ್ತರೇ ಸಿನ್ಧುಃ ಅಸ್ತ್ರಂ ಸಸ್ಮಾರ ಶೋಷಣಮ್ ।
ಆಪತ್ತ್ರಾಣಕರಂ ದೈವಂ ದದೌ ಚ ಶರರೂಪಿಣಮ್ ॥೭೦॥
ಶಶಾಮಾಮ್ಬುಮಯೀ ಮಾಯಾ ತೇನ ಯಾಮೇವ ಭಾಸ್ವತಾ ।
ಯೇ ಮೃತಾಸ್ತೇ ಮೃತಾಏವ ಬಭೂವುಃ ಶೋಷಿತಾಭುವಃ ॥೭೧॥
ಅಥ ಮೂರ್ಖರುಷಾ ತುಲ್ಯಃ ತಾಪಃ ಸನ್ತಾಪಯನ್ ಪ್ರಜಾಃ ।
ಜಜೃಮ್ಭೇ ಜರ್ಝರಾಕೀರ್ಣವನವಿಸ್ತಾರಕರ್ಕಶಃ ॥೭೨॥
ಕಚತ್ಕನಕನಿಷ್ಯನ್ದಸುನ್ದರಾಙ್ಗಚ ವಿದ್ದಿಶಾಮ್ ।
ಆಸೀದ್ರಾಜವರಸ್ತ್ರೀಣಾಮಿವಾಲೇಪೋಙ್ಗಸಙ್ಗತಃ ॥೭೩॥

ಯಿಸಿ ಕೆಂಪಗಿರುವ ದೇಹವನ್ನು—ಹೆಚ್ಚಾಗಿ ಬರುತಿರುವ ನಿದ್ರೆಯು ಆವರಿಸಿಬಿಡುವಂತೆ, ಭೂಮಿಯನ್ನೆಲ್ಲ ಆವರಿಸಿಕೊಂಡುಬಿಟ್ಟಿತು ॥೬೭॥

ಆಗ ಆ ಯುದ್ಧರಂಗದಲ್ಲಿ, ಒಬ್ಬರು ಬಿಟ್ಟ ಅಸ್ತ್ರದಿಂದ ಉಂಟಾದ ಮಾಲಿನ್ಯವನ್ನು ಕಳೆದುಕೊಳ್ಳತಕ್ಕ ಯೋಧರುಗಳೂ ಅವರಿಗೆ ವಿರುದ್ಧರಾದ ಯೋಧರೂಕೂಡ, ಈವಿಧವಾದ ಅಸ್ತ್ರಸಮ್ಮೋಹನಗಳನ್ನು ಅನೇಕವಾಗಿ ಮಾಡುತಿದ್ದರು; ಮುಂದುಗಡೆಯೇ ಪರಸ್ಪರ ಮಾಯಾಮಯವಾದ ಆಚರಣೆಗಳನ್ನು ನೋಡುತಲೂ, ತಾವೂ ಅವುಗಳನ್ನೂ ಅನುಭವಿಸುತಲೂ ಇದ್ದರು ॥೬೮॥

ಬಳಿಕ, ಆ ಪದ್ಮರಾಜನು ಬಿಟ್ಟ ಪೂರ್ವೋಕ್ತವಾದ ವಾರುಣಾಸ್ತ್ರಜಲದಿಂದ, ಆ ಸಿಂಧುರಾಜನ ಕಡೆಯ ಆಯುಧಸಮೂಹಗಳೂ ಯೋಧಶ್ರೇಷ್ಠರೂ ಸೇನಾರಕ್ಷಕರೂ ಕೂಡ, ಹುಲ್ಲಿನಂತೆ ತೇಲಿಹೋದರು. ಕೊನೆಗೆ ಆ ಸಿಂಧುರಾಜನ ರಥವೂ ತೇಲಿಹೋಯ್ತು॥

ಇಷ್ಟರೊಳಗಾಗಿ ಆ ಸಿಂಧುರಾಜನು, ಶೋಷಣ (ಒಣಗಿಸತಕ್ಕ) ನಾಮಕವಾದ ಅಸ್ತ್ರವನ್ನು ಸ್ಮರಿಸಿಕೊಂಡು, ಅದರಲ್ಲಿ ಆಪದ್ರಕ್ಷಕವಾದ ಬಾಣರೂಪವಾಗಿರುವ ಇಷ್ಟದೈವವನ್ನು ಧ್ಯಾನಮಾಡಿದನು ॥೭೦॥

ಆಗ, ಸೂರ್ಯತೇಜಸ್ಸಿನಿಂದ ರಾತ್ರಿಯು ಶಾಂತವಾಗುವಂತೆ, ಆ ಶೋಷಣಾಸ್ತ್ರ ಮಹಿಮೆಯಿಂದ ಜಲರೂಪವಾದ ಮಾಯೆಯೆಲ್ಲವೂ ಶಾಂತವಾಯ್ತು. ಅಷ್ಟರೊಳಗಾಗಿ ಜಲವೇಗದಿಂದ ಯಾರು ಸತ್ತುಹೋಗಿದ್ದರೋ, ಅವರೆಲ್ಲರೂ ಹೋಗಿಯೇಬಿಟ್ಟರು. ಆದರೆ, ಭೂಮಿಯೆಲ್ಲವೂ ಒಣಗಿ ಜಲಪೀಡಾರಹಿತವಾಯ್ತು॥೭೧॥

ಬಳಿಕ, ಮೂರ್ಖನ ಕೋಪಕ್ಕೆ ಸಮಾನವಾದ ತಾಪವು, ಪ್ರಜೆಗಳನ್ನೆಲ್ಲ ಸಂತಾಪಪಡಿಸುತ, ಅರಣ್ಯಗಳಲ್ಲಿರುವ ಎಲೆಗಳನ್ನೆಲ್ಲ ಒಣಗಿಸಿ ಹರಡುತ ವಿಜೃಂಭಿಸಿತು ॥೭೨॥

ಅಯ್ಯಾ! ರಾಮ! ಹೀಗೆ ಜಲವೆಲ್ಲವೂ ಶೋಷಿಸಿದ ಬಳಿಕ, ಸುವರ್ಣದ್ರವದಂತೆ ಸುಂದರವಾಗಿರುವ ಕಾಂತಿಯು, ದಿಕ್ಕುಗಳೆಂಬ ರಾಜಸ್ತ್ರೀಯರ ಅಂಗದಲ್ಲಿರುವ ವಿಲೇಪನವೋ ಎಂಬಂತೆ ಕಾಣಿಸಿತು ॥೭೩॥

ತೇನ ಘೂರ್ಣಮಯೀಂ ಮೂರ್ಛಾಂ ಆಜಗ್ಮುಸ್ತದ್ವಿರೋಧಿನಃ |
ಗ್ರೀಷ್ಮದಾವಾನಲೋತ್ತಪ್ತಾಃ ಮೃದವಃ ಪಲ್ಲವಾ ಇವ ||೨೪||
ವಿದೂರಥೋ ರಣೋದ್ರೇಕೇ ತಾವತ್ ಕ್ರೇಙ್ಕಾರಮಾತತಮ್ |
ಕೋದಣ್ಡಂ ಕುಣ್ಡಲೀಕೃತ್ಯ ಪರ್ಜನ್ಯಾಸ್ತ್ರಮಥಾದದೇ ||೨೫||
ಉದಗುಃ ಪಙ್ಕ್ತಯೋಽಬ್ದಾನಾಂ ಯಾಮಿನ್ಯ ಇವ ಸಞ್ಚಿತಾಃ |
ತಮಾಲವಿಟಪೋಡ್ಡೀನಸಂರಮ್ಭಾದಮ್ಬುಮನ್ಥರಾಃ ||೨೬||
ವಾಮನಾ ವಾರಿಪೂರೇಣ ಗರ್ಜನೋದ್ದಾಮಸಞ್ಚರಾಃ |
ಮಹಿಮ್ನಾಽಮನ್ಥರಾಶ್ಚೇರುಃ ಕಕುಮ್ಮಣ್ಡಲಕುಣ್ಡಲಾಃ ||೨೭||
ವವುರಾವಳಿತಾಸಾರಾಃ ಮೇಘಡಮ್ಬರಭೇದಿನಃ |
ಕೀರ್ಣಶೀಕರನೀಹಾರಭಾರೋದಾರಾಃ ಸಮೀರಣಾಃ ||೨೮||
ಪ್ರಪುಸ್ಫುರುಃ ಸುಸೌವರ್ಣಸರ್ಪಾಪತ್ಸರಣೋಪಮಾಃ |
ವಿದ್ಯುತೋ ದಿವಿ ದೈವ್ಯಸ್ತ್ರೀಕಟಾಕ್ಷವಲನಾ ಇವ ||೨೯||

ಆಗ, ಬೇಸಿಗೆಯ ಕಾಡುಗಿಚ್ಚಿನಿಂದ ಸಂತಾಪಪಟ್ಟ ಮೃದುವಾದ ಚಿಗುರುಗಳಂತೆ, ಆ ಸಿಂಧುರಾಜನ ವಿರೋಧಿಗಳೆಲ್ಲರೂ ಆ ಶೋಷಣಾಸ್ತ್ರದಿಂದ ಸೆಕೆಹೆಚ್ಚಿ ಮೂರ್ಛಿತರಾದರು ||೨೪||

ಅಷ್ಟರೊಳಗಾಗಿ ವಿದೂರಥನು, ಆ ದೊಡ್ಡ ರಣಾಂಗಣದಲ್ಲೆಲ್ಲ ಕ್ರೇಂಕಾರವನ್ನು ವಿಸ್ತರಿಸುತಿರುವಂತೆ ಧನುಸ್ಸನ್ನು ಗುಂಡಾಗಿ ಮಾಡಿ, ಬಳಿಕ ಅದರಲ್ಲಿ ಪರ್ಜನ್ಯಾಸ್ತ್ರವನ್ನು ಸಂಧಾನಮಾಡಿದನು ||೨೫||

ಆಗ, ಬಹುಕಾಲದಿಂದ ಕೂಡಿಸಿಟ್ಟಿರುವ ರಾತ್ರಿಗಳೋ ಎಂಬಂತೆ ಕಾಣುತಿರುವ ಜಲಪರಿಪೂರ್ಣವಾದ ಮೇಘಪರಂಪರೆಗಳು, ಹೊಂಗೆಯ ಕೊನೆಗಳು ಮೇಲಕ್ಕೆ ಹಾರುತಿರುವಂತೆ ಉದ್ಭವಿಸಿದುವು ||೨೬||

ಆ ಮೇಘಗಳು, ಜಲಪರಿಪೂರ್ಣಗಳಾಗಿರುವುದರಿಂದ ಬೊಗ್ಗಿರುವಂತೆ ಕಾಣಿಸುತ, ಗರ್ಜನಯುಕ್ತಗಳಾಗಿ, ಬಹು ಗಂಭೀರವಾಗಿ ಸಂಚರಿಸಲುಪಕ್ರಮಿಸಿದುವು. ಇಂತಹ ಮೇಘಗಳು ಬಹಳವಾಗಿ ವ್ಯಾಪಿಸಿಬಿಟ್ಟಕಾರಣ, ದಿಕ್ಕುಗಳಲ್ಲಿದ್ದ ವಿಸ್ತಾರವೆಲ್ಲವೂ ಕಡಮೆಯಾದಂತೆ ಕಾಣಿಸಿತು; ಈ ಮೇಘಗಳು, ಆಗ ದಿಕ್ಕುಗಳಿಗೆ ಕರ್ಣಕುಂಡಲಗಳಂತೆ ಪ್ರಕಾಶಿಸಿದುವು ||೨೭||

ಆಗ ವೃಷ್ಟಿಗುಪಕ್ರಮವಾಗಿ, ಗಾಳಿ ಬೀಸಲಾರಂಭಿಸಿತು. ಆ ಗಾಳಿಯು, ವರ್ಷಧಾರೆಗಳನ್ನು ಬಳಸುತಲೂ, ಮೇಘದಲ್ಲಿರುವ ನೀರು ಹೋದಬಳಿಕ ಅದರ ಸೊಕ್ಕನ್ನು ಮುರಿಯುತಲೂ, ಜಲಕಣಗಳನ್ನು ಯಥೇಚ್ಛವಾಗಿ ಸುತ್ತ ಎರಚುತಲೂ, ಅತ್ಯಧಿಕವಾಗಿ ಬೀಸುತಿದ್ದಿತು ||೨೮||

ಆ ಮೇಘಮಂಡಲ ಮಧ್ಯದಲ್ಲಿ, ಅನೇಕವಾಗಿ ಮಿಂಚುಗಳು ಹೊಳೆಯುತಿದ್ದುವು. ಅವುಗಳನ್ನು ನೋಡಿದವರಿಗೆ, ಸುವರ್ಣಮಯವಾದ ಸರ್ಪಗಳು ಆ ಸಂಕಟದಿಂದ ತಪ್ಪಿಸಿಕೊಂಡು ಹೋಗುತಿರುವುವೋ ಎಂದೂ, ದೇವಸ್ತ್ರೀಯರ ಕಟಾಕ್ಷಪರಂಪರೆಗಳು ಪ್ರಸರಿಸಿರುವುವೋ ಎಂದೂ ಬುದ್ಧಿಯುಂಟಾಗುತಿದ್ದಿತು ||೨೯||

ಜುಘೂರ್ಣುರ್ಗರ್ಜನೋಚ್ಛ್ವಸತ್ಪ್ರತಿಶ್ರುದ್ಘನಕನ್ದರಾಃ ।
ದಿಶಶ್ಚಲಿತಮಾತಙ್ಗಸಿಂಹರ್ಕ್ಷರವಘರ್ಘರಾಃ ॥೮೦॥
ಮಹಾಮುಸಲಧಾರಾಭಿಃ ಪೇತುರಾಸಾರವೃಷ್ಟಯಃ ।
ಕಷ್ಟಟಙ್ಕಾರಕಠಿನಾಃ ಕೃತಾನ್ತಸ್ಯೇವ ದೃಷ್ಟಯಃ ॥೮೧॥
ಉದಭೂತ್ ಪ್ರಥಮಂ ಬಾಷ್ಪಃ ಉಷ್ಣೋಽನಲನಿಭೋ ಭುವಃ ।
ಪಾತಾಳಾದಭ್ರವೃನ್ದಾನಾಂ ಯುದ್ಧಾಯೇವಾತ್ತವಿಭ್ರಮಃ ॥೮೨॥
ತತೋ ನಿಮೇಷಮಾತ್ರೇಣ ಪ್ರಶೇಮುರ್ಮೃಗತೃಷ್ಣಿಕಾಃ ।
ಪರಬೋಧರಸಾಪೂರ್ಯೈಃ ಯಥಾ ಸಂಸಾರವಾಸನಾಃ ॥೮೩॥
ಆಸೀತ್ ಪಙ್ಕಾಙ್ಕಮಖಿಲಂ ಭೂಮಣ್ಡಲಮಸಙ್ಕರಮ್ ।
ಪೂರಿತಃ ಪೂರ್ಣಧಾರಾಭಿಃ ಸಿನ್ಧುಃ ಸಿನ್ಧುರಿವಾಮ್ಬುನಾ ॥೮೪॥
ವಾಯವ್ಯಮಸ್ತ್ರಮಸೃಜತ್ ಪೂರಿತಾಕಾಶಕೋಟರಮ್ ।

ಇಂತಹ ಮೇಘಗಳ ಧ್ವನಿಗಳು, ಸಮಸ್ತ ದಿಕ್ಕಿಗೂ ವ್ಯಾಪಿಸಿ, ಅಲ್ಲಿರುವ ಪರ್ವತ ಗುಹೆಗಳೊಳಗೆ ನುಗ್ಗಿ, ಅಲ್ಲಿ ಪ್ರತಿಧ್ವನಿಯನ್ನು ಹುಟ್ಟಿಸುತಿದ್ದುವು. ಇದರಿಂದ, ಅಲ್ಲಿರುವ ಆನೆ ಸಿಂಹ ಕರಡಿ ಮುಂತಾದ ಪ್ರಾಣಿಗಳು ಚಮಕಿತಗಳಾಗಿ ಕೂಗಲಾರಂಭಿಸಿದುವು. ಈ ಕೂಗಿನಿಂದ ದಿಕ್ಕುಗಳೆಲ್ಲ ಘರ್ಘರಧ್ವನಿಯುಕ್ತಗಳಾಗಿ ಭ್ರಮಿಸಿಬಿಟ್ಟುವು ॥೮೦॥

ಆಗ, ಒನಕೆಯಷ್ಟು ದಪ್ಪವಾಗಿರುವಂತೆ ಜಲಧಾರೆಗಳು ಆಕಾಶದಿಂದ ಸುರಿದುವು. ಇದರಲ್ಲಿ ಆನೆಕಲ್ಲುಗಳೂ ದಟ್ಟವಾಗಿ ಸುರಿಯುತಿದ್ದುದರಿಂದ, ಬಹುಕಠಿನವಾದ ಟಂಕಾರ ಧ್ವನಿಯುಕ್ತವಾಗಿದ್ದುವು. ಇಂತಹ ವರ್ಷಧಾರೆಗಳು, ಸಾಕ್ಷಾತ್ ಯಮದೇವನ ದೃಷ್ಟಿ ಪ್ರಸರಣಗಳೋ ಎಂಬಂತೆ ಬಹುಭಯಂಕರವಾಗಿದ್ದುವು ॥೮೧॥

ಹೀಗೆ ಜಲಧಾರೆಗಳು ಬಿದ್ದ ಬಳಿಕ, ಭೂಮಿಯಿಂದ ಅಗ್ನಿಸದೃಶವಾಗಿ ಬಿಸಿಯಾದ ಹಬೆಯು ಎದ್ದಿತು. ಅದು, ಮೇಘಸಮೂಹಗಳೊಡನೆ ಯುದ್ಧಮಾಡುವುದಕ್ಕೋಸ್ಕರ ಪಾತಾಳದಿಂದ ಸಂಭ್ರಮಯುಕ್ತವಾಗಿ ಎದ್ದು ಬಂದಿರುವುದೋ ಎಂಬಂತೆ ಇದ್ದಿತು ॥೮೨॥

ಅನಂತರದಲ್ಲಿ, ದಿವ್ಯವಾದ ಜ್ಞಾನಾಮೃತಸೇಚನೆಯಿಂದ ಸಂಸಾರವಾಸನೆಯಡಗು ವಂತೆ, ನಿಮಿಷಮಾತ್ರದಲ್ಲಿ ಪ್ರಪಂಚದೊಳಗಿದ್ದ ಮೃಗತೃಷ್ಣಿಕೆಗಳೆಲ್ಲವೂ ಶಾಂತವಾಗಿಬಿಟ್ಟುವು ॥೮೩॥

ಆಗ ಭೂಮಂಡಲವೆಲ್ಲವೂ ಕೆಸರಾಗಿಬಿಟ್ಟು, ಜನಸಂಚಾರಕ್ಕೇ ಅವಕಾಶವಿಲ್ಲದಂತಾಯಿತು. ಆ ಸಿಂಧುರಾಜನೂ ಕೂಡ, ಸಮುದ್ರವು ಜಲದಿಂದ ಪರಿಪೂರ್ಣವಾಗುವಂತೆ ಈ ಪರ್ಜನ್ಯಾಸ್ತ್ರಜನ್ಯವಾದ ಜಲಧಾರೆಗಳಿಂದ ಪರಿಪೂರ್ಣ (ಆಚ್ಛಾದಿತ) ನಾಗಿ ಬಿಟ್ಟನು॥

ಆಗ ಆ ಸಿಂಧುರಾಜನು, ವಾಯುವ್ಯಾಸ್ತ್ರವನ್ನು ಅಭಿಮಂತ್ರಿಸಿ ಬಿಟ್ಟನು. ಅದರಿಂದ ಉಂಟಾದ ವಾಯುವು, ಆಕಾಶದ ಅವಕಾಶವನ್ನೆಲ್ಲ ತುಂಬಿಬಿಟ್ಟಿತು. ಅದು ಪ್ರಳಯಕಾ

ಕಲ್ಪಾನ್ತನೃತ್ತಸಮ್ಮತ್ತರಟದ್ಭೈರವಭೀಷಣಮ್ ॥೮೫॥

ವಪುರಶನಿನಿಪಾತಪೀಡಿತಾಙ್ಗಾಃ
ದಳಿತಶಿಲಾಶಕಲಾಃ ಕಕುಮ್ಮುಖೇಷು ।
ಪ್ರಳಯಸಮಯಸೂಚಕಾಭಟಾನಾಂ
ಕೃತಪಟುಟಾಙ್ಕೃತಟಙ್ಕಿನಃ ಸಮೀರಾಃ ॥೮೬॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಆಯುಧವರ್ಣನಂ ನಾಮ
ಅಷ್ಟಚತ್ವಾರಿಂಶಃ ಸರ್ಗಃ.

ಲಗಲ್ಲಿ ನರ್ತನ ಮಾಡುತ ಉನ್ಮತ್ತನಾಗಿರುವ ಸಾಕ್ಷಾದ್ಭೈರವಮೂರ್ತಿಯಂತೆ ಬಹುಭಯಂಕರವಾಗಿದ್ದಿತು ॥೮೫॥

ಇಂತಹ ವಾಯುಗಳು, ಸಿಡಿಲುಬಿದ್ದಂತೆ ಜನಗಳ ಶರೀರಗಳನ್ನು ಮರ್ದಿಸುತಲೂ, ದಿಙ್ಮಂಡಲಗಳಲ್ಲೆಲ್ಲ ಕಲ್ಲುಚೂರುಗಳನ್ನು ಸೀಳಿ ಎರಚುತಲೂ, ಗಟ್ಟಿಯಾಗಿ ಟಾಂಕಾರ ಮಾಡುತಿರುವುದರಿಂದ ಟಂಕಾಯುಧ (ಕಲ್ಲುಳಿ) ವುಳ್ಳವುಗಳೋ ಎಂಬ ಬುದ್ಧಿಯನ್ನುಂಟುಮಾಡುತಲೂ, ಭಟರುಗಳಿಗೆ ಪ್ರಳಯಕಾಲ ಸಮೀಪಿಸಿದೆಯೆಂದು ಸೂಚಿಸತಕ್ಕವುಗಳಾಗಿ ಬೀಸುತಿದ್ದುವು ॥೮೬॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಆಯುಧವರ್ಣನೆಯೆಂಬ
ನಾಲ್ವತ್ತೆಂಟನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕೋನಪಂಚಾಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ವಪುರ್ವಲಿತನೀಹಾರಾಃ ವಿಕೀರ್ಣವನಪಲ್ಲವಾಃ ।
ವಾಯವೋ ಧೂತವೃಕ್ಷೌಘಾಃ ಸಲೀಲಾಪೀಡಪಾಂಸವಃ ॥೧॥
ಪಕ್ಷಿವದ್ಭ್ರಾನ್ತವೃಕ್ಷೌಘಾಃ ಪತನೋತ್ಪತನೋದ್ಭಟಾಃ ।
ವಿಕುಟ್ಟಿತಾಟ್ಟಾಲಖಣ್ಡಾ ಶ್ಯಾಭ್ರಭಿತ್ತಿವಿಭೇದಿನಃ ॥೨॥
ತೇನಾತಿಭೀಮವಾತೇನ ವಿದೂರಥರಥೋಽಪ್ಯಥ ।
ಉಹ್ಯಮಾನೋಽಭವನ್ನದ್ಯಾ ಯಥಾ ಜರ್ಜರಪಲ್ಲವಃ ॥೩॥
ವಿದೂರಥೋಽಥ ತತ್ಯಾಜ ಪರ್ವತಾಸ್ತ್ರಂ ಮಹಾಸ್ತ್ರವಿತ್ ।
ವ್ಯೋಮಾಪಿ ಘನತೋಯೇನ ಸಮಾದಾತುಮಿವೋದ್ಯತಮ್ ॥೪॥

ಉತ್ಪತ್ತಿಪ್ರಕರಣದಲ್ಲಿ ನಾಲ್ವತ್ತೊಂಭತ್ತನೆಯ ಸರ್ಗವು.

ಪರ್ವತಾಸ್ತ್ರಂ ಚ ವಜ್ರಾಸ್ತ್ರಂ ಬ್ರಹ್ಮಾಸ್ತ್ರಂ ಚಾತ್ರ ವರ್ಣ್ಯತೇ ।
ವಿಸ್ತರೇಣ ಪಿಶಾಚಾಸ್ತ್ರಂ ಪಿಶಾಚಚರಿತಾನ್ವಿತಮ್ ॥

ಪರ್ವತಾಸ್ತ್ರ ವಜ್ರಾಸ್ತ್ರ ಬ್ರಹ್ಮಾಸ್ತ್ರ—ಇವುಗಳೂ, ಪಿಶಾಚಗಳ ನಡತೆಯೊಡಗೂಡಿ ವಿಶೇಷವಾಗಿ ಪಿಶಾಚಾಸ್ತ್ರವೂ ಕೂಡ ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಸಿಂಧುರಾಜನು ವಾಯುವ್ಯಾಸ್ತ್ರವನ್ನು ಬಿಟ್ಟಬಳಿಕ, ಜಲಕಣಗಳನ್ನೂ ಮರದ ಚಿಗುರನ್ನೂ ಎರಚುತಲೂ, ವೃಕ್ಷಸಮೂಹವನ್ನು ಅಳ್ಳಾಡಿಸುತಲೂ, ಸಮಸ್ತ ಪದಾರ್ಥಗಳ ತಲೆಯಮೇಲೆ ಧೂಳಿಗಳನ್ನು ಹಾಕುತಲೂ ವಾಯುಗಳು ಬೀಸಲುಪಕ್ರಮಿಸಿದುವು ॥೧॥

ಆ ವಾಯುವಿನ ಮಧ್ಯದಲ್ಲಿ ಸಿಕ್ಕಿದ ಮರಗಳೆಲ್ಲವೂ ಹಕ್ಕಿಗಳಂತೆ ಭ್ರಮಿಸುತಿದ್ದುವು; ಮಹಾಭಟರುಗಳೂ ಕೂಡ, ಆ ಗಾಳಿಯ ಹೊಡೆತದಿಂದ ಬೀಳುತಲೂ ಏಳುತಲೂ ಇದ್ದರು; ಅಟ್ಟಾಲಕ (ಅಟ್ಟ—ಮಹಡಿ) ಪ್ರದೇಶವೆಲ್ಲ ಚೂರ್ಣವಾಗಿಬಿಟ್ಟಿತು; ಮೇಘಮಂಡಲವೆಂಬ ಗೋಡೆಗಳು ಸೀಳಿಹೋದುವು ॥೨॥

ಬಳಿಕ, ಕೊಳೆತು ಜೀರ್ಣವಾಗಿರುವ ಮರದೆಲೆಯು ನದೀವೇಗದಿಂದ ತೇಲಿಕೊಂಡು ಹೋಗುವಂತೆ, ಆ ಅತಿಭಯಂಕರವಾದ ವಾಯುವಿನಿಂದ ವಿದೂರಥನ ರಥವೂ ತೇಲಿಹೋಯಿತು ॥೩॥

ಅನಂತರದಲ್ಲಿ, ಮಹಾಸ್ತ್ರಜ್ಞನಾದ ವಿದೂರಥನು ಪರ್ವತಾಸ್ತ್ರವನ್ನು ಪ್ರಯೋಗಿಸಿದನು. ಆ ಪರ್ವತಾಸ್ತ್ರವು, ಮೇಘೋದಕದ ಜತೆಯಲ್ಲಿ ಅಂತರಿಕ್ಷವನ್ನೂ ನುಂಗಿಬಿಡುವುದಕ್ಕೆ ಉದ್ಯುಕ್ತವಾಗಿರುವಂತಿದ್ದಿತು ॥೪॥

ತೇನ ಶೈಲಾಸ್ತ್ರವಾತೇನ ವಿರಾಟ್ಪ್ರಾಣಸವಿಾರಣಃ ।
ಶಮಂ ಚೈತನ್ಯಶಾನ್ತ್ಯೇವ ಪ್ರಯಯೌ ವಾಯುರಾತತಃ ॥೫॥
ಅನ್ತರಿಕ್ಷಗತಾವೃಕ್ಷಪಙ್ಕ್ತಯಃ ಪತಿತಾಭುವಿ ।
ನಾನಾಜನಶವವ್ಯೂಹೇ ಕಾಕಾನಾಮಿವ ಕೋಟಯಃ ॥೬॥
ಶೇಮುಃ ಸೂತ್ಕಾರಡಾತ್ಕಾರಝಾಙ್ಕಾರೋತ್ಕಾರಕಾದಿಶಾಮ್ ।
ಪ್ರಲಾಪಾಇವ ವಿಧ್ವಸ್ತಾಃ ಪೂರ್ಗ್ರಾಮವನವೀರುಧಾಮ್ ॥೭॥
ಗಿರೀನಪಶ್ಯನ್ನಭಸಃ ಪತತಃ ಪತ್ರವರ್ಣವತ್ ।
ಸಿನ್ಧುಃ ಸಿನ್ಧುರಿವೋತ್ಪಕ್ಷಾನ್ ಮೈನಾಕಾದೀನಿತಸ್ತತಃ ॥೮॥
ವಜ್ರಾಸ್ತ್ರಮಸೃಜದ್ದೀಪ್ತಂ ಚೇರುರ್ವಜ್ರಗಣಾಸ್ತತಃ ।
ಪಿಬನ್ತೋದ್ರೀನ್ದ್ರತಿಮಿರಂ [1]ಅಗ್ನಿದಾಹಮಿವಾಗ್ನಯಃ ॥೯॥
ತೇ ಗಿರೀಣಾಂ ತಥಾ ಕ್ಷಿಪ್ತಾಃ ಕೋಟಿತುಣ್ಡಾವಖಣ್ಡನೈಃ ।
ಶಿರಾಂಸಿ ಪಾತಯಾಮಾಸುಃ ಫಲಾನೀವೋಲ್ಬಣಾನಿಲಾಃ ॥೧೦॥

ಈ ಪರ್ವತಾಸ್ತ್ರವನ್ನು ಬಿಟ್ಟಬಳಿಕ, ಚೈತನ್ಯಕ್ಕೆ ಮಾಯಾನಿವೃತ್ತಿಯಾದಾಗ ವಿರಾಟ್ಪುರುಷನು ಶಾಂತಿಪಡೆಯುವಂತೆ, ಆ ಪರ್ವತಾಸ್ತ್ರದ ಗಾಳಿಯಿಂದಲೇ, ಸಿಂಧುರಾಜನ ವಾಯುವ್ಯಾಪ್ತದಿಂದ ಹಬ್ಬಿಕೊಂಡಿದ್ದ ವಾಯುವು ಶಾಂತವಾಯ್ತು ॥೫॥

ಬಳಿಕ ಪರ್ವತಾಸ್ತ್ರದಿಂದ ಗಾಳಿಗೆ ತಡೆಯಾಗಲಾಗಿ, ಮೊದಲು ಅಂತರಿಕ್ಷಕ್ಕೆ ಹಾರಿಹೋಗಿದ್ದ ವೃಕ್ಷಪಂಕ್ತಿಗಳೆಲ್ಲವೂ, ಅನೇಕಜನ ಶವಸಮುದಾಯಮಧ್ಯದಲ್ಲಿ, ನೂರಾರು ಕಾಗೆಗಳಂತೆ ಬಿದ್ದುಬಿಟ್ಟುವು ॥೬॥

ಆಗ, ದಿಕ್ಕುಗಳಲ್ಲಿ, ನಿಶ್ವಾಸಶಬ್ದವೂ ಕೊಳ್ಳೆಹೊಡೆಯುವ ಕೂಗೂ ಇತರವಾದ ಭಯಂಕರಧ್ವನಿಯೂ ಅತಿಕ್ರೂರವಾದ ಸದ್ದೂ-ಎಲ್ಲವೂ ಕೂಡ, ನಿಶ್ಶೇಷವಾಗಿ ಶಾಂತವಾಗಿಬಿಟ್ಟುವು. ಇದಲ್ಲದೆ, ಪಟ್ಟಣ ಗ್ರಾಮ ವನ ಲತೆ-ಇವುಗಳಲ್ಲಿದ್ದ ಶಬ್ದವೂ ಕೂಡ ಅಡಗಿಸಲ್ಪಟಂತೆ ತೋರಿತು ॥೭॥

ಹೀಗಿರುವ ಸಮಯದಲ್ಲಿ, ಆ ವಿದೂರಥನ ಪರ್ವತಾಸ್ತ್ರದಿಂದ ಹುಟ್ಟಿದ ಅನೇಕ ಪರ್ವತಗಳು ಅಂತರಿಕ್ಷದಿಂದ ಎಲೆಗಳಂತೆ ಬೀಳುತಿರುವುದನ್ನು, ಆ ಸಿಂಧುರಾಜನು ನೋಡಿದನು. ಇದು ಪೂರ್ವದಲ್ಲಿ ರಕ್ಕೆಗಳಿಂದ ಸುತ್ತಲೂ ಹಾರುತಿದ್ದ ಮೈನಾಕಮುಂತಾದ ಪರ್ವತಗಳನ್ನು ಸಮುದ್ರವು ನೋಡಿದಂತಾಯ್ತು ॥೮॥

ಅನಂತರ ಆ ಸಿಂಧುರಾಜನು ಮಹಾಪ್ರಕಾಶವಾದ ವಜ್ರಾಸ್ತ್ರವನ್ನು ಬಿಟ್ಟನು; ಅದರಿಂದ ಅನೇಕವಾದ ವಜ್ರಾಯುಧಗಳು ಉದ್ಭವಿಸಿ ಸಂಚರಿಸಲುಪಕ್ರಮಿಸಿದುವು. ಆ ವಜ್ರಾಯುಧಗಳು ಸೌದೆಯನ್ನು ಅಗ್ನಿಯು ನುಂಗಿಬಿಡುವಂತೆ, ಪರ್ವತಗಳ ಕತ್ತಲೆಯನ್ನೆಲ್ಲ ಪಾನಮಾಡುತ್ತಿದ್ದುವು (ಅಪಹರಿಸಿದುವು) ॥೯॥

ಆಗ ಆರೀತಿಯಾಗಿ ಪ್ರೇರಿತಗಳಾದ ವಜ್ರಾಯುಧಗಳು, ತಮ್ಮ ಅಲಗುಗಳೆಂಬ ಮುಖಗಳಿಂದ ಕತ್ತರಿಸುತ, ಅತ್ಯುಲ್ಬಣವಾದ ವಾಯುವು ಫಲಗಳನ್ನು ಕೆಡಹುವಂತೆ, ಪರ್ವತಗಳ ಶಿಖರವನ್ನು ಕೆಡವಿಬಿಟ್ಟುವು ॥೧೦॥

---

1. ಅಗ್ನಿನಾ ದಹ್ಯತಇತಿ ಅಗ್ನಿದಾಹಮ್. ಇನ್ಧನಮಿತ್ಯರ್ಥಃ.

ವಿದೂರಥೋಥ ವಜ್ರಾಸ್ತ್ರಶಾನ್ತ್ಯೈ ಬ್ರಹ್ಮಾಸ್ತ್ರಮತ್ಯಗಾತ್ |
ತತೋ ಬ್ರಹ್ಮಾಸ್ತ್ರವಜ್ರಾಸ್ತ್ರೇ ಸಮಂ ಪ್ರಶಮಮಾಗತೇ ||೧೧||
ಶ್ಯಾಮಾಶ್ಯಾಮಂ ಪಿಶಾಚಾಸ್ತ್ರಂ ಅಥ ಸಿನ್ಧುರಚೋದಯತ್ |
ತೇನೋದಗುಃ ಪಿಶಾಚಾನಾಂ ಪಙ್ಕ್ತಯೋತ್ಯನ್ತಭೀತಿದಾಃ ||೧೨||
ಸನ್ಧ್ಯಯಾಮಥ ಭೀತ್ಯೇವ ದಿವಸಃ ಶ್ಯಾಮತಾಂ ಯಯೌ |
ಪಿಶಾಚಾಭುವನಂ ಜಗ್ಮುಃ ಅನ್ಧಕಾರಭರಾಇವ ||೧೩||
ಭಸ್ಮನಃ ಸ್ತಮ್ಭಸದೃಶಾಃ ತಾಳೋತ್ತಾಳವಿಲಾಸಿನಃ |
ದೃಶ್ಯಮಾನಮಹಾಕಾರಾಃ ಮುಷ್ಟಿಗ್ರಾಹ್ಯಾ ನ ಕಿಂಚನ ||೧೪||
ಊರ್ಧ್ವಕೇಶಾಃ ಕೃಶಾಙ್ಗಾಶ್ಚ ಕೇಚಿಚ್ಚ ಶ್ಮಶ್ರುಲಾಅಪಿ |
ಕೃಷ್ಣಾಙ್ಗಾಮಲಿನಾಙ್ಗಾಶ್ಚ ಗ್ರಾಮ್ಯಾಇವ ನಭಶ್ಚರಾಃ ||೧೫||
ಸಭಯಾಮೂಢದೃಷ್ಟ್ಯಾಶ್ಚ ಯತ್ಕಿಂಚನಕರಾಶ್ಚಲಾಃ |
ದೀನಾವಜ್ರಾಸಿನಃ[1] ಕ್ರೂರಾಃ ದೀನಾಗ್ರಾಮ್ಯಜನಾಇವ ||೧೬||

ಅನಂತರ ವಿದೂರಥನು, ಆ ವಜ್ರಾಸವು ಶಮನವಾಗುವುದಕ್ಕೋಸ್ಕರ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಬಳಿಕ, ಬ್ರಹ್ಮಾಸ್ತ್ರ ವಜ್ರಾಸ್ತ್ರಗಳೆರಡೂ ಜತೆಯಲ್ಲಿ ಶಾಂತವಾದುವು ||೧೧||

ಬಳಿಕ ಸಿಂಧುರಾಜನು, ರಾತ್ರಿಯಂತೆ ಕಪ್ಪಾಗಿರುವ ಪಿಶಾಚಾಸ್ತ್ರವನ್ನು ಪ್ರಯೋಗಿಸಿದನು. ಅದರಿಂದ, ಅತಿಭಯಂಕರವಾಗಿ ಪಿಶಾಚಪರಂಪರೆಗಳು ಉತ್ಪನ್ನವಾದುವು ||೧೨||

ಅನಂತರ ಆ ಹಗಲು, ಹೆದರಿಕೆಯಿಂದಲೋ ಎಂಬುವಹಾಗೆ, ಸಂಧ್ಯಾಕಾಲದಲ್ಲಾಗುವಂತೆ ಕಪ್ಪಾಗಿಬಿಟ್ಟಿತು. ಆಗ, ಅಂಧಕಾರಸಮೂಹಗಳಂತೆ ಪಿಶಾಚಗಳು ಭೂಮಿಗೆ ಬಂದುವು ||೧೩||

ಆ ಪಿಶಾಚಗಳು, ಬೂದಿಯ ಕಂಭಗಳಿಗೆ ಸಮಾನಗಳಾಗಿಯೂ, ತಾಳವೃಕ್ಷಗಳಂತೆ ಎತ್ತರವಾಗಿ ಆಟವಾಡುತಲೂ, ದೊಡ್ಡ ಆಕಾರವಾಗಿ ಕಣ್ಣಿಗೆ ಕಾಣುತಿದ್ದರೂ—ವಸ್ತುತಃ ಕೈಯೊಳಗೆ ಹಿಡಿದುಕೊಳ್ಳಲು ಸಾಧ್ಯವಾಗಿರುವಂತೆ ಅತ್ಯಂತ ಶೂನ್ಯವಾಗಿಯೂ ಇದ್ದುವು||

ಅವುಗಳಲ್ಲಿ, ಕೆಲವು ಊರ್ಧ್ವಕೇಶಗಳಾಗಿಯೂ ಕೆಲವು ಕೃಶಾಂಗಗಳಾಗಿಯೂ, ಕೆಲವು ಶ್ಮಶ್ರು (ಮೀಸೆ) ಯುಕ್ತಗಳಾಗಿಯೂ, ಕೆಲವು ಕೃಷ್ಣದೇಹಗಳಾಗಿಯೂ, ಕೆಲವು ಮಲಿನದೇಹಗಳಾಗಿಯೂ, ಅಂತರಿಕ್ಷದಲ್ಲಿ ಸಂಚರಿಸುತಿರುವ ಗ್ರಾಮೀಣಜನರೋ ಎಂಬಂತೆ ಕಾಣಸುತಿದ್ದುವು ||೧೫||

ಸ್ವಭಾವತಃ ಅವುಗಳು ಕೇವಲ ಭಯಗ್ರಸ್ತವಾಗಿದ್ದುವು. ಅಶುಚಿಯಾಗಿಯೂ ಆಚಾರರಹಿತರಾಗಿಯೂ ಇರತಕ್ಕವರ ಕಣ್ಣಿಗೆ ಮಾತ್ರವೇ ಅವು ಗೋಚರವಾಗುತಿದ್ದುವು; ಅವು ಇಂತಹ ಕೆಲಸವನ್ನು ಮಾಡುವುವೆಂಬುದೇ ಗೊತ್ತಿರಲಿಲ್ಲ; ತಮಗೆ ತೋಚಿದಂತೆ ಯಾವಯಾವುದೋ ಚೇಷ್ಟೆಯನ್ನು ಮಾಡುತ, ನಿಂತಕಡೆ ನಿಲ್ಲದೆ, ಓಡಾಡುತಿದ್ದುವು; ದೀನವಾಗಿರುವಂತೆ ಕಂಡರೂ, ವಜ್ರಕ್ಕಿಂತಲೂ ಕತ್ತಿಗಿಂತಲೂ ಕ್ರೂರವಾಗಿದ್ದುವು; ಗ್ರಾಮ್ಯಜನರಂತೆ ದೀನವಾಗಿಯೂ ಇದ್ದುವು ||೧೬||

---

1. ವಜ್ರಂಚ ಅಸಿಶ್ಚ ತಯೋಃ ಸಮಾಹಾರಃ = ವಜ್ರಾಸಿ, ತಸ್ಮಾತ್.

ತರುಕರ್ದಮರಥ್ಯಾಸ್ತು ಶೂನ್ಯಗೇಹಗೃಹಾಶ್ಚ ಲಾಃ ।
ಲೇಲಿಹಾನಾಃ ಪ್ರೇತರೂಪಾಃ ಕೃಷ್ಣಾ ಜ್ವಾಗ್ಚ ಪಲಾ ಇವ ॥೧೭॥
ಜಗೃಹುಸ್ತೇ ತದಾ ಮತ್ತಾಃ ಹತಶಿಷ್ಟಮರೇರ್ಬಲಮ್ ।
ಆಸಂಸ್ತತ್ಸೈನಿಕಾಸ್ತತ್ರ ಭಿನ್ನಾಸ್ತ್ರಾಕ್ಷುಬ್ಧಚೇತನಾಃ ॥೧೮॥
ತ್ಯಕ್ತಾಯುಧತನುತ್ರಾಣಾಃ ತ್ರಸ್ತಪ್ರಾಣಾಃ ಸ್ಖಲದ್ಗಮಾಃ ।
ನೇತ್ರೈರಙ್ಗೈರ್ಮುಖೈಃ ಪಾದೈಃ ವಿಕಾರಭಾರಕಾರಿಣಃ ॥೧೯॥
ತ್ಯಕ್ತಕೌಪೀನವಸನಾಃ ನಿಮಗ್ನಾವಸನೋತ್ತರಾಃ ।
ವಿಷ್ಠಾಂ ಮೂತ್ರಂ ಚ ಕುರ್ವನ್ತಃ ಸ್ಥಿರಮಾರಬ್ಧನರ್ತನಾಃ ॥೨೦॥
ಪಿಶಾಚರಾಜೇ ರಾಜಾನಂ ತತ್ರ ಯಾವದ್ವಿದೂರಥಮ್ ।
ಸಮಾಕ್ರಾಮತಿ ತಾವತ್ ತಾಂ ಮಾಯಾಂ ಸ ಬುಬುಧೇ ಬುಧಃ ॥೨೧॥
ಪಿಶಾಚಸಙ್ಗ್ರಾಮಕರೀಂ ಮಾಯಾಂ ವೇತ್ತಿ ಸ ಭೂಮಿಪಃ ।
ತಯಾ ಪಿಶಾಚಸೈನ್ಯಂ ತತ್ ಪರಸೈನ್ಯೇ ನ್ಯಯೋಜಯತ್ ॥೨೨॥

ಇವುಗಳು, ಮರ ಕೆಸರು ರಥ್ಯೆ (ನಾಲ್ಕುಬೀದಿ ಕೂಡುವ ಸ್ಥಳ) ಪಾಳುಮನೆ— ಇವುಗಳಲ್ಲಿ ವಾಸಮಾಡುತ, ಅಲ್ಲಲ್ಲಿ ಸಂಚರಿಸುತಿದ್ದುವು; ಪದೇಪದೇ ನಾಲಿಗೆಯನ್ನು ನೀಡುತಿದ್ದುವು; ಹೆಣದಂತೆ ನೋಡುವುದಕ್ಕೆ ಅತಿ ಭಯಂಕರವಾಗಿ ಕಪ್ಪಾಗಿದ್ದುವು; ಮಿಂಚುಗಳಂತೆ ಒಂದುಕ್ಷಣ ಕಾಣಿಸಿಕೊಳ್ಳುತಲೂ ಮತ್ತೊಂದುಕ್ಷಣ ಕಾಣಿಸದೆಯೂ ಇರುತಿದ್ದುವು॥೧೭

ಈರೀತಿಯಾಗಿದ್ದ ಪಿಶಾಚಗಳು, ಆಗ ಹತಾವಶಿಷ್ಟವಾಗಿರುವ ಶತ್ರುಸೈನ್ಯವನ್ನು ಹಿಡಿದುಕೊಂಡುಬಿಟ್ಟುವು. ಆ ಸಮಯದಲ್ಲಿ, ವಿದೂರಥನ ಸೈನಿಕರೆಲ್ಲರೂ, ಅಸ್ತ್ರಶೂನ್ಯರಾಗಿಯೂ ಬುದ್ಧಿಭ್ರಾಂತಿಯುಳ್ಳವರಾಗಿಯೂ ಆದರು ॥೧೮॥

ಬಳಿಕ, ಪಿಶಾಚಾವಿಷ್ಟರಾದ ಆ ಸೈನಿಕರು, ಆಯುಧಗಳನ್ನೂ ಕವಚಗಳನ್ನೂ ಬಿಟ್ಟುಬಿಟ್ಟು, ಭಯಭ್ರಾಂತರಾಗಿ, ಮಧ್ಯಮಧ್ಯದಲ್ಲಿ ಎಡವಿ ಬೀಳುತ, ನೇತ್ರ ಅಂಗ ಮುಖ ಪಾದ ಇವುಗಳನ್ನೆಲ್ಲಾ ನಾನಾವಿಧವಾಗಿ ವಿಕಾರಮಾಡುತ ಓಡಿದರು ॥೧೯॥

ಮತ್ತು, ಕೌಪೀನಮಾತ್ರ ವಸ್ತ್ರವನ್ನೂ ತೆಗೆದುಬಿಟ್ಟು, ದೇಹದ ಮೇಲುಭಾಗದಲ್ಲಿಯೂ ವಸ್ತ್ರವಿಲ್ಲದೆ, ನಾನಾವಿಧವಾಗಿ ಸಂಕೋಚವಿಕಾರಗಳನ್ನು ಮಾಡುತ, ಸಿಕ್ಕಿದಕಡೆಯೇ ಮಲಮೂತ್ರಗಳನ್ನು ಬಿಡುತ, ಸ್ಥಿರವಾಗಿ ನರ್ತನಮಾಡಲುಪಕ್ರಮಿಸಿದರು ॥೨೦॥

ಆ ಸಮಯದಲ್ಲಿ, ಆ ಪಿಶಾಚ ಸಮೂಹವು ದೊರೆಯಾದ ವಿದೂರಥನನ್ನು ಆಕ್ರಮಿಸುವುದಕ್ಕೆ ಬರುತಿರುವಷ್ಟರಲ್ಲಿಯೇ, ಪ್ರಾಜ್ಞನಾದ ವಿದೂರಥನು ಅದನ್ನು ಮಾಯೆಯೆಂದು ತಿಳಿದುಕೊಂಡನು ॥೨೧॥

ಪಿಶಾಚಗಳೊಡನೆ ಯುದ್ಧಮಾಡಲು ತಕ್ಕಂತ ಮಾಯೆಯನ್ನು ಆ ವಿದೂರಥನು ಬಲ್ಲವನಾಗಿದ್ದನು. ಆದುದರಿಂದ, ಆ ಮಾಯೆಯನ್ನುಪಯೋಗಿಸಿ, ಆ ಪಿಶಾಚಸೈನ್ಯವೆಲ್ಲವೂ ಶತ್ರುಸೈನ್ಯದಮೇಲೆಯೇ ಬೀಳುವಂತೆ ಮಾಡಿದನು ॥೨೨॥

ತತಃ ಸ್ವಸೈನಿಕಾಃ ಸ್ವಸ್ಥಾಃ ಪರಯೋಧಾಃ ಪಿಶಾಚಿನಃ |
ತಸ್ಯಾಶು ರೂಪಿಕಾಸ್ತ್ರಂ ಚ ದದಾವನ್ಯದಸೌ ರುಷಾ ||೨೩||
ಉದಗುರ್ಭೂತಲಾದ್ವ್ಯೋಮ್ನೋ ರೂಪಿಕಾಊರ್ಧ್ವಮೂರ್ಧಜಾಃ |
ನಿರ್ಮಗ್ನವಿಕರಾಳಾಕ್ಷ್ಯಃ ಚಲಚ್ಛ್ರೋಣಿಪಯೋಧರಾಃ ||೨೪||
ಉದ್ಭಿನ್ನಯೌವನಾವೃದ್ಧಾಃ ಪೀವರಾಙ್ಗ್ಯೋಥ ಜರ್ಜರಾಃ |
ಸ್ವರೂಪಾರೂಪಜಘನಾಃ ದುರ್ನಾಭ್ಯೋ ವಿಕಸದ್ಭಗಾಃ ||೨೫||
ನರರಕ್ತಶಿರೋಹಸ್ತಾಃ ಸನ್ಧ್ಯಾಭ್ರಾರುಣಗಾತ್ರಿಕಾಃ |
ಅರ್ಧಚರ್ವಿತಮಾಂಸಾಸೃಕ್ಸ್ರವತ್ಸೃಕ್ವ್ಯಾಕುಲಾನನಾಃ ||೨೬||
ನಾನಾಙ್ಗವಲನಾನಾನಾನನಮುನ್ನಮನಸತ್ತಮಾಃ |
ಶಿಲಾಭುಜಗವಕ್ತ್ರೋರುಕಟಿಪಾರ್ಶ್ವಕರಾಙ್ಗಕಾಃ ||೨೭||
ನಾರೀಕೃತಾರ್ಭಕಶವಾಃ ಹಸ್ತಕೃಷ್ಟಾನ್ತ್ರರಜ್ಜವಃ |
ಶ್ವಕಾಕೋಲೂಕವದನಾಃ ನಿಮ್ನವಕ್ತ್ರಹನೂದರಾಃ ||೨೮||

ಬಳಿಕ ಇವನ ಸೈನಿಕರು ಸ್ವಸ್ಥರಾದರು; ಪರಸೈನಿಕರನ್ನು ಪಿಶಾಚಗಳು ಹಿಡಿದುಕೊಂಡುವು. ಇದೂ ಅಲ್ಲದೆ, ವಿದೂರಥನು ಕೋಪಿಸಿಕೊಂಡು, ಸಿಂಧುರಾಜನಿಗೆ ರೂಪಿಕಾ (ಸ್ತ್ರೀಪಿಶಾಚಭೇದ) ಸ್ತ್ರವನ್ನೂ ಪ್ರಯೋಗಿಸಿದನು ||೨೩||

ಆಮೇಲೆ, ಕೂದಲನ್ನು ಮೇಲಕ್ಕೆ ಕೆದರಿಕೊಂಡು—ಕಣ್ಣು ಗುಳಿಗಿಳಿದು ಕ್ರೂರವಾಗಿ—ತೊಡೆಯನ್ನೂ ಸ್ತನವನ್ನೂ ಕುಣಿಯಿಸುತಿರುವ ಪೂತನೆಗಳು, ಭೂಮಿಯಿಂದಲೂ ಅಂತರಿಕ್ಷದಿಂದಲೂ ಅಸಂಖ್ಯಾಕವಾಗಿ ಉತ್ಪನ್ನವಾದುವು ||೨೪||

ಅವುಗಳಲ್ಲಿ, ಕೆಲವು ಯೌವನವಂಕುರಿಸುತಿರುವುವುಗಳಾಗಿಯೂ, ಕೆಲವು ಮುದಿಯಾಗಿಯೂ, ಕೆಲವು ಸ್ಥೂಲಶರೀರಗಳಾಗಿಯೂ, ಕೆಲವು ಶಿಥಿಲ ದೇಹಗಳಾಗಿಯೂ, ಕೆಲವು ತಮ್ಮ ಆಕಾರಕ್ಕೆ ತಕ್ಕದ್ದಲ್ಲದ ಜಘನವುಳ್ಳುವಾಗಿಯೂ, ಕೆಲವು ವಿಕೃತನಾಭಿಗಳಾಗಿಯೂ, ಕೆಲವು ಮನುಷ್ಯರ ರಕ್ತವನ್ನೂ ಶಿರಸ್ಸನ್ನೂ ಕೈಲಿ ಹಿಡಿದಿರುವುವಾಗಿಯೂ, ಕೆಲವು ಸಂಧ್ಯಾಕಾಲಿಕವಾದ ಅಂತರಿಕ್ಷದಂತೆ ರಕ್ತದೇಹಗಳಾಗಿಯೂ ಇದ್ದುವು. ಮತ್ತೆ ಕೆಲವು ಮಾಂಸವನ್ನು ಅರ್ಧ ಅಗಿದಿದ್ದುದರಿಂದ, ಅವುಗಳ ಕಟವಾಯಿನಿಂದ ರಕ್ತಸುರಿಯುತ—ಮುಖವೆಲ್ಲವೂ ವಿಕಾರವಾಗಿದ್ದಿತು; ಇನ್ನು ಕೆಲವು, ನಾನಾವಿಧವಾಗಿ ಅಂಗಗಳನ್ನು ಸುತ್ತಿಸುತಿದ್ದುವು; ಬೇರೆ ಕೆಲವು, ಬೊಗ್ಗದಿರುವ ತಮ್ಮ ಅವಯುವಗಳನ್ನು ಬೊಗ್ಗಿಸಬೇಕೆಂದು ಪ್ರಯತ್ನಪಡುತಿದ್ದುವು. ಅವುಗಳ ಮುಖ ತೊಡೆ ಸೊಂಟ ಪಾರ್ಶ್ವ ಕೈಯಿ—ಇವೇ ಮೊದಲಾದ ಅವಯುವಗಳು, ಕಲ್ಲಿನಂತೆ ಕಠಿನವಾಗಿಯೂ ಸರ್ಪದಂತೆ ವಕ್ರವಾಗಿಯೂ ಇದ್ದುವು. ಮಕ್ಕಳ ಹೆಣಗಳನ್ನು, ಮನುಷ್ಯರ ಮಾಲಿಕೆಯಂತೆ ಹಾಕಿಕೊಂಡಿದ್ದುವು. ನರಗಳನ್ನು ಹಗ್ಗದಂತೆ ಕೈಯಿಂದ ಹಿಡಿದೆಳೆಯುತಿದ್ದುವು. ನಾಯಿ ಕಾಗೆ ಗೂಬೆ ಇವುಗಳಂತೆ ಮುಖವುಳ್ಳುವಾಗಿಯೂ, ಬಾಯಿ ಮುಸುಡಿ ಹೊಟ್ಟೆ—ಇವುಗಳು ಆಳವಾಗಿ ಉಳ್ಳುವಾಗಿಯೂ ಇದ್ದುವು ||೨೫—೨೮||

ಜಗೃಹುಸ್ತಾನ್ ಪಿಶಾಚಾಂಸ್ತಾಃ ದುರ್ಬಲಾನ್ ದುಶ್ಶಿಶೂನಿವ |
ಪಿಶಾಚರೂಪಿಕಾಸೈನ್ಯಂ ತದಾಸೀದೇಕತಾಂ ಗತಮ್ ||೨೯||
ನಿರ್ಮಗ್ನನರ್ತನೋತ್ತಾನವದನಾಙ್ಗವಿಲೋಚನಮ್ |
ಪರಸ್ಪರಾಕ್ರಾನ್ತಿಕರಂ ಪ್ರಧಾವಚ್ಚ ಪರಸ್ಪರಮ್ ||೩೦||
ನಿಷ್ಕಾಸಿತಮಹಾಜಿಹ್ವಂ ನಾನಾಮುಖವಿಕಾರದಮ್ |
ಶರಭಾರಾಢ್ಯಮನ್ಯೋನ್ಯಂ ಹ್ರಿಯಮಾಣಶವಾಙ್ಗಕಮ್ ||೩೧||
ರುಧಿರಾಮ್ಭಸಿ ಮಜ್ಜಂ ತತ್ ಉನ್ಮಜ್ಜದ್ಘೃಲ್ಲಸತ್ತನು[1] |
ಲಮ್ಬೋದರಂ ಲಮ್ಬಭುಜಂ ಲಮ್ಬಕರ್ಣೋಷ್ಠನಾಸಿಕಮ್ ||೩೨||
ರಕ್ತಮಾಂಸಮಹಾಪಙ್ಕೇಷ್ವನ್ಯೋನ್ಯಂ [2]ವೇಲ್ಲನಾಭ್ಯಸತ್ |
ಮನ್ದರೋದ್ಧೂತದುಗ್ಧಾಬ್ಧಿಲಸತ್ಕಲಕಲಾಕುಲಮ್ ||೩೩||
ಯಥೈವ ಮಾಯಾಸಞ್ಚಾರಃ ತೇನ ತಸ್ಯ ಕೃತಃ ಪುರಾ |

ಆ ರೂಪಿಕೆಗಳು, ದುರ್ಬಲರಾಗಿದ್ದ ಆ ಪಿಶಾಚಗಳನ್ನು, ರೋಗಿಷ್ಠರಾದ ಮಕ್ಕಳನ್ನು ಹಿಡಿದುಕೊಳ್ಳುವಂತೆ ಹಿಡಿದುಕೊಂಡುವು. ಆಗ, ಪಿಶಾಚಸೈನ್ಯವೂ ರೂಪಿಕಾಸೈನ್ಯವೂ ಏಕವಾಗಿರುವಂತೆ ಕಂಡಿತು ||೨೯||

ಆ ಪಿಶಾಚ ರೂಪಿಕಾಸೈನ್ಯದ್ವಯವು, ಕ್ರೀಡಾರಸದಲ್ಲಿ ಸಂಪೂರ್ಣಮಗ್ನವಾದುದಾಗಿಯೂ, ನರ್ತನ ಮಾಡುತ—ಮುಖ ಮೈಯಿ ಕಣ್ಣುಗಳನ್ನು ಮೇಲ್ಮುಖವಾಗಿ ಮಾಡುತಲೂ, ಒಂದಕ್ಕೊಂದು ಆಕ್ರಮಣ ಮಾಡುತಲೂ, ಒಂದನ್ನೊಂದು ಬೆನ್ನಟ್ಟಿ ಓಡುತಲೂ ವಿನೋದಪಡುತಿದ್ದಿತು ||೩೦||

ಉದ್ದವಾದ ನಾಲಿಗೆಯನ್ನು ಹೊರಕ್ಕೆ ನೀಡುತಲೂ, ಮುಖದಲ್ಲಿ ನಾನಾವಿಧವಾಗಿ ವಿಕಾರ ತೋರಿಸುತಲೂ, ರಕ್ತದ ನೊರೆಯನ್ನು ವಿಶೇಷವಾಗಿ ವಹಿಸುತಲೂ, ಶವಗಳ ಅಂಗಗಳನ್ನು ಅಪಹರಿಸುತಲೂ ಇದ್ದಿತು ||೩೧||

ಮತ್ತು ಆ ಸೈನ್ಯಗಳು ರಕ್ತವೆಂಬ ನೀರಿನಲ್ಲಿ ಮುಣುಗಿ ಏಳುತ, ಮೈಯೆಲ್ಲ ರಕ್ತಮಯವಾಗಿದ್ದುವು. ಅವುಗಳ—ಹೊಟ್ಟೆ ತೋಳು ಕಿವಿ ತುಟಿ ಮೂಗು—ಇವುಗಳು, ಉದ್ದವಾಗಿ ಜೋಲಾಡುತಿದ್ದುವು ||೩೨||

ರಕ್ತ ಮಾಂಸಗಳ ಮಹಾಪಂಕ (ಕೆಸರು) ದಲ್ಲಿ, ಪರಸ್ಪರವಾಗಿ ಆಲಿಂಗನವನ್ನು ಅಭ್ಯಸಿಸುತಿದ್ದುವು. ಪೂರ್ವದಲ್ಲಿ ಮಂದರಪರ್ವತದಿಂದ ಅಲ್ಲೋಲಕಲ್ಲೋಲವಾದ ಕ್ಷೀರಸಮುದ್ರದಂತೆ, ಮಹಾಕಲಕಲಮಾಡುತಿದ್ದುವು ||೩೩||

ಬಳಿಕ, ವಿದೂರಥನು ಸಿಂಧುರಾಜನಿಗೆ ಹೇಗೆ ಮೊದಲು ಮಾಯಾಪ್ರಯೋಗವನ್ನು

---

1. ಉನ್ಮಜ್ಜತ್ ಘೃಲ್ಲಸತ್ತನು ಇತಿ ಚ್ಛೇದಃ. ಘೃತ್ = ಕ್ಷರತ್, ರಕ್ತಮಿತ್ಯರ್ಥಃ. ತೇನ ಲಸನ್ತೀ ತನುರ್ಯಸ್ಯ.
2. ಆರ್ಷಃ ಪ್ರಯೋಗಃ.

ತೇನಾಪಿ ತಸ್ಯಾಶು ತಥಾ ಕೃತೋ ಬುದ್ಧ್ವಾ ಸಲಾಘವಮ್ ॥೩೪॥
ವೇತಾಳಾಸ್ತ್ರಂ ತತೋ ದತ್ತೇ ತೇನೋತ್ತಸ್ಥುಃ ಶವವ್ರಜಾಃ ।
ಅಮೂರ್ಧಾನಃ ಸಮೂರ್ಧಾನೋ ವೇತಾಳಾವೇಶವಲ್ಗಿತಾಃ ॥೩೫॥
ತತಃ ಪಿಶಾಚವೇತಾಳರೂಪಿಕೋಗ್ರಕಬನ್ಧವತ್ ।
ತದ್ಬಭೂವ ಬಲಂ ಭೀಮಂ ಉರ್ವೀನಿಗರಣಕ್ಷಮಮ್ ॥೩೬॥
ಅಥೇತರೋಪಿ ಭೂಪಾಲೋ ಮಾಯಾಂ ಸಞ್ಚಾರ್ಯ ತಾಂ ಗುರೌ ।
ರಾಕ್ಷಸಾಸ್ತ್ರಂ ಸಸರ್ಜಾಥ ತ್ರೈಲೋಕ್ಯಗ್ರಹಣೋನ್ಮುಖಮ್ ॥೩೭॥
ಉದಗುಃ ಪರ್ವತಾಕಾರಾಃ ಸರ್ವತಃ ಸ್ಥೂಲರಾಕ್ಷಸಾಃ ।
ದೇಹಮಾಶ್ರಿತ್ಯ ನಿಷ್ಕ್ರಾನ್ತಾಃ ಪಾತಾಳಾನ್ನರಕಾಇವ ॥೩೮॥
ಅಥೋದಭೂದ್ಬಲಂ ಭೀಮಂ ಸಸುರಾಸುರಭೀತಿದಮ್ ।
ಗರ್ಜದ್ರಕ್ಷೋಮಹಾನಾದವಾದ್ಯನೃತ್ಯತ್ಕಬನ್ಧಕಮ್ ॥೩೯॥
ಮೇದೋಮಾಂಸೋಪದಂಶಾಢ್ಯಂ ರುಧಿರಾಸವಸುನ್ದರಮ್ ।

ಮಾಡಿದನೋ, ಸಿಂಧುರಾಜನೂ ಹಾಗೆಯೇ ಅವನಮೇಲೆ ಸಚಮತ್ಕಾರವಾಗಿ ಮಾಯಾ ಪ್ರಯೋಗವನ್ನು ಮಾಡಿದನು ॥೩೪॥

ಹೇಗೆಂದರೆ:—ಸಿಂಧುರಾಜನು ವೇತಾಳಾಸ್ತ್ರವನ್ನು ಪ್ರಯೋಗಿಸಿದನು. ಅದರಿಂದ, ಪೂರ್ವದಲ್ಲಿ ಬಿದ್ದಿದ್ದ—ತಲೆಯಿಲ್ಲದೆಯೂ ತಲೆಯುಂಟಾಗಿಯೂ ಇರುವ—ಹೆಣದ ಗುಂಪುಗಳು, ಪಿಶಾಚಾಕ್ರಮಣದಿಂದ ಚಂಚಲಗಳಾಗಿ ಎದ್ದುವು ॥೩೫॥

ಬಳಿಕ, ಪಿಶಾಚ ವೇತಾಳ ರೂಪಿಕೆ— ಇವುಗಳಿಂದ ಆಕ್ರಮಿಸಲ್ಪಟ್ಟು, ಅಲ್ಲಿದ್ದ ಕಬಂಧಗಳೂ ಬಹುಕ್ರೂರವಾಗಿ ಕಾಣಿಸುತಿದ್ದುವು. ಇಂತಹ ಕಬಂಧಗಳಿಂದ ಪರಿಪೂರ್ಣವಾಗಿ ಭಯಂಕರವಾಗಿರುವ ಆ ಸೈನ್ಯವು, ಭೂಮಿಯನ್ನೇ ನುಂಗಿಬಿಡುವಂತೆ ತೋರಿತು ॥೩೬॥

ಅನಂತರದಲ್ಲಿ, ಪ್ರಥಮತಃ ಮಾಯಾಪ್ರಯೋಗ ಮಾಡಿ ತೋರಿಸಿಕೊಟ್ಟುದುದರಿಂದ ಗುರುಸಮಾನನಾದ ಸಿಂಧುರಾಜನಮೇಲೆ, ವಿದೂರಥನೂ ಅಂತಹ ಮಾಯೆಯನ್ನು ಪ್ರಯೋಗಿಸಿ, ಆಮೇಲೆ—ತ್ರೈಲೋಕ್ಯವನ್ನೂ ನುಂಗಿಬಿಡುವುದರಲ್ಲಿ ಸಮರ್ಥವಾದ ರಾಕ್ಷಸಾಸ್ತ್ರವನ್ನು ಬಿಟ್ಟನು ॥೩೭॥

ಆಗ, ಪರ್ವತಸಮಾನರಾಗಿ ಸ್ಥೂಲರಾಗಿರುವ ರಾಕ್ಷಸರು ನಾಲ್ಕುಕಡೆಯಲ್ಲಿಯೂ ಉದ್ಭವಿಸಿದರು. ಅವರು, ಶರೀರಗ್ರಹಣಮಾಡಿ ಪಾತಾಳದದೆಸೆಯಿಂದ ಹೊರಟುಬಂದಿರುವ ಸಾಕ್ಷಾನ್ನರಕಲೋಕಗಳೋ ಎಂಬಂತೆ ಕಾಣಿಸುತಿದ್ದರು ॥೩೮॥

ಬಳಿಕ, ದೇವಾಸುರರಿಗೆಲ್ಲ ಭಯವುಂಟುಮಾಡತಕ್ಕ ಮಹಾರೌದ್ರವಾದ ರಾಕ್ಷಸ ಸೈನ್ಯವುದ್ಭವಿಸಿತು. ಅಲ್ಲಿ ರಾಕ್ಷಸರು ಮಾಡುವ ಗರ್ಜನೆಯೆಂಬ ವಾದ್ಯವನ್ನನುಸರಿಸಿ, ಅದಕ್ಕೆ ತಕ್ಕಂತೆ ಕಬಂಧಗಳು ನರ್ತನಮಾಡುತಿದ್ದುವು ॥೩೯॥

ಮತ್ತು, ಆ ರಾಕ್ಷಸ ಸೈನ್ಯವು, ಮೇದೋಮಾಂಸಗಳೆಂಬ ಉಪದಂಶ (ಉಪ್ಪಿನಕಾಯಿ) ವನ್ನು ಮಧ್ಯಮಧ್ಯದಲ್ಲಿ ರುಚಿ ನೋಡುತ, ರಕ್ತವೆಂಬ ಮದ್ಯವನ್ನು ಪಾನಮಾಡಿ

ಕ್ಷೀಬಕೂಶ್ಮಾಣ್ಡವೇತಾಳಯಕ್ಷತಾಣ್ಡವಸುನ್ದರಮ್ ‖೪೦‖

ಕೂಶ್ಮಾಣ್ಡಕೋತ್ತಾಣ್ಡವದಣ್ಡಪಾದ
ಕ್ಷುಬ್ಧಾಸೃಗುತ್ಕ್ಷಿಪ್ತತರಙ್ಗಸಿಕ್ತೈಃ ।
ಸನ್ಧ್ಯಾಭ್ರರಾಗೋತ್ಕರಕೋಟಿಕಾನ್ತಿ
ಭೂತೈರಸೃಕ್ಸ್ರೋತಸಿ ದತ್ತಸೇತು ‖೪೧‖

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ತೃತೀಯಾಸ್ತ್ರಯುದ್ಧ
ವರ್ಣನಂ ನಾಮ ಏಕೋನಪಞ್ಚಾಶಃ ಸರ್ಗಃ.

ಮತ್ತವಾಗಿದ್ದಿತು. ಕೂಶ್ಮಾಂಡ ವೇತಾಳಗಳೆಂಬ ಪಿಶಾಚಗಳು ಮದಿಸಿ ಮಾಡುತಿರುವ ನರ್ತನದಿಂದ, ಅಲ್ಲಿ ವಿಶೇಷವಾಗಿ ಅಲಂಕಾರವುಂಟಾಯ್ತು ॥೪೦॥

ಇನ್ನೂ, ಅಲ್ಲಿ ಕೂಶ್ಮಾಂಡಗಳು ಸ್ವೇಚ್ಛೆಯಾಗಿ ನರ್ತನಮಾಡುತಿರುವುದರಿಂದ, ಅಲ್ಲಿರುವ ರಕ್ತಪ್ರವಾಹದಲ್ಲಿ ತೆರೆಗಳು ಹುಟ್ಟುತಿದ್ದುವು; ಆ ತೆರೆಗಳು ಅಲ್ಲಿರುವ ಪ್ರಾಣಿಗಳ ಮೇಲೆಲ್ಲ ಬಿದ್ದು—ಆ ಪ್ರಾಣಿಗಳು ನೆನೆದಿರುವುದರಿಂದ, ಅವುಗಳೆಲ್ಲವೂ ಸಂಧ್ಯಾರಾಗದಿಂದ ವ್ಯಾಪ್ತವಾದಂತೆ ಕಾಣುತಿದ್ದುವು. ಇಂತಹ ಅಸಂಖ್ಯಾಕವಾದ ಪ್ರಾಣಿಗಳು, ಆ ರಕ್ತಪ್ರವಾಹದಲ್ಲಿ ದಟ್ಟವಾಗಿ ನಿಂತುಕೊಂಡು, ಸೇತುವೆಯನ್ನು ಕಟ್ಟಿದಂತೆ ಮಾಡಿದುವು ॥೪೧॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಮೂರನೆಯ ಅಸ್ತ್ರಯುದ್ಧ
ವರ್ಣನೆಯೆಂಬ ನಾಲ್ವತ್ತೊಂಭತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚಾಶಃ ಸರ್ಗಃ.

ಶ್ರೀವಸಿಷ್ಠಉವಾಚ.

ತಸ್ಮಿಂಸ್ತದಾ ವರ್ತಮಾನೇ ಘೋರೇ ಸಮರವಿಭ್ರಮೇ ।
ಸರ್ವಾರಿಸೈನ್ಯನಾಶಾರ್ಥಂ ಏಕಂ ಸ್ವಬಲಶಾನ್ತಯೇ ॥೧॥
ಸಸ್ಮಾರ ಸ್ಮೃತಿಮಾನಗ್ರ್ಯೋ ಮಹೋದಾರಾಧಿಧೈರ್ಯಭೃತ್ ।
ಅಸ್ತ್ರಮಸ್ತ್ರೇಶ್ವರಂ ಶ್ರೀಮತ್ ವೈಷ್ಣವಂ ಶಙ್ಕರೋಪಮಮ್ ॥೨॥
ಅಥ ಯೋಸೌ ಶರಸ್ತೇನ ವೈಷ್ಣವಾಸ್ತ್ರಾಭಿಮನ್ತ್ರಿತಃ ।
ಮುಕ್ತಸ್ತಸ್ಯ ಫಲಪ್ರಾನ್ತಾತ್ ಉಲ್ಮುಕಾದಿ ವಿನಿರ್ಯಯೌ ॥೩॥
ಪಙ್ಕ್ತಯಃ ಸ್ಫಾರಚಕ್ರಾಣಾಂ ಶತಾರ್ಕೀಕೃತದಿಕ್ತಟಾಃ ।

ಉತ್ಪತ್ತಿಪ್ರಕರಣದಲ್ಲಿ ಐವತ್ತನೆಯ ಸರ್ಗವು

ಅತ್ರಾಸ್ತ್ರಯೋರ್ವೈಷ್ಣವಯೋಃ ಯುದ್ಧಂ ವಿರಥತಾ ದ್ವಯೋಃ ।
ಮೃತಿರ್ವಿದೂರಥಸ್ಯಾಪಿ ಗೃಹಾನೀತಸ್ಯ ವರ್ಣ್ಯತೇ ॥

ಎರಡು ವೈಷ್ಣವಾಸ್ತ್ರಗಳಿಗೆ ಪರಸ್ಪರ ಯುದ್ಧವೂ, ಇಬ್ಬರು ರಾಜರ ರಥಗಳೂ ಮುರಿದುಹೋಗುವಿಕೆಯೂ, ವಿದೂರಥನನ್ನು ಮನೆಗೆ ಕರೆದುಕೊಂಡು ಬಂದಬಳಿಕ ಅವನ ಮರಣವಾಗುವಿಕೆಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ಹೇಳಲುಪಕ್ರಮಿಸಿದರು:—

ವತ್ಸ! ರಾಮ! ಆಗ ಅರೀತಿಯಾಗಿ ಘೋರವಾದ ಯುದ್ಧಾಡಂಬರವು ನಡೆಯುತ್ತಿರುವಾಗ, ಸಮಸ್ತವಾದ ಶತ್ರುಸೈನ್ಯವೂ ನಾಶವಾಗುವುದಕ್ಕೋಸ್ಕರವೂ, ತನ್ನ ಸೈನ್ಯಕ್ಕೆ ಶಾಂತಿಸುಖವುಂಟಾಗುವುದಕ್ಕೋಸ್ಕರವೂ ಕೂಡ, ಜ್ಞಾನಶಾಲಿಯಾದ—ಪ್ರತಿಭಾವಂತರಲ್ಲಿ ಅಗ್ರಗಣ್ಯನಾದ—ಅತ್ಯಧಿಕ ಧೈರ್ಯಶಾಲಿಯಾದ-ಸಿಂಧುರಾಜನು,ಕಾಲಾಗ್ನಿರುದ್ರಸದೃಶವಾದ ಅತ್ಯುತ್ತಮವಾದ ವೈಷ್ಣವಾಸ್ತ್ರವನ್ನು ಸ್ಮರಿಸಿಕೊಂಡನು ॥೧—೨॥

ಅನಂತರ, ಆ ಸಿಂಧುರಾಜನು ವೈಷ್ಣವಾಸ್ತ್ರದಿಂದ ಅಭಿಮಂತ್ರಿಸಿ ಯಾವ ಬಾಣವನ್ನು ಬಿಟ್ಟನೋ, ಅದರ ಅಲಗಿನ ತುದಿಯಿಂದ ಕೊಳ್ಳಿಯೇ ಮುಂತಾದ ಅನೇಕ ಕ್ರೂರಪದಾರ್ಥಗಳು ಹೊರಟುವು ॥೩॥

ಆ ವೈಷ್ಣವಾಸ್ತ್ರದಿಂದ ಹೊರಟ ಚಕ್ರಾಯುಧಪರಂಪರೆಗಳು, ದಿಕ್ಕುಗಳಲ್ಲೆಲ್ಲ ಏಕಕಾಲದಲ್ಲಿನೂರಾರು ಸೂರ್ಯಮಂಡಲಗಳುದಯಿಸುವಂತೆ ಮಾಡಿದುವು; ಗದಾಯುಧಗಳು, ಆಕಾಶಮಂಡಲದಲ್ಲಿ ನೂರಾರು ಬಿದಿರುಬೊಂಬುಗಳಿರುವಂತೆ ಮಾಡಿದುವು; ನೂರಾರು ಅಲಗುಳ್ಳ

ಗದಾನಾಮಭಿಯಾನ್ತೀನಾಂ ಶತವಂಶೀಕೃತಾಮ್ಬರಾಃ ॥೪॥
ವಜ್ರಾಣಾಂ ಶತಧಾರಾಣಾಂ ತೃಣರಾಜೀಕೃತಾಮ್ಬರಾಃ ।
ಪಟ್ಟಿಶಾನಾಂ ಸಪದ್ಮಾನಾಂ ದೀನವೃಕ್ಷೀಕೃತಾಮ್ಬರಾಃ ॥೫॥
ಶರಾಣಾಂ ಶಿತಧಾರಾಣಾಂ ಪುಷ್ಪಜಾಲೀಕೃತಾಮ್ಬರಾಃ ।
ಖಡ್ಗಾನಾಂ ಶ್ಯಾಮಲಾಙ್ಗಾನಾಂ ಪತ್ರರಾಶೀಕೃತಾಮ್ಬರಾಃ ॥೬॥
ಅಥ ರಾಜಾ ದ್ವಿತೀಯೋಽಪಿ ವೈಷ್ಣವಾಸ್ತ್ರಸ್ಯ ಶಾನ್ತಯೇ ।
ದದೌ ವೈಷ್ಣವಮೇವಾಸ್ತ್ರಂ ಶತ್ರುನಿಷ್ಪಾವಪೂರಕಮ್ ॥೭॥
ತತೋಽಪಿ ನಿರ್ಯಯುರ್ನದ್ಯೋ ಹೇತೀನಾಂ ಹತಹೇತಯಃ ।
ಶರಶಕ್ತಿಗದಾಪ್ರಾಸಪಟ್ಟಿಶಾದಿಪಯೋಮಯಾಃ ॥೮॥
ಶಸ್ತ್ರಾಸ್ತ್ರಸರಿತಾಂ ತಾಸಾಂ ವ್ಯೋಮ್ನಿ ಯುದ್ಧಮವರ್ತತ ।
ರೋದೋರನ್ಧ್ರಕ್ಷಯಕರಂ ಕುಲಶೈಲೇನ್ದ್ರದಾರಣಮ್ ॥೯॥
ಶರಪಾತಿತಶೂಲಾಸಿಖಡ್ಗಕುಟ್ಟಿತಪಟ್ಟಿಶಮ್ ।
ಮುಸಲಪ್ರತನಾಪ್ರಾಸಶೂಲಶಾತಿತಶಕ್ತಿಕಮ್ ॥೧೦॥
ಶರಾಮ್ಬುರಾಶಿಮಥನಮತ್ತಮುದ್ಗರಮನ್ದರಮ್ ।

ವಜ್ರಾಯುಧಗಳು, ಅಂತರಿಕ್ಷದಲ್ಲಿ ಹುಲ್ಲು ಹರಡಿರುವಂತೆ ಕಂಡುವು; ಪದ್ಮಮುಕುಳಗಳಂತಿರುವ ಅಲಗುಗಳಿಂದ ಯುಕ್ತವಾದ ಪಟ್ಟಿಶಾಯುಧಪರಂಪರೆಗಳು, ಅಂತರಿಕ್ಷದಲ್ಲಿ—ಕತ್ತರಿಸಿಹಾಕಿರುವ ಮರಗಳಂತೆ ಕಾಣಿಸಿದುವು; ಹರಿತವಾದ ಅಲಗುಳ್ಳ ಬಾಣಪಂಕ್ತಿಗಳು, ಆಕಾಶದಲ್ಲಿ ಪುಷ್ಪಸಮೂಹಗಳಿರುವಂತೆ ವ್ಯಾಪಿಸಿದುವು; ಕಪ್ಪಗಿರುವ ಖಡ್ಗಸಮೂಹಗಳು, ಅಂತರಿಕ್ಷದಲ್ಲಿ ಎಲೆಗಳ ರಾಶಿಯಿರುವಂತೆ ತೋರಿದುವು. ಹೀಗಿರುವ ಚಕ್ರಾಯುಧಮೊದಲಾದುವುಗಳು, ಆ ವೈಷ್ಣವಾಸ್ತ್ರದಿಂದ ಹೊರಟುವು ॥೪—೬॥

ಬಳಿಕ, ವಿದೂರಥನೂ ಕೂಡ, ಆ ವೈಷ್ಣವಾಸ್ತ್ರದ ಉಪಶಾಂತಿಗೋಸ್ಕರವಾಗಿ, ಶತ್ರುಪರಾಕ್ರಮಪರಿಹಾರಕವಾದ ವೈಷ್ಣವಾಸ್ತ್ರವನ್ನೇ ಪ್ರಯೋಗಿಸಿದನು ॥೭॥

ಅದರ ದೆಸೆಯಿಂದಲೂ, ಶರ ಶಕ್ತಿ ಗದೆ ಪ್ರಾಸ ಪಟ್ಟಿಶ—ಇತ್ಯಾದಿ ರೂಪವಾದ ಜಲದಿಂದ ಪರಿಪೂರ್ಣವಾಗಿರುವ ಆಯುಧನದಿಗಳು ಹೊರಟುವು. ಅವು, ಶತ್ರುವಿನ ಆಯುಧಗಳನ್ನೆಲ್ಲ ನಾಶಪಡಿಸುತ್ತಿದ್ದುವು ॥೮॥

ನದಿಯಂತೆ ಪ್ರವಹಿಸುತಿರುವ ಆ ಶಸ್ತ್ರಾಸ್ತ್ರಗಳಿಗೆ ಅಂತರಿಕ್ಷದಲ್ಲಿ ಯುದ್ಧವುಪಕ್ರಮಿಸಿತು. ಈ ಯುದ್ಧದಿಂದ, ಭೂಮ್ಯಾಕಾಶಗಳ ರಂಧ್ರವೇ ಮುಚ್ಚಿಹೋಯ್ತು; ಕುಲಪರ್ವತಗಳೆಲ್ಲವೂ ಏಟಿಗೆ ಸಿಕ್ಕಿ ಬಿದ್ದುಹೋದುವು ॥೯॥

ಶರಗಳಿಂದ, ಶೂಲಗಳೂ ಕತ್ತಿಗಳೂ ಭಗ್ನವಾದುವು; ಖಡ್ಗಗಳು ಪಟ್ಟಿಶಾಯುಧಗಳನ್ನು ಚೂರುಮಾಡಿದುವು; ವಿಸ್ತಾರವಾಗಿ ಹರಡಿಕೊಳ್ಳುತಿರುವ ಮುಸಲಗಳೂ ಶೂಲಗಳೂ, ಶಕ್ತ್ಯಾಯುಧಗಳನ್ನು ಕತ್ತರಿಸಿಬಿಟ್ಟುವು ॥೧೦॥

ಮುದ್ಗರಾಯುಧಗಳೆಂಬ ಮಂದರಪರ್ವತಗಳು, ಬಾಣಗಳೆಂಬ ಸಮುದ್ರವನ್ನು ಮಥನಮಾಡುವುದರಲ್ಲಿ ಉದ್ಯುಕ್ತಗಳಾಗಿದ್ದುವು. ಗದಾಯುಧಗಳಲ್ಲಿರುವ ಅಲಗುಗಳು, ವದ

ಗದಾವದನತೋ[1] ಯುಕ್ತಂ ದುರ್ವಾರಾಸ್ತ್ರನಿಭಾಸಿನಿ[2] ||೧೧||
[3]ರಿಷ್ಟಾರಿಷ್ಟಪ್ರಶಮನಭ್ರಮತ್ಕುನ್ತೇನ್ದುಮಣ್ಡಲಮ್ |
ಪ್ರಾಸಪ್ರಸರಸಂರಮ್ಭಪ್ರೋದ್ಯತಾನ್ತಕೃತಾನ್ತಕಮ್ ||೧೨||
ಚಕ್ರಾವಕುಣ್ಠಿತೋರ್ಧ್ವಾಸ್ತ್ರಂ ಸರ್ವಾಯುಧಕ್ಷಯಂಕರಮ್ |
ಶಬ್ದಸ್ಫುಟದ್ವಿರಿಞ್ಚಾಣ್ಡಂ ಘಾತಭಗ್ನಕುಲಾಚಲಮ್ ||೧೩||
ಧಾರಾನಿಕೃತ್ತಶಸ್ತ್ರೌಘಂ ಅಸ್ತ್ರಯೋರ್ಯುಧ್ಯಮಾನಯೋಃ |
ಮದಸ್ತ್ರವಾರಣೇನೇವ ವಜ್ರಾವಿಜರಪರ್ವತಮ್ ||೧೪||
ಶಙ್ಕಶಙ್ಕಿತಸೂತ್ಕಾರಕಾಶಿಶೂಲಶಿಲಾಶತಮ್ |
ಭುಶುಣ್ಡೀನಿರ್ಜಿತೋದ್ದಣ್ಡಭಿನ್ದಿಪಾಲೋಗ್ರಮಣ್ಡಲಮ್ ||೧೫||

ನಾಕಾರಗಳಾಗಿ ವ್ಯಾಪಿಸಿದ್ದುವು. ಅಸಿನಿಯೆಂಬ ಆಯುಧವಿಶೇಷಗಳು, ಅಸ್ತ್ರಯುಕ್ತರಾದ ಪ್ರತಿಭಟರಂತೆ ತಡೆಯಲಸಾಧ್ಯವಾಗಿದ್ದುವು ||೧೧||

ತಮ್ಮತಮ್ಮ ಸೈನ್ಯಗಳಿಗುಂಟಾಗಿದ್ದ ಹಿಂಸೆಯೆಂಬ ಅರಿಷ್ಟವನ್ನು ಶಾಂತಿಗೊಳಿಸುವುದಕ್ಕಾಗಿ, ಕುಂತಾಯುಧಗಳೆಂಬ ಚಂದ್ರಮಂಡಲಗಳು ಭ್ರಮಿಸುತ್ತಿದ್ದುವು. ಮತ್ತು ಆ ಯುದ್ಧಗಳಲ್ಲಿ, ಪ್ರಾಸಾಯುಧಗಳು ಪ್ರಸರಿಸಿ ಸಂರಂಭಪಡುತಿರುವುದರಿಂದ,ಯಮದೇವನು ಜನವಿನಾಶಕ್ಕೆ ಪ್ರಯತ್ನಪಟ್ಟು ಬಂದಿರುವನೋ ಎಂಬಂತೆ ಇದ್ದಿತು ||೧೨||

ಮೇಲ್ಮುಖವಾಗಿ ಹೋಗುತಿದ್ದ ಅಸ್ತ್ರಗಳನ್ನು, ಚಕ್ರಗಳು ಮಧ್ಯದಲ್ಲಿ ಭಂಗಪಡಿಸಿದುವು; ಸರ್ವಾಯುಧಗಳಿಗೂ ಅಲ್ಲಿ ಕ್ಷಯವಾಗುತಿದ್ದಿತು; ಅದರ ಶಬ್ದದಿಂದಲೇ ಬ್ರಹ್ಮಾಂಡವು ಸೀಳಿಹೋಯಿತು; ಏಟನಿಂದ ಸಮಸ್ತಕುಲಪರ್ವತಗಳೂ ಭಗ್ನವಾದುವು ||೧೩||

ಅಯ್ಯಾ! ರಾಮ! ಮತ್ತು, ಪೂರ್ವದಲ್ಲಿ ನನಗೂ (ವಸಿಷ್ಠರು) ಶ್ರೀ ವಿಶ್ವಾಮಿತ್ರರಿಗೂ ಯುದ್ಧ ಸಂಭವಿಸಿದಾಗ, ನಮ್ಮಿಬ್ಬರ ಅಸ್ತ್ರಗಳೂ ಪರಸ್ಪರವಾಗಿ ಒಂದರ ಶಕ್ತಿಯನ್ನು ಮತ್ತೊಂದು ತಡೆಯುತ್ತಿದ್ದಂತೆಯೇ, ಆ ಸಿಂಧುವಿದೂರಥರ ವೈಷ್ಣವಾಸ್ತ್ರಗಳೂ ಪರಸ್ಪರವಾಗಿ ಯುದ್ಧಮಾಡುತಿದ್ದುವು; ಇವುಗಳು, ತಮ್ಮಲ್ಲಿರುವ ಆಯುಧಗಳ ಅಲಗಿನಿಂದ, ಅನೇಕವಾದ ಶಸ್ತ್ರಸಮುದಾಯಗಳನ್ನು ಕತ್ತರಿಸಿಬಿಟ್ಟುವು; ಆ ಸಮಯದಲ್ಲಿ ಸೃಷ್ಟವಾಗಿದ್ದ ಪರ್ವತಗಳನ್ನು, ವಜ್ರಾಯುಧವೂ ಕತ್ತರಿಸುವುದಕ್ಕೆ ಅಸಮರ್ಥವಾದಂತಿದ್ದಿತು ||೧೪||

ಆ ಸಮಯದಲ್ಲಿ ಹೊರಟಿದ್ದ ಅಸಂಖ್ಯಾತವಾದ ಶೂಲಗಳೂ ಶಿಲೆಗಳೂ ಬರುವುದೇ ಕಾಣುತಿರಲಿಲ್ಲ; ಅವುಗಳು ಮಾಡುವ ಸೂತ್ಕಾರಶಬ್ದದಿಂದ ಮಾತ್ರವೇ ಗೊತ್ತಾಗುತಿದ್ದುವು; ಅವುಗಳು ಸೈನಿಕರ ದೇಹದಲ್ಲಿ ವ್ಯಾಪಿಸಿದಾಗ, ಕೀಲುಮಾಡಿ ಬಿಗಿದಿರುವರೋ ಎಂಬಂತೆ ಭಾವನೆಯುಂಟುಮಾಡುತಿದ್ದುವು ||೧೫||

---

1. ವದನತಃ = ಸಾರ್ವವಿಭಕ್ತಿಕಸ್ತಸಿಃ, ವದನೈಃ = ಮುಖಸದೃಶೈಃ ಅಗ್ರಭಾಗೈರಿತಿ ಯಾವತ್.
2. ಅಸಿನೀ = ಖಡ್ಗಭೇದಃ.
3. ರಿಷ್ಟಂ = ಹಿಂಸನಂ, ರಿಷ ಹಿಂಸಾಯಾಂ, ಭಾವೇ ಕ್ತಃ.

ಪರಶೂಲಕರಾಭ್ಯೈಕಪರಶೂಲೈಕಲಮ್ಬಿತಮ್ ।
ಮಹದುಚ್ಛಿನ್ನಚಞ್ಚಾರಚಾರಣಂ ಶತ್ರುಮಾರಣಮ್ ॥೧೬॥
ಸ್ಫುಟಚ್ಚಟಚಟಾಸ್ಫೋಟರುದ್ಧತ್ರಿಪಥಗಾರಯಮ್ ।
ಹೇತ್ಯಸ್ತ್ರಚೂರ್ಣಸಮ್ಭಾರಮಹಾಧೂಪವಿತಾನಕಮ್ ॥೧೭॥
ಅನ್ಯೋನ್ಯಶಸ್ತ್ರಸಙ್ಘಟ್ಟಾತ್ ಭ್ರಮಜ್ಜಾಲೋಲ್ಲಸತ್ತಟಿತ್ ।
ಶಬ್ದಸ್ಫುಟದ್ವಿರಿಞ್ಚಾಣ್ಡಂ ಘಾತಭಗ್ನಕುಲಾಚಲಮ್ ॥೧೮॥
ಧಾರಾನಿಕೃತ್ತಶಸ್ತ್ರೌಘಂ ಅಸ್ತ್ರಯೋರುಧ್ಯಮಾನಯೋಃ ।
ಮದಸ್ತ್ರವಾರಣೇನೇವ ಕಾಲೋಽಪಾಯೋಽಚಲಾತ್ಮನಃ ॥೧೯॥
ಅಯಂ ಕಿಯದ್ಬಲ ಇತಿ ಸಿನ್ಧೌ ತಿಷ್ಠತಿ ಹೇಲಯಾ ।
ವಿದೂರಥೋಽಸ್ತ್ರಮಾಗ್ನೇಯಂ ತತ್ಯಾಜಾಶನಿಶಬ್ದವತ್ ॥೨೦॥
ಜ್ವಾಲಯಾಮಾಸ ಸ ರಥಂ ಸಿನ್ಧೋಃ ಕಕ್ಷಮಿವಾರಸಮ್ ।
ಏತಸ್ಮಿನ್ನನ್ತರೇ ವ್ಯೋಮ್ನಿ ಹೇತಿನಿರ್ವಿವರೋದರೇ ॥೨೧॥

ಲೋಕೋತ್ತರವಾದ ತ್ರಿಶೂಲವನ್ನು ಕೈಯಲ್ಲಿ ಧರಿಸಿರುವ ಆ ಪ್ರಳಯಕಾಲರುದ್ರನಿಗೆ ಸಮಾನವಾಗಿ ಅತ್ಯುತ್ಕೃಷ್ಟವಾಗಿರುವ ಶೂಲಾಯುಧಗಳು, ಇತರವಾದ ಅಸ್ತ್ರಗಳನ್ನು ಭಗ್ನಪಡಿಸುತಿದ್ದುವು; ಆಯುಧಗಳು ಪ್ರವಾಹಾಕಾರವಾಗಿ ಹೋಗುತಿರುವಾಗ, ಮಧ್ಯದಲ್ಲಿಯೇ ಅವುಗಳನ್ನು ಪ್ರತಿಪಕ್ಷದ ಆಯುಧಗಳು ಕತ್ತರಿಸಿಬಿಡುತಿದ್ದುವು; ಆಗ ಅವು ಅತಿವಕ್ರಗಳಾಗಿ ನಾನಾವಿಧವಾಗಿ ಸಂಚಾರಮಾಡುತಿದ್ದುವು. ಇಂತಹ ಆಯುಧವಿಶೇಷಗಳಿಂದ, ಅಲ್ಲಿ ಶತ್ರುಗಳಿಗೆ ಪರಸ್ಪರ ನಿರ್ಬಂಧವುಂಟಾಗುತಿದ್ದಿತು ॥೧೬॥

ಆಗ ಉಂಟಾಗುತಿದ್ದ ಚಟಚಟ ಶಬ್ದಗಳಿಂದ, ಗಂಗಾನದೀ ವೇಗದ ಧ್ವನಿಗೂ ಪ್ರತಿಹತಿಯುಂಟಾಗಿಬಿಟ್ಟಿತು. ಆಯುಧಗಳೂ ಸಣ್ಣ ಸಣ್ಣ ಬಾಣಗಳೂ ಚೂರ್ಣವಾಗಿ, ಅಂತರಿಕ್ಷದಲ್ಲಿ ಹೊಗೆಯಂತೆ ಮೇಲುಕಟ್ಟಾಗಿ ನಿಂತಿದ್ದುವು ॥೧೭॥

ಶಸ್ತ್ರಗಳು ಪರಸ್ಪರವಾಗಿ ತಗಲುವುದರಿಂದ, ಬಲೆಯನ್ನು ಬೀಸಿದಂತೆ ಮಿಂಚು ಹೊಳೆಯುತಿದ್ದಿತು. ಆ ಶಬ್ದದಿಂದಲೂ, ಪೂರ್ವದಂತೆಯೇ ಬ್ರಹ್ಮಾಂಡಭಾಂಡವು ಒಡೆಯುವಂತೆಯೂ ಏಟನಿಂದ ಕುಲಪರ್ವತಗಳು ಸೀಳಿಹೋಗುವಂತೆಯೂ ಆದುವು ॥೧೮॥

ಅಯ್ಯಾ! ರಾಮ! ಪೂರ್ವದಂತೆಯೇ, ಹಿಂದೆ ನನ್ನ ಅಸ್ತ್ರದಿಂದ ತಡೆಯಾದಾಗಿನಂತೆ ಆಯೆರಡು ವೈಷ್ಣವಾಸ್ತ್ರಗಳೂ ಯುದ್ಧಮಾಡುತ್ತಿರುವಾಗ, ಆಯುಧಗಳ ಅಲಗಿನಿಂದ ಅನೇಕವಾಗಿ ಶಸ್ತ್ರಸಮೂಹಗಳು ಕತ್ತರಿಸಿಬೀಳುತಿದ್ದುವು. ಹೀಗೆ ಅಸ್ತ್ರಗಳನ್ನು ಪ್ರತ್ಯಸ್ತ್ರಗಳಿಂದ ನಿವಾರಣೆಮಾಡುತಿರುವುದು, ಯುದ್ಧದಲ್ಲಿ ಸ್ತಬ್ಧನಾಗಿಹೋಗಿದ್ದ ವಿದೂರಥನಿಗೆ ಕಾಲಕ್ಷೇಪಮಾಡುವ ಉಪಾಯವಾಗಿದ್ದಿತು ॥೧೯॥

ಆಗ, ಸಿಂಧುರಾಜನು ‘ ಇವನು ನನ್ನೆದುರಿಗೆ ಎಷ್ಟರವನು! ಇವನಿಗೆ ಎಷ್ಟು ಬಲವಿರುವುದು !! ’ ಎಂದು ಕೇವಲ ತಿರಸ್ಕಾರಭಾವದಿಂದ ನಿಂತಿರಲಾಗಿ, ವಿದೂರಥನು ಸಿಡಿಲಿನಂತೆ ಧ್ವನಿಮಾಡುತಿರುವ ಆಗ್ನೇಯಾಸ್ತ್ರವನ್ನು ಬಿಟ್ಟನು ॥೨೦॥

ಆ ಆಗ್ನೇಯಾಸ್ತ್ರದಿಂದ ಹುಟ್ಟಿದ ಅಗ್ನಿಯು, ಒಣಗಿದ ಪೊದರನ್ನು ಸುಡುವಂತೆ, ಸಿಂಧುರಾಜನ ರಥವನ್ನು ಉರಿಸಿತು. ಇಷ್ಟರೊಳಗಾಗಿ ಅಂತರಿಕ್ಷಪ್ರದೇಶವೆಲ್ಲವೂ ಆಯುಧಗ

ಸಸನ್ನಾಹಇವ ಪ್ರಾವೃಟ್ ಪಯೋದತಟಿನೀವ ಯಃ |
ಅಸ್ತ್ರೇ ರಾಜ್ಞೋಃ ಕ್ಷಣಂ ಕೃತ್ವಾ ಯುದ್ಧಂ ಪರಮದಾರುಣಮ್ |
ಅನ್ಯೋನ್ಯಂ ಶಮಮಾಯಾತೇ ಸವೀರ್ಯೇ ಸುಭಟಾವಿವ ||೨೦||
ಏತಸ್ಮಿನ್ನನ್ತರೇ ಸೋಗ್ನಿಃ ರಥಂ ಕೃತ್ವಾ ತು ಭಸ್ಮಸಾತ್ |
ಪ್ರಾಪ ದಗ್ಧ್ವಾ ವನಂ ಸಿನ್ಧುಂ ಮೃಗೇನ್ದ್ರಮಿವ ಕನ್ದರಾತ್ ||೨೩||
ಸಿನ್ಧುರಭ್ಯಾಸತೋಗ್ನ್ಯಸ್ತ್ರಂ ವಾರುಣಾಸ್ತ್ರೇಣ ವಾರಯನ್ |
ರಥಂ ತ್ಯಕ್ತ್ವಾವನಿಂ ಪ್ರಾಪ್ಯ ಖಡ್ಗಸ್ಫೋಟಕವಾನಭೂತ್ ||೨೪||
ಅಕ್ಷ್ಣೋರ್ನಿಮೇಷಮಾತ್ರೇಣ ರಥಾಶ್ವಾನಾಂ ರಿಪೋಃ ಖುರಾನ್ |
ಲುಲಾವ ಕರವಾಳೇನ ಮೃಣಾಳಾನೀವ ಲಾಘವಾತ್ ||೨೫||
ವಿದೂರಥೋಪಿ ವಿರಥೋ ಬಭೂವಾಸ್ಫೋಟಕಾಸಿವಾನ್ |
ಸಮಾಯುಧೌ ಸಮೋತ್ಸಾಹೌ ಚೇರತುರ್ಮಣ್ಡಲಾನಿ ತೌ ||೨೬||
ಖಡ್ಗೌ ಕ್ರಕಚತಾಂ ಯಾತೌ ಮಿಥಃ ಪ್ರಹರತೋಸ್ತಯೋಃ |
ದನ್ತಮಾಲೇ ಯಮಸ್ಯೇವ ಬಲೇ ಚರ್ವಯತಃ ಪ್ರಜಾಃ ||೨೭||

ಳಿಂದ ನಿರವಕಾಶವಾಗಿರುವಾಗ, ಆ ಸಿಂಧುವಿದೂರಥರಲ್ಲಿ ಒಬ್ಬನು ವರ್ಷಾಕಾಲದ ಮೇಘದಂತೆ ಬಾಣವರ್ಷಮಾಡುತಲೂ ಮತ್ತೊಬ್ಬನು ಮೇಘದಿಂದ ಜಲಪರಿಪೂರ್ಣವಾಗಿರುವ ನದಿಯಂತೆ ಬಾಣವೃಷ್ಟಿಯನ್ನು ವಹಿಸುತಲೂ ಇದ್ದರು. ಹೀಗಿರುವಾಗ, ಆಯಿಬ್ಬರು ರಾಜರ ವೈಷ್ಣವಾಸ್ತ್ರಗಳೂ, ಒಂದು ಕ್ಷಣಕಾಲ ಅತಿಘೋರವಾಗಿ ಯುದ್ಧಮಾಡಿ, ಮಹಾಭಟರಂತೆ, ಅಧಿಕವೀರ್ಯಯುಕ್ತಗಳಾಗಿದ್ದರೂ -ಇದರಿಂದ ಅದೂ ಅದರಿಂದ ಇದೂ—ಪರಸ್ಪರವಾಗಿ ಶಾಂತಿಹೊಂದಿಬಿಟ್ಟುವು ||೨೧—೨೨||

ಇಷ್ಟರೊಳಗಾಗಿಯೇ, ಕಾಡುಗಿಚ್ಚು ಕಾಡನ್ನೆಲ್ಲ ಸುಟ್ಟಬಳಿಕ ಗುಹೆಯಿಂದ ಹೊರಟ ಸಿಂಹವನ್ನು ಹೊಂದುವಂತೆ, ಆ ಆಗ್ನೇಯಾಸ್ತ್ರಾಗ್ನಿಯು ಸಿಂಧುರಾಜನ ರಥವನ್ನು ಭಸ್ಮಮಾಡಿ ಅನಂತರ ಸಿಂಧುರಾಜನಿಗೂ ವ್ಯಾಪಿಸಲುಪಕ್ರಮಿಸಿತು ||೨೩||

ಸಿಂಧುರಾಜನು, ಅಭ್ಯಾಸಾತಿಶಯವುಳ್ಳವನಾದಕಾರಣ—ನಿರಾತಂಕವಾಗಿ ವಾರುಣಾಸ್ತ್ರದಿಂದ ಆಗ್ನೇಯಾಸ್ತ್ರವನ್ನು ಶಾಂತಿಗೊಳಿಸಿ, ರಥವನ್ನು ಬಿಟ್ಟು ಭೂಮಿಗಿಳಿದವನಾಗಿ, ಖಡ್ಗಮೃಗದ ಚರ್ಮವನ್ನು ಕೈಗೆ ಮರೆಮಾಡಿಕೊಂಡನು ||೨೪||

ಅನಂತರ ಕಣ್ಣುಮುಚ್ಚಿಬಿಡುವುದರೊಳಗಾಗಿ, ಶತ್ರುವಾದ ವಿದೂರಥನ ರಥಾಶ್ವಗಳ ಗೊರಸನ್ನು, ಕೇವಲ ಚಮತ್ಕಾರವಾಗಿ, ತಾವರೆದಂಟಿನಂತೆ ಖಡ್ಗದಿಂದ ಕತ್ತರಿಸಿಬಿಟ್ಟನು||

ಆಗ ವಿದೂರಥನು ರಥಶೂನ್ಯನಾಗಿ, ಚರ್ಮವನ್ನೂ ಕತ್ತಿಯನ್ನೂ ಧರಿಸಿದವನಾದನು. ಬಳಿಕ, ಅವರಿಬ್ಬರೂ ಸಮವಾದ ಆಯುಧಗಳೂ ಸಮವಾದ ಉತ್ಸಾಹವೂ ಉಳ್ಳವರಾಗಿ ಅಲ್ಲಿ ಸಂಚರಿಸುತ್ತಿದ್ದರು ||೨೬||

ಪರಸ್ಪರ ಪ್ರಹಾರಮಾಡುತಿರುವ ಅವರಿಬ್ಬರ ಖಡ್ಗಗಳೂ, ಶತ್ರುಗಳ ಚರ್ಮವೊದಲಾದುವುಗಳನ್ನು ಕತ್ತರಿಸುವ ವಿಷಯದಲ್ಲಿ ಗರಗಸವಾಗಿದ್ದುವು. ಇಂತಹ ಖಡ್ಗಗಳು, ಯಮರಾಜನ ದಂತಪಂಕ್ತಿಯಂತೆ ಭಯಂಕರಗಳಾಗಿ, ಎರಡು ಸೈನ್ಯದಲ್ಲಿಯೂ ಪ್ರಜೆಗಳನ್ನು ಅಗಿಯುತ ಬಂದುವು||೨೭||

ಶಕ್ತಿಮಾದಾಯ ಚಿಕ್ಷೇಪ ಖಡ್ಗಂ ತ್ಯಕ್ತ್ವಾ ವಿದೂರಥಃ ।
ಸಿನ್ಧ್ವಮ್ಬು ಘುರ್ಘುರಾರಾವೋ ಮಹೋತ್ಪಾತಇವಾಶನಿಃ ॥೨೮॥
ಅವಿಚ್ಛಿನ್ನಾ ಸಮಾಯಾತಾ ಪತಿತಾ ಸಾಸ್ಯ ವಕ್ಷಸಿ ।
ಅಪ್ರಿಯಸ್ಯ ಯಥಾ ಭರ್ತುಃ ಅನಿಚ್ಛನ್ತೀ ಸ್ವಕಾಮಿನೀ ॥೨೯॥
ತೇನ ಶಕ್ತಿಪ್ರಹಾರೇಣ ನಾಸೌ ಮರಣಮಾಪ್ತವಾನ್ ।
ಕೇವಲಂ ರುಧಿರವ್ರಾತಂ ನಾಗೋ ಜಲಮಿವಾತ್ಯಜತ್ ॥೩೦॥
ತದ್ದೇಶಲೀಲಾ ತಂ ದೃಷ್ಟ್ವಾ ಭಗ್ನಂ ತಮಿಇವೇನ್ದುನಾ ।
ಸವಿಕಾಸಘನಾನನ್ದಾ ಪೂರ್ವಲೀಲಾಮುವಾಚ ಹ ॥೩೧॥
ದೇವಿ ಪಶ್ಯ ನೃಸಿಂಹೇನ ಹತೋ ಭರ್ತ್ರಾಯಮಾವಯೋಃ ।
ಶಕ್ತಿಕೋಟಿನಖೈರ್ದೈತ್ಯಃ ಸಿನ್ಧುರುದ್ಧುರಕನ್ಧರಃ ॥೩೨॥
ಸರಸ್ಸ್ಥಲಸ್ಥನಾಗೇನ್ದ್ರಕರಫೂತ್ಕಾರವಾರಿವತ್ ।
ಪಿಷ್ಟೋರಸೋಸ್ಯ ನಿರ್ಯಾತಿ ರಕ್ತಂ ಚುಲಚುಲಾರವೈಃ ॥೩೩॥
ಹಾ ಕಷ್ಟಂ ರಥಮಾನೀತಂ ಸಿನ್ಧುರಾರೋಢುಮುದ್ಯತಃ ।

ಆಗ, ಮಹಾಪ್ರಳಯಕಾಲದಲ್ಲಿ ಘುರ್ಘುರಧ್ವನಿಮಾಡುತಿರುವ ಸಿಡಿಲು—ಸಮುದ್ರಜಲವನ್ನೆರಚುವಂತೆ, ವಿದೂರಥನು ಖಡ್ಗವನ್ನು ಪರಿತ್ಯಜಿಸಿ ಶಕ್ತ್ಯಾಯುಧವನ್ನು ತೆಗೆದುಕೊಂಡು ಪ್ರಯೋಗಿಸಿದನು ॥೨೮॥

ಆ ಶಕ್ತಿಯು, ಮಧ್ಯದಲ್ಲಿ ಯಾವ ಅಸ್ತ್ರದಿಂದಲೂ ಕತ್ತರಿಸಲ್ಪಡದೆ, ಅಪ್ರಿಯನಾದ ಪತಿಯ ವಕ್ಷಸ್ಥಳದಲ್ಲಿ ಇಚ್ಛೆಯಿಲ್ಲದ ಕಾಮಿನಿಯು ಬೀಳುವಂತೆ, ಆ ಸಿಂಧುರಾಜನ ವಕ್ಷಸ್ಥಳದಲ್ಲಿ ಬಿದ್ದಿತು ॥೨೯॥

ಆ ಶಕ್ತಿಪ್ರಹಾರದಿಂದ ಸಿಂಧುರಾಜನು ಮರಣಹೊಂದಿದವನಾಗಲಿಲ್ಲ; ಆದರೆ, ಆನೆಯು ತಾನು ಕುಡಿದಿದ್ದ ನೀರನ್ನು ಬಿಡುವಂತೆ, ಮುಖದಿಂದ ರಕ್ತಧಾರೆಯನ್ನು ಮಾತ್ರ ಕಕ್ಕಿದನು ॥೩೦॥

ಆಗ ಆ ದೇಶದಲ್ಲಿದ್ದ (ಅಪ್ರಬುದ್ಧ) ಲೀಲೆಯು, ಚಂದ್ರನಿಂದ ಕತ್ತಲೆಯೋಪಾದಿಯಲ್ಲಿ—ಶಕ್ತಿಪ್ರಹಾರದಿಂದ ಭಗ್ನನಾದ ಆ ಸಿಂಧುರಾಜನನ್ನು ನೋಡಿದವಳಾಗಿ, ವಿಶೇಷವಾದ ಆನಂದವುಕ್ಕಿಬರುತಿರುವವಳಾಗಿ, ಪೂರ್ವಲೀಲೆಯನ್ನು ಕುರಿತು ಹೀಗೆ ಹೇಳಿದಳು ॥

ಹೇ ದೇವಿ! ಇಲ್ಲಿ ನೋಡುವವಳಾಗು. ನಮ್ಮಗಳ ಪತಿಯಾದ ಈ ವಿದೂರಥನೆಂಬ ನರಸಿಂಹಮೂರ್ತಿಯು, ಗರ್ವದಿಂದ ಕತ್ತೆತ್ತಿಕೊಂಡಿರುವ ಈ ಸಿಂಧುರಾಜನೆಂಬ (ಹಿರಣ್ಯಕಶಿಪು) ರಾಕ್ಷಸನನ್ನು, ಶಕ್ತ್ಯಾಯುಧದ ಅಲಗುಗಳೆಂಬ ನಖಗಳಿಂದ ಕೊಂದುಬಿಟ್ಟನು ॥೩೨॥

ಸರೋವರದಲ್ಲಿ ನಿಂತಿರುವ ಮದ್ದಾನೆಯ ಸುಂಡಿಲಿನಿಂದ ಫೂತ್ಕಾರಮಿಶ್ರವಾಗಿ ಜಲರಾಶಿ ಹೊರಡುವಂತೆ, ಚೂರ್ಣಿತವಾದ ಇವನ ಎದೆಯುದೆಸೆಯಿಂದ ಚುಲಚುಲಧ್ವನಿಯುಕ್ತವಾಗಿ ರಕ್ತವು ಹೊರಡುತಿರುವುದು ॥೩೩॥

ಹಾ! ಕಷ್ಟ! ಅಷ್ಟರಲ್ಲಿಯೇ, ತನ್ನ ಭೃತ್ಯರಿಂದ ತರಲ್ಪಟ್ಟ ಅನ್ಯರಥವನ್ನು, ಸುವ

ಸೌವರ್ಣಂ ಮೈರವಂ ಶೃಙ್ಗಂ ಪುಷ್ಕರಾವರ್ತಕೋ ಯಥಾ ॥೩೪॥
ಪಶ್ಯ ದೇವಿ ರಥೋಽಸ್ಯಾಸೌ ಮುದ್ಗರೇಣ ವಿಚೂರ್ಣಿತಃ ।
ಭ್ರಮತ್ ಪಾರ್ಥನಿಪಾತೇನ ಸೌವರ್ಣಂ ನಗರಂ ಯಥಾ ॥೩೫॥
ಪ್ರವೃತ್ತೋ ರಥಮಾರೋಢುಂ ಆನೀತಂ ಪತಿರೇಷ ಮೇ ।
ಕಷ್ಟಂ ವಜ್ರಮಿವೇನ್ದ್ರೇಣ ಮುಸಲಂ ಸಿನ್ಧುನೇಕ್ಷಿತಮ್ ॥೩೬॥
ಜವಾತ್ ಪತಿಃ ಪ್ರಯಾತೋ ಮೇ ಸೈನ್ಧವಂ ಮುಸಲಾಯುಧಮ್ ।
ವಞ್ಚಯಿತ್ವಾ ವಿಲಾಸೇನ ರಥಮಾರುಹ್ಯ ಲಾಘವಾತ್ ॥೩೭॥
ಹಾ ಧಿಕ್ ಕಷ್ಟಮಸೌ ಸಿನ್ಧುಃ ಆರ್ಯಪುತ್ರಂ ರಥಂ ರಯಾತ್ ॥೩೮॥
ಹರಿ ಶ್ವಭ್ರಮಿವಾರೂಢಂ ಪ್ಲವೇನೋರ್ಧ್ವಮಿವ ದ್ರುಮಮ್ ।
ಕ್ರೀಡಿತ್ವಾ ಪೀಡಯಾಮಾಸ ಶರವರ್ಷೈರ್ವಿದೂರಥಮ್ ॥೩೯॥
ಛಿನ್ನಧ್ವಜಂ ಛಿನ್ನರಥಂ ಛಿನ್ನಾಶ್ವಂ ಛಿನ್ನಸಾರಥಿಮ್ ।
ಛಿನ್ನಕಾರ್ಮುಕವರ್ಮಾಣಂ ಭಿನ್ನಸರ್ವಾಙ್ಗಮಾಕುಲಮ್ ॥೪೦॥
ಹೃದಿಸ್ಫೋಟಶಿಲಾಪಟ್ಟದೃಢೇ ಪೀವರಮೂರ್ಧನಿ ।

ರ್ಣಮಯವಾದ ಮೇರುಶಿಖರವನ್ನು ಪುಷ್ಕರಾವರ್ತಕ ಮೇಘವು ಹತ್ತುವಂತೆ, ಈ ಸಿಂಧುವು ಹತ್ತಲುದ್ಯೋಗಿಸಿರುವನು ॥೩೪॥

ದೇವಿ ! ಇನ್ನೂ ನೋಡುವವಳಾಗು. ಪೂರ್ವದಲ್ಲಿ ಸಂಚರಣ ಶೀಲವಾಗಿದ್ದ ನಿವಾತಕವಚರ ಸುವರ್ಣಮಯನಗರವು ಅರ್ಜುನನ ಬಾಣನಿಪಾತದಿಂದ ಚೂರ್ಣವಾದಂತೆ, ಈ ಸಿಂಧುರಾಜನ ಹೊಸರಥವೂ ಕೂಡ ನಮ್ಮ ಪತಿಯ ಮುದ್ಗರಾಯುಧದಿಂದ ಚೂರ್ಣೀಕೃತವಾಯ್ತು ॥೩೫॥

ಇದೋ, ಈ ನಮ್ಮ ಪತಿಯು, ತನ್ನ ಭೃತ್ಯರಿಂದ ತರಲ್ಪಟ್ಟ ಮತ್ತೊಂದು ರಥವನ್ನು ಹತ್ತುವುದಕ್ಕುದ್ಯುಕ್ತನಾಗಿರುವನು. ಅಯ್ಯೋ! ಕಷ್ಟ! ಇಂದ್ರನ ವಜ್ರಾಯುಧದಲ್ಲಿ ದೃಷ್ಟಿಯಿಡುವಂತೆ, ಸಿಂಧುರಾಜನು ತನ್ನ ಮುಸಲಾಯುಧವನ್ನು ನೋಡುತಿರುವನು ॥೩೬॥

ಆದರೆ, ನನ್ನ ಪತಿಯು, ಸಿಂಧುರಾಜನ ಮುಸಲಾಯುಧವನ್ನು ಚಮತ್ಕಾರದಿಂದ ತಪ್ಪಿಸಿಕೊಂಡು ವಿಲಾಸದೊಡನೆ ರಥವನ್ನು ಹತ್ತಿಕೊಂಡು ಹೊರಟನು ॥೩೭॥

ಹಾಧಿಕ್! ಹಾ ಕಷ್ಟ!! ಕೆಸರು ಮುಂತಾದುದರಿಂದ ಹಸುರಾಗಿ ಕಾಣುತ-- ಹಳ್ಳದಲ್ಲಿ ಸಿಕ್ಕಿಕೊಂಡಿರುವ ಮರವನ್ನು ಮೇಲುಭಾಗದಲ್ಲಿ ಪಕ್ಷಿಯು ಹತ್ತುವಂತೆ—ತನ್ನ ರಥದಮೇಲೆ ವೇಗದಿಂದ ಹತ್ತಿದ ನನ್ನ ಪತಿಯಾದ ವಿದೂರಥನನ್ನು, ಈ ಸಿಂಧುರಾಜನು, ಆಟವಾಡುತ್ತಲೇ ಬಾಣಗಳಿಂದ ಪೀಡಿಸಿಬಿಟ್ಟನು ॥೩೮—೩೯॥

ಈ ಸಿಂಧುರಾಜನು, ನಮ್ಮ ಪತಿಯ—ಧ್ವಜವನ್ನೂ ರಥವನ್ನೂ ಕುದುರೆಗಳನ್ನೂ ಸಾರಥಿಯನ್ನೂ ಧನುಸ್ಸನ್ನೂ ಕವಚವನ್ನೂ ಕತ್ತರಿಸಿ, ಅವನ ದೇಹದಲ್ಲೆಲ್ಲಾ ಗಾಯ ಮಾಡಿ, ಅವನನ್ನು ನಾನಾವಿಧವಾಗಿಯೂ ವ್ಯಾಕುಲಪಡಿಸಿ, ಎಷ್ಟು ಹೊಡೆದರೂ ಕಲ್ಲಿನಂತೆ ಗಟ್ಟಿಯಾಗಿ ಸೀಳದಿರುವ ಅವನ ಎದೆಯನ್ನೂ-ಸ್ಥೂಲವಾಗಿರುವ ಶಿರಸ್ಸನ್ನೂ-ವಜ್ರಸಮಾನವಾದ ಬಾಣಗಳಿಂದ ಭೇದಿಸಿ, ಅವನನ್ನು ಭೂಮಿಯಮೇಲೆ ಕೆಡಹುತ್ತಿರುವನು॥೪೦—೪೧॥

ಭಿತ್ವಾ ವಜ್ರಸವೈರ್ಬಾಣೈಃ ಪಾತಯತ್ಯೇಷ ಭೂತಲೇ ‖೪೧‖
ಅಥಾನ್ಯಂ ರಥಮಾನೀತಂ ಕೃಛ್ರೇಣ ಪ್ರಾಪ್ಯ ಚೇತನಾಮ್ ।
ಖಡ್ಗೇನಾರೋಹತೋಽಸ್ಯಾಂಸಂ ಛಿನ್ನಂ ಭರ್ತುರ್ವಿಲೋಕಯ ।
ಪದ್ಮರಾಗಗಿರಿದ್ರೋಣೀತಮಿವದ್ಧಾಸ್ಯೃಗ್ವಿಮುಞ್ಚತಿ ‖೪೨‖
ಹಾಹಾ ಧಿಕ್ ಕಷ್ಟಮೇತೇನ ಸಿನ್ಧುನಾ ಖಡ್ಗಧಾರಯಾ ।
ಜಙ್ಘಯೋರ್ಮೇ ಪತಿಶ್ಛಿನ್ನಃ ಕ್ರಕಚೇನೇವ ಪಾದಪಃ ‖೪೩‖
ಹಾಹಾ ಹತಾಸ್ಮಿ ದಗ್ಧಾಸ್ಮಿ ಮೃತಾಸ್ಮ್ಯುಪಹತಾಸ್ಮಿ ಚ ।
ಮೃಣಾಳೇ ಇವ ಪತ್ಯುರ್ಮೇ ಲೂನೇ ದ್ವೇ ಅಪಿ ಜಾನುನೀ ‖೪೪‖
ಇತ್ಯುಕ್ತ್ವಾ ಸಾ ತದಾಲೋಕ್ಯ ಭರ್ತುರ್ಭಾವಂ ಭಯಾತುರಾ ।
ಲತಾ ಪರಶುಕೃತ್ತೇವ ಮೂರ್ಛಿತಾ ಭುವಿ ಸಾಪತತ್ ‖೪೫‖
ವಿದೂರಥೋಽಪಿ ನಿರ್ಜಾನುಃ ಪ್ರಹರನ್ನೇವ ವಿದ್ವಿಷಿ ।
ಪಪಾತ ಸ್ಯನ್ದನಸ್ಯಾಧಃ ಛಿನ್ನಮೂಲಇವ ದ್ರುಮಃ ‖೪೬‖
ಪತನ್ನೇವೈಷ ಸೂತೇನ ರಥೇನೈವಾಪವಾಹಿತಃ ।
ಯದಾ ತದಾಹತಿಂ ತಸ್ಯ ಕಣ್ಠೇದಾತ್ ಸಿನ್ಧುರುದ್ಧತಃ ‖೪೭‖

ಎಲೌ ! ದೇವಿ ! ಬಳಿಕ ಅತಿಪ್ರಯಾಸದಿಂದ ಚೇತನೆಹೊಂದಿ ತನ್ನ ಭೃತ್ಯರು ತಂದುಕೊಟ್ಟ ಮತೊಂದು ರಥವನ್ನು ಈ ವಿದೂರಥನು ಹತ್ತುತಿರುವಷ್ಟರಲ್ಲಿಯೇ, ಸಿಂಧುವು ಇವನ ಹೆಗಲನ್ನು ತನ್ನ ಖಡ್ಗದಿಂದ ಕತ್ತರಿಸಿಬಿಟ್ಟನು. ಪದ್ಮರಾಗಪರ್ವತವು ಕಾಂತಿಪ್ರವಾಹನನ್ನು ಬಿಡುವಂತೆ, ಇವನ ಭುಜಶಿರಸ್ಸು ರಕ್ತಧಾರೆಯನ್ನು ಬಿಡುತಿರುವುದು. ಇದನ್ನು ನೋಡುವವಳಾಗು ‖೪೨‖

ಹಾಹಾ ಧಿಕ್ ! ಹಾ ಕಷ್ಟ !! ಈ ಸಿಂಧುವು, ಗರಗಸದಿಂದ ಮರವನ್ನು ಕೊಯ್ಯುವಂತೆ, ಖಡ್ಗದಿಂದ ನನ್ನ ಪತಿಯ ಮೊಣಕಾಲನ್ನು ಕತ್ತರಿಸಿಬಿಟ್ಟನು ‖೪೩‖

ಹಾಹಾ ! ನಾನು ಹತಳಾದೆನು ! ದಗ್ಧಳಾದೆನು ! ಮೃತಳಾದೆನು ! ಉಪಹತ (ಉಪಾಧಿಯುಕ್ತಳು) ಳಾದೆನು ! ತಾವರೇದಂಟುಗಳಂತೆ, ನನ್ನ ಪತಿಯ ಎರಡು ಮಂಡಿಗಳೂ ಕತ್ತರಿಸಲ್ಪಟ್ಟುವು ‖೪೪‖

ಅಯ್ಯಾ ! ರಾಮ ! ಹೀಗೆಂದು ಹೇಳಿ ಆ ಲೀಲೆಯು, ತನ್ನ ಪತಿಯ ಸ್ಥಿತಿಯನ್ನು ನೋಡಿ, ಕೇವಲ ಭಯಾತುರಳಾಗಿ, ಕೊಡಲಿಯಿಂದ ಕತ್ತರಿಸಲ್ಪಟ್ಟ ಲತೆಯಂತೆ, ಮೂರ್ಛಿತಳಾಗಿ ಭೂಮಿಯಲ್ಲಿ ಬಿದ್ದಳು ‖೪೫‖

ಬಳಿಕ ವಿದೂರಥನೂ ಕೂಡ, ಮೊಣಕಾಲು ಮುರಿದು ಹೋಗಿದ್ದರೂ ಶತ್ರುವಿನ ಮೇಲೆ ಬಾಣಪ್ರಹಾರಮಾಡುತಿರುವನಾಗಿಯೇ, ಬೇರುಕತ್ತರಿಸಿದ ಮರದಂತೆ, ರಥದ ಕೆಳಗೆ ಬಿದ್ದುಬಿಟ್ಟನು ‖೪೬‖

ಇವನು ಬೀಳುತ್ತಿರುವಷ್ಟರಲ್ಲಿಯೇ, ಇವನ ಸಾರಥಿಯು ಮೆಲ್ಲಗೆ ಇವನನ್ನು ರಥದಲ್ಲಿಯೇ ಇಟ್ಟುಕೊಂಡು ದೂರವಾಗಿ ತೆಗೆದುಕೊಂಡು ಹೋಗಲುದ್ಯುಕ್ತನಾದನು. ಈ ಸಾರಥಿಯು ಹೀಗೆ ಮಾಡುತಿರುವುದನ್ನು ನೋಡಿ, ಉದ್ಧತನಾದ ಸಿಂಧುರಾಜನು, ವಿದೂರಥನ ಕುತ್ತಿಗೆಯಲ್ಲಿ ಬಲವಾಗಿ ಏಟುಹಾಕಿದನು ‖೪೭‖

ಅರ್ಧವಿಚ್ಛಿನ್ನಕಣ್ಠೋಽಸೌ ಅನುಯಾತೋಽಥ ಸಿನ್ಧುನಾ ।
ಸ್ಯನ್ದನೇನಾವಿಶತ್ ಸದ್ಮ ಪದ್ಮಂ ರವಿಕರೋ ಯಥಾ ॥೪೮॥
ಸರಸ್ವತ್ಯಾಃ ಪ್ರಭಾವಾಢ್ಯಂ ತತ್ ಪ್ರವೇಷ್ಟುಮಸೌ ಗೃಹಮ್ ।
ನಾಶಕನ್ಮಶಕೋ ಮತ್ತೋ ಮಹಾಜ್ವಾಲೋದರಂ ಯಥಾ ॥೪೯॥

ಖಡ್ಗಾವಕೃತ್ತಗಳಗರ್ತಗಳತ್ಸ್ರವಾತ
ರಕ್ತಚ್ಛಟೋಚ್ಛ್ರಿತವಸ್ತ್ರತನುತ್ರಗಾತ್ರಮ್ ।
ತತ್ಯಾಜ ತಂ ಭಗವತೀಮಭಿತೋ ಗೃಹಾನ್ತಃ
ಸೂತಃ ಪ್ರವೇಶ್ಯ ಮೃತಿತಲ್ಪತಲೇ ಗತೋಽರಿಃ ॥೫೦॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ವಿದೂರಥಮರಣವರ್ಣನಂ
ನಾಮ ಪಞ್ಚಾಶಃ ಸರ್ಗಃ

ಆಗ ವಿದೂರಥನ ಕುತ್ತಿಗೆಯು ಅರ್ಧ ಕತ್ತರಿಸಿಹೋಯಿತು. ಆದರೂ ಸಿಂಧುರಾಜನು ಬೆನ್ನಟ್ಟಿಯೇ ಬಂದನು. ಈ ಸ್ಥಿತಿಯಲ್ಲಿರುವಾಗ, ಕಮಲವನ್ನು ಸೂರ್ಯಕಿರಣವು ಪ್ರವೇಶಿಸುವಂತೆ, ವಿದೂರಥನು ಅತಿಪ್ರಯಾಸದಿಂದ ರಥದಮೇಲೆಯೇ ತನ್ನ ಮನೆಗೆ ಪ್ರವೇಶಮಾಡಿದನು ॥೪೮॥

ಸಿಂಧುರಾಜನಾದರೆ, ಮತ್ತವಾದ ಮಶಕವು ಮಹಾಜ್ವಾಲಾಮಧ್ಯವನ್ನು ಪ್ರವೇಶಿಸಲಾರದಂತೆ, ಸರಸ್ವತೀತೇಜಃಪರಿಪೂರ್ಣವಾಗಿರುವ ಆ ವಿದೂರಥನ ಅರಮನೆಯನ್ನು ಪ್ರವೇಶಿಸಲಾರದವನಾದನು ॥೪೯॥

ಆಗ ವಿದೂರಥನ ಕುತ್ತಿಗೆಯು ಖಡ್ಗದಿಂದ ಕತ್ತರಿಸಲ್ಪಟ್ಟದ್ದರಿಂದ, ಅದರದೆಸೆಯಿಂದ ನಿಶ್ವಾಸಮಾರುತಯುಕ್ತವಾಗಿ ಸುರಿಯುತ್ತಿರುವ ರಕ್ತಪ್ರವಾಹವು, ಅವನ ವಸ್ತ್ರವನ್ನೂ ಕವಚವನ್ನೂ ಸಮಸ್ತ ಶರೀರವನ್ನೂ ನೆನೆಯಿಸಿಬಿಟ್ಟಿತು. ಇಂತಹ ಸ್ಥಿತಿಯಲ್ಲಿದ್ದ ವಿದೂರಥನನ್ನು ಮನೆಯೊಳಗೆ ಪ್ರವೇಶಮಾಡಿಸಿ, ಆ ಸೂತನು, ಪೂಜ್ಯಳಾದ ವಾಗ್ದೇವಿಯ ಸನ್ನಿಧಿಯಲ್ಲಿ ಮೃತ್ಯುಶಯ್ಯೆಯಮೇಲೆ ಮಲಗಿಸಿಬಿಟ್ಟು, ತಾನು ಹೊರಟುಹೋದನು. ಇವನ ಶತ್ರುವಾದ ಸಿಂಧುರಾಜನೂ ಕೂಡ, ಮನೆಯೊಳಗೆ ಪ್ರವೇಶಮಾಡಲಾರದೆಯೇ ಹೊರಟುಹೋದನು ॥೫೦॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ವಿದೂರಥಮರಣ
ವರ್ಣನೆಯೆಂಬ ಐವತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕಪಞ್ಚಾಶಃ ಸರ್ಗಃ.

ಶ್ರೀವಸಿಷ್ಠಉವಾಚ.

ಹತೋ ರಾಜಾ ಹತೋ ರಾಜಾ ಪ್ರತಿರಾಜೇನ ಸಂಯುಗೇ ।
ಇತಿ ಶಬ್ದೇ ಸಮುದ್ಭೂತೇ ರಾಷ್ಟ್ರಮಾಸೀದ್ಭಯಾಕುಲಮ್ ॥೧॥
ಭಾಣ್ಡೋಪಸ್ಕರಭಾರಾಢ್ಯಂ ವಿದ್ರವಚ್ಛಕಟವ್ರಜಮ್ ।
ಸಾಕ್ರನ್ದಾರ್ತಕಳತ್ರಾಢ್ಯಂ ದ್ರವನ್ನಾಗರದುರ್ಗಮಮ್ ॥೨॥
ಪಲಾಯಮಾನಸಾಕ್ರನ್ದಂ ಮಾರ್ಗಾಹೃತವಧೂಗಣಮ್ ।
ಅನ್ಯೋನ್ಯಲುಣ್ಠನವ್ಯಗ್ರಲೋಕಲಗ್ನಮಹಾಭಯಮ್ ॥೩॥
ಪರರಾಷ್ಟ್ರಜನಾನೀಕತಾಣ್ಡವೋಲ್ಲಾಸಸಾರವಮ್ ।
ನಿರಧಿಷ್ಠಿತಮಾತಙ್ಗಹಯವೀರಪತಜ್ಜನಮ್ ॥೪॥

ಉತ್ಪತ್ತಿಪ್ರಕರಣತಲ್ಲಿ ಐವ್ವತ್ತೊಂದನೆಯ ಸರ್ಗವು.

ಅತ್ರ ರಾಜವಧೋದನ್ತಾತ್ ವರ್ಣ್ಯತೇ ರಾಷ್ಟ್ರವಿಡ್ವರಃ ।
ಸಿನ್ಧೌ ಪ್ರತಿಷ್ಠಿತೇ ಭೂಯೋ ದೇಶಸ್ವಾಸ್ಥ್ಯಂಚ ವಿಸ್ತರಾತ್ ॥

ವಿದೂರಥನ ವಧವೃತ್ತಾಂತವನ್ನು ಕೇಳಿದುದರಿಂದ ಉಂಟಾದ ರಾಷ್ಟ್ರಕ್ಷೋಭೆಯೂ, ಸಿಂಧುರಾಜನು ದೊರೆತನಕ್ಕೆ ಬಂದಬಳಿಕ ಪುನಃ ರಾಷ್ಟ್ರದ ಸ್ವಾಸ್ಥ್ಯವೂ ಕೂಡ, ಈ ಸರ್ಗದಲ್ಲಿ ವಿಸ್ತರವಾಗಿ ವರ್ಣಿಸಲ್ಪಡುವುವು,

ಪುನಃ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಹೀಗೆ ಸಿಂಧುರಾಜನು ಮೃತನಾದ ಬಳಿಕ —' ನಮ್ಮ ದೊರೆಯು ಯುದ್ಧದಲ್ಲಿ ಪ್ರತಿರಾಜನಿಂದ ಕೊಲ್ಲಲ್ಪಟ್ಟನು '—ಎಂಬ ಶಬ್ದವು ಊರಿನಲ್ಲೆಲ್ಲಾ ಹಬ್ಬಿಕೊಳ್ಳಲಾಗಿ, ಅವನ ರಾಷ್ಟ್ರವೆಲ್ಲವೂ ಭಯವ್ಯಾಕುಲವಾಯ್ತು ॥೧॥

ಆ ರಾಷ್ಟ್ರದಲ್ಲೆಲ್ಲಾ, ಭಾಂಡಮುಂತಾದ ಉಪಕರಣಗಳೆಲ್ಲವೂ ಸಿಕ್ಕಿದಕಡೆ ಬಿದ್ದಿದ್ದುವು; ಬಂಡಿಗಳು ಗುಂಪುಗುಂಪಾಗಿ ಓಡಿಹೋದುವು; ಹೆಂಗಸರು ಮಹಾದುಃಖಿತರಾಗಿ ರೋದನಮಾಡುತ ತುಂಬಿದ್ದರು; ಊರಿನ ಜನರು ಓಡಿಹೋಗುತಿರುವುದರಿಂದ, ಜನರ ಸಂಚಾರವೇ ಕಷ್ಟವಾಯ್ತು ॥೨॥

ಜನರು ಕೂಗಿಕೊಳ್ಳುತ ಓಡಿಹೋದರು; ಸ್ತ್ರೀಯರನ್ನು ರಾಜಮಾರ್ಗದಲ್ಲಿ ತಂದು ಬಿಡುತ್ತಿದ್ದರು; ಜನಗಳು ಪರಸ್ಪರವಾಗಿ ಲುಂಠನ (ಲೂಟಿ) ಮಾಡುವುದರಲ್ಲುದ್ಯುಕ್ತರಾಗಿರುವುದರಿಂದ, ವಿಶೇಷವಾಗಿ ಭಯವುಂಟಾಯ್ತು ॥೩॥

ಶತ್ರುರಾಷ್ಟ್ರದ ಜನರೂ ಸೈನಿಕರೂ ಪ್ರವೇಶಿಸಿ ನರ್ತನವಿಲಾಸಮಾಡುತಿರುವುದರಿಂದ, ಅವರ ಧ್ವನಿಯು ವ್ಯಾಪಿಸಿತು; ಆನೆಕುದುರೆಗಳ ಮೇಲೆ ಜನರೊಬ್ಬರೂ ಇಲ್ಲದೆ ಅವು ಓಡುತಿರುವುದರಿಂದ, ಜನರೆಲ್ಲರೂ—ಅದರಲ್ಲಿ ವೀರರೂ ಕೂಡ—ಬೀಳುತಿದ್ದರು ॥೪॥

ಕವಾಟಪಾಟನೋದ್ಭಿನ್ನಕೋಶಾನ್ತರವಘುರ್ಘುರವಮ್ |
ಲುಣ್ಠಿತಾಸಜ್ಭ್ಯಕೌಶೇಯಪ್ರಾವೃತಾಭಿಭಟೋದ್ಭಟಮ್ ‖೫‖
ಕ್ಷುರಿಕೋತ್ಪಾಟಿತಾದ್ರಾನ್ತಮೃತರಾಜಗೃಹಾಙ್ಗನಮ್ |
ರಾಜಾನ್ತಃಪುರವಿಶ್ರಾನ್ತಚಣ್ಡಾಲಶ್ವಪಚೋತ್ಕರಮ್ ‖೬‖
ಗೃಹಾಪಹೃತಭೋಜ್ಯಾನ್ನಭೋಜನೋನ್ಮುಖಪಾಮರಮ್ |
ಸಹೇಮಹಾರವೀರೌಘಪಾದಾಹತರುದಚ್ಛಿಶು ‖೭‖
ಅಪೂರ್ವತರುಣಾಕ್ರಾನ್ತಕೇಶಾನ್ತಃಪುರಿಕಾಙ್ಗನಮ್ |
ಚೋರಹಸ್ತಚ್ಯುತಾನರ್ಘ್ಯರತ್ನದನ್ತುರಮಾರ್ಗಗಮ್ ‖೮‖
ಹಯೇಭರಥಸಙ್ಘಟ್ಟವ್ಯಗ್ರಸಾಮನ್ತಮಣ್ಡಲಮ್ |
ಅಭಿಷೇಕೋದ್ಯಮಾದೇಶಪರಮನ್ತ್ರಿಪುರಸ್ಸರಮ್ ‖೯‖
ರಾಜಧಾನೀವಿನಿರ್ಮಾಣಸಾರಮುಖ್ಯಸ್ಥಪತೀಶ್ವರಮ್ |
ಕೃತವಾತಾಯನಶ್ವಭ್ರನಿಪತದ್ರಾಜವಲ್ಲಭಮ್ ‖೧೦‖

ಕೊಳ್ಳೆಗಾರರು ಬೊಕ್ಕಸದ ಬಾಗಿಲುಗಳನ್ನು ಒಡೆದುಹಾಕುತಿರುವುದರಿಂದ, ಘುರ್ಘುರ ಧ್ವನಿಯುದ್ಭವಿಸಿತು. ಆ ಬೊಕ್ಕಸದ ಕಾವಲುಗಾರರನ್ನು ಹೊಡೆಯುತ, ತಾವು ಕದ್ದ ಪಟ್ಟೆಯ ಬಟ್ಟೆಗಳನ್ನು ಅವರಿಗೆ ಮುಸುಕುಹಾಕಿ, ಕೊಳ್ಳೆಗಾರರು ಓಡುತಿದ್ದರು. ಬಳಿಕ ಆ ಕಾವಲುಗಾರರು, ಬಹಳವಾಗಿ ಆರ್ಭಟಮಾಡುತಿದ್ದರು ‖೫‖

ವಿದೂರಥನ ಅಂತಃಪುರದಲ್ಲಿ ಮೃತರಾಗಿದ್ದ ಸ್ತ್ರೀಯರನ್ನು, ಶತ್ರುಭಟರು ಕಂಡು, ಸಣ್ಣ ಚೂರಿಗಳಿಂದ ಅವರ ನರಗಳನ್ನು ಕಿತ್ತುಹಾಕಿದರು; ರಾಜನ ಅಂತಃಪುರದಲ್ಲಿ, ಚಂಡಾಲರೂ ಶ್ವಪಚರೂ ಗುಂಪುಗುಂಪಾಗಿ ಬಂದು ವಿಶ್ರಮಿಸಿಕೊಂಡರು ‖೬‖

ಕೇವಲ ಪಾಮರರಾಗಿದ್ದವರು, ಮನೆಯೊಳಗೆ ನುಗ್ಗಿ, ಅಲ್ಲಿದ್ದ ಮೃಷ್ಟಾನ್ನಗಳನ್ನು ಹೊತ್ತುಕೊಂಡುಹೋಗಿ, ಅದನ್ನು ತಿನ್ನುತ ಕುಳಿತರು; ಎಳೆಯಮಕ್ಕಳುಗಳು, ಸುವರ್ಣ ಹಾರಗಳನ್ನು ಧರಿಸಿ ಆಟವಾಡುತ್ತಿರುವಾಗ, ಮತ್ತರಾದ ವೀರರಿಂದ ತುಳಿಯಲ್ಪಟ್ಟುವಾಗಿ ಅತ್ತುವು ‖೭‖

ಅಂತಃಪುರಸ್ತ್ರೀಯರನ್ನು, ಹೊಸಹೊಸಬರಾದ ತರುಣರು ಮುಂದಲೆಹಿಡಿದು ಎಳೆದರು. ಕಳ್ಳರು ಕದ್ದುಕೊಂಡು ಓಡುತ್ತಿರುವಾಗ, ಅವರ ಕೈಲಿದ್ದ ಅನರ್ಘವಾದ ರತ್ನಗಳು ಜಾರಿ, ದಾರಿಯಲ್ಲಿ ಹೋಗುತಿದ್ದವರಮೇಲೆ ಬಿದ್ದುವು ‖೮‖

ಸಾಮಂತರಾಜರೆಲ್ಲರೂ, ಆನೆ ಕುದುರೆ ರಥಗಳನ್ನು ಸೇರಿಸುವುದರಲ್ಲಿ ಉದ್ಯುಕ್ತರಾದರು. ಶತ್ರುವಿನ ಕಡೆಯಲ್ಲಿ—ಮಂತ್ರಿ ಮೊದಲಾದವರು, ಸಿಂಧುರಾಜನ ಪಟ್ಟಾಭಿಷೇಕಾರ್ಥವಾಗಿ ಸಾಮಗ್ರಿಗಳನ್ನು ಸಿದ್ಧಪಡಿಸುವುದಕ್ಕೆ ಆಜ್ಞಾಪಿಸುತಿದ್ದರು ‖೯‖

ಹೊಸದಾಗಿ ರಾಜಧಾನಿಯನ್ನು ಅಚ್ಚುಕಟ್ಟುಮಾಡಿಸುವುದಕ್ಕೋಸ್ಕರ, ಶಿಲ್ಪಿಗಳ ಅಧಿಕಾರಿಗಳು ಉಪಕ್ರಮಿಸಿದರು. ಗೋಡೆಗಳಲ್ಲಿ ಹೊಸದಾಗಿ ಕಿಟಕಿಗಳನ್ನು ತೆಗೆಯಿಸಿಕೊಂಡು, ಅಲ್ಲಿಂದ, ವಿದೂರಥನಿಗೆ ಪ್ರೀತಿಪಾತ್ರರಾಗಿದ್ದವರು, ತಮ್ಮನ್ನು ಸೆರೆಹಿಡಿದಾರೆಂಬ ಭಯದಿಂದ, ಹೊರಗಿರುವ ಹಳ್ಳಗಳಿಗೆ ಬಿದ್ದುಬಿಟ್ಟರು ‖೧೦‖

ಜಯಶಬ್ದಶತೋದ್ಘೋಷಸಿನ್ಧುರಾಜನ್ಯಸಿರ್ಭರಮ್ |
ಅಸಙ್ಖ್ಯನಿಜರಾಜೌಘಧೃತಸಿನ್ಧುಕೃತಾಸ್ಥಿತಿ ||೧೧||
ಗ್ರಾಮಾನ್ತರಸಮಾಕ್ರಾನ್ತವಿದ್ರವದ್ರಾಜವಲ್ಲಭಮ್ |
ಮಣ್ಡಲಾನ್ತರಸಞ್ಜಾತನಗರಗ್ರಾಮಲುಣ್ಟನಮ್ ||೧೨||
ಅನನ್ತಚೋರಮೋಷಾರ್ಥರುದ್ಧಮಾರ್ಗಗಮಾಗಮಮ್ |
ಮಹಾನುಭಾವವೈಧುರ್ಯಸನೀಹಾರದಿನಾತಪಮ್ ||೧೩||
ಮೃತಬನ್ಧುಜನಾಕ್ರನ್ದೈಃ ಮೃತತೂರ್ಯರವೈರಪಿ |
ಹಯೇಭರಥಶಬ್ದೈಶ್ಚ ಪಿಣ್ಡಗ್ರಾಹ್ಯಘನಧ್ವನಿ ||೧೪||
ಸಿನ್ಧುದೇವೋ ಜಯತ್ಯೇಕಚ್ಛತ್ರಭೂಮಣ್ಡಲಾಧಿಪಃ |
ಇತ್ಯನನ್ತರಮಾರೇಭೇ ಭೇರ್ಯಃ ಪ್ರತಿಪುರಂ ತದಾ ||೧೫||
ರಾಜಧಾನೀಂ ವಿವೇಶಾಥ ಸಿನ್ಧುರುದ್ಧುರಕನ್ಧರಃ |
ಪ್ರಜಾಃ ಸ್ರಷ್ಟುಂ ಯುಗಸ್ಯಾನ್ತೇ ಮನುರ್ಜಗದಿವಾಪರಃ ||೧೬||

ಸಿಂಧುರಾಜನಕಡೆಯುವರಾದ ಕ್ಷತ್ರಿಯವೀರರು, ಜಯಶಬ್ದಮಾಡುತ, ತಮ್ಮ ಧ್ವನಿಯನ್ನು ಅಲ್ಲಿ ತುಂಬಿಬಿಟ್ಟಿದ್ದರು; ಮತ್ತು, ಆ ಸಿಂಧುರಾಜನು ಮಾಡಿದ ತಾತ್ಕಾಲಿಕವಾದ ಶಾಸನಗಳನ್ನು, ಅವನ ಕಡೆಯುವರಾದ ಅಸಂಖ್ಯಾಕರಾದ ರಾಜರು ತಲೆಯಮೇಲೆ ಧರಿಸಿದರು ॥೧೧॥

ಪೂರ್ವರಾಜನ ಪ್ರೀತಿಪಾತ್ರರಾದವರು ತಪ್ಪಿಸಿಕೊಂಡು ಓಡಿಹೋಗುತಿರುವಾಗ, ಶತ್ರುಪಕ್ಷದವರು ಅವರನ್ನು ಗ್ರಾಮಾಂತರಗಳಲ್ಲಿ ಹಿಡಿದುಕೊಳ್ಳುತಿದ್ದರು. ದೇಶದೊಳಗೆಲ್ಲ, ಪಟ್ಟಣಗಳನ್ನೂ ಗ್ರಾಮಗಳನ್ನೂ ಲುಂಠನ (ಲೂಟಿ) ಮಾಡಲುಪಕ್ರಮವಾಯ್ತು॥೧೨॥

ಅನೇಕರಾದ ಚೋರರು, ತಾವು ಕದಿಯುವುದಕ್ಕೋಸ್ಕರ, ದಾರಿಯಲ್ಲಿ ತಿರುಗತಕ್ಕವರು ಹೋಗಿ ಬರದಂತೆ ತಡೆಮಾಡಿಬಿಟ್ಟರು. ಮಹಾನುಭಾವನಾದ ವಿದೂರಥನು ಮರಣಹೊಂದಿದಕಾರಣ, ಆ ಹಗಲೆಲ್ಲ ಸೂರ್ಯರಶ್ಮಿಯು ಮಂಜುಗೂಡಿಯೇ ಪ್ರಸರಿಸುತಿದ್ದಿತು॥

ಮೃತರಾದವರ ಬಂಧುಜನಗಳ ರೋದನಧ್ವನಿಯಿಂದಲೂ, ಮೃತರಾದವರ ಶವಗಳನ್ನು ಹೊತ್ತುಕೊಂಡು ಹೋಗುವಾಗ ಮಾಡುವ ತೂರ್ಯಶಬ್ದಗಳಿಂದಲೂ, ಆನೆ ಕುದುರೆ ರಥಗಳ ಸದ್ದಿನಿಂದಲೂ, ಆಗ ಎಲ್ಲರೂ ಶಬ್ದವನ್ನು ಉಂಡೆಮಾಡಿ ಕೈಯಲ್ಲಿ ಹಿಡಿದುಕೊಳ್ಳಬಹುದೆಂಬದಾಗಿ ತೋರಿತು ॥೧೪॥

ಬಳಿಕ,— ಏಕಚ್ಛತ್ರಾಧಿಪತಿಯಾದ ಸಿಂಧುಮಹಾರಾಜನು ಜಯಶೀಲನಾಗಿರುವನು—ಎಂದು, ಪ್ರತಿಯೊಂದು ಪಟ್ಟಣದಲ್ಲಿಯೂ ಭೇರಿ (ಡಂಗುರ) ಯನ್ನು ಹೊಡೆಯಿಸಿದರು ॥೧೫॥

ಬಳಿಕ, ಯುಗಪ್ರಳಯಾನಂತರದಲ್ಲಿ ಪ್ರಜೆಗಳನ್ನು ಸೃಷ್ಟಿಮಾಡುವುದಕ್ಕೆ ಮತ್ತೊಬ್ಬ ಮನುವು ಪ್ರಪಂಚಕ್ಕೆ ಬರುವಂತೆ, ಸಿಂಧುರಾಜನು ಬಹುಸಂಭ್ರಮದಿಂದ ರಾಜಧಾನಿಯನ್ನು ಪ್ರವೇಶಿಸಿದನು ॥೧೬॥

ಪ್ರವೃತ್ತಾ ದಶದಿಗ್ಭ್ಯೋಽಥ ಪ್ರವೇಷ್ಟುಂ ಸೈನ್ಧವಂ ಪುರಮ್ |
ಕರಾಃ ಕರಿಹಯಾಕಾರೈಃ ರತ್ನಪೂರಾ ಇವಾಮ್ಬುಧಿಮ್ ||೧೭||
ನಿಬನ್ಧನಾನಿ ಚಿಹ್ನಾನಿ ಶಾಸನಾನಿ ದಿಶಂಪ್ರತಿ |
ಕ್ಷಣಾನ್ನಿವೇಶಯಾಮಾಸುಃ ಮಣ್ಡಲಂಪ್ರತಿ ಮನ್ತ್ರಿಣಃ ||೧೮||
ಉದಭೂದಚಿರೇಣೈವ ದೇಶೇದೇಶೇ ಪುರೇಪುರೇ |
ಜೀವಿತೇ ಮರಣೇ ಮಾನೇ ನಿಯಮೋ ಯಮತೋ ಯಥಾ ||೧೯||
ಅಥ ಶೇಮುರ್ನಿಮೇಷೇಣ ದೇಶೋಪಪ್ಲವವಿಭ್ರಮಾಃ |
ಪ್ರಶಾನ್ತೋತ್ಪಾತಪವನಾಃ ಪದಾರ್ಥಾವೃತ್ತಯೋ ಯಥಾ ||೨೦||
ಸೌಮ್ಯತಾಮಾಜಗಾಮಾಶು ದೇಶೋ ದಶದಿಗನ್ವಿತಃ |
ಕ್ಷೀರೋದಃ ಕ್ಷುಭಿತಾವರ್ತೋ ದ್ರಾಗಿವೋದ್ಧೃತಮನ್ದರಃ ||೨೧||
ಮಮುರಲಕಚಯಾನ್ವಿಲೋಲಯನ್ತೋ ಮುಖಕಮಲಾಳಿಕುಲಾನಿ ಸೈನ್ಧವೀನಾಮ್ |
ಜಲಲವಲನಾಕುಲಾಃ ಸಮೀರಾಃ ಅಶಿವಗುಣಾನಿವ ಸರ್ವತಃ ಕ್ಷಣೇನ ||೨೨||

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಸಿನ್ಧುರಾಷ್ಟ್ರವರ್ಣನಂ
ನಾಮ ಏಕಪಞ್ಚಾಶತ್ತಮಃ ಸರ್ಗಃ.

ಅನಂತರದಲ್ಲಿ, ರತ್ನರಾಶಿಗಳು ಸಮುದ್ರವನ್ನು ಸೇರುವಂತೆ, ಆನೆ ಕುದುರೆ ಮುಂತಾದ ರೂಪದಿಂದ ನಾನಾವಿಧವಾದ ಉಪಾಯನ (ಕಾಣಿಕೆ) ಗಳು, ಹತ್ತುದಿಕ್ಕಿನಿಂದಲೂ ಸಿಂಧುರಾಜನ ಪಟ್ಟಣವನ್ನು ಸೇರುವುದಕ್ಕೆ ಉಪಕ್ರಮವಾಯ್ತು ||೧೭||

ಆಬಳಿಕ, ಮಂತ್ರಿಗಳು, ಪ್ರತಿದಿಕ್ಕಿನಲ್ಲಿಯೂ— ಪ್ರತಿದೇಶದಲ್ಲಿಯೂ, ಕ್ಷಣದೊಳಗಾಗಿ—ಹೊಸದಾದ ರಾಜನಿಯಮಗಳನ್ನೂ, ಧ್ವಜ ಮುದ್ರೆ ಮುಂತಾದ ಚಿಹ್ನೆಗಳನ್ನೂ ರಾಜಾಜ್ಞೆಗಳನ್ನೂ ಏರ್ಪಡಿಸಿದರು ||೧೮||

ಆಗ ಬಲುಬೇಗನೆ, ದೇಶದೇಶದಲ್ಲಿಯೂ ಗ್ರಾಮಗ್ರಾಮದಲ್ಲಿಯೂ, ಜನರ ಜೀವವನ್ನು ಕಾಪಾಡಬೇಕೆಂದೂ— ಮರಣವುಂಟುಮಾಡಕೂಡದೆಂದೂ —ಮಾನಹಾನಿ ಮಾಡಕೂಡದೆಂದೂ, ಯಮಾಜ್ಞೆಯಂತೆ ರಾಜನ ಆಜ್ಞೆ ಹೊರಟಿತು ||೧೯||

ಆ ಬಳಿಕ, ಉತ್ಪಾತಮಾರುತವು ಶಾಂತವಾದಮೇಲೆ ಪದಾರ್ಥಗಳ ಭ್ರಮಣೆಯು ನಿಲ್ಲುವಂತೆ, ದೇಶದಲ್ಲಿ ಉಪದ್ರಗಳೆಲ್ಲವೂ ಕ್ಷಣದೊಳಗಾಗಿ ಅಡಗಿಹೋದುವು ||೨೦||

ಆ ಕ್ಷಣವೇ, ಅಮೃತಮಥನಕಾಲದಲ್ಲಿ ವಿಶೇಷವಾಗಿ ಸುಳಿಯುಳ್ಳುದಾಗಿದ್ದ ಕ್ಷೀರಸಮುದ್ರವು ಮಂದರಪರ್ವತವನ್ನು ಮೇಲಕ್ಕೆತ್ತಿದೊಡನೆಯೇ ಸೌಮ್ಯವಾದಂತೆ, ದಶದಿಕ್ಕಿನೊಡಗೂಡಿದ ಸಮಸ್ತದೇಶವೂ ಸೌಮ್ಯವಾಗಿಬಿಟ್ಟಿತು ||೨೧||

ಆಗ, ಸಿಂಧುದೇಶಸ್ತ್ರೀಯರ ಮುಖವೆಂಬ ಕಮಲದಲ್ಲಿ ಭ್ರಮರಗಳಂತೆ ಕಾಣಿಸುತಿದ್ದ ಮುಂಗುರುಳುಗಳನ್ನು ಅಲುಗಿಸುತಿರುವ ಮಂದಮಾರುತಗಳು, ಜಲಕಣಮಿಶ್ರಗಳಾಗಿ, ಸುತ್ತಲೂ ಇರುವ ದುರ್ಗಂಧ ಮೊದಲಾದ ಅಮಂಗಳಗಳನ್ನು ಕ್ಷಣದೊಳಗೆ ಓಡಿಸುವಂತೆ ಬೀಸಲುಪಕ್ರಮಿಸಿದುವು ||೨೨||

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಸಿಂಧುರಾಜನ
ರಾಷ್ಟ್ರವರ್ಣನೆಯೆಂಬ ಐವತ್ತೊಂದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ದ್ವಿಪಂಚಾಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಏತಸ್ಮಿನ್ನಂತರೇ ರಾಮ ಲೀಲೋವಾಚ ಸರಸ್ವತೀಮ್ ।
ಶ್ವಾಸಾವಶೇಷಮಾಲೋಕ್ಯ ಮೂಢಂ ಭರ್ತಾರಮಗ್ರಗಮ್ ।
ಪ್ರವೃತ್ತೋ ದೇಹಮುತ್ಸ್ರಷ್ಟುಂ ಮದ್ಭರ್ತಾಯಮಿಹಾಂಬಿಕೇ ॥೧॥

ಜ್ಞಪ್ತಿರುವಾಚ.

ಏವಂರೂಪಮಹಾರಂಭೋ ಸಂಗ್ರಾಮೋ ರಾಷ್ಟ್ರಸಂಭ್ರಮೋ ।
ಸಂಪನ್ನೇಪಿ ಸ್ಥಿತೇಪ್ಯುಚ್ಚೈಃ ವಿಚಿತ್ರಾರಂಭಮಂಥರೇ ॥೨॥
ನ ಕಿಂಚಿದಪಿ ಸಂಪನ್ನಂ ರಾಷ್ಟ್ರಂ ನ ಚ ಮಹೀತಲಮ್ ।
ನ ಸ್ಥಿತಂ ಕ್ವಚನಾಪ್ಯೇವಂ ಸ್ವಪ್ನಾತ್ಮಕಮಿದಂ ಜಗತ್ ॥೩॥

ಉತ್ಪತ್ತಿಪ್ರಕರಣದಲ್ಲಿ ಐವತ್ತೆರಡನೆಯ ಸರ್ಗವು.

ರಾಜ್ಞೋತ್ರ ಮರಣಂ ತಸ್ಯ ಸಂಸಾರಸ್ಯ ಮೃಷಾತ್ಮತಾ ।
ತಥಾ ತತ್ಪುರಲೀಲಾಯಾಃ ವರ್ಣ್ಯತೇ ವಾಸನಾತ್ಮತಾ ॥

ಆ ವಿದೂರಥನ ಮರಣವೂ, ಸಂಸಾರವು ಮಿಥ್ಯಾರೂಪವೆಂಬ ವಿಷಯವೂ, ಮತ್ತು— ಆ ಪಟ್ಟಣದಲ್ಲಿದ್ದ ಲೀಲೆಯು ಕೇವಲ ವಾಸನಾರೂಪಳೆಂಬ ವಿಷಯವೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು: -

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಯುದ್ಧದಲ್ಲಿ ಪೆಟ್ಟುಬಿದ್ದು ಮೂರ್ಛೆಹೋದ ವಿದೂರಥನನ್ನು ಮನೆಗೆ ತಂದಮೇಲೆ, ಪಟ್ಟಣವೆಲ್ಲ ಕಳವಳಪಡುತಿರುವಷ್ಟರಲ್ಲಿಯೇ, ಪ್ರಬುದ್ಧಲೀಲೆಯು, ಶ್ವಾಸಮಾತ್ರಾವಶೇಷನಾಗಿ ಮೂರ್ಛೆಹೊಂದಿ ಮುಂದೆ ಬಿದ್ದಿರುವ ತನ್ನ ಪತಿಯನ್ನು ನೋಡುತ, ಸರಸ್ವತಿಯನ್ನು ಕುರಿತು—'ಹೇ! ಅಂಬ! ಈ ನನ್ನ ಪತಿಯು ಇಲ್ಲಿ ದೇಹವನ್ನು ಬಿಡುವುದಕ್ಕೆ ಸಿದ್ಧನಾಗಿರುವನು' ಎಂದು ಹೇಳಿದಳು ॥೧॥

ಅದಕ್ಕೆ ಆ ಸರಸ್ವತಿಯುತ್ತರವನ್ನು ಹೇಳುವಳು:—

ಎಲೌ! ಲೀಲೆ! ಇಷ್ಟು ಮಹಾರಂಭಯುಕ್ತವಾದ ಯುದ್ಧವು ನಡೆದಿದ್ದರೂ, ನಾನಾವಿಧಕಾರ್ಯಾರಂಭಗಳಿಂದ ನಿಬಿಡವಾಗಿ ನೂತನರಾಷ್ಟ್ರಸ್ಥಾಪನೆಯ ಸಂಭ್ರಮವು ಜರುಗುತಿದ್ದರೂ, ವಸ್ತುತಃ ಯಾವುದೊಂದೂ ನಡೆದಿಲ್ಲವೆಂದೇ ತಿಳಿ; ಆ ರಾಷ್ಟ್ರವೂ ಭೂಮಿಯೂ, ಎಲ್ಲಿಯೂ ನೆಲೆಸಿಯೇ ಇಲ್ಲ. ಈ ಜಗತ್ತೆಂಬುದು ಕೇವಲ ಸ್ವಪ್ನಸಮಾನವಾದುದು॥೨—೩॥

ತಸ್ಯ ತನ್ಮಣ್ಟಪಸ್ಯಾನ್ತಃ ಶವಸ್ಯ ನಿಕಟಾಮ್ಬರೇ |
ಇದಂ ಭೂರಾಷ್ಟ್ರಮಾಭಾತಿ ಭರ್ತುರ್ಜೀವಸ್ಯ ತೇನಘೇ ||೪||
ಅನ್ತಃಪುರಗೃಹಾನ್ತೇ ತತ್ ಇದಂ ರಾಷ್ಟ್ರಂ ಸ್ಥಿತೋದರಮ್ |
ವಸಿಷ್ಠವಿಪ್ರಗೇಹಾನ್ತಃ ವಿನ್ಧ್ಯಾದ್ರಿಗ್ರಾಮಕೇ ಸ್ಥಿತಮ್ ||೫||
ವಸಿಷ್ಠವಿಪ್ರಗೇಹೇನ್ತಃ ಶವಗೇಹಜಗತ್ ಸ್ಥಿತಮ್ |
ಶವಗೇಹಜಗತ್ಕುಕ್ಷೌ ಇದಂಗೇಹಜಗತ್ ಸ್ಥಿತಮ್ ||೬||
ಏವಮೇಷ ಮಹಾರಮ್ಭೋ ಜಗತ್ತ್ರಯಮಯೋ ಭ್ರಮಃ |
ತ್ವಯಾ ಮಯಾನಯಾನೇನ ಸಂಯುಕ್ತಃ ಸಾರ್ಣವಾವನಿಃ ||೭||
ಗಿರಿಗ್ರಾಮಕದೇಹಾನ್ತಃ ಮಧ್ಯೇ ಗಗನಕೋಶಕೇ |
ಸ್ವಾತ್ಮೈವ ಕಚತಿ ವ್ಯರ್ಥೋ ನ ಕಚತ್ಯೇವ ವಾ ಕ್ವಚಿತ್ ||೮||
ತತ್ ಪದಂ ಪರಮಂ ವಿದ್ಧಿ ನಾಶೋತ್ಪಾದವಿವರ್ಜಿತಮ್ ||೯||
ಸ್ವಯಂ ಕಚಿತಮಾಭಾತಂ ಶಾನ್ತಂ ಪರಮನಾಮಯಮ್ |

ಎಲೌ! ನಿರ್ದೋಷಳಾದ ಲೀಲೆ! ನೀನು ಪೂರ್ವದಲ್ಲಿ ನೋಡಿದ್ದ ಆ ಸಣ್ಣ ಮಂಡಪದೊಳಗೆ, ನಿನ್ನ ಪತಿಯಾಗಿದ್ದ ಪದ್ಮರಾಜನ ಶವದ ಸಮೀಪದಲ್ಲಿರುವ ಆಕಾಶದೊಳಗೆಯೇ, ನಾವು ಈಗಿರುವ ಭೂಮಿಯೂ ರಾಷ್ಟ್ರವೂ ಭಾಸಮಾನವಾಗುತಿರುವುದು ||೪||

ಆ ವಿಂಧ್ಯಪರ್ವತಸಮೀಪಸ್ಥವಾದ ಗಿರಿಗ್ರಾಮದಲ್ಲಿರುವ ವಸಿಷ್ಠನಾಮಕಬ್ರಾಹ್ಮಣನ ಮನೆಯೊಳಗೆ ಕಾಣುವ ಪ್ರಪಂಚದಲ್ಲಿಯೂ, ಆ ಪದ್ಮರಾಜನ ಅಂತಃಪುರದೊಳಗೆ ಕಾಣುವ ಪ್ರಪಂಚದಲ್ಲಿಯೂ, ಈ ವಿದೂರಥನ ರಾಷ್ಟ್ರವು ಮಧ್ಯಗತವಾಗಿ ಇದ್ದೇ ಇರುವುದು ||೫||

ಹೀಗೆಯೇ ವಿಚಾರಮಾಡಿ ನೋಡಿದರೆ, ವಸಿಷ್ಠನಾಮಕಬ್ರಾಹ್ಮಣನ ಮನೆಯೊಳಗೆ, ಆ ಪದ್ಮರಾಜನ ಶವವಿರುವ ಮನೆಯು ಪ್ರಪಂಚವಡಗಿರುವುದು; ಆ ಶವವಿರುವ ಮನೆಯು ಪ್ರಪಂಚದೊಳಗೆ, ಈಗ ನಾವಿರುವ ಮನೆಯು ಪ್ರಪಂಚವಡಗಿರುವುದು ||೬||

ಹೀಗೆ, ನಾನು ನೀನು ಈ ಅಪ್ರಬುದ್ಧಲೀಲೆ ಸಮುದ್ರ ಭೂಮಿ—ಇವುಗಳಿಂದ ಯುಕ್ತವಾಗಿರುವ—ಈ ಜಗತ್ತ್ರಯರೂಪವಾದ ಕಾರ್ಯವೆಲ್ಲವೂ ಕೇವಲ ಭ್ರಮಾತ್ಮಕವೆಂದು ತಿಳಿಯಬೇಕು ||೭||

ಅಂತು, ಗಿರಿಗ್ರಾಮದಲ್ಲಿರುವ ದೇಹದೊಳಗಿನ ಆಕಾಶಮಧ್ಯದಲ್ಲಿ ಭಾಸಮಾನವಾಗುವುದೂ ಆತ್ಮಪದಾರ್ಥವಲ್ಲದೆ ಬೇರೆಯಾದ ಪದಾರ್ಥವೆಂದು ಭಾವಿಸಲಾಗದು. ಅಥವಾ, ವಿಷಯಗಳೇ ಅಸತ್ಯವಾಗಿರುವುದರಿಂದ, ಚೈತನ್ಯದಲ್ಲಿ ವಿಷಯಮಿಶ್ರಜ್ಞಾನವೂ ಅಸತ್ಯವಾಗಬೇಕಾಗಿರುವಕಾರಣ, ಆ ಆತ್ಮನು ಎಲ್ಲಿಯೂ ಭಾಸಮಾನನಾಗುವುದೇ ಇಲ್ಲವೆಂದೂ ತಿಳಿಯಬೇಕು ||೮||

ಏವಂಚ, ನಿರ್ವಿಷಯವಾದ ಚೈತನ್ಯವೊಂದೇ ಅವಶಿಷ್ಟವಾಗಿ ನಿಲ್ಲುವುದು. ನೀನೂ ಅದನ್ನೇ ಚೆನ್ನಾಗಿ ವಿಚಾರಮಾಡಿ ತಿಳಿಯುವವಳಾಗು. ಆ ಪರಮಪದವು, ಉತ್ಪತ್ತಿಲಯಗಳಿಲ್ಲದುದಾಗಿರುವುದು ; ಶಾಂತವಾಗಿಯೂ ನಿರುಪಾಧಿಕವಾಗಿಯೂ ಪರಾತ್ಪರವಾಗಿಯೂ

ಕಿಲ ಮಣ್ಡಪಗೇಹೇನ್ತಃ ಸ್ವಸ್ವಭಾವೋದಿತಾತ್ಮನಿ ‖೧೦‖
ಏವಮಾರಮ್ಭಘನಯೋಃ ಅಪಿ ಮಣ್ಡಪಯೋಸ್ತಯೋಃ|
ಉದರೇ ಶೂನ್ಯಮಾಕಾಶಂ ಏವಾಸ್ತಿ ನ ಜಗದ್ಭ್ರಮಃ ‖೧೧‖
ಭ್ರಮದ್ರಷ್ಟುರಭಾವೇ ಹಿ ಕೀದೃಶೀ ಭ್ರಮತಾ ಭ್ರಮೇ |
ನಾಸ್ತ್ಯೇವ ಭ್ರಮಸತ್ತಾತೋ ಯದಸ್ತಿ ತದಜಂ ಪದಮ್ ‖೧೨‖
ಭ್ರಮೋ ದೃಶ್ಯಮಸತ್ ತಸ್ಯ ದ್ರಷ್ಟೃದೃಶ್ಯದಶಾ ಕುತಃ |
ದ್ರಷ್ಟೃದೃಶ್ಯಕ್ರಮಾಭಾವಾತ್ ಅದ್ವಯಂ ಸಹಜಂ ಹಿ ತತ್ ‖೧೩‖
ತತ್ ಪದಂ ಪರಮಂ ವಿದ್ಧಿ ನಾಶೋತ್ಪಾದವಿವರ್ಜಿತಮ್ |
ಸ್ವಯಂ ಕಚಿತಮಾಭಾತಂ ಶಾನ್ತಮಾದ್ಯಮನಾಮಯಮ್ ‖೧೪‖
ಕಿಲ ಮಣ್ಡಪಗೇಹಾನ್ತಃ ಸ್ವಸ್ವಭಾವೋದಿತಾತ್ಮನಿ |
ವಿಹರನ್ತಿ ಜನಾಸ್ತತ್ರ ಸ್ವಗೇಹೇ ಸ್ವವ್ಯವಸ್ಥಯಾ ‖೧೫‖

ಇರುವ ಆ ಚೈತನ್ಯವು, ತಾನೇ ಆ ಮಂಡಪದಲ್ಲಿ ಸ್ಫುರಣಹೊಂದಿ ಭಾಸಿಸುತಿರುವುದಲ್ಲದೆ, ಅದೊಂದು ಪೃಥಕ್ಪದಾರ್ಥವಲ್ಲ. ಇದೇ ಪಂಡಿತರ ಅಭಿಪ್ರಾಯವು ‖೯—೧೦‖

ಹೀಗೆ ಆ ಮಂಡಪಗಳೆರಡೂ ಮಹಾಡಂಬರಯುಕ್ತಗಳಾಗಿದ್ದರೂ, ಅವುಗಳೊಳಗೆ ಶೂನ್ಯವಾದ ಆಕಾಶಮಾತ್ರವೇ ಇರುವುದಲ್ಲದೆ—ಜಗತ್ತೆಂಬ ಭ್ರಮೆಯಿಲ್ಲವೇಇಲ್ಲ ‖೧೧‖

ಭ್ರಮೆಯೆಂಬುದು ಇಲ್ಲವೇ ಇಲ್ಲವೆಂದು ನಿಷ್ಕರ್ಷಿಸುವ ಬಗೆ ಯಾವುದೆಂದರೆ,— ಭ್ರಮವನ್ನನುಭವಿಸತಕ್ಕವನೊಬ್ಬನಿದ್ದರಲ್ಲವೆ ಭ್ರಮೆಯು ಸಿದ್ಧವಾಗುವುದು! ಅವನೇ ಇಲ್ಲದಿರುವಾಗ, ಭ್ರಮದಲ್ಲಿ ಭ್ರಮತ್ವವೆಂಬುದಾವುದು? (ಭ್ರಮವೆಲ್ಲಿರುವುದು?) ಅದು ಕಾರಣ, ಭ್ರಮಕ್ಕೆ ಸದ್ಭಾವವೇ ಅಸತ್ಯವಾಯ್ತು. ಯಾವುದು ಇರುವುದೆಂದು ಹೇಳುವೆವೋ, ಅದು ಶಾಶ್ವತವಾದ ಪರಮಪದವೇ ಆಗಿರುವುದು ‖೧೨‖

'ಭ್ರಮವೇ ಭ್ರಮವನ್ನು ನೋಡುತದೆಯೆಂದು ಏತಕ್ಕೆ ಹೇಳಬಾರದು?' ಎಂದರೆ, ಭ್ರಮವೆಂಬುದು—ಅಸತ್ಯವಾದ ಈ ದೃಶ್ಯವಾಗುವುದು. ಇದು, ತಾನೇ ದೃಶ್ಯ (ನೋಡಲ್ಪಡತಕ್ಕುದು) ವಾಗಿಯೂ—ದ್ರಷ್ಟೃ (ನೋಡತಕ್ಕುದು) ವಾಗಿಯೂ, ಎರಡವಸ್ಥೆಯನ್ನೂ ಏಕಕಾಲದಲ್ಲಿ ಅನುಭವಿಸುವುದು ಹೇಗೆ? ಹೀಗೆ ದ್ರಷ್ಟೃದೃಶ್ಯಕ್ರಮವೇ ಸರಿಯಾಗಿ ಉಪಪನ್ನವಾಗುವುದಿಲ್ಲವಾದಕಾರಣ, ಸ್ವತಸ್ಸಿದ್ಧವಾಗಿರುವ ಆ ಅದ್ವಿತೀಯ ಪದಾರ್ಥವೊಂದೇ ಇರುವುದೆಂದು ನಿಶ್ಚಯವಾಗುವುದು ‖೧೩‖

ಆ ಪರಮಪದವು, ಉತ್ಪತ್ತಿಲಯ ಶೂನ್ಯವಾಗಿರುವುದೆಂದೂ—ಸ್ವಯಂಪ್ರಕಾಶವಾದುದೆಂದೂ—ನಿರುಪಪ್ಲವವಾದುದೆಂದೂ—ಸರ್ವಕ್ಕೂ ಆದಿಭೂತವಾದುದೆಂದೂ— ನಿರುಪಾಧಿಕವಾದುದೆಂದೂ ತಿಳಿಯುವವಳಾಗು ‖೧೪‖

ಹೀಗೆ ಸ್ವಭಾವಸಿದ್ಧವಾಗಿರುವ ಆ ಮಂಟಪದೊಳಗೆ, ಜನಗಳು ತಂತಮಗೆ ಬೇಕಾದಷ್ಟು ವಿಶಾಲವಾಗಿರುವ ಸ್ಥಳದಲ್ಲಿರುವಂತೆ ವಿಹರಿಸಿಕೊಂಡಿರುವರು. ಇದನ್ನು ನೋಡಿದವರಿಗೆಲ್ಲ ಆಶ್ಚರ್ಯವುಂಟಾಗುವುದಲ್ಲವೆ! ‖೧೫‖

ನ ಜಗತ್ ತತ್ರ ನೋ ಸರ್ಗಃ ಕಶ್ಚಿದಪ್ಯನುಭೂಯತೇ ।
ತೇನಾಹಮಜಮಾಕಾಶಂ ಜಗದಿತ್ಯೇವ ವರ್ತತೇ ॥೧೬॥
ಸರ್ವಂ ಶೂನ್ಯಾತ್ಮವಿಜ್ಞಾನಂ ಮೇರ್ವಾದಿಗಿರಿಜಾಲಕಮ್ ।
ನೇದಂ ಕುಡ್ಯಮಯಂ ಕಿಞ್ಚಿತ್ ಯಥಾ ಸ್ವಪ್ನೇ ಮಹಾಪುರಮ್ ॥೧೭॥
ದೇಶೇ ಪ್ರಾದೇಶಮಾತ್ರೇಽಪಿ ಗಿರಿಜಾಲಮಯಾನ್ಯಪಿ ।
ವಜ್ರಸಾರಾಣಿ ಖಾನ್ಯೇವ ಲಕ್ಷಾಣಿ ಜಗತೋ ವಿದುಃ ॥೧೮॥
ಜಗನ್ತಿ ಸುಬಹೂನ್ಯೇವ ಸಮ್ಭವನ್ತ್ಯಣುಕೇಽಪಿ ಚ ।
ಕದಳೀಪಲ್ಲವಾನೀವ ಸನ್ನಿವೇಶೇನ ಭೂರಿಶಃ ॥೧೯॥
ತ್ರಿಜಗಚ್ಚಿದಣಾವನ್ತಃ ಅಸ್ತಿ ಸ್ವಪ್ನಪುರಂ ಯಥಾ ।
ತಸ್ಯಾಪ್ಯನ್ತಶ್ಚಿದಣವಃ ತೇಷ್ವಪ್ಯೇಕೈಕಶೋ ಜಗತ್ ॥೨೦॥
ತೇಷಾಂ ಯಸ್ಮಿನ್ ಜಗತ್ಯೇಷಃ ಪದ್ಮೋ ರಾಜಾ ಶವಃ ಸ್ಥಿತಃ ।
ಲೀಲಾ ತವ ಸಪತ್ನೀಯಂ ಪ್ರಾಪ್ತಾ ಪೂರ್ವತರಾ ಶುಭೇ ॥೨೧॥

ವಾಸ್ತವ್ಯವಾಗಿ ನೋಡಿದರೋ,—ಅಲ್ಲಿ ಯಾವ ಜಗತ್ತೂ ಕಾಣುವುದಿಲ್ಲ; ಯಾವ ಸೃಷ್ಟಿಯೂ ಕಾಣುವುದಿಲ್ಲ. ಹೀಗೆ ಪ್ರತ್ಯಕ್ಷಪ್ರಮಾಣವಿರುವುದರಿಂದ, ಅಹಂಕಾರಸಾಕ್ಷಿಭೂತವಾದ ಚಿದಾಕಾಶವೇ ಜಗತ್ತೆಂದು ಸ್ಪಷ್ಟವಾಗಿರುವುದು ॥೧೬॥

ಹೀಗೆ ಪ್ರತ್ಯಕ್ಷಪ್ರಮಾಣಸಿದ್ಧವಾದಮೇಲೆ, ಅನುಮಾನಪ್ರಮಾಣವನ್ನೂ ಕೇಳುವವಳಾಗು. ಮೇರು ಮುಂತಾದ ಪರ್ವತಸಮೂಹದೊಡಗೂಡಿರುವ ಈ ವಿಶ್ವವು, ಆತ್ಮಜ್ಞಾನಮಾತ್ರರೂಪವಾದುದೇ ಹೊರತು, ನಮ್ಮ ಕಣ್ಣಿಗೆಕಾಣುತಿರುವ ಸ್ಥೂಲರೂಪವುಳ್ಳುದಲ್ಲ. ಸ್ವಪ್ನದಲ್ಲಿ ಕಾಣುವ ಮಹಾಪಟ್ಟಣವೇ ಇದಕ್ಕೆ ದೃಷ್ಟಾಂತವು ॥೧೭॥

ಈ ಸ್ವಪ್ನದಲ್ಲಿ, ಒಂದು ಪ್ರಾದೇಶ(ಚೋಟು) ಮಾತ್ರವಾದ ಸ್ಥಳದಲ್ಲಿಯೇ, ಕೇವಲಾಕಾಶದಲ್ಲಿಯೇ ಅನೇಕ ಪರ್ವತ ಸಮುದಾಯಯುಕ್ತಗಳಾಗಿಯೂ ವಜ್ರದಂತೆ ಸ್ಥಿರತರವಾಗಿಯೂ ಇರುವ ಲಕ್ಷೋಪಲಕ್ಷ ಜಗತ್ತುಗಳಿರುವುವೆಂದು ಅನುಭವವುಂಟಾಗುವುದಲ್ಲವೆ! ॥

ಈರೀತಿಯಾಗಿ, ಜಾಗ್ರತ್ತಿನಲ್ಲಿಯೂ ಕೂಡ, ಅಣುಪದಾರ್ಥದಲ್ಲಿಯೇ ಅನೇಕ ಪ್ರಪಂಚಗಳು ಸಂಭವವಾಗುವುವು. ಇದಕ್ಕೊಂದುದಾಹರಣೆಯನ್ನು ಕೇಳು. ಒಂದು ಬಾಳೆಯಕಂಬವನ್ನು ತೆಗೆದುಕೊಂಡು ಅದರ ಪಟ್ಟೆಗಳನ್ನು ಸುಲಿಯುತ ಹೋದರೆ, ಒಂದರೊಳಗೊಂದರಂತೆ ಅನೇಕ ಪಟ್ಟೆಗಳು ಕಾಣುವುವಲ್ಲವೆ! ಹೀಗೆಯೇ ವಿಚಾರಮಾಡುತಹೋದರೆ, ಆ ಪರಮಾಣುಸ್ವರೂಪದಲ್ಲಿಯೇ ಲಕ್ಷೋಪಲಕ್ಷಪ್ರಪಂಚಗಳಿರುವುವೆಂಬುದು ಗೊತ್ತಾಗುವುದು ॥೧೯॥

ಹೀಗೆ ಸ್ವಪ್ನಕಾಲದಲ್ಲಿ ಕಾಣುವ ಪಟ್ಟಣದಂತೆ, ಜ್ಞಾನಪರಮಾಣುವಿನೊಳಗೆ ಮೂರು ಲೋಕವೂ ಇರುವುದು. ಅದರೊಳಗೆ ಯಥಾಪ್ರಕಾರವಾಗಿ ಜ್ಞಾನಪರಮಾಣುಗಳೂ, ಅವುಗಳೊಳಗೆ ಪ್ರತಿಯೊಂದರಲ್ಲಿಯೂ ಒಂದೊಂದು ಜಗತ್ತೂ ಇರುವುವು ॥೨೦॥

ಎಲೌ ಲೀಲೆ! ಅವುಗಳ ಮಧ್ಯದಲ್ಲಿ, ಯಾವ ಜಗತ್ತಿನಲ್ಲಿ ನಿನ್ನ ಪತಿಯಾದ ಪದ್ಮರಾಜನು ಶವರೂಪನಾಗಿರುವನೋ, ಅಲ್ಲಿಗೆ—ನಿನ್ನ ಸವತಿಯಾದ ಈ ಲೀಲೆಯು ಮೊದಲೇ ಹೊರಟುಹೋಗಿರುವಳು ॥೨೧॥

ಯದೈವ ಮೂರ್ಛಾಮಾಯಾತಾ ಲೀಲೇಯಂ ಪುರತಸ್ತವ ।
ತದೈವ ಭರ್ತುಃ ಪದ್ಮಸ್ಯ ಶವಸ್ಯ ನಿಕಟೇ ಸ್ಥಿತಾ ॥೨೨॥

ಲೀಲೋವಾಚ.

ಕಥಮೇಷಾ ಪುರಾ ದೇವಿ ಸಮ್ಪನ್ನಾ ತತ್ರ ದೇಹಿನೀ ।
ಕಥಂ ಚ ತತ್ಸಪತ್ನೀಕಭಾವಮಾಪ್ತವತೀ ಸ್ಥಿತಾ ॥೨೩॥
ತೇ ಚಾಸ್ಯಾವದ ಕಿಂ ರೂಪಂ ಪಶ್ಯನ್ತ್ಯಥ ವದನ್ತಿ ಕಿಮ್ ।
ತದ್ಗೇಹವರವಾಸ್ತವ್ಯಾಃ ಸಮಾಸೇನೇತಿ ಮೇ ವದ ॥೨೪॥

ಶ್ರೀದೇವ್ಯುವಾಚ.

ಶೃಣು ಸರ್ವಂ ಸಮಾಸೇನ ಯಥಾ ಪೃಷ್ಟಂ ವದಾಮಿ ತೇ ।
ಲೀಲೇ ಲೀಲಾಸ್ವವೃತ್ತಾನ್ತಂ ಅನ್ತದಂ ದೃಶ್ಯದುರ್ದಶಮ್ ॥೨೫॥
ಪದ್ಮಸ್ತವ ಸ ಭರ್ತೈಷಃ ಭ್ರಾನ್ತಿಂ ತಾವತ್ ತತಾಮಿಮಾಮ್ ।
ಇಯಂ ಜಗನ್ಮಯೀ ತಸ್ಮಿನ್ನೇವ ಸದ್ಮನಿ ಪಶ್ಯತಿ ॥೨೬॥
ಭ್ರಾನ್ತಿಯುದ್ಧಮಿದಂ ಯುದ್ಧಂ ಏಷಾ ಭ್ರಾನ್ತಿರ್ಜನೋಽಜನಃ ।
ಭ್ರಾನ್ತ್ಯೈವಾಸ್ತೀಹ ಮರಣಂ ಏಷ ಚೈವಂ ಭ್ರಮಾತ್ಮಕಃ ॥೨೭॥

ಈ ಲೀಲೆಯು, ನಿನ್ನಮುಂದೆಯೇ ಯಾವಾಗ ಮೂರ್ಛೆಹೊಂದಿದಳೋ, ಆಗಲೇ ಪತಿಯಾದ ಪದ್ಮನ ಶವದ ಸಮೀಪಕ್ಕೆ ಹೋಗಿ ನಿಂತುಬಿಟ್ಟಳು ॥೨೨॥

ಹೀಗೆ ಸರಸ್ವತಿಯು ಹೇಳುತ್ತಿರುವುದನ್ನು ಕೇಳಿ, ಲೀಲೆಯು ಪ್ರಶ್ನೆಮಾಡುವಳು:—

ಎಲೌ! ದೇವಿ! ಇವಳು ಪೂರ್ವಭಾವಿಯಾಗಿಯೇ ಅಲ್ಲಿ ಹೇಗೆ ಶರೀರಗ್ರಹಣಮಾಡಿದಳು? ಆದರಮೇಲೆ, ಅಲ್ಲಿ ನನಗೆ ಸಪತ್ನೀಭಾವವನ್ನು ಹೊಂದಿದುದು ಹೇಗೆ? ॥೨೩॥

ಅಲ್ಲಿ ಪದ್ಮರಾಜನ ಅರಮನೆಯೊಳಗೆ ವಾಸಮಾಡುವ ಆ ಜನಗಳು, ಇವಳ ರೂಪವನ್ನು ಯಾವರೀತಿಯಾಗಿ ನೋಡುವರು? ಮತ್ತು ಯಾವರೀತಿಯಾಗಿ ಹೇಳುವರು?—ಈ ವಿಷಯವನ್ನು ನೀನು ನನಗೆ ಸಂಕ್ಷೇಪವಾಗಿ ಹೇಳುವವಳಾಗು ॥೨೪॥

ಇದಕ್ಕೆ ಶ್ರೀಸರಸ್ವತಿಯು ಉತ್ತರ ಹೇಳುವಳು:—

ಎಲೌ! ಲೀಲೆ! ನೀನು ಕೇಳಿದುದೆಲ್ಲವನ್ನೂ ಯಥಾಕ್ರಮವಾಗಿ ನಿನಗೆ ಹೇಳುವೆನು; ಅದೆಲ್ಲವನ್ನೂ ಸಂಕ್ಷೇಪವಾಗಿ ಕೇಳುವವಳಾಗು. ಇದು ಲೀಲಾನಾಮಕಳಾದ ನಿನ್ನ ಸ್ವಕೀಯವೃತ್ತಾಂತವೇ ಆಗಿರುವುದು; ಇದರಿಂದ ನಿನಗೆ ನಿಶ್ಚಯಜ್ಞಾನವುಂಟಾಗುವುದು; ಮತ್ತು ಮರಣ ಪರಲೋಕಗಮನಾದಿಗಳಲ್ಲುಂಟಾಗುವ ಸಮಸ್ತ ದುರ್ದಶೆಗಳೂ, ಇದರಿಂದ ಸ್ಪಷ್ಟವಾಗಿ ಗೊತ್ತಾಗುವುವು ॥೨೫॥

ಈಗ ನಾವಿರುವ ಈ ಪಟ್ಟಣ ಮುಂತಾದುದೂ ಕೇವಲ ಭ್ರಾಂತಿಮಯವಾದುದು; ಇದು, ಆ ಪದ್ಮರಾಜನಿರುವ ಮನೆಯಲ್ಲಿಯೂ ವಿಸ್ತರಿಸಿಕೊಂಡಿರುವುದು. ಇಂತಹ ಈ ಭ್ರಾಂತಿಯನ್ನು, ನಿನ್ನ ಪತಿಯಾದ ಆ ಪದ್ಮನು, ಆ ಮನೆಯಲ್ಲಿಯೇ ನೋಡುತ್ತಿರುವನು ॥

ಈಗ ನಡೆದ ಈ ಯುದ್ಧವೂ ಭ್ರಾಂತಿಮಯವಾದ ಯುದ್ಧವೇ; ಇದೂ ಭ್ರಾಂತಿಯೇ; ಈ ಜನಗಳೂ ತಾತ್ವಿಕರಾದ ಜನರಲ್ಲ. ಇಲ್ಲಿ ಮರಣವಾದುದೂ ಭ್ರಾಂತಿಯೇ; ಈ ವಿದೂರಥನೂ ಕೂಡ ಅದೇರೀತಿಯಾಗಿ ಭ್ರಾಂತಿಮಯನಾದವನೇ ॥೨೭॥

ಭ್ರಮಕ್ರಮೇಣಾನೇನೈವ ಲೀಲಾಸ್ಯ ದಯಿತಾ ಸ್ಥಿತಾ ।
ತ್ವಂ ಚೈಷಾ ಚ ವರಾರೋಹೇ ಸ್ವಪ್ನಮಾತ್ರಂ ವರಾಙ್ಗನೇ ॥೨೮॥
ಯಥಾ ಭವತ್ಯಾವೇತಸ್ಯ ಸ್ವಪ್ನಮಾತ್ರಂ ವರಾಙ್ಗನೇ ।
ತಥಾ ಭವತ್ಯೋರ್ಭರ್ತೈಷಃ ತಥೈವಾಹಮಪಿ ಸ್ವಯಮ್ ॥೨೯॥
ಜಗಚ್ಛೋಭೈವೇದೃಶೀಯಂ ದೃಶ್ಯಮೇತದಿಹೋಚ್ಯತೇ ।
ಏತದೇವ ಪರಿಜ್ಞಾತಂ ದೃಶ್ಯಶಬ್ದಾರ್ಥಮುಜ್ಝತಿ ॥೩೦॥
ಏವಮೇಷಾ ತ್ವಮೇಷಾ ಚ ಸಮ್ಪನ್ನೈವಮಸೌ ನೃಪಃ ।
ಅಹಂ ಚಾತ್ಮನಿ ಸತ್ಯತ್ವಂ ಗತಾ ಸರ್ವತಯಾತ್ಮನಃ ॥೩೧॥
ಇಮೇ ವಯಮಿಹಾನ್ಯೋನ್ಯಂ ಸಮ್ಪನ್ನಾಶ್ಶೋದಿತಾಇತಿ ।
ಇತ್ಥಂ ಸರ್ವಾತ್ಮಕತಯಾ ಮಹಾಚಿದ್ಘನಸಂಸ್ಥಿತೇಃ ॥೩೨॥
ಏವಮೇಷಾ ಸ್ಥಿತಾ ರಾಜ್ಞೀ ಹಾರಿಹಾಸವಿಲಾಸಿನೀ ।
ಲೀಲಾವಿಲೋಲವದನಾ ನವಯೌವನಶಾಲಿನೀ ॥೩೩॥

ಈ ಭ್ರಾಂತಿಕ್ರಮದಿಂದಲೇ, ಈ ಅಪ್ರಬುದ್ಧಲೀಲೆಯೂ ನೀನೂ ಇವನಿಗೆ ಪತ್ನಿಯಾಗಿರುವಿರಿ. ಎಲೌ ಉತ್ತಮಸ್ತ್ರೀಯಾದ ಲೀಲೆ! ಇದೆಲ್ಲವೂ ಕೇವಲ ಸ್ವಪ್ನಮಾತ್ರವೆಂದು ತಿಳಿ ॥೨೮॥

ನೀವಿಬ್ಬರೂ ಇವನಿಗೆ ಹೇಗೆ ಸ್ವಪ್ನಮಾತ್ರರಾಗಿರುವಿರೋ, ನಿಮಗೂ ನಿಮ್ಮ ಪತಿಯು ಹಾಗೆಯೇ ಇರುವನು. ನಾನೂ ಕೂಡ, ನಿಮ್ಮೆಲ್ಲರಿಗೂ ಸ್ವಪ್ನಮಾತ್ರಳೇ ಸರಿ ॥೨೯॥

ಈ ಜಗತ್ತಿನ ಶೋಭೆ (ಆಭಾಸ)ಯೇ ಇಂತಹದು. ಇದೇ ವಿವೇಕದಿಂದ ವಿಚಾರಪೂರ್ವಕವಾಗಿ ತಿಳಿಯಲ್ಪಟ್ಟರೆ, ಆಗ ದೃಶ್ಯವೆಂಬ ಶಬ್ದಕ್ಕೆ ವಿಷಯವಾಗುವುದನ್ನು ಬಿಟ್ಟುಬಿಡುವುದು. (ದೃಶ್ಯವೆಂಬ ಶಬ್ದದ ಅರ್ಥವೇ ಹೋಗಿಬಿಡುವುದು) ॥೩೦॥

ಈ ಅಪ್ರಬುದ್ಧಲೀಲೆಯೂ, ನೀನೂ, ಈ ದೊರೆಯೂ, ಎಲ್ಲರೂ ಇರುವುದೂ ಈರೀತಿಯಾಗಿಯೇ. ಆ ಆತ್ಮನು ಪೂರ್ಣನಾಗಿರುವುದರಿಂದ, ನಾನು ಆವನಲ್ಲಿ ಸತ್ಯವಾಗಿರುವುದೂ ಹೀಗೆಯೇ ॥೩೧॥

ಎಲೌ! ಲೀಲೆ! ಇನ್ನೂ ಕೇಳು;—ಇಲ್ಲಿ ಈ ದೊರೆಗಳಿರುವರೆಂದೂ, ನಾವಿರುವೆವೆಂದೂ, ನಮ್ಮಲ್ಲಿ ಒಬ್ಬರನ್ನೊಬ್ಬರು ಅನುಗ್ರಹಿಸುವೆವೆಂದೂ, ಹೀಗೆಲ್ಲ ತಿಳಿದಿರುವೆಯಲ್ಲವೆ! ಇದೆಲ್ಲವೂ, ಆ ಚಿತ್ಪದಾರ್ಥವು ಸರ್ವಸ್ವರೂಪವಾಗಿರುವುದರಿಂದ—ಅದರಲ್ಲಿ ಮಿಥ್ಯಾಪದಾರ್ಥವನ್ನು ಕಲ್ಪಿಸಿಕೊಂಡುದುದರಿಂದಲ್ಲವೆ ಉಂಟಾಗಿರುವುದು! ಈ ಲೀಲೆಯು ಇಲ್ಲಿ ಉದ್ಭವಿಸಿರುವಳೆಂಬುದೂ ಹೀಗೆಯೇ ಎಂದು ತಿಳಿಯಬೇಕು. ಇವಳು ಇಲ್ಲಿದ್ದ ಸ್ಥಿತಿಯನ್ನು ನೀನೇ ನೋಡಿರುವೆಯಷ್ಟೆ! ಇವಳು—ಪರಿಹಾಸವಾಗಿ ವಿಲಾಸಮಾಡುತಲೂ, ಲೀಲೆಯಿಂದ ಮುಖವನ್ನು ತಿರುಗಿಸುತಲೂ, ನವಯೌವನದಿಂದ ಪ್ರಕಾಶಮಾನಳಾಗಿಯೂ ಇದ್ದಳು ॥

ಪೇಶಲಾಚಾರಮಧುರಾ ಮಧುರೋದಾರಭಾಷಿಣೀ ।
ಕೋಕಿಲಾಸ್ವರಸಙ್ಕಾಶಾ ಮದಮುನ್ಮಥಮನ್ಥರಾ ॥೩೪॥
ಅಸಿತೋತ್ಪಲಪತ್ರಾಕ್ಷೀ ವೃತ್ತಪೀನಪಯೋಧರಾ ।
ಕಾನ್ತಕಾಞ್ಚನಗೌರಾಙ್ಗೀ ಪಕ್ವಬಿಮ್ಬಫಲಾಧರಾ ॥೩೫॥
ತ್ವತ್ಸಙ್ಕಲ್ಪಾತ್ಮಕಸ್ಯೈಷಾ ಯದಾ ಭರ್ತುರ್ಮನಃಕಲಾ ।
ತದಾ ತ್ವತ್ಸದೃಶಾಕಾರಾ ಸ್ಥಿತೈಷಾ ಚಿಚ್ಚಮತ್ಕೃತೌ ॥೩೬॥
ತ್ವದ್ಭರ್ತುರ್ಮರಣೇ ಕ್ಷಿಪ್ರಂ ಸಮನನ್ತರಮೇವ ಹಿ ।
ತ್ವದ್ಭರ್ತ್ರೈಷಾ ಪುರೋ ದೃಷ್ಟಾ ತ್ವತ್ಸಙ್ಕಲ್ಪಾತ್ಮನಾಮುನಾ ॥೩೭॥
ಯದಾಧಿಭೌತಿಕಂ ಭಾವಂ ಚೇತೋನುಭವತಿ ಸ್ವಯಮ್ ।
ಚೇತ್ಯಂ ಸನ್ಮಯಮೇವಾತಃ ಆತಿವಾಹಿಕಕಲ್ಪನಮ್ ॥೩೮॥
ಯದಾಧಿಭೌತಿಕಂ ಭಾವಂ ಚೇತೋ ವೇತ್ತಿ ನಸನ್ಮಯಮ್ ।
ಆತಿವಾಹಿಕಸಙ್ಕಲ್ಪಃ ತದಾ ಸತ್ಯೋಪಜಾಯತೇ ॥೩೯॥

ಮೃದುಮಧುರವಾಗಿ ಆಚಾರಗಳನ್ನು ನಡೆಯಿಸುತ್ತಿದ್ದಳು. ಮಧುರವಾಗಿಯೂ ಗಂಭೀರವಾಗಿಯೂ ಮಾತನಾಡುತಿದ್ದಳು. ಇವಳ ಸ್ವರವು ಕೋಗಿಲೆಯ ಹಾಗಿದ್ದಿತು. ಮದದಿಂದ ಪರಿಪೂರ್ಣಳಾಗಿದ್ದಳು ॥೩೪॥

ಇವಳ ಕಣ್ಣುಗಳು ಕನ್ನೈದಿಲೆಯಂತಿರುವುವು. ಇವಳ ಸ್ತನಗಳು ವರ್ತುಲವಾಗಿ ಸ್ಥೂಲವಾಗಿರುವುವು. ಶರೀರವು, ಸುವರ್ಣದಂತೆ ಗೌರವರ್ಣವಾಗಿ ಮನೋಹರವಾಗಿರುವುದು. ಪಕ್ವವಾದ ಬಿಂಬಫಲ (ತೊಂಡೆಹಣ್ಣು) ದಂತೆ ಇವಳ ಅಧರವು ಪ್ರಕಾಶಿಸುವುದು ॥೩೫॥

ನಿನ್ನ ಸಂಕಲ್ಪರೂಪನಾಗಿರುವ ಪತಿಗೆ ಯಾವಾಗ ಈರೀತಿಯಾದ ಮನೋವೃತ್ತಿಯೂ ವಾಸನೆಯೂ ಉಂಟಾಯ್ತೋ, ಆಗಲೇ ನಿನಗೆ ಸಮಾನಾಕಾರಳಾಗಿ ಈ ಲೀಲೆಯು—ಅವನ ಜ್ಞಾನದಲ್ಲಿ ಉದ್ಭವಿಸಿದಳು ॥೩೬॥

ನಿನ್ನ ಪತಿಯು ಮರಣಹೊಂದಿದಾಗ, ಆ ಉತ್ತರಕ್ಷಣವೇ, ಸಂಕಲ್ಪಾತ್ಮಕನಾಗಿರುವ ನಿನ್ನ ಪತಿಯು, ಇವಳನ್ನು ತನ್ನೆದುರಿಗೆ ಕಂಡುಬಿಟ್ಟನು ॥೩೭॥

‘ ಹೀಗೆ ಇವಳು ಕೇವಲ ವಾಸನಾಮಯಳಾಗಿದ್ದಮೇಲೆ, ಅವನು ಇವಳನ್ನು ಇದುವರೆಗೂ ಸತ್ಯವಾಗಿ ಅನುಭವಿಸಿದುದು ಹೇಗೆ? ’—ಎಂದು ಕೇಳುವೆಯೋ?—ನಮ್ಮ ಮನಸ್ಸು, ಆಧಿಭೌತಿಕ (ಸ್ಥೂಲ) ಶರೀರವೆಂಬ ಭಾವನೆಯನ್ನು ವಿಶೇಷವಾಗಿ ಮನನಮಾಡಿರುವುದು. ಈ ಅಭ್ಯಾಸಾತಿಶಯದಿಂದ, ದೃಶ್ಯವು ಕೇವಲ ಸತ್ಯವೆಂದೇ ನಮ್ಮ ಮನಸ್ಸಿಗೆ ದೃಢಪಡುವುದು. ಇದರಂತೆಯೇ ಆತಿವಾಹಿಕ (ಸೂಕ್ಷ್ಮ) ದೇಹಕಲ್ಪನೆಯೂ ಪ್ರಾತಿಭಾಸಿಕವಲ್ಲದೆ ಪಾರಮಾರ್ಥಿಕವಲ್ಲ ॥೩೮॥

ಯಾವಾಗ ನಮ್ಮ ಮನಸ್ಸು ಆಧಿಭೌತಿಕ ಪದಾರ್ಥವನ್ನು ಅಸತ್ಯವೆಂದು ತಾನು ತಿಳಿದುಕೊಳ್ಳುವುದೋ, ಆಗ, ಪ್ರಪಂಚದಲ್ಲಿ ಆತಿವಾಹಿಕ (ಸೂಕ್ಷ್ಮ) ದೇಹವೂ ಪ್ರಾತಿಭಾಸಿಕವೇಯೆಂಬ ನಿಶ್ಚಯವುಂಟಾಗುವುದು ॥೩೯॥

ಅಥೋ ಮರಣಸಂವಿತ್ತ್ಯಾ ಪುನರ್ಜನ್ಮಮಯೋ ಭ್ರಮೋ ।
ತ್ವಂ ಹಿ ಸಂವಿದಾತಾನೇನ ತ್ವಯಾ ಚ ಗತಏವ ಸಃ ॥೪೦॥
ಇತ್ಥಂ ತ್ವಾಂ ದೃಷ್ಟವಾನೇಷಃ ದೃಷ್ಟಶ್ಚೈಷ ತ್ವಯೇತಿ ಚ ।
ತ್ವಮಪ್ಯಾತ್ಮನಿ ಸಮ್ಪನ್ನಾ ಸರ್ವಗತ್ವಾಚ್ಚಿದಾತ್ಮನಃ ॥೪೧॥
ಬ್ರಹ್ಮ ಸರ್ವಗತಂ ಯಸ್ಮಾತ್ ಯಥಾ ಯತ್ರ ಯದೋದಿತಮ್ ।
ಭವತ್ಯಾಶು ತಥಾ ತತ್ರ ಸ್ವಸ್ವಶಕ್ತ್ಯೈವ ಪಶ್ಯತಿ ॥೪೨॥
ಸರ್ವತ್ರ ಸರ್ವಶಕ್ತಿತ್ವಾತ್ ಯತ್ರ ಯಾ ಶಕ್ತಿರುನ್ನಯೇತ್ ।
ಆಸ್ತೇ ತತ್ರ ತಥಾ ಭಾತಿ ತೀವ್ರಸಂವೇದಹೇತುತಃ ॥೪೩॥
ಮೃತಿಮೋಹಕ್ಷಣೇನೈವ ಯದೈತೌ ದಮ್ಪತೀ ಸ್ಥಿತೌ ।
ತದೈವಾಭ್ಯಾಮಿದಂ ಬುದ್ಧಂ ಪ್ರತಿಭಾಸವಶಾದ್ಧೃದಿ ॥೪೪॥
ಆವಯೋಃ ಪಿತರಾವೇತೌ ಇಮೇ ವೈ ಚಾಪಿ ಮಾತರೌ ।
ದೇಶಏಷ ಧನಂ ಚೇದಂ ಕರ್ಮೇದಂ ಪೂರ್ವಮೀದೃಶಮ್ ॥೪೫॥

ಹೀಗೆ ಆ ಪದ್ಮರಾಜನ ಜನ್ಮದಲ್ಲಿ ಆದಬಳಿಕ, ಮರಣವಾಯ್ತೆಂದು ಜ್ಞಾನವುಂಟಾಯ್ತು; ಅನಂತರ ಮತ್ತೊಂದು ಜನ್ಮವುಂಟಾಗಿರುವುದೆಂದು ಭ್ರಮೆ ಹುಟ್ಟಿತು. ಈ ಭ್ರಮೆಯಲ್ಲಿ, ಅವನು ನಿನ್ನನ್ನೂ (ಪ್ರಬುದ್ಧಲೀಲೆ) ನೀನು ಅವನನ್ನೂ ಅನುಭವಿಸಿದಂತೆ ತಿಳಿದುಕೊಂಡಿದ್ದಿರಿ ॥೪೦॥

ಇವನು ನಿನ್ನನ್ನು ನೋಡಿದುದೂ ವಾಸನಾಬಲದಿಂದಲೇ; ನೀನು ಅವನನ್ನು ನೋಡಿದುದೂ ವಾಸನಾಬಲದಿಂದಲೇ. ಜ್ಞಾನವೆಂಬುದು ಸರ್ವತ್ರ ಅನುಗತವಾಗಿರುವಕಾರಣ, ನೀನೂ ಆ ಜ್ಞಾನಾತ್ಮದಲ್ಲಿಯೇ ಅಂತರ್ಗತಳಾದವಳಾಗಿರುವೆ ॥೪೧॥

ಹೀಗೆ ಸರ್ವಗತವಾಗಿರುವ ಜ್ಞಾನರೂಪವಾದ ಪರಬ್ರಹ್ಮವು, ಯಾವ ಕಡೆಯಲ್ಲಿ ಯಾವಾಗ ಯಾವರೀತಿಯಾಗಿ ಉದಯಿಸುವುದೋ; ಅಲ್ಲಿ ಅಕ್ಷಣವೇ ಆವಿಧವಾಗಿಯೇ ವಾಸನಾಬಲದಿಂದ ಅನುಭವವುಳ್ಳದಾಗುವುದು ॥೪೨॥

ಈ ಬ್ರಹ್ಮವು ಸರ್ವತ್ರ ಸರ್ವವಿಧವಾದ ಶಕ್ತಿಯೂ ಉಳ್ಳದಾದಕಾರಣ, ಯಾವ ಕಡೆಯಲ್ಲಿ ಯಾವ ಶಕ್ತಿಯು ಕರ್ಮಬಲದಿಂದ ಉದಯಿಸುವುದೋ; ಅಲ್ಲಿ ಆರೀತಿಯಾಗಿಯೇ ನೆಲೆಸುವುದು. ಮತ್ತು, ದೃಢತರಾಭ್ಯಾಸವಾಸನಾಬಲದಿಂದ ಆ ವಿಧವಾಗಿಯೇ ಭಾಸಮಾನವಾಗುವುದು ॥೪೩॥

ಹೀಗಿರುವಕಾರಣ, ಈ ದಂಪತಿಗಳಾದ ಅಪ್ರಬುದ್ಧಲೀಲೆಯೂ ವಿದೂರಥನೂ, ಯಾವಾಗ ಮರಣರೂಪವಾದ ಮೂರ್ಛೆಯೊಡಗೂಡಿದ್ದರೋ, ಆಗಲೇ, ಇವರು ತಮ್ಮ ಹೃದಯದಲ್ಲಿ ವಾಸನಾಪ್ರಬೋಧವಶದಿಂದ ಈರೀತಿಯಾದ ಅನುಭವವುಳ್ಳವರಾದರು. ಅವರಿಗೆ ಉಂಟಾದ ಅನುಭವವಾವುದೆಂದರೆ:—ಇವರು ನಮಗೆ ತಾಯಿತಂದೆಗಳು; ಇದು ನಮ್ಮ ದೇಶವು; ಇದು ನಮ್ಮ ಧನವು; ನಾವು ಈಗ ಈ ಕೆಲಸವನ್ನು ಮಾಡುತಿರುವೆವು: ಪೂರ್ವದಲ್ಲಿ ಇಂತಹ ಕೆಲಸವನ್ನು ಮಾಡಿದ್ದೆವು. ನಮ್ಮಿಬ್ಬರಿಗೂ ಹೀಗೆ ಮದುವೆಯಾಯ್ತು;

ಆವಾಂ ವಿವಾಹಿತಾವೇವಂ ಏವಂ ನಾವ್ಯೈಕತಾಂ ಗತೌ |
ಏತಯೋಃ ಸಾಪಿ ಜನತಾ ಯಾತಾ ತತ್ರೈವ ಸತ್ಯತಾಮ್ ||೪೬||
ತಥೈವಾತ್ರಾಸ್ತಿ ದೃಷ್ಟಾಂತಃ ಪ್ರತ್ಯಕ್ಷಂ ಸಪ್ನವೇದನಮ್ |
ಇತ್ಯೇವಂಭಾವಯಾ ಲೀಲೇ ಲೀಲಯಾಹಮಥಾರ್ಚಿತಾ ||೪೭||
ನಾಹಂ ಸ್ಯಾಂ ವಿಧವೇತ್ಯೇವ ವರೋ ದತ್ತೋ ಮಯಾಪ್ಯಸೌ |
ಇತ್ಯರ್ಥೇನ ಮೃತಾ ಪೂರ್ವಮೇವೇಹ ಖಲು ಬಾಲಿಕಾ ||೪೮||
ಭವತಾಂ ಚೇತನಾಂಶಾನಾಂ ಅಹಂ ಚೇತನಧರ್ಮಿಣೀ |
ಕುಲದೇವೀ ಸದಾ ಪೂಜ್ಯಾ ಸ್ವತಏವ ಕರೋಮ್ಯಹಮ್ ||೪೯||
ಅಥಾಸ್ಯಾಜೀವಕೋ ದೇಹಾತ್ ಪ್ರಾಣಮಾರುತರೂಪಧೃಕ್|
ಮನಸಾ ಚಲತಾಂ ಪ್ರಾಪ್ತೋ ಮುಖಾಗ್ರಾತ್ಯಕ್ತದೇಹಕಃ ||೫೦||

ಬಳಿಕ ನಾವಿಬ್ಬರೂ ಹೀಗೆ ಅನ್ಯೋನ್ಯವಾಗಿರುವೆವು.—ಎಂದು ಈರೀತಿಯಾಗಿ ಅವರಿಬ್ಬರೂ ಅನುಭವವುಳ್ಳವರಾದರು. ಬಳಿಕ, ಅವರಿಬ್ಬರೂ ಹಿಂದೆ ನೋಡಿದ್ದ ಅವರ ಸೇವಕ ಜನರೂಕೂಡ, ವಾಸನಾಬಲದಿಂದ ಅವರ ದೃಷ್ಟಿಗೆ ಸತ್ಯರಾಗಿಬಿಟ್ಟರು. ಸ್ವಪ್ನದಲ್ಲಿ ಕಂಡ ಪದಾರ್ಥವು—ವಾಸನಾಬಲದಿಂದ ಆಗ ಪ್ರತ್ಯಕ್ಷವಾಗಿರುವುದೇ ಈ ವಿಷಯದಲ್ಲಿ ದೃಷ್ಟಾಂತವೆಂದು ತಿಳಿ. ಎಲೌ! ಲೀಲೆ! ಇವಳು ಪದ್ಮರಾಜಗೃಹಕ್ಕೆ ಹೋದುದು ಹೇಗೆಂದು ನೀನು ಕೇಳಿದೆಯಲ್ಲವೆ! ಇವಳು—ನಾನು ವಿಧವೆಯಾಗಕೂಡದು—ಎಂದು ಸ್ಥಿರವಾದ ಭಾವನೆಯುಳ್ಳವಳಾಗಿ ನನ್ನನ್ನು ನಿತ್ಯವೂ ಪೂಜಿಸಿದಳು; ನಾನು ಆ ವರವನ್ನೂ ಇವಳಿಗೆ ಕೊಟ್ಟಿರುವೆನು. ಈ ಕಾರಣದಿಂದ, ಈ ಬಾಲಿಕೆಯಾದ ಲೀಲೆಯು ಗಂಡನಿಗಿಂತ ಮೊದಲೇ ಇಲ್ಲಿ ಮೃತಳಾದಳು ||೪೪—೪೮||

ನಾನು ನಿಮಗೆಲ್ಲರಿಗೂ ವರಪ್ರದಾನಮಾಡಲು ಕಾರಣವೇನೆನ್ನುವಿಯೋ?—ನೀವುಗಳು, ಚೇತನದ ಅಂಶಭೂತರಾದವರು. ನಾನು ಸಮಷ್ಟಿ ಚೇತನರೂಪಳಾಗಿರುವೆನು. ಅದುಕಾರಣ, ನಾನು ನಿಮಗೆ ಕುಲದೇವತೆಯಾಗಿರುವುದರಿಂದ, ನೀವುಗಳು ನನ್ನನ್ನು ಸರ್ವದಾ ಪೂಜಿಸಬೇಕಾಗಿರುವುದು. ನಾನಾದರೋ, ನಿಮಗೆ ಸ್ವತಏವ ಈ ವಿಧವಾದ ವರದಾನವನ್ನು ಮಾಡುತಿರುವೆನು ||೪೯||

ಇವಳು ಅಲ್ಲಿಗೆ ಹೋದ ಬಗೆಯನ್ನು ಹೇಳಿದೆನಷ್ಟೆ! ಬಳಿಕ ಇವಳು ಅಲ್ಲಿ ದೇಹಗ್ರಹಣಮಾಡಿದ ಬಗೆಯನ್ನು ಕೇಳು. ಇವಳ ಜೀವವು ಇಲ್ಲಿಂದ ಹೊರಡಲುಜ್ಜುಗಿಸಿ, ಪ್ರಾಣವಾಯುರೂಪವನ್ನು ಧರಿಸಿಕೊಂಡು, ಮುಖನಾಡೀಮಾರ್ಗದಿಂದ ಈ ದೇಹವನ್ನು ಪರಿತ್ಯಜಿಸಿ, ಮನಸ್ಸಿನೊಡನೆ ಹೊರಟುಹೋಯ್ತು||೫೦||

ತತೋ ಮರಣಮೂರ್ಛಾನ್ತೇ ಗೃಹೇಸ್ಮಿನ್ನೇವ ಚೈತಯಾ ।
ಬುದ್ಧ್ಯಾ ಭಾವಿತಆಕಾಶೇ ದೃಷ್ಟೋ ಜೀವಾತ್ಮನಾ ತತಃ ॥೫೧॥
ಸಮ್ಪನ್ನೈಷಾ ಹರಿಣನಯನಾ ಚನ್ದ್ರಬಿಮ್ಬಾನನಶ್ರೀಃ
ಮಾನೋನ್ನದ್ಧಾ ದಯಿತಲಲಿತಾ ಕಾನ್ತಮಾಭೋಕ್ತುಕಾಮಾ।
ಪೂರ್ವಸ್ಮೃತ್ಯಾ ಸರಭಸಮುಖೀ ಸಂಯುತಾ ಮಣ್ಡಲಾನ್ತಃ
ಸ್ವಪ್ನಾನ್ತೇ ವಾಽಪ್ರಕೃತಿವಿಭವಾ ಪದ್ಮಿನೀ ಚೋದಿತೇವ ॥೫೨॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಮರಣಸಮನಂತರ
ದೇಹಪ್ರತಿಭಾವರ್ಣನಂ ನಾಮ ದ್ವಿಪಞ್ಚಾಶಃ ಸರ್ಗಃ.

ಬಳಿಕ ಮರಣಮೂರ್ಛಾನಂತರದಲ್ಲಿ, ಈ ಮನೆಯ ಆಕಾಶದೊಳಗೆಯೇ, ಇವಳು ತನ್ನ ಬುದ್ಧಿಯಲ್ಲಿ ಭಾವನೆಮಾಡಿದ ಒಂದು ಪದಾರ್ಥವನ್ನು ಜೀವಾತ್ಮತ್ವೇನ ಕಂಡವಳಾದಳು ॥೫೧॥

ಹೀಗೆ ಇವಳು, ಸೂರ್ಯಕಿರಣದಿಂದ ಚೋದಿತವಾದ ಕಮಲಲತೆಯಂತೆ—ವಾಸನಾರೂಪವಾದ ಮೊಗ್ಗೆಯರಳಿದವಳಾಗಿ, ತನ್ನ ಭಾವನಾಬಲದಿಂದ, ಹರಿಣನೇತ್ರೆಯಾಗಿ—ಚಂದ್ರಮುಖಿಯಾಗಿ—ಮಹಾಮಾನಿನಿಯಾಗಿ—ದಯಿತನಿಗೆ ಪ್ರೀತಿಪಾತ್ರಳಾಗಿ—ತಾನೂ ಕಾಂತನೊಡನೆ ಸುಖಿಸಲಪೇಕ್ಷೆಯುಳ್ಳವಳಾಗಿ, ತನ್ನ ಪತಿಯಾದ ಪದ್ಮರಾಜನಿರುವ ಬ್ರಹ್ಮಾಂಡಮಂಡಲದೊಳಗೆ, ಅವನೊಡನೆ ಯುಕ್ತಳಾಗಿಬಿಟ್ಟಳು ॥೫೨॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಮರಣಾನಂತರ
ದೇಹಪ್ರತಿಭಾ ವರ್ಣನೆಯೆಂಬ ಐವತ್ತೆರಡನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ತ್ರಿಪಞ್ಚಾಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಅಥ ಲಬ್ಧವರಾ ದೇಹೇನಾನೇನೈವ ಮಹೀಪತಿಮ್ ।
ಪತಿಮಾಪ್ತುಂ ಪ್ರಯಾತ್ಯೇಷಾ ನಭೋಮಾರ್ಗೇಣ ವಿಷ್ಟಪಮ್ ॥೧॥
ಇತಿ ಸಞ್ಚಿನ್ತ್ಯ ಸಾನನ್ದಂ ಉದ್ದಾಮಮಕರಧ್ವಜಾ ।
ಪುಪ್ಲುವೇ ಪೇಲವಾಕಾರಾ ಪಕ್ಷಿಣೀವ ನಭಸ್ತಲೇ ॥೨॥
ಕುಮಾರೀಂ ತತ್ರ ಸಾ ಪ್ರಾಪ ಜ್ಞಪ್ತ್ಯೈವ ಪ್ರಹಿತಾಂ ಹಿತಾಮ್ ।
ಸ್ವಸಙ್ಕಲ್ಪಮಹಾದರ್ಶಾತ್ ಪುರತೋ ನಿರ್ಗತಾಮಿವ ॥೩॥

ಕುಮಾರ್ಯುವಾಚ.

ಉತ್ಪತ್ತಿಪ್ರಕರಣದಲ್ಲಿ ಐವತ್ತಮೂರನೆಯ ಸರ್ಗವು.

ಗತಿರ್ಮಾರ್ಗೋಽತ್ರ ಲೀಲಾಯಾಃ ಭರ್ತೃಪ್ರಾಪ್ತಿಶ್ಚ ವರ್ಣ್ಯತೇ ।
ಅಜ್ಞಾನಯೋಗಸಿದ್ಧಾನಾಂ ಅಗತಿಶ್ಚ ನಭಃಪಥಿ ॥

ಲೀಲೆಯು ಹೋಗುವ ಮಾರ್ಗವೂ, ಅವಳು ತನ್ನ ಪತಿಯನ್ನು ಹೊಂದಿದ ವಿಚಾರವೂ, ಜ್ಞಾನ ಯೋಗ ಸಿದ್ಧಿಯಿಲ್ಲದವರಿಗೆ ಆಕಾಶಮಾರ್ಗ ಗಮನವಿಲ್ಲವೆಂಬ ವಿಷಯವೂ ಕೂಡ, ಇಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು :—

ಅಯ್ಯಾ! ರಾಮ! ಹಿಂದೆ ಹೇಳಿದಂತೆ ಪ್ರಬುದ್ಧಲೀಲೆಯೂ ಸರಸ್ವತೀದೇವಿಯೂ ಸಂಭಾಷಣೆ ಮಾಡುತಿರುವಾಗಲೇ, ಅದಕ್ಕಿಂತ ಮುಂಚೆಯೇ ಮೂರ್ಛೆಹೊಂದಿದ್ದ ಅಪ್ರಬುದ್ಧಲೀಲೆಯು, ಸರಸ್ವತೀವರವನ್ನು ಹೊಂದಿದ್ದವಳಾದಕಾರಣ, ವಾಸನಾಮಯವಾಗಿದ್ದ ಆಶರೀರದಿಂದಲೇ—ತನ್ನ ಪತಿಯಾದ ದೊರೆಯನ್ನು ಹೊಂದುವುದಕ್ಕೋಸ್ಕರ, ಅಂತರಿಕ್ಷಮಾರ್ಗದಲ್ಲಿ ಲೋಕಗಳನ್ನು ಅತಿಕ್ರಮಿಸಿ ಹೊರಟಳು ॥೧॥

ಆಗ ಅವಳು, ತಾನು ಈರೀತಿಯಾಗಿ ಪತಿಸಾನ್ನಿಧ್ಯವನ್ನು ಹೊಂದಬೇಕೆಂದು ಯೋಚಿಸಿದವಳಾಗಿ, ಆ ಭಾವನೆಯಿಂದಲೇ ಆನಂದಪರವಶಳಾಗಿ, ಕಾಮಾತುರಳಾಗಿ, ಹಕ್ಕಿಯಂತೆ ಲಘುಶರೀರಳಾಗಿ ಅಂತರಿಕ್ಷದಲ್ಲಿ ಹಾರಿಹೋದಳು ॥೨॥

ಅಲ್ಲಿ ಹೋಗುತಿರುವಾಗ, ವಾಗ್ದೇವಿಯಿಂದ ತಾನಾಗಿ ಕಳುಹಿಸಲ್ಪಟ್ಟ—ತನ್ನ ಸಂಕಲ್ಪವೆಂಬ ದರ್ಪಣದಿಂದ ಮುಂದುಗಡೆ ಹೊರಟುಬಂದಿರುವಳೋ ಎಂಬಂತೆ—ಅಲ್ಲಿ ನಿಂತಿರುವ ಬಾಲಿಕೆಯೊಬ್ಬಳನ್ನು ಕಂಡಳು ॥೩॥

ಆಗ ಆ ಬಾಲಿಕೆಯು, ಈ ಲೀಲೆಯನ್ನು ಕುರಿತು ಹೀಗೆ ಹೇಳಿದಳು :—

ದುಹಿತಾಸ್ಮಿ ಸಖಿ ಜ್ಞಪ್ತೇಃ ಸ್ವಾಗತಂ ತೇಸ್ತು ಸುನ್ದರಿ ।
ಪ್ರತೀಕ್ಷಮಾಣಾ ತ್ವಾಮೇವ ಸ್ಥಿತಾಸ್ಮೀಹ ನಭಃಪಥಿ ॥೪॥

ಲೀಲೋವಾಚ.

ದೇವಿ ಭರ್ತುಃ ಸಮೀಪಂ ಮಾಂ ನಯ ನೀರಜಲೋಚನೇ ।
ಮಹತಾಂ ದರ್ಶನಂ ಯಸ್ಮಾತ್ ನ ಕದಾಚನ ನಿಷ್ಫಲಮ್ ॥೫॥

ಶ್ರೀ ವಸಿಷ್ಠಉವಾಚ.

ಏಹಿ ತತ್ರೈವ ಗಚ್ಛಾವಃ ಇತ್ಯುಕ್ತ್ವಾ ಸಾ ಕುಮಾರಿಕಾ ।
ಪುರಸ್ತಸ್ಯಾಃ ಸ್ಥಿತಾ ವ್ಯೋಮ್ನಿ ಮಾರ್ಗದರ್ಶನತತ್ಪರಾ ॥೬॥
ತತಸ್ತದನುಯಾತಾ ಸಾ ಪ್ರಾಪ ಕೋಟರಮಮ್ಬರಮ್ ।
ನಿರ್ಮಲಂ ಕರಮಾಲಾಗ್ರಂ ಯಥಾ ಲಕ್ಷಣಲೇಖಿಕಾ ॥೭॥
ಮೇಘಮಾರ್ಗಮಥೋಲ್ಲಙ್ಘ್ಯ ವಾತಸ್ಕನ್ಧಾನ್ತರೇ ಗತಾ ।
ಸೂರ್ಯಮಾರ್ಗಾದಭಿಗತಾ ತಾರಾಮಾರ್ಗಮತೀತ್ಯ ಚ ॥೮॥
ವಾಯ್ವಿನ್ದ್ರಸುರಸಿದ್ಧಾನಾಂ ಲೋಕಾನುಲ್ಲಙ್ಘ್ಯ ಲಾಘವಾತ್ ।
ಬ್ರಹ್ಮವಿಷ್ಣುಮಹೇಶಾನಾಂ ಪ್ರಾಪ ಬ್ರಹ್ಮಾಣ್ಡಕರ್ಪರಮ್ ॥೯॥

ಸಖಿ! ನಾನು ಜ್ಞಪ್ತಿದೇವಿಯ ಮಗಳು. ಹೇ ಸುಂದರಿ! ನಿನಗೆ ಸುಖಾಗಮನವಾಗಲಿ. ನಾನು ನಿನ್ನನ್ನೇ ನಿರೀಕ್ಷಿಸಿಕೊಂಡು, ಈ ಅಂತರಿಕ್ಷಮಾರ್ಗದಲ್ಲಿ ನಿಂತಿದ್ದೆನು ॥೪॥

ಹೀಗೆ ಹೇಳಿದ ಬಳಿಕ, ಲೀಲೆಯು ಅವಳನ್ನು ಕುರಿತು ಹೇಳಿದಳು:—

ಕಮಲಲೋಚನೆಯಾದ ಎಲೌ ದೇವಿ! ನನ್ನನ್ನು ನನ್ನ ಪತಿಯ ಸಮೀಪಕ್ಕೆ ಕರೆದುಕೊಂಡು ಹೋಗು. ಮಹಾತ್ಮರ ದರ್ಶನವೆಂದಿಗೂ ನಿಷ್ಫಲವಾಗಲಾರದಲ್ಲವೆ! ॥೫॥

ವಸಿಷ್ಠರು ಹೇಳುವರು:—

ಅಯ್ಯಾ! ರಾಮ! ಹೀಗೆ ಲೀಲೆಯು ಹೇಳಿದುದನ್ನು ಕೇಳಿ, ಆ ಕುಮಾರಿಕೆಯು –'ಬಾ; ಅಲ್ಲಿಗೇ ಹೋಗೋಣ '–ಎಂದು ಹೇಳಿ, ಅವಳ ಮುಂದುಗಡೆ ಮಾರ್ಗವನ್ನು ತೋರಿಸುತ, ಆ ಆಕಾಶದಲ್ಲಿ ಹೊರಟಳು ॥೬॥

ಬಳಿಕ, ಪ್ರಾಣಿಗಳಿಗೆ ಮುಂದೆ ಆಗುವ ಶುಭಾಶುಭಗಳನ್ನು ತೋರಿಸುವ ಲಕ್ಷಣದ ರೇಖೆಗಳು – ಹುಟ್ಟುವಾಗಲೇ ಕೈಯನ್ನು ಸೇರಿರುವಂತೆ, ಆ ಲೀಲೆಯಿಂದ ಅನುಸೃತಳಾಗಿರುವ ಆ ಕುಮಾರಿಯು ಬ್ರಹ್ಮಾಂಡಚ್ಛಿದ್ರಭೂತವಾದ ಪ್ರದೇಶವನ್ನು ಸೇರಿದಳು ॥೭॥

ಬಳಿಕ, ಮೇಘಮಾರ್ಗವನ್ನುಲ್ಲಂಘಿಸಿ, ವಾಯುಮಂಡಲದೊಳಗೆ ಹೊಕ್ಕು, ಸೂರ್ಯಮಾರ್ಗದಿಂದ ಹೊರಟು, ನಕ್ಷತ್ರಮಂಡಲವನ್ನೂ ಅತಿಕ್ರಮಿಸಿ, ವಾಯುಲೋಕ ಇಂದ್ರಲೋಕ ದೇವಲೋಕ ಸಿದ್ಧಲೋಕಗಳನ್ನು ಕೇವಲ ಚಮತ್ಕಾರದಿಂದ ದಾಟಿ, ಬ್ರಹ್ಮ ವಿಷ್ಣು ಮಹೇಶ್ವರರ ಲೋಕಗಳನ್ನೂ ಉಲ್ಲಂಘಿಸಿ, ಬ್ರಹ್ಮಾಂಡಗೋಳಭಾಗವನ್ನು ಸೇರಿದಳು॥೮-೯॥

ಹಿಮಶೈತ್ಯಂ ಯಥಾನ್ತಸ್ಸ್ಥಂ ಕುಮ್ಭೇಽಭಿನ್ನೇ ಬಹಿರ್ಭವೇತ್ |
ತಥಾ ಸಙ್ಕಲ್ಪಸಿದ್ಧಾ ಸಾ ಬ್ರಹ್ಮಾಣ್ಡಾನ್ನಿರ್ಗತಾ ಬಹಿಃ ||೧೦||
ಸ್ವಚಿತ್ತಮಾತ್ರದೇಹೈಷಾ ಸ್ವಸಙ್ಕಲ್ಪಸ್ವಭಾವಜಮ್ |
ಅನ್ತರೇವಾನುಭವತಿ ಕಿಲೈವಂ ನಾಮ ವಿಭ್ರಮಮ್ ||೧೧||
ಬ್ರಹ್ಮಾದಿಸ್ಥಾನಮಾಕ್ರಮ್ಯ ಪ್ರಾಪ್ಯ ಬ್ರಹ್ಮಾಣ್ಡಕರ್ಪರಮ್ |
ತತೋ ಬ್ರಹ್ಮಾಣ್ಡಪಾರಸ್ಥಾ ಜಲಾದ್ಯಾವರಣಾನಿ ಚ ||೧೨||
ಸಮುಲ್ಲಙ್ಘ್ಯ ಪುರಃ ಪ್ರಾಪ ಮಹಾಚಿದ್ಗಗನಾನ್ತರಮ್ |
ಅದೃಷ್ಟಪಾರಪರ್ಯನ್ತಂ ಅತಿವೇಗೇನ ಧಾವತಾ |
ಸರ್ವತೋ ಗರುಡೇನಾಪಿ ಕಲ್ಪಕೋಟಿಶತೈರಪಿ ||೧೩||
ತತ್ರ ಬ್ರಹ್ಮಾಣ್ಡಲಕ್ಷಾಣಿ ಸನ್ತ್ಯಸಙ್ಖ್ಯಾನಿ ಭೂರಿಶಃ |
ತಾನ್ಯನ್ಯೋನ್ಯಮದೃಷ್ಟಾನಿ ಫಲಾನೀವ ಮಹಾವನೇ ||೧೪||
ತತ್ರೈಕಸ್ಮಿನ್ ಪುರಸ್ಸಂಸ್ಥೇ ವಿತತಾವರಣಾನ್ವಿತೇ |
ವೇಧಯಿತ್ವಾ ವಿವೇಶಾನ್ತಃ ಬದರಂ ಕೃಮಿಕೋ ಯಥಾ ||೧೫||

ಒಂದು ಗಡಿಗೆಯೊಳಗೆ ನೀರು ತುಂಬಿದ್ದರೆ, ಆ ಗಡಿಗೆಯನ್ನು ಒಡೆಯದಿದ್ದರೂ—ಅದರೊಳಗಿನ ಶೈತ್ಯವು ಹೊರಗೆ ಕೈಯಿಟ್ಟರೆ ಗೊತ್ತಾಗುವುದಲ್ಲವೆ! ಇದರಂತೆಯೇ, ಸಂಕಲ್ಪಸಿದ್ಧಿಯನ್ನು ಪಡೆದಿರುವ ಆ ಕುಮಾರಿಯು, ಬ್ರಹ್ಮಾಂಡದ ಹೊರಗೆ ಬಂದವಳಾದಳು ||

ತನ್ನ ಚಿತ್ತಮಾತ್ರವೇ ಶರೀರವಾಗಿ ಉಳ್ಳ ಆ ಕುಮಾರಿಯು, ತನ್ನ ಸಂಕಲ್ಪಶಕ್ತಿಯಿಂದುತ್ಪನ್ನವಾಗಿರುವ ಈ ವಿಧವಾದ ವಿಭ್ರಮವನ್ನೆಲ್ಲ, ತನ್ನ ಅಂತಃಕರಣದಲ್ಲಿಯೇ ಅನುಭವಿಸತಕ್ಕವಳಾಗಿದ್ದಳು ||೧೧||

ಹೀಗೆ ಆ ಕುಮಾರಿಕೆಯು, ಬ್ರಹ್ಮಾದಿಗಳ ಸ್ಥಾನವನ್ನಾಕ್ರಮಿಸಿ, ಬ್ರಹ್ಮಾಂಡಗೋಳವನ್ನೂ ಸೇರಿ, ಬ್ರಹ್ಮಾಂಡದ ಹೊರಗಡೆ ಹೋದವಳಾಗಿ, ಜಲಾದ್ಯಾವರಣಗಳನ್ನೂ ದಾಟಿ, ಮಹಾಕಾಶವನ್ನು ಸೇರಿದಳು. ಆ ಮಹಾಕಾಶದ ತುದಿಯನ್ನು, ಸಾಕ್ಷಾದ್ಗರುಡನು ನೂರಾರುಕೋಟಿ ಕಲ್ಪಕಾಲ ಅತಿವೇಗವಾಗಿ ಓಡುತಿದ್ದರೂ ಕಾಣಲಾರನು. ಅಂತಹ ಮಹಾಕಾಶವನ್ನು ಈ ಕುಮಾರಿಕೆಯು ಸೇರಿದಳು ||೧೨—೧೩||

ಅಲ್ಲಿ, ಯಥಾಪ್ರಕಾರವಾಗಿ ಅಸಂಖ್ಯಾತವಾಗಿ ಬ್ರಹ್ಮಾಂಡಗಳು ಕಾಣಿಸಿದುವು. ದೊಡ್ಡ ಕಾಡಿನಲ್ಲಿ ಹಣ್ಣುಗಳು ತುಂಬಿರುವಂತೆ, ಆ ಮಹಾಕಾಶದೊಳಗೆ ಬ್ರಹ್ಮಾಂಡಗಳು ಅಸಂಖ್ಯಾಕವಾಗಿ ತುಂಬಿದ್ದುವು; ಮತ್ತು, ಪರಸ್ಪರವಾಗಿ ಅಪರಿಚಿತಗಳಾಗಿದ್ದುವು ||೧೪||

ಅವುಗಳ ಮಧ್ಯದಲ್ಲಿ, ಸುತ್ತಲೂ ಆವರಣಯುಕ್ತವಾಗಿರುವ ಒಂದು ಬ್ರಹ್ಮಾಂಡದೊಳಗೆ, ಸಣ್ಣ ಕೃಮಿಯು ಎಲಚಿಯ ಬಿತ್ತದೊಳಗೆ ಸೇರಿಕೊಳ್ಳುವಂತೆ, ಸ್ವಲ್ಪ ರಂಧ್ರ ಮಾಡಿಕೊಂಡು ಆ ಬಾಲಿಕೆಯು ಪ್ರವೇಶ ಮಾಡಿದಳು ||೧೫||

ಪುನರ್ಬ್ರಹ್ಮೇನ್ದ್ರವಿಷ್ಣ್ವಾದಿಲೋಕಾನುಲ್ಲಙ್ಘ್ಯ ಭಾಸ್ವರಾನ್ |
ತನ್ಮಹೀಮಣ್ಡಲಂ ಶ್ರೀಮತ್ ಪ್ರಾಪ ತಾರಾಪಥಾದಧಃ ||೧೬||
ತತ್ರ ತನ್ಮಣ್ಡಲಂ ಪ್ರಾಪ್ಯ ತತ್ ಪುರಂ ತಚ್ಚ ಮಣ್ಡಪಮ್ |
ಪ್ರವಿಶ್ಯ ಪುಷ್ಪಗುಪ್ತಸ್ಯ ಶವಸ್ಯ ನಿಕಟೇ ಸ್ಥಿತಾ ||೧೭||
ಏತಸ್ಮಿನ್ನನ್ತರೇ ಸಾ ಚ ನ ದದರ್ಶ ಕುಮಾರಿಕಾಮ್ |
ಮಾಯಾಮಿವ ಪರಿಜ್ಞಾತಾಂ ಕ್ವಾಪಿ ಯಾತಾಂ ವರಾನನಾ ||೧೮||
ಮುಖಮಾಲೋಕ್ಯ ಸಾ ತಸ್ಯ ಸ್ವಭರ್ತುಃ ಶವರೂಪಿಣಃ |
ಇದಂ ಬುದ್ಧವತೀ ಸತ್ಯಂ ಪ್ರತಿಭಾವಶತಃ ಸ್ವತಃ ||೧೯||
ಅಯಂ ಸ ಭರ್ತಾ ಸಙ್ಗ್ರಾಮೇ ನಿಹತೋ ಮಮ ಸಿನ್ಧುನಾ |
ವೀರಲೋಕಾನಿಮಾನ್ ಪ್ರಾಪ್ಯ ಕ್ಷಣಂ ಶೇತೇ ಯಥಾಸುಖಮ್ ||೨೦||
ಅಹಂ ದೇವ್ಯಾಃ ಪ್ರಸಾದೇನ ಸಶರೀರೈವಮೀದೃಶಮ್ |
ಇಹ ಪ್ರಾಪ್ತವತೀ ಧನ್ಯಾ ಮತ್ಸಮಾ ನಾಸ್ತಿ ಕಾಚನ ||೨೧||

ಅದರೊಳಗೆ, ಯಥಾಪ್ರಕಾರವಾಗಿ ಪ್ರಕಾಶಮಾನವಾಗಿರುವ ಬ್ರಹ್ಮಾದಿಲೋಕಗಳನ್ನು ಕಳೆದು, ನಕ್ಷತ್ರಮಾರ್ಗದ ಕೆಳಕ್ಕೆ ಹೋಗಿ, ಅಲ್ಲಿ ಆ ಪದ್ಮರಾಜನ ಭೂಮಂಡಲವನ್ನು ಸೇರಿದವಳಾದಳು ||೧೬||

ಅಲ್ಲಿ, ಅವನ ದೇಶವನ್ನು ಹೊಂದಿ, ಅದರೊಳಗೆ ಆ ಪಟ್ಟಣವನ್ನೂ ಆ ಮಂಟಪವನ್ನೂ ಪ್ರವೇಶಿಸಿ, ಹೂವಿನಲ್ಲಿ ಮರೆಯಾಗಿಟ್ಟಿದ್ದ ಆ ಪದ್ಮರಾಜನ ಶವದ ಸಮೀಪದಲ್ಲಿ ಹೋಗಿ ನಿಂತವಳಾದಳು ||೧೭||

ಇಷ್ಟರೊಳಗಾಗಿ, ಆ ಅಪ್ರಬುದ್ಧಲೀಲೆಯು, ಮಾಯೆಯ ಸ್ವರೂಪ ಗೊತ್ತಾಗಿ ಅದು ನಷ್ಟವಾದಮೇಲೆ—ಅದು ಎಲ್ಲಿಗೆ ಹೋಯ್ತೆಂಬುದು ಹೇಗೆ ಗೊತ್ತಾಗುವುದಿಲ್ಲವೋ—ಹಾಗೆ, ಇದುವರೆಗೆ ತನ್ನ ಜತೆಯಲ್ಲಿಯೇ ಬಂದಿದ್ದ ಆ ಬಾಲಿಕೆಯು ಎಲ್ಲಿ ಹೋದಳೆಂಬುದನ್ನು ಅರಿಯದವಳಾದಳು ||೧೮||

ಅನಂತರದಲ್ಲಿ ಆ ಅಪ್ರಬುದ್ಧಲೀಲೆಯು, ಶವರೂಪನಾಗಿ ಬಿದ್ದಿರುವ ತನ್ನ ಪತಿಯ ಮುಖವನ್ನು ನೋಡಿ, ಆಗ ಪ್ರತಿಭಾವಶದಿಂದ ಇದೆಲ್ಲವನ್ನೂ ಸತ್ಯವೆಂದು ನಂಬಿದವಳಾಗಿ, ಹೀಗೆ ಯೋಚಿಸಿದಳು ||೧೯||

ಯುದ್ಧದಲ್ಲಿ ಸಿಂಧುವಿನಿಂದ ಹೊಡೆಯಲ್ಪಟ್ಟ ನನ್ನ ಪತಿಯೇ ಇವನು. ಅವನೇ ಈ ವೀರಲೋಕಕ್ಕೆ ಬಂದು, ವಿಶ್ರಮಾರ್ಥವಾಗಿ ಒಂದು ಕ್ಷಣಕಾಲ ಸುಖಶಯನ ಮಾಡುತಿರುವನು ||೨೦||

ನಾನು, ಆ ಸರಸ್ವತೀದೇವಿಯ ಅನುಗ್ರಹಬಲದಿಂದ ಹೀಗೆ ಸಶರೀರಳಾಗಿ—ಇಲ್ಲಿ ಈ ಸ್ಥಿತಿಯಲ್ಲಿರುವ ನನ್ನ ಪತಿಯನ್ನು ಹೊಂದಿದೆನು. ನನ್ನ ಸಮಾನ ಧನ್ಯಳಾದವಳೊಬ್ಬಳೂ ಇಲ್ಲ ||೨೧||

ಇತಿ ಸಞ್ಚಿನ್ತ್ಯ ಸಾ ಹಸ್ತೇ ಗೃಹೀತ್ವಾ ಚಾರು ಚಾಮರಮ್ ।
ವೀಜಯಾಮಾಸ ಚನ್ದ್ರೇಣ ದ್ಯೌರಿವಾವನಿಮಣ್ಡಲಮ್ ॥೨೨॥

ಪ್ರಬುದ್ಧಲೀಲೋವಾಚ,

ತೇ ಭೃತ್ಯಾಸ್ತಾಶ್ಚ ವೈ ದಾಸ್ಯಃ ಸ ರಾಜಾ ಚ ಪ್ರಬುದ್ಧವಾನ್ ।
ವಕ್ಷ್ಯನ್ತಿ ವದ ತಾಂ ದೇವಿ ಕಿಂ ಕಯೈನ ಕಥಂ ಧಿಯಾ ॥೨೩॥

ಶ್ರೀದೇವ್ಯುವಾಚ.

ಸ ರಾಜಾ ಸಾ ಚ ತೇ ಭೃತ್ಯಾಃ ಸರ್ವ ಏವ ಪರಸ್ಪರಮ್ ।
ಚಿದಾಕಾಶೈಕತಾವೇಶಾತ್ ಆವಯೋಶ್ಚ ಪ್ರಭಾವತಃ ॥೨೪॥
ಮಹಾಚಿತ್ಪ್ರತಿಭಾಸತ್ವಾತ್ ಮಹಾನಿಯತಿನಿಶ್ಚಯಾತ್ ।
ಅನ್ಯೋನ್ಯಮೇವ ಪಶ್ಯನ್ತಿ ಮಿಥಃ ಸಮ್ಪ್ರತಿಬಿಮ್ಬಿತಾತ್ ॥೨೫॥
ಇಯಂ ಮೇ ಸಹಜಾ ಭಾರ್ಯಾ ಮಮೇಯಂ ಸಹಜಾ ಸಖೀ ।
ಮಮೇಯಂ ಸಹಜಾ ರಾಜ್ಞೀ ಭೃತ್ಯೋಽಯಂ ಸಹಜೋ ಮಮ ॥೨೬॥

ಎಂದು ಈರೀತಿಯಾಗಿ ಯೋಚಿಸಿ, ಆ ಅಪ್ರಬುದ್ಧಲೀಲೆಯು, ಕೈಯಲ್ಲಿ ಸುಂದರವಾದ ಚಾಮರವನ್ನು ತೆಗೆದುಕೊಂಡು, ಅಂತರಿಕ್ಷವು ಚಂದ್ರಕಿರಣದಿಂದ ಭೂಮಂಡಲವನ್ನು ಬೀಸುವಂತೆ, ಆ ಚಾಮರದಿಂದ ಪದ್ಮರಾಜನನ್ನು ಬೀಸುತಿದ್ದಳು ॥೨೨॥

ಹೀಗಿರುತಾಗ, ಸರಸ್ವತೀದೇವಿಯೊಡನೆ ವಿದೂರಥನ ಪಟ್ಟಣದಲ್ಲಿದ್ದ ಪ್ರಬುದ್ಧಲೀಲೆಯು, ಸರಸ್ವತಿಯನ್ನು ಕೇಳಿದಳು:—

ಹೇ ದೇವಿ! ಇದೇನು? ಅಲ್ಲಿರುವ ಆ ಭೃತ್ಯರೂ, ಆ ದಾಸಿಯರೂ ಆ ದೊರೆಯೂ ಕೂಡ ಪ್ರಬುದ್ಧರಾಗಿಬಿಟ್ಟರಲ್ಲ! ಅವರೆಲ್ಲರೂ ಯಾವ ವಿಧವಾದ ಜ್ಞಾನದಿಂದ ಯಾವ ಮಾತನ್ನು ಹೇಗೆ ಆಡುವರು? ಈಗ ಅವನಿಗೆ (ಪದ್ಮ) ಪೂರ್ವಸ್ಮೃತಿಯಿಲ್ಲದ ಪಕ್ಷದಲ್ಲಿ,—ಇವರು ಯಾರು? ಇವಳು ಯಾರು?-ಇತ್ಯಾದಿ ರೀತಿಯಾಗಿ ಅವನಿಗೆ ಶಂಕೆಹುಟ್ಟಬೇಕಾಗುವುದು. ಪೂರ್ವಸ್ಮೃತಿಯಿರುವ ಪಕ್ಷದಲ್ಲಿ, ಇವರೆಲ್ಲರೂ ತಮ್ಮವರೆಂದು ಪರಿಗ್ರಹಿಸುವುದು ಶಿಷ್ಟಜನನಿಂದಾವಿಷಯವಾಗುವುದು. ಅದುಕಾರಣ, ಈ ಕಥೆಯನ್ನು ಸ್ಪಷ್ಟವಾಗಿ ನನಗೆ ಹೇಳು ॥೨೩॥

ಶ್ರೀ ಸರಸ್ವತಿಯು ಇದಕ್ಕೆ ಉತ್ತರಹೇಳುವಳು:—

ಎಲೌ ಲೀಲೆ! ಆ ದ್ವಿತೀಯ ಲೀಲೆಯನ್ನು ನೋಡಿ, ಅಲ್ಲಿರುವ ಜನರು—ಇವಳು ಯಾವಳೋ ಒಬ್ಬಳು ಹೊಸಬಳೆಂದು ತಿಳಿದರಲ್ಲವೆ ನೀನು ಹೇಳುವ ಅಸಂಗತವು ಯುಕ್ತವಾಗುವುದು! ಅಲ್ಲಿ ಈ ವಿಧವಾದ ಜ್ಞಾನವೇ ಇಲ್ಲ. ಆ ದೊರೆ, ಆ ಲೀಲೆ, ಆ ಭೃತ್ಯರು, ಇವರೆಲ್ಲರಿಗೂ—ಜ್ಞಾನಾಕಾಶದಲ್ಲಿ ಐಕ್ಯವು ಚೆನ್ನಾಗಿ ಆವರಿಸಿಕೊಂಡು ಪರಸ್ಪರ ಪ್ರತಿಫಲಿಸಿರುವುದು. ಇದರಿಂದಲೂ, ನಮ್ಮಿಬ್ಬರ ಮಹಿಮೆಯಿಂದಲೂ, ಅವರು ಮಹಾ ಚೈತನ್ಯದ ಪ್ರತಿಭಾಸ ರೂಪರಾಗಿರುವುದರಿಂದಲೂ, ಮಹತ್ತಾದ ಈಶ್ವರಸಂಕಲ್ಪದಿಂದಲೂ, ಅವರೆಲ್ಲರೂ ಪರಸ್ಪರವಾಗಿ ಹೊಸಬರಲ್ಲದವರಂತೆ,—ಇವಳು ನನಗೆ ಮೊದಲಿನಿಂದಲೂ ಇದ್ದ ಹೆಂಡತಿ—ಇವಳು ನನ್ನ ಸಖಿ—ಇವಳು ನನ್ನ ರಾಣಿ—ಇವನು ನನ್ನ ಹಿಂದಿನ ಭೃತ್ಯನು—ಎಂದು ತಿಳಿದುಕೊಂಡಿರುವರು ॥೨೪—೨೬॥

ಕೇವಲಂ ತ್ವಮಹಂ ಸಾ ಚ ಯಥಾವೃತ್ತಮಖಣ್ಡಿತಮ್ |
ಜ್ಞಾಸ್ಯಾಮಇದಮಾಶ್ಚರ್ಯಂ ನ ತು ಕಶ್ಚಿದಪೀತರಃ ||೨೭||

ಪ್ರಬುದ್ಧಲೀಲೋವಾಚ.

ಅಮುನೈವ ಶರೀರೇಣ ಕಿಮರ್ಥಂ ನ ಗತಾ ಪತಿಮ್ |
ಏಷಾ ವರೇಣ ಸಮ್ಪ್ರಾಪ್ತಾ ಲೀಲಾ ಲಲಿತವಾದಿನೀ ||೨೮||

ಶ್ರೀ ದೇವ್ಯುವಾಚ.

ಅಪ್ರಬುದ್ಧಧಿಯಃ ಸಿದ್ಧಲೋಕಾನ್ ಪುಣ್ಯವಶೋದಿತಾನ್ |
ನ ಸಮರ್ಥಾಃ ಸ್ವದೇಹೇನ ಪ್ರಾಪ್ತುಂ ಛಾಯಾಇವಾತಪಾನ್ ||೨೯||
ಆದಿಸರ್ಗೇ ಚ ನಿಯತಿಃ ಸ್ಥಾಪಿತೇತಿ ಪ್ರಬೋಧಿಭಿಃ |
ಯಥಾ ಸತ್ಯಮಳೀಕೇನ ನ ಮಿಳತ್ಯೇವ ಕಿಞ್ಚನ ||೩೦||
ಯಾವದ್ವೇತಾಳಸಙ್ಕಲ್ಪೋ ಬಾಲಸ್ಯ ಕಿಲ ವಿದ್ಯತೇ |
ನಿರ್ವೇತಾಳಧಿಯಸ್ತಾವತ್ ಉದಯಸ್ತಸ್ಯ ಕಃ ಕಥಮ್ ||೩೧||
ಅವಿವೇಕಜ್ವರೋಷ್ಣತ್ವಂ ವಿದ್ಯತೇ ಯಾವದಾತ್ಮನಿ |
ತಾವದ್ವಿವೇಕಶೀತಾಂಶುಶೈತ್ಯಂ ಕುತಉದೇತ್ಯಲಮ್ ||೩೨||

ಆದರೆ, ನಾನು—ನೀನು–ಅಪ್ರಬುದ್ಧಲೀಲೆ—ಇಷ್ಟು ಮಂದಿ ಮಾತ್ರವೇ, ಈ ಆಶರ್ಯವನ್ನು ಯಥಾವತ್ತಾಗಿ ಸ್ವಲ್ಪವೂ ಬಿಡದೆ ತಿಳಿದಿರುವೆವು. ಇತರರೊಬ್ಬರೂ ಅರಿಯರು||೨೭||

ಇದನ್ನು ಕೇಳಿದಬಳಿಕ, ಪ್ರಬುದ್ಧಲೀಲೆಯು ಪ್ರಶ್ನೆಮಾಡುವಳು:—ದೇವಿ! ಆ ಮೃದುಭಾಷಿಣಿಯಾದ ಲೀಲೆಯು, ನಿನ್ನ ವರವನ್ನು ಹೊಂದಿದವಳಾಗಿದ್ದರೂ, ಈ ಶರೀರದಿಂದಲೇ ಅಲ್ಲಿಗೆ ಏಕೆಹೋಗಲಿಲ್ಲ?||೨೮||

ಶ್ರೀಸರಸ್ವತಿಯು ಉತ್ತರ ಹೇಳುವಳು:—

ಎಲೌ! ಲೀಲೆ! ನೆಳಲು ಬಿಸಿಲನ್ನು ಹೊಂದುವುದಕ್ಕೆ ಅಸಮರ್ಥವಲ್ಲವೆ! ಹಾಗೆಯೇ ಅಪ್ರಬುದ್ಧರಾದವರು—ತಮ್ಮ ಪುಣ್ಯವಶದಿಂದ ಪ್ರಾಪ್ತವಾದ ಸಿದ್ಧಲೋಕಗಳನ್ನು ಸ್ವಶರೀರದಿಂದಲೇ ಹೊಂದಲು ಸಮರ್ಥರಲ್ಲ ||೨೯||

ಇದಲ್ಲದೆ, ಸತ್ಯವು ಅಸತ್ಯದೊಡನೆ ಸ್ವಲ್ಪವೂ ಮಿಶ್ರವಾಗದಿರುವಂತೆ, ಸತ್ಯಸಂಕಲ್ಪರಾದ ಹಿರಣ್ಯಗರ್ಭನೇ ಮೊದಲಾದವರು ಆದಿಸೃಷ್ಟಿಯಲ್ಲಿಯೇ ನಿಯಮವನ್ನು ಏರ್ಪಡಿಸಿರುವರು ||೩೦||

ಇದಕ್ಕೊಂದು ದೃಷ್ಟಾಂತವನ್ನು ಹೇಳುವೆನು,ಕೇಳು. ಬಾಲಕನಿಗೆ ಎಲ್ಲಿಯವರೆಗೆ ಬೇತಾಳವೆಂಬ ಮನೋನಿಶ್ಚಯವಿರುವುದೋ, ಅದುವರೆಗೆ ಅವನಿಗೆ ಬೇತಾಳವಿಲ್ಲವೆಂಬ ಬುದ್ಧಿಯು ಹೇಗೆ ಉದ್ಭವಿಸುವುದು?||೩೧||

ಮನುಷ್ಯರ ಮನಸ್ಸಿನಲ್ಲಿ, ಅವಿವೇಕವೆಂಬ ಜ್ವರದ ಶಾಕವು ಎಲ್ಲಿಯವರೆಗಿರುವುದೋ, ಅಲ್ಲಿಯವರೆಗೆ ವಿವೇಕವೆಂಬ ಚಂದ್ರನ ಶೈತ್ಯವೆಲ್ಲಿ ಉದಯಿಸುವುದು ?||೩೨||

ಅಹಂ ಪೃಥ್ವ್ಯಾದಿದೇಹಃ ಖೇ ಗತಿರ್ನಾಸ್ತಿ ಮಮೋತ್ತಮಾ ।
ಇತಿ ನಿಶ್ಚಯವಾನ್ ಯೋಽನ್ತಃ ಕಥಂ ಸ್ಯಾತ್ ಸೋಽನ್ಯನಿಶ್ಚಯಃ ॥೨೩॥
ಅತೋ ಜ್ಞಾನವಿವೇಕೇನ ಪುಣ್ಯೇನಾಥ ವರೇಣ ಚ ।
ಪುಣ್ಯದೇಹೇನ ಗಚ್ಛನ್ತಿ ಪರಂ ಲೋಕಮನೇನ ತು ॥೨೪॥
ಶುಷ್ಕಪರ್ಣಂ ಕಿಲಾಙ್ಗಾರೇ ಏತದೇವಾಶು ದಹ್ಯತೇ ।
ಅಯಂ ದೇಹಮಹನ್ದೇಹಃ ಪ್ರಾಪ್ತ ಏವ ವಿಶೀರ್ಯತೇ ॥೨೫॥
ಏತಾವದೇವ ಭವತಿ ವರಶಾಪವಿಜೃಮ್ಭಿತೈಃ ।
ಯಥಾ ಸಙ್ಕ್ರಾನ್ತ್ಯ ಏವಾಹಂ ತಥಾ ಸ್ಮೃತ ಇತಿ ಸ್ಮೃತಿಃ ॥೨೬॥
ಯಃ ಸರ್ಪಪ್ರತ್ಯಯೋ ರಜ್ಜ್ವಾಂ ಸ ಕಥಂ ಸರ್ಪಕಾರ್ಯಕೃತ್ ।

ಆದುಕಾರಣ, ಯಾವ ಮನುಷ್ಯನು—'ನಾನು ಪಾಂಚಭೌತಿಕದೇಹರೂಪನಾದವನು ; ನನಗೆ ಅಂತರಿಕ್ಷಮಾರ್ಗದಲ್ಲಿ ಪ್ರಶಸ್ತವಾದ ಗಮನವು ದುರ್ಲಭವು'—ಎಂದು ಮನಸ್ಸಿನಲ್ಲಿ ದೃಢನಿಶ್ಚಯವುಳ್ಳವನಾಗಿರುವನೋ, ಅವನಿಗೆ ಬೇರೆಯಾದ ನಿಶ್ಚಯವು ಹೇಗೆ ತಾನೆ ಉಂಟಾಗುವುದು ? ॥೨೩॥

ಆದುದರಿಂದ, ಜ್ಞಾನವಿವೇಕವೂ ಪುಣ್ಯವಿಶೇಷವೂ ವರಮಹಿಮೆಯೂ ಉಳ್ಳವರು ಮಾತ್ರವೇ, ನಿನ್ನಹಾಗೆ ಪುಣ್ಯದೇಹದಿಂದ ಪರಲೋಕಕ್ಕೆಹೋಗಲು ಸಮರ್ಥರಾಗುವರು॥

ಆದರೆ—'ಲಿಂಗದೇಹಪ್ರಾಪ್ತಿಯಾದ ಮಾತದ್ರಿಂದಲೇ, ಸ್ಥೂಲದೇಹದಲ್ಲಿ ಅಹಂಭಾವ ಹೋಗುವುದೇ ?'—ಎಂದರೆ, ಹೋಗಿಯೇ ಹೋಗುವುದು. ಉರಿಯುತ್ತಿರುವ ಕೆಂಡದಮೇಲೆ ಒಣಗಿದ ತರಗು ಬಿದ್ದರೆ, ಅದು ಆ ಕ್ಷಣವೇ ಭಸ್ಮವಾಗುವುದಲ್ಲವೆ! ಇದೇ ಇಲ್ಲಿ ದೃಷ್ಟಾಂತವು. ಹೀಗೆ ಅಹಂಕಾರವಾಸನಾಮಾತ್ರವಾಗಿರತಕ್ಕ ದೇಹವು, ಆತಿವಾಹಿಕದೇಹವನ್ನು ಹೊಂದಿದಕೂಡಲೇ ಆಳಿದುಹೋಗುವುದು ॥೨೫॥

'ಹೀಗಾದಮೇಲೆ, ಮಹಾತ್ಮರು ಕೊಟ್ಟ ವರಗಳಿಂದಲೂ ಶಾಪಗಳಿಂದಲೂ ಪ್ರಯೋಜನವೇನು?' ಎಂದರೆ,—ಮಹಾತ್ಮರು ಕೊಡುವ ವರಶಾಪ ಮಹಿಮೆಗಳೂ ಕೂಡ, ನಮ್ಮಿಂದ ಅನುಭಾವ್ಯವಾದ ವಿಷಯಗಳ ಉದ್ಬೋಧನೆಯನ್ನು ಮಾತ್ರ ಮಾಡತಕ್ಕುವುಗಳೆಂದು ತಿಳಿಯಬೇಕು. ಇದಕ್ಕೊಂದು ಸಣ್ಣ ದೃಷ್ಟಾಂತವನ್ನು ಹೇಳುವೆನು. ಒಬ್ಬನು ಒಂದು ಗ್ರಂಥವನ್ನು ಹಿಂದೆ ಚೆನ್ನಾಗಿ ವ್ಯಾಸಂಗ ಮಾಡಿಕೊಂಡಿರುವನು. ಅದೆಲ್ಲವೂ ಅವನಿಗೆ ಸರಿಯಾಗಿ ಕಂಠಸ್ಥಿತವಾಗಿರುವುದು. ಆದರೆ, ಯಾವುದಾದರೊಂದು ಸಂದರ್ಭದಲ್ಲಿ, ಆ ಗ್ರಂಥದೊಳಗಿರುವ ಒಂದು ಶ್ಲೋಕವನ್ನು ಹೇಳಬೇಕಾಗಿ ಬಂದಾಗ, ಎಷ್ಟು ಹೊತ್ತಾದರೂ ಅದು ಅವನ ಸ್ಮೃತಿಗೆ ಬರುವುದೇ ಇಲ್ಲ. ಹೀಗಿರುವಾಗ, ಮತ್ತೊಬ್ಬನು ಆ ಶ್ಲೋಕದ ಮೊದಲ ಪದವನ್ನು ಹೇಳಿಬಿಟ್ಟರೆ, ಇವನು ಅದೆಲ್ಲವನ್ನೂ ಸ್ಮರಿಸಿಕೊಂಡು, 'ಆಹ! ಈಗ ನಾನು ಸ್ಮರಿಸಿಕೊಂಡೆನು' ಎಂದು ಹೇಳುವನಲ್ಲವೆ! ಇದಕ್ಕೆ ಕಾರಣವೇನು? ಇವನ ಮನಸ್ಸಿನಲ್ಲಿದ್ದ ವಾಸನೆಯನ್ನು ಉದ್ಬೋಧನೆ ಮಾಡುವುದೇ ಅಲ್ಲವೆ! ವರಶಾಪಗಳೂ ಹೀಗೆಯೇ ಉದ್ಬೋಧನಮಾತ್ರ ಮಾಡತಕ್ಕುವುಗಳೆಂದು ತಿಳಿಯಬೇಕು ॥೨೬॥

ಈಗ ಮತ್ತೊಂದು ವಿಧವಾಗಿ ಶಂಕಿಸಬಹುದು:—ಸ್ಥೂಲದೇಹವು ಕಾರ್ಯನಿಷ್ಪತ್ತಿ ಮಾಡತಕ್ಕುದೆಂದು ಸರ್ವಾನುಭವಸಿದ್ಧವಾಗಿರುವುದರಿಂದ, ತತ್ವಜ್ಞಾನವಾದಮಾತ್ರದಿಂದಲೇ

ಆತ್ಮನ್ಯೇವ ಹಿ ಯೋ ನಾಸ್ತಿ ತಸ್ಯ ಕಾ ಕಾರ್ಯಕಾರಿತಾ ||೩೭||
ಯಸ್ತ್ವೇತನ್ಮೃತಮಿತ್ಯೇವ ಮಿಥ್ಯಾ ಸಮನುಭೂಯತೇ |
ಪ್ರಾಗಭ್ಯಾಸಸ್ಯ ಪುಷ್ಟಸ್ಯ ನಾಮ್ನೈತತ್ ಪ್ರವಿಜೃಮ್ಭತೇ ||೩೮||
ಸ್ವಾನುಭೂತೇ ಜಗಜ್ಜಾಲೇ ಸುಗಮಾಃ ಸಂಸ್ಮೃತಿಭ್ರಮಾಃ |
ನಾನ್ಯಸಙ್ಕಲ್ಪಿತೋ ನಾಮ ಸರ್ಗಾದ್ಯಭ್ಯಾಸಈದೃಶಃ ||೩೯||
ಅನ್ತರನುಭೂಯಮಾನಾಃ ಸಂಸೃತಯೋ ಬಾಹ್ಯಭೂತಜಾಲಾನಾಮ್ |
ಅವಿದಿತವೇದ್ಯದೃಶಾಮಪಿ ದೂರೇ ಪುಂಸಾಮಿವೈನ್ದವಂ ಬಿಮ್ಬಮ್ ||೪೦||

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಸಂಸೃತಿವಿದಿತವೇದ್ಯಂ ನಾಮ ತ್ರಿಪಞ್ಚಾಶಃ ಸರ್ಗಃ.

ಇದಕ್ಕೆ ಬಾಧೆಯುಂಟಾಗುವುದು ಹೇಗೆ?—ಎಂದು ಶಂಕಿಸಬಹುದು. ಆದರೆ, ತತ್ವಜ್ಞಾನಾವಸ್ಥೆಯಲ್ಲಿ ಈ ಪ್ರಾಪಂಚಿಕಕಾರ್ಯನಿಷ್ಪತ್ತಿಯೇ ಇರುವುದಿಲ್ಲವಾದಕಾರಣ, ಈ ಶಂಕೆಗೆ ಅವಕಾಶವಿಲ್ಲ. ರಜ್ಜುವನ್ನು ನೋಡಿ ಸರ್ಪವೆಂದು ತಿಳಿದುಕೊಂಡ ಮಾತ್ರದಿಂದಲೇ, ಆ ಸರ್ಪಜ್ಞಾನವು ಸರ್ಪದಿಂದ ಆಗಬೇಕಾದ ದಂಶ (ಕಚ್ಚುವಿಕೆ) ಮುಂತಾದ ಕಾರ್ಯಗಳನ್ನು ಮಾಡಬಲ್ಲುದೆ? ಹೀಗೆ, ಯಾವ ಸ್ಥೂಲಶರೀರವು ಸ್ವಭಾವತಃ ಇಲ್ಲವೇ ಇಲ್ಲವೋ, ಅದು ಕಾರ್ಯನಿಷ್ಪತ್ತಿ ಮಾಡುತದೆಯೆಂಬುದಾವುದು ?॥೩೭॥

'ಶರೀರವೆಂಬುದು ಸುತರಾಂ ಅಸತ್ಯವಾಗಿದ್ದಪಕ್ಷದಲ್ಲಿ, ಇದು ಮೃತವಾಯ್ತೆಂದು ಸರ್ವರಿಗೂ ಜ್ಞಾನವುಂಟಾಗುವಬಗೆ ಹೇಗೆ'—ಎಂದರೆ, ಇದು ಮೃತವಾಯ್ತೆಂಬುದೂ ಮಿಥ್ಯಾರೂಪವಾದ ಭ್ರಮವಲ್ಲದೆ, ವಾಸ್ತವ್ಯವಲ್ಲ. ಈ ಭ್ರಮವು, ಸ್ಥಿರವಾಗಿ ನೆಲೆಸಿರುವ ಪೂರ್ವಾಭ್ಯಾಸದ ವಾಸನೆಯಿಂದ ಉತ್ಪನ್ನವಾಗುವುದು ॥೩೮॥

ಹೀಗಿರುವುದರಿಂದ, ನಾವು ಹಿಂದೆ ಅನುಭವಿಸಿರುವ ಜಗತ್ತಿನಲ್ಲಿಯೇ ನಮಗೆ ಈಗ ಸ್ಮರಣರೂಪವಾದ ಭ್ರಮ ಹುಟ್ಟುವುದೆಂದು ನಿರ್ಧರವಾಯ್ತು. ಅಷ್ಟೇಹೊರತು, ವರ ಕೊಡತಕ್ಕವರಾಗಲಿ—ಅಥವಾ ಹಿರಣ್ಯಗರ್ಭಾದಿಗಳಾಗಲಿ—ಮಾಡುವ ಸಂಕಲ್ಪದಿಂದ ಹೀಗಾಗುವುದೆಂದು ತಿಳಿಯಬಾರದು. ಅಂತು, ಸೃಷ್ಟಿ ಸ್ಥಿತಿ ಮುಂತಾದುವುಗಳ ಅಭ್ಯಾಸ ಸ್ವರೂಪವೇ ಇಂತಹುದು ॥೩೯॥

'ಹೀಗೆ ಸಂಸಾರವು ಕೇವಲ ವಾಸನಾಮಯವಾಗಿದ್ದಪಕ್ಷದಲ್ಲಿ, ಇದು ನಮ್ಮ ಶರೀರದ ಹೊರಗಿರುವುದೆಂಬ ಪ್ರತ್ಯಯವುಂಟಾಗಿರುವ ಬಗೆ ಹೇಗೆ?'-ಎಂದರೆ, ಚಂದ್ರಮಂಡಲವನ್ನು ನೋಡಿ ನಮ್ಮ ದೃಷ್ಟಿದೋಷದಿಂದ—ಎರಡು ಮಂಡಲಗಳಿರುವಂತೆ ತಿಳಿದುಕೊಳ್ಳುವೆವಲ್ಲವೆ! ಆಗ, ಎರಡನೆಯ ಚಂದ್ರಮಂಡಲವು ಅಸತ್ಯವಾಗಿದ್ದರೂ, ಆದು ಎಷ್ಟು ದೂರವಾಗಿದ್ದರೂ, ನಮ್ಮ ಅಂತರ್ಭಾಗದಲ್ಲಿಯೇ ಅದರ ಅನುಭವವುಂಟಾಗುವುದಷ್ಟೆ! ಹೀಗೆಯೇ, ತತ್ವಜ್ಞಾನವಿಲ್ಲದವರಿಗೂ, ಬಾಹ್ಯವಾದ ಭೂತಸಮುದಾಯಗಳ ಸಂಸಾರವು ಅಸತ್ಯವಾಗಿಯೂ ಕಲ್ಪಿತವಾಗಿಯೂ ಇರುವುದರಿಂದ—ಪುರುಷರಿಗೆ ಅಂತರವಾಗಿ ಅನುಭವವಿಷಯವಾಗುವುದೆಂದು ತಿಳಿಯಬೇಕು ॥೪೦॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಸಂಸಾರಸ್ಮೃತಿಪ್ರಕಾರ ವರ್ಣನೆಯೆಂಬ ಐವತ್ತುಮೂರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಚತುಷ್ಪಞ್ಚಾಶಃ ಸರ್ಗಃ.

ಶ್ರೀದೇವ್ಯುವಾಚ.

ತಸ್ಮಾದ್ಯೇ ವೇದ್ಯವೇತ್ತಾರೋ ಯೇ ವಾ ಧರ್ಮಂ ಪರಂ ಶ್ರಿತಾಃ |
ಆತಿವಾಹಿಕಲೋಕಾಂಸ್ತೇ ಪ್ರಾಪ್ನುವನ್ತೀಹ ನೇತರೇ ||೧||
ಆಧಿಭೌತಿಕದೇಹತ್ವಂ ಮಿಥ್ಯಾಭ್ರಮಮಯಾತ್ಮಕಮ್ |
ಕಥಂ ಸತ್ಯೇ ಸ್ಥಿತಿಂ ಯಾತಿ ಛಾಯಾಸ್ತೇ ಕಥಮಾತಪೇ ||೨||
ಲೀಲಾ ವಿದಿತವೇದ್ಯಾ ನೋ ಪರಮಂ ಧರ್ಮಮಾಶ್ರಿತಾ |
ಕೇವಲಂ ತೇನ ಸಾ ಭರ್ತುಃ ಕಲ್ಪಿತಂ ನಗರಂ ಗತಾ ||೩||

ಉತ್ಪತ್ತಿಪ್ರಕರಣದಲ್ಲಿ ಐವ್ವತ್ತುನಾಲ್ಕನೆಯ ಸರ್ಗವು.

ನಿಯತಿಃ ಸರ್ವಭಾವಾನಾಂ ತಥಾತ್ರ ಮರಣಕ್ರಮಃ |
ಭೋಗಃ ಕರ್ಮಗುಣಾಚಾರಾತ್ ಆಯುರ್ಮಾನಂ ಚ ಕಥ್ಯತೇ ||

ಸಮಸ್ತಪದಾರ್ಥಗಳಿಗೂ ಇರುವ ಈಶ್ವರನಿಯಮವೂ, ಮರಣಪ್ರಕ್ರಮವೂ, ಕರ್ಮಭೋಗವೂ, ಗುಣಕರ್ಮಗಳ ಆಚಾರಾನುಗುಣವಾಗಿ ಆಯುಃಪರಿಮಿತಿಯಾಗುವುದೆಂಬ ವಿಷಯವೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪೂರ್ವೋಕ್ತರೀತಿಯಾಗಿ ಪ್ರಬುದ್ಧಲೀಲೆಗೆ ಸಮಾಧಾನಹೇಳಿ, ಶ್ರೀಸರಸ್ವತಿಯು ಪುನಃ ಹೇಳುವಳು :—

ಎಲೌ ಲೀಲೆ! ಹೀಗಿರುವುದರಿಂದ, ಯಾರು ತತ್ವಜ್ಞರಾಗಿಯೂ ಧರ್ಮಾನುಷ್ಠಾನಶೀಲರಾಗಿಯೂ ಇರುವರೋ, ಅವರು ಮಾತ್ರವೇ ಲಿಂಗಶರೀರವನ್ನು ಹೊಂದುವರಲ್ಲದೆ, ಇತರರು ಹೊಂದಲಾರರು ||೧||

ಪಾಂಚಭೌತಿಕದೇಹತ್ವವೆಂಬುದು ಕೇವಲ ಮಿಥ್ಯಾಭ್ರಮಕಲ್ಪಿತವಾಗಿರುವುದರಿಂದ, ಆ ಸಮಯಕ್ಕೆ ಸತ್ಯವಾಗಿರುವ ಸೂಕ್ಷ್ಮದೇಹವು ಪುಣ್ಯವಿಶೇಷದಿಂದ ಲಭ್ಯವಾದಮೇಲೆ, ಆ ಪಾಂಚಭೌತಿಕದೇಹವೆಂಬ ಜ್ಞಾನವೆಲ್ಲಿರುವುದು ? ಬಿಸಿಲು ಬಂದಮೇಲೆ ನೆಳಲು ಎಲ್ಲಿಯಾದರೂ ಇರುವುದುಂಟೆ? ||೨||

ಈ ಅಪ್ರಬುದ್ಧಲೀಲೆಯಾದರೋ, ತತ್ವಜ್ಞಾನಪಡೆದವಳಾಗಿರಲಿಲ್ಲ; ಕೇವಲ ಸ್ವಧರ್ಮನಿರತಳಾಗಿಮಾತ್ರವೇ ಇದ್ದಳು. ಅದುಕಾರಣ, ಅವಳು ಆ ರೀತಿಯಾಗಿ ಸಂಕಲ್ಪಿತವಾದ ತನ್ನ ಪತಿಯ ಪಟ್ಟಣಕ್ಕೆ ಹೋದಳು ||೩||

ಪ್ರಬುದ್ಧಲೀಲೋವಾಚ.

ಏವಮೇಷಾ ಪ್ರಯಾತಾಽಸ್ತು ಭರ್ತಾ ಪಶ್ಯ ಮಮಾಮ್ಬಿಕೇ ।
ಪ್ರವೃತ್ತಃ ಪ್ರಾಣಸನ್ತ್ಯಾಗೇ ಕರ್ತವ್ಯಂ ಕಿಮಿಹಾಧುನಾ ॥೪॥
ಭಾವಾಭಾವೇಷು ಭಾವಾನಾಂ ಕಥಂ ನಿಯತಿರಾಗತಾ ।
ಕಥಂ ಭೂಯೋಽಪ್ಯನಿಯತಿಃ ಮೃತಿಜನ್ಮಾದಿಸೂಚಿತಾ ॥೫॥
ಕಥಂ ಸ್ವಭಾವಸಂಸಿದ್ಧಿಃ ಕಥಂ ಸತ್ತಾ ಪದಾರ್ಥಗಾ ।
ಕಥಮಗ್ನ್ಯಾದಿಷೂಷ್ಣತ್ವಂ ಪೃಥ್ವ್ಯಾದೌ ಸ್ಥಿರತಾ ಕಥಮ್ ॥೬॥
ಹಿಮಾದಿಷು ಕಥಂ ಶೈತ್ಯಂ ಕಾ ಸತ್ತಾ ಕಾಲಖಾದಿಷು ।
ಭಾವಾಭಾವಗ್ರಹೋತ್ಸರ್ಗಸ್ಥೂಲಸೂಕ್ಷ್ಮದೃಶಃ ಕಥಮ್ ॥೭॥

ಹೀಗೆ ದೇವಿಯು ಹೇಳಿದ ಮಾತನ್ನು ತಿಳಿದುಕೊಂಡು, ಪುನಃ ಪ್ರಬುದ್ಧಲೀಲೆಯು ಮಾತನಾಡಿದಳು :—

ಹೇ! ಅಂಬ! ನೀನು ಹೇಳಿದುದು ಸರಿಯೇ! ಆ ಅಪ್ರಬುದ್ಧಲೀಲೆಯು, ಆ ರೀತಿಯಾಗಿ ಹೊರಟುಹೋದುದು ಯುಕ್ತವೇ! ಅದು ಇರಲಿ; ಇಲ್ಲಿ ನೋಡು; ಈ ನನ್ನ ಪತಿಯು, ಪ್ರಾಣೋತ್ಕ್ರಮಣಸ್ಥಿತಿಯಲ್ಲಿರುವನಲ್ಲ! ಈಗ ಏನುಮಾಡಬೇಕು? ॥೪॥

ದೇಹಾದಿಗಳಿಗೆ, ಸುಖ ಜೀವನ ಮುಂತಾದುವುಗಳು ಇರುವ ವಿಷಯದಲ್ಲಿಯೂ--ದುಃಖ ಮರಣ ಮುಂತಾದುವುಗಳು ಇಲ್ಲವೆಂಬ ವಿಷಯದಲ್ಲಿಯೂ—ನೈಯತ್ಯ(ನಿಶ್ಚಯವಾಗಿ ನಡೆಯುವುದೆಂಬ ಭರವಸೆ) ಜ್ಞಾನವುಂಟಾಗಿರುವುದಲ್ಲ! ಇದು ಹೇಗೆ? ಮತ್ತು ಸ್ವಲ್ಪಕಾಲಾನಂತರ—ಮರಣ ಜನ್ಮ ಮುಂತಾದುವು ಪುನಃ ಒದಗುವುವಲ್ಲ! ಆಗ ಇವುಗಳು ನಿಯತವಲ್ಲವೆಂದು ತೋರುವುದಲ್ಲವೆ! ಇದು ಹೇಗೆ? ಅಂತು, ವಿಚಾರಮಾಡುತಹೋದರೆ, ದೇಹಾದಿಗಳಿಗೆ ಸುಖದುಃಖಾದಿಗಳು ಒಂದಾವರ್ತಿ ನಿಯತವಾಗಿರುವಂತೆಯೂ, ಮತ್ತೊಂದು ವೇಳೆ ನಿಯತವಲ್ಲದಂತೆಯೂ ಕಾಣಬರುವುವಲ್ಲವೆ! ॥೫॥

ನಿಯತವೆಂಬ ಪಕ್ಷವನ್ನು ಬಿಟ್ಟುಬಿಟ್ಟು, ಅನಿಯತವೆಂಬ ಪಕ್ಷವನ್ನೇ ಆಶ್ರಯಿಸೋಣವೆಂದರೆ,—ಆಗಲೂ ಅನುಪಪತ್ತಿ ತೋರುವುದು. ಪ್ರತಿಯೊಂದು ಪದಾರ್ಥಕ್ಕೂ ಒಂದೊಂದು ಸ್ವಭಾವವಿರುವುದಷ್ಟೆ! ಆಗ ಅದು ಸಿದ್ಧಿಸುವುದು ಹೇಗೆ? ಪೃಥಿವಿ ಜಲ ಮುಂತಾದ ಪದಾರ್ಥಗಳಲ್ಲಿ ಇರುವ ಸತ್ತೆ (ಇರುವದೆಂಬುವಿಕೆ) ಹೇಗುಂಟಾಯ್ತು? ಅಗ್ನಿ ಮುಂತಾದುವುಗಳಲ್ಲಿ ಎಂದಿಗೂ ಉಷ್ಣತ್ವವೇ ಇರುವುದೆಂಬುದು ಹೇಗೆ? ಪೃಥಿವಿ ಮುಂತಾದುವುಗಳಲ್ಲಿ ಸ್ಥಿರತ್ವವಿರುವುದು ಹೇಗೆ? ಹಿಮ ಮುಂತಾದುವುಗಳಲ್ಲಿ ಶೀತತ್ವವಿರುವುದು ಹೇಗೆ? ಕಾಲ ಆಕಾಶ ಮುಂತಾದ ಅಪ್ರತ್ಯಕ್ಷಪದಾರ್ಥಗಳು ಇರುವುವೆಂಬುದು ಹೇಗೆ? ಸತ್ಯವಾದ ರಜತ ಮುಂತಾದುವುಗಳನ್ನು ಸ್ವೀಕರಿಸಬೇಕೆಂಬುದೂ, ಅಸತ್ಯವಾದ ಶುಕ್ತಿರಜತ ಮುಂತಾದುವುಗಳನ್ನು ಪರಿತ್ಯಜಿಸಬೇಕೆಂಬುದೂ ಹೇಗೆ? ಭೂಮಿ ಮುಂತಾದುವು ಸ್ಥೂಲವಾಗಿರುವುವೆಂಬುದೂ ಇಂದ್ರಿಯ ಮನಸ್ಸು ಮುಂತಾದುವು ಸೂಕ್ಷ್ಮಗಳಾಗಿರುವುವೆಂಬುದೂ ಹೇಗೆ? ಮತ್ತು, ತೃಣ ಗುಲ್ಮ ಮನುಷ್ಯ –ಮುಂತಾದ ವಸ್ತುವು, ಸಾಲವೃಕ್ಷಾದಿಗಳಂತೆ, ಬೆಳೆಯುವುದಕ್ಕೆ ತಕ್ಕ ಕಾರಣವಿದ್ದರೂ, ಇಷ್ಟವಿದ್ದರೂ—ಅಥವಾ ಇಷ್ಟವಿಲ್ಲದಿದ್ದರೂ, ಬೆಳೆಯದಿರುವುದು ಹೇಗೆ? ಪದಾರ್ಥಗಳಲ್ಲಿ ಸ್ವಭಾವವು ನಿಯತವಾಗಿಲ್ಲವೆಂದು ಹೇಳಿದರೆ, ಮೇಲೆ

ಕಥಮತ್ಯನ್ತಮುಚ್ಛ್ರಾಯಂ ತೃಣಗುಲ್ಮನರಾದಿಕಮ್ ।
ವಸ್ತು ನಾಯಾತ್ಯನಿಷ್ಟೇಽಪಿ ಸ್ಥಿತೇ ಸ್ವೋಚ್ಛ್ರಾಯಕಾರಣೇ ॥೮॥

ಶ್ರೀದೇವ್ಯುವಾಚ.

ಮಹಾಪ್ರಳಯಸಮ್ಪ್ರಾಪ್ತೌ ಸರ್ವಾರ್ಥಾಸ್ತಮಯೇ ಸತಿ ।
ಅನನ್ತಾಕಾಶಮಾಶಾನ್ತಂ ಸದ್ಬ್ರಹ್ಮೈವಾವತಿಷ್ಠತೇ ॥೯॥
ತಚ್ಚಿದ್ರೂಪತಯಾ ತೇಜಃಕಣೋಽಹಮಿತಿ ಚೇತತಿ ।
ಸ್ವಪ್ನೇ ಸಂವಿದ್ಯಥಾ ಹಿ ತ್ವಂ ಆಕಾಶಗಮನಾದಿ ಚ ॥೧೦॥
ತೇಜಃಕಣೋಽಸೌ ಸ್ಥೂಲತ್ವಂ ಆತ್ಮನಾತ್ಮನಿ ವಿನ್ದತಿ ।
ಅಸತ್ಯಮೇವ ಸತ್ಯಾಭಂ ಬ್ರಹ್ಮಾಣ್ಡಂ ತದಿದಂ ಸ್ಮೃತಮ್ ॥೧೧॥
ತತ್ರಾನ್ತರ್ಬ್ರಹ್ಮ ತದ್ವೇತ್ತಿ ಬ್ರಹ್ಮಾಯಮಹಮಿತ್ಯಥ ।
ಮನೋರಾಜ್ಯಂ ಸ ಕುರುತೇ ಸ್ವಾತ್ಮೈವಂ ತದಿದಂ ಜಗತ್ ॥೧೨॥

ತೋರಿಸಿರುವ ಸಂದರ್ಭಗಳಲ್ಲೆಲ್ಲ ವ್ಯತ್ಯಾಸವುಂಟಾಗಬಹುದಾಗುವುದು. ಅದು ಸುತರಾಂ ಅನುಭವಗೋಚರವಲ್ಲ. ಹೀಗೆ ನಿಯತವೆಂದರೂ—ಅಥವಾ ನಿಯತವಲ್ಲವೆಂದರೂ—ಅಪಪತ್ತಿಯೇ ತೋರುವುದಲ್ಲವೆ! ॥೬—೮॥

ಇದನ್ನು ಕೇಳಿ ಶ್ರೀಸರಸ್ವತಿಯು ಸಮಾಧಾನಹೇಳುವಳು :—

ಎಲೌ! ಲೀಲೆ! ನಿನ್ನ ಅಭಿಪ್ರಾಯವು ಗೊತ್ತಾಯ್ತು. ಆದರೆ, ಈ ಜಗತ್ತು ಕೇವಲ ಸತ್ಯಮಾತ್ರಸ್ವಭಾವವಾಗಿದ್ದಪಕ್ಷದಲ್ಲಿ, ನೀನು ಹೇಳುವಂತೆ ಏಕವಿಧವಾದ ನಿಯತಿ (ನಿಯಮ) ಯಾಗಬಹುದು. ಅಥವಾ, ಇದು ಅಸತ್ಯಮಾತ್ರಸ್ವಭಾವವಾಗಿದ್ದರೆ, ಅನಿಯತಿಯೇ ಸರ್ವದಾ ಇರುವುದೆಂದಾದರೂ ಹೇಳಬಹುದು. ಆದರೆ, ಇದರಲ್ಲಿ ಸತ್ಯಾಸತ್ಯಸ್ವಭಾವಗಳೆರಡೂ ಇರುವುವು. ಇದರ ಕ್ರಮವನ್ನು ಕೇಳು :—ಮಹಾಪ್ರಳಯವಾದಾಗ, ಸಮಸ್ತಪದಾರ್ಥಗಳೂ ಅಸ್ತಹೊಂದಿರಲಾಗಿ, ಅಖಂಡಾಕಾಶರೂಪವಾದ ಪರಬ್ರಹ್ಮವೊಂದೇ—ನಿರ್ವಿಕಾರವಾಗಿರುವುದು ॥೯॥

ಅದು, ಕೇವಲ ಜ್ಞಾನಮಾತ್ರಸ್ವರೂಪವಾದುದರಿಂದ, ಸ್ವಪ್ನದಲ್ಲುಂಟಾಗುವ ಜ್ಞಾನದಂತೆಯೂ—ನೀನು ಆಕಾಶಗಮನಮುಂತಾದುವುಗಳನ್ನು ಅನುಭವಿಸಿದಂತೆಯೂ—'ನಾನು ತೇಜಸ್ಸಿನ ಅಂಶರೂಪವಾಗಿರುವೆನು' ಎಂದು ಬೋಧೆಯುಳ್ಳದಾಗಿ, ಆ ವಿಧವಾದ ಅನುಭವವನ್ನೂ ಪಡೆಯುವುದು ॥೧೦॥

ಬಳಿಕ, ಆ ತೇಜಃಕಣವು, ತನ್ನಲ್ಲಿ ತಾನೇ ಸ್ಥೂಲತ್ವವನ್ನು ಕಲ್ಪಿಸಿಕೊಂಡು, ಅದನ್ನೂ ಅನುಭವಿಸುವುದು. ಈ ರೀತಿಯಾಗಿ ಸ್ಥೂಲವಾದ ಆ ತೇಜಃಕಣವೇ, ಪರಿದೃಶ್ಯಮಾನವಾದ ಈ ಜಗತ್ತೆಂದು ಹೇಳಲ್ಪಡುವುದು ॥೧೧॥

ಆ ಬಳಿಕ, ಆ ಪರಬ್ರಹ್ಮವಸ್ತುವು,—ನಾನು ಆ ಬ್ರಹ್ಮಾಂಡದಲ್ಲಿ ಅಂತರ್ಗತನಾಗಿರುವ ಹಿರಣ್ಯಗರ್ಭನೆಂದು ತಿಳಿದುಕೊಳ್ಳುವುದು; ಅನಂತರ ಮನೋರಾಜ್ಯ (ಮನಸ್ಸಿನಲ್ಲಿಯೇ ನಾನಾವಿಧವಾಗಿ ಕಲ್ಪನೆ) ವನ್ನೂ ಮಾಡುವುದು. ಈ ಮನೋರಾಜ್ಯವೇ, ದೃಶ್ಯವಾದ ಜಗತ್ತೆನ್ನಿಸುವುದು ॥೧೨॥

ತಸ್ಮಿನ್ ಪ್ರಥಮತಃ ಸರ್ಗೇ ಯಾಯಥಾ ಯತ್ರ ಸಂವಿದಃ |
ಕಚಿತಾಸ್ತಾಸ್ತಥಾ ತತ್ರ ಸ್ಥಿತಾಅದ್ಯಾಪಿ ನಿಶ್ಚಲಾಃ ||೧೩||
ಯದ್ಯಥಾ ಸ್ಫುರಿತಂ ಚಿತ್ತಂ ತತ್ತಥಾ ಹ್ಯಾತ್ಮಚಿದ್ಭವೇತ್ |
ಸ್ವಯಮೇವಾಸಿಯಮತಃ ತತ್ತತ್ ಸ್ಯಾನ್ನೇಹ ಕಿಂಚನ ||೧೪||
ನ ಚ ನಾಮ ನಕಿಂಚಿತ್ತ್ವಂ ಯುಜ್ಯತೇ ವಿಶ್ವರೂಪಿಣಃ |
ತ್ಯಕ್ತ್ವಾ ಸಮಸ್ತಸಂಸ್ಥಾನಂ ಹೇಮ ತಿಷ್ಠತಿ ವೈ ಕಥಮ್ ||೧೫||
ಸರ್ಗಾದೌ ಸ್ವಯಮೇವಾನ್ತಃ ಚಿದ್ಯಥಾ ಕಚಿತಾತ್ಮನಿ |
ಹಿಮಾಗ್ನ್ಯಾದಿತಯಾದ್ಯಾಪಿ ಸಾ ತಥಾಸ್ತೇ ಸ್ವಸತ್ತಯಾ ||೧೬||
ತಸ್ಮಾತ್ ಸ್ವಸತ್ತಾಸನ್ತ್ಯಾಗಃ ಸತಃ ಕರ್ತುಂ ನ ಯುಜ್ಯತೇ |

ಹೀಗೆ ಪ್ರಥಮಸೃಷ್ಟಿಯಲ್ಲಿ, ಯಾವ ಸ್ಥಳದಲ್ಲಿ ಯಾವವಿಧವಾಗಿ ಯಾವ ಜ್ಞಾನಗಳು ಉದಯಿಸಿದುವೋ, ಅವು ಅದೇರೀತಿಯಾಗಿ ಅದ್ಯಾಪಿ ಇರುವುವೆಂದು ನಿಶ್ಚಯವಾಗಿ ತಿಳಿ॥

ಆದರೆ—‘ ಮನಸ್ಸು ವಿಚಿತ್ರಾಕಾರವಾದ ವಾಸನಾಮಯವಾಗಿರುವುದರಿಂದ, ಅದಕ್ಕೆ ನಾನಾವಿಧವಾದ ಸಂಕಲ್ಪಗಳು ಹುಟ್ಟಬಹುದು; ಆತ್ಮನೂ ತದನುಗುಣವಾಗಿ ಏಕೆ ರೂಪಾಂತರ ಹೊಂದುತಿರಬೇಕು?’—ಎಂದರೆ,—ಹೇಳುವೆನು; ಕೇಳು. ಯಾವಯಾವವಿಧವಾಗಿ ಚಿತ್ತವು ಸ್ಫುರಣಹೊಂದುವುದೋ, ಆಯಾವಿಧವಾಗಿಯೇ ಆತ್ಮನೂ ತಾನಾಗಿಯೇ ಆಗಿಬಿಡುವನು. ಹೀಗೆ ಉಪಾಧಿಗನುಗುಣವಾಗಿ ಆಗುವುದೇ ಆತ್ಮನ ಸ್ವಭಾವವಾಗಿರುವುದು. ಆದುಕಾರಣ, ಇಲ್ಲಿ ಯಾವುದೊಂದೂ ಅನಿಯತಸ್ವಭಾವವಾಗಿಯೇ ಹುಟ್ಟುವುದೆಂದು ಹೇಳಲಾಗದು ॥೧೪॥

ಇದೂ ಅಲ್ಲದೆ, ಮಾಯಾಸಂವಳಿತನಾದ ಬ್ರಹ್ಮನಲ್ಲಿ ಅನಾದಿಯಾಗಿ ನಿಯತರೂಪವಾಗಿರುವ ಪ್ರಪಂಚವೇ ಸ್ಫುರಣಹೊಂದುವುದರಿಂದ, ಹೀಗೂ ನಿಯತಿಯುಂಟೆಂದು ಭಾವಿಸಬೇಕಾಗುವುದು. ಪ್ರಳಯದಲ್ಲಿಯೂ, ವಿಶ್ವರೂಪನಾದ ಮಾಯಾಶಬಳ ಬ್ರಹ್ಮನಲ್ಲಿ ಯಾವುದೂ ಇಲ್ಲವೆಂಬುದು ಸಂಘಟಿಸಲಾರದು. ಹಾಗೆ ಇರುತ್ತದೆಯೆಂದು ಹೇಳುವಪಕ್ಷದಲ್ಲಿ, ಇದು ಪ್ರಪಂಚಕ್ಕೆ ಕಾರಣವೆಂಬ ಮಾತು ಅಯುಕ್ತವಾಗುವುದು. ಸುವರ್ಣವು ಕಟಕಮುಂತಾದುವುಗಳಿಗೆಲ್ಲ ಕಾರಣವಾಗಿರುವುದಲ್ಲವೆ! ಈ ಸಮಸ್ತವಾದ ಅವಸ್ಥೆಗಳೂ ಸುವರ್ಣದಲ್ಲಿ ಅಂತರ್ಭವಿಸಿರುವುದರಿಂದ, ಇದೆಲ್ಲವನ್ನೂ ಬಿಟ್ಟುಬಿಟ್ಟು ಸುವರ್ಣವು ಇರುವ ಬಗೆ ಹೇಗೆ? ॥೧೫॥

ಈ ರೀತಿಯಾಗಿ, ಚಿತ್ತು ಸೃಷ್ಟ್ಯಾದಿಯಲ್ಲಿ ತನ್ನೊಳಗೆ ತಾನೇ ಯಾವವಿಧವಾಗಿ ಆವಿರ್ಭವಿಸಿತೋ, ಅದು ಈಗಲೂ ಅದೇರೀತಿಯಾಗಿ—ಹಿಮ ಅಗ್ನಿ ಮುಂತಾದ ರೂಪದಿಂದ ನೆಲೆಸಿರುವುದು ॥೧೬॥

ಆದುಕಾರಣ, ಮಾಯಾಸಂವಳಿತವಾದ ಬ್ರಹ್ಮವು ತನ್ನ ಆಶ್ರಯವನ್ನು ಬಿಡುವುದೆಂದು ಒಪ್ಪುವುದು ಯುಕ್ತವಾಗುವುದಿಲ್ಲ. ಯಾವಾಗ ಚೈತನ್ಯವು ಈ ರೀತಿಯಾಗಿರುವುದೆಂದು ಗೊತ್ತಾಯ್ತೋ, ಆಗ ನಿಯತಿಯು ಅನಶ್ವರವೆಂದೂ ಸಿದ್ಧವಾಗುವುದು. ಅಂತು, ಮಾಯಾಶಬಳವಾದ ಬ್ರಹ್ಮವು ತನ್ನ ಅಧಿಷ್ಠಾನಸತ್ತೆಯನ್ನು ಬಿಡುವುದಾಗಿದ್ದರೆ, ಆಗ—ಮಾಯೆ

ಯದಾ ಚಿದಾಸ್ತೇ ತೇನೇಯಂ ನಿಯತಿರ್ನ ವಿನಶ್ಯತಿ ॥೧೭॥
ಯದ್ಯಥಾ ಕಚಿತಂ ಯತ್ರ ವ್ಯೋಮರೂಪ್ಯಪಿ ಪಾರ್ಥಿವಮ್ ।
ಸರ್ಗಾದೌ ತಸ್ಯ ಚಲಿತುಂ ಅದ್ಯಯಾವನ್ನ ಶಕ್ಯತೇ ॥೧೮॥
ಯಾ ಯಥಾ ಚಿತ್ ಪ್ರಕಚಿತಾ ಪ್ರತಿಪಕ್ಷವಿದಂ ವಿನಾ ।
ನ ಸಾ ತತಃ ಪ್ರಚಲತಿ ವೇದನಾಭ್ಯಾಸತಃ ಸ್ವಯಮ್ ॥೧೯॥
ಜಗದಾದಾವನುತ್ಪನ್ನಂ ಯಚ್ಚೇದಮನುಭೂಯತೇ ।
ತತ್ ಸಂವಿದ್ವ್ಯೋಮಕಚನಂ ಸ್ವಪ್ನಸ್ತ್ರೀಸುರತಂ ಯಥಾ॥೨೦॥
ಅಸತ್ಯಮೇವ ಸತ್ಯಾಭಂ ಪ್ರತಿಭಾನಮಿದಂ ಸ್ಥಿತಮ್ ।
ಇತಿ ಸ್ವಭಾವಸಮ್ಪತ್ತಿಃ ಇತಿ ಭೂತಾನುಭೂತಯಃ ॥೨೧॥

ಯಲ್ಲಿ ಅಂತರ್ಗತವಾಗಿರುವ ನಿಯತಿಯೂ ಅಸ್ಥಿರವೆಂದು ಹೇಳಬಹುದು; ಅದೇ ಇಲ್ಲದಿರುವಾಗ, ನಿಯತಿಯು ಸ್ಥಿರವೆಂದು ಹೇಳುವುದಕ್ಕೆ ಯಾವ ಬಾಧೆಯೂ ಇಲ್ಲವೆಂದು ನಿಶ್ಚಯವಾಯ್ತು ॥೧೭॥

ಮತ್ತು, ಈ ನಿಯತಿಯು ಎಂದಿಗೂ ವಿಪರ್ಯಾಸಹೊಂದತಕ್ಕುದಲ್ಲವೆಂಬುದಕ್ಕೆ ಇನ್ನೊಂದು ಕಾರಣವನ್ನು ತೋರಿಸುವೆನು. ಸೃಷ್ಟ್ಯಾದಿಯಲ್ಲಿ ಯಾವ ಪದಾರ್ಥವು ಯಾವ ರೀತಿಯಾಗಿ—ಆಕಾಶರೂಪವಾಗಿಯಾಗಲಿ—ಅಥವಾ ಪಾರ್ಥಿವರೂಪವಾಗಿಯಾಗಲಿ—ಉತ್ಪನ್ನವಾಯ್ತೋ, ಅದು ಇಂದಿನವರೆಗೂ ಸ್ವಲ್ಪವೂ ತನ್ನ ಸ್ವಭಾವವನ್ನು ಬಿಟ್ಟು ವಿಪರ್ಯಾಸಹೊಂದುವುದಕ್ಕಾಗದಿರುವುದು. ಹೀಗಿರುವುದಕ್ಕೆ ನಿಯತಿಯೇ ಕಾರಣವೆಂದು ತಿಳಿಯುವಳಾಗು ॥೧೮॥

'ಹಾಗಾದರೆ, ಪ್ರಾಣಿಗಳಿಗೆ ಜೀವಿತವು ನಿಯತವಾಗಿರುವಾಗ—ಮರಣವುಂಟಾಗುವುದು ಹೇಗೆ?'—ಎಂದು ಕೇಳುವೆಯೋ:—ಈ ನಿಯತಿಗೆ ವಿರುದ್ಧವಾದ ಸಾಮಗ್ರಿಯೂ ನಿಯತವಾಗಿಯೇ ಇರುವುದು. ಅದೂಕೂಡ, ಕೇವಲ ಜ್ಞಾನಾಭ್ಯಾಸದಿಂದಲೇ ಉಂಟಾಗತಕ್ಕುದು. ಹೀಗಿರುವುದರಿಂದ, ಯಾವ ಜ್ಞಾನವು ಯಾವರೀತಿಯಾಗಿ ಆದಿಸೃಷ್ಟಿಯಲ್ಲಿ ಆವಿರ್ಭಾವಹೊಂದಿತೋ, ಅದು—ತನಗೆ ವಿರುದ್ಧವಾದ ಮತ್ತೊಂದುಜ್ಞಾನವುಂಟಾದಲ್ಲದೆ—ತನ್ನ ಅಭ್ಯಾಸವನ್ನು ಬಿಟ್ಟು ಚಲಿಸುವುದಿಲ್ಲ ॥೧೯॥

ಮತ್ತು, ಇದೆಲ್ಲವೂ ಮಾಯಿಕದೃಷ್ಟಿಯಿಂದ ಹೇಳಲ್ಪಟ್ಟಂತಾಯ್ತು; ಪರಮಾರ್ಥದೃಷ್ಟಿಯಿಂದ ವಿಚಾರಮಾಡುವಾಗ, ಈ ನಿಯತಿಯೆಲ್ಲಿರುವುದು? ಈ ಜಗತ್ತು, ಮೊದಲು ಹುಟ್ಟಿಯೇ ಇರಲಿಲ್ಲ; ಹುಟ್ಟಿರುವಂತೆ ಕಾಣುವುದು ಯಾವುದುಂಟೋ, ಅದು—ಜ್ಞಾನಾಕಾಶದ ಪ್ರತಿಭಾಸವೇ ಹೊರತು—ತಾತ್ವಿಕವಾದುದಲ್ಲ. ಇದಕ್ಕೆ ಸ್ವಪ್ನದಲ್ಲಾಗುವ ಸ್ತ್ರೀಸಮಾಗಮವೇ ದೃಷ್ಟಾಂತವು. ಸ್ವಪ್ನದಲ್ಲಿ ವಸ್ತುತಃ ಸ್ತ್ರೀಯಿಲ್ಲದಿದ್ದರೂ, ಇರುವಂತೆ ನಮಗೆ ಅನುಭವವಾಗುವಂತೆ, ಜಗತ್ತು ಇಲ್ಲದಿದ್ದರೂ ಇರುವಂತೆ ನಮಗೆ ಅನುಭವವುಂಟಾಗುವುದು ॥೨೦॥

ಹೀಗೆ, ಈ ಪ್ರತಿಭೆಯು ಅಸತ್ಯವೇ ಆಗಿದ್ದರೂ ಸತ್ಯದಂತೆ ಕಾಣುತಿರುವುದು. ಹೀಗೆ ನಿಯತಿಯ ಸ್ವಭಾವವು ನಿನಗೆ ಹೇಳಲ್ಪಟ್ಟಿರುವುದು; ಮತ್ತು ಭೂತಗಳಿಗುಂಟಾಗುವ ಜನನಮರಣಾದಿಗಳ ಪ್ರಕ್ರಿಯೆಯೂ ಈರೀತಿಯಾಗಿರುವುದು ॥೨೧॥

ಸರ್ಗಾದೌ ಯಾ ಯಥಾ ರೂಢಾ ಸಂವಿತ್ಕಚನಸನ್ತತಿಃ |
ಸಾದ್ಯಾಪ್ಯಚಲಿತಾನ್ಯೇನ ಸ್ಥಿತಾ ನಿಯತಿರುಚ್ಯತೇ ||೨೨||
ಗೃಹೀತವ್ಯೋಮಸಂವಿತ್ತಿ ಚಿದ್ವ್ಯೋಮ ವ್ಯೋಮತಾಂ ಗತಮ್ |
ಗೃಹೀತಕಾಲತಾಸಂವಿತ್ ಚಿನ್ನಭಃ ಕಾಲತಾಂ ಗತಮ್ ||೨೩||
ಗೃಹೀತಜಲಸಂವಿತ್ತಿ ಚಿದ್ವ್ಯೋಮ ವಾರಿವತ್ ಸ್ಥಿತಮ್ |
ಸ್ವಪ್ನೇ ಯಥಾ ಹಿ ಪುರುಷಃ ಪಶ್ಯತ್ಯಾತ್ಮನಿ ವಾರಿತಾಮ್ ||೨೪||
ಸ್ವಪ್ನಚಿತ್ಸಂವಿದಾಭಾತಿ ಭವತ್ಯೇಷಾ ಯಥಾ ಸ್ಥಿತಾ |
ಚಿಚ್ಚಮತ್ಕಾರಚಾತುರ್ಯಾತ್ ಅಸದೇತತ್ ಸಮೂಹತೇ ||೨೫||
ಖತ್ವಂ ಜಲತ್ವಮುರ್ವೀತ್ವಂ ಅಗ್ನಿವಾಯುತ್ವಮಪ್ಯಸತ್ |
ವೇತ್ತ್ಯನ್ತಃ ಸ್ವಪ್ನಸಙ್ಕಲ್ಪಧ್ಯಾನೇಷ್ವಿವ ಚಿತಿಃ ಸ್ವಯಮ್ ||೨೬||
ಮರಣಾನನ್ತರಂ ಕರ್ಮಫಲಾನುಭವನಕ್ರಮಮ್ |
ಸರ್ವಸನ್ದೇಹಶಾನ್ತ್ಯರ್ಥಂ ಮೃತಿಶ್ರೇಯಸ್ಕರಂ ಶೃಣು ||೨೭||

ಈಗ 'ನಿಯತಿ' ಯೆಂಬ ಶಬ್ದದ ಅರ್ಥವನ್ನು ತಿಳಿಯುವಳಾಗು. ಸೃಷ್ಟ್ಯಾದಿಯಲ್ಲಿ ಯಾವ ಜ್ಞಾನವು ಯಾವರೀತಿಯಾಗಿ ಸಂತತಧಾರಾರೂಪವಾಗಿ ಪ್ರವಹಿಸಿ ರೂಢವಾಯ್ತೋ, ಅದು ಇಂದಿನವರೆಗೂ ಮತ್ತಾವುದರಿಂದಲೂ ಚಲನೆಹೊಂದದೆ ಸ್ಥಿರವಾಗಿರುವುದು. ಇದನ್ನೇ ನಿಯತಿಯೆಂದು ಹೇಳುವರು ||೨೨||

ಇದರ ವಿವರವನ್ನು ಕೇಳು. ಚಿದಾಕಾಶವು, ತಾನು ಆಕಾಶವೆಂಬ ಜ್ಞಾನವನ್ನು ಪಡೆದುದರಿಂದ ಆಕಾಶವಾಗಿಯೇ ಇದುವರೆಗೂ ಸ್ಥಿರವಾಗಿರುವುದು ; ಹೀಗೆಯೇ ಆ ಚಿತ್ತು ಕಾಲವೆಂಬ ಜ್ಞಾನವುಳ್ಳುದಾಗಿ ಕಾಲರೂಪವನ್ನು ಪಡೆಯಿತು ||೨೩||

ಆ ಚಿದಾಕಾಶವು ಜಲವೆಂಬ ಜ್ಞಾನವನ್ನು ಹೊಂದಿ ಜಲರೂಪವಾಗಿರುವುದು. 'ಹೀಗೆ ತಾನು ತಿಳಿದಮಾತ್ರದಿಂದಲೇ ಆರೀತಿಯಾಗಿಯೇ ಆಗುವುದು ಸಂಭವಿಸುವುದೆ?' ಎಂದು ಕೇಳಿದರೆ,—ಸ್ವಪ್ನದಲ್ಲಿ ಮನುಷ್ಯನು—ತಾನು ನೀರಾಗಿ ಹರಿದುಹೋದಂತೆ ಕಾಣುವನಲ್ಲವೆ! ಅದರಂತೆಯೇ ಇಲ್ಲಿಯೂ ತಿಳಿಯಬೇಕು ||೨೪||

ಹೀಗೆ ಸ್ವಪ್ನ ಕಾಲಿಕಜ್ಞಾನದಂತೆ ಭಾಸಮಾನವಾದರೂ, ಈ ಬ್ರಹ್ಮಚೈತನ್ಯವು ಯಥಾವಸ್ಥಿತವಾಗಿಯೇ ಇರುವುದು. ಆದರೆ, ವಸ್ತುತಃ ಅಸತ್ಯವಾಗಿದ್ದರೂ, ಈ ಪ್ರಪಂಚವನ್ನು—ಮಾಯಾಚಾತುರ್ಯದಿಂದ—ಸತ್ಯವಾಗಿರುವಂತೆ ಪುರುಷನು ಯೋಚಿಸುವನು ||೨೫||

ಹೀಗೆ, ಚೈತನ್ಯವೇ, ಸ್ವಪ್ನ ಸಂಕಲ್ಪ ಧ್ಯಾನಗಳಲ್ಲಿ ನೋಡುವಂತೆ, ಆಕಾಶತ್ವ ಜಲತ್ವ ಭೂಮಿತ್ವ ಅಗ್ನಿತ್ವ ವಾಯುತ್ವ ಮುಂತಾದುವುಗಳು ತನ್ನಲ್ಲಿ ಇಲ್ಲದಿದ್ದರೂ ಇರುವಂತೆ ತಾನು ತಿಳಿದುಕೊಳ್ಳುವುದು ||೨೬||

ಎಲೌ ಲೀಲೆ! ನಿಯತಿಯ ಸ್ವರೂಪವು ಗೊತ್ತಾಯ್ತಷ್ಟೆ! ಈಗ ನಿನಗೆ ಸಕಲ ಸಂದೇಹಗಳೂ ಶಾಂತಿಹೊಂದುವುದಕ್ಕೋಸ್ಕರ, ಪುರುಷರು ಮರಣಾನಂತರ ತಮ್ಮ ಕರ್ಮ ಫಲವನ್ನನುಭವಿಸುವ ಕ್ರಮವನ್ನು ಹೇಳುವೆನು; ಕೇಳು. ಇದನ್ನು ಕೇಳಿ ತಿಳಿದುಕೊಂಡರೆ, ಮನುಷ್ಯನು ಮರಣಾನಂತರದಲ್ಲಿಯೂ ಶ್ರೇಯಸ್ಸನ್ನು ಪಡೆಯಬಹುದು ||೨೭||

ರೂಢಾದಿಸರ್ಗೇ ನಿಯತಿಃ ಯೈಕದ್ವಿತ್ರಿಚತುಶ್ಯತಾ |
ಪೂರ್ವಾದಿಷ್ವಾಯುಷಃ ಪುಂಸಾಂ ತಸ್ಯಾಮೇ ನಿಯತಿಂ ಶೃಣು ||೨೮||
ದೇಶಕಾಲಕ್ರಿಯಾದ್ರವ್ಯಶುದ್ಧ್ಯಶುದ್ಧೀ ಸ್ವಕರ್ಮಣಾಮ್ |
ನ್ಯೂನತ್ವೇ ಚಾಧಿಕತ್ವೇ ಚ ನೃಣಾಂ ಕಾರಣಮಾಯುಷಃ ||೨೯||
ಸ್ವಕರ್ಮಧರ್ಮೇ ಹ್ರಸತಿ ಹ್ರಸತ್ಯಾಯುರ್ನೃಣಾಮಿಹ |
ವೃದ್ಧೇ ವೃದ್ಧಿಮುಪಾಯಾತಿ ಸಮಮೇವ ಭವೇತ್ ಸಮೇ ||೩೦||
ಬಾಲಮೃತ್ಯುಪ್ರದೈರ್ಬಾಲೋ ಯುವಾ ಯೌವನಮೃತ್ಯುದೈಃ |
ವೃದ್ಧಮೃತ್ಯುಪ್ರದೈರ್ವೃದ್ಧಃ ಕರ್ಮಭಿರ್ಮೃತ್ಯುಮೃಚ್ಛತಿ||೩೧||
ಯೋ ಯಥಾಶಾಸ್ತ್ರಮಾರಬ್ಧಂ ಸ್ವಧರ್ಮಮನುತಿಷ್ಠತಿ |
ಭಾಜನಂ ಭವತಿ ಶ್ರೀಮಾನ್ ಸ ಯಥಾಶಾಸ್ತ್ರಮಾಯುಷಃ ||೩೨||

ಪುರುಷರಿಗೆ, ಕಲಿಯುಗದಲ್ಲಿ ನೂರುವರ್ಷವೂ, ದ್ವಾಪರದಲ್ಲಿ ಇನ್ನೂರು ವರ್ಷವೂ, ತ್ರೇತಾಯುಗದಲ್ಲಿ ಮುನ್ನೂರು ವರ್ಷವೂ, ಕೃತಯುಗದಲ್ಲಿ ನಾನೂರು ವರ್ಷವೂ,ಆಯುಃ ಪರಿಮಿತಿಯು ಸೃಷ್ಟ್ಯಾದಿಯಲ್ಲಿಯೇ ರೂಢವಾಗಿರುವುದಲ್ಲವೆ! ಇದರ ನಿಯತಿಯನ್ನು ನನ್ನ ಮುಖದಿಂದ ಕೇಳಿ ತಿಳಿಯುವಳಾಗು ||೨೮||

ಪುರುಷರಿಗೆ, ಅವರವರು ಮಾಡುವ ಕರ್ಮಗಳೇ ಆಯುಸ್ಸಿಗೆ ಮೂಲಭೂತವಾದುವು ಗಳು. ಆ ಕರ್ಮಗಳನ್ನು ಮಾಡುವಾಗ, ದೇಶ ಕಾಲ ಕ್ರಿಯೆ ದ್ರವ್ಯ—ಇವುಗಳು ಶುದ್ಧ ವಾಗಿದ್ದರೆ, ಆಯುಸ್ಸು ಅಧಿಕವಾಗುವುದು ; ಇವುಗಳು ಅಶುದ್ಧವಾಗಿದ್ದರೋ, ಆಯುಸ್ಸು ನ್ಯೂನವಾಗುವುದು ||೨೯||

ಹೀಗಿರುವುದರಿಂದ, ಪುರುಷರಿಗೆ ಅವರ ಕರ್ಮಧರ್ಮವು ನ್ಯೂನವಾದರೆ, ಆಯಾ ಯುಗ ದಲ್ಲಿ ಅವರು ಬದುಕಬೇಕಾದುದಕ್ಕಿಂತಲೂ ಅವರ ಆಯುಸ್ಸು ಕಡಮೆಯಾಗುವುದು; ಕರ್ಮ ಶಕ್ತಿಯು ಹೆಚ್ಚಿದರೆ, ಆಯುಸ್ಸೂ ಹೆಚ್ಚುವುದು. ಕರ್ಮಶಕ್ತಿಯು ನ್ಯೂನಾಧಿಕತ್ವವಿಲ್ಲದೆ ಸಮವಾಗಿದ್ದರೋ, ಪುರುಷರ ಆಯುಸ್ಸೂ ಆಯಾ ಯುಗದಲ್ಲಿರಬೇಕಾದಷ್ಟೇ ಇರುವುದು||

ಪುರುಷರ ಆಯುಸ್ಸು ಕ್ಷಯಹೊಂದುವುದಕ್ಕೆ, ವಿಧ್ಯುಕ್ತವಾದ ಕರ್ಮಗಳ ಪರಿತ್ಯಾಗ ದಂತೆಯೇ—ನಿಷದ್ಧಕರ್ಮಗಳ ಆಚರಣೆಗಳೂ ಹೇತುವಾಗುವುವು. ಆ ನಿಷಿದ್ಧಕರ್ಮಗಳಲ್ಲಿ, ಕೆಲವು ಬಾಲ್ಯದಲ್ಲಿಯೇ ಮೃತ್ಯುವನ್ನುಂಟುಮಾಡತಕ್ಕುವಾಗಿರುವುದರಿಂದ, ಅಂತಹ ಕರ್ಮ ಗಳನ್ನು ಮಾಡಿದವನು ಬಾಲ್ಯದಲ್ಲಿಯೇ ಮೃತ್ಯುವಶನಾಗುವನು ; ಹೀಗೆಯೇ, ಯೌವನ ದಲ್ಲಿ ಮೃತ್ಯುವುಂಟುಮಾಡತಕ್ಕುವುಗಳಿಂದ ಯೌವನಸ್ಥನೂ, ವಾರ್ಧಕದಲ್ಲಿ ಮೃತ್ಯುಪ್ರದ ವಾದುವುಗಳಿಂದ ವೃದ್ಧನೂ, ಮೃತ್ಯುವಿಗೆ ಗುರಿಯಾಗುವರು ||೩೧||

ಯಾವನು, ಶಾಸ್ತ್ರಾನುಗುಣವಾಗಿ ಸ್ವಧರ್ಮಾಚರಣೆಯಲ್ಲಿರುವನೋ, ಅವನು ಸಂಪ ದ್ಯುಕ್ತನಾಗಿ ಬಾಳಿ--ಶಾಸ್ತ್ರದಲ್ಲಿ ಹೇಳಿರುವಷ್ಟು ಆಯುಸ್ಸೂ ಉಳ್ಳವನಾಗುವನು ||೩೨||

ಏವಂ ಕರ್ಮಾನುಸಾರೇಣ ಜನ್ತುರನ್ತ್ಯಾಂ ದಶಾಮಿತಃ ।
ಭವನ್ತ್ಯನ್ತಂ ಗತವತೋ ದೃಙ್ಮರ್ಮಚ್ಛೇದವೇದನಾಃ ‖೩೩‖

ಪ್ರಬುದ್ಧಲೀಲೋವಾಚ.

ಮರಣಂ ಮೇ ಸಮಾಸೇನ ಕಥಯೇನ್ದುಸಮಾನನೇ ।
ಕಿಂ ಸುಖಂ ಮರಣಂ ಕಿಂ ವಾ ದುಃಖಂ ಮೃತ್ವಾ ಚ ಕಿಂ ಭವೇತ್ ‖೩೪‖

ಶ್ರೀದೇವ್ಯುವಾಚ.

ತ್ರಿವಿಧಾಃ ಪುರುಷಾಃ ಸನ್ತಿ ದೇಹಸ್ಯಾನ್ತೇ ಮುಮೂರ್ಷವಃ ।
ಮೂರ್ಖೋಥ ಧಾರಣಾಭ್ಯಾಸೀ ಯುಕ್ತಿಮಾನ್ ಪುರುಷಸ್ತಥಾ ‖೩೫‖
ಅಭ್ಯಸ್ಯ ಧಾರಣಾನಿಷ್ಠೋ ದೇಹಂ ತ್ಯಕ್ತ್ವಾ ಯಥಾಸುಖಮ್ ।
ಪ್ರಯಾತಿ ಧಾರಣಾಭ್ಯಾಸೀ ಯುಕ್ತಿಯುಕ್ತಸ್ತಥೈವ ಚ ‖೩೬‖

ಹೀಗೆ ಪ್ರಾಣಿಯು ತನ್ನ ಕರ್ಮಾನುಸಾರವಾಗಿ ಮರಣದಶೆಯನ್ನು ಹೊಂದುವನು. ಆಗ ಮುಮೂರ್ಷಾವಸ್ಥೆಯಲ್ಲಿರತಕ್ಕವನಿಗೆ, ಮರ್ಮಚ್ಛೇದಕವಾದ ವೇದನೆಗಳೆಲ್ಲವೂ ಅನುಭವಕ್ಕೆ ಬರುವುವು ‖೩೩‖

ಪ್ರಬುದ್ಧಲೀಲೆಯು ಪ್ರಶ್ನೆಮಾಡುವಳು:—

ಚಂದ್ರಮುಖಿಯಾದ ವಾಗ್ದೇವಿಯೆ! ನನಗೆ ಸಂಕ್ಷೇಪವಾಗಿ ಮರಣಸ್ವರೂಪವನ್ನು ಹೇಳುವಳಾಗು. ಮರಣವೆಂಬುದು, ಪ್ರಾಣಿಗಳಿಗೆ ಸುಖವಾಗಿರುವುದೆ? ಅಥವಾ ದುಃಖವಾಗಿರುವುದೆ? ಸತ್ತಮೇಲೆ ಏನೇನಾಗುವುದು? ‖೩೪‖

ಶ್ರೀ ವಾಗ್ದೇವಿಯು ಉತ್ತರ ಹೇಳುವಳು:—

ಎಲೌ! ಲೀಲೆ! ಈ ದೇಹವನ್ನು ಬಿಟ್ಟು ಮರಣಹೊಂದತಕ್ಕ ಪುರುಷರನ್ನು, ಮೂರ್ಖ—ಧಾರಣಾಭ್ಯಾಸಿ—ಯುಕ್ತಿಯುಕ್ತ—ಎಂದು ಮೂರುವಿಧವಾಗಿ, ಪುರಾಣಾದಿಗಳಲ್ಲಿ ವಿಭಾಗಿಸಿರುವರು. ಪ್ರಾಣವಾಯುವನ್ನು, ನಾಭಿ ಹೃದಯ ಕಂಠ ಭ್ರೂಮಧ್ಯ ಬ್ರಹ್ಮರಂಧ್ರ—ಇವುಗಳಲ್ಲಿ ಯಥಾಕಾಲವಾಗಿ ನಿಲ್ಲಿಸುವುದಕ್ಕೆ ಧಾರಣೆಯೆಂದು ಹೆಸರು. ಈ ಧಾರಣೆಯನ್ನು ಚೆನ್ನಾಗಿ ಅಭ್ಯಾಸಮಾಡಿರತಕ್ಕವನು ಧಾರಣಾಭ್ಯಾಸಿಯೆನ್ನಿಸುವನು. ಇವನು, ಪ್ರಾಣೋತ್ಕ್ರಮಣಕಾಲದಲ್ಲಿ ಮೇಲೆ ಹೇಳಿರುವಂತೆ ಕ್ರಮವಾಗಿ ಪ್ರಾಣವಾಯುವನ್ನು ತಕ್ಕಷ್ಟುಕಾಲ ನಿಲ್ಲಿಸಿ, ಕೊನೆಗೆ ಬ್ರಹ್ಮರಂಧ್ರದಲ್ಲಿ ಸ್ಥಿರವಾಗಿ ತಡೆದು ಮರಣಹೊಂದುವನು. ಸ್ವೇಚ್ಛೆಯಾಗಿ ಉತ್ಕ್ರಮಣಮಾಡುವುದರಲ್ಲಿಯೂ, ಪರಕಾಯಪ್ರವೇಶದಲ್ಲಿಯೂ, ಪ್ರಾಣನಾಡಿಗಳ ದ್ವಾರಾ ತನಗೆ ಇಷ್ಟವಾದ ಲೋಕಗಳಿಗೆ ಹೋಗುವುದರಲ್ಲಿಯೂ, ಯಾವನು ಸಾಮರ್ಥ್ಯವುಳ್ಳವನಾಗುವನೋ, ಅವನು ಯುಕ್ತಿಯುಕ್ತನೆಂದು ಹೇಳಲ್ಪಡುವನು. ಯುಕ್ತಿಯೆಂದರೆ ಕೌಶಲ್ಯವೆಂದರ್ಥವು. ಈ ಯುಕ್ತಿಯುಕ್ತನು ಸ್ವೇಚ್ಛಾಮರಣ ಹೊಂದುವನು. ಇವೆರಡು ಶಕ್ತಿಯೂ ಇಲ್ಲದವನು ಮೂರ್ಖನೆನ್ನಲ್ಪಡುವನು. ಇವನು ತನ್ನ ಕರ್ಮಾನುಗುಣವಾಗಿ ಯಾತನೆಯನ್ನನುಭವಿಸುತ ಕಾಲಾಧೀನನಾಗಿ ಪ್ರಾಣಬಿಡುವನು‖

ಧಾರಣಾಭ್ಯಾಸಿಯಾದವನು, ಚೆನ್ನಾಗಿ ಅಭ್ಯಾಸಮಾಡಿ ಕೊನೆಗೆ ಧಾರಣಾನಿಷ್ಠನಾಗಿ, ಸುಖವಾಗಿ ದೇಹವನ್ನು ಬಿಟ್ಟುಹೋಗುವನು. ಯುಕ್ತಿಯುಕ್ತನೂ ಅದೇರೀತಿಯಾಗಿ ದೇಹತ್ಯಾಗಮಾಡುವನು ‖೩೬‖

ಧಾರಣಾ ಯಸ್ಯ ನಾಭ್ಯಾಸಂ ಪ್ರಾಪ್ತಾ ನೈವ ಚ ಯುಕ್ತಿರ್ವಾ |
ಮೂರ್ಖಃ ಸ್ವಮೃತಿಕಾಲೇಸೌ ದುಃಖಮೇತ್ಯವಶಾಶಯಃ ||೩೭||
ವಾಸನಾವೇಶವೈವಶ್ಯಂ ಭಾವಯನ್ ವಿಷಯಾಶಯಃ |
ದೀನತಾಂ ಪರಮಾಮೇತಿ ಪರಿಲೂನಮಿವಾಂಬುಜಮ್ ||೩೮||
ಅಶಾಸ್ತ್ರಸಂಸ್ಕೃತಮತಿಃ ಅಸಜ್ಜನಪರಾಯಣಃ |
ಮೃತಾವನುಭವತ್ಯಂತಃ ದಾಹಮಗ್ನಾವಿವ ಚ್ಯುತಃ ||೩೯||
ಯದಾ ಘುರ್ಘುರಕಣ್ಠತ್ವಂ ವೈರೂಪ್ಯಂ ದೃಷ್ಟಿವರ್ಣಜಮ್ |
ಗಚ್ಛತ್ಯೇಷೋವಿವೇಕಾತ್ಮಾ ತದಾ ಭವತಿ ದೀನಧೀಃ ||೪೦||
ಪರಮಾನ್ಧ್ಯಮನಾಲೋಕೋ ದಿವಾಪ್ಯುದಿತತಾರಕಃ |
ಸಾಭ್ರದಿಙ್ಮಣ್ಡಲಾಭೋಗೋ ಘನಮೇಚಕಿತಾಂಬರಃ ||೪೧||
ಮರ್ಮವ್ಯಥಾವಿಚ್ಛುರಿತಃ ಪ್ರಭ್ರಮದ್ದೃಷ್ಟಿಮಣ್ಡಲಃ |
ಆಕಾಶೀಭೂತವಸುಧೋ ವಸುಧಾಭೂತಖಾನ್ತರಃ ||೪೨||

ಯಾವನಿಗಾದರೆ, ಧಾರಣಾಭ್ಯಾಸವೂ ಯುಕ್ತಿಯೂ ಸುತರಾಂ ಇಲ್ಲವೋ, ಆ ಮೂರ್ಖನು ತನ್ನ ಮರಣಕಾಲದಲ್ಲಿ ಕರ್ಮಪರವಶನಾಗಿ ದುಃಖಪಡುವನು ||೩೭||

ಇವನಿಗೆ ಕೇವಲವಾಗಿ ವಿಷಯಾಭಿರತಿಯಿದ್ದುದರಿಂದ, ಕರ್ಮವಾಸನೆಯು ಇವನನ್ನು ಚೆನ್ನಾಗಿ ಆಕ್ರಮಿಸಿಕೊಂಡು ತನ್ನ ಅಧೀನಪಡಿಸಿಕೊಂಡಿರುವುದು. ಮರಣಕಾಲದಲ್ಲಿ, ಇವನು ಅದೆಲ್ಲವನ್ನೂ ಮನಸ್ಸಿನೊಳಗೇ ಪರ್ಯಾಲೋಚಿಸುತ, ಆನೆಯಿಂದ ಕಿತ್ತುಹಾಕಲ್ಪಟ್ಟ ಕಮಲದಂತೆ, ಅತ್ಯಂತವಾಗಿ ದೈನ್ಯವನ್ನು ಹೊಂದುವನು ||೩೮||

ಹೀಗೆ ಯಾವನು, ಶಾಸ್ತ್ರಜ್ಞಾನದಿಂದ ತನ್ನ ಬುದ್ಧಿಯನ್ನು ಕ್ರಮಪಡಿಸಿಕೊಳ್ಳದೆಯೂ, ಸರ್ವದಾ ದುಷ್ಟಸಹವಾಸದಲ್ಲಿ ಆಸಕ್ತನಾಗಿಯೂ ಇರುವನೋ; ಅವನು, ಮರಣಕಾಲವೊದಗಿದಾಗ, ಬೆಂಕಿಯಲ್ಲಿ ಬಿದ್ದವನಂತೆ ಸಂತಾಪಪಡುವನು ||೩೯||

ಪ್ರಥಮತಃ ವಿವೇಕವಿಲ್ಲದೆ ದುರ್ಮಾರ್ಗಗಾಮಿಯಾಗಿದ್ದವನು, ಪ್ರಾಣೋತ್ಕ್ರಮಣಕಾಲದಲ್ಲಿ ಗಂಟಲು ಗುರುಗುಟ್ಟುತ ಕಣ್ಣುಗತ್ತಲೆ ಹಿಡಿದು ನಾನಾವಿಧವಿಕಾರರೂಪಗಳು ತೋರುತಿರುವಾಗ, ಮನಸ್ಸಿನಲ್ಲಿಯೇ ಅತ್ಯಂತವಾಗಿ ಖೇದಪಡುವನು ||೪೦||

ಆ ಸಮಯದಲ್ಲಿ ಇವನು ಅನುಭವಿಸುವ ಅವಸ್ಥೆಯನ್ನು ಹೇಳತೀರದು. ಈ ಮುಮೂರ್ಷುವಿಗೆ, ಹಗಲಿನಲ್ಲಿಯೂ ಸ್ವಲ್ಪವೂ ಬೆಳಕೇ ಇಲ್ಲದೆ—ಗಾಢಾಂಧಕಾರಕವಿದುಕೊಂಡು ನಕ್ಷತ್ರೋದಯವೂ ಆಗಿಬಿಟ್ಟಂತೆ ಕಾಣುವುದು. ದಿಕ್ಕುಗಳಲ್ಲಿಯೂ ಅಂತರಿಕ್ಷದಲ್ಲಿಯೂ ಮೇಘಗಳು ಆವರಿಸಿಕೊಂಡಿರುವಂತೆ ತೋರುವುದು ||೪೧||

ನಾನಾವಿಧವಾಗಿ ಮರ್ಮವ್ಯಥೆಯನ್ನನುಭವಿಸುವನು; ಕಣ್ಣುಗುಡ್ಡೆ ಸುತ್ತಲಾರಂಭಿಸುವುದು; ಭೂಮಿಯು ಆಕಾಶವಾಗಿಯೂ, ಆಕಾಶವು ಭೂಮಿಯಾಗಿಯೂ ಇರುವಂತೆ ತಿಳಿಯುವನು ||೪೨||

ಪರಿವೃತ್ತಕಕುಬ್ಚಕ್ರಃ ಉಹ್ಯಮಾನಇವಾರ್ಣವೇ |
ನೀಯಮಾನಇವಾಕಾಶೇ ಘನನಿದ್ರೋನ್ಮುಖಾಶಯಃ ||೪೩||
ಅನ್ಧಕೂಪಇವಾಪನ್ನಃ ಶಿಲಾನ್ತರಿವ ಯೋಜಿತಃ |
ಸ್ವಯಂ ಜಡೀಭವದ್ವರ್ಣೋ ವಿನಿಕೃತ್ತ ಇವಾಶಯೇ ||೪೪||
ಪತತೀವ ನಭೋಮಾರ್ಗಾತ್ ತೃಣಾವರ್ತ ಇವಾರ್ಪಿತಃ |
ರಥೇ ದ್ರುತಇವಾರೂಢೋ ಹಿಮವದ್ಗಳನೋನ್ಮುಖಃ ||೪೫||
ವ್ಯಾಕುರ್ವನ್ನಿವ ಸಂಸಾರಂ ಬಾನ್ಧವಾನಸ್ಪೃಶನ್ನಿವ |
ಭ್ರಮಿತಃ ಕ್ಷೇಪಣೇನೇವ ವಾತಯನ್ತ್ರ ಇವಾಸ್ಥಿತಃ ||೪೬||
ಭ್ರಮಿತೋ ವಾ ಭ್ರಮಇವ ಕೃಷ್ಟೋ ರಶನಯೇವ ವಾ |
ಭ್ರಮನ್ನಿವ ಜಲಾವರ್ತೇ ಶಸ್ತ್ರಯನ್ತ್ರ ಇವಾರ್ಪಿತಃ ||೪೭||
ಪ್ರೋಹ್ಯಮಾನಸ್ತೃಣಮಿವ ವಹತ್ಪರ್ಜನ್ಯಮಾರುತೇ|
ಆರುಹ್ಯ ವಾರಿಪೂರೇಣ ನಿಪತನ್ನಿವ ಚಾರ್ಣವೇ ||೪೮||

ದಿಙ್ಮಂಡಲವೆಲ್ಲವೂ ಸುತ್ತುತಿರುವಂತೆ ಕಾಣುವುದು; ಸಮುದ್ರದಲ್ಲಿ ತಾನು ತೇಲಿ ಹೋಗುವಂತೆ ನೋಡುವನು; ಯಾರೋಬಂದು ತನ್ನನ್ನು ಆಕಾಶದಲ್ಲಿ ಹೊತ್ತುಕೊಂಡು ಹೋಗುತಿರುವರೆಂದು ಹೇಳುವನು; ತಡೆಯಲಾರದಷ್ಟು ನಿದ್ರೆ ಬರುವಂತೆ ಕಾಣುವುದು ॥

ಹಾಳುಬಾವಿಯಲ್ಲಿ ಬಿದ್ದಿರುವೆನೆಂದೂ, ಕಲ್ಲಿನ ಮಧ್ಯದಲ್ಲಿ ಸೇರಿಸಲ್ಪಟ್ಟಿರುವೆನೆಂದೂ ತಿಳಿಯುವನು; ಮಾತನಾಡುವುದಕ್ಕೆ ಹೊರಟರೆ, ಇವನ ಮುಖದಿಂದ ಅಕ್ಷರಗಳೇ ಹೊರಡಲೊಲ್ಲವು! ಮನಸ್ಸನ್ನು ಯಾರೋ ಬಂದು ಕತ್ತರಿಸಿರುವಂತೆ ಯೋಚಿಸುವನು ॥೪೪॥

ಅಂತರಿಕ್ಷದಿಂದ ತಾನು ಬೀಳುತ್ತಿರುವಂತೆಯೂ, ಸುಂಟರಗಾಳಿಯ ಮಧ್ಯದಲ್ಲಿ ಸಿಕ್ಕಿಕೊಂಡು ಹುಲ್ಲಿನಹಾಗೆ ಹಾರಾಡುತಿರುವಂತೆಯೂ,ವೇಗವಾಗಿ ಓಡುತಿರುವ ರಥದಲ್ಲಿ ತಾನು ಕುಳಿತುಕೊಂಡಿರುವಂತೆಯೂ, ಮಂಜಿನಂತೆ ನೀರುನೀರಾಗಿ ಸುರಿದುಹೋಗುತಿರುವೆನೆಂದೂ ತಿಳಿದುಕೊಳ್ಳುವನು ॥೪೫॥

ತನಗುಂಟಾಗಿರುವ ಸಂಸಾರದುಃಖವನ್ನು ಇತರರಿಗೆ ತಿಳಿಯಪಡಿಸುವನಂತೆಯೂ, ಬಂಧುಬಳಗಗಳನ್ನು ಮುಟ್ಟದಿರುವನಂತೆಯೂ, ಕವಣೆಯಲ್ಲಿ ಯಾರೋ ತನ್ನನ್ನು ಸುತ್ತಿಸುತಿರುವಂತೆಯೂ, ಗಾಳಿಬೀಸುವ ಯಂತ್ರದೊಳಗೆ ಸಿಕ್ಕಿಕೊಂಡಿರುವಂತೆಯೂ ದುಃಖಪಡುವನು ॥೪೬॥

ಸುಮ್ಮನೆ ಸುತ್ತಿಸತಕ್ಕ ಒಂದು ಯಂತ್ರಚಕ್ರವು ತನ್ನನ್ನು ಸುತ್ತಿಸುವುದೆಂದೂ, ಹಗ್ಗದಿಂದ ಕಟ್ಟಿ ತನ್ನನ್ನು ಯಾರೋ ಎಳೆಯುತ್ತಿರುವರೆಂದೂ, ನೀರಿನ ಸುಳಿಯಮಧ್ಯದಲ್ಲಿ ತಾನು ಭ್ರಮಿಸುತ್ತಿರುವೆನೆಂದೂ. ಶಸ್ತ್ರಗಳಿಂದ ಮಾಡಲ್ಪಟ್ಟ ಒಂದು ಯಂತ್ರದಲ್ಲಿ ತನ್ನನ್ನು ಯಾರೋ ಸಿಕ್ಕಿಸಿಬಿಟ್ಟಿರುವರೆಂದೂ ತಿಳಿದು ವ್ಯಥೆಪಡುವನು ॥೪೭॥

ಹುಲ್ಲಿನಂತೆ ಮೇಲಕ್ಕೆ ಹಾರಿಹೋಗುತ್ತಿರುವೆನೆಂದೂ, ಮೇಘರೂಪವಾದ ಗಾಳಿ ಬೀಸುವಾಗ ಅದರಲ್ಲಿ ಸೇರಿಕೊಂಡು—ಮಳೆಸುರಿಯುವಾಗ ಆ ನೀರಿನ ಜತೆಯಲ್ಲಿ ತಾನೂ ಸಮುದ್ರದಲ್ಲಿ ಬೀಳುತ್ತಿರುವೆನೆಂದೂ ವ್ಯಸನಪಡುವನು ॥೪೮॥

ಅನನ್ತಗಗನೇ ಶ್ವಭ್ರೇ ಚಕ್ರಾವರ್ತೇ ಪತನ್ನಿವ ।
ಅಬ್ಧಿರುರ್ವೀವಿಪರ್ಯಾಸದಶಾಮನುಭವನ್ ಸ್ಥಿತಃ ॥೪೯॥
ಪತನ್ನಿವಾನವರತಂ ಪ್ರೋತ್ಪತನ್ನಿವ ಚಾಭಿತಃ ।
ಸೂತ್ಕಾರಾಕರ್ಣನೋದ್ಭ್ರಾನ್ತಪೂರ್ಣಸರ್ವೇನ್ದ್ರಿಯವ್ರಜಃ ॥೫೦॥
ಕ್ರಮಾಚ್ಛ್ಯಾಮಲತಾಂ ಯಾನ್ತಿ ತಸ್ಯ ಸರ್ವಾಕ್ಷಸಂವಿದಃ ।
ಯಥಾಸ್ತಂ ಗಚ್ಛತಿ ರವೌ ಮನ್ದಾಲೋಕತಯಾ ದಿಶಃ ॥೫೧॥
ಪೂರ್ವಾಪರಂ ಸ ಜಾನಾತಿ ಸ್ಮೃತಿಸ್ತನವಮಾಗತಾ ।
ಯಥಾ ಪಾಶ್ಚಾತ್ಯಸನ್ಧ್ಯಾನ್ತೇ ನಷ್ಟಾ ದೃಷ್ಟಿರ್ದಿಗಷ್ಟಕೇ ॥೫೨॥
ಮನಃ ಕಲ್ಪನಸಾಮರ್ಥ್ಯಂ ತ್ಯಜತ್ಯಸ್ಯ ವಿಮೋಹತಃ ।
ಅವಿವೇಕೇನ ತೇನಾಸೌ ಮಹಾಮೋಹೇ ನಿಮಜ್ಜತಿ ॥೫೩॥
ಯದೈವಾಮೋಹಮಾದತ್ತೇ ನಾದತ್ತೇ ಪವನಸ್ತದಾ ।
ಸ ತ್ವಾದತ್ತೇ ಯದಾ ಪ್ರಾಣಾನ್ ಮೋಹಮಾಯಾತ್ಯಲಂ ತದಾ ॥೫೪॥
ಅನ್ಯೋನ್ಯಪುಷ್ಟತಾಂ ಯಾತೈಃ ಮೋಹಸಂವೇದನಭ್ರಮೈಃ ।
ಜನ್ತುಃ ಪಾಷಾಣತಾಮೇತಿ ಸ್ಥಿತಮಿತ್ಯಾದಿಸರ್ಗತಃ ॥೫೫॥

ಸಮುದ್ರವು ಭೂಮಿರೂಪವಾಗಿ ಪರಿಣಮಿಸಿರುವಂತೆಯೂ, ಅನಂತವಾದ ಆಕಾಶವೆಂಬ ಗುಂಡಿಯಲ್ಲಿ ಅದು ಬೀಳುತ್ತಿರುವಂತೆಯೂ ನೋಡುವನು ॥೪೯॥

ಮತ್ತು, ತಾನು ಸರ್ವದಾ ಬೀಳುತಿರುವಂತೆಯೂ, ಸುತ್ತಲೂ ಹಾರುತಿರುವಂತೆಯೂ ತಿಳಿಯುವನು. ಇವನ ಪ್ರಾಣೋತ್ಕ್ರಮಣಕಾಲದಲ್ಲಿ ಶ್ವಾಸಹೊರಡುವುದರಿಂದ, ಅದನ್ನು ಕೇಳಿ ಸಮಸ್ತವಾದ ಇಂದ್ರಿಯಸಮೂಹವೂ ಗಾಬರಿಪಟ್ಟು ಹಾರಿಹೋಗುವುದು॥

ಬಳಿಕ, ಸೂರ್ಯಾಸ್ತವಾದಮೇಲೆ ಬೆಳಕು ಕಡಮೆಯಾಗಿ ದಿಕ್ಕುಗಳು ಮಲಿನವಾಗುವಂತೆ, ಅವನಿಗೆ ಸಮಸ್ತವಾದ ಇಂದ್ರಿಯಜ್ಞಾನವೂ ಕ್ರಮೇಣ ಮಲಿನವಾಗುತ ಬರುವುದು

ಆಗ, ಸಾಯಂಕಾಲವಾದಮೇಲೆ ಕಣ್ಣುಕತ್ತಲೆಗವಿದು ಯಾವದಿಕ್ಕೂ ತೋಚದಿರುವಂತೆ, ಇವನ ಸ್ಮರಣಶಕ್ತಿಯು ಕಡಮೆಯಾಗಿ ಪೂರ್ವಾಪರಜ್ಞಾನವೈಕಲ್ಯವುಂಟಾಗುವುದು।

ಇವನ ಮನಸ್ಸು, ಮೋಹಾತಿಶಯಹೊಂದಿ, ಆಲೋಚನಾಶಕ್ತಿಶೂನ್ಯವಾಗುವುದು; ಆಗ, ಹೀಗೆ ಕೃತ್ಯಾಕೃತ್ಯಜ್ಞಾನರಹಿತನಾಗುವುದರಿಂದ, ಇವನು ದೊಡ್ಡ ಮೂರ್ಛೆಯೆಂಬ ಸಾಗರದಲ್ಲಿ ಮುಣುಗಿಬಿಡುವನು ॥೫೩॥

ಯಾವಾಗ ಇವನು ಮೂರ್ಛೆಹೊಂದುವನೋ, ಆಗ ಪ್ರಾಣವಾಯುವು, ಇವನ ಅವಯವಗಳನ್ನು ಹಿಡಿದುಕೊಳ್ಳಲಾರದೆ ಬಿಟ್ಟುಬಿಡುವುದು. ಯಾವಾಗ ಉಸಿರನ್ನೂ ಬಿಡುವುದಕ್ಕೆ ಅಸಮರ್ಥನಾಗುವನೋ, ಆಗ ಸಂಪೂರ್ಣವಾಗಿ ಮೂರ್ಛೆಹೊಂದಿಬಿಡುವನು॥೫೪॥

ಹೀಗೆ ಮನುಷ್ಯನಿಗೆ, ಮೋಹ ವಿಷಯವಾಸನೆ ಭ್ರಾಂತಿ ಈ ಮೂರೂ ಸೇರಿಕೊಂಡು, ಒಂದರಿಂದೊಂದು ಚೆನ್ನಾಗಿ ವೃದ್ಧಿಹೊಂದಿಬಿಟ್ಟು, ಮನುಷ್ಯನನ್ನು ಶಿಲೆಯಂತೆ ಶುದ್ಧ ಜಡನನ್ನಾಗಿ ಮಾಡಿಬಿಡುವುವು. ಈ ವಿಧವಾದ ಪ್ರಕ್ರಮವು ಆದಿಸೃಷ್ಟಿಯಿಂದಲೂ ನೆಲೆಸಿರುವುದು ॥೫೫॥

ಪ್ರಬುದ್ಧಲೀಲೋವಾಚ.

ವ್ಯಥಾಂ ವಿಮೋಹಂ ಮೂರ್ಛಾಂ ಭ್ರಮಂ ವ್ಯಾಧಿಮಚೇತನಮ್ |
ಕಿಮರ್ಥಮಯಮಾಯಾತಿ ದೇಹೋ ಹ್ಯಷ್ಟಾಙ್ಗವಾನಪಿ ||೫೬||

ಶ್ರೀದೇವ್ಯುವಾಚ.

ಏವಂ ಸಂವಿಹಿತಂ ಕರ್ಮ ಸರ್ಗಾದೌ ಸ್ಪನ್ದಸಂವಿದಾ |
ಯದ್ಯಸ್ಮಿನ್ ಸಮಯೇ ದುಃಖಂ ಕಾಲೇನೈತಾವತೇದೃಶಮ್ ||೫೭||
ಸ್ಯಾನ್ಮ ಇತ್ಯೇವ ಸಂವಿಶ್ಯ ಗುಲ್ಮವತ್ ತತ್ ಸ್ವಭಾವಜಮ್ |
ವೇತ್ತಿ ಚಿತ್ತವಿಜೃಮ್ಭೋತ್ಥಂ ನಾನ್ಯದತ್ರಾಸ್ತಿ ಕಾರಣಮ್ ||೫೮||
ಯದಾ ವ್ಯಥಾವಶಾನ್ನಾಡ್ಯಃ ಸ್ವಸಙ್ಕೋಚವಿಕಾಸನೈಃ |
ಗೃಹ್ಣನ್ತಿ ಮಾರುತೋ ದೇಹೇ ತದೋಜ್ಝತಿ ನಿಜಾಂ ಸ್ಥಿತಿಮ್ ||೫೯||
ಪ್ರವಿಷ್ಟಾನ ವಿನಿರ್ಯಾನ್ತಿ ಗತಾಃ ಸಮ್ಪ್ರವಿಶನ್ತಿ ನೋ |

ಇದನ್ನು ಕೇಳಿ, ಪ್ರಬುದ್ಧಲೀಲೆಯು ಪುನಃ ಪ್ರಶ್ನೆಮಾಡುವಳು:—

ಎಲೌ ! ದೇವಿ ! ಈ ದೇಹಕ್ಕೆ, ಶಿರಸ್ಸು ಹಸ್ತದ್ವಯ ಪಾದದ್ವಯ ಗುಹ್ಯೇಂದ್ರಿಯ ನಾಭಿ ಹೃದಯ—ಎಂದು ಎಂಟಂಗಗಳು ಸಿದ್ಧವಾಗಿದ್ದರೂ, ಇವುಗಳಿಂದ ಯಾವ ದುಃಖವನ್ನು ಬೇಕಾದರೂ ತಪ್ಪಿಸಿಕೊಳ್ಳಬಹುದಾಗಿದ್ದರೂ, ಈ ದೇಹವು ವ್ಯಥೆ ಮೋಹ ಮೂರ್ಛೆ ಭ್ರಾಂತಿ ವ್ಯಾಧಿ ನಾಶ—ಇವುಗಳನ್ನೆಲ್ಲ ಏತಕ್ಕನುಭವಿಸುವುದು ? ॥೫೬॥

ಶ್ರೀ ವಾಗ್ದೇವಿಯು ಸಮಾಧಾನ ಹೇಳುವಳು :—

ಎಲೌ ಲೀಲೆ! ಆ ಪರಮಾತ್ಮನಿಗೆ ಇಚ್ಛಾಶಕ್ತಿ ಜ್ಞಾನಶಕ್ತಿ ಕ್ರಿಯಾಶಕ್ತಿಗಳೆಂದು ಮೂರು ಶಕ್ತಿಗಳಿರುವುವು. ಅದರಲ್ಲಿ ಕ್ರಿಯಾಶಕ್ತಿಪ್ರಧಾನನಾದಾಗ ಆ ಪರಮಾತ್ಮನು ಸೃಷ್ಟ್ಯಾದಿಯಲ್ಲಿಯೇ ಈರೀತಿಯಾಗಿ ಕೆಲವನ್ನು ಮಾಡಿರುವನು. ಏನೆಂದರೆ :—'ಇಷ್ಟು ಕಾಲಕ್ಕೆ—ಇಂತಹ ಸಮಯದಲ್ಲಿ- ನನಗೆ (ಜೀವಾತ್ಮನಿಗೆ) ಇಂತಹ ದುಃಖವುಂಟಾಗುವುದು.'—ಎಂದು ತಿಳಿದುಕೊಳ್ಳುವನು. ಆ ಜ್ಞಾನವು, ಹಾಗೆಯೇ ವೃಕ್ಷಗುಲ್ಮಾದಿಗಳಂತೆ ಸ್ವಭಾವವಾಗಿ ಬೆಳೆಯುವುದು. ಅನಂತರ, ತಾನೇ ಜೀವನಾಗಿ, ತನ್ನ ಸಂಕಲ್ಪಜನ್ಯವಾಗಿದ್ದ ಆ ದುಃಖವನ್ನು ಅನುಭವಿಸಿದಂತೆ ತಿಳಿಯುವನು. ಇದೇ ಕಾರಣವಲ್ಲದೆ, ಈ ದುಃಖಾನುಭವವಿಷಯದಲ್ಲಿ ಮತ್ತಾವ ಕಾರಣವೂ ಇಲ್ಲ ॥೫೭—೫೮॥

ನಿನ್ನ ಪ್ರಶ್ನೆಗೆ ಉತ್ತರವಾಯ್ತಷ್ಟೆ! ಈಗ ಮುಂದಕ್ಕೆ ಆ ವಿಷಯವನ್ನೇ ಕೇಳುವವಳಾಗು. ನಾನು ಹಿಂದೆ ಹೇಳಿದಂತೆ, ಯಾವಾಗ ನಾಡಿಗಳು ಚಲನೆಹೊಂದಿ ಸಂಕೋಚ ವಿಕಾಸಗಳನ್ನು ವಿಷಮಗತಿಯಿಂದ ಪಡೆಯಲುಪಕ್ರಮಿಸುವುವೋ, ಆಗ ದೇಹದಲ್ಲಿರುವ ಸಮಾನನಾಮಕವಾದ ವಾಯುವು ತನ್ನ ಸ್ಥಿತಿಯನ್ನು (ಅನ್ನಾದಿಗಳನ್ನು ಸಮಮಾಡುವಿಕೆ) ಬಿಟ್ಟುಬಿಡುವುದು ॥೫೯॥

ಯಾವಾಗ, ಪ್ರಾಣವಾಯುಗಳು ನಾಡಿಯನ್ನು ಪ್ರವೇಶಿಸಿದಮೇಲೆ ಹೊರಗೆ ಹೊರಡುವುದಕ್ಕೂ—ಹೋದ ಬಳಿಕ ಪುನಃ ಒಳಗೆ ಪ್ರವೇಶ ಮಾಡುವುದಕ್ಕೂ ಸಾಮರ್ಥ್ಯವಿಲ್ಲದುವಾಗುವುವೋ, ಆಗ ನಾಡಿಗಳೆಲ್ಲವೂ ಕುಗ್ಗಿಹೋಗಿ ಇಂದ್ರಿಯಗಳು ಚಲನರಹಿತವಾ

ಯದಾ ವಾತಾವಿನಾಡಿತ್ವಾತ್ ತದಾಽಸ್ಪನ್ದಾತ್ ಸ್ಮೃತಿರ್ಭವೇತ್ ‖೬೦‖
ನ ವಿಶತ್ಯೇವ ವಾತೋ ನ ನಿರ್ಯಾತಿ ಪವನೋ ಯದಾ ‌।
ಶರೀರನಾಡೀವೈಧುರ್ಯಾತ್ ಮೃತಇತ್ಯುಚ್ಯತೇ ತದಾ ‖೬೧‖
ಆಗನ್ತವ್ಯೋ ಮಯಾ ನಾಶಃ ಕಾಲೇನೈತಾವತೇತಿ ಯಾ ।
ಪೂರ್ವಸಂವಿದಿತಾ ಸಂವಿತ್ ಯಾತಿ ತಚ್ಚೋದಿತಾ ಮೃತಿಮ್ ‖೬೨‖
ಈದೃಶೇನ ಮಯೇಹೇತ್ಥಂ ಭಾವ್ಯಮಿತ್ಯಾದಿಸರ್ಗಜಾ।
ಸಂವಿದ್ಬೀಜಕಲಾ ನಾಶಂ ನ ಕದಾಚನ ಗಚ್ಛತಿ ‖೬೩‖
ಸಂವಿದೋ ವೇದನಂ ನಾಮ ಸ್ವಭಾವೋಽವ್ಯತಿರೇಕವಾನ್ ।
ತಸ್ಮಾತ್ ಸ್ವಭಾವಸಂವಿತ್ತೇಃ ನಾನ್ಯೇ ಮರಣಜನ್ಮನೀ ‖೬೪‖
ಕ್ವಚಿದಾವೃತಿಮತ್ ಸೌಮ್ಯಂ ಕ್ವಚಿನ್ನದ್ಯಾಂ ಜಲಂ ಯಥಾ ।
ಕ್ವಚಿತ್ ಸೌಮ್ಯಂ ಕ್ವಚಿಜ್ಜೀವಧರ್ಮೇದಂ ಚೇತನಂ ತಥಾ ‖೬೫‖
ಯಥಾ ಲತಾಯಾಃ ಪರ್ವಾಣಿ ದೀರ್ಘಾಯಾಮಧ್ಯಮಧ್ಯತಃ ।
ತಥಾ ಚೇತನಸತ್ತಾಯಾಃ ಜನ್ಮಾನಿ ಮರಣಾನಿ ಚ ‖೬೬‖

ಗುವುವು. ಬಳಿಕ ಇಂದ್ರಿಯ ವ್ಯಾಪಾರವೆಲ್ಲವೂ ನಿಂತುಹೋಗಿ, ಮನಸ್ಸಿನಲ್ಲಿ ಸ್ಮೃತಿಯೊಂದು ಮಾತ್ರವೇ ಸ್ವಲ್ಪ ಇರುವುದು ‖೬೦‖

ಯಾವಾಗ ಪ್ರಾಣವಾಯುವು ಗಮನಾ[illegible]ಹೋ[illegible]ನ್ನು ರ[illegible]ಸುವುದೋ, ಆಗ ಶರೀರದಲ್ಲಿ ನಾಡಿಗಳೆಲ್ಲವೂ ಅಸ್ತವಾಗಿ ಬಿಡ[illegible]ದರಿಂದ—ಇನಾವ[illegible]ತ್ತುಹೋಯ್ತೆಂದು ಹೇಳಲ್ಪಡುವುದು ‖೬೧‖

ಇದಕ್ಕೂ ನಿಯತಿಯೇ ಕಾರಣವು. ‘ ನಾನು ಇಷ್ಟು[illegible]ಲಕ್ಕೆ ಮರಣಹೊಂದಬೇಕು ’ ಎಂಬ ಪ್ರಾಕ್ತನ ಸಂಕಲ್ಪವುಳ್ಳ ಜ್ಞಾನವಾವುದುಂಟೋ[illegible]. ಅದು ಆ ನಿಯತಿಯ ಪ್ರೇರಣಾನುಸಾರವಾಗಿ ನಾಶಹೊಂದುವುದು; ಇದೇ ಮರಣ[illegible]ನ್ನಿಸುವುದು ‖೬೨‖

ಹೀಗೆ ಹೇಳಿದಮಾತ್ರದಿಂದಲೇ, ನಿಯತಿಗೆ ನಾಶವುಂಟೆಂದೂ—ಆದರಿಂದ ಜಗತ್ತಿನ ವ್ಯವಸ್ಥೆಯೇ ತಪ್ಪಿಹೋಗುವುದೆಂದೂ ಶಂಕಿಸಬಾರದು. ಆದಿಸೃಷ್ಟಿಯಲ್ಲಿ—‘ ನಾನು ಇಲ್ಲಿ ಈವಿಧವಾಗಿ ಇರಬೇಕು ’—ಎಂದು ಉಂಟಾಗಿರುವ ಜ್ಞಾನಬೀಜದ ವಾಸನೆಯುಳ್ಳ ಮಾಯೆ ಮಾತ್ರ ಎಂದಿಗೂ ನಾಶಹೊಂದುವುದಿಲ್ಲ ‖೬೩‖

ಮಾಯಾಶಬಳಿತವಾದ ಚೈತನ್ಯಕ್ಕೆ, ಸಂಕಲ್ಪವೆಂಬುದು, ಎಂದಿಗೂ ತಪ್ಪದಿರುವ ಸ್ವಭಾವವು. ಹೀಗಿರುವುದರಿಂದ, ಮರಣ ಜನನಗಳು ಸ್ವಾಭಾವಿಕವಾದ ಸಂಕಲ್ಪರೂಪಗಳೇ ಹೊರತು, ಬೇರೆಯಾದ ಕಾರ್ಯವಲ್ಲವೆಂದು ತಿಳಿಯುವಳಾಗು ‖೬೪‖

ನದಿಯಲ್ಲಿರುವ ಜಲವು, ಒಂದುಕಡೆ ಸುಳಿಯುಳ್ಳದಾಗಿಯೂ—ಮತ್ತೊಂದುಕಡೆ ಸೌಮ್ಯವಾಗಿಯೂ ಇರುವಂತೆ, ಈ ಚೈತನ್ಯವು, ಕೆಲವುಕಡೆ ಶಾಂತವಾಗಿಯೂ—ಮತ್ತೆ ಕೆಲವುಕಡೆ ರಾಗದ್ವೇಷಾದಿ ಜೀವಧರ್ಮಯುಕ್ತವಾಗಿಯೂ ಇರುವುದು ‖೬೫‖

ದೂರ್ವೆಮುಂತಾದ ದೀರ್ಘವಾದ ಲತೆಗೆ, ಮಧ್ಯಮಧ್ಯದಲ್ಲಿ ಪರ್ವ (ಗಿಣ್ಣು) ಗಳು ಹೇಗೆ ಬೆಳೆದಿರುವುವೋ, ಹಾಗೆಯೇ ಚೈತನ್ಯಸತ್ತೆಗೆ ಜನ್ಮಮರಣಗಳು ಮಧ್ಯಮಧ್ಯದಲ್ಲಿ ಕಾಣಿಸಿಕೊಳ್ಳುವುವು ‖೬೬‖

ನ ಜಾಯತೇ ನ ಮ್ರಿಯತೇ ಚೇತನಃ ಪುರುಷಃ ಕ್ವಚಿತ್ ।
ಸ್ವಪ್ನಸಮ್ಭ್ರಮವದ್ಭ್ರಾನ್ತ್ಂ ಏತತ್ ಪಶ್ಯತಿ ಕೇವಲಮ್ ॥೬೭॥
ಪುರುಷಶ್ಚೇತನಾಮಾತ್ರಂ ಸ ಕದಾ ಕ್ವೇವ ನಶ್ಯತಿ ।
ಚೇತನವ್ಯತಿರಿಕ್ತತ್ವೇ ವದಾನ್ಯತ್ ಕಿಂ ಪುನರ್ಭವೇತ್ ॥೬೮॥
ಕೋದ್ಯಯಾವನ್ಮೃತಂ ಬ್ರೂಹಿ ಚೇತನಂ ತಸ್ಯ ಕಿಂ ಕಥಮ್ ।
ಮ್ರಿಯನ್ತೇ ದೇಹಲಕ್ಷಾಣಿ ಚೇತನಂ ಸ್ಥಿತಮಕ್ಷಯಮ್ ॥೬೯॥
ಅಮರಿಷ್ಯನ್ನ ವೈ ಚಿತ್ತಂ ಏಕಸ್ಮಿನ್ನೇವ ತನ್ಮೃತೇ ।

ಇದೆಲ್ಲವೂ ಕೇವಲ ಮಾಯಾದೃಷ್ಟಿಯಿಂದ ನಡೆಯತಕ್ಕುವು; ತತ್ವದೃಷ್ಟಿಯಿಂದ ವಿಚಾರಮಾಡಿದರೋ,—ಕೇವಲ ಚೈತನ್ಯಮಾತ್ರರೂಪನಾಗಿರುವ ಪುರುಷನು, ಎಲ್ಲಿಯೂ ಹುಟ್ಟುವುದೂ ಇಲ್ಲ; ಸಾಯುವುದೂ ಇಲ್ಲ. ಸ್ವಪ್ನಕಾಲಿಕವಾದ ಸಂಭ್ರಮದಂತೆ, ಕೇವಲ ಭ್ರಾಂತಿಯಿಂದ ಇದೆಲ್ಲವನ್ನೂ ಕಾಣುತಿರುವನು ॥೬೭॥

ಪುರುಷನೆಂಬವನು, ವಸ್ತುತಃ ಕೇವಲ ಚೈತನ್ಯಮಾತ್ರನಾದವನು. ಅವನು, ಯಾವಾಗ ಎಲ್ಲಿ ನಾಶಹೊಂದುವನು? ಹಾಗಲ್ಲದೆ, ಚೈತನ್ಯ ವ್ಯತಿರಕ್ತವಾಗಿ ಬೇರೆಯಾದೊಂದು ಪದಾರ್ಥವು ಪುರುಷ ಶಬ್ದವಾಚ್ಯವಾಗಿರುವುದೆನ್ನುವಪಕ್ಷದಲ್ಲಿ,—ಅದಾವ ಪದಾರ್ಥವು ಪುರುಷನಾಗಬಹುದು?—ನೀನೇ ಹೇಳು. ದೇಹವೇ ಪುರುಷನೆಂದು ಹೇಳುವೆಯಾ? ಅಥವಾ ಪ್ರಾಣವೆಂದು ಹೇಳುವೆಯಾ? ಇಲ್ಲವೇ ಇಂದ್ರಿಯಗಳೆಂದು ಹೇಳುವೆಯಾ? ಅಥವಾ ಮನಸೆಂದು ಹೇಳುವೆಯಾ? ಇಲ್ಲವೆ ಬುದ್ಧಿ—ಅಹಂಕಾರ—ಚಿತ್ತ—ಇವುಗಳಾವುದಾದರೂ ಪುರುಷನಾಗಬಹುದೆ? ಅಥವಾ ಇವುಗಳಿಗೆಲ್ಲ ಅಧಿಷ್ಠಾನಭೂತವಾದ ದೇವತೆಗಳಾಗಲಿ—ಕೊನೆಗೆ ಮಾಯೆಯಾಗಲಿ—ಪುರುಷನೆಂದು ಒಪ್ಪುವೆಯಾ? ಇವಿಷ್ಟುಹೊರತು, ಮತ್ತಾವ ಪದಾರ್ಥವೂ ಇಲ್ಲವಷ್ಟೆ! ಇವುಗಳಲ್ಲಿ ಯಾವುದನ್ನೂ ಪುರುಷನೆಂದು ಒಪ್ಪುವುದಕ್ಕಾಗಲಾರದು. ಪುರುಷನಿಂದ ಮಾಡಲ್ಪಡಬೇಕಾದ ಕಾರ್ಯವೊಂದನ್ನೂ (ಪ್ರಕಾಶ—ಜ್ಞಾನ—ಇತ್ಯಾದಿ) ಜಡವಾದ ಈ ಪದಾರ್ಥಗಳು ನಿರ್ವಹಿಸಲಾರವು. ಅದು ಕಾರಣ, ಕೇವಲ ಚೈತನ್ಯಮಾತ್ರವೇ ಪುರುಷನೆಂದು ನಿರ್ವಿವಾದವಾಗಿ ಒಪ್ಪಬೇಕಾಗಿರುವುದು ॥೬೮॥

ಈ ಚೈತನ್ಯಕ್ಕಾದರೋ, ಮರಣವೆಂಬುದು ಎಂದಿಗೂ ಸಂಭವಿಸುವುದಿಲ್ಲ. ಸೃಷ್ಟ್ಯಾದಿಯಿಂದ—ಮೊದಲುಮಾಡಿಕೊಂಡು ಇದುವರೆಗೆ, ಯಾವನಾದರೂ ಚೈತನ್ಯಕ್ಕೆ ಮರಣವುಂಟಾದುದನ್ನು ನೋಡಿರುವನೆ?—ಹೇಳು. ಮತ್ತು, ಮರಣವೆಂಬುದು, ಚೈತನ್ಯಕ್ಕೆ ನಾಶವೆ?—ಅಥವಾ ದೇಹಾಂತರಪ್ರಾಪ್ತಿಯೆ? ನಾಶವೆಂದು ಹೇಳಿದರೆ,—ಅದನ್ನು (ನಾಶವನ್ನು) ಕಂಡಿರುವರಾರು? ದೇಹಾಂತರಪ್ರಾಪ್ತಿಯೆನ್ನುವಪಕ್ಷದಲ್ಲಿ,—ದೇಹಗಳು ಅಸಂಖ್ಯಾಕವಾಗಿ ಮರಣಹೊಂದುವುವೇ ಹೊರತು, ಚೈತನ್ಯವು ಕ್ಷಯಹೊಂದುವುದಿಲ್ಲ; ಇದು, ಕ್ಷಯರಹಿತವಾಗಿ ಇದ್ದೇ ಇರುವುದು ॥೬೯॥

ಇದಿರಲಿ; ಚೈತನ್ಯಕ್ಕೇ ಮರಣವೆಂದು ಹೇಳುವಪಕ್ಷದಲ್ಲಿ, ಇನ್ನೊಂದು ದೊಡ್ಡ ಅನುಪಪತ್ತಿ ಬರುವುದು. 'ಏಕೋ ದೇವಃ ಸರ್ವಭೂತೇಷು ಗೂಢಃ' ಇತ್ಯಾದಿ ಶ್ರುತ್ಯನುಸಾರವಾಗಿ, ಚೈತನ್ಯಪದಾರ್ಥವೊಂದೇ ಇರತಕ್ಕುದೆಂಬುದು ಸಿದ್ಧವಷ್ಟೆ! ಚೈತನ್ಯಕ್ಕೇ

ಅಭವಿಷ್ಯತ್ ಸರ್ವಭಾವವ್ಯತಿರೇಕವ್ಯತಾವಿಹ ‖೨೦‖
ವಾಸನಾಮಾತ್ರವೈಚಿತ್ರ್ಯಂ ಯಜ್ಜೀವೋಽನುಭವೇತ್ ಸ್ವಯಮ್ ।
ತಸ್ಯೈವ ಜೀವಮರಣೇ ನಾಮನೀ ಪರಿಕಲ್ಪಿತೇ ‖೨೧‖
ಏವಂ ನ ಕಶ್ಚಿನ್ಮ್ರಿಯತೇ ಜಾಯತೇ ನ ಚ ಕಶ್ಚನ ।
ವಾಸನಾವರ್ತಗರ್ತೇಷು ಜೀವೋ ಲುಠತಿ ಕೇವಲಮ್ ‖೨೨‖
ಅತ್ಯನ್ತಾಸಮ್ಭವಾದೇವ ದೃಶ್ಯಸ್ಯಾಸೌ ಚ ವಾಸನಾ ।
ನಾಸ್ತ್ಯೇವೇತಿ ವಿಚಾರೇಣ ದೃಢಜ್ಞಾತೇನ ನಶ್ಯತಿ ‖೨೩‖
ಅನುದಿತಮುದಿತಂ ಜಗತ್ಪ್ರಬನ್ಧಂ ಭವಭಯತೋಽಭ್ಯಸನೈರ್ವಿಲೋಕ್ಯ ಸಮ್ಯಕ್।
ಅಲಮನುದಿತವಾಸನೋ ಹಿ ಜೀವೋ ಭವತಿ ವಿಮುಕ್ತ ಇತೀಹ ಸತ್ಯವಸ್ತು‖೨೪‖

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಮರಣವಿಚಾರೋ
ನಾಮ ಚತುಷ್ಪಞ್ಚಾಶಃ ಸರ್ಗಃ.

ಮರಣವು ನಿಜವಾಗಿದ್ದರೆ, ಆಗ ಒಂದು ಚೈತನ್ಯಕ್ಕೆ ಮರಣವಾದ ಕಾಲದಲ್ಲಿ-ಚೈತನ್ಯಾಧೀನವಾದ ಸಮಸ್ತಚಿತ್ತಕ್ಕೂ ನಾಶವುಂಟಾಗಬೇಕಾಗಿತ್ತಲ್ಲವೆ! ಮತ್ತು, ಒಬ್ಬನಿಗೆ ಮರಣವುಂಟಾದಾಗ, ಸಮಸ್ತ ಪದಾರ್ಥಗಳಿಗೂ ಮರಣವುಂಟಾಗಬೇಕಾಗಿತ್ತಲ್ಲವೆ! ಹೀಗೆಲ್ಲ ಅನುಪಪತ್ತಿಯಿರುವುದರಿಂದ, ಚೇತನಕ್ಕೆ ಮರಣವಾಗುವುದೆಂದು ಹೇಳಕೂಡದು ‖ ೨೦‖

'ಹಾಗಾದರೆ, ನಮ್ಮ ಅನುಭವಕ್ಕೆ ಬರುತಿರುವ ಜನನಮರಣಗಳೆಂಬುವು ಯಾವುವು?' ಎಂದು ಕೇಳುವೆಯೋ?—ಜೀವನು, ವಿಚಿತ್ರವಾದ ತನ್ನ ವಾಸನಾಮಾತ್ರವನ್ನು ಅನುಭವಿಸುವನೆಂಬುದು ಯಾವುದಿರುವುದೋ; ಅದಕ್ಕೇ ಜನನಮರಣಗಳೆಂದು ಹೆಸರು ಕಲ್ಪಿಸಲ್ಪಟ್ಟಿರುವುದು ‖೨೧‖

ಅಂತು, ಯಾರೂ ಸಾಯುವುದೂ ಇಲ್ಲ; ಯಾರೂ ಹುಟ್ಟುವುದೂ ಇಲ್ಲ. ಈ ಜೀವನು ವಾಸನೆಯೆಂಬ ದೊಡ್ಡ ಸುಳಿಗಳಲ್ಲಿ ಸಿಕ್ಕಿಕೊಂಡು ಸುಮ್ಮನೆ ಹೊರಳುವನು. ಇದಿಷ್ಟೇ ಇರುವ ತತ್ವವು ‖ ೨೨‖

ಈ ವಾಸನೆಯು ಕ್ಷಯಹೊಂದುವುದು ಹೇಗೆಂದರೆ:—'ದೃಶ್ಯವು ಅತ್ಯಂತಾಸಂಭವವಾದುದು; ಅದುಕಾರಣ, ಇದನ್ನು ಆಶ್ರಯಿಸಿ ಹುಟ್ಟಿರುವ ವಾಸನೆಯೂ ಸುತರಾಂ ಇಲ್ಲವೇ ಇಲ್ಲ'—ಎಂದು ವಿಚಾರ ಮಾಡುತ, ಅದಿಲ್ಲವೆಂಬ ಜ್ಞಾನವನ್ನು ದೃಢಪಡಿಸಿಕೊಂಡರೆ, ವಾಸನೆಯು ತಾನೇ ನಾಶಹೊಂದುವುದು ‖೨೩‖

ಅದುಕಾರಣ, ಸಂಸಾರದುಃಖಕ್ಕೆ ಹೆದರಿ ವೈರಾಗ್ಯಾದಿ ಸಾಧನ ಸಂಪನ್ನನಾದ ಜೀವನು, ಗುರುಮುಖದಿಂದ ಶ್ರವಣಮಾಡಿ, ಈ ಜಗತ್ತು ವಾಸ್ತವ್ಯವಾಗಿ ಇಲ್ಲದಿದ್ದರೂ ಇರುವಂತೆ ಕಾಣುತಿದೆಯೆಂದು ದೃಢತರಾಭ್ಯಾಸದಿಂದ ಚೆನ್ನಾಗಿ ತಿಳಿದುಕೊಂಡು, ಬಳಿಕ ಸುತರಾಂ ವಾಸನಾಶೂನ್ಯನಾಗಿ ಮುಕ್ತನಾಗುವನು. ಇದೇ ವಾಸ್ತವ್ಯವಾದ ವಿಷಯವು ‖೨೪‖

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಮರಣಸ್ವರೂಪನಿರೂಪಣೆ
ಯೆಂಬ ಅಯ್ವತ್ತುನಾಲ್ಕನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಪಞ್ಚಪಞ್ಚಾಶಃ ಸರ್ಗಃ.

ಪ್ರಬುದ್ಧಲೀಲೋವಾಚ.

ಯಥೈವ ಜನ್ತುರ್ಮ್ರಿಯತೇ ಜಾಯತೇ ಚ ಯಥಾ ಪುನಃ ।
ತನ್ಮೇ ಕಥಯ ದೇವೇಶಿ ಪುನರ್ಬೋಧವಿವೃದ್ಧಯೇ ॥೧॥

ಶ್ರೀದೇವ್ಯುವಾಚ.

ನಾಡೀಪ್ರವಾಹೇ ವಿಧುರೇ ಯದಾ ವಾತವಿಸಂಸ್ಥಿತಿಮ್ ।
ಜನ್ತುಃ ಪ್ರಾಪ್ನೋತಿ ಹಿ ತದಾ ಶಾಮ್ಯತೀವಾಸ್ಯ ಚೇತನಾ ॥೨॥
ಶುದ್ಧಂ ಹಿ ಚೇತನಂ ನಿತ್ಯಂ ನೋದೇತಿ ನ ಚ ಶಾಮ್ಯತಿ ।
ಸ್ಥಾವರೇ ಜಙ್ಗಮೇ ವ್ಯೋಮ್ನಿ ಶೈಲೇಗ್ನೌ ಪವನೇ ಸ್ಥಿತಮ್ ॥೩॥
ಕೇವಲಂ ವಾತಸಂರೋಧಾತ್ ಯದಾ ಸ್ಪನ್ದಃ ಪ್ರಶಾಮ್ಯತಿ ।
ಮೃತಇತ್ಯುಚ್ಯತೇ ದೇಹಃ ತದಾಸೌ ಜಡನಾಮಕಃ ॥೪॥

ಉತ್ಪತ್ತಿಪ್ರಕರಣದಲ್ಲಿ ಐವತ್ತೈದನೆಯ ಸರ್ಗವು.

ಇಹ ಜೀವಸ್ಯ ಸಂಸಾರಗತಿವೈಚಿತ್ರ್ಯಮುಚ್ಯತೇ ।
ಆದಿಸರ್ಗಾತ್ ತಥೇಶಸ್ಯ ತತ್ಕರ್ಮಾನುಗುಣಾ ಸ್ಥಿತಿಃ ॥

ಜೀವನಿಗೆ ನಾನಾವಿಧವಾದ ಸಂಸಾರಗತಿಯೂ, ಆದಿಸೃಷ್ಟಿಮೊದಲುಗೊಂಡು ಈಶ್ವರನು ಜೀವನ ಕರ್ಮಾನುಗುಣವಾಗಿರುವಿಕೆಯೂ ಕೂಡ, ಈ ಸರ್ಗದಲ್ಲಿ ಹೇಳಲ್ಪಡುವುವು.

ಪುನಃ ಪ್ರಬುದ್ಧಲೀಲೆಯು ವಾಗ್ದೇವಿಯನ್ನು ಕುರಿತು ಹೇಳುವಳು:—

ಹೇ ದೇವೇಶ್ವರಿ! ಜೀವನು ಮರಣಹೊಂದುವ ಪ್ರಕ್ರಮವನ್ನೂ, ಪುನಃ ಜನಿಸುವ ಪ್ರಕ್ರಮವನ್ನೂ, ನೀನು ಹಿಂದೆಹೇಳಿದ್ದರೂ—ನನಗೆ ಜ್ಞಾನವೃದ್ಧಿಯಾಗುವುದಕ್ಕೋಸ್ಕರ ಈಗ ಇನ್ನೊಂದುಸಲ ಹೇಳುವವಳಾಗು ॥೧॥

ಇದನ್ನು ಕೇಳಿ ಸರಸ್ವತಿಯು ಹೇಳುವಳು:—

ಎಲೌ ಲೀಲೆ! ಶರೀರದ ನಾಡೀಪ್ರವಾಹವು ಸಡಿಲವಾಗುತಬರಲಾಗಿ, ಜೀವನು ಯಾವಾಗ ಪ್ರಾಣವಾಯುಸಂಚಾರಶಾಂತಿಯನ್ನು ಹೊಂದುವನೋ, ಆಗ ಇವನ ಜ್ಞಾನಶಕ್ತಿಯೂ ಶಾಂತಿಹೊಂದಿದಂತೆ ತೋರುವುದು ॥೨॥

ವಾಸ್ತವಿಕವಾಗಿಯಾದರೋ,—ನಿತ್ಯಶುದ್ಧವಾದ ಈಚೇತನವು, ಉದಯಿಸುವುದೂ ಇಲ್ಲ; ಶಾಂತಿಹೊಂದುವುದೂ ಇಲ್ಲ. ಇದು, ಸ್ಥಾವರ ಜಂಗಮ ಆಕಾಶ ಪರ್ವತ ಅಗ್ನಿ ವಾಯು—ಮುಂತಾದ ಯಾವ ಕಡೆಯಲ್ಲಿದ್ದರೂ, ಏಕವಿಧವಾಗಿ ನಿರ್ವಿಕಾರವಾಗಿರುವುದು॥

ಯಾವಾಗ ವಾಯುನಿರೋಧದಿಂದ ದೇಹದ ಚಲನೆಯೊಂದು ಮಾತ್ರ ಶಾಂತವಾಗುವುದೋ, ಆಗ ಈ ಜಡದೇಹವು ಮೃತವಾಯಿತೆಂದು ಹೇಳಲ್ಪಡುವುದು ॥೪॥

ತಸ್ಮಿನ್ ದೇಹೇ ಶವೀಭೂತೇ ವಾತೇ ಚಾನಿಲತಾಂ ಗತೇ ।
ಚೇತನಂ ವಾಸನಾಮುಕ್ತಂ ಸ್ವಾತ್ಮತತ್ತ್ವೇವತಿಷ್ಠತೇ ॥೫॥
ಜೀವಇತ್ಯುಚ್ಯತೇ ತಸ್ಯ ನಾಮಾಣೋರ್ವಾಸನಾವತಃ ।
ತತ್ರೈವಾಸ್ತೇ ಸ ಚ ಶವಾಗಾರೇ ಗಗನಕೇ ತಥಾ ॥೬॥
ತತೋಽಸೌ ಪ್ರೇತಶಬ್ದೇನ ಪ್ರೋಚ್ಯತೇ ವ್ಯವಹಾರಿಭಿಃ ।
ಚೇತನಂ ವಾಸನಾಮಿಶ್ರಂ ಆಮೋದಾನಿಲವತ್ ಸ್ಥಿತಂ ॥೭॥
ಇದಂ ದೃಶ್ಯಂ ಪರಿತ್ಯಜ್ಯ ಯದಾಸ್ತೇ ದರ್ಶನಾನ್ತರೇ ।
ಸ ಸ್ವಪ್ನಇವ ಸಙ್ಕಲ್ಪಇವ ನಾನಾಕೃತಿಸ್ತದಾ ॥೮॥
ತಸ್ಮಿನ್ನೇವ ಪ್ರದೇಶೇಽನ್ತಃ ಪೂರ್ವವತ್ ಸ್ಮೃತಿಮಾನ್ ಭವೇತ್ ।
ತದೈವ ಮೃತಿಮೂರ್ಛಾನ್ತೇ ಪಶ್ಯತ್ಯನ್ಯಶರೀರಕಮ್ ॥೯॥
ಆತ್ಮನ್ಯಸ್ತಿ ಘಟಾ ಪುಷ್ಟಂ ಅನ್ಯಸ್ಯ ವ್ಯೋಮ ಕೇವಲಮ್ ।
ಆಕಾಶಭೂತಳೇ ಸಾಕಂ ಸಾಕಾಶಶಶಿವಾಸರಮ್ ॥೧೦॥

ಹೀಗೆ ಆ ದೇಹವು ಶವಭೂತವಾಗಲು, ಪ್ರಾಣವಾಯುವೂ ಮಹಾವಾಯುವಿನೊಡನೆ ಸೇರಿಹೋಗಿಬಿಟ್ಟಮೇಲೆ, ಚೇತನವು ಸಮಸ್ತವಾಸನೆಯನ್ನೂ ಪರಿತ್ಯಜಿಸಿ, ಸ್ವಸ್ವರೂಪದಲ್ಲಿ ಸ್ಥಿತಿಯನ್ನು ಪಡೆಯುವುದು ॥೫॥

ಈ ಚೇತನವೇ ವಾಸನಾಯುಕ್ತವಾಗಿದ್ದಾಗ, ಅದಕ್ಕೇ ಜೀವನೆಂದು ಹೆಸರು ಹೇಳಲ್ಪಡುವುದು. ಈರೀತಿಯಾದ ಆ ಜೀವನು, ಆ ನಿನ್ನ ಪತಿಯಾದ ಪದ್ಮರಾಜನ ಶವವಿರುವ ಮನೆಯಲ್ಲಿಯೇ, ಆಕಾಶದಲ್ಲಿರುವಂತೆ ಇರುವನು ॥೬॥

ಹೀಗೆ ದೇಹಕ್ಕೆ ಮರಣವುಂಟಾದುದರಿಂದಲೇ, ಈ ಜೀವನಿಗೂ ಮರಣವುಂಟಾಯಿತೆಂದು ಪ್ರಪಂಚದಲ್ಲಿ ವ್ಯವಹಾರವನ್ನು ಕಲ್ಪಿಸಿರುವರು. ಆದರೆ, ಪುಷ್ಪದಲ್ಲಿರುವ ವಾಸನೆಯು ಗಾಳಿಯಲ್ಲಿ ಅಂಟಿಕೊಂಡಿರುವಂತೆ, ಸರ್ವಸಂಗಶೂನ್ಯವಾದ ಚೇತನದಲ್ಲಿ ವಾಸನೆಯು ಅಂಟಿಕೊಂಡಿರುವಂತೆ ಕಾಣಿಸುವುದು ॥೭॥

ಯಾವಾಗ ಆ ಜೀವನು, ಈ ಪ್ರಾಕ್ತನದೇಹವನ್ನು ಬಿಟ್ಟು ಮತ್ತೊಂದು ದೇಹವನ್ನು ನೋಡುತ್ತಿರುವನೋ, ಆ ಸಮಯದಲ್ಲಿ ಸ್ವಪ್ನಸಂಕಲ್ಪಗಳಂತೆ ನಾನಾವಿಧವಾದ ಆಕಾರವುಳ್ಳವನಾಗುವನು ॥೮॥

ಅಷ್ಟರೊಳಗಾಗಿ ಈ ಸ್ಥಳದಲ್ಲಿಯೇ, ಅವನಿಗೆ ಪೂರ್ವಜನ್ಮದ ಸ್ಮರಣೆಯೆಲ್ಲವೂ ಉಂಟಾಗುವುದು. ಆಗಲೇ ಮರಣವೆಂಬ ಮೂರ್ಛೆಯನ್ನನುಭವಿಸಿದ ಉತ್ತರಕ್ಷಣವೇ, ಬೇರೆಯಾದ ಶರೀರವನ್ನು ನೋಡುವನು (ಹೊಂದಲಿಚ್ಛಿಸುವನು) ॥೯॥

ಯದ್ಯಪಿ ಮರಣವಾಗತಕ್ಕ ಪ್ರದೇಶವು ಅತ್ಯಲ್ಪವಾಗಿರುವುದು; ಅಲ್ಲಿ ಕಥಂಚಿತ್ ದೇಹಾಂತರಘಟನೆಯಾಗಬಹುದೆಂದು ಒಪ್ಪಿದರೂ, ಪರಲೋಕಗಮನಾದಿಗಳು ಅಲ್ಲಿ ಆಗುವುವೆಂಬುದು ಸ್ವಲ್ಪ ವಿಚಿತ್ರವಾಗಿ ಕಾಣಬಹುದು. ಆದರೆ, ಅಲ್ಲಿ ಕೇವಲವಾಗಿ ಆಕಾಶಮಾತ್ರವೇ ಇರಲಿ,—ಆಕಾಶಭೂಮಿಗಳೆರಡೂ ಇರಲಿ,—ಅಥವಾ ಆಕಾಶ ಚಂದ್ರ ದಿವಸಗಳೆಲ್ಲವೂ ಇರಲಿ. ಅದು ಹೇಗಿದ್ದರೂ, ಆತ್ಮನಲ್ಲಿ ಇತರವಾದ ಪದಾರ್ಥಗಳ ಸಮೂಹವು ನೆಲೆಸಿಯೇ ಇರುವುದು ॥೧೦॥

ಭವನ್ತಿ ಷಡ್ವಿಧಾಃ ಪ್ರೇತಾಃ ತೇಷಾಂ ಭೇದಮಿಮಂ ಶೃಣು ।
ಸಾಮಾನ್ಯಪಾಪಿನೋ ಮಧ್ಯಪಾಪಿನಃ ಸ್ಥೂಲಪಾಪಿನಃ ॥೧೧॥
ಸಾಮಾನ್ಯಧರ್ಮಾ ಮಧ್ಯಮಧರ್ಮಾ ಚೋತ್ತಮಧರ್ಮವಾನ್ ।
ಏತೇಷಾಂ ಕಸ್ಯಚಿದ್ಭೇದೋ ದ್ವೌ ತ್ರಯೋಽಪ್ಯಥ ಕಸ್ಯಚಿತ್ ॥೧೨॥
ಕಶ್ಚಿನ್ಮಹಾಪಾತಕವಾನ್ ವತ್ಸರಂ ಸ್ಮೃತಿಮೂರ್ಛನಮ್ ।
ವಿಮೂಢೋಽನುಭವತ್ಯನ್ತಃ ಪಾಷಾಣಹೃದಯೋಪಮಃ ॥೧೩॥
ತತಃ ಕಾಲೇನ ಸಮ್ಬುದ್ಧೋ ವಾಸನಾಜಠರೋದಿತಮ್ ।
ಅನುಭೂಯ ಚಿರಂ ಕಾಲಂ ನಾರಕಂ ದುಃಖಮಕ್ಷಯಮ್ ॥೧೪॥
ಭುಕ್ತ್ವಾ ಯೋನಿಶತಾನ್ಯುಚ್ಚೈಃ ದುಃಖಾದ್ದುಃಖಾನ್ತರಂ ಗತಃ ।
ಕದಾಚಿಚ್ಛಮಮಾಯಾತಿ ಸಂಸಾರಸ್ವಪ್ನಸಮ್ಭ್ರಮೇ ॥೧೫॥
ಅಥವಾ ಮೃತಿಮೋಹಾನ್ತೇ ಜಡದುಃಖಶತಾಕುಲಾಮ್ ।
ಕ್ಷಣಾದ್ವೃಕ್ಷಾದಿತಾಮೇವ ಹೃತ್ಸ್ಥಾಮನುಭವನ್ತಿ ತೇ ॥೧೬॥

ಇದಿರಲಿ; ಈಗ ಸತ್ತವರಿಗಾಗುವ ಗತಿಗಳನ್ನು ಕೇಳು. ಪ್ರೇತ (ಮೃತ) ರಾದವರಲ್ಲಿ ಆರು ಭೇದಗಳಿರುವುವು. ಸಾಮಾನ್ಯಪಾಪಿಗಳೆಂದೂ, ಮಧ್ಯಪಾಪಿಗಳೆಂದೂ, ಅಧಿಕಪಾಪಿಗಳೆಂದೂ, ಪಾಪಿಷ್ಠರಲ್ಲಿ ಮೂರುಭೇದವುಂಟು. ಹಾಗೆಯೇ, ಸಾಮಾನ್ಯಧರ್ಮರೆಂದೂ, ಮಧ್ಯಮಧರ್ಮರೆಂದೂ, ಉತ್ತಮಧರ್ಮರೆಂದೂ, ಧರ್ಮಿಷ್ಠರಲ್ಲಿಯೂ ಮೂರುಭೇದವುಂಟು. ಇದರಲ್ಲಿ ಒಬ್ಬನಿಗೆ ಒಂದೇ ಭೇದವಾಗಬಹುದು; ಇನ್ನೊಬ್ಬನಿಗೆ ಎರಡಾಗಬಹುದು; ಮತ್ತೊಬ್ಬನಿಗೆ ಮೂರೂ ಆಗಬಹುದು. ಹೇಗೆಂದರೆ:—ಒಬ್ಬನು ಒಂದುಜನ್ಮದಲ್ಲಿ ಸಾಮಾನ್ಯಪಾಪಿಯಾಗಿದ್ದು, ಮುಂದಣಜನ್ಮದಲ್ಲಿ ಮಧ್ಯಮಪಾಪಿಯಾಗಿ, ಮತ್ತೊಂದು ಜನ್ಮದಲ್ಲಿ ಮಹಾಪಾಪಿಯಾಗಬಹುದು. ಪುಣ್ಯವಂತನೂ ಹೀಗೆಯೇ, ಒಂದು ಜನ್ಮದಲ್ಲಿ ಸಾಮಾನ್ಯನಾಗಿಯೂ, ಇನ್ನೊಂದು ಜನ್ಮದಲ್ಲಿ ಮಧ್ಯಮನಾಗಿಯೂ, ಬೇರೊಂದು ಜನ್ಮದಲ್ಲಿ ಉತ್ತಮನಾಗಿಯೂ ಆಗಬಹುದು. ಅಥವಾ ಇದು ವ್ಯತ್ಯಾಸವಾದರೂ ಆಗಬಹುದು ॥೧೧—೧೨॥

ಅದರಲ್ಲಿ ಒಬ್ಬನು ಮಹಾಪಾಪಿಯಾಗಿದ್ದರೆ, ಆವನು ವರ್ಷಾಂತರಕಾಲ ಶಿಲಾಹೃದಯದಂತೆ ಮೂಢನಾಗಿದ್ದು, ಒಳಗೆಯೇ ಸ್ಮೃತಿಯನ್ನನುಭವಿಸುತಿರುವನು ॥೧೩॥

ಬಳಿಕ, ನಿಯಮಿತಕಾಲವು ಕಳೆದನಂತರದಲ್ಲಿ ಪ್ರಬುದ್ಧನಾಗಿ, ತನ್ನ ವಾಸನಾಜನ್ಯವಾದ ಅಕ್ಷಯನರಕದುಃಖವನ್ನು ಬಹುಕಾಲ ಅನುಭವಿಸಿ, ನಾನಾವಿಧವಾದ ನೂರಾರುಜನ್ಮಗಳನ್ನು ಹೊಂದಿ, ಪ್ರಬಲವಾದ ಒಂದು ದುಃಖದಿಂದ ಮತ್ತೊಂದು ದುಃಖವನ್ನು ಪಡೆಯುತ, ಯಾವಾಗಲೋ ಒಂದು ಸಮಯದಲ್ಲಿ ಸಂಸಾರವೆಂಬ ಸ್ವಪ್ನಸಂಭ್ರಮದೊಳಗೆ ಶಾಂತಿಪಡೆಯುವನು ॥೧೪—೧೫॥

ಅಥವಾ, ಆ ಮಹಾಪಾಪಿಗಳು, ಮರಣರೂಪವಾದ ಮೂರ್ಛೆಯನ್ನನುಭವಿಸಿ, ತಮ್ಮ ಹೃದಯಸಂಕಲ್ಪಿತವಾಗಿದ್ದ—ಜಡವಾದ—ದುಃಖಶತವ್ಯಾಕುಲವಾದ—ವೃಕ್ಷಾದಿಜನ್ಮವನ್ನು ಹೊಂದುವರು ॥೧೬॥

ಸ್ವವಾಸನಾನುರೂಪಾಣಿ ದುಃಖಾನಿ ನರಕೇ ಪುನಃ ।
ಅನುಭೂಯಾಥ ಯೋನೀಷು ಜಾಯನ್ತೇ ಭೂತಲೇ ಚಿರಮ್ ॥೧೭॥
ಅಥ ಮಧ್ಯಮಪಾಪೋ ಯೋ ಮೃತಿಮೋಹಾದನನ್ತರಮ್ ।
ಸ ಶಿಲಾಜಠರಂ ಜಾಡ್ಯಂ ಕಂಚಿತ್ ಕಾಲಂ ಪ್ರಪಶ್ಯತಿ ॥೧೮॥
ತತಃ ಪ್ರಬುದ್ಧಃ ಕಾಲೇನ ಕೇನಚಿದ್ವಾ ತದೈವ ವಾ ।
ತಿರ್ಯಗಾದಿಕ್ರಮೈರ್ಭುಕ್ತ್ವಾ ಯೋನೀಃ ಸಂಸಾರಮೇಷ್ಯತಿ ॥೧೯॥
ಮೃತಮೇವಾನುಭವತಿ ಕಶ್ಚಿತ್ ಸಾಮಾನ್ಯಪಾತಕೀ ।
ಸ್ವವಾಸನಾನುಸಾರೇಣ ದೇಹಂ ಸಮ್ಪನ್ನಮಕ್ಷತಮ್ ॥೨೦॥
ಸ ಸ್ವಪ್ನಇವ ಸಙ್ಕಲ್ಪಇವ ಚೇತತಿ ತಾದೃಶಮ್ ।
ತಸ್ಮಿನ್ನೇವ ಕ್ಷಣೇ ತಸ್ಯ ಸ್ಮೃತಿರಿತ್ಥಮುದೇತಿ ಚ ॥೨೧॥
ಯೇ ತೂತ್ತಮಹಾಪುಣ್ಯಾಃ ಮೃತಿಮೋಹಾದನನ್ತರಮ್ ।
ಸ್ವರ್ಗವಿದ್ಯಾಧರಪುರಂ ಸ್ಮೃತ್ಯಾ ಸ್ವನುಭವನ್ತಿ ತೇ ॥೨೨॥
ತತೋಽನ್ಯಕರ್ಮಸದೃಶಂ ಭುಕ್ತ್ವಾನ್ಯತ್ರ ಫಲಂ ನಿಜಮ್ ।
ಜಾಯನ್ತೇ ಮಾನುಷೇ ಲೋಕೇ ಸಶ್ರೀಕೇ ಸಜ್ಜನಾಸ್ಪದೇ ॥೨೩॥

ಮತ್ತೆ ನರಕದಲ್ಲಿ ತಮ್ಮ ವಾಸನಾನುಗುಣವಾದ ದುಃಖಗಳನ್ನು ಅನುಭವಿಸಿ, ಬಳಿಕ ಭೂಮಿಯಲ್ಲಿ ಬಹುಕಾಲ ನಾನಾವಿಧ ಯೋನಿಗಳಲ್ಲಿ ಜನ್ಮವೆತ್ತುವರು ॥೧೭॥

ಇದು ಉತ್ತಮಪಾಪಿಗಳ ಗತಿಯು. ಇನ್ನು ಮಧ್ಯಮಪಾಪಿಯಾದವನಾರುಂಟೋ, ಅವನು ಮರಣಾನಂತರ ಸ್ವಲ್ಪಕಾಲ ಶಿಲಾಸಮವಾದ ಜಡಾವಸ್ಥೆಯಲ್ಲಿರುವನು ॥೧೮॥

ಬಳಿಕ, ಸ್ವಲ್ಪಕಾಲ ಕಳೆದಾಗಲಿ, ಆಗಲೇ ಆಗಲಿ, ಪ್ರಬುದ್ಧನಾಗಿ, ತಿರ್ಯಗ್ಯೋನಿ ಮುಂತಾದುವುಗಳನ್ನು ಕ್ರಮವಾಗಿ ಅನುಭವಿಸುತ, ಜನನಮರಣಪ್ರವಾಹದಲ್ಲಿ ಬಿದಿರುವನು ॥೧೯॥

ಈಗ ಸಾಮಾನ್ಯಪಾಪಿಯ ಗತಿಯನ್ನು ಕೇಳು. ಇವನು ಮರಣಹೊಂದಿದ ಉತ್ತರ ಕ್ಷಣವೇ, ತನ್ನ ವಾಸನಾನುಗುಣವಾಗಿ ಸಿದ್ಧವಾಗುವ ಮನುಷ್ಯಾದಿದೇಹವನ್ನನುಭವಿಸುವನು ॥೨೦॥

ಅವನು, ಸ್ವಪ್ನಸಂಕಲ್ಪಗಳಂತೆ ಆವಿಧವಾದ ಅನುಭವವುಳ್ಳವನಾಗುವನು. ಆ ಕ್ಷಣದಲ್ಲಿಯೇ ಅವನಿಗೆ ಪೂರ್ವೋಕ್ತರೀತಿಯಾಗಿ ಸ್ಮರಣೆಯೂ ಉಂಟಾಗುವುದು ॥೨೧॥

ಮುಂದೆ ಪುಣ್ಯಶಾಲಿಗಳ ಗತಿಯನ್ನು ಕೇಳುವಳಾಗು. ಯಾರು ಉತ್ತಮಪುಣ್ಯಶಾಲಿಗಳಾಗುವರೋ, ಅವರು ಮರಣಹೊಂದಿದ ಉತ್ತರಕ್ಷಣವೇ, ತಮ್ಮ ಪ್ರಾಕ್ತನಪುಣ್ಯವಾಸನಾನುಸಾರವಾಗಿ, ಸ್ವರ್ಗಲೋಕವನ್ನೂ ವಿದ್ಯಾಧರಲೋಕವನ್ನೂ ಅನುಭವಿಸುವರು॥೨೨॥

ಹೀಗೆ ತಮ್ಮ ಮಹಾಪುಣ್ಯವನ್ನನುಭವಿಸಿದನಂತರದಲ್ಲಿ, ಇತರವಾದ ತಮ್ಮ ಕರ್ಮಗಳಿಗೆ ಅನುಗುಣವಾದ ಫಲವನ್ನು ಇತರ ಲೋಕಗಳಲ್ಲನುಭವಿಸಿ, ಬಳಿಕ ಮನುಷ್ಯಲೋಕದೊಳಗೆ ಐಶ್ವರ್ಯಪರಿಪೂರ್ಣವಾಗಿರುವ ಸತ್ಪುರುಷರ ವಂಶದಲ್ಲಿ ಹುಟ್ಟುವರು ॥೨೩॥

ಯೇ ಚ ಮಧ್ಯಮಧರ್ಮಾಣೋ ಮೃತಿಮೋಹಾದನನ್ತರಮ್ ।
ತೇ ವ್ಯೋಮವಾಯುವಲಿತಾಃ ಪ್ರಯಾನ್ತ್ಯೋಷಧಿಪಲ್ಲವಮ್ ॥೨೪॥
ತತ್ರ ಚಾರು ಫಲಂ ಭುಕ್ತ್ವಾ ಪ್ರವಿಶ್ಯ ಹೃದಯಂ ನೃಣಾಮ್ ।
ರೇತಸಾಮಧಿತಿಷ್ಠನ್ತಿ ಗರ್ಭೇ ಜಾತಿಕ್ರಮೋಚಿತೇ ॥೨೫॥
ಸ್ವವಾಸನಾನುಸಾರೇಣ ಪ್ರೇತಾಏತಾಂ ವ್ಯವಸ್ಥಿತಿಮ್ ।
ಮೂರ್ಖಾನ್ತೇಽನುಭವನ್ತ್ಯನ್ತಃ ಕ್ರಮೇಣೈವಾಕ್ರಮೇಣ ಚ ॥೨೬॥
ಆದೌ ಮೃತಾವಯಮಿತಿ ಬುಧ್ಯನ್ತೇ ತದನು ಕ್ರಮಾತ್ ।
ಬನ್ಧುಪಿಣ್ಡಾದಿದಾನೇನ ಪ್ರೋತ್ಪನ್ನಾ ಇತಿ ವೇದಿನಃ ॥೨೭॥
ತತೋ ಯಮಭಟಾಏತೇ ಕಾಲಪಾಶಾನ್ವಿತಾಇತಿ ।
ನೀಯಮಾನಾಃ ಪ್ರಯಾಮ್ಯೇಭಿಃ ಕ್ರಮಾದ್ಯಮಪುರಂ ತ್ವಿತಿ ॥೨೮॥
ಉದ್ಯಾನಾನಿ ವಿಮಾನಾನಿ ಶೋಭನಾನಿ ಪುನಃಪುನಃ ।
ಸ್ವಕರ್ಮಭಿರುಪಾತ್ತಾನಿ ದಿವ್ಯಾನೀತ್ಯೇವ ಪುಣ್ಯವಾನ್ ॥೨೯॥

ಯಾರು ಮಧ್ಯಮಧರ್ಮಶಾಲಿಗಳಾಗಿರುವರೋ, ಅವರು ಮರಣಹೊಂದಿದನಂತರದಲ್ಲಿ ಆಕಾಶವಾಯುಗಳೊಡನೆ ಸೇರಿಕೊಂಡು, ಲತಾಪಲ್ಲವಾದಿಗಳಿಂದ ಪರಿವೃತವಾಗಿರುವ ನಂದನ ಚೈತ್ರರಥ ಮುಂತಾದ ದಿವ್ಯವನಗಳನ್ನು ಸೇರುವರು ॥೨೪॥

ಅಲ್ಲಿ ಮಧುರವಾದ ಸ್ವಕರ್ಮಫಲವನ್ನನುಭವಿಸಿ, ಬಳಿಕ ಕ್ರಮವಾಗಿ ಪುರುಷರ ಹೃದಯವನ್ನು ಪ್ರವೇಶಿಸಿ, ವೀರ್ಯೋತ್ಸರ್ಗವಾಗುವಕಾಲದಲ್ಲಿ ತಮ್ಮ ಕರ್ಮೋಚಿತವಾದ ಜಾತಿಯ ಗರ್ಭವನ್ನು ಆಶ್ರಯಿಸುವರು ॥೨೫॥

ಹೀಗೆಯೇ, ಸಾಮಾನ್ಯಧರ್ಮಶಾಲಿಯಾದವನೂ ತನ್ನ ಕರ್ಮಾನುಗುಣವಾದ ಫಲವನ್ನನುಭವಿಸಿ, ತನಗೆ ತಕ್ಕ ಯೋನಿಯಲ್ಲಿ ಉದ್ಭವಿಸುವನು. ಹೀಗೆ, ಮೃತರಾದವರು, ಮರಣಾನಂತರ, ತಮ್ಮ ವಾಸನಾನುಗುಣವಾದ ವ್ಯವಸ್ಥೆಯನ್ನು, ಕ್ರಮವಾಗಿಯಾಗಲಿ—ಅಥವಾ ಅಕ್ರಮವಾಗಿಯಾಗಲಿ—ಅನುಭವಿಸುವರು ॥೨೬॥

ಈಗ ಅವರಿಗೆ ಆಯಾವಿಧವಾಗಿ ಜ್ಞಾನಾವಿರ್ಭಾವಪ್ರಕ್ರಮವನ್ನು ಕೇಳುವವಳಾಗು. ಮೊದಲು, ನಾವು ಮೃತರಾದೆವೆಂದು ತಿಳಿಯುವರು. ಬಳಿಕ, ಕ್ರಮವಾಗಿ ಬಂಧುಗಳು ಅಪರಕರ್ಮದಲ್ಲಿ ಕೊಟ್ಟ ಪಿಂಡೋದಕಾದಿಗಳಿಂದ ಹುಟ್ಟಿದೆವೆಂದು ತಿಳಿಯುವರು ॥೨೭॥

ಆ ಮೇಲೆ, ಈ ಯಮಭಟರು ಕಾಲಪಾಶದೊಡನೆ ಬಂದಿರುವರೆಂದೂ, ಇವರಿಂದ ಒಯ್ಯಲ್ಪಡುತ—ಕ್ರಮವಾಗಿ ಪುತ್ರಾದಿಗಳು ಕೊಡುವ ಶ್ರಾದ್ಧಾದಿಗಳಿಂದ ತೃಪ್ತಿಪಡೆಯುತ ವತ್ಸರಾಂತದಲ್ಲಿ ಯಮಲೋಕವನ್ನು ಹೊಂದುವೆವೆಂದೂ ತಿಳಿಯುವರು ॥೨೮॥

ಆದರೆ, ಪುಣ್ಯಶಾಲಿಯಾದವನು, ಸೊಗಸಾದ ಉದ್ಯಾನಗಳೂ ದಿವ್ಯವಾದ ವಿಮಾನಗಳೂ ಸನ್ನ ಪುಣ್ಯಕರ್ಮದಿಂದ ಉಪಾರ್ಜಿತವಾಗಿ ಪ್ರಾಪ್ತವಾಗಿರುವುವೆಂದೇ ತಿಳಿಯುವನು ॥೨೯॥

ಹಿಮಾನೀಕಣ್ಟಕಶ್ವಭ್ರಶಸ್ತ್ರಪತ್ರವನಾನಿ ಚ ।
ಸ್ವಕರ್ಮದುಷ್ಕೃತೋತ್ಥಾನಿ ಸಮ್ಪ್ರಾಪ್ತಾನೀತಿ ಪಾಪವಾನ್ ॥೨೦॥
ಇಯಂ ಮೇ ಸೌಮ್ಯಸಮ್ಪ್ರಾಪ್ತಾ ಸರಣಿಃ ಶೀತಶಾದ್ವಲಾ ।
ಸ್ನಿಗ್ಧಚ್ಛಾಯಾ ಸವಾಪೀಕಾ ಪುರಸ್ಸಂಸ್ಥೇತಿ ಮಧ್ಯಮಃ ॥೨೧॥
ಅಯಂ ಪ್ರಾಪ್ತೋ ಯಮಪುರಂ ಅಹಮೇಷ ಸ ಭೂತಪಃ ।
ಅಯಂ ಕರ್ಮವಿಚಾರೋತ್ರ ಕೃತಇತ್ಯನುಭೂತಿವಾನ್ ॥೨೨॥
ಇತಿ ಪ್ರತ್ಯೇಕಮಭ್ಯೇತಿ ಪೃಥುಃ ಸಂಸಾರಖಣ್ಡಕಃ ।
ಯಥಾಸಂಸ್ಥಿತನಿಶ್ಶೇಷಪದಾರ್ಥಾಚಾರಭಾಸುರಃ ॥೨೩॥
ಆಕಾಶಇವ ನಿಶ್ಶೂನ್ಯೇ ಶೂನ್ಯಾತ್ಮೈವ ವಿಬೋಧವಾನ್ ।
ದೇಶಕಾಲಕ್ರಿಯಾದ್ಯೈರ್ಘ್ಯಾಭಾಸುರೋಪಿ ನಕಿಂಚನ ॥೨೪॥
ಇತೋಯಮಹಮಾದಿಷ್ಟಃ ಸ್ವಕರ್ಮಫಲಭೋಜನೇ ।
ಗಚ್ಛಾಮ್ಯಾಶು ಶುಭಂ ಸ್ವರ್ಗಂ ಇತೋ ನರಕಮೇವ ಚ ॥೨೫॥
ಯಃ ಸ್ವರ್ಗೋಯಂ ಮಯಾ ಭುಕ್ತೋ ಭುಕ್ತೋಯಂ ನರಕೋಥ ವಾ।
ಇಮಾಸ್ತ್ವಯೋನಯೋ ಭುಕ್ತಾಃ ಜಾಯೇಹಂ ಸಂಸೃತೌ ಪುನಃ ॥೨೬॥

ಪಾಪಿಷ್ಠನಾದರೋ,ಹಿಮಸಮೂಹ ಕಂಟಕಶ್ವಭ್ರ(ಮುಳ್ಳು ತುಂಬಿರುವ ಗುಂಡಿ)ಅಸಿಪತ್ರವನ(ಕತ್ತಿಗಳನ್ನು ನಿಬಿಡವಾಗಿ ಸೇರಿಸಿರುವುದು) ಇತ್ಯಾದಿನರಕಗಳು—ನನ್ನ ದುಷ್ಕರ್ಮಬಲದಿಂದ ಉಪಾರ್ಜಿತವಾಗಿ ಈಗ ಅನುಭವಿಸಲ್ಪಡುತಿರುವುವೆಂದು ತಿಳಿಯುವನು ॥೨೦॥

ಮಧ್ಯಮಪುಣ್ಯನಾದವನು, ನನಗೆ ಈ ಮಾರ್ಗದಲ್ಲಿ ಹೋಗುವುದು ಸುಖವಾಗಿದೆ; ಇಲ್ಲಿನ ಹಸುರುಭೂಮಿಯು ತಣ್ಣಗಿದೆ ; ಇಲ್ಲಿ, ಇಂತಹಮಾರ್ಗವು ನನಗೆ ಮುಂದುಗಡೆ ಸಿಕ್ಕುತಿದೆ.—ಎಂದು ತಿಳಿಯುವನು ॥೨೧॥

ಮಧ್ಯಮ ಪಾಪಿಯಾದರೋ,—ಇದೋ ನಾನು ಈ ಯಮನ ಪಟ್ಟಣಕ್ಕೆ ಬಂದೆನು ; ಇಲ್ಲಿ ಆ ಯಮರಾಜನು ಕುಳಿತಿರುವನು ; ಇಲ್ಲಿ ನಾನು ಮಾಡಿದ ಪುಣ್ಯಪಾಪಕರ್ಮಗಳ ವಿಚಾರಣೆಯನ್ನು ಮಾಡಿದರು. ಎಂದು ಅನುಭವವುಳ್ಳವನಾಗುವನು ॥೨೨॥

ಈರೀತಿಯಾದ ಜನನ ಮರಣ ಪ್ರವಾಹವು, ಪ್ರತಿಪುರುಷನಿಗೂ ಅತಿವಿಶಾಲವಾಗಿ ಉಂಟಾಗುವುದು. ಹೀಗೆ ಆರೋಪಿತವಾದ ಈ ಭ್ರಮಜ್ಞಾನದಲ್ಲಿ, ಸಮಸ್ತಪದಾರ್ಥಗಳ ಆಚರಣೆಗಳೂ ಆಗ ಅನುಭವಕ್ಕೆ ಬರುವಂತೆಯೇ ಕಾಣುತಿರುವುವು ॥೨೩॥

ತತ್ವದೃಷ್ಟಿಯಿಂದ ವಿಚಾರಮಾಡಿನೋಡಿದರೋ,—ಸುತರಾಂ ಶೂನ್ಯವಾದ ಆಕಾಶದಲ್ಲಿ ಶೂನ್ಯಸ್ವರೂಪವೇ ಕಾಣುವಂತೆ, ದೇಶ ಕಾಲ ಕರ್ಮ ಇವುಗಳು ಅತಿದೀರ್ಘವಾಗಿ ಪ್ರಕಾಶಿಸುತಿದ್ದರೂ ವಸ್ತುತಃ ಯಾವುದೂ ಇಲ್ಲವೆಂದೇ ಗೊತ್ತಾಗುವುದು ॥೨೪॥

ಆದರೆ, ತತ್ವದೃಷ್ಟಿಶೂನ್ಯನಾದವನು—ಯಮರಾಜನಿಂದ ನಾನು ಇತ್ತಲಾಗಿ ನನ್ನ ಕರ್ಮಫಲವನ್ನು ಅನುಭವಿಸುವುದಕ್ಕಾಗಿ ಆಜ್ಞಾಪಿಸಲ್ಪಟ್ಟಿರುವೆನು ; ಇದರಿಂದ ನಾನು ಇತ್ತಲಾಗಿಯೇ ಶುಭವಾದ ಸ್ವರ್ಗಕ್ಕಾಗಲಿ ನರಕಕ್ಕಾಗಲಿ ಬೇಗನೆ ಹೋಗುವೆನು. ಯಮರಾಜನು ನನಗೆ ಆಜ್ಞಾಪಿಸಿದಂತೆ ಸ್ವರ್ಗವನ್ನೋ ನರಕವನ್ನೋ ನಾನನುಭವಿಸಿದೆನು; ನಾನು ಇಂ

ಅಯಂ ಶಾಲಿರಹಂ ಜಾತಃ ಕ್ರಮಾತ್ ಫಲಮಹಂ ಸ್ಥಿತಃ |
ಇತ್ಯುದರ್ಕಪ್ರಬೋಧೇನ ಬುಧ್ಯಮಾನೋ ಭವಿಷ್ಯತಿ ||೩೭||
ಸಂಸುಪ್ತಕರಣಸ್ತ್ವೇವಂ ಬೀಜತಾಂ ಯಾತ್ಯಸೌ ನರೇ |
ತದ್ಬೀಜಂ ಯೋನಿಗಳಿತಂ ಗರ್ಭೋ ಭವತಿ ಮಾತರಿ ||೩೮||
ಸ ಗರ್ಭೋ ಜಾಯತೇ ಲೋಕೇ ಪೂರ್ವಕರ್ಮಾನುಸಾರತಃ |
ಭವ್ಯೋ ಭವತ್ಯಭವ್ಯೋ ವಾ ಬಾಲಕೋ ಲಲಿತಾಕೃತಿಃ ||೩೯||
ತತೋನುಭವತೀನ್ದ್ವಾಭಂ ಯೌವನಂ ಮದನೋನ್ಮುಖಮ್ |
ತತೋ ಜರಾಂ ಪದ್ಮಮುಖೇ ಹಿಮಾಶನಿಮಿವ ಚ್ಯುತಮ್ |೪೦||
ತತೋಪಿ ವ್ಯಾಧಿಮರಣಂ ಪುನರ್ಮರಣಮೂರ್ಛನಾಮ್ |
ಪುನಃ ಸ್ವಪ್ನವದಾಯಾತಂ ಪಿಣ್ಡೈರ್ದೇಹಪರಿಗ್ರಹಮ್ ||೪೧||
ಯಾಮ್ಯಂ ಯಾತಿ ಪುನರ್ಲೋಕಂ ಪುನರೇವ ಭ್ರಮಕ್ರಮ್ |
ಭೂಯೋಭೂಯೋನುಭವತಿ ನಾನಾಯೋನ್ಯನ್ತರೋದಯೇ ||೪೨||
ಇತ್ಯಾಜವಞ್ಜವೀಭಾವಂ ಆಮೋಕ್ಷಮತಿಭಾಸುರಮ್ |
ಭೂಯೋಭೂಯೋನುಭವತಿ ವ್ಯೋಮ್ನ್ಯೇವ ವ್ಯೋಮರೂಪವಾನ್ ||೪೩||

ತಿಂತಹ ಜನ್ಮಗಳನ್ನೆಲ್ಲ ಅನುಭವಿಸಿದೆನು ; ಈಗ ಪುನಃ ಸಂಸಾರದಲ್ಲಿ ಹುಟ್ಟುವೆನು; ಈಗ ಶಾಲಿ (ಬತ್ತದ ಪೈರು) ರೂಪನಾದೆನು; ಈಗ ಕ್ರಮವಾಗಿ ಅದರಫಲ(ಬತ್ತ) ರೂಪನಾದೆನು. ಎಂದು ಈ ರೀತಿಯಾಗೆಲ್ಲ ಮುಂದಣ ಜ್ಞಾನವನ್ನೆಲ್ಲ ಅನುಭವಿಸುವನು. ಆಗ ಇವನಿಗೆ ಶರೀರವಿರುವುದಿಲ್ಲವಾದಕಾರಣ, ಇಂದ್ರಿಯಗಳೆಲ್ಲವೂ ಅಸ್ತವಾಗಿರುವುವು. ಇಂತಹ ಸ್ಥಿತಿಯಲ್ಲಿ ಇವನು ಪುರುಷನೊಳಗೆ ಬೀಜರೂಪವಾಗಿ ಸೇರುವನು. ಆ ಬೀಜವು ಅಲ್ಲಿಂದ ಗಳಿತವಾಗಿ ಮಾತೃವಿನ ಹೊಟ್ಟೆಯಲ್ಲಿ ಗರ್ಭವಾಗುವುದು ||೩೭—೩೮||

ಬಳಿಕ ಆ ಗರ್ಭವು ಭೂಮಿಯಲ್ಲಿ ಹುಟ್ಟುವುದು. ಹೀಗೆ ಗರ್ಭದಿಂದ ಹುಟ್ಟಿ ಮಧುರಾಕಾರನಾಗಿರುವ ಬಾಲಕನು, ಪೂರ್ವಕರ್ಮವಾಸನಾನುಸಾರವಾಗಿ, ಒಳ್ಳೆಯವನೋ—ಅಥವಾ ಕೆಟ್ಟವನೋ ಆಗುವನು ||೩೯||

ಆ ಬಳಿಕ, ಚಂದ್ರನಂತೆ ವೃದ್ಧಿಕ್ಷಯಯುಕ್ತವಾಗಿಯೂ ಮನೋಹರವಾಗಿಯೂ ಇರುವ ಕಾಮಾಸಕ್ತನಾದ ಯೌವನವನ್ನನುಭವಿಸುವನು. ಆ ಮೇಲೆ ಪದ್ಮದಲ್ಲಿ ಹಿಮಬೀಳುವಂತೆ ತನ್ನ ಶರೀರದಲ್ಲಿ ಬಂದು ಬಿದ್ದ ಮುಪ್ಪನ್ನನುಭವಿಸುವನು ||೪೦||

ಪುನಃ ವ್ಯಾಧಿಯನ್ನೂ ಮರಣವನ್ನೂ, ಮತ್ತೆ ಜನನ ಮರಣಗಳನ್ನೂ, ಪುನಃ ಬಂಧುಗಳಿಂದ ಕೊಡಲ್ಪಟ್ಟ ಪಿಂಡದಾನಗಳಿಂದುಂಟಾದ ಶರೀರ ಗ್ರಹಣವನ್ನೂ, ಸ್ವಪ್ನದಂತೆ ಅನುಭವಿಸುತಿರುವನು ||೪೧||

ಪುನಃ ಯಮಲೋಕಕ್ಕೆ ಹೋಗುವನು ; ಮತ್ತೆಸುತ್ತುತಿರುವನು. ಹೀಗೆ ಅನೇಕ ಜನ್ಮಗಳಲ್ಲಿ ಮತ್ತೆಮತ್ತೆ ಜನನ ಮರಣಗಳನ್ನನುಭವಿಸುವನು ||೪೨||

ಈ ರೀತಿಯಾಗಿ, ಆಕಾಶರೂಪನಾದ ಆತ್ಮನು, ತನ್ನ ಜ್ಞಾನಾಕಾಶದಲ್ಲಿಯೇ, ಮುಕ್ತಿಯಾಗುವವರೆಗೂ ಅತಿಪ್ರಕಾಶವಾಗಿ ಈ ಜನನ ಮರಣ ಪರಿವರ್ತನವನ್ನನುಭವಿಸುವನು||

ಪ್ರಬುದ್ಧಲೀಲೋವಾಚ.

ಆದಿಸರ್ಗೇ ಯಥಾ ದೇವಿ ಭ್ರಮಏಷ ಪ್ರವರ್ತತೇ ।
ತಥಾ ಕಥಯ ಮೇ ಭೂಯಃ ಪ್ರಸಾದಾದ್ಬೋಧವೃದ್ಧಯೇ ॥೪೪॥

ಶ್ರೀದೇವ್ಯುವಾಚ.

ಪರಮಾರ್ಥಘನಂ ಶೈಲಾಃ ಪರಮಾರ್ಥಘನಂ ದ್ರುಮಾಃ ।
ಪರಮಾರ್ಥಘನಂ ಪೃಥ್ವೀ ಪರಮಾರ್ಥಘನಂ ನಭಃ ॥೪೫॥
ಸರ್ವಾತ್ಮಕತ್ವಾತ್ ಸ ಯತೋ ಯಥೋದೇತಿ ಚಿದೀಶ್ವರಃ ।
ಪರಮಾಕಾಶಶುದ್ಧಾತ್ಮಾ ತತ್ರತತ್ರ ಭವೇತ್ ತಥಾ ॥೪೬॥
ಸರ್ಗಾದೌ ಸ್ವಪ್ನಪುರುಷನ್ಯಾಯೇನಾದಿಪ್ರಜಾಪತಿಃ ।
ಯಥಾ ಸ್ಫುಟಂ ಪ್ರಕಚಿತಃ ತಥಾದ್ಯಾಪಿ ಸ್ಥಿತಾ ಸ್ಥಿತಿಃ ॥೪೭॥
ಪ್ರಥಮೋಸೌ ಪ್ರತಿಸ್ಪನ್ದಃ ಪದಾರ್ಥಾನಾಂ ಹಿ ಬಿಮ್ಬಕಮ್ ।

ಇದನ್ನು ಕೇಳಿ ಪ್ರಬುದ್ಧ ಲೀಲೆಯು ಮಾತನಾಡಿದಳು:—

ಹೇ ದೇವಿ! 'ತತ್' 'ತ್ವಂ' ಎಂಬ ಎರಡು ಪದಾರ್ಥಗಳೊಳಗೆ, ತ್ವಂ ಪದಾರ್ಥವಾದ ಜೀವನಲ್ಲಿ ಭ್ರಾಂತಿ ಸಂಭವಿಸಬಹುದಾದಕಾರಣ, ಈ ಅಧ್ಯಾರೋಪಕ್ರಮವು ಅವನಲ್ಲಿರಬಹುದು. ಆದರೆ, ತತ್ಪದಾರ್ಥವಾದ ಈಶ್ವರನಲ್ಲಿ ಭ್ರಾಂತಿಯೇ ಇಲ್ಲವಾದಕಾರಣ, ಅವನಲ್ಲಿ ಈ ಜಗದಧ್ಯಾರೋಪಕ್ರಮವು ಹೇಗೆ ಸಂಭವಿಸುವುದೆಂದು ನನಗೆ ಶಂಕೆಯುಂಟಾಗಿರುವುದು. ಅದುಕಾರಣ, ನನ್ನಲ್ಲನುಗ್ರಹವಿಟ್ಟು, ಆದಿಸೃಷ್ಟಿಯಲ್ಲಿ ಈ ಭ್ರಮವು ಹೇಗುಂಟಾಯಿತೆಂಬುದನ್ನು ವಿಸ್ತರಿಸಿ ಹೇಳು ॥೪೪॥

ಶ್ರೀಸರಸ್ವತಿಯು ಉತ್ತರಕೊಡುವಳು:—

ಎಲೌ! ಲೀಲೆ! ಈಶ್ವರನಿಗೆ ಭ್ರಾಂತಿಯುಂಟಾಗಿ, ಅವನಲ್ಲಿ ಜಗತ್ತು ಆರೋಪಿಸಲ್ಪಡುತ್ತದೆಯೆಂದು ತಿಳಿಯಬೇಡ. ಮತ್ತೇನೆಂದರೆ,- ಅವನು ಪರಮಾರ್ಥಘನ (ತತ್ವದೃಷ್ಟ್ಯಾ ಅಪರಿಚಿನ್ನ) ರೂಪನಾಗಿಯೇ ಇರುವಾಗ, ಮಾಯಾಸಾನ್ನಿಧ್ಯದಿಂದ ಅವನು ಅಧ್ಯಾರೋಪಿಸಲ್ಪಟ್ಟಿರುವಂತೆ ಕಾಣಿಸಿಕೊಳ್ಳುವನು. ಅದುಕಾರಣ, ನಮ್ಮೆದುರಿಗೆ ಕಾಣುವ ಪರ್ವತಗಳೂ, ವೃಕ್ಷಗಳೂ, ಭೂಮಿಯೂ, ಆಕಾಶವೂ, ಇವೆಲ್ಲವೂ ಪರಮಾರ್ಥಘನವಾದ ಪರಬ್ರಹ್ಮಪದಾರ್ಥವೆಂದೇ ತಿಳಿಯಬೇಕು ॥೪೫॥

ಕೇವಲ ಚಿದ್ರೂಪನಾಗಿಯೂ ಆಕಾಶದಂತೆ ನಿರ್ಮಲವಾಗಿಯೂ ಇರುವ ಆ ಈಶ್ವರನು, ಸ್ವಯಂ ಸರ್ವಾತ್ಮಕನಾಗಿರುವುದರಿಂದ, ಯಾವ ಸಂದರ್ಭದಲ್ಲಿ ಹೇಗೆ ಉದಯಿಸುವನೋ,- ಅಲ್ಲಲ್ಲಿ ಹಾಗೆಹಾಗೆಯೇ ಆಗಿಬಿಡುವನು ॥೪೬॥

ಆ ಈಶ್ವರನೇ, ಸೃಷ್ಟ್ಯಾದಿಯಲ್ಲಿ, ಸ್ವಪ್ನವನ್ನು ಕಲ್ಪಿಸಿಕೊಳ್ಳುವ ಮನುಷ್ಯನಂತೆ, ತಾನೇ ಸಮಷ್ಟಿಸೃಷ್ಟಿರೂಪನಾದ ಹಿರಣ್ಯಗರ್ಭರೂಪನಾಗಿ, ಯಾವ ರೀತಿಯಾಗಿ ವಿಕಾಸಹೊಂದಿದನೋ,—ಆರೀತಿಯಾಗಿಯೇ ಇದುವರೆಗೂ ಲೋಕಸ್ಥಿತಿಯಿರುವುದು. ಅದಕ್ಕೆ ಸ್ವಲ್ಪವೂ ವ್ಯತಿರಿಕ್ತವಾಗಿಲ್ಲ ॥೪೭॥

ಹೀಗೆ ಪ್ರಾಥಮಿಕವಾದ ಈ ವಿವರ್ತ (ರೂಪಾಂತರ) ವೇ, ಸಮಸ್ತಪದಾರ್ಥಗಳಿಗೂ

ಪ್ರತಿಬಿಮ್ಬಿತಮೇತಸ್ಮಾತ್ ಯತ್ ತದದ್ಯಾಪಿ ಸಂಸ್ಥಿತಮ್ ||೪೮||
ಯನ್ನಾಮ ಸುಷಿರಂ ಸ್ಥಾನಂ ದೇಹಾನಾಂ ತದ್ಗತೋಽನಿಲಃ |
ಕರೋತ್ಯಙ್ಗಪರಿಸ್ಪನ್ದಂ ಜೀವತೀತ್ಯುಚ್ಯತೇ ತತಃ ||೪೯||
ಸರ್ಗಾದಾವೇವಮೇವೈಷಾ ಜಙ್ಗಮೇಷು ಸ್ಥಿತಾ ಸ್ಥಿತಿಃ |
ಚೇತನಾಅಪಿ ನಿಷ್ಪನ್ದಾಃ ತೇನೈತೇ ಪಾದಪಾದಯಃ ||೫೦||
ಚಿದಾಕಾಶೋ ಯಮೇವಾಂಶಂ ಕುರುತೇ ಚೇತನೋದಿತಮ್ |
ಸಏವ ಸಂವಿದ್ಭವತಿ ಶೇಷಂ ಭವತಿ ನೈವ ತತ್ ||೫೧||
ನರೋಪಾಧಿ ಪುರಂ ಪ್ರಾಪ್ತಂ ಚೇತತ್ಯಕ್ಷಿಪುಟಂ ನಯತ್ |
ತತ್ ತಸ್ಯಾನಾಕ್ಷಿ ಚಿಜ್ಜೀವಂ ನೋ ಜೀವತ್ಯೇವ ಸರ್ಗತಃ ||೫೨||

ಬಿಂಬರೂಪವಾಗಿರುವದು. ಇದರದೆಸೆಯಿಂದ ಯಾವದು ಪ್ರತಿಬಿಂಬಿಸಿರುವುದೋ, ಅದು ಇದುವರೆಗೂ ಆ ಸ್ಥಿತಿಯಲ್ಲಿಯೇ ಇರುವುದು ||೪೮||

ಅದರಲ್ಲಿ ಸ್ಥಾವರಜಂಗಮರೂಪವಾಗಿ ವಿಭಾಗವಾಗುವುದಕ್ಕೆ ಕಾರಣವನ್ನು ಕೇಳು. ದೇಹಗಳಲ್ಲಿ ಯಾವಯಾವ ರಂಧ್ರಸ್ಥಾನಗಳಿರುವುವೋ, ಅವುಗಳಲ್ಲಿ ವಾಯುವು ಪ್ರವೇಶಮಾಡಿ, ಅವಯವಗಳಿಗೆ ಚಲನೆಯನ್ನುಂಟುಮಾಡುವುದು. ಇದರಿಂದ ಅದು ಜೀವಿಸಿರುವುದೆಂದು ಹೇಳಲ್ಪಡುವುದು ||೪೯||

ಈವಿಧವಾದ ಸ್ಥಿತಿಯು, ಸೃಷ್ಟ್ಯಾದಿಯಲ್ಲಿಯೇ ಜಂಗಮಪದಾರ್ಥಗಳೊಳಗೇ ನಿಂತುಬಿಟ್ಟಿತು. ಆದಕಾರಣವೇ, ಈವೃಕ್ಷಾದಿಗಳು ವಸ್ತುತಃ ಚೇತನಪದಾರ್ಥಗಳಾಗಿದ್ದರೂ ಸ್ಥಾವರಗಳೆನ್ನಿಸಿಕೊಂಡಿರುವುವು ||೫೦||

ಹೀಗೆ ಚೇತನಾಚೇತನವಿಭಾಗಕ್ಕೂ ಕಾರಣವನ್ನು ಕೇಳುವವಳಾಗು. ಆ ಚಿದಾಕಾಶವು ತನ್ನ ಯಾವ ಅಂಶವನ್ನು ಚೇತನಯುಕ್ತವನ್ನಾಗಿ ಮಾಡುವುದೋ, ಅದೇ ಸಚೇತನಪದಾರ್ಥವಾಗುವುದು. ಉಳಿದುದು, ಎಂದಿಗೂ ಸಚೇತನವಾಗುವುದೇ ಇಲ್ಲ ||೫೧||

ಇದು ಬುದ್ಧಿದ್ವಾರದಿಂದಲೇ ಸ್ಥೂಲದೇಹದಲ್ಲಿ ಪ್ರವೇಶಿಸಿ, ಅಲ್ಲಿ ಚಕ್ಷುರಾದಿ ಇಂದ್ರಿಯಗಳನ್ನು ಪಡೆದು, ಬಾಹ್ಯವಾದ ವ್ಯವಹಾರಕ್ಕೆ ಯೋಗ್ಯವಾಗುವುದು. ಅದು ಹೇಗೆಂದರೆ,— ಆ ಚಿದಾಕಾಶವು, ಬುದ್ಧಿಯನ್ನು ನಿಮಿತ್ತಮಾಡಿಕೊಂಡು, ಮನುಷ್ಯಾದಿದೇಹರೂಪವಾದ ಪಟ್ಟಣವನ್ನು ಸೇರಿ, ಅಲ್ಲಿ ಚಕ್ಷುರಾದಿ ಇಂದ್ರಿಯಸ್ಥಾನಗಳನ್ನು ಹೊಂದಿ, ಬಾಹ್ಯವಾದ ಪದಾರ್ಥಗಳ ಜ್ಞಾನವನ್ನು ಅನುಭವಿಸುವುದು. ಆದರೆ—'ಚಕ್ಷುರಾದಿಗಳೇ ಚೈತನ್ಯದಿಂದ ಆಶ್ರಿತಗಳಾಗಿರುವುದರಿಂದ, ತಾವೇ ಸಾಕ್ಷಾತ್ತಾಗಿ ವ್ಯವಹಾರಗಳನ್ನನುಭವಿಸಲಿ; ಮಧ್ಯದಲ್ಲಿ ಬುದ್ಧಿಯೆಂಬ ಉಪಾಧಿಯೊಂದನ್ನು ಏಕೆ ಕಲ್ಪಿಸಬೇಕು?'-ಎಂದು ಶಂಕಿಸುವೆಯೋ? —ಈ ನೇತ್ರಮುಂತಾದ ಇಂದ್ರಿಯಸಮೂಹವು, ತಾನೇ ಸಾಕ್ಷಾತ್ತಾಗಿ ಚೇತನವಾದ ಜೀವಭೂತವಾಗುವುದಿಲ್ಲ. ಬುದ್ಧಿದ್ವಾರದಿಂದಲೇ ಅದು ಕಾರ್ಯಕಾರಿಯಾಗುವುದು. ಇದಕ್ಕೆ ಕಾರಣವೇನೆಂದರೆ,—ಯಾವುದೊಂದೂ ಕೇವಲವಾದ ಚಿದಧ್ಯಾರೋಪಮಾತ್ರದಿಂದಲೇ ಸಚೇತನವಾಗುವುದಿಲ್ಲ. ಹಾಗಿದ್ದಪಕ್ಷದಲ್ಲಿ ಘಟಮುಂತಾದ ಪದಾರ್ಥವೂ ಚಿದಧ್ಯಾರೋಪಿತವಾಗಿರುವುದರಿಂದ, ಅದೂ ಸಚೇತನವಾಗಬೇಕಾದೀತು, ಆದುಕಾರಣ, ಬುದ್ಧಿದ್ವಾರದಿಂದಲೇ ಚಕ್ಷುರಾದೀಂದ್ರಿಯಗಳು ತಂತಮ್ಮ ಕಾರ್ಯಗಳನ್ನು ನೆರವೇರಿಸುವುವೆಂದು ಸ್ಥಿರವಾಗುವುದು ||೫೨||

ತಥಾ ಖಂ ಖತಯಾ ಭೂಮಿಃ ಭೂಮಿತ್ವೇನಾಪ್ತ್ವವಜ್ಜಲಮ್ ।
ಯದ್ಯಥಾ ಚೇತತಿ ಸ್ವೈರಂ ತದ್ವೇತ್ತ್ಯೇವ ತಥಾ ವಪುಃ ॥೫೩॥
ಇತಿ ಸರ್ವಶರೀರೇಣ ಜಙ್ಗಮತ್ವೇನ ಜಙ್ಗಮಮ್ ।
ಸ್ಥಾವರಂ ಸ್ಥಾವರತ್ವೇನ ಸರ್ವಾತ್ಮಾ ಭಾವಯನ್ ಸ್ಥಿತಃ ॥೫೪॥
ತಸ್ಮಾದ್ಯಜ್ಜಙ್ಗಮಂ ನಾಮ ತತ್ ಸ್ವಬೋಧನರೂಪವತ್ ।
ತೇನ ಬುದ್ಧಂ ತತಸ್ತದ್ವತ್ ತದೇವಾದ್ಯಾಪಿ ಸಂಸ್ಥಿತಮ್ ॥೫೫॥
ಯದ್ವೃಕ್ಷಾಭಿಧಮಾಬುದ್ಧಂ ಸ್ಥಾವರತ್ವೇನ ವೈ ಪುನಃ ।
ಜಡಮದ್ಯಾಪಿ ಸಂಸಿದ್ಧಂ ಶಿಲಾತರುತೃಣಾದಿ ಚ ॥೫೬॥
ನ ತು ಜಾಡ್ಯಂ ಪೃಥಕ್ ಕಿಂಚಿತ್ ಅಸ್ತಿ ನಾಪಿ ಚ ಚೇತನಮ್ ।
ನಾತ್ರ ಭೇದೋಽಸ್ತಿ ಸರ್ಗಾದೌ ಸತ್ತಾಸಾಮಾನ್ಯಕೇ ನ ಚ ॥೫೭॥
ವೃಕ್ಷಾಣಾಮುಪಲಾನಾಂ ಯಾಃ ನಾಮಾನ್ತಸ್ಥಾಃ ಸ್ವಸಂವಿದಃ ।

ಹೀಗೆ ಬುದ್ಧಿಯೇ ಜೀವೋಪಾಧಿಯಾಗುವುದೆಂದು ಸ್ಪಷ್ಟವಾಯ್ತಷ್ಟೆ! ಇದು ಹೀಗೆಯೇ ಇರಬೇಕೆಂಬ ನಿಯಮಕ್ಕೆ ಕಾರಣವು ಚೈತನ್ಯಸಂಕಲ್ಪವಲ್ಲದೆ ಮತ್ತೊಂದಲ್ಲ. ಆ ಚೈತನ್ಯವು ಆಕಾಶತ್ವೇನ ತನ್ನನ್ನು ತಿಳಿದುಕೊಂಡು ಆಕಾಶವಾಗಿಯೂ, ಭೂಮಿತ್ವೇನ ತಿಳಿದುಕೊಂಡು ಭೂಮಿಯಾಗಿಯೂ, ಜಲತ್ವೇನ ತಿಳಿದುಕೊಂಡು ಜಲವಾಗಿಯೂ ಆಗುವುದು. ಹೀಗೆ ಯಾವುದನ್ನು ಯಾವರೀತಿಯಾಗಿ ತಿಳಿದುಕೊಳ್ಳುವುದೋ, ಅಲ್ಲಿ ಆ ರೂಪವನ್ನೇ ಅನುಭವಿಸುವುದು ॥೫೩॥

ಈ ರೀತಿಯಾಗಿ ಸರ್ವಾತ್ಮಕನಾದ ಆ ಪರಮೇಶ್ವರನು, ಜಂಗಮತ್ವೇನ ಭಾವನೆಮಾಡಿದಾಗ ಜಂಗಮರೂಪವನ್ನೂ—ಸ್ಥಾವರತ್ವೇನ ಭಾವನೆಮಾಡಿದಾಗ ಸ್ಥಾವರರೂಪವನ್ನೂ ಪಡೆಯುತ, ಸರ್ವರೂಪದಿಂದಲೂ ಇರುವನು ॥೫೪॥

ಅದುಕಾರಣ, ಆ ಈಶ್ವರನು, ತನ್ನ ಜ್ಞಾನಾನುಗುಣವಾಗಿ, ಯಾವುದನ್ನು ಜಂಗಮವೆಂದು ತಿಳಿದನೋ, ಅದು ಹಾಗೆಯೇ ಇದುವರೆಗೂ ನಿಂತಿರುವುದು ॥೫೫॥

ಯಾವುದನ್ನು ಸ್ಥಾವರತ್ವೇನ ತಿಳಿದು, ವೃಕ್ಷ ಶಿಲೆ ತರು ತೃಣ—ಇತ್ಯಾದಿರೂಪವಾಗಿ ಗ್ರಹಿಸಿದನೋ, ಅದು ಸ್ಥಾವರವಾಗಿ ಜಡವೆನ್ನಿಸಿಕೊಂಡು ನಿಂತಿರುವುದು ॥೫೬॥

ಅಂತು, ಹೀಗೆ ಈಶ್ವರಸಂಕೇತವನ್ನು ಬಿಟ್ಟು, ಜಡಪದಾರ್ಥವೂ—ಯಾವುದೂ ಇಲ್ಲ. ಸ್ವರೂಪತಃ ಅಸತ್ಯವಾದುದರಲ್ಲಿ ಭೇದವು ಅನುಪಪನ್ನನಾಗುವಕಾರಣ, ಅತ್ಯಂತಾಸತ್ಯವಾದ ಈ ದೃಶ್ಯಪದಾರ್ಥಸಮೂಹದಲ್ಲಿ, ಉತ್ಪತ್ತಿಸ್ಥಿತಿ ನಾಶಗಳೆಂಬ ಭೇದವೇ ಇಲ್ಲ. 'ಹಾಗಾದರೆ ಸತ್ಯಪದಾರ್ಥವಾದ ಈಶ್ವರನಲ್ಲಿಯೇ ಭೇದವಿರಬಹುದಲ್ಲವೆ!' ಎಂದರೆ,—ಆ ಈಶ್ವರಪದಾರ್ಥವು ಸರ್ವದಾ ಕೇವಲ ಸತ್ತಾಮಾತ್ರ ಗೋಚರವಾಗಿರುವುದರಿಂದ, ಅದರಲ್ಲಿಯೂ ಉತ್ಪತ್ತಿ ಸ್ಥಿತಿ ನಾಶಗಳೆಂಬ ಭೇದವಿರುವುದಿಲ್ಲ. ಏವಂಚ, ತತ್ಪದಾರ್ಥವಾದ ಈಶ್ವರನಲ್ಲಿಯೂ, ತ್ವಂಪದಾರ್ಥವಾದ ಜೀವನಲ್ಲಿಯೂ ಆರೋಪಿತವಾದ ಭೇದವು ಅನುಪಪನ್ನವೆಂದು ಸಿದ್ಧವಾಯ್ತಲ್ಲವೆ! ॥೫೭॥

'ಹೀಗೆ ಸರ್ವವೂ ಕೇವಲ ಚೇತನಮಾತ್ರವೇ ಆಗಿದ್ದರೆ, ಆ ಚೇತನದಲ್ಲಿಯೇ—

ಬುದ್ಧ್ಯಾದಿವಿಹಿತಾನ್ಯೇವ ತಾನಿ ತೇಷಾಮಿತಿ ಸ್ಥಿತಿಃ ॥೫೮॥
ವಿದೋಽನ್ತಃ ಸ್ಥಾವರಾದೇರ್ಯಾಃ ತಸ್ಯಾ ಬುದ್ಧ್ಯಾಸ್ತಥಾ ಸ್ಥಿತೇಃ ।
ಅನ್ಯಾಭಿಧಾನಾಸ್ಥಾನಾರ್ಥಾಃ ಸಙ್ಕೇತೈರಪರೈಃ ಸ್ಥಿತಾಃ ॥೫೯॥
ಕೃಮಿಕೀಟಪತಙ್ಗಾನಾಂ ಯಾನಾವಾನ್ತಃ ಸ್ವಸಂವಿದಃ ।
ತಾನ್ಯೇವ ತೇಷಾಂ ಬುದ್ಧ್ಯಾದೀನ್ಯಭಿಧಾರ್ಥಾನಿ ಕಾನಿ ಚಿತ್ ॥೬೦॥
ಯಥೋತ್ತರಾಬ್ಧಿಜನತಾ ದಕ್ಷಿಣಾಬ್ಧಿಜನಂ ಸ್ಥಿತಮ್ ।
ನ ಕಿಂಚಿದಪಿ ಜಾನಾತಿ ನಿಜಸಂವೇದನಾದೃತೇ ॥೬೧॥
ಸ್ವಸಂಜ್ಞಾನುಭವೇ ಲೀನಾಃ ತಥಾ ಸ್ಥಾವರಜಙ್ಗಮಾಃ ।
ಪರಸ್ಪರಂ ಯದಾ ಸರ್ವೇ ಸ್ವಸಙ್ಕೇತಪರಾಯಣಾಃ ॥೬೨॥
ಯಥಾ ಶಿಲಾನ್ತಸ್ಸಂಸ್ಥಾನಾಂ ಬಹಿಸ್ಥಾನಾಂ ಚ ವೇದನಮ್ ।

ಅದಕ್ಕೆ ವಿರುದ್ಧವಾದ ಜಡತ್ವ ನಾಮ ರೂಪ ಇತ್ಯಾದಿಗಳಿರುವಂತೆ ನಮ್ಮ ಅನುಭವಕ್ಕೆ ಬರುತಿರುವುದು ಹೇಗೆ?' ಎಂದು ಕೇಳಿದರೆ,—ಅದು, ಮಾಯಾಕ್ರಾಂತವಾದ ಬುದಿಯಿಂದ ಕಲ್ಪಿತವಾದುದು; ಇದೇ ರಹಸ್ಯಾರ್ಥವು. ವೃಕ್ಷಗಳಿಗೂ ಶಿಲೆಗಳಿಗೂ ಅಂತರ್ಗತವಾಗಿರುವಂತೆ ಯಾವ ನಾಮರೂಪಾದಿ ಭೇದಜ್ಞಾನಗಳು ಕಾಣುವುವೋ, ಅವು ಬುದ್ಧ್ಯಾದಿಗಳಿಂದ ಕಲ್ಪಿತಗಳಲ್ಲದೆ, ವಾಸ್ತವ್ಯವಲ್ಲ. ಇದೇ ಪರಮಾರ್ಥವು ॥೫೮॥

ಇದನ್ನೇ ಇನ್ನೂ ವಿಶದವಾಗಿ ಕೇಳು. ಸ್ಥಾವರಾದಿಪದಾರ್ಥಗಳೊಳಗೆ ಅಂತಃಪ್ರವಿಷ್ಟವಾದ ಯಾವ ಚೈತನ್ಯವಿರುವುದೋ, ಅದು 'ನಾನು ಸ್ಥಾವರಾತ್ಮಕನಾಗಿದ್ದೇನೆ' ಇತ್ಯಾದಿ ಬುದ್ಧಿಯಿಂದ ಆ ರೀತಿಯಾಗಿಯೇ ಮಾರ್ಪಡುವುದು; ಆಗ ಇದು ಜಂಗಮವಲ್ಲವೆಂದು ಹೇಳಲ್ಪಡುವುದು; ಮತ್ತು ಆ ವಿಧವಾದ ಅಭಿಮಾನಕ್ಕೂ ಪಾತ್ರವಾಗುವುದು. ಆಮೇಲೆ, ಇದಕ್ಕೆ—ಜಂಗಮಭಿನ್ನವಾದ ವೃಕ್ಷಪರ್ವತಾದಿ ಸಂಕೇತಗಳುಂಟಾಗುವುವು ॥೫೯॥

ಇದರಂತೆಯೇ ಜಂಗಮಪದಾರ್ಥದಲ್ಲಿಯೂ ತಿಳಿಯುವಳಾಗು. ಕೃಮಿ ಕೀಟ ಪಕ್ಷಿ ಮುಂತಾದ ಪದಾರ್ಥಗಳಲ್ಲಿ ಅಂತರ್ಗತವಾದ ಚೇತನವಾವುದಿರುವುದೋ, ಅದೇ ಅವುಗಳಿಗೆ ಬುದ್ಧಿ ಮುಂತಾದ ನಾಮಧೇಯದಿಂದ ಹೇಳಲ್ಪಡುವುದು ॥೬೦॥

ಹೀಗೆ ಚೇತನಕ್ಕೆ ನಾಮಾದಿಕಲ್ಪನೆಯೆಂಬ ವಿಷಯದಲ್ಲಿ ಮತ್ತೊಂದುದಾಹರಣೆಯನ್ನು ಕೇಳು. ಉತ್ತರಸಮುದ್ರಮಧ್ಯದ ದ್ವೀಪಗಳಲ್ಲಿ ವಾಸಮಾಡುವ ಜನರು, ದಕ್ಷಿಣಸಮುದ್ರದ್ವೀಪದ ಜನರನ್ನು ನೋಡಿಯೇ ಇಲ್ಲವಷ್ಟೆ! ಆದರೂ, ಅವರು ದಕ್ಷಿಣದ್ವೀಪದ ಜನರನ್ನು ಮನಸ್ಸಿನಲ್ಲಿಯೇ ತಿಳಿದುಕೊಂಡಿರುವರು. ಆಗ ದಕ್ಷಿಣದ್ವೀಪದ ಜನರು—ಉತ್ತರದ್ವೀಪದವರ ಜ್ಞಾನಮಾತ್ರವೇ ಹೊರತು—ಬೇರೆಯಾಗಿ ಕಾಣುವುದಿಲ್ಲ. ಆದರೂ ಅವರು ದಕ್ಷಿಣದವರಿಗೆ ಕೆಲವು ಸಂಜ್ಞೆಯನ್ನು ಕಲ್ಪಿಸಿಕೊಂಡು ಆ ರೀತಿಯಾಗಿ ಅನುಭವಿಸುವರು. ಆಗ ಈ ದಕ್ಷಿಣದವರೆಲ್ಲರೂ ಅವರ ಅನುಭವದಲ್ಲಿ ಸೇರಿರುವರು. ಇದು ಸುಪ್ರಸಿದ್ಧವಲ್ಲವೆ! ಹೀಗೆ ಸ್ಥಾವರಜಂಗಮಗಳೂ ಪರಸ್ಪರವಾಗಿ ಸಂಕೇತಮಾತ್ರಕಲ್ಪಿತಗಳೆಂದು ತಿಳಿಯಬೇಕು ॥೬೧-೬೨॥

ಮತ್ತು, ಕಲ್ಲುಪೊಟ್ಟರೆಗಳಲ್ಲಿ ಕಪ್ಪೆಗಳು ಅರಚುತಿರುವಾಗ, ಅವು ಹೊರಗೂ ತಮ್ಮಂ

ಅಸಜ್ಜಡಂ ಚ ಭೇಕಾನಾಂ ಮಿಥೋನ್ತಸ್ತ್ರು ಷಾಂ ತಥಾ ||೬೩||
ಸರ್ವಂ ಸರ್ವಗತಂ ಚಿತ್ತಂ ಚಿದ್ವ್ಯೋಮ್ನಾ ಯತ್ ಪ್ರಚೇತಿತಮ್ |
ಸರ್ಗಾದೌ ಚೋಪನಂ ವಾಯುಃ ಸಇಹಾದ್ಯಾಪಿ ಸಂಸ್ಥಿತಃ ||೬೪||
ಚೇತಿತಂ ಯತ್ ತು ಸೌಷಿರ್ಯಂ ತನ್ನಭಸ್ತತ್ರ ಮಾರುತಃ |
ಸ್ಪನ್ದಾತ್ಮೇತ್ಯಾದಿಸರ್ಗೇಹಾಃ ಪದಾರ್ಥೇಷ್ವಿವ ಚೋಪನಮ್ ||೬೫||
ಚಿತ್ತಂ ತು ಪರಮಾರ್ಥೇ ನ ಸ್ಥಾವರೇ ಜಙ್ಗಮೇ ಸ್ಥಿತಮ್ |
ಚೋಪನಾನ್ಯನಿಲೈರೇವ ಭವನ್ತಿ ನ ಭವನ್ತಿ ಚ ||೬೬||
ಏವಂ ಭ್ರಾನ್ತಿಮಯೇ ವಿಶ್ವೇ ಪದಾರ್ಥಾಃ ಸಂವಿದಂಶವಃ |
ಸರ್ಗಾದಿಷು ಯಥೈವಾಸನ್ ತಥೈವಾದ್ಯಾಪಿ ಸಂಸ್ಥಿತಾಃ ||೬೭||
ಯಥಾ ವಿಶ್ವಪದಾರ್ಥಾನಾಂ ಸ್ವಭಾವಸ್ಯ ವಿಜೃಮ್ಭಿತಮ್ |
ಅಸತ್ಯಮೇವ ಸತ್ಯಾಭಂ ತದೇತತ್ ಕಥಿತಂ ತವ ||೬೮||
ಅಯಮಸ್ತಂ ಗತಃ ಪ್ರಾಯಃ ಪಶ್ಯ ರಾಜಾ ವಿದೂರಥಃ |
ಮಾಲಾಶವಸ್ಯ ಪದ್ಮಸ್ಯ ಪತ್ಯುಸ್ತೇ ಯಾತಿ ಹೃದ್ಗತಮ್ ||೬೯||

ತೆಯೇ ಕಪ್ಪೆಗಳು ಅರಚುತಿರುವುವೆಂದು ತಿಳಿದುಕೊಳ್ಳುವುವು. ಆದರೆ ಈಜ್ಞಾನವು ಅಸತ್ಯವಾಗಿಯೂ ಜಡವಾಗಿಯೂ ಇರುವುದು. ಹೀಗೆಯೇ, ಬ್ರಹ್ಮಾಂಡಮಧ್ಯಗತವಾದ ಜೀವರೂ ಪರಸ್ಪರ ಸಂಕೇತದಿಂದ ನಾಮರೂಪಕಲ್ಪನೆಮಾಡಿಕೊಂಡಿರುವರು ||೬೩||

ಈ ಉದಾಹರಣಗಳಂತೆಯೇ, ಪ್ರಳಯಾಂತದಲ್ಲಿ ಮಾಯಾಂತರ್ಗತವಾಗಿ—ಸರ್ವಾತ್ಮಕವಾಗಿ—ಸರ್ವಗತವಾಗಿರುವ ಯಾವ ಚಿತ್ತವು (ಜಗತ್ತಿನ ಸೂಕ್ಷ್ಮಾವಸ್ಥಾರೂಪವು), ಸೃಷ್ಟ್ಯಾದಿಯಲ್ಲಿ ಚಿದಾಕಾಶದಿಂದ ವಿದಿತವಾಯ್ತೋ, ಅದು ಇಂದಿನವರೆಗೆ—'ಸ್ಪಂದನಾತ್ಮಕವೇ ವಾಯುವು'—ಇತ್ಯಾದಿರೂಪವಾಗಿ, ಏಕವಿಧವಾಗಿ ನಿಂತಿರುವುದು ||೬೪||

ಯಾವುದು ಆಗ ರಂಧ್ರವೆಂದು ತಿಳಿಯಲ್ಪಟ್ಟಿತೋ, ಅದು ಆಕಾಶವಾಯ್ತು; ಅದರಲ್ಲಿ ವಾಯುವು ಚಲನರೂಪವಾಗಿರುವುದು. ಇತ್ಯಾದಿರೂಪವಾಗಿ, ಆದಿಸೃಷ್ಟಿಯಲ್ಲಿಯೇ ಪದಾರ್ಥಗಳ ಚಲನರೂಪವಾದ ಕ್ರಿಯೆಯು ಏರ್ಪಟ್ಟಿರುವುದು ||೬೫||

ಇದರಿಂದಲೇ, ವಾಸ್ತವಿಕವಾಗಿ ಚಿತ್ತವು ಜಂಗಮಮಾತ್ರದಲ್ಲಿರುವುದಲ್ಲದೆ—ಸ್ಥಾವರದಲ್ಲಿಲ್ಲ. ಸ್ಪಂದವುಂಟಾಗಬೇಕಾದರೆ ವಾಯುಶಕ್ತಿಯಿಂದಾಗಬೇಕು. ಅದುಕಾರಣ, ಈ ಸ್ಪಂದವು ಜಂಗಮದಲ್ಲಿ ಉಂಟಾಗುತಲೂ ಸ್ಥಾವರದಲ್ಲಿ ಉಂಟಾಗದೆಯೂ ಇರುವುದು ||೬೬||

ಈ ವಿಧವಾಗಿ ಭ್ರಾಂತಿಮಯವಾದ ಪ್ರಪಂಚದಲ್ಲಿ, ಚೈತನ್ಯದ ಕಿರಣದಂತೆ ಕಾಣುವ ಈ ಪದಾರ್ಥಗಳು, ಆದಿಸೃಷ್ಟಿಯಲ್ಲಿ ಹೇಗೆ ಉಂಟಾದುವೋ,—ಈಗಲೂ ಹಾಗೆಯೇ ಇರುವುವು ||೬೭||

ಎಲೌ ಲೀಲೆ! ಈ ಪ್ರಾಪಂಚಿಕ ಪದಾರ್ಥಗಳ ಸ್ವಭಾವ ವಿಜೃಂಭಣೆಯು ಅಸತ್ಯವಾಗಿದ್ದರೂ ಸತ್ಯವಾಗಿ ಕಾಣುವ ಬಗೆಯನ್ನು ನಿನಗೆ ಹೇಳಿದಂತಾಯ್ತು ||೬೮||

ಈಗ ಇಲ್ಲಿ ನೋಡು; ಈ ವಿದೂರಥ ರಾಜನು, ಇಲ್ಲಿ ಮರಣ ಹೊಂದಿದವನಾಗಿ, ಪುಷ್ಪ ಮಾಲಿಕಾ ಮಧ್ಯದಲ್ಲಿ ಗೋಪಿತನಾಗಿ ಶವರೂಪದಿಂದ ಬಿದ್ದಿರುವ ನಿನ್ನ ಪತಿಯಾದ ಪದ್ಮರಾಜನ ಹೃದಯಮಧ್ಯದಲ್ಲಿ ಪ್ರವೇಶಿಸಲಿಚ್ಛೆಯಿಂದ ಹೋಗುತಿರುವಂತೆ ತೋರುವುದು ||೬೯||

ಪ್ರಬುದ್ಧಲೀಲೋವಾಚ.

ಕೇನ ಮಾರ್ಗೇಣ ದೇವೇಶಿ ಯಾತ್ಯೇಷ ಶವಮಣ್ಡಪಮ್ |
ಏನಮೇವಾಶು ಗಚ್ಛನ್ತ್ಯಾ ಆವಾಂ ಗಚ್ಛಾವಉತ್ತಮೇ ||೨೦||

ಶ್ರೀದೇವ್ಯುವಾಚ.

ಮನುಷ್ಯವಾಸನಾನ್ತಸ್ಸ್ಥಂ ಮಾರ್ಗಮಾಶ್ರಿತ್ಯ ಗಚ್ಛತಿ |
ಏಷೋಽಹಮಪರಂ ಲೋಕಂ ದೂರಂ ಯಾಮೀತಿ ಚಿನ್ಮಯಃ ||೨೧||
ಮಾರ್ಗೇಣೈವಮನೇನೈವ ಯಾವಸ್ತ್ವೇ ಯೇನ ಸಮ್ಮತಮ್ |
ಪರಸ್ಪರೇಚ್ಛಾವಿಚ್ಛಿತ್ತಿಃ ನ ಹಿ ಸೌಹಾರ್ದಬನ್ಧನೀ ||೨೨||

ಶ್ರೀವಸಿಷ್ಠಉವಾಚ.

ಇತಿ ವಿಹಿತಕಥಾಗತಕ್ಲಮಾಯಾಂ ಪರಮುದೃಶಿ ಪ್ರಸೃತೇ ವಿಬೋಧಭಾನೌ |
ನೃಪತಿವರಸುತಾಮನಸ್ಯುದಾರೇ ವಿಗಳಿತಚಿತ್ತಜಡೋ ವಿದೂರಥೋಽಭೂತ್||೨೩||

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಸಂಸಾರ
ಮರಣಾವಸ್ಥಾವರ್ಣನಂ ನಾಮ ಪಞ್ಚಪಞ್ಚಾಶಃ ಸರ್ಗಃ.

ಎಂದು ಶ್ರೀವಾಗ್ದೇವಿ ಹೇಳುತಿರುವಾಗ ಪ್ರಬುದ್ಧಲೀಲೆಯು ಮಾತನಾಡುವಳು:—

ಹೇ ದೇವೇಶ್ವರಿ! ಇವನು ಯಾವ ಮಾರ್ಗದಿಂದ ಆ ಶವವಿರುವ ಮಂಟಪಕ್ಕೆ ಹೋಗುವನು? ಸರ್ವೋತ್ತಮಳೆ! ನಾವಿಬ್ಬರೂ ಇವನನ್ನೇ ನೋಡುತ, ಬೇಗನೆ ಇವನ ಹಿಂದೆಯೇ ಹೋಗುವ ||೨೦||

ಶ್ರೀ ಸರಸ್ವತಿ ಹೇಳುವಳು:—

ಎಲೌ ಲೀಲೆ! ಈಗ ಇವನು—'ನಾನು ದೂರವಾಗಿರುವ ಲೋಕಾಂತರಕ್ಕೆಹೋಗುವೆನು'—ಎಂದು ಜ್ಞಾನಮಯನಾಗಿ, ಮನುಷ್ಯ ವಾಸನಾಂತರ್ಗತವಾದ ಮಾರ್ಗದಲ್ಲಿ ಹೋಗುವನು ||೨೧||

ಈಗ ನಿನಗೆ ಇಷ್ಟವಾಗಿರುವುದರಿಂದ, ನಾವೂ ಈ ಮಾರ್ಗದಲ್ಲಿಯೇ ಅವನಂತೆಯೇ ಹೋಗುವ. ಲೋಕದಲ್ಲಿ ಪರಸ್ಪರವಾಗಿ ಇಚ್ಛೆಗೆ ಪ್ರತಿಬಂಧಮಾಡುವುದು ಸೌಹಾರ್ದನಾಶಕವಾಗುವುದಾದಕಾರಣ, ನಿನ್ನ ಇಚ್ಛೆಯನ್ನು ನಾನೆಂದಿಗೂ ತಡೆಯುವುದಿಲ್ಲ ||೨೨||

ಹೀಗೆ ಲೀಲಾ ಸರಸ್ವತಿಯರ ವೃತ್ತಾಂತವನ್ನು ಹೇಳುತಿರುವ ಶ್ರೀವಸಿಷ್ಠರು, ಶ್ರೀರಾಮನಿಗೆ ಹೇಳುವರು:—

ಅಯ್ಯಾ! ರಾಮ! ಈರೀತಿಯಾಗಿ ಸರಸ್ವತಿಯು ಹೇಳಿದ ಮಾತಿನಿಂದ ಲೀಲೆಯು ಆಯಾಸಪರಿಹಾರವಾದವಳಾಗಲಾಗಿ, ಅತಿ ಪ್ರಶಸ್ತವಾದ ಅವಳ ಚಿತ್ತಾಕಾಶದೊಳಗೆ ಜ್ಞಾನವೆಂಬ ಸೂರ್ಯನುದಯಿಸಲಾಗಿ, ವಿದೂರಥನು—ಆ ದೇಹದಲ್ಲಿದ್ದ ಚಿತ್ತವು ಲೀನವಾದವನಾಗಿ—ಜಡನಾಗಿ ಮರಣೋನ್ಮುಖನಾದನು ||೨೩||

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಸಂಸಾರಮರಣಾವಸ್ಥಾ
ವರ್ಣನೆಯೆಂಬ ಐವ್ವತ್ತೈದನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಷಟ್ಪಞ್ಚಾಶಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಏತಸ್ಮಿನ್ನನ್ತರೇ ರಾಜಾ ಪರಿವೃತ್ತಾಕ್ಷಿತಾರಕಃ ।
ಬಭೂವೈಕತನುಪ್ರಾಣಶೇಷಃ ಶುಷ್ಕಸಿತಾಧರಃ ॥೧॥
ಜೀರ್ಣಪರ್ಣಸವರ್ಣಾಭಃ ಕ್ಷೀಣಪಾಣ್ಡುಮುಖಚ್ಛವಿಃ ।
ಭೃಙ್ಗಧ್ವನಿತಸಚ್ಛಾಯಶ್ವಾಸಕೂಜಾವಿಕೂಣಿತಃ ॥೨॥
ಮಹಾಮರಣಮೂರ್ಛಾನ್ಧಕೂಪೇ ನಿಪತಿತಾಶಯಃ ।
ಅನ್ತರ್ನಿಲೀನನಿಶ್ಶೇಷನೇತ್ರಾದೀನ್ದ್ರಿಯವೃತ್ತಿಮಾನ್ ॥೩॥
ಚಿತ್ರನ್ಯಸ್ತ ಇವಾಕಾರಮಾತ್ರದೃಶ್ಯೋ ವಿಚೇತನಃ ।
ನಿಷ್ಪನ್ದಸರ್ವಾವಯವಃ ಸಮುತ್ಕೀರ್ಣ ಇವೋಪಲೇ ॥೪॥

ಉತ್ಪತ್ತಿಪ್ರಕರಣದಲ್ಲಿ ಐವತ್ತಾರನೆಯ ಸರ್ಗವು.

ಇಹ ತನ್ನೃಪಜೀವಸ್ಯ ವಾಸನಾ ಯಮಪೂರ್ಗತಿಃ ।
ತಯೋರನುಗಮಃ ಪೂರ್ವಪುರಪ್ರಾಪ್ತಿಶ್ಚ ವರ್ಣ್ಯತೇ ॥

ಆ ವಿದೂರಥರಾಜನ ವಾಸನಾಸ್ವರೂಪವೂ, ಅವನು ಯಮಪಟ್ಟಣಕ್ಕೆ ಹೋದುದೂ, ಅವನ ಹಿಂದೆಯೇ ಲೀಲಾಸರಸ್ವತಿಯರು ಅನುಸರಿಸಿ ಹೋದುದೂ, ಪುನಃ ಪೂರ್ವದ (ಪದ್ಮರಾಜನ) ಪಟ್ಟಣವನ್ನು ಸೇರುವಿಕೆಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು:—

ವತ್ಸ ! ರಾಮ ! ಪೂರ್ವೋಕ್ತರೀತಿಯಾಗಿ ಲೀಲಾಸರಸ್ವತಿಯರು ಮಾತನಾಡುತಿರುವಷ್ಟರಲ್ಲಿಯೇ, ಆ ವಿದೂರಥನ ಕಣ್ಣುಗುಡ್ಡೆಗಳು ತಿರುಗಲುಪಕ್ರಮಿಸಿದುವು ; ದೇಹದಲ್ಲಿ ಸಮಸ್ತವಾದ ಇಂದ್ರಿಯವ್ಯಾಪಾರವೂ ನಿಂತುಹೋಗಿ, ಸೂಕ್ಷ್ಮವಾದ ಒಂದು ಪ್ರಾಣವಾಯು ಮಾತ್ರವೇ ಅವಶೇಷವಾಯಿತು. ಅವನ ತುಟಿಯು ಒಣಗಿ ಬೆಳ್ಳಗಾಯಿತು ॥೧॥

ಅವನ ದೇಹಕಾಂತಿಯು, ಜೀರ್ಣವಾದ ಎಲೆಗೆ ಸಮಾನವಾಯಿತು ; ಮುಖಕಾಂತಿಯೆಲ್ಲವೂ ಕುಂದಿಹೋಗಿ ಬೆಳ್ಳಗಾಯಿತು ; ದುಂಬಿಯು ಧ್ವನಿಮಾಡುವಂತೆ, ಶ್ವಾಸವು ಗಂಟಲಿನಲ್ಲಿ ಧ್ವನಿಮಾಡಲುಪಕ್ರಮಿಸಿತು ॥೨॥

ದೊಡ್ಡದಾದ ಮರಣವೆಂಬ ಹಾಳುಭಾವಿಯಲ್ಲಿ ಅವನ ಮನಸ್ಸು ಬಿದ್ದುಬಿಟ್ಟಿತು ; ಅವನ ನೇತ್ರಮುಂತಾದ ಸಕಲೇಂದ್ರಿಯಗಳ ವ್ಯಾಪಾರವೂ ಒಳಗೆ ಅಡಗಿಹೋದುವು ॥೩॥

ಆಗ ಅವನು, ಚಿತ್ರದಲ್ಲಿ ಬರೆಯಲ್ಪಟ್ಟವನಂತೆ, ಕೇವಲ ರೂಪಮಾತ್ರ ಕಾಣಿಸುತ ಚೈತನ್ಯರಹಿತನಾದನು ; ಮತ್ತು, ಕಲ್ಲಿನಲ್ಲಿ ಕೊರೆಯಲ್ಪಟ್ಟಿರುವನಂತೆ, ಸಕಲಶರೀರವೂ ಅಲುಗದವನಾಗಿದ್ದನು ॥೪॥

ಬಹುನಾತ್ರ ಕಿಮುಕ್ತೇನ ತನುದೇಶೇನ ತಂ ಜಹೌ ।
ಪ್ರಾಣಃ ಪಿಪತಿಷುಂ ವೃಕ್ಷಂ ಸ್ವಂ ಪಕ್ಷೀವಾನ್ತರಿಕ್ಷಗಃ ॥೫॥
ತೇ ತಂ ದದೃಶತುರ್ಬಾಲೇ ದಿವ್ಯದೃಷ್ಟೀ ನಭೋಗತಮ್ ।
ಜೀವಂ ಘ್ರಾಣಮಯೀ ಸಂವಿತ್ ಗನ್ಧಲೇಶಮಿವಾನಿಲೇ ॥೬॥
ಸಾ ಜೀವಸಂವಿದ್ಗಗನೇ ವಾತೇನ ಮಿಳಿತಾ ಸತೀ ।
ಖೇ ದೂರಂ ಗನ್ತುಮಾರೇಭೇ ವಾಸನಾನುವಿಧಾಯಿನೀ ॥೭॥
ತಾಮೇವಾನುಸಸಾರಾಥ ಸ್ತ್ರೀದ್ವಯಂ ಜೀವಸಂವಿದಮ್ ।
ಭ್ರಮರೀಯುಗಳಂ ವಾತಲಗ್ನಾಂ ಗನ್ಧಕಲಾಮಿವ ॥೮॥
ತತೋ ಮುಹೂರ್ತಮಾತ್ರೇಣ ಶಾನ್ತೇ ಮರಣಮೂರ್ಛನೇ ।
ಅಮ್ಬರೇ ಬುಬುಧೇ ಸಂವಿತ್ ಗನ್ಧಲೇಖೇವ ವಾಯುನಾ ॥೯॥
ಅಪಶ್ಯತ್ ಪುರುಷಾನ್ ಯಾಮ್ಯಾನ್ ನೀಯಮಾನಂ ಚ ತೈರ್ವಪುಃ ।
ಬನ್ಧುಪಿಣ್ಡಪ್ರದಾನೇನ ಶರೀರಂ ಜಾತಮಾತ್ಮನಃ ॥೧೦॥
ಮಾರ್ಗೇ ಕರ್ಮಫಲೋಲ್ಲಾಸಂ ಅತಿದೂರತರೇ ಸ್ಥಿತಮ್ ।

ಹೆಚ್ಚು ಹೇಳಿ ಪ್ರಯೋಜನವೇನು? ಮರವು ಬೀಳಲುಪಕ್ರಮಿಸಿದರೆ—ಅದನ್ನಾಶ್ರಯಿಸಿಕೊಂಡಿದ್ದ ಪಕ್ಷಿಯು ಅದನ್ನು ಬಿಟ್ಟು ಹಾರಿಹೋಗುವಂತೆ, ಪ್ರಾಣವಾಯುವು ಆ ವಿದೂರಥನ ಶರೀರವನ್ನು ಬಿಟ್ಟು ಹೊರಟು ಹೋಯಿತು ॥೫॥

ಆಗ ಘ್ರಾಣೇಂದ್ರಿಯ ವೃತ್ತಿಯು (ಜ್ಞಾನವು)—ವಾಯುನಿಷ್ಠವಾದ ಗಂಧಪರಮಾಣುವನ್ನು ತಿಳಿದುಕೊಳ್ಳುವಂತೆ, ದಿವ್ಯದೃಷ್ಟಿಯುಳ್ಳವರಾಗಿದ್ದ ಆ ಲೀಲಾಸರಸ್ವತಿಯರು—ಅಂತರಿಕ್ಷದಲ್ಲಿ ಹೋಗುತಿರುವ ಆ ವಿದೂರಥಜೀವವನ್ನು ಕಂಡರು ॥೬॥

ಆ ಜೀವಕಳೆಯು, ಅಂತರಿಕ್ಷದಲ್ಲಿ ವಾಯುವಿನೊಡಗೂಡಿದುದಾಗಿ, ತನ್ನ ಪ್ರಾಕ್ತನ ವಾಸನೆಯನ್ನನುಸರಿಸಿ, ಆಕಾಶಮಾರ್ಗದಲ್ಲಿ ದೂರವಾಗಿ ಹೋಗಲುಪಕ್ರಮಿಸಿತು ॥೭॥

ಬಳಿಕ, ವಾಯುವಿನಲ್ಲಿ ಸೇರಿರುವ ಗಂಧಕಲೆಯನ್ನು ಎರಡು ಹೆಣ್ಣು ದುಂಬಿಗಳು ಅನುಸರಿಸಿ ಹೋಗುವಂತೆ, ಆ ಲೀಲಾಸರಸ್ವತಿಯರು ಆ ಜೀವಕಳೆಯನ್ನೇ ಅನುಸರಿಸಿದರು ॥

ಅನಂತರ ಒಂದು ಮುಹೂರ್ತಮಾತ್ರಕಾಲ ಕಳೆದ ಮೇಲೆ, ಮರಣ ಮೋಹಜ್ಞಾನವು ಶಾಂತವಾಗಲಾಗಿ, ವಾಯುವು ಗಂಧವನ್ನು ಕಂಡುಹಿಡಿಯುವಂತೆ, ಆ ಜೀವಕಲೆಯನ್ನು ವಾಸನಾಮಯದೇಹವು ಕಂಡುಹಿಡಿಯಿತು ॥೯॥

ಹೀಗೆ ವಾಸನಾಮಯವಾದ ದೇಹ ಬಂದ ಬಳಿಕ, ಆ ಜೀವಕಳೆಯು, ಅಲ್ಲಿ ಯಮಭಟರನ್ನೂ,—ಅವರು ತನ್ನ ವಾಸನಾದೇಹವನ್ನು ತೆಗೆದುಕೊಂಡುಹೋಗುತಿರುವುದನ್ನೂ, ಬಂಧುಗಳು ಕೊಟ್ಟ ಪಿಂಡೋದಕದಾನದಿಂದ ತನಗೆ ಪುನಃ ಶರೀರಹುಟ್ಟಿದುದನ್ನೂ ಕಂಡಿತು ॥೧೦॥

ಬಳಿಕ, ಬಹುದೂರ ಮಾರ್ಗಕಳೆದನಂತರದಲ್ಲಿ, ಪ್ರಾಣಿಗಳಿಗೆ ಕರ್ಮಫಲವನ್ನು ಪ್ರಕಾ

ವೈವಸ್ವತಪುರಂ ಪ್ರಾಪ ಜನ್ತುಭಿಃ ಪರಿವೇಷ್ಟಿತಮ್ ‖೧೧‖
ಪ್ರಾಪ್ತಂ ವೈವಸ್ವತಪುರಂ ಆದಿದೇಶ ತತೋ ಯಮಃ ।
ಅಸ್ಯ ಕರ್ಮಾಣ್ಯಶುಭ್ರಾಣಿ ನೈವ ಸನ್ತಿ ಕದಾಚನ ‖೧೨‖
ನಿತ್ಯಮೇವಾವದಾತಾನಾಂ ಕರ್ತಾಯಂ ಶುಭಕರ್ಮಣಾಮ್ ।
ಭಗವತ್ಯಾಃ ಸರಸ್ವತ್ಯಾಃ ವರೇಣಾಯಂ ವಿವರ್ಧಿತಃ ‖೧೩‖
ಪ್ರಾಕ್ತನೋಽಸ್ಯ ಶವೀಭೂತೋ ದೇಹೋಽಸ್ತಿ ಕುಸುಮಾಮ್ಬರೇ ।
ಪ್ರವಿಶತ್ವೇಷ ತಂ ಗತ್ವಾ ತ್ಯಜ್ಯತಾಮಿತಿ ಚೇತಸಾ ‖೧೪‖
ತತಸ್ತ್ಯಕ್ತೋ ನಭೋಮಾರ್ಗೇ ಯನ್ತ್ರೋಪಲಇವ ಚ್ಯುತಃ ‖೧೫‖
ಅಥ ಜೀವಕಲಾ ಲೀಲಾ ಜ್ಞಪ್ತಿಶ್ಚೇತಿ ತ್ರಯಂ ನಭಃ ।
ಪುಪ್ಲುವೇ ಜೀವಲೇಖಾ ತು ರೂಪಿಣ್ಯೌ ತೇ ನ ಪಶ್ಯತಿ ‖೧೬‖
ತಾಮೇವಾನುಸರನ್ತ್ಯೌ ತೇ ಸಮುಲ್ಲಙ್ಘ್ಯ ನಭಸ್ತಲಮ್ ।
ಲೋಕಾನ್ತರಾಣ್ಯತೀತ್ಯಾಶು ವಿನಿರ್ಗತ್ಯ ಜಗದ್ಗೃಹಾತ್ ‖೧೭‖
ದ್ವಿತೀಯಂ ಜಗದಾಸಾದ್ಯ ಭೂಮಣ್ಡಲಮುಪೇತ್ಯ ಚ ।
ತೇ ದ್ವೇ ಸಙ್ಕಲ್ಪರೂಪಿಣ್ಯೌ ಸಙ್ಗತೇ ಜೀವಲೇಖಯಾ ‖೧೮‖

ಶಪಡಿಸತಕ್ಕುದಾಗಿಯೂ ನಾನಾಜಂತುಪರಿವೃತವಾಗಿಯೂ ಇರುವ ಯಮಪಟ್ಟಣವನ್ನು ಸೇರಿತು ॥೧೧॥

ಈ ಜೀವಕಳೆಯು ಯಮಪಟ್ಟಣಕ್ಕೆ ಹೋದೊಡನೆಯೇ, ಆ ಯಮನು ತನ್ನ ಭೃತ್ಯರಿಗೆ ಹೀಗೆ ಆಜ್ಞಾಪಿಸಿದನು. ಇವನು ಪಾಪಕರ್ಮಗಳನ್ನು ಎಂದಿಗೂ ಮಾಡಿಯೇ ಇಲ್ಲ; ಇವನು ಪ್ರತಿದಿನವೂ ಸತ್ಕರ್ಮಗಳನ್ನೇ ಮಾಡತಕ್ಕವನು. ಇದಲ್ಲದೆ, ಆ ಪೂಜ್ಯಳಾದ ಸರಸ್ವತಿಯು ವರವೂ ಇವನಿಗೆ ವಿಶೇಷವಾಗಿರುವುದು. ಇವನ ಪ್ರಾಕ್ತನ ಶರೀರವು, ಪುಷ್ಪಗಳೊಳಗೆ ಮರೆಯಾಗಿರುವುದು; ಇವನು ಹೋಗಿ ಆ ದೇಹವನ್ನು ಪ್ರವೇಶಿಸಲಿ. ಈ ನನ್ನ ಆಜ್ಞೆಯಿಂದ, ನೀವು ಇವನನ್ನು ಬಿಟ್ಟುಬಿಡಿರಿ. ಎಂದು ಆ ಯಮರಾಜನು ಮನಃಪೂರ್ವಕವಾಗಿ ಆಜ್ಞಾಪಿಸಿದನಂತರ, ಆ ಯಮಭಟರು ಜೀವಕಲಾರೂಪನಾಗಿದ್ದ ವಿದೂರಥನನ್ನು ಬಿಟ್ಟುಬಿಟ್ಟರು. ಆಗ ಅವನು ಕವಣೆಕಲ್ಲು ಬಿದ್ದಂತೆ ಆಕಾಶಮಾರ್ಗದಲ್ಲಿ ಇಳಿದವನಾದನು॥ ೧೨—೧೫॥

ಬಳಿಕ, ಆ ಜೀವಕಲೆ ಲೀಲೆ ಸರಸ್ವತಿ–ಈ ಮೂರು ಜನರೂ, ಆಕಾಶಮಾರ್ಗದಲ್ಲಿ ಹಾರಲುಪಕ್ರಮಿಸಿದರು. ಜೀವಕಲೆಯಾದರೋ, ಶರೀರಯುಕ್ತರಾಗಿ ಬರುತಿದ್ದರೂ ಅವರಿಬ್ಬರನ್ನೂ ನೋಡಲಾರದಾಗಿದ್ದಿತು ॥೧೬॥

ಆ ಜೀವಕಲೆಯು ಮುಂದೆ ಹೋಗುತಿರುವಾಗ, ಅದನ್ನೇ ಅನುಸರಿಸಿ ಹಿಂದುಗಡೆ ಹೋಗುತ್ತಿರುವ ಆ ಲೀಲಾಸರಸ್ವತಿಯರು, ಅಂತರಿಕ್ಷವನ್ನು ದಾಟಿ, ಬೇಗನೆ ಅನೇಕ ಲೋಕಾಂತರಗಳನ್ನತಿಕ್ರಮಿಸಿ, ಆ ಜಗತ್ತೆಂಬ ಮನೆಯಿಂದ ಹೊರಟು, ಮತ್ತೊಂದು ಜಗತ್ತನ್ನು ಹೊಂದಿ, ಅಲ್ಲಿನ ಭೂಮಂಡಲವನ್ನೂ ಸೇರಿ, ಅವರಿಬ್ಬರೂ ಕೇವಲಸಂಕಲ್ಪರೂಪವಾದ ಶರೀರವನ್ನು ಧರಿಸಿದವರಾಗಿ, ಆ ಜೀವಲೇಖೆಯೊಡಗೂಡಿ, ಪದ್ಮರಾಜನ ಪಟ್ಟ

ಪದ್ಮರಾಜಪುರಂ ಪ್ರಾಪ್ಯ ಲೀಲಾನ್ತಃಪುರಮಣ್ಡಪಮ್ |
ಸೂರ್ಯಭಾಸೋ ಯಥಾಮ್ಭೋಜಂ ಸುರಭಿಃ ಪವನಂ ಯಥಾ ||೧೯||

ಶ್ರೀರಾಮಉವಾಚ.

ಬ್ರಹ್ಮನ್ ಪ್ರಾಪ್ತಃ ಕಥಮಸೌ ಶವಸ್ಯ ನಿಕಟಂ ಗೃಹಮ್ |
ಕಥಂ ತೇನ ಪರಿಜ್ಞಾತೋ ಮಾರ್ಗೋ ಮೃತಶರೀರಿಣಾ ||೨೦||

ಶ್ರೀವಸಿಷ್ಠಉವಾಚ.

ತಸ್ಯ ಸ್ವವಾಸನಾನ್ತಸ್ಥ ಶವಸ್ಯ ಕಿಲ ರಾಘವ |
ತತ್ ಸರ್ವಂ ಹೃದ್ಗತಂ ಕಸ್ಮಾತ್ ನಾಸೌ ಪ್ರಾಪ್ನೋತಿ ತದ್ಗೃಹಮ್||೨೧||
ಭ್ರಾನ್ತಿಮಾತ್ರಮಸಙ್ಖ್ಯೇಯಂ ಜಗಜ್ಜೀವಕಣೋದರೇ |
ವಟಧಾನಾತರುಮಿವ ಸ್ಥಿತಂ ಕೋ ವಾ ನ ಪಶ್ಯತಿ ||೨೨||
ಯಥಾ ಜೀವದ್ವಪುರ್ಬೀಜಂ ಅಙ್ಕುರಂ ಹೃದಿ ಪಶ್ಯತಿ |
ಸ್ವಭಾವಭೂತಂ ಚಿದಣುಃ ತ್ರೈಲೋಕ್ಯನಿಚಯಂ ತಥಾ ||೨೩||

ಣವನ್ನು ಸೇರಿ, ಅಲ್ಲಿ-ವಾಯುವು ಕಮಲವನ್ನು ಹೊಂದುವಂತೆಯೂ—ಸೂರ್ಯಕಿರಣವು ಪದ್ಮಪುಷ್ಪವನ್ನು ಹೊಂದುವಂತೆಯೂ—ಪರಿಮಳವು ವಾಯುವನ್ನು ಹೊಂದುವಂತೆಯೂ-ಕ್ಷಣದೊಳಗಾಗಿ ಆ ಅಂತಃಪುರಮಂಟಪವನ್ನು ಹೊಂದಿದವರಾದರು ||೧೭—೧೯||

ಹೀಗೆ ವಸಿಷ್ಠರು ಹೇಳುತಿರುವಾಗ, ಶ್ರೀರಾಮನು ಪ್ರಶ್ನೆಮಾಡುವನು:—

ಬ್ರಾಹ್ಮಣೋತ್ತಮರೆ! ಪೂರ್ವದಲ್ಲಿ ದ್ವಿತೀಯಲೀಲೆಯು ಅಲ್ಲಿಗೆ ಬಂದಾಗ, ಅಂತರಿಕ್ಷಮಾರ್ಗದಲ್ಲಿ ಆ ಸರಸ್ವತೀಕುಮಾರಿಯಿದ್ದು ಕರೆದುಕೊಂಡು ಹೋದಳಷ್ಟೆ! ಈಗ ವಿದೂರಥನು ಯಾರ ಸಹಾಯವೂ ಇಲ್ಲದೆಯೇ, ಆ ಮನೆಯನ್ನೂ ಶವಸಮೀಪವನ್ನೂ ಹೇಗೆ ಹೊಂದಿದನು? ಆ ಸೂಕ್ಷ್ಮರೂಪನಾಗಿದ್ದವನು ಮಾರ್ಗವನ್ನು ಹೇಗೆ ಕಂಡುಹಿಡಿದನು ||೨೦||

ಶ್ರೀವಸಿಷ್ಠರು ಉತ್ತರಹೇಳುವರು:—

ಅಯ್ಯಾ! ರಾಘವ! ಆ ವಿದೂರಥಜೀವನಿಗೆ, ಹಿಂದಣ ಜನ್ಮದ ವಾಸನೆ ಹೋಗದಿರುವಾಗಲೇ, ಪ್ರಬಲವಾದ ಪ್ರಾರಬ್ಧದಿಂದ ಮಧ್ಯದಲ್ಲಿ ಮತ್ತೊಂದು ಜನ್ಮವಾಸನೆಯುಂಟಾಯ್ತು; ಅದು ಕ್ಷಯಹೊಂದಿದ ಬಳಿಕ, ಮತ್ತೆ ಪೂರ್ವವಾಸನೆಯೇ ಪ್ರಬುದ್ಧವಾಯ್ತು. ಹೀಗೆ ಆ ವಿದೂರಥಜೀವನಿಗೆ, ಆ ಪದ್ಮರಾಜಶವ ಮುಂತಾದುದೆಲ್ಲವೂ ವಾಸನಾಂತರ್ಗತವಾಗಿದ್ದು, ಆ ಮಾರ್ಗಮುಂತಾದುದೆಲ್ಲವೂ ಹೃದ್ಗತವಾಗಿಯೇ ಇರುವಾಗ, ಅವನು ಆ ಮನೆಯನ್ನು ಹೊಂದದಿರುವುದಕ್ಕೆ ಕಾರಣವೇನಿರುವುದು? ||೨೧||

ಆಲದಬೀಜವು ತನ್ನೊಳಗೆ ಸೂಕ್ಷ್ಮರೂಪದಿಂದಿರುವ ದೊಡ್ಡ ಮರವನ್ನು ಅನುಭವಿಸುತ್ತಿರುವಂತೆ, ಜೀವಪರಮಾಣುವಿನೊಳಗೆ ಅಸಂಖ್ಯಾಕವಾಗಿ ತುಂಬಿರುವ ಕೇವಲ ಭ್ರಾಂತಿಮಾತ್ರವಾದ ಜಗತ್ತನ್ನು ಯಾರುತಾನೆ ಕಾಣದಿರುವರು? ||೨೨||

ಸಜೀವವಾದ ಬೀಜವು, ತನ್ನೊಳಗೆ ಸೂಕ್ಷ್ಮರೂಪವಾಗಿರುವ ಅಂಕುರವನ್ನು ಹೇಗೆ ಅನುಭವಿಸುವುದೋ, ಅರೀತಿಯಾಗಿಯೇ, ಜ್ಞಾನಪರಮಾಣುವು ತನ್ನೊಳಗೆ ಅಡಗಿಕೊಂಡಿರುವ ಈ ತ್ರಿಲೋಕಸಮುದಾಯಗಳನ್ನೂ ಅನುಭಸುತಿರುವುದು ||೨೩||

ನರೋ ಯಥೈಕದೇಶಸ್ಥೋ ದೂರದೇಶಾನ್ತರಸ್ಥಿತಮ್ ।
ಸಮ್ಪಶ್ಯತಿ ನಿಧಾನಂ ಸ್ವಂ ಮನಸಾನಾರತಂ ಸದಾ ॥೨೪॥
ತಥಾ ಸ್ವವಾಸನಾನ್ತಸ್ಸ್ಥಂ ಅಭೀಷ್ಟಂ ಪರಿಪಶ್ಯತಿ ।
ಜೀವೋ ಜಾತಿಶತಾಢ್ಯೋಽಪಿ ಭ್ರಮೋಪರಿಗತೋಽಪಿ ಸನ್ ॥೨೫॥

ಶ್ರೀರಾಮಉವಾಚ.

ಭಗವನ್ ಪಿಣ್ಡದಾನಾದಿವಾಸನಾರಹಿತಾಕೃತಿಃ ।
ಕೀದೃಕ್ ಸಮ್ಪದ್ಯತೇ ಜೀವಃ ಪಿಣ್ಡೋ ಯಸ್ಮೈ ನ ದೀಯತೇ ॥೨೬॥

ಶ್ರೀವಸಿಷ್ಠಉವಾಚ.

ಪಿಣ್ಡೋಽಥ ದೀಯತೇ ಮಾ ವಾ ಪಿಣ್ಡೋ ದತ್ತೋ ಮಮೇತಿ ಚೇತ್ ।
ವಾಸನಾ ಹೃದಿ ಸಂರೂಢಾ ತತ್ಪಿಣ್ಡಫಲಭಾಙ್ನರಃ ॥೨೭॥
ಯಚ್ಚಿತ್ತಂ ತನ್ಮಯೋ ಜನ್ತುಃ ಭವತೀತ್ಯನುಭೂತಯಃ ।
ಸದೇಹೇಷು ವಿದೇಹೇಷು ನ ಭವತ್ಯನ್ಯಥಾ ಕ್ವಚಿತ್ ॥೨೮॥
ಸಪಿಣ್ಡೋಽಸ್ಮೀತಿ ಸಂವಿತ್ತ್ಯಾ ನಿಷ್ಪಿಣ್ಡೋಽಪಿ ಸಪಿಣ್ಡವಾನ್ ।
ನಿಷ್ಪಿಣ್ಡೋಽಸ್ಮೀತಿ ಸಂವಿತ್ತ್ಯಾ ಸಪಿಣ್ಡೋಽಪಿ ನಪಿಣ್ಡವಾನ್ ॥೨೯॥

ಇನ್ನೂ ಕೇಳುವನಾಗು. ಯಾವುದೋ ಒಂದುಕಡೆಯಲ್ಲಿರುವ ಮನುಷ್ಯನು, ದೂರದೇಶದಲ್ಲಿರುವ ತನ್ನ ನಿಧಿಯನ್ನು ಸರ್ವದಾ ಧ್ಯಾನಿಸುತ, ಅದನ್ನು ಹೇಗೆ ಸರ್ವದಾ ನೋಡುತಲೇ ಇರುವನೋ,—ಅರೀತಿಯಾಗಿ, ಈ ಜೀವನು ನೂರಾರು ಜನ್ಮಗಳನ್ನೆತ್ತಿದರೂ—ಭ್ರಾಂತಿಮಧ್ಯದಲ್ಲಿ ಸಿಕ್ಕಿಕೊಂಡಿದ್ದರೂ ತನ್ನ ವಾಸನಾಂತರ್ಗತವಾಗಿರುವ ಅಭೀಷ್ಟವಸ್ತುವನ್ನು ನೋಡುವನು ॥೨೪—೨೫॥

ಪುನಃ ಶ್ರೀರಾಮನು ಮತ್ತೊಂದುವಿಧವಾಗಿ ಪ್ರಶ್ನೆಮಾಡುವನು:—

ಪೂಜ್ಯರೇ ! ತಾವು ಹಿಂದೆ 'ಬಂಧುಗಳು ಕೊಡುವ ಪಿಂಡದಾನಾದಿಗಳಿಂದ ಜೀವರು ಉತ್ತರತ್ರ ಶರೀರಗ್ರಹಣಮಾಡುವರು.' ಎಂದು ಅಪ್ಪಣೆ ಕೊಟ್ಟಿರಲ್ಲವೆ ! ಇದು ಸರ್ವತ್ರ ಸಂಭವಿಸಲಾರದೆಂದು ತೋರುವುದು. ಯಾವ ಒಬ್ಬ ಜೀವನಿಗೆ ಬಂಧುಬಳಗಗಳಾರೂ ಇಲ್ಲದೆ, ಪಿಂಡದಾನಾದಿಗಳು ನಡೆಯುವುದಿಲ್ಲವೋ ಅವನು ಪಿಂಡದಾನಾದಿವಾಸನೆಯೇ ಇಲ್ಲದವನಾಗಿರುವಕಾರಣ, ಅವನಿಗೆ ಯಾವ ಸ್ಥಿತಿಯುಂಟಾಗುವುದು ? ॥೨೬॥

ಶ್ರೀವಸಿಷ್ಠರು ಉತ್ತರಹೇಳುವರು:—

ವತ್ಸ ! ಪಿಂಡವನ್ನು ಕೊಡಲಿ,—ಅಥವಾ ಕೊಡದಿರಲಿ; ತನಗೆ ಪಿಂಡವನ್ನು ಕೊಟ್ಟಿರುವರೆಂದು ಮನಸ್ಸಿನಲ್ಲಿ ವಾಸನೆ ನೆಲೆಸಿಬಿಟ್ಟರೆ, ಅವನು ಪಿಂಡದಾನದಿಂದುಟಾಗುವ ಫಲವನ್ನು ಹೊಂದುವನು ॥೨೭॥

ಚಿತ್ತವು ಯಾವವಿಧವಾಗಿರುವುದೋ, ಆ ವಿಧವಾಗಿಯೇ ಆ ಪ್ರಾಣಿಯಿರುವುದೆಂದು ಸರ್ವತ್ರ ಅನುಭವಸಿದ್ಧವಾಗಿರುವುದು. ಪ್ರಾಣಿಗಳು ಬದುಕಿದ್ದರೂ ಅಥವಾ ಮೃತವಾದರೂ ಈ ನಿಯಮವೆಲ್ಲಿಯೂ ಅನ್ಯಥಾ ಆಗುವದಿಲ್ಲ ॥೨೮॥

ತಾನು ಪಿಂಡದಾನಾದಿಗಳುಳ್ಳವನಾಗಿರುವೆನೆಂದು ತಿಳಿದುಕೊಂಡರೆ, ಪಿಂಡರಹಿತನಾಗಿದ್ದರೂ—ಪಿಂಡಸಹಿತನೇ ಆಗುವನು ; ಅದಲ್ಲದೆ, ತಾನು ನಿಷ್ಪಿಂಡನೆಂದು ತಿಳಿದುಕೊಂಡರೆ, ಪಿಂಡಯುಕ್ತನಾಗಿದ್ದರೂ ಪಿಂಡರಹಿತನೇ ಆಗುವನು ॥೨೯॥

ಯಥಾಭಾವನಮೇತೇಷಾಂ ಪದಾರ್ಥಾನಾಂ ಹಿ ಸತ್ಯತಾ ।
ಭಾವನಾ ಚ ಪದಾರ್ಥೇಭ್ಯಃ ಕಾರಣೇಭ್ಯ ಉದೇತಿ ಹಿ ॥೩೦॥
ಯಥಾ ವಾಸನಯಾ ಜನ್ತೋಃ ವಿಷಮಪ್ಯಮೃತಾಯತೇ ।
ಅಸತ್ಯಃ ಸತ್ಯತಾಮೇತಿ ಪದಾರ್ಥೋ ಭಾವನಾತ್ ತಥಾ ॥೩೧॥
ಕಾರಣೇನ ವಿನೋದೇತಿ ನ ಕದಾಚನ ಕಸ್ಯಚಿತ್ ।
ಭಾವನಾ ಕಾಚಿದಪಿ ನೋ ಇತಿ ನಿಶ್ಚಯವಾನ್ ಭವ ॥೩೨॥
ಕಾರಣೇನ ವಿನಾ ಕಾರ್ಯಂ ಆಮಹಾಪ್ರಳಯಂ ಕ್ವಚಿತ್ ।
ನ ದೃಷ್ಟಂ ನ ಶ್ರುತಂ ಕಿಂಚಿತ್ ಸ್ವಯಂ ತ್ವೇಕೋದಯಾದೃತೇ ॥೩೩॥
ಚಿದೇವ ವಾಸನಾಸೈವ ಧತ್ತೇ ಸ್ವಪ್ನ ಇವಾರ್ಥತಾಮ್ ।
ಕಾರ್ಯಕಾರಣತಾಂ ಯಾತಿ ಸೈವಾಗತ್ಯೇವ ತಿಷ್ಠತಿ ॥೩೪॥

ಶ್ರೀರಾಮ ಉವಾಚ.

ಧರ್ಮೋ ನಾಸ್ತಿ ಮಮೇತ್ಯೇವ ಯಃ ಪ್ರೇತೋ ವಾಸನಾನ್ವಿತಃ ।
ತಸ್ಯ ಚೇತ್ ಸುಹೃದಾ ಭೂರಿ ಧರ್ಮಃ ಕೃತ್ವಾ ಸಮರ್ಪಿತಃ ॥೩೫॥

ಹೀಗೆ ಈ ಪ್ರಾಪಂಚಿಕಪದಾರ್ಥಗಳೆಲ್ಲವೂ ಅವರವರ ಭಾವನಾನುಗುಣವಾಗಿ ಸತ್ಯವಾಗುವುವು. ಹಾಗಾದಮೇಲೆ ಪಿಂಡದಾನಾದಿಗಳನ್ನು ಮಾಡಬೇಕೆಂಬ ಶಾಸ್ತ್ರವಿಧಿಯೇತಕ್ಕೆಂದರೆ, ಈ ಭಾವನೆಯೆಂಬುದು ಕಾರಣಸಾಮಗ್ರಿಯಿಂದ ಹುಟ್ಟಿಯೇತೀರುವುದಾದಕಾರಣ, ಬಂಧುಗಳು ಕೊಟ್ಟ ಪಿಂಡದಾನಾದಿಗಳಿಂದ, ಮೃತನಾದವನಿಗೆ ಆ ಭಾವನೆ ಅವಶ್ಯವಾಗಿ ಹುಟ್ಟುವುದೆಂದು ತಿಳಿಯಬೇಕು ॥೩೦॥

ಈಗ ಇದಕ್ಕೆ ಇನ್ನೊಂದು ದೃಷ್ಟಾಂತವನ್ನು ಕೇಳು. ಒಬ್ಬನು ಗರುಡನನ್ನು ಉಪಾಸನೆ ಮಾಡುತ—ತಾನೇ ಗರುಡನೆಂದು ತಿಳಿದುಕೊಂಡಿದ್ದರೆ, ಹಾವು ಕಚ್ಚಿದರೂ ಅವನು ಸಾಯುವುದಿಲ್ಲ. ಇಲ್ಲಿ ಭಾವನಾಬಲದಿಂದ ವಿಷವೂ ಅಮೃತವಾದಂತೆಯೇ, ಅಸತ್ಯಪದಾರ್ಥವೂ ಭಾವನಾಬಲದಿಂದ ಸತ್ಯವಾಗಿ ಪರಿಣಮಿಸುವುದು ॥೩೧॥

ಅಯ್ಯಾ! ರಾಮ! ಈ ಭಾವನೆಯಾದರೋ, ಕಾರಣವಿಲ್ಲದೆ ಯಾವನಿಗೂ ಎಂದಿಗೂ ಸ್ವಲ್ಪವೂ ಹುಟ್ಟುವುದಿಲ್ಲವೆಂದು ನೀನು ನಿಶ್ಚಯವುಳ್ಳವನಾಗು ॥೩೨॥

ಸೃಷ್ಟ್ಯಾದಿಯಿಂದ ಹಿಡಿದು ಮಹಾಪ್ರಳಯದ ವರೆಗೂ ಎಷ್ಟು ವಿಚಾರಮಾಡಿ ನೋಡಿದರೂ, ಕಾರಣವಿಲ್ಲದೆ ಕಾರ್ಯೋತ್ಪತ್ತಿಯಾದುದನ್ನು ಯಾರೂ ನೋಡಿಯೂ ಇಲ್ಲ;— ಕೇಳಿಯೂ ಇಲ್ಲ. ಆದರೆ, ಸ್ವಯಂಜಾತವಾಗಿ—ನಿತ್ಯವೂ ಉದಯವೊಂದೇ ಉಳ್ಳುದಾಗಿರುವ ಪರಬ್ರಹ್ಮವಸ್ತುವೊಂದು ಮಾತ್ರ ಈ ನಿಯಮಕ್ಕೊಳಪಡುವುದಿಲ್ಲ ॥೩೩॥

ಅಂತು, ಚಿತ್ಪದಾರ್ಥವೇ ವಾಸನೆಯೆನ್ನಿಸುವುದು; ಅದೆಯೇ ಸ್ವಪ್ನಕಾಲದಂತೆ—ಸತ್ಯಪದಾರ್ಥವೆಂಬ ವ್ಯವಹಾರಕ್ಕೊಳಪಡುವುದು; ಮತ್ತು, ಅದೆಯೇ—ಕಾರ್ಯವಾಗಿಯೂ ಕಾರಣವಾಗಿಯೂ ಇರುವುದು. ಹೀಗಿರುವುದರಿಂದ, ಆ ಚಿತ್ತೇ ಈ ಪದ್ಮರಾಜನ ಮನೆಗೂ ಬಂದು ನಿಂತಿತೆಂದು ಪರಮಾರ್ಥವು ॥೩೪॥

ಮತ್ತೆ ರಾಮನು ಪ್ರಶ್ನೆಮಾಡುವನು:—

ಪೂಜ್ಯರೇ! 'ಸಪಿಂಡನಾಗಿದ್ದರೂ ತಾನು ನಿಷ್ಪಿಂಡನೆಂದು ತಿಳಿದುಕೊಂಡವನು ಪಿಂಡರಹಿತನೇ ಆಗುವನು'—ಇತ್ಯಾದಿ ರೀತಿಯಾಗಿ ತಾವು ಹಿಂದೆ ಅಪ್ಪಣೆಕೊಟ್ಟಿರುವಿರಲ್ಲವೆ!

ತತ್ ತದಾತ್ರ ಸ ಕಿಂ ಧರ್ಮೋ ನಷ್ಟಃ ಸ್ಯಾದುತ ವಾ ನ ವಾ ।
ಸತ್ಯಾರ್ಥಾ ವಾಪ್ಯಸತ್ಯಾರ್ಥಾ ಭಾವನಾ ಕಿಂ ಬಲಾಧಿಕಾ ॥೩೬॥

ಶ್ರೀವಸಿಷ್ಠ ಉವಾಚ.

ದೇಶಕಾಲಕ್ರಿಯಾದ್ರವ್ಯಸಮ್ಪತ್ತ್ಯೋದೇತಿ ಭಾವನಾ ।
ಯತ್ರೈವಾಭ್ಯುದಿತಾ ಸಾ ಸ್ಯಾತ್ ಸ ದ್ವಯೋರಧಿಕೋ ಜಯೀ ॥೩೭॥
ಧರ್ಮದಾತುಃ ಪ್ರವೃದ್ಧಾ ಚೇತ್ ವಾಸನಾ ತತ್ ತಯಾ ಕ್ರಮಾತ್ ।
ಆಪೂರ್ಯತೇ ಪ್ರೇತಮತಿಃ ನ ಚೇತ್ ಪ್ರೇತಧಿಯಾ ಶುಭಾ ॥೩೮॥
ಏವಂ ಪರಸ್ಪರಜಯಾತ್ ಜಯತ್ಯತ್ರಾತಿವೀರ್ಯವಾನ್ ।
ತಸ್ಮಾಚ್ಛುಭೇನ ಯತ್ನೇನ ಶುಭಾಭ್ಯಾಸಮುದಾಹರೇತ್ ॥೩೯॥

ಈವಿಷಯದಲ್ಲಿ ನನಗೊಂದು ಸಂಶಯವುಂಟಾಗಿರುವುದು. ಮೃತನಾದ ಯಾವ ಜೀವನು, ತನಗೆ ಧರ್ಮವಿಲ್ಲವೇಇಲ್ಲವೆಂದು ವಾಸನೆಯುಳ್ಳವನಾಗಿರುವನೋ, ಅಂತವನಿಗೆ ಅವನ ಬಂಧುವು ವಿಶೇಷವಾಗಿ ಧರ್ಮವನ್ನು ಮಾಡಿ ಸಮರ್ಪಿಸಿದರೆ, ಆಗ ತಾವು ಹೇಳುವ ರೀತಿಯಾಗಿ ಆ ಧರ್ಮವು ನಿಷ್ಫಲವಾಯ್ತೋ ? ಅಥವಾ ಇಲ್ಲವೋ ? ಆಗ ಬಂಧುಗಳ ವಾಸನೆಯು, ಅವರಿಂದ ಧರ್ಮವು ಮಾಡಲ್ಪಟ್ಟಿರುವ ಕಾರಣ, ಸತ್ಯಾರ್ಥ (ಸತ್ಯವಾದ ವಿಷಯವುಳ್ಳದು) ವೆನ್ನಿಸಲ್ಪಡುವುದು. ಸತ್ತವನಲ್ಲಿರುವ ವಾಸನೆಯಾದರೋ, ಅವನು ಧರ್ಮಮಾಡದೆಯೇ ತಾನು ಧರ್ಮಮಾಡಿದವನೆಂದು ತಿಳಿದುಕೊಂಡಿರುವಕಾರಣ, ಅಸತ್ಯಾರ್ಥವೆನ್ನಿಸಲ್ಪಡುವುದು. ಹೀಗಿರುವುದರಿಂದ, ಅವೆರಡರಲ್ಲಿ ಯಾವುದು ಪ್ರಬಲವು? ಬಂಧುಗಳು ಮಾಡಿದ ಧರ್ಮವು ನಿಷ್ಫಲವಾಗಿ ಮೃತನಾದವನ ವಾಸನೆಯೇ ಪ್ರಬಲವಾಗುವ ಪಕ್ಷದಲ್ಲಿ, ಕೃತಹಾನ(ಮಾಡಿದುದು ಇಲ್ಲವಾಗುವಿಕೆ) ವೆಂಬ ದೋಷವುಂಟಾಗುವುದು. ಹಾಗಲ್ಲದೆ, ಧರ್ಮಮಾಡಿದವರ ವಾಸನೆಯೇ ಪ್ರಬಲವೆನ್ನುವ ಪಕ್ಷದಲ್ಲಿ, ಅವರವರ ಭಾವನೆಯೇ ಮುಖ್ಯವೆಂದೂ ಪದಾರ್ಥಗಳೆಲ್ಲ ಅಸತ್ಯವೆಂದೂ ತಾವು ಹಿಂದೆ ಅಪ್ಪಣೆಕೊಟ್ಟಿದ್ದು ಅಸಂಗತವಾಗುವಂತೆ ಕಾಣುವುದು. ಹೀಗೆ ಉಭಯಥಾಪಿ ವಿರೋಧವುಂಟಾಗುವುದಲ್ಲವೆ! ॥೩೫—೩೬॥

ಇದಕ್ಕೆ ಶ್ರೀ ವಸಿಷ್ಠರು ಸಮಾಧಾನ ಹೇಳುವರು:—

ವತ್ಸ ! ರಾಮ ! ಸರಿಯಾಗಿ ಆಕ್ಷೇಪಣೆಮಾಡಿದೆ. ಇದಕ್ಕೆ ತಕ್ಕಂತೆ ಸಮಾಧಾನವನ್ನೂ ಕೇಳುವನಾಗು. ದೇಶ ಕಾಲ ಕ್ರಿಯೆ ದ್ರವ್ಯ ಇವುಗಳ ಸಾಮಗ್ರಿಗೆ ಸರಿಯಾಗಿ ಭಾವನೆಯುದಯಿಸುವುದು. ಅದುಕಾರಣ, ಅದು ಇವರಿಬ್ಬರೊಳಗೆ ಯಾರ ವಿಷಯದಲ್ಲಿ ಹೆಚ್ಚಾಗಿ ಉದಯಿಸುವುದೋ, ಅವನೇ ಅಧಿಕನೆನ್ನಿಸಿಕೊಂಡು ಗೆಲ್ಲುವನು ॥೩೭॥

ಇದನ್ನೇ ಇನ್ನೂ ವಿಶದವಾಗಿ ಕೇಳು. ಧರ್ಮವನ್ನು ಮಾಡಿ ತತ್ಫಲದಾನ ಮಾಡತಕ್ಕವನ ವಾಸನೆಯು ಪ್ರಬಲವಾಗಿದ್ದರೆ, ಆಗ ಮೃತನಾದವನ ಬುದ್ಧಿಯು ಅದರಿಂದ ಪರಿಪೂರ್ಣವಾಗಿ, ಧರ್ಮಧಾತನ ವಾಸನೆಯೇ ಗೆಲ್ಲುವುದು. ಇಲ್ಲದೆ, ಮೃತನ ವಾಸನೆಯೇ ಪ್ರಬಲವಾದರೆ, ಧರ್ಮಧಾತನ ವಾಸನೆಯು ನಿಷ್ಫಲವಾಗಿ ಮೃತವಾಸನೆಯೇ ಜಯಿಸುವುದು॥

ಹೀಗೆ ಒಂದರಿಂದೊಂದಕ್ಕೆ ಜಯವುಂಟಾಗುವಕಾರಣ, ಇವರಿಬ್ಬರೊಳಗೆ ಯಾವನು ಅತಿಪ್ರಬಲನೋ ಅವನಿಗೇ ಗೆಲುವಾಗುವುದು. ಆದಕಾರಣ, ಪುರುಷನಾದವನು ಶುಭವಾದ ಕಾರ್ಯಗಳನ್ನು ಮಾಡುತ, ಶುಭವಾದ ಅಭ್ಯಾಸ(ವಾಸನೆ)ವನ್ನೇ ಸಂಪಾದಿಸಬೇಕು ॥೩೯॥

ಶ್ರೀರಾಮಉವಾಚ.

ದೇಶಕಾಲಾದಿನಾ ಬ್ರಹ್ಮನ್ ವಾಸನಾ ಸಮುದೇತಿ ಚೇತ್ ।
ತನ್ಮಹಾಕಲ್ಪಸರ್ಗಾದೌ ದೇಶಕಾಲಾದಯಃ ಕುತಃ ॥೪೦॥
ಕಾರಣೇ ಸಮುದೇತೀದಂ ತೈಸ್ತದಾ ಸಹಕಾರಿಭಿಃ ।
ಸಹಕಾರಿಕಾರಣಾನಾಂ ಅಭಾವೇ ವಾಸನಾ ಕುತಃ ॥೪೧॥

ಶ್ರೀವಸಿಷ್ಠಉವಾಚ.

ಏವಮೇತನ್ಮಹಾಬಾಹೋ ಸತ್ಯಾತ್ಮನ್ ನ ಕದಾಚನ ।
ಮಹಾಪ್ರಳಯಸರ್ಗಾದೌ ದೇಶಕಾಲೌ ನ ಕೌಚನ ॥೪೨॥
ಸಹಕಾರಿಕಾರಣಾನಾಂ ಅಭಾವೇ ಸತಿ ದೃಶ್ಯಧೀಃ ।
ನೇಯಮಸ್ತಿ ನ ಚೋತ್ಪನ್ನಾ ನ ಚ ಸ್ಫುರತಿ ಕಾಚನ ॥೪೩॥

ಪುನಃ ಶ್ರೀರಾಮನು ಮತ್ತೊಂದು ವಿಧವಾಗಿ ಶಂಕೆ ಮಾಡುವನು:—

ಬ್ರಹ್ಮರ್ಷಿ ವರ್ಯರೆ! ತಮ್ಮ ಅಪ್ಪಣೆಯಂತೆ ದೇಶ ಕಾಲಾದಿಗಳನ್ನನುಸರಿಸಿ ವಾಸನೆ ಹುಟ್ಟುವ ಪಕ್ಷದಲ್ಲಿ ಮಹಾಪ್ರಳಯಾನಂತರನಾಗುವ ಸೃಷ್ಟಿಯ ಆದಿಯಲ್ಲಿ ದೇಶಕಾಲಾದಿಗಳೆಲ್ಲಿರುವುವು? ॥೪೦॥

ಆಗ ಕಾರಣವಿದ್ದರಲ್ಲವೆ ಇದು (ವಾಸನೆ) ಸಹಕಾರಿಯಾದ ಕಾರಣಗಳಿಂದ ಹುಟ್ಟಬಹುದು! ಸಹಕಾರಿ ಕಾರಣಗಳೇ ಇಲ್ಲದಿರುವಾಗ ವಾಸನೆ ಹುಟ್ಟುವುದೆಲ್ಲಿ? ॥೪೧॥

ಶ್ರೀ ವಸಿಷ್ಠರು ಹೇಳುವರು:—

ಹೇ ಮಹಾಬಾಹೋ! ರಾಮ! ನೀನು ಹೇಳಿದುದು ನಿಶ್ಚಯವೇ ಸರಿ! ಮಹಾಪ್ರಳಯವಾದಾಗ, ಸೃಷ್ಟ್ಯಾದಿಯಲ್ಲಿ, ಕೇವಲ ಸತ್ಯ ಸ್ವರೂಪನಾದ ಆ ಪರಬ್ರಹ್ಮನೊಳಗೆ, ಯಾವ ವಿಧವಾದ ದೇಶ ಕಾಲಗಳೂ ಎಂದಿಗೂ ಸಂಭವಿಸುವುದಿಲ್ಲ ॥೪೨॥

ನೀನು ಹೇಳಿದಂತೆ ಸಹಕಾರಿಯಾದ ಕಾರಣಗಳೇ ಇಲ್ಲದಿರುವಾಗ, ಈ ದೃಶ್ಯಜ್ಞಾನವೊಂದೂ ಇರುವುದಿಲ್ಲ; ಇದು ಹುಟ್ಟುವುದೂ ಇಲ್ಲ; ಇದು ಸ್ಫುರಿಸುವುದೂ ಇಲ್ಲ. 'ಸೋಕಾಮಯತ; ಬಹುಸ್ಯಾಂ ಪ್ರಜಾಯೇಯೇತಿ' ಇತ್ಯಾದಿ ಶ್ರುತಿಗಳಿಂದ ಪ್ರಪಂಚ ಸೃಷ್ಟಿಯು ಉಕ್ತವಾಗುವುದಲ್ಲವೆ! ಅದಕ್ಕೆ ಗತಿಯೇನು?— ಎಂದರೆ,—ಆ ಶ್ರುತಿಗಳೆಲ್ಲ ಪ್ರಪಂಚಸೃಷ್ಟಿಯನ್ನು ಹೇಳುವುದಕ್ಕಾಗಿ ಹೊರಟುವುಗಳಲ್ಲ. ಯಾವ ವಾಕ್ಯಕ್ಕೆ ಅರ್ಥ ಮಾಡಬೇಕಾದರೂ, ಉಪಕ್ರಮೋಪಸಂಹಾರಗಳನ್ನು ನೋಡಿಕೊಂಡು ಅದಕ್ಕನುಕೂಲವಾಗಿ ಅರ್ಥಮಾಡಬೇಕಲ್ಲವೆ! ಆ ಶ್ರುತಿಯಿರುವ ಪ್ರಕರಣವನ್ನು ಕ್ರಮವಾಗಿ ವಿಚಾರ ಮಾಡಿದರೆ, ಪ್ರಪಂಚಸೃಷ್ಟಿಯಾಯ್ತೆಂಬುದನ್ನು ಮುಖ್ಯವಾಗಿ ಹೇಳುವುದಕ್ಕೆ ಆ ಶ್ರುತಿ ಹೊರಟಿಲ್ಲವೆಂಬುದು ಸ್ಪಷ್ಟವಾಗುವುದು. ಮತ್ತೇನೆನ್ನುವೆಯೋ?—ಆ ಪ್ರಕರಣದಲ್ಲಿ ಮೋಕ್ಷವನ್ನು ಹೇಳುವುದಕ್ಕೆ ಉಪಕ್ರಮಿಸಿರುವುದರಿಂದ, ಆದರಲ್ಲಿ ನಿಷ್ಪ್ರಪಂಚತ್ವ(ಪ್ರಪಂಚವಿಲ್ಲದಿರುವಿಕೆ)ವನ್ನು ತೋರಿಸಬೇಕಾಗಿಬಂದಕಾರಣ, ಆಪಾತತಃ ಪ್ರತೀಯಮಾನವಾದ ದ್ವೈತವು (ಭೇದ) ಅಸತ್ಯವೆಂದು ಸ್ಪಷ್ಟಪಡಿಸುವುದಕ್ಕೋಸ್ಕರ ಮಧ್ಯದಲ್ಲಿ ಸೃಷ್ಟಿಕ್ರಮವೂ ಹೇಳಲ್ಪಟ್ಟಿರುವುದಲ್ಲದೆ, ಆ ಶ್ರುತಿಗೆ ಸೃಷ್ಟಿನಿರೂಪಣೆಯೇ ಮುಖ್ಯಕಾರ್ಯವಲ್ಲವೆಂದು ತಿಳಿಯಬೇಕು ॥೪೩॥

ದೃಶ್ಯಸ್ಯಾಸಮ್ಭವಾದೇವ ಕಿಂಚಿದ್ಯದ್ದೃಶ್ಯತೇ ತ್ವಿದಮ್ ।
ತದ್ಬ್ರಹ್ಮೈವ ಸ್ವಚಿದ್ರೂಪಂ ಸ್ಥಿತಮಿತ್ಥಮನಾಮಯಮ್ ॥೪೪॥
ಏತಚ್ಚಾಗ್ರೇ ಯುಕ್ತಿಶತೈಃ ಕಥಯಿಷ್ಯಾಮ ಏವ ತೇ ।
ಏತದರ್ಥಂ ಪ್ರಯತ್ನೋಽಯಂ ವರ್ತಮಾನಕಥಾಂ ಶೃಣು ॥೪೫॥
ಏವಂ ದದೃಶತುಃ ಪ್ರಾಪ್ತೇ ಮನ್ದಿರಂ ಸುನ್ದರೋದರಮ್ ।
ಕೀರ್ಣಂ ಪುಷ್ಪೋಪಹಾರೇಣ ವಸನ್ತಮಿವ ಶೀತಲಮ್ ॥೪೬॥
ಪ್ರಶಾನ್ತಾಚಾರಸಂರಮ್ಭರಾಜಧಾನ್ಯಾ ಸಮನ್ವಿತಮ್ ।
ಮನ್ದಾರಕುನ್ದಮಾಲ್ಯಾದಿಶವಂ ತತ್ರ ಸಮಂ ಸ್ಥಿತಮ್ ।
ಮನ್ದಾರಕುನ್ದಸ್ರಗ್ದಾಮವೃತಾಮ್ಬರಬೃಹಚ್ಛವಮ್ ॥೪೭॥
ಶವಶಯ್ಯಾಶಿರಸ್ಥಾಗ್ರ್ಯಪೂರ್ಣಕುಮ್ಭಾದಿಮಙ್ಗಳಮ್ ।
ಅನಿವೃತ್ತಗೃಹದ್ವಾರಗವಾಕ್ಷಕಠಿನಾರ್ಗಳಮ್ ॥೪೮॥
ಪ್ರಶಾನ್ತ್ಯದ್ದೀಪಕಾಲೋಕಶ್ಯಾಮಲಾಮಲಭಿತ್ತಿಕಮ್ ।
ಗೃಹೈಕದೇಶಸಂಸುಪ್ತಮುಖಶ್ವಾಸಸಮಾಕೃತಮ್ ॥೪೯॥

ಹೀಗೆ ದೃಶ್ಯವು ಸುತರಾಂ ಅಸಂಭವವಾಗಿರುವುದರಿಂದ, ನಮ್ಮ ಇಂದ್ರಿಯಗೋಚರವಾಗತಕ್ಕ ಈ ಸಮಸ್ತವೂ ಆ ಚಿದಾಕಾರವಾದ ನಿನುಪಾಧಿಕವಾದ ಪರಬ್ರಹ್ಮವಸ್ತುವೇ ಎಂದು ತಿಳಿಯಬೇಕು ॥೪೪॥

ಅಯ್ಯಾ ! ರಾಮ ! ಇದೇವಿಷಯವನ್ನು ಮುಂದೆಯೂ ಅನೇಕ ಯುಕ್ತಿಗಳಿಂದ ನಿನಗೆ ಹೇಳುವೆವು! ನಾವು ಈಗ ನಿನಗೆ ಈ ಉಪದೇಶ ಮಾಡುವುದಕ್ಕೆ ಪ್ರಯತ್ನಪಟ್ಟಿರುವುದೇ ಇದಕ್ಕೋಸ್ಕರ. ಆದುಕಾರಣ, ಈಗ ಪ್ರಸ್ತುತವಾಗಿರುವ ಕಥೆಯನ್ನು ಮುಂದಕ್ಕೆ ಕೇಳು ॥೪೫॥

ನಾನು ಹಿಂದೆ ಹೇಳಿದಂತೆ, ಆ ಲೀಲಾಸರಸ್ವತಿಯರು ಬಂದವರಾಗಿ, ಅತಿಸುಂದರವಾಗಿಯೂ ಪುಷ್ಪೋಪಹಾರ(ಹೂವೆರಚುವುದು) ದಿಂದ ವ್ಯಾಪ್ತವಾಗಿ ವಸಂತಋತುವಿನಂತೆ ಶೀತವಾಗಿಯೂ ಇರುವ ಆ ಅರಮನೆಯನ್ನು ಕಂಡರು ॥೪೬॥

ಆಗ, ಆ ರಾಜಧಾನಿಯಲ್ಲಿದ್ದ ಜನರೆಲ್ಲರೂ ತಂತಮ್ಮ ಕೆಲಸಗಳನ್ನು ನಿಲ್ಲಿಸಿಬಿಟ್ಟಿದ್ದರು. ಕುಂದ ಮಂದಾರ ಮೊದಲಾದ ಪುಷ್ಪಗಳಿಂದ ಆ ಶವವು ಮುಚ್ಚಲ್ಪಟ್ಟಿದ್ದಿತು ; ಮತ್ತು ಕುಂದ ಮಂದಾರಾದಿ ಪುಷ್ಪಮಾಲಿಕೆಗಳಿಂದ ಆ ಶವವಿರುವ ಮಂಟಪವನ್ನೆಲ್ಲ ಅಲಂಕರಿಸಿದ್ದರು ॥೪೭॥

ಆ ಶವದ ಶಿರಃಪ್ರದೇಶದಲ್ಲಿ, ಪೂರ್ಣಕುಂಭ ಮೊದಲಾಗಿರುವ ಉತ್ತಮವಾದ ಮಂಗಳ ದ್ರವ್ಯಗಳನ್ನಿಟ್ಟಿದ್ದರು. ಅಲ್ಲಿ ಮನೆಯ ಬಾಗಿಲಿಗೂ ಕಿಟಕಿಯ ಬಾಗಿಲಿಗೂ ಹಾಕಿದ್ದ ದೊಡ್ಡ ಅಗಳಿಯನ್ನು—ಇನ್ನೂ ತೆಗದೇ ಇರಲಿಲ್ಲ ॥೪೮॥

ಆ ಮನೆಯಲ್ಲಿ, ಆಗತಾನೆ ದೀಪವಾರುತಿರುವುದರಿಂದ, ಸ್ವಭಾವತಃ ಶುಭ್ರವಾಗಿದ್ದ ಗೋಡೆಗಳೆಲ್ಲವೂ ಸ್ವಲ್ಪಮಲಿನವಾಗಿ ಕಾಣುತಿದ್ದುವು. ಅಲ್ಲಿಯೇ ಒಂದುಕಡೆಯಲ್ಲಿ ಮಲಗಿಕೊಂಡಿದ್ದ ಜನರು ಬಿಡುತಿರುವ ನಿಶ್ವಾಸಮಾರುತವು, ಆ ಮನೆಯಲ್ಲೆಲ್ಲ ತುಂಬಿದ್ದಿತು ॥೪೯॥

ಸಮ್ಪೂರ್ಣಚನ್ದ್ರಸಕಲೋದಯಕಾನ್ತಿಕಾನ್ತಂ
ಸೌನ್ದರ್ಯನಿರ್ಜಿತಪುರನ್ದರಮನ್ದಿರರ್ದ್ಧಿ ।
ವೈರಿಞ್ಚಪದ್ಮಮುಕುಳಾನ್ತರಚಾರುಶೋಭಂ
ನಿಶ್ಶಬ್ದಮನ್ದಮಿವ ಮಙ್ಗಳಮಿನ್ದುಕಾನ್ತಮ್ ॥೫೦॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಮರಣಾನನ್ತರ ಪ್ರೇತವ್ಯವಸ್ಥಾ ನಾಮ ಷಟ್ಪಞ್ಚಾಶಃ ಸರ್ಗಃ.

ಆ ಅರಮನೆಯು ಹೊರಗಡೆಯಲ್ಲಿ, ಪೂರ್ಣಚಂದ್ರೋದಯವಾಗಿ- ಅದರ ಕಾಂತಿಯು ಮನೋಹರವಾಗಿ ವ್ಯಾಪಿಸಿದ್ದಿತು; ಒಳಭಾಗವಾದರೋ, ಚತುರ್ಮುಖನಿಗೆ ಉತ್ಪತ್ತಿಸ್ಥಾನಭೂತವಾದ ಶ್ರೀಮನ್ನಾರಾಯಣನ ನಾಭಿಕಮಲದ ಅಂತರ್ಭಾಗದಂತೆ ಶೋಭಿಸುತಿದ್ದಿತು. ಇದರ ಸೌಂದರ್ಯದಿಂದ ಇಂದ್ರಭವನವೂ ಪರಾಜಿತವಾಗಿದ್ದಿತು. ಅಲ್ಲಿ ಯಾವ ಶಬ್ದವೂ ಇಲ್ಲದುದರಿಂದ, ಕೇವಲಸ್ತಬ್ಧವಾಗಿರುವಂತೆ ತೋರಿತು. ಹೀಗೆ ಪ್ರಕಾಶಮಾನವಾಗಿಯೂ ನಿರ್ಮಲವಾಗಿಯೂ ಚಂದ್ರನಂತೆ ಆಪ್ಯಾಯಕವಾಗಿಯೂ ಇರುವ ಆ ಅರಮನೆಯನ್ನು, ಲೀಲಾಸರಸ್ವತಿಯರು ಪ್ರವೇಶಿಸಿದರು ॥೫೦॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಮರಣಾನಂತರ ಪ್ರೇತವ್ಯವಸ್ಥೆಯೆಂಬ ಐವತ್ತಾರನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಸಪ್ತಪಞ್ಚಾಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ತತೋ ದದೃಶತುಸ್ತತ್ರ ಶವಶಯ್ಯೈಕಪಾರ್ಶ್ವಗಾಮ್ ।
ಲೀಲಾಂ ವಿದೂರಥಸ್ಯಾಗ್ರೇ ಮೃತಾಂ ತೇ ಪ್ರಥಮಾಗತಾಮ್ ॥೧॥
ಪ್ರಾಗ್ವೇಷಾಂ ಪ್ರಾಕ್ಸಮಾಚಾರಾಂ ಪ್ರಾಗ್ದೇಹಾಂ ಪ್ರಾಕ್ಸವಾಸನಾಮ್ ।
ಪ್ರಾಕ್ತನಾಕಾರಸದೃಶೀಂ ಸರ್ವಾಙ್ಗಸುನ್ದರೀಮ್ ॥೨॥
ಪ್ರಾಗ್ರೂಪಾವಯವಸ್ಪನ್ದಾಂ ಪ್ರಾಗಮ್ಬರಪರೀವೃತಾಮ್ ।
ಪ್ರಾಗ್ಭೂಷಣಭರಚ್ಛನ್ನಾಂ ಕೇವಲಂ ತತ್ರ ಸಂಸ್ಥಿತಾಮ್ ॥೩॥
ಗೃಹೀತಚಾಮರಾಂ ಚಾರು ವೀಜಯನ್ತೀಂ ಮಹೀಪತಿಮ್ ।
ಉದ್ಯಚ್ಚನ್ದ್ರಾಮಿವ ದಿವಂ ಭೂಷಯನ್ತೀಂ ಮಹೀತಲಮ್ ॥೪॥

ಉತ್ಪತ್ತಿಪ್ರಕರಣದಲ್ಲಿ ಐವತ್ತೇಳನೆಯ ಸರ್ಗವು.

ಲೀಲಾನ್ತರೇಕ್ಷಾ ಲೀಲಾಯಾಃ ದೇಹಮಿಥ್ಯಾತ್ವಮುಚ್ಯತೇ ।
ಯೋಗಿನಾಂ ಚ ಶರೀರಸ್ಯ ಆತಿವಾಹಿಕತೋದಯಃ ॥

ಪದ್ಮರಾಜನ ಅಂತಃಪುರದಲ್ಲಿ ಲೀಲೆಯು ಮತ್ತೊಬ್ಬ ಲೀಲೆಯನ್ನು ಕಂಡುದುದೂ, ದೇಹವು ಮಿಥ್ಯಾಭೂತವೆಂಬ ವಿಷಯವೂ, ಯೋಗಿಗಳು ಸ್ಥೂಲದೇಹದಲ್ಲಿಯೇ ಸೂಕ್ಷ್ಮ ದೇಹವನ್ನು ಪಡೆಯುವ ಪ್ರಕ್ರಮವೂ ಕೂಡ, ಈ ಸರ್ಗದಲ್ಲಿ ಹೇಳಲ್ಪಡುವುವು.

ಪುನಃ ಶ್ರೀ ವಸಿಷ್ಠರು ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು:—

ವತ್ಸ! ರಾಮ! ಹಿಂದೆ ಹೇಳಿದಂತೆ, ಆ ಲೀಲಾಸರಸ್ವತಿಯರಿಬ್ಬರೂ, ತಾವು ಪದ್ಮರಾಜನ ಅಂತಃಪುರವನ್ನು ಪ್ರವೇಶಿಸುವುದರೊಳಗಾಗಿ, ಹಿಂದೆ ವಿದೂರಥನ ಪತ್ನಿಯಾಗಿದ್ದು ಮೃತಳಾಗಿದ್ದ ಲೀಲೆಯು—ತಮಗಿಂತ ಮುಂಚೆಯೇ ಅಲ್ಲಿಗೆ ಬಂದು—ಶವದ ಒಂದು ಪಾರ್ಶ್ವದಲ್ಲಿ ನಿಂತಿರುವುದನ್ನು ನೋಡಿದರು ॥೧॥

ಇವರಿಬ್ಬರೂ ನೋಡುವಾಗ, ಆ ಲೀಲೆಯು, ಪೂರ್ವದಂತೆಯೇ ವೇಷವುಳ್ಳವಳಾಗಿಯೂ, ಹಿಂದಿನ ನಡತೆಯುಳ್ಳವಳಾಗಿಯೂ, ಪೂರ್ವದ ದೇಹ—ಪೂರ್ವದ ವಾಸನೆ—ಪೂರ್ವದ ರೂಪ—ಇವುಗಳುಳ್ಳವಳಾಗಿಯೂ, ಪೂರ್ವದಂತೆಯೇ ಅವಯವವ್ಯಾಪಾರವುಳ್ಳವಳಾಗಿಯೂ, ಹಿಂದೆ ಉಟ್ಟಿದ್ದ ವಸ್ತ್ರವನ್ನೇ ಉಟ್ಟಿರತಕ್ಕವಳಾಗಿಯೂ, ಹಿಂದಿನ ಒಡವೆಗಳನ್ನು ತೊಟ್ಟಿರತಕ್ಕವಳಾಗಿಯೂ ಇದ್ದಳು. ಆದರೆ, ಅವಳಿರತಕ್ಕ ಸ್ಥಳ ಮಾತ್ರ, ಹಿಂದೆ ವಿದೂರಥನ ಮನೆಯಾಗಿಯೂ ಈಗ ಪದ್ಮರಾಜನ ಮನೆಯಾಗಿಯೂ ಇದ್ದಿತು ॥೨-೩॥

ಆಗ ಅವಳು, ಕೈಯಲ್ಲಿ ಚಾಮರವನ್ನು ಹಿಡಿದುಕೊಂಡು ಪದ್ಮರಾಜನನ್ನು ಬೀಸುತ, ಚಂದ್ರೋದಯವಾಗಿರುವ ಅಂತರಿಕ್ಷದಂತೆ, ಭೂತಲವನ್ನಲಂಕರಿಸುತಿದ್ದಳು ॥೪॥

ಮೌನಸ್ಥಾಂ ವಾಮಹಸ್ತಸ್ಥವದನೇನ್ದುತಯಾನತಾಮ್ |
ಭೂಷಣಾಂಶುಲತಾಪುಷ್ಪೈಃ ಫುಲ್ಲಾಮಿವ ವನಸ್ಥಲೀಮ್ ||೫||
ಕುರ್ವಾಣಾಂ ವೀಕ್ಷಿತೈರ್ದಿಕ್ಷು ಮಾಲತ್ಯುತ್ಪಲವರ್ಷಣಮ್ |
ಸೃಜನ್ತೀಮಾತ್ಮಲಾವಣ್ಯಾತ್ ಇನ್ದುಮಿನ್ದುಂ ನಭೋದಿತಮ್ ||೬||
ನರಪಾಲಾತ್ಮನೋ ವಿಷ್ಣೋಃ ಲಕ್ಷ್ಮೀಮಿವ ಸಮಾಗತಾಮ್ |
ಉದಿತಾಂ ಪುಷ್ಪಸಮ್ಭಾರಾತ್ ಇವ ಪುಷ್ಪಾಕರಶ್ರಿಯಮ್ ||೭||
ಭರ್ತುರ್ವದನಕೇ ನ್ಯಸ್ತದೃಷ್ಟಿಮಿಷ್ಟವಿಚೇಷ್ಟಿತಾಮ್ |
ಕಿಂಚಿತ್ ಪ್ರಮ್ಲಾನವದನಾಂ ಮ್ಲಾನಚನ್ದ್ರಾಂ ನಿಶಾಮಿವ ||೮||
ತಾಭ್ಯಾಂ ಸಾ ಲಲನಾ ದೃಷ್ಟಾ ತಯಾ ತೇ ತು ನ ಲಕ್ಷಿತೇ |
ಯಸ್ಮಾತ್ ತೇ ಸತ್ಯಸಙ್ಕಲ್ಪೇ ಸಾ ನ ತಾವತ್ ತಥೋದಿತಾ ||೯||

ಶ್ರೀರಾಮಉವಾಚ.

ತಸ್ಮಿನ್ ಪ್ರದೇಶೇ ಸಾ ಪೂರ್ವಲೀಲಾ ಸಂಸ್ಥಾಪ್ಯ ದೇಹಕಮ್ |
ಧ್ಯಾನೇನ ಜ್ಞಪ್ತಿಸಹಿತಾ ಗತಾಭೂದಿತಿ ವರ್ಣಿತಮ್ ||೧೦||

ಕೇವಲ ಮೌನವನ್ನಾಶ್ರಯಿಸಿ, ಎಡಗೈಯಮೇಲೆ ಮುಖವನ್ನಿಟ್ಟುಕೊಂಡು, ತಲೆ ಬಾಗಿಸಿ ನಿಂತಿದ್ದಳು. ಅವಳ ಮೈಮೇಲೆ ವಿಶೇಷವಾಗಿ ಆಭರಣಕಾಂತಿಯು ವ್ಯಾಪಿಸಿರುವುದರಿಂದ, ಅವಳು- ಹೂವುಬಿಟ್ಟಿರುವ ಅರಣ್ಯಪ್ರದೇಶದಂತೆ ಶೋಭಿಸುತ್ತಿದ್ದಳು ॥೫॥

ಅವಳ ಕಟಾಕ್ಷಪ್ರಸರಣೆಯಿಂದ, ಆ ಮನೆಯಲ್ಲೆಲ್ಲ ಮಾಲತೀಪುಷ್ಪಗಳನ್ನೂ ಉತ್ಪಲ (ಕನ್ನೈದಲೆ) ಪುಷ್ಪಗಳನ್ನೂ ವರ್ಷಿಸುತಿರುವಂತೆ ಕಾಣಿಸಿತು. ಅಂತರಿಕ್ಷದಲ್ಲಿ ಕ್ಷಯಿಸಿ ಹೋದ ಚಂದ್ರನನ್ನು, ಅವಳು ತನ್ನ ಲಾವಣ್ಯದಿಂದ ಪದೇಪದೇ ಸೃಷ್ಟಿಮಾಡುವಂತಿದ್ದಳು॥

ರಾಜನ ಜನ್ಮವನ್ನೆತ್ತಿ ಅವತರಿಸಿರುವ ಶ್ರೀಮಹಾವಿಷ್ಣುವನ್ನು ನೋಡಿ, ಲಕ್ಷ್ಮೀದೇವಿಯು ತಾನೂ ಈ ಲೀಲಾರೂಪಳಾಗಿ ಅವತರಿಸಿರುವಂತೆ ತೋರಿತು ; ಅಲ್ಲಿ ವಿಶೇಷವಾಗಿ ಪುಷ್ಪರಾಶಿ ಹಾಕಿರುವುದರಿಂದ, ಸಾಕ್ಷಾತ್ ವಸಂತಲಕ್ಷ್ಮಿಯೇ ಅವತರಿಸಿರುವಂತಿದ್ದಳು ॥೭॥

ತನಗೆ ಎಷ್ಟು ಕೆಲಸ ಮಾಡಬೇಕೆಂದು ತೋರಿದರೂ, ತನ್ನ ದೃಷ್ಟಿಯನ್ನು ಪತಿಯ ಮುಖದಮೇಲೆಯೇ ಇಟ್ಟಿದ್ದಳು; ಸ್ವಲ್ಪ ಬಾಡಿದ ಮುಖವುಳ್ಳವಳಾಗಿದ್ದಕಾರಣ, ಕಳೆ ಗುಂದಿದ ಚಂದ್ರನುಳ್ಳ ರಾತ್ರಿಯಂತೆ ಕಾಣಿಸುತಿದ್ದಳು ॥೮॥

ಆಗ, ಅವರಿಬ್ಬರೂ ಅವಳನ್ನು ನೋಡಿದರು ; ಅವಳುಮಾತ್ರ ಇವರನ್ನು ನೋಡಲಿಲ್ಲ. ಕಾರಣವೇನೆಂದರೆ,—ಅವರಿಬ್ಬರೂ ಸತ್ಯಸಂಕಲ್ಪರಾಗಿದ್ದರು ; ಅವಳಾದರೋ, ಆರೀತಿಯಾಗಿ ಉದಯಿಸಿರಲಿಲ್ಲ ॥೯॥

ಶ್ರೀರಾಮನು ಪ್ರಶ್ನೆಮಾಡುವನು:—

ಪೂಜ್ಯರೆ! ಹಿಂದೆ ತಾವು ಅಪ್ಪಣೆಕೊಟ್ಟಾಗ,—‘ ಆ ಪೂರ್ವಲೀಲೆಯು ಪದ್ಮರಾಜನ ಮನೆಯಲ್ಲಿ ದೇಹವನ್ನು ಇರಿಸಿಬಿಟ್ಟು, ಧ್ಯಾನಬಲದಿಂದ ಸರಸ್ವತೀದೇವಿಯೊಡನೆ ಹೊರಟು ಹೋದಳು ’ ಎಂದು ವರ್ಣಿಸಿದಿರಿ ॥೧೦॥

ಕಿಮಿದಾನೀಂ ಸ ಲೀಲಾಯಾಃ ದೇಹಸ್ತತ್ರ ನ ವರ್ಣಿತಃ ।
ಕಿಂಸಮ್ಪನ್ನಃ ಕ್ವ ವಾ ಯಾತಃ ಇತಿ ಮೇ ಕಥಯ ಪ್ರಭೋ ॥೧೧॥

ಶ್ರೀವಸಿಷ್ಠಉವಾಚ.

ಕ್ವಾಸೀಲ್ಲೀಲಾಶರೀರಂ ತತ್ ಕುತಸ್ತಸ್ಯಾಸ್ತಿ ಸತ್ಯತಾ ।
ಕೇವಲಾ ಭ್ರಾನ್ತಿರೇವಾಭೂತ್ ಜಲಬುದ್ಧಿರ್ಮರಾವಿವ ॥೧೨॥
ಆತ್ಮೈವೇದಂ ಜಗತ್ ಸರ್ವಂ ಕುತೋ ದೇಹಾದಿಕಲ್ಪನಾ ।
ಬ್ರಹ್ಮೈವಾನನ್ದರೂಪಂ ಸತ್ ಯತ್ ಪಶ್ಯಸಿ ತದೇವ ಚಿತ್ ॥೧೩॥
ಯಥೈವ ಬೋಧೇ ಲೀಲಾಸೌ ಪರಿಣಾಮಮಿತಾ ಕ್ರಮಾತ್ ।
ಪರೇ ತಥೈವ ತಸ್ಮಾತ್ ತತ್ ಹಿಮವದ್ಗಳಿತಂ ವಪುಃ ॥೧೪॥
ಆತಿವಾಹಿಕದೇಹೇನ ದೃಶ್ಯಂ ಯದವಲೋಕಿತಮ್ ।
ಭೂಮ್ಯಾದಿನಾಮ ತಸ್ಯೈವ ಕೃತಂ ತಚ್ಚಾಧಿಭೌತಿಕಮ್ ॥೧೫॥
ವಾಸ್ತವೇನ ತು ರೂಪೇಣ ಭೂಮ್ಯಾದ್ಯಾತ್ಮಾಧಿಭೌತಿಕಃ ।
ನ ಶಬ್ದೇನ ನ ಚಾರ್ಥೇನ ಸತ್ಯಾತ್ಮಾ ಶಶಶೃಙ್ಗವತ್ ॥೧೬॥

ಈಗ ಆ ದೇಹವನ್ನು ಅಲ್ಲೇಕೆ ವರ್ಣಿಸಲಿಲ್ಲ? ಹೇ ಗುರೋ! ಈಗ ಆ ದೇಹವೇ ನಾಯ್ತು? ಎಲ್ಲಿಗಾದರೂ ಹೋಯ್ತೆ?—ಈ ವಿಷಯವನ್ನು ವಿಶದವಾಗಿ ಅಪ್ಪಣೆಕೊಡಿಸಬೇಕು ॥೧೧॥

ಶ್ರೀ ವಸಿಷ್ಠರು ಉತ್ತರಹೇಳುವರು :—

ವತ್ಸ! ಆಗ ಪೂರ್ವಲೀಲೆಗೆ ಆತಿವಾಹಕ ದೇಹವೆಂಬ ಬುದ್ಧಿಯುದಯಿಸಿಬಿಟ್ಟಿದ್ದಕಾರಣ, ಅಲ್ಲಿ ಆಧಿಭೌತಿಕವಿಷಯವನಾವಶ್ಯಕವಾಯ್ತು. ಅಜ್ಞದೃಷ್ಟ್ಯಾ ಆಧಿಭೌತಿಕ ಶರೀರವಿದ್ದ ವಿಷಯವನ್ನು ಮುಂದೆ ಹೇಳುವೆನು. ಪ್ರಕೃತದಲ್ಲಿ, ಆ ಲೀಲಾಶರೀರವೆಲ್ಲಿದ್ದಿತು? ಅದು ಸತ್ಯವೆಂಬುದೆಲ್ಲಿ? ಮರುಭೂಮಿಯಲ್ಲಿ ಹುಟ್ಟುವ ಜಲಜ್ಞಾನದಂತೆ, ಇದು ಕೇವಲ ಭ್ರಾಂತಿಯೇ ಆಗಿದ್ದಿತು ॥೧೨॥

ಈ ಸಮಸ್ತ ಜಗತ್ತೂ ಆತ್ಮವೇ ಆಗಿರುವಾಗ, ದೇಹಾದಿಕಲ್ಪನೆಯೆಲ್ಲಿ ಬಂದಿತು? ನೀನು ಯಾವುದನ್ನು ದೃಶ್ಯವನ್ನಾಗಿ ತಿಳಿದಿರುವೆಯೋ, ಅದು ಸಚ್ಚಿದಾನಂದರೂಪವಾದ ಬ್ರಹ್ಮವೇಯೆ ॥೧೩॥

ಈ ಲೀಲೆಯು, ಆತಿವಾಹಿಕ ಜ್ಞಾನದಲ್ಲಿ ಹೇಗೆ ಪರಿಪಕ್ವದಶೆಯನ್ನು ಹೊಂದಿದಳೋ, ಹಾಗೆಯೇ ಪರಮಾತ್ಮನಲ್ಲಿಯೂ ಪರಿಪಾಕದಶೆಯನ್ನು ಹೊಂದಿದಳು; ಅದುಕಾರಣ, ಆ ಪಾಂಚಭೌತಿಕ ದೇಹವು ಮಂಜು ಹರಿದಂತೆ ಆವಳ ದೃಷ್ಟಿಗೆ ನಷ್ಟವಾಗಿಹೋಯ್ತು ॥೧೪॥

ಯಾವುದು ಆತಿವಾಹಿಕ ಬುದ್ಧಿಯಿಂದ ತಿಳಿಯಲ್ಪಡುವುದೋ, ಅದಕ್ಕೆ ಭೂಮಿ ಮುಂತಾದ ನಾಮಗಳನ್ನು ಕಲ್ಪಿಸಿಕೊಂಡು, ಅದನ್ನೇ ಆಧಿಭೌತಿಕವೆಂದೂ ತಿಳಿಯುವರು ॥

ವಾಸ್ತವಿಕವಾಗಿಯಾದರೋ, ಆಧಿಭೌತಿಕವಾದ ಭೂಮ್ಯಾದಿ ಶರೀರರೂಪವು—ಶಶಶೃಂಗದಂತೆ—ಅರ್ಥದಲ್ಲಿಯೂ ಸತ್ಯವಲ್ಲ; ಶಬ ದಲ್ಲಿಯೂ ಸತ್ಯವಲ್ಲ ॥೧೬॥

ಪುಂಸೋ ಹರಿಣಕೋಽಸ್ಮೀತಿ ಸ್ವಪ್ನೇ ಯಸ್ಯೋದಿತಾ ಮತಿಃ ।
ಸ ಕಿಮನ್ವಿಷ್ಯತಿ ಮೃಗಂ ಸ್ವಮೃಗತ್ವಪರಿಕ್ಷಯೇ ॥೧೭॥
ಉದೇತ್ಯಸತ್ಯಮೇವಾಶು ತಥಾಽಸತ್ಯಂ ವಿಲೀಯತೇ ।
ಭ್ರಾನ್ತಿರ್ಭ್ರಮವತೋ ರಜ್ಜ್ವಾಂ ಅಪಿ ಸರ್ಪಭ್ರಮೇ ಗತೇ ॥೧೮॥
ಸಮಸ್ತಸ್ಯಾಪ್ರಬುದ್ಧಸ್ಯ ಮನೋಜಾತಸ್ಯ ಕಸ್ಯಚಿತ್ ।
ಬೀಜಂ ವಿನಾ ಮೃಷೈವೇಯಂ ಮಿಥ್ಯಾ ರೂಢಿಮುಪಾಗತಾ ॥೧೯॥
ಸ್ವಪ್ನೋಪಲಮ್ಭಂ ಸರ್ಗಾಖ್ಯಂ ಸ ಸರ್ವೋಽನುಭವನ್ ಸ್ಥಿತಃ ।
ಚಿರಮಾವೃತದೇಹಾತ್ಮಾ ಭೂಚಕ್ರಭ್ರಮಣಂ ಯಥಾ ॥೨೦॥

ಶ್ರೀರಾಮಉವಾಚ.

ಬ್ರಹ್ಮನ್ ಲೋಕೈಃ ಪುರಸ್ಸ್ಥಸ್ಯ ಗಚ್ಛತೋ ಯೋಗಿನೋ ನಿಜಮ್ ।
ಆತಿವಾಹಿಕತಾಂ ದೇಹಃ ಕೀದೃಶೋಽಯಂ ವಿಲೋಕ್ಯತೇ ॥೨೧॥

ಶ್ರೀವಸಿಷ್ಠಉವಾಚ.

ಯಾವ ಪುರುಷನಿಗೆ, ಸ್ವಪ್ನದಲ್ಲಿ—ನಾನು ಜಿಂಕೆಯಾಗಿರುವೆನೆಂದು ಬುದ್ಧಿಯುದಯಿಸುವುದೋ, ಅವನು—ಎಚ್ಚರವಾದಾಗ ತನಗೆ ಸ್ವಪ್ನದಲ್ಲಿದ್ದ ಮೃಗಾವಸ್ಥೆಯು ಕಳೆದುಹೋದಮೇಲೆ –ಜಿಂಕೆಯನ್ನು ಹುಡುಕುವನೆ? ಹೀಗೆಯೇ ಲೀಲೆಯೂ—ತಾನು ಜ್ಞಾನದೇಹಳೆಂದು ತಿಳಿದುಕೊಂಡಿರುವಾಗ ಸ್ಥೂಲದೇಹವನ್ನು ಹುಡುಕಲಿಲ್ಲ ॥೧೭॥

'ಉದಯಾಸ್ತಗಳು ನಡೆಯುವುದಿಲ್ಲವೆ?' ಎಂದು ಕೇಳುವೆಯೋ? – ರಜ್ಜುವನ್ನು ನೋಡಿ ಸರ್ಪವೆಂದು ತಿಳಿದಾಗ, ಅಲ್ಲಿ ಅಸತ್ಯವಾದ ಸರ್ಪವೇ ಉದಯಿಸುವುದು; ಸರ್ಪವಲ್ಲವೆಂದು ಜ್ಞಾನವುಂಟಾಗಿ ಭ್ರಾಂತಿ ಹೋದಾಗ, ಅಸತ್ಯವಾಗಿದ್ದ ಸರ್ಪವೇ ಅಸ್ತಹೊಂದುವುದು. ಈ ಪ್ರಪಂಚ ವಿಷಯದಲ್ಲಿಯೂ ಹೀಗೆಯೇ ಎಂದು ತಿಳಿಯಬೇಕು ॥೧೮॥

ಈ ರೀತಿಯಾಗಿ, ಅಪ್ರಬುದ್ಧರ ಮನಸ್ಸಿನಲ್ಲಿ ಕಲ್ಪಿತವಾಗಿರುವ ಅನೇಕ ಬ್ರಹ್ಮಾಂಡಗಳ ಮಧ್ಯದಲ್ಲಿ, ಯಾವುದೋ ಒಂದು ಬ್ರಹ್ಮಾಂಡಕ್ಕೆ, ನಿಷ್ಕಾರಣವಾಗಿ ಈ ರೂಢಿಯುಂಟಾಗಿರುವುದು; ಇದು ಕೇವಲ ಅಸತ್ಯವೇಯೆ. ಅಂತು ಅಜ್ಞರ ಮನಸ್ಸಮಷ್ಟಿಯಿಂದ ಈ ಪಾಂಚಭೌತಿಕ ಪ್ರಪಂಚವು ಕಲ್ಪಿತವಾಗಿರುವುದೆಂದು ಸಿದ್ಧವಾಯ್ತು ॥೧೯॥

ಹೀಗೆ, ಸಮಸ್ತರಾದ ಅಜ್ಞರೂ, ಪ್ರಪಂಚಸೃಷ್ಟಿಯೆಂಬ ಸ್ವಪ್ನವನ್ನು ಅನುಭವಿಸುತ, ಬಾಲಕರು ಭೂಮಂಡಲ ಸುತ್ತುತಿರುವುದೆಂದು ಅನುಭವಪಡುವಂತೆ, ಜನನಮರಣ ಪ್ರವಾಹದಲ್ಲಿ ತಮ್ಮ ದೇಹವು ಸುತ್ತುತಿರುವುದೆಂದು ಭ್ರಮೆಪಡುತಿರುವರು ॥೨೦॥

ಶ್ರೀ ರಾಮನು ಆಶಂಕೆಮಾಡುವನು: —

ಹೇ ಬ್ರಹ್ಮರ್ಷಿವರ್ಯ! ತಾವು ಅಪ್ಪಣೆಕೊಟ್ಟಂತೆ ಯೋಗಿಗಳ ದೇಹಕ್ಕೆ ಆಧಿಭೌತಿಕಾವಸ್ಥೆಯಿಲ್ಲದಪಕ್ಷದಲ್ಲಿ, ಅವನು ಈ ಆಧಿಭೌತಿಕದೇಹದಲ್ಲಿರುತಲೇ ಸ್ವಾತ್ಮರೂಪನಾಗಿ ಆತಿವಾಹಿಕ ಶರೀರವನ್ನು ಹೊಂದುವಾಗ, ಅವನ ಸ್ಥೂಲಶರೀರವು ಜನರಿಗೆ ಗೋಚರವಾಗುವುದಲ್ಲವೆ! ಇದೆಂತಹುದು? ॥೨೧॥

ಶ್ರೀ ವಸಿಷ್ಠರು ಸಮಾಧಾನ ಹೇಳುವರು: —

ದೇಹಾದ್ದೇಹಾನ್ತರಪ್ರಾಪ್ತಿಃ ಪೂರ್ವದೇಹಂ ವಿನಾ ಸದಾ ।
ಆತಿವಾಹಿಕದೇಹೇಽಸ್ಮಿನ್ ಸ್ವಪ್ನೇಷ್ವಿವ ವಿನಶ್ವರೀ ॥೨೨॥
ಯಥಾತಪೇ ಹಿಮಕಣಃ ಶರದ್ವ್ಯೋಮ್ನಿ ಸಿತೋಽಮ್ಬುದಃ ।
ದೃಶ್ಯಮಾನೋಽಪ್ಯದೃಶ್ಯತ್ವಂ ಏತ್ಯೇವಂ ಯೋಗಿದೇಹಕಃ ॥೨೩॥
ಪ್ರಾಗಿತ್ಯೇವಾಥವಾ ಕಶ್ಚಿತ್ ಯೋಗಿದೇಹೋ ನ ಲಕ್ಷ್ಯತೇ ।
ಯೋಗಿಭಿಶ್ಚ ಪುರೋ ವೇಗಾತ್ ಪ್ರೋಡ್ಡೀನಇವ ಖೇ ಖಗಃ ॥೨೪॥
ಸ್ವವಾಸನಾಭ್ರಮೇಣೈವ ಕ್ವಚಿತ್ ಕೇಚಿತ್ ಕದಾಚನ ।
ಮೃತೋಽಯಮಿತಿ ಪಶ್ಯನ್ತಿ ಕೇಚಿದ್ಯೋಗಿನಮಗ್ರಗಾಃ ॥೨೫॥
ಭ್ರಾನ್ತಿಮಾತ್ರಂ ತು ದೇಹಾತ್ಮಾ ತೇಷಾಂ ತದುಪಶಾಮ್ಯತಿ ।
ಸತ್ಯಬೋಧೇನ ರಜ್ಜ್ವಾಂ ಸರ್ಪಬುದ್ಧಿರಿವಾತ್ಮನಿ ॥೨೬॥

ವತ್ಸ! ಯೋಗಿಗಳಿಗೆ ಮರಣವೆರಡುವಿಧವಾಗಿರುವುದು; ಪ್ರಾರಬ್ಧಕರ್ಮಭೋಗಕ್ಕೋಸ್ಕರ, ಸ್ವೇಚ್ಛೆಯಾಗಿ ನಾನಾವಿಧ ದೇಹಕಲ್ಪನೆಯು ಪ್ರಥಮವಿಧ ಮರಣವು; ಸರ್ವಪ್ರಾರಬ್ಧವೂ ಕ್ಷಯಿಸಿದ ಬಳಿಕ, ವಿದೇಹ ಮೋಕ್ಷವನ್ನು ಪಡೆಯುವುದು ದ್ವಿತೀಯವಿಧವು. ಸ್ವಪ್ನದಲ್ಲಿ, ಒಂದು ಶರೀರವನ್ನು ಬಿಟ್ಟು ಮತ್ತೊಂದು ಶರೀರವನ್ನು ಹೊಂದಿದಂತೆ ಅನುಭವವುಂಟಾಗುವಾಗ, ಪೂರ್ವದೇಹವಿರುವುದಿಲ್ಲವಷ್ಟೆ! ಹಾಗೆಯೇ, ಯೋಗಿಯು ಪ್ರಾಥಮಿಕವಿಧವಾಗಿ ಒಂದು ದೇಹವನ್ನು ಬಿಟ್ಟು ಮತ್ತೊಂದು ದೇಹವನ್ನು ಪಡೆಯುವಾಗಲೂ ಪೂರ್ವದೇಹವಿಲ್ಲದೆಯೇ ಪಡೆಯುವನು. ಇದೂ (ದೇಹಾಂತರಪ್ರಾಪ್ತಿ) ಕೂಡ, ಸ್ವಪ್ನದಂತೆಯೇ ಕ್ಷಣಭಂಗುರವಾದುದು ॥೨೨॥

ದ್ವಿತೀಯಪ್ರಕಾರವಾಗಿ ಮರಣಹೊಂದಿದಾಗಲೂ, ಬಿಸಿಲಿನಲ್ಲಿ ಮಂಜು ಅದೃಶ್ಯವಾಗುವಂತೆಯೂ, ಶರತ್ಕಾಲದಲ್ಲಿ ಅಂತರಿಕ್ಷದೊಳಗೆ ಮೋಡದಂತೆಯೂ, ಯೋಗಿಯ ದೇಹವು ಕಣ್ಣಿಗೆ ಕಾಣಿಸುತಿದ್ದ ಹಾಗೆಯೇ ಅದೃಶ್ಯವಾಗುವುದು ॥೨೩॥

ಅಥವಾ, ಈ ಯೋಗಿದೇಹವು—ಮೆತ್ತಗೆ ಕ್ಷಯಿಸುವುದೆಂದೂ ಜನರ ದೃಷ್ಟಿಗೆ ವಿಷಯವಾಗುವುದೆಂದೂ ನಿಯಮವೂ ಇಲ್ಲ. ಒಂದಾನೊಂದು ಯೋಗಿದೇಹವು, ತಟ್ಟನೆ ಕ್ಷಯಹೊಂದುವುದು; ಮತ್ತು, ಇದು ಅಂತರಿಕ್ಷದಲ್ಲಿ ಪಕ್ಷಿಯಂತೆ ಮುಂದುಗಡೆಯೇ ವೇಗವಾಗಿ ಹಾರಿಹೋಗುತಿರುವಾಗ, ಯೋಗಿಗಳೂ ಇದನ್ನು ಕಂಡುಹಿಡಿಯಲಾರರು. ಇನ್ನು ಇತರರ ಪಾಡೇನು? ॥೨೪॥

ಅಥವಾ, ಮತ್ತೊಂದುವಿಧವಾಗಿಯೂ ನಿನ್ನ ಶಂಕೆಗೆ ಸಮಾಧಾನ ಹೇಳುವೆನು. ಮುಂಭಾಗದಲ್ಲಿರುವ ಕೆಲವು ಜನರು, ಕೆಲವು ಸಂದರ್ಭದಲ್ಲಿ, ತಮ್ಮ ವಾಸನಾನುಗುಣವಾಗಿ, ಅವನನ್ನು ಸತ್ತನೆಂದು ತಿಳಿಯುವರು; ಮತ್ತೆ ಕೆಲವರು, ಆ ಯೋಗಿಯು ಇನ್ನೂ ಜೀವಿಸಿರುವನೆಂದೇ ತಿಳಿಯುವರು ॥೨೫॥

ಮತ್ತು, ಯೋಗಿಗಳಿಗೆ, ದೇಹಸ್ವರೂಪವೆಂಬುದು, ಆತ್ಮನಲ್ಲುಂಟಾದ ಕೇವಲ ಭ್ರಾಂತಿಮಾತ್ರವೇ ಆಗಿರುವುದು. ಆ ಭ್ರಾಂತಿಯು, ನಿಶ್ಚಯಗೊತ್ತಾದ ಬಳಿಕ ರಜ್ಜುಸರ್ಪಭ್ರಾಂತಿಯು ಶಾಂತವಾಗುವಂತೆ, ಜ್ಞಾನೋದಯವಾದಕಾಲದಲ್ಲಿ ಶಾಂತವಾಗಿಬಿಡುವುದು ॥೨೬॥

ಕೋ ದೇಹಃ ಕಸ್ಯ ವಾ ಸತ್ತಾ ಕಸ್ಯ ನಾಶಃ ಕಥಂ ಕುತಃ |
ಸ್ಥಿತಂ ತದೇವ ಯದಭೂತ್ ಅಬೋಧಃ ಕೇವಲಂ ಗತಃ ‖೨೭‖

ಶ್ರೀರಾಮಉವಾಚ.

ಆತಿವಾಹಿಕತಾಮೇತಿ ಆಧಿಭೌತಿಕಏವ ಕಿಮ್ |
ಉತಾನ್ಯಇತಿ ಮೇ ಬ್ರೂಹಿ ಯೇನೋಹ್ಯಇವ ಭೋಃ ಪ್ರಭೋ ‖೨೮‖

ಶ್ರೀವಸಿಷ್ಠಉವಾಚ.

ಬಹುಶೋ ಹ್ಯುಕ್ತಮೇತತ್ ತೇ ನ ಗೃಹ್ಣಾಸಿ ಕಿಮುತ್ತಮ |

ಹೀಗಿರುವುದರಿಂದ ದೇಹವೆಂಬುದಾವುದು? ಯಾವುದಕ್ಕೆ ಸದ್ಭಾವವು? ನಾಶವಾವುದಕ್ಕೆ? ಅದು ಹೇಗೆ ಎಲ್ಲಿ ಉಂಟಾಗುವುದು? ಯಾವುದು ವಾಸ್ತವ್ಯವಾಗಿ ಇದ್ದಿತೋ, ಅದೇ ಈಗಲೂ ಇರುವುದು. ಉತ್ಪನ್ನವಾಗಿದ್ದ ಅಜ್ಞಾನ ಮಾತ್ರ ನಾಶಹೊಂದಿತು ‖೨೭‖

ಶ್ರೀರಾಮನು ಈಗ ಮತ್ತೊಂದುವಿಧವಾಗಿ ಶಂಕೆಪಡುತ್ತಾನೆ :—

ಉಪದೇಶಿಸುವುದರಲ್ಲಿ ಸಮರ್ಥರಾದ ಮಹರ್ಷಿಗಳೆ! ನನಗೆ ಈಗ ಮತ್ತೊಂದುವಿಧವಾಗಿ ದೊಡ್ಡ ಸಂಶಯವುಂಟಾಗಿರುವುದು. ತಾವು ಅಪ್ಪಣೆಕೊಟ್ಟಂತೆ ಯೋಗಿಗಳಿಗೆ ಸ್ಥೂಲದೇಹವು ಸುತರಾಂ ಇಲ್ಲವೆಂದು ಇಟ್ಟುಕೊಂಡರೆ,—ಅತ್ಯಂತಾಭಾವವಾದುದು ಪರಿಣಾಮಹೊಂದುತದೆಯೆಂದು ಒಪ್ಪಬೇಕಾಗುವುದಲ್ಲವೆ! ಹೀಗೆ ಒಪ್ಪುವುದು ಯುಕ್ತವೆ? ಯಾವುದು ಸುತರಾಂ ಇಲ್ಲವೋ, ಅದು ರೂಪಾಂತರ ಪಡೆಯುವುದು ಹೇಗೆ? ಪರಿಣಾಮವೇ ಇಲ್ಲವೆಂದರೆ,—ಯೋಗಿಗೆ— ಪ್ರಾರಬ್ಧಕರ್ಮಾನುಭವಕ್ಕಾಗಿ— ಬೇರೆಯಾಗಿಯೇ ಸೂಕ್ಷ್ಮದೇಹವುತ್ಪನ್ನವಾಗುವುದೆಂದು ಹೇಳಬೇಕಾಗುವುದು. ಹಾಗೆಯೇ ಆಗಲೆಂದರೆ,—ಆಗ ಜನ್ಮಾಂತರವಾದಂತಾಗುವಕಾರಣ, ಜೀವನ್ಮುಕ್ತನೆಂಬುದು ಅನುಪಪನ್ನವಾಗುವುದು. ಇದೂ ಅಲ್ಲದೆ, ಯೋಗಮುಕ್ತನಿಗೆ ಪುನರುತ್ಪತ್ತಿಯೇ ಇಲ್ಲವೆಂಬ ಶಾಸ್ತ್ರಗಳೆಲ್ಲವೂ ಸುಳ್ಳಾಗುವುವು. ಆದುಕಾರಣ, ಹೇ ಗುರೋ! ಯೋಗಿಗೆ, ಆಧಿಭೌತಿಕದೇಹವೇ ಆತಿವಾಹಿಕರೂಪವನ್ನು ಹೊಂದುವುದೆ? ಅಥವಾ ಅವನಿಗುಂಟಾಗುವ ಆತಿವಾಹಿಕದೇಹವೇ ಪೃಥಕ್ಕಾದುದೇ? ಮೊದಲಿನ ಪಕ್ಷವನ್ನು ಒಪ್ಪಿಕೊಂಡರೆ,—ಅಭಾವವಾದುದು ಪರಿಣಾಮಹೊಂದುವುದೆಂದು ಸರ್ವಶಾಸ್ತ್ರವಿರುದ್ಧವಾದ ವಿಷಯುವನ್ನು ಒಪ್ಪಿಕೊಂಡಂತಾಗುವುದು. ಎರಡನೆಯ ಪಕ್ಷವನ್ನಾಶ್ರಯಿಸಿದರೆ,—ಜನ್ಮಾಂತರವಾಯ್ತಾದಕಾರಣ, ಜ್ಞಾನದಿಂದ ಮೋಕ್ಷವುಂಟಾಗುವುದೆಂಬ ಸಕಲ ಶಾಸ್ತ್ರಸಿದ್ಧಾಂತವೂ ಸುಳ್ಳಾಗುವುದು. ಹೀಗೆ ನಾನು ಸಂಶಯಪ್ರವಾಹದಲ್ಲಿ ಕೊಚ್ಚಿಹೋಗುತಿರುವಂತೆ ಇರುವುದರಿಂದ, ಈ ಸಂಶಯವು ಚೆನ್ನಾಗಿ ನಿವೃತ್ತಿಹೊಂದುವಂತೆ ತಾವು ವಿಶದವಾಗಿ ಅಪ್ಪಣೆಕೊಡಿಸಬೇಕು ‖೨೮‖

ಶ್ರೀ ವಸಿಷ್ಠರು ಸಮಾಧಾನ ಹೇಳುವರು :—

ತಿಳಿದುಕೊಳ್ಳುವುದರಲ್ಲಿ ಪ್ರಶಸ್ತವಾದ ಶಕ್ತಿಯುಳ್ಳ ರಾಮನೆ! ನೀನು ಕೇಳುವ ಪ್ರಶ್ನೆಯೇ ಸಂಗತವಾಗುವುದಿಲ್ಲ. ಇಲ್ಲಿ ಪರಿಣಾಮದ ಪ್ರಸ್ತಾವವೇ ಆವಶ್ಯಕವಲ್ಲ. ಸ್ಥೂಲದೇಹಕ್ಕೆ ಅಭಾವವುಂಟಾದಾಗ, ಅದಕ್ಕೆ ಮೊದಲೇ ಸಿದ್ಧವಾಗಿದ್ದ ಸೂಕ್ಷ್ಮದೇಹವು ಅವಶಿಷ್ಟವಾಗಿಯೇ ಇರುವುದು. ಆಧಿಭೌತಿಕವೆಂಬುದು ಇಲ್ಲವೇಯಿಲ್ಲ. ಈ ವಿಷಯುವನ್ನು

ಆತಿವಾಹಿಕಮೇವಾಸ್ತಿ ನಾಸ್ತ್ಯೇವೇಹಾಧಿಭೌತಿಕಃ ॥೨೯॥
ತಸ್ಯೈವಾಭ್ಯಾಸತೋಭ್ಯೇತಿ ಸಾಧಿಭೌತಿಕತಾಮತಿಃ ।
ಯದಾ ಶಾಮ್ಯತಿ ಸೈವಾಸ್ಯ ತದಾ ಪೂರ್ವಾ ಪ್ರವರ್ತತೇ ॥೩೦॥
ತದಾ ಗುರುತ್ವಂ ಕಾಠಿನ್ಯಂ ಇತಿ ಯಶ್ಚ ಮುಧಾಗ್ರಹಃ ।
ಶಾಮ್ಯೇತ್ ಸ್ವಪ್ನಪುರಸ್ಯೇವ ಬೋದ್ಧುರ್ಬೋಧಾನ್ನಿರಾಮಯಾತ್ ॥೩೧॥
ಲಘುತೂಲಸಮಾಪತ್ತಿಃ ತತಃ ಸಮುಪಜಾಯತೇ ।
ಸ್ವಪ್ನೇ ಸ್ವಪ್ನಪರಿಜ್ಞಾನಾದಿವ ದೇಹಸ್ಯ ಯೋಗಿನಃ ॥೩೨॥
ಸ್ವಪ್ನೇ ಸ್ವಪ್ನಪರಿಜ್ಞಾನಾತ್ ಯಥಾ ದೇಹೋ ಲಘುರ್ಭವೇತ್ ।
ತಥಾ ಬೋಧಾದಯಂ ದೇಹಃ ತೂಲವತ್ ಪ್ಲುತಿಮಾನ್ ಭವೇತ್ ॥೩೩॥
ಅನೇಕದಿನಸಙ್ಕಲ್ಪದೇಹೇ ಪರಿಣತಾತ್ಮನಾಮ್ ।
ಅಸ್ಮಿನ್ ದೇಹೇ ಶವೇ ದಗ್ಧೇ ತತ್ರೈವಾಸ್ಥಿತಿಮಾಯುಷಾಮ್ ॥೩೪॥
ಲಘುದೇಹಾನುಭವನಂ ಅವಶ್ಯಂ ಭಾವಿ ವೈ ತಥಾ ।
ಪ್ರಬೋಧಾತಿಶಯಾದೇತಿ ಜೀವತಾಮಪಿ ಯೋಗಿನಾಮ್ ॥೩೫॥

ನಿನಗೆ ಅನೇಕವೇಳೆ ಹೇಳಿರುವೆನಲ್ಲವೆ! ಆದರೂ ಏನುಕಾರಣ ಇದನ್ನು ನೀನು ಚೆನ್ನಾಗಿ ಧಾರಣೆಮಾಡಿಕೊಳ್ಳಲಿಲ್ಲ? ॥೨೯॥

ಈ ಆತಿವಾಹಿಕ (ಸೂಕ್ಷ್ಮ) ದೇಹಕ್ಕೇ, ವಾಸನಾಬಲದಿಂದ ಆಧಿಭೌತಿಕಬುದ್ಧಿಯುಂಟಾಗುವುದು. ಅದು (ವಾಸನೆ) ಯಾವಾಗ ಶಾಂತವಾಗುವುದೋ, ಆಗ ಮೊದಲಿದ್ದ ಆತಿವಾಹಿಕಬುದ್ಧಿಯೇ ಪ್ರಕಾಶಿಸುವುದು ॥೩೦॥

'ಪರಿಣಾಮವೇ ಇಲ್ಲದಿದ್ದರೆ, ಸ್ಥೂಲದೇಹದಲ್ಲಿದ್ದ ಗುರುತ್ವ ಕಠಿನತ್ವಾದಿಗಳು ಹೋಗುವುದು ಹೇಗೆ?' ಎನ್ನುವೆಯೋ?—ಆ ಸ್ಥೂಲದೇಹಾವಸ್ಥೆಯಲ್ಲಿ ಉಂಟಾಗಿದ್ದ ಗುರುತ್ವ ಕಠಿನತ್ವ ಮುಂತಾದ ಭ್ರಾಂತಿಜ್ಞಾನವು, ಸ್ವಪ್ನಕಾಲಿಕವಾದ ಪಟ್ಟಣದಲ್ಲಿ ಕಾಣುವ ಗುರುತ್ವ (ಭಾರ) ಕಠಿನತ್ವ (ಗಟ್ಟಿ) ಮುಂತಾದ ಗುಣಗಳಂತೆ, ಜ್ಞಾನಿಗೆ ನಿರುಪಾಧಿಕವಾಗಿ ಜ್ಞಾನೋದಯವಾದನಂತರದಲ್ಲಿ ಸ್ವತಏವ ಶಾಂತವಾಗುವುದು ॥೩೧॥

ಬಳಿಕ, ಸ್ವಪ್ನದಲ್ಲಿ ಸ್ವಪ್ನವೆಂಬ ಜ್ಞಾನವುಂಟಾದಮೇಲೆ ಆಗುವಂತೆ, ಯೋಗಿಗೆ ದೇಹವು ಸೂಕ್ಷ್ಮವಾದ ಹತ್ತಿಯಂತೆ ಹಗುರವಾಗಿ ಕಾಣುವುದು ॥೩೨॥

ಸ್ವಪ್ನದಲ್ಲಿ ಸ್ವಪ್ನಜ್ಞಾನವುಂಟಾದಾಗ ದೇಹವು ಹೇಗೆ ಹಗುರವಾಗುವುದೋ, ಹಾಗೆ-ಜ್ಞಾನೋದಯವಾದಾಗ ಈ ಸ್ಥೂಲದೇಹವೂ ತೂಲ (ಹತ್ತಿ) ದಂತೆ ಆಕಾಶಗಮನಾದಿಗಳಲ್ಲಿ ಯೋಗ್ಯವಾಗುವುದು ॥೩೩॥

ಸಾಮಾನ್ಯವಾಗಿ, ಪ್ರಪಂಚದಲ್ಲಿ, ಅಜ್ಞರಾದವರು, ಸ್ಥೂಲದೇಹದಲ್ಲಿಯೇ ಬಹುಕಾಲದಿಂದ ದೃಢಸಂಕಲ್ಪರಾಗಿ, ಅವಿಘವಾಗಿಯೇ ಮನಸ್ಸು ಪರಿಪಕ್ವವಾದವರಾಗಿರುವರು. ಅಂಥವರಿಗೂ, ಆ ಸ್ಥೂಲಶರೀರದಲ್ಲಿಯೇ ಅಭಿಮಾನವಿದ್ದರೂ, ಈ ಸ್ಥೂಲದೇಹವು ಶವವಾದಾಗ, ಸೂಕ್ಷ್ಮದೇಹಪ್ರಾಪ್ತಿಯವಶ್ಯವಾಗಿ ಆಗಿಯೇ ಆಗುವುದಲ್ಲವೆ! ಹೀಗಿರುವಾಗ, ಜ್ಞಾನಾತಿಶಯವುಳ್ಳವರಾಗಿ ಸ್ಥೂಲದೇಹಜ್ಞಾನರಹಿತರಾಗಿರುವ ಯೋಗಿಗಳು, ಜೀವಿಸಿರುವಾಗಲೂ ಈ ಸೂಕ್ಷ್ಮದೇಹಾನುಭವವನ್ನು ಪಡೆಯುವುದರಲ್ಲಿ ಸಂಶಯವೇನು? ॥೩೪-೩೫॥

ಉದಿತಾಯಾಂ ಸ್ಮೃತೌ ತತ್ರ ಸಙ್ಕಲ್ಪಾತ್ಮಾಹಮಿತ್ಯಲಮ್ ।
ಯಾದೃಶಃ ಸ ಭವೇದ್ದೇಹಃ ತಾದೃಶೋಽಯಂ ಪ್ರಬೋಧತಃ ॥೩೬॥
ಭ್ರಾನ್ತಿರೇವಮಿಯಂ ಭಾತಿ ರಜ್ಜ್ವಾಮಿವ ಭುಜಙ್ಗತಾ ।
ಕಿಂ ನಷ್ಟಮಸ್ಯಾಂ ನಷ್ಟಾಯಾಂ ಜಾತಾಯಾಂ ಕಿಂ ಪ್ರಜಾಯತೇ ॥೩೭॥

ಶ್ರೀರಾಮಉವಾಚ.

ಅನನ್ತರಂ ಯೇ ವಾಸ್ತವ್ಯಾಃ ಲೀಲಾಂ ಪಶ್ಯನ್ತಿ ತೇ ಯದಿ ।
ತತ್ ಸತ್ಯಸಙ್ಕಲ್ಪತಯಾ ಬುಧ್ಯನ್ತೇ ಕಿಮತಃ ಪ್ರಭೋ ॥೩೮॥

ಶ್ರೀವಸಿಷ್ಠಉವಾಚ.

ಏವಂ ಜ್ಞಾಸ್ಯನ್ತಿ ತೇ ರಾಜ್ಞೀ ಸ್ಥಿತೇಯಮಿಹ ದುಃಖಿತಾ ।
ವಯಸ್ಯಾ ಕಾಚಿದನ್ಯೇಯಂ ಕುತೋಽಪ್ಯಸ್ಯಾಉಪಾಗತಾ ॥೩೯॥
ಸನ್ದೇಹಃ ಕಇವಾತ್ರೈಷಾಂ ಪಶವೋ ಹ್ಯವಿವೇಕಿನಃ ।
ಯಥಾದೃಷ್ಟಂ ವಿಚೇಷ್ಟನ್ತೇ ಕುತಏಷಾಂ ವಿಚಾರಣಾ ॥೪೦॥

ಸ್ವಪ್ನದಲ್ಲಿ—ನಾನು ಕೇವಲ ಸಂಕಲ್ಪದೇಹವುಳ್ಳವನು—ಎಂದು ಸಂಪೂರ್ಣವಾಗಿ ಸ್ಮೃತಿಯುಂಟಾಗಿರುವಾಗ, ಆ ದೇಹವು ಹೇಗೆ ಆಕಾಶಗಮನಾದಿಕ್ಷಮವಾಗುವುದೋ ಈ ಜಾಗ್ರದವಸ್ಥೆಯ ಸ್ಥೂಲದೇಹವೂ ಜ್ಞಾನೋದಯದಿಂದ ಆ ರೀತಿಯಾಗುವುದು ॥೩೬

ಅಯ್ಯಾ! ರಾಮ! ಈರೀತಿಯಾಗಿ, ರಜ್ಜುವಿನಲ್ಲಿ ಸರ್ಪಜ್ಞಾನವುಂಟಾಗುವಂತೆ, ಈ ಸ್ಥೂಲದೇಹ ಭ್ರಾಂತಿಯುಂಟಾಗಿ ಭಾಸಿಸುತಿರುವುದು. ಇದು (ಭ್ರಾಂತಿ) ನಷ್ಟವಾದಮಾತ್ರದಿಂದ,ಏನು ನಷ್ಟವಾಗುವುದು? ಹುಟ್ಟಿದಮಾತ್ರದಿಂದ ಏನುಂಟಾಗುವುದು? ಶುಕ್ತಿಯಲ್ಲಿ ಉಂಟಾಗಿದ್ದ ರಜತಭ್ರಾಂತಿಯಿಂದ ಸಂತೋಷವೇನು? ಅದು ಹೋದರೆ ವ್ಯಸನವೇನು?॥೩೭

ಶ್ರೀರಾಮನು ಹೇಳುವನು :—

ಹೇ ಗುರೋ! ತಾವು ಅಪ್ಪಣೆಕೊಟ್ಟುದುದು ಗೊತ್ತಾಯ್ತು. ಆದರೆ, ಪ್ರಪಂಚ ಸಾಮಾನ್ಯಸ್ಥಿತಿಯನ್ನು ತಾವು ಅಪ್ಪಣೆಕೊಡಿಸಿದಿರಿ. ಪ್ರಕೃತವಾಗಿ, ಆ ಪೂರ್ವಲೀಲೆಯೂ ನವಲೀಲೆಯೂ ಪದ್ಮರಾಜನ ಅಂತಃಪುರದಲ್ಲಿ ಸೇರಿದರಷ್ಟೆ! ಆ ಬಳಿಕ ಅಲ್ಲಿ ಏನಾಯ್ತು? ಆ ಪ್ರಬುದ್ಧಲೀಲೆಯು ಸತ್ಯಸಂಕಲ್ಪಳಾಗಿರುವುದರಿಂದ, ಅವಳು—ತನ್ನನ್ನು ಎಲ್ಲರೂ ನೋಡಲಿ—ಎಂದು ಸಂಕಲ್ಪಮಾಡಿದರೆ, ಆಗ ಅಲ್ಲಿರುವ ಜನರೆಲ್ಲರೂ—ಇವಳನ್ನು ಪೂರ್ವದಲ್ಲಿ ಕಂಡಿದ್ದವರಂತೆ ಭಾವಿಸುವರೆ? ಅಥವಾ ಬೇರೆಯವಳೆಂದು ಭಾವಿಸುವರೆ? ॥೩೮॥

ಶ್ರೀ ವಸಿಷ್ಠರು ಉತ್ತರ ಹೇಳುವರು:—

ಅಯ್ಯಾ! ರಾಮ! ಅವರು ಈರೀತಿಯಾಗಿ ಭಾವಿಸುವರು :—ನಮ್ಮ ರಾಣಿಯು ಇಲ್ಲಿ ದುಃಖಿತಳಾಗಿರುವಳು; ಇವಳ ಸಖಿಯಾಗಿ ಯಾರೋ ಒಬ್ಬ ಸ್ತ್ರೀಯು, ಎಲ್ಲಿಂದಲೋ ಬಂದಿರುವಳು. ಎಂದು ಅವರು ಭಾವಿಸುವರು ॥೩೯॥

ಆ ಜನರಿಗೆ, ಅವಳ ವಿಷಯದಲ್ಲಿ ಏನುತಾನೆ ಸಂಶಯವುಂಟಾಗುವುದು? ಪಶುಸಮಾನರಾದ ವಿವೇಕಶೂನ್ಯರು, ತಮ್ಮ ಕಣ್ಣಿಗೆ ಕಂಡುದುದನ್ನೇ ಯಥಾರ್ಥವೆಂದು ನಂಬಿ, ಅದಕ್ಕನುಗುಣವಾಗಿ ಆಚರಿಸುವರು; ಇಷ್ಟೇ ಹೊರತು, ಅವರಿಗೆ ವಿಚಾರವೆಲ್ಲಿ ಬಂದೀತು?॥೪೦॥

ಯಥಾ ಲೋಷ್ಟೋ ಲುಠದ್ವೃಕ್ಷಂ ವಜ್ಞಾಯಿತ್ವಾಶು ಗಚ್ಛತಿ ।
ಅಜ್ಞಾನತ್ವೇಽಜ್ಞಪಶವಃ ತಥಾ ಹ್ಯಸ್ತಿ ಪುರಾದಿಕಮ್ ॥೪೧॥
ಯಥಾ ಸ್ವಪ್ನವಪುರ್ಬೋಧಾತ್ ನ ಜಾನೇ ಕ್ವೇವ ಗಚ್ಛತಿ ।
ಅಸತ್ಯಮೇವ ತದ್ಯಸ್ಮಾತ್ ತಥೈವೇಹಾಧಿಭೌತಿಕಮ್ ॥೪೨॥

ಶ್ರೀರಾಮಉವಾಚ.

ಭಗವನ್ ಸ್ವಪ್ನಶಿಖರೀ ಪ್ರಬೋಧೇ ಕ್ವೇವ ಗಚ್ಛತಿ ।
ಇತಿ ಮೇ ಸಂಶಯಂ ಛಿನ್ಧಿ ಶರದಭ್ರಮಿವಾನಿಲಃ ॥೪೩॥

ಶ್ರೀವಸಿಷ್ಠಉವಾಚ.

ಸ್ವಪ್ನಭ್ರಮೇಥ ಸಙ್ಕಲ್ಪೇ ಪದಾರ್ಥಾಃ ಪರ್ವತಾದಯಃ ।

ಅಜ್ಞರಿಗೆ ವಿಚಾರವೇಕೆ ಉದಯಿಸುವುದಿಲ್ಲವೆಂದು ಕೇಳುವೆಯೋ?—ಇದಕ್ಕೊಂದು ದಾಹರಣೆಯನ್ನು ಹೇಳುವೆನು. ಒಂದು ಮರದಮೇಲೆ ಒಬ್ಬನು ಒಂದು ಒಣಗಿದ ಮಣ್ಣಹೆಂಟೆಯನ್ನು ಎಸೆಯುವನು; ಅದು ಹೋಗಿ ಆ ಮರಕ್ಕೆ ತಗುಲಿದಾಗ, ಆ ಮರವೇ ಇದನ್ನು ಹೊಡೆದಂತಾಗುವುದು. ಅಷ್ಟೇಹೊರತು, ಈ ಮಣ್ಣಹೆಂಟೆಯು—ಬಾಣದಂತೆ ಒಳಕ್ಕೆ ಹೊಕ್ಕು ಆ ಮರವನ್ನು ಭೇದಿಸಲಾರದು; ಕಲ್ಲಿನಂತೆ ಆ ಮರವನ್ನು ಸ್ವಲ್ಪವಾದರೂ ಗಾಯ ಮಾಡಲಾರದು; ಕಲಸಿದ ಹಸಿಮಣ್ಣಿನುಂಡೆಯಂತೆ ಆ ಮರದಲ್ಲಿ ಅಂಟಿಕೊಳ್ಳಲೂ ಆರದು. ಮರಕ್ಕೆ ತಗುಲಿದೊಡನೆಯೇ ಪುಡಿಪುಡಿಯಾಗಿ ಉದುರಿಹೋಗುವುದು. ಹೀಗೆಯೇ, ಪಶುಸಮಾನರಾದ ಅಜ್ಞರು,ತಮ್ಮ ಅಜ್ಞಾನಾವಸ್ಥೆಯಧಿಕವಾಗಿರಲಾಗಿ,ಯಾವ ವಿಷಯದಲ್ಲಿಯೂ ಸ್ವಲ್ಪವೂ ಒಳಗೆ ಪ್ರವೇಶಮಾಡಲಾರದವರಾಗಿರುವರು. ಅವರ ಅಜ್ಞಾನಾನುಗುಣವಾಗಿಯೇ ಅವರ ಶರೀರಾದಿಗಳೂ ಇರುವುವು ॥೪೧॥

ಸ್ವಪ್ನದಲ್ಲಿ ಕಂಡ ಶರೀರವು—ಎಚ್ಚರಿಕೆಯಾದಬಳಿಕ— ಎಲ್ಲಿ ಹೋಯಿತೆಂಬುದು ಹೇಗೆ ಗೊತ್ತಾಗುವುದಿಲ್ಲವೋ, ಹಾಗೆ ಈ ಆಧಿಭೌತಿಕ ಶರೀರವೂ ಜ್ಞಾನೋದಯವಾದಾಗ ಎಲ್ಲಿಹೋಯಿತೆಂಬುದು ತಿಳಿಯುವುದಿಲ್ಲ. ಏತಕ್ಕೆಂದರೆ, ಇವೆರಡೂ ಸ್ವರೂಪತಃ ಅಸತ್ಯಗಳಲ್ಲವೆ! ॥೪೨॥

ಹೀಗೆ ವಸಿಷ್ಠರು ದೃಷ್ಟಾಂತವಾಗಿ ಸ್ವಪ್ನ ವಿಷಯವನ್ನು ಹೇಳುತಿರಲಾಗಿ, ಶ್ರೀರಾಮನು ಆದರಲ್ಲಿಯೇ ಒಂದು ವಿಧವಾಗಿ ಶಂಕೆಮಾಡುವನು: –

ಪೂಜ್ಯರೆ! ಸ್ವಪ್ನದಲ್ಲಿ ಕಂಡ ಪರ್ವತ ಮುಂತಾದ ಪದಾರ್ಥವು, ಎಚ್ಚರವಾದಬಳಿಕ ಎಲ್ಲಿಗೆ ಹೋಗುವುದು? ಮೂಲಾಜ್ಞಾನನಿವೃತ್ತಿಯಾದಹೊರತು, ಸ್ವಪ್ನಜ್ಞಾನವು ಆತ್ಯಂತಿಕವಾಗಿ ನಾಶಹೊಂದಲಾರದಲ್ಲವೆ! ಆಗ ಇನ್ನೂ ಮೂಲಾಜ್ಞಾನವಿದ್ದೇ ಇರುವುದರಿಂದ, ಈ ಸ್ವಪ್ನಜ್ಞಾನವು ಎಲ್ಲಿಯೋ ಒಂದುಕಡೆ ಮರೆಯಾಗಿರಬೇಕಲ್ಲವೆ! ಅದೆಲ್ಲಿ ಮರೆಯಾಗುವುದು? ಗಾಳಿಯು ಶರತ್ಕಾಲಿಕವಾದ ಮೇಘವನ್ನು ಛೇದಿಸುವಂತೆ, ತಾವು ನನ್ನ ಈ ಸಂಶಯವನ್ನು ಬಗೆಹರಿಸಬೇಕು ॥೪೩॥

ಶ್ರೀ ವಸಿಷ್ಠರು ಸಮಾಧಾನ ಹೇಳುವರು:—

ವತ್ಸ! ಸ್ವಪ್ನಕಾಲದ ಭ್ರಮೆಯಲ್ಲಿಯೂ, ಮನೋರಥ ಸಂಕಲ್ಪದಲ್ಲಿಯೂ, ವಾಯು

ಸಂವಿದೋನ್ತರ್ವಿಗಳನ್ತ್ಯೇತೇ ಸ್ಪನ್ದನಾನ್ಯನಿಲೇ ಯಥಾ ॥೪೪॥
ಅಸ್ಪನ್ದಸ್ಯ ಯಥಾ ವಾಯೋಃ ಸ ಸ್ಪನ್ದೋನ್ತರ್ವಿಗಳತ್ಯಲಮ್ ।
ಅನನ್ಯಾತ್ಮಾ ತಥೈವಾಯಂ ಸ್ವಪ್ನಾರ್ಥಃ ಸಂವಿದೋ ಮಲಮ್ ॥೪೫॥
ಸ್ವಪ್ನಾದ್ಯರ್ಥಾವಭಾಸೇನ ಸಂವಿದೇವ ಸ್ಫುರತ್ಯಲಮ್ ।
ಅಸ್ಫುರನ್ತೀ ತು ತೇನೈವ ಯಾತ್ಯೇಕತ್ವಂ ತದಾತ್ಮಿಕಾ ॥೪೬॥
ಸಂವಿತ್ಸ್ವಪ್ನಾರ್ಥಯೋರ್ದ್ವಿತ್ವಂ ನ ಕದಾಚನ ಲಭ್ಯತೇ ।
ಯಥಾ ದ್ರವತ್ವಪಯಸೋಃ ಯಥಾ ವಾ ಸ್ಪನ್ದವಾತಯೋಃ ॥೪೭॥
ಯಸ್ತತ್ರ ಸ್ಯಾದನ್ಯಬೋಧಃ ತದಜ್ಞಾನಮನುತ್ತಮಮ್ ।
ಸೈಷಾ ಸಂಸೃತಿರಿತ್ಯುಕ್ತಾ ಮಿಥ್ಯಾಜ್ಞಾನಾತ್ಮಿಕೋದಿತಾ ॥೪೮॥
ಸಹಕಾರಿಕಾರಣಾನಾಂ ಅಭಾವೇ ಕಿಲ ಕೀದೃಶೀ ।
ಸಂವಿತ್ಸ್ವಪ್ನಪದಾರ್ಥಾನಾಂ ದ್ವಿತಾ ಸ್ವಪ್ನೇ ನಿರರ್ಥಿಕಾ ॥೪೯॥
ಯಥಾ ಸ್ವಪ್ನಸ್ತಥಾ ಜಾಗ್ರತ್ ಇದಂ ನಾಸ್ತ್ಯತ್ರ ಸಂಶಯಃ ।

ವಿನಲ್ಲಿ ಚಲನೆಗಳೆಲ್ಲವೂ ಸೇರಿಹೋಗುವಂತೆ, ಪರ್ವತ ಮುಂತಾದ ಪದಾರ್ಥಗಳು, ಜ್ಞಾನದಲ್ಲಿ ಸೇರಿಹೋಗಿರುವುವು ॥೪೪॥

ನಿಶ್ಚಲವಾಗಿ ಕಾಣುತಿರುವ ವಾಯುವಿನೊಳಗೆ ಆ ಚಲನೆ ಪ್ರವೇಶಿಸುವಂತೆ, ವಸ್ತುತಃ ಪ್ರತ್ಯೇಕವಾದ ರೂಪವಿಲ್ಲದಿರುವ ಈ ಸ್ವಪ್ನ ಪದಾರ್ಥವು, ಜ್ಞಾನವನ್ನು ಆಚ್ಛಾದಿಸಿಕೊಂಡಿರುವ ಅಜ್ಞಾನದೊಳಗೆ ಪ್ರವೇಶಿಸುವುದು ॥೪೫॥

ಅಂತು, ಜ್ಞಾನವೇ ಸ್ವಪ್ನಾದಿ ಪದಾರ್ಥರೂಪದಿಂದ ಸ್ಫುರಣೆ ಹೊಂದುತಿರುವುದು. ಯಾವಾಗ ಈ ವಿಧವಾದ ಸ್ಫುರಣವಿಲ್ಲದಿರುವುದೋ, ಆಗ ಸ್ವಯಂ ತತ್ಸ್ವರೂಪವಾಗಿ–ಅದರೊಡನೆಯೇ ಐಕ್ಯಹೊಂದಿರುವುದು ॥೪೬॥

ದ್ರವತ್ವಜಲಗಳಿಗೂ ಸ್ಪಂದವಾಯುಗಳಿಗೂ ಹೇಗೆ ಭೇದ ಗೊತ್ತಾಗುವುದಿಲ್ಲವೋ, ಹಾಗೆ ಜ್ಞಾನಕ್ಕೂ ಸ್ವಪ್ನದೃಷ್ಟಪದಾರ್ಥಕ್ಕೂ ಭೇದವೆಂದಿಗೂ ಉಪಪನ್ನವಾಗುವುದಿಲ್ಲ ॥೪೭

ಆ ಸ್ವಪ್ನದಲ್ಲಿ ಪದಾರ್ಥಾಂತರವಿರುವುದೆಂದು ತಿಳಿಯುವಿಕೆ ಯಾವುದುಂಟೋ, ಅದೇ ಅನಾದಿಯಾದ ಅವಿದ್ಯೆಯೆನ್ನಿಸುವುದು. ಹೀಗೆ ಮಿಥ್ಯಾಜ್ಞಾನರೂಪವಾಗಿ ಉದಯಿಸುವ ಅವಿದ್ಯೆಯನ್ನೇ ಸಂಸಾರವೆಂದು ಪ್ರಾಜ್ಞರು ಹೇಳುತಿರುವರು ॥೪೮॥

ಮತ್ತು, ಪ್ರಪಂಚದಲ್ಲಿರುವಂತೆ ಸಹಕಾರಿಯಾದ ಕಾರಣಗಳಿಂದ ಸ್ವಪ್ನಪದಾರ್ಥಗಳು ಸತ್ಯವೆಂದು ಸಾಧಿಸುವುದೂ ಅಸಾಧ್ಯವಾಗಿರುವುದು. ಅದುಕಾರಣ, ಜ್ಞಾನಕ್ಕೂ ಸ್ವಪ್ನಪದಾರ್ಥಕ್ಕೂ ಭೇದವೆಲ್ಲಿರುವುದು? ಇದು ಕೇವಲ ವ್ಯರ್ಥವಾಗಿ ಉದಯಿಸುವುದು॥

ಅಂತು, ಸ್ವಪ್ನವಾವರೀತಿಯಾದುದೋ, ಈ ಜಾಗ್ರತ್ತೂ ಆರೀತಿಯಾದುದೇನು ;

ಸ್ವಪ್ನೇ ಪುರಮಸದ್ಭಾತಿ ಸರ್ಗಾದೌ ಭಾತ್ಯಸಜ್ಜಗತ್ ॥೫೦॥
ನ ಚಾರ್ಥೋ ಭವಿತುಂ ಶಕ್ಯಃ ಸತ್ಯತ್ವೇ ಸ್ವಪ್ನತೋದಿತಃ ।
ಸಂವಿದೋ ನಿತ್ಯಸತ್ಯತ್ವಂ ಸ್ವಪ್ನಾರ್ಥಾನಾಮಸತ್ಯತಾ ॥೫೧॥
ಝಡಿತ್ಯೇವ ಯಥಾಕಾಶಂ ಭವತಿ ಸ್ವಪ್ನಪರ್ವತಃ ।
ಕ್ರಮೇಣ ವಾ ತಥಾ ಬೋಧೇ ಖಂ ಭವತ್ಯಾಧಿಭೌತಿಕಮ್ ॥೫೨॥
ಉಡ್ಡೀನೋಽಯಂ ಮೃತೋ ವೇತಿ ಪಶ್ಯನ್ತಿ ನಿಕಟಸ್ಥಿತಾಃ ।
ಜ್ಞಮಾತಿವಾಹಿಕೀಭೂತಂ ಸ್ವಸ್ವಭಾವಹತಾಯುತಃ ॥೫೩॥
ಮಿಥ್ಯಾದೃಷ್ಟಯಏವೇಮಾಃ ಸೃಷ್ಟಯೋ ಮೋಹದೃಷ್ಟಯಃ ।
ಮಾಯಾಮಾತ್ರದೃಶೋ ಭ್ರಾನ್ತಿಃ ಶೂನ್ಯಾಃ ಸ್ವಪ್ನಾನುಭೂತಯಃ ॥೫೪॥

ಇದರಲ್ಲಿ ಸಂಶಯವಿಲ್ಲ. ಸ್ವಪ್ನದಲ್ಲಿ ಅಸತ್ಯವಾದ ಪಟ್ಟಣವು ಹೇಗೆ ಸ್ಫುರಿಸುವುದೋ, ಹಾಗೆಯೇ ಜಾಗ್ರತ್ತಿನಲ್ಲಿಯೂ ಅಸತ್ಯವಾದ ಜಗತ್ತೇ ಸೃಷ್ಟ್ಯಾದಿಯಲ್ಲಿ ಸ್ಫುರಿಸುವುದು ॥

ಮತ್ತು, ಸ್ವಪ್ನರೂಪವಾಗಿ ಉದಯಿಸುವ ಪ್ರಪಂಚವು, ಜ್ಞಾನದಿಂದ ಸ್ಫುರಣೆಹೊಂದುವುದೆಂದು ಸಂಭಾವನೆ ಮಾಡುವುದೂ ಅಶಕ್ಯವಾದುದು. ಏಕೆಂದರೆ, ಜ್ಞಾನವೆಂಬುದು ನಿತ್ಯಸತ್ಯವಾಗಿರುವುದು. ಸ್ವಪ್ನಾರ್ಥಗಳು ಅತ್ಯಂತಾಸತ್ಯಗಳಾಗಿರುವುವು ॥೫೧॥

ಸ್ವಪ್ನದೃಷ್ಟವಾದ ಪರ್ವತವು, ಎಚ್ಚರವಾದೊಡೊನೆಯೇ ಆಗಲಿ— ಅಥವಾ ಸ್ವಲ್ಪಹೊತ್ತು ವಿಚಾರಮಾಡಿದಮೇಲಾಗಲಿ—ಹೇಗೆ ಸುತರಾಂ ಶೂನ್ಯವಾಗಿಬಿಡುವುದೋ, ಹಾಗೆ ಕ್ರಮವಾಗಿಯಾಗಲಿ—ಈಶ್ವರಾನುಗ್ರಹದಿಂದ ಬೇಗನೆಯಾಗಲಿ—ಜ್ಞಾನವುಂಟಾದಬಳಿಕ, ಈ ಆಧಿಭೌತಿಕಶರೀರವೂ ಶೂನ್ಯವಾಗುವುದು ॥೫೨॥

'ಹಾಗಾದರೆ, ಶುಕಮುಂತಾದವರು ಹಾರಿಹೋದರೆಂದೂ—ದಧೀಚಿಮುಂತಾದವರು ಮೃತರಾದರೆಂದೂ ವ್ಯವಹಾರವಿರುವುದಲ್ಲವೆ ! ಅವರೆಲ್ಲರೂ ಮಹಾಯೋಗಿಗಳಾಗಿರುವುದರಿಂದ, ಅವರೆಲ್ಲರಿಗೂ ಈವಿಧವಾದ ವ್ಯವಹಾರ ರೂಢವಾಗಿರುವುದರಿಂದ, ಅವರಿಗೆ ಆಧಿಭೌತಿಕಶರೀರವಿಲ್ಲದಿದ್ದರೆ ಈ ವ್ಯವಹಾರ ಹೇಗುಂಟಾಯ್ತೆಂದು ಶಂಕೆಯುಂಟಾಗುತ್ತದೆಯಲ್ಲವೆ !' ಎಂದರೆ,—ಯೋಗಿಯಾಗಿ ತತ್ವಜ್ಞನಾದವನ ಹತ್ತಿರವಿರುವರು, ತಮ್ಮ ವಾಸನೆಯ ಪ್ರಾಬಲ್ಯದಿಂದ, ಆತಿವಾಹಿಕಶರೀರಭೂತನಾದ ತತ್ವಜ್ಞಾನಸಂಪನ್ನನನ್ನು, ಇವನು ಹಾರಿಹೋದನೆಂದೋ—ಅಥವಾ ಮೃತನಾದನೆಂದೋ ತಿಳಿಯುವರು. ಅಷ್ಟೇಹೊರತು, ಇದು ಪರಮಾರ್ಥವಲ್ಲ ॥೫೩॥

ಅಂತು, ಕೇವಲ ಮೋಹಕಲ್ಪಿತವಾದ ಈ ಪ್ರಾಪಂಚಿಕ ಪದಾರ್ಥಗಳು, ಐಂದ್ರಜಾಲಿಕನು ಸೃಷ್ಟಿಸುವ ಕೇವಲ ಮಾಯಾಮಾತ್ರ ಪದಾರ್ಥಗಳಂತೆ ಭ್ರಾಂತಿಮಯಗಳಾಗಿಯೂ, ಸ್ವಪ್ನಪದಾರ್ಥಾನುಭವದಂತೆ ಅತ್ಯಂತಶೂನ್ಯವಾಗಿಯೂ ಇರುವುದರಿಂದ, ಮಿಥ್ಯಾಜ್ಞಾನಜನ್ಯಗಳೆಂದೇ ಸಿದ್ಧವಾದುವು ॥೫೪॥

ಸ್ವಪ್ನಾನುಭೂತಯುಇವಾಮರಣಾನ್ತಬೋಧೇ
ಭ್ರಾನ್ತ್ಯೇತರಭ್ರಮದೃಶಃ ಸ್ಫುಟಸರ್ಗಭಾಸಃ |
ಭ್ರಾನ್ತ್ಯಾತಿವಾಹಿಕಶರೀರಗತಾಃ ಸಮಸ್ತಾಃ |
ಮಿಥ್ಯೋದಿತಾಮೃಗನದೀಸರಣಕ್ರಮೇಣ ||೫೫||

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಸ್ವಪ್ನಾರ್ಥವಿಚಾರೋನಾಮ

ಸಪ್ತಪಞ್ಚಾಶಃ ಸರ್ಗಃ.

ತನ್ನ ಭ್ರಾಂತಿಯಿಂದ, ಮನುಷ್ಯನು, ಹೊಸಹೊಸದಾಗಿ ಬೇರೆಬೇರೆ ಪದಾರ್ಥಗಳನ್ನು ತಾನು ಕಾಣುತಿರುವಂತೆ ತಿಳಿಯುವನು; ಹೀಗಿರುವುದರಿಂದ, ಅವನಿಗೆ ಆ ವಾಸನೆಯೇ ದೃಢವಾಗುವುದು; ಬಳಿಕ, ಪ್ರಾಣೋತ್ಕ್ರಮಣವಾಗುವ ಕೊನೆಯಕ್ಷಣದಲ್ಲಿ ಯಾವ ವಾಸನೆಯಿರುವುದೋ, ಅದೇ -ಮುಂದಣ ಜನ್ಮದಲ್ಲಿ ಶರೀರಜ್ಞಾನಹೇತುವಾಗುವುದು. ಹೀಗೆಯೇ ಆತಿವಾಹಿಕಶರೀರಗತವಾಗಿ ಜ್ಞಾನವೆಲ್ಲವೂ ಕೇವಲ ಸ್ವಪ್ನಾನುಭವಸದೃಶವಾಗಿರುವುದು. ಇದನ್ನು, ಮೃಗತೃಷ್ಣಿಕೆಯನ್ನು ಜಿಂಕೆಯುನುಸರಿಸುವಂತೆ, ಅಜ್ಞರು ಅನುಸರಿಸುವರು ||೫೫||

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಸ್ವಪ್ನಾರ್ಥವಿಚಾರವೆಂಬ

ಐವತ್ತೇಳನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಅಷ್ಟಪಞ್ಚಾಶಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಏತಸ್ಮಿನ್ನನ್ತರೇ ಜ್ಞಪ್ತಿಃ ಜೀವಂ ವೈದೂರಥಂ ಪುನಃ ।
ಸಙ್ಕಲ್ಪೇನ ರುರೋಧಾಶು ಮನಸಃ ಸ್ಪನ್ದನಂ ಯಥಾ ॥೧॥

ಲೀಲೋವಾಚ.

ವದ ದೇವಿ ಕಿಯಾನ್ ಕಾಲೋ ಗತೋಽಸ್ಯಾಮಿಹ ಮನ್ದಿರೇ ।
ಸಮಾಧೌ ಮಯಿ ಲೀನಾಯಾಂ ಮಹೀಪಾಲೇ ಶವೇ ಸ್ಥಿತೇ ॥೨॥

ಜ್ಞಪ್ತಿರುವಾಚ.

ಇಹ ಮಾಸಸ್ತ್ವತಿಕ್ರಾನ್ತಃ ಇಹ ದಾಸ್ಯಾವಿಮೇ ತವ ।
ರಕ್ಷಾರ್ಥಂ ವಾಸಗೃಹಕೇ ಸ್ವಪತೋಽವಹಿತೇ ಸ್ಥಿತೇ ॥೩॥

ಉತ್ಪತ್ತಿಪ್ರಕರಣದಲ್ಲಿ ಐವ್ವತ್ತೆಂಟನೆಯ ಸರ್ಗವು.

ಇಹ ಕಾಲಃ ಸಮಾಧಿಸ್ಥಲೀಲಾದೇಹವಿನಾಶನಮ್ ।
ಲೀಲಾಸಮ್ಭಾಷಣಂ ರಾಜ್ಞೋ ಜೀವನಂ ಚೇತಿ ವರ್ಣ್ಯತೇ ॥

ಕಾಲವೂ, ಸಮಾಧಿಯಲ್ಲಿದ್ದ ಲೀಲೆಯ ದೇಹನಾಶವೂ, ಲೀಲೆಯ ಸಂಭಾಷಣೆಯೂ, ಪದ್ಮರಾಜನು ಮತ್ತೆ ಜೀವಿಸುವಿಕೆಯೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪುನಃ ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು:—

ವತ್ಸ! ಪ್ರಕೃತವಾದ ಕಥಾಶೇಷವನ್ನು ಕೇಳುವನಾಗು. ಹಿಂದೆ ಹೇಳಿದಂತೆ, ಲೀಲಾಸರಸ್ವತಿಯರೂ ವಿದೂರಥ ಜೀವಕಲೆಯೂ ಪದ್ಮರಾಜನ ಶವವಿದ್ದ ಸ್ಥಳಕ್ಕೆ ಬಂದು ಅಲ್ಲಿ ನೋಡುತಿರುವ ಸಮಯದಲ್ಲಿ, ಸರಸ್ವತಿಯು, ಮನಸ್ಸಿನ ಚಲನೆಯನ್ನು ತಡೆಯುವಂತೆ, ತನ್ನ ಸಂಕಲ್ಪಶಕ್ತಿಯಿಂದ ವಿದೂರಥ ಜೀವಕಲೆಯನ್ನು ಅಲ್ಲಿಯೇ ತಡೆದುಬಿಟ್ಟಳು ॥೧॥

ಆಗ ಲೀಲೆಯು ಸರಸ್ವತಿಯನ್ನು ಕುರಿತು ಕೇಳುವಳು :—

ಹೇ ದೇವಿ! ಈ ಪದ್ಮರಾಜಸೃಷ್ಟಿಯಲ್ಲಿ, ನಾನು ಈ ಮನೆಯೊಳಗೆ ಸಮಾಧಿಲೀನಳಾಗಿಯೂ ಪದ್ಮರಾಜನು ಶವರೂಪನಾಗಿಯೂ ಇರುವಾಗ, ಎಷ್ಟು ಕಾಲ ಕಳೆದುಹೋಯಿತು? ಇದನ್ನಪ್ಪಣೆಕೊಡು ॥೨॥

ಸರಸ್ವತಿಯು ಉತ್ತರ ಹೇಳುವಳು :—

ಎಲೌ ಲೀಲೆ! ಇಲ್ಲಿ ಒಂದು ತಿಂಗಳು ಕಳೆದಿರುವುದು. ಇಲ್ಲಿ ನಿನ್ನ ದೇಹವನ್ನು ಜಾಗರೂಕರಾಗಿ ಕಾಯ್ದುಕೊಂಡಿದ್ದ ಈ ಯಿಬ್ಬರು ದಾಸಿಯರೂ, ಈ ಮನೆಯಲ್ಲಿ ಈಗ ಮಲಗಿರುವರು ॥೩॥

ಶೃಣು ದೇಹಸ್ಯ ಕಿಂ ವೃತ್ತಂ ತವೇಹ ವರವರ್ಣಿನಿ ।
ಶರೀರಂ ತವ ಪಕ್ಷೇಣ ತತ್ ಕ್ಲಿನ್ನಂ ಬಾಷ್ಪತಾಂ ಗತಮ್ ॥೪॥
ನಿರ್ಜೀವಂ ಪತಿತಂ ಭೂಮೌ ಸಂಶುಷ್ಕಮಿವ ಪಲ್ಲವಮ್ ।
ಕಾಷ್ಠಕುಡ್ಯೋಪಮೋ ಜಾತಃ ಶವಸ್ತು ಹಿಮಶೀತಲಃ ॥೫॥
ತತೋ ಮನ್ತ್ರಿಭಿರಾಗತ್ಯ ಮೃತೈವೇಯಮಿತಿ ಸ್ವಯಮ್ ।
ಕ್ಲೇದಾಲೋಕಾದ್ವಿನಿರ್ಣೀಯ ಭೂಯೋ ನಿಷ್ಕಾಸಿತಂ ಗೃಹಾತ್ ॥೬॥
ಬಹುನಾತ್ರ ಕಿಮುಕ್ತೇನ ನೀತ್ವಾ ಚನ್ದನದಾರುಭಿಃ ।
ಚಿತೌ ಸಂಕ್ಷಿಪ್ಯ ಸಘೃತಂ ಸಹಸಾ ಭಸ್ಮಸಾತ್ ಕೃತಮ್ ॥೭॥
ತತೋ ರಾಜ್ಞೀ ಮೃತೇತ್ಯುಚ್ಚೈಃ ಕೃತ್ವಾ ರೋದನಮಾಕುಲಮ್ ।
ಪರಿವಾರಸ್ತವಾಶೇಷಂ ಕೃತವಾನೌರ್ಧ್ವದೈಹಿಕಮ್ ॥೮॥
ಇದಾನೀಂ ತ್ವಾಮಿಹಾಲೋಕ್ಯ ಸಶರೀರಾಮುಪಾಗತಾಮ್ ।
ಪರಲೋಕಾದಾಗತೇತಿ ಮಹಚ್ಚಿತ್ರಂ ಭವಿಷ್ಯತಿ ॥೯॥
ತ್ವಂ ತು ತೇನ ಶರೀರೇಣ ಸತ್ಯಸಙ್ಕಲ್ಪತಃ ಸುತೇ ।
ದೃಶ್ಯಸೇ ಸ್ವಮದಾತೇನ ಚಿತ್ರಂ ತತ್ರ ತವೋಪರಿ ॥೧೦॥

ಎಲೌ ಉತ್ತಮಸ್ತ್ರೀಯಾದ ಲೀಲೆ! ಆ ನಿನ್ನ ದೇಹವು ಏನಾಯ್ತೆಂಬುದನ್ನು ಈಗ ಕೇಳುವಳಾಗು. ಆ ಶರೀರವು, ಆಗ ಹದಿನಯ್ದುದಿನ ಕಳೆದಬಳಿಕ, ಬೆಮರಿನಿಂದ ತಣ್ಣಗಾಯ್ತು; ಮತ್ತು, ಪ್ರಾಣವಾಯುವನ್ನು ತಡೆದಿದ್ದುದರಿಂದಲೂ, ಜಠರಾಗ್ನಿಯು ದೀಪ್ತವಾದುದರಿಂದಲೂ, ಆ ದೇಹವೆಲ್ಲವೂ ಆವಿಯಾಗಲುಪಕ್ರಮಿಸಿತು॥೪॥

ಆಮೇಲೆ, ಒಣಗಿದೆಲೆಯಂತೆ, ನಿರ್ಜೀವವಾಗಿ ಭೂಮಿಯಮೇಲೆ ಬಿದ್ದಿತು. ಆ ಶವವು, ಕಾಷ್ಠದಂತೆ ಕೇವಲ ನಿಶ್ಚಲವಾಗಿಯೂ, ಹಿಮದಂತೆ ಶೀತಲವಾಗಿಯೂ ಆಯ್ತು॥೫॥

ಬಳಿಕ, ಮಂತ್ರಿಗಳು ಬಂದು, ದೇಹವು ವಿಶೇಷ ತಣ್ಣಗಾಗಿ ಬಿಟ್ಟಿದ್ದುದನ್ನು ನೋಡಿ, ಇವಳು ಮೃತಳಾಗಿಯೇ ಬಿಟ್ಟಳೆಂದು ನಿಶ್ಚಯಿಸಿ, ಆ ದೇಹವನ್ನು ಮನೆಯಿಂದ ಹೊರಕ್ಕೆ ಸಾಗಿಸಿಬಿಟ್ಟರು ॥೬॥

ಬಹಳಹೇಳುವುದೇನು? ಹೊರಕ್ಕೆ ತೆಗೆದುಕೊಂಡು ಹೋಗಿ, ಗಂಧದ ಸೌದೆಗಳಿಂದ ಚಿತಿಯನ್ನು ಮಾಡಿ, ಅದರ ಮೇಲೆ ತುಪ್ಪದಲ್ಲಿ ಅದ್ದಿದ ಆ ಶರೀರವನ್ನು ಇಟ್ಟು, ಕ್ಷಣದೊಳಗಾಗಿ ಸುಟ್ಟುಬಿಟ್ಟರು ॥೭॥

ಅನಂತರ, ನಿನ್ನ ಪರಿವಾರದ ಜನರು, ನಮ್ಮರಾಣಿಯು ಸತ್ತಳೆಂದು ಗಟ್ಟಿಯಾಗಿ ಅತ್ತು, ಬಲು ಕಳವಳ ಪಟ್ಟು, ನಿನಗೆ ಸಮಸ್ತವಾದ ಅಪರಕರ್ಮವನ್ನೂ ಮಾಡಿಬಿಟ್ಟರು ॥೮॥

ಈಗ, ಸಶರೀರಳಾಗಿ ನೀನು ಇಲ್ಲಿಗೆ ಬಂದಿರುವುದನ್ನು ನೋಡಿದರೆ, ಪರಲೋಕದಿಂದ ಮತ್ತೆ ಬಂದಳೆಂದು ಬಲು ಆಶ್ಚರ್ಯ ಪಡುವರು॥೯॥

ಎಲೌ ಪುತ್ರಿ! ನೀನಾದರೋ, ಈಗ ಸತ್ಯಸಂಕಲ್ಪಳಾಗಿರುವುದರಿಂದ, ಅತ್ಯುತ್ತಮವಾದ ಆ ಪೂರ್ವದೇಹದಿಂದಲೇ ಇವರಿಗೆ ಗೋಚರವಾಗುವೆ. ಅದರಿಂದ, ನಿನ್ನ ವಿಷಯದಲ್ಲಿ ಇವರೆಲ್ಲರಿಗೂ ಆಶ್ಚರ್ಯವುಂಟಾಗುವುದು ॥೧೦॥

ಯದ್ವಾಸನಾ ತ್ವಮಭವೋ ದೇಹಂ ಪ್ರತಿ ತದೇವ ತೇ ।
ರೂಪಮಭ್ಯುದಿತಂ ಬಾಲೇ ತೇನ ಪ್ರಾಕ್ಸದೃಶಂ ತವ ॥೧೧॥
ಸ್ವವಾಸನಾನುಸಾರೇಣ ಸರ್ವಃ ಸರ್ವಂ ಹಿ ಪಶ್ಯತಿ ।
ದೃಷ್ಟಾನ್ತೋತ್ರಾವಿಸಂವಾದೀ ಬಾಲವೇತಾಳದರ್ಶನಮ್ ॥೧೨॥
ಆತಿವಾಹಿಕದೇಹಾಸಿ ಸಮ್ಪನ್ನಾ ಸಿದ್ಧಸುನ್ದರೀ ।
ವಿಸ್ಮೃತಸ್ತ್ವೇವ ದೇಹೋಸೌ ಪ್ರಾಕ್ತನೋನಲ್ಪವಾಸನಃ ॥೧೩॥
ರೂಢಾತಿವಾಹಿಕದೃಶಃ ಪ್ರಶಾಮ್ಯತ್ಯಾಧಿಭೌತಿಕಃ ।
ಬುಧಸ್ಯ ದೃಶ್ಯಮಾನೋಪಿ ಶರನ್ಮೇಘಇವಾಮ್ಬರೇ ॥೧೪॥
ರೂಢಾತಿವಾಹಿಕೇಭಾವಃ ಸರ್ವೋ ಭವತಿ ದೇಹಕಃ ।
ನಿರ್ಜಲಾಮ್ಭೋದಸದೃಶೋ ನಿರ್ಗನ್ಧಕುಸುಮೋಪಮಃ ॥೧೫॥
ಸದ್ವಾಸನಸ್ಯ ರೂಢಾಯಾಂ ಆತಿವಾಹಿಕಸಂವಿದಿ ।
ದೇಹೋ ವಿಸ್ಮೃತಿಮಾಯಾತಿ ಗರ್ಭಸಂಸ್ಥೇವ ಯೌವನೇ ॥೧೬॥
ಏಕತ್ರಿಂಶೇದ್ಯ ದಿವಸೇ ಪ್ರಾಪ್ತಾವಯಮಿಹಾಮ್ಬರೇ ।
ಪ್ರಭಾತೇ ಮೋಹಿತೇ ದಾಸ್ಯೌ ಮಯ್ಯೈತೇ ನಿದ್ರಯಾಧುನಾ ॥೧೭॥

ನೀನು, ನಿನ್ನ ದೇಹದ ವಿಷಯದಲ್ಲಿ ಯಾವ ವಾಸನೆಯುಳ್ಳವಳಾಗಿದ್ದೆಯೋ, ಆ ವಾಸನಾನುಗುಣವಾಗಿ ಆ ಪೂರ್ವರೂಪವೇ ನಿನಗೀಗ ಉಂಟಾಗಿರುವುದು ॥೧೧॥

ಪ್ರಪಂಚದಲ್ಲಿ, ಸಮಸ್ತರೂ ತಮ್ಮ ವಾಸನೆಗೆ ಅನುಸಾರವಾಗಿ ಆಯಾ ಸಮಸ್ತ ವಿಷಯುಗಳನ್ನೂ ಅನುಭವಿಸುವರು. ಈ ವಿಷಯದಲ್ಲಿ, ಬಾಲಕನು ವೇತಾಳವನ್ನು ನೋಡುವುದೇ, ಸರಿಯಾದ ದೃಷ್ಟಾಂತವು ॥೧೨॥

ಹೀಗೆ ನೀನು ಆತಿವಾಹಿಕದೇಹಯುಕ್ತಳಾಗಿರುವೆ; ಮತ್ತು, ತತ್ವಜ್ಞಾನಸಂಪನ್ನಳಾದ ಸ್ತ್ರೀಯಾಗಿರುವೆ; ನಿನ್ನ ಪೂರ್ವದೇಹವನ್ನು ಮರತೇಬಿಟ್ಟಿರುವೆ; ಆದರೆ, ವಾಸನೆ ಮಾತ್ರ ಸ್ವಲ್ಪ ಸಶೇಷವಾಗಿರುವುದು. ಅದುಕಾರಣ, ಈಗ ನಿನಗೆ ಆತಿವಾಹಿಕದೇಹದಲ್ಲಿ ಆ ಪೂರ್ವದೇಹದ ಆಕಾರವಿರುವುದು ॥೧೩॥

ಆತಿವಾಹಿಕಜ್ಞಾನವು ಸ್ಥಿರವಾಗಿರುವ ತತ್ವಜ್ಞಾನಿಗೆ, ಆಕಾಶದಲ್ಲಿರುವ ಶರತ್ಕಾಲದ ಮೇಘದಂತೆ, ಆಧಿಭೌತಿಕದೇಹವು—ಕಣ್ಣಿಗೆ ಕಾಣುತಿದ್ದಹಾಗೆಯೇ ಶಾಂತವಾಗುವುದು ॥

ಆತಿವಾಹಿಕ ಭಾವಸ್ಥಿರವಾಗಿರುವ ಸಮಸ್ತ ದೇಹವೂ, ನಿರ್ಜಲವಾದ ಮೇಘಕ್ಕೆ ಸಮಾನವಾಗಿಯೂ, ನಿರ್ಗಂಧವಾದ ಕುಸುಮಕ್ಕೆ ಸಮವಾಗಿಯೂ ಇರುವುದು ॥೧೫॥

ವಾಸನಾಶೇಷವಿರಕ್ತನಿಗೆ, ಆತಿವಾಹಿಕಜ್ಞಾನವು ಸ್ಥಿರವಾದಾಗ, ಯೌವನಸ್ಥನಿಗೆ ತಾನು ಗರ್ಭದಲ್ಲಿದ್ದ ಅವಸ್ಥೆಯು ಮರೆತುಹೋಗುವಂತೆ, ಸ್ಥೂಲಶರೀರವು ಮರೆತುಹೋಗುವುದು ॥೧೬॥

ಎಲೌ ಲೀಲೆ! ನಾವು ಈ ಸ್ಥಳವನ್ನು ಬಿಟ್ಟು ಇಂದಿಗೆ ಮೂವತ್ತು ದಿವಸ ಕಳೆದು ಮೂವತೊಂದನೆಯ ದಿವಸವಾಗಿರುವುದು. ಈಗ ಇಲ್ಲಿಗೆ ನಾವಿಬ್ಬರೂ ಬಂದಿರುವೆವು. ಈ ದಿನ ಪ್ರಾತಃಕಾಲದಲ್ಲಿ, ನಾನು ಈ ನಿನ್ನ ದಾಸಿಯರಿಬರನ್ನೂ ನಿದ್ರೆಯಿಂದ ಮೋಹಪಡಿಸಿದೆನು ॥೧೭॥

ತದೇಹಿ ಯಾವಲ್ಲೀಲಾಯೈ ಲೀಲೇ ಸಙ್ಕಲ್ಪಲೀಲಯಾ ।
ಆತ್ಮಾನಂ ದರ್ಶಯಾವೋಸ್ಯೈ ವ್ಯವಹಾರಃ ಪ್ರವರ್ತತಾಮ್ ॥೧೮॥

ಶ್ರೀವಸಿಷ್ಠ ಉವಾಚ.

ಆವಾಂ ತಾವದಿಮೇ ಲೀಲಾ ಪಶ್ಯತ್ವಿತ್ಯೇವ ಚಿನ್ತಿತೇ ।
ಜ್ಞಪ್ತ್ಯಾ ದೇವ್ಯಾ ತತಸ್ತತ್ರ ದೃಶ್ಯೇ ದೀಪ್ತೇ ಬಭೂವತುಃ ॥೧೯॥
ಸಾ ವಿದೂರಥಲೀಲಾಥ ಸಮಾಕುಲವಿಲೋಚನಾ ।
ಗೃಹಮಾಲೋಕಯಾಮಾಸ ತತ್ತೇಜಃಪುಞ್ಜಭಾಸುರಮ್ ॥೨೦॥
ಚನ್ದ್ರಬಿಮ್ಬಾದಿವೋತ್ಕೀರ್ಣಂ ಧೌತಂ ಹೇಮದ್ರವೈರಿವ ।
ಜ್ವಾಲಾಯಾದ್ರವಶೀತಾಯಾಃ ತತ್ಪ್ರಭಾದ್ರವಭಿತ್ತಿಮತ್ ॥೨೧॥
ಗೃಹಮಾಲೋಕ್ಯ ಪುರತೋ ಲೀಲಾಜ್ಞಪ್ತೀ ವಿಲೋಕ್ಯ ತೇ ।
ಉತ್ಥಾಯ ಸಮ್ಭ್ರಮವತೀ ತಯೋಃ ಪಾದೇಷು ಸಾಪತತ್ ॥೨೨॥
ಮಜ್ಜಯಾಯಾಗತೇ ದೇವ್ಯೌ ಜಯತಾಂ ಜೀವನಪ್ರದೇ ।
ಇಹ ಪೂರ್ವಮಹಂ ಪ್ರಾಪ್ತಾ ಭವತ್ಯೋರ್ಮಾರ್ಗಶೋಧಿನೀ ॥೨೩॥

ಆದುಕಾರಣ, ಎಲೌ ಲೀಲೆ! ನನ್ನ ಜತೆಯಲ್ಲಿ ಬಾ; ನಮ್ಮ ಸಂಕಲ್ಪಶಕ್ತಿವಿಲಾಸದಿಂದ, ಈ ವಿದೂರಥ ಲೀಲೆಗೆ ಕಾಣಿಸಿಕೊಳ್ಳುವ. ಮುಂದೆ ಇಲ್ಲಿ ನಡೆಯಬೇಕಾದ ಪ್ರಪಂಚವ್ಯವಹಾರವು ನಡೆಯಲಿ ॥೧೮॥

ಹೀಗೆ ಸರಸ್ವತೀವಾಕ್ಯವನ್ನು ಹೇಳುತಿರುವ ವಸಿಷ್ಠಮುನಿಗಳು ಶ್ರೀರಾಮನನ್ನು ಕುರಿತು ಹೇಳುವರು :—

ಅಯ್ಯಾ! ರಾಮ! ಹೀಗೆ ಆ ಸರಸ್ವತಿಯು ನಮ್ಮಿಬ್ಬರನ್ನೂ ಈ ದ್ವಿತೀಯಲೀಲೆ ನೋಡಲೆಂದು ಚಿಂತಿಸಲಾಗಿ, ಆ ಕ್ಷಣವೇ ಅವರಿಬ್ಬರೂ ಜನರ ಕಣ್ಣಿಗೆ ಗೋಚರವಾದರು॥

ಬಳಿಕ, ಆ ವಿದೂರಥಲೀಲೆಯು, ಕಣ್ಣುಕೊಕ್ಕರಿಸಿದವಳಾಗಿ, ಆ ಮನೆಯೆಲ್ಲವೂ ಅವರಿಬ್ಬರ ತೇಜಸ್ಸಿನಿಂದ ಬೆಳಗುತಿರುವುದನ್ನು ಕಂಡಳು ॥೨೦॥

ಆಗ, ದ್ರವರೂಪವಾಗಿ ತಣ್ಣಗೆ ಪ್ರಸರಿಸಿದ ಅವರಿಬ್ಬರ ತೇಜಸ್ಸಿನಿಂದ ಗೋಡೆಯೆಲ್ಲವೂ ಆರೀತಿಯಾಗಿ ಬಿಟ್ಟಿರುವ ಆ ಮನೆಯು, ಚಂದ್ರಮಂಡಲದಿಂದ ಹೊರಗೆ ತೆಗೆಯಲ್ಪಟ್ಟಿರುವಂತೆಯೂ, ಸುವರ್ಣದ ನೀರಿನಿಂದ ತೊಳೆಯಲ್ಪಟ್ಟಿರುವಂತೆಯೂ ಪ್ರಕಾಶಿಸುತಿದ್ದಿತು॥

ಬಳಿಕ, ಆ ವಿದೂರಥಲೀಲೆಯು, ಈರೀತಿಯಾಗಿರುವ ಮನೆಯನ್ನು ನೋಡಿ, ಮುಂಭಾಗದಲ್ಲಿ ನಿಂತಿರುವ ಆ ಲೀಲಾಸರಸ್ವತಿಯರನ್ನೂ ಕಂಡು, ಸಂಭ್ರಮದಿಂದ ತಟ್ಟನೆ ಎದ್ದು, ಅವರ ಕಾಲಿಗೆ ನಮಸ್ಕಾರ ಮಾಡಿದಳು ॥೨೨॥

ನಮಸ್ಕಾರ ಮಾಡಿದ ಬಳಿಕ, ಅವಳು ಆ ಲೀಲಾ ಸರಸ್ವತಿಯರನ್ನು ಕುರಿತು ಹೀಗೆ ಹೇಳಿದಳು; 'ನನ್ನ ಮಂಗಳಾಭಿವೃದ್ಧಿಗಾಗಿಯೇ ಇಲ್ಲಿಗೆ ಬಂದು ನನಗೆ ಜೀವವನ್ನು ಕೊಟ್ಟಂತಹ ದೇವಿಯರೆ! ನಿಮಗೆ ಜಯವಾಗಲಿ. ನಾನು, ನಿಮ್ಮಿಬ್ಬರಿಗೂ ಮಾರ್ಗಶೋಧನೆಮಾಡುವುದಕ್ಕಾಗಿ, ಇಲ್ಲಿಗೆ ಮುಂಚೆ ಬಂದಿರುವೆನು' ಎಂದು ಆ ವಿದೂರಥಲೀಲೆಯು

ಇತ್ಯುಕ್ತವತ್ಯಾಂ ತಸ್ಯಾಂ ತಾಃ ಮಾನಿನ್ಯೋ ಮತ್ತಯೌವನಾಃ ।
ಉಪಾವಿಶನ್ ವಿಷ್ಟರೇಷು ಲತಾಮೇರುಶಿರಸ್ಸ್ವಿವ ॥೨೪॥

ಜ್ಞಪ್ತಿರುವಾಚ.

ಸುತೇ ವದ ಕಥಂ ಪ್ರಾಪ್ತಾ ತ್ವಮಿಮಂ ದೇಶಮಾದಿತಃ ।
ಕಿಂ ವೃತ್ತಂ ತೇ ತ್ವಯಾ ದೃಷ್ಟಂ ಕಿಮಿವಾಧ್ವನಿ ಕುತ್ರ ವಾ ॥೨೫॥

ವಿದೂರಥಲೀಲೋವಾಚ

ದೇವಿ ತಸ್ಮಿನ್ ಪ್ರದೇಶೇ ಸಾ ಜಾತಮೂರ್ಛಾ ತದಾಭವಮ್ ।
ದ್ವಿತೀಯೇನ್ದೋಃ ಕಲೇವಾಹಂ ಕಲ್ಪಾನ್ತಜ್ವಾಲಯಾ ಹತಾ ॥೨೬॥
ನ ಚೇತಿತಂ ಮಯಾ ಕಿಂಚಿತ್ ಸಮಂ ವಿಷಮಮೇವ ಚ ।
ತತಸ್ತರಳಪಕ್ಷ್ಮಾನ್ತೇ ವಿನಿಮೀಲ್ಯ ವಿಲೋಚನೇ ॥೨೭॥
ತತೋ ಮರಣಮೂರ್ಛಾನ್ತೇ ಪಶ್ಯಾಮಿ ಪರಮೇಶ್ವರಿ ।
ಯಾವದಭ್ಯುದಿತಾಸ್ಮ್ಯಶು ಪ್ಲುತಾ ಚ ಗಗನೋದರೇ ॥೨೮॥
ಭೂತಾಕಾಶೇನಿಲರಥಂ ಸಮಾರೂಢಾಸ್ಮ್ಯಹಂ ತತಃ ।
ಆನೀತಾ ಗನ್ಧಲೇಖೇವ ತೇನಾಹಮಿಮಮಾಲಯಮ್ ॥೨೯॥

ಹೇಳಲಾಗಿ, ಮೇರುಪರ್ವತದ ಶಿಖರಗಳಮೇಲೆ ಲತೆಗಳು ಕುಳಿತುಕೊಳ್ಳುವಂತೆ, ಆ ಯುವತಿಯರೆಲ್ಲರೂ ಆಸನಗಳಲ್ಲಿ ಕುಳಿತುಕೊಂಡರು ॥೨೩—೨೪॥

ಆಗ ಶ್ರೀ ಸರಸ್ವತಿಯು ವಿದೂರಥಲೀಲೆಯೊಡನೆ ಮಾತನಾಡುವಳು :—

ಹೇ ಪುತ್ರಿ! ನೀನು ಈ ಪ್ರದೇಶಕ್ಕೆ ಹೇಗೆ ಬಂದೆ? ಅಲ್ಲಿಂದ ಹೊರಟುದುದು ಮೊದಲು, ಇದುವರೆಗೆ ನಿನ್ನ ವ್ಯಾಪಾರವೇನು? ನೀನು ಯಾವ ಮಾರ್ಗದಲ್ಲಿ ಏನೇನುಕಂಡೆ? ಈ ವಿಷಯವನ್ನೆಲ್ಲ ವಿಶದವಾಗಿ ಹೇಳು ॥೨೫॥

ಬಳಿಕ ಆ ವಿದೂರಥಲೀಲೆಯು ಉತ್ತರಹೇಳುವಳು :—

ದೇವಿ! ನೀವು ಕಂಡಹಾಗೆಯೇ, ನಾನು ಆಗ ಆ ಪ್ರದೇಶದಲ್ಲಿ, ಪ್ರಳಯಾಗ್ನಿಜ್ವಾಲೆಯಿಂದ ಹತವಾದ ಎರಡನೆಯ ಚಂದ್ರಕಲೆಯೋ ಎಂಬಂತೆ, ಮೂರ್ಛಿತಳಾದೆನಲ್ಲವೆ! ॥

ಬಳಿಕ, ರಪ್ಪೆಯ ತುದಿಮಾತ್ರ ಅಲುಗುತಿರುವ ಕಣ್ಣುಗಳನ್ನು ಮುಚ್ಚಿಕೊಂಡು ಬರುತಿರುವಾಗ, ನಾನು ದಾರಿಯುಲ್ಲಿ ಹಳ್ಳತಿಟ್ಟುಗಳೊಂದನ್ನೂ ನೋಡಿದವಳಲ್ಲ ॥೨೭॥

ಹೇ ಪರಮೇಶ್ವರಿ! ಬಳಿಕ, ಮರಣಮೂರ್ಛಾಂತದಲ್ಲಿ ಯಾವಾಗ ನೋಡಿದೆನೋ, ಆಗ ನಾನು ಮತ್ತೆ ಹುಟ್ಟಿದವಳಂತೆಯೂ, ಆಕಾಶಮಧ್ಯದಲ್ಲಿ ಹಾರುತಿರುವಂತೆಯೂ, ಅಲ್ಲಿ ಮಹಾಕಾಶದೊಳಗೆ ವಾಯುರೂಪವಾದ ರಥವನ್ನು ಹತ್ತಿರುವಂತೆಯೂ ಕಂಡೆನು. ಆ ರಥವು, ವಾಯುವು ಗಂಧವನ್ನು ತೆಗೆದುಕೊಂಡುಬರುವಂತೆ, ನನ್ನನ್ನು ಈ ಮನೆಗೆ ಕರೆದು ತಂದಿತು ॥೨೮—೨೯॥

ದೇವಿ ಪಶ್ಯಾಮಿ ಸದನಂ ನಾಯಕೇನಾಭ್ಯಲಙ್ಕೃತಮ್ |
ದೀಪ್ತದೀಪಂ ವಿವಿಕ್ತಂ ಚ ಮಹಾರ್ಹಶಯನಾನ್ವಿತಮ್ ||೩೦||
ಪತಿಮಾಲೋಕಯಾಮ್ಯಾಮಂ ಯಾವದೇಷ ವಿದೂರಥಃ |
ಶೇತೇ ಕುಸುಮಗುಪ್ತಾಙ್ಗೋ ಮಧುಃ ಪುಷ್ಪವನೇ ಯಥಾ ||೩೧||
ಅಥ ಸಙ್ಗ್ರಾಮಸಂರಮ್ಭಶ್ರಮಾರ್ತೋಽಯಂ ಸ್ವಪಿತ್ಯಲಮ್ |
ಇತಿ ನಿದ್ರಾ ಮಯಾ ಸೇಯಂ ದೇವೇಶ್ವರಿ ನ ವಾರಿತಾ ||೩೨||
ಅನನ್ತರಮಿಮಂ ದೇಶಂ ಪ್ರಾಪ್ತೇ ದೇವ್ಯಾವಿಮೇ ತ್ವಿತಿ |
ಯಥಾನುಭೂತಂ ಕಥಿತಂ ಮದನುಗ್ರಹಕಾರಿಣಿ ||೩೩||

ಜ್ಞಪ್ತಿರುವಾಚ.

ಹೇ ಹಂಸಹಾರಿಗಾಮಿನ್ಯೌ ಲೀಲೇ ಲಲಿತಲೋಚನೇ |
ಉತ್ಥಾಪಯಾಮೋ ನೃಪತಿಂ ಶವತಲ್ಪತಲಾದಿಮಮ್ ||೩೪||
ಇತ್ಯುಕ್ತ್ವಾ ಮುಮುಚೇ ಜೀವಂ ಆಮೋದಮಿವ ಪದ್ಮಿನೀ |
ಸ ಸಮೀರಲತಾಕಾರಃ ತನ್ನಾಸಾನಿಕಟಂ ಯಯೌ ||೩೫||
ಘ್ರಾಣಕೋಶಂ ವಿವೇಶಾನ್ತಃ ವಂಶರನ್ಧ್ರಮಿವಾನಿಲಃ |
ಸ್ವವಾಸನಾಶತಾನ್ಯನ್ತಃ ದಧದಬ್ಧಿರ್ಮಣೀನಿವ ||೩೬||

ಎಲೌ ದೇವಿ ! ನಾನು ಇಲ್ಲಿ ಬಂದಮೇಲೆ, ನನ್ನ ಪತಿಯಿಂದ ಅಲಂಕರಿಸಲ್ಪಟ್ಟುದಾಗಿ ದೀಪಗಳುರಿಯುತ ವಿಜನವಾಗಿ ಪ್ರಶಸ್ತಶಯನ ಯುಕ್ತವಾಗಿರುವ ಈ ಮನೆಯನ್ನು ಕಂಡೆನು ||೩೦||

ಇಲ್ಲಿ ಈ ಮನೆಯೊಳಗೆ ನನ್ನ ಪತಿಯನ್ನು ನಾನು ನೋಡುವುದಕ್ಕೆ ಹೋದಾಗ, ಪುಷ್ಪವನದಲ್ಲಿ ವಸಂತನು ವಾಸಮಾಡುವಂತೆ—ಈ ವಿದೂರಥನು ಪುಷ್ಪಮಧ್ಯದಲ್ಲಿ ಮರೆಯಾಗಿ ಮಲಗಿರುವುದನ್ನು ಕಂಡೆನು ||೩೧||

ಇವನನ್ನು ಕಂಡಬಳಿಕ, ಯುದ್ಧಾಯಾಸದಿಂದ ಇವನು ಹೆಚ್ಚಾಗಿ ನಿದ್ರೆಮಾಡುತಿರುವನೆಂದು ತಿಳಿದು, ನಾನು ಇವನ ನಿದ್ರೆಯನ್ನು ಹೋಗಲಾಡಿಸಲಿಲ್ಲ ||೩೨||

ಆಮೇಲೆ ನೀವಿಬ್ಬರೂ ಇಲ್ಲಿಗೆ ಬಂದಿರಿ. ನನ್ನಲ್ಲಿ ವಿಶೇಷವಾಗಿ ಅನುಗ್ರಹಮಾಡುತಿರುವ ಸರಸ್ವತಿಯೇ ! ಇದೋ ಈರೀತಿಯಾಗಿ ನಾನು ಅನುಭವಿಸಿದುದನ್ನೆಲ್ಲ ತಪ್ಪದೆ ವಿಜ್ಞಾಪಿಸಿರುವೆನು ||೩೩||

ಇದನ್ನು ಕೇಳಿ ಶ್ರೀಸರಸ್ವತಿಯು ಮಾತನಾಡುವಳು:—

ಹಂಸದಂತೆ ಮನೋಹರವಾದ ಗಮನವುಳ್ಳ ಸುಂದರನೇತ್ರೆಯರಾದ ಲೀಲೆಯಿರಾ! ಈ ದೊರೆಯನ್ನು, ಮೃತಶಯ್ಯೆಯ ದೆಸೆಯಿಂದ ಎಬ್ಬಿಸುವ ||೩೪||

ಅಯ್ಯಾ ! ರಾಮ ! ಹೀಗೆಂದು ಹೇಳಿ, ಆ ಸರಸ್ವತಿಯು, ಕಮಲಲತೆಯು ಪರಿಮಳವನ್ನು ಬಿಡುವಂತೆ, ಇದುವರೆಗೆ ತಾನು ತಡೆದುಕೊಂಡಿದ್ದ ಜೀವಕಲೆಯನ್ನು ಬಿಟ್ಟುಬಿಟ್ಟಳು. ಆ ಜೀವನು ವಾಯುರೂಪವಾಗಿ ಆ ಶವದ ಮೂಗಿನ ಸಮೀಪಕ್ಕೆ ಹೋಯ್ತು ||೩೫||

ಅಲ್ಲಿ ಹೋದಬಳಿಕ, ಸಮುದ್ರವು ರತ್ನಗಳನ್ನು ಧರಿಸಿರುವಂತೆ ತನ್ನ ವಾಸನಾಶತಗಳನ್ನು ಒಳಗೆ ಧರಿಸಿರುವ ಆ ಜೀವವು, ಬಿದುರಿನೊಳಗೆ ವಾಯುವು ಪ್ರವೇಶಿಸುವಂತೆ ಮೂಗಿನಸೊಳ್ಳೆಯೊಳಗೆ ವಾಯುರೂಪದಿಂದ ಪ್ರವೇಶಮಾಡಿತು ||೩೬||

ಅನ್ತಸ್ಸ್ಥಜೀವಂ ವದನಂ ತಸ್ಯ ತತ್ ಕಾನ್ತಿಮಾಯಯೌ |
ಪದ್ಮಸ್ಯಾವಗ್ರಹೇ ಪದ್ಮಂ ಸುವೃಷ್ಟಇವ ವಾರಿಭಿಃ ||೩೭||
ಕ್ರಮಾದಙ್ಗಾನಿ ಸರ್ವಾಣಿ ಸರಸಾನಿ ಚಕಾಶಿರೇ |
ತಸ್ಯ ಪುಷ್ಪಾಕರಇವ ಲತಾಜಾಲಾನಿ ಭೂಭೃತಃ ||೩೮||
ಅಥಾಬಭೌ ಕಲಾಪೂರ್ಣಃ ಸ ರಾಕಾಯಾಮಿವೋಡುರಾಟ್ |
ಭಾಸಯನ್ ಭುವನಂ ಭೂರಿ ವದನೇನ್ದುಮರೀಚಿಭಿಃ ||೩೯||
ಸ್ಫುರಯಾಮಾಸ ಸೋಙ್ಗಾನಿ ರಸವನ್ತಿ ಮೃದೂನಿ ಚ |
ಕನಕೋಜ್ಜ್ವಲಕಾನ್ತೀನಿ ಪಲ್ಲವಾನೀವ ಮಾಧವಃ ||೪೦||
ಉನ್ಮೀಲಯಾಮಾಸ ದೃಶೌ ವಿಮಲಾಲೋಲತಾರಕೇ |
ಹಾರಿಣ್ಯೌ ಸುಭಗಾಭೋಗೇ ಚನ್ದ್ರಾರ್ಕೌ ಭುವನಂ ಯಥಾ ||೪೧||
ಉತ್ತಸ್ಥೌ ಪ್ರೋಲ್ಲಸತ್ಕಾಯೋ ವಿನ್ಧ್ಯಾದ್ರಿರ್ವೃದ್ಧಿಮಾನಿವ |
ಉವಾಚ ಕಃ ಸ್ಥಿತಇತಿ ಘನಗಮ್ಭೀರನಿಸ್ವನಮ್ ||೪೨||
ಲೀಲಾದ್ವಯಮಥಾಸ್ಯಾಗ್ರೇ ಪ್ರೋವಾಚಾದಿಶ್ಯತಾಮಿತಿ |
ಸ ದದರ್ಶ ಪುರೋ ನಮ್ರಂ ಲೀಲಾದ್ವಯಮವಸ್ಥಿತಮ್ ||೪೩||

ಆಬಳಿಕ, ಜೀವಕಳೆಯು ಒಳಗೆ ಸೇರಿಕೊಂಡಿರುವ ಆ ಪದ್ಮರಾಜನ ಮುಖವು, ಅನಾವೃಷ್ಟಿಯಲ್ಲಿ ಚೆನ್ನಾಗಿ ಮಳೆ ಸುರಿದಾಗ ಕಮಲವು ಕಾಂತಿಹೊಂದುವಂತೆ, ವಿಶೇಷವಾಗಿ ಕಾಂತಿಹೊಂದಿತು ||೩೭||

ಅನಂತರ, ವಸಂತಕಾಲದಲ್ಲಿ ಪರ್ವತಲತೆಗಳು ಚಿಗುರುವಂತೆ, ಆ ದೊರೆಯ ಅವಯವಗಳೆಲ್ಲವೂ ಕ್ರಮೇಣ ಸರಸಗಳಾಗಿ ಪ್ರಕಾಶಿಸಲುಪಕ್ರಮಿಸಿದುವು ||೩೮||

ಆಮೇಲೆ, ಪೂರ್ಣಿಮೆಯಲ್ಲಿ ಕಲಾಪೂರ್ಣವಾಗಿ ಚಂದ್ರನು ಬೆಳಗುವಂತೆ, ಆ ದೊರೆಯು, ತನ್ನ ಮುಖಚಂದ್ರನ ಕಿರಣಗಳಿಂದ ಭವನವನ್ನೆಲ್ಲ ಪ್ರಕಾಶಪಡಿಸುತ ಶೋಭಿಸಿದನು||

ಆಬಳಿಕ, ವಸಂತನು ಚಿಗುರುಗಳನ್ನು ಅಲುಗಿಸುವಂತೆ, ಆ ದೊರೆಯು, ಸರಸವಾಗಿಯೂ ಮೃದುವಾಗಿಯೂ ಸುವರ್ಣಕಾಂತಿಗಳಾಗಿಯೂ ಇರುವ ತನ್ನ ಅವಯವಗಳನ್ನು ಸ್ವಲ್ಪಸ್ವಲ್ಪವಾಗಿ ಅಲುಗಾಡಿಸಲುಪಕ್ರಮಿಸಿದನು ||೪೦||

ಅನಂತರ, ಸರ್ವಭೂತಾತ್ಮನಾದ ವಿರಾಟ್ಪುರುಷನು ತನ್ನ ನೇತ್ರಭೂತವಾದ ಸೂರ್ಯಚಂದ್ರರನ್ನು ವಿಕಾಸಪಡಿಸುವಂತೆ, ಆ ದೊರೆಯು, ನಿರ್ಮಲವಾಗಿಯೂ ಚಂಚಲತಾರಕ (ಕಣ್ಣುಗುಡ್ಡೆ) ವಾಗಿಯೂ ಅತಿಮನೋಹರವಾದ ಸನ್ನಿವೇಶವುಳ್ಳವಾಗಿಯೂ ಇರುವ ತನ್ನ ಕಣ್ಣುಗಳನ್ನು ತೆರೆದನು ||೪೧||

ಕಣ್ಣುಬಿಟ್ಟವನಾಗಿ, ವಿಂಧ್ಯಪರ್ವತವು ಮಲಗಿದ್ದು ಮತ್ತೆ ಬೆಳೆದಂತೆ, ಹಾಸಿಗೆಯಿಂದೆದ್ದನು. ಆಮೇಲೆ, ಅಲ್ಲಿ ಯಾರಿರುವರು ?—ಎಂದು ಮೇಘದಂತೆ ಗಂಭೀರಧ್ವನಿಯೊಡನೆ ಕೂಗಿದನು ||೪೨||

ಆಗ, ಆ ಲೀಲೆಯರಿಬ್ಬರೂ ಮುಂದುಗಡೆ ನಮ್ರರಾಗಿ, ಅಪ್ಪಣೆಯಾಗಬೇಕು ಎಂದು ಹೇಳಿದರು. ಹೀಗೆ ಮುಂದುಗಡೆ ನಿಂತುಕೊಂಡು ಆ ಲೀಲೆಯರು ಹೇಳುತಿರುವಾಗ,

ಸಮಾಚಾರಂ ಸಮಾಕಾರಂ ಸಮರೂಪಂ ಸಮಸ್ಥಿತಿ ।
ಸಮವಾಕ್ಯಂ ಸಮೋದ್ಯೋಗಂ ಸಮಾನನ್ದಂ ಸಮೋದಯಮ್ ॥೪೪॥
ಕಾ ತ್ವಂ ಕೇಯಂ ಕುತಶ್ಚೇಯಂ ಇತ್ಯಾಹ ಸ ವಿಲೋಕಯನ್ ।
ತಸ್ಮೈ ಲೀಲಾಹ ಹೇದೇವ ಶ್ರೂಯತಾಂ ಯದ್ವದಾಮ್ಯಹಮ್ ॥೪೫॥
ಮಹಿಳಾ ತವ ಲೀಲಾಹಂ ಪ್ರಾಕ್ತನೀ ಸಹಧರ್ಮಿಣೀ ।
ವಾಗರ್ಥಸ್ಯೇವ ಸಮ್ಪೃಕ್ತಾ ಸ್ಥಿತಾ ಸಂಶ್ಲೇಷಶಾಲಿನೀ ॥೪೬॥
ಇಯಂ ಲೀಲಾ ದ್ವಿತೀಯಾ ತೇ ಮಹಿಳಾ ಹೇಲಯಾ ಮಯಾ ।
ಉಪಾರ್ಜಿತಾ ತ್ವದರ್ಥೇನ ಪ್ರತಿಬಿಮ್ಬಮಯೀ ಶುಭಾ ॥೪೭॥
ಶಿರೋಭಾಗೋಪವಿಷ್ಟೇಯಂ ಯಾ ಹಿ ಹೈಮಮಯಾಸನೇ ।
ಏಷಾ ಸರಸ್ವತೀ ದೇವ ತ್ರೈಲೋಕ್ಯಜನನೀ ಶಿವಾ ॥೪೮॥
ಅಸ್ಮಾಕಂ ಪುಣ್ಯಸಮ್ಭಾರೈಃ ಇಹ ಸಾಕ್ಷಾದುಪಾಗತಾ ।
ಅನಯೇಮೇ ಪರಾಲ್ಲೋಕಾತ್ ಇಹಾನೀತೇ ಮಹೀಪತೇ ॥೪೯॥
ಇತ್ಯಾಕರ್ಣ್ಯ ಸಮುತ್ಥಾಯ ರಾಜಾ ರಾಜೀವಲೋಚನಃ ।
ಲಮ್ಬಮಾಲ್ಯಾಮ್ಬರಧರಃ ಪಪಾತ ಜ್ಞಪ್ತಿಪಾದಯೋಃ ॥೫೦॥
ಸರಸ್ವತಿ ನಮಸ್ತುಭ್ಯಂ ದೇವಿ ಸರ್ವಹಿತಪ್ರದೇ ।

ಆಚಾರ ಆಕಾರ ವೇಷ ನಡತೆ ಮಾತು ಉದ್ಯೋಗ ಸಂತೋಷ ಸಮೃದ್ಧಿ ಇವೆಲ್ಲವೂ ಏಕವಿಧವಾಗಿರುವ ಆ ಲೀಲಾದ್ವಯವನ್ನು ಅವನು ನೋಡಿದವನಾದನು ॥೪೩—೪೪॥

ನೋಡಿದ ಬಳಿಕ, ನೀನು ಯಾರು ? ಇವಳಾರು ? ಇವಳೆಲ್ಲಿಂದ ಬಂದಳು?—ಎಂದು ಕೇಳಿದನು. ಆಗ ಪೂರ್ವಲೀಲೆಯು ಅವನನ್ನು ಕುರಿತು ಹೀಗೆ ಹೇಳಿದಳು. ಸ್ವಾಮಿನ್! ನಾನು ಹೇಳುವುದನ್ನು ಕೇಳಬೇಕು. ನಾನು, ಅರ್ಥದೊಡನೆ ಕೂಡಿರುವ ಶಬ್ದದಂತೆ ಸರ್ವದಾ ನಿನ್ನೊಡನೆಯೇ ಇರುತ ನಿನಗೆ ಸಹಧರ್ಮಚಾರಿಣಿಯಾಗಿದ್ದ ನಿನ್ನ ಪೂರ್ವಪತ್ನಿಯು. ಈ ಎರಡನೆಯ ಲೀಲೆಯಾದರೋ, ಇವಳೂ ನಿನ್ನ ಭಾರ್ಯೆಯು; ನಾನು ನಿನ್ನ ವಿಹಾರಾರ್ಥವಾಗಿ, ನನ್ನ ಪ್ರತಿಬಿಂಬರೂಪಳಾಗಿರುವ ಇವಳನ್ನು, ಇಲ್ಲಿಗೆ ವಿಲಾಸದಿಂದ ಕರೆದುತಂದಿರುವೆನು. ನಿನ್ನ ತಲೆಯಕಡೆ, ಸುವರ್ಣಮಯವಾದ ದಿವ್ಯಾಸನದಲ್ಲಿ, ಈಯಾವ ಸ್ತ್ರೀಯು ಕುಳಿತುಕೊಂಡಿರುವಳೋ, ಹೇ ದೇವ! ಇವಳು ತ್ರಿಲೋಕಮಾತೆಯಾದ ಸರ್ವಮಂಗಳಸ್ವರೂಪಳಾದ ಸರಸ್ವತೀದೇವಿಯು. ಇವಳು, ನಮ್ಮಗಳ ಪುಣ್ಯಸಮೂಹದಿಂದ ನಮಗೆ ಪ್ರತ್ಯಕ್ಷಳಾಗಿ ಬಂದಿರುವಳು. ಹೇ ರಾಜನ್! ಇವಳೇ, ಬೇರೆಯಾದ ಲೋಕದಲ್ಲಿದ್ದ ನಮ್ಮಿಬ್ಬರನ್ನೂ ಇಲ್ಲಿಗೆ ಕರೆದುಕೊಂಡು ಬಂದವಳು ॥೪೫—೪೯॥

ಹೀಗೆಂದು ಪೂರ್ವಲೀಲೆ ಹೇಳಿದಮಾತನ್ನು ಕೇಳಿ, ಕಮಲಲೋಚನನಾದ ಆ ದೊರೆಯು, ತಟ್ಟನೆ ಹಾಸಿಗೆಯಿಂದೆದ್ದು, ಜೋಲುತಿರುವ ಪುಷ್ಪಮಾಲಿಕೆಯನ್ನೂ ವಸ್ತ್ರಗಳನ್ನೂ ಸರಿಮಾಡಿಕೊಳ್ಳುತ, ಆ ಸರಸ್ವತಿಯ ಕಾಲಿಗೆ ನಮಸ್ಕಾರಮಾಡಿದನು ॥೫೦॥

'ಸರ್ವರಿಗೂ ಹಿತವನ್ನು ಕೊಡತಕ್ಕ ಸರಸ್ವತೀದೇವಿ ! ನಿನಗೆ ನಮಸ್ಕಾರವು. ಎಲೌ ವರಪ್ರದಳೆ! ನನಗೆ, ಮೇಧೆಯನ್ನೂ ದೀರ್ಘಾಯುಷ್ಯವನ್ನೂ ಅತುಲೈಶ್ವರ್ಯವನ್ನೂ ಅನು

ಪ್ರಯಚ್ಛ ವರದೇ ಮೇಧಾಂ ದೀರ್ಘಮಾಯುರ್ಧನಾನಿ ಚ ॥೫೧॥
ಇತ್ಯುಕ್ತವನ್ತಂ ಹಸ್ತೇನ ಪಸ್ಪರ್ಶ ಜ್ಞಪ್ತಿದೇವತಾ ।
ತ್ವಂ ಪುತ್ರಾಭಿಮತಾರ್ಥಾಢ್ಯೋ ಭವೇತಿ ಭವನಾನ್ವಿತಃ ॥೫೨॥

ಸರ್ವಾಪದಃ ಸಕಲದುಷ್ಕೃತದೃಷ್ಟಯಶ್ಚ
ಗಚ್ಛನ್ತು ವಃ ಶಮಮನನ್ತಸುಖಾನಿ ಸಮ್ಯಕ್ ।
ಆಯಾನ್ತು ನಿತ್ಯಮುದಿತಾಜನತಾಭವನ್ತು
ರಾಷ್ಟ್ರೇ ಸ್ಥಿರಾಶ್ಚ ವಿಲಸನ್ತು ಸದೈವ ಲಕ್ಷ್ಮ್ಯಃ ॥೫೩॥

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಪದ್ಮರಾಜಜೀವನಂ
ನಾಮ ಅಷ್ಟಪಞ್ಚಾಶಃ ಸರ್ಗಃ.

ಗ್ರಹಿಸು ' ಎಂದು ಪ್ರಾರ್ಥಿಸುತಿರುವ ಆ ರಾಜನನ್ನು ' ಹೇ ಪುತ್ರ ! ನೀನು ಅಭಿಮತವಾದ ಐಹಿಕಸಂಪತ್ತಿನಿಂದಲೂ ಪಾರಮಾರ್ಥಿಕ ಸೌಖ್ಯದಿಂದಲೂ ಯುಕ್ತನಾಗಿ ಬಾಳು ' ಎಂದು ಹೇಳುತ, ವಾಗ್ದೇವಿಯು ತನ್ನ ಹಸ್ತಸ್ಪರ್ಶದಿಂದ ಅನುಗ್ರಹಿಸಿದಳು ॥೫೧—೫೨॥

ಹೀಗೆ ಆ ರಾಜನನ್ನು ಅನುಗ್ರಹಿಸಿದ ಬಳಿಕ, ಆ ಸರಸ್ವತಿಯು ಅವರೆಲ್ಲರಿಗೂ ಸಮವಾಗಿರುವಂತೆ ಮತ್ತೆ ಆಶೀರ್ವಾದಮಾಡಿದಳು:--ನಿಮಗೆ, ಸಮಸ್ತ ವಿಪತ್ತುಗಳೂ, ಸಕಲ ದುಷ್ಕರ್ಮಗಳೂ ಶಾಂತವಾಗಲಿ; ಅನಂತವಾದ ಸುಖಪರಂಪರೆಗಳು ನಿತ್ಯವೂ ಬರುತಿರಲಿ; ದೇಶದಲ್ಲಿರುವ ಜನರೆಲ್ಲರೂ ನಿತ್ಯವೂ ಸಂತೋಷಯುಕ್ತರಾಗಿರಲಿ; ರಾಷ್ಟ್ರದಲ್ಲಿ ಅಚಲವಾದ ಸಂಪತ್ತು ಸರ್ವದಾ ವಿಲಾಸಪಡುತಿರಲಿ ॥೫೩॥

ಇದು ಉತ್ಪತ್ತಿಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಪದ್ಮರಾಜಜೀವನವೆಂಬ
ಅಯ್ವತ್ತೆಂಟನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಏಕೋನಷಷ್ಟಿತಮಃ ಸರ್ಗಃ.

ಶ್ರೀವಸಿಷ್ಠ ಉವಾಚ.

ಸರಸ್ವತೀ ತಥೇತ್ಯುಕ್ತ್ವಾ ತತ್ರೈವಾನ್ತರ್ಧಿಮಾಯಯೌ ।
ಪ್ರಭಾತೇ ಪಙ್ಕಜೈಃ ಸಾರ್ಧಂ ಬುಬುಧೇ ಸಕಲೋ ಜನಃ ॥೧॥
ಆಲಿಲಿಙ್ಗ ಚ ತಾಂ ಲೀಲಾಂ ಲೀಲಾ ಚ ದಯಿತಂ ಕ್ರಮಾತ್ ।
ಪುನಃಪುನರ್ಮಹಾನನ್ದಾತ್ ಮೃತಂ ಪ್ರೋಜ್ಜೀವಿತಂ ಪುನಃ ॥೨॥
ತದಾಸೀದ್ರಾಜಸದನಂ ಮದಮನ್ಮಥಮನ್ಥರಮ್ ।
ಆನನ್ದಮತ್ತಜನತಂ ವಾದ್ಯಗೇಯರವಾಕುಲಮ್ ॥೩॥
ಜಯಮಙ್ಗಳಪುಣ್ಯಾಹಘೋಷಘುಙ್ಘುಮಘುರ್ಘುರಮ್ ।
ತುಷ್ಟಪುಷ್ಟಜನಾಕೀರ್ಣಂ ರಾಜಲೋಕವೃತಾಙ್ಗಣಮ್ ॥೪॥

ಉತ್ಪತ್ತಿಪ್ರಕರಣದಲ್ಲಿ ಐವ್ವತ್ತೊಂಬತ್ತನೆಯ ಸರ್ಗವು.

ರಾಜ್ಞಃ ಸಞ್ಜೀವನೋದ್ಧರ್ಷಾತ್ ತತ್ಪುರಾನ್ತಃಪುರೋತ್ಸವಃ ।
ರಾಜ್ಯಂ ಚ ಜೀವನ್ಮುಕ್ತಾನಾಂ ಚಿರಂ ಮುಕ್ತಿಶ್ಚ ವರ್ಣ್ಯತೇ ॥

ಪದ್ಮರಾಜನು ಬದುಕಿದುದರಿಂದುಂಟಾದ ಹರ್ಷದ ದೆಸೆಯಿಂದ ಆ ಪಟ್ಟಣದಲ್ಲಿಯೂ ಅಂತಃಪುರದಲ್ಲಿಯೂ ನಡೆದ ಉತ್ಸವವೂ, ಅವರೆಲ್ಲರೂ ಜೀವನ್ಮುಕ್ತಾವಸ್ಥೆಯಲ್ಲಿರುತ ಚಿರಕಾಲ ರಾಜ್ಯಭಾರ ಮಾಡಿದುದೂ, ಬಳಿಕ ವಿದೇಹಮುಕ್ತಿಹೊಂದಿದ ವಿಷಯವೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಮತ್ತೆ ಶ್ರೀ ವಸಿಷ್ಠರು ರಾಮಚಂದ್ರನನ್ನು ಕುರಿತು ಹೇಳಲುಪಕ್ರಮಿಸಿದರು:—

ಅಯ್ಯಾ! ರಾಮ! ಪೂರ್ವೋಕ್ತರೀತಿಯಾಗಿ ಆ ಪದ್ಮರಾಜನು ಪ್ರಾರ್ಥನೆಮಾಡಿದಾಗ ಹಾಗೆಯೇ ಆಗಲೆಂದು ಅವನಿಗೆ ವರಪ್ರದಾನ ಮಾಡಿದ ಬಳಿಕ, ಆ ಸರಸ್ವತಿಯು ಆ ಪದ್ಮರಾಜನ ಮನೆಯಲ್ಲಿಯೇ ಅಂತರ್ಧಾನ ಹೊಂದಿಬಿಟ್ಟಳು. ಅನಂತರ ಬೆಳಗಾದಮೇಲೆ, ಸೂರ್ಯೋದಯಾನಂತರ ಕಮಲಗಳು ಅರಳಿದಂತೆ ಆ ಜನರೆಲ್ಲರೂ ಎಚ್ಚರಗೊಂಡರು ॥೧॥

ಬಳಿಕ, ಸತ್ತಿದ್ದು ಬದುಕಿದ ಸಂತೋಷದಿಂದ, ಆ ಪದ್ಮರಾಜನು ಲೀಲೆಯನ್ನೂ ಲೀಲೆಯು ಪದ್ಮರಾಜನನ್ನೂ ಪುನಃಪುನಃ ಆಲಿಂಗಿಸಿದರು ॥೨॥

ಆಗ ಆ ಅರಮನೆಯಲ್ಲಿದ್ದ ಜನರೆಲ್ಲರೂ, ಸಂತೋಷಭರಿತರಾಗಿ, ಮದಮತ್ತರಾಗಿ, ವಾದ್ಯಗಳನ್ನೂ ಗಾನಗಳನ್ನೂ ಮಾಡುತ, ಮನೆಯನ್ನೆಲ್ಲ ತುಂಬಿಬಿಟ್ಟರು ॥೩॥

ಅಲ್ಲಿ, ಜಯಜಯಶಬ್ದವೂ, ಮಂಗಳಧ್ವನಿಯೂ, ಪುಣ್ಯಾಹಘೋಷವೂ, ಘುಮಘುಮ—ಘುರಘುರ—ಎನುತ ತುಂಬಿದ್ದಿತು. ಜನರು ಸಂತೋಷಯುಕ್ತರಾಗಿ ಪುಷ್ಟರಾಗಿ ವ್ಯಾಪಿಸಿದರು. ಅನೇಕರಾದ ರಾಜರು, ಅರಮನೆಯ ಅಂಗಳದಲ್ಲಿ ಬಂದು ನಿಂತರು ॥

ಸಿದ್ಧವಿದ್ಯಾಧರೋನ್ಮುಕ್ತಪುಷ್ಪವರ್ಷಸಹಸ್ರಭೃತ್ ।
ಧ್ವನನ್ಮೃದಙ್ಗಮುರಜಕಾಹಳಾಶಙ್ಖದುನ್ದುಭಿ ॥೫॥
ಊರ್ಧ್ವೀಕೃತಬೃಹದ್ಧಸ್ತಹಾಸ್ತಿಕಸ್ತನಿತೋತ್ಕಟಮ್ ।
ಉತ್ತಾಳತಾಣ್ಡವಸ್ತ್ರೈಣಪೂರ್ಣಾಙ್ಗಣಲಸದ್ಧ್ವನಿ ॥೬॥
ಮಿಥಸ್ಸಙ್ಘಟ್ಟನಿಪತಜ್ಜನೋಪಾಯನದನ್ತುರಮ್ ।
ಪುಷ್ಪಶೇಖರಸಮ್ಭಾರಮಯಸಂಸಾರಸುನ್ದರಮ್ ॥೭॥
ವಿಕೀರ್ಣಾಪಾದಿತಕ್ಷೌಮಂ ಮನ್ತ್ರಿಸಾಮನ್ತನಾಗರೈಃ ।
ಸ್ಥೂಲಪದ್ಮಮಯಂ ವ್ಯೋಮ ರಕ್ತೈಸ್ತಾಣ್ಡವಿನೀಕರೈಃ ॥೮॥
ಮತ್ತಸ್ತ್ರೀಕನ್ಧರಾವೃತ್ತಲೀಲಾನ್ದೋಳಿತಕುಣ್ಡಲಮ್ ।
ಪ್ರವೃತ್ತಪಾದಸಮ್ಪಾತಪ್ರೋಲ್ಲಸತ್ಪುಷ್ಪಕರ್ದಮಮ್ ॥೯॥
ಪಟ್ಟವಾಸಶ್ಶರನ್ಮೇಘವಿತಾನಕವಿತಾನಕಮ್ ।
ವರಾಙ್ಗನಾಮುಖೈರ್ನೃತ್ಯಚ್ಚನ್ದ್ರಲಕ್ಷಗೃಹಾಜಿರಮ್ ॥೧೦॥

ಸಿದ್ಧರೂ, ವಿದ್ಯಾಧರರೂ, ಅನೇಕವಾಗಿ ಪುಷ್ಪವೃಷ್ಟಿಯನ್ನು ಮಾಡಿದರು. ಮೃದಂಗ ಮುರಜ ಕಾಹಳೆ ಶಂಖ ದುಂದುಭಿ ಮುಂತಾದ ವಾದ್ಯಗಳೆಲ್ಲವೂ ಧ್ವನಿಮಾಡಲುಪಕ್ರಮವಾಯ್ತು ॥ ೫ ॥

ಗಜಸಮೂಹಗಳು, ಅರಮನೆಯ ಬಾಗಿಲಿನಲ್ಲಿ ನಿಂತುಕೊಂಡು, ದೊಡ್ಡದಾದ ಸುಂಡಿಲುಗಳನ್ನು ಮೇಲಕ್ಕೆತ್ತಿ, ಕೂಗಿಕೊಂಡುವು. ನಾಟ್ಯಗಾತಿಯರು, ಅಂಗಳದಲ್ಲಿ ಗುಂಪುಕಟ್ಟಿಕೊಂಡು, ಅಧಿಕವಾಗಿ ನರ್ತನಮಾಡುತ, ತಮ್ಮ ಗಾನಧ್ವನಿಯಿಂದ ಆ ಅರಮನೆಯನ್ನೆಲ್ಲ ತುಂಬಿಬಿಟ್ಟರು ॥೬॥

ಜನಗಳು ರಾಜನಿಗೆ ಕೊಡುವುದಕ್ಕೋಸ್ಕರ ಕಾಣಿಕೆಗಳನ್ನು ತರುತಿರುವಾಗ, ಅಲ್ಲಿ ಒಬ್ಬರಮೇಲೊಬ್ಬರು ಬಿದ್ದು, ಅವರ ಕೈಲಿದ್ದ ಕಾಣಿಕೆಗಳು ಜಾರಿಹೋಗಿ, ಆ ಸ್ಥಳದಲ್ಲೆಲ್ಲ ಹರಡುತಿದ್ದುವು. ಆಗ, ಉತ್ಸವಪ್ರಯುಕ್ತವಾಗಿ, ಅಲ್ಲಿದ್ದ ಜನರು ತಲೆಯಲ್ಲಿ ಹೆಚ್ಚಾಗಿ ಹೂವುಮುಡಿದು ಸಂಚರಿಸುತಿರುವುದರಿಂದ, ಆ ಮನೆಯು ಶೋಭಿಸುತಿದ್ದಿತು ॥೭

ಮಂತ್ರಿಗಳೂ ಸಾಮಂತರೂ ಪೌರರೂ ಬಂದು, ಅರಳು ಹೂವು ಮುಂತಾದುವುಗಳನ್ನು ಎರಚುತಿರುವುದರಿಂದ, ಆ ಅರಮನೆಯ ನೆಲದಮೇಲೆ ಪಟ್ಟೆಯ ವಸ್ತ್ರವನ್ನು ಹಾಸಿದಂತೆ ಕಾಣಿಸಿತು. ನರ್ತಕಿಯರು ಕೆಂಪಗಿರುವ ತಮ್ಮ ಕೈಗಳನ್ನು ಮೇಲಕ್ಕೆ ಹಾರಿಸುತಿರುವುದರಿಂದ, ಅಲ್ಲಿ ದೊಡ್ಡದೊಡ್ಡ ಕಮಲಗಳು ತುಂಬಿರುವಂತೆ ಆಯ್ತು ॥೮॥

ಮತ್ತರಾಗಿರುವ ಸ್ತ್ರೀಯರು ತಮ್ಮ ಕುತ್ತಿಗೆಗಳನ್ನು ತಿರುಗಿಸುವಾಗ, ಅವರ ಕಿವಿಯಲ್ಲಿದ್ದ ರತ್ನಕುಂಡಲಗಳು ತಣತಣನೆ ಹೊಳೆಯುತಿದ್ದುವು. ಜನಗಳು ಬಹಳವಾಗಿ ಸಂಚರಿಸುತಿರುವುದರಿಂದ, ಅಲ್ಲಿ ಎರಚಿದ್ದ ಹೂವುಗಳು ಕೆಸರಾಗಿಹೋದುವು ॥೯॥

ಶುಭ್ರವಾದ ಪಟ್ಟವಸ್ತ್ರದ ಮೇಲ್ಕಟ್ಟುಗಳು, ಶರತ್ಕಾಲಿಕವಾದ ಮೇಘಸಮೂಹದಂತೆ ಕಾಣಿಸುದುವು. ಆ ಅರಮನೆಯ ಅಂಗಳದಲ್ಲಿ, ಅನೇಕರಾದ ಸುಂದರಿಯರು ತಮ್ಮ ಮುಖಗಳನ್ನು ವಿಲಾಸಾರ್ಥವಾಗಿ ತಿರುಗಿಸುತಿರುವುದರಿಂದ, ಅಲ್ಲಿ ಒಟ್ಟಾಗಿ ಲಕ್ಷೋಪಲಕ್ಷ ಚಂದ್ರಮಂಡಲಗಳುದಯಿಸಿದಂತೆ ಕಾಣಿಸಿತು ॥೧೦॥

ಪರಲೋಕಾದುಪಾನೀತಾ ರಾಜ್ಞೀ ಸಾ ಪತಿರೇವ ಚ ।
ಇತಿ ನಿರ್ವೃತ್ತಗಾಥಾಭಿಃ ಜಗುರ್ದೇಶಾನ್ತರೇ ಜನಾಃ ॥೧೧॥
ಪದ್ಮೋ ಭೂಮಿಪತಿಃ ಶ್ರುತ್ವಾ ವೃತ್ತಾನ್ತಂ ಕಥಿತಂ ಮನಾಕ್ ।
ಚಕ್ರೇ ಸ್ನಾನಂ ಸಮಾನೀತೈಃ ಚತುಸ್ಸಾಗರವಾರಿಭಿಃ ॥೧೨॥
ತತೋಽಭಿಷಿಷಿಚುರ್ವಿಪ್ರಾಃ ಮನ್ತ್ರಿಣೋ ಭೂಭುಜಶ್ಚ ತಮ್ ।
ಲಬ್ಧೋದಯಮನನ್ತೇಹಂ ಅಮರೇನ್ದ್ರಮಿವಾಮರಾಃ ॥೧೩॥
ಲೀಲಾ ಲೀಲಾ ಚ ರಾಜಾ ಚ ಜೀವನ್ಮುಕ್ತಮಹಾಧಿಯಃ ।
ರೇಮಿರೇ ಪೂರ್ವವೃತ್ತಾನ್ತಕಥನೈಃ ಸುರತೈರಿವ ॥೧೪॥
ಸರಸ್ವತ್ಯಾಃ ಪ್ರಸಾದೇನ ಸ್ವಪೌರುಷಕೃತೇನ ತತ್ ।
ಪ್ರಾಪ್ತಂ ಲೋಕತ್ರಯಶ್ರೇಯಃ ಪದ್ಮೇನೇತಿ ಮಹೀಭುಜಾ ॥೧೫॥
ಸ ಜ್ಞಪ್ತಿಜ್ಞಾನಸಮ್ಬುದ್ಧೋ ರಾಜಾ ಲೀಲಾದ್ವಯಾನ್ವಿತಃ ।
ಚಕ್ರೇ ವರ್ಷಾಯುತಾನ್ಯಷ್ಟೌ ತತ್ರ ರಾಜ್ಯಮನಿನ್ದಿತಃ ॥೧೬॥

ಆ ಸಮಯದಲ್ಲಿ, ದೇಶಾಂತರದ ಜನರೆಲ್ಲರೂ,—ಲೀಲೆಯು ಪರಲೋಕದಿಂದ ತನ್ನ ಪತಿಯನ್ನೂ ಮತ್ತೊಬ್ಬ ರಾಣಿಯನ್ನೂ ಕರೆದುಕೊಂಡು ಬಂದಳೆಂದು—ಪದ್ಯಗಳನ್ನು ರಚನೆಮಾಡಿ, ಈ ಕಥೆಯನ್ನೆಲ್ಲ ಗಾನಮಾಡುತಿದ್ದರು ॥೧೧॥

ಆಗ, ಪದ್ಮರಾಜನೂ ಕೂಡ, ಮಂತ್ರಿಮುಂತಾದವರು ಸಂಕ್ಷೇಪವಾಗಿ ಹೇಳಿದ ತನ್ನ ವೃತ್ತಾಂತವನ್ನು ಕೇಳಿದವನಾಗಿ, ನಾಲ್ಕು ಸಮುದ್ರದ ನೀರನ್ನೂ ತರಿಸಿ ಸ್ನಾನಮಾಡಿದನು ॥೧೨॥

ಬಳಿಕ, ನಾನಾವಿಧವಾದ ವ್ಯಾಪಾರಗಳನ್ನು ನಡೆಯಿಸಿ ಮತ್ತೆ ಜನ್ಮವೆತ್ತಿರುವ ಆ ಪದ್ಮರಾಜನಿಗೆ, ದೇವೆಂದ್ರನಿಗೆ ದೇವತೆಗಳು ಅಭಿಷೇಕಮಾಡಿದಂತೆ, ಬ್ರಾಹ್ಮಣರೂ ಮಂತ್ರಿಗಳೂ ರಾಜರೂ ಸೇರಿ ಅಭಿಷೇಕವಮಾಡಿದರು ॥೧೩॥

ಅನಂತರದಲ್ಲಿ, ಆ ಯಿಬ್ಬರು ಲೀಲೆಯರೂ ಪದ್ಮರಾಜನೂ, ಜೀವನ್ಮುಕ್ತಜ್ಞಾನವುಳ್ಳವರಾಗಿ, ಸಾಮಾನ್ಯಜನರು ಸುರತದಿಂದ ವಿಲಾಸಪಡುವಂತೆ, ತಂತಮ್ಮ ಪೂರ್ವವೃತ್ತಾಂತಗಳು ಹೇಳಿಕೊಳ್ಳುತ ವಿಲಾಸದಿಂದಿದ್ದರು ॥೧೪॥

ಅಯ್ಯಾ! ರಾಮ! ಈ ರೀತಿಯಾಗಿ, ಆ ಪದ್ಮರಾಜನು, ತನ್ನ ಪ್ರಯತ್ನದಿಂದಲೇ ಶ್ರೀ ಸರಸ್ವತಿಯ ಅನುಗ್ರಹವನ್ನು ಸಂಪಾದಿಸಿ, ಮೂರು ಲೋಕದಲ್ಲಿಯೂ ಪ್ರಶಸ್ಯವಾದ ರಾಜ್ಯ ಪುನರ್ಜೀವನಾದಿಗಳನ್ನು ಪಡೆದನು ॥೧೫॥

ಸರಸ್ವತಿಯ ಅನುಗ್ರಹದಿಂದ ಲಬ್ಧವಾದ ಜ್ಞಾನವುಳ್ಳವನಾಗಿ ಆ ಪದ್ಮರಾಜನು, ಆ ಯಿಬ್ಬರು ಲೀಲೆಯರೊಡಗೂಡಿದವನಾಗಿ, ಎಂಬತ್ತುಸಾವಿರ ವರ್ಷಕಾಲ, ಕೇವಲ ಶ್ಲಾಘ್ಯಚರಿತನಾಗಿ ಅಲ್ಲಿ ರಾಜ್ಯಭಾರಮಾಡಿದನು ॥೧೬॥

ಜೀವನ್ಮುಕ್ತಾಸ್ತ ಇತ್ಯೇವಂ ರಾಜ್ಯಂ ವರ್ಷಾಯುತಾಷ್ಟಕಮ್ |
ಕೃತ್ವಾ ವಿದೇಹಮುಕ್ತತ್ವಂ ಆಸೇದುಃ ಸಿದ್ಧಸಂವಿದಃ ||೧೭||
ಯದುದಯವಿಶದಂ ವಿದಗ್ಧಮುಗ್ಧಂ ಸಮುಚಿತಮಾತ್ಮಹಿತಂ ಚ ಪೇಶಲಂ ಚ|
ತದಖಿಲಜನತೋಷದಂ ಸ್ವರಾಜ್ಯಂ ಚಿರಮನುಪಾಲ್ಯ ಸುದಮ್ಪತೀ ವಿಮುಕ್ತೌ||

ಇತಿ ಉತ್ಪತ್ತಿಪ್ರಕರಣೇ ಲೀಲೋಪಾಖ್ಯಾನೇ ಪದ್ಮನಿರ್ವಾಣಂ
ನಾಮ ಏಕೋನಷಷ್ಟಿತಮಃ ಸರ್ಗಃ.

ಅಯ್ಯಾ! ರಾಮ! ಈ ರೀತಿಯಾಗಿ, ಜೀವನ್ಮುಕ್ತರಾದ ಆ ಮೂರುಮಂದಿಯೂ ಎಂಬತ್ತುಸಾವಿರವರ್ಷ ರಾಜ್ಯಭಾರಮಾಡಿ, ಜ್ಞಾನಸಿದ್ಧಿಪಡೆದವರಾಗಿ, ವಿದೇಹಮುಕ್ತಿ ಹೊಂದಿದರು ||೧೭||

ಅವರನುಭವಿಸಿದ ಕಾಲದಲ್ಲಿ ರಾಜ್ಯಸ್ಥಿತಿಯು ಬಲು ಚೆನ್ನಾಗಿದ್ದಿತು ; ಪ್ರಜೆಗಳಿಗೆ ದಿನೇದಿನೇ ಅಭ್ಯುದಯವುಂಟಾಗುತ, ಯಾವ ದೋಷವೂ ಇಲ್ಲದಂತಿದ್ದಿತು ; ಅನೇಕರಾದ ಪಂಡಿತರು ಅಲ್ಲಿ ಸೇರಿರುವುದರಿಂದ, ಆ ರಾಜ್ಯಕ್ಕೆ ವಿಶೇಷವಾಗಿ ಒಂದು ಸೌಂದರ್ಯವುಂಟಾಯಿತು ; ಸಕಲ ವಿಷಯದಲ್ಲಿಯೂ ಉಚಿತವಾದ ಕೃತ್ಯಗಳೇ ನಡೆಯುತಿದ್ದುವು; ಅದು, ಅವರಿಗೆ ಹಿತವಾಗಿಯೂ ಪ್ರಿಯವಾಗಿಯೂ, ಇತರರಿಗೆ ಕೇವಲ ಸಂತೋಷಜನಕವಾಗಿಯೂ ಇದ್ದಿತು. ಇಂತಹ ತಮ್ಮ ರಾಜ್ಯವನ್ನು, ಚಿರಕಾಲ ಕಾಪಾಡಿ, ಆ ಉತ್ತಮ ದಂಪತಿಗಳು ಮುಕ್ತಿಹೊಂದಿದರು ||೧೮||

ಇದು ಉತ್ಪತ್ತಿ ಪ್ರಕರಣದಲ್ಲಿ ಲೀಲೋಪಾಖ್ಯಾನದೊಳಗೆ ಪದ್ಮರಾಜ ಮೋಕ್ಷಪ್ರಾಪ್ತಿ
ಯೆಂಬ ಅಯ್ವತ್ತೊಂಬತ್ತನೆಯ ಸರ್ಗವು.

ಅಥ ಉತ್ಪತ್ತಿಪ್ರಕರಣೇ ಷಷ್ಟಿತಮಃ ಸರ್ಗಃ.

ಶ್ರೀ ವಸಿಷ್ಠ ಉವಾಚ.

ಏತತ್ ತೇ ಕಥಿತಂ ರಾಮ ದೃಶ್ಯದೋಷನಿವೃತ್ತಯೇ ।
ಲೀಲೋಪಾಖ್ಯಾನಮನಘಂ ಘನತಾಂ ಜಗತಸ್ತ್ಯಜ ॥೧॥
ಶಾನ್ತ್ಯೈವ ದೃಶ್ಯಸತ್ತಾಸ್ಯಾಃ ಶಮನಂ ನೋಪಯುಜ್ಯತೇ ।
ಸತೋ ಹಿ ಮಾರ್ಜನಕ್ಲೇಶೋ ನಾಸತಸ್ತು ಕದಾಚನ ॥೨॥
ಜ್ಞಾನೇನಾಕಾಶರೂಪೇಣ ದೃಶ್ಯಂ ಜ್ಞೇಯಸ್ವರೂಪಕಮ್ ।
ಇತ್ಯೇಕೀಭೂತಮಾಲೋಕ್ಯ ಜ್ಞಸ್ತಿಷ್ಠತ್ಯಮ್ಬರೋಪಮಃ ॥೩॥
ಪೃಥ್ವ್ಯಾದಿರಹಿತೇನೇದಂ ಚಿದ್ಭಾಸೈವ ಸ್ವಯಮ್ಭುವಾ ।
ಸಾಧಿತಂ ಯದಿ ಸಿದ್ಧೇನ ತತಃ ಸ್ವಾತ್ಮನಿ ಸಾಧಿತಮ್ ॥೪॥

ಉತ್ಪತ್ತಿಪ್ರಕರಣದಲ್ಲಿ ಅರವತ್ತನೆಯ ಸರ್ಗವು.

ವಿಸ್ತರಾದ್ವರ್ಣ್ಯತೇತ್ರಾದೌ ಲೀಲಾಖ್ಯಾನಪ್ರಯೋಜನಮ್ ।
ಕಾಲಾದಿಸಾಮ್ಯವೈಷಮ್ಯಹೇತುಶ್ಚಾತ್ರ ನಿಗದ್ಯತೇ ॥

ಇದುವರೆಗೆ ಹೇಳಿದ ಲೀಲೋಪಾಖ್ಯಾನಕ್ಕೆ ವಿಸ್ತಾರದಾಗಿ ಪ್ರಯೋಜನವೂ, ಕಾಲಾದಿಗಳು ಸಮವಾಗುವುದಕ್ಕೂ ವಿಷಮವಾಗುವುದಕ್ಕೂ ಕಾರಣವೂ ಕೂಡ, ಈ ಸರ್ಗದಲ್ಲಿ ವರ್ಣಿಸಲ್ಪಡುವುವು.

ಪೂರ್ವೋಕ್ತರೀತಿಯಾಗಿ ವಿಸ್ತಾರವಾದ ಲೀಲೋಪಾಖ್ಯಾನವನ್ನು ಹೇಳಿದ ಬಳಿಕ, ಶ್ರೀವಸಿಷ್ಠರು ಪುನಃ ಶ್ರೀರಾಮನನ್ನು ಕುರಿತು ಹೇಳಲುಪಕ್ರಮಿಸಿದರು :—

ವತ್ಸ ! ರಾಮ ! ನಿನಗೆ, ದೃಶ್ಯವಿರುವುದೆಂಬ ದೋಷವು ನಿವೃತ್ತಿಹೊಂದುವುದಕ್ಕೋಸ್ಕರ, ಅತಿಪ್ರಶಸ್ತವಾದ ಈ ಲೀಲೋಪಾಖ್ಯಾನವನ್ನು ಹೇಳಿರುವೆನು. ಈಗಲಾದರೂ, ಜಗತ್ತು ಸತ್ಯವಾದುದೆಂಬ ಭ್ರಾಂತಿಯನ್ನು ಬಿಟ್ಟುಬಿಡು ॥೧॥

ದೃಶ್ಯಕ್ಕೆ ಸದ್ಭಾವವೆಂಬುದು ಸ್ವತಏವ ಶಾಂತವಾಗಿರುವುದು ; ಇದಕ್ಕೆ ಶಾಂತಿಪ್ರಕಾರವನ್ನುಪದೇಶಿಸುವುದೇ ವಸ್ತುತಃ ಅನುಪಯುಕ್ತವಾದುದು, ಇರತಕ್ಕುದನ್ನು ಶಾಂತಿಗೊಳಿಸುವುದಕ್ಕೆ ಕ್ಲೇಶಪಡಬೇಕೇ ಹೊರತು, ಇಲ್ಲದುದಕ್ಕೆ ಏತಕ್ಕಾಗಿ ಕ್ಲೇಶಪಡಬೇಕು ? ॥

ಆದರೂ, ಇದುವರೆಗೆ ವಿಸ್ತರವಾಗಿ ಹೇಳಿದ ಲೀಲೋಪಾಖ್ಯಾನಕ್ಕೆ ಪ್ರಯೋಜನವಿಲ್ಲವೆಂದು ತಿಳಿಯಬಾರದು. ಪ್ರಾಜ್ಞನಾದವನು, ಪೂರ್ವೋಕ್ತರೀತಿಯಾಗಿ, ಆಕಾಶದಂತೆ ನಿರ್ಲಿಪ್ತವಾದ ಜ್ಞಾನದಿಂದ, ಜ್ಞೇಯವಾದ ಈ ಪ್ರಪಂಚವೆಲ್ಲವೂ ಅಖಂಡೈಕರಸವೆಂದು ತಿಳಿದವನಾಗಿ, ಸ್ವಯಂ ಆಕಾಶದಂತೆ ನಿರ್ಲಿಪ್ತನಾಗಿರುವನು ॥೩॥

ಆದಿಸೃಷ್ಟಿಯಲ್ಲಿ, ಪೃಥಿವಿ ಮುಂತಾದ ಭೂತಗಳೊಂದೂ ಇಲ್ಲದೆಯೇ, ಚತುರ್ಮುಖನು ಕೇವಲ ಚಿತ್ಪ್ರಕಾಶದಿಂದಲೇ ಇದನ್ನು ಸೃಷ್ಟಿಮಾಡಿರುವುದರಿಂದ, ಇದು ಕೇವಲ ಬ್ರಹ್ಮನಲ್ಲಿಯೇ ನಿಷ್ಪನ್ನವಾದುದೆಂದು ಸಿದ್ಧವಾಗುವುದು ॥೪॥

ಸಂವಿದ್ಯಥಾ ಯಾ ಯತತೇ ತಥಾ ಸ್ಯೈವ ವ್ಯವಸ್ಥಿತಾ |
ವಿಸ್ಪಷ್ಟಾ ಸೃಷ್ಟಿವಿನ್ನದ್ಯಾಂ ಯಾವದ್ಯತ್ನಾನ್ನ ರೋಧಿತಾ ||೫||
ಚಿದಾಕಾಶಾವಭಾಸೋಽಯಂ ಜಗದಿತ್ಯವಬುಧ್ಯತೇ |
ಚಿದ್ವ್ಯೋಮ್ನ್ಯೇವಾತ್ಮನಿ ಸ್ವಚ್ಛೇ ಪರಮಾಣುಕಣಂ ಪ್ರತಿ ||೬||
ಏವಮಸ್ಯಾಮುಧಾಭ್ರಾನ್ತೇಃ ಕಾ ಸತ್ತಾ ಕೇವ ವಾಸನಾ |
ಕ್ವಾಸ್ಥಾ ಕಾ ಚ ನಿಯತಿಃ ಕಾವಶ್ಯಮ್ಭವಿತೋಚ್ಯತಾಮ್ ||೭||
ಸರ್ವಂ ಚೈತದ್ಯಥಾ ದೃಷ್ಟಂ ಸ್ಥಿತಮಿತ್ಥಮಖಣ್ಡಿತಮ್ |
ಮಾಯೈವೇಯಮನನ್ತೇಯಂ ನ ಚ ಮಾಯಾಸ್ತಿ ಕಾಚನ ||೮||

ಶ್ರೀರಾಮಉವಾಚ.

ಅಹೋ ನು ಪರಮಾ ದೃಷ್ಟಿಃ ದರ್ಶಿತಾ ಭಗವಂಸ್ತ್ವಯಾ |
ದಾವಾಗ್ನಿದಗ್ಧಕಕ್ಷಾಣಾಂ ದಾಹಶಾನ್ತೌ ಕಿಲೈನ್ದವೀ ||೯||

'ಹಾಗಾದರೆ, ಮೊದಲು ಕಠಿನವಾಗಿದ್ದ ಆನೆಕಲ್ಲು ಯಾರ ಪ್ರಯತ್ನವೂ ಇಲ್ಲದೆಯೇ ತಾನೇ ಕರಗಿಹೋಗುವಂತೆ, ಈ ದೃಶ್ಯವೂ ಪ್ರಯತ್ನವಿಲ್ಲದೆಯೇ ಲಯಹೊಂದಲಿ; ಇದಕ್ಕಾಗಿ ಇಷ್ಟು ಪ್ರಯತ್ನವೇಕೆ?' ಎಂದರೆ,—ಜ್ಞಾನವನ್ನು ಪ್ರಯತ್ನದಿಂದ ನಿರೋಧಪಡಿಸಿಕೊಳ್ಳದೆ, ಪ್ರಪಂಚವ್ಯವಹಾರವೆಂಬ ನದಿಯಲ್ಲಿ ಬಿಟ್ಟುಬಿಟ್ಟರೆ, ಅದು—ಯಾವರೀತಿಯಾಗಿ ಪ್ರವರ್ತಿಸುವುದೋ, ಹಾಗೆಹಾಗೆಯೇ ಸ್ಥಿರವಾಗಿಬಿಡುವುದು. ಇದಕ್ಕಾಗಿ ಉಪದೇಶಾದಿಗಳು ಆವಶ್ಯಕವಾಗುವುವು ||೫||

ಹೀಗೆ ಈ ಚಿದಾಕಾಶದ ಪ್ರಕಾಶವೇ ಜಗತ್ತೆಂದು ತಿಳಿಯಲ್ಪಡುವುದು. ಇದೂ ಕೂಡ, ನಿರ್ಮಲ ಚಿದಾಕಾಶವಾದ ಆತ್ಮನಲ್ಲಿಯೇ ಉಂಟಾದರೂ, ಅಖಂಡವಾದ ಬ್ರಹ್ಮನಲ್ಲಿ ಉಂಟಾಗದೆ ಸೂಕ್ಷ್ಮವಾದ ಜೀವನಲ್ಲುಂಟಾಗುವಕಾರಣ, ಪ್ರಯತ್ನಜನ್ಯವಾದ ಜ್ಞಾನದಿಂದ ಇದು ನಿವೃತ್ತಿಹೊಂದಬೇಕಾಗಿರುವುದು ||೬||

ಹೀಗಿರುವ ಈ ಮಿಥ್ಯಾಭ್ರಾಂತಿಗೆ, ಸದ್ಭಾವವಾವುದು? ಇದರ ವಾಸನೆಯೆಂತಹದು? ಇದರಲ್ಲಿ ಆಸ್ಥೆಯೇನು? ಇದರ ನಿಯತಿ ಯಾವುದು? ಇದು ಅವಶ್ಯವಾಗಿ ಆಗಿಯೇ ತೀರಬೇಕೆಂಬುದು ತಾನೆ ಹೇಗೆ? ನೀನೇ ಹೇಳು ||೭||

ನಮ್ಮ ಅನುಭವಕ್ಕೆ ಬರುತಿರುವ ಈ ಸಮಸ್ತ ಅಖಂಡ ಬ್ರಹ್ಮಾಂಡವೂ, ಕೇವಲ ಮಾಯೆಯೇ; ಈ ಮಾಯೆಯು ಅನಂತವಾದುದು. ವಸ್ತುತಃ ವಿಚಾರಮಾಡಿದಾಗ, ಈ ಮಾಯೆಯೆಂಬುದೂ ಸತ್ಯವಾಗುವುದಿಲ್ಲ. ಅಯ್ಯಾ! ರಾಮ! ಈ ವಿಷಯವನ್ನು ಸ್ಪಷ್ಟಪಡಿಸುವುದಕ್ಕೋಸ್ಕರವೇ, ನಿನಗೆ ಲೀಲೋಪಾಖ್ಯಾನವನ್ನು ನಾನು ಹೇಳಿದುದು. ಇದನ್ನು ಚೆನ್ನಾಗಿ ಪರ್ಯಾಲೋಚಿಸಿದರೆ, ನಾನು ಹೇಳುವ ಅಭಿಪ್ರಾಯವು ದೃಢಪಡುವುದು ||೮||

ಈರೀತಿಯಾಗಿ ಲೀಲೋಪಾಖ್ಯಾನವನ್ನು ಕೇಳಿದನಂತರ, ಶ್ರೀರಾಮನು ಮತ್ತೆ ವಸಿಷ್ಠರನ್ನು ಕುರಿತು ಹೇಳುವನು:—

ಪೂಜ್ಯರೇ! ಅಹಹ! ತಾವು ಸರ್ವೋತ್ತಮವಾದ ಜ್ಞಾನಮಾರ್ಗವನ್ನು ತೋರಿಸಿದಿರಿ!!! ಕಾಡುಗಿಚ್ಚಿನಿಂದ ಸುಟ್ಟುಹೋದ ಪೊದೆಗಳು, ಉರಿಯೆಲ್ಲ ಶಾಂತವಾದಮೇಲೆ, ಬೆಳ್ದಿಂಗಳಿಂದ ಅಂಕುರಿಸುವಂತೆ, ಸಂಸಾರ ದುಃಖದಗ್ಧರಾದವರಿಗೆ, ತಾವು ತೋರಿಸಿರುವ ಈ ಮಾರ್ಗದಿಂದ, ಶಾಂತಿ ವಿವೇಕ ಮುಂತಾದುವು ಅಂಕುರಿಸುವುವು ||೯||

ಅಹೋ ನು ಸುಚಿರೇಣಾದ್ಯ ಜ್ಞಾತಂ ಜ್ಞಾತವ್ಯಮಕ್ಷತಮ್ ।
ಮಯಾ ಯಥೇದಂ ಯಚ್ಚೇದಂ ಯಾದೃಕ್ ಜ್ಞೇಯಂ ಯತೋ ಯದಾ॥
ಶಾಮ್ಯಾಮಿ ವ ದ್ವಿಜಶ್ರೇಷ್ಠ ನಿರ್ವಾಮಿ ವ ವಿಕಲ್ಪಯನ್ ।
ಏತದಾಖ್ಯಾನಮಾಶ್ಚರ್ಯಂ ವ್ಯಾಖ್ಯಾನಂ ಶಾಸ್ತ್ರದೃಷ್ಟಿಷು ॥೧೧॥
ಇಮಂ ಮೇ ಭಗವನ್ ಬ್ರೂಹಿ ಸಂಶಯಂ ಸರ್ವಕೋವಿದ ।
ತವ ಪಾತುಂ ನ ತೃಪ್ತೋಽಸ್ಮಿ ಶ್ರೋತ್ರಪಾತ್ರೈರ್ವಚೋಽಮೃತಮ್ ॥೧೨॥
ಸ ಸರ್ಗತ್ರಿತಯೇ ಕಾಲೋ ಲೀಲಾಭರ್ತುರ್ಹಿ ಯೋ ಗತಃ ।
ಸ ಕ್ವಚಿತ್ ಕಿಮಹೋರಾತ್ರಃ ಕ್ವಚಿತ್ ಕಿಂ ಮಾಸಮಾತ್ರಕಃ ॥೧೩॥
ಕ್ವಚಿತ್ ಕಿಂ ಬಹುವರ್ಷಾಣಿ ಕಸ್ಯಚಿತ್ ಕಿಮು ಪೇಲವಃ ।
ಕಸ್ಯಚಿತ್ ಕಿಂ ಮಹಾದೀರ್ಘಃ ಕಸ್ಯಚಿತ್ ಕಿಂ ಕ್ಷಣಃ ಸ್ಥಿತಃ ॥೧೪॥
ಇತಿ ಮೇ ಭಗವನ್ ಬ್ರೂಹಿ ತ್ವಂ ಯಥಾವದನುಗ್ರಹಾತ್ ।

ಅಹಹ! ಈ ದೃಶ್ಯವು—ಹೇಗೆ ಉಂಟಾಯಿತು; ಇದಾವುದು; ಎಂತಹುದು; ಎಲ್ಲಿಂದ ಯಾವಾಗ ಉಂಟಾಯಿತು.—ಎಂದು ಬಹುಕಾಲದಿಂದ ಯೋಚಿಸುತಿದ್ದ ನಾನು, ತಿಳಿಯಬೇಕಾದ ತತ್ವವನ್ನು ಈಗ ದೃಢವಾಗಿ ತಿಳಿದುಕೊಂಡೆನು ॥೧೦॥

ಎಲೈ ಬ್ರಾಹ್ಮಣಶ್ರೇಷ್ಠರೆ! ನಾನು ಈಗ ಸರ್ವತ್ರ ಶಾಂತನಾದಂತಿರುವೆನು. ನಾನಾ ವಿಧವಾಗಿ ಈ ಜಗತ್ತತ್ವವನ್ನು ವಿಚಾರಮಾಡುತಿದ್ದು, ಈಗ ತೃಪ್ತನಾದೆನು. ತಾವು ಅಪ್ಪಣೆಕೊಡಿಸಿರುವ ಈ ಉಪಾಖ್ಯಾನವು, ವೇದಶಾಸ್ತ್ರಜ್ಞಾನವಿಷಯದಲ್ಲಿ ವಿಸ್ತಾರವಾದ ವ್ಯಾಖ್ಯಾನರೂಪವಾಗಿರುವುದು ॥೧೧॥

ಸಕಲ ಶಾಸ್ತ್ರವಿಶಾರದರಾದ ಮಹಾತ್ಮರೆ! ನನಗೆ ಈಗ ಮತ್ತೊಂದು ಸಂಶಯವುಂಟಾಗಿರುವುದು. ಇದನ್ನು ತಾವು ಸ್ಪಷ್ಟವಾಗಿ ವಿವರಿಸಿ ಸಮಾಧಾನಗೊಳಿಸಬೇಕು. ತಮ್ಮ ವಚನವೆಂಬ ಅಮೃತವನ್ನು, ಶ್ರೋತ್ರವೆಂಬ ಪಾತ್ರದಿಂದ ಎಷ್ಟು ಕುಡಿದರೂ ನನಗೆ ತೃಪ್ತಿಯುಂಟಾಗಲಿಲ್ಲ॥೧೨॥

ನನ್ನ ಸಂಶಯವೇನೆಂದರೆ:—ಆ ಲೀಲಾಪತಿಗೆ, ಮೊದಲು ವಸಿಷ್ಠನಾಮಕ ವಿಪ್ರಜನ್ಮವೂ, ಬಳಿಕ ಪದ್ಮರಾಜಜನ್ಮವೂ, ಅನಂತರ ವಿದೂರಥ ಜನ್ಮವೂ,ಅಂತು ಈರೀತಿಯಾಗಿ ಮೂರು ಜನ್ಮಗಳು ಕಳೆದುವಷ್ಟೆ! ಅದರೊಳಗೆ ಒಂದು ಜನ್ಮ (ವಸಿಷ್ಠ ಜನ್ಮ) ದಲ್ಲಿ ಎಂಟು ದಿನ ಮಾತ್ರವೇ ಕಳೆಯಿತು; ಒಂದು ಜನ್ಮ (ಪದ್ಮ) ದಲ್ಲಿ ಒಂದು ತಿಂಗಳು ಕಳೆಯಿತು; ಮತ್ತೊಂದು ಜನ್ಮ (ವಿದೂರಥ) ದಲ್ಲಿ ಅನೇಕ ವರ್ಷಗಳು ಕಳೆದುಹೋದುವು. ಹೀಗೆಲ್ಲ ಆಗುವುದಕ್ಕೆ ಕಾರಣವೇನು? ಮತ್ತು, ಒಂದೇ ಬ್ರಹ್ಮಾಂಡದಲ್ಲಿ, ಅಷ್ಟುಕಾಲವೂ ಒಂದು ಪ್ರಾಣಿಗೆ ಕೇವಲ ಸೂಕ್ಷ್ಮವಾಗಿಯೂ, ಮತ್ತೊಂದು ಪ್ರಾಣಿಗೆ ಮಹಾದೀರ್ಘವಾಗಿಯೂ, ಇನ್ನೊಂದು ಪ್ರಾಣಿಗೆ ಒಂದೇಒಂದು ಕ್ಷಣವಾಗಿಯೂ ಆಯಿತಲ್ಲವೆ! ಇದಕ್ಕೆ ಕಾರಣವೇನು?॥೧೩—೧೪॥

ಪೂಜ್ಯರೆ! ಇದೇ ನನ್ನ ಸಂಶಯವು; ಇದನ್ನು ತಾವು ಯಥಾವಸ್ಥಿತವಾಗಿ ಅಪ್ಪಣೆಕೊಡಿಸಬೇಕು. ಒಣಗಿದ ಮಣ್ಣುಹೆಂಟೆಯಮೇಲೆ ಒಂದುವೇಳೆ ನೀರುಹಾಕಿದಮಾತ್ರ

ಸಕೃಚ್ಛ್ರುತಂ ನ ವಿಶ್ರಾನ್ತಿಂ ಏತಿ ಲೋಷ್ಟೇ ಯಥಾ ಜಲಮ್ ||೧೫||

ಶ್ರೀವಸಿಷ್ಠ ಉವಾಚ.

ಯೇನಯೇನ ಯಥಾ ಯದ್ಯತ್ ಯದಾ ಸಂವೇದ್ಯತೇನಘ |
ತೇನತೇನ ತಥಾ ತತ್ತತ್ ತದಾ ಸಮನುಭೂಯತೇ ||೧೬||
ಅಮೃತತ್ವಂ ವಿಷಂ ಯಾತಿ ಸದೈವಾಮೃತವೇದನಾತ್ |
ಶತ್ರುರ್ಮಿತ್ರತ್ವಮಾಯಾತಿ ಮಿತ್ರಸಂವಿತ್ತಿವೇದನಾತ್ ||೧೭||
ಯಥಾಭಾವಿತಮೇತೇಷಾಂ ಪದಾರ್ಥಾನಾಂ ನಿಜಂ ವಪುಃ |
ತದೇವ ಹಿ ಚಿರಾಭ್ಯಾಸಾತ್ ನಿಯತೇರ್ವಶಮಾಗತಮ್ ||೧೮||
ಕಚನೈಕಾತ್ಮಿಕೈಷಾ ಚಿತ್ ಯಥಾ ಕಚತಿ ಯಾದೃಶಮ್ |
ತಥಾತಥಾಶು ಭವತಿ ತತ್ಸ್ವಭಾವೈಕಕಾರಣಾತ್ ||೧೯||
ನಿಮೇಷೇ ಯದಿ ಕಲ್ಪೌಘಸಂವಿದಂ ಪರಿವಿನ್ದತಿ |
ನಿಮೇಷಏವ ತತ್ ಕಲ್ಪೋ ಭವತ್ಯತ್ರ ನ ಸಂಶಯಃ ||೨೦||
ಕಲ್ಪೇ ಯದಿ ನಿಮೇಷತ್ವಂ ವೇತ್ತಿ ಕಲ್ಪೋಪ್ಯಸೌ ತತಃ |
ನಿಮೇಷೀಭವತಿ ಕ್ಷಿಪ್ರಂ ತಾದೃಗ್ರೂಪಾತ್ಮಿಕಾ ಹಿ ಚಿತ್ ||೨೧||

ದಿಂದಲೇ ಅದು ಸರಿಯಾಗಿ ಅಲ್ಲಿ ನೆಲಸಲಾಗುವುದೆ? ಹಾಗೆಯೇ, ತಮ್ಮ ಉಪದೇಶವು ಒಂದಾವರ್ತಿ ಕೇಳಲ್ಪಟ್ಟಿದ್ದರೂ, ಮೂಢನಾದ ನನ್ನ ಹೃದಯದಲ್ಲಿ ಸರಿಯಾಗಿ ನಾಟುವುದಿಲ್ಲ||

ಶ್ರೀ ವಸಿಷ್ಠರು ಉತ್ತರ ಹೇಳುವರು :—

ನಿರ್ದೋಷನಾದ ಎಲೈ ರಾಮನೆ! ಯಾವಯಾವ ಜೀವನು, ಯಾವಯಾವುದನ್ನು ಯಾವಯಾವರೀತಿಯಾಗಿ ಯಾವಯಾವಾಗ ತಿಳಿದುಕೊಳ್ಳುವನೋ, ಅವನವನು ಆಯಾರೀತಿಯಾಗಿ ಅದದನ್ನು ಆಗಾಗ ಅನುಭವಿಸುವನು ||೧೬||

ವಿಷವೂ ಕೂಡ, ಸರ್ವದಾ ಅಮೃತವೆಂದು ಭಾವಿಸಲ್ಪಟ್ಟರೆ ಅಮೃತವೇ ಆಗುವುದು; ಶತ್ರುವೂ ಕೂಡ, ಮಿತ್ರನೆಂದು ತಿಳಿಯಲ್ಪಟ್ಟರೆ ಮಿತ್ರನೇ ಆಗುವನು ||೧೭||

ಹೀಗೆ ಈ ಪದಾರ್ಥಗಳ ಸ್ವರೂಪವು, ಅವರವರ ಭಾವನಾನುಗುಣವಾಗಿರುವುದು. ಅದೇ, ಚಿರತರಾಭ್ಯಾಸಬಲದಿಂದ ನಿಯತಿಯ ವಶವಾಗುವುದು ||೧೮||

ಚಿತ್ತು, ಸರ್ವದಾ ಸ್ಫುರಣೆಯೇ ಸ್ವಭಾವವಾಗಿ ಇರತಕ್ಕದು; ಆದುಕಾರಣ, ಇದು ಯಾವಯಾವರೀತಿಯಾಗಿ ಸ್ಫುರಿಸುವುದೋ, ಆಯಾವಿಧವಾಗಿ ತಟ್ಟನೆ ಆಗಿಬಿಡುವುದು. ಹೀಗಾಗುವುದಕ್ಕೆ, ಆ ಸ್ವಭಾವವೇ ಮುಖ್ಯಕಾರಣವಾಗಿರುವುದು ||೧೯||

ಆದುದರಿಂದ, ಒಂದು ನಿಮಿಷವನ್ನೇ ಅನೇಕ ಕಲ್ಪಸಮುದಾಯವೆಂದು ತಿಳಿದಪಕ್ಷದಲ್ಲಿ, ಅವನಿಗೆ ಆ ವೊಂದು ನಿಮಿಷವೇ ಕಲ್ಪವಾಗುವುದು. ಇದರಲ್ಲಿ ಸಂಶಯವಿಲ್ಲ ||೨೦||

ಅದಲ್ಲದೆ, ಕಲ್ಪವನ್ನು ನಿಮಿಷವೆಂದು ತಿಳಿದರೆ, ಆ ಕಲ್ಪವೇ ಒಂದು ನಿಮಿಷವಾಗುವುದು. ಚಿತ್ತಿನ ಸ್ವರೂಪವೇ ಈವಿಧವಾದುದು ||೨೧||

ದುಃಖಿತಸ್ಯ ನಿಶಾ ಕಲ್ಪಃ ಸುಖಿತಸ್ಯೈವ ಚ ಕ್ಷಣಃ |
ಕ್ಷಣಃ ಸ್ವಪ್ನೇ ಭವೇತ್ ಕಲ್ಪಃ ಕಲ್ಪಶ್ಚ ಭವತಿ ಕ್ಷಣಃ ||೨೨||
ಯಥಾ ಚ ಮೃತ್ವಾ ಜಾತೋಽಹಂ ತರುಣೋ ಯೌವನಸ್ಥಿತಃ |
ಯಾತೋಽಸ್ಮಿ ಯೋಜನಶತಂ ಸ್ವಪ್ನ ಇತ್ಯನುಭೂಯತೇ ||೨೩||
ರಾತ್ರಿಂ ದ್ವಾದಶವರ್ಷಾಣಿ ಹರಿಶ್ಚನ್ದ್ರೋಽನುಭೂತವಾನ್ |
ಲವಣೋ ಭುಕ್ತವಾನಾಯುಃ ಏಕರಾತ್ರ್ಯಾ ಸಮಾಃ ಶತಮ್ ||೨೪||
ಯನ್ಮುಹೂರ್ತಃ ಪ್ರಜೇಶಸ್ಯ ಸ ಮನೋರ್ಜೀವಿತಂ ಮುನೇಃ |
ಜೀವಿತಂ ಯದ್ವಿರಿಞ್ಚಸ್ಯ ತದ್ದಿನಂ ಕಿಲ ಚಕ್ರಿಣಃ |
ವಿಷ್ಣೋರ್ಯಜ್ಜೀವಿತಂ ರಾಮ ತದ್ವೃಷಾಙ್ಕಸ್ಯ ವಾಸರಃ ||೨೫||
ಧ್ಯಾನಪ್ರಕ್ಷೀಣಚಿತ್ತಸ್ಯ ನ ದಿನಾನಿ ನ ರಾತ್ರಯಃ |
ನ ಪದಾರ್ಥಾ ನ ಚ ಜಗತ್ ಸತ್ಯಮಾತ್ಮನಿ ಯೋಗಿನಃ ||೨೬||
ಮಧುರಂ ಕಟುತಾಮೇತಿ ಕಟುಭಾವೇನ ಚಿನ್ತಿತಮ್ |
ಕಟು ಚಾಯಾತಿ ಮಾಧುರ್ಯಂ ಮಧುರತ್ವೇನ ಚಿನ್ತಿತಮ್ ||೨೭||
ಮಿತ್ರಬುದ್ಧ್ಯಾ ದ್ವಿಷನ್ಮಿತ್ರಂ ರಿಪುಬುದ್ಧ್ಯಾ ರಿಪುಃ ಸುಹೃತ್ |

ದುಃಖಿತನಾದವನಿಗೆ, ಒಂದು ರಾತ್ರಿಯೇ ಒಂದು ಕಲ್ಪವಾಗುವುದು; ಸುಖಿತನಾದವನಿಗೆ, ಆ ರಾತ್ರಿಯೇ ಒಂದುಕ್ಷಣವಾಗಿ ಬಿಡುವುದು. ಹೀಗೆಯೇ, ಸ್ವಪ್ನದಲ್ಲಿ ಒಂದು ಕ್ಷಣವೇ ಕಲ್ಪವಾಗುವುದು; ಕಲ್ಪವೂ ಕ್ಷಣವಾಗುವುದು ||೨೨||

ಅದು ಹೇಗೆನ್ನುವೆಯೋ,—ಸ್ವಪ್ನದಲ್ಲಿ—'ನಾನು ಹುಟ್ಟಿದೆನು; ತರುಣನಾದೆನು; ಯೌವನದಲ್ಲಿದ್ದೆನು; ಒಂದು ನೂರು ಗಾವುದ ನಡೆದೆನು,'—ಇತ್ಯಾದಿರೀತಿಯಾಗಿ ಅನುಭವವುಂಟಾಗುವುದು. ಆಗ, ಒಂದು ಕ್ಷಣಕಾಲವನ್ನೇ ಒಂದು ಕಲ್ಪವನ್ನಾಗಿ ಅನುಭವಿಸಿದಂತಾಯ್ತಲ್ಲವೆ! ||೨೩||

ಹಿಂದೆ, ಹರಿಶ್ಚಂದ್ರನೆಂಬ ರಾಜನು, ಒಂದು ರಾತ್ರಿಯಲ್ಲಿಯೇ ಹನ್ನೆರಡು ವರ್ಷಗಳನ್ನನುಭವಿಸಿದನು. ಲವಣನೆಂಬ ಮತ್ತೊಬ್ಬ ರಾಜನು, ಒಂದುದಿನದಲ್ಲಿ ನೂರುವರ್ಷ ಆಯುಸ್ಸನ್ನು ಅನುಭವಿಸಿದನು ||೨೪||

ಆತ್ಮಧ್ಯಾನತತ್ಪರನಾಗಿರುವ ಚತುರ್ಮುಖನಿಗೆ ಯಾವುದು ಮುಹೂರ್ತವೋ, ಅದು ಮನುವಿಗೆ ಪೂರ್ಣಾಯುಸ್ಸಾಗುವುದು; ಚತುರ್ಮುಖನಿಗೆ ಯಾವುದು ಪರಮಾಯುಸ್ಸೋ, ಅದು ವಿಷ್ಣುವಿಗೆ ಒಂದುದಿವಸವಾಗುವುದು; ಅಯ್ಯಾ! ರಾಮ! ಹಾಗೆಯೇ, ವಿಷ್ಣುವಿಗೆ ಯಾವುದು ಪರಮಾಯುಸ್ಸೋ, ಅದು ಪರಮೇಶ್ವರನಿಗೆ ಒಂದು ಹಗಲಾಗುವುದು ||೨೫||

ಹೀಗೆಯೇ ಇನ್ನೂ ಮುಂದಕ್ಕೆ ವಿಚಾರಮಾಡುತ ಹೋದರೆ, ಧ್ಯಾನದಿಂದ ಆತ್ಮನಲ್ಲಿ ಚಿತ್ತಲಯವಾಗಿರತಕ್ಕ ಯೋಗಿಗೆ ಹಗಲೂ ಇಲ್ಲ; ರಾತ್ರಿಯೂ ಇಲ್ಲ; ಪದಾರ್ಥಗಳೂ ಇಲ್ಲ; ಪ್ರಪಂಚವೂ ಇಲ್ಲ. ಇದು ನಿಶ್ಚಯವು ||೨೬||

ಮಧುರವಾದುದು, ಕಟುವೆಂದು ಪರ್ಯಾಲೋಚಿಸಲ್ಪಟ್ಟರೆ ಕಟುವಾಗುವುದು; ಹೀ

ಭವತೀತಿ ಮಹಾಬಾಹೋ ಯಥಾಸಂವೇದನಂ ಜಗತ್ ||೨೮||
ಅನಭ್ಯಸ್ತಾಃ ಪದಾರ್ಥಾಯೇ ಶಾಸ್ತ್ರಪಾಠಜಪಾದಯಃ |
ತೇಷಾಂ ಸಂವೇದನಾಭ್ಯಾಸಾತ್ ನೂನಮಾಯಾತಿ ಸಾಮ್ಯತಾ ||೨೯||
ನೌಯಾಯಿನಾಂ ಭ್ರಮಾರ್ತಾನಾಂ ವೇದನಾದ್ಭೂರ್ವಿವರ್ತತೇ |
ಅವೇದನಾದ್ಭ್ರಮಾರ್ತಾನಾಮಪಿ ನೈಷಾಂ ವಿವರ್ತತೇ ||೩೦||
ಶೂನ್ಯಮಾಕೀರ್ಣತಾಮೇತಿ ವೇದನಾತ್ ಸ್ವಪ್ನದೃಕ್ಷ್ವಿವ |
ವೇದನಾತ್ ಪೀತಮಾನೀಲಂ ಶುಕ್ಲಂ ವಾಪ್ಯನುಭೂಯತೇ ||೩೧||
ಆಪದ್ವದುತ್ಸವಃ ಖೇದಂ ಕರೋತಿ ಪರಿಮೋಹತಃ |
ಕುಡ್ಯೇಪಿ ಖಇವಾಚಾರೋ ದೃಷ್ಟೋ ನನ್ವವಿಚಾರಿಣಃ ||೩೨||
ಅಸದ್ಯಕ್ಷೋ ವಿಮೂಢಾನಾಂ ಪ್ರಾಣಾನಪ್ಯಪಕರ್ಷತಿ |
ವೇದನಾತ್ ಸ್ವಪ್ನವನಿತಾ ಜಾಗ್ರತೀವ ರತಿಪ್ರದಾ ||೩೩||

ಗೆಯೇ, ಕಟುವಾದುದು ಮಧುರವೆಂದು ಚಿಂತಿಸಲ್ಪಟ್ಟರೆ ಮಧುರವೂ ಆಗುವುದು ||೨೭||

ಮಿತ್ರನೆಂದು ಬುದ್ಧಿಯುಂಟಾದರೆ, ಶತ್ರುವೇ ಮಿತ್ರನಾಗುವನು; ಶತ್ರುವೆಂದು ತಿಳಿದುಕೊಂಡರೆ, ಮಿತ್ರನೇ ಶತ್ರುವಾಗುವನು. ಅಯ್ಯಾ ಮಹಾಭುಜನೆ! ಈರೀತಿಯಾಗಿ, ಪ್ರಪಂಚವು ಅವರವರ ಜ್ಞಾನವನ್ನನುಸರಿಸಿರುವುದು ||೨೮||

ಮತ್ತು, ಶಾಸ್ತ್ರಾಭ್ಯಾಸ ಮಂತ್ರಜಪ ಮುಂತಾದ ಯಾವ ವಿಷಯಗಳು ಪುರುಷರಿಂದ ಅಭ್ಯಸಿಸಲ್ಪಟ್ಟಿಲ್ಲವೋ, ಅವುಗಳೂ ಕೂಡ, ಅವರವರ ಜ್ಞಾನಾಭ್ಯಾಸದಿಂದ ಅದಕ್ಕೆ ಸಮವಾಗಿ ಪ್ರವರ್ತಿಸುವುದು ||೨೯||

ಇನ್ನೂ ವಿಚಾರಮಾಡಿ ನೋಡು. ಹಡಗಿನಲ್ಲಿ ಕುಳಿತುಕೊಂಡು ಹೋಗತಕ್ಕವರೂ, ಪಿತ್ತರೋಗಪೀಡಿತರಾಗಿ ಭ್ರಮೆಪಟ್ಟರತಕ್ಕವರೂ, ಭೂಮಿಯು ಸುತ್ತುತಿರುವುದೆಂದು ತಿಳಿಯುವರು. ಆಗ, ಆ ಭೂಭ್ರಮಭ್ರಾಂತಿಯು, ಇವರ ಜ್ಞಾನದಿಂದ ಮಾತ್ರ ಉಂಟಾದುದೇ ಹೊರತು, ವಾಸ್ತವ್ಯವಲ್ಲ. ಅವರು ಹಾಗೆ ತಿಳಿದುಕೊಳ್ಳದೆ ಹೋಗಿಬಿಟ್ಟರೆ, ಅವರಿಗೆ ಎಂತಹ ಭ್ರಮಣೆಯುಂಟಾಗಿದ್ದರೂ, ಆಗ ಭೂಮಿ ಸುತ್ತುವುದಿಲ್ಲ ||೩೦||

ಸ್ವಪ್ನದಲ್ಲಿ ಕಾಣುವಂತೆಯೇ, ಕೇವಲ ನಿರ್ಜನವಾದ ಪ್ರದೇಶವೂ ನಮ್ಮ ಜ್ಞಾನಬಲದಿಂದ ಜನವ್ಯಾಪ್ತವಾಗಿರುವಂತೆ ತೋರುವುದು. ಮತ್ತು, ಶೂನ್ಯಪದಾರ್ಥವಾದ ಆಕಾಶವು, ನಮ್ಮ ಜ್ಞಾನಮಹಿಮೆಯಿಂದ, ಪೀತವರ್ಣವೆಂದಾಗಲಿ--ಕೃಷ್ಣವರ್ಣವೆಂದಾಗಲಿ—ಶುಕ್ಲವರ್ಣವೆಂದಾಗಲಿ—ಅನುಭವ ಗೋಚರವಾಗುವುದು ||೩೧||

ಅಜ್ಞಾನಬಲದಿಂದ, ಉತ್ಸವವೂ ಬಂದುವೇಳೆ ವಿಪತ್ತಿನಂತೆ ಖೇದಕರವಾಗುವುದು. ಬಾಲಕರು ತಮಗೆ ಉತ್ಸವವಾಗುವಾಗಲೂ ಅಳುವುದೇ ಇದಕ್ಕೆ ದೃಷ್ಟಾಂತವು. ವಿಚಾರವಿಲ್ಲದವನು, ಗೋಡೆಯನ್ನೂ ಶೂನ್ಯವೆಂದೇ ಭಾವಿಸಿಕೊಂಡು ಹೋಗುತ, ತಟ್ಟನೆ ಗೋಡೆ ಬಡಿದು ಏಟುತಿನ್ನುವನು ||೩೨||

ಅಸತ್ಯವಾಗಿರತಕ್ಕ ಬೇತಾಳವು, ಅಜ್ಞರಾದವರಿಗೆ, ಸತ್ಯವೆಂದು ತಿಳಿದುಕೊಳ್ಳುವುದರಿಂದ ಮರಣವುಂಟುಮಾಡುವುದು. ಮತ್ತು, ಸ್ವಪ್ನದಲ್ಲಿ ಕಂಡ ಯುವತಿಯೂ, ಜಾಗ

ಯದ್ಯಥಾ ಭಾಸಮಾಯಾತಂ ತತ್ ತಥಾ ಸ್ಥಿರತಾಂ ಗತಮ್ ‖೩೪‖
ಅಸದೇವ ನಭಶ್ಶ್ರೈವ ನಭಸೀವ ಚಿದಾತ್ಮನಿ ।
ಶತಹಸ್ತ್ರಾಮ್ಬುದಚ್ಛಾಯಾನಟನೃತ್ತಮಿವಾತತಮ್ ‖೩೫‖
ಗಗನೇ ಮಾನಸಂ ಸ್ಪನ್ದಂ ಜಗದ್ವಿದ್ಧಿ ನ ವಸ್ತು ತತ್ ।
ಮಿಥ್ಯಾಜ್ಞಾನಪಿಶಾಚಸ್ಯ ಸ್ಪನ್ದದರ್ಶನಮಾಕೃತಿ ।
ಮಾಯಾಮಾತ್ರಕಮೇವೇದಂ ಅರೋಧಕಮಭಿತ್ತಿಮತ್ ‖೩೬‖
ಇದಂ ಭಾಸ್ವರಮಾಭಾತಂ ಸ್ವಪ್ನಸನ್ದರ್ಶನಂ ಸ್ಥಿತಮ್ ।
ಅಪೂರ್ವಮೇವಾಸುಪ್ತಸ್ಯ ನರಸ್ಯೇವೋದಿತಂ ವಿದುಃ ‖೩೭‖
ಅಚೇತಾ ಚೇತತಿ ಸ್ತಮ್ಭೋ ಯಾದೃಶಂ ಸಾಲಭಞ್ಜಿಕಾಮ್ ।
ಪರಮಾರ್ಥಮಹಾಸ್ತಮ್ಭಃ ಸೃಷ್ಟಿಂ ಚೇತತಿ ತಾದೃಶಮ್ ‖೩೮‖

ತ್ರಿನಲ್ಲಿಯೋಪಾದಿಯಲ್ಲಿ ರತಿಸೌಖ್ಯವನ್ನುಂಟುಮಾಡುವಳು. ಅಂತು, ಯಾವುದು ಯಾವ ರೀತಿಯಾಗಿ ಭಾಸಮಾನವಾಯ್ತೋ, ಅದು ಆರೀತಿಯಾಗಿಯೇ ಸ್ಥಿರವಾಗಿ ಬಿಟ್ಟಿರುವುದೆಂದು ಸ್ಪಷ್ಟವಾಗುವುದು ‖೩೩—೩೪‖

ಇನ್ನೂ ಹೇಳುವೆನು, ಕೇಳು. ಮೇಘದ ಛಾಯೆಯು ಆಕಾಶದಲ್ಲಿ ನೂರಾರುಮುಖವಾಗಿ ಬಿದ್ದಿರುವುದನ್ನು ನೋಡಿ, ಮೂಢನಾದವನು, ನೂರಾರು ಕೈಯುಳ್ಳ ನಟನು ಅಂತರಿಕ್ಷಪ್ರದೇಶದಲ್ಲಿ ನರ್ತನ ಮಾಡುತಿರುವನೆಂದು ತಿಳಿಯುವನು. ಈ ಸಂದರ್ಭದಲ್ಲಿ, ಸುತರಾಂ ಅಸತ್ಯವನ್ನೇ ಸತ್ಯವೆಂದು ನಂಬುವರೆಂದು ಸ್ಪಷ್ಟವಷ್ಟೆ! ಇದರಂತೆಯೇ, ಚಿದಾತ್ಮನಲ್ಲಿ, ಆಕಾಶರೂಪವಾದ ಭಾವನೆಗಳು ಕಲ್ಪಿತವಾಗುವುವು. ವಸ್ತುತಃ ಆಕಾಶವೆಂಬುದೂ ಕೇವಲ ಅಸತ್ಯವೇಯೆ ‖೩೫‖

ಬಾಲಕನು, ಯಾವುದನ್ನೂ ನೋಡದಿದ್ದರೂ, ಸುಳ್ಳು ಸುಳ್ಳಾಗಿಯೇ ಪಿಶಾಚವು ಚಲಿಸುತಿರುವುದನ್ನು ಕಂಡವನಂತೆ ಭ್ರಮಿಸುವನಲ್ಲವೆ ! ಇದರಂತೆಯೇ, ಕೇವಲಾಕಾಶದಲ್ಲಿಯೇ, ಮನಸ್ಸು ನಾನಾವಿಧವಾಗಿ ಚಲನೆಯನ್ನು ಕಂಡಂತೆ ಭ್ರಮಿಸುವುದು; ಇದೇ ಜಗತ್ತೆನ್ನಲ್ಪಡುವುದು. ಇದನ್ನು ಎಂದಿಗೂ ಸತ್ಯವೆಂದು ತಿಳಿಯಬೇಡ. ಇದಕ್ಕೆ ವಾಸ್ತವ್ಯವಾದ ಆಕಾರವಿಲ್ಲದಿರುವುದರಿಂದ, ಇದು ಒಂದನ್ನು ಆವರಿಸಲೂಆರದು; ಇದನ್ನು ಆವರಿಸತಕ್ಕ ಮತ್ತೊಂದು ಪದಾರ್ಥವೂ ಇಲ್ಲ ‖೩೬‖

ಹೀಗಿರುವ ಈ ದೃಶ್ಯವು, ನಿದ್ರೆಯಿಲ್ಲದೆಯೇ ಇರುವ ಮನುಷ್ಯನಿಗೆ ಹೊಸದಾಗಿ ಉಂಟಾದ ಸ್ವಪ್ನರೂಪವಾಗಿ ಭಾಸಮಾನವಾಗುವುದೆಂದು ತತ್ವಜ್ಞರು ತಿಳಿದಿರುವರು ‖೩೭‖

ಒಂದು ಕಂಭದಲ್ಲಿ ಬೊಂಬೆಗಳಿರುವುವಲ್ಲವೆ! ಅವು, ಆ ಮರ ಹುಟ್ಟುವಾಗಲೇ ಅದರಲ್ಲಿ ಹುಟ್ಟಿರುವುವು; ಆದರೆ, ಆಗ ಅವು ವ್ಯಕ್ತವಾಗಿರುವುದಿಲ್ಲ. ಶಿಲ್ಪಿಯು ಕೆತ್ತಿದಾಗ ವ್ಯಕ್ತವಾಗುವುವು. ಇದು ಸುಪ್ರಸಿದ್ಧವು. ಅಲ್ಲಿ, ಆ ಸ್ತಂಭವು ಪುತ್ಥಳಿರೂಪವಾಗಿ ತಾನು ಸ್ಫುರಣಹೊಂದುವುದಕ್ಕೆ ತಕ್ಕಂತೆ ಯಾವ ಕೆಲಸವನ್ನೂ ಮಾಡಲಾರದಾಗಿರುವುದು. ಹಾಗಿದ್ದರೂ, ತನ್ನಲ್ಲಿ ತಾನು ಸಾಲಭಂಜಿಕೆ (ಬೊಂಬೆ) ಯನ್ನು ಮಾತ್ರ ಕಾಣುವುದು. ಇದರಂತೆಯೇ, ಪರಮಾತ್ಮನೆಂಬ ಮಹಾಸ್ತಂಭವೂ, ಸ್ವವ್ಯಾಪಾರಶೂನ್ಯವಾಗಿ ಸೃಷ್ಟಿಯನ್ನು ನೋಡುವುದು. (ವ್ಯಕ್ತಪಡಿಸುವುದು) ‖೩೮‖

ಯಾದೃಶೋ ಮೇ ನರಃ ಪಾರ್ಶ್ವೇ ಸ್ವಪ್ನೇ ಕ್ಷುಬ್ಧೋ ಮಹಾಭಟೈಃ ।
ತಾದೃಶೋ ಬ್ರಹ್ಮಣಃ ಸರ್ಗೋ ಬುದ್ಧ ಏವ ಸುಷುಪ್ತವತ್ ‖೩೯‖

ತೃಣಗುಲ್ಮಲತಾಯುಕ್ತಃ ಶಿಶಿರಾನ್ತೇ ಯಥಾ ರಸಃ ।
ವಾಸನ್ತಃ ಸಂಸ್ಥಿತೋ ಭೂಮೌ ತಥಾ ಸರ್ಗಃ ಪರೇ ಪದೇ ‖೪೦‖

ಯಥಾ ದ್ರವತ್ವಂ ಕನಕೇ ಸ್ಥಿತಮನ್ತರನುನ್ಮಿಷತ್ ।
ತಥಾ ಸ್ಥಿತಃ ಪರೇ ಸರ್ಗಃ ಆತ್ಮವರ್ಗಾದಣಾವಣೌ ‖೪೧‖

ಸನ್ನಿವೇಶೋ ಯಥಾಙ್ಗಾನಾಂ ಅಙ್ಗಿನೋಽನನ್ಯಆತ್ಮನಃ ।
ಜಗದೇವಮನಙ್ಗಸ್ಯ ಸ್ವಾತ್ಮನೋ ಬ್ರಹ್ಮಣಸ್ತಥಾ ‖೪೨‖

ಯಾದೃಗೇಕನರಃ ಸ್ವಪ್ನೇ ಯುದ್ಧಮನ್ಯಂ ನರಂ ಪ್ರತಿ ।
ತಾದೃಶಂ ಸದಸದ್ರೂಪಂ ಸ್ವಾತ್ಮೇದಂ ವ್ಯೋಮಗಂ ಜಗತ್ ‖೪೩‖

ಮತ್ತು, ನಮ್ಮ ಸ್ವಪ್ನದಲ್ಲಿ, ಪಾರ್ಶ್ವದಲ್ಲಿಯೇ ಮಹಾಭಟರು ಒಬ್ಬ ಮನುಷ್ಯನನ್ನು ಹಿಂಸೆಪಡಿಸುವುದನ್ನು ನೋಡುವೆವು ; ಆಗ ಅದನ್ನು ನಾವು ಚೆನ್ನಾಗಿ ನೋಡಿ ಸತ್ಯವೆಂದು ನಂಬಿದ್ದರೂ, ವಸ್ತುತಃ ಆ ಪುರುಷನು ಸುಷುಪ್ತಿಕಾಲದಂತೆ ಅಜ್ಞಾನಮಾತ್ರಸ್ವಭಾವನಲ್ಲದೆ ಸತ್ಯನಲ್ಲ. ಇದರಂತೆಯೇ, ಬ್ರಹ್ಮನ ಸೃಷ್ಟಿಯೂ ಸತ್ಯವೆಂದು ತಿಳಿಯಲ್ಪಟ್ಟದ್ದರೂ ಅಜ್ಞಾನಮಾತ್ರಸ್ವಭಾವವೆಂದು ತಿಳಿಯಬೇಕು ॥೩೯॥

ಶಿಶಿರಋತುವಿನ ಕೊನೆಯಲ್ಲಿ ಸಮಸ್ತ ಲತಾವೃಕ್ಷಾದಿಗಳೆಲ್ಲವೂ ಎಲೆಯುದುರಿಹೋಗುವುವಲ್ಲವೆ! ಮುಂದೆ ವಸಂತಕಾಲದಲ್ಲಿ ಅವೆಲ್ಲವೂ ಚಿಗುರುವುದಕ್ಕೆ ತಕ್ಕಂತಹ ರಸವು, ಆಗಲೇ ಸಿದ್ಧವಾಗಿದ್ದು, ತೃಣಗುಲ್ಮಲತಾದಿ ಯುಕ್ತವಾಗಿ ಭೂಮಿಯಲ್ಲಿ ಹೇಗೆ ಅಡಗಿರುವುದೋ, ಹಾಗೆ ಈ ಪ್ರಪಂಚಸೃಷ್ಟಿಯೂ ಪರಬ್ರಹ್ಮನಲ್ಲಿ ಅಡಗಿರುವುದು ॥೪೦॥

ಸುವರ್ಣದಲ್ಲಿ, ಮುಂದೆ ವ್ಯಕ್ತವಾಗುವ ದ್ರವತ್ವವು, ಪ್ರಕಾಶವಾಗದೆ ಒಳಗೆ ಹೇಗಿರುವುದೋ, ಹಾಗೆ ಆ ಪರಮಾತ್ಮನಲ್ಲಿ, ಜೀವಸಂಘಪ್ರಯುಕ್ತವಾಗಿ ಪ್ರತಿಯೊಂದು ಪರಮಾಣುವಿಷಯವಾಗಿಯೂ ಆ ಜೀವರಿಗೆ ಭೋಗಾನುಕೂಲವಾದ ಸೃಷ್ಟಿ ಇದ್ದೇಇರುವುದು ; ಇದೇ, ಕಾಲಾನುಗುಣವಾಗಿ ಅಭಿವ್ಯಕ್ತವಾಗುವುದು ॥೪೧॥

ಶರೀರದ ಅವಯವಸನ್ನಿವೇಶವು ಅದಕ್ಕಿಂತ ಪೃಥಕ್ಕಲ್ಲದುದಾಗಿ ಹೇಗಿರುವುದೋ, ಹಾಗೆಯೇ—ಅವಯವರಹಿತನಾಗಿರುವ ಪರಬ್ರಹ್ಮನಲ್ಲಿ ಈ ಜಗತ್ತು ಅನನ್ಯಭೂತ (ಪೃಥಕ್ಕಲ್ಲದ) ವಾಗಿರುವುದು ॥೪೨॥

ಒಬ್ಬ ಮನುಷ್ಯನು, ಸ್ವಪ್ನದಲ್ಲಿ ತಾನು ಮತ್ತೊಬ್ಬ ಮನುಷ್ಯನೊಡನೆ ಯುದ್ಧಮಾಡುತಿರುವುದನ್ನು ಕಾಣುವನು. ಆ ಯುದ್ಧವು, ಸ್ವಪ್ನಕಂಡವನಭಾಗಕ್ಕೆ ಸತ್ಯವಾಗಿಯೂ, ಮತ್ತೊಬ್ಬನ (ಯಾರೊಡನೆ ಯುದ್ಧಮಾಡಿದನೋ ಅವನ) ಭಾಗಕ್ಕೆ ಅಸತ್ಯವಾಗಿಯೂ ಇರುವುದಲ್ಲವೆ! ಹಾಗೆ ಈ ಜಗತ್ತು, ಮಾಯಾದೃಷ್ಟಿಗೆ ಸತ್ಯವಾಗಿಯೂ, ತತ್ವದೃಷ್ಟಿಗೆ ಅಸತ್ಯವಾಗಿಯೂ ಇರುವುದು ॥೪೩॥

ಮಹಾಕಲ್ಪಾನ್ತಸರ್ಗಾದೌ ಚಿತ್ಸ್ವಭಾವಮಿದಂ ಜಗತ್ |
ಕಾರಣತ್ವಂ ಮಿಥಃ ಪಶ್ಚಾತ್ ಅಸದೇತಿ ನ ವಾಸ್ತವಮ್ ||೪೪||
ಮುಕ್ತೇಽಸ್ಮಿನ್ ಬ್ರಹ್ಮಣಿ ಯದಿ ಬಹ್ಮಾಸ್ಯಃ ಸ್ಮೃತಿಜೋ ಭವೇತ್ |
ತತ್ ಸ್ಮೃತಿಜ್ಞಪ್ತಿಜೇ ಸರ್ಗೇ ಸ್ಥಿತೈವ ಜ್ಞಪ್ತಿಮಾತ್ರತಾ ||೪೫||

ಶ್ರೀರಾಮಉವಾಚ.

ಪೌರಾಣಾಂ ಮನ್ತ್ರಿಮುಖ್ಯಾನಾಂ ವಿದೂರಥಕುಲಕ್ರಮಃ |
ಸಮಮೇವ ಕಥಂ ತತ್ರ ಸರ್ವೇಷಾಂ ಪ್ರತಿಭಾಸಿತಃ ||೪೬||

ಶ್ರೀ ವಸಿಷ್ಠಉವಾಚ.

ಚಿತಃ ಸಮನುವರ್ತನ್ತೇ ಮುಖ್ಯಾಯಾಃ ಸರ್ವಸಂವಿದಃ |

ಮತ್ತು, ಮಹಾಪ್ರಳಯದ ಅಂತದಲ್ಲಿಯೂ, ಸೃಷ್ಟಿಯ ಆದಿಯಲ್ಲಿಯೂ, ಈ ಜಗತ್ತು ಕೇವಲ ಜ್ಞಾನಮಾತ್ರಸ್ವಭಾವವಾಗಿರುವುದು. ಹೀಗಿರುವುದರಿಂದ, ಒಂದಕ್ಕೊಂದು ಕಾರಣಭೂತವಾಗಿರುವುದೆಂಬ ವ್ಯವಹಾರವೆಲ್ಲವೂ (ಇವನಿಂದ ಅವನು ಹುಟ್ಟಿದನು, ಈ ಭೂತದಿಂದ ಆಭೂತ ಹುಟ್ಟಿತು, ಈ ಕರ್ಮದಿಂದ ಆ ಜನ್ಮ ಉಂಟಾಯ್ತು, ಇತ್ಯಾದಿ ವ್ಯವಹಾರ) ಆಮೇಲೆ ಉಂಟಾಗುತಕ್ಕದಲ್ಲದೆ ವಾಸ್ತವ್ಯವಾದುದಲ್ಲ ||೪೪||

ಇದಲ್ಲದೆ, ಒಬ್ಬ ಹಿರಣ್ಯಗರ್ಭ ಬ್ರಹ್ಮನು ಮುಕ್ತನಾದಬಳಿಕ ಮತ್ತೊಬ್ಬನುದಯಿಸುವನಲ್ಲವೆ! ಅವನು ಹೇಗೆ ಹುಟ್ಟುವನು? ಸಮಸ್ತಜಗದಾಕಾರವಾಗಿ ಪೂರ್ವಹಿರಣ್ಯಗರ್ಭನು ಮಾಡಿದ ವಾಸನಾಬಲ್ಲದಿಂದಲ್ಲವೆ ಅವನು ಹುಟ್ಟುವುದು! ಅಂತು, ಹೀಗೆಯೇ ಉದ್ಭವಕ್ಕೂ ಪರಿಗಣಿಸುತಹೋದರೆ, ಈ ಸೃಷ್ಟಿಯು ಸ್ಮರಣರೂಪವಾದ ಜ್ಞಾನದಿಂದ ಉತ್ಪನ್ನವಾದಂತಾಗುವುದಲ್ಲವೆ! ಹೀಗಾದಮೇಲೆ, ಈ ಜಗತ್ತೆಂಬುದೆಲ್ಲವೂ ಕೇವಲಜ್ಞಾನಮಾತ್ರರೂಪವೆಂಬ ವಿಷಯವು ನಿರಾಬಾಧವಾಗಿ ನಿಂತುಬಿಡುವುದು. ಅಯ್ಯಾ! ರಾಮ! ಇದನ್ನು ತಿಳಿಯಪಡಿಸುವುದಕ್ಕೋಸ್ಕರವೇ ಲೀಲೋಪಾಖ್ಯಾನವನ್ನು ನಿನಗೆ ನಾನು ಹೇಳಿರುವೆನು ||೪೫||

ಶ್ರೀರಾಮನು ಆಶಂಕೆಮಾಡುತ್ತಾನೆ;—

ಪೂಜ್ಯರೆ! ಬ್ರಹ್ಮಾಂಡಮಧ್ಯದಲ್ಲಿರತಕ್ಕವರ ವಾಸನೆಯು ಅನೇಕವಿಧವಾಗಿರುವುದರಿಂದ ಪ್ರಪಂಚವೂ ನಾನಾವಿಧವಾಗಿ ಹೇಗೆ ಕಾಣುವುದೋ, ಹಾಗೆಯೇ, ಒಂದು ಪಟ್ಟಣದಲ್ಲಿರುವವರ ವಾಸನೆಯೂ ಅನೇಕವಿಧವಾಗಿರುವಾಗ—ಅಲ್ಲಿಯೂ ಸೃಷ್ಟಿವೈಚಿತ್ರ್ಯವೇಕಾಗಬಾರದು? ಆಗ ವಿದೂರಥನ ಪಟ್ಟಣದೊಳಗೆ ಹೀಗೇಕೆ ಆಗಲಿಲ್ಲ? ಅಲ್ಲಿ, ಪೌರರಿಗೂ ಮಂತ್ರಿಶ್ರೇಷ್ಠರಿಗೂ ಸಮಸ್ತರಿಗೂ, ವಿದೂರಥನ ವಂಶಕ್ರಮವು ಒಂದೇ ವಿಧವಾಗಿ ತೋರಿತಲ್ಲವೆ! ಇದು ಹೇಗೆ? ಇದಕ್ಕೆ ಕಾರಣವೇನು? ||೪೬||

ವಸಿಷ್ಠರು ಸಮಾಧಾನ ಹೇಳುವರು:—

ವತ್ಸ! ಈ ವಾಸನೆಯಲ್ಲಿ ಸ್ವಲ್ಪ ತಾರತಮ್ಯವಿರುವುದು. ಪ್ರಧಾನಜೀವನ ವಾಸನೆಗೆ ಸ್ವಲ್ಪ ಪ್ರಾಮುಖ್ಯವೂ, ಇತರ ಜೀವವಾಸನೆಗಳಿಗೆ ಅಧೀನ್ಯವೂ ಅನಾದಿಸಿದ್ಧವಾಗಿರು

ಯಥಾ ವಿಪುಲವಾತ್ಯಾಯಾಃ ಸಾಮಾನ್ಯಾವಾತಲೇಖಿಕಾಃ ||೪೭||
ಪರಸ್ಪರಾನುಸಾರೇಣ ತಥಾರೂಪೇಣ ಸಂವಿದಃ |
ಕಚಿತಾಸ್ತಾಃ ಪ್ರಜಾಪಾಲಪ್ರಜಾವಾಸ್ತವ್ಯರೂಪಿಣಃ ||೪೮||
ಏವಂರೂಪಾತ್ ಕುಲಾಜ್ಜಾತೋ ರಾಜಾಸ್ಮಾಕಮಯಂ ತ್ವಸೌ |
ಕಚಿತಾಇವ ವಾಸ್ತವ್ಯವಿದೋ ವೈದೂರಥೇ ಪುರೇ ||೪೯||
ಕಚನೇ ಚಿತ್ಸ್ವಭಾವಸ್ಯ ನ ಚ ಕಾರಣಮಾರ್ಗಣಮ್ |
ಯುಕ್ತಂ ಮಹಾಮಣೇರ್ಭಾಸಾಮಿವಾನ್ಯತ್ರ ಸ್ವಭಾವತಃ ||೫೦||
ಅಹಮೇವಂಕುಲಾಚಾರೋ ರಾಜಾ ಸ್ಯಾಮೇವಮಿತ್ಯಪಿ |
ವಿದೂರಥವಿದೋ ರತ್ನಾತ್ ಉದಿತಾ ಪ್ರತಿಭಾ ಯಥಾ ||೫೧||
ಯಾವನ್ತೋ ಜನ್ತವೋ ಯಸ್ಮಿನ್ ಯೇಯೇ ಸರ್ಗೇ ಯದಾಯದಾ |
ತೇ ಸರ್ವಗತ್ವಾಚ್ಚಿದ್ಧಾತೋಃ ಅನ್ಯೋನ್ಯಾದರ್ಶತಾಂ ಗತಾಃ ||೫೨||

ವುದು. ಆದುಕಾರಣ, ವಿಶಾಲವಾದ ಸುಂಟರಗಾಳಿಯನ್ನು ಸಾಮಾನ್ಯವಾದ ಸಣ್ಣಸಣ್ಣ ವಾತಾಂಕುರಗಳು ಅನುಸರಿಸಿ ಹೋಗುವಂತೆ, ಮುಖ್ಯವಾಗಿರುವ ಜೀವನ ವಾಸನೆಯನ್ನು ಇತರವಾದ ಸಮಸ್ತವಾಸನೆಗಳೂ ಅನುಸರಿಸಿ ನಡೆಯುವುವು ||೪೭||

ಹೀಗೆ ಪರಸ್ಪರ ಅನುಸರಿಸಿ ನಡೆಯಬೇಕಾಗಿರುವುದರಿಂದ, ಆ ವಾಸನೆಗಳೆಲ್ಲವೂ ಏಕರೂಪವಾಗಿ ಪ್ರಸರಿಸಿದಕಾರಣ, ರಾಜ ಪ್ರಜೆ ಪೌರ ಮಂತ್ರಿ—ಇವರೆಲ್ಲರೂ ಏಕರೀತಿಯಾಗಿ ಸ್ಫುರಿಸಿದರು ||೪೮||

ಆಗ ವಿದೂರಥನ ಪಟ್ಟಣದಲ್ಲಿದ್ದ ಜನರು —'ಇವನು ಈ ಕುಲದಲ್ಲಿ ಹುಟ್ಟಿದನು; ಇವನು ನಮ್ಮ ದೊರೆಯು'—ಇತ್ಯಾದಿರೀತಿಯಾಗಿ, ಅಲ್ಲಿ ವಾಸ್ತವ್ಯವಾಗಿರುವಂತಿದ್ದ ವಿಷಯವನ್ನು ತಿಳಿದುಕೊಂಡಿದ್ದರು ||೪೯||

'ಆದರೆ, ಕೇವಲ ತಟಸ್ಥವಾಗಿರುವ ಚಿತ್ತು ತಾನಾಗಿ ಸ್ಫುರಿಸುವುದು ಹೇಗೆ? ಇದಕ್ಕೆ ಕಾರಣವೇನು?' ಇತ್ಯಾದಿರೀತಿಯಾಗಿ ಶಂಕೆಪಡುವುದು ಯುಕ್ತವಲ್ಲ. ಚಿತ್ತಿನ ಸ್ವಭಾವವೇ ಇಂತಹುದು. ಇದಕ್ಕೆ ಕಾರಣವನ್ನು ಹುಡುಕಬಾರದು, ಮಹಾರತ್ನವು ಪ್ರಕಾಶಿಸುವುದೇತರಿಂದ ಎಂದು ಮತ್ತೊಂದು ಕಡೆಯಲ್ಲಿ ಕಾರಣಾನ್ವೇಷಣವೆಂದಿಗೂ ಯುಕ್ತವಲ್ಲವಷ್ಟೆ! ||೫೦||

ಹೀಗೆಯೇ, ವಿದೂರಥನ ಜ್ಞಾನವೆಂಬ ರತ್ನದದೆಸೆಯಿಂದ,—ನಾನು ಇಂತಹ ಕುಲದಲ್ಲಿ ಈರೀತಿಯಾದ ಆಚಾರವುಳ್ಳವನಾಗಿ ದೊರೆಯಾಗಿರಬೇಕು—ಎಂದು ಪ್ರತಿಭೆಯೆಂಬ ಪ್ರಕಾಶವುದಯಿಸಿತು ||೫೧||

ಚೈತನ್ಯವು ಸರ್ವವನ್ನೂ ಏಕವಿಧವಾಗಿ ಆಶ್ರಯಿಸಿಕೊಂಡಿರುವುದರಿಂದ, ಯಾವಯಾವ ಸೃಷ್ಟಿಯಲ್ಲಿ ಯಾವಯಾವ ಜೀವಿಗಳು ಎಷ್ಟೆಷ್ಟು ಇರುವುವೋ—ಅವೆಲ್ಲವೂ ಪರಸ್ಪರ ಸದೃಶಗಳಾಗಿಯೇ ಕಾಣುವುವು ||೫೨||

ತೀವ್ರವೇಗವತೀ ಯಾ ಸ್ಯಾತ್ ತತ್ರ ಸಂವಿದಕಮ್ಪಿತಾ ।
ಸೈವಾಯಾತಿ ಪರಂ ಸ್ಥೈರ್ಯಂ ಆಮೋಕ್ಷಂ ತ್ವೇಕರೂಪಿಣೀ ॥೫೩॥
ಬಲವಚ್ಚಿದ್ವಿಲಾಸಾನಾಂ ಅಸುವೃತ್ತ್ಯಾ ಪರಸ್ಪರಮ್ ।
ಸ್ವಭಾವಾಃ ಪ್ರತಿಬಿಮ್ಬನ್ತಿ ಚಿದಾದರ್ಶೇ ಸ್ವಭಾವತಃ ॥೫೪॥
ತತ್ರಾತಿಯತ್ನಾ ಜಯತಿ ಸತ್ಯಾಃ ಸಂವಿದಆತ್ಮಸಾತ್ ।
ಕುರ್ವನ್ತೀ ಸರಿದಮ್ಭೋಧಿಗಾಮಿನೀ ಸರಿತೋ ಯಥಾ ॥೫೫॥
ಯೇ ಸಮಾಸ್ತತ್ರ ತೇ ಯಾವತ್ ಯತನ್ತೇ ಚಿತ್ಸ್ವಭಾವತಃ ।
ಯಾವದೇಕೋ ಜಯತ್ಯತ್ರ ದ್ವಿತೀಯಃ ಸನಿಮಜ್ಜತಿ ॥೫೬॥
ಜಾಯಮಾನೇಷು ನಶ್ಯತ್ಸು ವರ್ತಮಾನೇಷು ಭೂರಿಶಃ ।
ಏವಂ ಸರ್ಗಸಹಸ್ರೇಷು ಪರಮಾಣುಕಣಂ ಪ್ರತಿ ॥೫೭॥
ನ ಕಿಂಚಿತ್ ಕೇನಚಿದ್ವ್ಯಾಪ್ತಂ ನ ಕಿಂಚಿತ್ ಕೇನಚಿತ್ ಸ್ಥಿತಮ್ ।
ಚಿದಾಕಾಶಮಿದಂ ಶಾನ್ತಂ ಅತಃ ಸರ್ವಮಭಿತ್ತಿಮತ್ ॥೫೮॥

ಅದರಲ್ಲಿ, ಯಾವ ಜ್ಞಾನವು, ತೀವ್ರವೇಗವುಳ್ಳದ್ದಾಗಿ ನಿಶ್ಚಲವಾಗಿರುವುದೋ, ಅದೇ-ಮೋಕ್ಷಸಿದ್ಧಿಯಾಗುವವರೆಗೂ ಏಕರೂಪವಾಗಿ ನೆಲೆಸಿರುವುದು ॥೫೩॥

ಹೀಗೆ ಪ್ರಬಲವಾದ ಚಿದ್ವಿಲಾಸಗಳು ಪರಸ್ಪರಾನುಸಾರವಾಗಿರುವುದರಿಂದ, ಜೀವ ಚೈತನ್ಯದರ್ಪಣದಲ್ಲಿ, ಜಗತ್ತಿನ ರೂಪವಾಗಲಿ—ಅಥವಾ ಪರಮಾತ್ಮನ ರೂಪವಾಗಲಿ—ಪ್ರತಿಫಲಿಸುವುದು. ಇದು ನಿಯತಿಸ್ವಭಾವವು ॥೫೪॥

ಅದರಲ್ಲಿ, ಅತಿಪ್ರಯತ್ನಶೀಲವಾದ ಜ್ಞಾನವು, ಸಮುದ್ರಗಾಮಿನಿಯಾದ ನದಿಯು ಇತರನದಿಗಳನ್ನು ತನ್ನ ವಶಮಾಡಿಕೊಳ್ಳುವಂತೆ, ಇತರವಾದ ಜ್ಞಾನಗಳನ್ನು ತನ್ನಧೀನ ಮಾಡಿಕೊಂಡು, ಎಲ್ಲಕ್ಕಿಂತಲೂ ಜಯಶಾಲಿಯಾಗುವುದು ॥೫೫॥

ಏಕವಿಧವಾದ ಪ್ರಯತ್ನವುಳ್ಳ ಅನೇಕರು ಏಕಕಾಲದಲ್ಲಿ ಪ್ರಯತ್ನಮಾಡಲುಪಕ್ರಮಿಸುವರೆಂದು ಇಟ್ಟುಕೊಳ್ಳುವ. ಆಗ, ಯಾರು ತಮಗೆ ಜಯ (ಮೋಕ್ಷ)ವುಂಟಾಗುವವರೆಗೆ ಸ್ಥಿರವಾಗಿ ಪ್ರಯತ್ನಮಾಡುವರೋ, ಅವರೇ ಸಿದ್ಧಿಹೊಂದುವರು. ಮತ್ತೊಬ್ಬನು (ಪ್ರಯತ್ನ ಸಾಕಾಗದವನು) ಮುಳುಗಿಬಿಡುವನು (ಸಂಸಾರಮಗ್ನನಾಗುವನು) ॥೫೬॥

ಹೀಗೆ ಪ್ರತಿಪರಮಾಣುಕಣದಲ್ಲಿಯೂ, ಸಾವಿರಾರು ಸೃಷ್ಟಿಗಳು ಮುಂದೆ ಹುಟ್ಟತಕ್ಕವುಗಳಾಗಿಯೂ ಹಿಂದೆ ಕಳೆದುಹೋದುವುಗಳಾಗಿಯೂ ಈಗ ನಡೆಯುತಿರುವುಗಳಾಗಿಯೂ ಇರುವಾಗ, ಯಾವುದೂ ಯಾವುದನ್ನೂ ವ್ಯಾಪಿಸಿಕೊಂಡಿಲ್ಲವೆಂದೂ, ಯಾವುದೂ ಯಾವುದರಿಂದಲೂ ಆಶ್ರಯಿಸಲ್ಪಟ್ಟಿಲ್ಲವೆಂದೂ, ಹೇಳಬೇಕಾದುದೇ ಇಲ್ಲ. ಈ ಜ್ಞಾನಾಕಾಶವೆಂಬುದು ಕೇವಲ ಶಾಂತವಾದುದು; ಅದುಕಾರಣ, ಸಮಸ್ತ ವಿಧವಾದ ಕಲ್ಪನೆಯೂ ಕೇವಲ ನಿರಾಶ್ರಯವಾದುದೆಂದು ತಿಳಿಯಬೇಕು ॥೫೭—೫೮॥

ಅಯಮಾಭಾಸತೇ ಸ್ವಪ್ನೋ ನಿರ್ನಿದ್ರೋ ದೃಷ್ಟಿವರ್ಜಿತಃ ।
ಅವಶ್ಯಮ್ಭಾವಿಬೋಧಸ್ತು ಸ್ವನುಭೂತೋಽಪ್ಯಸನ್ಮಯಃ ॥೫೯॥
ಪತ್ರಪುಷ್ಪಫಲಾಂಶಾತ್ಮಾ ಯಥೈಕಃ ಸ್ವಾಸ್ಥಿತೋ ದ್ರುಮಃ ।
ಅನನ್ತಸರ್ವಶಕ್ತ್ಯಾತ್ಮಾ ಹ್ಯೇಕ ಏವ ತಥಾ ವಿಭುಃ ॥೬೦॥
ಮಾತೃಮೇಯಪ್ರಮಾಣಾದಿ ಮಾಯಾತ್ಮಕಮಜಂ ಪದಮ್ ।
ಬುದ್ಧಂ ವಿಸ್ಮೃತಿಮಾಯಾತಿ ನ ಕದಾಚನ ಕಸ್ಯಚಿತ್ ॥೬೧॥

ಶೂನ್ಯೋದಯಾಸ್ತಮಯವಸ್ತು ತಮಃಪ್ರಕಾಶಂ
ದಿಕ್ಕಾಲರೂಪ್ಯಪಿ ಸದೈಕಮನಾದಿ ಶುದ್ಧಮ್ ।
ಆದ್ಯನ್ತಮಧ್ಯರಹಿತಂ ಸ್ಥಿತಮಚ್ಛಮಮ್ಬು
ಸೌಮ್ಯತ್ವವೀಚಿವಲನಾಢ್ಯಮಿವೈಕಮೇವ ॥೬೨॥

ನಾವು ನೋಡುತಿರುವ ಈ ಜಾಗ್ರತ್ಪ್ರಪಂಚವೂ ಕೂಡ, ನಿದ್ರೆಯಿಲ್ಲದ ಸ್ವಪ್ನವೆಂದು ತಿಳಿ; ಇದು ವಿವೇಕದೃಷ್ಟಿಯಿಲ್ಲದುದರಿಂದುಂಟಾಗುವುದು. ನಿಯತಿಜ್ಞಾನ (ಇದು ಹೀಗೆ ಆಗಿಯೇ ತೀರಬೇಕೆಂಬ ನಿಯಮವಿರುವುದೆಂದು ತಿಳಿವಳಿಕೆ) ವಾದರೋ, ನಮಗೆ ಸತ್ಯವೆಂದು ಅನುಭವಗೋಚರವಾಗುತಿದ್ದರೂ—ವಸ್ತುತಃ ಅಸತ್ಯವಾದುದೆಯೋ ॥೫೯॥

ಅಯ್ಯಾ! ರಾಮ! ಮರವೊಂದೇ—ಪತ್ರ ಪುಷ್ಪ ಫಲ ಇತ್ಯಾದಿ ವಿಭಾಗರೂಪವಾಗಿ ಹೇಗೆ ವ್ಯವಸ್ಥಿತವಾಗಿರುವುದೋ, ಹಾಗೆ ಸರ್ವವ್ಯಾಪಿಯಾದ ಆ ಪರಮಾತ್ಮನೊಬ್ಬನೇ ಅನೇಕ ಶಕ್ತಿರೂಪನಾಗಿ ತೋರುವನು ॥೬೦॥

ಜನ್ಮಾದಿರಹಿತವಾಗಿರುವ ಆ ಪರಬ್ರಹ್ಮವು, ಮಾಯಾದೃಷ್ಟಿಯಿಂದ ಪ್ರಮಾತೃ ಪ್ರಮೇಯ ಪ್ರಮಾಣ (ತಿಳಿಯತಕ್ಕವನು ತಿಳಿಯಲ್ಪಡತಕ್ಕ ಪದಾರ್ಥ ತಿಳಿದುಕೊಳ್ಳುವುದಕ್ಕೆ ಸಾಧನ) ಮುಂತಾದ ಭೇದರೂಪದಿಂದ ತಿಳಿಯಲ್ಪಟ್ಟರೂ, ತತ್ವದೃಷ್ಟಿಯಿಂದ ವಿಚಾರಮಾಡತಕ್ಕವನಿಗೊಬ್ಬನಿಗೂ ಎಂದಿಗೂ ಇದು (ಬ್ರಹ್ಮ) ಶೂನ್ಯವಾಗುವುದಿಲ್ಲ ॥೬೧॥

ವತ್ಸ! ಈ ಬ್ರಹ್ಮಪದಾರ್ಥವು, ವಸ್ತುತಃ ಉತ್ಪತ್ತಿಲಯಶೂನ್ಯವಾದುದು; ಇದು, ಸಾಕ್ಷಿಭೂತವಾಗಿ ತಮಸ್ಸಿಗೆ (ಅವಿದ್ಯೆಗೆ) ಪ್ರಕಾಶವುಂಟುಮಾಡತಕ್ಕುದು; ದಿಕ್ಕು ಕಾಲ ಮುಂತಾದ ರೂಪದಿಂದ ಭಿನ್ನವಾಗಿ ಕಂಡರೂ ಸರ್ವದಾ ನಿರ್ಮಲ (ಭೇದಜ್ಞಾನರಹಿತ)ವಾಗಿ ಒಂದೇವೊಂದಾಗಿರತಕ್ಕುದು; ಇದಕ್ಕೆ ಆದಿಯೂ ಮಧ್ಯವೂ ಅಂತವೂ ಒಂದೂ ಇಲ್ಲ. ಜಲವೊಂದೇ ಸೌಮ್ಯವಾಗಿಯೂ ತರಂಗಯುಕ್ತವಾಗಿಯೂ ಕಾಣುವಂತೆ, ಈ ಬ್ರಹ್ಮವೊಂದೇ ಶಾಂತವಾಗಿಯೂ ಪ್ರಪಂಚಕಲ್ಪನಾರೂಪವಾಗಿಯೂ ಕಾಣುವುದು॥೬೨॥

ಅಯ್ಯಾ! ರಾಮ! ಆಕಾಶದಲ್ಲಿ ವಸ್ತುತಃ ಯಾವುದೂ ಇಲ್ಲದಿದ್ದರೂ, ಅದರ ಶೂನ್ಯತ್ವವೇ-ನೈಲ್ಯವೆಂದೂ ಮುಕ್ತಾಸರವೆಂದೂ ಕೇಶೋಂಡ್ರಕವೆಂದೂ ನಾನಾವಿಧವಾಗಿ ಭಾಸಮಾನವಾಗುವುದಲ್ಲವೆ! ಹಾಗೆಯೇ, ಈ ಪರಬ್ರಹ್ಮವು ಶುದ್ಧಜ್ಞಾನರೂಪವಾಗಿದ್ದರೂ

ಅಹಂತ್ವಮಿತ್ಯಾದಿಜಗತ್ಸ್ವರೂಪಾ ವಿಶುದ್ಧಬೋಧೈಕವಿಭಾ ವಿಭಾತಿ ।
ಆಕಾಶಕೋಶೇ ನಿಜಶೂನ್ಯತೈವ ದ್ವೈತೈಕ್ಯಸಙ್ಕಲ್ಪವಿಕಲ್ಪನಾಚ್ಛ ॥೬೩॥

ಇತ್ಯಾರ್ಷೇ ಶ್ರೀವಾಸಿಷ್ಠರಾಮಾಯಣೇ ಶ್ರೀವಾಲ್ಮೀಕಿಯೇ ದೇವದೂ
ತೋಕ್ತೇ ದ್ವಾತ್ರಿಂಶತ್ಸಾಹಸ್ರ್ಯಾಂ ಸಂಹಿತಾಯಾಂ ಮೋಕ್ಷೋ
ಪಾಯೇ ಉತ್ಪತ್ತಿಪ್ರಕರಣೇ ಲಿಲೋಪಾಖ್ಯಾನಪ್ರಯೋ
ಜನಕಥನಂ ನಾಮ ಷಷ್ಟಿತಮಃ ಸರ್ಗಃ.

ಭೇದವನ್ನೂ ಅಭೇದವನ್ನೂ ಸಂಕಲ್ಪಿಸತಕ್ಕ ಚಿತ್ತಮಹಿಮೆಯಿಂದ, ನಾನು ನೀನು ಇತ್ಯಾದಿರೂಪವಾದ ಪ್ರಪಂಚಾಕಾರವಾಗಿ ಭಾಸಿಸುವುದು. ಇದೇ ಪರಮಾರ್ಥವು. ಇದನ್ನು ತಿಳಿಯಪಡಿಸುವುದಕ್ಕೋಸ್ಕರವೇ, ನಿನಗೆ ಈ ಲೀಲೋಪಾಖ್ಯಾನವನ್ನು ಇಷ್ಟು ವಿಸ್ತಾರವಾಗಿ ಹೇಳಿರುವೆನು. ಇದನ್ನು ಚೆನ್ನಾಗಿ ಪರ್ಯಾಲೋಚಿಸಿದರೆ, ಈ ಜಗತ್ಸ್ವರೂಪವೆಲ್ಲವೂ ಸ್ಪಷ್ಟವಾಗಿ ಗೊತ್ತಾಗುವುದು. ಎಂದು ಶ್ರೀ ವಸಿಷ್ಠಮಹಾಮುನಿಗಳು ಶ್ರೀರಾಮಚಂದ್ರನಿಗೆ ಉಪದೇಶಿಸಿದರು ॥೬೩॥

ಇದು ಶ್ರೀ ವಾಲ್ಮೀಕಿಮಹರ್ಷಿವಿರಚಿತವಾದ ದೇವದೂತನಿಂದುಕ್ತವಾದ
ದ್ವಾತ್ರಿಂಶತ್ಸಹಸ್ರ ಸಂಹಿತಾತ್ಮಕವಾದ ಮೋಕ್ಷೋಪಾಯಭೂತವಾದ
ಶ್ರೀ ವಾಸಿಷ್ಠರಾಮಾಯಣದ ಉತ್ಪತ್ತಿಪ್ರಕರಣದಲ್ಲಿ
ಲೀಲೋಪಾಖ್ಯಾನಪ್ರಯೋಜನಕಥನವೆಂಬ
ಅರವತ್ತನೆಯ ಸರ್ಗವು.

ಲೀಲೋಪಾಖ್ಯಾನವು ಮುಗಿದುದು.

ಇಂತು ಶ್ರೀಮತ್ಸಮಸ್ತ ಮಹೀಮಂಡಲ ಮಂಡನಾಯಮಾನ ಶ್ರೀಮಹೀಶೂರ
ಜನಪದಾಧೀಶ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ.
ಯವರ ಮಹಾ ಸನ್ನಿಧಾನದ ಪರಿಪೋಷಣೆಯಿಂದ ತದಾಸ್ಥಾನ ಪಂಡಿತ
ನಾದ ಸದ್ವಿದ್ಯಾಶಾಲಾಧ್ಯಕ್ಷ ಗುಂಡಶಾಸ್ತ್ರಿಯಿಂದ ರಚಿಸಲ್ಪಟ್ಟ
ಶ್ರೀ ಕೃಷ್ಣರಾಜ ವಿಜ್ಞಾನವೈಭವವೆಂಬ ಶ್ರೀ ಜ್ಞಾನವಾಸಿಷ್ಠ
ಟೀಕೆಯಲ್ಲಿ ಉತ್ಪತ್ತಿನಾಮ ತೃತೀಯ ಪ್ರಕರಣದ
ಪ್ರಥಮಭಾಗವು ಸಂಪೂರ್ಣವಾದುದು.

ಓಮ್ ತತ್ ಸತ್.